MICROFILMED BY
NEHRU MEMORIAL MUSEUM AND LIBRARY
TEEN MURTI HOUSE
NEW DELHI

ROLL No. 4

JTD

FROM
1915

PKG
17.3.80

SWADESHABHIMANI
KANNADA WEEKLY
PUBLISHED FROM
MANGALORE

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವು ಪ್ರಕಟಿಸಲ್ಪಡುವುದು.

ಚಂದಾ:—ವರುಷ ಒಕ್ಕೆ ರೂ. 1—4—0. ಟಪಾಲು ಹಾಸಲು ಶೇರಿ ರೂ. 2—1—0.

ಪುಸ್ತಕ IX

ಮಂಗಳೂರು ತಾ 18ನೇ ಜೂನ್ ಶುಕ್ರವಾರ 1915. ಸಂಚಿಕೆ 25

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಬಹಳವಾದ ಜ್ವರ

ಸೆಶಿಂತಾನ್.

(ರಿಜಿಸ್ಟರ್ಡ್)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೆಶಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

1. ಶಕ್ತಿಯನು ವೃದ್ಧಿ ಪಡಿಸುವುದಲ್ಲದೆ, ತಲೆಯ ನೋವು, ತಲೆತಿರುಗುವಿಕೆ, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಗುಣಪಡಿಸುವುದು.

2. ಕಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತು ಮೆದುಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹೋಪಕಾರಿಯಾಗಿರುವುದು.

3. ಭೋಜನಾನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತ ಬಂದಲ್ಲಿ ತಿಂದನ್ನವು ಜೀರ್ಣವಾಗುವುದು, ಕ್ಷುಧಾಪ್ರವೃತ್ತಿಯು ಕ್ರಮವಾಗಿ ಆಗುತ್ತ ಯಾವ ರೋಗಕ್ಕೂ ಅಸ್ಪದವುಂಟಾಗುವುದಿಲ್ಲವು.

4. ಬಾಯಿ ದುರ್ಗಂಧವನ್ನು ಹೋಗಲಾಡಿಸಿ ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ, ಕೆಮ್ಮಲನ್ನು ಹೋಗಲಾಡಿಸಿ ಧ್ವನಿಯನ್ನು ಸ್ವಚ್ಛಗೊಳಿಸುವುದು.

5. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಗುರುಗಳು ಎಲ್ಲ ಉದ್ಯೋಗದ ದೊಡ್ಡ ಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವವು.

6. ಬೇಸಿಗೆ ಮತ್ತು ಚಳಿಗಾಲಗಳಲ್ಲಿ ಎಲ್ಲ ರೋಗವನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು.

7. ಪ್ರಯಾಣಿಕರಿಗೆ ಅವರ ದೇಹಾರೋಗ್ಯಕ್ಕೆ ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು.

ಆದುಕಾರಣ ಇಂತಹ ಗುಣಕಾರಿಯಾದ ಸೆಶಿಂತಾನದ ಒಂದು ಪೆಟ್ಟಿಗೆಯನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ.

45 ಮಾತ್ರೆಗಳ ಪೊಟ್ಟ 1ಕ್ಕೆ 0—2—0 200 ಮಾತ್ರೆ ಪೊಟ್ಟ 1ಕ್ಕೆ 0—7—0 80 ಮಾತ್ರೆಗಳ ಟಿನ್ 1ಕ್ಕೆ 0—4—0 550 ಮಾತ್ರೆಗಳ ಮರದಪೆಟ್ಟಿಗೆ 1ಕ್ಕೆ 1—0—0

95 ,, ,, ,, 0—4—0 200 ,, ನ್ ,, 0—9—0 100 ,, ಶೀಸೆ ,, 0—4—6 1200 ,, ,, ,, 2—0—0

1 ರೂಪಾಯಿಗೆ ಕಡಿಮೆಯಾಗಿ ವಿ. ಪಿ. ಮೂಲಕ ಕಳುಹಿಸಲ್ಪಡುವುದಿಲ್ಲವು. ಮತ್ತು ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

☞ ಭರತಖಂಡ, ಬರ್ಮಾ ಮತ್ತು ಸಿಲೋನ್ ಈ ಪ್ರಾಂತ್ಯಗಳ ಎಲ್ಲಾ ಭಾಗದಲ್ಲೂ ಏಜಂಟರು ಬೇಕಾಗಿದೆ.

ಸೋಲ್ ಏಜಂಟ್ಸ್:—ಸೆಶಿಂತಾನ್ ಡಿಪೋ,
ಪ್ರಿನ್ಸೆಸ್ ಸ್ಟ್ರೀಟ್ ಬೊಂಬಾಯಿ ನಂ. 2.

ಯಂ. ಯಸ್. ರಾವ್ ಕಂಪೆನಿ.,

ಬುಕ್‌ಸೆಲರ್ಸ್, ಸ್ಟೇಷನರ್ಸ್ ಮತ್ತು ಕಮಿಷನ್ ಏಜಂಟ್ಸ್,

ಅವಿನ್ಯೂರೋಡ್, ಬೆಂಗಳೂರು ಸಿಟಿ.

ಈವರೆವಿಗೆ ಇದ್ದ ಯಂ. ಸುಬ್ಬರಾವ್ ಬ್ರದರ್ಸ್, ಶಂಕರಪುರ ಬೆಂಗಳೂರು ಸಿಟಿ— ಎಂಬ ವಿಳಾಸವನ್ನು ಮೇಲ್ಕಂಡಂತೆ ಬದಲಾಯಿಸಿದ್ದೇವೆ.

ನಮ್ಮಲ್ಲಿ ಎಲ್ಲಾ ವಿಧವಾದ ಕನ್ನಡ ಕಥೆಗಳೂ; ಬಿ. ವೆಂಕಟಾಚಾರ್ಯರಿಂದ ರಚಿತವಾದ ನಾವೆಲ್‌ಗಳೂ, ಗವರ್ನಮೆಂಟ್ ಸ್ಕೂಲು ಪುಸ್ತಕಗಳೂ ಸಿಕ್ಕುತ್ತವೆ. ಪುಸ್ತಕದ ಪಟ್ಟಿ ಹೊಸದಾಗಿ ಪ್ರಿಂಟಾಗಿದೆ. ಉಚಿತ.

—M. S. RAO Co.,

M. S. RAO & CO.,

BOOK-SELLERS ETC.,

AVENUE ROAD, BANGALORE CITY.

Please note:—We have changed our address from—M. Subba Rao Bros., Book-Sellers, Shankarapur, Bangalore City to—

M. S. RAO & Co.,

Book-Sellers, Stationers & Commission Agents,

AVENUE ROAD, BANGALORE CITY.

ESTABLISHED JULY 1906.

THE CANARA BANK, LIMITED, MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs	300,000—0—0
Issued Capital	225,000—0—0
Subscribed Capital ..	218,800—0—0
Paid up Capital ..	193,800—0—0
Deposits	423,097—7—10
Reserve Fund	33,500—0—0

Besides the uncalled capital of Rs. 25,000/ 25% of the net profits are added annually to the Reserve Fund. Rs. 21,685/ have been invested in Government Paper of the face value of Rs 22,500/-

Dividends of not less than 6% paid during the past years and a bonus of 1% to 2% paid in addition during the last three years

Fixed Deposits of Rs 50/ and above in multiples of Rs. 5/ received for 3, 6, 12 and 24 months @ 4, 4½, 5 and 5½% respectively at the discretion of the managing committee

Short notice Deposits requiring one weeks notice of withdrawal after one month received @ 2½%. per annum at the discretion of the managing committee

Current Deposit Account opened free of charge.

Savings Bank Account opened for any sum not less than 4 As and multiples thereof and interest paid @ 4½%.

Loans granted on proper securities and pledges

Sealed Parcels for safe custody received on a moderate charge

Canara Bank Ltd,
Mangalore, 1st. May 1915

ನಿಯಮಿತ ಮೂಲ ಧನವು ರೂಪಾಯಿ ...	300,000—0—0
ಹುಟ್ಟಿಬಂದ ಮೂಲ ಧನವು ,, ...	225,000—0—0
ಪ್ರತಿಜ್ಞಾತ ಮೂಲ ಧನವು ,, ...	218,800—0—0
ಆಗತ ಮೂಲ ಧನವು ,, ...	193,800—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು ...	423,097—7—10
ರಕ್ಷಿತ ಧನವು	33,500—0—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡುವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 21,685—0—0 ಸರಕಾರದ ರೂ. 22,500ರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುದಾರರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಉಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು 3, 6, 12, ಮತ್ತು 24ರ ಅವಧಿ[illegible] ವಾಗಿ 4, 4½, 5 ಮತ್ತು 5½ ಪ್ರಕಾರ ರೂ. 50 ಯಾ 5[illegible] ಲಗುಗಳು ಮೆನೇಜಿಂಗ್ ಕಮಿಟಿಗೆ ಯುಕ್ತತೋರುವ ಮೇ[illegible]ಕೊಳ್ಳಲಾದಾವು

ಒಂದು ತಿಂಗಳ ನಂತರ ಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾಪ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನ ಲಹಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾದೀತು. ಈ ಠೇವಣಾತಿ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು.

ಯೋಗ್ಯ ಜವಾಬ್ದಾರಿಯ, ಮತ್ತು ಆಧಿನ ಮೇಲೆ ಸಾಲಗಳು ಕೊಡೋಣಾಗುತ್ತವೆ

ಮೊಹರು ಹಾಕಲ್ಪಟ್ಟ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡೆಯಲಾದಾವು

P. Gopal Naik,
Secretary.

ಜಯವಿಜಯ

ಅಥವಾ

ತೂಗಾಡುವ ಅಸ್ಥಿಪಂಜರ.

ಗುಜರಾಥಿ ಭಾಷೆಯಿಂದ ಕನ್ನಡದಲ್ಲಿ ಹೊಸತಾಗಿ ಭಾಷಾಂತರವಾದದು,

ಈ ಗ್ರಂಥದ ಕುರಿತು "ಸತ್ಯದೀಪಿಕೆ" ಎಂಬ ವಾರಪತ್ರಿಕೆಯು ಕೊಡುವ ಅಭಿಪ್ರಾಯ —"ಇದು ಬಹಳ ರಸಿಕವಾದ ಆಶ್ಚರ್ಯವುಳ್ಳ ಒಂದು ಕಥೆಯಾಗಿದೆ ಅದನ್ನು ಓದಕೊಡಗಿದವರಿಗೆ ಅದನ್ನು ತೀರಿಸುವ ತನಕ ವಿಶ್ರಾಂತಿ ದೊರಕದು ದೇಶಸ್ಥರು ಸಹಾ ವಿಲಾಯತಿ ಕಾದಂಬರಿಗಳಂತೆ ಚೆಲೋ ಕಥೆಗಳನ್ನು ಬರೆಯಬಲ್ಲರೆಂದು ಇದರಿಂದ ಪ್ರಕಟವಾಗುತ್ತದೆ ಇದರ ಸಾರಾಂಶವೂ ನೀತಿಯೂ ಕೂಡಾ ಘನವಾದದ್ದು ನೀತಿವಂತರು ಅನೇಕಸಾರಿ ಶ್ರಮಪಡುವಾಗ ದುಷ್ಟರು ಕೆಲವು ಸಮಯ ಮೆರೆಯುವರೆಂದೂ ಆಗಲೆ ದುಷ್ಟರ ದುಷ್ಟತನವು ಬೈಲಾಗಿ ಅವರು ತಮ್ಮ ದುಷ್ಟತನಕ್ಕೆ ತಕ್ಕ ಪ್ರತಿಫಲವನ್ನು ಹೊಂದುವಾಗ ನೀತಿಯು ಕಡೆಗೆ ಜಯಿಸಿ ಬಾಳುವದೆಂದೂ ಈ ಕಥೆಯ ಕವಿಯು ತೋರಿಸುವನು ಇದಲ್ಲದೆ ಈ ಕಥೆಯು ಶೂರರಲ್ಲಿ ಒಪ್ಪಿಳಾದ ಜಯಶಾಲ್ಲಿ ಪತಿವ್ರತಾ ಧರ್ಮವೂ ಇತರರಲ್ಲಿ ಬೇರೆ ಸದ್ಗುಣಗಳೂ ತೋರುವವು. ಕರ್ನಾಟಕ ಜಿಲ್ಲೆಯವರೆಲ್ಲರೂ ಈ ಕಥೆಯನ್ನು ಓದಿಕೊಂಡು ಈ ಕಥೆಯ ನೀತಿಯಿಂದ ಲಾಭವನ್ನು ಪಡೆದಾರೆಂತ ನಂಬುತ್ತೇವೆ" ಇತ್ಯಾದಿ ಪುಸ್ತಕದ ಕ್ರಯ 0—12—0. ವಿ. ಪಿ ಬೇರೆ.

ವಿಳಾಸ.—

V. C Amin,
C/o E. A. Goll Esq.
Sirdar Palace, Apollo Street,
BOMBAY.

ರೂ 501 ಉಚಿತ!

ಒನ್ ಬ್ರೇಂಡ್ ಸಾಬೂನ್.

5 ನಿಮಿಷದೊಳಗಾದಳನ್ನು ಉದುರಿಸಿಬಿಡುವದಿಲ್ಲವೆಂಬದನ್ನು ಖಚಿತಪಡಿಸುವವರಿಗೆ ರೂ 501 ಉಚಿತವಾಗಿ ಕೊಡೋಣಾಗುವದು. ಇದರಿಂದ ಚರ್ಮವು ಕೆಡದು 3 ಸಾಬೂನುಳ್ಳ ಪೆಟ್ಟಿಗೆ 1ಕ್ಕೆ 0—12—0; 2 ಪೆಟ್ಟಿಗೆಗಳ ವರೆಗೆ ವಿ ಪಿ ಚಾರ್ಜು 0—5—0.

ರೂ. 2500 ಉಚಿತ!

ಸಿರಾಜಿ ಹೇರ್ ಎಂಬ ಕೇಶತೈಲವು ಬಿಳೀ ಮತ್ತು ನರೆತ ಕೂದಲನ್ನು ಕಪ್ಪು ಮಾಡುವದಿಲ್ಲವೆಂದು ರಿಸುವವರಿಗೆ ರೂ. 2500 ಉಚಿತ.

ಈ ತೈಲವನ್ನು ಒಂದು ಬಾಧಕಬಾರದಂತೆ ಅತಿ ನಿಪುಣತೆಯಿಂದ ತಯಾರು ಮಾಡಿರುತ್ತದೆ. ಇದು ಚರ್ಮದಲ್ಲಿ ಕಲೆಯಾಗದು. ಪೆಟ್ಟಿಗೆ 1ಕ್ಕೆ ರೂಪಾಯಿ 1—0—0; ವಿ. ಪಿ. ಬೇರೆ

ವಿಳಾಸ:— ಎಫ್. ಎಲ್. ದವಾವಾಲಾ,
ಮಿರ್ಜಾ ಸ್ಟ್ರೀಟ್, ಮುಂಬಾಯಿ.

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡಿಸಬೇಕಾಗಿದೆ.

F. L. Davawala,
Mirza Street, BOMBAY.

ಅನುಸಿದ್ಧವಾದ ವನೌಷಧಗಳು.

೧. ಕುಂಕಳಾವಂದ ತೈಲವು. ಕೇಶರೋಗ ನಾಶಕವೂ ಸುವಾಸಿಕವೂ ಆಗಿದ್ದು ಪ್ರದರ್ಶನಗಳ ೦ ಪಾಲ್ಗಳನ್ನೂ ಅನೇಕಾನೇಕ ಸರ್ಟಿಫಿಕೇಟ್ ಬಾಟ್ಲಿಗೆ ೧ರೂ. ೩ ಬಾಟ್ಲಿಗೆ

೨ ಬಿಂದು ಉರಿಯನ್ನೂ ಕೀವನ್ನೂ ಪಥ್ಯವಿಲ್ಲದೆ ಖಂಡಿತವಾಗಿ ಗ ಬಾಟ್ಲಿಗೆ ೨ ೮-೦

೩. ಪಂಚಕೇರಳ ಪಾಕ. ಎಲ್ಲ ಪ್ರದ್ರ ಕಟ್ಟಳೆಯ ದೋಷಗಳನ್ನೂ ಖಂಡಿತವಾಗಿ ತಪ್ಪದೆ ಗುಣಪಡಿಸುವದು ೨ ರೂ

೪. ಸೂರಣಾವ ಲೇಹ. ರಕ್ತ ಅರ್ಶ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಶೌಕ್ತಿಕವಾಗಿದೆ. ರಾ

೫. ಪ್ಲೀಹೋದರಾರಿ ಚೂರ್ಣ. ಬಂಕ್ರಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವ್ಯಾಧಿಗಳನ್ನೂ ಗುಣಪಡಿಸುವದು ತಿಂಗಳ ಔಷಧಕ್ಕೆ ಬಟ್ಟು ೩ ರೂ.

೬. ಜಗನ್ಮೋಹನ ದಂತಮಂಜನ. ದ್ಯಂದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟು ವಿರೇಚಕವು ತೊಲೆಗೆ ೨ ರೂ.

ತಮ್ಮ ವಿಳಾಸ:—ಬಿ ಎಮ್. ನಾಥ್ ಮತ್ತು ಕಂ

ವೆಪರಿ ಪರಾಸು

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೫ರೂ.

೯. ವಾಸಾವ ಲೇಹ. ಕೆಮ್ಮು ಗುರ್ಖ್ಯಾಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦ ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ

೧೧ ವಾತಮುರಾರಿ ಚೂರ್ಣ. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ ೩ ಬಾಟ್ಲಿಗೆ ೧ ರೂ. ೬ ಆಣೆ.

೧೨ ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೩ ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪ ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುವಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು ನಮ್ಮೊಡನೆ ಕನ್ನಡದಿಂಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

B. M Nath & Co, *Ayurvedic Chemists*,

Vepery Post, MADRAS.

ಬನ್ನಿರಿ! ನೋಡಿರಿ!! ಕೊಳ್ಳಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.



ಬಲ್ಕೂತಪೇಕುಗಳೂ; ಬೇರೆ ಅ ಸ್ವದೇಶಿ ಜೇಕ ಮುಂಡಾಸುಗಳೂ, ಸಾಡಿಗಳೂ, ಮಿಶ್ಯನ್ ಶೋಪಿನ ಕೊಡೆಗಳ ವಸ್ತ್ರಗಳೂ; ಪೆಬ್ಬ ಎಂಬ ಗುರುಸು ಕಲ್ಲು ಕನ್ನಡಿಯಿಂದ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ ವಸ್ತ್ರಗಳೂ; ಜರಿ ಶೀರೆಗಳೂ, ದೋತ್ರಗಳೂ, ರುಮ್ಲೂ, ರವಕೆ ಕಣಗಳೂ ಕನಾನ್ನೂಗಳೂ, ಚೇಕುಗಳೂ, ಮತ್ತು ಯಂತ್ರದಿಂದ ತಯಾರಿಸಲ್ಪಟ್ಟ ಅಮೂಲ್ಯವಾದ ಬಾಬಾಬುಡನ್‌ಗಿರಿ ಕಾಫಿ ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊ.

ಸ್ವತಃ ಬಂದು ೦!

ಕ್ರಯ ಕಮ್ಮಿ—ನಗದಿ.

ಜೆ. ಎಸ್. ಸೋಜ ಕಂಪೆನಿ,

ಹಂಪನ್‌ಕಟ್ಟೆ, ಮಂಗಳೂರು.

NOTICE.

Stany Brothers,

Candle Garden, Mangalore

ಬಲ್ಮಠ ಕದ್ರಿ ರಸ್ತೆ ಬಳಿ ನಮ್ಮ "ಕೆಂಡಲ್ ಗಾರ್ಡನ್" ಎಂಬ ಸ್ಥಳದಲ್ಲಿ 1908ನೇ ಇಸವಿ ಆರಂಭದಿಂದ ಈವರೆಗೆ ನಡೆದು ಬಂದಿರುವ ಯಂತ್ರದಿಂದ ಹುರಿದು ತಯಾರಿಸುವ ನಮ್ಮ ಕಾಫಿ ಪುಡಿ ವ್ಯಾಪಾರವು ನಮ್ಮ ವಾಚಕರಿಗೆ ಗೋಚರವಾಗದ ಕಾರಣ ಈಗ ನಾವು ಪ್ರಕಟಿಸಿರುತ್ತೇವೆ.

ನಮ್ಮಲ್ಲಿ ನಾನಾ ಬಗೆಯ ಶಾಲಾ ಹುಡುಗರಿಗೆ ಅವಶ್ಯವುಳ್ಳ ಕೋಪಿ ಬುಕ್ ಇತ್ಯಾದಿ ಶಾಲಾ ಪುಸ್ತಕಗಳೂ, ಸೊಗಸಾದ ಅನೇಕ ವಿಧದ ತಿರುಚಿನಾಪಳ್ಳಿ ಚುರುಟುಗಳೂ, ನೀಲಗಿರಿ ಚಾ, ಇತರ ಸಾಮಾನುಗಳೂ ಕೂಡ ವ್ಯಾಪಾರಸ್ಥರಿಗೆ ಸುಲಭವಾದ ಖರೀದಿಯಲ್ಲಿ ದೊರಿಯುತ್ತದೆ.

ಕಾಫಿ ಪುಡಿಯು ರಾತ್ಲ ಒಂದಕ್ಕೆ 0—10—0ಯಿಂದ 0—5—0 ದರದ ವರೇಗೂ ದೊರಿಯುತ್ತದೆ

ಇತರ ಅನುಭವಗಳಿಗೆ ನಮ್ಮ ಮೆನೇಜರರ ಮೇಲಿನ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು

Piedade Pinto,

Manager.

ಚುರುಕಾದ ಏಜಂಟರು ಬೇಕಾಗಿರುವರು! ಧಾರಾಳವಾದ ಕಮಿಶನ್!!
ಮುಂದಿನ ಅಭಿವೃದ್ಧಿಗೆ ತುಂಬಾ ಅವಕಾಶವುಳ್ಳ ವೃತ್ತಿ!!!

ಮುಂಬಾಯಿ ಲ್ಯಾಫ್ ಎಸ್ಯುರೆನ್ಸ್ ಕಂಪೆನಿ,

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು).

ಪ್ರಧಾನ ಆಫೀಸು: ಮುಂಬಯಿ.

ಅಧ್ಯಕ್ಷರು:— ಬಹುಮಾನಪಟ್ಟ ಮಿ| ಲಲ್ಲುಬಾಯಿ ಸಾಮಲ್ ದಾಸರವರು, ಸಿ. ಐ. ಇ. ಜೆ. ಪಿ.

ಎಕ್ಚುವೆರಿ:— ಮಿ| ಜೋರ್ಜ್ ಕಿಂಗ್ ಎಫ್. ಎಫ್. ಎ. ಎಫ್. ಐ. ಎ.

ಮೆಡಿಕಲ್ ರಿಫರಿಗಳು:— ಡಾಕ್ಟರ್ ಆರ್. [illegible]ನ್, ಎಮ್. ಡಿ. ಡಿ. ಎಸ್. ಸಿ. (ಲಂಡನ್)

ಗೌರವಾರ್ಥಕ ಮ್ಯಾನೇಜರ್:— ರಾ| ಕೆ. ಸುಬ್ರಮಣ್ಯಯ್ಯರ್, ಬಿ. ಎ. ಜೆ. ಪಿ. ಎಫ್. ಎಸ್. ಎ. ಎ. (ಲಂಡನ್)

ವಿಮೆದಾರರ ವಿಮೆ ಪತ್ರಗಳ ಶರ್ತಗಳ ಪ್ರಕಾರ ಸಿಕ್ಕುವ ಹಣವು ಈ ಕಂಪೆನಿಯಲ್ಲಿ ಬಹಳ ಭದ್ರವಾಗಿರುವದೆಂತ ಲೆಕ್ಕ ವ್ಯವಸ್ಥಾಪಕರು ಅಭಿಪ್ರಾಯಪಟ್ಟಿರುವರು.

ತರುಣಾವಸ್ಥೆಯಲ್ಲಿರುವ ಈ ಕಂಪೆನಿಯು ಮುಂದಕ್ಕೆ ಇನ್ನೂ ಬಹಳ ಅಭಿವೃದ್ಧಿಯನ್ನು ಹೊಂದುವ ವಿಶೇಷ ಸಂಭವಗಳಿಂದ ಕೂಡಿರುವುದೆಂದು "ಕೊಮರ್ಸ್" ಎಂಬ ಪತ್ರಿಕೆಯು ಅಭಿಪ್ರಾಯವಾಗಿರುವುದು.

ಇಂಡಿಯಾ ಸರಕಾರದ ಭದ್ರತೆಯಲ್ಲಿ ರೂ. 1,55,000ವನ್ನು ಠೇವಣಾತಿಯಾಗಿಟ್ಟಿರುವದು.

ಹಣ ಕಳುಹಿಸಿಕೊಡುವ ಏಜನ್ಸಿ ಬಗ್ಯೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ:—

ಕೊಟ್ಟಿಕಾರ್ ಬ್ರದರ್ಸ್, ಉಡುಪಿ,
ಕನ್ನಡಾ, ಮಲೆಬಾರ, ತಿರುವಾಂಕೋಡು, ಮತ್ತು
ಕೊಚ್ಚಿ ಪ್ರಾಂತ್ಯಗಳ ಪ್ರಾಮುಖ್ಯ ಏಜಂಟರು.

ಸೂಚನೆ:— ಮಂಗಳೂರಲ್ಲಿರುವ ಈ ಕಂಪೆನಿಯ ವಿಮೇದಾರರು ತಮ್ಮ ವಿಮೆ ಬಾಬಲುಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಟ್ಟು ಆ ಬಗ್ಯೆ ರಶೀದಿಯನ್ನು ಕೊಟ್ಟಿಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು.

ಮಹಾಶಯರೆ!

ಉಡುಪಿ, 3—7—1914.

ಮುಂಬಾಯಿ ಲ್ಯಾಫ್ ಎಸ್ಯುರೆನ್ಸ್ ಕಂಪೆನಿ ಎಂಬುವ ಜೀವವಿಮೆ ಉತ್ತರವಾದಿಸುವ ಸಂಘದ ಬಗ್ಯೆ ತಾವು ಏನೊಂದೂ ವಿಳಂಬವಿಲ್ಲದೆ, ರೂ. 996—10—0ನ್ನು ನನಗೆ ಪಾವತಿಮಾಡಿದುದಕ್ಕಾಗಿ ಅತೀ ಉಪಕಾರವಾಯಿತು. ಸದರಿ ಪೋಲಿಸಿಯನ್ನು ಕುರಿತಾದ ಅವಶ್ಯವಾದ ಪತ್ರಗಳನ್ನು ಅವರಿಗೆ ಮುಟ್ಟಿಸಿದ ಮೂರೇ ದಿನಗಳೊಳಗಾಗಿ ನನಗೆ ಸಲ್ಲತಕ್ಕ ವಿಮೆಯ ಐವಜನ್ನು ತಮ್ಮ ಕಂಪೆನಿಯ ಡೈರೆಕ್ಟರರುಗಳು ನನಗೆ ಪಾವತಿಮಾಡಿಸಿದುದಕ್ಕೋಸ್ಕರ ನನ್ನ ಧನ್ಯವಾದಗಳನ್ನು ಅವರಿಗೆ ದಯೆಯಿಟ್ಟು ತಿಳಿಸಿ. ಈ ತೆರದಲ್ಲಿ ಪೋಲಿಸಿದಾರರೊಡನೆ ಯಥಾರ್ಥವಾದ ರೀತಿಯಲ್ಲೂ ನಂಬುಗೆಯುಂಟಾಗುವಂತೆಯೂ ವರ್ತಿಸುವ ತಮ್ಮ ವಿಮೆ ಕಂಪೆನಿಯಿಂದ ಪ್ರತಿಯೊಬ್ಬನೂ ಒಂದೊಂದು ಪೋಲಿಸಿಯನ್ನಾದರೂ ಪಡಕೊಳ್ಳುವುದು ಉಚಿತವೆಂದು ನನ್ನ ಅಪೇಕ್ಷೆ.

(ದಸ್ಕತು) ಹಿರಾಡಿ ಆನಂದರಾಯ ಫಡಿಯಾರನ ರುಜು.
135ನೇ ಪೋಲಿಸಿಯ ವಿಮಾ ಹಣವನ್ನು ಪಡೆಯಲು ಅಧಿಕಾರವುಳ್ಳವನು.

ಉಡುಪಿ, ತಾ. 20—9—1914.

ನನ್ನ ಎಳೇ ಪ್ರಾಯದಲ್ಲಿ ಮೃತರಾದ ನನ್ನ ಗಂಡ ಕೆ. ಎಲ್. ಪ್ರಭುಗಳ ವಿಮೆ ಪತ್ರಗಳನ್ನು ನಾನು ಕಳುಹಿಸಿಕೊಟ್ಟ ಕೆಲವೇ ದಿನಗಳೊಳಗಾಗಿ ಮುಂಬಾಯಿ ಲ್ಯಾಫ್ ಎಸ್ಯುರೆನ್ಸ್ ಕಂಪೆನಿಯವರು ನನಗೆ ತತ್ಸಂಬಂಧವಾದ ಹಣವನ್ನು ಪಾವತಿಮಾಡಿಸಿದುದಕ್ಕೆ ನಾನು ಕೃತಜ್ಞಳಾಗಿರುವೆನು. ನನ್ನ ಒಬ್ಬನೇ ಬಾಲಕನಿಗೆ ಇದೊಂದೇ ಮಾತ್ರ ಪಿತ್ರಾರ್ಜಿತವಾದ ಧನವಾಗಿದೆ. ಅಂತಹ ಬಡ ಹುಡುಗನಿಗೆ ಇದೊಂದು ಅಪೂರ್ವವಾದ ಮಹಾದಾನವನ್ನು ಮಾಡಿಕೊಟ್ಟುದಕ್ಕೆ ಪ್ರತಿಯಾಗಿ ನಿಮ್ಮ ಕಂಪೆನಿಯು ಚಿರಕಾಲವೂ ಸೌಭಾಗ್ಯದಲ್ಲಿರಲಿ!

ಭವಾನೀಬಾಯಿ, Pol. No. 1738.
ಸಾಕ್ಷಿ—ಭವಾನೀಬಾಯಿಯ ಸೋದರ ರಾ| ಕೆ. ರಂಗಪ್ಪ ನಾಗಪ್ಪ.

ಮಂಗಳೂರು, ತಾ. 30—10—1914.

ಸಾಧ್ಯವಾದಷ್ಟು ಅತಿ ಕಡಿಮೆ ಸಮಯದೊಳಗಾಗಿ ನನಗೆ ಪಾವತಿಯಾಗತಕ್ಕ ಹಣವನ್ನು ಸಲ್ಲಿಸಿದುದಕ್ಕೋಸ್ಕರ ಬೊಂಬೇ ಲ್ಯಾಫ್ ಎಸ್ಯುರೆನ್ಸ್ ಕಂಪೆನಿಯವರಿಗೆ ನನ್ನ ಧನ್ಯವಾದಗಳನ್ನು ಸಲಾಯಿಪೂರ್ವಕವಾಗಿ ಮುಟ್ಟಿಸಿರಿ! ಕ್ರಮದ ಪ್ರಕಾರ ಎಲ್ಲಿ ಹಣವನ್ನು ಪಡಕೊಳ್ಳುವ ಹಾಗೆ ಕಂಪೆನಿಯ ಏಜಂಟರೇ ತಮ್ಮಿಂದಾಗುವಷ್ಟರ ಸಹಾಯವನ್ನು ಮಾಡುತ್ತಿರುವರಾದುದರಿಂದ ನನಗೆ ಯಾವ ತೊಂದರೆಗಳೂ ಉಂಟಾಗಲಿಲ್ಲ. ಹಣವನ್ನು ನಾವಿದ್ದ ಸ್ಥಳಕ್ಕೆ ಬಂದು ತೆತ್ತರು.— ಇದೊಂದು ತಮ್ಮ ಕಂಪೆನಿಯ ವಿಶೇಷ ಗುಣ. ನಿಮ್ಮ ಸಂಘಕ್ಕೆ ಸದಾ ವಿಜಯವು ಆಗಲಿ.

ಅರ್ಕಳ. ರಾಮಚಂದ್ರ ಶ್ಯಾನಭಾಗನ ರುಜು.
(Pol. No. 2310ನೆಯ ಪಾಲಿಸಿ ಹಕ್ಕಿನ ಆಸಾಮಿ).

ಐಕ್ಯೂ ಭಡವಲ್ಯ ಕೊಂಡುಕೊಳ್ಳಲು ಸಾಧ್ಯವಾಗಿರುವ

[illegible]ಪ್ಟಸ್ ತೈಲವು

ತಲೆಸೂಲಿ, ಗಾಯ, ಸಕಲ ವಿಧವಾದ ವಾಯುರೋಗ, ಕೆಮ್ಮು, [illegible], ಉಷ್ಣಬೇಧಿ, ಹೊಟ್ಟೆಯಲ್ಲಿ ಜ್ವರಗಡ್ಡೆ, ಸ್ತ್ರೀಯರ ವ್ಯಾಧಿಸಂಬಂಧವಳಾದ ಮೇಹ ರೋಗಗಳ, ಕಿವಿಯಲ್ಲಿ ಕೀವು ಬರುವದು, ಹೆತೋವು ಮೊದಲಾದ ರೋಗಗಳನ್ನು ಖಾತ್ರಿಯಾಗಿ ಗುಣಪಡಿಸುವ. ಸೀಸೆ 1ಕ್ಕೆ 0—5—0. ವಿ. ಪಿ. ಬೇರೆ. ಡಜನ್ ಸೀಸೆಗಳಿಗೆ ರೂ 3—12—0. ಅನುಪಾನ ಪತ್ರಿಕೆ ಸೀಸೆಯೊಂದಿಗೆ.

ಸಿಪಾಯಿ. ಪಿ. ಎಸ್: ತಮ್ಮ ಯುಕಲಿಪ್ಟಸ್ ತೈಲವು ಅಮೃತದಂತೆ ಪ್ರತಿ ಮನೆಯಲ್ಲಿ ಇರಬೇಕೆಂತ ನಾನು ಖಂಡಿತವಾಗಿ ಹೇಳುತ್ತೇನೆ. ಪಶುಗಳ ಸರ್ವ ರೋಗಗಳಿಗೆ.

[illegible]ಕ್ಲಿಪ್ಸ್ ಬಾಮ್.

ತಲೆ[illegible]ದ ನೋವು, ಸಂಧುವಾತ, ಮೇಹವಾತ, ನೆಗಡಿ, ಶೈತ್ಯ, ಚೇಳು, [illegible], ಕುರು, ರಾಜಕುರು, ಮೊಡವೆ, ಘಾಯಗಳು, ಹಲ್ಲು ನೋವು, [illegible]ವ್ಯಾದಿ ರೋಗಗಳಿಗೆ ಬಾಹ್ಯಲೇಪನವಾಗಿ ಉಪಯೋಗಿಸಬಹುದಾದ [illegible]ಗೆ 1ಕ್ಕೆ ಆಣೆ 8. ವಿ. ಪಿ. ಬೇರೆ. ಡಜನ್ ಕರಡಿಗೆಗಳಿಗೆ ರೂ. [illegible]. ವಿ. ಪಿ. ಬೇರೆ.

ವಿಳಾಸ:— ಏಜಂಟರು:—

ಇವನ್ಸಿ, [illegible]ಗಳೂರು. ಸುಗಂಧವಿಲಾಸ, ರಥಬೀದಿ, ಮಂಗಳೂರು.

ಅನೇಕ್ಯತಾಪತ್ರಿಕೆಗಳನ್ನು ಪಡದಿರುವ (ರಿಜಿಸ್ಟರ್ಡ್)

ರಾಜಸುಂದರಿ ರೋಜ.

ಕೂದಲು ಬೆಳೆಯುವ ಪರಿಮಳ ತೈಲವು. 50 ವಿಧವಾದ ಇನಾಂ ಸಾಮಾನುಗಳ ಸಮೇತ ಪಟ್ಟಿ 1ಕ್ಕೆ ರೂ. 1 ಮಾತ್ರ.

ಸ್ತ್ರೀಗಳು ತಲೆಕೂದಲು ಸುಂದರವಾಗಿ ಇರಬೇಕೆಂಬ ಉದ್ದೇಶವಾಗಿಯೂ, ಕೂದಲು ಉದುರುವದನ್ನು ತಡೆದು, ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವರು. ಬಜಾರಿನಲ್ಲಿ ದೊರೆಯುವ ಕೀಳುತರವಾದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ, ನಿಮ್ಮ ಹಣವನ್ನೂ ತಲೆಯನ್ನೂ ಹಾಳು ಮಾಡುವದಕ್ಕಿಂತ ನಮ್ಮ ಪರಿಮಳ ತೈಲವನ್ನು ಉಪಯೋಗಿಸಿರಿ. ಈ ಲೋಕಪ್ರಖ್ಯಾತವಾದ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಬಾಚಿದರೆ ಅದರ [illegible]ಳ ವಾಸನೆ ಬಾಯುವದಕ್ಕೆ ಆಗುವದಿಲ್ಲ ಮತ್ತು ಇದರ ಪರಿಮಳ ವಾಸನೆ ಸುತ್ತ [illegible] ಹೋಗುವದು. ಇದಲ್ಲದೆ ದೇಹದಲ್ಲಿ ಇರುವ ಉಷ್ಣವನ್ನು ತೆಗೆದು ಕಣ್ಣಿಗೆ ತಂಪು ಕೊಟ್ಟಿಯಲ್ಲಿ ಇರುವ ಮೆದಡನ್ನು ಸರಿ ಮಾಡುವದು. ಮುಖಕ್ಕೆ ಕಾಂತಿಯನ್ನೂ, ದೇಹವನ್ನೂ, ಮನಸಿಗೆ ಸಂತೋಷವನ್ನೂ, ಕೂದಲಿಗೆ ಆರೋಗ್ಯವನ್ನೂ ಕೊಡುವ ತೈಲವು ಬೇರೊಂದಿಲ್ಲ, ಬರೀ ಮಾತುಗಳಿಂದ ವರ್ಣಿಸುವದರಲ್ಲಿ ಪ್ರಯೋಜನವಿಲ್ಲ, [illegible] ತಿಳಿಯುತ್ತೆ. ಇನಾಂ ಸಾಮಾನುಗಳ ತಪಸೀಲು. ಸ್ತ್ರೀಯರು ಧರಿಸಿಕೊಳ್ಳುವ [illegible], ವೈಭವನ 1, ಆದ್ದಾ 1, ತಾಂಬೂಲ ಮಾತ್ರೆ 30, ದಂತದ ಬಾಚಣಿಗೆ 1, [illegible]ರಾಜರಾಣಿ ಕಾರನೇಷನ್ ಪೆಟ್ಟಿಗೆ 1, ರವಿವರ್ಮ ಪೋಸ್ಟುಕಾರ್ಡ್ 6, ಸುವಾಸನೆ 1, ಗಂಧ ಬಿಲ್ಲೆ 1, ಸ್ತ್ರೀಯರು ಧರಿಸುವ ಬ್ರೋಚ್ 1.

ನಮ್ಮ ವಿಳಾಸ: ಮ್ಯಾನೇಜರ್ ಧೈರ್ಯ ಲಕ್ಷ್ಮಿ ಅಂಡು ಕಂಪೆನಿ,
ನಂ. 3 ಇರುಲಪ್ಪನ್ ಬೀದಿ, ಮದ್ರಾಸು.

ಸ್ವದೇಶಾಭಿಮಾನಿ

ಮಂಗಳೂರು, ಶುಕ್ರವಾರ ತಾರೀಕು 18ನೇ ಜೂನ್ 1915

ಹಾರ್ಡಿಂಗ್ ಪ್ರಭುಗಳ ವೈಸರಾಯಿ ಪದವಿಯ ಕೆಲಸದವಧಿಯನ್ನು ಹೆಚ್ಚಿಸಿರುವರು.

ಬರುವ ಮಾರ್ಚಿ ತಿಂಗಳ ವರೆಗೆ ಹಾರ್ಡಿಂಗ್ ಪ್ರಭುಗಳ ಕೆಲಸದವಧಿಯು ಹೆಚ್ಚಿಸೋಣಾಗಿರುವುದೆಂಬುದನ್ನು ತಿಳಿಸಲು ತುಂಬಾ ಸಂತೋಷಪಡುತ್ತೇವೆ ಬ್ರಿಟಿಷ ಪಾರ್ಲಿಮೆಂಟ ಸಭೆಯಲ್ಲಿ ಪ್ರಧಾನಮಂತ್ರಿಗಳಾದ ಮೆ| ಎಸ್ಕ್ವಿತ್‌ರವರು ಮೊನ್ನೆ ದಿನ ಈ ವಿಷಯವನ್ನು ಸಭಿಕರಿಗೆ ಈ ರೀತಿ ತಿಳಿಯ ಹೇಳಿದರು—ಸಾಮಾನ್ಯ ವಿದ್ಯಮಾನಗಳಲ್ಲಿ ಹಾರ್ಡಿಂಗ್ ಪ್ರಭುಗಳ ಕೆಲಸದವಧಿಯು ಇದೇ ಬರುವ ನವಂಬರ ತಿಂಗಳಲ್ಲಿ ಮುಗಿಯುವದಿತ್ತು. ಆದರೆ ಪ್ರಭುಗಳವರು ತಮ್ಮ ಆಡಳಿತೆಯ ಕಾಲದಲ್ಲಿ ಮಾಡಿದ ಮಹತ್ವವಾದ ಕಾರ್ಯವಿವರಗಳನ್ನು ಪರ್ಯಾಲೋಚಿಸಿಕೊಂಡು ಇಂಥಾ ಅನುಭವಶಾಲಿಯನ್ನು ಇನ್ನು ನಾಲ್ಕು ತಿಂಗಳ ಕಾಲದ ವರೆಗೆ ಈ ಪದವಿಯಲ್ಲಿರಗೊಡಿಸುವುದು ಅಗತ್ಯವೆಂತ ಸಾಮ್ರಾಜ್ಯ ಸರಕಾರದವರು ಅಪೇಕ್ಷಿಸಿದ್ದರಿಂದ ಬರುವ ಮಾರ್ಚಿ ತಿಂಗಳ ವರೆಗೆ ವೈಸರಾಯಿ ಪದವಿಯನ್ನು ಬಿಡಕೂಡದೆಂಬುದಾಗಿ ಹಾರ್ಡಿಂಗ್ ಪ್ರಭುಗಳನ್ನು ವಿಜ್ಞಾಪಿಸಿಕೊಂಡೆವು. ಹಾರ್ಡಿಂಗ್ ಪ್ರಭುಗಳು ಕೂಡಲೆ ನಮ್ಮ ವಿಜ್ಞಾಪನೆಯನ್ನು ಮನ್ನಿಸಿರುತ್ತಾರೆ. ಚಕ್ರವರ್ತಿಗಳ ಸಮ್ಮತಿಯು ಈ ಏರ್ಪಾಡಿಗೆ ದೊರಕಿರುತ್ತದೆ ಕಳದ 5 ವರುಷಗಳ ಆಡಳಿತೆಯ ಶ್ರಮವನ್ನು ಗಣನೆಗೆ ತಾರದೆ ಸತಿಪುತ್ರರ ವಿಯೋಗದುಃಖದಲ್ಲಿದ್ದರೂ ಸಾಮ್ರಾಜ್ಯ ಸೇವೆಯನ್ನು ಸ್ವೀಕರಿಸಿದ ಹಾರ್ಡಿಂಗ್ ಪ್ರಭುಗಳವರ ಅಭಿಮಾನವು ತುಂಬಾ ಪ್ರಶಂಸನೀಯವಾಗಿದೆ—ಇಂಥಾ ಕೃತಜ್ಞತಾಭಾವದಿಂದ ಸಾಮ್ರಾಜ್ಯ ಸರಕಾರದವರು ತಿರಿಗೊಮ್ಮೆ ಭರತಖಂಡದ ಆಡಳಿತೆಯ ಭಾರವನ್ನ ಹಾರ್ಡಿಂಗ್ ಪ್ರಭುಗಳಿಗೆ ವಹಿಸಿಕೊಟ್ಟಿರುವರು ಬ್ರಿಟಿಷ ಪಾರ್ಲಿಮೆಂಟ ಸಭೆಯಲ್ಲಿಯ ತಂಡಗಳ ಏಕೀಕರಣದಿಂದ ಉಂಟಾದ ಮಂತ್ರಿ ಮಂಡಳಿಯ ಬದಲಾವಣೆಯಲ್ಲಿ ಹಿಂದೂಸ್ಥಾನದ ಮಂತ್ರಿಗಳಾಗಿ ಕ್ರೂ ಪ್ರಭುಗಳ ಬದಲಿಗೆ ಮಿ| ಒಸ್ಟಿನ್ ಚೆಂಬರ್‌ಲೇನರವರು ನೇಮಿಸಲ್ಪಟ್ಟಿರುವದರಿಂದ ಹಾರ್ಡಿಂಗ್ ಪ್ರಭುಗಳು ತಿರಿಗೊಮ್ಮೆ ವೈಸರಾಯಿ ಪದವಿಯನ್ನು ವಹಿಸಿಕೊಳ್ಳುವರೋ ಏನೋ ಎಂಬುವ ವಿಷಯ ಅನುಮಾನವಿತ್ತು ಯುದ್ಧದಿಂದ ಪ್ರಾಪ್ತವಾದ ಸಂದುಕಟ್ಟಿನ ಈ ಕಾಲದಲ್ಲಿ ಬ್ರಿಟಿಷರ ರಾಜಕೀಯ ತಂಡಭೇದಗಳನ್ನು ಲೆಕ್ಕಿಸದೆ ಆದಂಥಾ ಸಾಮ್ರಾಜ್ಯ ಸರಕಾರದ ಮಂತ್ರಿ ಮಂಡಳಿಯ ವ್ಯವಸ್ಥೆಗೆ ಅನುಕೂಲವಾಗಿ ಹಾರ್ಡಿಂಗ್, ಪ್ರಭುಗಳಿಗೆ ಹಿಂದೂಸ್ಥಾನದ ಆಡಳಿತೆಯು ಪುನಹ ಕೊಡ್ಲೋಣಾಗಿರುವುದು. ಆದರೆ ನಾಲ್ಕು ತಿಂಗಳ ವರೆಗೆ ಮಾತ್ರ ಈ ಅವಧಿಯನ್ನು ಮಿತಿಪಡಿಸಿರುವದು ಯಾಕೆಂಬುದು ಗೊತ್ತಾಗುವದಿಲ್ಲ ಸ್ಟೇಟ್ ಸೆಕ್ರಿಟರಿಯಿಂದ ತನ್ನ ಅಧಿಕಾರ ಅವಧಿಯ ವಿಷಯವಾಗಿ ಬಂದ ಈ ನಿರೂಪಣೆಯನ್ನು ವಿವೇಕಿಗಳೂ ವಿನಯಸಂಪನ್ನರೂ ಆದ ಹಾರ್ಡಿಂಗ್ ಪ್ರಭುಗಳು ತಮ್ಮ ಮೃದುಮಧುರ ಭಾವವನ್ನು ಸೂಚಿಸುವ ಬಹಳ ಅಂದವಾದ ವಚನಗಳಲ್ಲಿ ಪ್ರಕಟಗೊಳಿಸಿರುತ್ತಾರೆ —ಸಾಮ್ರಾಜ್ಯ ಸರಕಾರದ ಕಾಂಕ್ಷೆಯು ಎಂಥಾದ್ದಾದರೂ ಅದನ್ನು ಸಂದುಕಟ್ಟಿನ ಇಂಥಾ ಕಾಲದಲ್ಲಿ ಅನುಸರಿಸಿ ನಡೆಯುವದು ಧರ್ಮವೆಂತ ತಿಳಕೊಂಡಿರುವೆನೆಂಬುದನ್ನು ಸ್ಟೇಟ್ ಸೆಕ್ರಿಟರಿಗಳ ಅಪೇಕ್ಷೆಗನುಸಾರವಾಗಿ ಈ ನಿರೂಪಣೆಯನ್ನು ಪ್ರಕಟಗೊಳಿಸುವಾಗ ಸೂಚಿಸಲು ನಾನು ಅಪೇಕ್ಷಿಸುತ್ತೇನೆ. ವಿಶೇಷ ಜವಾಬ್ದಾರಿಕೆಯುಳ್ಳ ವೈಸರಾಯ ಪದವಿಯನ್ನು ಕೈಕೊಳ್ಳಲು ನಿಶ್ಚಿಂತನಾಗಿ ಸಮ್ಮತಿಸಲಿಲ್ಲ. ಈ ಪದವಿಯ ಜವಾಬ್ದಾರಿಕೆಯು ಅತಿ ತುಚ್ಛವಾಗಿದೆಂಬುವ ಚಿಂತನೆಯು ನನ್ನಲ್ಲಿರುವುದಾದರೂ ಈ ದೇಶದ ಆಶ್ರಿತ ರಾಜರುಗಳಲ್ಲಿ ಹಲವರೂ ಆಯಾಯ ಪ್ರಜಾ ಸಮಾಜ ಪ್ರತಿನಿಧಿಗಳೂ ನನ್ನ ಅಧಿಕಾರದ ಅವಧಿಯನ್ನು ಹೆಚ್ಚಿಸಬೇಕೆಂತ ಅಪೇಕ್ಷಿಸಿದ್ದರಿಂದ ಇವ್ವೆಲ್ಲಾ ಜನರ ಭರವಸೆಯು ನನ್ನ ಮೇಲಿದೆ ಎಂಬುವ ಭಾವನೆಯಿಂದ ಹಿಂದೂಸ್ಥಾನದ ಮತ್ತು ಭಾರತೀಯರ ಒಳ್ಳಿತನ್ನು ನನ್ನಿಂದ ಸಾಧ್ಯವಾದಷ್ಟು ಮಟ್ಟಿಗೆ ಸಾಧಿಸುವಗೋಸುಗ ಈ ಅಧಿಕಾರವನ್ನು ಪುನಹ ವಹಿಸಿಕೊಳ್ಳಲು ಧೈರ್ಯಗೊಂಡಿರುವೆನು.—ಭಾರತೀಯ ಪ್ರಜೆಗಳ ಇಷ್ಟವನ್ನು ಮನ್ನಿಸುವ ಭಾವವು ಬ್ರಿಟಿಷ ಮಂತ್ರಿವರ್ಯರ ಮಾತುಗಳಲ್ಲಿ ತೋರಿ ಬಾರದೆ ಹೋದರೂ ಹಾರ್ಡಿಂಗ್ ಪ್ರಭುಗಳವರ ನುಡಿಗಳಲ್ಲಿ ಇದು ವ್ಯಕ್ತವಾದದ್ದನ್ನು ನೋಡಿ ತುಂಬಾ ಆನಂದ ಪಡುತ್ತೇವೆ. ಯುದ್ಧವು ತೀರಿದನಂತರ ಈ ದೇಶಕ್ಕೆ ದೊರಿಯಲು ಬೇಕಾದ ರಿಯಾಯತಿಗಳನ್ನು ನಿರ್ಧರಿಸಲು ಭಾರತೀಯ ಪ್ರಜೆಗಳ ಮೇಲೆ ಪೂರ್ಣ ವಾತ್ಸಲ್ಯವುಳ್ಳಂಥಾ ಈ ಮಹನೀಯರು ವೈಸರಾಯಿ ಪದವಿಯಲ್ಲಿರುವುದು ಕ್ಷೇಮಕರವಾದ್ದರಿಂದ ಆ ಸಮಯದ ವರಿವಿಗೂ ಇವರ ಅಧಿಕಾರ ಅವಧಿಯನ್ನು ಹೆಚ್ಚಿಸಬೇಕೆಂತ ಅಪೇಕ್ಷಿಸುತ್ತೇವೆ

ಪಾಲಂಕೋಟೆಯಲ್ಲಿರುವ ಕುರುಡರ ಭಿತ್ತಿಯು.

ಈ ಭವನದ ವಿವರಗಳೆಲ್ಲವನ್ನು ಸಂಗ್ರಹಿಸಿ ಮದ್ರಾಸು ಸರಕಾರದ ನೇಯಿಗೆ ಇಲಾಖೆಯ ಸುಪರಿಂಟೆಂಡೆಂಟರಾದ ಎನ್ ಸುಬ್ರಮಣ್ಯಮ್ ಎಂಬವರು ಒಂದು ಲೇಖವನ್ನು ಮೊಡರ್ನ್ ರಿವ್ಯೂ ಮಾಸಪತ್ರಿಕೆಯಲ್ಲಿ ಬರೆದಿರುವರು ಹಿಂದೂಸ್ಥಾನದಲ್ಲಿರುವ ಕುರುಡರ ಸಂಖ್ಯೆಯು ೬೦೦,೦೦೦ವಾಗಿರುವುದು ಇದರಲ್ಲಿ ಶುಮಾರು ೪೦,೦೦೦ ಕುರುಡರು ಮದ್ರಾಸು ಸಂಸ್ಥಾನದಲ್ಲಿರುವರು ಪಾಲಂಕೋಟೆಯಲ್ಲಿ ಸ್ಥಾಪಿತವಾದ ಭವನದಲ್ಲಿ ೧೦೦ ಜನ ಕುರುಡರಿಗೆ ಮಾತ್ರ ಆಶ್ರಯ ಕೊಡುವಷ್ಟು ಸ್ಥಳವಿರುವುದರಿಂದ ಈ ಸಂಸ್ಥಾನದ ೪೦,೦೦೦ ಅಂದರ ಜನನಾವಸ್ಥೆಯ ನಿರ್ಗತಿಕತನವನ್ನು ನಿವಾರಿಸುವರೆ ಇನ್ನೂ ಹಲವು ಇಂಥಾ ಸಂಸ್ಥೆಗಳು ಸ್ಥಾಪಿಸಲ್ಪಡಬೇಕೆಂದು ಸುಬ್ರಮಣ್ಯಮ್‌ನವರಿಂದ ಸೂಚಿಸೋಣಾಗಿರುತ್ತದೆ.

ಮಿಸ್ ಅಸ್ಕ್ವಿತ್ ಎಂಬ ಮಿಶನರಿ ಸ್ತ್ರೀಯು ಈ ಭವನದ ಪ್ರಾರಂಭವನ್ನು ೧೮೯೦ರಲ್ಲಿ ಮಾಡಿದರು ಈಗ ಕುರುಡರಲ್ಲಿ ಸ್ತ್ರೀಪುರುಷರಿಗೆ ಪ್ರತ್ಯೇಕ ಭಿತ್ತಿಗಳನ್ನು ಕಟ್ಟಿಸಿರುತ್ತಾರೆ ಭಿತ್ತಿಗಳ ಹತ್ತಿರ ಪ್ರತ್ಯೇಕ ಒಂದು ಊಟದ ಮನೆಯೂ ಇರುವದು. ಉಪಾಧ್ಯಾಯರಿಗೂ ಈ ಆಶ್ರಮದ ಸುಪರಿಂಟೆಂಡೆಂಟರಾದ ಮಿಸ್. ಅಸ್ಕ್ವಿತರವರಿಗೂ ಪ್ರತ್ಯೇಕ ಮನೆಗಳಿರುವವು ಭಿತ್ತಿಗಳ ಈ ವಠಾರವು ಒಟ್ಟಿಗೆ ೧೨ ಎಕ್ರೆ ವಿಸ್ತೀರ್ಣವುಳ್ಳದ್ದಾಗಿರುವುದು ಕುರುಡ ವಿದ್ಯಾರ್ಥಿಗಳೆಲ್ಲವರನ್ನು ಪ್ರತಿ ಸಾಯಂಕಾಲ ಭಿತ್ತಿಯ ವಠಾರದಲ್ಲಿ ತಿರುಗಾಡಲಿಕ್ಕೆ ಕಳುಹಿಸಿಕೊಡುವರು ಕುರುಡರು ತಿರುಗುತ್ತಿರುವಾಗ್ಯೆ ಹಾದಿಯಲ್ಲಿ ಆತಂಕಗಳೇನೂ ಇಲ್ಲದಿರುವುದರಿಂದ ಇವರ ಕೂಡೆ ಯಾರಾದರೂ ಹೋಗಬೇಕೆಂಬ ಅಗತ್ಯವಿರದು. ಹುಡುಗರ ಶಾಲೆಯಲ್ಲಿ ೪೯ ಜನ ವಿದ್ಯಾರ್ಥಿಗಳಿರುತ್ತಾರೆ. ೨೮ ಜನ ವಿದ್ಯಾರ್ಥಿಗಳು ಕೈಗಾರಿಕೆ ಶಾಲೆಯಲ್ಲಿರುವರು. ಹುಡುಗಿಯರಲ್ಲಿ ೭ ಮಂದಿ ಕೈಗಾರಿಕೆ ಶಾಲೆಯಲ್ಲಿಯೂ ೩೩ ಜನರು ಪಾಠಶಾಲೆಯಲ್ಲಿಯೂ ಶಿಕ್ಷಣ ಹೊಂದುತ್ತಿದ್ದಾರೆ ತಮಿಳು, ಮಲೆಯಾಳ ಮತ್ತು ಇಂಗ್ಲೀಷ ಭಾಷೆಗಳಲ್ಲಿ ಓದಲಿಕ್ಕೂ ಪದಗಳನ್ನು ಹಾಡಲಿಕ್ಕೂ ಶಾಲೆಗಳಲ್ಲಿ ಕಲಿಸುವರು. ಕುರುಡರಲ್ಲಿ ಅಕ್ಷರಜ್ಞಾನವು ಉಂಟಾಗುವಂತೆ ಹಸ್ತಸ್ಪರ್ಶದಿಂದ ಕಲಿಯಲಾಗುವ ಪುಸ್ತಕಗಳನ್ನು ನಿರ್ಮಿಸಿರುತ್ತಾರೆ. ಇಂಥಾ ಪುಸ್ತಕಗಳ ಮತ್ತು ಇತರ ಉಪಕರಣಗಳ ಸಹಾಯದಿಂದ ಗಣಿತ ಮತ್ತು ಭೂಗೋಳಶಾಸ್ತ್ರಗಳ ಪಾಠಗಳನ್ನು ಸಹ ಹೇಳಿಕೊಡುತ್ತಿರುವರು ವಿದ್ಯಾರ್ಥಿಗಳ ವ್ಯಾಯಾಮದ ಬಗ್ಯೆ ಹುಡುಗರಿಗೆ ಕುಸ್ತಿ ಆಟವೂ ಹುಡುಗಿಯರಿಗೆ ಡ್ರಿಲ್ ಅಭ್ಯಾಸವೂ ಇದೆ ಕೈಗಾರಿಕೆ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಮುಖ್ಯವಾಗಿ ವಸ್ತ್ರ ನೇಯಿಗೆ ಕೆಲಸವನ್ನು ಕಲಿಸುತ್ತಿರುವರು. ಚಾಪೆಗಳನ್ನು ಹೆಣೆಯುವುದು ಬೆತ್ತಗಳ ಪೆಟ್ಟಿಗೆ ಇತ್ಯಾದಿಗಳನ್ನು ತಯ್ಯಾರಿಸುವುದು, ತಾಳಿಮರದ ಎಲೆಗಳಿಂದ ಕುಕ್ಕೆಗಳನ್ನು ತಯ್ಯಾರಿಸುವುದು ಇತ್ಯಾದಿ ಕೆಲಸಗಳನ್ನು ಸ್ತ್ರೀವಿದ್ಯಾರ್ಥಿಗಳಿಗೆ ಕಲಿಸುವರು ಸರಕಾರದವರಿಂದ ಏರ್ಪಡಿಸಲ್ಪಡುವ ವಸ್ತ್ರನೇಯಿಗೆಯ ಪರೀಕ್ಷೆಯಲ್ಲಿ ಈ ಕುರುಡರ ಭಿತ್ತಿಯ ನಾಲ್ಕು ಜನ ವಿದ್ಯಾರ್ಥಿಗಳು ತೇರ್ಗಡೆಪಟ್ಟಿರುವರು.

ಮೂರು ಜನ ಇಂಗ್ಲೀಷ ಸ್ತ್ರೀಯರು ಮತ್ತು ೨೫ ಜನ ದೇಶೀಯರು ಈ ಭಿತ್ತಿಯಲ್ಲಿ ಅಧ್ಯಾಪಕರಾಗಿರುತ್ತಾರೆ. ಪಾಠಪುಸ್ತಕಗಳು ಮೊದಲಾದವುಗಳ ಖರ್ಚಲ್ಲದೆ ಈ ಸಂಸ್ಥೆಗೆ ತಿಂಗಳೊಂದಕ್ಕೆ ರೂ ೧೨೦೦ ಖರ್ಚಿನ ಬಗ್ಗೆ ಬೇಕಾಗಿರುವುದು. ಸರಕಾರದವರ ಮತ್ತು ಡಿಸ್ಟ್ರಿಕ್ಟ್ ಬೋರ್ಡು ಮುನ್ಸಿಪಲ್ ಕೌನ್ಸಿಲಿನ ಸಹಾಯವು ಅಲ್ಪಸ್ವಲ್ಪ ದೊರಕುತ್ತದೆ. ಆಗಿಂದಾಗ್ಯೆ ಕೂಡಿಸೋಣಾಗುವ ಚಂದಾ ಮೊಬಲಗುಗಳ ದ್ರವ್ಯಸಹಾಯವೇ ಈ ಸಂಸ್ಥೆಯ ಜೀವನದ ಮೂಲಾಧಾರವಾಗಿರುವುದು. ದೇಶದ ಎಲ್ಲಾ ದಿಕ್ಕುಗಳಿಂದಲೂ ಈ ಭಿತ್ತಿಯ ಪೋಷಣೆಯ ಬಗ್ಗೆ ಸಹಾಯವನ್ನು ಇದರ ಸುಪರಿಂಟೆಂಡೆಂಟರಾದ ಮಿಸ್ ಅಸ್ಕ್ವಿತ್‌ರು ನಿರೀಕ್ಷಿಸುತ್ತಿರುವರು. ಇವರು ಮಾಡಿದ ಮಹತ್ವವಾದ ಲೋಕಸೇವೆಯ ಬಗ್ಗೆ ಸರಕಾರದವರು ಕೇಸರಿ ಹಿಂದ್ ಮೆಡಲ್ ಎಂಬ ಚಿನ್ನದ ಪದಕವನ್ನು ಬಹುಮಾನಾರ್ಥವಾಗಿ ಕೊಟ್ಟಿರುತ್ತಾರೆ.

ರಾಕ್ಷಸ ಸಂವತ್ಸರದ ವ್ಯವಸಾಯ ಪಂಚಾಂಗವು

ಸರಕಾರದವರಿಂದ ಪ್ರಕಟಿಸಲ್ಪಟ್ಟ ಕನ್ನಡ ಭಾಷೆಯ ಈ ಪಂಚಾಂಗದ ಪ್ರತಿಯೊಂದು ನಮಗೆ ತಲ್ಪಿರುವದು. ಸರಕಾರದವರು ರೈತರ ಪ್ರಯೋಜನಾರ್ಥವಾಗಿ ಕೃಷಿ ಇಲಾಖೆ ಪಶುವೈದ್ಯ ಇಲಾಖೆಗಳ ಮೂಲಕ ನಡೆಸುತ್ತಿರುವ ಕಾರ್ಯ ವೃತ್ತಾಂತವನ್ನು ಬಹಳ ಮಟ್ಟಿಗೆ ಈ ಪಂಚಾಂಗದಿಂದ ತಿಳಕೊಳ್ಳಬಹುದು. ಪಂಚಾಂಗವು ತಿಥಿ, ವಾರ, ಇತ್ಯಾದಿಗಳನ್ನು ಸೂಚಿಸುವದಲ್ಲದೆ ದಕ್ಷಿಣಹಿಂದೂಸ್ಥಾನದ ಆಯಾ ಪ್ರಾಂತ್ಯಗಳಲ್ಲಿ ಜಾನುವಾರುಗಳ ಸಂತೆ, ಕೃಷಿಉಪಕರಣಗಳ ಪ್ರದರ್ಶನ ಇತ್ಯಾದಿಗಳು ಯಾವ್ಯಾವ ಕಾಲಗಳಲ್ಲಿ ಜರಗುವವೆಂಬುವ ವಿವರವನ್ನು ಸಹ ಕೂಡಿರುವದು. ಕೃಷಿ ಇಲಾಖೆಯವರು ಮಾದರಿ ಹೊಲಗಳಲ್ಲಿಯೂ ಇತರ ಪ್ರಾಂತ್ಯಗಳಲ್ಲಿಯೂ ನಡಿಸಿರುವ ಪರಿಶೋಧನೆಗಳ ಅನುಭವವು ಈ ಪಂಚಾಂಗದಲ್ಲಿ ಪ್ರಕಟಿಸಲ್ಪಟ್ಟಿರುತ್ತದೆ. ಕನ್ನಡ ಭಾಷೆಯ ಪರಿಚಿತಿಯುಳ್ಳ ರೈತರೆಲ್ಲರಿಗೂ ಈ ಪಂಚಾಂಗದ ಪ್ರತಿಗಳನ್ನು ಪಡಿಯಲು ಸಾಧ್ಯವಾಗುವಂತೆ ಪ್ರತಿ ಒಂದಕ್ಕೆ ಕ್ರಯ ಒಂದಾಣೆ ಇಟ್ಟಿರುವರು.

ವಿದ್ಯಾರ್ಥಿ ವರ್ಗದಲ್ಲಿ ತೋರಿ ಬರುವ ಕುಂದುಕಗಳೇನು?

ಅಮೇರಿಕದ ಸಂಯುಕ್ತ ಸಂಸ್ಥಾನಗಳ ಸರಕಾರದ ಮಾಜಿ ಪ್ರೆಸಿಡೆಂಟರಾದ ಟಾಫ್ಟ್ ಮಹನೀಯರ ಹೆಸರನ್ನು ವಾಚಕರು ಕೇಳಿ ತಿಳಕೊಂಡಿರಬಹುದು. ಪ್ರೆಸಿಡೆಂಟರ ಪದವಿಯನ್ನು ಇವರು ಬಿಟ್ಟುಬಿಟ್ಟ ಮೇಲೆ ಅಮೇರಿಕದ ಯೇಲ್ ಎಂಬಲ್ಲಿಯ ವಿಶ್ವವಿದ್ಯಾನಿಲಯದಲ್ಲಿ ನ್ಯಾಯ ಶಾಸ್ತ್ರಪಂಡಿತರಾಗಿ ಶಿಕ್ಷಕ ವೃತ್ತಿಯನ್ನು ಅವಲಂಬಿಸಿರುವರು. ಅಮೇರಿಕದಲ್ಲಿ ಇತ್ತಲಾಗೆ ಕೂಡಿದ ವಿದ್ಯಾ ಪರಿಷತ್ತುಗಳೊಂದರಲ್ಲಿ ಟಾಫ್ಟರವರು ತಮ್ಮ ಭಾಷಣದಲ್ಲಿ ಈಗಿನ ತರುಣ ವರ್ಗದವರಲ್ಲಿ ಕಂಡುಬರುವಂಥಾ ಕೆಲವು ಕುಂದುಕಗಳನ್ನು ತೋರಿಸಿಕೊಟ್ಟಿರುವರು. ಇಲ್ಲಿಯ ವಿದ್ಯಾರ್ಥಿವರ್ಗದಲ್ಲಿ ಸಹ ಇಂಥಾ ನ್ಯೂನತೆಗಳಿರುವವೋ ಎಂಬವನ್ನು ಶಾಲಾ ಅಧ್ಯಾಪಕರೂ ವಿದ್ಯಾರ್ಥಿಗಳ ಹೆತ್ತವರೂ ತಿಳಕೊಂಡು ಮಕ್ಕಳ ಲಾಲನೆಪಾಲನೆಗಳಲ್ಲಿ ತಮ್ಮ ಮೇಲಿರುವಂಥಾ ಜವಾಬ್ದಾರಿಕೆಯನ್ನು ಪದೇಪದೇ ಲಕ್ಷ್ಯಕ್ಕೆ ತಂದುಕೊಳ್ಳುವದು ಅಗತ್ಯವಾಗಿದೆ.

"ಸಾಮಾನ್ಯ ಶಾಲೆಗಳಲ್ಲಿಯೂ ಖಾಸಗಿ ಶಾಲೆಗಳಲ್ಲಿಯೂ ಸೆಕೆಂಡರಿ ಶಾಲೆಗಳಲ್ಲಿಯೂ ಕೊಲೇಜುಗಳಲ್ಲಿಯೂ ಕಲಿಯುತ್ತಿರುವ ವಿದ್ಯಾರ್ಥಿಗಳಲ್ಲಿ ಸದ್ಯರೀತಿಗಳು ಕಡಮೆ, ಅಧಿಕಾರಕ್ಕೆ ಒಳಪಟ್ಟು ನಡೆಯುವ ಶೀಲವು ವಿರಳ, ಮರ್ಯಾದೆಯು ಮತ್ತು ಆದರೋಪಚಾರಗಳ ವರ್ತನೆಯು ಅಪರೂಪ, ಸಶಿಕ್ಷಣೆ (Discipline) ಇದೇನೆಂಬುದರ ತಿಳಿವೇ ಇಲ್ಲ. ಇದೆಲ್ಲವು ಏನನ್ನು ಸೂಚಿಸುವದ? ಇತರರ ಭಾವನೆಗಳನ್ನು ಹಕ್ಕು ಬಾಧ್ಯತೆಗಳನ್ನು ಮನ್ನಿಸುವುದು (democratio) ಪ್ರಜಾಸತ್ತಾತ್ಮಕ ಅಧಿಕಾರ ವರ್ತನೆಯ ಪ್ರಧಮ ಸೋಪಾನವಾಗಿದೆ ಎಂಬ ತತ್ವ ಬೋಧೆಯು ಶಾಲಾ ಹುಡುಗ, ಹುಡುಗಿಯರಲ್ಲಿರದೆಂಬುದನ್ನು ಈ ಕುಂದುಕಗಳಲ್ಲವು ಸೂಚಿಸುವವು. ಶಾಲಾ ಅಧ್ಯಾಪಕರಿಗೆ ಕೊಡಬೇಕಾದಂಥಾ ಮನ್ನಣೆಯನ್ನು ಮರ್ಯಾದೆ ಹೀನವಾಗಿ ಯಾವನೊಬ್ಬ ವಿದ್ಯಾರ್ಥಿಯು ಕೊಡನೆಂದರೆ ಈತನು ಪ್ರಜಾಧರ್ಮಸೂತ್ರಗಳೇನೆಂಬುದನ್ನು ಸರಿಯಾಗಿ ಅರಿತುಕೊಳ್ಳಲಾರದ ತುಂಟನೆಂತ ಸ್ಪಷ್ಟವಾಗುವದು. ಪರರಿಗೆ ಹಿತಕರವಾದ ಕೆಲವು ರೀತಿಗಳಲ್ಲಿ ನಡಕೊಳ್ಳುವುದು ತಮ್ಮ ಹಂಗಲ್ಲವೆಂತ ತಿಳಿದು ಪರರು ತಮ್ಮನ್ನು ಘನಾನೆ ಭಾವನೆಗಳಿಂದ ಕಾಣಬೇಕೆನ್ನುವವರು ತಪ್ಪಿತಸ್ಥರಾಗಿರುವರು. ಈಗಿನ ಪೀಳಿಗೆಯವರಲ್ಲಿ ಸುಶಿಕ್ಷಣೆಯು (discipline) ಇದೇ ಅಪರೂಪವಾಗಿದೆ.

ವಿದ್ಯಾರ್ಥಿವರ್ಗದಲ್ಲಿರುವ ಕುಂದುಕಗಳನ್ನು ಈ ರೀತಿ ತೋರಿಸಿಕೊಟ್ಟು ಇವುಗಳ ಕಾರಣವನ್ನು ಸಹ ಟಾಫ್ಟರವರು ತಿಳಿಯ ಹೇಳಿರುತ್ತಾರೆ. ಸುಖಭೋಗಾಪೇಕ್ಷೆಗಳ ಈ ದಿನಗಳಲ್ಲಿ ಹೆತ್ತವರು ಮಕ್ಕಳಲಾಲನೆ ಪಾಲನೆಯ ಮತ್ತು ಶಿಕ್ಷಾ ಮಾರ್ಗಗಳಲ್ಲಿ ಅವರನ್ನು ಆಪೋಷಿಸಿ ತಿದ್ದುವ ಭಾರವನ್ನು ಇತರರಿಗೆ ವಹಿಸಿಕೊಡುವರು. ಹೆತ್ತವರನ್ನೂ, ಶಾಲಾ ಅಧ್ಯಾಪಕರನ್ನೂ ಮನ್ನಿಸಿ ಮಕ್ಕಳು ನಡೆಯುವಂತೆ ಮಾಡಲು ಬೇಕಾದ ಶೀಲವು ತಾಯಿತಂದೆಗಳಲ್ಲಿರದು. ಆದ್ದರಿಂದ ಶಾಲಾ ಕೊಲೇಜುಗಳಲ್ಲಿ ದೊರೆಯುವ ಶಿಕ್ಷೆರಕ್ಷೆಗಳ ಪ್ರಯೋಜನವನ್ನು ಇವರು ಪಡಕೊಳ್ಳಲಾರದೆ ಮುಂದಿನ ಜೀವಿತಕ್ಕೆ ಅಗತ್ಯವುಳ್ಳ ಸಹಿಷ್ಣುತೆ ಮೊದಲಾದ ಗುಣಶೂನ್ಯರಾಗುವರು. ಅಮೇರಿಕದಲ್ಲಿ ಸುಖಭೋಗಾಪೇಕ್ಷೆಗಳಿಂದ ಹೆತ್ತವರು ಮಕ್ಕಳನ್ನು ದುರ್ಲಕ್ಷ್ಯ ಭಾವದಿಂದ ಕಾಣುವರಾದರೆ ಇಲ್ಲಿ ಜೀವನದ ಮೇಲಾಟವು ಅತಿರೇಕವಾಗಿ ಕಾಡುಗಳಲ್ಲಿ ಗಿಡಗಳು ಬೆಳಿಯುವೋಪಾದಿಯಲ್ಲಿ ಮನೆಗಳಲ್ಲಿ ಮಕ್ಕಳು ದೊಡ್ಡವರಾಗುವರು. ಆದ್ದರಿಂದ ಟಾಫ್ಟರವರು ತೋರಿಸಿಕೊಟ್ಟಿರುವ ಗುಣದೋಷಗಳು ಇಲ್ಲಿಯೂ ಸಹ ಇಲ್ಲದೆ ಇರುವವೋ?

ಹಳ್ಳಿಯ ಬೆಂಚ್ ಕೋರ್ಟುಗಳೂ ಆರೋಗಣೆಯೂ

(ಕಳೆದ ಸಂಚಿಕೆಯಿಂದ ಮುಂದರಿಸಿದುದು)

ಫಾದರ್ ಕೊಯಿಲೊರವರ ಈ ಅರ್ಥಗರ್ಭಿತವಾದ ಮಾತುಗಳನ್ನು ಅಕ್ಷರಲೋಪವಿಲ್ಲದೆ ಒಪ್ಪಬಹುದು. ಸರಕಾರದ ತೀರ್ವೆ ಸಂಗ್ರಹದ ಕೆಲಸವನ್ನು ಈಗಿನ ಪಟೇಲನೇ ಮಾಡುತ್ತಿರಲಿ. ಅವನು ಯೋಗ್ಯನಾಗಿಯೂ ಜನಪ್ರೀತನಾಗಿಯೂ ಪರಾಪೇಕ್ಷೆಯಿಲ್ಲದವನಾಗಿಯೂ ಇದ್ದರೆ ಅಂಥ ಪಟೇಲನನ್ನು ಗ್ರಾಮಕೋರ್ಟಿನ ಅಧ್ಯಕ್ಷನಾಗಿರಿಸಲೂ ಬಹುದು. ಆದರೆ ಈ 'ಕುಟುಂಬದ ಹಕ್ಕು' ಎಂದು ಆಧರಿಸಿ ಅವನು ಜನರಲ್ಲಿ ನ್ಯಾಯ ಪರಿಪಾಲನೆಯ ಕೆಲಸವನ್ನು ಹೊತ್ತರೆ, ಬೇಳಿಗೆ ಯಜಮಾನತನವನ್ನು ಕೊಟ್ಟಂತಾಗುವುದು. ಇದಕ್ಕೆ ಸಾದೃಶ್ಯವಾಗಿ ಒಂದು ಕಟ್ಟು ಕಥೆಯು ನಮಗೆ ನೆನಪಿಗೆ ಬರುತ್ತದೆ. ಒಬ್ಬ ಅರಸನು ತಾನೂ ತನ್ನ ದಾದಿಯ ಮಗನೂ ಒಂದೇ ಸ್ತನಪಾನ ಮಾಡಿದ ನೆನಪಿಗಾಗಿ ಅವನಿಗೆ ಊರ ಕೊತ್ತವಾಲನ ಕೆಲಸ ಕೊಟ್ಟನಂತೆ. ದೇಶದಲ್ಲಿ ಅವನ ಅವಿಚಾರದಿಂದ ಅಶಾಂತತೆಯೂ ರಾಜನಲ್ಲಿ ಅವಿಶ್ವಾಸವೂ ತಲೆದೋರಿದುವು. ಆಗ ರಾಜನ ಕಟ್ಟಾಜ್ಞೆಗೆ ಹೆದರಿ ಯಾರೂ ಅವನಿಗೆ ವಿವೇಕ ಹೇಳಲಾರದೆ ಹೋದರು. ಈ ಸಮಯದಲ್ಲಿ ಆ ಸ್ಥಾನದ ವಿಕಟ ಕವಿಯು ಒಂದು ದಿನ ಸಭೆಗೆ ಒಂದು ಕೈಜೋಡಿಸಿ ತನ್ನಂತೆ ಏಕ ಸ್ತನಪಾನ ಮಾಡಿದವನೊಬ್ಬನಿಗೆ ಒಂದು ದೊಡ್ಡ ಹುದ್ದೆಯನ್ನು ಕೊಡಬೇಕಾಗಿ ಬಹುತರವಾಗಿ ಬೇಡಿದನು. ಅರಸನು ಅಂದು ವಿಕಟ ಕವಿಯ ಹಾಸ್ಯದ ನುಡಿಗಳಿಂದ ತುಂಬಾ ಸಂತೋಷಚಿತ್ತನಾಗಿದ್ದು ಅವನ ವಿನಂತಿಯನ್ನು ಮನ್ನಿಸುವಂತೆ ಬಾಷೆಯಿತ್ತು ಆ ಮನುಷ್ಯನನ್ನು ಸಭೆಗೆ ಕರದು ತರುವಂತೆ ವಿಕಟ ಕವಿಗೆ ಆಜ್ಞಾಪಿಸಿದನು. ಅರಸನ ಒಪ್ಪಿಗೆಯಿಂದ ಒಂದು ಪಲ್ಲಕಿಯನ್ನು ಮನೆಗೆ ಸಾಗಿಸಿದನು. ವಿಕಟನ ನೆಂಟರಿಷ್ಟರು ಯಾರಿರುವರೆಂದು ನೋಡಲಿಕ್ಕೆ ಸಭೆಯವರೆಲ್ಲ ಕುತೂಹಲಚಿತ್ತರಾಗಿದ್ದರು. ಪಲ್ಲಕಿಯ ಪರದೆಗಳನ್ನು ಬಿಚ್ಚಿದೊಡನೆ "ಓಯಿಂ! ಓಯಿಂ" ಎಂದು ಕೂಗುತ್ತ ಒಂದು ಎಮ್ಮೆ ಕರುವು ಇಳಿದು ಬಂತು. ಆ ಸ್ಥಾನದಲ್ಲೆಲ್ಲಾ ನಗು ತುಂಬಿಹೋಯಿತು. ರಾಜನು ಸಿಟ್ಟೆದ್ದು 'ಇದೇನು! ಆಸ್ಥಾನದ ಗೌರವವನ್ನು ತಗ್ಗಿಸಿದ ನಿನಗೆ ಜೀವಾಂತ್ಯ ಶಿಕ್ಷೆಯನ್ನು ಕೊಡಬೇಕಲ್ಲ!" ಎಂದು ಬಿರು ನುಡಿಯಿಂದ ನುಡಿಯಲು, "ಮಹಾ ಸ್ವಾಮಿ! ಈ ಎಮ್ಮೆಯ ಕರುವೂ ನಾನೂ ಒಂದೇ ಎಮ್ಮೆಯ ಹಾಲನ್ನು ಕುಡಿದಿರುವುದರಿಂದ ಅದು ನನಗೆ ತಮ್ಮನಾಗಬೇಕು" ಎಂದನು. ಆಗ ಅರಸನು ಇವನ ಮಾತಿನ ಗೂಢಾರ್ಥವನ್ನು ಬಿಚ್ಚಿಸಿ ತಿಳಿದು ತನ್ನ ಅವಿಚಾರಕ್ಕಾಗಿ ಸುಮ್ಮನಾದನು." ಕುಟುಂಬದ ಹಕ್ಕು ಎಂಬದು ಹೀಗೆಯೇ ಎಂತ ಭಾವಿಸಬೇಕು. ಇದರಿಂದ ತಿಳಿದೂ ತಿಳಿಯದೇ ಗ್ರಾಮಗಳಲ್ಲಿ ಎಷ್ಟು ಅಸಮಾಧಾನವೂ ಅಶಾಂತತೆಯೂ ಉಂಟಾಗುತ್ತವೆಂದೂ ಜನರಲ್ಲಿ ಹೊಕ್ಕು ಬಳಿಕೆಯಿದ್ದ ಫಾದರ್ ಕೊಯಿಲೊರಂಥ ಪುರುಷರೆ ಬಲ್ಲರು. ಪ್ರತಿ ಗ್ರಾಮದಲ್ಲಿಯೂ ಎರಡು ಮೂರು ತಂಡಗಳು, ಎಲ್ಲಿ ನೋಡಿದರೂ ದುರ್ವ್ಯಾಜ್ಯ, ಎಲ್ಲಿ ನೋಡಿದರೂ ಕಲಹ; ಕೆಲವು ಕಡೆಗಳಲಿ ಪಟೇಲರೂ ಶ್ಯಾನುಭಾಗರೂ ಒಂದು ಪಕ್ಷ, ಒಂದೆರಡು ವರ್ಗದಾರರು ಇನ್ನೊಂದು ಪಕ್ಷ, ಇನ್ನೂ ಕೆಲವು ಪಟೇಲರು ಒಂದು ಕಡೆ, ಶಾನುಭಾಗರು ಇನ್ನೊಂದು ಕಡೆ, ಹೀಗಾಗಲಿಕ್ಕೆ ಅನೇಕ ಸಲ ಪಟೇಲರ ಅಯೋಗ್ಯತೆಯೇ ಕಾರಣವೆಂಬುದು ನಿರ್ವಿವಾದ. ಆದರೆ ನಿಜವಾಗಿಯೂ ಯೋಗ್ಯರೆನ್ನಿಸುವ ಹಲವು ಪಟೇಲರು ಇದ್ದಾರೆ. ಅಂಥವರು ಇದ್ದಲ್ಲಿ ಎಷ್ಟು ತಂಡಗಳಿದ್ದರೂ ಅವು [illegible] ಮೇಲೆತ್ತುವ [illegible]

ಇಲ್ಲ: ಕಳವು ಮಾಡಿದವರು ಅಂಥ ಪಟೇಲರ ಮನೆಯಹೊಸ್ತಿಲಲ್ಲಿ ನಿಂತು ಪ್ರಮಾಣ ನುಡಿಯುವುದಕ್ಕೆ ಹಿಂಜರಿಯುವ ದೃಷ್ಟಾಂತಗಳು ಈಗಲೂ ಇವೆ. ಎಷ್ಟೋ ಚಿಲ್ಲರೆ ವಿವಾದಗಳು ವ್ಯಾಜ್ಯಗಳು ರುಸುಂ ಇಲ್ಲದೆ ಅವರ ಮೊಗಸಾಲೆಯಲ್ಲಿ ನಿರಾಕ್ಷೇಪವಾಗಿ ತೀರ್ಮಾನವಾಗುತ್ತಿವೆ. ಆದರೆ ಇಂತಹ ಪಟೇಲರು ಈಚೀಚೆಗೆ ವಿರಳರಾಗುತ್ತ ಬಂದಿರುವರು. ಇದಕ್ಕೆ ಈ ಕುಟುಂಬದ ಹಕ್ಕೇ ಕಾರಣ. ಸಾರಾಸಾರ ವಿಚಾರವರಿಯದ ಕುಂಠರನ್ನು ಪಂಚಾಯತರನ್ನಾಗಿ ಏರ್ಪಡಿಸುವುದಕ್ಕಿಂತ ಈ ಪರಸ್ಪರ ಸಹಾಯ ಸಂಘಗಳಲ್ಲಿ ಪಂಚಾಯತರಾಗಿದ್ದು ಜನರ ವಿಶ್ವಾಸಕ್ಕೆ ಪಾತ್ರರಾಗಿದ್ದವರನ್ನು ಗ್ರಾಮಕೋರ್ಟಿನ ಕಾರ್ಯನಿರ್ವಾಹಕ್ಕೆ ನೇಮಿಸಬೇಕಾಗಿ ಫಾದರ್ ಕೊಯಿಲೊರವರು ಹೇಳುವ ಮಾತು ನಿರಾಕ್ಷೇಪಕರವಾಗಿದೆ ಎಂದು ನಾವು ಅಭಿಪ್ರಾಯಪಡುತ್ತೇವೆ.

ಈಗಿನ ಗ್ರಾಮ ಮುನ್ಸೀಫ ಕೋರ್ಟಿನ ಅಧ್ಯಕ್ಷರ ವಿಷಯವಾಗಿ ಹೇಳಿದ ದೂಷಣೆ ಮಾತುಗಳು ಈ ಪರಸ್ಪರ ಸಹಾಯ ಸಂಘದ ಪಂಚಾಯತದಾರರಿಗೂ ಒಪ್ಪಲಿಕ್ಕಿಲ್ಲವೆ ಎಂದು ಯಾರೂ ಆಕ್ಷೇಪಿಸಿದರೆ ಅದಕ್ಕೂ ಫಾದರ್ ಕೊಯಿಲೊರವರು ಈ ರೀತಿಯಾಗಿ ಖಂಡಿಸುತ್ತಾರೆ:—"ಸಂಘದ ಪಂಚಾಯತರು ಮೆಂಬರರ ಬಹುಮತದಿಂದ ಆರಿಸಲ್ಪಟ್ಟಿದ್ದು ಒಂದು ವರ್ಷಕಾಲ ಮಾತ್ರವೇ ಆ ಅಧಿಕಾರ ಹೊಂದಿರುತ್ತಾರೆ. ಅವರಲ್ಲಿ ನಿಜವಾದ ಯೋಗ್ಯತೆ ಇದ್ದರೆನೇ ಅವರು ಪುನಃ ಆರಿಸಲ್ಪಡುತ್ತಾರೆ, ಈ ಅಧಿಕಾರ ಅವರ ಕುಟುಂಬದ ಹಕ್ಕಾಗಿ ಅವರಿಗೆ ಬರಲಿಲ್ಲ, ಹಾಗಾದರೆ ಜನರ ಚುನಾವಣೆಯಿಂದ ಮುನ್ಸಿಪಲ್ ಕೌನ್ಸಿಲು ಅಥವಾ ತಾಲೂಕು ಬೋರ್ಡುಗಳಲ್ಲಿ ಮೆಂಬರರಾದ ಎಲ್ಲಾ ಗೃಹಸ್ಥರು ಅವರವರ ಕೆಲಸಕ್ಕೆ ಯೋಗ್ಯರಾದವರೇನೊ ಎಂದು ವಿಚಾರ ಬರುವುದು. ಅದಕ್ಕೂ ಫಾದರ್ ಕೊಯಿಲೊರವರು ಹೀಗೆಂದು ಹೇಳುತ್ತಾರೆ:— ಕೆಲವು ಸಲ ತಮ್ಮ ದ್ರವ್ಯಾನುಕೂಲತೆಯ ಬಲದಿಂದಲೂ, ಅಥವಾ ಇತರರ ಸಹಾಯದಿಂದಲೂ ಅಯೋಗ್ಯರಾದವರು ಲೋಕಲ್ ಬೋರ್ಡ್ ಮತ್ತು ಮುನ್ಸಿಪಲ್ ಕೌನ್ಸಿಲುಗಳಲ್ಲಿ ಸೇರಿದಂತೆ ಇದರಲ್ಲಿ ಸೇರಲಿಕ್ಕೆ ಆಸ್ಪದವಿಲ್ಲ. ಪರಸ್ಪರ ಸಹಾಯ ಸಂಘದ ಪಂಚಾಯತ ಮೆಂಬರುಗಳಿಗೆ ಸಂಘದ ಲೇವಾದೇವಿಯ ಜವಾಬ್ದಾರಿಯು ಇರುವುದರಿಂದಲೂ ಪ್ರತಿಯೊಬ್ಬ ಮೆಂಬರನೂ ಪ್ರತ್ಯಪ್ರತ್ಯೇಕವಾಗಿಯೂ ಒಟ್ಟಾಗಿಯೂ ಸಂಘದ ಸಾಲಮೂಲಗಳಿಗೆ ಜವಾಬ್ದಾರರಾಗಿರುವುದರಿಂದಲೂ, ಪಂಚಾಯತರ ಅಶ್ರದ್ಧೆ, ವಿಶ್ವಾಸಘಾತುಕದ ಫಲಕ್ಕೆ ಮೆಂಬರರೆಲ್ಲ ಸಹಭಾಗಿಯಾಗುವುದರಿಂದಲೂ ಅಯೋಗ್ಯನಾದ ಪಂಚಾಯತ ಮೆಂಬರನನ್ನು ಆರಿಸುವುದಕ್ಕೆ ಯಾರೂ ಮುಂದರಿಸಲಾರರು. ಇದಲ್ಲದೆ ಒಬ್ಬ ಗ್ರಾಮ ಉದ್ಯೋಗಸ್ಥನ ಮೇಲೆ ಆರೋಪಿಸಿದ ತಕ್ಷೀರು ರುಜುವಾದ ವಿನಹಾ ಅವನನ್ನು ಸರಕಾರದವರು ಕಿತ್ತುಹಾಕಲಾರರು, ಆದರೆ ಪಂಚಾಯತದಾರನು ಅಶ್ರದ್ಧೆಯಿಂದ ತನ್ನ ಮೇಲಣ ನಂಬಿಗೆ ಕೆಡಿಸಿಕೊಂಡರೆ ಅವನನ್ನು ಪಂಚಾಯತರ ಕೂಟದಿಂದ ತಳ್ಳಿಹಾಕುವುದರಿಂದ ಅವನ ಮೆಂಬರಿಕೆಯನ್ನು ರದ್ದುಮಾಡಲು ಸಾಧ್ಯವಿದೆ. ಆದ್ದರಿಂದ ಬಹುಮತದಿಂದ ಆರಿಸಲ್ಪಟ್ಟ ಈ ಪಂಚಾಯತನ ಮತ್ತು ಕುಟುಂಬದ ಹಕ್ಕಿನಿಂದ ಕೆಲಸ ನಡಿಸುವ ಪಟೇಲನ ನ್ಯಾಯತೀರ್ಮಾನಕ್ಕೆ ಇಷ್ಟೊಂದು ಪ್ರಭೇದವಿದೆ ಎಂದು ಫಾದರ್ ಕೊಯಿಲೊರವರ ಅಭಿಪ್ರಾಯ. ಆದರೆ ಬಹುಮತದಿಂದ ಆರಿಸಲ್ಪಟ್ಟವನು ಎಂಬುದರಿಂದಲೇ ಅವನು ಸದಾಸರ್ವದಾ ಏಕಪ್ರಕಾರ ನಿಶ್ಚಲಬುದ್ಧಿಯಿಂದಿರಬಹುದು ಎಂದು ಹೇಳುವುದು ದೊಡ್ಡ ಮಾತಾಯಿತು. ಎಷ್ಟೋ ದೇವಾಲಯಗಳಲ್ಲಿ ಬಹುಮತದಿಂದ ಆರಿಸಲ್ಪಟ್ಟ ಆಡಳಿತೆದಾರರು ನಿರ್ವಂಚನೆಯಿಂದ ಕೆಲಸಮಾಡಿದ್ದಾರೆಂದು ದಿಟ್ಟತನದಿಂದ ಹೇಳಬಹುದೇ? ಹಾಗೆ ಮೋಸಮಾಡಿದವರು ಹಲವು ವರ್ಷಗಳ ಕಾಲ ಜನಜನಿತವಾಗಿಯೂ ದೇವಸ್ಥಾನಗಳ ಭಂಡಾರವನ್ನು ದುರ್ವಿನಿಯೋಗದಿಂದ ಬರಿದಾಗಿ ಮಾಡುತ್ತಿರುವಾಗ, ನೋಡಿಯೂ ಸುಮ್ಮನೆ ಇದ್ದು, ಅಥವಾ ಮನೆ ತಿಟ್ಟೆಯ ಮೇಲೆ ಕುಳಿತು ಗುಣಗುಟ್ಟುತ್ತಿದ್ದು, ಅಂಥವರನ್ನು ದಂಡಿಸುವುದಕ್ಕಾಗಲೀ ಸರಿಯಾದ ದಾರಿಗೆ ತರುವುದಕ್ಕಾಗಲೀ ಮುಂದರಿಸುವ ಜನರೆಷ್ಟು ಮಂದಿ ಇರುವರು? ಜನೋಪಕಾರಕ್ಕಾಗಿ ಹಲವು ಸಂಸ್ಥೆಗಳನ್ನು ಏರ್ಪಡಿಸಿ ಜನರಿಂದ ಚಂದಾ ಎತ್ತಿ, ಅದರ ವಿನಿಯೋಗ ಸರಿಯಾಗಿ ನಡೆಸದೆ ಇದ್ದಲ್ಲಿ ಅಂಥವರನ್ನು ಬಲತ್ಕಾರಪಡಿಸಿ ಆದಾಯವೆಚ್ಚಗಳ ಪಟ್ಟಿಯನ್ನು ಕೊಡಬೇಕೆಂದು ಕೇಳುವ ಮಹಾತ್ಮರು ಎಷ್ಟು ಜನರಿರುವರು? ರಿಜಿಸ್ಟರಾಗಿ ಸರಕಾರಿ ಮೇಲ್ವಿಚಾರವು ತಕ್ಕಮಟ್ಟಿಗೆ ಇರುವ ಬೇಂಕುಗಳ ಹಣವನ್ನು ಇಷ್ಟಬಂದವರಿಗೆ ಸಾಲವಾಗಿತ್ತು ದೇಣೆದಾರರಿಗೆ ಗೋಪಿನಾಮವಿತ್ತ ಡಿರೆಕ್ಟರುಗಳನ್ನು ವಿಚಾರ ಮಾಡಿದ ಮಹಾ ಪುರುಷರೆಷ್ಟು ಮಂದಿ ಇದ್ದಾರೆ? ಇಂಥ ಕೆಲವು ಸಂದರ್ಭಗಳಲ್ಲಿ ಸರಕಾರದವರೇ ಈ ಮೋಸಗಾರರನ್ನು ನಿರ್ಬಂಧಪಡಿಸದಿದ್ದರೆ ಹಲವು ಜನರ ದ್ರವ್ಯವು ದಿಕ್ಕಾಪಾಲಾಗಿ, ಅವರು ದಾರಿದ್ರ್ಯ ದುಃಖಕ್ಕೆ ಒಳಗಾಗುತ್ತಲಿದ್ದರು. ಇದಕ್ಕೆಲ್ಲಾ ಜನರಲ್ಲಿ ನಿಬಿಡವಾಗಿ ತುಂಬಿರುವ ಅಶ್ರದ್ಧೆಯೇ ಮೂಲಕಾರಣ. ಯಾವುದೊಂದು ಸಂಸ್ಥೆಯನ್ನು ನಡೆಯಿಸುವುದಕ್ಕೆ ಜನರನ್ನು ಆರಿಸಿದ ನಂತರ ಅವರು ಸರಿಯಾಗಿ ತಮ್ಮ ಜವಾಬ್ದಾರಿಗಳನ್ನು ವಹಿಸಿರುವರೋ ಅವರಲ್ಲಿ ವಂಚನೆಯ ಕುರುಹುಗಳೇನಾದರೂ ಕಂಡುಬರುತ್ತಿವೆಯೋ ಎಂದು ನೋಡಿಕೊಳ್ಳುವಷ್ಟು ಜನರಲ್ಲಿ ಶ್ರದ್ಧೆ ಇಲ್ಲದಿದ್ದರೆ ಯಾವ ಸಂಸ್ಥೆಯೂ ಸರಿಯಾಗಿ ಚಿರಕಾಲ ನಡೆಯಲಾರದು. ಜನರಲ್ಲಿ ಅದಕ್ಕೆ ಆಗತ್ಯವಾದ ನಿದಾರ್ಕ್ಷಿಣ್ಯವೂ ನಿರ್ಭೀತತ್ವವೂ ಇರಬೇಕು. ಪ್ರತಿಯೊಬ್ಬನು ತನ್ನ ಹಕ್ಕು ಬಾಧ್ಯತೆ ಮಾತ್ರವಲ್ಲ, ಅದರೊಂದಿಗೆ ಜವಾಬ್ದಾರಿಗಳನ್ನೂ ಚೆನ್ನಾಗಿ ತಿಳಿದಿರಬೇಕು. ಈ ಬಗೆಯ ಜ್ಞಾನವು ಹಳ್ಳಿಯಲ್ಲಿಯೂ ಬಹಳ ಮಟ್ಟಿಗೆ ಪಟ್ಟಣಗಳಲ್ಲಿಯೂ ಕಡಿಮೆ. ಯಾವುದೊಂದು ಆಡಳಿತೆಯನ್ನು ಕೈಕೊಳ್ಳಲಿಕ್ಕೆ ಪ್ರತೀಸ್ಥಳದಲ್ಲಿಯೂ ದ್ರವ್ಯದ ಬಲ, ಗೌರವದ ಬಲ ಇರುವಂಥವರನ್ನೇ ಮೊತ್ತಮೊದಲು ಆರಿಸುವರು. ಉಳಿಕೆಯವರು ಇವರಿಗಿಂತಲೂ ಕಡಿಮೆ ತರಗತಿಯವರಾಗಿದ್ದ ಕಾಲದಲ್ಲಿ ಪ್ರತಿಯೊಬ್ಬನೂ ತಾನು 'ಆ ಬಲಿಷ್ಟರಾದವರನ್ನು ಕೆಣಕಿಸಲೇಕೆ' ಎಂದು ಹಿಂಜರಿದರೆ ಈ ಆಡಳಿತೆದಾರರಿಗೆ ನಿರಂಕುಶ ಪ್ರಭುತ್ವವೇ ದೊರೆಯಿತು. ಆಗ ಅವರು ದಾರಿ ತಪ್ಪುವುದು ಏನಾಶ್ಚರ್ಯ? ಪರಸ್ಪರ ಸಹಾಯ ಸಂಘಗಳಲ್ಲಿಯೂ ಪಂಚಾಯತರು ಹೀಗೆ ಅಲ್ಪಸ್ವಲ್ಪ ದಾರಿ ತಪ್ಪುವುದು ನಮ್ಮ ತಿಳಿವಳಿಕೆಗೆ ಬಂದಿದೆ. ಅವರು ಈ ವರೆಗೆ ಹಣವನ್ನು ದುರ್ವಿನಿಯೋಗಿಸುವಷ್ಟಕ್ಕೆ ಮುಂದರಿಸಲಿಲ್ಲ. ಆದರೆ ಪಂಚಾಯತರಿಗೆ ಹಣ ಸಾಲ ಬೇಕಾಗಿದ್ದರೆ ತಮಗೆ ಇಷ್ಟವಿರುವವರನ್ನು ಮೆಂಬರರನ್ನಾಗಿ ಮಾಡಿ, ಕೆಲವು ಸಲ ಮೆಂಬರಿಕೆಯ ಅರ್ಜಿಯ ಜೊತೆಯಲ್ಲಿ ಸಾಲದ ಅರ್ಜಿಯನ್ನು ಕೊಡಿಸಿ ತಾವೇ ಅದನ್ನು ಮಂಜೂರು ಮಾಡಿ ಹೆಸರಿಗೆ ಮಾತ್ರವೇ ಅವರನ್ನು ಲೇಣೆದಾರರಾಗಿ ಮಾಡಿಸಿ, ನಿಜವಾಗಿಯೂ ಆ ಹಣವನ್ನು ತಾವೇ ಪಡಕೊಂಡ ಒಂದೆರಡು ದೃಷ್ಟಾಂತಗಳು ನಮ್ಮ ತಿಳಿವಳಿಕೆಗೆ ಬಂದಿವೆ. ಈ ರೀತಿಯಾಗದೆ ಯಾವ ಪರೋಪಕಾರವನ್ನು ಉದ್ದೇಶಿಸಿ ಈ ಸಂಘಗಳು ಜನ್ಮವೆತ್ತಿವೆಯೋ ಆ ಸದುದ್ದೇಶವು ಸಂಪೂರ್ಣವಾಗಿ ನೆರವೇರುವಂತೆ ಪಂಚಾಯತರೂ ಅವರು ದಾರಿ ತಪ್ಪದ ಹಾಗೆ ಮೆಂಬರುಗಳೂ ಪ್ರಾಮಾಣಿಕತೆಯಿಂದ ಕೆಲಸಮಾಡುತ್ತ ಬಂದು ಆ ಗ್ರಾಮದಲ್ಲಿ ಈ ಪ್ರಾಮಾಣಿಕತನವೂ ಸ್ವಾರ್ಥತ್ಯಾಗವೂ ನಿದಾರ್ಕ್ಷಿಣ್ಯವೂ ನೆಲೆಗೊಂಡರೆ ಅಂದ ಗ್ರಾಮದ ಸಂಘದ ಪಂಚಾಯತರು ನೀತಿಯನ್ನು ಕಾಪಾಡಿ ಜನರನ್ನು ಉದ್ಧರಿಸುವುದು ನಿಸ್ಸಂದೇಹವಾಗಿದೆ. ಅಂಥ ಜನರನ್ನು ಗ್ರಾಮದ ಪಂಚಾಯತ ಕೋರ್ಟಿಗೆ ನೇಮಕ ಮಾಡಿದ್ದಲ್ಲಿ ದೇಶದಲ್ಲಿ ನಿಜವಾದ ಮತ್ತು ಸ್ಥಿರವಾದ ಶಾಂತತೆಯೂ ಸಮೃದ್ಧಿಯೂ ನೆಲೆಗೊಳ್ಳುವುದು.

ಈಗ ಗ್ರಾಮದ ಆರೋಗಣೆಯ ವಿಚಾರದ ಪರವಾಗಿ ಫಾದರ್ ಕೊಯಿಲೊರವರು ಏನು ಹೇಳುತ್ತಾರೆ ನೋಡೋಣ. ಈಚೀಚೆಗೆ ದೊಡ್ಡ ಮುನ್ಸಿಪಾಲಿಟಿಗಳಲ್ಲಿಯೂ ದೊಡ್ಡ ಊರುಗಳಲ್ಲಿಯೂ ಆರೋಗ್ಯ ವಿಚಾರವನ್ನು ತಕ್ಕಷ್ಟು ಮಾಡುತ್ತಲೇ ಇರುವುದಾದರೂ ಹಳ್ಳಿಪಳ್ಳಿಗಳಲ್ಲಿ ಈ ವಿಷಯವಾಗಿ ಏನೂ ಕೆಲಸ ನಡೆಯಲಿಲ್ಲವೆಂದು ಅವರು ಖೇದಗೊಳ್ಳುತ್ತಾರೆ. ಅತೀ ಅಲ್ಪವಾದ ಆರೋಗ್ಯಸೂತ್ರಗಳನ್ನೂ ಅಲಕ್ಷಿಸಿ ಹಲವು ಸಲ ಹಳ್ಳಿಯ ಜನರು ಅಸಡ್ಡೆ ಮಾಡುತ್ತಾ ಇರುವುದು ಅವರಿಗೆ ತುಂಬಾ ದುಃಖಕರವಾಗಿದೆ. ಈ ಕಡೆಗೆ ಸ್ವಲ್ಪವಾದರೂ ದೃಷ್ಟಿ ಇಟ್ಟಿದ್ದರೆ ಅನೇಕಾನೇಕ ಸಾಂಕ್ರಾಮಿಕ ರೋಗಗಳ ಹಾವಳಿಯನ್ನು ಅಣಗಿಸುವುದಲ್ಲದೆ ಸಾವಿರಾರು ಜನರಿಗೆ ಜೀವದಾನ ಕೊಟ್ಟಂತಾಗುತ್ತಿತ್ತು ಎಂದು ಅವರ ಅಭಿಪ್ರಾಯ. ಪಾನಾರ್ಥವಾಗಿ ಹಲವರು ಹಳ್ಳಿಪಳ್ಳಿಗಳಲ್ಲಿ ಈಗಲೂ ಉಪಯೋಗಿಸುವ ಕೆರೆಬಾವಿಗಳ ನೀರೇ ಜನರ ಈ ಅಶ್ರದ್ಧೆಗೆ ದೃಷ್ಟಾಂತವಾಗಿ ಅವರು ತೋರಿಸುತ್ತಾರೆ. ಒಂದೆರಡು ಕಡೆಗಳಲ್ಲಿ ಆ ನೀರನ್ನು ಬಿಸಿಮಾಡಿ ಒಂದಿಷ್ಟು ಉಪ್ಪು ಬೆರಸಿದರೆ "ಹುಳಿಸಾರು" ಎಂದು ಹೇಳುವಷ್ಟರ ರೀತಿಯಲ್ಲಿ ಅದರಲ್ಲಿ ಸಸ್ಯಪ್ರಾಣಿ ಸಂಬಂಧವಾದ ಕೊಳೆಯು ನಿಂತಿರುವುದು. ಇದಲ್ಲದೆ ಹಳ್ಳಿಗಳಲ್ಲಿ ಅನೇಕಾನೇಕ ಜನರ ನಿವಾಸದ ಮನೆ, ಅದರ ಸುತ್ತಮುತ್ತಲಿನ ಸ್ಥಳ, ಇವುಗಳಲ್ಲಿ ಅಲ್ಲಲ್ಲಿ ಕೊಳೆತಿಪ್ಪೆ ರಾಶಿ ಹಾಕುವುದನ್ನು ನೋಡಿದಾಗ ಮೃತ್ಯುದೇವತೆಯು ಈ ಮೂಢಜನರ ಅಶ್ರದ್ಧೆಯನ್ನು ಬರೆ ಅರೆಗಣ್ಣಿನಿಂದ ನೋಡಿರುವಳೆಂದು ಭಾವಿಸಬೇಕಾಗುತ್ತದೆ.

ಮುಂದರಿಯುವುದು.

ಪತ್ರವ್ಯವಹಾರ.

ಕೊಂಗ್ರೆಸು ಸಭೆಯ ಚಳವಳವು ಇಲ್ಲಿ ಸಾಧ್ಯವೊ?

—:-o-:—

ಸ್ವಾಮಿ,

ಕೊಂಗ್ರೆಸು ಸಭೆ, ಅಥವಾ ರಾಷ್ಟ್ರೀಯ ಸಭೆಯ ಜಿಲ್ಲಾ ಶಾಖೆಯೊಂದನ್ನು ಸ್ಥಾಪಿಸುವ ಬಗ್ಗೆ ಮಂಗಳೂರಿಗೆ ರಾಜಮಹೇಂದ್ರಿಯ ಎನ್. ಸುಬ್ಬಾರಾಯರವರು ಬಂದು

ಇಲ್ಲಿಯ ಕೊಸ್ಮೊಪೊಲಿಟನ್ ಕ್ಲಬ್ಬಿನಲ್ಲಿ ಸಭೆ ಕೂಡಿಸಿ ಒಂದು ತಾತ್ಕಾಲಿಕ ಅಥವಾ ಪ್ರೊವಿಜನಲ್ ಕಮ್ಮಿಟಿಯನ್ನು ಏರ್ಪಡಿಸಿದರೆಂಬದಾಗಿ ನಿಮ್ಮ ಪತ್ರದ ಕಳೆದ ಸಂಚಿಕೆಯಲ್ಲಿ ಪ್ರಕಟವಾಗಿರುತ್ತದೆ. ಕೆಲವು ವರುಷಗಳ ಹಿಂದೆ ರಾ| ಸಿ. ವ್ಯಾ. ಚಿಂತಾಮಣಿಯೆಂಬವರು ಬಂದು ಆಗ್ಗೆ ಇದ್ದ ರೈಲ್ವೆ ಹೊಟೇಲಿನ ವಠಾರದಲ್ಲಿ ಸಭೆ ಕೂಡಿಸಿ ಒಂದು ಕಮ್ಮಿಟಿಯನ್ನು ಏರ್ಪಡಿಸಿ ಹೋಗಿದ್ದರು. ಆದ್ದರಿಂದ ಕೊಂಗ್ರೆಸು ಚಳವಳದ ಮಾತು ಇಲ್ಲಿ ಹೊಸತಲ್ಲ. ಈ ಸರ್ತಿ ಕೊಸ್ಮೊಪೊಲಿಟನ್ ಕ್ಲಬ್ಬು ಇದ್ದದ್ದರಿಂದ ಅನುಕೂಲವಾಯಿತು. ಸಾಯಂಕಾಲದಲ್ಲಿ ಹ್ಯಾಗೂ ಕೆಲವು ಮಂದಿ ಕ್ಲಬ್ಬಿಗೆ ಬಂದೇ ಬಿಡುತ್ತಾರೆ. ಯಾವ ಬಗ್ಗೆಯಾದರೂ ಸಭೆ ಕೂಡಿಸಲು ಅನುಕೂಲ. ಈ ಕ್ಲಬ್ಬು ಅಲ್ಲದಿದ್ದರೆ ಸಭೆ ಕೂಡುವದು ಹ್ಯಾಗೆ ಸಾಧ್ಯವಾಗಿರುತ್ತಿತ್ತೊ? ಏನೋ?

ಯಾವ ವಿಷಯಗಳನ್ನಾದರೂ ಮಂಗಳೂರಿನವರ ಮುಂದೆ ತಂದರೆ ಈ ವಿಷಯಗಳಲ್ಲಿ ನಮ್ಮೆಲ್ಲನರ ಮನಸ್ಸು ಹರಿಯುತ್ತದೆ, ಕೈ ಮಾತ್ರ ನಿಲುಕುವದಿಲ್ಲ. ಚೈತನ್ಯವಿಲ್ಲ. ಇದು ನಮ್ಮ ಯಥಾರ್ಥ ಸ್ಥಿತಿ. ಎಂಥಾ ಚಳವಳವೇ ಆಗಲಿ, ಯಾವ ಏರ್ಪಾಡೇ ಆಗಲಿ, ಹೌದೆಂಬ ಮಾತು ನಮ್ಮಿಂದ ಹೊರಡುವದು. ವಿನಹ ಅಲ್ಲವೆಂತ ಹೇಳಲಿಕ್ಕೆ ನಮಗೆ ಧೈರ್ಯವೂ ಇಲ್ಲ, ಸ್ಥೈರ್ಯವೂ ಇಲ್ಲ. ಈ ಚಳವಳ, ಈ ಏರ್ಪಾಡುಗಳು ಏನೆಂಬುದಾಗಿ ಆಲೋಚಿಸುವ ಎಗ್ಗೆ ಸಮಯವೂ ಇಲ್ಲ. ಹಾಗೆಂದ ಮೇಲೆ ಕೊಂಗ್ರೆಸು ಸಭೆಯ ಮಾತು ಇಲ್ಲಿ ನಿರರ್ಥಕವೇ ಸರಿ. ಪತ್ರಕರ್ತರೇ, ಮಂಗಳೂರಿನ ವಿಪರೀತ ಸಂಕಷ್ಟವನ್ನು ನಿಮಗೆ ನಾನು ತಿಳಿಸಬೇಕೆಂತಿಲ್ಲ. ಚಿಲ್ಲರೆ ವೃತ್ತಿಯವರ ಮಾತು ಹಾಗೆ ಇರಲಿ; ವಕೀಲರು, ಸಾವಕಾರರು, ಸರಕಾರದ ನೌಕರರು, ಪೆನ್ಶನು ಪಡೆದ ನೌಕರರು, ಇವರೆಲ್ಲರ ಪೇಚಾಟಗಳನ್ನು ನೋಡಿದರೆ ಮಾನವ ವರ್ಗವನ್ನು ದೇವರು ಯಾವ ಬಗ್ಗೆ ಉಂಟುಮಾಡಿ ಲೋಕದ ಸಂಕಷ್ಟದ ರಾಶಿಯನ್ನು ಯಾಕೆ ಹೆಚ್ಚಿಸುತ್ತಿರುವನೆಂಬುದನ್ನು ಊಹಿಸಲಿಕ್ಕೆ ಸಹ ಅಸಾಧ್ಯವಾಗುವದು. ವಕೀಲರು, ಜುನಿಯರ್ಸ್ ಮತ್ತು ಸೀನಿಯರ್ಸ್ ಎಂಬ ಕಿರಿಯ ಮತ್ತು ಹಿರಿಯರೆಂಬ ಎರಡು ವರ್ಗದವರು ಇರುತ್ತಾರೆ. ಹಿರಿಯರಲ್ಲಿ ಕೆಲವರು ವಿಶೇಷ ಹಣವನ್ನು ಕೂಡಹಾಕಿಕೊಂಡಿರುವರಲ್ಲದೆ ಪ್ರಾಯವು ಇನ್ನು 50, 60, 70 ಆದರೂ ಕೋರ್ಟುಗಳಿಗೆ ಹೋಗಿ ಕಕ್ಷಿಗಾರರ ತೃಪ್ತಿಗಾಗಿ ಲಕ್ಷ್ಮಿ ಆರಾಧನೆಯಲ್ಲಿಯೇ ಮಗ್ನರಾಗಿರುವರು. ಹೊಸ ಹೊಸ ಆಸ್ತಿಗಳನ್ನು ಕ್ರಯಕ್ಕೆ ಪಡಿಯುವದು, ನೋಟುಗಳ ಮೇಲೆ ಹಣ ಬಡ್ಡಿಗೆ ಕೊಡುವದು, ಆಭರಣಗಳನ್ನು ರಾಶಿರಾಶಿಯಾಗಿ ತಕ್ಕೊಳ್ಳುವದು, ಈ ಎಲ್ಲಾ ಪ್ರಯಾಸದ ಕೆಲಸಗಳು ಸರಿಯಾಗಿ ನಡೆಯಬೇಕಾದರೆ ಕಕ್ಷಿಗಾರರ ಕೂಡೆ ಒಪ್ಪಾಡುವುದು, ಇನ್ನೂ ವಿವರಿಸಲಸಾಧ್ಯವಾದ ಬಗೆಬಗೆಯ ಸಂಕಷ್ಟಗಳು ಇಂಥವರಿಗೆ ಇದ್ದೇ ಇರುವವು. ಇಂಥಾ ಪೇಚಾಟಗಳು ಇವರಿಗಿರುತ್ತಾ ತಮ್ಮ ವೃತ್ತಿಯನ್ನು ಬಿಟ್ಟು ಇತರ ಎಂಥಾ ಕಾರ್ಯವಾದರೂ ಇವರಿಗೆ ಸಾಧ್ಯವೋ? ಜೀವನದ ಖರ್ಚು ಮತ್ತು ಇತರ ಅಭ್ಯಾಸಗಳನ್ನು ಹೆಚ್ಚಿಸಿ ತಮ್ಮ ವೃತ್ತಿಯಲ್ಲಿ ಕಿರಿಯರಿಗೆ ಮೇಲು ಪಂಕ್ತಿಯನ್ನು ಹಾಕಿಕೊಟ್ಟಿರುವದರಿಂದ ಹಿರಿಯರ ರೀತಿಗಳನ್ನು ಅನುಸರಿಸುವ ಪೇಚಾಟದಿಂದ ವಕೀಲರ ಕಿರಿಯ ವರ್ಗಕ್ಕೆ ಸಹ ಸಮಯವೂ ಇಲ್ಲ, ಚೇತನವೂ ಇಲ್ಲವಾಗಿದೆ. ಪೆನ್ಶನುದಾರರ ಪೇಚಾಟವಾದರೋ ಬಹಳ ಯಥಾರ್ಥವಾದದ್ದಾಗಿದೆ. ಸಾಧ್ಯವಾದಷ್ಟು ಮಟ್ಟಿಗೆ 55 ವರುಷಗಳ ಪ್ರಾಯದನಂತರವೂ ಕೆಲಸದವಧಿಯನ್ನು ಹೆಚ್ಚಿಸಿ ಹ್ಯಾಗೂ ಆಫಿಸಿಯಲ್ ರಿಜಿಸ್ಟ್ರಿ ಪ್ರಕಾರ ಪ್ರಾಯ 60 ಆಗುವಾಗ ಪೆನ್ಶನು ಪಡೆಯುವರು. ಪೆನ್ಶನುಪಡದೊಡನೆ ಸಂಬಳ ಅರೆವಾಸಿಯಾದರೂ ಖರ್ಚು ಇದ್ದಂತೆಯೇ ಇರುವದರಿಂದ ಆಯಕ್ಕೂ ವ್ಯಯಕ್ಕೂ ಸರಿಬೀಳದೆ ಬಹಳವಾಗಿ ಪೇಚಾಡುವರು. ಇದೊಂದು ಪೇಚಾಟವಲ್ಲದೆ ಜರ್ಜರಿತವಾದ ತಮ್ಮ ಶರೀರದ ಆರೋಗ್ಯವನ್ನು ಕಾಪಾಡಿಕೊಳ್ಳುವದು ಇನ್ನೊಂದು ಬಹಳ ಪ್ರಯಾಸದ ಕೆಲಸ. ಶಿಕ್ಷಿತರ ಪಾಡು ಹೀಗಾದ ಮೇಲೆ ವರ್ತಕರು ವರ್ಗದಾರರು ಏನು ನಿರೀಕ್ಷಿಸಬಹುದು? ಇವರು ತಮ್ಮ ಶಿಕ್ಷಿತ ಮುಂದಾಳುಗಳನ್ನೇ ಬಹಳವಾಗಿ ಹಿಂಬಾಲಿಸುತ್ತಿರುವರು. ಈ ಎಲ್ಲಾ ಇಲ್ಲಿಯ ವಿದ್ಯಮಾನಗಳನ್ನು ಮನಸ್ಸಿಗೆ ತಂದುಕೊಂಡು ಯಾವ ಚಳವಳದ ಗೋಜಿಗೂ ಹೋಗದೆ ಸುಮ್ಮನಿರುವ ನಮ್ಮನ್ನು ಯಾರು ಬಂದು ಏನು ಮಾಡಿದರೂ ಕದಡಿಸಲಿಕ್ಕೆ ಸಾಧ್ಯವಿಲ್ಲ. ಆದದರಿಂದ ಕೊಂಗ್ರೆಸು ಸಭೆಯ ಚಳವಳವು ಇಲ್ಲಿ ಎಂದಿಗೂ ಸಾಧ್ಯವಲ್ಲ.

ಮಂಗಳೂರು ನಿವಾಸಿಕ.

ಹೊಸದುರ್ಗದ ಅಂಬಿಗರ ಗೋಳು.

ಸ್ವಾಮಿ,

ತಮ್ಮ ಹಿಂದಿನ ಸಂಚಿಕೆಯೊಂದರಲ್ಲಿ "ಸಹಾನುತಾಪಿಯು" ಮೀನು ಮಾರ್ಕೆಟ ಹೊರಗೆ ಮೀನು ಮಾರುವವರಿಂದ ತೆರಿಗೆ ವಸೂಲು ಮಾಡಬಹುದೋ ಎಂಬ ವ್ಯಗ್ರೆ ಸಂಗತಿಗಳ ಸಂಬಂಧವಾಗಿ ಪ್ರಕಟಿಸೋಹೊದ ವಿಜ್ಞಾಪನೆಯು ವರ್ಷಕಾಲದ ಮೇಘದಂತೆ ನ್ಯೂಸೆನ್ಸ್ ಮೊಕದ್ದಮೆಗಳ ಮಳೆಯನ್ನು ಸುರಿಸಲಿಕ್ಕೆ ಇತ್ತಲಾಗೆ ತೊಡಗಿಯದೆ. ಮೀನು ಮಾರ್ಕೆಟಿಗೆ ಆವರಣ ಇಲ್ಲ. ಗುತ್ತೇದಾರರು ವಸೂಲು ಮಾಡುವ ಫೀಸಿಗೆ ಕಂಟ್ರಾಕ್ಟು ಪ್ರಕಾರ ಮಿತಿಯುಂಟುಮಾಡುವದು ಅಸಾಧ್ಯವಾಗಿದೆ. ಹೀಗಾದ್ದರಿಂದ ಕೆಲವು ಜನರು ತಾವು ಗುತ್ತೇದಾರರಿಂದ ಒಳಕಂಟ್ರಾಕ್ಟು ಮಾಡಿಕೊಂಡಿರುತ್ತೇವೆಂತ ಹೇಳಿಕೊಂಡು ಬರಹ ಕಾಯಿದೆ ಕಾನೂನು ಮೊದಲಾದ್ದನ್ನು ಅರಿಯದ ನಮ್ಮವರಿಂದ ತಲೆ ಹೊರೆಗೆ ಇಷ್ಟು ಮತ್ತು ಬುಟ್ಟಿ ಪ್ರಕಾರ ವಸೂಲುಮಾಡುತ್ತಿರುವರು. ಕಾಞಂಗಾಡು ಅಜಾನೂರು, ಬಲ್ಲ ಈ ಪ್ರಾಂತ್ಯಗಳಿಗೆ ಬಂದು ಈ ರೀತಿ ಫೀಸು, ವಸೂಲು ಮಾಡುತ್ತಿದ್ದಾರೆ. ಮತ್ತು ಮಾರ್ಕೆಟು ಒಳಗೂ ಹೊರಗೂ ಹೊರಗೆ ಅಂದರೆ ಎಷ್ಟು ದೂರದಲ್ಲಿಯಾದರೂ ಮೀನು ಮಾರಬಹುದೆಂದು ಹೇಳುತ್ತಾರೆ ಇಂಥವರ ಮಾತು ಕೇಳಿ ಮಾರ್ಕೆಟಿನ ಹೊರಗೆ ಮೀನು ಮಾರುವಂಥವರನ್ನು ಪೋಲಿಸಿನವರು ನೂಸೆನ್ಸ ಆಕ್ಟು ಪ್ರಕಾರ ಕೈದುಮಾಡಿ ಮೊಕದ್ದಮೆ ನಡಿಸುತ್ತಾರೆ. ಈ ರೀತಿ ಗುತ್ತೆದಾರರ ಸುಂಕವು ಮನಸ್ಸಿಯಾಗಿ ವಸೂಲಾಗುತ್ತಿರುವಾಗ ಮೊಕದ್ದಮೆಗಳಲ್ಲಿ ಜುರುಮಾನೆಯನ್ನೂ ಕೊಡುತ್ತಿದ್ದೇವೆ. ಸ್ವಾಮಿ, ಈ ಸಂಕಷ್ಟದಿಂದ ವಿಮೋಚನೆಯ ಮಾರ್ಗ ಯಾವದು? ಇಲ್ಲಿಯ ಅಧಿಕಾರಿಗಳ ತಿಳುವಳಿಕೆಗೆ ಈ ಸಂಕಷ್ಟಗಳನ್ನು ತಂದಲ್ಲಿ ಈ ವರೆಗೆ ಉತ್ತರ ದೊರೆಯಲಿಲ್ಲ. ಸ್ವಾಮಿ, ಮೀನು ಮಾರ್ಕೆಟಿನ ಉದ್ದೇಶವೇನು? ಮಾರ್ಕೆಟಿನ ಗಡಿಯನ್ನು ನಿರ್ಣಯಿಸುವ ಆವರಣೆ ಇಲ್ಲ, ಮಳೆಗಾಲದಲ್ಲಿ ಮಾರ್ಕೆಟಿನಲ್ಲಿ ಕೂತುಕೊಂಡು ಮೀನು ಮಾರುವಂತೆ ಒಂದು ಜೋಂಪಡಿಯಾದರೂ ಇಲ್ಲ. ಮೇಲಾಧಿಕಾರಿಗಳಾದರೂ ನಮ್ಮನ್ನು ಈ ಸಂಕಷ್ಟದಿಂದ ವಿಮೋಚನೆಗೊಳಿಸಬೇಕೆಂದು ತಮ್ಮ ಪತ್ರ ಮೂಲಕ ಈ ವಿಷಯವನ್ನು ಅವರ ಮುಂದಿಟ್ಟಿರುತ್ತೇವೆ.

ಹೊಸದುರ್ಗ }
13—6—1915 }

ನಾನೊಬ್ಬ ಬೆಸ್ತ.

ಉಡ್ಪಿ,
ತಾ. 13—6—14.

ಕೈಕಡ ಮತ್ತು ಪರಸ್ಪರ ಸಹಾಯಕ ಸಂಘದ ಲೇವಾದೇವಿ.

ಅಯ್ಯಾ,

ಸಾಲಗಳಿರುವ ಜನರ ಸಾಲಗಳ ಮೊಬಲುಗುಗಳ ಸಹಿತ ಖಾನೆಸುಮಾರಿಯನ್ನು ತೆಗಿಯುವ ಉಪಾಯವು ಪರಸ್ಪರ ಸಹಾಯಕ ಸಂಘಗಳಲ್ಲಿ ಇಲ್ಲದೆ ಇರುವದು ಒಂದು ಅತಿ ದೊಡ್ಡ ಕೊರತೆಯೆಂತ ಭಾವಿಸುತ್ತೇನೆ. ಯಾಕಂದರೆ ಇಂಥಾದ್ದೊಂದು ಏರ್ಪಾಡು ಇದ್ದದ್ದೇ ಆದರೆ ಜನರು ಸಾಲಗಳ ಪಾಶದಿಂದ ಹ್ಯಾಗೆ ನಿವಾರಣೆ ಹೊಂದುತ್ತಿರುವರೆಂಬುದನ್ನು ನಿಶ್ಚಯಮಾಡಿಕೊಳ್ಳಲು ಸಾಧ್ಯವಾಗುತ್ತಿತ್ತು. ಉಡ್ಪಿಯಲ್ಲಿ ಪರಸ್ಪರ ಸಹಾಯಕ ಸಂಘವು ಚಲೋ ರೀತಿ ನಡೆಯುತ್ತದೆಂಬುದನ್ನು ತಾವು ತಿಳಿದಿರಬಹುದು. ಎಷ್ಟು ಹಣವಿದ್ದರೂ ಈ ಸಂಘದ ಲೇವಾದೇವಿಯಲ್ಲಿ ವಿನಿಯೋಗಿಸಬಹುದಾಗಿದೆ. ಉಡಿಪಿಯೆಂದರೆ ಸಾಲಕ್ಕೆ ಸಾಧಾರಣ ಪ್ರಸಿದ್ಧ ಸ್ಥಳ. ಇಲ್ಲಿ ಪರಸ್ಪರ ಸಹಾಯಕ ಲೇವಾದೇವಿ ಸಂಘವು ಏರ್ಪಡಿಸಿದಂದಿನಿಂದ ಜನರಲ್ಲಿ ಸಾಲಪಡಕೊಳ್ಳುವ ರೂಢಿಯು ವೃದ್ಧಿಯಾಗಿದೆಂಬುದು ನನ್ನ ಅಭಿಪ್ರಾಯ. ಅಂಗಡಿ ಮೊದಲಾದವುಗಳ ಮಾಲಿಕರಾದ ವ್ಯಾಪಾರಸ್ಥರೂ ಇತರರೂ ಸಾಯಂಕಾಲ ಮತ್ತು ಬೆಳಿಗ್ಗೆ ಅತ್ತಿತ್ತ ಓಡಾಡುವ ರೀತಿಯನ್ನು ನೋಡಿದರೆ ಕಂಭಗಳನ್ನು ಮುಟ್ಟುತ್ತ ಅತ್ತಿತ್ತ ಓಡುವ ಮಕ್ಕಳ ಆಟವು ನೆನಪಿಗೆ ಬರುತ್ತದೆ. ಸಂಘದಿಂದ ಪಡಕೊಂಡ ಸಾಲವನ್ನು ಪಾವತಿ ಮಾಡುವ ಅವಧಿಯ ದಿನ ನೂರಾರು ಜನ ಸ್ನೇಹಿತರ ಬಾಗಲುಗಳಿಗೆ ಹೋಗಿ ಸಿಕ್ಕಿದಷ್ಟು ಮೊಬಲಗನ್ನು ಕೈಕಡವಾಗಿ ಪಡೆದು ಸಾಯಂಕಾಲಕ್ಕೆ ಗಂಟು ಭರ್ತಿಯಾಗುವದು. ಅಂದೇ ಅಥವಾ ಮರುದಿನ ತನ್ನ ಅಥವಾ ತನ್ನ ಸ್ನೇಹಿತರ ಹೆಸರಲ್ಲಿ ಸಾಲಕ್ಕೆ ಅರ್ಜಿ ದಾಖಲಾಗುವದು. ಮೊಬಲಗು ಸಿಕ್ಕಿದೊಡನೆ ಕೈಕಡದವರನ್ನು ಒಂದೆರಡು ಹಪ್ತೆಗಳಲ್ಲಾದರೂ ತೃಪ್ತಿಪಡಿಸುವನು. ಉಡ್ಪಿಯಲ್ಲಿ ಈ ರೀತಿ ಕೈಕಡಗಳ ಒಡ್ಡಾಟವು ಬಹಳ ಭಯಂಕರವಾಗಿ ಬಂದದೆ. ಇದು ಪರಸ್ಪರ ಸಹಾಯಕ ಸಂಘದ ಅಭಿವೃದ್ಧಿಯನ್ನು ಸೂಚಿಸುವದು ನಿಜ ಆದರೆ ಇಂಥಾ ಅಭಿವೃದ್ಧಿಯು ಯಥಾರ್ಥವಾದದ್ದೇ ಎಂಬದನ್ನು ಪರಸ್ಪರ ಸಹಾಯಕ ಸಂಘಗಳ ಸ್ಥಾಪನೆಯಲ್ಲಿ ವಿಶೇಷ ಅನುಭವವುಳ್ಳವರು ತಮ್ಮ ಪತ್ರ ಮೂಲಕ ತಿಳಿಸುತ್ತಿದ್ದರೆ ಉಪಕಾರವಾಗುತ್ತಿತ್ತು.

ಸ್ನೇಹಿತ.

ಯುದ್ಧ ಸಮಾಚಾರ.

ತಾ. ೯ನೇ ಜೂನ್ ೧೯೧೫.

ಅರ್‍ರಾಸಿನ ಉತ್ತರದಲ್ಲಿ ಫ್ರೆಂಚರು ನಿನ್ನೆಯ ದಿನ ತೆಗೆದುಕೊಂಡಿದ್ದ ಎರಡು ಸಾಲು ಕಂದಕಗಳನ್ನು ಪುನಃ ಪಡೆಯುವ ಪ್ರಯತ್ನವನ್ನು ಶತ್ರುಗಳು ನಡಿಸಿದರು. ಆದರೆ ಶತ್ರುಗಳು ಹಿಮ್ಮೆಟ್ಟಿದರು. ಇಲ್ಲಿ ೩೦೦೦ ಜರ್ಮನರು ಸತ್ತು ಬಿದ್ದರು. ೩೫೦ ಜರ್ಮನರು ಶೆರೆ ಬಿದ್ದರು. ನ್ಯೂಸನ್ಸ್ ಮತ್ತು ಕ್ವೆನ್ನಿನಲ್ಲಿ ಫ್ರೆಂಚರು ಕೆಲವು ಸಾರಿ ಜರ್ಮನರ ಮೇಲೆ ಹಲ್ಲೆಮಾಡಿ ಉರಿಯುವ ದ್ರಾವಕವನ್ನು ಶತ್ರುಗಳ ಕಂದಕಗಳಿಗೆ ಚೆಲ್ಲಿದರು. ಲಿರಟ್ಟೆ ಪ್ರಸ್ತಭೂಮಿಯಲ್ಲಿ ಪದಾತಿಗಳ ಕಠಿಣಕಾಳಗ ನಡೆಯಿತು. ಫ್ರೆಂಚರು ಎಲ್ಲೆಲ್ಲಿಯೂ ತಮ್ಮ ನೆಲೆಗಳನ್ನು ಕಾಪಾಡಿಕೊಂಡಿರುವರು. ಹೆಬ್ಯೂಟರ್ನಿನಲ್ಲಿ ಫ್ರೆಂಚರು ಜರ್ಮನರನ್ನು ನಾಲ್ಕಾವರ್ತಿ ಹಿಂದಕ್ಕೆ ಓಡಿಸಿದರು.

ಕೊಲೊಮಿಯದ ಪಶ್ಚಿಮದಲ್ಲಿ ಆಸ್ಟ್ರಿಯಾನರು ನಷ್ಟಪಟ್ಟು ಹಿಮ್ಮೆಟ್ಟಿರುತ್ತಾರೆ. ರುಶ್ಯನರ ಒಂದು ಸೇನಾಂಗದ ಮುಂದುಗಡೆ ಆಸ್ಟ್ರಿಯಾನರ ೫೦೦೦ ಶವಗಳು ಬಿದ್ದಿದ್ದವು. ರುಶ್ಯನರು ೭೦೦ ಮಂದಿಯನ್ನು ಶೆರೆ ಹಿಡಿದಿರುತ್ತಾರೆ. ಜೊರಾವ್ನೊ ಪ್ರಾಂತ್ಯದಲ್ಲಿ ಶತ್ರುಗಳ ಒಂದು ಸಣ್ಣ ಸೇನೆಯು ನೀಸ್ಟರ್ ನದಿಯನ್ನು ದಾಟಿರುವದು.

ಇಟಲಿಯನರ ಸೇನೆಯು ಇಟಲಿ ಎಲ್ಲೆಕಟ್ಟನ್ನು ದಾಟಿ ಮುಂದರಿದಿರುವರು. ಇಟಲಿಯನರು ೪ ದಿನ ಕದನಮಾಡಿ ಟೊಲಮಿನೋ ಎಂಬಲ್ಲಿಗೆ ಹೋಗಲಿಕ್ಕಿರುವರು.

ತಾ. ೧೦ನೇ ಜೂನ್.

ಗಲಿಪೊಲಿ ಸಮೀಪದ ಒಂದು ಬಂದರಕ್ಕೆ ಬ್ರಿಟಿಷರ ಹಡಗದಲ್ಲಿದ್ದ ವಾಯುನಾವೆಗಳು ಸಿಡಿಮದ್ದುಗಳನ್ನು ಬಿಸಾಡಿರುವವು. ಇದರಿಂದ ೧೫ ತುರ್ಕೀ ಸೇನಿಕರು ಪ್ರಾಣಾಪಾಯ ಹೊಂದಿರುವರು. ಉಗ್ರಾಣಗಳು-ಹಾಳಾಗಿರುವವು ವಂತಲೂ "ಟ್ರೈಯಂಫ್" ಮತ್ತು "ಮೆಜೆಸ್ಟಿಕ್" ಎಂಬ ಬ್ರಿಟಿಷರ ನಾವೆಗಳನ್ನು ಮುಣುಗಿಸಿದ ಜರ್ಮನರ ಜಲಾಂತರ್ಗಾಮಿ ನಾವೆಯು ಕನ್‌ಸ್ಟಂಟಿನೋಪಲಿಗೆ ಬಂದಿರುವವೆಂದೂ ಬುಕಾರೆಸ್ಟಿಗೆ ಬಂದ ಖೂನುಗಾರರು ಹೇಳುತ್ತಾರೆ.

ತುರ್ಕೀ ಸೇನೆಯಲ್ಲಿಯೂ ಸಹಾಸ್ಪತ್ರೆಯಲ್ಲಿಯೂ ವಿಷಮ ಜ್ವರವು ತಲೆದೋರಿರುವದು. ೭೫ ಡಾಕ್ತರರು ಇದಕ್ಕೆ ಆಹುತಿಯಾದರು. ತುರ್ಕಿಯಲ್ಲಿ ಕಲ್ಲಿದ್ದಲು ಮತ್ತು ರೊಟ್ಟಿಯ ಕೊರತೆಯೂ ಬಂದಿರುವದು ಎಂತ ಕನ್‌ಸ್ಟಂಟಿನೋಪಲಿನಿಂದ ಅಥೆನ್ಸಿಗೆ ಬಂದವರು ಹೇಳುತ್ತಾರೆ.

ಮಿತ್ರರು ಡರ್ಡನೆಲ್ಸನ್ನು ಹಲ್ಲೆಮಾಡುತ್ತಿರುವದರಿಂದ ಜರ್ಮನರು ತುರ್ಕೀ ಸುಲ್ತಾನರಿಗೆ ಯಾತ್ರೆಮಾಡುವ ನೆವನದಿಂದ ಕೊನಿಜ ಎಂಬಲ್ಲಿಗೆ ಹೋಗುವದು ಉತ್ತಮವೆಂಬ ಸಲಹೆಯನ್ನು ಕೊಟ್ಟಿರುತ್ತಾರೆ. ಆದರೆ ಸುಲ್ತಾನರು ಇದಕ್ಕೆ ಒಪ್ಪಲಿಲ್ಲ. ಕನ್‌ಸ್ಟಂಟಿನೋಪಲಿನಲ್ಲಿರುವ ಜರ್ಮನ್ ಕುಟುಂಬಗಳು ಗುಂಪುಗುಂಪಾಗಿ ಕನ್‌ಸ್ಟಂಟಿನೋಪಲನ್ನು ಬಿಟ್ಟು ಹೋಗುತ್ತಿದ್ದಾರೆ.

ಬಾಲ್ಟಿಕ್ ಸಮುದ್ರದಲ್ಲಿ ವಿಂಡಾವು ಮತ್ತು ಗೊಡ್ಲೇಂಡಿನ ಮಧ್ಯೆ ರುಶ್ಯನರ ಜಲಾಂತರ್ಗಾಮಿ ನಾವೆಗಳು ೧೦ ಜರ್ಮನ ಯುದ್ಧ ಹಡಗಗಳ ಮೇಲೆ ಹಲ್ಲೆ ಮಾಡಿರುವವು. ಈ ಜಲಾಂತರ್ಗಾಮಿ ನಾವೆಗಳಿಂದ ಮತ್ತು ಸಿಡಿಮದ್ದು ಗನಿಗಳಿಂದ ಜರ್ಮನ್ ನಾವೆಗಳು ನಷ್ಟಪಟ್ಟಿದ್ದರಿಂದ ಉಳಿದ ಜರ್ಮನ ನಾವೆಗಳು ದಕ್ಷಿಣ ಪಶ್ಚಿಮ ದಿಕ್ಕಿಗೆ ಹೋಗಿರುವವು. "ಹಿಂಡೆನ್ ಬರ್ಗ್" ಎಂಬ ಜರ್ಮನ ವ್ಯಾಪಾರ ಹಡಗವು ಸಿಡಿಮದ್ದಿನ ಗನಿಗೆ ತಾಗಿ ಮುಣುಗಿರುವದು. ಜರ್ಮನರ ಮತ್ತೊಂದು ಕ್ರೂಜರಿಗೆ ಹಾನಿಯಾಗಿರುವದು.

ಜರ್ಮನರ ಜಲಾಂತರ್ಗಾಮಿ ನಾವೆಗಳ ದಾಳಿಯನ್ನು ಡಚ್ಚರು ಎದುರಿಸಿರುತ್ತಾರೆ.

ಜರ್ಮನರ ಒಂದು ಜಲಾಂತರ್ಗಾಮಿ ನಾವೆಯನ್ನು ಬ್ರಿಟಿಷರು ಮುಣುಗಿಸಿ ಅದರ ೬ ಆಫೀಸರರನ್ನೂ ೩೧ ನಾವಿಕರನ್ನೂ ಶೆರೆ ಹಿಡಿದಿರುತ್ತಾರೆಂತ ಪ್ರಕಟವಾಗಿದೆ.

ಅಮೇರಿಕದ ಯುನೈಟೆಡ್ ಸ್ಟೇಟ್ ಸರಕಾರದವರು ಜರ್ಮನಿಗೆ ಕಳುಹಿಸಲಿಕ್ಕಿದ್ದ ಎರಡನೇ ಪತ್ರದ ಸಂಬಂಧ ಯುನೈಟೆಡ್ ಸ್ಟೇಟ್ ಪ್ರೆಸಿಡೆಂಟರಾದ ವಿಲ್ಸನರಿಗೂ ಸೆಕ್ರೆಟರಿಗಳಾದ ಮಿ। ಬ್ರಯನರಿಗೂ ಸ್ವಲ್ಪ ಬಂದು ಮಿ। ಬ್ರಯನರು ರಾಜಿನಾಮೆ ಕೊಟ್ಟಿರುತ್ತಾರೆ. ಮಿ। ರಾಬರ್ಟ ಲೆಂಡ್ಸಿಂಗರವರು ಹೊಸ ಸೆಕ್ರೆಟರಿಯಾಗಿ ನೇಮಿಸಲ್ಪಟ್ಟಿರುತ್ತಾರೆ.

ಫ್ರಾನ್ಸ್ ರಣರಂಗದಲ್ಲಿ ಐನ ಮತ್ತು ಲೊರೆಟ್ಟೆಯಲ್ಲಿ ಕಠಿಣ ತೋಪು ಕಾಳಗವು ನಡೆದಿರುವದು. ಫ್ರೆಂಚರು ನ್ಯೂವಿಲ್ಲೆಯಲ್ಲಿ ಪುನಃ ಕೆಲವು ಮನೆಗಳನ್ನು ಹಿಡಿದಿರುತ್ತಾರೆ. ಎರಡಾವರ್ತಿ ಮೇಲ್ಲಾಯದ ಜರ್ಮನರು ಹಿಮ್ಮೆಟ್ಟಿರುವರು. ಬ್ಯೂಸ್‌ಲೆ—ಪ್ರೆಟ್ರೆ ಎಂಬಲ್ಲಿ ಫ್ರೆಂಚರು ಜರ್ಮನರ ಎರಡು ಸಾಲು ಕಂದಕಗಳನ್ನು ಸ್ವಾಧೀನಮಾಡಿಕೊಂಡು ಅನೇಕ ಸೇನಿಕರನ್ನು ಶೆರೆ ಹಿಡಿದಿರುತ್ತಾರೆ.

ಬ್ರಿಟಿಷರು ಜರ್ಮನರ ಎರಡು ವಾಯುನಾವೆಗಳನ್ನು ಕೆಡವಿರುತ್ತಾರೆ. ಮತ್ತೊಂದು ಜರ್ಮನ ವಾಯುನಾವೆಯನ್ನು ಬ್ರಿಟಿಷರ ವಾಯುನಾವೆಯು ಹಾಳುಪಡಿಸಿರುವದು.

ಜರ್ಮನರು ಪೂರ್ವ ರಣರಂಗದಲ್ಲಿ ಶಾವಾಲಿ ಎಂಬಲ್ಲಿ ದೊಡ್ಡ ಸೇನೆಯನ್ನು ಕೂಡಿಸಿರುತ್ತಾರೆ. ಆದುದರಿಂದ ರುಶ್ಯನರು ತಮ್ಮ ಸೇನೆಯನ್ನು ಶಾವಾಲಿಯ ಮುಂದೆ ತಂದೊಡ್ಡಿರುವರು. ಗೆಲೀಸಿಯದಲ್ಲಿ ಕಠಿಣ ಕಾಳಗವು ನಡೆಯುತ್ತಿದೆ.

ಇಟಲಿಯನರ ಒಂದು ವಾಯುನಾವೆಯನ್ನು ಆಸ್ಟ್ರಿಯಾನರು ಹಾಳುಪಡಿಸಿ, ೭ ನಾವಿಕರನ್ನು ಶೆರೆ ಹಿಡಿದಿರುತ್ತಾರೆ.

ಗ್ರೀಕ್ ದೇಶದ ಅರಸರಿಗೆ ಆರೋಗ್ಯವಾಗುತ್ತಾ ಬರುತ್ತದೆ.

ತಾ. ೭-೮ರಲ್ಲು ಇಸೊನ್ಸೊ ಎಂಬಲ್ಲಿ ಇಟಲಿಯನರು ಆಸ್ಟ್ರಿಯಾನರ ಮೇಲೆ ಹಲ್ಲೆಮಾಡಿದ್ದಲ್ಲಿ ಆಸ್ಟ್ರಿಯಾನರು ಬಹು ಕಠಿಣವಾಗಿ ಎದುರಾಡಿದರು. ಇಟಲಿಯನರು ಕೂಡಾ ವಿಶೇಷ ಆಸಕ್ತಿಯಿಂದ ಎದುರಾಡಿ ಮೊನ್‌ಫಾಲ್‌ಕೋನ್ ಎಂಬ ಪಟ್ಟಣವನ್ನು ಸ್ವಾಧೀನಮಾಡಿಕೊಂಡರು. ಮೊಂಟೆನಿಗ್ರೊದಲ್ಲಿ ಆಸ್ಟ್ರಿಯಾನರ ಬಲವಾದ ಒಂದು ನೆಲೆಯನ್ನು ಇಟಲಿಯಾನರು ವಶಮಾಡಿಕೊಂಡು ಇಸೊನ್ಸೊ ಎಂಬಲ್ಲಿ ಆಸ್ಟ್ರಿಯನರ ೫೦೦ ಸೇನಿಕರನ್ನು ಶೆರೆಹಿಡಿದರು.

ತಾ. ೧೧ನೇ ಜೂನ್.

ಅರ್‍ರಾಸಿನ ಉತ್ತರದಲ್ಲಿ ಕಠಿಣ ಕಾಳಗ ನಡೆಯುತ್ತಿದೆ. ನ್ಯೂವಿಲ್ಲೆ ಗ್ರಾಮವೆಲ್ಲಾ ಈಗ ಫ್ರೆಂಚರ ಸ್ವಾಧೀನವಾಗಿದೆ. "ಲೇಬಿರಿಂತ್"ನಲ್ಲಿಯೂ ಫ್ರೆಂಚರು ಮುಂದರಿದಿರುತ್ತಾರೆ. ಐನೆಯಲ್ಲಿ ಮೇಲ್ಲಾಯದ ಜರ್ಮನರು ಹಿಮ್ಮೆಟ್ಟಿರುವರು.

ಡರ್ಡನೆಲ್ಸಿನಲ್ಲಿ ಮತ್ತು ಬೆಲ್ಜಿಯಮಿನ ಫ್ಲೇಂಡರಿನಲ್ಲಿ ಬ್ರಿಟಿಷ ಸೇನೆಯಲ್ಲಿ ಮೇ ತಾ. ೩೧ರ ವರೆಗೆ ನಷ್ಟಪಟ್ಟ ಸಂಖ್ಯೆಯು ಈಗ ತಾನೇ ಪ್ರಕಟವಾಗಿರುವದು. ೩೩೨೭ ಆಫೀಸರರೂ ೪೭,೧೦೫ ಸೇನಿಕರೂ ಹತರಾದರು. ೬೪೯೮ ಆಫೀಸರರೂ ೧೪೭,೪೮೩ ಸೇನಿಕರೂ ಗಾಯ ಒಡೆದರು. ೧೧೩೦ ಆಫೀಸರರೂ ೫೩,೬೧೭ ಸೇನಿಕರೂ ಕಾಣೆಯಾಗಿರುವರು.

ಟೈರೊಲ್ ಟ್ರೆಸ್ಟಿನೋ ಸರಹದ್ದಿನಲ್ಲಿ ಇಟಲಿಯನರು ವಿಶೇಷವಾಗಿ ಮುಂದರಿದಿರುತ್ತಾರೆ. ಕಾರ್ನಿಕ್ ಆಲ್ಪ್ಸನಲ್ಲಿ ಆಲ್ಪೈನ್ ಸೇನೆಯು ಒಂದು ವಿಶೇಷ ನೆಲೆಯನ್ನು ಹಿಡಿದಿರುತ್ತದೆ. ಇಟಲಿಯನರು ಪ್ರತಿ ಕಡೆಯಲ್ಲಿಯೂ ಧೈರ್ಯಸಾಹಸಗಳನ್ನು ತೋರಿಸುತ್ತಿದ್ದಾರೆ.

ತಾ. ೧೨ನೇ ಜೂನ್.

ಜರ್ಮನರ "ಪ್ರಿನ್ಸ್ ಇಥೆಲ್ ಫ್ರೆಡರಿಕ್" ಎಂಬ ಕ್ರೂಜರ್ ನಾವೆಯ ಕೆಪ್ಟನನು ಇಟಲಿ ಹಡಗದಲ್ಲಿ ಸೇರಿಕೊಂಡಿದ್ದನು. ಇವನನ್ನು ಬ್ರಿಟಿಷರು ಜಿಬ್ರಾಲ್ಟರ್ ಜಲಸಂಧಿನಲ್ಲಿ ಹಿಡಿದಿರುತ್ತಾರೆ.

ಜರ್ಮನರ ಜಲಾಂತರ್ಗಾಮಿ ನಾವೆಯು ಬ್ರಿಟಿಷರ ಕೆಲವು ಟ್ರಾವಲರ್ ದೋಣಿಗಳನ್ನು ಮುಣುಗಿಸಿರುತ್ತದೆ.

ಅಮೇರಿಕದವರು ಜರ್ಮನರಿಗೆ ಖಂಡಿತವಾದ ಪತ್ರವನ್ನು ಕಳುಹಿಸಿ ಕೊಟ್ಟು ತಟಸ್ಥರಾಜ್ಯಗಳ ಸ್ವಾತಂತ್ರವನ್ನು ಕಾಪಾಡಬೇಕೆಂತ ಜರ್ಮನರನ್ನು ಕೇಳಿಕೊಂಡಿರುತ್ತಾರೆ. ಲುಸಿತಾನಿಯ ಹಡಗವು ಪ್ರಯಾಣಿಕರನ್ನು ಮಾತ್ರ ತಕೊಂಡುಹೋಗಿತ್ತೆಂತಲೂ ಜರ್ಮನರು ಅದನ್ನು ಮುಣುಗಿಸಿದ್ದರಿಂದ ನಿರಾಪರಾಧಿಗಳಾದ ೧೦೦ಕ್ಕಿಂತಲೂ ಹೆಚ್ಚಿಗೆ ಅಮೇರಿಕದವರು ಮುಣುಗಿ ಸತ್ತರೆಂತಲೂ ಅಮೇರಿಕಾದವರು ಜರ್ಮನರಿಗೆ ತಿಳಿಸಿರುತ್ತಾರೆ.

ಜೂನ ತಾ. ೩ರಲ್ಲು ರುಶ್ಯನರ ಜಲಾಂತರ್ಗಾಮಿ ನಾವೆಗಳು ಬಾಲ್ಟಿಕ್ ಸಮುದ್ರದಲ್ಲಿ ಜರ್ಮನರ ಯುದ್ಧ ಹಡಗಗಳಿಗೆ ವಿಶೇಷ ಹಾನಿಪಡಿಸಿರುತ್ತದೆ. ಮರುದಿನ ಜರ್ಮನರ ಒಂದು ಡಿಸ್ಟ್ರೋಯರ್ ನಾವೆಯೂ ಒಂದು ಸರಕಿನ ನಾವೆಯೂ ಮತ್ತೊಂದು ಡಿಸ್ಟ್ರೋಯರ್ ನಾವೆಯೂ ರುಶ್ಯನರ ಜಲಾಂತರ್ಗಾಮಿ ನಾವೆಗೆ ತುತ್ತಾಗಿರುವವು. ಒಂದು ಜರ್ಮನ ನಾವೆಯು ಸಿಡಿಮದ್ದಿನ ಗನಿಗೆ ತಾಗಿ ಸಿಡಿದುಹೋಗಿರುತ್ತದೆ. ಜರ್ಮನರ ಎರಡು ಜಲಾಂತರ್ಗಾಮಿ ನಾವೆಗಳು ಹಾಳಾಗಿ ಲಿಬ್ಯೋವದಲ್ಲಿ ಸೇರಿರುತ್ತದೆ.

ಫ್ರೆಂಚರು ನ್ಯೂವಿಲ್ಲೆಯನ್ನು ವಶಮಾಡಿಕೊಳ್ಳಬೇಕಾದರೆ ಅಲ್ಲಿ ಕಠಿಣ ಕಾಳಗವು ನಡೆಯಿತು. ಕೈಮುಡುಕಿನ ಕಾಳಗವು ಮನೆಯಿಂದ ಮನೆಗೆ ಎಂಬಂತೆ ನಡೆದು ಒಂದು ಮನೆಯ ನಂತರ ಮತ್ತೊಂದು ಮನೆಯು ಫ್ರೆಂಚರ ಸ್ವಾಧೀನವಾಯಿತು. ಸಾವಿರಕ್ಕಿಂತಲೂ ಹೆಚ್ಚಿನ ಜರ್ಮನರ ಶವಗಳು ಮನೆಗಳಲ್ಲಿಯೂ ಕಂದಕಗಳಲ್ಲಿಯೂ ಬಿದ್ದಿದ್ದವು.

ಯುದ್ಧಸಾಮುಗ್ರಿಗಳನ್ನು ತಯಾರುಮಾಡುವ ಹೆಚ್ಚಿನ ಕಾರ್ಖಾನೆಗಳನ್ನು ಲಂಡನಿನಲ್ಲಿ ಏರ್ಪಡಿಸುವ ಏಲಿವಾರಿ ನಡಿಯುತ್ತಿದೆ. ೭೮,೯೪೬ ಹೆಂಗಸರು ಲಂಡನಿನಲ್ಲಿ ಸರಕಾರದವರಿಂದ ಯುದ್ಧ ಬಗ್ಗೆ ಏರ್ಪಡಿಸೋಣಾಗಿರುವ ಕಾರ್ಖಾನೆಗಳಿಗೆ ಸೇರಲು ತಮ್ಮನ್ನು ಒಪ್ಪಿಸಿ ಕೊಟ್ಟಿರುವರು.

ಇಂಗ್ಲಾಂಡಿನ ವೆಸ್ಟ್‌ಎಂಡಿನಲ್ಲಿ ಬೆಂಕಿ ಬಿದ್ದು ೩೦೦ ಮಿಲಿಟರಿ ಮೋಟರುಗಳೂ ರೆಡ್‌ಕ್ರೊಸ್ ಸೊಸೈಟಿಯವರ ೧೦೦ ಮೋಟರುಗಳೂ ಸುಟ್ಟು ಹೋದವು.

ಗೆಲೀಸಿಯದ ಮೊಸಿಸ್ಕ ಎಂಬಲ್ಲಿ ಶತ್ರುಗಳು ರುಶ್ಯನರ ಸೇನೆಯ ಮೇಲೆ ನುಗ್ಗಿ ಬಂದರು. ರುಶ್ಯನರು ಶತ್ರುಗಳಲ್ಲಿ ವಿಶೇಷ ನಷ್ಟ ಪಡಿಸಿ ಒಂದು ಮೈಲು ಹಿಂದಕ್ಕೆ ಓಡಿದರು. ನೀಸ್ಟರಿನ ಬಲಗಡೆಯಲ್ಲಿ ರುಶ್ಯನರು ೩೦೦೦ ಶತ್ರುಸೇನಿಕರನ್ನು ಶೆರೆ ಹಿಡಿದರು. ನೀಸ್ಟರಿನ ಎಡಪಾರ್ಶ್ವದಲ್ಲಿ ಶತ್ರುಗಳಿಗೆ ಮುಂದರಿಯಲಿಕ್ಕಾಗದೆ ರೈಲ್ವೆ ಸ್ಟೇಶನಿನಿಂದ ಹಿಮ್ಮೆಟ್ಟಿದರು. ರುಶ್ಯನರು ಕೆಲವು ಗ್ರಾಮಗಳನ್ನು ಸ್ವಾಧೀನಮಾಡಿಕೊಂಡು ೮೦೦ ಮಂದಿಯನ್ನು ಶೆರೆ ಹಿಡಿದರು.

ಜರ್ಮನರ ಒಂದು ಪ್ರಚಂಡ ಸೇನೆಯು ಜುರಾವ್ನೊ ಎಂಬಲ್ಲಿ ನದಿಯನ್ನು ದಾಟಿತು. ಆದರೆ ಬಹು ಶೂರತನದಿಂದ ರುಶ್ಯನರ ಒಂದು ಸೇನೆಯು ಶತ್ರುಗಳನ್ನು ನದಿಯ ಹಿಂದಕ್ಕೆ ಅಟ್ಟಿ ೧೭ ಫಿರಂಗಿಗಳನ್ನೂ ೪೯ ಕ್ವಿಕ್‌ಫಯರ್ ತೋಫಗಳನ್ನೂ ೧೫೮ ಆಫೀಸರರನ್ನೂ ೬೫೦೦ ಜರ್ಮನ ಮತ್ತು ಆಸ್ಟ್ರಿಯ ಸೇನಿಕರನ್ನೂ ಶೆರೆ ಹಿಡಿದರು.

ಟ್ರಿಸ್ಟೆ ಕೊಲ್ಲಿಯನ್ನು ಬಿಟ್ಟುಹೋಗಲಿಕ್ಕೆ ಇದ್ದ ಆಸ್ಟ್ರಿಯಾನರ ಒಂದು ಡಿಸ್ಟ್ರೋಯರ್ ನಾವೆಯನ್ನು ಇಟಲಿಯನರ ಜಲಾಂತರ್ಗಾಮಿ ನಾವೆಯು ಮುಣುಗಿಸಿರುತ್ತದೆ.

ಕಾರ್ನಿಕ್ ಸರಹದ್ದಿನಲ್ಲಿ ತಾ. ೭-೮-೯ರಲ್ಲು ಆಸ್ಟ್ರಿಯಾನರಿಗೂ ಇಟಲಿಯನರಿಗೂ ಆದ ಕದನದಲ್ಲಿ ಆಸ್ಟ್ರಿಯನರ ೩೦೦ ಸೇನಿಕರು ಹತರಾದರು. ೪೦೦ ಮಂದಿ ಗಾಯಒಡೆದಿರುವರು. ೩೫೦ ಮಂದಿ ಆಸ್ಟ್ರಿಯಾನರು ಶೆರೆ ಬಿದ್ದಿರುವರು. ಆಸ್ಟ್ರಿಯನರು ಈ ನೆಲೆಯ ಮೇಲೆ ಪುನಃ ಬೀಳಲು ಯತ್ನಿಸಿ ವಿಶೇಷ ನಷ್ಟಪಟ್ಟು ಹಿಮ್ಮೆಟ್ಟಿದರು.

ಇಸೊನ್ಸೊ ನದಿಯ ಬಳಿ ಕಠಿಣಕಾಳಗ ನಡೆಯುತ್ತಿದೆ. ಇಟಲಿಯನರು ಕೆಲವು ಗುಡ್ಡಗಳನ್ನೂ ಹಿಡಿದಿರುತ್ತಾರೆ.

ತಾ. ೧೪ನೇ ಜೂನ್.

ಡರ್ಡನೆಲ್ಸಿನಲ್ಲಿ ಫ್ರೆಂಚ ಸೇನಿಕರು ಮುಂದರಿದಿರುತ್ತಾರೆ. "ಬ್ಲೇಕ್ ಸೀ"ಯಲ್ಲಿ ತುರ್ಕರ "ಬ್ರೆಸ್‌ಲೋ" ಕ್ರೂಜರ್ ನಾವೆಗೆ ರುಶ್ಯನರ ಡಿಸ್ಟ್ರೋಯರ್ ನಾವೆಗಳು ಎದುರು ಬಿದ್ದು ಅವನ್ನು ವಿಶೇಷವಾಗಿ ಹಾನಿಪಡಿಸಿರುವವು.

ಫ್ರಾನ್ಸ್ ರಣರಂಗದಲ್ಲಿ ಮಿತ್ರರಿಗೆ ಪ್ರತಿ ಕಡೆಯಲ್ಲಿಯೂ ಜಯವಾಗುತ್ತಿದೆ. ಹೆಬುರ್ಟನ್ನೆಯಲ್ಲಿ ಜರ್ಮನರ ನೂರಾರು ಹೆಣಗಳು ಬಿದ್ದಿದ್ದವು. ನ್ಯೂವಿಲ್ಲೆಯಲ್ಲಿ ಶತ್ರುಗಳು ಅಡಗಿಸಿಟ್ಟ ಸಾವಿರಾರು ಯುದ್ಧ ಸಾಮಾಗ್ರಿಗಳು ಫ್ರೆಂಚರಿಗೆ ದೊರಕಿರುವವು.

ರುಶ್ಯನರಿಗೆ ಬಾಲ್ಟಿಕ್ ಪ್ರಾಂತ್ಯದ ಬಕೋವಿನದವರೆಗೆ ವಿಶೇಷವಾದ ಜಯಗಳಾಗಿರುವವು. ಗೆಲಿಸಿಯದಲ್ಲಿಯೂ ರುಶ್ಯನರಿಗೆ ಜಯವಾಗುತ್ತಿದೆ. ಶತ್ರುಗಳಿಗೆ ವಿಪರೀತ ನಷ್ಟವಾಗಿದೆ.

ಇಟಲಿಯನರ ಸೇನೆಯು ಮೊಂಟೆನೇರೋವನ್ನು ದಾಟಿ ಹೋಗಿರುವದು. ಗ್ರಾಡಿಸ್ಕ ಎಂಬ ಸ್ಥಳವನ್ನು ಇಟಲಿಯನರು ಸ್ವಾಧೀನಮಾಡಿಕೊಂಡಿರುತ್ತಾರೆ. ಆಸ್ಟ್ರಿಯನರ ನೂರಾರು ಸೇನಿಕರು ಇಟಲಿಯನರ ಶೆರೆ ಬಿದ್ದಿರುವರು.

ಉತ್ತರ ಹಿಂದೂಸ್ಥಾನ.

ಝಾಂಗ್ ಎಂಬಲ್ಲಿ ನಡೆದ ದಕಾಯಿತಿ ಮೊಕದ್ದಮೆಯಲ್ಲಿ ಆಪಾದಿಸಲ್ಪಟ್ಟ ಹೆಚ್ಚು ಕಡಿಮೆ ೬೧ ಮಂದಿ ದಕಾಯಿತರ ವಿಚಾರಣೆಯು ನಡೆದು ತೀರ್ಮಾನವು ಕೊಡಲ್ಪಟ್ಟಿರುವದು. ಈ ಮೊಕದ್ದಮೆಯಲ್ಲಿ ೩೦೦ ಮಂದಿ ದಕಾಯಿತರು ಒಟ್ಟುಕೂಡಿ ಮಾರ್ಚಿ ತಾರೀಖಿನಲ್ಲಿ ಝಾಂಗ್ ಎಂಬಲ್ಲಿಗೆ ತಲಪಿ ಸಿಕ್ಕಿಸಿಕ್ಕಿದ ಹಿಂದೂಗಳ ಮನೆಯನ್ನು ನುಗ್ಗಿ ಲೂಟಿ ಮಾಡಿದರು. ಸುಮಾರು ೩೫ ಮನೆಗಳನ್ನು ಸೂರೆಮಾಡಿದರು. ೭ ಮನೆಗಳನ್ನು ಸುಟ್ಟು ಹಾಕಿದರು. ಸಿಕ್ಕಿದ ಕೊಳ್ಳೆಗಳನ್ನು ಒಂಟೆಗಳ ಮೇಲೆ ಹೇರಿಸಿಕೊಂಡು ಹೋದರು. ಮರುದಿನ ಪೋಲಿಸಿನವರು ಅಲ್ಲಿಗೆ ತಲಪಿ ಅನುಮಾನದ ಮೇಲೆ ಕೆಲವು ಮನೆಗಳನ್ನು ಜಪ್ತಿಮಾಡಿದಲ್ಲಿ ಸೂರೆ ಮಾಡಿದ ಸಾಮಾನುಗಳಲ್ಲಿ ೭ ಒಂಟೆಗಳು ಹೊರುವಷ್ಟು ಸಿಕ್ಕಿದವು. ಇದರೊಡನೆ ಎರಡು ದನಗಳೂ, ಒಂದು ಕುದುರೆಯೂ ಎರಡು ಬಂದೂಕಗಳೂ ದೊರಕಿದವು. ಚಾರ್ಜುಮಾಡಲ್ಪಟ್ಟ ೭೩ ಆಪಾದಿತರಲ್ಲಿ ೨೧ ಮಂದಿಗೆ ಏಳೇಳು ವರ್ಷಗಳ ಸಜೆಯೂ ೧೭ ಮಂದಿಗೆ ಐದೈದು ವರ್ಷಗಳ ಸಜೆಯೂ, ಒಬ್ಬನಿಗೆ ೩ ವರ್ಷಗಳ ಸಜೆಯೂ ಮತ್ತೊಬ್ಬನಿಗೆ ೧೫ ಛಡಿಯೂ ಕೊಡೋಣಾಯಿತು. ೧೩ ಆಪಾದಿತರು ತಲೆತಪ್ಪಿಸಿಕೊಂಡಿರುವರು.

ಪಶ್ಚಿಮ ಬಂಗಾಳದಲ್ಲಿ ಸ್ವಲ್ಪ ಮಳೆ ಬಂದಿರುವದಾದರೂ ಪೂರ್ವ ಬಂಗಾಳದಲ್ಲಿ ಬಿರು ಮಳೆ ಬಹು ತಗ್ಗು ಪ್ರದೇಶಗಳಲ್ಲಿ ಉಂಟಾದ ನೆರೆಯಿಂದ ಢಕ್ಕದ ಸುತ್ತಲಿನ ಪ್ರದೇಶಗಳ ಬೇಸಾಯಗಾರರಿಗೆ ವಿಶೇಷ ನಷ್ಟ ಉಂಟಾಗಿರುವದು. ಕಳೆದವಾರ ಟಾಂಗೇಲ್ ಎಂಬಲ್ಲಿ ೧೯ ಅಂಗುಲ ಮಳೆ ಬಂದಿರುವದು.

ಅಲ್ಲಹಾಬಾದಿನ ಒನರೆಬಲ್ ಡಾಕ್ಟರ್ ಸತೀಶ ಚಂದ್ರ ಬೆನರ್ಜಿಯವರು ತಾ ೮ರಲ್ಲಿ ವಿಧಿವಶರಾದರು. ಇವರು ಅಲ್ಲಹಾಬಾದಿನ ಹೈಕೋರ್ಟಿನಲ್ಲಿ ಪ್ರಖ್ಯಾತ ವಕೀಲರಾಗಿದ್ದರು. ಈಚೆಗೆ ಜರಗಿದ ಪ್ರೊವಿನ್ಸಿಯಲ್ ಕಾನ್ಫರೆನ್ಸಿನಲ್ಲಿ ಮಾತನ್ನಾಡಿ ಆದನಂತರ ಇವರಿಗೆ ಅಸ್ವಸ್ಥ ಶುರುವಾಯಿತು. ಮೃತರಿಗೆ ೪೦ ವರ್ಷ ವಯಸ್ಸು. ಇವರು ಪ್ರೇಮಚಂದ್ ಮತ್ತು ರೋಯಚಂದ್ ಸ್ಕೋಲರ್, ಟಾಗೋರ್ ಲಾ ಪ್ರೊಫೆಸರ್ ಅಲ್ಲಹಾಬಾದ್ ಯುನಿವರ್ಸಿಟಿಯ ಫೆಲ್ಲೊ, ಹೈಕೋರ್ಟಿನ ವಕೀಲರಲ್ಲಿ ಶ್ರೇಷ್ಠರು ಆಗಿದ್ದರು. ಇವರ ಮರಣದ ಶೋಕಾರ್ಥವಾಗಿ ಅಲ್ಲಹಾಬಾದ್ ಹೈಕೋರ್ಟು ಮತ್ತು ಡಿಸ್ಟ್ರಿಕ್ಟ್ ಕೋರ್ಟು ಆ ದಿನ ಮುಚ್ಚಲ್ಪಟ್ಟಿತ್ತು.

ಹಿಂದೂಸ್ಥಾನ ಮತ್ತು ಜಾಪಾನಿನೊಳಗಿನ ವ್ಯಾಪಾರವು ದಿನೇ ದಿನೇ ವೃದ್ಧಿಯಾಗುತ್ತಿದೆ. ಜಾಪಾನ್ ದೇಶದಿಂದ ಹಿಂದೂಸ್ಥಾನಕ್ಕೆ ಮುಖ್ಯವಾಗಿ ಬೆಂಕಿಪೆಟ್ಟಿಗೆಗಳು, ಗಾಜು, ಗಾಜಿನ ಪಾತ್ರೆಗಳು, ರೇಶ್ಮೆ ವಸ್ತ್ರಗಳು ಬರುತ್ತಲಿವೆ. ಹಿಂದೂಸ್ಥಾನಕ್ಕೆ ಪರದೇಶಗಳಿಂದ ಒಟ್ಟಿಗೆ ೧,೫೩,೩೩,೩೩೭ ರೂಪಾಯಿ ಕ್ರಯ ಬಾಳುವ ಬೆಂಕಿಕಡ್ಡಿ ಬರುವದಿತ್ತು. ಜಾಪಾನ್ ದೇಶವು ಎಪ್ರಿಲ್ ತಿಂಗಳೊಂದರಲ್ಲಿಯೇ ೯೯೪,೪೭೨ ರೂಪಾಯಿ ಕ್ರಯ ಬಾಳುವ ಬೆಂಕಿಕಡ್ಡಿಯನ್ನು ಹಿಂದೂಸ್ಥಾನಕ್ಕೆ ಕಳುಹಿಸಿಕೊಟ್ಟಿರುತ್ತದೆ. ಅಂದರೆ ಒಟ್ಟಿಗೆ ಹಿಂದೂಸ್ಥಾನಕ್ಕೆ ಬರುತ್ತಿದ್ದ ಬೆಂಕಿಪೆಟ್ಟಿಗೆಗಳಲ್ಲಿ ¾ ಅಂಶವನ್ನು ಒಂದು ತಿಂಗಳಲ್ಲಿ ಕಳುಹಿಸಿ ಕೊಟ್ಟಿರುತ್ತದೆ. ಹಿಂದೂಸ್ಥಾನಕ್ಕೆ ಒಟ್ಟಿಗೆ ಬರುವ ೬೦,೪೫,೩೧ ರೂಪಾಯಿ ಕ್ರಯಬಾಳುವ ಗಾಜಿನ ಪಾತ್ರೆಗಳಲ್ಲಿ ೩,೨೪,೮೧೭ ರೂಪಾಯಿ ಕ್ರಯ ಬಾಳುವ ಪಾತ್ರೆಗಳು ಎಪ್ರೀಲ್ ತಿಂಗಳೊಂದರಲ್ಲೇ ಜಾಪಾನಿನಿಂದ ಬಂದಿರುತ್ತದೆ.

ಈಚೆಗೆ ಪಂಜಾಬು ಯುನಿವರ್ಸಿಟಿ ಪರೀಕ್ಷೆಯಲ್ಲಿ ಒಬ್ಬ ಕುರುಡ ವಿದ್ಯಾರ್ಥಿಯು ಮೆಟ್ರಿಕ್ಯುಲೇಶನ್ ಪರೀಕ್ಷೆ ಪಾಸಾದ ವೃತ್ತಾಂತವು ಲಾಹೋರಿನ ದಯಾಳ್ ಸಿಂಘ್ ಕಾಲೇಜಿಯ ಪಂಡಿತ ಶಿವಪ್ರಸಾದರವರಿಂದ ಟ್ರಿಬ್ಯೂನ್ ಎಂಬ ಪತ್ರಿಕೆಗೆ ಕಳುಹಿಸೋಣಾಗಿರುವದು. ಮೆಟ್ರಿಕ್ಯುಲೇಶನ್ ಪರೀಕ್ಷೆ ಪಾಸಾದ ಈ ಹುಡುಗನು (ಮೊವಾರ್) ಉದಯಪುರದಲ್ಲಿ ರಜಪೂತ ಕುಟುಂಬದಲ್ಲಿ ಜನಿಸಿದನು. ಇವನಿಗೆ ಬಾಲ್ಯಪ್ರಾಯದಲ್ಲಿಯೇ ಅನೇಕ ತೊಂದರೆಗಳು ಒದಗಿ ಅನಾಥನಾದುದರಿಂದ ಉಜ್ಜಯಿನಿ ನಗರದ ಅಮೇರಿಕ ಮಿಶ್ಯನೆರಿಗಳು ಇವನನ್ನು ಪಾಲಿಸಿದರು. ಇಲ್ಲಿ ಮಿಶ್ಯನೆರಿಗಳಿಂದ ಇವನು ಶಾರೀರಿಕ, ಆತ್ಮಿಕ ಪ್ರಯೋಜನಗಳನ್ನು ಹೊಂದಿದ್ದು ಮಾತ್ರವಲ್ಲ, ಕುರುಡನಾಗಿದ್ದರೂ ಕುರುಡರು ಓದುವ ಪುಸ್ತಕಗಳಿಂದ ಮೊದಲೇ ಪುಸ್ತಕವನ್ನು ಕಲಿಯ ತೊಡಗಿದನು. ಅಲ್ಲಿಂದ ಹೆಚ್ಚಿಗೆ ಕಲಿಯುವ ಬಗ್ಗೆ ಇವನು ಇಂಡೋರಿನ ಕೆನಡಿಯನ್ ಮಿಶ್ಯನ್ ಶಾಲೆಗೆ ಬಂದು ಸೇರಿದನು. ಸ್ವಾಭಾವಿಕವಾಗಿ ಕಲಿಯಬೇಕೆಂಬ ಆಶೆಯು ಇವನಿಗೆ ಇದ್ದುದರಿಂದಲೂ ಉಪಾಧ್ಯಾಯರುಗಳಿಂದ ದೊರಕಿದ ಉತ್ತೇಜನದಿಂದಲೂ ಇವನು ಕಲಿಯುವುದರಲ್ಲಿ ಅತಿ ಕಾಂಕ್ಷಿತನಾದನು. ನಂತರ ಇವನ ಭವಿಷ್ಯದ ಸಂಬಂಧ ಇವನ ರಕ್ಷಕರು ಮಾಡಿದ ಏರ್ಪಾಡಿಗೂ ಇವನಿಗೂ ವ್ಯತ್ಯಾಸ ಬಂದು ಇವನು ಅವರನ್ನು ಬಿಟ್ಟು ಲಕ್ನೋ, ಮುಂಬಾಯಿ ಕಲ್ಕತ್ತೆಗೆ ಹೋಗಿ ಮುಂದಿನ ಅಭಿವೃದ್ಧಿಯನ್ನು ಮಾಡಲು ಯತ್ನಿಸಿದನು. ಇವನ ೭ ತಿಂಗಳು ಮುಂಬಾಯಿ ಮತ್ತು ಕಲ್ಕತ್ತೆಯಲ್ಲಿಯೂ ಸುಮಾರ ೪ ತಿಂಗಳು ಲಕ್ನೋದಲ್ಲಿಯೂ ಇದ್ದನು. ಮುಂಬಾಯಿಯಲ್ಲಿ ಕುರುಡರ ೩ ಶಾಲೆಗಳು ಇರುವೆಯೆಂದೂ ಇವು ವ್ಯರ್ಥ ಶಾಲೆಗಳೆಂದೂ ಅವನು ತಿಳಿದು ಅಲ್ಲಿಂದ ಪಂಜಾಬಿಗೆ ಬಂದು ಮುನ್ಸಿಪಾಲಿಟಿಯವರ ಅನಾಥರಿಗಾಗಿ ಕಟ್ಟಿಸಿದ ಮನೆಯಲ್ಲಿ ದಿನ ಕಳೆದನು. ಆದರೆ ವ್ಯರ್ಥವಾಗಿ ಕಾಲ ಕಳೆಯದೆ ಲಾಹೋರಿನ ಸರಕಾರ ಟೆಕ್ನಿಕಲ್ ಶಾಲೆಗೆ ಸೇರುವ ಪ್ರಯತ್ನ ಮಾಡಿ ಆ ಶಾಲೆಯ ಹೆಡ್‌ಮಾಸ್ತರರಾದ ಲಾಲಾ ಮದನಗೋಪಾಲ ಬಿ. ಎ. ರವರ ಸ್ನೇಹವನ್ನು ಬೆಳೆಸಿದನು. ಒಂದು ವರ್ಷ ಲಾಹೋರಿನಲ್ಲಿದ್ದು ನಂತರ ದಯಾಳ ಸಿಂಘ ಹೈಸ್ಕೂಲಿಗೆ ಸೇರಿದನು. ಮ. ರಾ. ಲಾಲಾ ಮದನಗೋಪಾಲರ ಶಿಫಾರಸು ಪತ್ರದ ಸಹಾಯದಿಂದ ಇವನು ಕೆಲವು ರೂಪಾಯಿಗಳನ್ನು ಕೂಡಿಸಿ ಆ ರೂಪಾಯಿಂದ ಕುರುಡರು ಕಲಿಯುವ ಪುಸ್ತಕಗಳನ್ನೂ ಇತರ ಉಪಕರಣಗಳನ್ನೂ ಇಂಗ್ಲಾಂಡಿನಿಂದ ತರಿಸಿಕೊಂಡನು. ಜೊಮಿಟ್ರಿ, ಅಲ್ಜಿಬ್ರ, ಪುಸ್ತಕಗಳೂ ಸ್ಲೇಟು ಮೊದಲಾದವುಗಳೂ ಕುರುಡರ ಬಗ್ಗೆ ಲಂಡನಿನಲ್ಲಿ ಸ್ಥಾಪಿಸೋಣಾದ ಬ್ರಿಟಿಷ ಎಂಡ್ ಫೋರೈನ್ ಸೊಸೈಟಿಯಿಂದ ಇವನಿಗೆ ಸಿಕ್ಕಿದವು. ಅನಂತರ ಲಾಹೋರು ಡಿಸ್ಟ್ರಿಕ್ಟ್ ಬೋರ್ಡಿನಿಂದ ತಿಂಗಳಿಗೆ ೧೦ ರೂಪಾಯಿಯ ವೇತನವೂ ದೊರಕಿತು. ಇದರಿಂದ ಇವನು ಮುನ್ಸಿಪಲ್ ಬಡವರ ಮನೆಯನ್ನು ಬಿಟ್ಟು ದಯಾಳ ಸಿಂಘ ಹೈಸ್ಕೂಲಿನ ಬೋರ್ಡಿಂಗ್ ಹೌಸಿಗೆ ಬಂದು ಸೇರಿದನು. ಸೆಕೆಂಡು ತರಗತಿಯ ಎಲ್ಲಾ ಪಾಠಗಳನ್ನು ಇವನೇ ಕಲಿಯಬೇಕಾದುದರಿಂದ ಇವನಿಗೆ ಅದು ಪ್ರಥಮದಲ್ಲಿ ಬಹು ಕಷ್ಟವಾದರೂ ೩ ವರ್ಷಗಳೊಳಗೆ ಎಲ್ಲಾ ಪಾಠಗಳನ್ನು ಅಭ್ಯಾಸಿಸಿ ಕಳೆದ ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಪಾಸಾದನು.

ಮುಂಬಾಯಿ ಸಂಸ್ಥಾನದಲ್ಲಿ ಮಿಸ್ ಭಾನುಮತಿ ರತ್ನಾಲಾಲ್ ಎಂಬವರು ಈ ವರ್ಷದ ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ೫ನೇ ಸ್ಥಾನದಲ್ಲಿ ತೇರ್ಗಡೆ ಹೊಂದಿರುತ್ತಾರೆ. ಮುಂಬಾಯಿ ಸಂಸ್ಥಾನದ ಹುಡುಗಿಯರಲ್ಲಿ ಇಂಥಾ ಮೇಲ್ಪದರಗತಿಯನ್ನು ಪಡೆದವರಲ್ಲಿ ಇವಳೇ ಪ್ರಥಮಳು ಎಂದು 'ಮುಂಬಾಯಿ ಕ್ರೊನಿಕಲ್' ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಜೂನ್ ತಾ ೫ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೬,೧೮೯ ಮಂದಿಗೆ ಪ್ಲೇಗುಬೇನೆಯು ಸೋಂಕಿ ೫,೩೭೫ ಮರಣಗಳಾಗಿರುವವು. ಈ ಪೈಕಿ ಮುಂಬಾಯಿಯಲ್ಲಿ ೨೧೫, ಮದ್ರಾಸಿನಲ್ಲಿ ೧, ಬಂಗಾಳದಲ್ಲಿ ೩, ಬಿಹಾರ್ ಮತ್ತು ಒರಿಸ್ಸ ೩೩, ಸಂಯುಕ್ತ ಸಂಸ್ಥಾನ ೮೮ ಪಂಜಾಬ ೪೮೯೩ ಬರ್ಮ ೧೩೧, ಮಧ್ಯ ಸಂಸ್ಥಾನ ೩ ಮರಣಗಳಾಗಿರುವವು.

ಸಿಂಗಾಪುರದಲ್ಲಿ ರಾಜದ್ರೋಹಮಾಡಿದ್ದನಾಗಿ ಆಪಾದಿಸಲ್ಪಟ್ಟು ಫಾಶಿ ಶಿಕ್ಷೆಯ ತೀರ್ಮಾನವನ್ನು ಹೊಂದಿದ ಕೆ ಇಸ್ಮೈಲ್ ಮಾನ್ಸೂರು ಎಂಬವನನ್ನು ಕಳೆದ ವಾರ ಫಾಶಿಗೆ ಹಾಕಿದರು. ಫಾಶಿಗೆ ಹಾಕುವ ಮೊದಲು ಆಪಾದಿತನು ಸತ್ಯ ಸ್ಥಿತಿಯನ್ನು ಅರಿಕೆ ಮಾಡಿದ್ದರಿಂದ ಇತರ ಗುಟ್ಟು ಹೊರಬಿತ್ತು. ಆಪಾದಿತನು ಬಹಳ ಐಶ್ವರ್ಯವಂತನಾಗಿದ್ದುದರಿಂದ ಶತ್ರುಗಳಿಂದ ಸಹಾಯವನ್ನು ದೊರಕಿಸಿಕೊಳ್ಳಲು ತಾನು ಶಕ್ತನೆಂಬ ನಂಬಿಕೆಯನ್ನು ತಳೆಗೊಡ ಜನರಲ್ಲಿ ಹುಟ್ಟಿಸಿದೆನೆಂದು ಅವನು ಹೇಳಿದನು. ರಂಗೂನಿನಲ್ಲಿರುವ ತನ್ನ ಮಗನಿಗೆ ಪತ್ರ ಬರೆದು ಕೆಲವು ವ್ಯಕ್ತಿಗಳ ಸಹಾಯದಿಂದ ಶತ್ರುಗಳ ಎರಡು ಹಡಗವನ್ನು ತರಿಸಲು ಯತ್ನಮಾಡಿದ್ದೆನೆಂದೂ ನಂತರ ತಾನು ಮಾಡಿದ ಕೆಲಸದ ಬಗ್ಗೆ ಪಶ್ಚಾತ್ತಾಪ ಪಟ್ಟರೂ ಕಾಲ ದಾಟಿ ಹೋಯಿತೆಂದೂ ಅರಿಕೆ ಮಾಡಿದನು.

ದೇಶರಕ್ಷಣಾವಿಧಿಗನುಸಾರವಾಗಿ ಮ. ಮಹಮ್ಮದ್ ಅಲಿಯವರಿಗೆ ಡೆಲ್ಲಿಯಲ್ಲಿ ಹೋಗಿ ಉಳಕೊಳ್ಳಬೇಕೆಂದು ಸರಕಾರದ ಅಪ್ಪಣೆಯಾಗಿತ್ತಷ್ಟೆ. ಆದರೆ ಅವರು ಬಹುಮೂತ್ರರೋಗ ಪೀಡಿತರಾಗಿರುವುದರಿಂದ ಮಸ್ಸೂರಿನಲ್ಲಿ ಉಳಕೊಳ್ಳಲು ಅಪ್ಪಣೆ ಕೊಡಬೇಕೆಂದು ಸರಕಾರದವರನ್ನು ಕೇಳಿಕೊಂಡ ಪ್ರಕಾರ ಮಹಮ್ಮದ್ ಅಲಿಯವರಿಗೆ ಮಸ್ಸೂರಿಗೆ ಹೋಗಲು ಅಪ್ಪಣೆ ದೊರಕಿರುವದು. ದೇಶರಕ್ಷಣಾವಿಧಿಗನುಸಾರವಾಗಿ ಜಮಲಪುರದ ರಹೀಂದ್ರ ಸೆನ್‌ರವರಿಗೆ ಮಿಡ್ನಾಪುರದಲ್ಲಿ ಹೋಗಿ ಉಳಕೊಳ್ಳಲು ಅಪ್ಪಣೆಯಾಗಿರುವದು.

ಬಂಗಾಳದಲ್ಲಿ ಎಪ್ರೀಲ್ ತಿಂಗಳೊಂದರಲ್ಲೇ ೧೧೫ ದಕಾಯಿತಿಗಳು ನಡೆದಿರುವವು. ಈ ಪೈಕಿ ಬಕರ್‌ಗಂಜ್ ಡಿಸ್ಟ್ರಿಕ್ಟ್ ಒಂದರಲ್ಲಿ ೪೫ ದಕಾಯಿತಿಗಳು ನಡೆದಿರುತ್ತವೆ.

ಕಲ್ಕತ್ತಾ ವಿಶ್ವವಿದ್ಯಾಲಯಕ್ಕೆ ಸರ್. ತಾರಕನಾಥ ಪಾಲಿತರವರು ೧೫ ಲಕ್ಷ ರೂಪಾಯಿಗಳ ಧರ್ಮವನ್ನು ಮಾಡಿರುವರು. ಅವರು ಮೃತರಾದ ನಂತರ ಅವರ ಮಗನಾದ ಬ್ಯಾರಿಸ್ಟರ್ ಜೆ. ಪಾಲಿತರವರು ಆ ಧರ್ಮವು ನಡೆಯಕೂಡದೆಂದು ತನ್ನ ಸಹೋದರನಾದ ಎಲ್. ಪಾಲಿತ ಐ. ಸಿ. ಎಸ್‌ರ ಮೇಲೆಯೂ ವಿಶ್ವವಿದ್ಯಾಲಯದವರ ಮೇಲೆಯೂ ದಾವೆ ತಂದಿದ್ದಾರೆ. ಇದನ್ನು ಹೈಕೋರ್ಟಿನ ಇಬ್ಬರು ನ್ಯಾಯಾಧಿಪತಿಗಳು ವಿಚಾರಿಸುತ್ತಲಿದ್ದಾರೆ.

ದಕ್ಷಿಣ ಹಿಂದೂಸ್ಥಾನ

ಮದ್ರಾಸ್ ಹೈಕೋರ್ಟ ಜಡ್ಜರಾಗಿದ್ದ ಸರ್. ಸಿ. ಶಂಕರನ್ ನಾಯರರು ವೈಸರಾಯ ಕಾರ್ಯನಿರ್ವಾಹಕ ಸಭೆಯ ಮೆಂಬರರಾಗಿ ನೇಮಿಸಲ್ಪಟ್ಟಿದ್ದರಿಂದ ಇವರ ಬದಲಿಗೆ ಮಾ। ರಾ। ಕೆ. ಶ್ರೀನಿವಾಸ ಐಯ್ಯಂಗಾರರವರು ಹೈಕೋರ್ಟ ಜಡ್ಜರಾಗಿ ನೇಮಿಸಲ್ಪಟ್ಟಿರುತ್ತಾರೆಂತ ತಿಳಿದು ಬಂದದೆ.

ಮದ್ರಾಸ್ ಸಂಸ್ಥಾನದಲ್ಲಿ ಹಬ್ಬಿರುವ ಮಲೆಜ್ವರದ ಸ್ಥಿತಿಗತಿಗಳನ್ನು ಪರಿಶೋಧಿಸುವರೆ ಸಬ್ ಅಸಿಸ್ಟಾಂಟ್ ಸರ್ಜನ್ ವಿ. ನಾರಾಯಣ ಮೆನೊನರವರು ಉದಕಮಂಡಲದಲ್ಲಿ ಹಬ್ಬಿರುವ ಅನೊಫೆಲಿಸ್ ಎಂಬ ನೊಣಿಯೇ ಇದಕ್ಕೆ ಮುಖ್ಯಕಾರಣವೆಂದು ಅಭಿಪ್ರಾಯ ಪಟ್ಟಿರುವದರಿಂದ ಇದರ ನಿರ್ನಾಮ ಮಾಡುವರೆ ತಕ್ಕ ಏರ್ಪಾಡು ಮಾಡಲ್ಪಡುವದು.

ಕೊಲೊಂಬದಲ್ಲಿ ಎದ್ದ ದಂಗೆಯು ಶಾಂತವಾಗಿರುವದು. ಕೆಲಸಗಾರರು ಮೆಲ್ಲಮೆಲ್ಲನೆ ಕೆಲಸಕ್ಕೆ ಬಂದು ಸೇರುತ್ತಿದ್ದಾರೆ.

ಮೈಸೂರು ಯುವರಾಜರವರು ಬ್ರಿಟಿಷ ರೆಸಿಡೆಂಟರನ್ನು ಕೂಡಿಕೊಂಡು ಬರುವ ತಿಂಗಳಲ್ಲಿ ವೈಸರಾಯ ಪ್ರಭುಗಳ ಭೇಟಿಗೆ ಸಿಮ್ಲಕ್ಕೆ ಹೋಗುವರೆಂದು ತಿಳಿದು ಬರುತ್ತದೆ.

ತಿರುವಂಕೋಡಿಗೆ ಸೇರಿದ ಚೆಂಗನ್ನೂರು ಎಂಬಲ್ಲಿಯು ಒಂದು ಮನೆಯಲ್ಲಿ ತಾಯಿ, ಒಬ್ಬ ಮಗಳು, ಇಬ್ಬರು ಗಂಡು ಮಕ್ಕಳು ವಾಸವಾಗಿರುವರು. ಇದೇ ಎಪ್ರಿಲ್ ತಾ ೨೫ರಿಂದ ಈ ಮನೆಯಲ್ಲಿ ಆ ಹುಡುಗಿಯು ಇದ್ದ ಕಾಲವೆಲ್ಲಾ ಮನೆಯ ಮೇಲೆ ದೊಡ್ಡ ದೊಡ್ಡ ಕಲ್ಲುಗಳು ಬೀಳುತ್ತಲಿವೆ. ಸೂರ್ಯ ಮುಳುಗಿ ೩ ತಾಸುಗಳ ವರೆಗೆ ಈ ಕಲ್ಲುಗಳು ಎಡೆಬಿಡದೆ ಬೀಳುತ್ತವೆ. ಹುಡುಗಿಯು ಮನೆಯ ಹೊರಗೆ ಹೋದರೆ ಕಲ್ಲು ಬೀಳುವುದು ನಿಲ್ಲುತ್ತೆ. ತಿರುವಂಕೋಡಿನ ಎಲ್ಲಾ ಪ್ರಾಂತ್ಯದ ಜನರು ಈ ವಿಚಿತ್ರವನ್ನು ನೋಡಲು ಹೋಗುತ್ತಿದ್ದಾರೆ. ಈ ಕೃತ್ಯವು ಮನುಷ್ಯರಿಂದ ನಡೆಯುತ್ತದೆ ಎಂಬದಕ್ಕೆ ಆಧಾರವಿರದು. ಕಲ್ಲುಟ್ಟಿ ಎಂಬ ದೈವದಿಂದ ಈ ಕೃತ್ಯವು ನಡಿಸಲ್ಪಡುತ್ತದೆಂತ ಜನರ ನಂಬಿಕೆ.

ದಕ್ಷಿಣ ಕನ್ನಡ.

ಸಹಕಾರ.

ಸರ್ಕಿಲಾರು ನಂಬ್ರು ೧೦

ಪ್ರಾವಿಡೆಂಟ್ ಫಂಡ್ ರೇವಣಾತಿಗಳು

ಪ್ರಾವಿಡೆಂಟ್ ಫಂಡ್ ರೇವಣಾತಿಗಳೆಂದರೆ ಏನೆಂದು ಎಲ್ಲಾ ಸಂಘದವರಿಗೂ ಗೊತ್ತಿರಬಹುದು. ಕೆಲವು ಸಂಘಗಳನ್ನು ರಿಜಿಸ್ತ್ರಿ ಮಾಡುವಾಗಲೇ ಅವುಗಳ ಉಪನಿಬಂಧನೆಗಳಲ್ಲಿ ಈ ರೇವಣಾತಿಗಳ ಕ್ರಮವನ್ನು ಏರ್ಪಡಿಸೋಣಾಗಿತ್ತು. ಬೇರೆ ಕೆಲವು ಸಂಘಗಳಲ್ಲಿ ಕೆಲಸವನ್ನು ಪ್ರಾರಂಭಿಸಿದ ಕೆಲವು ಕಾಲದ ನಂತರ ಈ ಕ್ರಮವನ್ನು ಮಾಡಿತ್ತು. ಕಳೆದ ಈಸ್ಟರ್ ರಜೆಯಲ್ಲಿ ಮಂಗಳೂರಲ್ಲಿ ಜರಗಿದ ಪರಿಷದದಲ್ಲಿ ಪ್ರತಿಯೊಂದು ಸಂಘದಲ್ಲಿಯೂ ಆ ಕ್ರಮವನ್ನು ಏರ್ಪಡಿಸಿ ಜ್ಯಾರಿ ನಡೆಯಿಸಬೇಕಾಗಿ ನಿಶ್ಚಯಿಸಿತ್ತು. ಆದುದರಿಂದ ಹಲವು ಸಂಘಗಳಲ್ಲಿ ಆ ಪರಿಷದದನಂತರ ಆ ಕ್ರಮವನ್ನು ಮಾಡೋಣಾಗಿಯದೆ. ಇದುವರೇಗೆ ಆ ಕ್ರಮವನ್ನಿಡದ ಸಂಘಗಳಲ್ಲಿಯೂ ಇನ್ನು ಮುಂದಾದರೂ ಅದನ್ನು ಏರ್ಪಡಿಸುವರೆ ಆದಷ್ಟು ಬೇಗ ವಿಲೆವಾರಿ ಮಾಡಬೇಕು. ಒಟ್ಟಾರೆಯ ಮೇಲೆ ಪ್ರಾವಿಡೆಂಟ್ ಫಂಡ್ ರೇವಣಾತಿಗಳ ಕ್ರಮವು ಪ್ರತಿಯೊಂದು ಸಂಘದಲ್ಲಿಯೂ ಇದ್ದು ಜ್ಯಾರಿ ನಡೆಯಿಸಲ್ಪಡತಕ್ಕದ್ದೆಂದು ಸಹಕಾರದಲ್ಲಿ ಆಸಕ್ತರಾಗಿರುವವರ ಅಭಿಪ್ರಾಯವಾಗಿರುತ್ತದೆ.

ಅಂತಹ ರೇವಣಾತಿಗಳಿಂದ ಸಂಘಗಳಿಗೂ ಸಂಘಗಳ ಮೆಂಬರರಿಗೂ ಅನೇಕ ಪ್ರಯೋಜನಗಳಿವೆ. ಸಂಘಗಳು ನಡೆಯಿಸಬೇಕಾದ ಲೇವಾದೇವಿಗಳಿಗೆ ವರ್ಷಂಪ್ರತಿ ಮೆಂಬರರ ಹಣವೇ ದೊರೆತಂತಾಗುವುದು. ಕಾಲವು ಕಳೆಯುವ ಹಾಗೆಲ್ಲಾ ಮೆಂಬರರ ಹಣದ ಈ ನಿಧಿಯೇ ಹೆಚ್ಚುಹೆಚ್ಚಾಗಿ ಕೊನೆಗೆ ಯಾರ ಆಶ್ರಯವನ್ನು ಬೇಡದೆ ಸಂಘಗಳಿಗೆ ತಂತಮ್ಮ ಅನುಪತ್ಯಗಳನ್ನು ಈ ನಿಧಿಯಿಂದಲೇ ಸುಧಾರಿಸಿಕೊಳ್ಳುವ ಸಾಮರ್ಥ್ಯವು ಬರುತ್ತದೆ. ಅದಲ್ಲದೆ ಸಂಘದಿಂದ ಮೆಂಬರರಿಗೆ ಕೊಡೋಣಾದ ಸಾಲಗಳಿಗೆ ಜವಾಬುದಾರಿಯಾಗುವಂತಹ ಪ್ರತಿಯೊಬ್ಬ ಮೆಂಬರನ ಹಣವು ಸಹ ಸಂಘದ ವಶದಲ್ಲಿರುವುದಕ್ಕೆ ಆಸ್ಪದವಾಗುತ್ತದೆ. ಮೆಂಬರರಿಗೆ ಸಹ ಸಂಘಕ್ಕೆ ಕೂಡಿದ ಕಾರಣದಿಂದ ಆಗತ್ಯವಿದ್ದಾಗ ಸಾಲ ಸಿಕ್ಕುವುದರ ಹೊರತು ವರ್ಷಂಪ್ರತಿ ಕಡ್ಡಾಯವಾಗಿ ಸ್ವಲ್ಪಸ್ವಲ್ಪ ಹಣವನ್ನು ಉಳಿಸಿಕೊಳ್ಳುವುದಕ್ಕೆ ಮಾರ್ಗವಾಗಿ ಕ್ರಮೇಣ ಅದು ಒಂದು ಬಗೆಯ ಆವರ್ಧನವಾಗಿ ಪರಿಣಮಿಸುವುದು.

ಪ್ರಾವಿಡೆಂಟ್ ಫಂಡ್ ರೇವಣಾತಿಗಳು ಪ್ರತಿವರ್ಷವೂ ಜೂನು ೩೦ನೇ ತಾರೀಕಿನೊಳಗೆ ಪಾವತಿಯಾಗತಕ್ಕದ್ದು. ಆ ತಾರೀಕಿನೊಳಗೆ ಪಾವತಿಯಾಗದ ಹಣಕ್ಕೆ ತಿಂಗಳು ಒಂದರ ರೂಪಾಯಿ ಒಂದಕ್ಕೆ ೨ ಪೈಯಂತೆ ದಂಡನೆಯನ್ನು ಕೊಡತಕ್ಕದ್ದು. ಮತ್ತು ಆ ರೀತಿ ದಂಡನೆ ಸಮೇತ ಅದನ್ನು ವಸೂಲು ಕೊಡದೆ ಮೆಂಬರರನ್ನು ಮೆಂಬರಿಕೆಯ ಯಾವ ತರದ ಅಧಿಕಾರವನ್ನು ಚಲಾಯಿಸಲು ಬಿಡಕೂಡದು. ಇದರ ಅರ್ಥವನ್ನು ಚೆನ್ನಾಗಿ ಗ್ರಹಿಸಬೇಕು. ಅಂಥವರ ಸಾಲದ ಯಾ ಬೇರೆ ಯಾವ ತರದ ಅರ್ಜಿಗಳನ್ನಾಗಲೀ ಇತರರ ಅರ್ಜಿಗಳಿಗೆ ಅಂಥವರ ಜಾಮೀನನ್ನಾಗಲೀ ಅಂಗೀಕರಿಸಲೇ ಕೂಡದು. ಸಂಘದ ಸಭೆಗಳಲ್ಲಿ ಸಹ ಯಾವ ಅಭಿಪ್ರಾಯವನ್ನು ಸೂಚಿಸುವುದಕ್ಕೂ ಯಾವ ವಿಷಯದಲ್ಲಿ ವೋಟು ಕೊಡುವುದಕ್ಕೂ ಅವರಿಗೆ ಅಧಿಕಾರವಿಲ್ಲ. ಅವರನ್ನು ಇದ್ದರೂ ಇಲ್ಲದಂತೆಯೇ ನಡೆಯಿಸಬೇಕು.

ಚಾಲ್ತಿ ವರ್ಷವು ಇದೇ ತಿಂಗಳ ೩೦ನೇ ತಾರೀಕಿಗೆ ಅಂತ್ಯವಾಗುವುದು. ಪ್ರಾವಿಡೆಂಟ್ ಫಂಡ್ ರೇವಣಾತಿಗಳ ಕ್ರಮವಿರುವ ಎಲ್ಲಾ ಸಂಘಗಳೂ ಈ ವಿಷಯಗಳನ್ನು ನೆನಪಿನಲ್ಲಿಟ್ಟುಕೊಂಡು ಅವುಗಳನ್ನೆಲ್ಲಾ ಕಂಠೋಕ್ತವಾಗಿ ಜ್ಯಾರಿ ನಡೆಯಿಸಬೇಕಾಗಿರುತ್ತದೆ.

ದಕ್ಷಿಣಕನ್ನಡಾ ಸೆಂಟ್ರಲ್ ಕೊಆಪರೇಟಿವ್ ಬೇಂಕ್ ಲಿಮಿಟೆಡ್ ಪುತ್ತೂರು ತಾ 13–6–15	ಎಮ್ ಅನಂತರಾವ್, ಕಾರ್ಯದರ್ಶಿ

ಉಡುಪಿ:—ವಿಪರೀತ ಶಿಖಿ. ಇಷ್ಟರಲ್ಲಿ ಸಾಗುವಳಿಯ ಕೆಲಸವು ಅರ್ಧಾಂಶ ತೀರುವದಿತ್ತು. ಮಳೆ ಬಾರದ ದೆಶೆಯಿಂದ ಆರಂಭವೇ ಇಲ್ಲ. ಬೆಲ್ಲ ಮತ್ತು ದವಸಗಳ ಧಾರಣೆಯು ಚಡಾವಾಗಿಯೇ ಇರುವದು. ಮಳೆಯ ಚಿನ್ಹೆ ಈಗ ಕಾಣಿಸುತ್ತಿರುವದು.

ವೃದ್ಧರಾಗಿದ್ದ ಶ್ರೀ ವ್ಯಾಸರಾಯ ಮಠದ ಸ್ವಾಮಿಗಳವರು ಕೆಲವು ಸಮಯದಿಂದ ಅಸ್ವಸ್ಥದಲ್ಲಿದ್ದರು. ಅವರು ಇದೇ ತಾ ೬ನೇ ಬಾನುವಾರ ದಿವಸ ತಮ್ಮ ಸೊಸಲೆ ಮಠದಲ್ಲಿ ಕಾಲವಾದರಂತೆ. ಇವರು ವಿದ್ವಾಂಸರಾಗಿದ್ದರು. ಇವರ ನಿರ್ಯಾಣದಿಂದ ಇವರ ಪಾಂಡಿತ್ಯವನ್ನು ತಿಳಿದ ಪಂಡಿತವರ್ಗದವರಿಗೆ ವ್ಯಸನವಾಗದೆ ಇರಲಾರದು. ಇವರು ಕಳೆದ ಮಾಘದಲ್ಲಿ ತಮ್ಮ ಉತ್ತರಾದಿಕಾರಕ್ಕೆ ಒಬ್ಬರಿಗೆ ಆಶ್ರಮಕೊಟ್ಟಿರುವರಂತೆ.

ಶ್ರೀ ಉತ್ತರಾದಿ ಮಠದ ಸ್ವಾಮಿಗಳವರು ಈಗ ಮೈಸೂರು ಪ್ರಾಂತ್ಯದಲ್ಲಿ ಸಂಚರಿಸುತ್ತಿರುವರು. ಚಾತುರ್ಮಾಸ ಸಂಕಲ್ಪಕ್ಕೆ ಸರಿಯಾಗಿ ಬೆಂಗಳೂರಿಗೆ ದಯಮಾಡಿ ಅಲ್ಲಿ ಆಧುನಿಕ ಪರಿಷ್ಕಾರಕ್ಕೆ ಸರಿಯಾಗಿ ಒಂದು ದ್ವೈತ ಮಹಾ ಪಾಠಶಾಲೆಯನ್ನು ಸ್ಥಾಪಿಸುವ ಏರ್ಪಾಡು ನಡಿಯುತ್ತಿರುವದಾಗಿ ವದಂತಿ ಇರುವದು. ಇದು ಬಹು ಸಂತೋಷ ಕಾರ್ಯ. ಕಾಲೇಜು ಆಗುವದು ಅತ್ಯಾವಶ್ಯಕ, ಸರ್ವರೂ ಸಹಾಯ ಮಾಡತಕ್ಕದ್ದು.

ಇಲ್ಲಿ ಶ್ರೀ ಕೃಷ್ಣಮಠಕ್ಕೆ ಸೇರಿದ ಭೋಜನಶಾಲೆಯು ಒತಳ ಶಿಥಿಲವಾಗಿದ್ದು ಅದನ್ನು ಬೇಗನೇ ಕಟ್ಟಿಸಬೇಕೆಂತ ಸರಕಾರದವರು ಕೂಡ ಆಗ್ಯಾಗ್ಯೆ ಮಠಾಧಿಕಾರಿಗಳನ್ನು ಎಚ್ಚರಿಸುತ್ತಾ ಇದ್ದರು. ಯಾರಿಗೂ ಧೈರ್ಯ ಸಾಲಲಿಲ್ಲ. ಈಗಿನ ಪರ್ಯಾಯ ಶ್ರೀ ಶೀರೂರು ಶ್ರೀ ಪಾದಂಗಳವರು ಅದನ್ನು ಬಿಚ್ಚಿಸಿ ಜಲಾಂತಶೋಧನೆ ಮಾಡಿಸಿ, ಮೊದಲಿನದಕ್ಕಿಂತ ಎರಡರಷ್ಟು ದೊಡ್ಡದಾಗಿಯೂ ಶಿಲಾಮಯವಾಗಿಯೂ ಗಟ್ಟಿಮುಟ್ಟಾಗಿಯೂ ಪರಿಷ್ಕಾರವಾಗಿಯೂ ಕಟ್ಟಿಸುತ್ತಿರುವರು. ಕೆಲಸವು ಸುಮಾರು ಮುಕ್ಕಾಲಂಶ ಮುಗಿಯಿತು. ಸುಮಾರು ೩೦—೪೦ ಸಹಸ್ರ ರೂಪಾಯಿ ತಗಲುವದೆಂತ ಅಂದಾಜು ಮಾಡುತ್ತಾರೆ. ಆದರೂ ಒಬ್ಬರಿಂದಲೂ ಯಾವದೊಂದು ವಿದದ ಸಹಾಯವನ್ನೂ ಅಪೇಕ್ಷಿಸದೆ ತಮ್ಮ ಸ್ವಂತ ಹಣವನ್ನೇ ವೆಚ್ಚಮಾಡಿ ಕಟ್ಟಿಸುತ್ತಿರುವರು. ಹೀಗಿದ್ದಾಗ್ಯೂ ಯಾರೋ ಕೆಲವರು ದೇವಕೋಟೆ, ಮಧುರೆ, ತಿರುಚಿನಾಪಳ್ಳಿ, ಆರ್ಕಾಡು, ಬಳ್ಳಾರಿ ಮೊದಲಾದ ಪ್ರಾಂತ್ಯಗಳಲ್ಲಿ ಈ ಭೋಜನ ಶಾಲೆ ಕಟ್ಟಿಸದದ ಬಗ್ಯೆ ಪಂತಿಗೆ ವಸೂಲು ಮಾಡುತ್ತಿರುವರಂತೆ! ಸ್ವಾರ್ಥತೆಯುಳ್ಳ ಜನರನ್ನು ವಂಚಿಸುವುದಕ್ಕೆ ಭಯವೂ ನಾಚಿಕೆಯೂ ಇಲ್ಲದೆ ಇರುವದು ಆಶ್ಚರ್ಯವೇ ಸರಿ. ಇಂಥವರನ್ನು ನ್ಯಾಯಕ್ಕೆ ಗುರಿಪಡಿಸುವದು ಅತ್ಯಾವಶ್ಯಕ.

ವಿಟ್ಲ:—ಇಲ್ಲಿ ಹುಡುಗಿಯರ ಶಾಲೆಯು ಪ್ರಾರಂಭವಾಗಿ ಸುಮಾರು ೨ ವರುಷಗಳಾದವು. ಈ ವರೆಗೆ ಟ್ರೈನಿಂಗ್ ಉಪಾಧ್ಯಾಯನಿಯರ ನೇಮಕವಾಗದೆ ಇದ್ದದ್ದು ನೋಡುವಾಗ್ಯೆ ಅಷ್ಟೊಂದು ಹೆಚ್ಚಿನ ಪ್ರಯೋಜನವು ಹುಡುಗಿಯರಿಗೆ ಸಿಕ್ಕುವದಿಲ್ಲವೊ ಎಂದು ಭಾವಿಸಬೇಕಾಗಿರುತ್ತದೆ. ಆದ್ದರಿಂದ ಇನ್ನಾದರೂ ಟ್ರೈನಿಂಗ್ ಉಪಾಧ್ಯಾಯನಿಯರನ್ನು ನೇಮಿಸುವ ಆಲೋಚನೆಯನ್ನು ಮೇಲಾಫೀಸರರು ಮಾಡುತ್ತಿದ್ದರೆ ಮುಂದಾದರೂ ಹುಡುಗಿಯರಿಗೆ ಹೆಚ್ಚಿನ ಪ್ರಯೋಜನ ಸಿಕ್ಕದೆ ಇರಲಾರದೆಂದು ನಂಬುತ್ತೇವೆ.

ಇಲ್ಲಿಯ ಸಹಾಯಕ ಸಂಘದ ತುಂಬಾ ಸಾಲಗಳು ವಾಯಿದೆಗೆ ಪಾವತಿಯಾಗದೆ ಇರುವದರಿಂದ ಇನ್ನು ಮುಂದಾದರೂ ಅಂಥಾ ಮೆಂಬರರು ಈ ತಿಂಗಳ ಅಂತ್ಯದೊಳಗೆ ಪಾವತಿ ಮಾಡಿ ಈ ನಮ್ಮ ಸಂಘಕ್ಕೆ ಬರುವ ಕುಂದಕಗಳು ನಿವಾರಣೆಯಾಗುವಂತೆ ನೋಡುವದು ನಮಗೆ ಮರ್ಯಾದೆಯಲ್ಲವೇ.

ಕಾಪು:—ನಮ್ಮ ಊರಲ್ಲಿ ಒಂದು ಪರಸ್ಪರ ಸಹಾಯಕ ಸಂಘವನ್ನು ಸ್ಥಾಪಿಸಬೇಕೆಂಬದಾಗಿ ಸಂಘದ ಜಿಲ್ಲಾ ಇನ್ಸ್‌ಪೆಕ್ಟರರಾದ ಮ ರಾ ಗಿರಿಯಪ್ಪನವರು ಕಳೆದ ವಾರ ಇಲ್ಲಿಗೆ ಚಿತ್ತೈಸಿ ಊರ ಪ್ರಮುಖರ ಒಂದು ಸಭೆಯನ್ನು ಮಾಡಿ ಸಂಘದ ಪ್ರಯೋಜನ ಮುಂತಾದ ಸರ್ವ ಮಾಹಿತಿಯನ್ನು ಸುಮಾರು ೨ ತಾಸುಗಳ ತನಕ ನೆರೆದ ಸಭಿಕರಿಗೆ ತಿಳಿಯುವಂತೆ ಸರಳವಾಗಿ ಭಾಷಣವನ್ನು ಕೊಟ್ಟರು. ಊರ ಪ್ರಮುಖರಲ್ಲದೆ ಸಭೆಗೆ ಉಡುಪಿ ರೇಂಜು ಸರ್ಕಲ್‌ಗಳ ಸ ಅ ಇನ್ಸಪೆಕ್ಟರರಾದ ರಾ| ಉಳ್ಳಾಲ ಮಂಗೇಶರಾಯರು ಶಾಲಾ ಉಪಾಧ್ಯಾಯರಿಂದೊಡಗೂಡಿ ಚಿತ್ತೈಸಿದರು. ಇಂಥಾ ಸಂಘದ ಏರ್ಪಾಡಿನಿಂದ ಬಡ ಜನರಿಗೆ ಹೆಚ್ಚಿನ ಉಪಕಾರವಾದಂತಾಗುವದು, ಜನರಲ್ಲಿರುವ ಮತ್ಸರ, ಪರನಿಂದನೆ ಮುಂತಾದ ದುರ್ವಿಷಯಗಳೆಲ್ಲಾ ಕಳಚಿಬಿಡುವಂತಾಗುವದು. ಅಲ್ಲಂತಾಗಿ ಕೆಲವು ವಿಷಯಗಳನ್ನು ಸಭಿಕರಿಗೆ ತಿಳಿಸಿದರಲ್ಲದೆ ಸಂಘದ ವಿಷಯ ಹೆಚ್ಚಿನ ಮಾಹಿತಿ ತಿಳಕೊಳ್ಳಬೇಕೆಂದು ಅಪೇಕ್ಷೆವುಳ್ಳವರು ಸ್ವದೇಶಾಭಿಮಾನಿ ಪತ್ರಿಕೆಯನ್ನು ತರಿಸಿ ಓದುವದು ಉತ್ತಮ ಎಂದು ಜನರಿಗೆ ಬೋಧಿಸುವವರಾದರು. ಸಭೆಯು ಕಸಬಾ ಪಟೇಲರಾದ ರಾ| ಶ್ರೀಧರ ಶ್ಯಾನುಭಾಗರ ಮನೆಯ ಚಾವಡಿಯಲ್ಲಿ ನೆರೆದಿತ್ತು. ಅಂತ್ಯದಲ್ಲಿ ಊರ ಪ್ರಮುಖರು ಈ ಊರಲ್ಲಿ ಇಂಥ ಸಂಘವು ಸ್ಥಾಪಿಸಲೇ ಬೇಕೆಂದು ಹೇಳಿದಲ್ಲಿ ರಾ| ಗಿರಿಯಪ್ಪನವರು ನೆರೆದು ಬಂದ ಎಲ್ಲಾ ಜನರ ದಸ್ಕತು ತೆಗೆದುಕೊಂಡು ಸಂಘ ಸ್ಥಾಪಿಸುವ ಏರ್ಪಾಡು ಮಾಡುವಂತೆ ನೋಡುವೆನು ಎಂದು ಹೇಳಿ ಈ ವಿಷಯ ಇನ್ನೊಂದು ಸಭೆ ಸದ್ಯಾ ಕೂಡುವ ತಾರೀಕನ್ನು ಹಿಂದಿನಿಂದ ಸೂಚಿಸಿದಲ್ಲಿ ಎಲ್ಲರೂ ಬರಬೇಕೆಂತ ಸೂಚಿಸಿ ಮಂಗಳೂರತ್ತಕಡೆ ಆ ದಿನವೇ ಇನ್ಸಪೆಕ್ಟರರು ತೆರಳುವವರಾದರು. ಈ ರೀತಿ ಊರಿಗೆ ಬಂದು ಸಂಘ ಸ್ಥಾಪನೆಗೆ ಉತ್ತೇಜನ ಕೊಟ್ಟ ಮ. ರಾ ಗಿರಿಯಪ್ಪನವರನ್ನು ಊರ ಜನರು ತುಂಬಾ ಶ್ಲಾಘಿಸುವರು.

ಮಂಗಳೂರ್.

ಮಂಗಳಾದೇವಿ ರಸ್ತೆಯ ರೈಲ್ವೆ ಗೇಟಿನ ಬಳಿ ತಾ. ೧೩ನೇ ರಾತ್ರಿ ನಡೆದ ಒಂದು ಅವಗಡದ ವೃತ್ತಾಂತವು ಈ ರೀತಿಯಾಗಿರುವದು—ಮಂಗಳದೇವಿ ರಸ್ತೆಯ ರೈಲ್ವೆ ಗೇಟನ್ನು ದಾಟಿ ಹೋಗುವಾಗ ಎರಡು ಪಕ್ಕಗಳಲ್ಲಿಯೂ ಸುಮಾರು ೧॥ ಆಳ ತಗ್ಗಿಗೆ ಗದ್ದೆಗಳಿರುವವು. ಈ ದಾರಿಯ ಕೆಲವು ಕಡೆಗಳ ಪಕ್ಕಗಳಲ್ಲಿ ಗೋಡೆಗಳಿಲ್ಲ. ತಾ. ೧೩ನೇ ರಾತ್ರಿ ಒಬ್ಬ ಜಟ್ಕಾ ಡ್ರೈವರನು ಕೈಯಲ್ಲಿ ಗಾಡಿ

ಲಾಂದರು ಹಿಡಕೊಂಡು ಜಟ್ಕಾವನ್ನು ನಡಿಸಿಕೊಂಡು ಹೋಗುತ್ತಿದ್ದನು. ಅದೇ ದಾರಿಯಲ್ಲಿ ಒಬ್ಬ ಮುದುಕನು ಒಂದು ಪೆಟ್ಟಿಗೆಯನ್ನು ಹೊತ್ತುಕೊಂಡು ಹೋಗುತ್ತಿದ್ದನು. ಅವನ ಮಗಳು ಹಿಂದಿನಿಂದ ತಂದೆಯನ್ನು ಹಿಂಬಾಲಿಸಿಕೊಂಡು ಹೋಗುತ್ತಿದ್ದಳು. ಅಷ್ಟರಲ್ಲಿ ಜಟ್ಕವು ಬರುವದನ್ನು ಕಂಡು ತಂದೆಯೂ ಮಗಳೂ ಬೀದಿಯ ಬದಿಗೆ ಸರಿದು ತಂದೆಯು ಮುಂದಕ್ಕೆ ನಡದೇ ಬಿಟ್ಟನು. ಆದರೆ ಬದಿಯಲ್ಲಿ ಆವರಣ ಇಲ್ಲದ್ದರಿಂದ ಹುಡುಗಿಯು ಕಾಲು ಜಾರಿ ಕೆಳಬಿದ್ದಳು. ತಂದೆಯು ಇದನ್ನು ನೋಡಲಿಲ್ಲ. ಜಟ್ಕಾ ಡ್ರೈವರನ ಕೈಯಲ್ಲಿ ದೀಪ ಇದ್ದದರಿಂದ ಫಕ್ಕನೇ ದೀಪ ಹಿಡದು ನೋಡಿ ಹುಡುಗಿ ಗದ್ದೆಯಲ್ಲಿ ಅರಚುತ್ತಿದ್ದದನ್ನು ಕಂಡು ಮುಂದೆ ಹೋಗಿದ್ದ ಮುದುಕನನ್ನು ಹಿಂದಕ್ಕೆ ಕರೆದು ಆ ಹುಡುಗಿಯನ್ನು ಮೇಲಕ್ಕೆ ಎತ್ತಿದರು. ಹುಡುಗಿಗೆ ವಿಶೇಷ ಜಖಂ ಆಗಿತ್ತು ಎಂತ ತಿಳಿಯುತ್ತೇವೆ ಸಂಬಂಧಪಟ್ಟ ಅಧಿಕಾರಿಗಳು ಈ ವಿಷಯ ನಿಗಾಕೊಟ್ಟು ೨ ರಸ್ತೆಗಳ ಬದಿಯಲ್ಲಿ ಆವರಣಗಳನ್ನು ಹಾಕಿಸುವ ಏರ್ಪಾಡು ಮಾಡಬೇಕಾಗಿ ಅಪೇಕ್ಷಿಸುತ್ತೇವೆ

ತಾ. ೧೪ರಲ್ಲು ಬಾಸೆಲ್ ಮಿಶ್ಯನ್ ಬುಕ್ ಶಾಪಿನ ವಠಾರದ ತೋಟದ ತೆಂಗಿನ ಕಾಯಿಗಳನ್ನು ತೆಗೆಯಲು ಮರಕ್ಕೆ ಹತ್ತಿದ್ದ ಒಬ್ಬನು ಆಕಸ್ಮಾತ್ತಾಗಿ ಕೆಳಬಿದ್ದು ಕೈಕಾಲು ಮುರಕೊಂಡಿರುವನು. ಇವನನ್ನು ಆಸ್ಪತ್ರಿಗೆ ಸಾಗಿಸಿರುತ್ತಾರೆ.

ಇಲ್ಲಿಯ ಗವರ್ನವೆಂಟ ಟ್ರೈನಿಂಗ್ ಶಾಲೆಯ ಹೈಯರ್ ಎಲಿಮೆಂಟರಿ ಶಾಲೆಯ ಮುಖ್ಯೋಪಾಧ್ಯಾಯರಾದ ಮ. ರಾ. ಎಸ್. ರಘುನಾಥರಾಯರು ಟ್ರೈನಿಂಗ್ ಶಾಲೆಯಲ್ಲಿ ಜರಗುವ ಸ್ಪೆಶ್ಯಲ್ ಕ್ಲಾಸುಗಳ ಭಾಷಣವನ್ನು ಇದೇ ಬರುವ ಜುಲೈ ತಿಂಗಳಲ್ಲಿ ಕೊಡಲು ಪ್ರಾರಂಭಿಸುವರು. ಭಾಷಣವು "ವಿದ್ಯಾಭಿವೃದ್ಧಿ" ವಿಷಯವಾಗಿರುವದೆಂದು ತಿಳಿಯುವದರಿಂದ ಮಂಗಳೂರ ರೇಂಜ ಮೂಲ ಶಾಲೆಗಳ ಉಪಾಧ್ಯಾಯರೂ ಉಪಾಧ್ಯಾಯಿನಿಯರೂ ಈ ಭಾಷಣಗಳನ್ನು ಕೇಳ ಹೋಗಿ ತಕ್ಕ ಪ್ರಯೋಜನಗಳನ್ನು ಪಡೆಯಬೇಕೆಂದು ಹಾರೈಸುವೆವು

ಮೂಡಬಿದ್ರೆಯ ಪೋಲಿಸ್ ಸಬ್ ಇನ್ಸ್‌ಪೆಕ್ಟರ್ ರಾ। ತಿಮ್ಮಪ್ಪನವರಿಗೆ ಬೈಂದೂರಿಗೂ ಬೈಂದೂರಿನ ಪೋಲಿಸ್ ಸಬ್‌ಇನ್ಸ್‌ಪೆಕ್ಟರ್ ರಾ। ಅಮಿರುದ್ದೀನರಿಗೆ ಮೂಡಬಿದ್ರೆಗೂ ವರ್ಗವಾಗಿದೆ. ಸಬ್ ಇನ್ಸ್‌ಪೆಕ್ಟರ್ ರಾ। ತಿಮ್ಮಪ್ಪನವರು ೩ ತಿಂಗಳ ರಜೆಪಡಕೊಂಡಿರುತ್ತಾರೆ.

ಇಲ್ಲಿಯ ಪೋರ್ಟ್ ಆಫೀಸಿನಲ್ಲಿ ಸುಮಾರು ೧೭ ವರ್ಷಗಳಿಂದ ಕಲಾಸಿಯಾಗಿದ್ದ ಮೊಗೇರ ತಂಕರನು ಎಂದಿನಂತೆ ತಾ. ೧೫ರಲ್ಲು ಪೋರ್ಟ್ ಆಫೀಸಿಗೆ ಕೆಲಸಕ್ಕೆ ಬಂದಿದ್ದು ಕೆಲಸಮಾಡುತ್ತಿರುವಾಗ ಹಗಲು ೧೧ ಗಂಟೆಗೆ ಅಕಸ್ಮಾತ್ತಾಗಿ ಮರಣಪಟ್ಟನು.

ಇಲ್ಲಿಯ ಗವರ್ನಮೆಂಟ ಟ್ರೈನಿಂಗ್ ಶಾಲೆಯ ಹೈಯರ್ ಎಲಿಮೆಂಟರಿ ಶಾಲೆಯ ಮುಖ್ಯೋಪಾಧ್ಯಾಯರಾದ ಮ. ರಾ. ಎಸ್. ರಘುನಾಥರಾಯರಿಗೆ ೧೦೦ ರೂಪಾಯಿಗೆ ಬಡ್ತಿ ಆಗಿರುತ್ತದೆಂದು ತಿಳಿಯುತ್ತೇವೆ.

ಜೂನು ತಿಂಗಳ ತಾ. ೬-೭ರ ಒಳಗೆ ಮಳೆಗರೆಯು ಪ್ರಾರಂಭವಾಗುವ ಈ ಪ್ರಾಂತ್ಯದಲ್ಲಿ ತಕ್ಕ ಕಾಲದಲ್ಲಿ ಮಳೆಬಾರದೆ ಇದ್ದುದರಿಂದ ಹೆಚ್ಚಿನವರು ನೀರಿನ ಕೊರತೆಯಿಂದ ಕಷ್ಟಕ್ಕೆ ಒಳಗಾದರು. ಬಿಸಲಿನ ತಾಪವು ತಡೆಯಕೂಡದ್ದಾಗಿತ್ತು. ಆದರೆ ತಾ. ೧೫ನೇ ಆತ್ರಯಿಂದ ಇಲ್ಲಿ ತಕ್ಕಷ್ಟು ಮಳೆ ಗೆರೆಯು ಪ್ರಾರಂಭವಾಗಿದೆ. ಎಪ್ರೀಲ್ ತಿಂಗಳಿಂದ ಜೂನ್ ತಾ. ೧೪ರ ವರೇಗೆ ಸರಾಸರಿ ೨೬ ಇಂಚು ೩ ಸೆಂಟ್ಸ್ ಮಳೆ ಬೀಳುವ ಮಂಗಳೂರಲ್ಲಿ ಈ ವರ್ಷ ಎಪ್ರೀಲ್ ತಿಂಗಳಿಂದ ಇದೇ ಜೂನು ತಾ ೧೪ರ ವರೆಗೆ ೪ ಇಂಚು ೩೭ ಸೆಂಟ್ಸ್‌ಗಳ ಮಳೆ ಮಾತ್ರ ಬಿದ್ದಿರುತ್ತದೆ.

ಇದೇ ತಾ ೧೫ರಲ್ಲು ಚಿತ್ರಾಪುರ ಮಠದ ಶ್ರೀಮತ್ ಪಾಂಡುರಂಗಾಶ್ರಮ ಪಾದಂಗಳವರು ಗತರಾದವೆಂಬದಾಗಿ ತಿಳಿದು ತುಂಬಾ ವಿಷಾದಿಸುತ್ತೇವೆ. ಶ್ರೀಗಳವರು ಗತವಾದ ಶೋಕಾರ್ಥವಾಗಿ ತಾ. ೧೬ನೇ ಬುಧವಾರ ದಿನ ಇಲ್ಲಿಯ ಗಣಪತಿ ಸೆಕಂಡರಿ ಶಾಲೆಗೆ ರಜೆ ಕೊಡೋಣಾಗಿತ್ತು.

~~~~~~

ಒಬ್ಬ ಮುಂಬಾಯಿ ಬಾತ್ಮಿದಾರರಿಂದ.—ಕನ್ನಡವೇ ಶ್ರೇಷ್ಠ ಭಾಷೆಯಾಗಿರುವ ನಮ್ಮ ದಕ್ಷಿಣ ಕನ್ನಡ ಜಿಲ್ಲಾ ಪ್ರಾಂತ್ಯದಿಂದ ಜೀವನಾರ್ಥಕ್ಕಾಗಿ ಈ ಪರ ಪ್ರಾಂತ್ಯಕ್ಕೆ ಬಂದವರಲ್ಲಿ ಆ ಭಾಷೆಯ ಅಭಿರುಚಿಯು ಅಡಗಿಹೋಗದಂತೆಯೂ, ವರ್ತಮಾನ ಪತ್ರಿಕಾಪ್ರೇಕ್ಷೆಯಿಂದ ಲೌಕಿಕ ವ್ಯವಹಾರಗಳು ಗ್ರಾಹ್ಯವಾಗುವಂತೆಯೂ, ವಿಶಿಷ್ಟ ವ್ಯಾಸಂಗದಿಂದ ಜ್ಞಾನ ಸ್ಥಿತಿಯು ಉಚ್ಛಗತಿಯನ್ನು ಹೊಂದುವಂತೆಯೂ, ನಿಯಮಿತ ಸ್ಥಳದಲ್ಲಿ ಆಗಿಂದಾಗ್ಗೆ ಕೂಡಿಬಂದು ಪರಸ್ಪರ ಮಾತು ಸಮಾಗಮದಿಂದಲೂ, ಉಪನ್ಯಾಸ ಸಾಧನದಿಂದಲೂ ಯೋಚನಾ ಬುದ್ಧಿ ಬಲಗಳು ವೃದ್ಧಿಗೊಳ್ಳುವುದು ಮಾತ್ರವಲ್ಲದೆ ಅವರೊಳಗೆ ಅನ್ಯೋನ್ಯ ಭಾವವು ಅಂಕುರಿಸುವಂತೆಯೂ ಒಂದು ಸಂಘವನ್ನು ಏರ್ಪಡಿಸಿ, ದೃಢಸಾಹಸದಿಂದಲೂ, ಯುಕ್ತಮಾರ್ಗದಿಂದಲೂ ಅದನ್ನು ನಡಿಸಿಕೊಂಡು ಬಂದರೆ ಅದರಿಂದ ಈ ತರದ ಪ್ರಯೋಜನಗಳಿಗೆ ಅವಕಾಶ ದೊರೆಯದಿರಲಾರದೆಂಬ ಭಾವನೆಯಿಂದ ಅದಕ್ಕೆ ತಕ್ಕ ಯತ್ನ ಮಾಡಿದ ಮ. ರಾ. ರಾ. ಕಣ್ಣಂಗಾರ ಚಂದುಪುತ್ರಣ್ಣಾಯರು ಮತ್ತು ಹೊಯಿಗೆ ಸೋಮಯ್ಯ ಮಂದಣ್ಣಾಯರು — ಇವರಿಬ್ಬರ ಪ್ರೇರೇಪಣೆಯಿಂದ "ಮುಂಬೈ ಕನ್ನಡ ಗ್ರಂಥಾಲಯ ಸಂಘ" ಎಂಬ ಸಂಘವು ಕಳದ ಎಪ್ರಿಲ್ ತಿಂಗಳ ತಾರೀಕು ೪ನೇ ಆದಿತ್ಯವಾರ ದಿನ ಮ. ರಾ. ರಾ. ಮುಲ್ಕಿ ಕೊರಗಪ್ಪನವರ ಅಧ್ಯಕ್ಷತೆಯಲ್ಲಿ ಪ್ರತಿಷ್ಠವಾಗಿ, ಸಂಘದ ವಾಚಕ ಮಂದಿರವೂ, ಪುಸ್ತಕಾಲಯವೂ ಯುಕ್ತ ಸಂಭ್ರಮದಿಂದ ತೆರೆಯಲ್ಪಟ್ಟವು. ಪ್ರಕೃತ ಈ ಸಂಘದಲ್ಲಿ ೨೫ ಮಂದಿ ಕಾಯಂ ಸದಸ್ಯರಿರುತ್ತಾರೆ. ನೀತಿಧರ್ಮ ಬೋಧಕವಾಗಿಯೂ ಮನೋಹರವಾಗಿಯೂ ಇರುವ ಅನೇಕ ಕನ್ನಡ ಕಾವ್ಯಕಾದಂಬರಿಗಳನ್ನೂ, ವರ್ತಮಾನ ಪತ್ರಿಕೆಗಳನ್ನೂ ತರಿಸಿರುತ್ತಾರೆ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸತಕ್ಕ ಸಾಧನಗಳು ಸಂಘದ ಕಾರ್ಯನಿರ್ವಾಹಕ ಸಭೆಯವರ ಗಮನದಲ್ಲಿವೆ ಈ ಸಂಘದ ಪ್ರಸ್ತಾಪವು ಪ್ರಥಮ ತಲೆದೋರಿದಾಗ ಅದನ್ನು ಆದರಿಸುವರೆ ಇಲ್ಲಿರುವ ನಮ್ಮ ಪಾರ್ಶ್ವದ ಆಪ್ತಬಂಧುಗಳಲ್ಲಿ ಅನೇಕರು ವಾಗ್ದತ್ತವಿತ್ತರೂ, ಕಾರ್ಯವು ರೂಪುಗೊಳ್ಳುತ್ತಾ ಬಂದ ಹಾಗೆ ಅವರಲ್ಲಿ ಹಲವರು ಅದನ್ನು ಕಾರಣವಿಲ್ಲದೆ ಕೈ ಬಿಟ್ಟು ಹಾಕಿದ್ದು ವಿಷಾದಕರವೇ ಸರಿ. ಆದರೂ ಉಳಿದವರು ಅಂಥವರ ಉಪೇಕ್ಷೆಯಿಂದ ಧೈರ್ಯಗುಂದದೆ, ತಮ್ಮ ಉದ್ದೇಶವನ್ನು ನೆರವೇರಿಸಿದ ಸ್ಥೈರ್ಯವು ಸ್ತುತ್ಯವಾಗಿದೆ. ಈ ಶ್ಲಾಘನೆಯ ಅಧಿಕಾಂಶವು ತನ್ನ ತನುಮನವನ್ನು ಸಂಘದ ಕಾರ್ಯದಲ್ಲಿಯೇ ಆರಂಭದಿಂದಲೂ ಅರ್ಪಿಸಿಕೊಂಡು ಬಂದು ಇದರ ಪ್ರೇರೇಪಕರಲ್ಲಿಯೂ, ಕಾರ್ಯದರ್ಶಿಗಳಲ್ಲಿಯೂ ಒಬ್ಬರಾದ ಮ ರಾ. ರಾ. ಚಂದುಪುತ್ರಣ್ಣಾಯರಿಗೆ ಸಲ್ಲತಕ್ಕದ್ದು ಮುಖ್ಯತಃ ಈ ಸಂಘದ ಪ್ರಾಣ ಕಲಾಭಾಗವೇ ಅವರಾಗಿರುವರೆಂದರೆ ಅತಿಶಯೋಕ್ತಿಯಾಗಲಾರದು. ಮುಂಬಾಯಿಯಲ್ಲಿರುವ ಅನ್ಯಭಾಷಾವಲಂಬಿಗಳೂ ಈ ಕಾರ್ಯದ ಯೋಗ್ಯತೆಯನ್ನರಿತು ಅನೇಕ ಮಟ್ಟಿಗೆ ಧನ ಸಹಾಯ ಮಾಡಿರುವರು ಈ ಸಂಘದವರು ಉದ್ದೇಶಿಸಿದ ಕಾರ್ಯವು ಸುಫಲಕಾರಿಯಾದುದರಿಂದ ಇಲ್ಲಿ ಬಂದು ನೆಲಸಿರುವವರ ಪೈಕಿ ಕನ್ನಡ ಭಾಷೆಯಲ್ಲಿ ವಾತ್ಸಲ್ಯವುಳ್ಳವರು ಅದರ ಪ್ರಯೋಜನಗಳನ್ನು ಲಕ್ಷ್ಯಕ್ಕೆ ತಂದುಕೊಂಡು ಅದರಿಂದ ಒದಗತಕ್ಕ ಜ್ಞಾನ ಲಾಭಗಳನ್ನು ಪಡೆಯದಿರರಾಗಿ ನಂಬುತ್ತೇನೆ.

~~~~~~

ಮೊಗೇರರ ಶ್ರೀ ಜ್ಞಾನೋದಯ ಸಮಾಜ.

ಸಮಾಜದ ಜ್ಞಾನೋದಯ ಶಾಲಾ ಮಂದಿರ ಮತ್ತು ಗ್ರಂಥ ಸಂಗ್ರಹಾಲಯ ಸಂಸ್ಥಾಪನಾ ಭಂಡಾರಕ್ಕೆ ಉದಾರಭಾವದಿಂದ ದಾನವಾಗಿ ಕೊಟ್ಟದಾತರ ಹೆಸರುಗಳು ಮತ್ತು ಮೊಬಲಗು.

	ರೂ. ಆ. ಪೈ.
ವೆಲ್ಸ್ ಮತು ಕಂಪನಿಯವರು	50—0—0
ಮಂಗಳೂರು ರಾಮಚಂದ್ರನಾಯಕರು	3—0—0
ಲಲ್ಲುಬಾಯಿ ಸಾಮಲ್‌ದಾಸ್ ಭವನಗರ್	2—0—0
ಸೊರಾಬ್ಜಿ. ಪೆಸ್‌ತಮ್ಜಿ	2—0—0
ಎನ್ ಯಿಗರಾಶಿ	2—0—0
ಡಿ. ಯಫ್. ವಾಡಿಯ	2—0—0
ಇಚ್ಛಾರಾಮ್. ಬಿ. ಪಾರಕ್	0—8—0
ಮಾನೋಜಿ ಡಾವರ್	2—0—0
	63—0—0

ವಿದ್ಯೆಯಲ್ಲಿ ಬಹಳ ಹಿಂದುಳಿದ ಬಡ ಜಾತಿಯವರ ಮೇಲ್ಮೆಯನ್ನು ಬಯಸಿ ಧನ ಸಹಾಯ ಮಾಡಿದ ಪುಣ್ಯಾತ್ಮರ ಉಪಕಾರವು ನಮ್ಮಲ್ಲಿ ಚಿರಸ್ಮರಣೀಯವಾಗಿರುವುದು.

ಎಚ್. ಸೋಮಯ್ಯ ಮಂದಣ್ಣಾಯ.

ಮುಂಬಯಿ, ತಾ. 10 6-15. ಉಪ ಖಜಾನಜಿ.

—o—

ವಿವಿಧ ವಿಷಯ.

ಜಪಾನ್ ದೇಶದಲ್ಲಿ ಒಂದು ವಿಧವಾದ ಕಾಗದದ ಉಡುಪನ್ನು ಮಾಡುವರು. ಅದಕ್ಕೆ "ಕಾಮಿಕ್ಸೋ" ಎಂದು ಹೆಸರು. ಜಪಾನಿನವರು ಹಿಪ್ಪಲಿನೇರಳೆ ಮರದ ಚಕ್ಕೆಯಿಂದ ಒಂದು ಬಗೆ ನವುರಾದ ಕಾಗದವನ್ನು ಮಾಡುವರು. ಅದು ಮೃದುವಾಗಿಯೂ ಬೆಚ್ಚಗೂ ಇರುತ್ತದೆ. ಇಂತಹ ಕಾಗದಗಳ ಎರಡು ತಾನನ್ನು ಸೇರಿಸಿ ಅವರ ಮಧ್ಯದಲ್ಲಿ ರೇಷ್ಮೆಯ ಚೂರುಗಳನ್ನು ಒಂದೇ ಸಮನಾಗಿ ಹರಡಿ ಆ ಮೇಲೆ ಮೆತ್ತೆಯಂತೆ ಹೊಲಿಯುವರು. "ಮಖಮಲ್" ಬಟ್ಟೆಗೆ ಬದಲಾಗಿ ಇದನ್ನೇ ಉಪಯೋಗಿಸುವುದುಂಟು. ಫ್ಲಾನಲ್ಲಿಗಿಂತಲೂ ಇದು ಉತ್ಕೃಷ್ಟವೆಂದು ಹೇಳುತ್ತಾರೆ. ಆದರೆ ಇದನ್ನು ಇತರ ಬಟ್ಟೆಗಳಂತೆ ಒಗೆಯುವುದಕ್ಕಾಗುವುದಿಲ್ಲ. ಇದೊಂದೇ ಇದರಲ್ಲಿ ಅವಗುಣ. ಯೋಕೋಹಾಮ ಎಂಬ ಪಟ್ಟಣದಲ್ಲಿರುವ ಒಂದು ಕಂಪೆನಿಯವರು ಇದರಿಂದ ಕಾಗದದ ಷರ್ಟುಗಳನ್ನು ಮಾಡಿ ರುಶ್ಯಾ ಸೈನ್ಯಕ್ಕೆ ವಿಶೇಷವಾಗಿ ಕಳುಹಿಸುತ್ತಿರುವರು.

~~~~~~

ಜೀನಸು ಧಾರಣೆ. (ರಖಂ)

ಮಸ್ಸೂರಿ ಅಕ್ಕಿ	5— 0—0	5— 9—0
ಗಾಡಿ ರಾಶಿ ,,	4— 7—0	4— 8—0
ಗುಡ್ಡ ,,	4— 8—0	5— 0—0
ಅವ್ವಲ್ ಬೆಳ್ತಿಗೆ,,	5— 6—0	5—10—0
ಗುಡ್ಡ ಬೆಳ್ತಿಗೆ ,,	5— 1—0	5— 2—0
ರಂಗೂನು ಬೆಳ್ತಿಗೆ ಗೋಣಿ ೧ರ	8— 0—0	8—12—0
ಗೋಧಿ ಗೋಣಿ ೧ರ ...	13— 0—0	14— 0—0
ಹುರುಳಿ ಗೋಣಿ ೧ರ ...	6— 4—0	7— 8—0
ಕಡಲೆ ಗೋಣಿ ೧ರ. ,,	9—0—0	10—12—0
ತೊಗರಿ ಗೋಣಿ ೧ರ ...	10— 0—0	11— 8—0
ತೊಗರಿ ಬೇಳೆ ಗೋಣಿ ೧ರ.	12— 8—0	16— 0—0
ಉದ್ದು ಗೋಣಿ ೧ರ	. . . . .	10— 0—0
ಊರುಬೆಲ್ಲ ಖಂಡಿ ೧ರ ...	... ...	75— 0—0
ಉಪ್ಪು ಗೋಣಿ ೧ರ	3—12—0	3—14—0
ಕೊಬ್ಬರಿ ಖಂಡಿ ೧ರ	70—0—0	75—0—0
ಕೊಬ್ಬರಿ ಹಿಂಡಿ ಖಂಡಿ ೧ರ	10—8—0	11— 0—0
ಎಳ್ಳಿಂಡಿ ಖಂಡಿ ೧ರ	25—0—0	31— 4—0
ಕೊಬ್ಬರಿ ಎಣ್ಣೆ ಮಣ ೧ರ	5—10—0	5—12—0
ಎಳ್ಳೆಣ್ಣೆ ಮಣ ೧ರ(ಕುರಾಸನ)	3—10—0	3—14—0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ರ	. . . .	5— 0—0
ಮೋರಿಸ್ ಸಕ್ಕರೆ ಮಣ ೧ರ	. . . .	4—14—0
ಕಾಫಿ ಖಂಡಿ ೧ರ.	240—0—0	252—0—0
ಹೊಸಬೀಗೋಟು ಖಂಡಿ೧ರ	94—0—0	98—0—0
ಹೊಸ ಗೇರುಬೀಜ ಮುಡಿ ೧ರ	. . . .	2— 2—0
ಕಬ್ಬಿಣ ಖಂಡಿ ೧ರ	. . . .	50—0—0
ತಾಂಬ್ರ ತಗಡುಮಣ ೧ರ	. . . .	19— 8—0
ತಾಂಬ್ರ ಪಾತ್ರೆಗಳು ಮಣ ೧ರ	. . . .	22— 0—0
ಚೀನಿ ಬೆಳ್ಳಿ ತೀರು ೧ರ	. . . .	18—12—0
~~~~~~

ಮಾರಾಟಕ್ಕೆ ಸಿದ್ಧವಿರುವುದು! ಮಾರಾಟಕ್ಕೆ ಸಿದ್ಧವಿರುವುದು!

ವೇಂಕಟಗಿರಿ ಮಹಾತ್ಮೆ.

ಪದ್ಮಾವತೀ ಕಲ್ಯಾಣದಿಂದ ಪೂರ್ಣವಾಗಿರುವುದು

(ಸಂಸ್ಕೃತ ಭವಿಷ್ಯತ್ಪುರಾಣದಿಂದ).

ಮಂಗಳೂರಲ್ಲಿ ಸ್ವರ್ಗಸ್ಥರಾಗಿ ಹೋದ ಮುಲ್ಕಿ ಕವಿ ರಾಮಕೃಷ್ಣಯ್ಯನವರಿಂದ ಭಾಮಿನಿ ಷಟ್ಪದಿಯಲ್ಲಿ ಕನ್ನಡಿಸಲ್ಪಟ್ಟಿರುವುದು.

959 ಪದ್ಯಗಳಿರುವ 15 ಅಧ್ಯಾಯಗಳಿಂದ ಕೂಡಿರುವುದು. ಕಾವ್ಯರಚನೆಯು ಬಹು ಮೃದುರವೂ ಶುಲಬವೂ ಆಗಿರುವುದರಿಂದ ಸರ್ವರಿಗೂ ಅನುನಿತ್ಯದ ಪಠಣಪುಸ್ತಕವಾಗಿರಲು ಉಚಿತವಾಗಿರುವುದು. ವೆಂಕಟೇಶನು ಗಿರಿಯಲ್ಲಿ ನಡೆಸಿದ ಅದ್ಭುತ ವೃತ್ತಾಂತಗಳು ವಾಚಕರ ಮನಃಖಚಿತವಾಗುವಂತೆ ಈ ಗ್ರಂಥವು ಯಥೋಚಿತ ಚಿತ್ರಪಟಗಳಿಂದ ಕೂಡಿರುವುದು. ಕ್ರಯ ಪ್ರತಿಯೊಂದಕ್ಕೆ ರೂ 1—8—0 ಟಪ್ಪಾಲು ಹಾಸಲು ಬೇರೆ.

ಕವಿ ಎಂಡ್ ಸನ್ಸ್,
ಮಂಗಳೂರು

ಡಾಕ್ಟರ್ ನವರತ್ನರ ಪಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ. 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ. ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ. ಪ್ರಯೋಗಿಸಲು ಸುಲಭವಾಗಿದೆ. ಪರಿಮಳ, ಕೆಡದ ಬಣ್ಣ, ಬಹಳ ಅಗ್ಗ. ಕಪ್ ಮತ್ತು ಬ್ರಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ 1 ಟಪ್ಪಾಲು ಚಾರ್ಜು 0—4—0

Dr. Navaratna & Sons,
Kalbadevi Road BOMBAY

ಏಜಂಟರು —ದಿ ಊಲನ್ ಮಾರ್ಟ್,
ಮಾಧವ ಬಿಲ್ಡಿಂಗ್ಸ್, ಹಂಪನಕಟ್ಟೆ, ಮಂಗಳೂರು

33. ನಿಕಲ್ ಲೋಹದ ಗಡಿಯಾರಗಳು ನಂ. 110.

ಏರ್ಪಾಯಿತಿಗೆ ಸ್ಪೆಷಲಾಗಿ ಬರೆದು ತರಿಸಿದ್ದೇವೆ. ನಮ್ಮ ಹಿಂದೂ ಜನರು ಒರಟುತನದಲ್ಲಿ ಗಡಿಯಾರವನ್ನು ಕಾಪಾಡುವಂಥಾವರೆಂಬುವುದನ್ನೂ ನಾವು ಒಲ್ಲೆವು. ಅದಕ್ಕೆ ಜಗ್ಗದಂಥಾ ಗಡಿಯಾರವನ್ನು ತಯಾರು ಮಾಡಿಸಿ ತರಿಸಿದ್ದೇವೆ. ಬೆಳ್ಳಿ ಗಡಿಯಾರವಾಗಿದ್ದರೆ ಒಂದಕ್ಕೆ ಮೂರರಷ್ಟು ಬೆಲೆ ಆಗುತ್ತಿತ್ತು, ಕೀಲೆಸ್ ಓಪನ್ ಫೇಸು ಡಯಲ್

ಅಸಲು ಕ್ರಯ ೧೦—೦—೦ ಈಗ ಮಾರುವ ಕ್ರಯ ೫—೮—೦

34. ಡಿನ್ ಪೋರ್ಟ್ ರಿಸ್ಟ್ ವಾಚ್ ನಂ 160

ಲಿವರ್ ಜಾತಿ. ಬೆಲೆಯಲ್ಲಿ ಕಡಿಮೆಯಾದರೂ ಗುಣದಲ್ಲಿ ಭಾರಿಯಾದದ್ದು ಬೆಲೆಯುಳ್ಳ ಚಿನ್ನದ ಗಡಿಯಾರವನ್ನು ಟೈಂ ತೋರಿಸುವುದರಲ್ಲಿ ಸೋಲಿಸಿಬಿಡುತ್ತದೆ. ಯೋಗ್ಯತೆ ಮೀರದ ಕೆಲಸಮಾಡುತ್ತದೆ. ಬಡತನದಲ್ಲಿ ಬಾರಿಗುಣ ಉಳ್ಳದ್ದು

ಅಸಲು ಕ್ರಯ ೧೨—೦—೦ ಈಗ ಮಾರುವ ಕ್ರಯ ೬—೮—೦,

35. ಪಕ್ಕಾಪಾಕೆಟ್ ವಾಚ್ ನಂ 970

ಕೀಲೆಸ್ ಓಪನ್ ಡಯಲ್ ಪಕ್ಕಾವಾಚೇ ಸರಿ. ಬಡವರ ಸ್ನೇಹಿತ, ಭಾಗ್ಯವಂತರ ಸೇವಕ. ಬೆಲೆ ಕಡಿಮೆ ಎಂದು ಕಳದು ಹಾಕಬಾರದು, ಆಳು ಮಾಡುವ ಕೆಲಸ ಅರಸನೂ ಮಾಡುವುದಿಲ್ಲವು

ಅಸಲು ಕ್ರಯ ೧೦—೦—೦. ಈಗ ಮಾರುವ ಕ್ರಯ ೬—೦—೦

36. ರಾಸ್ಕೋಪ್ ಸಿಸ್ಟಂ ವಾಚ್ ನಂ 520

ಓಪನ್ ಫೇಸ್ ಕೀಲೆಸ್ ಲೀವರ್ ಸಿಂಟೋ ಮಾರ್ಕ್ ಉಳ್ಳದ್ದು. ಬೆಲೆಯುಳ್ಳ ಗಡಿಯಾರವು. ಇದು ಎರಡೂ ಒಂದೇ ಆದರೂ ವಜ್ರದ ಸ್ಕ್ರೂ ಮುಂತಾದ್ದು ಮಾತ್ರವೇ ಬೆಲೆವುಳ್ಳ ಗಡಿಯಾರದಲ್ಲಿ ಹೆಚ್ಚು. ನೋಡುವುದಕ್ಕೆ ಇದರಲ್ಲಿಯೂ ಸೌಂದರ್ಯ ಕಡಿಮೆಯಿಲ್ಲ. ಮಜಬೂತಿನಲ್ಲಿ ಇದು ಹೆಚ್ಚು. ಗುಣದಲ್ಲಿಯೂ ಹೆಚ್ಚು.

ಅಸಲು ಕ್ರಯ ೧೨—೦—೦. ಈಗ ಮಾರುವ ಕ್ರಯ ೬—೦—೦.

ಈಡನ್ ಫಾಸ್ಟರ್ ಎಂಡ್ ಕೋ. **Eden Foster & Co.**
ಸಾವುಕಾರಪೇಟೆ, ಮದರಾಸು. *Sowcarpet. MADRAS.*

ಕರ್ನಾಟಕ ವೃತ್ತ ಮತ್ತು ಧನಂಜಯ.

ಕಳದ 25 ವರ್ಷಗಳಿಂದ ಭಾಷಾ ಸೇವೆಯನ್ನೂ ದೇಶ ಸೇವೆಯನ್ನೂ ಮಾಡುತ್ತಿರುವ ಈ ವಾರಪತ್ರಿಕೆಯು ಧಾರವಾಡದಲ್ಲಿ ಪ್ರತಿ ಮಂಗಳವಾರವೂ ಪ್ರಕಟಿಸಲ್ಪಡುವದು.

ಲೋಕವ್ಯವಹಾರೋಪಯುಕ್ತ ವಿಷಯಗಳ ಸದಭಿಪ್ರಾಯವನ್ನು ಜನರಲ್ಲಿ ಉಂಟುಮಾಡುವಂಥ ಚಲೋ ಸ್ಫುಟ ಲೇಖಗಳುಳ್ಳ ಮುಂಬಯಿ ಕರ್ನಾಟಕದ ಉತ್ತಮ ತರಗತಿಯ ಈ ಪತ್ರವನ್ನು ದಕ್ಷಿಣಕನ್ನಡದವರೂ ಓದುವದು ಅಗತ್ಯ.

ದೊಡ್ಡ ರೋಯಲ್ ಸ್ಯಾಜಿನ ಈ ಪತ್ರಿಕೆಗೆ ವಾರ್ಷಿಕ ಚಂದಾ ಮೊಬಲಗು ಟಪ್ಪಾಲು ಹಾಸಲು ಸೇರಿ ರೂ ೨—೪—೦ ಆಗಿರುತ್ತದೆ. ಚಂದಾದಾರರಾಗಿ ಸೇರಲಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು

ಮ್ಯಾನೇಜರ್, ಕರ್ನಾಟಕ ವೃತ್ತ ಮತ್ತು ಧನಂಜಯ,
ಮಂಗಳವಾರಪೇಟೆ, ಧಾರವಾಡ

ಮಾರಾಟಕ್ಕೆ ಸಿದ್ಧವಿದೆ! ನೂತನ ಸಂಗ್ರಹ!!

ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ.

ಮತ್ತು

ಭೂತಾಳಪಾಂಡ್ಯರಾಯನ ಅಳಿಯ ಕಟ್ಟು

ಈ ನವೀನ ಗ್ರಂಥದಲ್ಲಿ ಪರಶುರಾಮಾವತಾರದ ಕಥೆಯೂ, ಪ್ರಸಾಪುರ ಮಹಾತ್ಮೆಯೂ, ಭರತಖಂಡದ ಕ್ಷತ್ರಿಯ ರಾಜವಂಶಾವಳಿಯೂ, ಧರ್ಮರಾಯನ ನಂತರ ಕಲಿಯುಗದಲ್ಲಿ ರಾಜ್ಯವಾಳಿದ 30 ಅರಸರ ಹೆಸರುಗಳೂ, ಕಾಲಗಳೂ ಪರಶುರಾಮ ಸೃಷ್ಟಿಗೆ ಸೇರಿದ 77 ದ್ವೀಪಗಳೂ, ಕನ್ನಡ ಜಿಲ್ಲೆಯ ಪೂರ್ವರಾಜರ ಸಂತತಿಯೂ, ಅವರು ಆಳಿದ ವರ್ಷಗಳೂ ಹೆಸರುಗಳೂ, ಕನಕವರ್ಮ ವೀರವರ್ಮರ ಚರಿತ್ರೆಯೂ, ವೀರವರ್ಮನು ಮಯೂರವರ್ಮನಾಗಿ ಒಂಟರ ಮತ ಸ್ಥಾಪಿಸಿದ ಕಥೆಗಳೂ, ಮಯೂರವರ್ಮನು ಮಾರ್ಕಾಂಡೇಯರಿಂದ ರಾಜನೀತಿಗಳನ್ನು ಕೇಳಿದ ಕಥೆಯೂ, ಅಹಿಕ್ಷೇತ್ರದಿಂದ ಬ್ರಾಹ್ಮಣರನ್ನು ತರಿಸಿದ ಕಥೆಯೂ, ಬ್ರಾಹ್ಮಣರಿಗೆ 32 ಗ್ರಾಮಗಳಲ್ಲಿ ನೇಮಿಸಿದ 326 ಭೇದಗಳು (ಜನನಗಳೂ) ಅವರಿಗೆ ನೇಮಿಸಿದ ಬಹುಮಾನ ಮರ್ಯಾದೆಗಳೂ ಕೂಟ ಮರ್ಯಾದೆಗಳೂ, ಜೈನರಿಗೂ ಬ್ರಾಹ್ಮಣರಿಗೂ ದ್ವೇಶದ ಕಾರಣಗಳೂ, ಭೂತಾಳಪಾಂಡ್ಯನ ಪೂರ್ವಚರಿತ್ರೆಯೂ, ದೇವಪಾಂಡ್ಯನ ಹಡಗಿನ ವಿವರಗಳೂ, ಭೂತಾಳಪಾಂಡ್ಯನ ಪೂರ್ಣಕಥೆಯೂ, ಭೂತರಾಜನಾದ ಕುಂಡೋದರನ ಪ್ರತಾಪಗಳೂ, ಭೂತಾಳಪಾಂಡ್ಯನ ಪಟ್ಟಾಭಿಷೇಕವೂ, ದೇವಪಾಂಡ್ಯನ ಹಡಗಿನ ವ್ಯಾಪಾರದ ಕಥೆಯೂ ಅಳಿಯ ಕಟ್ಟು ಆದ ಕಾರಣವು ಭೂತಾಳಪಾಂಡ್ಯನು ನೇಮಿಸಿದ 14 ಕಟ್ಟು 16 ಕಟ್ಟಳೆಗಳೂ, ಭೂತಾಳಪಾಂಡ್ಯನ ವಿವಾಹವೂ, ಕುಂಡೋದರನು ಮಹಿಷಾಸುರನಾದ ಕಥೆಯೂ ಭೂತಾಳಪಾಂಡ್ಯನು ಮಕ್ಕಳಿಗೆ ವಿಂಗಡಿಸಿದ ಸ್ಥಳ ಮಾನಮರ್ಯಾದೆಗಳೂ, ಅವನ ನಂತರ ಅಳಿಯ ವಿದ್ಯುಮ್ನಪಾಂಡ್ಯನ ಆಳಿಕೆಯೂ, ಆತನು ತನ್ನ ಮಕ್ಕಳಿಗೆ ವಿಂಗಡಿಸಿದ ಮಾನಮರ್ಯಾದೆಗಳೂ, ಚೌಟ ಬಂಗರ ಸಂಸ್ಥಾನದ ನಗರಗಳೂ, ಸ್ಥಳ ನಾಮಾವಳಿಗಳೂ, ಕೇರಳದ 43 ಜಾತಿಗಳೂ, ಹೋಬಳಿ ಮನೆತನಗಳೂ, ಮರ್ಯಾದೆಗಳ ಶಾಸನವೂ, ಪೂರ್ವ ಮರ್ಯಾದೆಗಳ ಕ್ರಮವೂ, 2ನೇ "ಭೂತಾಳಪಾಂಡ್ಯ"ನ ಚರಿತ್ರೆಯೂ, ಅಳಿಯಸಂತಾನದ 60 ಬಳಿಗಳೂ, ಚೌಟ ಬಂಗರ ಸಂಸ್ಥಾನದ ಮಾಗಣೆ, ಸೀಮೆ, ಒಳ ಅರಸರು, ಅವರ ಸ್ಥಳ ಮಾನಮರ್ಯಾದೆಗಳು ವಗೈರೆಯೂ ಜೈನ ಬಂಟರ 60 ಜನನ (ನಾಮಕೀರ್ತಿಗಳೂ) 7 ರಾಜದೈವಗಳ ಚರಿತ್ರೆಯೂ, ಉಪ್ಪಿಯ ಇತಿಹಾಸ, ವಿಜಯನಗರದ ಆಡಳಿತೆ ಕಂದಾಯ ಕ್ರಮ, ಪೂರ್ವದ ಕೆಲವು ಸಂಗ್ರಹಗಳು, ಬಂಗಾಡಿ ತಾಮ್ರಶಾಸನ, ಪಲ್ಲಿಪಾಡಿ ಶಿಲಾಶಾಸನ, ಉಳ್ಳಾಲ ತಾಮ್ರಶಾಸನ, ಬಂಟಕಲ್ಲಿನ ಶಿಲಾಶಾಸನ, ನಂದಳ್ಕೆ ತಾಮ್ರಶಾಸನ, ವೇಣೂರಿನ ತಾಮ್ರಶಾಸನ, ಅನುಭವಗಳ ಸಂಗ್ರಹ, ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ದೇವಸ್ಥಾನಗಳು, ಬಾರ್ಕೂರು ಪಂಚಲಿಂಗೇಶ್ವರ ದೇವಸ್ಥಾನದ ಮರ್ಯಾದೆ ಪಟ್ಟಿ, ಮೊಗಲ್ ರಾಜರ ವಂಶಾವಳಿ, ಭರತಖಂಡಕ್ಕೆ ಅನ್ಯರಾಜರ ಪ್ರವೇಶ ಕಾಲಗಳು, ಈ ಜಿಲ್ಲೆಯ ಮಹನೀಯರ ಪಟ್ಟಿ, ಶ್ರೀಮನ್ ಪಂಚಮ ಜಾರ್ಜ ಬಾದಶಹರ ಚರಿತ್ರೆ ವಗೈರೆ ಅನೇಕಾನೇಕ ಸಂಗ್ರಹಗಳು ಭರಿತವಾದ ನವೀನ ಗ್ರಂಥ. 296 ಪುಟಗಳು ಭರಿತವಾಗಿ ಸದಾ ಕೈಯಲ್ಲಿರುವುದಕ್ಕೆ ಅನುಕೂಲವಾದ ಈ ಪುಸ್ತಕವು ಅಳಿಯಕಟ್ಟಿನವರಿಗೂ, ಮಕ್ಕಳ ಕಟ್ಟಿನವರಿಗೂ ಶಾಲಾ ಉಪಾಧ್ಯಾಯರುಗಳಿಗೂ ವಿದ್ಯಾರ್ಥಿಗಳಿಗೂ ಸರ್ವರಿಗೂ ಅತ್ಯಗತ್ಯವುಳ್ಳದ್ದಾಗಿದೆ. **ಪ್ರತಿ ಒಂದಕ್ಕೆ ರೂ. 1—4—0.**

ಹೆಚ್ಚಿಗೆ ಪ್ರತಿಗಳನ್ನು ಕೊಂಡುಕೊಳ್ಳುವವರಿಗೂ ವ್ಯಾಪಾರಸ್ಥರಿಗೂ ಒಳ್ಳೇ ಕಮಿಷನ್ ಕೊಡಲಾಗುವದು

ಕುಶಲಮಂದಿರ, ಶ್ರೀರಾಜರಾಜೇಶ್ವರಿ ದೇವಸ್ಥಾನ, ಪೊಳಲಿ

ಎನ್. ಎ ಶೀನಪ್ಪ ಹೆಗ್ಗಡೆ,
ಅಮ್ಮುಂಜೆಗುತ್ತು,
ಗುರುಪುರ ಪೋಸ್ಟು, ದ. ಕ.

Box Locks.



Padlocks.



ಧಾರಣೆ ಸುಲಭ! **ಅಲಿಗರ್ ಬೀಗಗಳು.** ಧಾರಣೆ ಸುಲಭ!

ಬಹಳ ಭದ್ರವಾಗಿಯೂ, ಭಾರವಾಗಿಯೂ ಇರುವುದು. ಒಂದರ ಬೀಗವಕ್ಕೆ ಮತ್ತೊಂದಕ್ಕೆ ಆಗುವದಿಲ್ಲ. ನೋಡುವುದಕ್ಕೆ ಅಂದವಾಗಿಯೂ ಇರುವುದು. ಇದೇ ಮಾದರಿ ಬೀಗಗಳನ್ನು ಇಂಪೀರಿಯಲ್ ಇಲಾಖೆಗಳಿಗೂ, ಬ್ಯಾಂಕುಗಳಿಗೂ, ಸರಕಾರಿ ಆಫೀಸುಗಳಿಗೂ ಸಪ್ಲೈ ಮಾಡಿದೆ.

ನಾಲ್ಕು ಚಕ್ರಗಳಿರುವ ಬೀಗಗಳು.

ನಂಬ್ರ	1	2	3	4	5
	0—12—0	0—15—0	1—4—0	1—10—0	....

ಆರು ಚಕ್ರಗಳಿರುವ ಬೀಗಗಳು.

1—2—0 1—8—0 2—4—0 3—0—0 3—8—0

ಲ್ಲರ್ ಬೀಗಗಳು.

—04—00—5—0 0—6—0 0—8—0 0—10—0

ಟ್ರಂಕುಗಳಿಗೆ ಹಾಕುವ ಕೊಂಡಿ ಬಗ್ಗಿಸಿರುವ ಬೀಗ ಒಕ್ಕೆ 0—13—0

೩, ೪, ೫ನೇ ನಂಬರು ಬೀಗಗಳನ್ನು ಬಾಗಲುಗಳಿಗೂ ಕಬ್ಬಿಣದ ಪೆಟ್ಟಿಗೆಗಳಿಗೂ ಉಪಯೋಗಿಸಬಹುದು. ಏಜೆಂಟರುಗಳಿಗೆ ಕಮಿಷನ್ ದೊರೆಯುತ್ತೆ. ಹಾಸಲು ಪ್ರತ್ಯೇಕ.

ಮರದ ಪೆಟ್ಟಿಗೆಗಳಿಗೂ, ಮೇಜುಗಳಿಗೂ, ಬೀರೂಗಳಿಗೂ ಹಾಕುವ ೪ ಚಕ್ರಗಳಿರುವ ಬೀಗಗಳು ಒಕ್ಕೆ 1—8—0, 1—12—0.

ವಿಳಾಸ:— ಎಚ್. ಎನ್. ರಾವ್ ಅಂಡ್ ಬ್ರದರ್ಸ್,

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಶಾಶ್ವತವಾದ ಆರೋಗ್ಯವನ್ನು

ಹೊಂದುವದಕ್ಕೆ ಸುಲಭವಾದ ಮಾರ್ಗವು

ಮದನಮಂಜರಿ ಮಾತ್ರೆಗಳು

ಉಪಯೋಗಿಸುವದೇ ಆಗಿರುವದು. ಈ ಮಾತ್ರೆಗಳು ಅಜೀರ್ಣವು ಮಲಬಂಧ, ಮನೋವ್ಯಥೆ, ಜ್ಞಾಪಕಶಕ್ತಿ ಇಲ್ಲದಿರುವದು, ನರಗಳ ಬಲಹೀನತೆ, ಅಶಕ್ತಿ, ಸ್ವಪ್ನಸ್ಖಲಿತ, ಬಹುಮೂತ್ರ, ಮೂತ್ರಕೋಶ ಸಂಬಂಧವಾದ ವ್ಯಾಧಿಗಳು, ನಪುಂಸಕತ್ವ ಮುಂತಾದ ವ್ಯಾಧಿಗಳನ್ನು ಶೀಘ್ರದಲ್ಲಿಯೇ ಬೇರು ಸಹಿತವು ಕಿತ್ತು ಹಾಕಿ ಪುರುಷರಿಗೆ ಸಂತತ ಪುರುಷತ್ವವನ್ನು ಕೊಡುವವು ಇದು ಸಾಟಿಯಿಲ್ಲದ ಪೌಷ್ಟಿಕ ಔಷಧಿಯಾಗಿರುತ್ತದೆ. ಕಳೆದ 25 ವರುಷ ಕಾಲದಲ್ಲಿ ಸಾವಿರಾರು ರೋಗಿಗಳನ್ನು ಸ್ವಸ್ಥಪಡಿಸಿದೆ. ನಿಮ್ಮನ್ನು ಕೂಡ ಸ್ವಸ್ಥ ಮಾಡುವದು. 40 ಮಾತ್ರೆಗಳ ಡಬ್ಬಿ ಕ್ರಯ ರೂ. 1—0—0.

ಉಚಿತ ಕ್ರಯವು ಇಲ್ಲ ಹಾಸಲು ಇಲ್ಲ

144 ಪುಟಗಳುಳ್ಳ ವೈದ್ಯಸಾರಸಂಗ್ರಹವಾದ

ವೈದ್ಯವಿದ್ಯ

ಈ ಪುಸ್ತಕದಲ್ಲಿ ಶಾಶ್ವತವಾದ ಆರೋಗ್ಯವನ್ನು ಪಡೆಯಲು ಅತ್ಯವಶ್ಯವಾದ ವಿಷಯಗಳು ಭರಿತವಾಗಿವೆ. ನಿಮ್ಮ ವಿಳಾಸವನ್ನು ತಿಳಿಸಿದರೆ ನಿಮಗೆ ಒಂದು ಪ್ರತಿ ಉಚಿತವಾಗಿ ಕಳುಹಿಸಲ್ಪಡುವದು.

ರಾಜವೈದ್ಯ ನಾರಾಯಣಜಿ ಕೇಶವಜಿ

20 ಚೀನಾ ಬಜಾರ್ ರೋಡ್,

ಮದರಾಸು.

[illegible]ದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

ಲೋಕಾಪಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಶೀತಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ಬಾರು), ಮೈ ನಡುಕ, ಶೀತ



ವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಾಯಿ ಹೊತ್ತು ಸುವಾಸನೆಯಾಗುತ್ತಾ, ಎಂಥಹ ಆಹಾರವನ್ನಾದರೂ ಜೀರ್ಣಗೊಳಿಸಿ, ಹೊಸ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸಂಹರಿಸಿ. ರಕ್ತದಲ್ಲಿಯ ದೋಷವನ್ನು ಕಳೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಹೊಟ್ಟೆ ಶೂಲೆ, ಮಕ್ಕಳ ಎಳವು, ಜ್ವರ, ಬಾಣಂತಿ ಜ್ವರ, ಕೈಶಕ್ತಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ. 6 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1ರಿಂದ 12 ಕುಪ್ಪಿ ವರೆಗೆ ಪೋಸ್ಟೇಜು 4 ಆಣೆ.

ಶ್ರೀ ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವಿನಿಯಾಗಿದೆ. ಕೈಮೀರಿತೆಂದು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಕೂಡಲೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಮೋಸಹೋಗಬೇಡಿ! ಒಂದೇ ಒಂದು ಬುಡ್ಡಿಯು ನಿಮ್ಮಲ್ಲಿರಲಿ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು ಬೆಲೆ ರೂ. 1; ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ನಮ್ಮ ವಿಳಾಸ:— "ಶ್ರೀ ಸೀತಾರಾಘವ ವೈದ್ಯಶಾಲಾ"

ಮೈಸೂರು

ಬಹು ಮನೋಹರ! ಅದ್ಭುತ!

ವಸಂತ ಕೋಕಿಲೆ

ಎಂಬ

ನೂತನವಾದ ಹೊಸ ಕಾದಂಬರೀ ಕಥೆ.

ರಸಿಕ ಶಿರೋಮಣಿಗಳೇ,

"ವಸಂತ ಕೋಕಿಲೆ" ಎಂಬ ಇಂದ್ರಜಾಲ ಮಹೇಂದ್ರಜಾಲಗಳನ್ನು ಸ್ಪಷ್ಟವಾಗಿ ತೋರಿಸುವ ಅತ್ಯದ್ಭುತ ಚಮತ್ಕಾರವಾದ ಹೊಸ ಕಾದಂಬರೀ ಕಥೆಯು ಅಚ್ಚಾಗಿ ಈಗ ತಾನೇ ಬಿಕರಿಗೆ ಸಿದ್ಧವಾಗಿದೆ. ಈ ಗ್ರಂಥದಲ್ಲಿ ಶೃಂಗಾರಾದಿ ನವರಸಗಳು ತುಂಬಿ ತುಳುಕುತ್ತಿವೆ. ಈವರೆಗೆ ಪ್ರಚುರವಾಗಿರುವ ಎಲ್ಲಾ ಕಥೆಗಳಿಗಿಂತಲೂ ಮೀರಿದನ್ನು ರಸ್ಯವುಳ್ಳದ್ದಾಗಿದೆ. ವರ್ಣನಾಭಾಗಗಳು ಎಲ್ಲರಿಗೂ ತಿಳಿಯುವ ಹಾಗೆಯೂ ಸ್ವಾಭಾವವಾಗಿಯೂ ಇವೆ. ಭಾಷಾಶೈಲಿಯು ಅತ್ಯುತ್ತಮವಾಗಿದೆ. ಓದುವದಕ್ಕಾರಂಭಿಸಿದ ವಾಚಕರ ಮನಸ್ಸನ್ನು ಸಂಪೂರ್ಣವಾಗಿ ಆಕರ್ಷಿಸಿ ಮುಗಿಯುವವರಿಗೂ ಆವೇಶವನ್ನುಂಟುಮಾಡಿ ಉಲ್ಲಾಸಗೊಳಿಸುವ ಹಾಗಿದೆ. ತಮ್ಮ ಜ್ಞಾನ, ಭಕ್ತಿ, ವೈರಾಗ್ಯ ಮೊದಲಾದ ವೇದಾಂತ ವಿಷಯಗಳನ್ನೂ ಚೆನ್ನಾಗಿ ತಿಳಿಸುತ್ತದೆ. ಕಥಾ ಸಂವಿಧಾನವು ಹೊಸ ಮಾದರಿಯಾಗಿ ಆಶ್ಚರ್ಯಕರವಾಗಿದೆ. ಪ್ರಕಟವಾಗಿ ಶೃಂಗಾರ ರಸವನ್ನು ವರ್ಣಿಸದೆ ಇರುವುದರಿಂದ ಎಲ್ಲಾ ಸ್ತ್ರೀಜನರಿಗೆ ಓದುವುದಕ್ಕೆ ಅರ್ಹವಾಗಿದೆ. ಇದರಲ್ಲಿ ೯ ಪ್ರಕರಣಗಳೂ ೩೦೭ ಪುಟಗಳೂ ಇವೆ. ಉತ್ತಮವಾದ ಕಾಗದ, ಸುಂದರವಾದ ಅಕ್ಷರ, ತಪ್ಪಿಲ್ಲದೆ ಸುಂದರವಾಗಿ ಮುದ್ರಿಸಿದೆ. ಬೇಕಾದವರೆಲ್ಲರೂ ಕೆಳಗಣ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಕ್ರಯ ರೂ. ೧—೦—೦ ಮಾತ್ರ.

ವಿಳಾಸ:— **ಟಿ. ಎ. ಮಾಣಿಕ್ಯಂ ಶೆಟ್ಟಿ,**

ಮಾಣಿಕ್ಯಮಂದಿರ ಬುಕ್ ಡಿಪೋ,

[illegible]

ಬಾಲಬೋಧ ಲಿಪಿಯ ಪುಸ್ತಕಗಳು.

ಋಗ್ವೇದ ಮಂತ್ರಸಂಹಿತಾ	1–0–0	ಪಂಚರತ್ನಗೀತಾ ಮಧ್ಯಮಾಕ್ಷರ, ರೇಶ್ಮೆ ಬ್ಯಾಂಡ್	0 12–0
,, ಬ್ರಹ್ಮಕರ್ಮ	2–8–0	ಪಂಚರತ್ನಗೀತಾ ಮಧ್ಯಮಾಕ್ಷರ, ಕಾಗದ ಬ್ಯಾಂಡು	0–6–0
,, ಸಂಧ್ಯಾವಂದನೆ	0–2–0	ಬೃಹತ್ಸ್ತೋತ್ರ ರತ್ನಾಕರ 182 ಸ್ತೋತ್ರಗಳು ಅಡಗಿರುವ ರೇಶ್ಮೆ ಬ್ಯಾಂಡು	0 12–0
ಶಿಕ್ಷಾದಿ ಚತುಷ್ಟಯ	0–4–0	ಬೃಹತ್ಸ್ತೋತ್ರ ರತ್ನಾಕರ 182 ಸ್ತೋತ್ರಗಳ ಅಡಗಿರುವ ಕ್ಯಾಲಿಕೊ ಬ್ಯಾಂಡ್	0–10–0
ಸಪ್ತಶತಿ ದೇವಿಮಹಾತ್ಮ್ಯ, ಸ್ಥೂಲಾಕ್ಷರ, ರೇಶ್ಮೆ ಬ್ಯಾಂಡ್	0 12–0	ಬೃಹತ್ಸ್ತೋತ್ರ ರತ್ನಾಕರ 182 ಸ್ತೋತ್ರಗಳು ಅಡಗಿರುವ ಕಾಗದ ಬ್ಯಾಂಡ್	0–8–0
ಸಪ್ತಶತಿ ದೇವಿಮಹಾತ್ಮ್ಯ, ಮಧ್ಯಮಾಕ್ಷರ, ರೇಶ್ಮೆ ಬ್ಯಾಂಡ್	0 10–0	ಶಿವಲೀಲಾಮೃತ ದೊಡ್ಡ ಸ್ಯಾಜ್, ಸ್ಥೂಲಾಕ್ಷರ, ಅಸ್ಸಲ್	1–4–0
ಸಪ್ತಶತಿ ದೇವಿಮಹಾತ್ಮ್ಯ, ಸಣ್ಣಕ್ಷರ, ರೇಶ್ಮೆ ಬ್ಯಾಂಡ್	0–7–0	ಶಿವಲೀಲಾಮೃತ ದೊಡ್ಡ ಸ್ಯಾಜ್, ಸ್ಥೂಲಾಕ್ಷರ, ದುಯಂ	0 14–0
ಅಧ್ಯಾತ್ಮರಾಮಾಯಣ ರೇಶ್ಮೆಬೈಂಡ್	1–0–0	ಶಿವಗೀತಾ, ರೇಶ್ಮೆ ಬ್ಯಾಂಡ್	0–8–0
ಸತ್ಯನಾರಾಯಣ ವ್ರತಕಥಾ	0–2–6	,, ಕಾಗದ ,,	0–5–0
ವಿದುರನೀತಿ	0–8–0	ಶನಿಮಹಾತ್ಮ್ಯ	0–4–0
ಭಗವದ್ಗೀತಾ, ಸ್ಥೂಲಾಕ್ಷರ, ರೇಶ್ಮೆ ಬ್ಯಾಂಡ್	0 12–0	ಪಂಚತಂತ್ರ	1–2–0
ಭಗವದ್ಗೀತಾ ಮಧ್ಯಮಾಕ್ಷರ, ರೇಶ್ಮೆ ಬ್ಯಾಂಡ್	0–8–0	ವಿವೇಕರತ್ನಾಕರವೆಂಬ ಕೊಂಕಣಿ ಭಾಷೆಯ ಅಭಂಗ ಪದಗಳು ಬಾಲಬೋಧ ಲಿಪಿ	0–4–0
ಭಗವದ್ಗೀತಾ, ಸಣ್ಣ ಅಕ್ಷರ, ಕಾಗದ ಬ್ಯಾಂಡ್	0–6–0	ಕನ್ನಡ ಅಕ್ಷರದ ಕೊಂಕಣಿ ಭಾಷೆಯ ಪುಸ್ತಕಗಳು	
ಭಗವದ್ಗೀತಾ, ಸಣ್ಣ ಅಕ್ಷರ, ರೇಶ್ಮೆ ಬ್ಯಾಂಡ್	0–4–0	ಚಂದ್ರಹಾಸ ನಾಟಕ	0–4–0
ಮಹಾವಾಕ್ಯ ರತ್ನಾವಳಿ	0–3–0	ಮಾನಸ ಚರಿತ್ರ ನಾಟಕ	0–4–0
ವಿಷ್ಣುಸಹಸ್ರನಾಮಸ್ತೋತ್ರ, ಸ್ಥೂಲಾಕ್ಷರ, ರೇಶ್ಮೆ ಬ್ಯಾಂಡ್	0–4–0	ಸಾವಿತ್ರಿ ನಾಟಕ	0–4–0
ವಿಷ್ಣುಸಹಸ್ರನಾಮಸ್ತೋತ್ರ, ಸ್ಥೂಲಾಕ್ಷರ, ಕಾಗದ ಬ್ಯಾಂಡ್	0–2–6	ಸ್ವರ್ಗಾರೋಹಣಕಥಾ	0–1–0
ವಿಷ್ಣುಸಹಸ್ರನಾಮಸ್ತೋತ್ರ, ಮಧ್ಯಮಾಕ್ಷರ, ಕಾಗದ ಬ್ಯಾಂಡ್	0–2–0		
ಪಂಚರತ್ನಗೀತಾ, ಸ್ಥೂಲಾಕ್ಷರ, ರೇಶ್ಮೆ ಬ್ಯಾಂಡ್	1–0–0		

ಈ ಮೇಲಿನವುಗಳಲ್ಲದೆ ಇನ್ನೂ ಅನೇಕಾನೇಕ ಸಂಸ್ಕೃತ, ಮರಾಟಿ, ಕನ್ನಡ ಪುಸ್ತಕಗಳೂ, ಶಾಲಾ ವಿದ್ಯಾರ್ಥಿಗಳಿಗೆ ಅಗತ್ಯವಿರುವ ಕಾಪಿ ಬೂಕುಗಳೂ, ಎಕ್ಸರ್‌ಸ್ಯಾಜ್ ಬೂಕುಗಳೂ, ಫೌಂಟನ್ ಪೇನು ಇತ್ಯಾದಿ ಬರವಣಿಗೆ ಸಾಮಗ್ರಿಗಳೂ, ವರ್ಗ ಊರಿಗ ಪುಸ್ತಕಗಳೂ ನಮ್ಮಲ್ಲಿ ಸುಲಭ ಕ್ರಯಕ್ಕೆ ದೊರೆಯುವವು. ಪರಸ್ಥಳದವರಿಗೆ ಅಗತ್ಯವಿರುವ ಯಾವತ್ತೂ ಮಾಲುಗಳು ಟಪ್ಪಾಲ ದ್ವಾರಾ ಕಳುಹಿಸಲ್ಪಡುವವು.

ನಮ್ಮ ವಿಳಾಸ:— ಕೆ. ಯಂ ದಾಸ ಪ್ರಭು,
ರಥಬೀದಿ, ಮಂಗಳೂರು.

ಅಪೂರ್ವ ಗ್ರಂಥ! ಅಪೂರ್ವ ಗ್ರಂಥ!!

ಬಳ್ಳಾರಿ ಶ್ರೀ ಮರಿಸ್ವಾಮಿಗಳು

ಸಕ್ಕರಿ ಕರಡೆಪ್ಪ

ಇವರ ಜೀವಿತ ಚರಿತ್ರೆ.

ಈ ಮಹಿಮರ ಚರಿತ್ರೆಯನ್ನು ಇಲ್ಲಿಯವರಿಗೂ ಯಾರೊಬ್ಬರು ಪ್ರಕಟನ ಮಾಡಿದ್ದಿಲ್ಲವೆಂಬುದು ತಿಳಿದದ್ದಾಗಿರುವದಷ್ಟೆ. ಇಂತಹ ಅದ್ಭುತ ಮಹಿಮಾಶಾಲಿಗಳ ಚರಿತ್ರೆಗಳು ಅವಶ್ಯಕವಾಗಿಯೂ ಆದರಣೀಯಗಳಾಗಿರುವವು ಇವರ್ರ ಮಹಿಮೆಯು ಅಸಾಧಾರಣವಾದುದು. ಒಂದೆ ದಿನ ಒಂದೆ ಕಾಲದಲ್ಲಿ ಬಳ್ಳಾರಿ, ಬೆಂಗಳೂರು, ಭೈರವಪುರ ಎಂಬ ಮೂರು ಸ್ಥಳಗಳಲ್ಲಿ ಸಮಾಧಿಯನ್ನು ಹೊಂದಿದರೆಂಬುದೊಂದೆ ಅಪ್ರತಿಮ ಪ್ರಭಾವವನ್ನು ಸೂಚಿಸುತ್ತಿರುವದು. ಇವರು ಅಲ್ಲಲ್ಲಿ ತೋರಿದ ಮಹಿಮೆಗಳು ಅನಂತವಾಗಿರುವವು; ಇದಲ್ಲದೆ ಇವರ ಶಿಷ್ಯನಾದ ಸಕ್ಕರಿಕರಡೆಪ್ಪನ ಅಪಾರ ಮಹಿಮೆಯು ವಿಶದವಾಗಿ ವರ್ಣಿಸಲ್ಪಟ್ಟಿರುವದು ಈ ಸಕ್ಕರಿ ಶರಣನಂತಹ ಶರಣನು ಇದೀ ಪ್ರಪಂಚದಲ್ಲಿ ವೀರಶೈವ ಮತದೊಳಗೆ ಹುಟ್ಟುವದು ಅಪರೂಪ. ಆ ಗುರುಶಿಷ್ಯರೀರ್ವರ ಚರಿತ್ರೆಗಳು ಒಂದು ಗ್ರಂಥದಲ್ಲಿ ತಯಾರುಮಾಡಿರುವೆವು. ಈ ಗ್ರಂಥವನ್ನೋದುವವರು ಖಂಡಿತವಾಗಿಯೂ ನೀತಿ, ಭಕ್ತಿ, ಜ್ಞಾನಗಳ ಕಡೆ ಮನಸ್ಸನ್ನು ಕೊಡದಿರಲಾರರು. ಮತ್ತು ಇದಲ್ಲದೆ ಮೈಸೂರು ಶ್ರೀಮನ್ಮಹಾರಾಜ, ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರವರು ಶಿಷ್ಯರಾದ ಕಂಬಳಿ ಸ್ವಾಮಿಗಳ ಸಮೇತ ಇರುವ ಮಹಾಸ್ವಾಮಿಗಳ ಛಾಯಾಚಿತ್ರ ಪಟವು ಪ್ರಥಮ ಪುಟದಲ್ಲಿ ಅಂದವಾಗಿರಿಸಲ್ಪಟ್ಟಿರುವದು. ನಮ್ಮ ವಿಳಾಸ ಚೆನ್ನಾಗಿರಲಿ. ಇದರ ಬೆಲೆ ವಿ. ಪಿ. ಸಹಿತ ರೂ. 1—8—0.

ನಮ್ಮ ವಿಳಾಸ:— ಬಸವರಾಜ ಕಂಪನಿ, ಬಳ್ಳಾರಿ.

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ. ಸುಬ್ಬರಾಯಿಯವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ಇಂಡಿಯನ್ ಪೆಟಲ್ ಡಸ್ಟ್:— ಈ ಮನೋಹರವಾದ ಸುಗಂಧ ಒಂದು ಪೊಟ್ಟಣವು ನೀವು ವಸ್ತ್ರವಿಡುವಲ್ಲಿಯಾಗಲಿ ವಸ್ತ್ರದ ಪೆಟ್ಟಿಗೆಯಲ್ಲಿಯಾಗಲಿ ಇಟ್ಟರೆ ನಿಮ್ಮ ಎಲ್ಲಾ ಉಡಿಗೆತೊಡಿಗೆಗಳಿಗೆ ಮದುರವಾದ ಮತ್ತು ದೀರ್ಘಕಾಲದವರೆಗೆ ಉಳಿಯುವ ಸುವಾಸನೆಯನ್ನು ಕೊಡುವದು ಮತ್ತು ನಿಮ್ಮ ವಸ್ತ್ರವನ್ನು ಕ್ರಿಮಿಗಳ ಅನಾಹುತದಿಂದ ಕಾಪಾಡುವದು ಶಾಂತವಾದ ಮತ್ತು ಇಂಪಾದ ಪರಿಮಳದಿಂದ ಅಪ್ರಮೇಯವಾಗಿದ್ದು ಅದರ ಮೃದು ಸುಗಂಧಕ್ಕೂ ಸ್ಥಿರವಾದ ಪರಿಮಳಕ್ಕೂ ಅನೇಕರಿಂದ ಹಾರೈಸಲ್ಪಡುವುದು. ಈ ಅದ್ವಿತೀಯವಾದ ಸುಗಂಧವು ಪರಿಮಳಾತಿಶಯದಿಂದಲೂ ಸುಗುಣ ರಮ್ಯತೆಯಿಂದಲೂ ಸ್ಥಿರವಾಗಿ ನಿಂತೀತು ದೂರವಾಗಿಯೂ, ವಿಸ್ತಾರವಾಗಿಯೂ ವ್ಯಾಪಿಸಿಕೊಂಡದೆ. ಅದು ವಿಶೇಷವಾದ ಕ್ರಿಮಿನಾಶಕವೂ ಅಪೂರ್ವ ಗುಣಗಳಿಂದ ಕೂಡಿದ ಔಷಧವೂ ಸ್ವಚ್ಛಕಾರಿಯೂ ಆಗಿರುವದು ಮತ್ತು ಈಗ ಇರುವವುಗಳಲ್ಲಿ ಅತ್ಯಂತ ಒಳ್ಳೆ ಕ್ರಿಮಿನಾಶಕ ಔಷದವಲ್ಲದೆ ಹಿಂದುಸ್ಥಾನದ ಅತ್ಯಂತ ಮನೋಹರವಾದ ವಿವಿಧ ಔಷದಗಳ ಸಾರವು ಕ್ರಯ ಪೊಟ್ಟಣ 1ಕ್ಕೆ 4 ಆಣೆ.

ಧಾತುಪುಷ್ಟಿ ರಸಾಯನ:— ಇದರ ಸೇವನೆಯಿಂದ ನರಗಳ ಸಂಬಂಧವಾದ ಮತ್ತು ಅನೇಕ ವಿದವಾದ ಎಲ್ಲಾ ಶರೀರ ದುರ್ಬಲಗಳು ಹೋಗಿ ಹೊಟ್ಟೆಯಲ್ಲಿ ಅಗ್ನಿ ವುಂಟಾಗಿ, ದೇಹವು ಪುಷ್ಟಿಹೊಂದುವದು. ಪುಷ್ಟಿಯನ್ನು ಕಳೆದುಕೊಂಡ ಚಿಕ್ಕ ವಯಸ್ಸಿನವರಿಗೆ ಇದು ತಕ್ಕ ಔಷಧವು ಇದರಿಂದ ಶರೀರದ ಪ್ರತಿ ಅವಯವದ ನೋವೂ, ಅಶಕ್ತಿಯೂ ಹೋಗಿ, ಪುಷ್ಟಿಯೂ, ಬಲವೂ ಉಂಟಾಗುವುದು ಪೆಟ್ಟಿಗೆ 1ಕ್ಕೆ ರೂ 2 ವಿ ಪಿ. ಛಾಂಗಿ ಚಾರ್ಜ 6 ಆಣೆ.

ಅಜೀರ್ಣ ಮಾತ್ರೆಗಳು:— ಅಜೀರ್ಣ, ತೇಗುವುದು, ಹೊಟ್ಟೆಯಲ್ಲಿ ಉರಿ, ಮತ್ತಾಗಿರುವಿಕೆ, ಹಸಿವಿಲ್ಲದಿರುವದು, ಪಿತ್ತದಿಂದಬಾಯಿಯ ದುರ್ಗಂಧ, ಹೊಟ್ಟೆಶೂಲೆ ನಿದ್ದೆಹತ್ತದಿರುವಿಕೆ ತಲೆತಿರುಗುವುದು, ಇವೆಲ್ಲಾ ನಿರ್ಮೂಲವಾಗುವವು. ಪೆಟ್ಟಿಗೆ 1–ಕ್ಕೆ 8 ಆಣೆ, ವಿ ಪಿ ಛಾಂಗಿಚಾರ್ಜುಗಳು 3 ಪೆಟ್ಟಿಗೆವರಿಗೂ 5 ಆಣೆ

ಪ್ರಮೇಹನಿವಾರಣೆ:— ಯಾವ ಕಾರಣದಿಂದಲಾದರೂ ಸಂಭವಿಸಿದ ಕಷ್ಟನಿದ್ರೆಯಲ್ಲಿ ಉರಿ ಮುಂತಾದವು ವಾಸಿಯಾಗುವುದು. ಸ್ತ್ರೀ ಪುರುಷರು ಉಪಯೋಗಿಸಬಹುದು. ಸೀಸೆ 1ಕ್ಕೆ 1 ರೂ. 6 ಸೀಸೆವರಿಗೂ ವಿ. ಪಿ ಚಾರ್ಜ 5 ಆಣೆ.

ವೇದನಾಪರಿಹಾರಕ ತೈಲವು:— ಇದನ್ನು ಮೇಲ್ಭಾಗದಲ್ಲಿ ಮಾತ್ರ ಹಚ್ಚುವದರಿಂದ ಕೈಕಾಲು ಹಿಡಿದುಕೊಳ್ಳುವುದು, ವಾತರೋಗ, ಪಾರ್ಶ್ವವಾಯು. ನರಗಳಸೆಳತ, ಮೊಣಕಾಲು, ಸೊಂಟ ಮತ್ತು ಎದೆತೋಳು, ಸಕಲ ಅಂಗಗಳ ಕೀಲಿನ ನೋವುಗಳು ತಲೆಸೂಲೆ, ಹಲ್ಲುನೋವು, ಕಿವಿನೋವು, ಚಳಿ, ಕೆಮ್ಮು ಮುಂತಾದ ಎಲ್ಲಾ ವಿಧವಾದ ನೋವುಗಳೂ ಖಂಡಿತವಾಗಿ ವಾಸಿಯಾಗುವವು. ಸೀಸೆ 1ಕ್ಕೆ ರೂ. 1 ವಿ. ಪಿ. 3 ಸೀಸೆವರಿಗೂ 5 ಆಣೆ.

☞ ಈ ಪ್ರಾಂತ್ಯದಲ್ಲಿ ಕನ್ನಡ, ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವದಿಲವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಿಳುನಲ್ಲಾಗಲೀ ಸ್ಫುಟವಾಗಿ ತಿಳಿಯುವಂತೆ ಬರಿಯಬೇಕು.

MY ADDRESS.

P. SUBBA ROY,
Ayurvedic Pharmacy,
Sri Perumalkoil,
SANNATHY, TANJORE.

ನಮ್ಮ ವಿಳಾಸ:—
ಪಿ. ಸುಬ್ಬರಾಯಿ,
ಆಯುರ್ವೇದ ಔಷಧಶಾಲ್ಲ,
ಶ್ರೀ ವೆಂಕಟೇಶ ಪೆರುಮಾಳ್ ದೇವಸ್ಥಾನ
ಸನ್ನದಿ, ತಂಜಾವೂರ.

1914ರಲ್ಲಿ ಪುದುಕೋಟೆಯಲ್ಲಿ ಜರುಗಿದ
ಶ್ರೀ ಮಾರ್ತಾಂಡ ವಸ್ತುಪ್ರದರ್ಶನದಲ್ಲಿ

ಒರಿಯಂಟಲ್ ಸಾಬೂನುಗಳು

ಉತ್ಕೃಷ್ಟವಾಗಿವೆಯೆಂತ

ಚಿನ್ನದ ಪದಕವು ದೊರಕಿದೆ.

ಈ ಸಾಬೂನುಗಳಿಗೆ ಮಲಬಾರ ಮತ್ತು ದಕ್ಷಿಣ ಕನ್ನಡ ಪ್ರಾಂತ್ಯಗಳಲ್ಲಿ ರಾ. ಬಿ. ನರಸಿಂಹ ಪ್ರಭು, ಬಂಟವಾಳ, ದಕ್ಷಿಣ ಕನ್ನಡ ಇವರು ಏಜಂಟರಾಗಿರುವರು.

ಇತರ ಎಲ್ಲಾ ಪ್ರಾಂತ್ಯಗಳಲ್ಲಿಯೂ ಏಜಂಟರು ಬೇಕಾಗಿರುವರು.

ಸೆನ್ ಸೆನ್. SEN SEN.)

ಕಂಠದಲ್ಲಿ ಉಂಟಾಗುವ ದೋಷಗಳನ್ನು ನಿವಾರಿಸಿ ಸುಖವನ್ನೀಯುವುದು.

ಶ್ವಾಸದಲ್ಲಿ ಸುವಾಸನೆಯನ್ನುಂಟುಮಾಡುವುದು.

ಸೆನ್ ಸೆನ್ ಇದರ ಗುಣವು ಇಷ್ಟೇ ಅಲ್ಲ. ಆರೋಗ್ಯವನ್ನು ಸರಿಪಡಿಸುತ್ತದೆ; ಬಹಳ ಮನೋಹರವಾದ ರುಚಿಯುಳ್ಳದ್ದಾಗಿದೆ; ಸ್ವರವನ್ನು ಸ್ಪಷ್ಟಗೊಳಿಸಿ ಬಲಪಡಿಸುವದು; ಸಂಗೀತಗಾರರಿಗೆ, ಪ್ರಸಂಗಗಳನ್ನು ಮಾಡುವ ಉಪದೇಶಕರಿಗೆ, ಭಾಷಣಗಳನ್ನು ದೊಡ್ಡ ದೊಡ್ಡ ಸಭೆಗಳಲ್ಲಿ ಮಾಡುವಂಥವರಿಗೆ ಇದು ಬಹಳ ಉಪಯೋಗಕರವಾಗಿರುವುದು.

ಸೆನ್ ಸೆನ್ — ಇದರ ಕೆಲವು ಹರಳುಗಳನ್ನು ವೀಳ್ಯದೊಂದಿಗೆ ಸೇವಿಸಿದರೆ ವೀಳ್ಯದ ರುಚಿಯು ಬಹಳ ಸೊಗಸಾಗುವುದು.

ಸೆನ್ ಸೆನ್ — ಅಜೀರ್ಣ ಮೊದಲಾದ ಜೀರ್ಣಕೋಶದ ದೋಷಗಳಿಗೆಲ್ಲಾ ದಿವ್ಯ ಔಷಧಿಯಾಗಿರುವುದು. ಕಂಠದಲ್ಲಿ ಬಹಳ ಸೀತಳವಾದ ಮತ್ತು ಸುಖಕರವಾದ ಭಾವನೆಯು ಇದರ ಸೇವನೆಯಿಂದ ಉಂಟಾಗುತ್ತದೆ. ಬೀಡಿ, ಚುಟ್ಟಾ ವಗೈರೆಗಳನ್ನು ಸೇದಿದ ನಂತರ ಸೆನ್‌ಸೆನ್‌ನ್ನು ಉಪಯೋಗಿಸಿದರೆ ಬಾಯಿಯ ಕೆಟ್ಟ ವಾಸನೆಯನ್ನು ಹೋಗಗೊಳಿಸಿ ಸುವಾಸನೆಯನ್ನುಂಟುಮಾಡುವುದು. 3 ಆಣೆ ಕ್ರಯದ ಒಂದು 'ಪೆಕೆಟನ್ನು' ಬಹಳ ಕಾಲ ಉಪಯೋಗಿಸಬಹುದು.

ಅರ್ಧಾಣೆಯ ಸ್ಟಾಂಪನ್ನು ಕಳುಹಿಸಿಕೊಟ್ಟರೆ ಮಾದರಿ ಪೆಕೆಟನ್ನು ಉಚಿತವಾಗಿ ಕಳುಹಿಸಿಕೊಡುವೆವು.

Address:—	ನಮ್ಮ ವಿಳಾಸ:—
Muller & Phipps,	ಮುಲ್ಲರ್ ಎಂಡ್ ಫಿಪ್ಸ್,
21 Sankurama Chetty Street,	21 ಸಂಕುರಾಮಚೆಟ್ಟಿ ರಸ್ತೆ,
MADRAS.	ಮದರಾಸು.

ನ್ಯಾಯದರ್ಪಣ.

ಹೊಸ ಪುಸ್ತಕ.

ಇಂಡಿಯಾ ದೇಶದ ಸಮಸ್ತ ಹಿಂದೂ ಜನರ ಸಾಮಾನ್ಯ ಧರ್ಮಗಳು, ಅವುಗಳನ್ನು ಅತಿಕ್ರಮಿಸಿ ನಡೆಯುವವರಿಗೆ ಉಂಟಾಗತಕ್ಕ ಫಲಗಳು, ಇವುಗಳನ್ನು ಕುರಿತು, ಗವರ್ನಮೆಂಟಿನವರಿಂದ ಅನೇಕ ಆಕ್ಟುಗಳು, ರೆಗ್ಯುಲೇಷನ್‌ಗಳು, ಶಾಸನಗಳು ವಗೈರೆ ವಿಧಾಯಕವಾಗಿ ಇರುತ್ತೆ. ಇವುಗಳೆಲ್ಲಾ ಇಂಗ್ಲೀಷ್ ಭಾಷೆಯಲ್ಲಿಯೇ ಅಪಾರವಾಗಿ ಇರುತ್ತವೆ. ಇವುಗಳಲ್ಲಿ, "ಕಂಟ್ರಾಕ್ಟ್" ಅಂದರೆ ಕರಾರುಗಳು, "ಬ್ರೀಚ್ ಆಫ್ ಕಂಟ್ರಾಕ್ಟ್" ಅಂದರೆ ಒಪ್ಪಂದಕ್ಕೆ ತಪ್ಪಿ ನಡೆಯೋಣ, ದ್ರೋಹ, ಲಿಮಿಟೇಷನ್, ಛಾಪಾಕಾಗದ, ರಿಜಿಸ್ಟ್ರೇಷನ್, ಸಿವಿಲ್ ಪ್ರೊಸಿಡ್ಯೂರ್, ಕ್ರಿಮಿನಲ್ ಪ್ರೊಸಿಡ್ಯೂರ್, ಪೀನಲ್ ಕೋಡ್, ಹಿಂದೂ ಲಾ, ಮುಂತಾದ ಧರ್ಮಶಾಸ್ತ್ರಗಳಿಂದ, ಮನುಷ್ಯರ ನಿತ್ಯಾಚರಣೆಗೆ ಅವಶ್ಯಕವಾದ ಲೌಕಿಕ ವ್ಯವಹಾರ ಧರ್ಮಗಳ ಮುಖ್ಯ ಸಂಗತಿಗಳನ್ನೆಲ್ಲಾ ಆರಿಸಿ ಈ ಸಣ್ಣ ಪುಸ್ತಕವನ್ನು ರಚಿಸಿರುತ್ತೆ ಮತ್ತು ವಾಡಿಕೆಯಲ್ಲಿ ಇರತಕ್ಕ ನಾನಾ ವಿಧಗಳಾದ ದಸ್ತಾವೇಜುಗಳ ಅನೇಕ ನಮೂನೆಗಳು ಮತ್ತು ಕ್ರಿಮಿನಲ್ ರಿವಿನ್ಯು ಗ್ರಾಮ ಮುನಸೀಫ್ ಕೋರ್ಟುಗಳ ಮುಂದಿನ ದಾವಾ ವಗೈರೆ ಅರ್ಜಿಗಳ ಮಾದರಿಗಳು ಅಡಕವಾಗಿ ಇರುತ್ತೆ. ಬೆಲೆ 1—8—0. ವಿ. ಪಿ. 1—12—0.

ಲಾಯರ್ ಯಂ ಯಸ್. ನಂಜಪ್ಪನವರು,
ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

11ಪುಸ್ತಕಗಳನ್ನು ಒಟ್ಟಾಗಿ ತರಿಸಿಕೊಂಡರೆ ಪೋಸ್ಟೇಜು ಸೇರಿ 15-0-0 ಆಗುತ್ತೆ.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ.

೧. ಕುಟುಂಬಜೀವನಿ—ಎಲ್ಲಾ ರೋಗಗಳನ್ನು ತ್ವರಿಯಾಗಿ ಗುಣಪಡಿಸುವದು. 16 ಔಷಧಗಳ ಸಂಗ್ರಹದ ಪೆಟ್ಟಿಗೆ 1ಕ್ಕೆ 8—0—0.

೨. ಶತಮೂಲಿಕಾ ಅಮರಸಂಜೀವನಿ—ಈ ಟೊನಿಕ್ ದ್ರಾವಕವು ಶಿಶ್ರೂಷೆಗಳಿಗೆ ಚೈತನ್ಯ ಉಂಟುಮಾಡಿ ಅಮರತ್ವವನ್ನು ಕೊಡುತ್ತದೆ. ಬಾಟ್ಲಿ 1ಕ್ಕೆ 1—0—0.

೩. ಬಾಲಸಂಜೀವನಿ—ಮಧುರ ಟೊನಿಕ್ ಅಶಕ್ತ ಬಾಲಕರಿಗೆ ಸಶಕ್ತರಾಗಿ ಶುಕ್ಲ ವರ್ಧಮಾನ ಚಂದ್ರನಂತೆ ಬೆಳಗಿಸುತ್ತದೆ. ಬಾಟ್ಲಿ 1ಕ್ಕೆ 0—12—0.

೪. ವಸಂತ ಕುಸುಮಾಕರ.—ಈ ಸುವಾಸಿತ ತೈಲವು ಕೇಶ ವೃದ್ಧಿಮಾಡಿ ಶಿರೋರೋಗ ನೇತ್ರರೋಗಗಳನ್ನು ಶಮನಮಾಡಿ ಮೆದುಳನ್ನು ತಂಪುಮಾಡಿ ಜ್ಞಾನಶಕ್ತಿ ಹೆಚ್ಚಿಸಿ, ಬುದ್ಧಿ ಭ್ರಮಣವನ್ನು ಗುಣಮಾಡುತ್ತದೆ. ಬಾಟ್ಲಿ 1ಕ್ಕೆ 1—0—0

೫. ಸುದರ್ಶನಮಾಲಿನಿ—ಈ ಸಿದ್ಧೌಷಧವು ಮೇಹವ್ರಣ ಇತ್ಯಾದಿ ಎಲ್ಲಾ ದುಸಾಧ್ಯ ವ್ರಣಗಳನ್ನು 7-8 ದಿವಸಗಳಲ್ಲಿ ಪೂರ್ಣ ಗುಣಪಡಿಸುವದು. ಕ್ರಯ 4—0—0.

೬. ಗರುಡಧ್ವಜ—ಇದು ಸರ್ಪ ಹುಚ್ಚುನಾಯಿ, ಚೇಳ, ಇಲಿ ಇತ್ಯಾದಿ ಸರ್ವ ಜಂತು ವಿಷಗಳಿಗೆ ಸಂಜೀವನವಾಗಿರುತ್ತದೆ. ಅನುಭವಸಿದ್ಧ 2—0—0.

೭. ಆನಂದವನವಿಲಾಸ—ಇದು ಡ್ಯಾಬಿಟಿಸ ಎಂಬ ಬಹುಮೂತ್ರರೋಗವನ್ನು 48 ದಿವಸಗಳಲ್ಲಿ ಪೂರ್ಣ ಗುಣಪಡಿಸುತ್ತದೆ. ಪೂರ್ಣ ಔಷಧಕ್ಕೆ 5—0—0.

ನಮ್ಮ ಡಿಸ್ಪೆನ್ಸರಿಯಲ್ಲಿ ಸಿದ್ಧ ಕಲ್ಪ ಭೈರಾಗಿ ಪ್ರಯೋಗಗಳಿಂದ ತಯಾರಿಸಿದ ಪೌಡರ ಮಾತ್ರೆಗಳು, ಲೇಹ ಚೂರ್ಣಗಳು, ತೈಲ ಘೃತಗಳು, ಆಸವಾರಿಷ್ಟಗಳೂ ತುಂಬಾ ಇರುತ್ತವೆ. ಕ್ರಯವಿಲ್ಲದ ನಮ್ಮ ಕೆಟಲಗನ್ನು ತರಿಸಿಕೊಳ್ಳಿರಿ. ಏಜಂಟರು ಬೇಕು. ಹೆಚ್ಚು ಡಿಸ್‌ಕೌಂಟ್ ಸಿಕ್ಕುವದು.

ಎಮ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

ವಿನೋದ! ಮಾಸಪತ್ರಿಕೆ!!

"ಚಾತುರ್ಯ."

ಈ ಮಾಸಪತ್ರಿಕೆಯಲ್ಲಿ ಪತ್ತೆದಾರಿ ಕಥೆಗಳು, ಹಾಸ್ಯಲಹರಿಯು, ಹಾಸ್ಯವಿನೋದ, ನೀತಿಸಂಬಂಧ ಲೇಖನಗಳೂ, ಕಥೆಗಳೂ, ಕಾದಂಬರಿಗಳೂ ಪ್ರಕಟಿಸಲ್ಪಡುತ್ತೆ. ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ ೧ ರೂಪಾಯಿ. ಮಾದರಿ ಸಂಚಿಕೆಗೆ ೧ ಆಣೆ ಸ್ಟಾಂಪು ಕಳುಹಿಸಿರಿ.

ವಿಳಾಸ:— ಮ್ಯಾನೇಜರ್, "ಚಾತುರ್ಯ"
ಬೆಂಗಳೂರು ಸಿಟಿ.

ಯುನಿವರ್ಸಲ್ ಎಸ್ಯುರೆನ್ಸ್ ಕೊ, ಲಿಮಿಟೆಡ್.

ಹೆಡ್ ಆಫೀಸು:—191, ಬೌ ಬಜಾರ, ಕಲ್ಕತ್ತಾ.

ಸರಕಾರದ ಭದ್ರತೆಯ ಮೇಲ್ವಿಚಾರದಲ್ಲಿ ನಡೆಯುತ್ತಿರುವುದು.

ಭಂಡವಾಳ ರೂ. 10,00,000.

ಈ ತನಕ ಕೊಡೋಣಾದ ವಿಮೆ ಹಕ್ಕುಗಳ ಮೊಬಲಗು ಶುಮಾರು 8,00,000.
ಫಂಡು—ರೂ. 3,00,000ಕ್ಕೆ ಮಿಕ್ಕಿದೆ.
ಸರಕಾರದವರ ಭದ್ರತೆಯಲ್ಲಿ ರೂ. 50,000ವಿರುವುದು.

ಚೀಫ್ ಇನ್ಶೂರೆನ್ಸ್ ಸ್ಕೀಮ್ ಎಂಬ ವೈದ್ಯಪರೀಕ್ಷೆ ಇಲ್ಲದೆ ವಿಮೆ ಉತ್ತರಾಯಿಸಿಕೊಳ್ಳಬಹುದಾದ ಸರ್ವರಿಗೂ ಸಾಧ್ಯವಾದ ಸುಲಭ ಕ್ರಮ.

ಈ ಪ್ರಾಂತ್ಯಗಳಲ್ಲಿ ಯಾವ ವಿಮೆ ಕಂಪೆನಿಗಳಲ್ಲಾದರೂ ಈತನಕ ಇಂಥಾ ಅಗ್ಗದರಗಳ ವಿಮೆ ಉತ್ತರಾಯಿಸುವ ಏರ್ಪಾಡೇ ಇರುವದಿಲ್ಲ. ಭಾರತೀಯರಲ್ಲಿ ವಿಶೇಷವಾಗಿರುವ ಬಡವರಗೋಸ್ಕರವೇ ಈ ಕ್ರಮವು ಏರ್ಪಡಿಸಲ್ಪಟ್ಟಿರುತ್ತದೆ. ಪ್ರೊವಿಡೆಂಟ ಫಂಡುಗಳ ಕ್ರಮದ ಪ್ರಕಾರ ಮುಂದಕ್ಕೆ ಸಂಭವಿಸಬಹುದಾದ ಅನನುಕೂಲತೆಗಳು ಇದರಲ್ಲಿರವು. ವಿಮೆ ಉತ್ತರಾಯಿಸಿಕೊಳ್ಳುವ ಈ ನವೀನ ಅಗ್ಗದರಗಳ ಏರ್ಪಾಡು ಬಹಳ ಉಪಯುಕ್ತವಾದದ್ದು ಎಂತ ವಿಮೆ ಸಂಘಗಳ ವಿಶೇಷ ಮಾಹಿತಿಧಾರರ ಅಭಿಪ್ರಾಯವಿರುವುದು. ನಿಶ್ಚಿತವಾದ ವಿಮೆ ಮೊಬಲಗುಗಳ ರೂಪಾಯಿ ಮತ್ತು ಅರ್ಧ ರೂಪಾಯಿಗಳ ಪೊಲಿಸಿಗಳು ಈ ಕ್ರಮದ ಮೇರೆಗೆ ಕೊಡೋಣಾಗುವವು.

ಸಾಮಾನ್ಯ ವಿಮೆ ಇಲಾಖೆ.

ಈ ಕಂಪೆನಿಯ ಈ ಇಲಾಖೆಯಲ್ಲಿ ವಿಮೆ ಉತ್ತರಾಯಿಸಿಕೊಳ್ಳುವವರ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಲಿರುವುದು. ಸಾಧ್ಯವಿರುವ ಅತ್ಯಂತ ಕಡಮೆಯ ದರಗಳು ಸಂಪೂರ್ಣವಾದ ಭದ್ರತೆಯು ಈ ಇಲಾಖೆಯ ವಿಶೇಷ ಪ್ರಯೋಜನಗಳಾಗಿರುವದು. ಕಂಪೆನಿಯ ಲೆಕ್ಕದ ಸ್ಥಿತಿಗತಿಯನ್ನು ತೋರಿಸುವ ಮೊಖಾಬಿಲೆ ಪಟ್ಟಿಗಳನ್ನು ಈ ಕಂಪೆನಿಯ ವಿಷಯ ಪತ್ರಗಳ ಅಭಿಪ್ರಾಯವೇನೆಂಬುದನ್ನೂ ತರಿಸಿ ನೋಡಿರಿ.

ಒಳ್ಳೇ ಚಟುವಟಿಕೆಯ ಜಾಣರಾದ ಏಜಂಟರುಗಳು ಬೇಕಾಗಿರುವರು. ಶರ್ತಗಳ ಬಗ್ಗೆ ಕೆಳಗಣ ವಿಳಾಸಕ್ಕೆ ಬರಕೊಳ್ಳಬಹುದು.

ವಿಳಾಸ:— **ಲಕ್ಷ್ಮಣರಾವ್ ಬ್ರದರ್ಸ್,**
ಚೀಫ್ ಏಜಂಟ್ಸ್, ಕಸಬಾ, ಮೈಸೂರು, ಕೊಡಗು; [illegible]

ನವೀನ ಮುದ್ರಿಯ ಗ್ರಂಥಮಾಲೆ.

೧. ಪ್ರಶ್ನೋತ್ತರ ಲೇಖ್ಯಬೋಧಿನಿ. ಲೋಕವ್ಯವಹಾರವನ್ನು ಶೋಧಿಸುವುದು ... ... ೧—೭—೦

The Self English Study ... ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ ... ಆಂಗ್ಲಭಾಷಾ ಪ್ರವೇಶದಾಯಿನಿ ... ೧—೩—೦

The Self English Study ... ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ ... ಆಂಗ್ಲಭಾಷಾ ಪ್ರವೇಶದಾಯಿನಿ ... ೧—೩—೦

The Self English Study ... ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ ... ಆಂಗ್ಲಭಾಷಾ ಪ್ರವೇಶದಾಯಿನಿ ... ೧—೩—೦

ಇವು ಮೂರು ಪುಸ್ತಕಗಳೂ ಬೋಧಕರ ಸಹಾಯವಿಲ್ಲದೆ ಇಂಗ್ಲಿಷ್‌ಭಾಷೆಯನ್ನು ತಿಳಿಸುವುವು.

೫. ಕಥಾ ಸರಿತ್ಸಾಗರ (ಪೂರ್ವಭಾಗ). ಪಾರ್ವತೀ ದೇವಿಗೆ ಪರಮೇಶ್ವರನು ಹೇಳಿದ ದಿವ್ಯವಾದ ಕಥೆಗಳು ... ... ೧—೧೨—೦

೬. ಮಾಧವೀ ಕಂಕಣ (ಬೆಂಗಾಳಿ ನಾವಲು). ಕೀರ್ತಿಶೇಷರಾದ ರಾಮೇಶ ಚಂದ್ರದತ್ತ ಮಹಾಶಯ ರಚಿತ. ಅಗತ್ಯ ಓದತಕ್ಕದ್ದು ೧—೮—೦

೭. ಭಾಷಾನಿಧಿ. ಒಂಭತ್ತು ಲಿಪಿ ಮತ್ತು ಒಂಭತ್ತು ಭಾಷೆಗಳನ್ನು ಬೋಧಕರ ಸಹಾಯವಿಲ್ಲದೆ ಕಲಿಸುವುದು.

೧. ವರ್ಣ ಪರಿಜ್ಞಾನ (೧ನೆ ಪುಸ್ತಕ) ... ... ೧—೧೨—೦
೨. ಶಬ್ದ ಪರಿಜ್ಞಾನ (೨ನೆ ಪುಸ್ತಕ) ... ... ೧—೧೨—೦
೩. ವಾಕ್ಯ ಪರಿಜ್ಞಾನ (೩ನೆ ಪುಸ್ತಕ) ... ... ೧—೧೨—೦

೮. ಶಕ್ತಿ (ಬಂಗಾಳೆಯ ನಾವಲು). ಓದುವುದಕ್ಕೆ ಬಲು ಚೆನ್ನಾಗಿದೆ ... ... ೦—೧೨—೦

೯. ಭೂಮಿಯ ಅಳತೆ. ಬೋಧಕರ ಸಹಾಯವಿಲ್ಲದೆ ಈ ಶಂಕುಬೋಜಣೆಯನ್ನು ಕಲಿಸುವುದು ... ... ೦—೧೨—೦

೧೦. ಸಾವಿತ್ರೀ. (ಬಂಗಾಳೆಯ ನಾವಲು) ... ... ೦—೪—೦
೧೧. ಸತೀ ದೇವಿ. (ಬಂಗಾಳೆಯ ನಾವಲು) ... ೦—೪—೦
೧೨. ದಮಯಂತಿ. (ಬಂಗಾಳೆಯ ನಾವಲು) ... ೦—೪—೦
೧೩. ಸಂಯುಕ್ತೆ. (ಬಂಗಾಳೆಯ ನಾವಲು) ... ೦—೪—೦
೧೪. ಶ್ರೀ ವಿವೇಕಾನಂದ ಸ್ವಾಮಿ. (ಸಚಿತ್ರ ಚರಿತ್ರೆ) ... ೦—೪—೦
೧೫. ಶ್ರೀ ವಿವೇಕಾನಂದೋಪನ್ಯಾಸ. (ಹಿಂದೂಮತ) ... ೦—೪—೦
೧೬. ತಾರಾನಾಥ. (ಜೀವನ ಚರಿತ್ರೆ) ... ... ೦—೪—೦
೧೭. ದಾದಾಭಾಯಿ ನೌರೋಜಿ ... ... ೦—೧—೦
೧೮. ಸರ್. ಟಿ. ಮಾಧವ ರಾವ್ ... ... ೦—೧—೦
೧೯. ಈಶ್ವರ ಚಂದ್ರ ವಿದ್ಯಾಸಾಗರ ... ... ೦—೧—೦
೨೦. ರಾಜಾರಾಮಮೋಹನರಾಯಿ ... ... ೦—೧—೦

ಭಾರತಿ ಸಂಪಂಗಿರಾಮು,
೪೨. ಸಿ. ಬೀದಿ ಕೋಟೆ, ಬೆಂಗಳೂರು ಸಿಟಿ.

ಅಶಕ್ತರಾದ ಸ್ತ್ರೀಯರಿರಾ!!!

ಗರ್ಭಾವಸ್ಥೆಯಲ್ಲಿಯು, ವ ಅನಂತರ ತೋರಿಬರುವ ಸರ್ವ ಬಗೆಯ ವಿಕಾರಗಳಿಗೆ ನಿಮಗೆ ಒಂದು ಉಪಾಯವು ಅಗತ್ಯವಿರುವುದು. ಆ ಉಪಾಯವಾದರೋ

"ಗುಡೆರಿನ್"

ಎಂಬ ಹೆಸರಿನ ಈ ಔಷಧವನ್ನು ಸೇವಿಸುವುದೇ! ಸೂರ್ಯನಕಿರಣಗಳು ಇಬ್ಬನಿಯ ಮೇಲೆ ಬೀಳುತ್ತಲೇ ಇಬ್ಬನಿಯೆಲ್ಲವೂ ಹೇಗೆ ಆರಿಹೋಗುವುದೋ, ಅದೇ ಮರ್ಯಾದೆಯಲ್ಲಿ ಅಶಕ್ತರಾದ ಸ್ತ್ರೀಯರು ಈ "ಗುಡೆರಿನ್" ಎಂಬ ಔಷಧವನ್ನು ಸೇವಿಸುತ್ತಲೇ, ಅವರ ಶಾರೀರಿಕ ದುಃಖಗಳೆಲ್ಲವೂ ಉತ್ತರಕ್ಷಣದಲ್ಲಿಯೇ ಹುಟ್ಟಡಗಿ ಹೋಗುವವು. ಅನಿಯಮಿತವಾದ ಋತುಸ್ರಾವ, ಅಶಕ್ತತೆ, ಇವೆಲ್ಲ ರೋಗಗಳಿಗೆ ಇದು ರಾಮಬಾಣವೇ ಸರಿ.

ಹದಿನಾರು ಸಾವಿರ (16,000)

ಕ್ಕಿಂತ ಹೆಚ್ಚು ಡಾಕ್ತರರು ಬಹಳ ಸೂಕ್ಷ್ಮತೆಯಿಂದ ಈ "ಗುಡೆರಿನನ್ನು" ಶೋಧಿಸಿ, ಮೇಲೆ ಹೇಳಿದ ರೋಗಗಳಿಗೆ ಇದೇ ಸಿದ್ಧೌಷಧವೆಂದು ನಿರ್ಧಾರಗೈದಿರುವದರಿಂದ, ಈ ಔಷಧವು ಅಸಂಖ್ಯವಾದ ಔಷಧಾಲಯಗಳಲ್ಲಿ ಉಪಯೋಗಿಸಲ್ಪಡುತ್ತದೆ. ಇದು "ಹಿಸ್ಟಿರಿಯಾ" ಮೊದಲಾದ ಸ್ತ್ರೀಯರ ಋತುಸ್ರಾವ ಸಂಬಂಧಿಯಾದ ಸರ್ವರೋಗಗಳಿಗೂ ಮಹೋಪಕಾರಿಯು. ಪ್ರಕೃತ ಪ್ರಸೂತವಾದೊಡನೆ ಅನೇಕಂ ಔಷಧಿಗಳನ್ನು ಉಪಯೋಗಿಸುವ ಬದಲಿಗೆ, ಇದನ್ನು ಉಪಯೋಗಿಸಿ ನೋಡಿದ್ದಲ್ಲಿ ಇದರ ಗುಣ ಶೀಘ್ರವಾಗಿ ಕಂಡುಬರುವದು. ಶೀಸೆ ೧ರ ಕ್ರಯ ರೂಪಾಯಿ 3—4—0. ಟ. ಖ. ಸೀಸೆಗೆ 0—7—0.

ದಿ. ಊಲನ್ ಮಾರ್ಟ್, ಮಂಗಳೂರು.

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲ್ಲಿ ನಡದಿರುವ ಯಗ್ಜಬೀಶನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮುಯದಲ್ಲಿಯೂ ರಸಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ.

ಊದಬತ್ತಿಗಳು 4 ರೂ. ತೂಕದ ಶೇರು 1ಕ್ಕೆ ರೂ. 12-0-0, 5-0-0, 3-0-0. 2—8—0, 1—4—0, 1—0—0.

ಅರಗಜ ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2—0—0, 1—0—0, 0—12—0, 0—6—0.

ಸುಗಂಧಿ ಕಾಡ್ಡಿ 1ಕ್ಕೆ 0—1—0. **ಬಾಲಗ್ರಹ** ಧೂಪ ಟಿನ್ 1ಕ್ಕೆ 0—8—0. **ಸುವಾಸನೇ ಸುಣ್ಣ** ಶೀಸೆ 1ಕ್ಕೆ 0—2—0, ಇದಲ್ಲದೆ ಇನ್ನು **ಅನೇಕ ತರಹ ಸೆಂಟ್ಸು**ಗಳು, ಯಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಬಣ್ಣದ ಸಾಮಾನುಗಳು ಸಹ ಇರುತ್ತವೆ. ಮತ್ತು ವರ್ತಕ್ಕೆ ಎರಡಾ ಪರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್

ಸುಗಂಧಕಾರಿ, ಮೈಸೂರು.

ದಿ. ಇನ್‌ವೆನ್‌ಷನ್ ವಾಚು ರೂ. 3.



ಇದನ್ನು ಈಗ ತಾನೇ ತರಿಸಿರುತ್ತೇವೆ. ರಾಸ್ಕೋಪ್ ರೈಲ್ವೇ ವಾಚುಗಳಿಗಿಂತಲೂ ಬಹಳ ಶ್ರೇಷ್ಠವಾದುದಲ್ಲದೆ ಕಾಲವನ್ನು ಸಹಿತ ಬಹುಕ್ರಮವಾಗಿ ತೋರಿಸತಕ್ಕದ್ದಾಗಿರುತ್ತದೆ. ಇದರ ನಮೂನೆಯಾದರೂ ಬಹಳ ಚೆನ್ನಾಗಿರುತ್ತದೆ. ಇದಕ್ಕೆ 5 ವರುಷದ ಗ್ಯಾರಂಟೀಯುಂಟು. ಇದರ ಕ್ರಯ ರೂ. 3—0—0. ಪೋಸ್ಟು ಖರ್ಚು ವಗೈರೆ ಮಾಫಿ ಇರುತ್ತೆ.

ನಿಕ್ಕಲ್ ಚಿಕ್ಕ ಸೈಜು ಲೇಡಿ ವಾಚು ...	...	ಕ್ರಯ 3—12—0
8 ದಿನಸಕ್ಕೆ ಬೀಗಕೊಡುವ ಕೈಗಡಿಯಾರ	...	„ 7—8—0
ರೈಲ್ವೇ ರೆಗ್ಯುಲೇಟರ್ ವಾಚು ...	...	„ 3—8—0
ರಾಸ್ಕೋಪ್ ವಾಚು ...	... ...	„ 2—12—0
ಸಾದಾ ಟೈಂಪೀಸು ...	... ...	„ 1—12—0
ಅಲಾರಂ ಟೈಂಪೀಸು ...	... ...	„ 2—14—0

ಎಡ್ರೆಸ್:— ಎ. ಟಿ. ಎನ್. ಜಯಾಕ್ಷಿ ಕಂಪೆನಿ,
ನಂ. 41 ಕಾಟುಪಿಳ್ಳಾರು ಕೋವಿಲ್ ಸ್ಟ್ರೀಟ್
ಸಾಹುಕಾರುಪೇಟೆ, ಪೋಸ್ಟು ಮದರಾಸು.

ಆತಂಕನಿಗ್ರಹ ಗುಳಿಗೆಗಳು.

ದೇಹದಲ್ಲಿ ಎಂಥಾ ಕಾಯಿಲೆ ಇರುವಲ್ಲಿ ಅದನ್ನು ಶೀಘ್ರದಲ್ಲಿ ಹೋಗಲಾಡಿಸುವ ಪ್ರಯತ್ನ ಮಾಡಿ ತಕ್ಕಂಥಾ ಔಷಧವು ಸೇವಿಸಿ ಅದನ್ನು ಗುಣಹೊಂದಿಸದಿದ್ದರೆ ರತ್ನವಾದ ದೇಹವು ಕ್ಷೀಣಿಸುವದು. ಆದಕಾರಣ ಹಾಗೂ ತಮಗೆ ಏನಾದರೂ ದೇಹಾಸೌಖ್ಯ ಕಂಡುಬರುವಲ್ಲಿ ತಕ್ಷಣವೇ ಆತಂಕನಿಗ್ರಹ ಗುಳಿಗೆಗಳನ್ನು ಸೇವಿಸಿ ನಂತರ ದೇಹಬಲವನ್ನು ಸ್ಥಾಪಿಸಿ. ಅತಿ ಉತ್ತಮಕರವಾದ ರತ್ನವೆಂಬ ಔಷಧವು

ಕ್ರಯ 32 ಗುಳಿಗೆಗಳಿಗೆ 1 ರೂಪಾಯಿ.

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,

ಆತಂಕನಿಗ್ರಹ ಔಷಧಾಲಯ, 22, ಬ್ರಾಡ್ವೇ, ಮದ್ರಾಸ

ನಮ್ಮ ಏಜಂಟರು:— 1. ಮೆಸ್ಸರ್ಸ್. ರಫಯೆಲ್ ಎಂಡ್ ಕೊ., ಧ್ರಿಟೊಬಿಲ್ಡಿಂಗ್
2. ಜುಬಿಲಿ ಕೇಕ್ ಬಜಾರ್, ಬೆಂಗಳೂರು. ಮಂಗಳೂರು

ಚಿನ್ನ ಮತ್ತು ಬೆಳ್ಳಿಯ ಮೆಡಲುಗಳನ್ನು ಬಹುಮಾನವಾಗಿ ಪಡೆದ

ಸ್ಟೀವನ್ ಎಂಡ್ ಸನ್

ಬಿಸ್ಕುಟು ವ ಕೇಕುಗಳನ್ನು ತಯಾರಿಸುವವರು, ಮಂಗಳೂರು.

ಏಜಂಟರು:—ಅಂತೋನಿ ಎಲ್. ರೇಗೊ, ಸ್ಮಿಟ್‌ಮೂಟ್ ಬಜಾರ್, ಕಲ್ಲಿಕೋಟೆ.
ಸ್ವದೇಶಿ ಎಂಪೋರಿಯಮ್, ಸೇಲಂ.
ಕಣಕಾಸಬಾ ಚೆಟ್ಟಿಯರ್, ಲಾಲ್‌ಗುಡಿ, ಪುವಲೂರ್, ತಿರುಚಿನಾಪಳ್ಳಿ.
ಎಸ್. ಪ್ಯಾಸ್ ಶೋಪ್, ಮಡಿಕೇರಿ.
ವಿ. ಬಾಲಕೃಷ್ಣ ನ್ಯಾಡು, ಬಿಗ್ ಬಜಾರ್ ಸ್ಟ್ರೀಟ್, ಕೊಯಿಂಬುತ್ತೂರು.
ಆರ್ನೊನ್ ಎಂಡ್ ಧವನ್ ಶೋಪ್, ಉಡ್ಪಿ.

ನೀವು ನಮ್ಮ ಬಿಸ್ಕುಟು ಇತ್ಯಾದಿಗಳಿಂದ ತೃಪ್ತಿಹೊಂದಿದರೆ ಇತರರಿಗೆ ಹೇಳಿರಿ. ಇಲ್ಲವಾದರೆ ನಮಗೆ ತಿಳಿಸಿದರೆ ನಿಮ್ಮನ್ನು ತೃಪ್ತಿಪಡಿಸುವೆವು.

ವಿಳಾಸ:— **ಸ್ಟೀವನ್ ಎಂಡ್ ಸನ್, ಮಂಗಳೂರು**

ಪ್ಲೀಡರ್ ಎಂ. ಮಲ್ಲಾರಾಧ್ಯರಿಂದ ರಚಿತವಾದವುಗಳು.

ವ್ಯವಹಾರ ನಿರ್ಣಯ.

ಕನ್ನಡದ ಲಾ ಪುಸ್ತಕವು.

ತೃತೀಯ ಮುದ್ರಣ, 616 ಪುಟಗಳುಳ್ಳದ್ದು.
ಕ್ರಯ, ದಪ್ಪ ಕಾಗದದ ಪ್ರತಿಗೆ ... 1—8—0.
ಕ್ರಯ, ಗ್ಲೇಜ್ ,, ,, ... 2—4—0.
ಪೋಸ್ಟೇಜು ಪ್ರತಿ 1ಕ್ಕೆ 4 ಆಣೆ.

ಇದರಲ್ಲಿ ಹಿಂದೂ ಲಾ, ಮಹಮ್ಮದೀಯ ಲಾ, ಪೀನಲ್‌ಕೋಡು ಇವು ವಿಸ್ತಾರವಾಗಿ ಬರೆಯಲ್ಪಟ್ಟಿವೆ. ಮೈಸೂರು, ಮದ್ರಾಸು, ಬೊಂಬಾಯಿ ದೇಶಗಳಿಗೆಲ್ಲಾ ಸಾಮಾನ್ಯವಾದ ಲಾ. ಮೃತಸ್ವತ್ತಿನ ವಿಲೇವಾರಿ, ಅನಾಥ ರಕ್ಷಣೆ ಕ್ರೈಸ್ತರ ವಾರಸ್ಸು ಹಕ್ಕು ಈ ವಿಷಯಕವಾದ ಖಾನೂನುಗಳೂ, ಕ್ರಯ, ದಾನ, ವಿಲ್ಲು, ಹುಂಡಿ, ಗೇಣಿ ಮೊದಲಾದ ಸಮಸ್ತ ವ್ಯವಹಾರವನ್ನೊಳಗೊಂಡಿರುವ 92 ವಿಧದ ದಸ್ತಾವೇಜು ನಮೂನೆಗಳೂ, ಲಾ ಪ್ರಕಾರ ಸಿವಿಲ್ ಕ್ರಿಮಿನಲ್ ಕೋರ್ಟುಗಳಿಗೂ ಪೋಲೀಸಿಗೂ ಬರೆಯುವ ಅರ್ಜಿಗಳ 49 ನಮೂನೆಗಳೂ, ಅವುಗಳ ಸಂಬಂಧವಾದ ವಿಶೇಷ ವಿಷಯ ವಿಚಾರಗಳೂ ಬಹಳ ಚೆನ್ನಾಗಿ ಬರೆಯಲ್ಪಟ್ಟಿವೆ. ಇಷ್ಟು ದೊಡ್ಡ ಉಪಯುಕ್ತವಾದ ಗ್ರಂಥವನ್ನು ಇಷ್ಟು ಕಡಿಮೆ ಬೆಲೆಗೆ ಯಾರೂ ಮಾರುವುದಿಲ್ಲ.

"ತಖಾವಿ ಲಾ."

ಇದು ಕೃಷಿಯ ಅಭಿವೃದ್ಧಿಗಾಗಿಯೂ, ರೈತರ ಸಹಾಯಾರ್ಥವಾಗಿಯೂ ಸರಕಾರದವರು ಕೊಡುವ ಸಾಲ ಮೊದಲಾದ ಸಹಾಯ ವಿಷಯಕವಾದ ಲಾವನ್ನು ವಿವರಿಸುವ ಉಪಯುಕ್ತವಾದ ಪುಸ್ತಕ. ಬೆಲೆ 8 ಆಣೆ. ಪೋಸ್ಟೇಜು 2 ಆಣೆ.

ನಮ್ಮ ವಿಳಾಸ:— ಎಂ. ಎಂ. ಪಂಡಿತಾರಾಧ್ಯ. ಮೈಸೂರು.

S. U. N. & CO.,

BENARES CITY, U.P.

ದೊಡ್ಡ ಕಂಪೆನಿ! ಸೊಗಸಾದ ಸರಕುಗಳು!!

ಈ ನಮ್ಮ ಕಂಪೆನಿಯಲ್ಲಿ ನೆಯಿದು ತಯಾರಿಸುವ ಉತ್ತಮವಾದ ಬನಾರಸ್ ರೇಶ್ಮೆ ಜರೀ ಶೀರೆಗಳು ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥ ಜಾಗಂಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗನ್ನು ಇನಾಮಾಗಿ ಕಳುಹಿಸಲಾಗುವುದು.

ನಮ್ಮ ವಿಳಾಸ:— ಯಸ್.ಯು.ಯನ್. ಮತ್ತು ಕಂಪೆನಿ, ಕಾಶಿ

Estd. 1888. **ಸ್ಥಾಪನೆ 1888.**

K. B. RELE & Cos.,—BOMBAY

ಕೆ. ಬಿ. ರೇಳೆ ಕಂಪನಿಕೃತ

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮುಲಾಮು.

ಎಷ್ಟೋ ಹಳತ, ಕರೆ ಮತ್ತು ಹಟಮಾರಿ ಗಜಕರ್ಣವು ಈ ಮುಲಾಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦–೨೫ ವರ್ಷಗಳ ಹಳತ, ಸ್ಥಿಮನ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ೧ಕ್ಕೆ ೪ ಆಣೆ. ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ನಾಲ್ಕೇ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಆದರೆಲ್ಲಾ ದೋಷಗಳೂ ನಷ್ಟವಾಗುತ್ತವೆ: ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಟ್ಟೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂಧುಗಳು ನೋವೋಣ, ತಲೆ ಕೈಕಾಲುಗಳುರಿಯೋಣ, ಕೈ ಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲಾ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ೧ಕ್ಕೆ ರೂ. ೧—೪—೦. ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ, ಗಿರಗಾಂವ ನಂ. ೪ ಮುಂಬಯಿ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

ಈ ಮುರಬ್ಬಾವು "ಸಾಲಾಮಿಸ್ರಿ"ಯಲ್ಲಿ ತಯಾರಿಸಲ್ಪಟ್ಟದ್ದು ಅಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡುವೆವು.

ಹಾಗ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

ಬೆಂಗಳೂರು ಸಿಟಿ ಟಪ್ಪಾಲು ಆಫೀಸಿನ ಸೇವಿಂಗ್ಸ್ ಬ್ಯಾಂಕಿನಲ್ಲಿ 15—3—15ರಲ್ಲು ಡಿಪಾಜಿಟು ಇಟ್ಟಿರುತ್ತೇವೆ.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥ ವಾಗಿ ತಯಾರುಮಾಡಿರುವ "ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ ! ಸೇವಿಸಿರಿ !!

ಈ ಸಾಲಾಮಿಸ್ರೀ ಎಂಬುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು ಕಾಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಾಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನ ವಾಗಲಾರರು. ಅನೇಕರು ಉರುಳುಗಡ್ಡೆ, ಶಾವುಗಡ್ಡೆ ಇವುಗಳನ್ನು ಪಕ್ವ ಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಹೇಳಿ ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದ್ದಲ್ಲಿ ಇದು ಸಾಲಾಮಿಸ್ರಿಯೇ ಅಥವಾ ಬೇರೆ ತರಹಾದ್ದೇ ಎಂಬುವುದು ತಿಳಿದು ಬರುತ್ತೆ.

ಈ ಮುರಬ್ಬಾವನ್ನು ಪ್ರತಿಯೊಬ್ಬರು ಸೇವಿಸುವ ಹಾಗೆ ಕ್ರಯಂದ ಮುಟ್ಟಿದ ತಯಾರು ಮಾಡಲ್ಪಟ್ಟದೆ.

ಸಾಲಾಮಿಸ್ರಿ ಮುರಬ್ಬಾವು —	ನೀರಿನಂತಿರುವ ಧಾತುವನ್ನು ಗಟ್ಟಿಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು —	ಮೂತ್ರದೊಂದಿಗೆ ಧಾತುವು ಹೋಗುವುದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು —	ಮೂತ್ರದಲ್ಲಿ ಉರಿಯುವದನ್ನು ನಿಲ್ಲಿಸುವುದು.
ಸಾಲಾಮಿಸ್ರಿ ಮುರಬ್ಬಾವು —	ಕ್ಷಣಕ್ಷಣಕ್ಕೂ ಮೂತ್ರವಾಗುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು —	ನಿದ್ರೆಯಲ್ಲಿ ಧಾತುವು ಹೋಗುವದನ್ನು ನಿಲ್ಲಿಸುವದು
ಸಾಲಾಮಿಸ್ರಿ ಮುರಬ್ಬಾವು —	ಮೆದುಳಿಗೆ ಬಲವನ್ನು ಕೊಡುವದು
ಸಾಲಾಮಿಸ್ರಿ ಮುರಬ್ಬಾವು —	ರಕ್ತವನ್ನು ವೃದ್ಧಿಪಡಿಸಿ ಧಾತುವನ್ನು ಶೇಖರಿಸುವದು.
ಸಾಲಾಮಿಸ್ರಿ ಮುರಬ್ಬಾವು —	ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವದು
ಸಾಲಾಮಿಸ್ರಿ ಮುರಬ್ಬಾವು —	ಹಸಿವನ್ನು ಹೆಚ್ಚಿಸಿ ರಕ್ತವನ್ನು ಶೇಖರಿಸುವದು.
ಸಾಲಾಮಿಸ್ರಿ ಮುರಬ್ಬಾವು —	ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವದು.
ಸಾಲಾಮಿಸ್ರಿ ಮುರಬ್ಬಾವು —	ಉತ್ಸಾಹವು, ಬುದ್ಧಿ ಕುಶಲತೆಯು, ಶರೀರಕಾಂತಿಯು ಕೊಡುವದು.
ಸಾಲಾಮಿಸ್ರಿ ಮುರಬ್ಬಾವು —	ತಾಂಬ್ರ ಮತ್ತು ಭಂಗಾರ ಭಸ್ಮಕಿಂತಲು ಉತ್ತಮವಾದದ್ದು.
ಸಾಲಾಮಿಸ್ರಿ ಮುರಬ್ಬಾವು —	ಸ್ತ್ರೀಸಂಗಕ್ಕೆ ಮೊದಲು ಸ್ಖಲನವಾಗುವುದನ್ನು ನಿಲ್ಲಿಸುವದು.

ಒಂದು ಡಬ್ಬಿ ಮುರಬ್ಬಾವನ್ನು 15 ದಿವಸಗಳು ಉಪಯೋಗಿಸುವದರಿಂದ ಪೂರ ಗುಣಕೊಡುತ್ತೆ. 2—3 ಡಬ್ಬಿ ಮುರಬ್ಬಾವನ್ನು ಉಪಯೋಗಿಸುವದರಿಂದ ಜನ್ಮಾಂತರದ ರೋಗವೂ ಗುಣಕೊಡುತ್ತೆ.

15 ತೊಲೆ ಮುರಬ್ಬಾವಿನ ಡಬ್ಬಿ 1ಕ್ಕೆ ರೂ. 2 ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ. ಟಪ್ಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿ ವರೆಗೆ ಆಣೆ 6

ಏಜಂಟರು:— ಡಿ. ಸಯ್ಯದ್ ಉಸ್ಮಾನ್ ಎಂಡ್ ಕೊ. ದೊಡ್ಡಪೇಟೆ, ಬೆಂಗಳೂರು ಸಿಟಿ.

ಡಿ. ಮುನ್ನಾಲಾಲ್, ಡಿಲ್ಲೀ ವೈದ್ಯರು, 5 ಹಾಜಿಸಾಹೇಬ್ ಮಹಡಿ ಅವೆನ್ಯು ರೋಡ್, ಬೆಂಗಳೂರು ಸಿಟಿ.

ನರೆಕೂದಲಿಟ್ಟುಕೊಂಡು ಮುದುಕರಾಗಿ ಕಾಣುವುದೇಕೆ?

ದರ್ಬಾರ್ ಕೂದಲು ರಂಗು

ಒಂದು ಸಲ ಹಚ್ಚಿದರೆ 20 ವರುಷ ಪ್ರಾಯದ ಸಮರ್ಥರಂತೆ ಕಾಣುತ್ತಿರಿ. ಈ ರಂಗು ಹಚ್ಚಿಕೊಂಡರೇ ಕೂದಲು ಅಚ್ಚ ಕಪ್ಪಾಗಿ ಹೊಳೆಯುತ್ತೆ. ಈಗ ಮಾರಿಕೆಗೆ ಬಂದಿರುವ ಅಲ್ಪತರದ ಕೂದಲಿಗೆಹಚ್ಚುವ ಬಣ್ಣಗಳೂ ರಂಗುಗಳೂ ತುಂಬ ಕೀಳು ಜಾತಿಯವು; ಹಚ್ಚಿದಮೇಲೆ ಕೂದಲು ಕೆಂಚು ತಿರುಗಿ ಅಸಹ್ಯವಾಗಿ ಕಾಣುತ್ತದೆ. ನಮ್ಮ "ದರ್ಬಾರ್ ಕೂದಲು ರಂಗು" ಅಂಥಾದ್ದಲ್ಲ; ಒಳ್ಳೆ ಮೇಲಾದದ್ದು. ಒಂದಾವರ್ತಿ ತರಿಸಿ ಪರೀಕ್ಷೆಮಾಡಿದರೆ ನೀವೇ ಸಂತೋಷಪಡುವಿರಿ. ಕ್ರಯ ಬುರುಸು ಸಮೇತ ಬಾಟ್ಲಿ ಒಂದಕ್ಕೆ ರೂ. 1; ಅಂಚೆ ಹಾಸಲು 4 ಆಣೆ.

ವಿಳಾಸ:— ವಿ. ಎ. ಎಸ್. ಪಾಣಿ ಕಂಪೆನಿ. ನಂಬ್ರ 3 ಇರುಳಪ್ಪನ್ ಬೀದಿ, ಮದರಾಸು.

ಕಟೀಲ ನರಸಿಂಹಪೈ ಎಂಡ್ ಸನ್ಸ್,

ರಥಬೀದಿ, ಮಂಗಳೂರು.

ಇತರ ಕಡೆಗಳಿಂದ ವಸ್ತ್ರ ಇತ್ಯಾದಿಗಳನ್ನು ತಕ್ಕೊಳ್ಳುವ ಮೊದಲು ನಮ್ಮಲ್ಲಿಯು ದರಗಳನ್ನೂ ಸನಗುಗಳನ್ನೂ ಪರೀಕ್ಷಿಸಿ ನೋಡಿರಿ.

ನಗದಿ ಗಿರಾಕಿಗಳಿಗೆ ವಿಶೇಷ ಪ್ರಯೋಜನ ದೊರಕುವಂತೆ ನಮ್ಮ ದರಗಳನ್ನು ಇಟ್ಟಿರುತ್ತೇವೆ.

ಮಧುರಾ, ತಿರುಚಿನಾಪಳ್ಳಿ, ಸೇಲಂ, ಮದ್ರಾಸು, ಮುಂಬಾಯಿ, ಪೂನಾ, ಸೂರತ್, ಬೆಂಗಳೂರು, ಬನಾರಿಸ ಮೊದಲಾದ ನಾನಾ ವಿಧದ ವಸ್ತ್ರ ನೇಯಿಗೆಯಲ್ಲಿ ಪ್ರಖ್ಯಾತಪಟ್ಟ ಪ್ರಾಂತ್ಯಗಳಿಂದ ಎಲ್ಲಾ ಬಗೆಯ ಸನಗುಗಳನ್ನು ತರಿಸಿರುವೆವು. ಗಿರಾಕಿಗಳು ಬಂದು ಪರೀಕ್ಷಿಸಿ ನೋಡಬೇಕಾಗಿ ವಿಜ್ಞಾಪನೆ.

Kateel Narasimha Pai & Sons,
Cloth Merchants,
CAR STREET, Mangalore

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿವರ್ಣದಿಂದ ನಿಬಿಡವಾದ ಕೇಶದಾಮವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಇಂತಹ ಕೇಶ ರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾಪ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡು ತ್ತಿದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿ ಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ.



ಈ ತೈಲವನ್ನು ತೊಡೆದುಕೊಳ್ಳುತ್ತಲೇ, ಮಸ್ತಿಷ್ಕದ ಬೇನೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಜಗುಳಿ ಬಿದ್ದು ಹೋಗಲಾರವು, ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧ ವಾದರೋ ಮಧುರವೂ ಮೋಹಕವೂ ಆಗಿರುವುದು, ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪ ಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳು ಮಾಡುವುದಕ್ಕಿಂತ ಒಂದೇಯೊಂದು ಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋ ಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಒಫ್ ಮೆರಿಟ್ "ಅಥವಾ ಯೋಗ್ಯ ತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತ ಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳಕರ ಬಂಧುಗಳು, ಬಸವನಗಲ್ಲಿ, ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ ಪಿ ದ್ವಾರಾ ರವಾನಿಸುವುದು

ಸೀಸೆಯೊಂದರ ಕ್ರಯ ರೂ 1 0 0, ಅ ವೆ. 0 4-0 ಬೇರೆ, 3 ಸೀಸೆಗಳ ಕ್ರಯ ರೂ 2-10-0, ಅ. ವೆ 0 7-0 ಬೇರೆ.

ಸೂಚನೆ — ಅನೇಕ ದುರ್ವಿನೀತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬಳಕೆಯಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭದೊರಕ ತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸ ಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ, ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರ ದಲೇ ಕೊಂಡುಕೊಳ್ಳುವದಕ್ಕು ಬಂದೋಬಸ್ತ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಿಬೀಳದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ

ಅತೀ ಮನೋಹರವಾದ ಸುರಭಿಯು!

ಒಟ್ಟೋ ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೊಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮು ಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗು ವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೋ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊ ಳ್ಳುವುದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ

ಸಣ್ಣ ಸೀಸೆಯ ಬೆಲೆ ರೂ 0-8-0 ಒಂದು ಡ್ರಾಮಿನ (ಮೀಡಿಯಂ) ಸೀಸೆ 1ಕ್ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0 ಅಂಚೆಯ ವೆಚ್ಚ ಬೇರೆ 0-4-0. ಒಟ್ಟೋ ದಿಲ್ ಬಹಾರ್‌ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12-0

ಅಮೇರಿಕದ ವಿಶಿಷ್ಟತೆ.

ಪ್ರೊಫೆಸರ್ ಜೇಮ್ಸರವರ "ಇಲೆಕ್ಟ್ರೋ ಟೋನಿಕ ಪರ್ಲ್ಸ್" ಅಥವಾ ವಿದ್ಯುಚ್ಛಕ್ತಿಯ ವಾಜೀಕರಣ ಮೌಕ್ತಿಕಗಳು.

ಇವು ಶಕ್ತಿಹೀನತೆಯಿಂದ ಉಂಟಾಗುವ ರೋಗಗಳನ್ನು, ನಿದ್ರಾನಾಶವನ್ನೂ



ಪಕ್ಷವಾತಗಳನ್ನೂ, ವಾತೋನ್ಮಾದ ವನ್ನೂ, ಅಪಸ್ಮಾರವನ್ನೂ ಧಾತು ದೌರ್ಬಲ್ಯವನ್ನೂ ನಾಶಮಾಡುತ್ತವೆ. ಕಳೆಗುಂದಿ ಬರುವ ಸ್ಮೃತಿಶಕ್ತಿಯ ನ್ನು ಉದ್ದೀಪಿಸುತ್ತವೆ. ಬುದ್ಧಿಯ ಮತ್ತು ಮೆದುಳಿನ ಮೂಢತೆಯನ್ನು ಹೋಗಲಾಡಿಸುತ್ತವೆ; ಕಲಿಯುವ ದಕ್ಕೆ ಅಥವಾ ಕಾರ್ಯಗೈಯುವದಕ್ಕೆ ಬಿಡಲೊಲ್ಲದ ಅಶಕ್ತಿಯನ್ನು ಶಕ್ತಿರೂಪವಾಗಿ ಪರಿಣಮಿಸುವಂತೆ ಮಾಡುತ್ತವೆ. ಸರ್ವಾಂಗದಲ್ಲಿ ತೋರಿಬರುವ ಕ್ಲಾಮವೂ, ಅಕಾಲ ಕಾಲದಲ್ಲಿ ಸಂಭವಿಸುವ ಗ್ಲಾನಿಯೂ ಅತಿಶ್ರಮದಿಂದ ಮತ್ತು ದುರ್ವೃತ್ತಿಯಿಂದ ಉಂಟಾಗುವ ಕ್ಷೀಣಚೇತನೆಯೂ ಈ ಮುತ್ತುಗಳನ್ನು ಸೇವಿಸುವದರಿಂದ ಅಡಗಿ ಹೋಗುತ್ತವೆ. ಇವುಗಳಲ್ಲಿ ವೀರ್ಯದಾಯಿಗಳಾದ ಮತ್ತು ಮೆದುಳನ್ನು ಬೆಳೆಯಿಸಿ ವೃದ್ಧಿಗೈಯಲಾಪ ಪದಾರ್ಥಗಳಿರುವದರ ದೆಸೆಯಿಂದ ಇವು ವಿದ್ಯಾವ್ಯಾಸಂಗಗಳಿಗೂ, ಧರ್ಮೋಪದೇಶಕರಿಗೂ, ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಕೀಲರಿಗೂ ಗುಮಾಸ್ತರಿಗೂ, ಉಸ್ತಾದರಿಗೂ, ಪ್ರಾಯಿಕವಾಗಿ ಸಕಲ ಕಾರ್ಯಗಳಲ್ಲಿ ನಿರತರಾಗಿ ರುವ ಎಲ್ಲರಿಗೂ ಅಗತ್ಯವಾಗಿವೆ. ಶಾರೀರಕ ಪ್ರವೃತ್ತಿಯವರಿಗೆ ಮತ್ತು ಮಾನಸಿಕ ಪ್ರವೃತ್ತಿಯವರಿಗೆ ಒಂದೇ ತೆರನಾಗಿ ಅವಶ್ಯಕವಾಗಿರುತ್ತವೆ.

ವಾತಶೂಲದಲ್ಲಿ ಮತ್ತು ಮುಪ್ಪಿನಿಂದ ಉಂಟಾಗುವ ವೀರ್ಯಹೀನತೆಯಲ್ಲಿ ಈ ಮೌಕ್ತಿಕಗಳ ಗುಣವಾದರೋ ನಿಸ್ಸಂಶಯವು. ಇಂದ್ರಿಯಗಳ ಸುಖವೂ ಇವುಗಳ ಸೇವನೆಯಿಂದ ಕೂಡಲೇ ಲಭಿಸುತ್ತವೆ.

ರೋಗಜನ್ಯವಾದ ಸ್ರಾವವನ್ನು ಗುಣಮಾಡಿ, ರೋಗದಿಂದ ಅಳಿದ ದೇಹಭಾಗ ಗಳನ್ನು ಇವು ಮರಳಿ ರಚನೆಗೈಯ್ಯುತ್ತವೆ. ರೋಗದಿಂದ ಮುರಿದು ಹೋದ ಅಥವಾ ಬಸವಳಿದು ಕುಂದಿದ ಅವಯವಗಳಿಗೆ ಇವು ಪುನಃ ಧಾತುಪುಷ್ಟಿಯನ್ನಿತ್ತು ಸಚೇತನ ಗೈಯುತ್ತವೆ. ಈ ಗುಳಿಗೆಗಳ ಅದ್ಭುತಕರವಾದ ಸುಫಲವು ಇವುಗಳನ್ನು ಸೇವಿಸುವ ದಕ್ಕೆ ತೊಡಗಿದ ದಿನದಿಂದಲೇ ಬೋಧೆಯಾಗುತ್ತದೆ. ಇವುಗಳನ್ನು ಸೇವಿಸಿದ ದಿನವೇ ನರಗಳಲ್ಲಿಯೂ ಬುದ್ಧಿಶಕ್ತಿಯಲ್ಲಿಯೂ ಚೇತನವು ಮೊಳೆತು ದೇಹದಲ್ಲಿ ಧೈರ್ಯ, ಬಲ, ಸುಖ, ಇವುಗಳ ಸಂಚಾರವಾಗುತ್ತದೆ. ಜೀರ್ಣಶಕ್ತಿಯು ಉದ್ದೀಪಿತವಾಗಿ ಹಸಿವು ಆಶ್ಚರ್ಯಕರವಾಗಿ ಆರೋಗ್ಯಕಾಲದಲ್ಲಿ ತೋರಿಬರುವದಕ್ಕಿಂತ ಹೆಚ್ಚಾಗಿ ತೋರಿಬರುತ್ತದೆ. "ಜಾಡಣೆ"ಯು ಕ್ರಮವನ್ನು ಅನುಸರಿಸುತ್ತದೆ; ಮುಖವು ಶುಭ್ರ ವಾಗಿ ರಕ್ತಚಲನದ ಕುರುಹುಗಳನ್ನು ಸರಿಯಾಗಿ ತೋರ್ಪಡಿಸುತ್ತದೆ; ಕಣ್ಣುಗಳು ಉಜ್ವಲವಾಗಿ ದೃಷ್ಟಿಯು ಪ್ರಭೆಯನ್ನು ಹೊಂದಿ ಸೂಕ್ಷ್ಮವಾಗುತ್ತದೆ; ಗತಿಯು ದೃಢ ವಾಗುತ್ತದೆ. ಶೀಲವು ಪ್ರಸನ್ನವಾಗುತ್ತದೆ; ಬುದ್ಧಿಯು ವಿಶೇಷವಾಗಿ ಅನಲಸವಾಗು ತ್ತದೆ; ಸ್ಮೃತಿಶಕ್ತಿಯು ಗ್ರಾಹಿಯಾಗುತ್ತದೆ; ಮತ್ತು ದೇಹದ ಪುಷ್ಟಿಯು ವೃದ್ಧಿಯಾಗಿ ಶಕ್ತಿಯು ದಿನೇ ದಿನೇ ಮುಂಚಿನಂತೆಯೇ ತುಂಬಿಬರುತ್ತದೆ.

25 ಗುಳಿಗೆಗಳ ಸೀಸೆ 1ಕ್ಕೆ ಬೆಲೆ ರೂ. 1-4-0. 40 ಗುಳಿಗೆಗಳಿರುವ ಸೀಸೆ 1ಕ್ಕೆ ರೂ. 2-0-0 ಟಪ್ಪಾಲ್ ಖರ್ಚು ಸೀಸೆ ಒಂದಕ್ಕೆ ಆಣೆ 4.

ನಾವು ಕೇಳಿಕೊಳ್ಳದೆ ನಮಗೆ ಹಲವು ಮಹನೀಯರು ಬರೆದ ಪ್ರಮಾಣಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು.

ದಿವಾಕರ ಕೃಷ್ಣಾಜಿ ದಾಹರೀ, ರಾ. ಪಾರಸಾವನೀ, ತಾ, ರಾಮಟೇಕ್, ಜಿ. ನಾಗಪುರ.—"ತಾವು ನಮಗೆ ಕೆಲವು ಸಮಯದ ಹಿಂದೆ ಕಳುಹಿಸಿದ "ಶಕ್ತಿವರ್ಧಕ" ಗುಟಿಕೆಗಳಿಂದ ನಮಗೆ ಉತ್ತಮವಾದ ಆರೋಗ್ಯಲಾಭವು ದೊರಕಿರುತ್ತದೆ, ಅವುಗಳ ಇನ್ನೊಂದು ಬಾಟಲಿಯನ್ನು ಕಳುಹಿಸಿಕೊಡಿರಿ.

2 ತುಕಾರಾಮ ಸಖಾರಾಮ, ಕೇಶಿಯರ್, ಬಂಗಾಲ ನಾಗಪುರ ರೈಲ್ವೆ, ಗೋರಖಪುರ—ನಾನು ತಮ್ಮಿಂದ ಪ್ರೊ. ಜೇಮ್ಸರ "ವಿದ್ಯುತ್ ಶಕ್ತಿವರ್ಧಕ" ಗುಟಿಕೆಗಳ ಮೂರು ಕುಪ್ಪಿಗಳನ್ನು ತರಿಸಿಕೊಂಡಿ ದ್ದೆನು. ಅವುಗಳಿಂದ ನಾನು ಪುಷ್ಕಳವಾದ ಸೌಖ್ಯಲಾಭ ಹೊಂದಿರುವೆನು. ಆದ್ದರಿಂದ ಇನ್ನು ಮೂರು ಕುಪ್ಪಿಗಳನ್ನು ಕಳುಹಿಸಿಕೊಡಿರಿ."

3 ಅಮೀರ್ ವಲ್ಲದ ಮಹಮ್ಮದ ಭಾಯಿ ಇಬ್ರಾಹಿಮ್ ಪಾಟೀಲ್, ಪನವೇಲ್—"ತಾವು ಕಳು ಹಿಸಿದ ಪ್ರೊ. ಜೇಮ್ಸರ ಗುಟಿಕೆಗಳಿಂದ ನನಗೆ ಆಶ್ಚರ್ಯಕಾರಕವಾದ ಗುಣವು ದೊರಕಿದೆ. ಅವನ್ನು ಪುನಃ ರವಾನಿಸಿರಿ"

4 ವಿ. ಆರ್. ಜಾಕೊ, ಡಿಸ್ಟ್ರಿಕ್ಟ ಕೋರ್ಟ ವಕೀಲ, ಕೊಟ್ಟಯಮ್, ತ್ರಾವಣಕೋರ್ ರಾಜ್ಯ.—"ಪ್ರೊ. ಜೇಮ್ಸರ ಗುಟಿಕೆಗಳ ಸೀಸೆಯೊಂದನ್ನು ತಮ್ಮಿಂದ ತರಿಸಿಕೊಂಡೆನಷ್ಟೇ. ಅವುಗಳನ್ನು ಉಪಯೋ ಗಿಸಿ ನಾನು ಒಳ್ಳೇ ಲಾಭವನ್ನು ಪಡೆದೆನು. ಇನ್ನೆರಡು ಸೀಸೆಗಳನ್ನು ಕಳುಹಿಸುವುದು.

5 ಮಾನಜೀ ನರಸಿಂಗರಾವ್, ಸಂಸ್ಥಾನ ಪಲಟನ.—ಪ್ರೊ. ಜೇಮ್ಸರ ಗುಟಿಕೆಗಳಿಂದ ನಾನು ಹೆಚ್ಚಾದ ಗುಣವನ್ನು ಹೊಂದಿರುವದರಿಂದ, ಅವುಗಳ ಇನ್ನೆರಡು ಸೀಸೆಗಳನ್ನು ರವಾನಿಸಿರಿ.

THE ANGLO INDIAN DRUG & CHEMICAL COMPANY, 16 MARKET BOMBAY 2.

ಪ್ರಧಾನ ಏಜಂಟರು: **ದಿ ಊಲನ್ ಮಾರ್ಟ್, ಮಂಗಳೂರು ದ. ಕನ್ನಡಾ.**

Printed & Published by V. S. Kamath at the Mangalore Trading Association's Sharada Press, Mangalore

Registered No. M. 498

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ:—ವರುಷ ಒಕ್ಕೆ ರೂ. 1—4—0. ಟಪ್ಪಾಲು ಹಾಸಲು ಶೇರಿ ರೂ 2—1—0.

ಪುಸ್ತಕ IX | ಮಂಗಳೂರು ತಾ 25ನೇ ಜೂನಾ ಶುಕ್ರವಾರ 1915. | ಸಂಚಿಕೆ 26

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೆಶಿಂತಾನ್.

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೆಶಿಂತಾನದ ಸೇವನೆಯಿಂದುಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

(ರಿಜಸ್ಟರ್ಡ್)

1. ಇದು ಶಕ್ತಿಯನ್ನು ವೃದ್ಧಿ ಪಡಿಸುವುದಲ್ಲದೆ, ತಲೆನೋವು, ತಲೆತಿರುಗುವಿಕೆ, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು.

2. ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತು ಮೆದುಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು.

3. ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತ ಬಂದಲ್ಲಿ ತಿಂದನ್ನವು ಜೀರ್ಣವಾಗುವದಲ್ಲದೆ, ಕಾಲಪ್ರವೃತ್ತಿಯು ಕ್ರಮಪ್ರಕಾರ ಆಗುತ್ತದೆ ಯಾವರೋಗಕ್ಕೂ ಆಸ್ಪದವುಂಟಾಗುವುದಿಲ್ಲವು.

4. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು.

5. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ ಎಲ್ಲ ಉದ್ಯೋಗದ ದೊಡ್ಡ ಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವವು.

6. ಬೇಸಿಗೆ ಮತ್ತು ಚಳಿಗಾಲಗಳಲ್ಲಿ ಎಲ್ಲ ತರದ ರೋಗವನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು.

7. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು.

ಅದುಕಾರಣ ಇಂತಹ ಗುಣಕಾರಿಯಾದ ಸೆಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ.

45 ಮಾತ್ರೆಗಳ ಪೊಟ್ಟಣ 1ಕ್ಕೆ	0—2—0	200 ಮಾತ್ರೆಗಳ ಪೊಟ್ಟಣ 1ಕ್ಕೆ	0—7—0	80 ಮಾತ್ರೆಗಳ ಟಿನ್ 1ಕ್ಕೆ	0—4—0	550 ಮಾತ್ರೆಗಳ ಮರದಪೆಟ್ಟಿಗೆ1ಕ್ಕೆ	1—0—0
95 ,, ,, ,,	0—4—0	200 ,, ಟಿನ್ ,,	0—9—0	100 ,, ಶೀಸೆ ,,	0—4—6	1200 ,, ,, ,,	2—0—0

1 ರೂಪಾಯಿಗೆ ಕಡಿಮೆಯಾಗಿ ವಿ. ಪಿ. ಮೂಲಕ ಕಳುಹಿಸಲ್ಪಡುವುದಿಲ್ಲವು. ಮತ್ತು ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

☞ ಭರತಖಂಡ, ಬರ್ಮ, ಮತ್ತು ಸಿಲೋನ್ ಈ ಪ್ರಾಂತ್ಯಗಳ ಎಲ್ಲಾ ಭಾಗದಲ್ಲೂ ಏಜಂಟರು ಬೇಕಾಗಿದೆ.

ಸೋಲ್ ಏಜಂಟ್ಸ್:—ಸೆಶಿಂತಾನ್ ಡಿಪೋ,
ಪ್ರಿನ್ಸೆಸ್ ಸ್ಟ್ರೀಟ್ ಬೊಂಬಾಯಿ ನಂ. 2.

ಮಂ. ಯಸ್. ರಾವ್ ಕಂಪೆನಿ.,

ಬುಕ್‌ಸೆಲರ್ಸ್, ಸ್ಟೇಷನರ್ಸ್ ಮತ್ತು ಕಮಿಷನ್ ಏಜಂಟ್ಸ್,

ಅವಿನ್ಯೂರೋಡ್, ಬೆಂಗಳೂರು ಸಿಟಿ.

M. S. RAO & CO.,

BOOK-SELLERS ETC.

AVENUE ROAD, BANGALORE CITY.

ಈವರಿವಿಗೆ ಇದ್ದ ಯಂ. ಸುಬ್ಬರಾವ್ ಬ್ರದರ್ಸ್, ಶಂಕರಪುರಂ, ಬೆಂಗಳೂರು ಸಿಟಿ—ಎಂಬ ವಿಳಾಸವನ್ನು ಮೇಲ್ಕಂಡಂತೆ ಬದಲಾಯಿಸಿದ್ದೇವೆ,

ನಮ್ಮಲ್ಲಿ ಎಲ್ಲಾ ವಿಧವಾದ ಕನ್ನಡ ಕಥೆಗಳೂ, ಬಿ. ವೆಂಕಟಾಚಾರ್ಯರಿಂದ ರಚಿತವಾದ ನಾವೆಲ್‌ಗಳೂ, ಗವರ್ನಮೆಂಟ ಸ್ಕೂಲು ಪುಸ್ತಕಗಳೂ ದೊರೆಯುತ್ತವೆ. ಪುಸ್ತಕದ ಪಟ್ಟಿ ಹೊಸದಾಗಿ ಪ್ರಿಂಟಾಗಿದೆ. ಉಚಿತ.

M. S. RAO & Co.

Please note:—We have changed our address from—M. Subba Rao Bros, Book-Sellers, Shankarapur, Bangalore City to—

M. S. RAO & Co.,

Book-Sellers, Stationers & Commission Agents,

AVENUE ROAD, BANGALORE CITY.

BOX LOCKS.



PADLOCKS.



ಧಾರಣೆ ಸ ಲಭ! **ಅಲಿಗರ್ ಬೀಗಗಳು.** ದಾರಣೆ ಸುಲಭ!

ಭದ್ರವಾಗಿಯೂ, ಭಾರವಾಗಿಯೂ ಇರುವುದು ಒಂದರ ಬೀಗದಕ್ಕೆ ಮತ್ತೊಂದಕ್ಕೆ ಆಗುವ ದಿಲ್ಲ. ನೋಡುವುದಕ್ಕೆ ಅಂದವಾಗಿಯೂ ಇರುವುದು ಇದೇ ಮಾದರಿ ಬೀಗಗಳನ್ನು ಇಂಜಿನಿಯರ್ ಇಲಾಖೆಗಳಿಗೂ ಬ್ಯಾಂಕುಗಳಿಗೂ, ಸರಕಾರಿ ಆಫೀಸುಗಳಿಗೂ ಸಪ್ಲೈ ಮಾಡಿದೆ.

ನಾಲ್ಕು ಚಕ್ರಗಳಿರುವ ಬೀಗಗಳ

ನಂಬ್ರ	1	2	3	4	5
	0–12–0	0–15–0	1–4–0	1–10–0	...

ಆರು ಚಕ್ರಗಳಿರುವ ಬೀಗಗಳು

1–2–0 1–8–0 2–4–0 3–0–0 3–8–0

ಲ್ಲರ್ ಬೀಗಗಳು.

–04–01–5–05 0–6–0 0–8–0 0–10–0

ಟ್ರಂಕುಗಳಿಗೆ ಹಾಕುವ ಕೊಂಡಿ ಬಗ್ಗಿಸಿರುವ ಬೀಗ ಒಕ್ಕೆ 0–13–0

೩, ೪, ೫ನೇ ನಂಬರು ಬೀಗಗಳನ್ನು ಬಾಗಲುಗಳಿಗೂ ಕಬ್ಬಿಣದ ಪೆಟ್ಟಿಗೆಗಳಿಗೂ ಉಪಯೋಗಿಸಬಹುದು. ಏಜೆಂಟರುಗಳಿಗೆ ಕಮಿಷನ್ ದೊರೆಯುತ್ತೆ. ಹಾಸಲು ಪ್ರತ್ಯೇಕ

ಮರದ ಪೆಟ್ಟಿಗೆಗಳಿಗೂ, ಮೇಜುಗಳಿಗೂ, ಬೀರೂಗಳಿಗೂ ಹಾಕುವ ೪ ಚಕ್ರಗಳಿರುವ ಬೀಗಗಳು ಒಕ್ಕೆ 1–8–0, 1–12–0

ವಿಳಾಸ.— ಎಚ್. ಎನ್. ರಾವ್ ಅಂಡ್ ಬ್ರದರ್ಸ್,

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಶಾಶ್ವತವಾದ ಆರೋಗ್ಯವನ್ನು

ಹೊಂದುವದಕ್ಕೆ ಸುಲಭವಾದ ಮಾರ್ಗವು

ಮದನಮಂಜರಿ ಮಾತ್ರೆಗಳು

ಉಪಯೋಗಿಸುವದೇ ಆಗಿರುವುದು ಈ ಮಾತ್ರೆಗಳು ಅಜೀರ್ಣವು ಮಲಬದ್ಧ, ಮನೋವ್ಯಥೆ, ಜ್ಞಾಪಕಶಕ್ತಿ ಇಲ್ಲದಿರುವದು, ನರಗಳ ಬಲಹೀನತೆ, ಅಶಕ್ತಿ, ಸ್ವಪ್ನಸ್ಖಲಿತ, ಬಹುಮೂತ್ರ, ಮೂತ್ರಕೋಶ ಸಂಬಂಧವಾದ ವ್ಯಾಧಿಗಳು, ನಪುಂಸಕತ್ವ ಮುಂತಾದ ವ್ಯಾಧಿಗಳನ್ನು ಶೀಘ್ರದಲ್ಲಿಯೇ ಬೇರು ಸಹಿತವಾಗಿ ಹಾಕಿ ಪುರುಷರಿಗೆ ಸಂತತ ಪುರುಷತ್ವವನ್ನು ಕೊಡುವವು ಇದು ಸಾಟಿಯಿಲ್ಲದ ಔಷಧಿ ಎನ್ನಿಸಿಕೊಂಡಿರುತ್ತದೆ. ಕಳೆದ 25 ವರುಷ ಕಾಲದಲ್ಲಿ ಸಾವಿರಾರು ರೋಗಿಗಳನ್ನು ಸ್ವಸ್ಥಪಡಿಸಿದೆ. ನಿಮ್ಮನ್ನು ಕೂಡ ಸ್ವಸ್ಥ ಮಾಡುವದು. 40 ಮಾತ್ರೆಗಳ ಡಬ್ಬಿ ಕ್ರಯ ರೂ 1—0—0

ಉಚಿತ ಕ್ರಯವು ಇಲ್ಲ ಹಾಸಲು ಇಲ್ಲ

144 ಪುಟಗಳುಳ್ಳ ವೈದ್ಯಸಾರಸಂಗ್ರಹವಾದ

ವೈದ್ಯವಿದ್ಯ

ಪುಸ್ತಕದಲ್ಲಿ ಶಾಶ್ವತವಾದ ಆರೋಗ್ಯವನ್ನು ಪಡೆಯಲು ಅತ್ಯವಶ್ಯವಾದ ವಿಷಯಗಳು ಬರೆತವಾಗಿವೆ. ನಿಮ್ಮ ವಿಳಾಸವನ್ನು ತಿಳಿಸಿದರೆ ನಿಮಗೆ ಒಂದು ಪ್ರತಿ ಉಚಿತವಾಗಿ ಕಳುಹಿಸಲ್ಪಡುವದು

ರಾಜವೈದ್ಯ ನಾರಾಯಣಜಿ ಕೇಶವಜಿ

20 ಚೀನಾ ಬಜಾರ್ ರೋಡ್,

ಮದರಾಸು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

ಲೋಕಾಮಯಹರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಮುತ್ತಿನ ಭಸ್ಮ, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದ್ದು ಶೀತಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ಬಾರ), ಮೈ ನಡುಕ, ಶೀತ ವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ಅಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಾಯಿ ಹೊತ್ತು ಸುವಾಸನೆಯಾಗುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸಹಿಸುವ. ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತು ಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.— 220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1ರಿಂದ 12 ಕುಪ್ಪಿ ವರೆಗೆ ಪೋಸ್ಟೇಜು 4 ಆಣೆ.



೨. ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವಿನಿಯಾಗಿದೆ. ಕ್ರಿಮಿಗಳಿಂದು ಕಠಿಣವಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಕೂಡಲನೇ ವೇಳೆಯಲ್ಲೇ, ಗುಣತ ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿ! ಒಂದೇ ಒಂದು ಬುದ್ದಿಯು ನಿಮ್ಮಲ್ಲಿರಲಿ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ. 1; ಟಪಾಲ್ ಖರ್ಚು ಬೇರೆ. ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ನಮ್ಮ ವಿಳಾಸ:— ಶ್ರೀ ಸೀತಾರಾಘವ ವೈದ್ಯಶಾಲಾ

ಮೈಸೂರು

ಬಹು ಮನೋಹರ! ಅದ್ಭುತ!

ವಸಂತ ಕೋಕಿಲೆ

ಎಂಬ

ನೂತನವಾದ ಹೊಸ ಕಾದಂಬರೀ ಕಥೆ.

ರಸಿಕ ಶಿರೋಮಣಿಗಳೇ,

"ವಸಂತ ಕೋಕಿಲೆ" ಎಂಬ ಇಂದ್ರಜಾಲ ಮಹೇಂದ್ರಜಾಲಗಳನ್ನು ಸ್ಪಷ್ಟವಾಗಿ ತೋರಿಸುವ ಅತ್ಯದ್ಭುತ ಚಮತ್ಕಾರವಾದ ಹೊಸ ಕಾದಂಬರೀ ಕಥೆಯು ಅಚ್ಚಾಗಿ ಈಗ ತಾನೇ ಬಿಕರಿಗೆ ಸಿದ್ಧವಾಗಿದೆ. ಈ ಗ್ರಂಥದಲ್ಲಿ ಶೃಂಗಾರಾದಿ ನವರಸಗಳು ತುಂಬಿ ತುಳುಕುತ್ತಿವೆ. ಈವರೆಗೆ ಪ್ರಚುರವಾಗಿರುವ ಎಲ್ಲಾ ಕಥೆಗಳಿಗಿಂತಲೂ ಮಿಗಿಲಾದಷ್ಟು ರಸ್ಯವುಳ್ಳದ್ದಾಗಿದೆ. ವರ್ಣನಾಭಾಗಗಳು ಎಲ್ಲರಿಗೂ ತಿಳಿಯುವ ಹಾಗೆಯೂ ಸ್ವಾಭಾವವಾಗಿಯೂ ಇವೆ. ಭಾಷಾಶೈಲಿಯು ಅತ್ಯುತ್ತಮವಾಗಿದೆ. ಓದುವದಕ್ಕಾರಂಭಿಸಿದ ವಾಚಕರ ಮನಸ್ಸನ್ನು ಸಂಪೂರ್ಣವಾಗಿ ಆಕರ್ಷಿಸಿ ಮುಗಿಯುವವರೆಗೂ ಆವೇಶವನ್ನುಂಟುಮಾಡಿ ಉಲ್ಲಾಸಗೊಳಿಸುವ ಹಾಗಿದೆ. ತಮ್ಮ ಜ್ಞಾನ, ಭಕ್ತಿ, ವೈರಾಗ್ಯ ಮೊದಲಾದ ವೇದಾಂತ ವಿಷಯಗಳನ್ನೂ ಚೆನ್ನಾಗಿ ತಿಳಿಸುತ್ತದೆ. ಕಥಾ ಸಂವಿಧಾನವು ಹೊಸ ಮಾದರಿಯಾಗಿ ಆಶ್ಚರ್ಯಕರವಾಗಿದೆ. ಪ್ರಕಟವಾಗಿ ಶೃಂಗಾರ ರಸವನ್ನು ವರ್ಣಿಸದೆ ಇರುವುದರಿಂದ ಎಲ್ಲಾ ಸ್ತ್ರೀಜನರಿಗೆ ಓದುವುದಕ್ಕೆ ಅರ್ಹವಾಗಿದೆ. ಇದರಲ್ಲಿ ೯ ಪ್ರಕರಣಗಳೂ ೨೨೦ ಪುಟಗಳೂ ಇವೆ. ಉತ್ತಮವಾದ ಕಾಗದ, ಸುಂದರವಾದ ಅಕ್ಷರ, ತಪ್ಪಿಲ್ಲದೆ ಸುಂದರವಾಗಿ ಮುದ್ರಿಸಿದೆ. ಬೇಕಾದವರೆಲ್ಲರೂ ಕೆಳಗಣ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಕ್ರಯ ರೂ. ೧—೦—೦ ಮಾತ್ರ.

ವಿಳಾಸ:— ಟಿ. ಎ. ಮಾಣಿಕ್ಯಂ ಶೆಟ್ಟಿ,

ಮಾಣಿಕ್ಯಮಂದಿರ ಬುಕ್ ಡಿಪೋ

ಬಳ್ಳಾರಿ.

ಮಾರಾಟಕ್ಕೆ ಸಿದ್ಧವಿರುವುದು! ಮಾರಾಟಕ್ಕೆ ಸಿದ್ಧವಿರುವುದು!

ವೇಂಕಟಗಿರಿ ಮಹಾತ್ಮೆ.

ಪದ್ಮಾವತೀ ಕಲ್ಯಾಣದಿಂದ ಪೂರ್ಣವಾಗಿರುವುದು.

(ಸಂಸ್ಕೃತ ಭವಿಷ್ಯತ್ಪುರಾಣದಿಂದ)

ಮಂಗಳೂರಲ್ಲಿ ಸ್ವರ್ಗಸ್ಥರಾಗಿ ಹೋದ ಮುಲ್ಕಿ ಕವಿ ರಾಮಕೃಷ್ಣಯ್ಯನವರಿಂದ ಭಾಮಿನಿ ಷಟ್ಪದಿಯಲ್ಲಿ ಕನ್ನಡಿಸಲ್ಪಟ್ಟಿರುವುದು.

959 ಪದ್ಯಗಳಿರುವ 15 ಅಧ್ಯಾಯಗಳಿಂದ ಕೂಡಿರುವುದು. ಕಾವ್ಯರಚನೆಯು ಬಹು ಮೃದುರವೂ ಸುಲಭವೂ ಆಗಿರುವುದರಿಂದ ಸರ್ವರಿಗೂ ಅನುನಿತ್ಯದ ಪಠಣಪುಸ್ತಕವಾಗಿರಲು ಉಚಿತವಾಗಿರುವುದು. ವೆಂಕಟೇಶನು ಗಿರಿಯಲ್ಲಿ ನಡಿಸಿದ ಅದ್ಭುತ ವೃತ್ತಾಂತಗಳು ವಾಚಕರ ಮನಃಖುಶಿಯಾಗುವಂತೆ ಈ ಗ್ರಂಥವು ಯಥೋಚಿತ ಚಿತ್ರಪಟಗಳಿಂದ ಕೂಡಿರುವುದು. ಕ್ರಯ ಪ್ರತಿಯೊಂದಕ್ಕೆ ರೂ. 1—8—0. ಟಪ್ಪಾಲು ಹಾಸಲು ಬೇರೆ.

ಕವಿ ಎಂಡ್ ಸನ್ಸ್,
ಮಂಗಳೂರು

ಡಾಕ್ಟರ್ ನವರತ್ನರ ಪಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ. ಪ್ರಯೋಗಿಸಲು ಸುಲಭವಾಗಿದೆ. ಪರಿಮಳ, ಕೆಡದ ಬಣ್ಣ, ಬಹಳ ಅಗ್ಗ. ಕಪ್ ಮತ್ತು ಬ್ರಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ. 1 ಟಪ್ಪಾಲು ಚಾರ್ಜ 0—4—0.

Dr. Navaratna & Sons,
Kalbadevi Road BOMBAY.

ಏಜಂಟರು:—ದಿ. ಊಲನ್ ಮಾರ್ಟ್,
ಮಾಧವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

33. ನಿಕಲ್ ಲೋಹದ ಗಡಿಯಾರಗಳು ನಂ. 110.

ವಿಲಾಯಿತಿಗೆ ಸ್ವತಃ ಬರೆದು ತರಿಸಿದ್ದೇವೆ. ನಮ್ಮ ಹಿಂದೂ ಜನರು ಬಡತನದಲ್ಲಿ ಗಡಿಯಾರವನ್ನು ಉಪಯೋಗಿಸುವುದು ಕಷ್ಟವೆಂಬುವುದನ್ನು ನಾವು ಬಲ್ಲೆವು. ಅದಕ್ಕೆ ಜಗದಂಥಾ ಗಡಿಯಾರವನ್ನು ತಯಾರು ಮಾಡಿಸಿ ತರಿಸಿದ್ದೇವೆ ಬೆಳ್ಳಿ ಗಡಿಯಾರವಾಗಿದ್ದರೆ ಒಂದಕ್ಕೆ ಮೂರರಷ್ಟು ಬೆಲೆ ಆಗುತ್ತಿತ್ತು, ಕೀಲೆಸ್ ಓಪನ್ ಫ್ಲೇಸು ಡಯಲ್.

ಅಸಲು ಕ್ರಯ ೧೦—೦—೦ ಈಗ ಮಾರುವ ಕ್ರಯ ೫—೮—೦.

34. ಡಿನ್ ಫೋರ್ಡ್ ರಿಸ್ಟ್ ವಾಚ್ ನಂ 160

ಲಿವರ್ ಜಾತಿ. ಬೆಲೆಯಲ್ಲಿ ಕಡಿಮೆಯಾದರೂ ಗುಣದಲ್ಲಿ ಭಾರಿಯಾದದ್ದು. ಬೆಲೆಯುಳ್ಳ ಚಿನ್ನದ ಗಡಿಯಾರವನ್ನು ಟೈಂ ತೋರಿಸುವುದರಲ್ಲಿ ಸೋಲಿಸಿಬಿಡುತ್ತದೆ. ಯೋಗ್ಯತೆ ಮೀರದ ಕೆಲಸಮಾಡುತ್ತದೆ. ಬಡತನದಲ್ಲಿ ಭಾರಿಗುಣ ಉಳ್ಳದ್ದು.

ಅಸಲು ಕ್ರಯ ೧೭—೦—೦. ಈಗ ಮಾರುವ ಕ್ರಯ ೯—೮—೦,

35. ಪಕ್ಕಾಪಾಕೆಟ್ ವಾಚ್ ನಂ. 970.

ಕೀಲೆಸ್ ಓಪನ್ ಡಯಲ್ ಪಕ್ಕಾವಾಚೇ ಸರಿ. ಬಡವರ ಸ್ನೇಹಿತ, ಭಾಗ್ಯವಂತರ ಸೇವಕ. ಬೆಲೆ ಕಡಿಮೆ ಎಂದು ಕಳದು ಹಾಕಬಾರದು, ಆಳು ಮಾಡುವ ಕೆಲಸ ಅರಸನು ಮಾಡುವುದಿಲ್ಲವು.

ಅಸಲು ಕ್ರಯ ೧೦—೦—೦. ಈಗ ಮಾರುವ ಕ್ರಯ ೬—೦—೦.

36. ರಾಸ್ಕೋಪ್ ಸಿಸ್ಟಂ ವಾಚ್ ನಂ. 520.

ಓಪನ್ ಫ್ಲೇಸ್ ಕೀಲೆಸ್ ಲೀವರ್ ಸಿಂಟೋ ಮಾರ್ಕ ಉಳ್ಳದ್ದು. ಬೆಲೆಯುಳ್ಳ ಗಡಿಯಾರವು. ಇದು ಎರಡು ಒಂದೇ ಆದರೂ ವಜ್ರದ ಪ್ಲೇಟು ಮುಂತಾದ್ದು ಮಾತ್ರವೇ ಬೆಲೆಯುಳ್ಳ ಗಡಿಯಾರದಲ್ಲಿ ಹೆಚ್ಚು. ನೋಡುವುದಕ್ಕೆ ಇದರಲ್ಲಿಯೂ ಸೌಂದರ್ಯ ಕಡಿಮೆಯಿಲ್ಲ ಮಜಬೂತಿನಲ್ಲಿ ಇದು ಹೆಚ್ಚು. ಗುಣದಲ್ಲಿಯೂ ಹೆಚ್ಚು.

ಅಸಲು ಕ್ರಯ ೧೦—೦—೦. ಈಗ ಮಾರುವ ಕ್ರಯ ೬—೦—೦.

ಈಡನ್ ಪಾಸ್ಟರ್ ಎಂಡ್ ಕೊ. ಸಾಹುಕಾರಪೇಟೆ, ಮದರಾಸು.

Eden Foster & Co.
Sowcarpet, MADRAS.

ಕರ್ನಾಟಕ ವೃತ್ತ ಮತ್ತು ಧನಂಜಯ.

ಕಳೆದ 25 ವರ್ಷಗಳಿಂದ ಭಾಷಾ ಸೇವೆಯನ್ನೂ ದೇಶ ಸೇವೆಯನ್ನೂ ಮಾಡುತ್ತಿರುವ ಈ ವಾರಪತ್ರಿಕೆಯು ಧಾರವಾಡದಲ್ಲಿ ಪ್ರತಿ ಮಂಗಳವಾರವೂ ಪ್ರಕಟಿಸಲ್ಪಡುವದು.

ಲೋಕವ್ಯವಹಾರದ ಉಪಯುಕ್ತ ವಿಷಯಗಳ ಸದಭಿಪ್ರಾಯವನ್ನು ಜನರಲ್ಲಿ ಉಂಟುಮಾಡುವಂಥ ಚಳೋ ಸ್ಪುಟ ಲೇಖಗಳುಳ್ಳ ಮುಂಬಯಿ ಕರ್ನಾಟಕದ ಉತ್ತಮ ತರಗತಿಯ ಈ ಪತ್ರವನ್ನು ದಕ್ಷಿಣಕನ್ನಡದವರೂ ಓದುವದು ಅಗತ್ಯ.

ದೊಡ್ಡ ರೋಯಲ್ ಸ್ಯಾಜಿನ ಈ ಪತ್ರಿಕೆಗೆ ವಾರ್ಷಿಕ ಚಂದಾ ಮೊಬಲಗು ಟಪ್ಪಾಲು ಹಾಸಲು ಸೇರಿ ರೂ. ೨—೪—೦ ಆಗಿರುತ್ತದೆ, ಚಂದಾದಾರರಾಗಿ ಸೇರಲಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವರು

ಮ್ಯಾನೇಜರ್, ಕರ್ನಾಟಕ ವೃತ್ತ ಮತ್ತು ಧನಂಜಯ,
ಮಂಗಳವಾರಪೇಟೆ, ಧಾರವಾಡ.

ಮಾರಾಟಕ್ಕೆ ಸಿದ್ಧವಿದೆ! ನೂತನ ಸಂಗ್ರಹ!!

ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ

ಮತ್ತು

ಭೂತಾಳಪಾಂಡ್ಯರಾಯನ ಅಳಿಯಕಟ್ಟು

ಈ ನವೀನ ಗ್ರಂಥದಲ್ಲಿ ಪರಶುರಾಮಾವತಾರದ ಕಥೆಯೂ, ಪುಳಿನಾಪುರ ಮಹಾತ್ಮೆಯೂ, ಭರತಖಂಡದ ಕ್ಷತ್ರಿಯ ರಾಜವಂಶಾವಳಿಯೂ, ಧರ್ಮರಾಯನ ನಂತರ ಕಲಿಯುಗದಲ್ಲಿ ರಾಜ್ಯವಾಳಿದ 31 ಅರಸರ ಹೆಸರುಗಳೂ, ಕಾಲಗಳೂ ಪರಶುರಾಮ ಸೃಷ್ಟಿಗೆ ಸೇರಿದ 77 ದ್ವೀಪಗಳೂ, ಕನ್ನಡ ಜಿಲ್ಲೆಯ ಪೂರ್ವರಾಜರ ಸಂತತಿಯೂ, ಅವರು ಆಳಿದ ವರ್ಷಗಳೂ ಹೆಸರುಗಳೂ, ಕನಕವರ್ಮ ವೀರವರ್ಮರ ಚರಿತ್ರೆಯೂ, ವೀರವರ್ಮನು ಮಯೂರವರ್ಮನಾಗಿ ಒಂಟಿ ಮತ ಸ್ಥಾಪಿಸಿದ ಕಥೆಗಳೂ, ಮಯೂರವರ್ಮನು ಮಾರ್ಕಾಂಡೇಯರಿಂದ ರಾಜನೀತಿಗಳನ್ನು ಕೇಳಿದ ಕಥೆಯೂ, ಅಹಿಕ್ಷೇತ್ರದಿಂದ ಬ್ರಾಹ್ಮಣರನ್ನು ತರಿಸಿದ ಕಥೆಯೂ, ಬ್ರಾಹ್ಮಣರಿಗೆ 32 ಗ್ರಾಮಗಳಲ್ಲಿ ನೇಮಿಸಿದ 326 ಭೇದಗಳು (ಜನನಗಳೂ) ಅವರಿಗೆ ನೇಮಿಸಿದ ಬಹುಮಾನ ಮರ್ಯಾದೆಗಳೂ ಕೊಟ್ಟ ಮರ್ಯಾದೆಗಳೂ, ಜೈನರಿಗೂ ಬ್ರಾಹ್ಮಣರಿಗೂ ದ್ವೇಷದ ಕಾರಣಗಳೂ, ಭೂತಾಳಪಾಂಡ್ಯನ ಪೂರ್ವಚರಿತ್ರೆಯೂ, ದೇವಪಾಂಡ್ಯನ ಹಡಗಿನ ವಿವರಗಳೂ, ಭೂತಾಳಪಾಂಡ್ಯನ ಪೂರ್ಣಕಥೆಯೂ, ಭೂತರಾಜನಾದ ಕುಂಡೋದರನ ಪ್ರತಾಪಗಳೂ, ಭೂತಾಳಪಾಂಡ್ಯನ ಪಟ್ಟಾಭಿಷೇಕವೂ, ದೇವಪಾಂಡ್ಯನ ಹಡಗಿನ ವ್ಯಾಪಾರದ ಕಥೆಯೂ ಅಳಿಯ ಕಟ್ಟು ಆದ ಕಾರಣವು ಭೂತಾಳಪಾಂಡ್ಯನು ನೇಮಿಸಿದ 14 ಕಟ್ಟು 16 ಕಟ್ಟಳೆಗಳೂ, ಭೂತಾಳಪಾಂಡ್ಯನ ವಿವಾಹವೂ, ಕುಂಡೋದರನು ಮಹಿಷಾಸುರನಾದ ಕಥೆಯೂ ಭೂತಾಳಪಾಂಡ್ಯನು ಮಕ್ಕಳಿಗೆ ವಿಂಗಡಿಸಿದ ಸ್ಥಳ ಮಾನಮರ್ಯಾದೆಗಳೂ, ಅವನ ನಂತರ ಆಳಿಯ ವಿದ್ಯುಮ್ನಪಾಂಡ್ಯನ ಆಳಿಕೆಯೂ, ಅತನು ತನ್ನ ಮಕ್ಕಳಿಗೆ ವಿಂಗಡಿಸಿದ ಮಾನಮರ್ಯಾದೆಗಳೂ, ಚೌಟ ಬಂಗರ ಸಂಸ್ಥಾನದ ನಗರಗಳೂ, ಸ್ಥಳ ನಾಮಾವಳಿಗಳೂ, ಕೇರಳದ 43 ಜಾತಿಗಳೂ, ಹೋಬಳಿ ಮನೆತನಗಳೂ, ಮರ್ಯಾದೆಗಳ ಶಾಸನವೂ, ಪೂರ್ವ ಮರ್ಯಾದೆಗಳ ಕ್ರಮವೂ, 2ನೇ "ಭೂತಾಳಪಾಂಡ್ಯ"ನ ಚರಿತ್ರೆಯೂ, ಅಳಿಯಸಂತಾನದ 60 ಬಳಿಗಳೂ, ಚೌಟ ಬಂಗರ ಸಂಸ್ಥಾನದ ಮಾಗಣೆ, ಶೀಮೆ, ಒಳ ಅರಸರು, ಅವರ ಸ್ಥಳ ಮಾನಮರ್ಯಾದೆಗಳು ವಗೈರೆಯೂ ಜೈನ ಬಂಟರ 60 ಜನನ (ನಾಮ-ಕೀರ್ತಿಗಳೂ) 7 ರಾಜದೈವಗಳ ಚರಿತ್ರೆಯೂ, ಉಡುಪಿಯ ಇತಿಹಾಸ, ವಿಜಯನಗರದ ಆಳಿಕೆ ಕಂದಾಯಕ್ರಮ, ಪೂರ್ವದ ಕೆಲವು ಸಂಗ್ರಹಗಳು, ಒಂಗಾಡಿ ತಾಮ್ರಶಾಸನ, ಪಲ್ಲಿ ಸಾಡಿ ಶಿಲಾಶಾಸನ, ಉಳ್ಳಾಲ ತಾಮ್ರಶಾಸನ, ಬಂಟಕಲ್ಲಿನ ಶಿಲಾಶಾಸನ, ನಂದಳಿಕೆ ತಾಮ್ರಶಾಸನ, ವೇಣೂರಿನ ತಾಮ್ರಶಾಸನ, ಅನುಭವಗಳ ಸಂಗ್ರಹ, ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ದೇವಸ್ಥಾನಗಳು, ಬಾರ್ಕೂರು ಪಂಚಲಿಂಗೇಶ್ವರ ದೇವಸ್ಥಾನದ ಮರ್ಯಾದೆ ಪಟ್ಟಿ, ಮೊಗಲ್ ರಾಜರ ವಂಶಾವಳಿ, ಭರತಖಂಡಕ್ಕೆ ಅನ್ಯರಾಜರ ಪ್ರವೇಶ ಕಾಲಗಳು, ಈ ಜಿಲ್ಲೆಯ ಮಹನೀಯರ ಪಟ್ಟಿ, ಶ್ರೀಮನ್ ಪಂಚಮ ಜಾರ್ಜ ಬಾದಶಹರ ಚರಿತ್ರೆ ವಗೈರೆ ಅನೇಕಾನೇಕ ಸಂಗ್ರಹಗಳು ಭರಿತವಾದ ನವೀನ ಗ್ರಂಥ. 296 ಪುಟಗಳು ಭರಿತವಾಗಿ ಸದಾ ಕೈಯಲ್ಲಿರುವುದಕ್ಕೆ ಅನುಕೂಲವಾದ ಈ ಪುಸ್ತಕವು ಅಳಿಯಕಟ್ಟಿನವರಿಗೂ ಮಕ್ಕಳ ಕಟ್ಟಿನವರಿಗೂ ಶಾಲಾ ಉಪಾಧ್ಯಾಯರುಗಳಿಗೂ ವಿದ್ಯಾರ್ಥಿಗಳಿಗೂ ಸರ್ವರಿಗೂ ಅತ್ಯಗತ್ಯವುಳ್ಳದ್ದಾಗಿದೆ. ಪ್ರತಿ ಒಂದಕ್ಕೆ ರೂ. 1—4—0.

ಹೆಚ್ಚಿಗೆ ಪ್ರತಿಗಳನ್ನು ಕೊಂಡುಕೊಳ್ಳುವವರಿಗೂ ವ್ಯಾಪಾರಸ್ಥರಿಗೂ ಒಳ್ಳೇ ಕಮಿಷನ್ ಕೊಡಲಾಗುವದು

ಕುಶಲಮಂದಿರ,
ಶ್ರೀರಾಜರಾಜೇಶ್ವರಿ ದೇವಸ್ಥಾನ,
ಪೊಳಲಿ

ಎನ್. ಎ. ಶೀನಪ್ಪ ಹೆಗ್ಗಡೆ,
ಅಮುಂಜೆಗುತ್ತು,
ಗುರುಪುರ ಪೋಸ್ಟು, ದ. ಕ.

ಚುರುಕಾದ ಏಜಂಟರು ಬೇಕಾಗಿರುವತು! ಧಾರಾಳವಾದ ಕಮಿಶನ್!!
ಮುಂದಿನ ಅಭಿವೃದ್ಧಿಗೆ ತುಂಬಾ ಅವಕಾಶವುಳ್ಳ ವೃತ್ತಿ!!!

ಮುಂಬಾಯಿ ಲ್ಯಾಫ್ ಎಸ್ಯುರೆನ್ಸ್ ಕಂಪೆನಿ,

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು).

ಪ್ರಧಾನ ಆಫೀಸು: ಮುಂಬಯಿ.

ಅಧ್ಯಕ್ಷರು:—ಬಹುಮಾನಪಟ್ಟ ಮೆ। ಲಲ್ಲುಬಾಯಿ ಸಾಮಲ್ ದಾಸರವರು, ಸಿ. ಐ ಇ ಜೆ. ಪಿ.

ಎಕ್ಚುವೆರಿ:—ಮೆ। ಜೋರ್ಜ್‌ಕಿಂಗ್ ಎಫ್ ಎಫ್ ಎ ಎಫ್ ಐ ಎ

ಮೆಡಿಕಲ್ ರಿಫರಿಗಳು.—ಡಾಕ್ಟಾರ್ ಆರ್ ರಾವ್, ಎಮ್ ಡಿ ಡಿ. ಎಸ್ ಸಿ (ಲಂಡನ್)

ಗೌರವಾರ್ಥಕ ಮ್ಯಾನೇಜರ್:—ರಾ। ಕೆ ಸುಬ್ರಮಣ್ಯಯ್ಯರ್, ಬಿ ಎ ಜೆ. ಪಿ ಎಫ್ ಎಸ್ ಎ ಎ (ಲಂಡನ್)

ವಿಮೆದಾರರ ವಿಮೆ ಪತ್ರಗಳ ಶರ್ತಗಳ ಪ್ರಕಾರ ಸಿಕ್ಕುವ ಹಣವು ಈ ಕಂಪೆನಿಯಲ್ಲಿ ಬಹಳ ಬದ್ರವಾಗಿರುವದೆಂತ ಲೆಕ್ಕ ವ್ಯವಸ್ಥಾಪಕರು ಅಬಿಪ್ರಾಯಪಟ್ಟಿರುವರು

ತರುಣಾವಸ್ಥೆಯಲ್ಲಿರುವ ಈ ಕಂಪೆನಿಯು ಮುಂದಕ್ಕೆ ಇನ್ನೂ ಬಹಳ ಅಭಿವೃದ್ಧಿಯನ್ನು ಹೊಂದುವ ವಿಶೇಷ ಸಂಬವಗಳಿಂದ ಕೂಡಿರುವುದೆಂದು "ಕೊಮರ್ಸ್" ಎಂಬ ಪತ್ರಿಕೆಯ ಅಬಿಪ್ರಾಯವಾಗಿರುವುದು

ಇಂಡಿಯಾ ಸರಕಾರದ ಬದ್ರತೆಯಲ್ಲಿ ರೂ 1,55,000ವನ್ನು ಠೇವಣಾತಿಯಾಗಿಟ್ಟಿರ ವದು.

ಹಣ ಕಳುಹಿಸಿಕೊಡುವ ಏಜನ್ಸಿ ಬಗ್ಯೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ:—

ಕೊಚ್ಚಿಕಾರ್ ಬ್ರದರ್ಸ್, ಉಡುಪಿ,
ಕನ್ನಡಾ, ಮಲೆಬಾರ, ತಿರುವಾಂಕೋಡು, ಮತ್ತು
ಕೊಚ್ಚಿ ಪ್ರಾಂತ್ಯಗಳ ಪ್ರಾಮುಖ್ಯ ಏಜಂಟರು

ಸೂಚನೆ—ಮಂಗಳೂರಲ್ಲಿರುವ ಈ ಕಂಪೆನಿಯ ವಿಮೇದಾರರು ತಮ್ಮ ವಿಮೆ ಮೊಬಲಗುಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಟ್ಟು ಆ ಬಗ್ಯೆ ರಶೀದಿಯನ್ನು ಕೊಚ್ಚಿಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು

ಉಡ್ಪಿ, 3—7—1914.

ಮಹಾಶಯರೆ!

ಮುಂಬಾಯಿ ಲ್ಯಾಫ್ ಎಸ್ಯುರೆನ್ಸ್ ಕಂಪೆನಿ ಎಂಬುವ ಜೀವವಿಮೇ ಉತ್ತರಾಯಿಸುವ ಸಂಘದ ಬಗ್ಗೆ ತಾವು ಏನೊಂದೂ ವಿಳಂಬವಿಲ್ಲದೆ, ರೂ 996—10—0ನ್ನು ನನಗೆ ಪಾವತಿಮಾಡಿದುದಕ್ಕಾಗಿ ಅತೀ ಉಪಕಾರವಾಯಿತು. ಸದರಿ ಪೋಲಿಸಿಯನ್ನು ಕುರಿತಾದ ಅಗತ್ಯವಾದ ಪತ್ರಗಳನ್ನು ಅವರಿಗೆ ಮುಟ್ಟಿಸಿದ ಮೂರೇ ದಿನಗಳೊಳಗೋಗಿ ನನಗೆ ಸಲ್ಲತಕ್ಕ ವಿಮೆಯ ಐವಜನ್ನು ತಮ್ಮ ಕಂಪೆನಿಯ ಡೈರೆಕ್ಟರರುಗಳು ನನಗೆ ಪಾವತಿಮಾಡಿಸಿದುದಕ್ಕೋಸ್ಕರ ನನ್ನ ಧನ್ಯವಾದಗಳನ್ನು ಅವರಿಗೆ ದಯಿಯಿಟ್ಟು ತಿಳಿಸಿ ಈ ತೆರದಲ್ಲಿ ಪೋಲಿಸಿದಾರರೊಡನೆ ಯಥಾರ್ಥವಾದ ರೀತಿಯಲ್ಲೂ ನಂಬುಗೆಯುಂಟಾಗುವಂತೆಯೂ ವರ್ತಿಸುವ ತಮ್ಮ ವಿಮೇ ಕಂಪೆನಿಯಿಂದ ಪ್ರತಿಯೊಬನೂ ಒಂದೊಂದು ಪೋಲಿಸಿಯನ್ನಾದರೂ ಪಡಕೊಳ್ಳುವುದು ಉಚಿತವೆಂದು ನನ್ನ ಅಪೇಕ್ಷೆ

(ದಸ್ಕತು) ಹಾರಾಡಿ ಆನಂದರಾಯ ಘಡಿಯಾರನ ರುಜು.

(93ನೇ ಪೋಲಿಸಿಯ ವಿಮಾ ಹಣವನ್ನು ಪಡೆಯಲು ಅಧಿಕಾರವುಳ್ಳವನು).

ಉಡ್ಪಿ, ತಾ 20—9—1914

ನನ್ನ ಎಳೇ ಪ್ರಾಯದಲ್ಲಿ ಮೃತರಾದ ನನ್ನ ಗಂಡ ಕೆ ಎಲ್ ಪ್ರಭುಗಳ ವಿಮೇ ಪತ್ರಗಳನ್ನು ನಾನು ಕಳುಹಿಸಿಕೊಟ್ಟ ಕೆಲವೇ ದಿನಗಳೊಳಗಾಗಿ ಮುಂಬಾಯಿ ಲ್ಯಾಫ್ ಎಸ್ಯುರೆನ್ಸ್ ಕಂಪೆನಿಯವರು ನನಗೆ ತತ್ಸಂಬಂಧವಾದ ಹಣವನ್ನು ಪಾವತಿಮಾಡಿಸಿದ ವಕ್ಕೆ ನಾನು ಕೃತಜ್ಞಳಾಗಿರುವೆನು ನನ್ನ ಒಬ್ಬನೇ ಬಾಲಕನಿಗೆ ಇದೊಂದೇ ಮಾತ್ರ ಪಿತ್ರಾರ್ಜಿತವಾದ ಧನವಾಗಿದೆ ಅಂತಹ ಬಡ ಹುಡುಗನಿಗೆ ಇದೊಂದು ಅಪೂರ್ವವಾದ ಮಹಾದಾನವನ್ನು ಮಾಡಿಕೊಟ್ಟುದಕ್ಕೆ ಪ್ರತಿಯಾಗಿ ನಿಮ್ಮ ಕಂಪೆನಿಯು ಚಿರಕಾಲವೂ ಸೌಭಾಗ್ಯದಲ್ಲಿರಲಿ!

ಭವಾನೀಬಾಯಿ, Pol No. 1738

ಸಾಕ್ಷಿ—ಬವಾನೀಬಾಯಿಯ ಸೋದರ ರಾ। ಕೆ ರಂಗಪ್ಪ ನಾಗಪ್ಪ

ಮಂಗಳೂರು, ತಾ 30—10—1914

ಸಾಧ್ಯವಾದಷ್ಟು ಕಡಿಮೆ ಸಮಯದೊಳಗಾಗಿ ನನಗೆ ಪಾವತಿಯಾಗತಕ್ಕ ಹಣವನ್ನು ಸಲಾಯಿಸಿದುದಕ್ಕೋಸ್ಕರ ಬೊಂಬೇ ಲ್ಯಾಫ್ ಎಸ್ಯುರೆನ್ಸ್ ಕಂಪೆನಿಯವರಿಗೆ ನನ್ನ ಧನ್ಯವಾದಗಳನ್ನು ಪ್ರೀತಿಪೂರ್ವಕವಾಗಿ ಮುಟ್ಟಿಸಿರಿ! 'ಕ್ಲೈಮು' ಪ್ರಕಾರ ಸ್ಥಲ್ಲಿ ಹಣವನ್ನು ಪಡಕೊಳ್ಳುವ ಹಾಗೆ ಕಂಪೆನಿಯ ಏಜಂಟರೇ ತಮ್ಮಿಂದಾಗುವಷ್ಟರ ಸಹಾಯವನ್ನು ಮಾಡುತ್ತಿರುವರಾದುದರಿಂದ ನನಗೆ ಯಾವ ತೊಂದರೆಗಳೂ ಉಂಟಾಗಲಿಲ್ಲ ಹಣವನ್ನು ನಾವಿದ್ದ ಸ್ಥಳಕ್ಕೆ ಬಂದು ತೆತ್ತರು—ಇದೊಂದು ತಮ್ಮ ಕಂಪೆನಿಯ ವಿಶೇಷ ಗುಣ. ನಿಮ್ಮ ಸಂಘಕ್ಕೆ ಸದಾ ವಿಜಯವು ಆಗಲಿ.

ಆರ್ಕಳ ರಾಮಚಂದ್ರ ಶ್ಯಾನಭಾಗನ ರುಜು.

(Pol. No. 2319ನೆಯ ವಾರಿಸಿ ಹಕ್ಕಿನ ಅಸಾಮಿ).

ಐಶ್ವರ್ಯವಂತರೂ ಬಡವರೂ ಕೊಂಡುಕೊಳ್ಳಲು ಸಾಧ್ಯವಾಗಿರುವ

ಯುಕಲಿಪ್ಟಸ್ ತೈಲವು.

ತಲೆನೋವು, ಕಣ್ಣು ಉರಿ, ಗಾಯ, ಸಕಲ ವಿಧವಾದ ವಾಯುರೋಗ, ಕೆಮ್ಮು, ಉಬ್ಬಸ, ಶೀತಬೇಧಿ, ಉಷ್ಣಬೇಧಿ, ಹೊಟ್ಟೆಯಲ್ಲಿ ಜ್ವರಗಡ್ಡೆ, ಸ್ತ್ರೀಯರ ವ್ಯಾಧಿಸಂಬಂಧ ಬಿಳುವು ಮೊದಲಾದ ಮೇಹ ರೋಗಗಳ, ಕಿವಿಯಲ್ಲಿ ಕೀವು ಬರುವದು, ಹೆಂಗಸರ ಹೊಟ್ಟೆನೋವು ಮೊದಲಾದ ರೋಗಗಳನ್ನು ಖಾತ್ರಿಯಾಗಿ ಗುಣಪಡಿಸುತ್ತದೆ ಔನ್ಸ್ ಸೀಸೆ 1ಕ್ಕೆ 0—5—0. ವಿ. ಪಿ. ಬೇರೆ. ಡಜನ್ ಸೀಸೆಗಳಿಗೆ ವಿ ಪಿ ಸಹಿತ ರೂ. 3—12—0. ಅನುಪಾನ ಪತ್ರಿಕೆ ಸೀಸೆಯೊಂದಿಗೆ.

ಸಿಫಾರಸು ಪತ್ರ—ಪಿ ಪಿ ಎಮ್ ತಮ್ಮ ಯುಕಲಿಪ್ಟಸ್ ತೈಲವು ಅಮೃತದಂತೆ ಪ್ರತಿ ಮನೆಯಲ್ಲಿಯೂ ಇರಲೇಬೇಕೆಂತ ನಾನು ಖಂಡಿತವಾಗಿ ಹೇಳುತ್ತೇನೆ. ಪಶುಗಳ ಸರ್ವ ರೋಗಗಳಿಗೆ ರಾಮಬಾಣದಂತಿದೆ.

ಇಕ್ಲಿಪ್ಸ್ ಬಾಮ್.

ತಲೆನೋವು, ಸೊಂಟದ ನೋವು, ಸಂಧುವಾತ, ಮೇಹವಾತ, ನೆಗಡಿ, ಶೈತ್ಯ, ಚೇಳು, ಜಾಡರಹುಳ ಕಡಿತ, ಕುರು, ರಾಜಕುರು, ಮೊಡವೆ, ಘಾಯಗಳು, ಹಲ್ಲುನೋವು, ಆನೆಕಾಲು ಇತ್ಯಾದಿ ರೋಗಗಳಿಗೆ ಬಾಹ್ಯಲೇಪನವಾಗಿ ಉಪಯೋಗಿಸಬಹುದಾದ ಬಾಮಿನ ಕರಡಿಗೆ 1ಕ್ಕೆ ಆಣೆ 8. ವಿ. ಪಿ. ಬೇರೆ. ಡಜನ್ ಕರಡಿಗೆಗಳಿಗೆ ರೂ 4—12—0 ವಿ ಪಿ ಬೇರೆ.

ವಿಳಾಸ:— ಏಜಂಟರು:—

ಇಕ್ಲಿಪ್ಸ್ ಏಜನ್ಸಿ, ಮಂಗಳೂರು. ಸುಗಂಧವಿಲಾಸ, ರಥಬೀದಿ, ಮಂಗಳೂರು.

ಅನೇಕ ಯೋಗ್ಯತಾಪತ್ರಿಕೆಗಳನ್ನು ಪಡೆದಿರುವ (ರಜಿಸ್ಟರ್ಡ್)

ರಾಜಸುಂದರಿ ರೋಜ.

ಕೂದಲು ಬೆಳೆಯುವ ಪರಿಮಳ ತೈಲವು. 50 ವಿಧವಾದ ಇನಾಂ ಸಾಮಾನುಗಳ ಸಮೇತ ಡಬ್ಬಿ 1ಕ್ಕೆ ರೂ. 1 ಮಾತ್ರ

ಸ್ತ್ರೀಗಳು ತಲೆಕೂದಲು ಸುಂದರವಾಗಿ ಇರಬೇಕೆಂಬ ಉದ್ದೇಶವಾಗಿಯೂ, ಕೂದಲು ಉದುರುವದನ್ನು ತಡೆದು, ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವರು ಬಜಾರಿನಲ್ಲಿ ದೊರೆಯುವ ಕೀಳುತರವಾದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ, ನಿಮ್ಮ ಹಣವನ್ನೂ ತಲೆಯನ್ನೂ ಹಾಳು ಮಾಡುವದಕ್ಕಿಂತ ನಮ್ಮ ಪರಿಮಳ ತೈಲವನ್ನು ಉಪಯೋಗಿಸಿರಿ, ಈ ಲೋಕಪ್ರಖ್ಯಾತವಾದ ಎಣ್ಣೆಯನ್ನ ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಬಾಚಿದರೆ ಅದರ ಸುವಾಸನೆ ಹೇಳುವದಕ್ಕೆ ಬರಿಯುವದಕ್ಕೆ ಆಗುವದಿಲ್ಲ ಮತ್ತು ಇದರ ಪರಿಮಳ ವಾಸನೆ ಸುತ್ತು ಇರುವ ಮನೆಗಳಿಗೆ ಹೋಗುವದು, ಇದಲ್ಲದೆ ದೇಹದಲ್ಲಿ ಇರುವ ಉಷ್ಣವನ್ನು ತೆಗದು ಕಣ್ಣಿಗೆ ತಂಪು ಕೊಡುವದು ತಲೆಯಲ್ಲಿ ಇರುವ ಮದಡನ್ನು ಸರಿ ಮಾಡುವದು. ಮುಖಕ್ಕೆ ಕಾಂತಿಯನ್ನೂ, ದೇಹಕ್ಕೆ ಆರೋಗ್ಯವನ್ನೂ, ಮನಸಿಗೆ ಸಂತೋಷವನ್ನೂ, ಕೂದಲಿಗೆ ಆರೋಗ್ಯವನ್ನೂ ಕೊಡುವ ತೈಲ ಇದು ಒಂದೇ ಬೇರೊಂದಿಲ್ಲ, ಬರೀ ಮಾತುಗಳಿಂದ ವರ್ಣಿಸುವದರಲ್ಲಿ ಪ್ರಯೋಜನವಿಲ್ಲ 1ನ್ನು ತರಿಸಿದರೆ ತಿಳಿಯುತ್ತೆ. ಇನಾಂ ಸಾಮಾನುಗಳ ತಪಶೀಲು. ಸ್ತ್ರೀಯರು ಧರಿಸಿಕೊಳ್ಳುವ ಕೊಂಡಗಣ 6, ವ್ಯಾಭರಣ 1, ಅದ್ದಾ 1, ತಾಂಬೂಲ ಮಾತ್ರೆ 30, ಧಂತದ ಬಾಚಣಿಗೆ 1, ಸೊಗಸಾದ ರಾಜರಾಣಿ ಕಾರನೇಷನ್ ಪೆಟ್ಟಿಗೆ 1, ರವಿವರ್ಮ ಪೋಸ್ಟುಕಾರ್ಡ್ 6, ಸುವಾಸನೆ ಅತ್ತರು ಬಿಲ್ಲೆ 1, ಗಂಧ ಬಿಲ್ಲೆ 1, ಸ್ತ್ರೀಯರು ಧರಿಸುವ ಬ್ರೋಚ್ 1.

ನಮ್ಮ ವಿಳಾಸ:— ಮ್ಯಾನೇಜರ್ ಧೈರ್ಯ ಲಕ್ಷ್ಮಿ ಅಂಡು ಕಂಪೆನಿ,
ನಂ. 3 ಇರುಲಪ್ಪನ್ ಬೀದಿ, ಮದ್ರಾಸು.

ಸ್ವದೇಶಾಭಿಮಾನಿ

ಮಂಗಳೂರು, ಶುಕ್ರವಾರ ತಾರೀಕು 25ನೇ ಜೂನ್ 1915.

ವಿದ್ಯಾವಂತರು ಸಲ್ಲಿಸತಕ್ಕ ಋಣವು.

ಶಾಲಾ ಕೊಲೇಜುಗಳಲ್ಲಿ ವಿದ್ಯೆಯನ್ನು ಪಡಿಯುವಂಥವರ ಋಣಬದ್ಧತೆಯು ಬಹಳವಾಗಿದೆ. ಕೊಲೇಜುಗಳಲ್ಲಿ ವಿದ್ಯಾಭ್ಯಾಸವನ್ನು ಪಡಿಯುವ ಪ್ರತಿ ವಿದ್ಯಾರ್ಥಿಯ ಬಗ್ಯೆ ವರುಷ ಒಂದಕ್ಕೆ ಕೊಲೇಜು ಅಧಿಕಾರಿಗಳು ಸರಾಸರಿಯ ಮೇಲೆ ರೂ. 175ನ್ನು ಒಂದು ವರುಷದಲ್ಲಿ ಖರ್ಚು ಮಾಡುವರು. ಇದರಲ್ಲಿ ವಿದ್ಯಾರ್ಥಿಯಿಂದ ಪ್ರತಿ ವರುಷದಲ್ಲಿಯೂ ವಸೂಲು ಮಾಡೋಣಾಗುವ ಸರಾಸರಿ ಫೀಸು ರೂ. 68ನ್ನು ಕಳೆದರೆ ರೂ. 107 ಪ್ರತಿ ವಿದ್ಯಾರ್ಥಿಯ ಬಗ್ಯೆ ಖರ್ಚು ಮಾಡೋಣಾಗುವದು. ಕೊಲೇಜು ಅಧಿಕಾರಿಗಳಿಗೆ ಈ ಹಣವು ಸರಕಾರದವರಿಂದ ಅಥವಾ ಲೋಕಲ್ ಬೋರ್ಡ್ ಮೊದಲಾದವುಗಳಿಂದ ಕೊಡೋಣಾಗುವದು. ಅಂದರೆ ಪ್ರತಿ ವರುಷದಲ್ಲಿಯೂ ಕೊಲೇಜುಗಳಲ್ಲಿ ಕಲಿಯುವ ವಿದ್ಯಾರ್ಥಿಯು ರೂ. 107ರ ಮಟ್ಟಿಗೆ ಇತರರಿಗೆ ಋಣಬದ್ಧನಾಗುವನು. ಇದೇ ರೀತಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಬಗ್ಯೆ ವಿನಿಯೋಗಿಸಲ್ಪಡುವ ಹಣದ ಲೆಕ್ಕದ ಸರಾಸರಿಯನ್ನು ಪರ್ಯಾಲೋಚಿಸಿ ನೋಡಿದರೆ ಶಾಲಾ ವಿದ್ಯಾರ್ಥಿಗೆ ಪ್ರತಿ ವರುಷ ಶುಮಾರು ರೂ. 12 ಇತರರಿಂದ ಸಲ್ಲುವುದು. ಇತರರು ಅಂದರೆ ಸರಕಾರದವರು ಅಥವಾ ಲೋಕಲ್ ಬೋರ್ಡುಗಳು. ನಿರಕ್ಷರ ಕುಕ್ಷಿಗಳೂ ಬಡಪತ್ತಿನ ಸಂಕಷ್ಟದಲ್ಲಿ ನರಳುತ್ತಿರುವವರೂ ಆದ ಸಾಮಾನ್ಯ ರೈತರು ಮತ್ತು ಇತರ ಕೆಲಸಗಾರರು ತೆರಿಗೆಗಳನ್ನು ಸರಕಾರಕ್ಕೆ ಕೊಡುವುದರಿಂದ ಸರಕಾರದವರು ಹೀಗೆ ತಮ್ಮ ಕೂಡೆ ಒಟ್ಟು ಕೂಡುವ ಆದಾಯದಿಂದ ಶಾಲಾ ಕೊಲೇಜುಗಳಿಗೆ ಬೇಕಾದ ದ್ರವ್ಯಸಹಾಯವನ್ನು ಕೊಡುತ್ತಿರುವರು. ಆದ್ದರಿಂದ ವಿದ್ಯಾವಂತರು ತಮ್ಮ ವಿದ್ಯಾಧನಕ್ಕಾಗಿ ದೀನಸ್ಥಿತಿಯಲ್ಲಿರುವ ಸಾಮಾನ್ಯರಿಗೆ ಋಣಬದ್ಧರಾಗಿರುವರು. ಈ ಮಾತು ಯಥಾರ್ಥವಾದದ್ದೆಂತ ಸರಕಾರದವರ ಆದಾಯ ಲೆಕ್ಕದಿಂದ ರುಜುಪಡಿಸಬಹುದು. ಸರಕಾರದವರ ಜುಮುಲಾ ಪವನು 84,262,000 ಆದಾಯದಲ್ಲಿ ಪವನು 21,097,000 ಭೂ ತೆರಿಗೆಯಿಂದಲೂ 17,519,009 ಪವನುಗಳು ರೈಲ್ವೆಗಳ ಮೂಲಕವೂ ದೊರಕುತ್ತದೆ. ಭೂತೆರಿಗೆಯು ಗದ್ದೆಗಳಲ್ಲಿ ಸಾಗುವಳಿ ಕೆಲಸವನ್ನು ಮಾಡುವ ಬಡ ರೈತನ ಶ್ರಮದಿಂದಲೂ, ರೈಲ್ವೆ ಆದಾಯವು ಮೂರನೇ ತರಗತಿಯ ಗಾಡಿಗಳಲ್ಲಿ ವಿಶೇಷವಾಗಿ ಪ್ರಯಾಣ ಮಾಡುತ್ತಿರುವ ಸಾಮಾನ್ಯರಿಂದಲೂ ದೊರಕುವುದು. ಹೀಗೆ ಕೊಲೇಜುಗಳಿಂದ ಪಾಸಾಗಿ ಹೋಗುವ ಪ್ರತಿ ವಿದ್ಯಾರ್ಥಿಯು ದೀನದೆಸೆಯಲ್ಲಿರುವ ದೇಶಬಾಂಧವರಿಂದ ಪ್ರತಿ ವರುಷದಲ್ಲಿಯೂ ರೂ. 107ನ್ನು ಪಡೆಯುವನು. ಭಾರತೀಯರ ಉತ್ಪತ್ತಿಯ ಸರಾಸರಿಯನ್ನು ನೋಡಿದರೆ ಒಂದು ವರುಷಕ್ಕೆ ರೂ. 30ರಂತೆ ಇರುವದು. ಆದ್ದರಿಂದ ನಾಲ್ಕು ವರುಷ ಒಬ್ಬ ವಿದ್ಯಾರ್ಥಿಯನ್ನು ಕೊಲೇಜಿನಲ್ಲಿರಗೊಡಿಸಿ ಬಿ. ಎ. ಪರೀಕ್ಷೆ ತೇರಬೇಕಾದರೆ 14 ಜನರು ಒಂದು ವರುಷ ಶ್ರಮಪಡಬೇಕಾಗಿರುವುದು. ಎಮ್. ಎ. ಪರೀಕ್ಷೆಯನ್ನು ಪಾಸಾಗುವ ಬಗ್ಯೆ ಒಬ್ಬ ವಿದ್ಯಾರ್ಥಿಯ 6 ವರುಷಗಳ ಖರ್ಚನ್ನು ಸಂಪಾದನೆ ಮಾಡಬೇಕಾದರೆ 21 ಜನರ ಒಂದು ವರುಷದ ಶ್ರಮವು ಬೇಕಾಗುವದು. ವಿದ್ಯಾವಂತರಿಂದ ಸಲ್ಲತಕ್ಕ ಋಣವು ಎಷ್ಟು ವಿಶೇಷವಾಗಿದೆಂಬುದು ಇದರಿಂದ ಸ್ಪಷ್ಟವಾಗುವದು.

ವಿದ್ಯಾವಂತರು ಸಲ್ಲಿಸತಕ್ಕ ಋಣವನ್ನು ಬೆನಾರೀಸ್ ಕೊಲೇಜಿನ ವಿದ್ಯಾರ್ಥಿಯೊಬ್ಬನು ದ್ರವ್ಯರೂಪದಲ್ಲಿ ಮೇಲೆ ವಿವರಿಸಿದ ರೀತಿ ನಿಶ್ಚಯಿಸಿರುವನು. ಇಂಥಾ ಋಣ ವಿಮೋಚನೆಯ ಭಾವನೆಯು ಎಲ್ಲಾ ಕಡೆಗಳಲ್ಲಿಯ ವಿದ್ಯಾರ್ಥಿಗಳಲ್ಲಿಯೂ ವಿದ್ಯಾವಂತರಲ್ಲಿಯೂ ಉಂಟಾಗುವಂತೆ ಕಾಶೀ ಕೊಲೇಜಿನ ವಿದ್ಯಾರ್ಥಿಯ ವಿಜ್ಞಾಪನೆಯನ್ನು ಪರಿಶೀಲಿಸಿರುವೆವು.

ಕೆನರಾ ಪಬ್ಲಿಕ್ ಕನ್ವೇಯನ್ಸ್ ಕಂಪೆನಿ, ಮಂಗಳೂರು.

ಮಂಗಳೂರಿನಿಂದ ಬಂಟವಾಳ, ಪಾಣೆಮಂಗಳೂರು, ಪುತ್ತೂರು, ಈ ಊರುಗಳಿಗೆ ಪ್ರಯಾಣಿಕರನ್ನು ಪ್ರಕೃತ ಮೋಟರ್ ಭಂಡಿಗಳಲ್ಲಿ ವೆಯ್ಯುತ್ತಿರುವ ಈ ಕಂಪೆನಿಯ ಒಂದು ವರುಷದ ಕಾರ್ಯವೃತ್ತಾಂತವು ಪ್ರಕಟಿಸಲ್ಪಟ್ಟಿರುವದು. ಪ್ರಥಮ ವರುಷದಲ್ಲಿಯೇ ಈ ಕಂಪೆನಿಯವರ ಪರಿಶ್ರಮವು ಲಾಭಕರವೂ ತೃಪ್ತಿಕರವೂ ಆಗಿದೆಂಬುದನ್ನು ತಿಳಿಸಲು ಸಂತೋಷಪಡುತ್ತೇವೆ. ಮೋಟರ್ ಭಂಡಿಗಳ ಸೌಕರ್ಯವನ್ನು ಪ್ರಯಾಣಿಕರಿಗೆ ಕಲ್ಪಿಸಿಕೊಡುವ ಈ ಸಾಹಸವು ನಮ್ಮ ಜಿಲ್ಲೆಯಲ್ಲಿ ನೂತನವಾಗಿತ್ತು. ನವೀನ ಸಂಸ್ಥೆಗಳ ಪ್ರಾರಂಭ ಕಾಲದಲ್ಲಿ ಜನರ ಅಭಾವದ ದೆಸೆಯಿಂದ ಸಾಮಾನ್ಯವಾಗಿ ಪ್ರಾಪ್ತವಾಗುವ ಅಸಾವರತೆಯ ಹೊರತು ವಿಘ್ನಗಳು ಸಹ ಕಂಪೆನಿ ಸ್ಥಾಪನೆಯ ಕಾರ್ಯ ಪ್ರಾರಂಭದಲ್ಲಿ ಬಂದೊದಗಿದ್ದವು. ವಿಶೇಷ ಸಹನಾಶಕ್ತಿಯಿಂದ ಎದೆಗುಂದದೆ ಕಂಪೆನಿಯನ್ನು ಏರ್ಪಡಿಸಿ, ಒಂದು ವರುಷ ಕಾಲದಲ್ಲಿಯೇ ಅದರಿಂದ ಲಾಭವು ಹುಟ್ಟಿಬರುವಂತೆ ಸಾಧಿಸಿದ ಈ ಕಂಪೆನಿಯ ಮೆನೇಜಿಂಗ್ ಏಜಂಟರುಗಳ ಮತ್ತು ಡಿರೆಕ್ಟರರುಗಳ ಶ್ರಮವು ಸ್ತುತ್ಯವಾಗಿರುವುದು.

ಕಳೆದ ೧೯೧೪ನೇ ಮಾರ್ಚಿ ತಿಂಗಳಲ್ಲಿ ಈ ಕಂಪೆನಿಯು ರಿಜಿಸ್ಟರ್ ಮಾಡಲ್ಪಟ್ಟಿತ್ತಾದರೂ ೧೯೧೪ನೇ ದಶಂಬರ ತಿಂಗಳ ೧೫ನೇ ತಾರೀಕಿನ ವರೆಗೆ ಮೋಟರ್ ಭಂಡಿಗಳ ಚಲಾವಣೆಯನ್ನು ಮಾಡಲು ಸಾಧ್ಯವಾಗಲಿಲ್ಲ. ಪ್ರಥಮದಲ್ಲಿ ಮಂಗಳೂರು-ಬಂಟವಾಳ ಲ್ಯಾನಿನ ಬಗ್ಯೆ ಒಂದು ಗಾಡಿಯು ತರಿಸೋಣಾಯಿತು. ಇದರ ಚಲಾವಣೆಯನ್ನು ಕಳೆದ ದಶಂಬರ ತಿಂಗಳಲ್ಲಿ ಪ್ರಾರಂಭಿಸಿದರು. ನಂತರ ಕಳೆದ ಮಾರ್ಚಿ ತಿಂಗಳಲ್ಲಿ ಮಂಗಳೂರು ಪುತ್ತೂರು ಲ್ಯಾನಿನ ಬಗ್ಯೆ ಇನ್ನೆರಡು ಗಾಡಿಗಳನ್ನು ತರಿಸಿದರು. ಆದ್ದರಿಂದ ಕಳೆದ ವರುಷದ ಈ ಕಂಪೆನಿಯ ವೃತ್ತಾಂತದಲ್ಲಿ ತೋರಿಸಿದ ಒಟ್ಟಿನ ರೂ. ೭೪೬೧—೪—೦ ರ ಉತ್ಪತ್ತಿಯು ಬಂಟವಾಳ ಲ್ಯಾನಿನಲ್ಲಿ ಶುಮಾರು ಮೂರು ತಿಂಗಳಲ್ಲಿಯೂ ಪುತ್ತೂರು ಲ್ಯಾನಿನಲ್ಲಿ ಹತ್ತು ದಿವಸಗಳಲ್ಲಿಯೂ ಹುಟ್ಟಿಬಂದದ್ದಾಗಿದೆ. ಹೀಗೆ ಉತ್ಪನ್ನವಾದ ಮೂರು ತಿಂಗಳ ಆದಾಯದಿಂದ ಖರ್ಚನ್ನು ಕಳೆದು ಪಾಲು ಮಾಲಿಕರಿಗೆ ಸೇಕಡಾ ೯ರ ದರದಲ್ಲಿ ಮುನಾಫೆಯನ್ನು ಕೊಡಲು ಕಂಪೆನಿಯವರು ಶಕ್ತರಾಗಿರುವರು. ಕಂಪೆನಿಯನ್ನು ವ್ಯವಸ್ಥೆಗೊಳಿಸುವ ಬಗ್ಯೆ ತಗಲಿದ ಖರ್ಚಿನ ರೂ. ೧೩೭೭—೧೪—೦, ಮೋಟರ್ ಬಂಡಿಗಳನ್ನು ಮೂರು ತಿಂಗಳುಗಳಲ್ಲಿ ಉಪಯೋಗಿಸಿದ್ದರಿಂದ ಅವುಗಳ ಮೌಲ್ಯದಲ್ಲಿ ಕಡಮೆಮಾಡಬೇಕಾದ (depreciation) ಮೊಬಲಗು ರೂ. ೧೧೮೯—೩—೮ನ್ನು ಇತರ ಖರ್ಚು ಇತ್ಯಾದಿಗಳನ್ನೂ ಕಳೆಯಲಾಗಿ ನಿಕ್ಕಿ ಮುನಾಫೆಯು ರೂ. ೧೯೩೨—೪—೧೦ ಆಗುವದು. ಇದರಲ್ಲಿ ಸೇಕಡಾ 33⅓ರಂತೆ ಆಪದ್ಧನವಾಗಿ ತೆಗದಿಟ್ಟು ಬಾಕಿ ಉಳೆಯುವ ಮೊಬಲಗಿನಿಂದ ಸೇಕಡಾ ೯ರ ಮುನಾಫೆಯು ಪಾಲುಮಾಲೀಕರಿಗೆ ದೊರಕುವದು. ಪಬ್ಲಿಕ್ ಕನ್ವೇಯನ್ಸ್ ಕಂಪೆನಿಗಳಂಥಾ ಸಂಸ್ಥೆಗಳು ಕೆಲವು ವರುಷಗಳ ವರೆಗೆ ಸಿಕ್ಕುವ ಮುನಾಫೆಯೆಲ್ಲವನ್ನು ಆಪದ್ಧನವಾಗಿಟ್ಟುಕೊಂಡು ಕಂಪೆನಿಯನ್ನು ಅದರ ಶೈಶವದಲ್ಲಿ ಬಲಪಡಿಸುವದು ಅಗತ್ಯವಾಗಿರುವದು. ಈ ಕಂಪೆನಿಯ ಡಿರೆಕ್ಟರರುಗಳು ಈ ಅಭಿಪ್ರಾಯವನ್ನು ಪಾಲುಮಾಲಿಕರಿಗೆ ಸೂಚಿಸಿದ್ದರಲ್ಲದೆ ತಮಗೆ ದೊರೆಯುವ ಪ್ರತಿಫಲವನ್ನು ಸಹ ನಿರಾಕರಿಸಿರುವರು. ಆದರೆ ಪಾಲುಮಾಲಿಕರಲ್ಲಿ ಬಹುಪಕ್ಷದ ಅಭಿಪ್ರಾಯವು ಬೇರೆಯಾಗಿ ಹೋದ್ದರಿಂದ ಪ್ರಥಮ ವರುಷದ ಮುನಾಫೆಯನ್ನು ಹಂಚಿಕೊಡಬೇಕಾಯಿತು. ಇಂಥಾ ಅವಿವೇಕವನ್ನು ಮುಂದಿನ ವರುಷದಲ್ಲಾದರೂ ಪಾಲುಮಾಲಿಕರು ತೋರ್ಪಡಿಸರೆಂಬುದಾಗಿ ಕೋರುತ್ತೇವೆ. ಮೋಟರ್ ಗಾಡಿಗಳ ದಾಗದೂಜಿಯ ಬಗ್ಯೆ ಒಂದು ಕಾರ್ಖಾನೆಯನ್ನು ಏರ್ಪಡಿಸುವ ಬಗ್ಯೆಯೂ ಜಿಲ್ಲೆಯ ಇತರಪ್ರಾಂತ್ಯಗಳಲ್ಲಿ ಗಾಡಿಗಳ ಚಲಾವಣೆಯನ್ನು ಪ್ರಾರಂಭಿಸುವ ಬಗ್ಯೆ ಬೇಕಾದ ಗಾಡಿಗಳನ್ನು ತರಿಸುವಗೋಸ್ಕರವೂ ಕಂಪೆನಿಯ ನಿಯಮಿತ ಭಂಡವಾಳದಿಂದ ಇನ್ನೂ ರೂಪಾಯಿ ೧೦ರ ಮೌಲ್ಯದ ೨೫೦೦ ಪಾಲುಗಳನ್ನು ವಿಕ್ರಯಿಸಿ ತತ್ಕಾಲದಲ್ಲಿ ಅಗತ್ಯವಿರುವ ದ್ರವ್ಯಸಂಗ್ರಹವನ್ನು ಮಾಡಲು ನಿಶ್ಚಯಿಸಿರುವರು. ಮೋಟರ್ ಭಂಡಿಗಳ ಚಲಾವಣೆಯು ಎಷ್ಟು ಅನುಕೂಲವೂ ಲಾಭಕರವೂ ಇದೆಂಬ ಸಂಗತಿಯು ಜನರೆಲ್ಲರಿಗೆ ಈ ಕಂಪೆನಿಯ ಗತವರುಷದ ವೃತ್ತಾಂತದಿಂದ ವ್ಯಕ್ತವಾದ್ದರಿಂದ ಪ್ರಕೃತ ಕಂಪೆನಿಯವರು ವಿಕ್ರಯಿಸಲು ನಿಶ್ಚಯಿಸಿರುವ ಪಾಲುಗಳನ್ನು ಮಹಾಜನರು ಉತ್ಸಾಹದಿಂದ ಪಡಕೊಳ್ಳುವರಾಗಿ ನಂಬಿದ್ದೇವೆ. ಈ ಕಂಪೆನಿಯ ವ್ಯವಸ್ಥೆಯು ಇನ್ನೂ ಪೂರ್ಣವಾಗಿರದು. ಗಾಡಿಗಳ ಬಗ್ಯೆ ಒಂದು ವರ್ಕ್‌ಶೋಪ್ ಯಾ ರಿಪೇರಿಯ ಕಾರ್ಖಾನೆ, ಅವಗಡಗಳನ್ನು ತಕ್ಕ ರೀತಿಯಲ್ಲಿ ಎದುರಾಡಲು ಬೇಕಾದ ಗಾಡಿಗಳು, ಮೋಟರ್ ಇಂಜಿನಿಯರಿಂಗ್ ಕೆಲಸದ ಒಳ್ಳೇ ಪರಿಚಿತಿಯುಳ್ಳ ನೌಕರರ ಸಿಬಂದಿ, ಕಟ್ಟಡಗಳು ಇತ್ಯಾದಿಗಳು ಕಂಪೆನಿಯ ಸುವ್ಯವಸ್ಥೆಗೆ ಇನ್ನೂ ಬೇಕಾಗಿವೆ. ಇದೆಲ್ಲವನ್ನು ಸಂಗ್ರಹಿಸಿಕೊಳ್ಳುವುದಕ್ಕೆ ಪಾಲುಗಳ ಮಾರಾಟದ ಒಂದೇ ವಿಧಾನವು ಸಾಲದು. ಈ ವಿಧಾನವು ಕ್ರಮೇಣ ಪಾಲುಮಾಲಿಕರಿಗೆ ಲಾಭಕರವಾಗಿ ಪರಿಣಮಿಸದು. ಒಟ್ಟಿನ ಮುನಾಫೆಯ ಅಧಿಕಾಂಶವನ್ನು ಪ್ರತಿ ವರುಷದಲ್ಲಿಯೂ ಈ ಬಗ್ಯೆ ಪ್ರತ್ಯೇಕಿಸಿಟ್ಟು ನಂತರ ನಿಕ್ಕಿ ಮುನಾಫೆಯನ್ನು ನಿಶ್ಚಯಿಸುವದು ಅತ್ಯಗತ್ಯ. ಕಂಪೆನಿಯ ಡಿರೆಕ್ಟರರೂ ಪಾಲುಮಾಲಿಕರೂ ಮುಂದಿನ ವರುಷಗಳಲ್ಲಿ ಈ ವಿಷಯವನ್ನು ತಮ್ಮ ಲಕ್ಷ್ಯಕ್ಕೆ ತಂದುಕೊಳ್ಳಬೇಕಾಗಿ ಅಪೇಕ್ಷಿಸುತ್ತೇವೆ.

ಬೆಳಗಾಂವಿಯಲ್ಲಿ ನೂತನವಾಗಿ ಕರ್ಣಾಟ ವಾಚನಾಲಯ ಸ್ಥಾಪನೆ.

"ಜ್ಞಾನ ಪ್ರಕಾಶ"ವೆಂಬ ಪುಣೆಯ ಪತ್ರಿಕೆಗೆ ಬೆಳಗಾಂವಿಯ ಬಾತಮಿದಾರರೊಬ್ಬರು ಬರೆದುದನ್ನು ಕನ್ನಡಿಸಿ ಈ ಕೆಳಗೆ ಕೊಟ್ಟಿದೆ

"ಬೆಳಗಾಂವಿಯು ಕರ್ಣಾಟ ದೇಶಕ್ಕೆ ಕೇಂದ್ರಸ್ಥಾನವಾಗಿದ್ದು ಕೂಡ ಕನ್ನಡದ ವಿಷಯದಲ್ಲಿ ಅಲ್ಲಿಯ ಜನರಲ್ಲಿ ಇರಬೇಕಾದಷ್ಟು ಅಭಿಮಾನವಿಲ್ಲದುದರಿಂದ ಇಲ್ಲಿ ಆ ಭಾಷೆಯ ವಿಷಯದಲ್ಲಿ ತುಂಬ ಅನಾಸ್ಥೆ ಇರುವುದು, ಮತ್ತು ಈ ಸ್ಥಿತಿಯು ಕರ್ಣಾಟ ಭಾಷಾದೃಷ್ಟಿಯಿಂದ ಬಹು ಶೋಚನೀಯವಾಗಿದೆ ಈ ವಿಷಯ ಇಲ್ಲಿಯ ಕರ್ಣಾಟ ಭಾಷಾಭಿಮಾನಿಗಳಾದ ಕೆಲವು ಸುಶಿಕ್ಷಿತರಿಗೆ ಗೋಚರಿಸಿದುದರಿಂದ ಅವರು ಈ ಸ್ಥಿತಿಯನ್ನು ಸಾಧ್ಯವಾದ ಮಟ್ಟಿಗೂ ದೂರಗೊಳಿಸಬೇಕೆಂಬ ಉದ್ದೇಶದಿಂದ ಈ ಪಟ್ಟಣದಲ್ಲಿ "ಕರ್ಣಾಟಕ ಭಾಷಾ ಸಂವರ್ಧಕ ಸಂಘ"ವೆಂಬ ಹೆಸರಿಂದ ಒಂದು ಭಾಷೋತ್ತೇಜಕ ಸಂಸ್ಥಾಪನೆಯನ್ನು ಏರ್ಪಡಿಸುವುದಕ್ಕಾಗಿ ಜೂನ್ ತಾರೀಖು ೨ನೇ ಬುಧವಾರ ಒಂದು ಸಾರ್ವಜನಿಕ ಸಭೆಯನ್ನು ಕೂಡಿಸಿದ್ದರು ಡಿಪ್ಯುಟಿ ಎಜ್ಯುಕೇಶನಲ್ ಇನ್ಸ್‌ಪೆಕ್ಟರ್ ಉದ್ಯೋಗದಿಂದ ನಿವೃತ್ತರಾದ ರಾ| ರಾ| ರಾಮಚಂದ್ರರಾವ್ ಸವಣೂರ ಎಂಬವರು ಸಭಾಧ್ಯಕ್ಷರಾಗಿದ್ದರು ಸಭೆಯಲ್ಲಿ ಆನರೆಬಲ್ ಬೆಳವಿ, ಮಿ| ಅಜರೇಕರ್, ದೇಶಪಾಂಡೆ, ಮುದಗಿರಿ, ಮಾಸೂರ ಮೊದಲಾದ ವಕೀಲರು ಕಂಡು ಬರುತ್ತಿದ್ದರು ಧಾರವಾಡದಿಂದ ವಕೀಲರಾದ ಮಿ| ಆಲೂರರವರು ಇದಕ್ಕಾಗಿಯೇ ಬಂದಿದ್ದರು. ಬಿಜಾಪುರದಿಂದ ಮಿ| ಕೌಜಲಗಿಯವರು ಬಂದಿದ್ದರು ಮೊದಲಲ್ಲಿ ವಕೀಲ ರಾ| ಜೋಶಿಯವರು ಸಭೆಯ ಉದ್ದೇಶವನ್ನು ವಿವರಿಸಿ ಹೇಳಿದ ಬಳಿಕ ಮಿ| ಆಲೂರ ಬಿ ಎ, ಎಲ್. ಎಲ್ ಬಿ. ಇವರು "ಕರ್ಣಾಟ ವಾಙ್ಮಯ ಮತ್ತು ಅದರ ಅಭಿವೃದ್ಧಿ" ಎಂಬ ವಿಷಯವಾಗಿ ಬಹು ಸುರಸವೂ ತುಂಬ ಸಮಾಚಾರವುಳ್ಳದೂ ಆದ ವ್ಯಾಖ್ಯಾನವನ್ನು ಕೊಟ್ಟರು.

ವ್ಯಾಖ್ಯಾನಕಾರರು ಹೇಳಿದುದರ ಸಾರಾಂಶವು ಹೀಗಿದ್ದಿತು — "ಕರ್ಣಾಟ ಭಾಷೆಯು ಪ್ರೌಢವೂ ಸಮೃದ್ಧವೂ ಆಗಿದ್ದರೂ ಅದಕ್ಕೆ ಈಗ ದೀನಾವಸ್ಥೆ ಪ್ರಾಪ್ತವಾಗಿದೆ. ಈ ದೀನಾವಸ್ಥೆಗೆ ಕನ್ನಡವನ್ನಾಡುವ ಜನರು ಒಂದೇ ಪ್ರಾಂತ್ಯದಲ್ಲಿ ಒಂದೇ ಕಡೆಯಲ್ಲಿ ಇಲ್ಲದೆ ಬೇರೆಬೇರೆ ದೇಶಗಳಲ್ಲಿಯೂ ಜಿಲ್ಲೆಗಳಲ್ಲಿಯೂ ಇರುವುದೇ ಮೂಲಕಾರಣವಾಗಿದೆ ಈ ಪ್ರಾಂತ್ಯದಲ್ಲಿ ಧಾರವಾಡದ "ಕರ್ಣಾಟಕ ವಿದ್ಯಾವರ್ಧಕ ಸಂಘ"ದವರಿಂದಲೂ ಮೈಸೂರು ಬೆಂಗಳೂರು ಕಡೆಗೆ ಅಲ್ಲಿಯ ಕೆಲಕೆಲವು ಸುಶಿಕ್ಷಿತರಿಂದಲೂ ಕನ್ನಡದ ಉನ್ನತಿಗಾಗಿ ಪ್ರಯತ್ನಗಳು ಮಾಡಲ್ಪಡುತ್ತಿವೆ ಇದು ನಮ್ಮ ಪುಣ್ಯವೆನ್ನಬೇಕು ಪ್ರಾಚೀನಕಾಲದಲ್ಲಿ ಜೈನರು ಕನ್ನಡವನ್ನು ಮೇಲಕ್ಕೆತ್ತಿ ಅದಕ್ಕೆ ಪ್ರೌಢತೆಯನ್ನುಂಟು ಮಾಡಿದವರಾದುದರಿಂದ ಜೈನರೇ ಕನ್ನಡದ ಮೂಲ ಪೋಷಕರೂ ಆಧಾರಸ್ತಂಭರೂ ಆಗಿರುವರೆಂದು ನಿರಾತಂಕವಾಗಿ ಹೇಳಬಹುದು. ಮುಂದೆ ಲಿಂಗಾಯತರೂ ವೈಷ್ಣವರೂ ಅದಕ್ಕೆ ಕೈಗೊಟ್ಟರೆಂಬುದು ನಿಜ. ಆದರೂ ಪ್ರಾರಂಭದಲ್ಲಿ ಜೈನರು ಕನ್ನಡಕ್ಕೆ ವ್ಯಾಕರಣ ನಿಘಂಟುಗಳನ್ನು ರಚಿಸಿ ಆ ಭಾಷೆಯಲ್ಲಿ ಅಸಂಖ್ಯಾತ ಗ್ರಂಥಗಳನ್ನು ಬರೆಯದಿರುತ್ತಿದ್ದರೆ ಇಂದು ಕನ್ನಡದ ಹೆಸರನ್ನು ಕೂಡ ಎತ್ತಲು ಅವಕಾಶವಿರುತ್ತಿರಲಿಲ್ಲ ಕನ್ನಡವು ಪ್ರಾಚೀನ ಭಾಷೆಯಾಗಿದೆ ಪೂರ್ವಕಾಲದಲ್ಲಿ ಕಾವೇರಿಯಿಂದ ಗೋದಾವರಿಯ ವರೆಗೂ ಅದು ವ್ಯಾಪಿಸಿದ್ದಿತೆಂದು ಕಂಡುಬರುತ್ತದೆ ಕ್ರಿಸ್ತಶಕದ ಎರಡನೇ ಮೂರನೇ ಶತಮಾನಗಳಲ್ಲಿದ್ದ ರಾಜರುಗಳ ಶಾಸನ ಶಿಲಾಲೇಖನಗಳ ಲಿಪಿಯೂ, ಪ್ರಾಯಶಃ ಭಾಷೆಯೂ ಕನ್ನಡವಾಗಿದ್ದುದೆಂದು ತಿಳಿಯಬಂದಿದೆ "ಜ್ಞಾನೇಶ್ವರಿ" ಎಂಬ ಮರಾಠೀ ಗ್ರಂಥದಲ್ಲಿ ಕೂಡ ಕನ್ನಡ ಶಬ್ದಗಳು ಅಲ್ಲಲ್ಲಿ ಬಂದಿವೆ. ಹೀಗಾದುದರಿಂದ ಜ್ಞಾನೇಶ್ವರಿಯ ಕಾಲದಲ್ಲಿಯೂ ಆ ಭಾಷೆಯು ಎಷ್ಟು ಪ್ರಬಲವಾಗಿದ್ದಿತೆಂಬುದು ನಿದರ್ಶನವಾಗಿ ತಿಳಿಯಬರುತ್ತದೆ. ಆದುದರಿಂದ ಇಂಥ ಪ್ರಾಚೀನವೂ ಪೂರ್ಣವೂ ಆದ ಭಾಷೆಯನ್ನು ಉದ್ಧಾರ ಮಾಡುವ ಉತ್ತರವಾದಿತ್ವವು ಭಾಷಾಭಿಮಾನಿಯಾದ ಪ್ರತಿಯೊಬ್ಬ ಕನ್ನಡಿಗನ ಮೇಲೆಯೂ ಇರುವುದೆಂಬುದು ಸ್ಪಷ್ಟವಾಗಿದೆ. ಬೆಳಗಾಂವಿ ಜಿಲ್ಲೆಯಲ್ಲಿ ಸುಮಾರು ಮುಕ್ಕಾಲುಪಾಲು ಜನರು ಕನ್ನಡಿಗರಾಗಿರುವರು. ವಿಳಂಬವಾಗಿಯಾದರೂ ಅವರಲ್ಲಿ ಕರ್ಣಾಟ ಭಾಷೋನ್ನತಿಯ ಕುರಿತು ಜಾಗೃತಿಯುಂಟಾದುದು ತುಂಬ ಸಂತೋಷದ ವಿಷಯವಾಗಿದೆ. ಕನ್ನಡದ ಉನ್ನತಿಗಾಗಿ ಸ್ಥಾಪಿಸಲಾಗುವ ಈ ಸಂಸ್ಥಾಪನೆಯು ಚಿರಾಯುವಾಗಲೆಂದು ಪರಮಾತ್ಮನನ್ನು ಪ್ರಾರ್ಥಿಸುವೆನು."

ಈ ಭಾಷಣವಾದ ಬಳಿಕ ರಾ| ಜೋಶಿಯವರು "ಕರ್ಣಾಟಕ ಭಾಷಾ ಸಂವರ್ಧಕ ಸಂಘ"ವೆಂಬ ಒಂದು ಕನ್ನಡ ವಾಚನಾಲಯವನ್ನು ಸ್ಥಾಪಿಸುವ ಕುರಿತು ಒಂದು ಸೂಚನೆಯನ್ನು ತಂದರು. ಅದು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು. ಮತ್ತು ಆ ಸಂಘದ ಘಟನೆ ನಿಬಂಧನೆ ಮುಂತಾದುವುಗಳನ್ನು ಗೊತ್ತುಪಡಿಸುವುದಕ್ಕಾಗಿ ಒಂದು ಉಪಸಭೆಯೂ ಒಂದು ಕಾರ್ಯನಿರ್ವಾಹಕ ಮಂಡಳಿಯೂ ಏರ್ಪಡಿಸಲಾಯಿತು. ಶ್ರೀಮಂತರಾದ ಸರದಾರ ವಂಟಮೂರಿಯ ದೇಸಾಯಿಯವರನ್ನು ಅಧ್ಯಕ್ಷರಾಗಿಯೂ, ಆನರೆಬಲ್ ಬೆಳವಿ ಮತ್ತು ಮಿ| ಅಜರೇಕರ್‌ರವರನ್ನು ಉಪಾಧ್ಯಕ್ಷರಾಗಿಯೂ ಮಿ| ಲೋಕೂರ ಮತ್ತು ಮಿ| ಗೆಜ್ಜಿಯವರನ್ನು ಕಾರ್ಯದರ್ಶಿಗಳಾಗಿಯೂ ಆರಿಸಿದರು ತರುವಾಯ ಅಧ್ಯಕ್ಷರು ಅಧಿಕಾರಯುಕ್ತವಾದ ಭಾಷಣವನ್ನು ಮಾಡುತ್ತಾ ಕರ್ಣಾಟ ವಾಙ್ಮಯದ ವರ್ಣನೆಯನ್ನು ಹೇಳಿ ಅದರ ಉನ್ನತಿಗಾಗಿ ಪ್ರಯತ್ನಿಸಬೇಕೆಂದು ಪ್ರೋತ್ಸಾಹಕರವಾಗಿ ಮಾತನಾಡಿದರು. ಮತ್ತು ಪದ್ಧತಿರೀತ್ಯಾ ಸಂಘಸ್ಥಾಪನೆಯನ್ನು ತಿಳಿಯಪಡಿಸಿದರು

ಈ ಮೇರೆಗೆ ಮರಾಠೀ ಭಾಷೆಯ ಪ್ರಾಬಲ್ಯಕ್ಕೆ ಸಿಕ್ಕಿಬಿದ್ದ ಉತ್ತರ ಕರ್ಣಾಟದ ನಮ್ಮ ದೇಶಬಂಧುಗಳು ಸಹ ಭಾಷಾಸೇವೆಗಾಗಿ ಬದ್ಧಕಂಕಣರಾಗಿರುವರು. ಹೀಗೆಯೇ "ಕನ್ನಡ" ಜಿಲ್ಲೆಯ ನಿವಾಸಿಗಳಾದ ನಮ್ಮವರಿಗೆ ಕೂಡ ಕ್ಷಿಪ್ರದಲ್ಲಿಯೇ ಜಾಗೃತಿಯುಂಟಾಗದಿರದೆಂದು ನಂಬುಗೆಯಿದೆ

ಹಳ್ಳಿಯ ಬೆಂಚ್ ಕೋರ್ಟುಗಳೂ, ಆರೋಗಣೆಯೂ.

(ಕಳೆದ ಸಂಚಿಕೆಯಿಂದ ಮುಂದರಿಸಿದುದು.)

ಹಲವು ಸಲ "ದಾರಿದ್ರ್ಯಕ್ಕೆ ಕೂರೆ ಹೆಚ್ಚು" ಎಂಬಂತಿದೆ. ಆದರೆ ಅನೇಕ ತೊಂದರೆಗಳು ಜನರ ಅಜ್ಞಾನ ಮತ್ತು ಒರಟುತನದ ಫಲವಾಗಿವೆ. ಆಗಾಗ ಸರಕಾರದವರಿಂದ ಮಲೆಜ್ವರ, ವಾಂತಿಭೇದಿ, ಸಿಡುಬು, ಪ್ಲೇಗುರೋಗ ಮುಂತಾದುವುಗಳ ನಿವಾರಣೆಯನ್ನು ಬೋಧಿಸುವ ಸರ್ಕಿಲಾರುಗಳು ತಯಾರಿಸಲ್ಪಟ್ಟು ರೆವಿನ್ಯೂ ಮತ್ತು ವಿದ್ಯಾ ಇಲಾಖೆಯವರಿಂದ ಹಳ್ಳಿಹಳ್ಳಿಗಳಲ್ಲಿ ಹಂಚಲ್ಪಟ್ಟರೂ ಇಂದ ಸರ್ಕಿಲಾರುಗಳು ಗೆದ್ದಲೆಯ ತುತ್ತಾಗುವುದಲ್ಲದೆ ಹೆಚ್ಚಿನ ಉಪಕಾರಿಯಾಗಿಲ್ಲವೆಂದು ಫಾದರ್ ಕೊಯಿಲೊರವರ ಅನುಭವ. ಈ ಸರ್ಕಿಲಾರುಗಳ ಮಹತ್ವವನ್ನು ಗ್ರಾಮ ಉದ್ಯೋಗಸ್ಥರೂ ಉಪಾಧ್ಯಾಯರೂ ಎಷ್ಟರ ಮಟ್ಟಿಗೆ ಕಂಡಿರುವರೆಂದು ವಿಚಾರಿಸಿದರೆ ಸರ್ವವೂ ವಿದಿತವಾಗುವುದು ಎಂದು ಅವರು ಸೂಚಿಸಿ, ಫಲವೇನೂ ಇಲ್ಲವೆಂದು ಖೇದಗೊಳ್ಳುತ್ತಾರೆ. ಇಂದ ಸಂದರ್ಭಗಳಲ್ಲಿ ಆರೋಗಣೆಯ ವಿಚಾರವನ್ನು ಈ ಹಳ್ಳಿಯ ಸಂಘಗಳ ಪಂಚಾಯತರಿಗೆ ಒಪ್ಪಿಸಲಾಗಲಿಕ್ಕಿಲ್ಲವೇ ಎಂದು ಅವರ ಸೂಚನೆ. ಶಹರುಗಳಲ್ಲಿ ಸ್ವಲ್ಪ ಮಟ್ಟಿಗೆ, ಸುಧಾರಣೆ ಹೊಂದಿ ಆರೋಗ್ಯ ಸೂತ್ರಗಳನ್ನು ಚೆನ್ನಾಗಿ ಬಲ್ಲವರಿರುವರು. ಇಂಥವರು ಇದ್ದರೂ ಮುನ್ಸಿಪಾಲಿಟಿಗಳಲ್ಲಿ ದಿನೇ ದಿನೇ ಹೊಸ ಸಾಂಕ್ರಾಮಿಕ ರೋಗಗಳ ಸಂಖ್ಯೆ ವೃದ್ಧಿಯಾಗಿ ಮರಣದ ಸಂಖ್ಯೆಯು ಹೆಚ್ಚುತ್ತಲಿದೆ ಉದರ ನಿರ್ವಾಹದ ಒದ್ದಾಟದಲ್ಲಿ ಕೆಲವರಿಗೆ ಈ ಕೆಲಸಕ್ಕೆ ಮನಸ್ಸುಕೊಡಲು ಅವಕಾಶವಿಲ್ಲ, ಬಹು ಮಂದಿಗೆ ಅಶ್ರದ್ಧೆಯೇ ಹೆಚ್ಚು. ನಮ್ಮ ಮಂಗಳೂರು ವಿದ್ಯೆಯಲ್ಲಿ ಏನಾದರೂ ಕಮ್ಮಿಯಾಗಿಲ್ಲ. ಆದರೆ ಅನೇಕ ವಿದ್ಯಾವಂತರ ಮನೆಬಳಿಯ ಚರಂಡಿಗಳೇ ದುರ್ವಾಸನೆಗೆ ತೌರಮನೆಯಾಗಿವೆ. ಒಂದು ಚರಂಡಿಯಲ್ಲಿ ಒಂದು ನಾಯಿ ಅಥವಾ ಬೆಕ್ಕು ಸತ್ತು ಕೊಳೆಯುತ್ತಿದ್ದರೆ ಅದರಿಂದ ಜನರಿಗೆ ಅಪಾಯಬಾರದಂತೆ ಮುಂದಿನ ಉಪಾಯವನ್ನು ಎಷ್ಟು ಜನರು ಕಾಣುವರು. ದಾಟಿ ಹೋಗುವಾಗ ಮೂಗಿನ ಮೇಲೆ ವಸ್ತ್ರವಿಟ್ಟು, ಮೊಹರಂ ಸಮಯದಲ್ಲಿ ಬರುವ ಕಾತುಪನ ಷ್ಷೇಪದಂತೆ ಹಾರಿ ಹಾರಿ ಓಡಿ ಓಡಿ ಹೋಗುವವರಲ್ಲದೆ ಮುನ್ಸಿಪಾಲಿಟಿಯ ಆರೋಗ್ಯಖಾತೆಯ ನೌಕರರಿಗೆ ತಿಳಿಸಿ ಆ ಸತ್ತ ಮೃಗವನ್ನು ತೆಗಿಸಲಿಕ್ಕೆ ಯಾರೂ ಪ್ರಯತ್ನಿಸುವುದಿಲ್ಲ ಮುನ್ಸಿಪಾಲಿಟಿ ಎಂಬದ್ದೇ ಇಲ್ಲವಾದರೆ ತಮ್ಮ ಮನೆಯ ಮುಂದಿನ ಬೀದಿಯನ್ನು ಗುಡಿಸಿ ಚೊಕ್ಕಟವಾಗಿಡುತ್ತಾರೆ. ಆದರೆ ಮುನ್ಸಿಪಾಲಿಟಿಯೊಡನೆ ತಮ್ಮ ಮನೆಯ ಎಂಜಲೆಲೆಯನ್ನು ಎದುರು ಮನೆಯ ಬಳಿಯಲ್ಲಿದ್ದ ಚರಂಡಿಯಲ್ಲಿ ಬಿಸಾಡುವರು. ಈ ರೀತಿಯ ಅಶ್ರದ್ಧೆಯಿಂದಿರುವವರಿಗೆ ಎಚ್ಚರಿಸುವುದಕ್ಕೆ ಹೆಚ್ಚಿನ ನಿಗಾ ಅಗತ್ಯವಿದೆ. ಹಾಗಿದ್ದರೆ ಅಜ್ಞಾನದಿಂದೊಡಗೂಡಿದ ಹಳ್ಳಿಯವನ ಪಾಡೇನು?

ಗ್ರಾಮ ಆರೋಗಣೆಯ ವಿಚಾರವೆಂಬುದು ಈಗ ಹಲವರ ಬಾಯಲ್ಲಿದೆ. ಸರಕಾರದವರೂ ಸಣ್ಣ ದೊಡ್ಡ ಹಳ್ಳಿಗಳಲ್ಲಿ ಬಾವಿಗಳನ್ನು ಕಡಿಸುತ್ತಲಿದ್ದಾರೆ. ಆದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಂತಹ ಜಿಲ್ಲೆಗಳಲ್ಲಿ ಯಾವ ನಮೂನೆಯ ಆರೋಗಣೆಯ ವಿಚಾರ ಮಾಡಬಹುದೆಂಬುದು ಗೊತ್ತಾಗುವುದಿಲ್ಲ. ಬಾವಿಗಳನ್ನು ಅಗಿಸಿದರೂ ಹರಿದುಹೋಗದ ನೀರಿನ ಕೆರೆಗಳಲ್ಲಿ ಪಾತ್ರೆಗಳನ್ನು ತಿಕ್ಕುವುರು, ಸ್ನಾನಮಾಡುವುರು, ಅಡಿಗೆಗೆ ಅದೇ ನೀರನ್ನು ಉಪಯೋಗಿಸುವುರು, ಮೇಲ್‌ಜಾತಿಯವರೆನ್ನಿಸಿಕೊಳ್ಳುವವರೆಲ್ಲ ಪ್ರಚಾರದಲ್ಲಿದ್ದರೆ ಕೀಳುಜಾತಿಯವರಿಗೆ ಒಪ್ಪಿ ಹೇಳುವವರು ಯಾರು? ಈ ವಿಷಯದಲ್ಲಿ ಶಾಲಾ ಪುಸ್ತಕಗಳಲ್ಲಿ ಪಾಠಗಳನ್ನು ಸೇರಿಸಿ ವಿವರಿಸಿದರೂ ಜನರ ವಿದ್ಯಮಾನ ನಡತೆಗಳಲ್ಲಿ ಬದಲಾವಣೆಗಳಾದ ವಿನಹಾ ಆರೋಗಣೆಯ ವಿಚಾರವು ಸಫಲವಾಗುವುದಿಲ್ಲ.

ಇದಲ್ಲದೆ ಪೂರ್ವಕಾಲದಲ್ಲಿ ಆಯಾಯ ಜಾತಿಯವರು ವಾಸಮಾಡುವ ಅಗ್ರಹಾರಗಳು ಬೇರೆಬೇರೆಯಾಗಿದ್ದವು. ಈಗಲಾದರೆ ನಡತೆ ಕಟ್ಟುಕಟ್ಟಳೆಗಳಲ್ಲಿ ಬಹಳ ವ್ಯತ್ಯಾಸವಿರುವ ಹಲವು ಜಾತಿಯವರು ಒಂದು ಭಾಗದಲ್ಲಿ ಒತ್ತೊತ್ತಾಗಿ ವಾಸಮಾಡುತ್ತಾರೆ. ದಿನಕ್ಕೆ ಮೂರು ಸಲ ಸ್ನಾನಮಾಡುವಂದವರು ಸಹಾ ನಸ್ಯ ತುಂಬಿದ ಸಿಂಬಳವನ್ನು ಕೈಯಿಂದ ಹಿಂಡಿ ಗೋಡೆಗಳಿಗೂ ಕಂಬಗಳಿಗೂ ಕೈಯನ್ನು ಒರಸುವುದು ದುರಭ್ಯಾಸವೆಂದು ಎಣಿಸುವುದಿಲ್ಲ. ಇನ್ನೂ ಕೆಲವರಿಗೆ ಮನೆಯೊಳಗೆ ಸಿಕ್ಕಿದೆಡೆಯಲ್ಲಿ ಉಗಿಯುವ ಪದ್ಧತಿ ಇದೆ. ಇನ್ನೂ ಕೆಲವರು ಚಲೋ ಬಟ್ಟೆಗಳನ್ನು ಧರಿಸಿಕೊಂಡರೂ ಈ ಸೆಕೆಯ ಊರುಗಳಲ್ಲಿ ದಿನಕ್ಕೊಂದಾವರ್ತಿ ಮೀಯುವುದೂ ಒಂದು ಒಗೆಯು ತೊಂದರೆಯೆಂದು ಭಾವಿಸುವದುಂಟು. ಹೀಗಿರುವ ಜನರ ಪದ್ಧತಿಗಳನ್ನು ಮಾರ್ಪಡಿಸುವುದಕ್ಕೆ ಬಹಳ ಕಾಲವು ಬೇಕಾಗುವುದಲ್ಲದೆ ಅವರಲ್ಲಿ ಸುಶಿಕ್ಷಣವೂ ಬೇರೂರಬೇಕು. ಇಷ್ಟಾಗದೆ ಪಂಚಾಯತರು ಆರೋಗ್ಯ ವಿಚಾರವು ಕೈಕೊಳ್ಳುವುದೆಂದರೆ ಸುಲಭ ಸಾಧ್ಯವಾಗಲಾರದು.

ಇಷ್ಟೇ ಅಲ್ಲ; ಈಗ ಸಾಮಾಜಿಕ ಅಥವಾ ಸಾರ್ವಜನಿಕ ಯಾವದೇ ಸಂಸ್ಥೆಯಾಗಲಿ ಹೆಸರು ಪೂರ್ತಿಯಾಗಿ ಒಂದು ಕಮ್ಮಿಟಿಯ ಆಡಳಿತೆಯೊಳಗಿರುವುದಲ್ಲದೆ ಅಂಥಾ ಕಮ್ಮಿಟಿಯಲ್ಲಿ ಒಬ್ಬಿಬ್ಬರ ಧೋರಣೆಯ ಮೇಲೆ ಹೊಂದಿದೆ. ಹೀಗಾಗದೆ ಜನಸಾಮಾನ್ಯರಲ್ಲಿ ತಮ್ಮ ತಮ್ಮ ಕರ್ತವ್ಯದ ವಿಷಯವಾಗಿ ಜ್ಞಾನವು ಅಂಕುರಿಸದೆ ಇದ್ದರೆ ಇಂಥ ಯಾವ ಸಂಸ್ಥೆಯೂ ಚಿರಕಾಲ ಬಾಳಲಾರದು.

ಸ್ವರ್ಗಸ್ಥರಾದ ಗೋಖಲೆಯವರು.

ಈ ಮಹಾತ್ಮರು ಮುಕ್ತರಾದ ಕೂಡಲೇ ಅನೇಕ ಊರುಗಳಲ್ಲಿ ಅವರು ಮಾಡಿದ ಭಾರತಸೇವೆಯ ಸ್ಮರಣಾರ್ಥವಾಗಿ ತಕ್ಕ ಸ್ಮಾರಕಗಳನ್ನೇರ್ಪಡಿಸುವುದಕ್ಕೋಸ್ಕರ ಅಲ್ಲಲ್ಲಿ ಸಭೆಗಳಾಗಿದ್ದವು. ನಮ್ಮ ಪುತ್ತೂರಿನಲ್ಲಿ ಸಹಾ ಗವರ್ನಮೆಂಟ್ ವಕೀಲರು ಮತ್ತು ತಾಲೂಕು ಬೋರ್ಡಿನ ಉಪಾಧ್ಯಕ್ಷರಾದ ಮ॥ ರಾ॥ ರಾ॥ ಬೈಂದೂರು ರಾಮರಾಯರ ಉದಾರಶೀಲತೆಯಿಂದ ಕಳೆದ ಆದಿತ್ಯವಾರ ತಾ. 13ಲ್ಲಿ ಒಂದು ಸಭೆಯು ನೆರೆಯಲು ಸಾಧ್ಯವಾಯಿತು. ಮ॥ ರಾ॥ ರಾ॥ ರಾಮರಾಯರು ಇಲ್ಲಿಯ ಭಾಷ್ಯಮಯ್ಯಂಗಾರ್ ಟೌನ್ ಹೋಲಿಗೆ ಗೋಪಾಲಕೃಷ್ಣ ಗೋಖಲೆಯವರ ಒಂದು ರಂಗಿನ ಭಾವಚಿತ್ರವನ್ನು ಉಚಿತಾರ್ಥವಾಗಿ ಕೊಟ್ಟರು. ಸಭೆಯ ಮುಂದೆ ಅವರು ತನ್ನ ಸಂಕಲ್ಪವನ್ನು ಸೂಚಿಸಿ ಭಾವಚಿತ್ರವನ್ನು ಪ್ರಕಾಶಗೊಳಿಸುವಂತೆ ನಮ್ಮ ಡಿಪ್ಯುಟಿ ಕಲೆಕ್ಟರರಾದ ಮ॥ ರಾ॥ ರಾ॥ ಪಿ. ಸೀತಾರಾಮಯ್ಯನವರಿಗೆ ವಿಜ್ಞಾಪನೆ ಮಾಡಿದರು. ಆಗ ಮ॥ ರಾ॥ ರಾ॥ ಸೀತಾರಾಮಯ್ಯನವರು ಎದ್ದು ನಿಂತು ಗೋಖಲೆ ಮಹಾಶಯರ ಸದ್ಗುಣಗಳನ್ನೂ ಅವರ ಸ್ವಾರ್ಥತ್ಯಾಗಪೂರಿತವಾದ ಸತ್ಕಾರ್ಯಗಳನ್ನೂ ಸ್ಮರಿಸಿ ಪತಮಹಾತ್ಮರನ್ನು ನಾವೆಲ್ಲರೂ ಮೇಲ್ಪಂಕ್ತಿಯಾಗಿಟ್ಟುಕೊಂಡು ಸದಾ ಅವರಂತೆಯೇ ಧನಾಕಾಂಕ್ಷೆಯಿಲ್ಲದೆ ನಮ್ಮ ಜೀವನ ಸರ್ವಸ್ವವನ್ನು ಭಾರತಭೂಮಿಯ ಸೇವೆಯಲ್ಲೇ ಅರ್ಪಿಸುವುದು ನಮ್ಮೆಲ್ಲರ ಪರಮಪವಿತ್ರವಾದ ಧರ್ಮವಾಗಿರುವುದೆಂದು ಬೋಧಿಸಿದರು.

ಅಧ್ಯಕ್ಷರು ಈ ರೀತಿ ಭಾಷಣಪೂರ್ವಕವಾಗಿ ಸ್ವರ್ಗೀಯ ಮಹಾಪುರುಷರ ಗುಣವರ್ಣನೆಯನ್ನು ಮಾಡಿದ ತರುವಾಯ ಅವರ ಭಾವಚಿತ್ರವನ್ನು ಪ್ರಕಾಶಗೊಳಿಸುವ ಕಾರ್ಯವನ್ನು ನೆರವೇರಿಸಿದರು. ಅನಂತರ ನಮ್ಮ ಡಿಸ್ಟ್ರಿಕ್ಟ್ ಮುನಸೀಫರಾದ ಮ॥ ರಾ॥ ರಾ॥ ಸಿ. ಆರ್. ಕೃಷ್ಣರಾಯರು ಸಹ ಗೋಖಲೆಯವರ ಕುರಿತು ಕೆಲವು ಕಾಲೋಚಿತವಾದ ಮಾತುಗಳನ್ನಾಡಿದ ಮೇಲೆ ಗೋಖಲೆಯವರ ಶಿಲಾಪ್ರತಿಮೆಯನ್ನು ಮಾಡುವರೆ ಮದರಾಸಿನಲ್ಲಿ ಏರ್ಪಡಿಸಿದ ಫಂಡಿಗೋಸ್ಕರವೂ ಭಾರತ ಸೇವಾಸಮಾಜದಗೋಸ್ಕರವೂ ವಂತಿಗೆಯನ್ನು ಕೂಡಿಸುವ ವಿಲೆವಾರಿಯಾಯಿತು. ವಂತಿಗೆಯನ್ನು ಹಾಕಿದವರ ಪೈಕಿ ನಮ್ಮ ಜೈನ ಮುಖಂಡರಲ್ಲಿ ಒಬ್ಬರಾದ ಮ॥ ರಾ॥ ರಾ॥ ಕಲ್ಲೆ ಪೂವಣಿ ಹೆಗ್ಗಡೆಯವರು ವರ್ಷಂಪ್ರತಿ ಶಾಶ್ವತವಾಗಿ ಭಾರತ ಸೇವಾ ಸಮಾಜಕ್ಕೆ ರೂಪಾಯಿ ೧೦ರಂತೆ ಕೊಡುತ್ತಾ ಬರುವುದಾಗಿ ನಿಶ್ಚಯಿಸಿ ಆ ಪ್ರಕಾರ ನಡೆದು ಬರುವ ಹಾಗೆ ವರ್ಷಕ್ಕೆ ರೂ ೧೦ರ ಬಡ್ಡಿ ಬರುವಷ್ಟು ಐವಜನ್ನು ಇಲ್ಲಿಯ ಸಹಕಾರ ಸಂಘದಲ್ಲಿ ಠೇವಣಾತಿಯಾಗಿ ಇಡುವುದಾಗಿ ಸೂಚಿಸಿದರು. ಇನ್ನು ಅನೇಕರು ಇವರ ದೃಷ್ಟಾಂತವನ್ನು ಅನುಸರಿಸಿದರೆ ಭಾರತ ಮಾತೆಯ ಸೇವೆಗೆ ಸಹಕಾರವೇ ಮುಂದೆ ಬಂದು ಕೈಕೊಟ್ಟಂತಾಗುವುದು.

ಕಟ್ಟಕಡೆಗೆ ಬ್ರಹ್ಮಶ್ರೀ ಶಿವಾನಂದ ಭಟಜಿಯವರು ಗೋಖಲೆಯವರಂತೆ ಗೃಹಸ್ಥಾಶ್ರಮಿ ಸಾಧುಗಳಾಗಿ ಮೊದಲು ಹದಿನಾರನೇ ಶತಮಾನದಲ್ಲಿ ಕೈಲಾದ ಮಟ್ಟಿಗೆ ಕ್ಷಾಮನಿವಾರಣೆ ಮುಂತಾದ ದೇಶ ಸೇವೆಯನ್ನು ಗೈದು ಮುಕ್ತರಾದ ದಾಮಾಜಿ ಪಂತರ ಪಾವನ-ಚರಿತೆಯನ್ನು ಹರಿಕೀರ್ತನೆಯ ರೂಪದಿಂದ ತಿಳಿಯ ಹೇಳಿ ಗೋಖಲೆಯವರ ಜೀವನ ಚರಿತೆಯಿಂದ ಒಂದೆರಡು ಸಾಮ್ಯಗಳನ್ನು ತೋರ್ಪಡಿಸಿ ಯಥಾಯೋಗ್ಯವಾದ ನಿರೂಪಣವನ್ನು ಮಾಡಿದರು.

ಗೋಖಲೆಯವರ ಮೇಲ್ಕಂಡ ಭಾವಚಿತ್ರವು ಮಂಗಳೂರಿನ ಎಂ. ಆರ್. ಕೋಡಂಗಳರವರಿಂದ ಚಿತ್ರಿಸಲ್ಪಟ್ಟು ಬಹು ಚೆಲುವಾಗಿತ್ತು.

ಪತ್ರವ್ಯವಹಾರ.

ಶಾಲೆಗಳ ಆಡಳಿತೆದಾರರಿಗೊಂದು ಮಾತು.

ಅಯ್ಯಾ ಆಡಳಿತೆದಾರರೇ,

ಈ ಪತ್ರಿಕೆಯ ಕಳೆದ ಸಂಚಿಕೆಯಲ್ಲಿ "ಬಾಲಕರ ಸ್ನೇಹಿತ"ರು ಖಾಸಗಿ ಕಲಿಸುವ ದುರಾಚಾರದ ಪ್ರಚಾರಕ್ಕೆ ನೀವೇ ಕಾರಣರೆಂದು ತಮ್ಮ ಅಭಿಪ್ರಾಯವನ್ನು ಸೂಚಿಸಿರುವರು. ಅದನ್ನೋದಿದೊಡನೆಯೇ ಅವರ ಮೇಲೆ ನೀವು ರೇಗಿಕೊಳ್ಳಲಿಲ್ಲವೇ? ನಿಮ್ಮ ಶಾಲೆಯ ವಿಷಯದಲ್ಲಿ ಅತ್ಯುತ್ತಮವಾದ ವ್ಯವಸ್ಥೆಯನ್ನು ಮಾಡಿರುವುದಾಗಿ ನೀವು ಭಾವಿಸಿರುವಿರಿ. ಆದರೆ ಅವರವರ ದೋಷಗಳು ಅವರವರಿಗೆನೇ ಕಂಡುಬರಲಾರವು. ಎರಡನೆಯವರು ತೋರಿಸಿಕೊಡಬೇಕಷ್ಟೆ? ಈಗ ನಾನು ನಿಮ್ಮ ದೋಷಗಳನ್ನು ತೋರಿಸಿಕೊಟ್ಟರೆ ನನ್ನ ಮೇಲೆ ಕೂಡ ರೇಗಿಕೊಳ್ಳುವಿರೋ ಎಂಬ ಭಯ. ಆದರೂ ಚಿಂತಿಲ್ಲ, ಒಂದೆರಡು ಮಾತು ಹೇಳಿಬಿಡುತ್ತೇನೆ.

ನೀವೊಂದು ಶಾಲೆಯನ್ನಿಟ್ಟಿರುವಿರಷ್ಟೆ, ಶಾಲೆಗಳ ವಿಷಯ ನಿಮಗೇನು ಗೊತ್ತಿರುವುದು? ಶಾಲೆಯನ್ನು ಹೇಗೆ ನಡಿಸಬೇಕು? ಶಾಲೆಯಿಂದ ಮಕ್ಕಳಿಗುಂಟಾಗತಕ್ಕ ನಿಜವಾದ ಪ್ರಯೋಜನಗಳಾವವು? ಅಂಥಾ ಪ್ರಯೋಜನಗಳುಂಟಾಗಬೇಕಾದರೆ ಎಂಥ ಉಪಾಧ್ಯಾಯರನ್ನು ನೇಮಿಸಬೇಕು? ಎಂಬೀ ಯೋಚನೆಗಳು ನಿಮ್ಮ ಮನಸ್ಸಿನೊಳಗೆ ಎಂದಾದರೂ ಹೊಳೆದುದಿದೆಯೇ? ಶಾಲೆಗಳನ್ನು ನಡಿಸುವುದೆಂದರೆ ಕಾರಖಾನೆಗಳನ್ನೋ ಅಂಗಡಿಗಳನ್ನೋ ನಡಿಸುವಂತಲ್ಲ—ಎಂದು "ಬಾಲಕರ ಸ್ನೇಹಿತ"ರು ಹೇಳುವ ಮಾತು ಸಹಜವಾಗಿದೆ. ಕಾರ್ಖಾನೆ ಮೊದಲಾದವುಗಳನ್ನು ನಡಿಸುವುದರ ಉದ್ದೇಶವು ಕೇವಲ ದ್ರವ್ಯಾರ್ಜನೆಯಾಗಿರುವುದು. ನಿಮ್ಮ ಶಾಲೆಯನ್ನು ಕೂಡ ನೀವು ಅದೇ ಉದ್ದೇಶದಿಂದ ನಡಿಸುತ್ತಿರುವಿರಾದರೆ, ಅಯ್ಯಾ, ಅದರಿಂದ ನಿಮಗೊಂದು ಕಾಸೂ ಹುಟ್ಟದು, ಶಾಲೆಯನ್ನು ನಿಲ್ಲಿಸಿಬಿಡುವುದುತ್ತಮ. ಸ್ವಾರ್ಥವನ್ನು ಬಯಸದ ಇನ್ನೊಬ್ಬನಿಗೆ ಅದನ್ನು ಕೊಟ್ಟು ಬಿಡಿರಿ, ಇಲ್ಲದೆ ಹೋದರೆ ಶಾಲೆಗೆ ಬೇಕಾದ ಉಪಕರಣಗಳನ್ನೊದಗಿಸುವುದಕ್ಕೂ ಉಪಾಧ್ಯಾಯರಿಗೆ ಸರಿಯಾದ ಸಂಬಳ ಕೊಡುವುದಕ್ಕೂ ನಿಮಗೆ ಹೇಗೆ ತಾನೆ ಕೈ ಬಂದೀತು? ಸರಿಯಾದ ಉಪಕರಣಗಳಿಲ್ಲದೆ ಶಿಕ್ಷಣವು ಹೇಗೆ ತಾನೇ ತೃಪ್ತಿಕರವಾದೀತು? ಉಪಾಧ್ಯಾಯರುಗಳಿಗೆ ಸರಿಯಾದ ಸಂಬಳ ಊಟಕ್ಕೆ ಬೇಕಾಗುವಷ್ಟಾದರೂ ಕೊಡದೆ ಹೋದರೆ ಅವರು ಹೇಗೆ ತಾನೆ ಉದರ ಪೋಷಣ ಮಾಡಬೇಕು? ಇತರ ಹಲವು ಬಗೆಯ ದೋಷಗಳನ್ನು ಅವರು ಕಟ್ಟಬೇಕಾಗುವುದಲ್ಲವೆ? "ಬಾಲಕರ ಸ್ನೇಹಿತ"ರು ಹೇಳುವಂತೆ ಕೆಲವರು ಶಾಲಾ ಛಿದ್ರಗಳನ್ನು [illegible]

ಹೇಳಿ, ಏನಾದರೂ ಸುಳ್ಳು ಪ್ರವಾದವನ್ನೆಬ್ಬಿಸಿ, ಖಾಸಗಿ ಶಿಕ್ಷಣವನ್ನೊದಗಿಸಿಕೊಳ್ಳುವರು. ಇನ್ನು ಕೆಲವರು ದಸ್ತಾವೇಜುಗಳನ್ನೂ ಗೇಣಿಚೀಟುಗಳನ್ನೂ ಲೆಕ್ಕ ಪತ್ರಗಳನ್ನೂ ಬರಿಯುವುದಕ್ಕೆ ತೊಡಗುವರು. ಉಳಿದವರು ವಿಮೆ ಮೊದಲಾದ ಸಂಘಗಳ "ಎಜಂಟ್" ತನವನ್ನು ವಹಿಸಿಕೊಳ್ಳುವರು. ಹೀಗಾದರೆ ನಿಮ್ಮ ಶಾಲೆಯ ಕೆಲಸಗಳನ್ನು ಸರಿಯಾಗಿ ನಡಿಸಲು ಅವರಿಗವಕಾಶವೆಲ್ಲಿಂದ? ಆದುದರಿಂದ ಉಪಾಧ್ಯಾಯರುಗಳಿಗೆ ಹೆಚ್ಚು ಸಂಬಳವನ್ನು ಕೊಟ್ಟರೆ ನಷ್ಟವಾಗುವುದೆಂದು ಭಾವಿಸಬೇಡಿರಿ ನಿಮ್ಮ ಭಂಡಾರದಲ್ಲಿ ಹಣವೇನೋ ಕೊಂಚ ಕಡಿಮೆಯಾಗುತ್ತ ಬಂದರೂ ಅದರ ನೂರು ಮಡಿಯಾದ ಪ್ರತಿಫಲವು ಬಾಲಕರಿಗೆ ದೊರೆಯುವುದು!

ಶಾಲೆಗಳಲ್ಲಿ ಚಿಕ್ಕ ಮಕ್ಕಳಿಗೆ ಸರಿಯಾದ ಶಿಕ್ಷಣವು ದೊರಕುವುದಿಲ್ಲವೆಂದು ಬಾಲಕರ ಸ್ನೇಹಿತರು ಹೇಳುವರು. ಈ ಹೇಳಿಕೆಗೆ ಆಡಳಿತೆದಾರರೇ ಕಾರಣರು. ಮಕ್ಕಳ ಶಿಕ್ಷಣವನ್ನು ಕೈಕೊಳ್ಳಲು ಅರ್ಹನಾದವನನ್ನೇ ಆರಿಸಿ ನಿಯಮಿಸುವ ಅಧಿಕಾರವು ಅವರಲ್ಲಿಲ್ಲವೆ? ಅಯ್ಯಾ, ಇಂಥಾ ಸಂಗತಿಗಳಲ್ಲಿ ದೋಷವನ್ನು ತೀರ ಅವರ ಮೇಲೆಯೇ ಆರೋಪಿಸಲಾಗುವುದಿಲ್ಲ ಏಕೆಂದರೆ ಉಪಾಧ್ಯಾಯನ ಕೆಲಸಕ್ಕೆ ಅರ್ಹನಾದ ಮನುಷ್ಯನನ್ನು ಕಂಡುಹಿಡಿಯುವುದು ಬಲು ಕಷ್ಟವಾದ ಕೆಲಸ. ಪ್ರತಿಯೊಬ್ಬನೂ ಉಪಾಧ್ಯಾಯನಾಗಲಾರನು ಜನರಲ್ಲೇನೊ ಮಕ್ಕಳಿಗೆ ವಿದ್ಯೆ ಹೇಳಿಕೊಡುವುದೆಂದರೆ, ಅಗಿಯುವುದು, ಕಡಿಯುವುದು, ಹೊರುವುದು ಮೊದಲಾದ ಕೆಲಸಗಳಂತೆಯೇ ಬಲು ಸುಲಭವಾದ ಕೆಲಸವೆಂಬ ಭಾವನೆಯಿರುವುದು, ಇದು ಕೇವಲ ಅಜ್ಞಾನದಿಂದುಂಟಾದುದು. ಉಪಾಧ್ಯಾಯನೆಂದರೆ ವರ್ಣಿಸಲಾರದಷ್ಟು ಗುಣಗಳುಳ್ಳವನಾಗಿರಬೇಕು, ತುಂಬ ಬುದ್ಧಿಶಕ್ತಿಯೂ ಚಟುವಟಿಕೆಯೂ ಉಳ್ಳವನಾಗಿರಬೇಕು. ಆತನ ಕಾರ್ಯವೆಂಥಾದ್ದು, ರಾಜನಾಗತಕ್ಕವನಿಗೆ ಎಂಥೆಂಥ ಗುಣಗಳಿರಬೇಕು? ಅಂಥಾ ಗುಣಗಳು ಉಪಾಧ್ಯಾಯನಿಗೂ ಇರತಕ್ಕದ್ದು! ಉಪಾಧ್ಯಾಯನು ಕೂಡ ಒಬ್ಬ ರಾಜನು ಬಾಲಕರೇ ಆತನ ಪ್ರಜೆಗಳು, ಶಾಲಾ ಕಚ್ಚೇರಿಯೇ ನ್ಯಾಯಸ್ಥಾನ, ಬಾಲಕರೊಳಗೆ ನಡೆಯುವ ಸಿವಿಲ್, ಕ್ರಿಮಿನಲ್ ಮೊದಲಾದ ಸಕಲ ವ್ಯವಹರಣೆಗಳಿಗೂ ತೀರ್ಮಾನವನ್ನು ಕೊಡುವ ಅಧಿಕಾರವು ಅವನಿಗಿರುವುದು. ಆತನ ತೀರ್ಮಾನಕ್ಕಂತೂ ಅಪೀಲೇ ಇರುವುದಿಲ್ಲ! ಆತನು ಸನ್ಮಾರ್ಗಿಯಾದರೆ ಪ್ರಜೆಗಳೂ ಸನ್ಮಾರ್ಗಿಗಳಾಗುವರು, ಆತನು ಕಳ್ಳನಾದರೆ ಪ್ರಜೆಗಳೂ ಕಳ್ಳರೇ ಆಗುವರು! ಇಡೀ ಜನಾಂಗದ ಉನ್ನತಿಯೂ ಅವನತಿಯೂ ಆತನ ಕೈಯಲ್ಲಿದೆ! ಅಯ್ಯಾ, ಆಡಳಿತೆದಾರರೇ, ಇಂಥಾ ಗೌರವವೂ ಜವಾಬುದಾರಿಕೆಯೂ ಇರುವ ಸ್ಥಾನವನ್ನು ಅಲಂಕರಿಸತಕ್ಕ ಮನುಷ್ಯನು ಎಂಥವನಾಗಬೇಕೆಂದು ಕೊಂಚ ಯೋಚಿಸಿ ನೋಡಿರಿ! ನೀವೇನೋ ಜ್ಞಾನವೃದ್ಧನೂ ವಯೋವೃದ್ಧನೂ ಆದವನಾಗಬೇಕೆನ್ನುವಿರಲ್ಲವೆ? ಜ್ಞಾನವೃದ್ಧನೇನೊ ನಿಶ್ಚಯ, ಆದರೆ ವಯೋವೃದ್ಧನೇ ಆಗಬೇಕೆಂದಿಲ್ಲ ಚಿಕ್ಕ ವಯಸ್ಸಿನವನಾದರೆ ಉತ್ತಮ. ಕಬ್ಬಿಣದ ಕಂಬವೇನೊ ಗಟ್ಟಿಯಿದೆ, ಆದರೆ ತುಕ್ಕು ಹಿಡಿದ ಹಳೆಯ ಕಂಬಕ್ಕಿಂತ ಹೊಸ ಕಂಬವೇ ವಾಸಿಯಲ್ಲವೆ? ಪ್ರಾಯಮೀರಿದವನಾದರೆ ಕುಳಿತಲ್ಲಿಯೆ ಕುಳಿತುಕೊಂಡು ಏನಾದರೂ ಮಾಡಿಯಾನಲ್ಲದೆ ಅತ್ತಿತ್ತ ಓಡಾಡುವ ವಿಷಯದಲ್ಲಿ ಕೊಂಚ ಆಲಸ್ಯ ತೋರಿಸಲೇ ಬೇಕಾಗುವುದು ಅಂದ ಮೇಲೆ ಮಕ್ಕಳು ಕೂಡ ಸೋಮಾರಿಗಳಾಗುವ ಸಂಭವ, ಬೆಪ್ಪರಂತೆ ಕುಳಿತಲ್ಲಿಯೆ ಕುಳಿತು ಕಾಲಹರಣಮಾಡುವರು. ಮಕ್ಕಳು ವಿಶೇಷ ಚಟುವಟಿಕೆಯುಳ್ಳವರಾದುದರಿಂದ ತಮ್ಮಂತೆಯೆ ಚಟುವಟಿಕೆಯುಳ್ಳ ಉಪಾಧ್ಯಾಯನನ್ನು ಬಲು ಬೇಗನೆ ಪ್ರೀತಿಸ ಹತ್ತುವರು ಆದುದರಿಂದ ಆಡಳಿತೆದಾರರೇ, ನಿಮ್ಮ ಶಾಲೆಗೆ ಉಪಾಧ್ಯಾಯರನ್ನು ಗೊತ್ತುಮಾಡುವಾಗ ಈ ವಿಷಯಗಳನ್ನೆಂದೂ ಮರೆಯ ಬೇಡಿರಿ. ಪ್ರಕೃತದಲ್ಲಿ ಅನರ್ಹರಾದ ಉಪಾಧ್ಯಾಯನಾವನಾದರೂ ಇದ್ದರೆ ಅವನನ್ನು 'ಮನೆಗೆ ಹೋಗು' ಎಂದು ಕಳುಹಿಸಿಬಿಡುವುದಕ್ಕೂ ಹಿಂಜರಿಯ ಬೇಡಿರಿ! ದಯದಾಕ್ಷಿಣ್ಯಗಳಿಗೆ ಇದರಲ್ಲಿ ಆಸ್ಪದವಿಲ್ಲ, ದಯದಾಕ್ಷಿಣ್ಯತೋರಿಸಿದರೆ ಹಲವು ಮಕ್ಕಳ ಕೊರಳು ಕೊಯಿದಂತಾಗುವುದು! ಬೇಕಾದರೆ, ಇಂಥಾ ಸಂದರ್ಭವು ಇನ್ನು ಮುಂದಕ್ಕೆ ಬಾರದಂತೆ ಮುಂಜಾಗ್ರತೆ ತೆಗೆದುಕೊಳ್ಳಿರಿ

ಇನ್ನೊಂದು ಮಾತಿರುವುದು: ಯಾವ ವೃತ್ತಿಯನ್ನಾದರೂ ಸರಿಯೆ, ಏನೂ ತಿಳಿಯದವನು ಕೂಡ, ಶ್ರಮಪಟ್ಟು ಕಲಿತುಕೊಳ್ಳಬಹುದು. ಆದರೆ ಈ ಉಪಾಧ್ಯಾಯನ ವೃತ್ತಿಯೆಂಬುದು ಕಲಿತುಕೊಳ್ಳಲು ಬರುವಂಥದ್ದಲ್ಲ. ಇದಕ್ಕೆ ಪೂರ್ವಜನ್ಮದ ವಾಸನೆಯು ಕೊಂಚವಾದರೂ ಇರಲೇ ಬೇಕು. ಶಿಲ್ಪ, ಸಂಗೀತ, ಕವಿತ್ವ ಮೊದಲಾದ ಕಲೆಗಳಂತೆಯೇ ಇದು ಕೂಡ ಒಂದು ಪ್ರೌಢವಾದ ಕಲೆಯು. ಈಗಿನ ಕಾಲದಲ್ಲಿ ಉಪಾಧ್ಯಾಯರಾಗಬೇಕೆಂದು ಮೇಲೊಡ್ಡಿಕೊಂಡು ಬರುವವರು ಹಲವರಿರುವರು. ಆದರೆ ಅಂಥವರಲ್ಲಿ ಅನೇಕರ ಯೋಗ್ಯತೆಯೇನೆಂಬುದನ್ನು ಕೊಂಚ ವಿಚಾರಿಸಿ ನೋಡಿದರೆ ತುಂಬ ವಿಷಾದಕರವಾಗಿ ಪರಿಣಮಿಸುವುದು! ಕಳೆದ ವರುಷ ನಾನೊಂದು ಕಾರ್ಯ ನಿಮಿತ್ತವಾಗಿ ಮಂಗಳೂರಿನಲ್ಲಿರುವ ಒಂದಾನೊಂದು ಶಾಲೆಗೆ ಹೋಗಿದ್ದೆ. ಆಗ ಮುಂಚಿನ ವರುಷ ಮೂರನೆಯ ಫೋರ್ಮಿನಲ್ಲಿ ಪಾಸಾಗದೆ ಹಿಂದುಳಿದಿದ್ದ ಒಬ್ಬ ಹುಡುಗನ ತಂದೆಯು ಮುಖ್ಯೋಪಾಧ್ಯಾಯರೊಡನೆ ಮಾತಾಡುತ್ತಿದ್ದರು.

"ಸ್ವಾಮಿ, ನಾವು ಬಡವರು. ಮುಂದಕ್ಕೆ ಕಲಿಸುವುದಕ್ಕೆ ಶಕ್ತಿಯಿಲ್ಲ. ನಮ್ಮ ಮೇಲೆ ಸ್ವಲ್ಪ ದಯವಿಟ್ಟು ಹೇಗಾದರೂ ಮಾಡಿ, ಹುಡುಗನು ಮೂರನೆಯ ಫೋರ್ಮ್ ಪಾಸಾದನೆಂದು ಸರ್ಟಿಫಿಕೇಟು ಕೊಡಿಸಿದ್ದರಾಗುತ್ತಿತ್ತು."

"ಅದು ಹೇಗಾದೀತು? ನಿಮ್ಮ ಹುಡುಗನು ಯಾವದರಲ್ಲಿಯೂ ಪಾಸಾಗಲಿಲ್ಲವಲ್ಲ!"

"ಅದಹುದು, ಸ್ವಾಮಿ, ತಾವೇನಾದರೂ ದಯಮಾಡಿದರಾದೀತು."

"ನಿಮ್ಮ ಹುಡುಗನು ಪಾಸಾಗದೆ ಪಾಸಾಗಿದ್ದಾನೆಂದು ಸರ್ಟಿಫಿಕೇಟು ಹೇಗೆ ಕೊಡಲಿ? ನಾನವನಿಗೆ ಪದೇ ಪದೇ ಎಚ್ಚರ ಹುಟ್ಟಿಸಿದ್ದೆ. ಆದರೂ ಆತನೇನೂ ಲಕ್ಷ್ಯಮಾಡಲಿಲ್ಲ."

"ಏನು ಮಾಡುವುದು, ಸ್ವಾಮಿ, ಆತನಿಗೆ ಓದಿದರೆ ಕೂಡ ತಲೆಗೇ ಹತ್ತುವುದಿಲ್ಲ. ಅದೂ ಹೇಗೂ ಇರಲಿ. ತಾವು ಒಂದು ಸರ್ಟಿಫಿಕೇಟು ದಯಮಾಡಿಸಿದ್ದರೆ—"

"ನಿಮಗೆ ಸರ್ಟಿಫಿಕೇಟಿನ ಆವಶ್ಯಕತೆಯೇನು? ಹುಡುಗನಂತೂ ಮುಂದಕ್ಕೆ ಕಲಿಯುವುದಿಲ್ಲವೆನ್ನುವಿರಿ!"

"ಬೇರೇನೂ ಅಲ್ಲ, ಸ್ವಾಮಿ, ನಮಗೆ ಮನೆಯಲ್ಲಿ ಊಟಕ್ಕೆನೇ ತತ್ವಾರ. ಈ ಹುಡುಗನಿಂದ ಯಾವ ಕೆಲಸ ಮಾಡುವುದಕ್ಕೂ ಆಗುವುದಿಲ್ಲ. ಗದ್ದೆ ಉಳುವುದೆಂದರೆ— ಶಾಸ್ತ್ರ ನಿಷಿದ್ಧ, ಬೇಸಾಯಮಾಡುವುದೆಂದರೆ— ಅವನಿಂದಾಗಲಾರದು; ಅಂಗಡಿಯಿಡುವುದೆಂದರೆ—ಅದನ್ನು ನಡಿಸುವಷ್ಟು ಬುದ್ಧಿವಂತಿಕೆಯಿಲ್ಲ! ಮತ್ತೇನು ಮಾಡಲಿ? ಟ್ರೈನಿಂಗಿಗೆ ಕಳುಹಿಸಿದರಾಗಬಹುದೆಂದು ಒಂದು ಅಪೇಕ್ಷೆ! ಅದಕ್ಕಾಗಿ ತಾವೊಂದು ಸರ್ಟಿಫಿಕೇಟು ಕೊಡಿಸಿದ್ದರೆ . . . . , ಇಲ್ಲದೆ ಹೋದರೆ ನಾನಿವನನ್ನು ಯಾವ ಹೊಂಡಕ್ಕೆ ತಳ್ಳಲಿ?"

ಅಯ್ಯಾ, ಕಂಡಿರೇ, ಉಪಾಧ್ಯಾಯನಾಗತಕ್ಕವನ ಯೋಗ್ಯತೆ? ಇಂಥಾ ಮೂಢನು—ಯಾವ ಕೆಲಸಕ್ಕೂ ಬಾರದವನು—ತನ್ನಿಂದಾವ ಕೆಲಸವೂ ಆಗುವುದಿಲ್ಲವೆಂದು—ಈ 'ಕುರಿಮೇಯಿಸುವ' ಕೆಲಸವನ್ನು ಮಾಡುವನಂತೆ! ಇಂಥಾ ಉಪಾಧ್ಯಾಯನ ಕೈಯೊಳಗೆ ಮಕ್ಕಳು ನಿಜವಾಗಿ ಕುರಿಗಳಾಗರೆ? ಅಯ್ಯಾ, ಇಂಥಾ ಉಪಾಧ್ಯಾಯನ ಸಂಪರ್ಕವು ನಮ್ಮ ಮಕ್ಕಳಿಗೆ ಜನ್ಮಜನ್ಮಾಂತರಕ್ಕೂ ಬೇಡ! ಹೆಚ್ಚು ಸಂಬಳ ಕೊಟ್ಟರೂ ಚಿಂತಿಲ್ಲ ಸರಿಯಾದ ಯೋಗ್ಯತೆಯಿರುವವನನ್ನೆ ನಿಯಮಿಸಿರಿ. ಚಿಕ್ಕ ಮಕ್ಕಳಿಗೆ ಕಲಿಸುವುದು ವಿಶೇಷ ಕಷ್ಟತರವು. ಅತ್ಯಂತ ನಿಪುಣನಾದ ಉಪಾಧ್ಯಾಯನು ಮೇಲಿನ ಕ್ಲಾಸನ್ನು ಕಲಿಸುವುದಲ್ಲ, ಬಾಲಕರ ಕ್ಲಾಸನ್ನೆ ಕಲಿಸತಕ್ಕದ್ದು. ಆದುದರಿಂದ ನಿಮ್ಮ ಶಾಲೆಯಲ್ಲಿ ಚಿಕ್ಕ ಮಕ್ಕಳಿಗೆ ಕಲಿಸತಕ್ಕವನ ಯೋಗ್ಯತೆ ಕಂಡುಕೊಳ್ಳಿರಿ. ನೀವು ಆತನಿಗೆ ಸಹಾಯಕರೇ ಆಗಿರಬೇಕಲ್ಲದೆ ಉಪದ್ರಕಾರಿಗಳಾಗದಂತೆ ನೋಡಿಕೊಳ್ಳಿರಿ. ಆತನಲ್ಲಿ ಸಂಪೂರ್ಣ ಭರವಸೆಯಿಟ್ಟು, ಉಚಿತತೋರಿದಂತೆ ವರ್ತಿಸುವ ಸ್ವಾತಂತ್ರವನ್ನು ಆತನಿಗೆ ಕೊಡಿರಿ. ಎಷ್ಟೆಂದರೂ ಕಲಿಸುವ ವಿಷಯದಲ್ಲಿ ಆತನಿಗಿರುವಷ್ಟು ಅನುಭವವು ನಿಮಗಿರಲಾರದು. ಆದುದರಿಂದ ನೀವದರಲ್ಲಿ ತಲೆ ಹಾಕಿ ಮಕ್ಕಳ ಅಭಿವೃದ್ಧಿಗೆ ಕುಂದುಕವನ್ನು ತಂದುಹಾಕಬೇಡಿರಿ.

ಅಯ್ಯಾ, ನನ್ನೀ ಮಾತುಗಳು, ಕೆಲವು ಆಡಳಿತೆದಾರರಿಗೂ, ಹಲವು ಉಪಾಧ್ಯಾಯರುಗಳಿಗೂ, ತುಂಬ ಕಠೋರವಾಗಿ ಕೇಳಿಸದಿರಲಾರದು. 'ಕಂಡುದು ಕಂಡ ಹಾಗೆಯೆ ಹೇಳಿದರೆ ಕೆಂಡದಂತೆ ಸಿಟ್ಟು' ಎಂಬುದು ವಾಡಿಕೆಯಾಗಿಲ್ಲವೆ? ಆದರೆ ಮುಚ್ಚಿದ್ದ ಕಣ್ಣು ತೆರೆಯಲೆಂಬ ಆಸೆಯಿಂದ ನಾನಿದನ್ನು ಬರೆದಿರುವುದರಿಂದ ದಯವಿಟ್ಟು ನನ್ನನ್ನು ಕ್ಷಮಿಸಬೇಕಾಗಿ ಪ್ರಾರ್ಥನೆ ಈ ಪತ್ರಿಕೆಯ ಪ್ರಕಾಶಕರು—ನಾನು ನನ್ನ ಇಂಥ ಹೇಳಿಕೆಗಳಿಂದ ಮೂರು ನಾಲ್ಕು ಸಲ ಉಪದ್ರವಕೊಟ್ಟರೂ ಸಹಿಸಿಕೊಂಡು—ಉದಾರಭಾವದಿಂದ ವರ್ತಿಸಿದುದಕ್ಕಾಗಿ ಅವರಿಗೆ ನನ್ನ ಮನಃಪೂರ್ವಕವಾದ ವಂದನೆಗಳು.

ಇತಿ ಭಾರತೀಯ.

ಯುದ್ಧ ಸಮಾಚಾರ.

———o———

ತಾ. ೧೫ನೇ ಜೂನ್ ೧೯೧೫.

ಸಣ್ಣಾಸ್ಥಳದಲ್ಲಿ ಜರ್ಮನರ ಜಲಾಂತರ್ಗಾಮಿ ನಾವೆಗಳ ಮೂಲ ಸ್ಥಾನವೆಂದೆಣಿಸಲ್ಪಟ್ಟಿದ್ದ ಚೆಸ್ಮೆ ಬಂದರಕ್ಕೆ ಫ್ರೆಂಚರ ಯುದ್ಧ ನಾವೆಗಳು ಗುಂಡು ಹಾರಿಸಿರುವವು. ಬಂದರದಲ್ಲಿದ್ದ ವ್ಯಾಪಾರ ಹಡಗವೆಲ್ಲವನ್ನು ಫ್ರೆಂಚರ ಯುದ್ಧನಾವೆಗಳು ಮುಣುಗಿಸಿ ಕಸ್ಟಮ್ ಮತ್ತು ಟೆಲಿಗ್ರಾಫ್ ಆಫೀಸುಗಳನ್ನು ಹಾಳುಪಡಿಸಿರುವವು ಅಲ್ಲಿದ್ದ ಶತ್ರುಗಳ ಕಾವಲು ಸೈನಿಕರು ಓಡಿಹೋಗಿರುವರು

ಜರ್ಮನರ ಜಲಾಂತರ್ಗಾಮಿ ನಾವೆಯು "ಹೋಪ್ ಮಂಟ್" ಎಂಬ ಹಡಗವನ್ನೂ ೩ ಟ್ರೆವಲರ್ ನಾವೆಗಳನ್ನೂ ಮುಣುಗಿಸಿರುವದು.

ಬೆಲ್ಜಿಯನರ ಒಂದು ಸೇನಾಂಗವು ಡಿಕ್ಸ್‌ಮ್ಯೂಡೆಯ ಬಳಿ ಯ್ಸರ್ ಕಾಲುವೆಯನ್ನು ದಾಟಿ ಬಲಕಾಯಿಸಿಕೊಂಡಿರುವದು. ಡಿಕ್ಸ್‌ಮ್ಯೂಡಿನ ಸಮೀಪದ ಒಂದು ಕೋಟೆಯನ್ನೂ ಹಾಳುಮಾಡಿರುತ್ತದೆ. ಸೊಸೆಜಿನ ಉತ್ತರದಲ್ಲಿ ಕಾಲಾಳು ಸೇನೆಯ ಕಠಿಣ ಕಾಳಗವು ನಡದಿರುವದು ಮಿತ್ರರು ಶತ್ರುಗಳ ಕೆಲವು ಕಂದಕಗಳನ್ನು ಸ್ವಾಧೀನಮಾಡಿಕೊಂಡಿರುವದು

ಲಂಡನಿನ ಡನ್‌ರೋಬಿನ್ ಅರಮನೆಯಲ್ಲಿ ಬೆಂಕಿ ಉಂಟಾಗಿ ಅನೇಕ ಚಿತ್ರಗಳೂ ಇತರ ಅಮೂಲ್ಯ ಒಡವೆಗಳೂ ಸುಟ್ಟುಹೋಗಿರುತ್ತವೆ. ಬೆಂಕಿಯನ್ನು ನೊಂದಿಸಲು ಪ್ರಯತ್ನಿಸಿದ ಸೇನೆಯ ಒಬ್ಬ ಅಧಿಕಾರಸ್ಥನಿಗೂ ಇತರ ಇಬ್ಬರು ಸೇನಿಕರಿಗೂ ಜಕಂ ಆಗಿದೆ

ರುಷ್ಯ ಮತ್ತು ಜರ್ಮನರೊಳಗೆ ಅತಿ ಕಠಿಣವಾದ ಕಾಳಗವು ನಡೆಯುತ್ತಿದೆ. ಜರ್ಮನರು ತಮ್ಮ ಸೇನಾಬಲವನ್ನು ಎರಡಷ್ಟು ಹೆಚ್ಚಿಸಿರುತ್ತಾರೆ.

ಪರ್ಶಿಯನ್ ಸರಹದ್ದಿನಲ್ಲಿ ತುರ್ಕರು ಪೂರ್ಣವಾಗಿ ಸೋತು ಹೋಗಿದ್ದಾರೆ. ಟಬ್ರಿಜ್ ಮತ್ತು ಡಿಲ್‌ಮಾನಿನಿಂದ ಮುಂದರಿದ ರುಷ್ಯನರ ಸೇನಿಕರು ಉರ್ಮಿಯ ಮತ್ತು ಉಸಾನನ್ನು ಸ್ವಾಧೀನಮಾಡಿಕೊಂಡಿರುತ್ತಾರಲ್ಲದೆ ಟರ್ಕಿ ಪ್ರದೇಶದ ವಾನ್ ಮತ್ತು ಮಲಾಜ್‌ಗರ್ಟ್ ವರೆಗಿನ ಪ್ರಾಂತ್ಯವನ್ನು ವಶಮಾಡಿಕೊಂಡಿರುತ್ತಾರೆ ಇತರ ಕಡೆಗಳಲ್ಲಿಯೂ ರುಷ್ಯನರಿಗೆ ಜಯವಾಗಿದೆ

ಟೋನೆಲ್ ಮತ್ತು ಕಾರ್ನದ ವರೆಗೆ ಮುಂದರಿದು ಆಸ್ಟ್ರಿಯನರೊಡನೆ ಯುದ್ಧಕ್ಕೆ ನಿಂತ ಇಟಲಿಯನರ ಮುಂದರಿಯೋಣವನ್ನು ತಡೆಯಲು ಆಸ್ಟ್ರಿಯನರು ಪ್ರಯತ್ನಿಸಿ ಹಿಮ್ಮೆಟ್ಟಿರುತ್ತಾರೆ ಇಟಲಿಯನರು ಸೊಲಾಜ ಪ್ರಾಂತ್ಯದಲ್ಲಿ ಬಹುವೇಗವಾಗಿ ಮುಂದರಿದಿರುತ್ತಾರೆ. ವೆಲೆಂಟಿನೋ ಕಣಿವೆಯನ್ನು ಇಟಲಿಯನರು ಸ್ವಾಧೀನಮಾಡಿಕೊಂಡು ಆಸ್ಟ್ರಿಯನರ ಕೆಲವು ಕಂದಕಗಳನ್ನು ನಿರ್ನಾಮಪಡಿಸಿರುತ್ತಾರೆ. ಇಟಲಿಯನರ ಪಿರಂಗಿಗಳು ಮಲ್ಬಾರಗೆಟ್ಟೊ ಎಂಬಲ್ಲಿಯ ಶತ್ರುಗಳ ಕೋಟೆಗಳಿಗೆ ಗುಂಡು ಹಾರಿಸ ಪ್ರಾರಂಭಿಸಿಯವೆ. ಇದರಿಂದ ಸ್ವಲ್ಪ ಕಾಲದಲ್ಲಿಯೇ ಉತ್ಕೃಷ್ಟ ಫಲವು ತೋರಿಬಂದಿರುವದು. ಕೋಟೆಗೆ ಬೆಂಕಿ ತಾಗಿ ಆಯುಧ ಸಾಮಗ್ರಿಗಳನ್ನಿಟ್ಟಿರುವ ಕೊರಡಿಯು ಸಿಡಿದಿರುವದು.

ತಾ. ೧೬ನೇ ಜೂನ್.

ಅರ್ರಾಸಿನ ಉತ್ತರದಲ್ಲಿ ಮತ್ತು ಹಬರ್ಟನ್ನೆಯ ದಕ್ಷಿಣ ಪೂರ್ವದಲ್ಲಿ ಫ್ರೆಂಚರ ಮೇಲೆ ಹಲ್ಲೆಮಾಡಿದ ಜರ್ಮನರು ಹಿಮ್ಮೆಟ್ಟಿರುವರು. ಲೊರೈನಿನಲ್ಲಿ ಫ್ರೆಂಚರು ಮುಂದರಿದಿರುತ್ತಾರೆ

ಎವ್ರೆ ಎಂಬಲ್ಲಿ ಮಿತ್ರರು ಜರ್ಮನರ ನಂಬ್ರ ೩೮ನೇ ಜೆಪಲಿನ್ ನಾವೆಯನ್ನು ಹಾಳುಪಡಿಸಿರುತ್ತಾರೆ

"ಗೆಲೀಸಿಯದಲ್ಲಿ ಕಠಿಣ ಕಾಳಗವು ನಡಿಯುತ್ತಿದೆ.

ಮೊನ್‌ಫಾಲ್ಕೋನಿನ ಕಾಡಿಗೆ ಬೆಂಕಿ ಇಡಲು ಪ್ರಯತ್ನಿಸಿದ ಆಸ್ಟ್ರಿಯನರ ಸೇನಿಕರನ್ನು ಇಟಲಿಯನರು ರೈಫಲ್ ಕೋವಿಗಳಿಂದ ಹೊಡೆದು ಹಿಂದಕ್ಕೆ ಓಡಿಸಿರುತ್ತಾರೆ. ಹೆನ್ಸೆಲ್ ಕೋಟೆಯ ಕೆಳಭಾಗವು ಕೆಡವಿರುತ್ತದೆ. ಪ್ಲಾವದಲ್ಲಿ ಶತ್ರುಗಳಿಗಾದ ನಷ್ಟವು ಅತಿ ವಿಶೇಷದ್ದಾಗಿರುತ್ತದೆ. ಆಸ್ಟ್ರಿಯನರು ಸರ್ವಿಯ ಸರಹದ್ದಿನಿಂದ ತಮ್ಮ ಸೇನೆಯನ್ನು ಹಿಂದಕ್ಕೆ ಕರೆಯಿಸಿರುತ್ತಾರೆ

ತಾ. ೧೭ನೇ ಜೂನ್.

"ಬ್ಲೇಕ್ ಸೀ" ಸಮುದ್ರದಲ್ಲಿ ರುಷ್ಯನರಿಗೂ ತುರ್ಕರಿಗೂ ಆದ ಕದನದಲ್ಲಿ ತುರ್ಕರ "ಬ್ರೆಸ್ಲೋ" ಯುದ್ಧನಾವೆಗೆ ಕಠಿಣ ಆಘಾತ ಆಗಿಯದೆ. ತುರ್ಕರ ಕೆಲವು ಟೋರ್ಪೆಡೋ ದೋಣಿಗಳು ಮುಣುಗಿರುವವು. ೧೩ ತುರ್ಕಿ ಅಧಿಕಾರಿಗಳೂ ೪೦ ನಾವಿಕರೂ ಮುಣುಗಿ ಸತ್ತರು.

"ಅಗ್ಯೈಲ್" ಎಂಬ ಟ್ರೆವಲರ್ ನಾವೆಯನ್ನು ಜರ್ಮನರ ಜಲಾಂತರ್ಗಾಮಿ ನಾವೆಯು "ನೊರ್ತ್ ಸೀ" ಕಡಲಲ್ಲಿ ಮುಣುಗಿಸಿರುತ್ತದೆ. ಈ ನಾವೆಯು ಎರಡೇ ನಿಮಿಷಗಳಲ್ಲಿ ಮುಣುಗಿ ಹೋಯಿತು ಹಡಗದ ಕೆಪ್ಟನನ ಸಹಿತ ೭ ಮಂದಿ ನಾಶವಾದರು

ಕ್ಲೆನ್ಸಿವರೆ ಎಂಬಲ್ಲಿ ಮೇಲ್ಬಾಯಿದ ಜರ್ಮನರು ಪೂರ್ಣವಾಗಿ ಹಿಮ್ಮೆಟ್ಟಿರುವರು. ಜರ್ಮನರು ಬಹು ದೂರಕ್ಕೆ ಹೋಗುವ ಫಿರಂಗಿಗಳ ಮೂಲಕ ಕೆಂಪೇನೆಯ ಮೇಲೆ ಗುಂಡು ಹಾರಿಸಿದರು ಆದರೆ ಪ್ರಯೋಜನವಾಗಲಿಲ್ಲ ಅರ್ರಾಸಿನ ಉತ್ತರ ಮತ್ತು ದಕ್ಷಿಣದಲ್ಲಿ ಮೇಲ್ಬಾಯಿದ ಜರ್ಮನರನ್ನು ಫ್ರೆಂಚರು ಹಿಂದಟ್ಟಿರುತ್ತಾರೆ

ಲಾಬಸ್ಸೆಯ ಪಶ್ಚಿಮ ದಿಕ್ಕಿನಲ್ಲಿ ಬ್ರಿಟಿಷರು ಒಂದು ಸಾಲು ಕಂದಕಗಳನ್ನು ಹಿಡಿದಿರುತ್ತಾರೆ ಫ್ರೆಂಚರು ಜರ್ಮನರ ಒಂದು ವಾಯುನಾವೆಯನ್ನು ಕೆಡವಿ ವಿಮಾನಗಾಮಿಗಳನ್ನು ಸೆರೆಹಿಡಿದಿರುತ್ತಾರೆ

ಮಿತ್ರರ ೫ ವಾಯುನಾವೆಗಳು ಕಾರ್ಲ್ಸ್‌ರೂ ಎಂಬ ಜರ್ಮನರ ಪಟ್ಟಣದ ಮೇಲೆ ಹಲ್ಲೆಮಾಡಿರುವವು ಕೆಲವು ಜನರು ಸತ್ತರು. ಕೆಲವು ಕಡೆಗಳಲ್ಲಿ ಹಾನಿಯಾಗಿರುವವು ಎಂತ ಬೆರ್ಲಿನ್‌ನಲ್ಲಿ ಪ್ರಕಟವಾಗಿದೆ

ಜರ್ಮನರ ವಾಯುನಾವೆಗಳು ಫ್ರೆಂಚ ಮತ್ತು ಬ್ರಿಟಿಷರ ಕೋಟೆಕೊತ್ತಲಗಳ ಮೇಲೆ ಹಲ್ಲೆಮಾಡಿದುದರ ಹಗೆ ತೀರಿಸುವ ಬಗ್ಗೆ ಮಿತ್ರರ ೨೩ ವಾಯುನಾವೆಗಳು ತಾ ೧೬ನೇ ಬೆಳಿಗ್ಗೆ ಹೊರಟು ಹೋಗಿ ಕಾರ್ಲ್ಸ್‌ರೂ ಪಟ್ಟಣದ ಮೇಲೆ ಹಲ್ಲೆಮಾಡಿ ೧೩೦ ಸಿಡಿಮದ್ದುಗಳನ್ನು ಅರಮನೆ, ಆಯುಧಗಳನ್ನು ಮಾಡುವ ಕಾರ್ಖಾನೆ, ರೈಲ್ವೆ ಸ್ಟೇಶನಿನ ಮೇಲೆ ಬಿಸಾಡಿದವು. ಇದರಿಂದ ರೈಲ್ವೆ ಸ್ಟೇಶನಿನಲ್ಲಿ ಹೆಚ್ಚಿನ ಗಲಿಬಿಲಿಯುಂಟಾಗಿ ಅಗ್ಗಾಡಿಗಳು ಬೇಗನೆ ಹೊರಟುಹೋದವು. ಹೋಗುವಾಗಲೂ, ಹಿಂದೆ ಬರುವಾಗಲೂ ಮಿತ್ರರ ವಾಯುನಾವೆಗಳಿಗೆ ಜರ್ಮನರು ಗುಂಡುಹಾರಿಸಿದರು. ಆದರೆ ಎರಡರ ಹೊರತು ಉಳಿದವುಗಳು ಸುರಕ್ಷಿತವಾಗಿ ಹಿಂತಿರಳಿದವು ಎಂತ ಫ್ರೆಂಚರು ಪ್ರಕಟಿಸಿರುತ್ತಾರೆ

ಇಂಗ್ಲಾಂಡಿನ ಉತ್ತರ ಪೂರ್ವ ಕರಾವಳಿಯ ಮೇಲೆ ಜರ್ಮನರ ಜೆಪಲಿನ್ ನಾವೆಗಳು ಕಳದ ರಾತ್ರಿ ಹಲ್ಲೆಮಾಡಿದವು. ಇದರಿಂದ ಕೆಲವು ಕಡೆಗಳಲ್ಲಿ ಬೆಂಕಿ ಉಂಟಾಯಿತು ಆದರೆ ಕೂಡಲೇ ಅದನ್ನು ಆರಿಸಿದರು. ೧೫ ಮಂದಿ ಹತರಾದರು, ೧೫ ಮಂದಿ ಗಾಯ ಒಡೆದರು

ಯುದ್ಧ ಪ್ರಾರಂಭವಾದಂದಿನಿಂದ ಬ್ರಿಟಿಷರ ನೌಕಾವಳಿಯಲ್ಲಿ ಒಟ್ಟಿಗೆ ೫೪೯ ಆಫೀಸರರೂ ೭೬೯೩ ಸೇನಿಕರೂ ಹತರಾದರು ೧೮೮೧ ಆಫೀಸರರೂ ೨೫೬೨ ಸೇನಿಕರೂ ಗಾಯ ಒಡೆದರು, ೭೪ ಆಫೀಸರರೂ ೨೬೧೫ ಸೇನಿಕರೂ ಕಾಣೆಯಾದರು ಎಂತ ಬ್ರಿಟಿಷ ಪ್ರಧಾನ ಮಂತ್ರಿಯಾದ ಮಿ। ಎಸ್ಕ್ವಿತರವರು ಪಾರ್ಲಿಮೆಂಟ್ ಸಭೆಯಲ್ಲಿ ಹೇಳಿರುತ್ತಾರೆ

ಪಶ್ಚಿಮ ಆಫ್ರೀಕದ ಕೆಮರೂನಿನಲ್ಲಿ ಮಿತ್ರರಿಗೆ ಗಾರ್ವ ಎಂಬ ಸ್ಥಳವು ಸ್ವಾಧೀನವಾಗಿರುತ್ತದೆ ಈ ಸ್ಥಳವು ಸ್ವಾಧೀನವಾದುದ್ದರಿಂದ ಇಲ್ಲಿರುವ ಮಿತ್ರಸೇನಿಕರು ಮಧ್ಯ ಕೆಮೂರಿನಲ್ಲಿರುವ ಬ್ರಿಟಿಷ ಸೇನಿಕರಿಗೆ ಹೋಗಿ ಕೂಡಿಕೊಳ್ಳುವ ಅನುಕೂಲವಾಗಿರುವದು

ಬಾಲ್ಟಿಕ್‌ನಿಂದ ನೀಸ್ಟರಿನ ವರೆಗೆ ಕಠಿಣ ಕಾಳಗವು ನಡೆಯುತ್ತಿದೆ. ಶಾವಲಿ ಪ್ರಾಂತ್ಯದ ಕದನವು ನಿಲ್ಲಲಿಲ್ಲ. ಆ ಸ್ಥಳದ ಸ್ಥಿತಿಯು ಇದಕ್ಕಿದ್ದ ಹಾಗೆ ಇದೆ ಪ್ರೆಜ್‌ಸ್ನೆಜ್ ಮತ್ತು ನಾರೆಜ್ ಪ್ರಾಂತ್ಯದ ಜರ್ಮನರು ರಾತ್ರಿಕಾಲ ರುಷ್ಯನರ ಮೇಲ್ಬಾಯಿದು ಹಿಮ್ಮೆಟ್ಟಿರುತ್ತಾರೆ.

ಗೆಲೀಸಿಯಕ್ಕೆ ಜರ್ಮನರ ಹೊಸ ಸೇನೆಗಳು ಬಂದಿರುವವು. ಈ ಹೊಸ ಸೇನೆಗಳು ಜಾರ್‌ಸ್ಟೊದಲ್ಲಿ ಸಾನ್ ನದಿಯ ಬಲಕಡೆಯಲ್ಲಿ ಕದನಕ್ಕೆ ನಿಂತಿರುವವು ಮೂರು ದಿವಸಗಳ ಕಠಿಣ ಕಾಳಗ ನಡೆದು ರುಷ್ಯನರು ಕೆಲವು ನೆಲೆಗಳನ್ನು ಈ ಸೇನೆಗೆ ಬಿಟ್ಟುಕೊಟ್ಟರು.

ನೀಸ್ಟರಿನಲ್ಲಿ ರುಷ್ಯನರು ಶತ್ರುಗಳ ಮೇಲೆ ಬಿದ್ದು ೨೦ ಆಫೀಸರರನ್ನೂ ೧೨೦೦ ಸೇನಿಕರನ್ನೂ ಸೆರೆಹಿಡಿದಿರುತ್ತಾರೆ.

ಕೊಗೊಣ ಎಂಬ ಸ್ಥಳವು ಜರ್ಮನರಿಗೆ ಒಂದು ಕ್ಷಣ ಸ್ವಾಧೀನವಾಯಿತು. ಆದರೆ ಬೆಳಿಗ್ಗೆ ರುಷ್ಯನರು ಪುನಃ ಜರ್ಮನರೊಡನೆ ಕದನಕ್ಕೆ ನಿಂತು ಆ ಸ್ಥಳವನ್ನು ಹಿಂದಕ್ಕೆ ಪಡಕೊಂಡರು. ಜರ್ಮನರು ಬಿಳೀ ಬಾವಟೆಯನ್ನು ಏರಿಸಿ ನಂತರ ಮೋಸದಿಂದ ಗುಂಡು ಹಾರಿಸಿದರು ಆದುದರಿಂದ ರುಷ್ಯನರು ಸಂಗೀನು ಕಾಳಗ ಮಾಡಿ ಜರ್ಮನರ ಆ ಸೇನೆಯನ್ನು ನಿರ್ನಾಮಮಾಡಿದರು.

ಟೈರೋಲ್ ಮತ್ತು ಟ್ರೆನ್ಟಿನೋದಲ್ಲಿ ಇಟಲಿಯನರು ಒಂದೊಂದು ಸ್ಥಳವನ್ನೇ ಸ್ವಾಧೀನಮಾಡಿಕೊಂಡು ಬರುತ್ತಲಿದ್ದಾರೆ. ಆಸ್ಟ್ರಿಯನರು ನೆಸಿಸ್ ಕಣಿವೆಯನ್ನು ಇಟಲಿಯನರಿಂದ ಪಡೆಯುವ ಉದ್ದೇಶದಿಂದ ಜೀವದ ಹುರವೆ ಇಲ್ಲದೆ ಕಾದಾಡಿದರು. ಆದರೆ ಪ್ರಯೋಜನವಾಗಲಿಲ್ಲ ಅಸ್ಪ್ಯಾರಿಸ್ ಮತ್ತು ಮೊಂಟೆಕ್ರೊಸ್ ಕಣಿವೆಗಳನ್ನು ಇಟಲಿಯನರು ಹಿಡಕೊಂಡಿರುವರು. ಇಲ್ಲಿ ಶತ್ರುಗಳು ಪ್ರಚಂಡವಾದ ಪಿರಂಗಿಗಳನ್ನು ಹಾರಿಸಿದರು. ಆದರೆ ಇಟಲಿಯನರು ಸಂಗೀನು ಕಾಳಗಮಾಡಿ ಅವರನ್ನು ಹಿಂದಕಟ್ಟಿರುತ್ತಾರೆ.

ಟರ್ಕಿ ಸುಲ್ತಾನರು ರೋಗ ಪೀಡಿತರಾಗಿದ್ದಾರೆಂಬ ವಾರ್ತೆ ಇದೆ

ಗ್ರೀಕ ದೇಶದ ಅರಸರಿಗೆ ಗುಣವಾಗುತ್ತಾ ಬರುತ್ತಿದೆ.

ಗ್ರೀಕ ದೇಶದಲ್ಲಿ ನಡೆದ ಚುನಾವಣೆಯಲ್ಲಿ ವೆನಜೋಲರ ಪಕ್ಷಕ್ಕೆ ಹೆಚ್ಚಿನ ಓಟುಗಳು ದೊರಕಿರುತ್ತದೆ

ತಾ. ೧೮ನೇ ಜೂನ್.

ಡರ್ಡನೆಲ್ಸಿನಲ್ಲಿ ಕಳದ ರಾತ್ರಿ ಜರ್ಮನ ಆಫೀಸರರಿಂದ ನಡಿಸಲ್ಪಡುತ್ತಿದ್ದ ತುರ್ಕ ಸೇನಿಕರ ಒಂದು ತಂಡವು ಬ್ರಿಟಿಷ ಸೇನೆಯು ಹಿಡಕೊಂಡಿದ್ದ ಕಂದಕಗಳ ಮೇಲೆ ಹಲ್ಲೆಮಾಡಿರುವದು. ಶತ್ರುಗಳಲ್ಲಿ ಕೆಲವರು ಕಂದಕದ ಪಾಗರದಲ್ಲಿಯೇ ಹತರಾದರು. ಉಳಿದವರು ಕಂದಕಗಳಿಗೆ ತಲಪುವ ಮೊದಲು ಹತರಾದರು. ಬ್ರಿಟಿಷ ಸೇನಿಕರು ಇದೇ ತಾ. ೧೨ರಲ್ಲು ಸ್ವಾಧೀನಮಾಡಿಕೊಂಡಿದ್ದ ಕಂದಕಗಳನ್ನು ಹಿಂದಕ್ಕೆ ಪಡೆಯಲು ತುರ್ಕ ಸೇನಿಕರು ದಾಳಿ ಮಾಡಿ ವಿಶೇಷ ನಷ್ಟಪಟ್ಟು ಹಿಮ್ಮೆಟ್ಟಿದರು ಕಂದಕಗಳಲ್ಲಿ ೨೦೦ ತುರ್ಕಿ ಸೇನಿಕರು ಸತ್ತುಬಿದ್ದರು. ಬ್ರಿಟಿಷ ಸೇನೆಯಲ್ಲಿ ಸ್ವಲ್ಪ ಮಾತ್ರ ನಷ್ಟವಾಗಿರುವದು.

ಜರ್ಮನರ ಜಲಾಂತರ್ಗಾಮಿ ನಾವೆಯು "ಸ್ಟ್ರಾಕ್‌ನೆರ್ಸ್" ಎಂಬ ಹಡಗವನ್ನು ಫ್ರೆಂಬೊರ್‌ಶಯರಿನಲ್ಲಿ ಮುಣುಗಿಸಿರುವದು. ಹಡಗದ ಕೆಪ್ಟನನೂ, ೨೧ ನಾವಿಕರೂ ಮುಣುಗಿ ಸತ್ತರು

ಅರ್ರಾಸಿನ ಸುತ್ತಲೂ ಫ್ರೆಂಚರಿಗೆ ಜಯವಾಗಿರುವದು. ಬ್ರೆನ್‌ಕೊಪ್ ಎಂಬಲ್ಲಿ ೩೪೦ ಶತ್ರು ಸೇನಿಕರು ಸೆರೆಬಿದ್ದಿರುವರು. ಅನೇಕ ಆಯುಧ ಸಾಮಗ್ರಿಗಳೂ ದೊರಕಿರುತ್ತದೆ

ಜರ್ಮನರು ಯುದ್ಧದ ವಾರ್ತೆಯನ್ನು ಈ ರೀತಿ ಪ್ರಕಟಿಸಿರುತ್ತಾರೆ:—ಫ್ರಾನ್ಸ್ ಮತ್ತು ರುಷ್ಯದಲ್ಲಿ ಮಹತ್ವಾದ ಕಾಳಗವು ನಡೆಯುತ್ತಿದೆ. ಯ್ಪ್ರೆಸ್ ಮತ್ತು ಲಾಬಸ್ಸೆಯಲ್ಲಿ ಬ್ರಿಟಿಷರು ಪ್ರಚಂಡವಾದ ಸೇನೆಯನ್ನು ತಂದೊಡ್ಡಿ ಕದನಮಾಡುತ್ತಿರುವರು. ಯ್ಪ್ರೆಸಿನಲ್ಲಿ ಜರ್ಮನರು ಹಿಂದರಿದಿರುತ್ತಾರೆ. ಕದನವು ನಡೆಯುತ್ತಿದೆ. ಲಾಬಸ್ಸೆಯಲ್ಲಿ ಬ್ರಿಟಿಷರ ೪ ಡಿವಿಜನ್ ಸೇನೆಗಳು ಹಲ್ಲೆಮಾಡಿದವು. ಒಯಿಸ್ ಮತ್ತು ಐನೆಯಲ್ಲಿಯೂ ಕದನವು ನಡೆಯುತ್ತಿದೆ. ಒಸೆಜೆಸ್ ಮತ್ತು ಫೆಚ್ಟ್ ಮತ್ತು ಲೋಚ್ ಕಣಿವೆಗಳನ್ನು ದಾಟಿ ಮುಂದರಿಯಲು ಫ್ರೆಂಚ ಸೇನಿಕರು ಪ್ರಯತ್ನಿಸಿರುತ್ತಾರೆ. ಗೆಲೀಸಿಯದಲ್ಲಿ ಲೆಂಬರ್ಗಿನ ಪಶ್ಚಿಮದಲ್ಲಿ ಜರ್ಮನರಿಗೆ ಜಯವಾಗುತ್ತಾ ಬರುತ್ತಿದೆ ಆದರೆ ರುಷ್ಯನರಿಗೆ ನೀಸ್ಟರ್ ಮತ್ತು ಜುರಾವ್ನೊದಲ್ಲಿ ಜಯವಾಗುತ್ತಿದೆ.

ಫೆಸ್ಟುಬರ್ಟಿನ ಪೂರ್ವದಲ್ಲಿ ಬ್ರಿಟಿಷರು ಜರ್ಮನರ ಕಂದಕಗಳನ್ನು ಹಿಡಿದರು ಆದರೆ ಜರ್ಮನರು ಪ್ರಚಂಡವಾದ ಸೇನೆಯ ಸಂಗಡ ಹಲ್ಲೆಮಾಡಿದ್ದರಿಂದ ಆ ಕಂದಕಗಳನ್ನು ಹಿಡಕೊಳ್ಳಲು ಬ್ರಿಟಿಷರಿಗೆ ಅಸಾಧ್ಯವಾಯಿತು ಮರುದಿನ ಬೆಳಿಗ್ಗೆ ಬ್ರಿಟಿಷ ಸೇನಿಕರು ಹೂಜೆಯ ಉತ್ತರದಲ್ಲಿ ೧೦೦೦ ಗಜ ದೂರದ ವರೆಗಿನ ಕಂದಕಗಳನ್ನೂ ಎರಡನೇ ಸಾಲಿನ ಕಂದಕಗಳ ಒಂದಂಶವನ್ನೂ ಸ್ವಾಧೀನಮಾಡಿಕೊಂಡು ೧೫೭ ಸೇನಿಕರನ್ನು ಸೆರೆಹಿಡಿದರು. ಈ ಕಂದಕಗಳನ್ನು ಹಿಂದಕ್ಕೆ ಪಡೆಯಲು ಪ್ರಯತ್ನಿಸಿದ ಜರ್ಮನರು ವಿಶೇಷ ನಷ್ಟಪಟ್ಟು ಹಿಮ್ಮೆಟ್ಟಿದರು.

ಇಂಗ್ಲಾಂಡಿನ ಮೇಲೆ ಜೆಪಲಿನ್ ವಾಯುನಾವೆಗಳು ನಡಿಸಿದ ದಾಳಿಯಲ್ಲಿ ೧೬ ಮಂದಿ ಹತರಾದರು. ೪೦ ಮಂದಿ ಗಾಯ ಒಡೆದರು ಎಂತ ಪ್ರಕಟವಾಗಿದೆ.

ಗೆಲೀಸಿಯದಲ್ಲಿ ಸಾನ್ ಪ್ರಾಂತ್ಯದ ಕದನವು ಅತಿ ಕಠಿಣಾವಸ್ಥೆಯನ್ನು ಹೊಂದಿರುತ್ತದೆ. ಶತ್ರುಗಳು ಎಡೆಬಿಡದೆ ರಣರಂಗದಲ್ಲಿ ಹೊಸ ಸೇನೆಯನ್ನು ತಂದುಹಾಕುತ್ತಿದ್ದಾರೆ. ಆದರೆ ನೀಸ್ಟರಿನ ಕದನದಲ್ಲಿ ರುಶ್ಯನರಿಗೆ ಜಯವಾಗುತ್ತಾ ಬರುತ್ತದೆ. ರುಶ್ಯನರು ಕೆಲವು ಸೇನಿಕರನ್ನೂ ಆಯುಧ ಸಾಮಗ್ರಿಗಳನ್ನೂ ಹಿಡಿದಿರುತ್ತಾರೆ. ಬಾಲ್ಟಿಕ್‌ನಲ್ಲಿ ನಡೆಯುವ ಕದನದಲ್ಲಿಯೂ ರುಶ್ಯನರಿಗೆ ಜಯವಾಗುತ್ತಿದೆ.

ಇಟಲಿಯನರಿಗೆ ಪ್ರತಿ ಕಡೆಯಲ್ಲಿಯೂ ಜಯವಾಗುತ್ತಾ ಬರುತ್ತಿದೆ.

ತಾ. ೧೯ನೇ ಜೂನ್.

ಗಲಿಪೊಲಿಯಲ್ಲಿ ತುರ್ಕರ ೧೩೨,೦೦೦ ಸೈನಿಕರು ಪ್ರಾಣಾಪಾಯ ಹೊಂದಿರುವರೆಂತಲೂ ಅವರಿಗೆ ಇದೇ ರೀತಿ ನಷ್ಟವಾದರೆ ಮುಂದಕ್ಕೆ ಕಾಳಗಕ್ಕೆ ನಿಲ್ಲುವದು ಕಷ್ಟಸಾಧ್ಯವೆಂತಲೂ ಅಥೆನ್ಸಿನಲ್ಲಿ ಪ್ರಕಟವಾಗಿದೆ. ಕನ್‌ಸ್ತಂತಿನೋಪಲಿನಲ್ಲಿ ಜರ್ಮನರಿಗೆ ವಿರೋಧವಾದ ಸಂಗವು ಎದ್ದದೆಂದೂ ಒಬ್ಬ ಜರ್ಮನ ದೊಡ್ಡ ಹುದ್ದೆದಾರನನ್ನು ಈ ಸಂಗಡದವರು ಗುಂಡು ಹೊಡೆದು ಕೊಂದರೆಂದೂ ವಾರ್ತೆ ಇದೆ.

ಬಿರಿಶ್ ಸಮುದ್ರದಲ್ಲಿ ಜರ್ಮನರ ಜಲಾಂತರ್ಗಾಮಿ ನಾವೆಯಿಂದ ಎರಡು ವ್ಯಾಪಾರ ಹಡಗಗಳು ಮುಣುಗಿಸಲ್ಪಟ್ಟಿರುವವು.

ಅರ್ರ್ಯಾಸಿನ ಉತ್ತರದಲ್ಲಿ ಕಠಿಣ ಕಾಳಗವು ನಡೆದಿರುವದು. ಇತರ ಕಡೆಗಳಲ್ಲಿಯೂ ಮಿತ್ರರಿಗೆ ಜಯವಾಗಿರುವದು.

ಮಿತ್ರರು ಕಾರ್ಲ್ಸ್ರೂ ಪಟ್ಟಣದ ಮೇಲೆ ಹಾಕಿದ ಬೊಂಬಿನಿಂದ ಇಪ್ಪತ್ತು ಹತರಾಗಿರುವರು. ೬೩ ಮಂದಿ ಗಾಯ ಪಡೆದಿರುವರು ಎಂತ ಒಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಗೆಲೀಸಿಯದ ಕದನವು ಅತಿ ತೀಕ್ಷ್ಣತೆಯಿಂದ ನಡೆಯುತ್ತಿದೆ. ಜುರಾವ್ನೋದಲ್ಲಿ ರುಶ್ಯನರು ತಾ. ೧೪-೧೫ರಲ್ಲಿ ೭೩೬ ಸೇನಿಕರನ್ನೂ, ೨೦೨ ಆಫೀಸರರನ್ನೂ ಸೆರೆಹಿಡಿದಿರುತ್ತಾರೆ.

ಇಟಲಿಯಾನರ ವಾಯುನಾವೆಯು ಡಿವಾಕ್ಕ ಎಂಬಲ್ಲಿ ರೈಲ್ವೆಗಳು ಬಂದು ಕೂಡುವ ಸ್ಥಳಕ್ಕೆ ಬೊಂಬುಗಳನ್ನು ಬಿಸಾಡಿರುವವು. ಈ ಸ್ಥಳವು ಟ್ರೀಸ್ಟ ಪಟ್ಟಣಕ್ಕೆ ೧೦ ಮೈಲ ಪೂರ್ವಕ್ಕೆ ಇದೆ.

ತಾ. ೨೧ನೇ ಜೂನ್.

ಬ್ರಿಟಿಷ ಜಲಾಂತರ್ಗಾಮಿ ನಾವೆಗಳು ಡರ್ಡನೆಲ್ಸಿಗೆ ಸುಗ್ಗಿ ಸೇನಿಕರನ್ನು ಸಾಗಿಸುತ್ತಿದ್ದ ೪ ಹಡಗಗಳನ್ನು ಮುಣುಗಿಸಿರುವವು ಎಂತ "ಡೈಲಿನ್ಯೂಸ್" ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಜರ್ಮನರ ಜಲಾಂತರ್ಗಾಮಿ ನಾವೆಯು "ಡುಲ್‌ಸ್ಕೆ" ಎಂಬ ನಾವೆಯನ್ನು ಮುಣುಗಿಸಿರುತ್ತದೆ.

ಅಲ್ಸೇಸಿನಲ್ಲಿ ಫ್ರೆಂಚರಿಗೆ ಅಲ್ಲಲ್ಲಿ ಜಯವಾಗುತ್ತಾ ಇದೆ.

ಜರ್ಮನ ಸರಕಾರದವರು ಈ ರೀತಿ ಪ್ರಕಟಿಸಿರುವರು — ಬ್ರಿಟಿಷರು ಪುನಃ ಲಾಬಸ್ಸೆಯ ಉತ್ತರದಲ್ಲಿ ಜರ್ಮನ ನೆಲೆಗಳನ್ನು ಮುರಿದು ಮುಂದರಿಯಲು ಪ್ರಯತ್ನಿಸಿದರು. ಸೊಸೆಜ್ ಮತ್ತು ಲೊರೆಟ್ಟೆಯಲ್ಲಿ ಫ್ರೆಂಚರಿಗೆ ಜಯವಾಗಿದೆ. ಪೋಸೆಜೆಸಿನ ಕದನವು ನಡೆಯುತ್ತಾ ಇದೆ. ಗೆಲೀಸಿಯದಲ್ಲಿ ಜರ್ಮನರು ಟಾರ್ನೋಗ್ರೋಡಿನ ಕಡೆಗೆ ಮುಂದರಿದಿರುವರು. ಆದರೆ ರುಶ್ಯನರು ಗ್ನಿಲ್ಲಾ ತೀರದ ನೆಲೆಗಳನ್ನು ಸ್ವಾಧೀನಮಾಡಿಕೊಂಡಿರುತ್ತಾರೆ. ನೀಸ್ಟರ್ ರಣರಂಗದ ಸ್ಥಿತಿಯು ಇದ್ದಕ್ಕಿದ್ದ ಹಾಗೆ ಇದೆ.

ಜರ್ಮನ ಪ್ರಷ್ಯ ಸೇನೆಯೊಂದರಲ್ಲಿ ೧,೪೦೯,೪೮೯ ಸೇನಿಕರು ಪ್ರಾಣಾಪಾಯ ಹೊಂದಿರುವರು.

ಪ್ರಿನ್ಸ್ ರಂಜಿತ್ ಸಿಂಘರವರು ಸ್ಟೈನೆಸಿನಲ್ಲಿ ಕಟ್ಟಿಸಿದ ರಮ್ಯವಾದ ತನ್ನ ವಾಸಸ್ಥಾನವನ್ನು ಗಾಯ ಪಡೆದ ಆಫೀಸರರ ಬಗ್ಗೆ ಆಸ್ಪತ್ರೆಯಾಗಿ ಕೊಟ್ಟಿರುತ್ತಾರೆ. ಈ ಆಸ್ಪತ್ರೆಯ ಬಗ್ಗೆ ಆಗುವ ಖರ್ಚನ್ನು ಪ್ರಿನ್ಸ್ ರಂಜಿತ್ ಸಿಂಘರವರೂ ಕಾಶ್ಮೀರ ಮತ್ತು ಪಟಿಯಾಲ ಮಹಾರಾಜರವರೂ ವಹಿಸಿಕೊಳ್ಳುವರು.

ಗೆಲೀಸಿಯದ ಭಯಂಕರವಾದ ಕದನಕ್ಕೆ ಅಂತ್ಯವಾಗಲಿಲ್ಲ. ರುಶ್ಯನರು ಟನೆ ಮತ್ತು ಗ್ರೊಡೆಕ್ ಸರೋವರದ ಬಳಿ ತಯಾರಿಸಿದ ನೆಲೆಗೆ ತಮ್ಮ ಸೇನೆಯನ್ನು ಕರೆಯಿಸಿರುವರು. ಶತ್ರುಗಳು ಪ್ರುತ್ ಮತ್ತು ನೀಸ್ಟರಿನಲ್ಲಿ ಸರಹದ್ದನ್ನು ದಾಟಿದರು. ಆದರೆ ರುಶ್ಯನರು ಅವರನ್ನು ಸೋಲಿಸಿ ಆಸ್ಟ್ರಿಯನ ಸರಹದ್ದಿಗೆ ಹಿಂದಟ್ಟಿದರು. ಗೆಲೀಸಿಯದಲ್ಲಲ್ಲದೆ ಇತರ ಕಡೆಗಳಲ್ಲಿ ರುಶ್ಯನರಿಗೇನೇ ಜಯವಾಗಿರುವದು. ವಾರ್‌ಶೋ ರಣರಂಗದಲ್ಲಿ ಜರ್ಮನರು ಗ್ಯಾಸನ್ನು ಪ್ರಯೋಗಿಸುತ್ತಿದ್ದಾರೆ.

ಇಟಲಿಯನರು ಮೊಂಟೆಸರೊವನ್ನು ಪೂರ್ಣವಾಗಿ ಸ್ವಾಧೀನಮಾಡಿಕೊಂಡಿರುತ್ತಾರೆ. ಇಟಲಿಯನರು "ಮಲ್ಬರ್‌ಗೆಟ್ಟೊ" ಕೋಟೆಯನ್ನು ನೆಲಸಮಮಾಡುವ ಪ್ರಯತ್ನದಲ್ಲಿರುತ್ತಾರೆ.

ಕನ್‌ಸ್ತಂತಿನೋಪಲಿನಲ್ಲಿ ಬೆಂಕಿಯುಂಟಾಗಿ ೫೦೦ ಮನೆಗಳು ಸುಟ್ಟುಹೋದವು.

ಉತ್ತರ ಹಿಂದೂಸ್ಥಾನ.

ಬರೋಡ ಗಾಯಕವಾಡರು ಬರುವ ತಿಂಗಳಲ್ಲಿ ತಿರುವಂಕೋಡು ಸಂಸ್ಥಾನದ ಮಹಾರಾಜರಿಗೆ ಭೇಟಿಕೊಡುವ ಉದ್ದೇಶಕ್ಕಾಗಿ ಅಲ್ಲಿಗೆ ಹೋಗುವರು.

ಸುಪ್ರಸಿದ್ಧ ಶಾಸ್ತ್ರಜ್ಞರಾದ ಪ್ರೊಫೆಸರ್ ಜಗದೀಶಚಂದ್ರ ಬೋಸರವರು ಅಮೇರಿಕಾ ಖಂಡದಲ್ಲೆಲ್ಲಾ ಸಂಚರಿಸಿ ಕಳೆದ ವಾರ ಭರತಖಂಡಕ್ಕೆ ಹಿಂತಿರುಗಿ ಬಂದಿರುವರು.

ಒಬ್ಬ ವಿದ್ಯಾರ್ಥಿಯು ತನ್ನನ್ನು ಎಫ್. ಎ ಪರೀಕ್ಷೆಯಲ್ಲಿ ತೇರ್ಗಡೆಮಾಡಬೇಕೆಂದು ಪಂಜಾಬು ಯುನಿವರ್ಸಿಟಿಯ ಅಸಿಸ್ಟಂಟ್ ರಿಜಿಸ್ಟ್ರಾರರಾದ ರಾಯಬಹದ್ದೂರ್ ಪಿ. ಎಂ. ದತ್ತರವರಿಗೆ ಮನಿಆರ್ಡರು ಮೂಲಕ ೫೧೦ ರೂಪಾಯಿಗಳನ್ನು ಕಳುಹಿಸಿದ್ದು ಪತ್ತೆಯಾಗಿ ಅವನನ್ನು ಇನ್ನುಮುಂದೆ ಯಾವ ಪರೀಕ್ಷೆಗೂ ಸೇರಿಸ ಕೂಡದೆಂದು ನಿರ್ಧರಿಸಿರುವರು.

ಅಹಮ್ಮದಾಬಾದಿನ ಒಂದು ದೇವಾಲಯದಲ್ಲಿ ವಾಸಮಾಡುತ್ತಿದ್ದ ಒಬ್ಬ ಸನ್ಯಾಸಿಗೆ ಸೇರಿದ ಒಂದು ಕೊಠಡಿಯನ್ನು ರುಕ್ಮಿಣಿ ಎಂಬೊಬ್ಬ ಸ್ತ್ರೀಯು ಬಾಡಿಗೆಗೆ ಮಾಡಿಕೊಂಡು ತನ್ನ ಪತಿಯೊಂದಿಗೆ ವಾಸಿಸುತ್ತಿದ್ದಳು. ಆಕೆಯನ್ನು ಆ ಸನ್ಯಾಸಿಯು ದುರ್ವ್ಯಾಪಾರಕ್ಕೆ ಎಳೆಯಲೆತ್ನಿಸಿದುದರಿಂದ ಆಕೆಯು ಆತ್ಮರಕ್ಷಣೆಗಾಗಿ ಆತನ ಮೂಗನ್ನು ಒಂದು ಚೂರಿಯಿಂದ ಕೊಯಿದುಹಾಕಿ ಬಿಟ್ಟಳೆಂಬದಾಗಿ ವಿಚಾರಣೆಯು ಕೋರ್ಟಿನಲ್ಲಿ ನಡೆಯುತ್ತಿದ್ದು, ಈಗ ಆಕೆಯ ಹೇಳಿಕೆಯು ನಂಬಿಕೆಗೆ ಯೋಗ್ಯವಲ್ಲವೆಂತಲೂ ಆಕೆಯ ಗಂಡನನ್ನು ಸನ್ಯಾಸಿಯು ಬಾಡಿಗೆ ಕೇಳಿದಕ್ಕೋಸ್ಕರ ಆಕೆಯು ಆತನ ಮೂಗನ್ನು ತುಂಡುಮಾಡಿರಬಹುದೆಂಬ ಹೇಳಿಕೆಯು ನಿಜವಾಗಿರಬಹುದೆಂತ ರುಜುವಾತಾಗಿ ಆಕೆಗೆ ೨ ವರ್ಷ ಕಠಿಣ ಸಜಾ ವಿಧಿಸಲ್ಪಟ್ಟಿತು. ಆಕೆಯು ಪುನಃ ಮುಂಬಾಯಿ ಹೈಕೋರ್ಟಿಗೆ ಅಪೀಲು ಮಾಡಿಕೊಂಡಲ್ಲಿ ಹೈಕೋರ್ಟಿನವರು ಇಂತಹ ವಿಷಯಗಳಲ್ಲಿ ಆಕೆಯ ಹೇಳಿಕೆಯಂಥಾ ಸಂಗತಿಗಳು ಅನೇಕ ನಡೆದಿವೆಂಬ ಆಧಾರದ ಮೇಲೆ ಆಕೆಯನ್ನು ಬಿಡುಗಡೆ ಮಾಡಿದರು.

ಪೂನಾ ಜಿಲ್ಲೆಗೆ ಸೇರಿದ ಯೇವತವೆಂಬ ಗ್ರಾಮದಲ್ಲಿ ಗೋಕಾಯಿಗಳನ್ನು ಕೊಲ್ಲುವದು ಬಹಳ ಹೆಚ್ಚಿದ್ದರಿಂದ ಆ ಗ್ರಾಮದಲ್ಲಿಯೂ ಸುತ್ತಮುತ್ತಲಿನ ಗ್ರಾಮಗಳಲ್ಲಿಯೂ ಪ್ರಜಾ ಜನರು ಪಾಷಾಣವನ್ನು ತಮ್ಮ ಬಳಿ ಇಟ್ಟುಕೊಳ್ಳ ಕೂಡದೆಂತ ಸರಕಾರದವರು ಸಾರಿಸಿ ಕಠಿಣವಾದ ಆಜ್ಞೆಯನ್ನು ಜಾರಿಗೆ ತಂದಿರುತ್ತಾರೆ.

ಪೂರ್ವ ಬಂಗಾಳದಲ್ಲಿ ಪ್ರಜಾ ನೆಮ್ಮದಿಯನ್ನು ಕಾಪಾಡುವದಕ್ಕೆ ಸರಕಾರದವರು ದ್ವಿಜೇಂದ್ರ ಮಜುಮ್ದಾರ್ ಎಂಬೊಬ್ಬ ಗುಪ್ತ ಪೋಲಿಸ್ ಹುದ್ದೆದಾರನನ್ನು ಅಲ್ಲಿಗೆ ವರ್ಗಮಾಡಿದ್ದಾಗ ಅವನು ಸೇನಹತಿ ಎಂಬ ಊರಲ್ಲಿ ಒಬ್ಬ ಹುಡುಗಗೆ ಗುಂಡು ಹೊಡೆದು ಕೊಂದ ತಪ್ಪಿಗಾಗಿ ಅವನಿಗೆ ಮರಣದಂಡನೆ ವಿಧಿಸೋಣಾಯಿತು ಎಂತ ತಿಳಿಸತಕ್ಕದ್ದು. ದ್ವಿಜೇಂದ್ರನ ಹೆಂಡತಿಯು ತನ್ನ ಪತಿಗೆ ಕ್ಷಮಾಪಣೆ ಮಾಡಿ ತನ್ನ ಕುಂಕುಮವನ್ನು ಕಾಪಾಡಬೇಕೆಂದು ಬಂಗಾಳ ಗವರ್ನರರಿಗೆ ಮನವಿ ಮಾಡಿಕೊಂಡಳು. ಗವರ್ನರರು ಕನಿಕರ ಪಟ್ಟು ಅವನಿಗೆ ವಿಧಿಸಿದ ಮರಣದಂಡನೆಯನ್ನು ಬಂಕೋಲಿ ಶಿಕ್ಷೆಗೆ ಮಾರ್ಪಡಿಸಿದರು.

ಅಮೃತಸರ ಜಿಲ್ಲೆಯಲ್ಲಿ ಕಳೆದ ತಾ. ೧೧ರಲ್ಲು ಬೆಳಗಿನ ಜಾಮದಲ್ಲಿ ಕೆಲವು ಮಂದಿ ಸಾಯುಧರಾದ ಕಳ್ಳರು ಚಾಂಡಿಯ ಲೋಹಮಾರ್ಗದ ಹತ್ತಿರದ ಸೇತುವೆಯನ್ನು ಕಾಯುತ್ತಿದ್ದ ಸೇನಿಕರ ಮೇಲೆ ಬಿದ್ದು ಒಬ್ಬನನ್ನು ಕೊಂದುಹಾಕಿದರು. ಇನ್ನೊಬ್ಬನಿಗೆ ಗಾಯ ಮಾಡಿದರು. ಒಬ್ಬ ಹವಲ್ದಾರನು ಏನಾದನೋ ಗೊತ್ತಿಲ್ಲ. ಸೇನಿಕರಲ್ಲಿದ್ದ ೬ ಸನೀನುಗಳನ್ನೂ ೨೩ ತೋಟಾಗಳನ್ನೂ ಕಳ್ಳರು ಸುಲಿದುಕೊಂಡು ಹೋಗಿರುವರು. ಅವರಲ್ಲಿ ಕೆಲವರು ಸಿಕ್ಕಿಬಿದ್ದಿದ್ದಾರೆ.

ಸೀಮೆಯಲ್ಲಿ ನೋಟುಗಳ ವ್ಯವಹಾರದ ಮೇಲಿನ ಅಧಿಕಾರವು "ಬ್ಯಾಂಕ್ ಆಫ್ ಇಂಗ್ಲಾಂಡ್"ಗೆ ಇರುವದು. ವ್ಯವಹಾರದಲ್ಲಿರುವ ಯಾವದೊಂದು ನೋಟಾಗಲೀ ಈ ಬ್ಯಾಂಕಿನವರ ಕೈಗೆ ಬಂದಾಗ ಅವರು ಮರಳಿ ಅದನ್ನು ಕೊಡದೆ ಹೊಸ ನೋಟನ್ನು ಕೊಟ್ಟು ಅದನ್ನು ರದ್ದು ಮಾಡುತ್ತಾರೆ. ಈ ಕ್ರಮವನ್ನು ಈ ಭರತಖಂಡದಲ್ಲಿಯೂ ರೂಢಿಗೆ ತಂದಿರುತ್ತಾರೆ. ಹಳೆಯ ನೋಟುಗಳು ಸರಕಾರಿ ಧನವ್ಯವಹಾರ ಕಾರ್ಯಾಲಯಕ್ಕೆ ಬಂದಾಕ್ಷಣ ಅದನ್ನು ನಾಶಪಡಿಸಿ ಅದಕ್ಕೆ ಪ್ರತಿಯಾಗಿ ಹೊಸ ನೋಟುಗಳನ್ನು ಕೊಡುವ ಪದ್ಧತಿಯನ್ನು ಈ ದೇಶದಲ್ಲಿಯೂ ತರುವಂತೆ ಮಾಡಬೇಕೆಂದು ಸ್ಟೇಟ್ ಸೆಕ್ರಟರಿಯವರಿಂದ ಅನುಮತಿಯು ದೊರಕಿರುತ್ತದೆ. ಸದ್ಯಾ ಮುಂಬಾಯಿಯಲ್ಲಿ ಮಾತ್ರ ಕೆಲವು ಕಾರಣಗಳಿಂದ ಈ ಹೊಸ ಕ್ರಮವು ಜ್ಯಾರಿಗೆ ಬರುವದಿಲ್ಲ. ಇತರ ಎಲ್ಲಾ ಅಧಿಪತ್ಯಗಳಲ್ಲಿಯೂ ಈ ಕ್ರಮವು ಜಾರಿಗೆ ಬರುವದು. ಇದರಿಂದ ಹೊಲಸಾದ ಹಳೆ ನೋಟುಗಳ ವ್ಯವಹಾರವು ಕಡಿಮೆಯಾಗಿ ಪ್ರಜಾಜನರಿಗೆ ಹೆಚ್ಚಿನ ಉಪಕಾರವಾಗುವದು.

೧೯೧೦ನೇ ಇಸವಿಯಲ್ಲಿ ಸರ್ ವಲಂಟೈನ್ ಚಿರೋಲ್‌ರವರು ಪ್ರಕಟಿಸಿದ "ಅನ್‌ರೆಸ್ಟ್ ಇನ್ ಇಂಡಿಯ" ಎಂಬ ಪುಸ್ತಕದಲ್ಲಿ ಮಾನ್ಯ ಬಾಲಗಂಗಾಧರ ತಿಲಕರಿಗೆ ಅವಮಾನಕರವಾದ ವಿಷಯವನ್ನು ಪ್ರಕಟಿಸಿದ್ದರಿಂದ ಸರ್ ವಲಂಟೈನ್ ಚಿರೋಲರು ಕ್ಷಮಾಪಣೆ ಕೇಳಬೇಕು ಇಲ್ಲವೆ ಮಾನನಷ್ಟದಾವೆಯನ್ನು ಹೂಡುವೆನೆಂತ ಇಂಗ್ಲಾಂಡಿನಲ್ಲಿರುವ ವಕೀಲರ ಮೂಲಕ ಸರ್ ಚಿರೋಲರವರಿಗೆ ಮಾನ್ಯ ತಿಲಕರವರು ತಿಳಿಯಪಡಿಸಿದ್ದಾರೆ.

ನೂತನ ದೇಶರಕ್ಷಣಾ ವಿಧಿಗನುಸಾರವಾಗಿ ಡಕ್ಕದ ಹೇಮಚಂದ್ರ ಗೋಸನೆಂಬವನಿಗೆ ಬಾರಿಸಾಲನ್ನು ಬಿಟ್ಟು ಹೋಗಕೂಡದೆಂಬ ಅಪ್ಪಣೆಯಾಗಿರುವದು.

ಬಂಗಾಳದಲ್ಲಿ ತಾ. ೧೫ರಲ್ಲು ಸುಂಟರಗಾಳಿಯು ಬೀಸಿ ಮೆಮನ್‌ಸಿಂಗ್ ಮೊದಲಾದ ಸ್ಥಳದಲ್ಲಿ ಅನೇಕ ಮನೆಗಳು ಬಿದ್ದುಹೋಗಿರುವವು. ಸುಂಟರಗಾಳಿಯೊಂದಿಗೆ ವಿಶೇಷ ಮಳೆಗರೆದುದ್ದರಿಂದ ಕೆಲವು ನದಿಗಳಲ್ಲಿ ನೆರೆ ಬಂದು ಪೈರುಗಳಿಗೆ ನಷ್ಟವಾಗಿದೆ.

ಈ ವರ್ಷದ ರಾಷ್ಟ್ರೀಯ ಸಭೆಯು ಮುಂಬಾಯಲ್ಲಿ ಕೂಡಲಿಕ್ಕಿರುವದರಿಂದ ಈ ಬಗ್ಗೆ ಮುಂಬಾಯಲ್ಲಿ ತಕ್ಕ ಏರ್ಪಾಡು ನಡೆಯುತ್ತಲಿದೆ.

ಸರ್ ರವೀಂದ್ರನಾಥ ಟಾಗೋರರವರು ತಮ್ಮ ಬೋಲಾಪುರದ ಶಾಲೆಗೆ ದಾಖಲು ಮಾಡಿಕೊಳ್ಳಲಿಕ್ಕಾಗದ ವಿದ್ಯಾರ್ಥಿಗಳ ಬಗ್ಗೆ ಒಂದು ಕೈಗಾರಿಕೆ ಶಾಲೆಯನ್ನು ಸ್ಥಾಪಿಸುವ ಯತ್ನ ನಡಿಸುತ್ತಲಿದ್ದಾರೆ. ಈ ಉದ್ದೇಶದಿಂದ ಇವರು ಸದ್ಯಾ ಜಾಪಾನಿಗೆ ಹೋಗಲಿಕ್ಕಿದ್ದಾರೆಂತ ತಿಳಿದುಬಂದದೆ.

ಕಲ್ಕತ್ತೆಯಲ್ಲಿ ಬಿರುಮಳೆ ಬಂದು ಉಪ್ಪರಿಗೆ ಎರಡು ಮನೆಗಳು ಬಿದ್ದು ೮ ಮಂದಿ ಮನೆಯೊಳಗೆ ಹೂತುಹೋದರು. ಈ ಪೈಕಿ ಮೋದಂಪಸ್ಥಿತಿಯ ಇಬ್ಬರನ್ನು ತೆಗೆದು ಆಸ್ಪತ್ರೆಗೆ ಸಾಗಿಸಿರುತ್ತಾರೆ. ಉಳಿದವರ ಪತ್ತೆಯಾಗಲಿಲ್ಲ.

ಬರುವ ರಾಷ್ಟ್ರೀಯ ಸಭೆಗೆ ಅಧ್ಯಕ್ಷರನ್ನಾಗಿ ಅಂಬಿಕಾ ಚರಣ ಮುಜುಮದಾರ್, ಸರ್ ಸುಬ್ರಮಣ್ಯ ಅಯ್ಯರ್, ಸರ್. ಎಸ್. ಪಿ. ಸಿನ್ಹ, ಲಾಲ ಲಜಪತ್‌ರಾಯಿ ಮತ್ತು ಮಜ್ರುಲ್ ಹಕ್ಕು, ಇವರ ಪೈಕಿ ಒಬ್ಬರನ್ನು ಆರಿಸಬಹುದೆಂತ ಬಂಗಾಳದ ಪ್ರೊವಿನ್ಸಿಯಲ್ ಕಾಂಗ್ರೆಸ್ ಕಮಿಟಿಯವರು ನಿರ್ಣಯಿಸಿರುವರು.

ಲಕ್ಷ್ಮೀಕರ ಕಸ್ತೂರಿ ಮಾತ್ರೆಗಳು:—ಇದು ಭೋಜನಾನಂತರ ತಾಂಬೂಲದ ಸಂಗತ 1-2 ಮಾತ್ರೆಗಳನ್ನು ಸೇವಿಸಿದರೆ ಇತರ ಸುವಾಸನಾ ದ್ರವ್ಯಗಳು ಅನಾವಶ್ಯಕವಾಗಿರುವುದಲ್ಲದೆ ಅಲ್ಪಕಾಲದಲ್ಲಿ ಅತ್ಯಂತ ಕಠಿನವಾದ ಆಹಾರವನ್ನು ಕೂಡ ಜೀರ್ಣಕ್ಕೆ ತರುವುದು ಬೆಳಿಗ್ಯೆ ಊಟಕ್ಕೆ ಮುಂಚೆ 2 ಮಾತ್ರೆಗಳನ್ನು ಕ್ರಮವಾಗಿ ಸೇವಿಸುತ್ತಿದ್ದರೆ, ಅಜೀರ್ಣ, ಮಂದ, ಹಲ್ಲುವೇದನೆ, ಹೊಟ್ಟೆಯ ಉರಿ ಇವುಗಳು ವಾಸಿಯಾಗುವವು. ಇದರಲ್ಲಿ ಆಕ್ಷೇಪಣೀಯವಾದ ಲಹರಿ ಪ್ರತಿಬಂದಕವಾದ ಯಾವ ವಸ್ತುವೂ ಇಲ್ಲ. ಕಸ್ತೂರಿ ಸ್ವರ್ಣ ಮುಂತಾದ ಅಮೂಲ್ಯ ವಸ್ತುಗಳು ಸೇರಿರುವುದರಿಂದಲೂ, ಎಳೆಮಕ್ಕಳಿಂದ ಮುದುಕರವರೆಗೆ ಎಲ್ಲರೂ ಬರಿಣೆಯಲ್ಲಿ ಹಾಕಿಕೊಂಡು ಉಪಯೋಗಿಸಬಹುದು ಕ್ರಮವಾಗಿ ಸೇವಿಸುವುದರಿಂದ ಜ್ವರ, ನೆಗಡಿ, ಕೆಮ್ಮಲು, ಮುಂತಾದವುಗಳಿಗೆ ಸಣ್ಣಮಕ್ಕಳಿಂದ ದೊಡ್ಡವರಿಗೆ 1ರಿಂದ 4 ಮಾತ್ರೆಗಳಂತೆ ಕೊಟ್ಟರೆ ತಕ್ಷಣ ಗುಣಕಾಣುವದು. ಸೀಸೆ 1ಕ್ಕೆ 4 ಅಣೆ ವಿ. ಪಿ. 3 ಸೀಸೆವರೆಗೂ 5 ಅಣೆ ಪ್ರತ್ಯೇಕವು.

ಪರಿಮಳ ಕೇಶತೈಲವು:—ಸೋಲುತಲೆ ಚುಂಡು ಅದವ ಹೊಟ್ಟು ಉದುರುವಿಕೆ, ಇವು ಸಂಪೂರ್ಣವಾಗಿ ವಾಸಿಯಾಗುವವಲ್ಲದೆ, ತಲೆಯನ್ನೂ, ಮಿದುಳನ್ನೂ ತಣ್ಣಗಿರುವಂತೆ ಮಾಡಿ, ತಲೆ, ಮೀಸೆ, ಹುಬ್ಬುಗಳ ಕೂದಲನ್ನು ಹೇರಳವಾಗಿ ಬೆಳೆಸುವದು. ಮತ್ತು ಕಣ್ಣು, ಮಿದುಳು ಸಂಬಂಧವಾದ ರೋಗವನ್ನೆಲ್ಲಾ ವಾಸಿಮಾಡುವದು. ಬಹಳ ಮನೋರಂಜಕವಾಗಿ ಪರಿಮಳಿಸುವದು. ಸೀಸೆ 1ಕ್ಕೆ 8 ಅಣೆ ವಿ ಪಿ. ಚಾರ್ಜು 2 ಸೀಸೆವರೆಗೂ 5 ಅಣೆ.

ನೇತ್ರಬಿಂದು:—ಸಮೀಪದೃಷ್ಟಿ, ಕಣ್ಣಿನಲ್ಲಿ ನೀರು ಸುರಿಯುವುದು, ಹೂವು ಬರುವುದು, ಉರಿ ಮುಂತಾದ ನೇತ್ರರೋಗಗಳು ಇದರಿಂದ ಗುಣವಾಗುವವು. ಸೀಸೆ 1ಕ್ಕೆ 8 ಅಣೆ. ವಿ. ಪಿ. ಚಾರ್ಜು 6 ಸೀಸೆವರೆಗೂ 5 ಅಣೆ.

ಶ್ರೋತ್ರಬಿಂದು:—ಕಿವಿಯು ಎಷ್ಟು ಹೆಚ್ಚಾಗಿ ನೋಯುತ್ತಿದ್ದರೂ ಮತ್ತು ಕೀವು ಸುರಿಯುವುದು, ಕಿವಿಯ ಮಾಂದ್ಯವು, ಕಿವಡು ಮುಂತಾದ್ದನ್ನು ಜಾಗ್ರತೆಯಲ್ಲಿ ಪರಿಹರಿಸುವುದು. ಬೆಲೆ ಸೀಸೆ 1ಕ್ಕೆ 8 ಅಣೆ. ವಿ. ಪಿ. ಚಾರ್ಜು 6 ಸೀಸೆವರೆಗೂ 5 ಅಣೆ.

ಹುಳಕಡ್ಡಿಗೆ ಔಷಧಿ:—ಚರ್ಮರೋಗಕ್ಕೂ, ಚರ್ಮಗತವಾದ ಎಲ್ಲಾ ವ್ಯಾಧಿಗಳಿಗೂ ಅತ್ಯುತ್ತಮವಾದ ಮದ್ದು. ಒಂದು ಸಾರಿ ವಾಸಿಯಾದ ಮೇಲೆ ಪುನಃ ತಲೆದೋರುವುದಿಲ್ಲ ಸೀಸೆ 1ಕ್ಕೆ 4 ಅಣೆ. ವಿ. ಪಿ ಚಾರ್ಜು 6 ಸೀಸೆವರೆಗೂ 5 ಅಣೆ.

☞ ಈ ಪ್ರಾಂತ್ಯದಲ್ಲಿ ಕನ್ನಡ, ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವದಿಲ್ಲವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಿಳುನಲ್ಲಾಗಲೀ ಸ್ಫುಟವಾಗಿ ತಿಳಿಯುವಂತೆ ಬರಿಯಬೇಕು.

MY ADDRESS.

P. SUBBA ROY,
Ayurvedic Pharmacy,
Sri Perumalkoil,
SANNATHY, TANJORE.

ನಮ್ಮ ವಿಳಾಸ:—
ಪಿ. ಸುಬ್ಬರಾಯಿ,
ಆಯುರ್ವೇದ ಔಷಧಶಾಲ,
ಶ್ರೀ ವೆಂಕಟೇಶ ಪೆರುಮಾಳ್ ದೇವಸ್ಥಾನ,
ಸನ್ನದಿ, ತಂಜಾವೂರು.

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿವರ್ಣದ ನಿಬಿಡವಾದ ಕೇಶದಾಮವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾಪ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ.

ಈ ತೈಲವನ್ನು ತೊಡೆದುಕೊಳ್ಳುತ್ತಲೇ, ಮಸ್ತಿಷ್ಕದ ಬೇನೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ತೊಡೆಯ ತೊಡಗಿದ ಒಳಿಕ ಎಂದಿಗೂ ಜಗುಳಿ ಬಿದ್ದು ಹೋಗಲಾರವು, ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು, ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವುದಕ್ಕಿಂತ ಒಂದೇಯೊಂದುಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಒಫ್ ಮೇರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ

ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳಕರ ಬಂಧುಗಳು, ಬಸವನಗಲ್ಲಿ, ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಅದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ ಪಿ ದ್ವಾರಾ ರವಾನಿಸುವುದು

ಸೀಸೆಯೊಂದರ ಕ್ರಯ ರೂ. 1-0-0, ಅ. ವೆ. 0-4-0 ಬೇರೆ, 3 ಸೀಸೆಗಳ ಕ್ರಯ ರೂ 2-10-0, ಅ. ವೆ. 0-7-0 ಬೇರೆ.

ಸೂಚನೆ — ಅನೇಕ ದುರ್ವ್ಯಸನಿಕರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬಳಿಯಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸ ಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ, ಅವರಲ್ಲಿ ಇದು ಇಲ್ಲವೆಂದರೆ ತಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವದನ್ನು ಖುಹರುಬಾನ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಬೇಕಾದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ

ಅತೀ ಮನೋಹರವಾದ ಸುರಭಿಯು!

ಒಟ್ಟೋ ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೊಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈಚೀಲದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೋ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು: ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ.

ಸಣ್ಣ ಸೀಸೆಯ ಬೆಲೆ ರೂ 0-8-0. ಒರಿದು ಡ್ರಾಮಿನ (ಮೀಡಿಯಂ) ಸೀಸೆ 1ಕ್ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0 ಅಂಚೆಯ ವೆಚ್ಚ ಬೇರೆ 0-4-0. ಒಟ್ಟೋ ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12-0

ಅಮೇರಿಕದ ವಿಶಿಷ್ಟತೆ

ಪ್ರೊಫೆಸರ್ ಜೇಮ್ಸರವರ "ಇಲೆಕ್ಟ್ರೋ ಟೋನಿಕ ಪರ್ಲ್ಸ್" ಅಥವಾ ವಿದ್ಯುಚ್ಛಕ್ತಿಯ ವಾಜೀಕರಣ ಮೌಕ್ತಿಕಗಳು.



ಇವು ಶಕ್ತಿಹೀನತೆಯಿಂದ ಉಂಟಾಗುವ ರೋಗಗಳನ್ನು, ನಿದ್ರಾನಾಶವನ್ನೂ, ಪಕ್ಷವಾತಗಳನ್ನೂ, ವಾತೋನ್ಮಾದವನ್ನೂ, ಅಪಸ್ಮಾರವನ್ನೂ ಧಾತುದೌರ್ಬಲ್ಯವನ್ನೂ ವಾಸಿಮಾಡುತ್ತವೆ. ಕಳೆಗುಂದಿ ಬರುವ ಸ್ಮೃತಿಶಕ್ತಿಯನ್ನು ಉದ್ದೀಪಿಸುತ್ತವೆ ಬುದ್ಧಿಯ ಮತ್ತು ಮೆದುಳಿನ ಮೂಢತೆಯನ್ನು ಹೋಗಲಾಡಿಸುತ್ತವೆ; ಕಲಿಯುವದಕ್ಕೆ ಅಥವಾ ಕಾರ್ಯಗೈಯುವದಕ್ಕೆ ಬಿಡಲೊಲ್ಲದ ಅಶಕ್ತಿಯನ್ನು ಶಕ್ತಿರೂಪವಾಗಿ ಪರಿಣಮಿಸುವಂತೆ ಮಾಡುತ್ತವೆ. ಸರ್ವಾಂಗದಲ್ಲಿ ತೋರಿಬರುವ ಶ್ರಾಮವೂ, ಅಕಾಲಕಾಲದಲ್ಲಿ ಸಂಭವಿಸುವ ಗ್ಲಾನಿಯೂ ಅತಿಶ್ರಮದಿಂದ ಮತ್ತು ದುರ್ವ್ಯಸನಿಯಿಂದ ಉಂಟಾಗುವ ಕ್ಷೀಣಚೇತನೆಯೂ ಈ ಮುತ್ತುಗಳನ್ನು ಸೇವಿಸುವದರಿಂದ ಅಡಗಿಹೋಗುತ್ತವೆ. ಇವುಗಳಲ್ಲಿ ವೀರ್ಯದಾಯಿಗಳಾದ ಮತ್ತು ಮೆದುಳನ್ನು ಬೆಳೆಯಿಸಿ ವೃದ್ಧಿಗೈಯಲಾಪ ಪದಾರ್ಥಗಳಿರುವದರ ದೆಸೆಯಿಂದ ಇವು ವಿದ್ಯಾವ್ಯಾಸಂಗಗಳಿಗೂ, ಧರ್ಮೋಪದೇಶಕರಿಗೂ, ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಕೀಲರಿಗೂ ಗುಮಾಸ್ತರಿಗೂ, ಉಸ್ತಾದರಿಗೂ, ಪ್ರಾಯಿಕವಾಗಿ ಸಕಲ ಕಾರ್ಯಗಳಲ್ಲಿ ನಿರತರಾಗಿರುವ ಎಲ್ಲರಿಗೂ ಅಗತ್ಯವಾಗಿವೆ. ಶಾರೀರಕ ಪ್ರವೃತ್ತಿಯವರಿಗೆ ಮತ್ತು ಮಾನಸಿಕ ಪ್ರವೃತ್ತಿಯವರಿಗೆ ಒಂದೇ ತೆರನಾಗಿ ಅವಶ್ಯಕವಾಗಿರುತ್ತವೆ.

ವಾತಶೂಲದಲ್ಲಿ ಮತ್ತು ಮುಪ್ಪಿನಿಂದ ಉಂಟಾಗುವ ವೀರ್ಯಹೀನತೆಯಲ್ಲಿ ಈ ಮೌಕ್ತಿಕಗಳ ಗುಣವಾದರೋ ನಿಸ್ಸಂಶಯವು. ಇಂದ್ರಿಯಗಳ ಸುಖವೂ ಇವುಗಳ ಸೇವನೆಯಿಂದ ಕೂಡಲೇ ಲಭಿಸುತ್ತವೆ

ರೋಗಜನ್ಯವಾದ ಸ್ರಾವವನ್ನು ಗುಣಮಾಡಿ, ರೋಗದಿಂದ ಅಳಿದ ದೇಹಭಾಗಗಳನ್ನು ಇವು ಮರಳಿ ಚೇತನಗೈಯ್ಯುತ್ತವೆ. ರೋಗದಿಂದ ಮುರಿದು ಹೋದ ಅಥವಾ ಬಸವಳಿದು ಕುಂದಿದ ಅವಯವಗಳಿಗೆ ಇವು ಪುನಃ ಧಾತುಪುಷ್ಟಿಯನ್ನಿತ್ತು ಸಚೇತನಗೈಯುತ್ತವೆ. ಈ ಗುಳಿಗೆಗಳ ಅದ್ಭುತಕರವಾದ ಸುಫಲವು ಇವುಗಳನ್ನು ಸೇವಿಸುವದಕ್ಕೆ ತೊಡಗಿದ ದಿನದಿಂದಲೇ ಬೋಧೆಯಾಗುತ್ತದೆ. ಇವುಗಳನ್ನು ಸೇವಿಸಿದ ದಿನವೇ ನರಗಳಲ್ಲಿಯೂ ಬುದ್ಧಿಶಕ್ತಿಯಲ್ಲಿಯೂ ಚೇತನವು ಮೊಳೆತು ದೇಹದಲ್ಲಿ ಧೈರ್ಯ, ಬಲ, ಸುಖ, ಇವುಗಳ ಸಂಚಾರವಾಗುತ್ತದೆ. ಜೀರ್ಣಶಕ್ತಿಯು ಉದ್ದೀಪಿತವಾಗಿ ಹಸಿವು ಆಶ್ಚರ್ಯಕರವಾಗಿ ಆರೋಗ್ಯಕಾಲದಲ್ಲಿ ತೋರಿಬರುವದಕ್ಕಿಂತ ಹೆಚ್ಚಾಗಿ ತೋರಿಬರುತ್ತದೆ. "ಜಾಡಹೆ"ಯು ಕ್ರಮವನ್ನು ಅನುಸರಿಸುತ್ತದೆ; ಮುಖವು ಶುಭ್ರವಾಗಿ ರಕ್ತಚಲನದ ಕುರುಹುಗಳನ್ನು ಸರಿಯಾಗಿ ತೋರ್ಪಡಿಸುತ್ತದೆ; ಕಣ್ಣುಗಳು ಉಜ್ವಲವಾಗಿ ದೃಷ್ಟಿಯು ಪ್ರಥೆಯನ್ನು ಹೊಂದಿ ಸೂಕ್ಷ್ಮವಾಗುತ್ತದೆ; ಗತಿಯು ದೃಢವಾಗುತ್ತದೆ, ಶೀಲವು ಪ್ರಸನ್ನವಾಗುತ್ತದೆ, ಬುದ್ಧಿಯು ವಿಶೇಷವಾಗಿ ಅನಲಸವಾಗುತ್ತದೆ, ಸ್ಮೃತಿಶಕ್ತಿಯು ಗ್ರಾಹಿಯಾಗುತ್ತದೆ, ಮತ್ತು ದೇಹದ ಪುಷ್ಟಿಯು ವೃದ್ಧಿಯಾಗಿ ಶಕ್ತಿಯು ದಿನೇ ದಿನೇ ಮುಂಚಿನಂತೆಯೇ ತುಂಬಿಬರುತ್ತದೆ.

25 ಗುಳಿಗೆಗಳ ಸೀಸೆ 1ಕ್ಕೆ ಬೆಲೆ ರೂ. 1-4-0. 40 ಗುಳಿಗೆಗಳಿರುವ ಸೀಸೆ 1ಕ್ಕೆ ರೂ. 2-0-0 ಟಪ್ಪಾಲ್ ಖರ್ಚು ಸೀಸೆ ಒಂದಕ್ಕೆ ಆಣೆ 4.

ನಾವು ಕೇಳಿಕೊಳ್ಳದೆ ನಮಗೆ ಹಲವು ಮಹನೀಯರು ಬರೆದ ಪ್ರಮಾಣಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು.

ದಿವಾಕರ ಕೃಷ್ಣಾಜಿ ದಾಹರೀ, ರಾ. ಪಾರಸಾವನೀ, ತಾ, ರಾಮಟೇಕ, ಜಿ. ನಾಗಪುರ.—"ತಾವು ನಮಗೆ ಕೆಲವು ಸಮಯದ ಹಿಂದೆ ಕಳುಹಿಸಿದ "ಶಕ್ತಿವರ್ಧಕ" ಗುಟಿಕೆಗಳಿಂದ ನಮಗೆ ಉತ್ತಮವಾದ ಆರೋಗ್ಯಲಾಭವು ದೊರಕಿರುತ್ತದೆ; ಅವುಗಳ ಇನ್ನೊಂದು ಬಾಟಲಿಯನ್ನು ಕಳುಹಿಸಿಕೊಡಿರಿ."

2 ತುಕಾರಾಮ ಸಖಾರಾಮ್, ಕೇಶಿಯರ್, ಬಂಗಾಲ ನಾಗಪುರ ರೈಲ್ವೆ, ಗೋರಖಪುರ—ನಾನು ತಮ್ಮಿಂದ ಪ್ರೊ. ಜೇಮ್ಸರ "ವಿದ್ಯುತ್ ಶಕ್ತಿವರ್ಧಕ" ಗುಟಿಕೆಗಳ ಮೂರು ಕುಪ್ಪಿಗಳನ್ನು ತರಿಸಿಕೊಂಡಿದ್ದೆನು. ಅವುಗಳಿಂದ ನಾನು ಪುಷ್ಕಳವಾದ ಸೌಖ್ಯಲಾಭ ಹೊಂದಿರುವೆನು. ಅದ್ದರಿಂದ ಇನ್ನು ಎರಡು ಕುಪ್ಪಿಗಳನ್ನು ಕಳುಹಿಸಿಕೊಡಿರಿ."

3 ಅಮೀರ್ ವಲ್ಲದ ಮಹಮ್ಮದ ಭಾಯಿ ಇಬ್ರಾಹಿಮ್ ಪಾಟೀಲ್, ಪನವೇಲ್—"ತಾವು ಕಳುಹಿಸಿದ ಪ್ರೊ. ಜೇಮ್ಸರ ಗುಟಿಕೆಗಳಿಂದ ನನಗೆ ಆಶ್ಚರ್ಯಕಾರಕವಾದ ಗುಣವು ದೊರಕಿದೆ. ಅವನ್ನು ಪುನಃ ರವಾನಿಸಿರಿ"

4 ವಿ. ಆರ್. ಚಾಕ್ಕೊ, ಡಿಸ್ಟ್ರಿಕ್ಟ ಕೋರ್ಟ ವಕೀಲ್, ಕೊಟ್ಟಯಮ್, ತ್ರಾವಣಕೋರ ರಾಜ್ಯ.—"ಪ್ರೊ. ಜೇಮ್ಸರ ಗುಟಿಕೆಗಳ ಸೀಸೆಯೊಂದನ್ನು ತಮ್ಮಿಂದ ತರಿಸಿಕೊಂಡೆನಷ್ಟೇ. ಅವುಗಳನ್ನು ಉಪಯೋಗಿಸಿ ನಾನು ಒಳ್ಳೇ ಲಾಭವನ್ನು ಪಡೆದೆನು. ಇನ್ನೆರಡು ಸೀಸೆಗಳನ್ನು ಕಳುಹಿಸುವುದು.

5 ಮಾನಜೀ ನರಸಿಂಗರಾವ್, ಸಂಸ್ಥಾನ ಪಟಿನ.—ಪ್ರೊ. ಜೇಮ್ಸರ ಗುಟಿಕೆಗಳಿಂದ ನಾನು ಒಳ್ಳೆ ಗುಣವನ್ನು ಹೊಂದಿರುವದರಿಂದ, ಅವುಗಳ ಇನ್ನೆರಡು ಸೀಸೆಗಳನ್ನು ರವಾನಿಸಿರಿ.

THE ANGLO-INDIAN DRUG & CHEMICAL COMPANY, 16 MARKET BOMBAY 2.

ಪ್ರಧಾನ ಏಜಂಟರು: **ದಿ ಊಲನ್ ಮಾರ್ಟ್, ಮಂಗಳೂರು ದ. ಕನ್ನಡ**

Printed & Published by V. S. Kamath at the Mangalore Trading Association's Sharada Press, Mangalore

Registered No M. 408

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ:—ವರುಷ ೧ಕ್ಕೆ ರೂ. 1—4—0. ಟಪ್ಪಾಲು ಹಾಸಲು ಸೇರಿ ರೂ. 2—1—0.

ಪುಸ್ತಕ IX | ಮಂಗಳೂರು ತಾ. 2ನೇ ಜುಲೈ ಶುಕ್ರವಾರ 1915. | ಸಂಚಿಕೆ 27

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು

ಸೆಶಿಂತಾನ್.

(ರಿಜಿಸ್ಟರ್ಡ್)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೆಶಿಂತಾನದ ಸೇವನೆಯಿಂದುಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

1 ಇದು ಶಕ್ತಿಯನು ವೃದ್ಧಿ ಪಡಿಸುವುದಲ್ಲದೆ ತಲೆಯನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು

2 ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತು ಮೆದುಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು

3. ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತ ಬಂದಲ್ಲಿ ತಿಂದನ್ನವು ಜೀರ್ಣವಾಗುವದಲ್ಲದೆ, ಕಾಲಪ್ರವೃತ್ತಿಯು ಕ್ರಮವಾಗಿ ಆಗುತ್ತದೆ ಯಾವರೋಗಕ್ಕೂ ಆಸ್ಪದವುಂಟಾಗುವುದಿಲ್ಲವು

4. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ, ಕಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛ ಗೊಳಿಸುವುದು.

5. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ ಎಲ್ಲ ಉದ್ಯೋಗದ ದೊಡ್ಡ ಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವವು.

6. ಬೇಸಿಗೆ ಮತ್ತು ಚಳಿಗಾಲಗಳಲ್ಲಿ ಎಲ್ಲ ತರದ ರೋಗವನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು

7. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು

ಆದುಕಾರಣ ಇಂತಹ ಗುಣಕಾರಿಯಾದ ಸೆಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ

45 ಮಾತ್ರೆಗಳ ಪೊಟ್ಟಣ 1ಕ್ಕೆ	0—2—0	200 ಮಾತ್ರೆಗಳ ಪೊಟ್ಟಣ 1ಕ್ಕೆ	0—7—0	80 ಮಾತ್ರೆಗಳ ಟಿನ್ 1ಕ್ಕೆ	0—4—0	550 ಮಾತ್ರೆಗಳ ಮರದಪೆಟ್ಟಿಗೆ 1ಕ್ಕೆ	1—0—0
95 ,, ,, ,,	0—4—0	200 ,, ಟಿನ್ ,,	0—9—0	100 ,, ಶೀಶೆ ,,	0—4—6	1200 ,, ,,	,, 2—0—0

1 ರೂಪಾಯಿಗೆ ಕಡಿಮೆಯಾಗಿ ವಿ. ಪಿ. ಮೂಲಕ ಕಳುಹಿಸಲ್ಪಡುವುದಿಲ್ಲವು. ಮತ್ತು ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

☞ ಭರತಖಂಡ, ಬರ್ಮ, ಮತ್ತು ಸಿಲೋನ್ ಈ ಪ್ರಾಂತ್ಯಗಳ ಎಲ್ಲಾ ಭಾಗದಲ್ಲೂ ಏಜಂಟರು ಬೇಕಾಗಿದೆ.

ಸೋಲ್ ಏಜಂಟ್ಸ್—ಸೆಶಿಂತನ್ ಡಿಪೋ,

ಪ್ರಿನ್ಸೆಸ್ ಸ್ಟ್ರೀಟ್ ಬೊಂಬಾಯಿ ನಂ. 2.

ಯಂ. ಯಸ್. ರಾವ್ ಕಂಪೆನಿ.,

ಬುಕ್‌ಸೆಲರ್ಸ್, ಸ್ಟೇಷನರ್ಸ್ ಮತ್ತು ಕಮಿಷನ್ ಏಜಂಟ್ಸ್,

ಅವಿನ್ಯೂರೋಡ್, ಬೆಂಗಳೂರು ಸಿಟಿ.

M. S. RAO & CO.,

BOOK-SELLERS ETC.

AVENUE ROAD, BANGALORE CITY.

ಈವರಿವಿಗೆ ಇದ್ದ ಯಂ. ಸುಬ್ಬರಾವ್ ಬ್ರದರ್ಸ್, ಶಂಕರಪುರಂ, ಬೆಂಗಳೂರು ಸಿಟಿ—ಎಂಬ ವಿಳಾಸವನ್ನು ಮೇಲ್ಕಂಡಂತೆ ಬದಲಾಯಿಸಿದ್ದೇವೆ.

ನಮ್ಮಲ್ಲಿ ಎಲ್ಲಾ ವಿಧವಾದ ಕನ್ನಡ ಕಥೆಗಳೂ, ಬಿ. ವೆಂಕಟಾಚಾರ್ಯರಿಂದ ರಚಿತವಾದ ನಾವಿಲ್‌ಗಳೂ, ಗವರ್ನಮೆಂಟ ಸ್ಕೂಲು ಪುಸ್ತಕಗಳೂ ದೊರೆಯುತ್ತವೆ. ಪುಸ್ತಕದ ಪಟ್ಟಿ ಹೊಸದಾಗಿ ಪ್ರಿಂಟಾಗಿದೆ. ಉಚಿತ.

M. S. RAO & Co.,

Please note:—We have changed our address from—M. Subba Rao Bros, Book-Sellers, Shankarapur Bangalore City to—

M. S. RAO & Co.,

Book-Sellers, Stationers & Commission Agents,

AVENUE ROAD, BANGALORE CITY.

BOX LOCKS. PADLOCKS.





ಧಾರಣೆ ಸುಲಭ! **ಅಲಿಗರ್ ಬೀಗಗಳು.** ಧಾರಣೆ ಸುಲಭ!

ಬಲಭದ್ರವಾಗಿಯೂ, ಭಾರವಾಗಿಯೂ ಇರುವುದು ಒಂದರ ಬೀಗದಕ್ಕೆ ಮತ್ತೊಂದಕ್ಕೆ ಆಗುವದಿಲ್ಲ. ನೋಡುವುದಕ್ಕೆ ಅಂದವಾಗಿಯೂ ಇರುವುದು ಇದೇ ಮಾದರಿ ಬೀಗಗಳನ್ನು ಇಂಜನಿಯರ್ ಇಲಾಖೆಗಳಿಗೂ, ಬ್ಯಾಂಕುಗಳಿಗೂ, ಸರಕಾರಿ ಆಫೀಸುಗಳಿಗೂ ಸಪ್ಲೈಮಾಡಿದೆ

ನಾಲ್ಕು ಚಕ್ರಗಳಿರುವ ಬೀಗಗಳು

ನಂಬ್ರ	1	2	3	4	5
	0–12–0	0–15–0	1–4–0	1–10–0	...

ಆರು ಚಕ್ರಗಳಿರುವ ಬೀಗಗಳು

1–2–0 1–8–0 2–4–0 3–0–0 3–8–0

ಲ್ವರ್ ಬೀಗಗಳು

–04–00–5–0 0–6–0 0–8–0 0–10–0

ಟ್ರಂಕುಗಳಿಗೆ ಹಾಕುವ ಕೊಂಡಿ ಬಗ್ಗಿಸಿರುವ ಬೀಗ ಒಕ್ಕೆ 0–13–0

೩, ೪, ೫ನೇ ನಂಬರು ಬೀಗಗಳನ್ನು ಬಾಗಲುಗಳಿಗೂ ಕಬ್ಬಿಣದ ಪೆಟ್ಟಿಗೆಗಳಿಗೂ ಉಪಯೋಗಿಸಬಹುದು. ಏಜೆಂಟರುಗಳಿಗೆ ಕಮಿಷನ್ ದೊರೆಯುತ್ತೆ ಹಾಸಲು ಪ್ರತ್ಯೇಕ

ಮರದ ಪೆಟ್ಟಿಗೆಗಳಿಗೂ, ಮೇಜುಗಳಿಗೂ, ಬೀರೂಗಳಿಗೂ ಹಾಕುವ ೪ ಚಕ್ರಗಳಿರುವ ಬೀಗಗಳು ಒಕ್ಕೆ 1–8–0, 1–12–0.

ವಿಳಾಸ.— ಎಚ್ ಎನ್ ರಾವ್ ಅಂಡ್ ಬ್ರದರ್ಸ್,

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಶಾಶ್ವತವಾದ ಆರೋಗ್ಯವನ್ನು

ಹೊಂದುವದಕ್ಕೆ ಸುಲಭವಾದ ಮಾರ್ಗವು

ಮದನಮಂಜರಿ ಮಾತ್ರೆಗಳು

ಉಪಯೋಗಿಸುವದೇ ಆಗಿರುವದು ಈ ಮಾತ್ರೆಗಳು ಅಜೀರ್ಣವು ಮಲಬಂಧ, ಮನೋವ್ಯಥೆ, ಜ್ಞಾಪಕಶಕ್ತಿ ಇಲ್ಲದಿರುವದು, ನರಗಳ ಬಲಹೀನತೆ, ಅಶಕ್ತಿ, ಸ್ವಪ್ನಸ್ಖಲಿತ, ಬಹುಮೂತ್ರ, ಮೂತ್ರಕೋಶ ಸಂಬಂಧವಾದ ವ್ಯಾಧಿಗಳು, ನಪುಂಸಕತ್ವ ಮುಂತಾದ ವ್ಯಾಧಿಗಳನ್ನು ಶೀಘ್ರದಲ್ಲಿಯೇ ಬೇರು ಸಹಿತವು ಕಿತ್ತು ಹಾಕಿ ಪುರುಷರಿಗೆ ಸಂತತ ಪುರುಷತ್ವವನ್ನು ಕೊಡುವವು ಇದು ಸಾಟಿಯಿಲ್ಲದ ಟಾನಿಕ್ಕು ಔಷಧಿಯಾಗಿರುತ್ತದೆ ಕಳೆದ 25 ವರುಷ ಕಾಲದಲ್ಲಿ ಸಾವಿರಾರು ರೋಗಿಗಳನ್ನು ಸ್ವಸ್ಥಪಡಿಸಿದೆ ನಿಮ್ಮನ್ನು ಕೂಡ ಸ್ವಸ್ಥ ಮಾಡುವದು 40 ಮಾತ್ರೆಗಳ ಡಬ್ಬಿ ಕ್ರಯ ರೂ 1—0—0

ಉಚಿತ ಕ್ರಯವು ಇಲ್ಲ ಹಾಸಲು ಇಲ್ಲ

144 ಪುಟಗಳುಳ್ಳ ವೈದ್ಯಸಾರಸಂಗ್ರಹವಾದ

ವೈದ್ಯವಿದ್ಯ

ಪುಸ್ತಕದಲ್ಲಿ ಶಾಶ್ವತವಾದ ಆರೋಗ್ಯವನ್ನು ಪಡೆಯಲು ಅತ್ಯವಶ್ಯಕವಾದ ವಿಷಯಗಳು ಭರಿತವಾಗಿವೆ. ನಿಮ್ಮ ವಿಳಾಸವನ್ನು ತಿಳಿಸಿದರೆ ನಿಮಗೆ ಒಂದು ಪ್ರತಿ ಉಚಿತವಾಗಿ ಕಳುಹಿಸಲ್ಪಡುವದು

ರಾಜವೈದ್ಯ ನಾರಾಯಣಜಿ ಕೇಶವಜಿ

20 ಚೀನಾ ಬಜಾರ್ ರೋಡ್,

ಮದರಾಸು.

ಪಾಳ್ಯದ ವೆಂಕಟಾಚಲ ಪಂಡಿತರ

ಸಿದ್ಧೌಷಧಗಳು.

೧

ಲೋಕಾಮಯಹರು ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ಚಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಊದಿಕ (ಬಾರ), ಮೈ ನಡುಕ, ಶೀತ



ವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ. ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಮುಟ್ಟು ಶೂಲೆ, ಮಕ್ಕಳ ಎಳವು, ಜ್ವರ, ಸಚ್ಚುಜ್ವರ, ಕ್ಷಯತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ, 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1ರಿಂದ 12 ಕುಪ್ಪಿ ವರೆಗೆ ಪೋಸ್ಟೇಜು 4 ಆಣೆ.

೨. ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವಿನಿಯಾಗಿದೆ. ಕೈಬಿಟ್ಟಿತೆಂದು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿ! ಒಂದೇ ಒಂದು ಬುಡ್ಡಿಯು ನಿಮ್ಮಲ್ಲಿರಲಿ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ

ಅನುಪಾನ ಪತ್ರವು ಔಷಧದೊಡನೆ ಇರುವುದು ಬೆಲೆ ರೂ. 1, ಟಪಾಲ್ ಖರ್ಚು ಬೇರೆ ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ತಮ್ಮ ವಿಳಾಸ:— "ಶ್ರೀ ಸೀತಾರಾಘವ ವೈದ್ಯಶಾಲಾ"

ಮೈಸೂರು

ಬಹು ಮನೋಹರ! ಅದ್ಭುತ!

ವಸಂತ ಕೋಕಿಲ್

ಎಂಬ

ನೂತನವಾದ ಹೊಸ ಕಾದಂಬರೀ ಕಥೆ.

ರಸಿಕ ಶಿರೋಮಣಿಗಳೇ,

"ವಸಂತ ಕೋಕಿಲ" ಎಂಬ ಇಂದ್ರಜಾಲ ಮಹೇಂದ್ರಜಾಲಗಳನ್ನು ಸ್ಪಷ್ಟವಾಗಿ ತೋರಿಸುವ ಅತ್ಯದ್ಭುತ ಚಮತ್ಕಾರವಾದ ಹೊಸ ಕಾದಂಬರೀ ಕಥೆಯು ಅಚ್ಚಾಗಿ ಈಗ ತಾನೇ ಬಿಕರಿಗೆ ಸಿದ್ಧವಾಗಿದೆ ಈ ಗ್ರಂಥದಲ್ಲಿ ಶೃಂಗಾರಾದಿ ನವರಸಗಳು ತುಂಬಿ ತುಳುಕುತ್ತಿವೆ ಈವರೆಗೆ ಪ್ರಚುರವಾಗಿರುವ ಎಲ್ಲಾ ಕಥೆಗಳಿಗಿಂತಲೂ ಮೀರಿದಷ್ಟು ರಸ್ಯವುಳ್ಳದ್ದಾಗಿದೆ. ವರ್ಣನಾಭಾಗಗಳು ಎಲ್ಲರಿಗೂ ತಿಳಿಯುವ ಹಾಗೆಯೂ ಶ್ಲಾಘಾವಹವಾಗಿಯೂ ಇವೆ. ಭಾಷಾಶೈಲಿಯು ಅತ್ಯುತ್ತಮವಾಗಿದೆ. ಓದುವದಕ್ಕಾರಂಭಿಸಿದ ವಾಚಕರ ಮನಸ್ಸನ್ನು ಸಂಪೂರ್ಣವಾಗಿ ಆಕರ್ಷಿಸಿ ಮುಗಿಯುವವರೆಗೂ ಆವೇಶವನ್ನುಂಟುಮಾಡಿ ಉಲ್ಲಾಸಗೊಳಿಸುವ ಹಾಗಿದೆ. ತಮ್ಮ ಜ್ಞಾನ, ಭಕ್ತಿ, ವೈರಾಗ್ಯ ಮೊದಲಾದ ವೇದಾಂತ ವಿಷಯಗಳನ್ನೂ ಚೆನ್ನಾಗಿ ತಿಳಿಸುತ್ತದೆ. ಕಥಾ ಸಂವಿಧಾನವು ಹೊಸ ಮಾದರಿಯಾಗಿ ಆಶ್ಚರ್ಯಕರವಾಗಿದೆ. ಪ್ರಕಟವಾಗಿ ಶೃಂಗಾರ ರಸವನ್ನು ವರ್ಣಿಸದೆ ಇರುವುದರಿಂದ ಎಲ್ಲಾ ಸ್ತ್ರೀಜನರಿಗೆ ಓದುವುದಕ್ಕೆ ಅರ್ಹವಾಗಿದೆ. ಇದರಲ್ಲಿ ೯ ಪ್ರಕರಣಗಳೂ ೨೨೮ ಪುಟಗಳೂ ಇವೆ ಉತ್ತಮವಾದ ಕಾಗದ, ಸುಂದರವಾದ ಅಕ್ಷರ, ತಪ್ಪಿಲ್ಲದೆ ಸುಂದರವಾಗಿ ಮುದ್ರಿಸಿದೆ ಬೇಕಾದವರೆಲ್ಲರೂ ಕೆಳಗಣ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಕ್ರಯ ರೂ. ೧—೦—೦ ಮಾತ್ರ.

ವಿಳಾಸ:— ಟಿ. ಎ. ಮಾಣಿಕ್ಯಂ ಶೆಟ್ಟಿ,

ಮಾಣಿಕ್ಯಮಂದಿರ ಬುಕ್ ಡಿಪೋ,

ಬೆಂಗಳೂರು

ಮಾರಾಟಕ್ಕೆ ಸಿದ್ಧವಿರುವುದು! ಮಾರಾಟಕ್ಕೆ ಸಿದ್ಧವಿರುವುದು!

ವೇಂಕಟಗಿರಿ ಮಹಾತ್ಮ್ಯೆ.

ಪದ್ಮಾವತೀ ಕಲ್ಯಾಣದಿಂದ ಪೂರ್ಣವಾಗಿರುವುದು.

(ಸಂಸ್ಕೃತ ಭವಿಷ್ಯತ್ಪುರಾಣದಿಂದ)

ಮಂಗಳೂರಲ್ಲಿ ಸ್ವರ್ಗಸ್ಥರಾಗಿ ಹೋದ ಮುಲ್ಕಿ ಕವಿ ರಾಮಕೃಷ್ಣಯ್ಯನವರಿಂದ ಭಾಮಿನಿ ಷಟ್ಪದಿಯಲ್ಲಿ ಕನ್ನಡಿಸಲ್ಪಟ್ಟಿರುವುದು.

959 ಪದ್ಯಗಳಿರುವ 15 ಅಧ್ಯಾಯಗಳಿಂದ ಕೂಡಿರುವುದು. ಕಾವ್ಯರಚನೆಯು ಬಹು ಮೃದುರವೂ ಶುಲಭವೂ ಆಗಿರುವುದರಿಂದ ಸರ್ವರಿಗೂ ಅನುನಿತ್ಯದ ಪಠಣಪುಸ್ತಕವಾಗಿರಲು ಉಚಿತವಾಗಿರುವುದು. ವೆಂಕಟೇಶನು ಗಿರಿಯಲ್ಲಿ ನಡೆಸಿದ ಅದ್ಭುತ ವೃತ್ತಾಂತಗಳು ವಾಚಕರ ಮನಃಖಚಿತವಾಗುವಂತೆ ಈ ಗ್ರಂಥವು ಯಥೋಚಿತ ಚಿತ್ರಪಟಗಳಿಂದ ಕೂಡಿರುವುದು. ಕ್ರಯ ಪ್ರತಿಯೊಂದಕ್ಕೆ ರೂ. 1—8—0. ಟಪ್ಪಾಲು ಹಾಸಲು ಬೇರೆ.

ಕವಿ ಎಂಡ್ ಸನ್ಸ್,
ಮಂಗಳೂರು.

ಡಾಕ್ಟರ್ ನವರತ್ನರ ಪಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ. 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ. ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ. ಪ್ರಯೋಗಿಸಲು ಸುಲಭವಾಗಿದೆ. ಪರಿಮಳ, ಕೆಡದ ಬಣ್ಣ, ಬಹಳ ಅಗ್ಗ. ಕಪ್ ಮತ್ತು ಬ್ರಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ. 1. ಟಪ್ಪಾಲು ಚಾರ್ಜು 0—4—0.

Dr. Navaratna & Sons,
Kalbadevi Road. BOMBAY.

ಏಜಂಟರು:—ದಿ. ಊಲನ್ ಮಾರ್ಟ್,
ಮಾಧವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

---

33. ನಿಕಲ್ ಲೋಹದ ಗಡಿಯಾರಗಳು ನಂ. 110.

ವಿಲಾಯಿತಿಗೆ ಸ್ವತಃ ಬರೆದು ತರಿಸಿದ್ದೇವೆ. ನಮ್ಮ ಹಿಂದೂ ಜನರು ಒರಟುತನದಲ್ಲಿ ಗಡಿಯಾರವನ್ನು ಉಪಯೋಗಿಸುವಂಥಾವರೆಂಬುವುದನ್ನೂ ನಾವು ಬಲ್ಲೆವು. ಅದಕ್ಕೆ ತಗ್ಗದಂಥಾ ಗಡಿಯಾರವನ್ನು ತಯಾರು ಮಾಡಿಸಿ ತರಿಸಿದ್ದೇವೆ. ಬೆಳ್ಳಿ ಗಡಿಯಾರವಾಗಿದ್ದರೆ ಒಂದಕ್ಕೆ ಮೂರರಷ್ಟು ಬೆಲೆ ಆಗುತ್ತಿತ್ತು, ಕೀಲೆಸ್ ಓಪನ್ ಫೇಸು ಡಯಲ್.

ಅಸಲು ಕ್ರಯ ೧೦—೦—೦. ಈಗ ಮಾರುವ ಕ್ರಯ ೫—೮—೦.

34. ಡಿನ್‌ಪೋರ್ಟ್ ರಿಸ್ಟ್ ವಾಚ್ ನಂ. 160.

ಲಿವರ್‌ಜಾತಿ. ಬೆಲೆಯಲ್ಲಿ ಕಡಿಮೆಯಾದರೂ ಗುಣದಲ್ಲಿ ಭಾರಿಯಾದದ್ದು. ಬೆಲೆಯುಳ್ಳ ಚಿನ್ನದ ಗಡಿಯಾರವನ್ನು ಟೈಂ ತೋರಿಸುವುದರಲ್ಲಿ ಸೋಲಿಸಿಬಿಡುತ್ತದೆ. ಯೋಗ್ಯತೆ ಮೀರಿದ ಕೆಲಸಮಾಡುತ್ತದೆ. ಬಡತನದಲ್ಲಿ ಭಾರಿಗುಣ ಉಳ್ಳದ್ದು.

ಅಸಲು ಕ್ರಯ ೧೨—೦—೦. ಈಗ ಮಾರುವ ಕ್ರಯ ೯—೮—೦,

35. ಪಕ್ಕಾಪಾಕೆಟ್ ವಾಚ್ ನಂ. 970.

ಕೀಲೆಸ್ ಓಪನ್ ಡಯಲ್ ಪಕ್ಕಾವಾಚೇ ಸರಿ. ಬಡವರ ಸ್ನೇಹಿತ, ಭಾಗ್ಯವಂತರ ಸೇವಕ, ಬೆಲೆ ಕಡಿಮೆ ಎಂದು ಕಳದು ಹಾಕಬಾರದು, ಆಳು ಮಾಡುವ ಕೆಲಸ ಅರಸನು ಮಾಡುವುದಿಲ್ಲವು.

ಅಸಲು ಕ್ರಯ ೧೦—೦—೦. ಈಗ ಮಾರುವ ಕ್ರಯ ೬—೦—೦.

36. ರಾಸ್ಕೋಪ್ ಸಿಸ್ಟಂ ವಾಚ್ ನಂ. 520.

ಓಪನ್‌ಫೇಸ್ ಕೀಲೆಸ್ ಲೀವರ್ ಸಂಬೋ ಮಾರ್ಕ್ ಉಳ್ಳದ್ದು. ಬೆಲೆಯುಳ್ಳ ಗಡಿಯಾರವು. ಇದು ಎರಡು ಒಂದೇ ಆದರೂ ವಜ್ರದ ಸ್ಕ್ರೂ ಮುತ್ತಾದ್ದು ಮಾತ್ರವೇ ಬೆಲೆವುಳ್ಳ ಗಡಿಯಾರದಲ್ಲಿ ಹೆಚ್ಚು. ನೋಡುವುದಕ್ಕೆ ಇದರಲ್ಲಿಯೂ ಸೌಂದರ್ಯ ಕಡಿಮೆಯಿಲ್ಲ ಮಜಬೂತಿನಲ್ಲಿ ಇದು ಹೆಚ್ಚು. ಗುಣದಲ್ಲಿಯೂ ಹೆಚ್ಚು.

ಅಸಲು ಕ್ರಯ ೧೦—೦—೦. ಈಗ ಮಾರುವ ಕ್ರಯ ೬—೦—೦.

ಈಡನ್ ಫಾಸ್ಟರ್ ಎಂಡ್ ಕೊ.
ಸಾವುಕಾರಪೇಟೆ, ಮದರಾಸು.

Eden Foster & Co.,
Sowcarpet, MADRAS.

ಕರ್ಣಾಟಕ ವೃತ್ತ ಮತ್ತು ಧನಂಜಯ.

ಕಳೆದ 25 ವರ್ಷಗಳಿಂದ ಭಾಷಾ ಸೇವೆಯನ್ನೂ ದೇಶ ಸೇವೆಯನ್ನೂ ಮಾಡುತ್ತಿರುವ ಈ ವಾರಪತ್ರಿಕೆಯು ಧಾರವಾಡದಲ್ಲಿ ಪ್ರತಿ ಮಂಗಳವಾರವೂ ಪ್ರಕಟಿಸಲ್ಪಡುವದು ಲೋಕವ್ಯವಹಾರದ ಉಪಯುಕ್ತ ವಿಷಯಗಳ ಸದಭಿಪ್ರಾಯವನ್ನು ಜನರಲ್ಲಿ ಉಂಟುಮಾಡುವಂಥ ಚಲೋ ಸ್ಫುಟ ಲೇಖಗಳುಳ್ಳ ಮುಂಬಯಿ ಕರ್ಣಾಟಕದ ಉತ್ತಮ ತರಗತಿಯ ಈ ಪತ್ರವನ್ನು ದಕ್ಷಿಣಕನ್ನಡದವರೂ ಓದುವದು ಅಗತ್ಯ.

ದೊಡ್ಡ ರೋಯಲ್ ಸ್ಯಾಜಿನ ಈ ಪತ್ರಿಕೆಗೆ ವಾರ್ಷಿಕ ಚಂದಾ ಮೊಬಲಗು ಟಪ್ಪಾಲು ಹಾಸಲು ಸೇರಿ ರೂ. ೨—೪—೦ ಆಗಿರುತ್ತದೆ; ಚಂದಾದಾರರಾಗಿ ಸೇರಲಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವದು.

ಮ್ಯಾನೇಜರ್, ಕರ್ಣಾಟಕ ವೃತ್ತ ಮತ್ತು ಧನಂಜಯ,
ಮಂಗಳವಾರಪೇಟೆ, ಧಾರವಾಡ.

ಮಾರಾಟಕ್ಕೆ ಸಿದ್ಧವಿದೆ! ನೂತನ ಸಂಗ್ರಹ!!

ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ

ಮತ್ತು

ಭೂತಾಳಪಾಂಡ್ಯರಾಯನ ಅಳಿಯಕಟ್ಟು

ಈ ನವೀನ ಗ್ರಂಥದಲ್ಲಿ ಪರಶುರಾಮಾವತಾರದ ಕಥೆಯೂ, ಪುಳಿನಾಪುರ ಮಹಾತ್ಮೆಯೂ, ಭರತಖಂಡದ ಕ್ಷತ್ರಿಯ ರಾಜವಂಶಾವಳಿಯೂ, ಧರ್ಮರಾಯನ ನಂತರ ಕಲಿಯುಗದಲ್ಲಿ ರಾಜ್ಯವಾಳಿದ 30 ಅರಸರ ಹೆಸರುಗಳೂ, ಕಾಲಗಳೂ ಪರಶುರಾಮ ಸೃಷ್ಟಿಗೆ ಸೇರಿದ 77 ದ್ವೀಪಗಳೂ, ಕನ್ನಡ ಜಿಲ್ಲೆಯ ಪೂರ್ವರಾಜರ ಸಂತತಿಯೂ, ಅವರು ಆಳಿದ ವರ್ಷಗಳೂ ಹೆಸರುಗಳೂ, ಕನಕವರ್ಮ ವೀರವರ್ಮರ ಚರಿತ್ರೆಯೂ, ವೀರವರ್ಮನು ಮಯೂರವರ್ಮನಾಗಿ ಬಂಟರ ಮತ ಸ್ಥಾಪಿಸಿದ ಕಥೆಗಳೂ, ಮಯೂರವರ್ಮನು ಮಾರ್ಕಾಂಡೇಯರಿಂದ ರಾಜನೀತಿಗಳನ್ನು ಕೇಳಿದ ಕಥೆಯೂ, ಅಹಿಕ್ಷೇತ್ರದಿಂದ ಬ್ರಾಹ್ಮಣರನ್ನು ತರಿಸಿದ ಕಥೆಯೂ, ಬ್ರಾಹ್ಮಣರಿಗೆ 32 ಗ್ರಾಮಗಳಲ್ಲಿ ನೇಮಿಸಿದ 326 ಥೇವಗಳು (ಜನನಗಳೂ) ಅವರಿಗೆ ನೇಮಿಸಿದ ಬಹುಮಾನ ಮರ್ಯಾದೆಗಳೂ ಕೂಟ ಮರ್ಯಾದೆಗಳೂ, ಜೈನರಿಗೂ ಬ್ರಾಹ್ಮಣರಿಗೂ ದ್ವೇಷದ ಕಾರಣಗಳೂ, ಭೂತಾಳಪಾಂಡ್ಯನ ಪೂರ್ವಚರಿತ್ರೆಯೂ, ದೇವಪಾಂಡ್ಯನ ಹಡಗಿನ ವಿವರಗಳೂ, ಭೂತಾಳಪಾಂಡ್ಯನ ಪೂರ್ಣಕಥೆಯೂ, ಭೂತರಾಜನಾದ ಕುಂಡೋದರನ ಪ್ರತಾಪಗಳೂ, ಭೂತಾಳಪಾಂಡ್ಯನ ಪಟ್ಟಾಭಿಷೇಕವೂ, ದೇವಪಾಂಡ್ಯನ ಹಡಗಿನ ವ್ಯಾಪಾರದ ಕಥೆಯೂ ಅಳಿಯ ಕಟ್ಟು ಆದ ಕಾರಣವು ಭೂತಾಳಪಾಂಡ್ಯನು ನೇಮಿಸಿದ 14 ಕಟ್ಟು, 16 ಕಟ್ಟಳೆಗಳೂ, ಭೂತಾಳಪಾಂಡ್ಯನ ವಿವಾಹವೂ, ಕುಂಡೋದರನು ಮಹಿಷಾಸುರನಾದ ಕಥೆಯೂ ಭೂತಾಳಪಾಂಡ್ಯನು ಮಕ್ಕಳಿಗೆ ವಿಂಗಡಿಸಿದ ಸ್ಥಳ ಮಾನಮರ್ಯಾದೆಗಳೂ, ಅವನ ನಂತರ ಅಳಿಯ ವಿದ್ಯುಮ್ನಪಾಂಡ್ಯನ ಆಳಿಕೆಯೂ, ಆತನು ತನ್ನ ಮಕ್ಕಳಿಗೆ ವಿಂಗಡಿಸಿದ ಮಾನಮರ್ಯಾದೆಗಳೂ, ಚೌಟ ಬಂಗರ ಸಂಸ್ಥಾನದ ನಗರಗಳೂ, ಸ್ಥಳ ನಾಮಾವಳಿಗಳೂ, ಕೇರಳದ 43 ಜಾತಿಗಳೂ, ಹೋಬಳಿ ಮನೆತನಗಳೂ, ಮರ್ಯಾದೆಗಳ ಶಾಸನವೂ, ಪೂರ್ವ ಮರ್ಯಾದೆಗಳ ಕ್ರಮವೂ, 2ನೇ "ಭೂತಾಳಪಾಂಡ್ಯ"ನ ಚರಿತ್ರೆಯೂ, ಅಳಿಯಸಂತಾನದ 60 ಬಳಿಗಳೂ, ಚೌಟ ಬಂಗರ ಸಂಸ್ಥಾನದ ಮಾಗಣೆ, ಶೀಮೆ, ಬಳ ಅರಸರು, ಅವರ ಸ್ಥಳ ಮಾನಮರ್ಯಾದೆಗಳು ವಗೈರೆಯೂ ಜೈನ ಬಂಟರ 60 ಜನನ (ನಾಮಕೀರ್ತಿಗಳೂ) 7 ರಾಜದೈವಗಳ ಚರಿತ್ರೆಯೂ, ಉಡ್ಪಿಯ ಇತಿಹಾಸ, ವಿಜಯನಗರದ ಆಡಳಿತೆ ಕಂಥಾಯಕ್ರಮ, ಪೂರ್ವದ ಕೆಲವು ಸಂಗ್ರಹಗಳು, ಬಂಗಾಡಿ ತಾಮ್ರಶಾಸನ, ಪಲ್ಲಿಪಾಡಿ ಶಿಲಾಶಾಸನ, ಉಳ್ಳಾಲ ತಾಮ್ರಶಾಸನ, ಬಂಟಕಲ್ಲಿನ ಶಿಲಾಶಾಸನ, ನಂದಳ್ಕೆ ತಾಮ್ರಶಾಸನ, ವೇಣೂರಿನ ತಾಮ್ರಶಾಸನ, ಅನುಭವಗಳ ಸಂಗ್ರಹ, ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ದೇವಸ್ಥಾನಗಳು, ಬಾರ್ಕೂರು ಪಂಚಲಿಂಗೇಶ್ವರ ದೇವಸ್ಥಾನದ ಮರ್ಯಾದೆ ಪಟ್ಟಿ, ಮೊಗಲ್ ರಾಜರ ವಂಶಾವಳಿ, ಭರತಖಂಡಕ್ಕೆ ಅನ್ಯರಾಜರ ಪ್ರವೇಶ ಕಾಲಗಳು, ಈ ಜಿಲ್ಲೆಯ ಮಹನೀಯರ ಪಟ್ಟಿ, ಶ್ರೀಮನ್ ಪಂಚಮ ಜಾರ್ಜ ಬಾದಶಹರ ಚರಿತ್ರೆ ವಗೈರೆ ಅನೇಕಾನೇಕ ಸಂಗ್ರಹಗಳು ಭರಿತವಾದ ನವೀನ ಗ್ರಂಥ. 296 ಪುಟಗಳು ಭರಿತವಾಗಿ ಸದಾ ಕೈಯಲ್ಲಿರುವುದಕ್ಕೆ ಅನುಕೂಲವಾದ ಈ ಪುಸ್ತಕವು ಅಳಿಯಕಟ್ಟಿನವರಿಗೂ ಮಕ್ಕಳ ಕಟ್ಟಿನವರಿಗೂ ಶಾಲಾ ಉಪಾಧ್ಯಾಯರುಗಳಿಗೂ ವಿದ್ಯಾರ್ಥಿಗಳಿಗೂ ಸರ್ವರಿಗೂ ಅತ್ಯಗತ್ಯವುಳ್ಳದ್ದಾಗಿದೆ. **ಪ್ರತಿ ಒಂದಕ್ಕೆ ರೂ. 1—4—0.**

ಹೆಚ್ಚಿಗೆ ಪ್ರತಿಗಳನ್ನು ಕೊಂಡುಕೊಳ್ಳುವವರಿಗೂ ವ್ಯಾಪಾರಸ್ಥರಿಗೂ ಒಳ್ಳೇ ಕಮಿಷನ್ ಕೊಡಲಾಗುವದು.

ಕುಶಲಮಂದಿರ,
ಶ್ರೀರಾಜರಾಜೇಶ್ವರಿ ದೇವಸ್ಥಾನ,
ಪೊಳಲಿ.

ಎನ್. ಎ. ಶೀನಪ್ಪ ಹೆಗ್ಗಡೆ,
ಅಮುಣಂಜೆಗುತ್ತು,
ಗುರುಪುರ ಪೋಸ್ಟು, ದ.

ಕುರುಕಾದ ಏಜಂಟರು ಬೇಕಾಗಿರುವರು! ಧಾರಾಳವಾದ ಕಮಿಶನ್!!
ಮುಂದಿನ ಅಭಿವೃದ್ಧಿಗೆ ತುಂಬಾ ಅವಕಾಶವುಳ್ಳ ವೃತ್ತಿ!!!

ಮುಂಬಾಯಿ ಲ್ಯಾಫ್ ಎಸ್ಯುರೆನ್ಸ್ ಕಂಪೆನಿ,

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು).

ಪ್ರಧಾನ ಆಫೀಸು ಮುಂಬಯಿ.

ಅಧ್ಯಕ್ಷರು:—ಒಹುಮಾನಪಟ್ಟ ವೆ। ಲಲ್ಲುಬಾಯಿ ಸಾಮಲ್ ದಾಸರವರು, ಸಿ. ಐ. ಇ. ಜೆ. ಪಿ.

ಏಕ್ಚುವೆರಿ:—ಮೆ। ಜೋರ್ಜ್ ಕಿಂಗ್ ಎಫ್. ಎಫ್. ಎ. ಎಫ್. ಐ. ಎ.

ಮೆಡಿಕಲ್ ರಿಫರಿಗಳು:—ಡಾಕ್ಟರ್ ಆರ್. ರಾವ್, ಎಮ್. ಡಿ. ಡಿ. ಎಸ್. ಸಿ (ಲಂಡನ್)

ಗೌರವಾರ್ಥಕ ಮ್ಯಾನೇಜರ್:—ರಾ। ಕೆ. ಸುಬ್ರಮಣ್ಯಯ್ಯರ್, ಬಿ. ಎ ಜೆ. ಪಿ. ಎಫ್. ಎಸ್. ಎ. ಎ. (ಲಂಡನ್)

ವಿಮೆದಾರರ ವಿಮೆ ಪತ್ರಗಳ ಶರ್ತಗಳ ಪ್ರಕಾರ ಸಿಕ್ಕುವ ಹಣವು ಈ ಕಂಪೆನಿಯಲ್ಲಿ ಬಹಳ ಭದ್ರವಾಗಿರುವದೆಂತ ಲೆಕ್ಕ ವ್ಯವಸ್ಥಾಪಕರು ಅಭಿಪ್ರಾಯಪಟ್ಟಿರುವರು.

ತರುಣಾವಸ್ಥೆಯಲ್ಲಿರುವ ಈ ಕಂಪೆನಿಯು ಮುಂದಕ್ಕೆ ಇನ್ನೂ ಬಹಳ ಅಭಿವೃದ್ಧಿಯನ್ನು ಹೊಂದುವ ವಿಶೇಷ ಸಂಭವನಗಳಿಂದ ಕೂಡಿರುವುದೆಂದು "ಕೊಮರ್ಸ್" ಎಂಬ ಪತ್ರಿಕೆಯ ಅಭಿಪ್ರಾಯವಾಗಿರುವುದು.

ಇಂಡಿಯಾ ಸರಕಾರದ ಭದ್ರತೆಯಲ್ಲಿ ರೂ. 1,55,000ವನ್ನು ಠೇವಣಾತಿಯಾಗಿಟ್ಟಿರ ವರು.

ಹಣ ಕಳುಹಿಸಿಕೊಡುವ ಏಜನ್ಸಿ ಬಗ್ಗೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ:—

ಕೊಟ್ಟಿಕಾರ್ ಬ್ರದರ್ಸ್, ಉಡುಪಿ,
ಕನ್ನಡಾ, ಮಲಬಾರ, ತಿರುವಾಂಕೋಡು, ಮತ್ತು ಕೊಚ್ಚಿ ಪ್ರಾಂತ್ಯಗಳ ಪ್ರಾಮುಖ್ಯ ಏಜಂಟರು.

ಸೂಚನೆ:—ಮಂಗಳೂರಲ್ಲಿರುವ ಈ ಕಂಪೆನಿಯ ವಿಮೆದಾರರು ತಮ್ಮ ವಿಮೆ ಮೊಬಲಗುಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲ ಕೊಟ್ಟು, ಆ ಬಗ್ಗೆ ರಶೀದಿಯನ್ನು ಕೊಟ್ಟಿಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು

ಉಡುಪಿ, 3—7—1914.

ಮಹಾಶಯರೆ!

ಮುಂಬಾಯಿ ಲ್ಯಾಫ್ ಎಶ್ಯುರೆನ್ಸ್ ಕಂಪೆನಿ ಎಂಬ ವ ಜೀವವಿಮೆ ಉತ್ತರಾಯಿಸುವ ಸಂಘದ ಬಗ್ಗೆ ಕಾಫಿ ಏನೊಂದೂ ವಿಳಂಬವಿಲ್ಲದೆ, ರೂ. 9—10—0ನ್ನು ನನಗೆ ಪಾವತಿಮಾಡಿದ ದಕ್ಕಾಗಿ ಅತೀ ಉಪಕಾರವಾಯಿತು. ಸದರಿ ಪೊಲಿಸಿಯನ್ನು ಕುರಿತಾದ ಅಗತ್ಯವಾದ ಪತ್ರಗಳನ್ನು ಅವರಿಗೆ ಮುಟ್ಟಿಸಿದ ವ ಏರೇ ದಿನಗಳೊಳಗಾಗಿ ನನಗೆ ಸಲ್ಲತಕ್ಕ ವಿಮೆಯು ಐವರನ್ನು ತಮ್ಮ ಕಂಪೆನಿಯ ಪ್ರೈರೆಕ್ಟರರುಗಳು ನನಗೆ ಪಾವತಿಮಾಡಿಸಿದ ದಕ್ಕೋಸ್ಕರ ನನ್ನ ಧನ್ಯವಾದಗಳನ್ನು ಅವರಿಗೆ ದಯಿಯಿಟ್ಟು ತಿಳಿಸಿ ಈ ಕೆಲವಲ್ಲಿ ಪೊಲಿಸಿದಾರರೊಡನೆ ಯಥಾರ್ಥವಾದ ರೀತಿಯಲ್ಲೂ ನಂಬಿಗೆಯುಂಟಾಗುವಂತೆಯೂ ವರ್ತಿಸುವ ತಮ್ಮ ವಿಮೆ ಕಂಪೆನಿಯಿಂದ ಪ್ರತಿಯೊಬ್ಬನೂ ಒಂದೊಂದು ಪೊಲಿಸಿಯನ್ನಾದರೂ ಪಡಕೊಳ್ಳುವುದು ಉಚಿತವೆಂದು ನನ್ನ ಅಪೇಕ್ಷೆ

(ದಸ್ಕತು) ಹಾರಾಡಿ ಆನಂದರಾಯ ಘಡಿಯಾರನ ರುಜು.

1931ನೇ ಪೊಲಿಸಿಯ ವಿಮಾ ಹಣವನ್ನು ಪಡೆಯಲು ಅಧಿಕಾರವುಳ್ಳವನು.

ಉಡುಪಿ, ತಾ 20—8—1914

ನನ್ನ ಏಳೇ ಪ್ರಾಯದಲ್ಲಿ ಮೃತರಾದ ನನ್ನ ಗಂಡ ಕೆ. ಎಲ್. ಪ್ರಭುಗಳ ವಿಮೆ ಪತ್ರಗಳನ್ನು ನಾನು ಕಳುಹಿಸಿಕೊಟ್ಟ ಕೆಲವೇ ದಿನಗಳೊಳಗಾಗಿ ಮುಂಬಾಯಿ ಲ್ಯಾಫ್ ಎಶ್ಯುರೆನ್ಸ್ ಕಂಪೆನಿಯವರು ನನಗೆ ತತ್ಸಂಬಂಧವಾದ ಹಣವನ್ನು ಪಾವತಿಮಾಡಿಸಿದ್ದಕ್ಕೆ ನಾನು ಕೃತಜ್ಞಳಾಗಿರುವೆನು. ನನ್ನ ಒಬ್ಬನೇ ಬಾಲಕನಿಗೆ ಇದೊಂದೇ ಮಾತ್ರ ಸಿತ್ರಾರ್ಜಿತವಾದ ಧನವಾಗಿದೆ ಅಂತಹ ಬಡ ಹುಡುಗನಿಗೆ ಇದೊಂದು ಅಪೂರ್ವವಾದ ಮಹಾದಾನವನ್ನು ಮಾಡಿಕೊಟ್ಟದ್ದಕ್ಕೆ ಪ್ರತಿಯಾಗಿ ನಿಮ್ಮ ಕಂಪೆನಿಯು ಚಿರಕಾಲವೂ ಸೌಭಾಗ್ಯದಲ್ಲಿರಲಿ!

ಭವಾನೀಬಾಯಿ, Pol No. 1738

ಸಾಕ್ಷಿ—ಭವಾನೀಬಾಯಿಯ ಸೋದರ ರಾ। ಕೆ. ರಂಗಪ್ಪ ನಾಗಪ್ಪ.

ಮಂಗಳೂರು, ತಾ 30—10—1914.

ಸಾಧ್ಯವಾದಷ್ಟು ಕಡಿಮೆ ಸಮಯದೊಳಗಾಗಿ ನನಗೆ ಪಾವತಿಯಾಗತಕ್ಕ ಹಣವನ್ನು ಸಲಾಯಿಸಿದುದಕ್ಕೋಸ್ಕರ ಬೊಂಬಾಯಿ ಲ್ಯಾಫ್ ಎಶ್ಯುರೆನ್ಸ್ ಕಂಪೆನಿಯವರಿಗೆ ನನ್ನ ಧನ್ಯವಾದಗಳನ್ನು ಪ್ರೀತಿಪೂರ್ವಕವಾಗಿ ಮುಟ್ಟಿಸಿರಿ! ಕ್ರಮದ ಪ್ರಕಾರ ಎಲ್ಲ ಹಣವನ್ನು ಪಡಕೊಳ್ಳುವ ಹಾಗೆ ಕಂಪೆನಿಯ ಏಜಂಟರೇ ತಮ್ಮಿಂದಾಗುವಷ್ಟರ ಸಹಾಯವನ್ನು ಮಾಡುತ್ತಿರುವದಾದುದರಿಂದ ನನಗೆ ಯಾವ ತೊಂದರೆಗಳೂ ಉಂಟಾಗಲಿಲ್ಲ ಹಣವನ್ನು ನಾವಿದ್ದ ಸ್ಥಳಕ್ಕೆ ಬಂದು ತೆತ್ತರು—ಇದೊಂದು ತಮ್ಮ ಕಂಪೆನಿಯ ವಿಶೇಷ ಗುಣ ನಿಮ್ಮ ಸಂಘಕ್ಕೆ ಸದಾ ವಿಜಯವು ಆಗಲಿ.

ಅರ್ಕಳ ರಾಮಚಂದ್ರ ಶ್ಯಾನಭಾಗನ ರುಜು.
(Pol. No. 2319ನೆಯ ವಾರಿಸಿ ಹಕ್ಕಿನ ಆಸಾಮಿ).

ಐಶ್ವರ್ಯವಂತರೂ ಬಡವರೂ ಕೊಂಡುಕೊಳ್ಳಲು ಸಾಧ್ಯವಾಗಿರುವ

ಯುಕಲಿಪ್ಟಸ್ ತೈಲವು.

ತಲೆನೋವು, ಕಣ್ಣು ಉರಿ, ಗಾಯ, ಸಕಲ ವಿಧವಾದ ವಾಯುರೋಗ, ಕೆಮ್ಮು, ಉಬ್ಬಸ, ಶೀತಬೇಧಿ, ಉಷ್ಣಬೇದಿ, ಹೊಟ್ಟೆಯಲ್ಲಿ ಜ್ವರಗಡ್ಡೆ, ಸ್ತ್ರೀಯರ ವ್ಯಾಧಿಸಂಬಂಧ ಬಿಳುಪು ಮೊದಲಾದ ಮೇಹ ರೋಗಗಳ, ಕಿವಿಯಲ್ಲಿ ಕೀವು ಬರುವದು, ಹೆಂಗಸರ ಹೊಟ್ಟೆನೋವು ಮೊದಲಾದ ರೋಗಗಳನ್ನು ಖಾತ್ರಿಯಾಗಿ ಗುಣಪಡಿಸುತ್ತದೆ. ಔನ್ಸ್ ಸೀಸೆ 1ಕ್ಕೆ 0—5—0. ವಿ. ಪಿ. ಬೇರೆ. ಡಜನ್ ಸೀಸೆಗಳಿಗೆ ವಿ. ಪಿ. ಸಹಿತ ರೂ. 3—12—0. ಅನುಪಾನ ಪತ್ರಿಕೆ ಸೀಸೆಯೊಂದಿಗೆ.

ಸಿಫಾರಸು ಪತ್ರ:—ಪಿ. ಪಿ. ಎಮ್ ತಮ್ಮ ಯುಕಲಿಪ್ಟಸ್ ತೈಲವು ಅಮೃತದಂತೆ ಪ್ರತಿ ಮನೆಯಲ್ಲಿಯೂ ಇರಲೇಬೇಕೆಂತ ನಾನು ಖಂಡಿತವಾಗಿ ಹೇಳುತ್ತೇನೆ. ಪಶುಗಳ ಸರ್ವ ರೋಗಗಳಿಗೆ ರಾಮಬಾಣದಂತಿದೆ.

ಇಕ್ಲಿಪ್ಸ್ ಬಾಮ್.

ತಲೆನೋವು, ಸೊಂಟದ ನೋವು, ಸಂಧುವಾತ, ಮೇಹವಾತ, ನೆಗಡಿ, ಶೈತ್ಯ, ಜೇಳು, ಜಾಡರಹುಳ ಕಡಿತ, ಕುರು, ರಾಜಕುರು, ಮೊಡವೆ, ಘಾಯಗಳು, ಹಲ್ಲುನೋವು, ಆನೆಕಾಲು ಇತ್ಯಾದಿ ರೋಗಗಳಿಗೆ ಬಾಹ್ಯಲೇಪನವಾಗಿ ಉಪಯೋಗಿಸಬಹುದಾದ ಬಾಮಿನ ಕರಡಿಗೆ 1ಕ್ಕೆ ಆಣೆ 8. ವಿ. ಪಿ. ಬೇರೆ. ಡಜನ್ ಕರಡಿಗೆಗಳಿಗೆ ರೂ. 4—12—0 ವಿ. ಪಿ. ಬೇರೆ

ವಿಳಾಸ:—	ಏಜಂಟರು:—
ಇಕ್ಲಿಪ್ಸ್ ಏಜನ್ಸಿ,	ಸುಗಂಧವಿಲಾಸ,
ಮಂಗಳೂರು.	ರಥಬೀದಿ, ಮಂಗಳೂರು.

ಅನೇಕ ಯೋಗ್ಯತಾಪತ್ರಿಕೆಗಳನ್ನು ಪಡೆದಿರುವ (ರಜಿಸ್ಟರ್ಡ್)

ರಾಜಸುಂದರಿರೋಜ.

ಕೂದಲು ಬೆಳೆಯುವ ಪರಿಮಳ ತೈಲವು. 50 ವಿಧವಾದ ಇನಾಂ ಸಾಮಾನುಗಳ ಸಮೇತ ಡಬ್ಬಿ 1ಕ್ಕೆ ರೂ. 1 ಮಾತ್ರ.

ಸ್ತ್ರೀಗಳು ತಲೆಕೂದಲು ಸುಂದರವಾಗಿ ಇರಬೇಕೆಂಬ ಉದ್ದೇಶವಾಗಿಯೂ, ಕೂದಲು ಉದುರುವದನ್ನು ತಡೆದು, ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವವರು ಬಜಾರಿನಲ್ಲಿ ದೊರೆಯುವ ಕೀಳುತರವಾದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ, ನಿಮ್ಮ ಹಣವನ್ನೂ ತಲೆಯನ್ನೂ ಹಾಳು ಮಾಡುವದಕ್ಕಿಂತ ನಮ್ಮ ಪರಿಮಳ ತೈಲವನ್ನು ಉಪಯೋಗಿಸಿರಿ. ಈ ಲೋಕಪ್ರಖ್ಯಾತವಾದ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಬಾಚಿದರೆ ಅದರ ಸುವಾಸನೆ ಹೇಳವದಕ್ಕೆ ಬರೆಯುವದಕ್ಕೆ ಆಗುವದಿಲ್ಲ ಮತ್ತು ಇದರ ಪರಿಮಳ ವಾಸನೆ ಸುತ್ತು ಇರುವ ಮನೆಗಳಿಗೆ ಹೋಗುವದು. ಇದಲ್ಲದೆ ದೇಹದಲ್ಲಿ ಇರುವ ಉಷ್ಣವನ್ನು ತೆಗೆದು ಕಣ್ಣಿಗೆ ತಂಪು ಕೊಡುವದು. ತಲೆಯಲ್ಲಿ ಇರುವ ಹೊಟ್ಟನ್ನು ಸರಿ ಮಾಡುವದು. ಮುಖಕ್ಕೆ ಕಾಂತಿಯನ್ನೂ, ದೇಹಕ್ಕೆ ಆರೋಗ್ಯವನ್ನೂ, ಮನಸಿಗೆ ಸಂತೋಷವನ್ನೂ, ಕೂದಲಿಗೆ ಆರೋಗ್ಯವನ್ನೂ ಕೊಡುವ ತೈಲ ಇದು ಹಿಂದೇ ಬೇರೊಂದಿಲ್ಲ, ಬರೀ ಮಾತುಗಳಿಂದ ವರ್ಣಿಸುವದರಲ್ಲಿ ಪ್ರಯೋಜನವಿಲ್ಲ. 1ನ್ನು ತರಿಸಿದರೆ ತಿಳಿಯಬಹುದು. ಇನಾಂ ಸಾಮಾನುಗಳ ತಪಶೀಲು. ಸ್ತ್ರೀಯರು ಧರಿಸಿಕೊಳ್ಳುವ ಕೊಂಡಿಗೆ 6, ನೈಫರು 1, ಅದ್ದು 1, ಕಾಂಬಿನ ಮಾತ್ರೆ 30, ದರಿಸುವ ಬಾಚಣಿಗೆ 1, ಸೊಗಸಾದ ರಾಜರಾಣಿ ಕಾರನೇಷನ್ ಪೆಟ್ಟಿಗೆ 1, ರವಿವರ್ಮ ಪೋಸ್ಟುಕಾರ್ಡ್ 6. ಸುವಾಸನೆ ಅತ್ತರು ಬಿಲ್ಲೆ 1, ಗಂಧ ಬಿಲ್ಲೆ 1, ಸ್ತ್ರೀಯರು ಧರಿಸುವ ಬ್ರೂಚ್ 1.

ನಮ್ಮ ವಿಳಾಸ:— ಮ್ಯಾನೇಜರ್ ಧೈರ್ಯ ಲಕ್ಷ್ಮಿ ಅಂಡು ಕಂಪೆನಿ,
ನಂ. 3 ಇರುಲಪ್ಪನ್ ಬೀದಿ, ಮದ್ರಾಸು.

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು ೨ನೇ ಜುಲೈ 1915

ಮಂಗಳೂರಲ್ಲಿ ಸರಕಾರದವರು ಒಂದು ಬಾಲಿಕಾ ಪಾಠಶಾಲೆಯನ್ನು ಸ್ಥಾಪಿಸುವುದು ಅಗತ್ಯವಾಗಿದೆ.

ವಿದ್ಯಾಪ್ರಸರಣೆಯ ಸಾಧನೆಯು ಸಹ ಈ ಜಿಲ್ಲೆಯಲ್ಲಿ ಬಹಳ ವಿಷಾದಕರ ರೀತಿಗಳಲ್ಲಿ ನಡಿಯುವ ವಿವರವನ್ನು ನಾವು ವಾಚಕರ ಮುಂದೆ ತರಬೇಕೆಂತಿಲ್ಲ. ರೋಮಿಯ ಕ್ರೈಸ್ತರು, ಪ್ರೊಟೆಸ್ಟಾಂಟ್ ಕ್ರೈಸ್ತರು, ಸಾರಸ್ವತರು, ಗೌಡಸಾರಸ್ವತರು, ದ್ರಾವಿಡ ಬ್ರಾಹ್ಮಣರು, ಜೈನರು, ಬಂಟರು ಮೊದಲಾದ ಜಾತಿಗಳವರು ತಂತಮ್ಮ ಜಾತಿಯ ವಿದ್ಯಾರ್ಥಿಗಳ ಬಗ್ಯೆ ಪ್ರತ್ಯಪ್ರತ್ಯೇಕವಾಗಿ ಕೋಲೇಜುಗಳನ್ನು, ಶಾಲೆಗಳನ್ನು, ವಿದ್ಯಾರ್ಥಿಭವನಗಳನ್ನು ಸ್ಥಾಪಿಸಿ ಈ ಸಂಸ್ಥೆಗಳ ಕಟ್ಟೋಣಗಳಿಗೆ ಬೇಕಾಗುವ ಸುಣ್ಣಕ್ಕೂ ಮಣ್ಣಿಗೂ ಕಲ್ಲುಗಳಿಗೂ ದ್ರವ್ಯಸಹಾಯವು ತಮ್ಮ ಜಾತಿಯ ಬಂಧುವರ್ಗದವರಿಂದ ದೊರೆಯಲಾರದೆ ಪಡುವಂಥ ಸಂಕಷ್ಟಗಳನ್ನು ವಿವರಿಸುವುದು ಅಗತ್ಯವಿರದು. ಹುಡುಗರ ಶಿಕ್ಷಣದ ಬಗ್ಯೆ ದ್ರವ್ಯಾನುಕೂಲತೆಯು ಎಲ್ಲಾ ಜಾತಿಯವರಲ್ಲಿಯೂ ಈ ರೀತಿ ಇರುವಾಗ ಖಾಸಗಿ ಬಾಲಿಕಾ ಪಾಠಶಾಲೆಯನ್ನು—ಇಲ್ಲಿ ಒಂದು ವೇಳೆ ಎಲ್ಲರೂ ಈ ಬಗ್ಯೆ ಕೂಡಲು ಸಾಧ್ಯವಾದರೂ,—ಸ್ಥಾಪಿಸುವುದು ತುಂಬಾ ಅಸಾಧ್ಯ ತೋರ್ರುವುದು. ಆದ್ದರಿಂದ ಪ್ರಜೆಗಳ ಯೋಗಕ್ಷೇಮಕ್ಕೆ ಮುಖ್ಯ ಆಧಾರವಾಗಿರುವ ಸ್ತ್ರೀಶಿಕ್ಷಣದ ಏರ್ಪಾಡನ್ನು ಈ ಊರಲ್ಲಿ ಸರಕಾರದವರು ಕೈಕೊಳ್ಳಬೇಕಾಗಿರ್ರುವುದು.

ಆದರೆ ಕ್ರೈಸ್ತ ಮಿಶನರಿಗಳ ಬಾಲಿಕಾ ಪಾಠಶಾಲೆಗಳು ಈ ಊರಲ್ಲಿ ಅಲ್ಲಲ್ಲಿರುವುದರಿಂದ ಸರಕಾರದ ಅಂಥಾದೊಂದು ಸಂಸ್ಥೆಯು ಇಲ್ಲಿ ಅಗತ್ಯವಿರದೆಂದು ಕೆಲವರು ವಾದಿಸಬಹುದು. ಅನ್ಯದೇಶಗಳ ಮಿಶ್ಯನರಿಗಳು ಬಂದು, ಅದರಲ್ಲಿಯೂ ಸಹ ಬ್ರಿಟಿಷ ಜನಾಂಗಕ್ಕೆ ಏನೂ ಸಂಬಂಧವಿಲ್ಲದಂಥವರು ಈ ದೇಶಕ್ಕೆ ಬಂದು ಇಲ್ಲಿಯವರ ಬಗ್ಯೆ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸುವುದು ಎಷ್ಟು ಅನುಕೂಲ ಅಥವಾ ಪ್ರತಿಕೂಲವೆಂಬುದು ಸರಕಾರದವರಿಗೆ ಇಷ್ಟರೊಳಗೆ ಕಂಡು ಬಾರದೆ ಇರದು. ಅದಲ್ಲದೆ ಮತ ವಿಷಯಗಳಲ್ಲಿ ಕೈಹಾಕದೆ ಪ್ರಜೆಗಳನ್ನು ಅವರವರ ಮತಧರ್ಮಗಳನ್ನನುಸರಿಸ ಬಿಡುವುದು ನಮ್ಮ ಸರಕಾರದ ಪ್ರಜಾಪಾಲನೆಯ ಸೂತ್ರಗಳಲ್ಲಿ ಒಂದಾಗಿದೆ. ಈ ಸೂತ್ರಗಳಿಗನುಸಾರವಾಗಿ ಬಾಲಿಕೆಯರ ಮತಧರ್ಮಗಳ ಗೋಜಿಗೆ ಹೋಗದೆ ಶಿಕ್ಷಣವನ್ನು ಕೊಡುವಂಥಾ ಇಲ್ಲಿಯ ಗವರ್ನಮೆಂಟ್ ಕೋಲೇಜಿನ ಮಾದರಿಯ ಒಂದು ಪಾಠಶಾಲೆಯಾದರೂ ಈ ಊರಲ್ಲಿರದು. ಈ ಕೊರತೆಯನ್ನು ಸಾಧ್ಯವಾದಷ್ಟು ಶೀಘ್ರದಲ್ಲಿ ಹೋಗಲಾಡಿಸಲು ಇಲ್ಲಿಯ ಪ್ರಜಾ ಮುಂದಾಳುಗಳು ಸರಕಾರದವರನ್ನು ವಿಜ್ಞಾಪಿಸಿಕೊಳ್ಳಬೇಕು. ಬಾಲಿಕೆಯರನ್ನು ಮಿಶನರಿ ಶಾಲೆಗಳಿಗೆ ಕಳುಹಿಸಿಕೊಡುವುದರಿಂದ ಉಂಟಾಗುವ ಹಾವಳಿಯು ಏನೆಂಬುದಾಗಿ ಇಲ್ಲಿಯ ಹೆತ್ತವರು ಚನ್ನಾಗಿ ಅರಿತಿರುವರು. ಶಾಲೆಗಳಲ್ಲಿ ಅನುಸರಿಸುವ ಧರ್ಮ ಒಂದು ವಿಧ, ಮನೆಗಳಲ್ಲಿ ಅನುಸರಿಸುವಂಥಾದ್ದು ಇನ್ನೊಂದು ವಿಧ, ಬಾಲ್ಯದಲ್ಲಿ ಮಕ್ಕಳ ಕೋಮಲವಾದ ಧಿಶಕ್ತಿಗೆ ಇಂಥಾ ದುರವಸ್ಥೆಯು ಪ್ರಾಪ್ತವಾಗುವುದರಿಂದ ಅವರಲ್ಲಿ ಕ್ರಮೇಣ ಭಕ್ತಿ ವಿಶ್ವಾಸ, ವಿನಯ, ವಿಧೇಯತ್ವ ಮೊದಲಾದ ಸದ್ಗುಣಗಳು ಇಲ್ಲದೆ ಹೋಗುವುದು ಚೋದ್ಯವಲ್ಲ. ನಮ್ಮ ಕುಲಧರ್ಮವು ಮುಖ್ಯವಾಗಿ ಗೃಹಿಣಿಯರ ರಕ್ಷಣೆಯಲ್ಲಿರುವುದರಿಂದ ಮುಂದಕ್ಕೆ ಗೃಹಿಣಿಯರಾಗತಕ್ಕವರ ಶಿಕ್ಷಣ ಏರ್ಪಾಡುಗಳ ವ್ಯವಸ್ಥೆಯನ್ನು ಹೆಚ್ಚಿನ ವಿಚಾರದಿಂದಲೂ ಜಾಗರೂಕತೆಯಿಂದಲೂ ಮಾಡಬೇಕಾಗಿರುವುದು. ಕ್ರೈಸ್ತಮತ ತತ್ವಗಳ ಬೋಧೆಯು ತನ್ನಷ್ಟಕ್ಕೆನೇ ಹಾನಿಕರವಲ್ಲ. ಆದರೆ, ಈ ಪ್ರಾಂತ್ಯಗಳಲ್ಲಿ ಇಂಥಾ ಬೋಧೆಯು ಅನ್ಯಮತ ದೂಷಣೆ, ತುಚ್ಛೀಕಾರ ಮೊದಲಾದವುಗಳ ಮೂಲಕ ಮಾಡೋಣಾಗುವುದರಿಂದ ಸ್ವಧರ್ಮದ ತಿಳುವಳಿಕೆಯು ಹೆಚ್ಚಾಗಿಲ್ಲದ ಚಿಕ್ಕ ವಯಸ್ಸಿನ ಬಾಲಿಕೆಯರನ್ನು ಇಂಥಾ ಕ್ರೈಸ್ತಬೋಧನೆಗೆ ಆಸ್ಪದವಾಗಿ ಮಿಶನರಿ ಶಾಲೆಗಳಿಗೆ ಕಳುಹಿಸಿಕೊಡುವುದು ಹಿತಕರವಲ್ಲ. ಸ್ತ್ರೀವಿದ್ಯಾಪ್ರಸರಣೆಯನ್ನು ಮದ್ರಾಸು ಸರಕಾರದವರು ಈಗಲೀಗ ಬಹಳವಾಗಿ ಪ್ರೋತ್ಸಾಹಿಸುವುದರಿಂದ ಇಲ್ಲಿಯ ಮುಂದಾಳುಗಳು ಈ ಸಂದರ್ಭವನ್ನು ಬಿಡದೆ ಪಟ್ಟಣದ ಜನರ ಸಭೆಯನ್ನು ಸೇರಿಸಿ ಈ ಸಭಾಮೂಲಕ ಸರಕಾರದವರನ್ನು ಈ ವಿಷಯದಲ್ಲಿ ವಿಜ್ಞಾಪಿಸಿಕೊಳ್ಳಬೇಕಾಗಿ ಅಪೇಕ್ಷಿಸುತ್ತೇವೆ.

ಮದ್ರಾಸು ಆಧಿಪತ್ಯದಲ್ಲಿ ವಾಙ್ಮಯಾಭಿವೃದ್ಧಿ.

೧೯೧೫ನೇ ವರ್ಷದ ಮೊದಲನೆಯ ಮೂರು ತಿಂಗಳ ಕಾಲದಲ್ಲಿ ನಮ್ಮ ಆಧಿಪತ್ಯದೊಳಗೆ ಇಂಗ್ಲಿಷು ೧೨೭, ತಮಿಳು ೭೭, ತೆಲುಗು ೧೮೮, ಮಲೆಯಾಳ ೧೨, ಕನ್ನಡ ೧೮, ಉರಿಯ ೧೦, ಮತ್ತು ಇಲ್ಲಿಯ ದೇಶಭಾಷೆಗಳಲ್ಲದ ಇತರ ಭಾಷೆಗಳಲ್ಲಿಯೂ ಒಂದಕ್ಕಿಂತ ಹೆಚ್ಚು (bilingual) ಭಾಷೆಗಳಲ್ಲಿಯೂ ೯೭, ಅಂತು ೬೫೧ ಪುಸ್ತಕಗಳು ಅಚ್ಚಾಗಿ ಪ್ರಚುರವಾದಂತೆ ಪುಸ್ತಕಗಳ ರಿಜಿಸ್ಟ್ರಾರರವರ ರಿಪೋರ್ಟಿನಿಂದ ತಿಳಿಯಬರುತ್ತಿದೆ. ನಮ್ಮ ಜನರಲ್ಲಿ ಮುಖ್ಯವಾಗಿ ಮದ್ರಾಸಿಗೆ ಸೇರಿದ ಕನ್ನಡಿಗರಲ್ಲಿ ಸಾಹಿತ್ಯಾಭಿವೃದ್ಧಿಯು ಹೇಗಿದೆಯೆಂಬುದನ್ನು ಈ ಆಧಿಪತ್ಯದ ಕನ್ನಡಿಗರು ಮಾತ್ರವೇ ಅಲ್ಲದೆ ನಮ್ಮ ಬಂಧುಗಳಾದ ಮೈಸೂರು ಮತ್ತು ಧಾರವಾಡದ ಕನ್ನಡಿಗರು ಕೂಡ ತಿಳಿಯುವುದು ಯುಕ್ತವಾದುದರಿಂದ ಈ ರಿಪೋರ್ಟನ್ನು ವಿವರವಾಗಿ ಈ ಕೆಳಗೆ ವಿಮರ್ಶಿಸಿರುವೆವು. ಮುಂದೆ ಪ್ರತಿ ವರ್ಷಪಾದದಲ್ಲಿಯೂ (Quarter) ಇದೇ ಮೇರೆಗೆ ವಿಮರ್ಶಿಸಬೇಕೆಂದು ಉದ್ದೇಶಿಸಿರುವೆವು ಮತ್ತು ಧಾರವಾಡದ ಮತ್ತು ಮೈಸೂರಿನ ನಮ್ಮ ವ್ಯವಸಾಯಿ ಬಂಧುಗಳು ಕೂಡ ಆಯಾ ಪ್ರಾಂತ್ಯದಲ್ಲಿ ಆಗುವ ವಾಙ್ಮಯಾಭಿವೃದ್ಧಿಯನ್ನು ಕುರಿತು ಇತರ ಪ್ರಾಂತ್ಯಗಳ ಕನ್ನಡಿಗರು ತಿಳಿಯುವಂತೆ ಅನುಕೂಲಪಡಿಸಿಕೊಡಬೇಕೆಂದು ಪ್ರಾರ್ಥಿಸುವೆವು.

ಕಲಾ (Art) ವಿಷಯಕವಾದ ನಾಲ್ಕು ಪುಸ್ತಕಗಳು ತಮಿಳಿನಲ್ಲಿ ಮಾತ್ರ ನೂತನವಾಗಿ ಅಚ್ಚಾಗಿವೆ. ಜೀವನ ಚರಿತೆ (Biography)ಗಳು ಇಂಗ್ಲಿಷಿನಲ್ಲಿ ೬, ತಮಿಳು ತೆಲುಗುಗಳಲ್ಲಿ ಒಂದೊಂದು ಅಚ್ಚಾಗಿವೆ. ಕನ್ನಡದಲ್ಲಿ ಒಂದೂ ಇಲ್ಲ. ಇಂಗ್ಲಿಷಿನಲ್ಲಿ ಅದುವುಗಳೊಳಗೆ ದಿವಂಗತರಾದ ಜಿ. ಎನ್. ತಾತಾಯವರ ಮತ್ತು ಮದ್ರಾಸಿನ ಪ್ರಸಿದ್ಧ ನಾಗರಿಕರಾದ ಸರ್ ಸುಬ್ರಹ್ಮಣ್ಯ ಅಯ್ಯರವರ ಚರಿತ್ರೆಗಳು ಮುಖ್ಯವಾಗಿವೆ.

ನಾಟಕಗಳು—ಇಂಗ್ಲಿಷಿನಲ್ಲಿ ಒಂದು, ತಮಿಳಿನಲ್ಲಿ ೧೧, (ಒಂದು ಪುನರ್ಮುದ್ರಣ) ತೆಲುಗಿನಲ್ಲಿ ೧೪, (ಒಂದು ಪುನರ್ಮುದ್ರಣ) ಕನ್ನಡದಲ್ಲಿ ಒಂದು. ಈ ಮೇರೆಗೆ ಅಚ್ಚಾಗಿವೆ. ಇವುಗಳೊಳಗೆ ತಮಿಳಿನಲ್ಲಿ ಅಚ್ಚಾದ ಎರಡು ಗೋಲ್ಡ್ ಸ್ಮಿತ್ ಕವಿಯ (She stoops to conquer) ಮತ್ತು ಷೆರ್ರಿಡನ್ ಕವಿಯ (Pizzorio) ಎಂಬವುಗಳ ಅನುವಾದಗಳು. ತೆಲುಗಿನಲ್ಲಿ ಪ್ರಾಯಶಃ ಯಾವತ್ತು ನಾಟಕಗಳ ವಸ್ತು (Subject)ವನ್ನು ನಮ್ಮ ಪುರಾಣ ಕಥೆಗಳಿಂದಲೇ ತೆಗೆದಂತೆ ಕಂಡು ಬರುತ್ತಿದೆ. 'ಸಂಸ್ಕಾರ ದರ್ಪಣ'ವೆಂಬ ಒಂದು ಮಾತ್ರ ಸಮಾಜ ಸಂಸ್ಕರಣ ಪೋಷಕವಾದ ಸ್ವತಂತ್ರ ನಾಟಕವಾಗಿದೆ. ಬಳ್ಳಾರಿಯಲ್ಲಿ ಅಚ್ಚಾದ ಮೂರು ಪೈ ಬೆಲೆಯ 'ಆಚಾರವ್ಯವ ಪ್ರಹಸನ'ವೆಂಬ ಒಂದೇ ಕನ್ನಡದಲ್ಲಿ ಅಚ್ಚಾದ ನಾಟಕವಾಗಿದೆ.

(Fiction) ಎಂಬ ಕಲ್ಪನಾ ಪ್ರಬಂಧಗಳು ಇಂಗ್ಲಿಷಿನಲ್ಲಿ ೩, ತಮಿಳಿನಲ್ಲಿ ೨೭, (ಒಂದು ಪುನರ್ಮುದ್ರಣ) ತೆಲುಗಿನಲ್ಲಿ ೧೯, (ಒಂದು ಪುನರ್ಮುದ್ರಣ) ಮಲೆಯಾಳದಲ್ಲಿ ೧, ಕನ್ನಡದಲ್ಲಿ ೨ ಅಚ್ಚಾಗಿವೆ. ಪರಭಾಷೆಯ ಗ್ರಂಥಗಳ ಯೋಗ್ಯತೆಯನ್ನು ನಿರ್ಣಯಿಸಿ ಬರೆಯಲು ನಾವು ಅಸಮರ್ಥರಾಗಿರುವೆವು. ಆದುದರಿಂದ ಆ ಪ್ರಯತ್ನವನ್ನು ಬಿಟ್ಟು ವಿಶೇಷವಾಗಿ ನಮ್ಮ ಗಮನಕ್ಕೆ ಬಂದ ಕೆಲವು ವಿಷಯಗಳನ್ನು ಮಾತ್ರ ಇಲ್ಲಿ ಹೇಳುವೆವು. 'ಚಂದ್ರಗುಪ್ತವಿಲಾಸ'ವೆಂಬ ತಮಿಳು ಕಾದಂಬರಿಯು ಭಾಲಾಂಬಾಳ್ ಎಂಬ ಸ್ತ್ರೀಯು ಬರೆದಂತೆ ತಿಳಿಯಬರುತ್ತಿದೆ. ತೆಲುಗಿನಲ್ಲಿ ಬಂಗಾಳಾ ಭಾಷೆಯಿಂದ ಶ್ರೀಯುತ ರವೀಂದ್ರನಾಥರ 'ನೌಕಾಡುಬೀ' ಎಂಬುದರ ಅನುವಾದವೂ, ಶ್ರೀಯುತ ರಮೇಶ ದತ್ತರ 'ತೇಜಸಿಂಗ್' ಎಂಬದರ ಭಾಷಾಂತರವೂ, ಇಂಗ್ಲಿಷಿನಿಂದ (Bronze statue) ಎಂಬ ರೈನಾಲ್ಡ್ ಕವಿಯ ಪುಸ್ತಕದ ಭಾಷಾಂತರವೂ

ಬಿದ್ದಾಗಿವೆ. 'ವಿಜಯ ನಗರ ಸಾಮ್ರಾಜ್ಯ'ವೆಂಬ ಕಾದಂಬರಿಯೊಂದು ರಾಘವ ಚಂದ್ರಯ್ಯ ಎಂಬುವರಿಂದ ಸ್ವತಂತ್ರವಾಗಿ ಬರೆಯಲ್ಪಟ್ಟಿದೆ. ಇದು ಉತ್ಕೃಷ್ಟವಾಗಿರುವದೆಂದು ಆಂಧ್ರ ಮಹಾಜನರುಗಳ ಮೆಚ್ಚಿಕೆಗೆ ಪಾತ್ರವಾಗಿದೆ. ಕನ್ನಡ ಕಾದಂಬರಿಗಳೊಳಗೆ ಮಂಗಳೂರಿನಲ್ಲಿ ಅಚ್ಚಾದ 'ಜಯ ವಿಜಯ'ವೆಂಬದು ಗುಜರಾತಿಯಿಂದ ಕನ್ನಡಿಸಿದ ಪತ್ತೇದಾರಿ ಕದೆಯಾಗಿದೆ. ಒಕ್ಕಾರಿಯಲ್ಲಿ ಅಚ್ಚಾದ 'ಬಾಣಾಸುರನ ಕಥೆ' ಎಂಬ ಪೌರಾಣಿಕ ಕಥೆಯೇ ಎರಡನೆಯ ಕಾದಂಬರಿಯೆಂಬುದು. ಈ ಕಥೆಯು (A dramatic composition in the popular form interspersed with songs) ಎಂಬುದಾಗಿ ರಿಪೋರ್ಟಿನಲ್ಲಿಯೇ ಹೇಳಿರುತ್ತ, ಇದನ್ನು (Fiction) ಎಂಬ ಶಿರೋನಾಮೆಯ ಕೆಳಗೆ ಏಕೆ ಕೊಟ್ಟಿದೆಯೋ ನಾವು ತಿಳಿಯಲಾರೆವು. [ಸಶೇಷ]

ಬ್ರಿಟಾನ್ಯೆಗೆ

೧. ಉತ್ತಾಲತರೆಗಳಿಂ ಮುತ್ತುತೆ ದರಾತಳವ
ನೆತ್ತೆತ್ತಲುಂ ಮೊರೆವ ನೀಲಸಾಗರವಂ
ನೆತ್ತಿಯ ಕಿರೀಟದಿಂ ಕತ್ತರಿಸುತುದಯಿಸಿದ
ಮೂರ್ತಿಗಿಂತಿತ್ತುದಮರಾವಳಿಯು ವರವಂ,—
'ಉತ್ತರಜಲದಿರಾಣಿಯಾಳ್ ಬ್ರಿಟಾನ್ಯೆ!
ನಿತ್ಯಮೇಳ್ಗೆಗೆ ನೆಲೆ ಲೋಕಮಾನ್ಯೆ!'
ವಿಶ್ವದೆಲ್ಲೆಡೆಗಳಿಂ ನೆಲಸು ಭಕ್ತಿಪ್ರೇಮ
ವಿಶ್ವಾಸದಿಂದರ್ಪಿಸಲು ಸತ್ವಸಾರಂ,
ಆಸೋದರೀಗಣಾಗ್ರಣಿ ಯಾರ್ಯೆ ಭಾರತಿಯು
ಕೈಸೇರೆ ಈ ಹಿಂದಿಗಿದೆ ಕೋಹಿನೂರಂ,—
'ನೇಸರಸ್ತಮಿಸದಿರಲಿನಿತು ರಾಜ್ಯದಲಿ,
ಶಾಶ್ವತದಿ ನೀ ಬಾಳು, ಈಶನೊಲುಮೆಯಲಿ!'

೨. ಹಿಮಸೃಷ್ಟಿಮುನ್ನತಾಸನವನೇರಿಸಿ, ಗಂಗೆ
ಯಮುನೆ ನರ್ಮದೆಸಿಂಧು ತೀರ್ಥಮಾಯಿಸುತೆ,—
ಕಮನೀಯಚರಿತೆ ಭಾರತಿಯೊರೆದಳುತ್ತುಂಗೆ,
ಸುಮಕುಂಕುಮಾಕ್ಷತೆಯಗರುವನರ್ಪಿಸುತೆ,—
'ಭ್ರಮಿಸಿ ಮತ್ಸರದಿಂದ ವೈರಿಗಳ್ ಸೀಳ್ !
ಕ್ಷಮೆಶಾಂತಿವಾತ್ಸಲ್ಯದಿಂ ಪ್ರಜೆಯ ನಾಳ್ !

೩. ವೀರದಂಡವೆ ರಾಜದಂಡವೆನೆ ನಕ್ಷತ್ರ
ಹಾರವೆ ಸುಮಾಂಗಲ್ಯಸೂತ್ರವೆನೆ, ಗಗನಂ
ಛಾರುಛತ್ರವದಾಗೆ, ವೀರಸಿಂಹಪತಾಕೆ
ಸೇರಿಸಕರವ, ನಿದೆ ಶಾಸನ ಘೋಷಂ,—
"ಅರಾತಿಗಳಸದೆವ ವೀರಕುಲಮಾತೆ !
ಧಾರಿಣಿಯ ಸಪ್ತವರ್ಣದಿರಿಸೆ, ವಿಖ್ಯಾತೆ !"
ನಿಜಗುಣದಿ ಸಾರ್ವಭೌಮತೆಗೇರಿ, ಸತತದಿ
ಸ್ವಜಯಿಯಾನುರಾಗ ಗೌರವದಿ ಮೆರೆದು!
ಪ್ರಜೆಗಳ ಹೃದಯಪೀಠದೊಳು ನೆಲಸಿರುವ ಕತದಿ,
ವಿಜಯಸಂಗೀತವಿದು, ಕೇಳುತಿದೆ "ಮೊರೆದು,—
"ಪ್ರಜೆಗಳನುರಾಗ ಕಪ್ಪವಗೊಂಬ ಮಾನ್ಯೆ !
ವಿಜಯಿಸಲಿ ನಿನ್ನ ದಮುಧ್ವಜ, ಬ್ರಿಟಾನ್ಯೆ !!"

ಕಾನ್‌ಸ್ಟಾಂಟಿನೋಪಲಿನ ನೈಸರ್ಗಿಕ ರಕ್ಷಣೆ.

ಸೃಷ್ಟಿದೇವತೆಯಿಂದಲೇ ರಚಿಸಲ್ಪಟ್ಟ ದುರ್ಗಗಳಿಂದೊಡಗೂಡಿ ಸುರಕ್ಷಿತವಾಗಿರುವ ಕಾನ್‌ಸ್ಟಾಂಟಿನೋಪಲಿನಂತಹ ನಗರವು ಜಗತ್ತಿನಲ್ಲಿ ಯಾವುದೂ ಇಲ್ಲ. ಈ ಪಟ್ಟಣದ ಪಶ್ಚಿಮದಲ್ಲಿರುವ ಚಾಟಲ್ಸ್ ಎಂಬ ಬಲವಾದ ಕೋಟೆಯಂತಿರುವ ಪ್ರಾಕಾರದ ಗೋಡೆಯ ಒಂದು ಕೊನೆಯು ಉತ್ತರದಲ್ಲಿ ಕಪ್ಪು ಸಮುದ್ರವನ್ನೂ, ಮತ್ತೊಂದು ಕೊನೆಯು ದಕ್ಷಿಣದಲ್ಲಿ ಮಾರ್ಮೊರಾ ಸಮುದ್ರವನ್ನೂ ಸೇರಿ, ಆ ಭಾಗದಿಂದ ಯಾರೂ ಪ್ರವೇಶಿಸದಂತೆ ಅಡ್ಡವಾಗಿ ನಿಂತುಬಿಟ್ಟಿರುವುದು. ಈ ಪ್ರಾಕಾರದ ಗೋಡೆಯ ಎರಡು ಭಾಗಗಳಲ್ಲಿಯೂ, ಅತ್ಯಂತ ವಿಸ್ತಾರವೂ, ನಿಬಿಡವೂ ಆದ ಅರಣ್ಯಗಳಿರುವುದರಿಂದ ಅದರ ಬಲವು ಇಮ್ಮಡಿಯಾಗಿರುವುದು. ಕಾನ್‌ಸ್ಟಾಂಟಿನೋಪಲಿನ ಉತ್ತರದಲ್ಲಿರುವ ಪ್ರಾಕಾರದ ಗೋಡೆಯು ಸಣ್ಣ ಸಣ್ಣ ಗಹನವಾದ ಪರ್ವತಶ್ರೇಣಿಗಳಿಂದ ನಿಬಿಡವಾಗಿದೆ. ಈ ಪರ್ವತಪಂಕ್ತಿಗಳು 'ಬಾಸ್ಪೋರಸ್' ಜಲಸಂಧಿಯ ವರೆಗೂ ಹರಡಿಕೊಂಡಿವೆ, ಮತ್ತು ಅಲ್ಲಿ ಮುಖ್ಯಮುಖ್ಯವಾದೆಡೆಗಳಲ್ಲಿ ಪರ್ವತಪಂಕ್ತಿಗಳು ವಿರಳವಾಗಿರುವುದರಿಂದ ಆ ಭಾಗಗಳನ್ನು ಕಾಪಾಡಲು ಯಾವಾಗಲೂ ಸಿದ್ಧವಾಗಿರುವ ಸೇನಾಬಲವಿರುವುದು. ಕಪ್ಪು ಸಮುದ್ರದ ಪಕ್ಕಕ್ಕೆ ಸೃಷ್ಟಿದೇವತೆಯಿಂದಲೇ ರಚಿಸಲ್ಪಟ್ಟಿರುವ ಈ ತೆರನಾದ ಪ್ರಾಕಾರದ ಗೋಡೆಗಳ ಮೇಲೆ ಸೈನ್ಯವನ್ನು ಇಳಿಸಿ ಕಾನ್‌ಸ್ಟಾಂಟಿನೋಪಲನ್ನು ಮುತ್ತುವುದಕ್ಕೆ ಇದುವರಿಗೆ ಯಾರೂ ಸಾಹಸಪಡಲಿಲ್ಲವೆಂಬುದಾಗಿ ಅನುಭವಿಗಳ ಅಭಿಪ್ರಾಯವಿರುವುದು. ಸಮುದ್ರದ ಮೇಲಿನಿಂದ ಬಂದು ಕಾನ್‌ಸ್ಟಾಂಟಿನೋಪಲಿನ ಮೇಲೆ ಲಗ್ಗೆ ಹತ್ತಬೇಕಾದರೆ, ಒಂದು ಕಡೆ ೨೦ ಮೈಲು, ಮತ್ತೊಂದು ಕಡೆ ೫೦ ಮೈಲು ದೂರ ಸಮುದ್ರವನ್ನು ದಾಟಿಹೋಗಬೇಕಾಗಿರುವುದು. ಅವುಗಳಲ್ಲಿ ಬಾಸ್ಪರಸ್ಸಿನ ಚಿಕ್ಕ ಜಲಸಂಧಿಯ ಎರಡು ಭಾಗಗಳಲ್ಲಿಯೂ ತೀರಪ್ರದೇಶವು ಒಡೆದ ಹಾಗೆ ಇರುವುದರಿಂದ, ಈ ಜಲಸಂಧಿಯೂ ದುರ್ಗಮವಾಗುವಂತೆ ನಿಸರ್ಗದೇವತೆಯೇ ಸಹಾಯ ಮಾಡಿರುವಳು. ಆದರೆ ಈ ಮಾರ್ಗದಿಂದಲೇ ನೀರಿನ ಪ್ರವಾಹವು ಮಾರ್ಮೊರಾ ಸಮುದ್ರಕ್ಕೆ ಬರಲು ಅನುಕೂಲವೂ, ಸುಲಭವೂ ಆಗಿರುವುದು ಈ ಜಲಸಂಧಿಯ ನ್ಯೂನತೆಯೆಂದು ಹೇಳಬಹುದು. ಪ್ರಕೃತಿಯ ಅನುಗ್ರಹವಿರುವುದೆಂದು ತುರ್ಕಿಯವರೂ ಸುಮ್ಮನೆ ಕುಳಿತಿಲ್ಲ; ಡಾರ್ಡನೆಲ್ಸ್ ಜಲಸಂಧಿಗೆ ಇಷ್ಟು ನೈಸರ್ಗಿಕರಕ್ಷಣೆಯಿಲ್ಲದಿರುವುದರಿಂದ ತಮ್ಮ ಬುದ್ಧಿಕೌಶಲ್ಯವನ್ನುಪಯೋಗಿಸಿ, ತಮ್ಮಲ್ಲಿರುವಷ್ಟು ಸೈನ್ಯದಿಂದ ಆ ಜಲಸಂಧಿಯನ್ನು ಕಾಪಾಡುತ್ತಿರುವರು. ಇದಲ್ಲದೆ ಡಾರ್ಡನೆಲ್ಸಿನ ಒಂದು ಪಕ್ಕದಲ್ಲಿರುವ ಗೆಲಿಪೋಲಿ ದ್ವೀಪಕಲ್ಪವು ಶೈಲಮಯವಾಗಿಯೂ, ಸೈನ್ಯ ಸಂಚಾರಕ್ಕೆ ಅವಶ್ಯಕವಾದ ಮಾರ್ಗವಿಲ್ಲದುದಾಗಿಯೂ ಇರುವುದರಿಂದ, ಆ ದ್ವೀಪಕಲ್ಪದ ಮೇಲೆ ಯಾರೂ ದೊಡ್ಡ ಸೈನ್ಯವನ್ನು ತಂದಿಳಿಸುವಂತೆ ತೋರುವುದಿಲ್ಲ. ಡಾರ್ಡನೆಲ್ಸಿನ ಮತ್ತೊಂದು ಪಕ್ಕದಲ್ಲಿರುವ ಏಷ್ಯಾಮೈನರಿನ ತೀರದಲ್ಲಿ ಸೈನ್ಯವು ಒಂದಿಳಿಯುವುದಕ್ಕೆ ಸುಲಭವಾಗಿರುವುದು, ಆದರೆ ಈ ತೀರಪ್ರದೇಶವನ್ನು ವಶಪಡಿಸಿಕೊಳ್ಳುವುದು ಬಹಳ ಅಸಾಧ್ಯಕಾರ್ಯವಾಗಿರುವುದು. ಗೆಲಿಪೋಲಿ ಮತ್ತು ಏಷ್ಯಾಮೈನರಿನ ಈ ತೀರಪ್ರದೇಶಗಳನ್ನು ಸಂಪೂರ್ಣವಾಗಿ ಸ್ವಾಧೀನಪಡಿಸಿಕೊಂಡರೆ, ಆಗ ಮಾರ್ಮೊರಾ ಸಮುದ್ರದಲ್ಲಿ ಯುದ್ಧದ ಹಡಗುಗಳನ್ನು ತೆಗೆದುಕೊಂಡು ಹೋಗುವುದಕ್ಕೂ, ಅನಂತರ ತಮ್ಮ ವ್ಯಾಪಾರವನ್ನು ನೆಲೆಗೊಳಿಸುವುದಕ್ಕೂ ಸಾಧನವಾಗುವದು, ಮತ್ತು ಮುಂದೆ ಸಾಗಿಹೋಗುವುದಕ್ಕೂ ತಡೆಯಿಲ್ಲದಂತಾಗುವುದು. ಒಟ್ಟಿನಲ್ಲಿ ಕಾನ್‌ಸ್ಟಾಂಟಿನೋಪಲ್ ಸುತ್ತಲಿನ ಭೂಗೋಲಿಕ ಸ್ಥಿತಿಯು ತುರ್ಕಿಯವರಿಗೆ ಅನುಕೂಲವಾಗಿರುವುದರಿಂದ ಸಮುದ್ರದ ದಕ್ಷಿಣಭಾಗದಿಂದಾಗಲಿ, ಉತ್ತರಭಾಗದಿಂದಾಗಲಿ ಯಾವ ಶತ್ರುಗಳೂ ತಮ್ಮ ಮೇಲೆ ಬರಲು ಶಕ್ತರಾಗಿಲ್ಲವೆಂದು ಕಾನ್‌ಸ್ಟಾಂಟಿನೋಪಲಿನಲ್ಲಿರುವ ತುರ್ಕಿಯವರು ಅಭಿಪ್ರಾಯಪಟ್ಟಿರುವರು.

ಬ. ಪ.

ಚೀಟು ಫಂಡುಗಳು

ಹತ್ತಾರು ಮಂದಿ ಒಟ್ಟಿಗೆ ಕಲೆತು ತಲೆಗೆ ಸ್ವಲ್ಪ ಸ್ವಲ್ಪ ಹಣದಂತೆ ಕೂಡಿಸಿ ತಿಂಗಳು ತಿಂಗಳಿಗೂ ತಮ್ಮಲ್ಲಿ ಒಬ್ಬ ಮುಖಂಡನ ಕೈಗೆ ಕೊಡುವದು. ಆತನು ಹಣ ಕೊಡುವ ಒಬ್ಬೊಬ್ಬರ ಹೆಸರನ್ನೂ ಒಂದೊಂದು ಚೀಟಿಯಲ್ಲಿ ಬರೆದು ಮಡಿಸಿ ಒಂದು ಬರಣಿಯಲ್ಲಿ ಹಾಕಿಡುವುದು. ಆಯಾ ತಿಂಗಳ ಕೊನೆಯಲ್ಲಿ ಯಾವುದಾದರೂ ಒಂದು ದಿನವನ್ನು ಗೊತ್ತುಮಾಡಿ, ಆ ದಿನ ಎಲ್ಲರೂ ಕೂಡಿ ಈ ಚೀಟುಗಳೆಲ್ಲವನ್ನೂ ಕುಲುಕಿ ಒಬ್ಬ ಚಿಕ್ಕ ಹುಡುಗನ ಮುಂದೆ ಇಟ್ಟು, ಯಾವುದಾದರೊಂದು ಚೀಟಿಯನ್ನು ಎತ್ತಿಸುವುದು. ಆ ಮೇಲೆ ಆ ಚೀಟಿಯನ್ನು ತೆರೆದು ನೋಡಿ ಅದರಲ್ಲಿರುವ ಹೆಸರಿಗೆ ಆ ತಿಂಗಳ ಒಟ್ಟು ಹಣವನ್ನು ತಲಪಿಸುವುದು. ಆ ಹಣವನ್ನು ತೆಗೆದುಕೊಂಡವನಿಗೆ ಬಹುಮಾನ ಪಡೆದವನೆಂದು ಹೆಸರು. ಅದಕ್ಕೆ ಮುಂದಿನ ತಿಂಗಳೂ ಆದೇ ರೀತಿ ಮಾಡುವುದು. ಆದರೆ ಆ ಕಾಲದಲ್ಲಿ ಹಿಂದೆ ಬಹುಮಾನ ಪಡೆದವರ ಹೆಸರನ್ನು ಮಾತ್ರ ಸೇರಿಸುವುದಿಲ್ಲ. ಆಯಾ ತಿಂಗಳು ಚೀಟು ಬಿದ್ದವನಿಗೆ ಹಣ ಕೊಡುವುದಕ್ಕೆ ಮುಂಚೆ ಆತನು ಮುಂದಿನ ತಿಂಗಳುಗಳಲ್ಲಿ ಕಂತನ್ನು ಸರಿಯಾಗಿ ಸಲ್ಲಿಸುವ ಬಗ್ಗೆ ತಕ್ಕ ಆಧಾರದ ಮೇಲೆ ಒಂದು ಪತ್ರವನ್ನು ಆತನಿಂದ ಬರೆಸಿಕೊಳ್ಳುತ್ತಾರೆ. ಒಂದು ವೇಳೆ ಆ ಹಣವ

ಸರಿಯಾಗಿ ಬಾರದ ಪಕ್ಷದಲ್ಲಿ ಮುಖಂಡನು ತಕ್ಕ ಏರ್ಪಾಡು ಮಾಡಿ ಆ ಹಣವನ್ನು ತಾನೇ ಸಲ್ಲಿಸಬೇಕು. ಈ ಏರ್ಪಾಡಿಗೆ "ಚೀಟು" ಅಥವಾ "ಅಕ್ಕಲಿ" ಎಂದು ಹೆಸರು. ಇದು ಒಂದಿಲ್ಲ ಒಂದು ವಿಧದಲ್ಲಿ ಮದರಾಸ್ ಆದಿಪತ್ಯದ ಅನೇಕ ಊರುಗಳಲ್ಲಿ ಬಹು ಕಾಲದಿಂದ ನಡೆದುಕೊಂಡು ಬಂದಿದೆ. ಇದರಲ್ಲಿರುವ ಮುಖ್ಯ ಸೂಕ್ಷ್ಮವೇನೆಂದರೆ, ಇದಕ್ಕೆ ಸಂಬಂಧಪಟ್ಟವರೆಲ್ಲರೂ ಸತ್ಯಶೀಲರಾಗಿರಬೇಕು. ಅಲ್ಲದೆ, ಪೂರ್ವದಲ್ಲಿ ಸೇವಿಂಗ್ಸ್ ಬ್ಯಾಂಕುಗಳಾಗಲಿ ಸಾಲ ಕೊಡುವ ಸಂಘಗಳಾಗಲಿ ಇಲ್ಲದಿದ್ದಾಗ, ಈ ಚೀಟು ಏರ್ಪಾಡಿನಿಂದ ಎಷ್ಟು ಪ್ರಯೋಜನವಿತ್ತೆಂಬುದನ್ನು ಸುಲಭವಾಗಿ ಊಹಿಸಬಹುದು. ಇದು ಕೇವಲ "ಲಾಟರಿ" ಎಂದು ಹೇಳುವುದಕ್ಕಿಲ್ಲ. ಏಕೆಂದರೆ ಅದರಂತೆ ಇಲ್ಲಿ ಹತ್ತಾರು ಮಂದಿಗೆ ಸೊನ್ನೆ ಹಾಕಿ ಅವರ ಹಣವನ್ನು ಒಬ್ಬನಿಗೆ ಕೊಡುವ ಪ್ರಮೇಯವೇನೂ ಇಲ್ಲ. ಅವರವರ ಹೆಸರಿಗೆ ಮೊದಲು ಚೀಟು ಬೀಳುವ ಅದೃಷ್ಟಕ್ಕೆ ತಕ್ಕಂತೆ, ಈ ತಿಂಗಳಿಲ್ಲದಿದ್ದರೆ ಮತ್ತೊಂದು ತಿಂಗಳು ಒಬ್ಬೊಬ್ಬರಿಗೂ ಅವರವರ ಹಣವು ಒಟ್ಟೊಟ್ಟಾಗಿ ಸಲ್ಲುತ್ತದೆ. ಅಲ್ಲದೆ ಯೂರೋಪಿನ ಲಾಟರಿ ಕಂಪೆನಿಗಳಲ್ಲಿ ನಡೆಯುವುದಕ್ಕಿಂತಲೂ ಇದು ಕೀಳಲ್ಲ. ಇದರಲ್ಲಿ ಮುಖಂಡನಾದವನು ತಕ್ಕ ಜವಾಬ್ದಾರಿಯನ್ನು ವಹಿಸಬೇಕು, ಕೆಲವು ಸಮಯಗಳಲ್ಲಿ ಭೂಮಿ, ಒಡವೆ ಮೊದಲಾದವನ್ನು ಆಧಾರ ಬರೆದುಕೊಡಬೇಕು. ಇದಕ್ಕೆ ಪ್ರತಿಯಾಗಿ ಆತನು ಮೊದಲನೆಯ ತಿಂಗಳು ಚೀಟು ಕುಲುಕದೆ ತನ್ನ ಹೆಸರಿಗೆ ಬಹುಮಾನವನ್ನು ಪಡೆಯುವನು.

ಮೇಲೆ ಹೇಳಿದ ಏರ್ಪಾಡಿನಲ್ಲಿ ಒಂದು ವಿಶೇಷವೇನೆಂದರೆ, ಕಡೆಕಡೆಯ ತಿಂಗಳುಗಳಲ್ಲಿ ಯಾರ ಹೆಸರಿಗೆ ಚೀಟು ಬೀಳುತ್ತದೆಯೋ ಅವರಿಗಿಂತಲೂ ಮೊದಲು ಮೊದಲು ಚೀಟುಬಿದ್ದವರಿಗೆ ಲಾಭ ಹೆಚ್ಚು. ಏಕೆಂದರೆ ಅವರಿಗೆ ಅಷ್ಟು ತಿಂಗಳ ಬಡ್ಡಿ ಮಿಗುತ್ತದೆ. ಹೀಗೆ ಮಾಡದೆ ಹಣಹಾಕುವವರೆಲ್ಲರಿಗೂ ಒಂದೇ ಸಮನಾದ ಲಾಭ ಬರಬೇಕೆಂಬ ಉದ್ದೇಶದಿಂದ ಮತ್ತೊಂದು ವಿಧವಾದ ಏರ್ಪಾಡು ಕೆಲವು ಕಡೆಗಳಲ್ಲಿ ನಡೆಯುತ್ತಿದೆ. ಇದಕ್ಕೆ "ಹರಾಜು ಪದ್ಧತಿ" ಎಂದು ಹೆಸರು. ಇದರಲ್ಲಿ, ಆಯಾ ತಿಂಗಳ ಕೊನೆಯಲ್ಲಿ ಚೀಟು ಹಾಕುವುದಕ್ಕೆ ಬದಲಾಗಿ ಒಂದು ತಿಂಗಳಿಗೆ ಆಗುವ ಹಣವನ್ನು ಹರಾಜಿಗೆ ಇಡುವುದು. ದೃಷ್ಟಾಂತಕ್ಕೆ, ೨೦ ಮಂದಿ ಸೇರಿ ಒಬ್ಬೊಬ್ಬರು ತಿಂಗಳಿಗೆ ೫ ರೂ. ನಂತೆ ೨೦ ತಿಂಗಳ ಕಾಲ ಹಾಕುವುದಕ್ಕೆ ಒಪ್ಪಿದರೆ, ಆ ಹಣವು ತಿಂಗಳು ತಿಂಗಳಿಗೂ ೧೦೦ ರೂ ಆಗುವುದು. ಆಯಾ ತಿಂಗಳ ಕೊನೆಯಲ್ಲಿ ಇದನ್ನು ಹರಾಜಿಗಿಟ್ಟರೆ ಆ ಕಾಲಕ್ಕೆ ಒಟ್ಟು ಹಣವನ್ನು ಅಪೇಕ್ಷಿಸುವವರು ಮುಂದೆ ಬಂದು, ಒಬ್ಬನು ತನಗೆ ೯೦ ರೂ ಕೊಟ್ಟರೆ ಸಾಕೆಂದೂ, ಇದನ್ನು ನೋಡಿ ಇನ್ನೊಬ್ಬನು ತನಗೆ ೮೦ ರೂ ಕೊಟ್ಟರೆ ಸಾಕೆಂದೂ, ಮತ್ತೊಬ್ಬನು ೭೦ ರೂ ಸಾಕೆಂದೂ ಹೀಗೆ ಒಬ್ಬರಿಗೊಬ್ಬರು ಪೈಪೋಟಿಯಿಂದ, ತಮ್ಮ ಕೆಲಸದ ಅವಸರಕ್ಕೆ ತಕ್ಕಂತೆ, ಕೆಲವು ವೇಳೆ ೫೦ ಅಥವಾ ೪೦ ರೂಪಾಯಿಗಳ ವರೆಗೂ ಸವಾಲನ್ನು ಇಳಿಸಿ ಹಣ ತೆಗೆದುಕೊಂಡು ಹೋಗುವುದುಂಟು. ಇದರಿಂದ ಆ ಚೀಟು ಸಂಘಕ್ಕೆ ಆ ತಿಂಗಳಲ್ಲಿ ೫೦-೬೦ ರೂ ಲಾಭ ಬಂದಂತಾಗುವುದು. ಈ ಲಾಭವನ್ನು ಉಳಿದ ೧೯ ಜನಗಳಿಗೂ ಹಂಚಿಡುವರು. ಕೆಲವು ವೇಳೆ ಆ ತಿಂಗಳು ಹಣ ತೆಗೆದುಕೊಂಡವನಿಗೂ ಲಾಭವನ್ನು ಸೇರಿಸಿ ಕೊಡುವುದುಂಟು. ಈ ರೀತಿ ಪ್ರತಿ ತಿಂಗಳಲ್ಲಿಯೂ ಮಾಡುತ್ತ ಬಂದರೆ, ೨೦ ತಿಂಗಳ ಕೊನೆಯಲ್ಲಿ ಸ್ವಲ್ಪ ಸ್ವಲ್ಪ ಲಾಭ ಸೇರಿಸಿ ಒಬ್ಬೊಬ್ಬರಿಗೂ ತಕ್ಕ ಮಟ್ಟಿಗೆ ಒಳ್ಳೆಯ ಆದಾಯವು ಕೂಡಿಬರುವುದು. ಹರಾಜಿನಲ್ಲಿ ಒಂದು ವೇಳೆ ಹಣವನ್ನು ಯಾರೂ ಕೋರದಿದ್ದರೆ, ಚೀಟು ಹಾಕಿ ಅದರಲ್ಲಿ ಬಂದ ಹೆಸರಿಗೆ ಹಣವನ್ನು ಕೊಡುತ್ತಾರೆ. ಈ "ಹರಾಜು ಪದ್ಧತಿಯಲ್ಲಿ"ರುವ ದೋಷವೇನೆಂದರೆ, ೧೦೦ ರೂ ಹಣಕ್ಕೆ ಬದಲು ಒಂದೊಂದು ಸಾರಿ ಕೇವಲ ೪೦ ಅಥವಾ ೫೦ ರೂಪಾಯಿಗಳನ್ನು ಮಾತ್ರವೇ ಪಡೆಯಬೇಕಾಗಿ ಬರುವುದರಿಂದ, ಈ ಪ್ರಕಾರ ಲೆಕ್ಕ ನೋಡಲಾಗಿ ಬಡ್ಡಿಯ ದರವು ವಿಪರೀತವಾಗುವುದು. ಸಾಲಕೊಡುವ ನಿಷ್ಕರುಣೆಗಳಾದ ಜಿಗಣೆ ಸಾಹುಕಾರರುಗಳ ಬಡ್ಡಿಯ ದರಕ್ಕೂ ಇದಕ್ಕೂ ವ್ಯತ್ಯಾಸವಿರುವುದಿಲ್ಲ. ಆದಕಾರಣ ಈ ಕೊರತೆಯನ್ನು ಹೋಗಲಾಡಿಸುವುದಕ್ಕಾಗಿ, ಹರಾಜಿನ ಸವಾಲು ಇಷ್ಟಕ್ಕೆ (ಎಂದರೆ ೮೦ ಅಥವಾ ೭೦ ರೂಪಾಯಿಗಿಂತ) ಕಡಿಮೆಯಾಗಕೂಡದೆಂದು ಕೆಲವು ಕಡೆ ವಿಧಾಯಕಮಾಡಿಕೊಳ್ಳುತ್ತಾರೆ.

ಕಣಿವೆಯ ಕೆಳಗೆ ಇನ್ನು ಕೆಲವು ವಿಧವಾದ ಚೀಟು ಏರ್ಪಾಡುಗಳು ರೂಢಿಯಲ್ಲಿವೆ. ದವಸದ ಚೀಟು, ಒಡವೆ ಚೀಟು ಇವೇ ಮೊದಲಾದ ಕೆಲವು ಪದ್ಧತಿಗಳು ಬಹು ಸ್ವಾರಸ್ಯವಾಗಿದೆ. "ದವಸದ ಚೀಟು" ಎಂಬುದು ಹಣದ ಚೀಟಿನಂತೆಯೇ ನಡೆಯುತ್ತದೆ. ಹಣಕ್ಕೆ ಬದಲಾಗಿ ಬತ್ತ, ರಾಗಿ ಮುಂತಾದ ಯಾವುದಾದರೊಂದು ಧಾನ್ಯವನ್ನು ಕೂಡಿಹಾಕಿ ಚೀಟು ಬಿದ್ದವರ ಹೆಸರಿಗೆ ಅದನ್ನು ಆಯಾ ತಿಂಗಳ ಲೆಕ್ಕದ ಪ್ರಕಾರ ಒಟ್ಟಾಗಿ ಕೊಡುತ್ತಾರೆ. ಇದೇ ರೀತಿ ಬೆಲ್ಲ, ತೆಂಗಿನಕಾಯಿ, ಅಡಕೆ, ಹುಲ್ಲು, ಹುಣಸೇಹಣ್ಣು, ಮೆಣಸಿನಕಾಯಿ ಮೊದಲಾದ ಪದಾರ್ಥಗಳನ್ನೂ ಕಂತು ಕೂಡಿಸಿ ಚೀಟು ಹಾಕುವುದುಂಟು. "ಒಡವೆ ಚೀಟು" ಅಥವಾ "ಕಪ್ಪು ಚೀಟು" ಎಂಬ ಪದ್ಧತಿಯನ್ನು ತಿರುನೆಲ್ವೇಲಿ ಜಿಲ್ಲೆಯಲ್ಲಿ ಹೆಂಗಸರು ಸೇರಿ ನಡೆಸುತ್ತಾರೆ. ಇದರಲ್ಲಿ ಕೈಕಪ್ಪ, ಬಳೆ, ಕಾಲಂದಿಗೆ, ಓಲೆ ಮೊದಲಾದ ಯಾವುದಾದರೊಂದು ಒಡವೆಯನ್ನು ತಿಂಗಳು ತಿಂಗಳಿಗೂ ಚೀಟುಹಾಕಿ ಕೊಡುತ್ತಾರೆ. ಇದೇ ಪ್ರಕಾರ ಮನೆತನಕ್ಕೆ ಬೇಕಾದ ಪಾತ್ರೆಗಳು, ಬೀರುಗಳು, ಕಬ್ಬಿಣದ (ಸೇಫು) ಪೆಟ್ಟಿಗೆ ಇವೇ ಮೊದಲಾದವನ್ನು ಕೂಡ ಚೀಟಿನಲ್ಲಿ ಕೊಂಡುಕೊಳ್ಳುತ್ತಾರೆ. ಇವೆಲ್ಲವೂ ಆಯಾ ಊರಿನಲ್ಲಿರುವವರ ಬುದ್ಧಿಗೂ, ಚಾತುರ್ಯಕ್ಕೂ ತಕ್ಕಂತೆ ಅವರವರು ಮಾಡಿಕೊಂಡಿರುವ ಏರ್ಪಾಡನ್ನು ಅನುಸರಿಸುತ್ತದೆ.

ಇನ್ನು ಕೆಲವು ಕಡೆಗಳಲ್ಲಿ ಜನರು ಇದನ್ನೇ ಒಂದು ಜೀವನ ವೃತ್ತಿಯನ್ನಾಗಿ ಇಟ್ಟುಕೊಂಡಿದ್ದಾರೆ. ಅದಕ್ಕಾಗಿ ತಾವೂ ಸೇರಿ ೧೨ ಮಂದಿಯನ್ನು ಸೇರಿಸುವುದು. ಅದಕ್ಕೆ ಒಬ್ಬೊಬ್ಬರೂ ಮೊದಲನೆಯ ತಿಂಗಳು ೪ ಆಣೆ, ಎರಡನೆಯ ತಿಂಗಳು ೮ ಆಣೆ, ೩ನೆಯ ತಿಂಗಳು ೧ ರೂ ೪ನೆಯ ತಿಂಗಳು ೨ರೂ. ಇದೇ ಪ್ರಕಾರ ೧೨ನೆಯ ತಿಂಗಳು ೧೦ ರೂ ಹೀಗೆ ಕೊಡಬೇಕೆಂದು ಏರ್ಪಾಡುಮಾಡಿಕೊಳ್ಳುವುದು. ಈ ಏರ್ಪಾಡಿನಲ್ಲಿ ಮೊದಲನೆಯ ತಿಂಗಳು ಒಟ್ಟು ೩ ರೂ ಸೇರುತ್ತದೆ. ಎರಡನೆಯ ತಿಂಗಳು ೬ ರೂ. ಮುಂದಿನ ತಿಂಗಳುಗಳಲ್ಲಿ ೧೨, ೨೪, ೩೬, ೪೮, ೬೦ ... ೧೨೦ ಈ ಪ್ರಕಾರ ಸೇರುತ್ತದೆ. ಈ ಏರ್ಪಾಡಿನ ಆಡಳಿತವನ್ನು ವಹಿಸಿ ಮುಂದಾಳಾಗಿ ಬಂದವನು ತಿಂಗಳು ತಿಂಗಳಿಗೂ ಚೀಟುಹಾಕಿ ಅದರಲ್ಲಿ ಬರುವ ಹೆಸರಿಗೆ ೫೦ ರೂ. ಕೊಡುವುದಾಗಿ ಒಪ್ಪಿಕೊಳ್ಳುತ್ತಾನೆ. ಇದರಿಂದ ಮೊದಲು ೬ ತಿಂಗಳ ವರೆಗೆ ಇವನ ಕೈಬಿಟ್ಟು ಸ್ವಲ್ಪ ಹಣ ಹೋದರೆ ಕಡೆಯ ೬ ತಿಂಗಳುಗಳಲ್ಲಿ ಇವನಿಗೆ ವಿಶೇಷ ಲಾಭ ಸಿಕ್ಕುತ್ತದೆ. ಇದನ್ನು ಇವನೇ ನಡೆಸುವುದರಿಂದ ಚೀಟುಹಾಕದೆ ಮೊದಲನೆಯ ತಿಂಗಳ ೫೦ ರೂಪಾಯನ್ನು ಇವನೇ ಸ್ವೀಕರಿಸಬಹುದು. ಆದುದರಿಂದ ಮುಂದೆ ೫ ತಿಂಗಳು ಮಾತ್ರ ಇವನಿಗೆ ಕಷ್ಟ. ಅಲ್ಲಿಗೂ ಇವನ ಕೈಬಿಟ್ಟು ಹೋಗುವುದು ಎಷ್ಟೆಂದರೆ (೪೧+೩೮+೨೬+೧೪+೨, ಅಥವಾ) ೧೨೧ ರೂ. ಇಷ್ಟು ಹಣ ಮಾತ್ರ ಇವನಲ್ಲಿ ಬಂಡವಾಳವಿದ್ದರೆ ಸಾಕು. ಮುಂದಿನ ಆರು ತಿಂಗಳುಗಳಲ್ಲಿ ಇವನಲ್ಲಿಗೆ ಹೆಚ್ಚಾಗಿ ಹಣ ಸೇರುತ್ತದೆ. ಒಬ್ಬೊಬ್ಬರು ಕಟ್ಟುವ ಹಣವನ್ನು ೧೨ ತಿಂಗಳಿಗೆ ಲೆಕ್ಕ ಹಾಕಿದರೆ (೪ ಆ + ೮ ಆ + ೧ ರೂ + ೨ರೂ ... + ೧೦ರೂ =) ಒಟ್ಟು ರೂ ೫೫ ೧೨-೦ ಆಗುತ್ತದೆ. ಇವನು ಒಬ್ಬೊಬ್ಬರಿಗೆ ೫೦ ೫೦ ರೂಪಾಯಿ ಮಾತ್ರ ಸಲ್ಲಿಸುತ್ತಾನೆ. ಆದಕಾರಣ ಇವನಿಗೆ ತಿಂಗಳಿಗೆ ರೂ ೫ ೧೨ ೦ ಲಾಭ ಬಂದ ಹಾಗಾಯಿತು. ಇವನು ಮೊದಲಿಟ್ಟ ೧೨೧ ರೂ. ಬಂಡವಾಳ, ಮುಂದೆ ಇವನಿಗೆ ಕೂಡಿಬರುವ ಹಣ-ಇವೆಲ್ಲವನ್ನೂ ಲೆಕ್ಕ ಹಾಕಿ ಸರಾಸರಿ ಬಡ್ಡಿ ಹಾಕಿದರೆ ಇವನಿಗೆ ಇದರಿಂದ ತಿಂಗಳಿಗೆ ೭ ಆಣೆಗಿಂತ ಹೆಚ್ಚಾಗಿ ನಷ್ಟವಿಲ್ಲ. ಎಂದರೆ ಒಟ್ಟು ಇವನಿಗೆ ತಿಂಗಳಿಗೆ ರೂ ೫ ೫-೦ ಲಾಭವಾಯಿತು. ಇದಲ್ಲದೆ ಬಹುಮಾನ ಪಡೆದವರಿಂದ ಕಮಿಷನ್ ಸರಿಯಾಗಿ ಕಂತು ಕಟ್ಟದವರಿಂದ ದಿನಕ್ಕೆ ರೂಪಾಯಿ ಒಂದಕ್ಕೆ ೩ ಕಾಸು ಬಡ್ಡಿ, ಈ ಪ್ರಕಾರ ಬೇರೆ ಲಾಭವಿದೆ. ಈ ರೀತಿ ಈತನು ಇದರ ಜೊತೆಗೆ ಇನ್ನೂ ೮ ೧೦ ಚೀಟು ಸಂಘಗಳನ್ನು ಏರ್ಪಡಿಸಿಕೊಂಡಿರುವುದರಿಂದ, ಇದರಲ್ಲಿಯೇ ಇವನಿಗೆ ತಿಂಗಳಿಗೆ ೫೦-೬೦ ರೂ. ಹುಟ್ಟುವಳಿಯಾಗಿ ಇವನ ಜೀವನವು ನಿರಾಯಾಸವಾಗಿ ನಡೆಯುವುದು.

ಸಹಕಾರ ಸಂಘಗಳಲ್ಲಿ ಕೂಡ ಎರಡು ವಿಧವಾದ ಚೀಟು ಏರ್ಪಾಡುಗಳನ್ನು ಇಟ್ಟಿರುವರು. ಒಂದು "ಹರಾಜುಪದ್ಧತಿ", ಮತ್ತೊಂದು, "ಲಾಟರಿಪದ್ಧತಿ". ಚೀಟು ಹಣಕ್ಕೆ ಬಹಳ ಸತ್ಯವಂತರಾಗಿರುವವರನ್ನು ಮಾತ್ರ ಸೇರಿಸಿಕೊಳ್ಳುತ್ತಾರೆ. ೧೦-೧೦ ಯಂತೆ ಹತ್ತು ಮಂದಿ ಹತ್ತು ತಿಂಗಳು ಹಾಕುವರು. ಇದರಿಂದ ತಿಂಗಳಿಗೆ ೧೦೦ ರೂಪಾಯಿ ಕೂಡುತ್ತದೆ. ಇದನ್ನು ಹರಾಜಿಗೆ ಇಡುತ್ತಾರೆ. ಹಿಂದೆ ಒಂದು ಕಡೆ ತಿಳಿಸಿದಂತೆ ಹರಾಜಿನಲ್ಲಿ ಸವಾಲು ಬಹಳ ದೂರ ಇಳಿಯದಂತೆ ಇಷ್ಟಕ್ಕೆ ಮೇಲೆಯೇ ಇರಬೇಕೆಂದು ಒಂದು ಕಟ್ಟು ಮಾಡಿದ್ದಾರೆ. ಇದರ ಲೆಕ್ಕ ಹೇಗೆಂದರೆ, ಸಂದರ್ಭಕ್ಕೆ ತಕ್ಕಂತೆ ಬಡ್ಡಿಯ ದರವನ್ನು ಶೇಕಡ ೧೨ ಅಥವಾ ೨೪ರ ಪ್ರಕಾರ ಹಾಕಿಕೊಂಡು, ಹರಾಜಿನಲ್ಲಿ ಯಾರ ಸವಾಲು ಬಹಳ ಕಡಿಮೆ ಹಣಕ್ಕೆ ಇಳಿಯುತ್ತದೆಯೋ, ಅವರಿಗೆ ಕೊಡುವ ಹಣವು ಈ ಬಡ್ಡಿಯ ಮೇರೆಗೆ ಚೀಟು ಮುಗಿಯುವ ಕೊನೆಯಲ್ಲಿ ಅಸಲೂ ಬಡ್ಡಿಯೂ ಸೇರಿ ೧೦೦ ರೂಪಾಯಿಗೆ ಏರಿದಂತೆ ಏರ್ಪಡಿಸಿರುತ್ತಾರೆ. ಇದರಿಂದ ಜನಗಳಿಗೆ ನಷ್ಟವಿಲ್ಲ. ಮೂರನೆಯ ತಿಂಗಳ ಕೊನೆಯಲ್ಲಿ ಒಬ್ಬನ ಹೆಸರಿಗೆ ಸವಾಲು ಬಿದ್ದರೆ ಅವನಿಗೆ ತಿಂಗಳಿಗೆ ಒಂದು ಬಡ್ಡಿಯ ಪ್ರಕಾರ ಲೆಕ್ಕ ಹಾಕಿ ರೂ. ೯೩-೭-೪ ಕಾಸುಗಳನ್ನು ಕೊಡುತ್ತಾರೆ. ಇದರಿಂದ ಚೀಟು ಸಂಘದವರಿಗೆ ರೂ. ೬-೮-೮

ಭವಾಯಿತು ಹೀಗೆ ಲಾಭವನ್ನು ತಿಂಗಳು ತಿಂಗಳಿಗೂ ಸೇರಿಸಿ ಚೀಟುಹಣ ಹಾಕಿದವರಿಗೆ ಸಮಭಾಗವಾಗಿ ಹಂಚುತ್ತಾರೆ ಒಂದು ವೇಳೆ ಸವಾಲು ಸ್ವಲ್ಪ ಹೆಚ್ಚಿದರೂ ಚೀಟುಹಾಕಿರುವವರಿಗೆ ಒಟ್ಟಿನಲ್ಲಿ ವಿಶೇಷ ನಷ್ಟವಾಗುವುದಿಲ್ಲ. ಆದರೆ ಆಯಾ ತಿಂಗಳ ಹರಾಜಿನಲ್ಲಿ ಹಣ ಪಡೆಯುವವರು ಮುಂದೆ ತಿಂಗಳು ತಿಂಗಳಿಗೂ ಸರಿಯಾಗಿ ಕಂತು ಕಟ್ಟುವ ಬಗ್ಗೆ ತಕ್ಕ ಆಧಾರವನ್ನು ಕೊಟ್ಟು ಹಣವನ್ನು ತೆಗೆದುಕೊಳ್ಳಬೇಕು ಇದೇ ಏರ್ಪಾಡುಗಳನ್ನೇ "ಲಾಟರಿ ಪದ್ಧತಿ"ಯಲ್ಲಿಯೂ ಮಾಡಿರುತ್ತಾರೆ ಈ ವಿಧವಾದ ವ್ಯವಹಾರದಲ್ಲಿ ಯಾವ ಅನ್ಯಾಯವೂ ಇಲ್ಲ ಅಲ್ಲದ ಸಲ್ಲದ ನಷ್ಟವು ಯಾರಿಗೂ ಇಲ್ಲ.

ಈ ಚೀಟು ಏರ್ಪಾಡಿನಿಂದ ಬಹಳ ಪ್ರಯೋಜನವಿದೆ. ಇದು ಜನರಿಗೆ ಒಪ್ಪವನ್ನೂ ಮಿತವ್ಯಯವನ್ನೂ ಕಲಿಸುತ್ತದೆ ಹಣವನ್ನು ಕೂಡಿಹಾಕುವುದಕ್ಕೆ ಮಾರ್ಗವನ್ನು ತೋರಿಸುತ್ತದೆ ಆ ಮೂಲಕ ದೇಶದಲ್ಲಿ ಮೂಲಧನ ಅಥವಾ ಬಂಡವಾಳವು ಅಭಿವೃದ್ಧಿಯಾಗುತ್ತದೆ ಹಣವನ್ನು ಮುಚ್ಚಿಟ್ಟು ಮುಗಿಸುವ ದುರಭ್ಯಾಸವು ತಪ್ಪುತ್ತದೆ. ಹಣವು ದಿನೇ ದಿನೇ ಹೆಚ್ಚುವುದಕ್ಕೆ ಕಾರಣವಾಗುತ್ತದೆ ಅಲ್ಲದೆ, ಜನಗಳಿಗೆ ಹಣದ ವ್ಯವಹಾರವು ಚೆನ್ನಾಗಿ ಅನುಭವಕ್ಕೆ ಬರುತ್ತದೆ ಮೇಲಾಗಿ, ಕಣ್ಣಿಗೆ ಕಾಣಿಸದೆ ಹಾಗಿಷ್ಟು ಹೀಗಿಷ್ಟು ವ್ಯರ್ಥವಾಗಿ ಖರ್ಚಾಗಿ ಹೋಗುವ ಹಣವು ಉಳಿದು ಒಂದು ಕಡೆ ಒಟ್ಟಾಗಿ ಸೇರಿ ವ್ಯವಸಾಯ, ವ್ಯಾಪಾರ, ಕೈಗಾರಿಕೆ ಮೊದಲಾದ ಉತ್ಪನ್ನ ಕಾರ್ಯಗಳಿಗೆ ದೊರೆಯಲು ಮಾರ್ಗವಾಗುತ್ತದೆ. ಅರ್ಥಸಾಧಕ ಪ

---o---

ಕ್ಷಯರೋಗ ನಿವಾರಣೆಯ ಸುಲಭ ಉಪಾಯಗಳು.

ನಿಂಬೇ ಹಣ್ಣಿನ ರಸವು ಕ್ಷಯರೋಗ ನಿವಾರಣೆಗೆ ಸುಲಭ ಉಪಾಯವೆಂದು ಈಚೆಗೆ ಅನುಭವ ಸಿದ್ಧಾಂತದಿಂದ ಕಂಡು ಬಂದದೆ ಈ ವಿಷಯ ಮಿಸೆಸ್ ಎಲಿಸ್ ವಿಲ್ಸನ್ ಎಂಬ ಅಮೇರಿಕದ ಸ್ತ್ರೀಯು ಒಂದು ಪತ್ರಿಕೆಗೆ ಬರೆದ ಲೇಖನದಿಂದ ನಿಂಬೆ ಹಣ್ಣಿನ ಮಹತ್ವವು ಹೊರಬಿದ್ದದೆ

ಒಂದು ಡಜನ್ ನಿಂಬೇ ಹಣ್ಣುಗಳನ್ನು ಬಿಸಿನೀರಿನಲ್ಲಿ ಹಾಕಿ ಅವನ್ನು ಕುದಿಸಿ, ನಂತರ ಹಣ್ಣನ್ನು ಹಿಂಡಿ ರಸ ತೆಗೆದು, ರಸಕ್ಕೆ ಸ್ವಲ್ಪ ಸಕ್ಕರೆ ಹಾಕಿ ಕುಡಿಯಬೇಕು ಒಂದು ದಿವಸಕ್ಕೆ ಡಜನ್ ಹಣ್ಣಿನಂತೆ ಪ್ರಯೋಗಿಸಬೇಕು ಇದರಿಂದ ಹೊಟ್ಟೆನೋವು ಮತ್ತು ನೀರು ತೊರಕಡಯಾದ ಪಕ್ಷಕ್ಕೆ ದಿವಸಕ್ಕೆ ೫-೬ ಹಣ್ಣಿನ ರಸ ಕುಡಿಯಬೇಕು ಹೀಗೆ ಕುಡಿಯುವಾಗ ಹೊಟ್ಟೆನೋವು ನಿಂತರೆ ದಿನೇ ದಿನೇ ಒಂದರಂತೆ ಹೆಚ್ಚಿಸುತ್ತಾ ಬಂದು ದಿನಕ್ಕೆ ೧೨ ಹಣ್ಣಿನ ರಸ ಕುಡಿಯಬೇಕು ಸಮಯ ಹೋಗುತ್ತಾ ದಿವಸಕ್ಕೆ ೫—೬ ಡಜನ್ ನಿಂಬೇ ಹಣ್ಣುಗಳ ರಸವನ್ನೂ ಕುಡಿಯಬಹುದು ಇದರಿಂದ ಜೀರ್ಣಶಕ್ತಿಯು ಸರಿಯಾಗಿ ದೇಹದಾರ್ಢ್ಯ ಉಂಟಾಗುವದು ಎಂದಾಗಿ ಮಿಸೆಸ್ ಎಲಿಸರವರು ಸೂಚಿಸಿ, ನಿಂಬೇ ಹಣ್ಣಿನ ಈ ಪ್ರಯೋಗದಿಂದ ಗುಣಹೊಂದಿದ ಎರಡು ರೋಗಿಗಳ ದೃಷ್ಟಾಂತಗಳನ್ನು ವಾಚಕರ ಅವಗಾಹನೆ ಬಗ್ಗೆ ತಂದಿರುತ್ತಾರೆ ವೈದ್ಯರು ಎರಡು ಕ್ಷಯರೋಗಿಗಳೂ ಗುಣವಾಗುವದು ಕಷ್ಟವೆಂದು ಹೇಳಿ ಔಷಧೋಪಚಾರ ಮಾಡುವದನ್ನೇ ನಿಲ್ಲಿಸಿದ್ದರು ಆದರೆ ಮೇಲೆ ಹೇಳಿದ ರೀತಿಯಲ್ಲಿ ನಿಂಬೇ ಹಣ್ಣನ್ನು ಪ್ರಯೋಗಿಸಿದ್ದರಿಂದ ಇಬ್ಬರೂ ಗುಣ ಹೊಂದಿರುತ್ತಾರೆ ಒಬ್ಬ ಹೆಂಗಸು ಹಾಸಿಗೆ ಹಿಡಿದು ಮಲಗಿದ್ದಳು. ಕ್ಷಯರೋಗ ನಿವಾರಣೆಗಾಗಿ ಇದ್ದ ಹಣವನ್ನೆಲ್ಲಾ ಔಷಧಿಗೆ ವೆಚ್ಚ ಮಾಡಿದಳು ಆದರೆ ಗುಣ ಹೊಂದಲಿಲ್ಲ ಕಡೆಗೆ ತನ್ನ ಸ್ನೇಹಿತರ ಮಾತಿನಂತೆ ನಿಂಬೇಹಣ್ಣನ್ನು ಪ್ರಯೋಗಿಸೆ ಪ್ರಾರಂಭಿಸಿ ಮೂರು ತಿಂಗಳೊಳಗೆ ಪೂರ್ಣ ಸೌಖ್ಯ ಹೊಂದಿ ೧೪೦ ರಾತಲು ಬಾರವಾದಳು ಈಗ ಅವಳು ಗಟ್ಟಿಮುಟ್ಟಾದ ಹೆಂಗಸಾಗಿದ್ದಾಳೆಂತ ಮಿಸೆಸ್ ಎಲಿಸರವರು ಬರೆದಿರುತ್ತಾರೆ

ನಿಂಬೇ ಹಣ್ಣಿಗಿರುವಂತೆಯೇ ಬೆಳ್ಳುಳ್ಳಿಗೂ ಕ್ಷಯ ರೋಗಾಣುಗಳನ್ನು ನಾಶ ಮಾಡುವ ಶಕ್ತಿ ಇದೆ ಎಂಬ ಅನುಭವಸಿದ್ಧವಾದ ದೃಷ್ಟಾಂತಗಳು ಇವೆ. ಬೆಳ್ಳುಳ್ಳಿಯಲ್ಲಿ ಎಲೈಲ್ ಸಲ್ಫೈಡ್ ಎಂದು ಕರೆಯಲ್ಪಡುವ ಬಲಂಷೈನ್ ಎಣ್ಣೆಯ ಸಾರವು ಇದೆ. ಈ ಎಣ್ಣೆಗೆ ನಾಶಮಾಡುವ ಗುಣವಿರುವದರಿಂದ ಇದು ಕ್ಷಯರೋಗಾಣುಗಳ ಬೆಳವಣಿಕೆಗೆ ತಡೆಕಟ್ಟುತ್ತದೆ ಬೆಳ್ಳುಳ್ಳಿಯನ್ನು ಉಪಯೋಗಿಸಿದರೆ ಅದರಲ್ಲಿರುವ ಈ ಎಣ್ಣೆಯು ಶ್ವಾಸಕೋಶ, ಚರ್ಮ, ಮೂತ್ರಾಶಯ ಮತ್ತು ಕಲಿಜೆ ಮೊದಲಾದ ಇಂದ್ರಿಯಗಳೊಳಗೆ ಸೇರಿಕೊಂಡು ಅವರೊಳಗಿರುವ ರೋಗಾಣುಗಳನ್ನು ನಾಶಮಾಡುತ್ತವೆ. ಬಾಹ್ಯ ಲೇಪನವಾಗಿ ಬೆಳ್ಳುಳ್ಳಿಯನ್ನು ಉಪಯೋಗಿಸಲೂ ಬಹುದು. ಹೀಗೆ ಉಪಯೋಗಿಸುವದರಿಂದ ಚರ್ಮವು ಅದರ ಎಣ್ಣೆಯನ್ನು ಸುಲಭವಾಗಿ ಹೀರಿಕೊಂಡು ಶರೀರದ ನಾಡಿಕೊಟಗಳಿಗೆ ಸೇರಿಸಿಕೊಳ್ಳುತ್ತದೆ. ದೇಹದ ಯಾವ ಇಂದ್ರಿಯಗಳಿಗೆ ಕ್ಷಯರೋಗವು ಸೋಂಕಿದರೂ ಬೆಳ್ಳುಳ್ಳಿಯನ್ನು ಪ್ರಯೋಗಿಸುವದರಿಂದ ಮಹತ್ತಾದ ಪ್ರಯೋಜನವು ಉಂಟಾಗುವದು. ಚರ್ಮ, ಎಲುಬು, ಶ್ವಾಸಕೋಶ, ಮೊದಲಾದ ಅವಯವಗಳಿಗೆ ಇದರಿಂದ ಹೆಚ್ಚಿನ ಪ್ರಯೋಜನವಿದೆ ಎಂಬುದು ಅನುಭವಸಿದ್ಧಾಂತವಾಗಿದೆ. ಈಚೆಗೆ ೧೦ ವರ್ಷ ವಯಸ್ಸಿನ ಹುಡುಗನೊಬ್ಬನ ಕೈ ಎಲುಬುಗಳಿಗೆ ಕ್ಷಯರೋಗವು ಸೋಂಕಿ ಅಂಗೈಯಲ್ಲಿ ಹುಣ್ಣಾಗಿ ತುಂಬಾ ಕೀವು ಹರಿಯುತ್ತಿತ್ತು ಬೆಳ್ಳುಳ್ಳಿಯನ್ನು ಕೊಬ್ಬಿನೊಡನೆ ಬೆರಸಿ ಪೋಲ್ಟಿಸ್ ಮಾಡಿ ೨೪ ತಾಸಿಗೊಂದಾವರ್ತಿ ಆ ಹುಣ್ಣಿಗೆ ಕಟ್ಟುತ್ತಾ ಬಂದಲ್ಲಿ ಗುಣವಾಗುವದಿಲ್ಲವೆಂದು ಡಾಕ್ತಾರರು ಅಭಿಪ್ರಾಯಪಟ್ಟ ಹುಡುಗನ ಕೈ ಹುಣ್ಣು ೬ ವಾರದೊಳಗೆ ಪೂರಾ ವಾಸಿಯಾಯಿತೆಂದು ಮತ್ತೊಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಪತ್ರವ್ಯವಹಾರ.

ಶಾಲೆಯ ಆಡಳಿತೆದಾರರು ಮಾಡಬೇಕಾದ್ದೇನು?

ಸ್ವಾಮಿ,

ಬರೆದಿರುವದು ಮತ್ತು ಬರದಂತೆ ಮಾಡುವದು ಇವೆರಡು ಪ್ರತ್ಯೇಕ ಕ್ರಿಯೆ ಅಥವಾ ಕರ್ಮಗಳಾಗಿವೆ ಭಾರತೀಯರು ಮತ್ತು ಬಾಲಕರ ಸ್ನೇಹಿತರ ಮಾತುಗಳೂ ಅಥವಾ ಸೂಚನೆಗಳೂ ಬಹಳ ಯೋಗ್ಯವಾದವುಗಳೂ ಯುಕ್ತಿ ಯುಕ್ತವಾದವುಗಳೂ ಆಗಿವೆ ಆದರೆ ಸೂಚಿಸಿದ್ದನ್ನು ಕ್ರಿಯಾರೂಪಕ್ಕೆ ತರಬೇಕಾದರೆ ಎಂಥೆಂಥಾ ಅಭ್ಯಂತರಗಳಿವೆ ಎಂಬದನ್ನು ಸಹ ಪರಿಶೀಲಿಸಿ ಶಾಲಾ ಆಡಳಿತೆದಾರರ ಕಣ್ಣುಗಳಿಗೆ ಅಂಜನ ಇಕ್ಕುವ ಬಗೆಯನ್ನು ನಂತರ ಆಲೋಚಿಸಬಹುದಿತ್ತು. ಅಂಥಾ ಉಪಾಧ್ಯಾಯರು ಬೇಕು, ಇಂಥಾ ಉಪಾಧ್ಯಾಯರು ಬೇಕು ಎಂತ ಶುಲಭದಲ್ಲಿ ಬರೆಯಬಹುದು. ಆದರೆ ಇಂಥವರನ್ನು ತಯಾರಿಸುವದು ಯಂತ್ರಗಳ ಮೂಲಕ ಸಾಧ್ಯವಾಗುತ್ತಿದ್ದರೆ ಬೇಕಾದ ನಮೂನೆಯ ಉಪಾಧ್ಯಾಯರುಗಳನ್ನು ನಾವು ಸಿದ್ಧಪಡಿಸಬಹುದು. ಉತ್ಸಾಹ, ಅಭಿಮಾನ ಬುದ್ಧಿವಾದ, ಒಳ್ಳೇ ಒಳ್ಳೇ ಸೂಚನೆಗಳನ್ನು ಉದ್ದ ಉದ್ದವಾಗಿ ಬರೆದು ಪತ್ರಗಳಿಗೆ ಪ್ರಕಟಣೆ ಬಗ್ಗೆ ಕಳುಹಿಸಿಕೊಡಬಹುದು. ಆದರೆ ಹೀಗೆ ಬರೆಯುವದಕ್ಕಿಂತ ಇದಕ್ಕಿಂತಲೂ ಉತ್ತಮವೂ ಉಪಯೋಗಕರವೂ ಆದ ಇನ್ನೊಂದು ಸಾಧನೆಯನ್ನು ನಮ್ಮ ಯುವಕವರ್ಗದವರು ಕೈಕೊಳ್ಳಬಹುದು. ಸ್ವಾಮಿ, ಕಳೆದ ಸಂಚಿಕೆಯ ಲೇಖಗಳೊಂದರಲ್ಲಿ ವಿದ್ಯಾವಂತರು ಸಲಿಸತಕ್ಕ ಋಣವು ಎಂಬುವ ಲೇಖವೊಂದಿದೆ. ಆ ಲೇಖದಲ್ಲಿ ಸೂಚಿಸಿದಂತೆ ವಿದ್ಯಾವಂತರು ತಮ್ಮ ಋಣವನ್ನು ಸಲ್ಲಿಸುವ ಬದಲಿಗೆ ಏನು ಮಾಡುತ್ತಿರುವರು? ಖರ್ಚಿಗೆ ಸಾಲದೆಂತ ಇನ್ನೂ ಋಣವನ್ನು ಇತರರಿಂದ ಹೆಚ್ಚೆಚ್ಚಾಗಿ ತೆಗೆದುಕೊಳ್ಳುತ್ತಿದ್ದಾರೆ ಎಂತ ಹೇಳಬಹುದೋ? ಅಲ್ಲಲ್ಲಿ ಕೆಲವು ವಯೋವೃದ್ಧರು ಕೂಡಿಕೊಂಡು ಶಾಲಾ ಆಡಳಿತೆ ಕೆಲಸವನ್ನು ವಹಿಸಿಕೊಂಡಿದ್ದಾರೆ. ಈ ಆಡಳಿತೆಯ ಕೆಲಸವು ಒಳ್ಳೇದಾಗುವಂತೆ ಶಾಲಾ ವಿಷಯಗಳಲ್ಲಿ ಆಸಕ್ತಿಯನ್ನು ಕ್ರಿಯಾರೂಪು ತೋರಿಸಲಿಕ್ಕೆ ಭಾರತೀಯ ಮತ್ತು ಬಾಲಕರ ಸ್ನೇಹಿತರಂಥಾ ಮಹನೀಯರಿಗೆ ಯಾರ ಆತಂಕವೂ ಇರದು ತಮ್ಮ ಆಸಕ್ತಿಯನ್ನು ಹೆಚ್ಚೆಚ್ಚಾಗಿ ತೋರಿಸಿ ಆಡಳಿತೆಯ ಜವಾಬ್ದಾರಿಕೆಗೆ ಅರ್ಹತೆಯು ಉಂಟೆಂತ ಕಂಡು ಬಂದರೆ ಆಡಳಿತೆಯ ಮೆಂಬರರಲ್ಲಿಯೂ ಕ್ರಮೇಣ ಸೇರಬಹುದು ಪ್ರಕೃತ ವಿದ್ಯಾವಂತರು, ಈಗಿನ ಪೀಳಿಗೆಯವರು ಶಾಲೆಗಳ ಮಠಾರಗಳು ಸಹ ಎಲ್ಲಿವೆ ಎಂತ ನೋಡುವಲ್ಲಿ ಶ್ರಮವನ್ನು ವಹಿಸಿಕೊಳ್ಳದಿದ್ದರೆ ಶಾಲೆಗಳ ಆಡಳಿತೆದಾರರು ಮಾಡಬೇಕಾದದ್ದೇನು?

ಆಡಳಿತೆದಾರರ ಸ್ನೇಹಿತ

ಪತ್ರಾಧಿಪರೇ,

ತಾಲೂಕು ಬೋರ್ಡು ಮೊದಲಾದವುಗಳಿಗೆ ಇತ್ತಲಾಗೆ ಒಂದು ಸರಕಾರದವರ ಅಪ್ಪಣೆಇತ್ತು ಪಟ್ಣಗಳ ವಿಸ್ತಾರವನ್ನು ಹೆಚ್ಚಿಸಿ ಉಪಪಟ್ಣಗಳನ್ನು ಸಜ್ಜುಗೊಳಿಸುವಾಗ ಬೋರ್ಡಿನವರು ಏನೇನೆಲ್ಲಾ ಮಾಡಬೇಕೆಂತ ಈ ಹುಕುಮಿನಲ್ಲಿ ಇತ್ತಲ್ಲದೆ ಈ ಬಗ್ಗೆ ಬೋರ್ಡು ಮೆಂಬರರ ಪ್ರತ್ಯೇಕ ಒಂದು ಕಮಿಟಿಯನ್ನು ಏರ್ಪಡಿಸಬೇಕೆಂಬದಾಗಿ ಸಹ ಇದೆ ಅಜ್ಜರ ಕಾಡನ್ನು ರೂಪಾಂತರಗೊಳಿಸಿ ಅದರಲ್ಲಿ ಪಟ್ಣರಚನೆಯನ್ನು ಕೈಕೊಂಡಂಥಾದ್ದು ಈ ಪ್ರಾಂತ್ಯದ ವಾಚಕರಿಗೆ ಗೊತ್ತಿರಬಹುದು. ಸರಕಾರದವರ ಹುಕುಮಿನ ಮೇರೆಗೆ ಇಂಥಾದೊಂದು ಸಬ್ ಕಮಿಟಿಯು ನಮ್ಮ ತಾಲೂಕ ಬೋರ್ಡಿನಿಂದ ನಿಯಮಿಸಲ್ಪಟ್ಟದೋ? ಅಂಥಾ ಕಮಿಟಿಯ ಮೆಂಬರರು ಯಾರೆಂದು ಗೊತ್ತಿದ್ದವರು ಯಾರಾದರೂ ತಿಳಿಸುತ್ತಿದ್ದರೆ ಉಪಕಾರವಾಗುತ್ತಿತ್ತು.

ಉಡುಪಿ
ತಾ. 28—6—15.

ಉಡುಪಿ ಪಟ್ಟಣಿಗ.

ಯುದ್ಧ ಸಮಾಚಾರ.

—o—

ತಾ. ೨೩ನೇ ಜೂನ್.

ನ್ಯೂಯೋರ್ಕಿನಿಂದ ಲಿವರ್‌ಪೂಲಿಗೆ ಬರುತ್ತಿದ್ದ "ಕೆಮರೋನಿಯ" ಎಂಬ ಹಡಗವನ್ನು ಮುಳುಗಿಸಲು ಜರ್ಮನರ ಒಂದು ಜಲಾಂತರ್ಗಾಮಿ ನಾವೆಯು ಯತ್ನಮಾಡಿತು. ಆದರೆ ಕೆಮರೋನಿಯ ಹಡಗವು ಪೂರ್ಣ ಓಟದಿಂದ ತಪ್ಪಿಸಿಕೊಂಡು ಬಂದಿರುವದು. ಈ ಹಡಗದಲ್ಲಿ ಅಮೇರಿಕದ ಅನೇಕ ಜನರು ಪ್ರಯಾಣ ಮಾಡುತ್ತಿದ್ದರು.

ಅರ್‍ರಾಸಿನ ಉತ್ತರದಲ್ಲಿ ಫ್ರೆಂಚರು ಮುಂದರಿದು ಕೆಲವು ಕಂದಕಗಳನ್ನು ಹಿಡಕೊಂಡಿರುತ್ತಾರೆ. ಫ್ರೆಂಚರು ಸೌಸೆಜ್ ಕ್ರಾಮದ ಉತ್ತರ ಪಶ್ಚಿಮ ದಿಕ್ಕಿನಲ್ಲಿ ಮುಂದರಿದಿರುತ್ತಾರೆ. ಜರ್ಮನರು ವೆರೊನ್ನೆಯ ಪಶ್ಚಿಮದಲ್ಲಿ ನುಗ್ಗಿ ಬಂದು ವಿಶೇಷ ನಷ್ಟಪಟ್ಟು ಹಿಮ್ಮೆಟ್ಟಿದರು.

ಜರ್ಮನರು ಪ್ರಚಂಡವಾದ ಬಲದಿಂದ ಮ್ಯೂಸ್ ಗುಡ್ಡಗಳನ್ನು ಸ್ವಾಧೀನಮಾಡಿಕೊಳ್ಳಲು ನುಗ್ಗಿ ಬಂದರು. ಆದರೆ ಮಿತ್ರರು ಅವರಿಗೆ ಬಿಟ್ಟುಕೊಡಲಿಲ್ಲ. ಲೊರೈನಿನಲ್ಲಿ ಮಿತ್ರರು ಶತ್ರುಗಳ ಮೊದಲನೇ ಸಾಲಿನಲ್ಲಿ ೧೫೦೦ ಗಜದ ವರೆಗಿನ ರಣರಂಗವನ್ನು ಸ್ವಾಧೀನಮಾಡಿಕೊಂಡಿರುತ್ತಾರೆ. ಸಾಯಂಕಾಲ ಮಿತ್ರರು ಶತ್ರುಗಳ ಒಂದು ಬಲವಾದ ಸೇನಾಂಗವನ್ನು ಚದರಿಸಿ ಬಿಟ್ಟರು. ೩-೪ ಸ್ಥಳಗಳಲ್ಲಿ ಜರ್ಮನರು ತಮ್ಮ ನೆಲೆಗಳನ್ನು ಬಿಟ್ಟು ಹೋಗಿರುವರು. ಶತ್ರುಗಳ ಕಂದಕಗಳು ಸತ್ತ ಸೈನಿಕರ ಶವಗಳಿಂದ ತುಂಬಿಹೋಗಿರುವವು. ಅರ್‍ರಾಸಿನ ಉತ್ತರದಲ್ಲಿ ಶತ್ರುಗಳ ವಾಯು ನಾವೆಗಳ ಬಂದರಕ್ಕೆ ಮಿತ್ರರ ವಾಯುನಾವಿಕರು ಬೊಂಬುಗಳನ್ನು ಎಸೆದಿರುವರು. ಇದರಿಂದ ಶತ್ರುಗಳ ವಾಯುನಾವೆಗಳಿಗೆ ಹಾನಿಯಾಗಿರುವದು.

ಪಶ್ಚಿಮ ಅರ್ಗೋನ್ನೆಯಲ್ಲಿ ಶತ್ರುಗಳು ವಿಷಕರವಾದ ಸಿಡಿಮದ್ದುಗಳ ಮೂಲಕ ಫ್ರೆಂಚರ ಮುಂದರಿದ ಸೇನೆಗಳ ಮೇಲೆ ನುಗ್ಗಿ ಬಂದುದರಿಂದ ಫ್ರೆಂಚ ಸೇನಿಕರು ಕೆಲವು ಕಡೆಗಳಲ್ಲಿ ತಮ್ಮ ನೆಲೆಗಳನ್ನು ಬಿಟ್ಟು ಹಿಂದರಿದರು. ಆದರೆ ಕೂಡಲೇ ಫ್ರೆಂಚ ಸೇನಿಕರು ಪುನಃ ಶತ್ರು ಸೇನೆಯ ಮೇಲೆ ನುಗ್ಗಿ ಕಳಕೊಂಡ ನೆಲೆಗಳನ್ನೆಲ್ಲಾ ಸ್ವಾಧೀನಮಾಡಿಕೊಂಡರು. ಮ್ಯೂಸಿನಲ್ಲಿ ಫ್ರೆಂಚರಿಗೆ ಜಯವಾಗಿ ಕೆಲವು ಕಂದಕಗಳನ್ನು ಹಿಡಕೊಂಡರು.

ಫೆಟ್ಶೆರಾವ್ ಮತ್ತು ಅಲ್ಸೆಸಿನಲ್ಲಿ ಮಿತ್ರರು ಕೆಲವು ಸ್ಥಳಗಳನ್ನು ಹಿಡಕೊಂಡು ಶತ್ರುಗಳನ್ನು ಹಿಂದಕ್ಕೆ ಓಡಿಸಿದರು. ಇಲ್ಲಿ ಫ್ರೆಂಚರು ೩೦೦ ಮಂದಿ ಶತ್ರುಸೇನಿಕರನ್ನು ಸೆರೆಹಿಡಿದಿರುತ್ತಾರೆ

ರವರುಸ್ಕ ಪ್ರಾಂತ್ಯದಲ್ಲಿ ಶತ್ರುಗಳು ನುಗ್ಗಿಬರುತ್ತಿದ್ದಾರೆ ರುಷ್ಯನರು ಗ್ರೊಡೆಕ್ ಸರೋವರಗಳ ಪ್ರಾಂತ್ಯದಿಂದ ಲೆಂಬರ್ಗಿನ ಕಡೆಗೆ ಬಂದಿರುವರು. ಗ್ರೊಡೆಕ್‌ನಲ್ಲಿ ಕದನ ನಡೆಯುವಾಗ ಕೈಸರರು ಖುದ್ದಾಗಿ ಹಾಜರಿದ್ದರು.

ಜಲಾಂತರ್ಗಾಮಿ ನಾವೆಗಳಿಗೆ ಸನ್ನಾಹಗಳನ್ನು ಕೊಂಡು ಹೋಗುತ್ತಿದ್ದ "ಹೊಲ್ಲಿ" ಎಂಬ ಆಸ್ಟ್ರಿಯನರ ಹಡಗವನ್ನು ಇಟಲಿಯನರ ಒಂದು ಕ್ರೂಜರ್ ನಾವೆಯು ಹಿಂದಟ್ಟಿ ಹಿಡಿದಿರುವದು.

ದಕ್ಷಿಣ ಪಶ್ಚಿಮ ಆಫ್ರೀಕದಲ್ಲಿ ಜನರಲ್ ಬೋಥರವರ ಸೇನೆಯು ಒಮರಾರು ಎಂಬ ಸ್ಥಳವನ್ನು ಹಿಡಿದು ಮುಂದಕ್ಕೆ ನುಗ್ಗಿ ಹೋಗುತ್ತಿದೆ.

ತಾ. ೨೪ನೇ ಜೂನ್.

ಜರ್ಮನರು ಬಹಳ ದೂರಕ್ಕೆ ಹೋಗುವ ಫಿರಂಗಿಗಳಿಂದ ಡನ್‌ಕರ್ಕಿನ ಮೇಲೆ ಗುಂಡು ಹಾರಿಸಲು ಪುನಃ ಪ್ರಾರಂಭಿಸಿದ್ದಾರೆ. ೧೪ ಗುಂಡುಗಳು ಡನ್‌ಕರ್ಕಿನ ಮೇಲೆ ಬಿದ್ದಿರುತ್ತವೆ ಕೆಲವು ಮಂದಿ ಹತರಾದರು.

ಸ್ಯಾಂಟ್ ಜೋರ್ಜ ಪ್ರಾಂತ್ಯದಲ್ಲಿ ಬೆಲ್ಜಿಯನರಿಗೆ ಜಯವಾಗಿರುವದು. ಬೆಲ್ಜಿಯನರು ಜರ್ಮನರ ಕಂದಕಗಳನ್ನು ತೆಗೆದುಕೊಂಡು ಅದರಲ್ಲಿದ್ದ ಸೇನಿಕರನ್ನೆಲ್ಲಾ ಕೊಂದರು. ಅರ್‍ರಾಸಿನಲ್ಲಿ ಶತ್ರುಗಳು ಪ್ರಚಂಡವಾದ ಗುಂಡುಗಳನ್ನು ಹಾರಿಸಿ ಪ್ರಯೋಜನ ಹೊಂದದೆ ವಿಶೇಷ ನಷ್ಟಪಟ್ಟು ಹಿಮ್ಮೆಟ್ಟಿದರು "ಬ್ಯೆಬ್ರೆಂಶ್" ಪ್ರಾಂತ್ಯದಲ್ಲಿ ಜರ್ಮನರು ವಿಶೇಷ ನಷ್ಟಪಟ್ಟು ಹಿಮ್ಮೆಟ್ಟಿರುವರು.

ಮತ್ತೊಂದು ಕಡೆಯಲ್ಲಿ ನುಗ್ಗಿ ಬಂದ ಜರ್ಮನರನ್ನು ಫ್ರೆಂಚರ ಕಾಲಾಳು ಮತ್ತು ತೋಪು ಸೇನಿಕರು ಸೋಲಿಸಿರುತ್ತಾರೆ. ಶತ್ರುಗಳು ವಿಷಕರವಾದ ಗ್ಯಾಸನ್ನು ಪ್ರಯೋಗಿಸಿರುವರು.

ಅಲ್ಸೆಸ್ ಮತ್ತು ಲೊರೈನಿನಲ್ಲಿ ಫ್ರೆಂಚರ ಮಾರ್ಗ ಮುಂದಕ್ಕೆ ಹೋಗಿ ನುಗ್ಗಿ ಬರುತ್ತಿರುವ ಜರ್ಮನರನ್ನು ಸುಲಭವಾಗಿ ಸೋಲಿಸಿರುತ್ತಾರೆ. ಕೆಲವು ಫಿರಂಗಿಗಳೂ ಸೇನಿಕರೂ ಫ್ರೆಂಚರ ಸೆರೆ ಬಿದ್ದಿರುವರು.

ಈ ದಿನ ಬೆಳಗ್ಗೆ ಪುನಃ ೧೫ ಗುಂಡುಗಳು ಡನ್‌ಕರ್ಕಿನ ಮೇಲೆ ಎಸೆಯಲ್ಪಟ್ಟಿರುವವು. ಫ್ರೆಂಚರ ಬತ್ತೇರಿಗಳು ಹಿಂದಕ್ಕೆ ಗುಂಡುಗಳನ್ನು ಎಸೆದಿರುವವು. ಮ್ಯೂಸ್, ವೋಸ್ಜೆ, ಲೊರೈನಿನಲ್ಲಿ ನುಗ್ಗಿ ಬಂದ ಜರ್ಮನರು ಹಿಮ್ಮೆಟ್ಟಿರುತ್ತಾರೆ. ಫ್ರೆಂಚರು ಒಸೆಜೆಸಿನಲ್ಲಿ ಮುಂದರಿದು ಹೋಗುತ್ತಿದ್ದಾರೆ.

ಲೆಂಬರ್ಗಿನ ಆಜುಬಾಜಿನ ಕದನಗಳ ಫಲಿತಾಂಶವನ್ನು ಈಗ ಹೇಳುವದು ಅಶಕ್ಯಸಾಧ್ಯವಾಗಿದೆ ರುಷ್ಯನರ ಸೇನೆಯು ನುಗ್ಗಿ ಹೋಗಿ ಡಾನ್ಯೂ ನದಿಯನ್ನು ದಾಟಿ ಆಸ್ಟ್ರಿಯಾನ ಸೇನಿಕರ ಸಂಗಡ ಸನಿನು ಕಾಳಗ ಮಾಡಿರುವದು. ರವರುಸ್ಕ ಪ್ರಾಂತ್ಯದಲ್ಲಿ ಶತ್ರುಗಳು ಜೀವದ ಮರವೆ ಇಲ್ಲದೆ ಕಾದಾಡಿರುವರು. ಆದರೆ ಪೂರ್ಣವಾಗಿ ಹಿಮ್ಮೆಟ್ಟಿರುವರು. ರುಷ್ಯನರು ೮೪೦ ಸೇನಿಕರನ್ನೂ ಆಫೀಸರರನ್ನೂ, ಫಿರಂಗಿಗಳನ್ನೂ ಸೆರೆಹಿಡಿದಿರುತ್ತಾರೆ. ಲೆಂಬರ್ಗಿನ ದಿಕ್ಕಿನಲ್ಲಿ ಕೋಪದ ಕಾಳಗ ನಡೆಯುತ್ತಿದೆ ನೀಸ್ಟರಿನಲ್ಲಿ ರುಷ್ಯನರಿಗೆ ವಿಶೇಷ ಜಯವಾಗಿರುವದು. ಆಸ್ಟ್ರಿಯಾನರು ನೀಸ್ಟರನ್ನು ದಾಟಿಹೋಗುವ ಬಗ್ಗೆ ಒಂದು ದೊಡ್ಡ ಸೇನೆಯನ್ನು ಕಳುಹಿಸಿದರು ಆದರೆ ರುಷ್ಯನರು ಆ ಸೇನೆಯನ್ನು ಪೂರ್ಣವಾಗಿ ಸೋಲಿಸಿ, ಕೋಟೆಕೊತ್ತಲುಗಳ ಸ್ಥಳಗಳನ್ನು ನೆಲಸಮಮಾಡಿ, ೩೫ ಸಾವಿರ ಸೇನಿಕರನ್ನೂ, ಫಿರಂಗಿಗಳನ್ನೂ ಹಿಡಿದಿರುತ್ತಾರೆ. ರುಷ್ಯನರ ಕೊಸಾಕ ಸೇನಿಕರು ೪ ಸೇತುವೆಗಳನ್ನು ದಾಟಿಹೋಗಿ ಶತ್ರುಗಳನ್ನು ಓಡಿಸಿದ್ದಾರೆ. ಇತರ ಕಡೆಗಳಲ್ಲಿ ಶತ್ರುಗಳು ಹಿಮ್ಮೆಟ್ಟಿರುವರು

ಇಟಲಿಯನರ ಅಲ್ಪಾನಿಸ್ಟ ಸೇನೆಗೂ ಜರ್ಮನರ ಅಲ್ಪಾನಿಸ್ಟ ಸೇನೆಗೂ ಪ್ರಥಮ ಸಾರಿ ಕದನ ನಡೆದು ಶತ್ರುಗಳ ಸೇನಿಕರು ಹಿಮ್ಮೆಟ್ಟಿದರು. ಪಾಲ್ಸದಲ್ಲಿ ಇಟಲಿಯನರ ಮೇಲೆ ಬಿದ್ದ ಆಸ್ಟ್ರಿಯನರು ಹಿಮ್ಮೆಟ್ಟಿರುವರು

ತಾ. ೨೫ನೇ ಜೂನ್.

ಮಿತ್ರರ ೫ ಸಬ್ ಮೆರಿನ್‌ಗಳು ಮಾರ್ಮೋರ ಸಮುದ್ರವನ್ನು ನುಗ್ಗಿ ಶತ್ರುಗಳು ಗಲಿಪೋಲಿಗೆ ಬೆಂಬಲ ಸೇನೆಯನ್ನು ಕಳುಹಿಸದ ಹಾಗೆ ತಡೆಕಟ್ಟಿರುತ್ತವೆ.

ಅರ್‍ರಾಸಿನಲ್ಲಿ ಜರ್ಮನರು ತಿರಿಗಿ ತಿರಿಗಿ ನುಗ್ಗಿ ಬಂದು ವಿಶೇಷ ನಷ್ಟಹೊಂದಿ ಹಿಮ್ಮೆಟ್ಟಿರುತ್ತಾರೆ. ಮ್ಯೂಸ್ ಶಿಖರಗಳಲ್ಲಿ ಫ್ರೆಂಚರು ಮುಂದರಿಯುತ್ತಲಿದ್ದಾರೆ. ಫ್ರೆಂಚರು ಮುಂದರಿಯುತ್ತಿರುವದನ್ನು ತಡೆಯುವರೆ ಜರ್ಮನರು ಲೊರೈನಿಗೆ ಹೊಸ ಸೇನೆಯನ್ನು ತಂದಿರುವರು. ಆದರೆ ಫ್ರೆಂಚರು ಈ ಸೇನೆಗಳನ್ನೆಲ್ಲಾ ಹಿಂದಕ್ಕಟ್ಟಿರುತ್ತಾರೆ.

ವೊಸಜೆಸಿನಲ್ಲಿಯೂ ಜರ್ಮನರ ಬೆಂಬಲ ಸೇನೆಯು ಬಂದಿರುತ್ತದೆ ಇಲ್ಲಿ ಶತ್ರುಗಳು ಕೆಲವು ತಾಸುಗಳಲ್ಲಿ ೪೦೦೦ ಗುಂಡುಗಳನ್ನು ೩೦೦ ಮೀಟರ್ ರಣರಂಗದಲ್ಲಿ ಹಾರಿಸಿ ಕ್ಷಣಮಾತ್ರ ಜಯಪ್ರದರಾದರು. ಆದರೆ ಫ್ರೆಂಚರು ಪುನಃ ಶತ್ರುಗಳ ಮೇಲೆ ನುಗ್ಗಿ ಹೋಗಿ ಹೆಚ್ಚಿನ ಸೇನಿಕರನ್ನು ಸೆರೆಹಿಡಿದರು.

ತಾ. ೨೨ರಲ್ಲು ರುಷ್ಯನರು ಲೆಂಬರ್ಗನ್ನು ಬಿಟ್ಟುಹೋಗಿ, ಹೊಸ ನೆಲೆಗೆ ಸರಿದಿರುವರು. ತಾ. ೨೧ರಲ್ಲು ಲೆಂಬರ್ಗಿನ ಕಡೆಗೆ ನುಗ್ಗಿ ಬಂದ ಶತ್ರುಗಳನ್ನು ರುಷ್ಯ ಸೇನಿಕರು ತಡೆದಲ್ಲಿ ಕಠಿಣ ಕಾಳಗವು ನಡೆದು ಶತ್ರುಗಳಲ್ಲಿ ವಿಶೇಷ ನಷ್ಟವಾಯಿತು. ಆದರೆ ಶತ್ರುಗಳು ಜೊಲ್ಕೈವೊ ಪಟ್ಟಣದ ಪ್ರಾಂತ್ಯದ ಕಡೆಗೆ ಮುಂದರಿದುದನ್ನು ರುಷ್ಯನರು ನೋಡಿ ಲೆಂಬರ್ಗನ್ನು ಬಿಟ್ಟು ಹೋಗಲು ನಿರ್ಣಯಿಸಿದರು ಎಂತ ರುಷ್ಯನರು ಪ್ರಕಟಿಸಿರುತ್ತಾರೆ

ನೀಸ್ಟರಿನಲ್ಲಿ ಕಠಿಣ ಕಾಳಗವು ನಡೆಯುತ್ತಿದೆ. ರುಷ್ಯನರು ಪುನಃ ೧೦೦೦ ಸೇನಿಕರನ್ನು ಸೆರೆಹಿಡಿದರು.

ಆಸ್ಟ್ರಿಯನರ ೨ನೇ ಸೇನೆಯು ಲೆಂಬರ್ಗನ್ನು ಹಿಡಿದಿರುವದು ಎಂತ ವಿಯೆನ್ನ ನಗರದಲ್ಲಿ ಪ್ರಕಟವಾಗಿದೆ. ರವರುಸ್ಕ ಮತ್ತು ಪಶ್ಚಿಮ ಪ್ರಾಂತ್ಯದ ಸ್ಥಿತಿಯು ಇದಕ್ಕಿದ್ದ ಹಾಗೆ ಇದೆ. ಸಾನ್ ಮತ್ತು ಮೇಲಿನ ವಿಸ್ತುಲದ ಬಲಕಡೆಯಲ್ಲಿರುವ ರುಷ್ಯ ಸೇನಿಕರು ಹಿಂದೆ ಸರಿಯಲು ಪ್ರಾರಂಭಿಸಿದ್ದಾರೆಂತ ಬರ್ಲಿನಿನಲ್ಲಿ ಪ್ರಕಟವಾಗಿದೆ.

ಇಟಲಿಯನರಿಗೂ ಆಸ್ಟ್ರಿಯನರಿಗೂ ಕಠಿಣ ಕಾಳಗ ನಡೆಯುತ್ತಿದೆ. ಶತ್ರುಗಳು ರಾತ್ರಿಕಾಲ ನುಗ್ಗಿ ಬಂದು ಹಲ್ಲೆಮಾಡಿದರು. ಆದರೆ ಪ್ರತಿ ಕಡೆಯಲ್ಲಿಯೂ ಹಿಮ್ಮೆಟ್ಟಿದರು. ಆಸ್ಟ್ರಿಯನರು ದೊಡ್ಡ ತೋಪುಗಳನ್ನು ಮೇಲಿನ ಇಸೊನ್ಜೊ ಪ್ರಾಂತ್ಯದಲ್ಲಿ ಹೂಡಲು ಪ್ರಯತ್ನಿಸುತ್ತಿದ್ದಾರೆ.

ಜರ್ಮನ್ ಪೂರ್ವ ಆಫ್ರೀಕದಲ್ಲಿ ಬೆಲ್ಜಿಯನರ ಒಂದು ಸೇನಾಂಗವು ಕುವಿಸೆಂಜಿ ಎಂಬ ಸ್ಥಳವನ್ನು ಹಿಡಕೊಂಡು ಅಲ್ಲಿಯ ಕೋಟೆಗಳನ್ನು ಕೆಡವಿರುವದು.

ತಾ. ೨೬ನೇ ಜೂನ್.

ಜರ್ಮನರ ಸಬ್‌ಮೆರಿನ್ ನಾವೆಯು "ನೋರ್ಥ್‌ಸೀ" ಸಮುದ್ರದಲ್ಲಿ ೭ ಟ್ರಾವಲರ್ ಹಡಗಗಳನ್ನು ಮುಳುಗಿಸಿರುತ್ತದೆ.

ಉತ್ತರ ಅರ್‍ರಾಸಿನಲ್ಲಿ ಕಾಲಾಳು ಸೇನೆಯ ಒಂದೆರಡು ಕದನಗಳು ಮಾತ್ರ ನಡೆದಿರುವವು. ಮ್ಯೂಸಿನ ಶಿಖರಗಳಲ್ಲಿ ನುಗ್ಗಿ ಬಂದ ಜರ್ಮನರು ಹಿಮ್ಮೆಟ್ಟಿರುತ್ತಾರಲ್ಲದೆ ಫ್ರೆಂಚರು ಲೊರೈನಿನಲ್ಲಿ ಜರ್ಮನರ ಎರಡು ಕೆಲಸಗಳನ್ನು ಹಾಳುಪಡಿಸಿರುತ್ತಾರೆ. ಸೌಸಿಜನ ಉತ್ತರದಲ್ಲಿ ಜರ್ಮನರು ಫಿರಂಗಿಗಳನ್ನು ಹಾರಿಸಲು ಪ್ರಾರಂಭಿಸಿದ್ದಾರೆ. ಜರ್ಮನರು ಅರ್‍ರಾಸಿಗೆ ಪುನಃ ತೋಪುಗಳನ್ನು ಹಾರಿಸುತ್ತಿದ್ದಾರೆ. ಜರ್ಮನರು ಎಂಬುಲೆನ್ಸ್ ಕೋರಿನ ದಾದಿಗಳನ್ನೂ ನರ್ಸರನ್ನೂ ಕೊಂದಿರುವರು. ಫ್ರೆಂಚರು ಲೊರೈನಿನಲ್ಲಿ ತೆಗೆದುಕೊಂಡ ಪ್ರಾಂತ್ಯಗಳನ್ನು ಹಿಂದಕ್ಕೆ ಪಡಕೊಳ್ಳಲು ಜರ್ಮನರು ಅಸಮರ್ಥರಾಗಿರುವರು. ಈಚೆಗೆ ನಡೆದ ಕದನದಲ್ಲಿ ಫ್ರೆಂಚರು ೩೫ ಆಫೀಸರರನ್ನೂ ೬೫೦ ಸೇನಿಕರನ್ನೂ ಸೆರೆ ಹಿಡಿದಿರುವರು.

ಜೊಲ್‌ಕೀವ ಮತ್ತು ಲೆಂಬರ್ಗಿನ ಪ್ರಾಂತ್ಯದಲ್ಲಿ ಮಂಗಳವಾರ ಮತ್ತು ಬುಧವಾರ ಜರ್ಮನರು ವಿಶೇಷ ರಭಸದಿಂದ ನುಗ್ಗಿ ಬಂದರು ಆದರೆ ರುಷ್ಯನರು ಅವರ ಮೇಲೆ ಪುನಃ ನುಗ್ಗಿ ಅವರ ಪ್ರಯತ್ನಗಳಿಗೆ ತಡೆಕಟ್ಟಿದರು.

ಬುಡಾಪೆಸ್ಟ ದವೆ ಸ್ಟೊಕೊವಿಡ್ ಸರಹದ್ದಿನಲ್ಲಿ ಕಠಿಣ ಕಾಳಗವು ನಡಿಯುತ್ತಿರುವದು ಇಲ್ಲಿಯ ಕಾಳಗದಲ್ಲಿ ರುಷ್ಯನರಿಗೆ ಜಯವಾಗುವ ಸಂಭವ ತೋರುತ್ತಿದೆ. ಜರ್ಮನರ ಮಹಾ ಸೇನೆಗಳು ನೀಸ್ಟರ್ ನದಿಯನ್ನು ದಾಟಿ ವಿಶೇಷ ನಷ್ಟಪಟ್ಟು ಹಿಂದಕ್ಕೆ ಹೋಗಿರುವದು. ಆಸ್ಟ್ರಿಯಾನರು ಮಾರ್ಟಿನೊವೊ ಮತ್ತು ರೊಜ್ವಿಯಾನ್ನೆ ಎಂಬಲ್ಲಿ ನದಿಯನ್ನು ದಾಟಿದರು. ಆದರೆ ರುಷ್ಯನರು ಅವರನ್ನು ಹಿಂದಕ್ಕೆ ಅಟ್ಟಿ ೧೭೪ ಸೇನಿಕರನ್ನು ಸೆರೆ ಹಿಡಿದಿರುತ್ತಾರೆ. ನಿಜನಿ ಒಫ್ ಎಂಬಲ್ಲಿ ರುಷ್ಯನರಿಗೆ ದೊಡ್ಡ ಜಯವಾಗಿರುವದು

ಇಟಲಿಯಾನರು ಟೈರೊಲಿನಲ್ಲಿ ಮುಂದರಿಯುತ್ತಲಿದ್ದಾರೆ.

ಉತ್ತರ ಹಿಂದೂಸ್ಥಾನ.

—o—

ತಾ. 21ರಲ್ಲು ಅಮೃತಸಾರಿನ ರೈಲ್ವೆ ಲೈನಿನ ಮೇಲೆ ಒಬ್ಬ ಸಿಕ್ಖ ಸೇನಿಕನೂ ಅವನ ಜೊತೆಯವನೊಬ್ಬನೂ ಹೋಗುತ್ತಿರುವಾಗ ಕಾಲಿವೆಯ ಸೇತುವೆ ಕಾವಲು ನೋಡುತ್ತಿದ್ದ ಮಿಲಿಟರಿ ಕಾವಲುಗಾರರು ಅವರನ್ನು ದರೋಡೆಕಾರರೆಂದು ಭಾವಿಸಿ ಗುಂಡು ಹಾರಿಸಿದರು. ಈ ಗುಂಡು ಒಬ್ಬನಿಗೆ ತಗಲಿ ಅವನು ಈಗ ಆಸ್ಪತ್ರೆಯಲ್ಲಿ ಶೈತ್ಯೋಪಚಾರ ಹೊಂದುತ್ತಿರುವನು

ಕಳೆದ ವರ್ಷ ಮುಂಬಾಯಿಯ ಡಿಸ್ಟ್ರಿಕ್ಟುಗಳಲ್ಲಿ ಮದ್ಯಪಾನದ ಅಂಗಡಿಗಳಲ್ಲಿ 32 ಮುಚ್ಚಲ್ಪಟ್ಟಿರುವವು ಆದರೆ ಕೈರ ಎಂಬಲ್ಲಿ ನಿಷಿದ್ಧವಾಗಿ ಭಟ್ಟೀ ಇಟ್ಟು ಮದ್ಯಗಳನ್ನು ಮಾರುವ ರೂಢಿಯು ಹೆಚ್ಚಿರುವದರಿಂದ ಈ ಪದ್ಧತಿಗೆ ತಡೆ ಕಟ್ಟುವ ಉದ್ದೇಶದಿಂದ ಅಲ್ಲಿದ್ದ 55 ಅಂಗಡಿಗಳನ್ನು 80ಕ್ಕೆ ಹೆಚ್ಚಿಸೋಣಾಗಿದೆ ಎಂತ ತಿಳಿದು ಬರುತ್ತದೆ.

ವೈಸರಾಯ ಹಾರ್ಡಿಂಜ ಪ್ರಭುಗಳವರ ವೈಸರಾಯ ಪದವಿಯ ಅವಧಿಯು ಬರುವ ಮಾರ್ಚ ತಿಂಗಳ ವರೆಗೆ ಹೆಚ್ಚಿಸೋಣಾಯಿತಷ್ಟೆ. ಅನಂತರ ಮುಂಬಾಯಿ ಗವರ್ನರಾದ ವಿಲಿಂಗ್ಡನ್ ಪ್ರಭುಗಳವರು ವೈಸರಾಯರಾಗಿ ನೇಮಿಸಲ್ಪಡುವರೆಂಬದಾಗಿ ಕಲ್ಕತ್ತೆಯಲ್ಲಿ ವಾರ್ತೆ ಹಬ್ಬಿಯದೆ. ವಿಲಿಂಗ್ಡನ್ ಪ್ರಭುಗಳವರ ಕೆಲಸದ ಅವಧಿಯು ತೀರುವ ವರೆಗೆ ಅವರು ಮುಂಬಾಯಿ ಗವರ್ನರರ ಪದವಿಯನ್ನು ಬಿಡುವದೆಂಬ ಮಾತು ಅಸಂಭವವೆಂತಲೂ ಮಿ| ವಿನ್‌ಸ್ಟನ್ ಚರ್ಚಿಲ್ಲರು ವೈಸರಾಯರಾಗಿ ನೇಮಿಸಲ್ಪಡುವ ಸಂಭವವಿದೆ ಎಂತಲೂ "ಬೊಂಬೆ ಕ್ರೊನಿಕಲ್" ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಅಲ್ಲಹಾಬಾದಿನ ಖಾನ್‌ಪುರದಲ್ಲಿ ವಸ್ತ್ರಗಳಿಗೆ ಬಣ್ಣ ಕೊಡುವ ವಿದ್ಯೆಯನ್ನು ಕಲಿಸುವ ಒಂದು ಶಾಲೆಯನ್ನು ತೆರೆಯುವ ವಿಚಾರ

ಷು ನಡೆದಿರುವದು. ಈ ಶಾಲೆಯಲ್ಲಿ ಪ್ರಥಮತಃ 8 ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶ ದೊರಕುವದು.

~~~

ಜಾರತನದಿಂದ ಜನಿಸಿದ ಮಕ್ಕಳನ್ನು ಇತರರಿಗೆ ಕೊಟ್ಟು ಬಿಡುವ ಒಂದು ಹೊಸ ವಿಧಾನವು ಮುಂಬಾಯಲ್ಲಿ ನಡೆದಿರುವದು ಕಳೆದ ಶುಕ್ರವಾರ ಒಬ್ಬ ಹೆಂಗಸು ದಾರಿಯಲ್ಲಿ ಹೋಗುತ್ತಿದ್ದ ಒಬ್ಬ ಕ್ಕುರುಡಿ ಹೆಂಗಸಿನ ಬಳಿಗೆ ಹೋಗಿ ಒಂದು ಹೆಣ್ಣು ಮಗುವನ್ನು ಆಕೆಯ ಬಳಿ ಕೊಟ್ಟು, ಮೂತ್ರ ಶಂಕೆ ಮಾಡುತ್ತೇನೆಂದು ಹೇಳಿ ಹೋದವಳು ಹಿಂದೆ ಬರಲೇ ಇಲ್ಲ. ಕುರುಡಿ ಹೆಂಗಸು ಕಡೆಗೆ ಆ ಮಗುವನ್ನು ಪೋಲಿಸಿಗೆ ಕೊಟ್ಟಳು.

~~~

ಕಲ್ಕತ್ತೆಯ ಒಬ್ಬ ಹೆಂಗಸು ಗಂಡನು ತನ್ನನ್ನು ಕ್ರೂರತನದಿಂದ ನಡಿಸುವದರಿಂದ ತನ್ನ ಗಂಡನಿಂದ ಜೀವನಾಂಶ ಕೊಡಿಸಬೇಕೆಂದು ಕಲ್ಕತ್ತಾ ಪೋಲಿಸ್ ಕೋರ್ಟಿಗೆ ಮನವಿಮಾಡಿದಳು. ಚೀಫ್ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು ಈ ವಿಷಯ ತನಿಕೆ ನಡಿಸಿದ್ದಲ್ಲಿ ಆಕೆಯ ಗಂಡನು ಅವಳನ್ನು ಮನೆಗೆ ಸೇರಿಸಿಕೊಂಡು ಒಳ್ಳೇ ರೀತಿಯಿಂದ ನಡಿಸುತ್ತೇನೆಂದು ಮಾತು ಕೊಟ್ಟದ್ದರಿಂದ ಮೆಜಿಸ್ಟ್ರೇಟರು ಆಕೆಗೆ ಗಂಡನ ಮನೆಗೆ ಹೋಗಲು ಅಪ್ಪಣೆ ಮಾಡಿದರು. ಮೆಜಿಸ್ಟ್ರೇಟರ ಅಪ್ಪಣೆ ಪ್ರಕಾರ ಅವಳು ಗಂಡನ ಮನೆಗೆ ಹೋಗಿ ತನ್ನ ಅತ್ತೆಯು ಅಲ್ಲಿರುವದನ್ನು ನೋಡಿ ಅವಳನ್ನು ಹೊರಗೆ ಮಾಡಿದ ವಿನಹಾ ತಾನ ಗಂಡನ ಮನೆಯಲ್ಲಿರೆನೆಂದು ಹಿಂದಕ್ಕೆ ಬಂದು ಮೆಜಿಸ್ಟ್ರೇಟ ಕೋರ್ಟಿನಲ್ಲಿ ಪುನಃ ದೂರುಕೊಟ್ಟಳು. ಮನೆಯಲ್ಲಿ ಅತ್ತೆ ಇರುವದರಿಂದ ಅನ್ನಾರ್ಥ ಕೊಡಿಸಬೇಕೆಂಬ ಹೆಂಡತಿಯ ವಾದವು ಭರತಖಂಡದಲ್ಲಿ ನ್ಯಾಯವಾದುದಲ್ಲ ಎಂಬದಾಗಿ ಮೆಜಿಸ್ಟ್ರೇಟರು ಹೇಳಿ ಅವಳ ಮನವಿಯನ್ನು ತಳ್ಳಿಹಾಕಿದರು

~~~

"ಮದ್ರಾಸ್" ಆಸ್ಪತ್ರೆ ಹಡಗವು ಪಾರ್ಶಿಕೊಲ್ಲಿಯಲ್ಲಿ ಗಾಯ ಒಡೆದ 574 ಸೈನಿಕರ ಸಹಿತ ತಾ. 23ರಲ್ಲಿ ಮುಂಬಾಯಿಗೆ ಬಂದು ತಲಪಿರುವದು.

~~~

ಕಲ್ಕತ್ತೆಯ ಅಲ್ಬರ್ಟ್ ವಿಕ್ಟರ್ ಆಸ್ಪತ್ರೆ ಮತ್ತು ಬೆಲ್ಗಾಚಿಯ ಮೆಡಿಕಲ್ ಇನ್‌ಸ್ಟಿಟ್ಯೂಶನ್‌ಗಳನ್ನು 1ನೇ ತರಗತಿ ಮೆಡಿಕಲ್ ಕಾಲೇಜಗಳಾಗಿ ಮಾರ್ಪಡಿಸುವ ಬಗ್ಗೆ ಸರ್ ರಾಸ್ ಬಿಹಾರಿ ಘೋಸರವರು ೫೦,೦೦೦ ರೂಪಾಯಿಗಳನ್ನೂ ಪ್ರಫುಲ್ಲನಾಥ ಟಾಗೋರರವರು ೩೫,೦೦೦ ರೂಪಾಯಿಗಳನ್ನೂ ದಾನ ಮಾಡಿರುತ್ತಾರೆ

~~~

ಮುಂಬಾಯಿ ಕಾಂಗ್ರೆಸ್ ಕಮಿಟಿಯವರು ಬರುವ ರಾಷ್ಟ್ರೀಯ ಸಭೆಗೆ ಸರ್ ಪಿ. ಸಿನ್ಹರವರನ್ನು ಅಧ್ಯಕ್ಷರಾಗಿ ಆರಿಸಬಹುದೆಂತ ಸ್ವಾಗತ/ಕಮಿಟಿಯವರಿಗೆ ತಿಳಿಸಿರುವರು.

~~~

ಈಚೆಗೆ ಜರ್ಮನಿಯಿಂದ ಹಿಂದೂಸ್ಥಾನಕ್ಕೆ ಹಿಂದಿರುಗಿದ ಎನ್. ಎಸ್ ಮಾರ್ಥೆಯ ಮನೆಯನ್ನು ಸಿ ಐ. ಡಿ ಆಫೀಸರರು ಜಪ್ತಿ ಮಾಡಿ ಅವನು ಮದ್ರಾಸಿನಿಂದ ಪುನಃ ಹಿಂದಿರುಗಿದಾಕ್ಷಣ ಕೈದುಮಾಡಿರುತ್ತಾರೆ.

~~~

ಭಾರತೀಯ ಭೀಮನೆಂದು ಪ್ರಸಿದ್ಧ ಪಟ್ಟಿರುವ ರಾಮಮೂರ್ತಿಯವರು ಒಂದು ದಿನದ ಆಟದಲ್ಲಿ ಆದ ಆದಾಯವನ್ನು ಅಹಮ್ಮದಾಬಾದಿನಲ್ಲಿ ಮಾನ್ಯ ಗಂಧಿಯವರಿಂದ ಸ್ಥಾಪಿಸಲ್ಪಟ್ಟ "ಆಶ್ರಮ"ಕೋಸ್ಕರ ಬಿಟ್ಟುಕೊಟ್ಟು, ತನ್ನ ಉದಾರ ಬುದ್ಧಿಯನ್ನು ನಿದರ್ಶನಗೊಳಿಸಿರುವರು

~~~

ಕಳೆದ ತಾ. 12ರಲ್ಲು ಪೂನಾಪಟ್ಟಣದಲ್ಲಿರುವ ಭಾರತ ಸೇವಾಸಮಿತಿಯ ದಶಮವಾರ್ಷಿಕ ಮಹೋತ್ಸವವು ಹಿಂದೂದೇಶದ ಎಲ್ಲಾ ಕಡೆಯಿಂದಲೂ ಬಂದು ಸೇರಿದ್ದ ಪ್ರತಿನಿಧಿಗಳಿಂದ ನೆರವೇರಿತು. ಈ ಮಹೋತ್ಸವವು ಕ್ರಮವಾಗಿ ೫ ದಿವಸಗಳ ವರೆಗೆ ನಡೆಯಿತು. ಈ ಸಮಾರಂಭ ಸಮಯದಲ್ಲಿ ಮದ್ರಾಸಿನ ಮಾನ್ಯ ಶ್ರೀನಿವಾಸ ಶಾಸ್ತ್ರಿಗಳವರು ಅಧ್ಯಕ್ಷರಾಗಿದ್ದು ಗತಿಸಿದ ಮಾನ್ಯ ಗೋಖಲೆಯವರ ದೊಡ್ಡ ಆಕೃತಿಯ ಚಿತ್ರವನ್ನು ಕಟ್ಟಡದ ಸಭಾಸದನದಲ್ಲಿ ಪ್ರದರ್ಶಿಸಿದರು.

~~~

ಹಿಂದೂಸ್ಥಾನದ ಕೂಲಿಯಾಳುಗಳಿಗೆ ಜಮೇಕಾದ್ವೀಪದಲ್ಲಿ ಕೆಲಸ ಸಿಕ್ಕುವದು ತುಂಬಾ ಪ್ರಯಾಸವಾಗಿದೆಂದೂ ಅಲ್ಲಿಯ ಪ್ಲಾಂಟರುಗಳು ಯುದ್ಧದ ದೆಶೆಯಿಂದ ವ್ಯವಸಾಯಕಾರ್ಯಗಳನ್ನು ಬಹಳ ಮಟ್ಟಿಗೆ ಕಡಿಮೆ ಮಾಡಿದ್ದಾರೆಂದೂ ಸರಕಾರದವರು ಪ್ರಕಟಿಸಿರುತ್ತಾರೆ.

ಹಿಂದೂಸ್ಥಾನದ ವಾಯುವ್ಯ ಸರಹದ್ದಿನ ಅಟ್ಟಾಕ್ ಡಿಸ್ಟ್ರಿಕ್ಟಿನಲ್ಲಿ ಒಂದು ಕಂಪೆನಿಯು ಪ್ರಾರಂಭವಾಗಿ ಭೂಮಿಯನ್ನು ಕೊರೆದು ಸೀಮೆ ಎಣ್ಣೆಯನ್ನು ತೆಗೆಯಬೇಕೆಂದು ಪ್ರಯಾಸ ಪಡುತ್ತಿದ್ದಾರೆ. ಕೆಲವು ಕಡೆ ಎಣ್ಣೆ ಸಿಕ್ಕಿರುವದೆಂದು ಈಗ ನಡೆದಿರುವ ಪ್ರಯತ್ನಗಳಲ್ಲಿ ಕಂಡುಬಂದಿರುವದು.

~~~

ಕಲ್ಕತ್ತಾ ಪಟ್ಟಣದಲ್ಲಿರುವ ಮೌಲ್ವಿ ಲಿಯಾಕತ್ ಹುಸೇನ್ ಎಂಬ ಮಹಮ್ಮದೀಯರಿಗೆ ಪೋಲಿಸ್ ಕಮಿಷನರು ನೋಟೀಸು ಕೊಟ್ಟು ಈ ತಿಂಗಳ ತಾ 24ನೇ ತಾರೀಕಿನಿಂದ ಒಂದು ವರುಷ ಯಾವ ಸ್ಥಳದಲ್ಲಿಯೂ ಉಪನ್ಯಾಸಗಳನ್ನು ಮಾಡಕೂಡದೆಂದು ಆಜ್ಞೆಮಾಡಿರುತ್ತಾರೆ

~~~

ದೇಶರಕ್ಷಣಾವಿಧಿಯನುಸಾರವಾಗಿ ಡಿಲ್ಲಿಯನ್ನು ಬಿಟ್ಟು ಹೋಗಕೂಡದೆಂಬ ಆಜ್ಞೆಯನ್ನು ಪಡೆದ ಮಹಮ್ಮದ್ ಆಲಿ ಮತ್ತು ಶೌಕತ್ ಆಲಿಯವರಿಗೆ ಲೆನ್ಸ್‌ಡೌನಿಗೆ ಹೋಗಿ ಉಳಕೊಳ್ಳಲು ಸಂಯುಕ್ತ ಸಂಸ್ಥಾನದ ಲೆಪ್ಟನೆಂಟ ಗವರ್ನರರಿಂದ ಅಪ್ಪಣೆಯಾಗಿರುವದು ಇವರಿಗೆ ಖರ್ಚಿಗೆ ರೂ ೨೫೦ ಮತ್ತು ೧೦೨೦ ಪ್ರಕಾರ ಸರಕಾರದವರು ಕೊಡುವರು ಎಂತ ತಿಳಿದುಬಂದಿದೆ.

~~~

ಪಂಜಾಬಿನಲ್ಲಿ ನಡೆದ ದರೋಡೆ ಮೊಕದ್ದಮೆಗಳಲ್ಲಿ ಜೂನ್ ತಾ. ೧೯ರ ವರೆಗೆ ೪೨೦ ಮಂದಿ ವಿಚಾರಣೆಗೆ ಗುರಿ ಮಾಡಲ್ಪಟ್ಟರು. ೩೦೪ ಮಂದಿಯನ್ನು ಬಿಟ್ಟುಬಿಟ್ಟರು ೬೨ ಮಂದಿಯ ತನಿಕೆ ನಡಿಯುತ್ತಿದೆ. ಶಿಕ್ಷೆ ಹೊಂದಿದವರಲ್ಲಿ ೬೩ ಮಂದಿಗೆ ಬಂಕೋಲಿ ಶಿಕ್ಷೆಯೂ ೪೬ ಮಂದಿಗೆ ಬಂದಿಖಾನೆ ಶಿಕ್ಷೆಯೂ ವಿಧಿಸೋಣಾಗಿದೆ

~~~

ದಕ್ಷಿಣ ಹಿಂದೂಸ್ಥಾನ.

~~~

ಯುದ್ಧದ ಸಂಬಂಧ ಈ ವರ್ಷ ಮೈಸೂರು ದಸರಾ ವ್ಯವಸಾಯ ಮತ್ತು ಕೈಗಾರಿಕೆ ಪ್ರದರ್ಶನವು ಜರಗುವ ಹಾಗೆ ಇಲ್ಲ ಎಂತ ತಿಳಿದುಬರುತ್ತದೆ.

~~~

ಮೈಸೂರಿನ ದಿವಾನರಾಗಿರುವ ಸರ್. ಎಂ. ವಿಶ್ವೇಶ್ವರಯ್ಯ ಕೆ. ಸಿ ಐ. ಇ ಯವರ ಕೆಲಸದವಧಿಯನ್ನು ಮೈಸೂರು ಮಹಾರಾಜರವರು ಮತ್ತೆರಡು ವರ್ಷಗಳ ವರೆಗೆ ಹೆಚ್ಚಿಸಿರುವರು ಎಂದು ತಿಳಿದುಬರುತ್ತದೆ.

~~~

ಇದೇ ತಾ. ೨೧ನೇಯ ಸೋಮವಾರ ಮಧ್ಯಾಹ್ನ ಮೈಸೂರಿನ ಅರ್ಥಸಾಧಕ ಸಭೆಯು ದಿವಾನರವರ ಅಧ್ಯಕ್ಷತೆಯಲ್ಲಿ ಕೂಡಿಬಂದಿರುವದು.

~~~

ವೈಸರಾಯರ ಕಾರ್ಯನಿರ್ವಾಹಕ ಸಭೆಯ ಮೆಂಬರರಾಗಿ ನೇಮಿಸಲ್ಪಟ್ಟ ಸರ್. ಶಂಕರನ್‌ನಾಯರರು ಮೈಸೂರು ಮಹಾರಾಜರ ಅತಿಥಿಗಳಾಗಿರುವರು. ಇವರು ತಾ. ೨೪ರಲ್ಲು ಅರ್ಥಸಾಧಕ ಸಭೆಗೆ ಚಿತ್ತೈಸಿ ಅಲ್ಲಿಯ ಕಾರ್ಯ ಕ್ರಮಗಳನ್ನು ಪರಾಮರ್ಷಿಸಿ ಈ ಸಭೆಯು ದೇಶದ ಸಂಪದಭ್ಯುದಯಕ್ಕೆ ಸಾಧಕವಾಗುದೆಂದು ಅಭಿಪ್ರಾಯಪಟ್ಟರೆಂದು ತಿಳಿದುಬಂದದೆ

~~~

ಮೈಸೂರಲ್ಲಿ ಯುನಿವರ್ಸಿಟಿಯು ಸ್ಥಾಪಿಸಲ್ಪಡುವದೆಂದು ದಿವಾನರವರು ಅರ್ಥಸಾಧಕ ಸಭೆಯಲ್ಲಿ ಹೇಳಿರುತ್ತಾರೆ.

~~~

ದಕ್ಷಿಣ ಕನ್ನಡ.

ತ್ರಿಕರಪುರ: — ಇಲ್ಲಿಯ ನಡಕಾವು ಮಾರ್ಕೆಟ ಕಟ್ಟೋಣವು ಕಠಿಣ ಗಾಳಿಮಳೆ ಸಂಬಂಧ ಮುರಿದು ಬಿದ್ದದೆಂತಲೂ, ಸದರಿ ದಿವಸ ಸಂತೆ ಇದ್ದದರಿಂದ ಕಟ್ಟೋಣದಲ್ಲಿದ್ದ ಜನರ ಪೈಕಿ ಕೆಲವರಿಗೆ ಜಖಂ ಆಗಿಯದೆಂತಲೂ ತಿಳಿಯುತ್ತೇವೆ.

~~~

ನಿಲೇಶ್ವರ: — ಇಲ್ಲಿ ಸಮೀಪ ಪಡ್ನೆ ಎಂಬಲ್ಲಿ ಮುಂಚೆ ರೈತರು ಒಂದು ಅಳಿವೆಯನ್ನು ಅಗಿಸಿದ್ದರು. ಅದರ ದೆಶೆಯಿಂದ ಅನೇಕ ರಹಿತರು ಪ್ರಯೋಜನಪಡುವ ಬದಲಿಗೆ ಅಳಿವೆಯ ಪ್ರವಾಹವು ಹೆಚ್ಚೆಚ್ಚಾಗಿ ಲಗ ಇರುವ ಭೂಮಿಗಳು ಅಂದರೆ ಬಳ್ಳಿ ಬಳ್ಳಿ ಬಾದ್ಯಾತು ಹಿತ್ತುಗಳು, ತೆಂಗಿನ ತೋಟಗಳು, ಒಕ್ಕಲು ಮನೆಗಳು ವಗೈರೆ ಕೊರೆದು ಹೋಗಿ ವರ್ಗದಾರರಿಗೆ ಹೆಚ್ಚಿನ ನಷ್ಟ ವ ಕಷ್ಟವನ್ನು ಉಂಟುಮಾಡಿತು. ವರ್ಗದಾರರು ಅಧಿಕಾರಸ್ತರ ತಿಳುವಳಿಕೆ ಬಗ್ಗೆ ತಂದದಲ್ಲದೆ ಉದ್ಯೋಗಸ್ತರು ಸಹಾ ಪದೆ ಪದೆ ಸದರಿ ಸ್ಥಳಕ್ಕೆ ಸ್ವತಹಾ ಹೋಗಿ ಆ ಅಳಿವೆಯನ್ನು ಮುಚ್ಚಿಸುವ ಬಗ್ಗೆ ನಾನಾ ತರದ ಆಲೋಚನೆ ಮಾಡಿದ್ದೂ ಸಾಧ್ಯವಾಗದೆ ಕಡೆಗೆ ಇನ್ನೂ ಹೆಚ್ಚಿನ ನಷ್ಟವಾಗದ ಹಾಗೆ ಅಳಿವೆಯ ಸಮೀಪಕ್ಕೆ ಗ್ರೋಯಿನ್ ಯಾನೆ ಕಲ್ಲು ಕಟ್ಟಣ ಮತ್ತು ರಿವೆಟ್‌ಮೆಂಟ್ ಸಹಾ ಕಟ್ಟಿಸಬೇಕಾಗಿ ರೆವಿನ್ಯೂ ಬೋರ್ಡಿನವರ ನಿರ್ಣಯವಾಯಿತು. ಆ ಪ್ರಕಾರ ಕಲ್ಲು ಕಟ್ಟಣ ಮತ್ತು ರಿವೆಟಮೆಂಟ ಕೆಲಸವು ಪ್ರಾರಂಭಿಸೋಣಾಗಿಯದೆ

~~~

ಕಾಸರಗೋಡು: — ಹಿಂದಿನ ಸಂಚಿಕೆಯಲ್ಲಿ ಪ್ರಸ್ತಾಪಿಸಿದ ರಬ್ಬರ ತೋಟದ ಮೇಸ್ತ್ರಿ ವ ರೈಟರ ಇವರಿಬ್ಬರ ಮೇಲೆ ಚಾರ್ಜು ಮಾಡಿದ ಮೊಕದ್ದಮೆಯು ಹೊರಟು ಹೋದ ಮಕ್ಕಳು ಅಪ್ರಾಯಸ್ತರಲ್ಲವೆಂಬ ಸಬಬಿನ ಮೇಲೆ ಬಿಟ್ಟು ಹೋಗಿ ಅಪಾದಿತರನ್ನು ಖುಲಾಸ ಮಾಡಲಾಯಿತೆಂತ ತಿಳಿಯುತ್ತೇವೆ.

~~~

ಬಂಟವಾಳ: — ಮಳೆಗೆ ಪ್ರಾರಂಭವಾದಂದಿನಿಂದ ಕಳವುಗಳು ತಲೆದೋರುತ್ತಲಿವೆ. ಒಂದು ಕಡೆ ಅಂಗಡಿಯಿಂದ ಕೆಲವು ಮುಡಿ ಅಕ್ಕಿಯೂ ಕಳವಾಯಿತು; ಇದರ ಎರಡು ಬೀಗಗಳನ್ನು ಕಳ್ಳರು ಕಿತ್ತರು. ಆ ಮೇಲೆ ಪ್ರಯಾಣಿಕನೊಬ್ಬನ ಸುಮಾರು ಒಂದು ಸಾವಿರ ರೂಪಾಯಿಗಳ ಗಂಟನ್ನು ಕಳ್ಳರು ಕಸಕೊಂಡರು. ಇದರ ಪತ್ತೆಯೇ ಇಲ್ಲ. ಪುನಃ ಮರುದಿನವೇ ಮತ್ತೊಬ್ಬ ಅಂಗಡಿಯವರು ಕಳ್ಳರ ಕಾಟದ ದೆಶೆಯಿಂದ ನಿದ್ರೆಯಿಲ್ಲದೆ ಗೋಳಾಡಿದರು. ಬರುವ ವಾರಕ್ಕೆ ಇನ್ನೆಲ್ಲೆಲ್ಲಿ ಕಳ್ಳರು ನುಳವರೊ ತಿಳಿಯಲಿಲ್ಲ. ಪೋಲಿಸಿನವರ ಮೇಲೆ ಭರವಸೆಯನ್ನಿರಿಸಿರುವೆವಾದರೂ ಮೇಲಾಫೀಸರರ ಗೋಚರಕ್ಕೆ ಈ ಸಂಗತಿಗಳು ತಿಳಿಯುವಂತೆ ಬರಕೊಂಡಿರುವೆವು. ಈ ಮೂರು ಬಾಬುಗಳ ಪೈಕಿ ಒಂದನ್ನಾದರೂ ಈ ವಾರದೊಳಗಾಗಿ ಪತ್ತೆಯಾಗುವ ಹಾಗೆ ಪೋಲಿಸಿನವರ ತಲಾಸಿಯ ಮೇಲೆ ನಂಬಿರುವೆವು. ಪ್ರಯಾಣಿಕನ ಗಂಟನ್ನು ಕಸಕೊಂಡ ಕಳ್ಳರ ಪತ್ತೆಯನ್ನು ಪೋಲೀಸಿನವರು ಬಹು ಸಾಹಸದಿಂದ ಮಾಡಿರುವರೆಂಬ ವಾರ್ತೆಯನ್ನು ಈಗಲೇ ಕೇಳಿ ಸಂತೋಷಪಡುವೆವು.

ಪಾಣೆಮಂಗಳೂರಿನ ದೊಡ್ಡ ಸಂಕವು ಆಲದ ಮರದ ಹಾಗೆ,—ನಮ್ಮ ತೂಗು ಸಾಂಕವು ಅದರ ಮೇಲೆ ಬಿಟ್ಟ ಒಂದು ಬಳ್ಳಿಯ ಹಾಗೆ! ಹಾಗಿರುವದರಿಂದ ಸಾವಿರ ಗಜದ ಸಂಕಕ್ಕೂ, ಸಾವಿರ ಅಂಗುಲಗಳ ಸಾಂಕುವಿಗೂ ಒಂದೇ ಪ್ರಕಾರ ಮೂರು ವರ್ಷಗಳ ಕಾಮಗಾರಿಯು ಅಗತ್ಯವಾಯಿತು. ಈಗ ದೇವಸ್ಥಾನದ ಕಡೆಯವರು ಸಾಂಕುವಿನ ಕುಂಬಾದ ಹಲಗೆಗಳಿಗೆ ಬದಲಾಗಿ ಪ್ರತಿ ವರ್ಷವೂ ಆಗಾಗ ಮಾಡುತ್ತಿದ್ದಂತೆ ಹೊಸ ಗಟ್ಟಿಯಾದ ಹಲಗೆಗಳನ್ನು ಹಾಕುತ್ತಿರುವರಂತೆ. ಆದರೆ ಇದೇ [illegible]

ಇವರೇ ಹಲಗೆಗಳನ್ನು ಇನ್ನೂ ಹಾಕುತ್ತ ಬರುವುದು ಅನುಕೂಲವಾಗಿರದು. ಮೆ। ಕೌಚ್‌ಮೇನ್ ದೊರೆಗಳು ಇಲ್ಲಿಂದ ತೆರಳಿದಂಧಿನಿಂದ ಇಂದಿನ ವರೆಗೂ ಕೆಲಸ ನಡೆ ದುದ್ದಿಲ್ಲ. ಇದ್ದ ಸಾಂಕುವು ಸಂಪೂರ್ಣವಾಗಿ ಬಿದ್ದು ಹೋಗುವ ವರೆಗೆ ಹುದ್ದೇದಾರರಿಗೆ ತಿಳಿಸುವವರು ನಿದ್ದೇ ಹೋಗದಂತೆ ಇದ್ದುದನ್ನು ಬರೆದುಕೊಂಡಿರುವೆನು.

———o———

ಮಂಜೇಶ್ವರ:—ಮಂಜೇಶ್ವರ ಮತ್ತು ಒಂಗ್ರ ಮಂಜೇಶ್ವರ ಎಂಬ ಊರುಗಳು ಬಂಗ್ರಮಂಜೇಶ್ವರ ನದಿಯ ಬಡಗು ತೆಂಕು ಪಾರ್ಶ್ವಗಳಲ್ಲಿದ್ದು ಎಲ್ಲಾ ಜನರಿಗೆ ದಿನಂಪ್ರತಿ ಅತೀ ಅಗತ್ಯವಿರುವ ಎಲ್ಲಾ ಗವರ್ನಮೆಂಟ್ ಆಫೀಸುಗಳೂ ಆಸ್ಪತ್ರಿ, ರಿಜಿಸ್ತ್ರಿ ಆಫೀಸು, ಟಪ್ಪಾಲು ಆಫೀಸು, ಪೋಲಿಸ್‌ಸ್ಟೇಶನ್, ಬೆಂಚ್ ಕೋರ್ಟು ಮುಂತಾದ ಆಫೀಸುಗಳೂ, ಶ್ರೀ ಧೇವಸ್ಥಾನವೂ ರೈಲ್ವೆ ಆಫೀಸು ಮತ್ತು ಇತ್ತಲಾಗೆ ಬೋರ್ಡಿನವರಿಂದ ಅಂಗೀಕರಿಸಲ್ಪಟ್ಟ ಸರಸ್ವತಿ ಬೋರ್ಡು ಬಾಲಿಕಾ ಪಾಠಶಾಲಾ ಎಂಬ ಹುಡುಗಿಯರ ಶಾಲೆಯೂ ಇನ್ನೂ ಕೆಲವು ಅಗತ್ಯಕರವಾದ ಸಂಸ್ಥೆಗಳು ಮಂಜೇಶ್ವರದಲ್ಲಿರುವುದು ಎಲ್ಲಾ ಜನರಿಗೆ ತಿಳಿದ ವಿಷಯವಾಗಿರುತ್ತದೆ. ಸದರಿ ಬಾಲಿಕಾ ಪಾಠಶಾಲೆಗೆ ಮ ಮೇಲೆ ತೋರುವ ಆಫೀಸು ವಗೈರೆ ಸಂಸ್ಥೆಗಳಿಗೆ ದಿನಂಪ್ರತಿ ಅಗತ್ಯವುಳ್ಳ ಶಾಲಾ ಬಾಲಿಕೆಯರೂ ವ ಇತರ ಜನಗಳೂ ಕೂಡಾ ಹೋಗಲು ಸದರಿ ಕಡವನ್ನು ದಾಟಿ ಹೋಗಬೇಕಾಗುತ್ತದೆ. ಸದರಿ ನದಿಗೆ ಇಳಿತ ಭರ್ತಿ ಉಂಟೆಂಬದೂ ಮಳೆಗಾಲದ ಸಮಯ ನದಿಗಳಿಗೆ ನೆರೆ ಬರುತ್ತದೆಂಬದೂ ಸಹ ಸರ್ವರಿಗೂ ಗೊತ್ತಿದ್ದ ಸಂಗತಿ. ಆದರೆ ಈಗ ಮಳೆಗಾಲ ಪ್ರಾರಂಭಿಸಿದ್ದರಿಂದ ಬಹಳ ಪ್ರಭಲವಾಗಿ ಓಡುವ ನೀರಿನ ಸೆಳವಿನ ಮೇಲೆ ದೋಣಿಯು ಬಹಳ ಅಪಾಯಕರವಾಗಿ ಬಹಳ ಕೆಳಗೆ ವರೇಗೆ ಓಡುವದರಿಂದಲೂ ಇಳಿತದ ಸಮಯ ದಾಟಲಿಕ್ಕೆ ನೀರಿನ ಓಡುವ ಒತ್ತಾಟದಿಂದಲೂ ಸೆಳವಿನ ಸಮಯ ನೀರಿನ ತಳದಲ್ಲಿ ನಿಂತ ಕೆಸರು ಮುಳ್ಳುಗಳ ದೆಸೆಯಿಂದಲೂ ಸಹ ದಾಟಲು ಬಹಳ ಪ್ರಯಾಸವೂ ಭಯವೂ ಉಂಟಾಗುತ್ತದೆ. ಈ ನದಿಯ ಭಯದ ಕಾರಣದಿಂದ ಸದರಿ ಬಾಲಿಕಾ ಹೊಸ ಬೋರ್ಡು ಶಾಲೆಗೆ ಆಲಸ್ಯವಿಲ್ಲದೆ ದಿನಂಪ್ರತಿ ಕಲಿಯ ಹೋಗುವ ಸಣ್ಣ ಸಣ್ಣ ಬಾಲಿಕೆಯರ ಹಾಜರಿಯು ಕಮ್ಮಿ ಆಗುತ್ತಾ ಬರುತ್ತದೆ. ಆದ್ದರಿಂದ ದಯಾಳು ಗವರ್ನಮೆಂಟಿನವರು ಈ ಎಲ್ಲಾ ಸಂಗತಿಗಳನ್ನು ತನಖಿ ಮಾಡಿ ಒಂದು ಸಂಕವನ್ನು ಕನಿಷ್ಠ ಪಕ್ಷಕ್ಕೆ ಜನರಿಗೆ ಮಾತ್ರ ಆಚೆ ಈಚೆ ಪಾರಾಗುವಷ್ಟು ಅಗಲದ ಮರದ ಒಂದು ಸಂಕವನ್ನಾದರೂ ಏರ್ಪಾಡು ಮಾಡಿದ್ದಾದರೆ ನೀರಿನ ಭಯದಿಂದ ಆಲಸ್ಯ ಪಡುವ ಬಡ ಜನರಿಗೂ ಶಾಲಾಬಾಲಿಕೆಯರಿಗೂ ಎಲ್ಲರಿಗೂ ಬಹಳ ಉಪಕಾರವಾಗುತ್ತಿತ್ತು. ಆದ್ದರಿಂದ ಈ ಎಲ್ಲಾ ವಿಷಯಕ್ಕೆ ಮಾನ್ಯ ಮೇಲ್ ಉದ್ಯೋಗಸ್ಥರು ಇನ್ನಾದರೂ ಆದಷ್ಟು ಬೇಗನೇ ತಕ್ಕ ಸಿಗಾ ಕೊಡದಿರಲಾರರೆಂದು ಪರಿಪೂರ್ಣವಾಗಿ ನಂಬುತ್ತೇವೆ.

ಇಲ್ಲಿಯ ರಿಜಿಸ್ತ್ರಿ ಆಫೀಸು ಸ್ಥಾಪನೆಯಾದಂದಿನಿಂದ ರಿಜಿಸ್ತ್ರಿ ಬಗ್ಗೆ ಟಪ್ಪಾಲು ಆಫೀಸಿನಲ್ಲಿ ಮಾತ್ರ ಬೇಕಾದ ರಸೆಯು ಏನೂ ಅಡ್ಡಿ ಇಲ್ಲದೆ ಕೂಡಲೇ ಸಿಕ್ಕುತ್ತಿತ್ತು. ಆದರೆ ಈಗ ಸದರಿ ಆಫೀಸು ಚಲೋ ರೀತಿಯಲ್ಲಿ ನಡೆಯುತ್ತಿದ್ದ ಹಾಗೆ ಇಲ್ಲಿ ರಸೆ ವೆಂಡರರೂ ಇತ್ತಲಾಗೆ ಹೆಚ್ಚಿದ್ದಾರೆ. ಮಂಜೇಶ್ವರದಲ್ಲಿ ಇಬ್ಬರೂ ಬಂಗ್ರಮಂಜೇಶ್ವರದಲ್ಲಿ ಒಬ್ಬರೂ ಹೀಗೆ ಮೂವರು ವೆಂಡರರು ಇರುತ್ತಾರೆ. ಆದರೆ ಫಕ್ಕನೇ ೨೦—೩೦—೪೦ ರೂಪಾಯಿಗಳ ರಸೆ ಅವಶ್ಯವಿದ್ದಲ್ಲಿ ಮಂಗಳೂರು ಕಾಸರಗೋಡು ಅತ್ತ ಕಡೆಯಿಂದ ಅವಶ್ಯ ಇದ್ದವರು ತರಿಸಬೇಕಲ್ಲದೆ ಫಕ್ಕನೇ ಇಲ್ಲಿಯೇ ಸಿಕ್ಕಿ ರಿಜಿಸ್ತ್ರಿ ಮಾಡಬಹುದೆಂದರೆ ಈಗ ಸದ್ಯಕ್ಕೆ ಸಂದರ್ಭವಾಗಲಿಕ್ಕಿಲ್ಲ. ಹೀಗಾಗಿ ಈ ರಸೆ ವೆಂಡರುಗಳಿಂದ ರಸೆ ಅಗತ್ಯವುಳ್ಳ ಜನರು ಬಹಳ ತೊಂದರೆ ಅನುಭವಿಸುತ್ತಾರೆ. ಆದ್ದರಿಂದ ಮೇಲ್ ಉದ್ಯೋಗಸ್ಥರು ಇದನ್ನು ತನಖಿ ನಡಿಸಿ ತಕ್ಕ ವಿಲೇವಾರಿ ಮಾಡಿದ್ದಲ್ಲಿ ಬಹಳ ಉಪಕಾರವಾಗುತ್ತಿತ್ತು. ಯಾ ಅನುಕೂಲವಿಲ್ಲದಿದ್ದರೆ ಗವರ್ನಮೆಂಟ್ ಕಡೆಯಿಂದ ಪ್ರತ್ಯೇಕ ಒಬ್ಬರನ್ನು ನೇಮಿಸಿಯಾದರೂ ರಸೆ ವಿಕ್ರಯಿಸಿ ನಾವು ಅನುಭವಿಸುವ ಈ ರಸೆಯ ಉಪದ್ರಗಳನ್ನು ಪರಿಹರಿಸುವರಾಗಿ ನಂಬುತ್ತೇವೆ.

~~~~

ವಿಟ್ಲ:—ಇಲ್ಲಿಯ ಪಡ್ನೂರು ಗ್ರಾಮದ ದಿವಾನದಲ್ಲಿರುವ ಇಬ್ರಾಹಿನೆ ಬ್ಯಾರಿಯು ಸರವು ಪುರಿಡಿಕ್ಕಾ ನಾರಾಯಣಭಟ್ಟ ವಗೈರೆರ ಮೇಲೆ ಕೊಟ್ಟ ಫಿರ್ಯಾದಿಯು ಪುತ್ತೂರು ಸ್ಪೇಶಲ್ ಸಬ್ ಮೆಜಿಸ್ಟ್ರೇಟರಿಂದ ತನಕಿ ನಡಿಸಲ್ಪಟ್ಟು ಮುದ್ದತುದಾರೆ ದಿವಾನ ಸುಬ್ರಾಯಭಟ್ಟರಿಂಗ ಸದರಿ ಮುದ್ದೈಯೊಳಿ ೮ ಮಂದಿಯವರಿಗೆ ರೂಪಾಯಿ ೧೦೦೭ ಪರಿಹಾರ ದ್ರವ್ಯ ಕೊಡಿಸಲಾಯಿತು. ಮತ್ತು ಮುದ್ದೈಯನ್ನು ಖುಲಾಸುಪಡಿಸಲಾಯಿತು.

ಇಲ್ಲಿಯ ಶ್ರೀಮದನಂತೇಶ್ವರ ದೇವಸ್ಥಾನದಲ್ಲಿ ಇದೇ ಕಳೆದ ತಾ. ೭ರಲ್ಲು ಶ್ರೀ ಚಿತ್ರಾಪುರ ಶ್ರೀಪಾದಂಗಳವರು ಗತವಾದ ಸ್ಮರಣಾರ್ಥವಾಗಿ ಒಡಬಗ್ಗರಿಗೆ ಅಕ್ಕಿಯನ್ನು ಹಂಚಿದಲ್ಲದೆ ಶ್ರೀ ದೇವಸ್ಥಾನದಲ್ಲಿ ಸಮಾರಾಧನೆ, ಪೂಜೆ ವಗೈರೆ ಬಹಳ ವಿಜೃಂಭಣೆಯಿಂದ ನಡೆಯಲಾಯಿತು.

———

ಪೆರಡಾಲ:—ಇಲ್ಲಿಯ ಮಹಾ ಜನ ಸಂಸ್ಕೃತ ಪಾಠಶಾಲೆಯ ನವೀನ ವಿದ್ಯಾಲಯವು ತಾ. ೧೬ನೇ ದಿವಸ ಪೂರ್ವಾಹ್ನ ೧೦॥ ಘಂಟೆ ಸಮಯಕ್ಕೆ ಮ॥ ರಾ॥ ಎ. ಸುಬ್ಬರಾವ್ ಅವರ್ಗಳ್ ಬಿ. ಎ. ಪೋಲೀಸ್ ಸುಪರಿಂಟೆಂಡೆಂಟ ದೊರೆಗಳವರ ಅಧ್ಯಕ್ಷತೆಯಿಂದ ತೆರೆಯಲ್ಪಟ್ಟಿತು. ಮಧ್ಯಾಹ್ನ ೧೨ ಘಂಟೆಗೆ ದೊರೆಗಳವರು ಊಟ ತೀರಿಸಿ ಮ॥ ರಾ॥ ಕೃಷ್ಣಭಟ್ಟರವರೂ ಮ॥ ರಾ॥ ಕೊಡ್ಸಮ್ಮೆ ಪದ್ಮನಾಭ ಇರ್ನೀರಾಯರವರೂ ಮುಂತಾದ ಮಾನ್ಯ ಗ್ರಹಸ್ಥರೊಡನೆ ದಯಮಾಡಿ ಸಭೆಯಲ್ಲಿ ಅಗ್ರಾಸನವನ್ನು ಅಲಂಕರಿಸಿದರು. ಸಭೆಯಲ್ಲಿ ಮಂಗಲಶ್ಲೋಕ, ಸ್ವಾಗತ ಪ್ರಸಂಗ, ವಿದ್ಯಾರ್ಥಿ ಸಂಭಾಷಣ, ಮುಂತಾದುವು ನಡೆದ ಮೇಲೆ ಶಾಲೆಯ ಕೆಲಸ ಮಾಡಿದ ಬಡಗಿಯರೇ ಮೊದಲಾದ ಕೂಲಿಯವರಿಗೆ ಮೆನೇಜರರಿಂದ ತಯಾರಿಸಲ್ಪಟ್ಟಿದ್ದ ವಸ್ತ್ರ ಮೊದಲಾದ ಇನಾಮುಗಳನ್ನು ಅಧ್ಯಕ್ಷರವರು ಹಂಚಿದರು. ಅಗ್ರಾಸನಾಧಿಪತಿಯವರು ಮನುಷ್ಯನು ಜನ್ಮವೆತ್ತುವ ಉದ್ದೇಶವನ್ನು ಕುರಿತು ಸಭಿಕರು ಆನಂದ ಸಾಗರದಲ್ಲಿ ಮಗ್ನರಾಗುವಂತೆ ಚಲೋದಾಗಿ ಭಾಷಣಕೊಟ್ಟರು. ಆ ಮೇಲೆ ಹೆಡ್ ಮಾಸ್ಟರವರಿಂದ ಶಾಲೆಯು ಸುರುವಾದಂದಿನಿಂದ ಈ ವರೆಗೆ ನಡೆದ ವೃತ್ತಾಂತವು ಹೇಳಲ್ಪಟ್ಟಿತು. ನಂತರ ಮ॥ ರಾ॥ ಯು. ಸಿ. ಕೃಷ್ಣಭಟ್ಟರವರು "ಒಕ್ಕಟ್ಟಿನಲ್ಲಿ ಬಲವಿದೆ" "ವಿದ್ಯಾಭ್ಯಾಸದ ಉದ್ದೇಶ" ಇವುಗಳ ಕುರಿತು ಚಲೋ ಉಪನ್ಯಾಸವನ್ನು ಹೇಳಿ ಸರ್ವರನ್ನೂ ಸಂತುಷ್ಟಿಗೊಳಿಸಿದರು. ಬ್ರ. ಶ್ರೀ. ಖಂಡಿಗೆ ಈಶ್ವರಭಟ್ಟರವರಿಂದ ಶಾಲೆಯ ಮೂಲಧನದ ವಿಷಯವಾಗಿ ಒಪ್ಪಿಗೆ ಕೊಟ್ಟವರ ದಾಗ್ದಾನ ಪತ್ರಿಕೆಯು ಓದಿ ಹೇಳಲಾಯಿತು. ಅಧ್ಯಕ್ಷರವರು ಈ ಸಂಸ್ಕೃತ ಶಾಲೆಯೊಂದಿಗೆ ವೈದ್ಯಪಾಠವನ್ನು ಸಹ ಕಲಿಸುವದು ಯೋಗ್ಯವೆಂತಲೂ, ತನ್ನನ್ನು ಅಧ್ಯಕ್ಷನನ್ನಾಗಿ ಆರಿಸಿದ್ದಕ್ಕೆ ನಿಮಗೆ ಕೃತಜ್ಞನಾಗಿದ್ದೇನೆಂತಲೂ ಈ ಶಾಲೆಯು ಆಚಂದ್ರಾರ್ಕಸ್ಥಾಯಿಯಾಗುವಂತೆಯೂ, ಅತೀ ಉತ್ಸಾಹದಿಂದಲೂ ಶಾಲೆಯನ್ನು ನಡೆಸಿಬಂದಿರುವ ಮೆನೇಜರರಾದ ಬ್ರ. ಶ್ರೀ. ಖಂಡಿಗೆ ಶಂಭಟ್ಟರವರಿಗೆ ಈಗ ಸಂಭವಿಸಿದ ಕಾಯಿಲೆಯು ಬೇಗನೇ ವಾಸಿಯಾಗಿ ದೀರ್ಘಾಯುವಂತರಾಗುವಂತೆಯೂ ಶ್ರೀ ಪರಮಾತ್ಮನು ಅನುಗ್ರಹಿಸಲಿ ಎಂದು ತನ್ನ ಉಪಸಂಹಾರದ ಭಾಷಣವನ್ನು ಕೊಟ್ಟು ಅಪರಾಹ್ನ ೩ ಘಂಟೆಗೆ ಸಭೆಯನ್ನು ಮುಕ್ತಾಯ ಪಡಿಸಿದರು.

———

ಕಾಪು:— ದಕ್ಷಿಣ ಕನ್ನಡ ಜಿಲ್ಲಾ ಶಾಲೆಗಳ ಅಸಿಸ್ಟಾಂಟ ಇನ್ಸ್‌ಪೆಕ್ಟರರಾದ ರಾ॥ ಸವೂರು ಮಂಗೇಶರಾಯರವರು ಇಲ್ಲಿಯ ಒಂಗಲೆಯಲ್ಲಿ ಉಳಿದುಕೊಂಡಿದ್ದು ಕಾರ್ಕಳ ರೇಂಜಿನ ಸುಪರ್‌ವೈಜರವರಿಂದೊಡಗೂಡಿ ಇಲ್ಲಿಯ ಆಜುಬಾಜಿನ ಎಲ್ಲಾ ಶಾಲೆಗಳನ್ನು ಸಂದರ್ಶಿಸಿ ಉಡ್ಪಿ ಅತ್ತ ಕಡೆ ತೆರಳಿರುವರು.

ನಮ್ಮ ಊರ ಬೋರ್ಡು ಕನ್ನಡ ಶಾಲೆಯಲ್ಲಿ ಇಲಾಖೆಯವರು ಇಂಗ್ಲಿಷ್ ಪಾಠವನ್ನು ಕಲಿಸುವಂತೆ ಏರ್ಪಾಡು ಮಾಡಿದ್ದು ಕೇಳಿ ಸಂತೋಷ ಪಡುವೆವಾದಾಗ್ಯೂ ಇಲ್ಲಿಯ ಶಾಲೆಯ ವರ್ಷಾವಧಿ ಪರೀಕ್ಷೆಯು ಯಾವಾಗಲೂ ಜುಲೈ ತಿಂಗಳಲ್ಲಿ ನಡೆಯುವದಾದ್ದರಿಂದ ನಮ್ಮ ಮಕ್ಕಳನ್ನು ಉಡ್ಪಿಗೆ ಮುಂದಿನ ವಿದ್ಯಾಭಿವೃದ್ಧಿಗೆ ಕಳುಹಿಸಲು ಬಹಳ ತೊಡಕಾಗಿರುತ್ತದೆಂಬದನ್ನು ತಿಳಿಸಲು ವಿಷಾದವೇ ಸೈ. ಆದ್ದರಿಂದ ದಯಾಳುವಾದ ವಿದ್ಯಾ ಇಲಾಖಾ ಮೇಲಾಫೀಸರರು ಇದನ್ನು ಮನಸ್ಸಿಗೆ ತಕ್ಕೊಂಡು ಇಲ್ಲಿಯ ಶಾಲೆಯ ವರ್ಷಾವಧಿ ಪರೀಕ್ಷೆಯನ್ನು ಮೇ ತಿಂಗಳಲ್ಲಿ ನಡಿಸಿದ್ದಲ್ಲಿ ನಾವುಗಳು ತುಂಬಾ ಕೃತಜ್ಞರಾಗುತ್ತಿದ್ದೆವು. ಅಲ್ಲದೆ ಶೆಖೆಗಾಲದಲ್ಲಿ ಕೊಡತಕ್ಕ ರಜೆಯನ್ನು ಈ ಮಳೆಗಾಲದಲ್ಲಿ ಕೊಡುವ ಏರ್ಪಾಡು ಮಾಡಿದ್ದಲ್ಲಿ ಸುಮಾರು ೧॥—೨ ಮೈಲು ದೂರದಿಂದ ಬರುತ್ತಿದ್ದ ನಮ್ಮ ಮಕ್ಕಳಿಗೆ ತುಂಬಾ ಉಪಕಾರವಾಗುತ್ತಿತ್ತು.

~~~~

ಮಂಗಳೂರು.

~~~~

ಇದೇ ತಾ. ೯ಕ್ಕೆ ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗು ಜರಗುವದು.

ಮಂಗಳೂರು ಗವರ್ನಮೆಂಟ ಟ್ರೈನಿಂಗ್ ಶಾಲೆಯಿಂದ ಸೆಕೆಂಡ್ರಿ ಗ್ರೇಡ್ ಕ್ಲಾಸ್ ಪರೀಕ್ಷೆಗೆ ನಿಂತ್ತ ೫ ಮಂದಿ ಉಮೇದ್ವಾರರಲ್ಲಿ ೫ ಮಂದಿಯೂ ಪಾಸಾಗಿರುತ್ತಾರೆ ಈ ಪೈಕಿ ಒಬ್ಬರು ಮದ್ರಾಸ್ ಸಂಸ್ಥಾನದಲ್ಲಿ ತೇರಿದ ಉಮೇದ್ವಾರರಲ್ಲಿ ಪ್ರಥಮ ಸ್ಥಾನವನ್ನು ಪಡೆದಿರುವರು.

ಮಿಶ್ಯನ್ ಹ್ಯಾಸ್ಕೂಲಿನ ಹೆಡ್ ಮಾಸ್ತರರಾದ ಮ॥ ರಾ॥ ಪದ್ಮನಾಭ ಐಯರ್ ಬಿ. ಎ ಎಲ್. ಟಿಯವರು ಕೆಲಸಕ್ಕೆ ರಾಜಿನಾಮೆ ಕೊಟ್ಟಿರುವರೆಂತ ತಿಳಿಯುತ್ತೇವೆ.

ಇಲ್ಲಿ ಕೆಲವು ಕಾಲದಿಂದ ಬೈಸಿಕಲ್ ರಿಪೇರು ಮಾಡುತ್ತಿದ್ದ ತಿತ್ತೂಸ್ ಬಂಗೇರ ಎಂಬವನು ಪೋರ್ಟು
~~~~

ಆಫೀಸಿನ ಕ್ಲಾರ್ಕರಾದ ಮೆ| ಲೋಬರವರ ಬೈಸಿಕಲ್ ರಿಪೇರು ಮಾಡುವರೆ ಕೊಂಡು ಹೋಗಿ ಅದರ ಟೈಯರ್ ಟ್ಯೂಬು ಇತ್ಯಾದಿಗಳನ್ನು ಇತರರಿಗೆ ಮಾರಿದ್ದನೆಂದೂ, ಕಡೆಗೆ ಮೆ| ಲೋಬರವರು ಸದರಿ ತಿತ್ತೂಸನನ್ನು ಸೈಕಲ್ ಹಿಂದಕ್ಕೆ ಕೊಡುವರೆ ಒತ್ತಾಯಪಡಿಸಿದ್ದಕ್ಕೆ ಹಳೇ ಟ್ಯೂಬು ಟೈಯರ್ ಇತ್ಯಾದಿ ಸಾಮಾನುಗಳನ್ನು ಹಾಕಿ ಲೋಬರವರಿಗೆ ಸೈಕಲ್ ಕೊಟ್ಟನೆಂಬದಾಗಿ ಮೆ| ಲೋಬರವರು ಇ. ಪಿ. ಕೋಡಿನ ೪೦೬ನೇ ಪ್ರಕರಣದ ಮೇಲೆ ಪಿರ್ಯಾದಿ ದಾಖಲು ಮಾಡಿದ್ದರಿಂದ ಪೋಲೀಸಿನವರು ಅವನನ್ನು ಕೈದುಮಾಡಿರುತ್ತಾರೆ. ಜಾಮೀನಿನ ಮೇಲೆ ಬಿಡಲಿಲ್ಲ

ಕಳವು ಮಾಡಿದ ತಕ್ಷೀರಿನ ಮೇಲೆ ಸೆಶ್ಶನ್ಸಿಗೆ ಕಮಿಟ್ ಮಾಡಲ್ಪಟ್ಟ ಕೆ ಡಿ ಸಾಯಿರನನ್ನು ಸೆಶ್ಶನ್ಸ್ ಜಡ್ಜರವರು ತಾ ೨೮ರಲ್ಲು ಖುಲಾಸುಪಡಿಸಿದರು

ಇದೇ ಕಳದ ಮಾರ್ಚ ತಿಂಗಳ ೧೩ರಲ್ಲು ಕೊಡಿಯಾಲಬೈಲಿನ ತನಿಯ ಮತ್ತು ಅಂಗರ ಎಂಬ ಇಬ್ಬರು ಹೊಲೆಯರು ಚೊಂಡ ಎಂಬ ಹೊಲೆಯನಿಗೆ ಹೊಡೆದ ಪೆಟ್ಟಿನಿಂದ ಚೊಂಡನು ಮೃತನಾದನೆಂದು ತಿಳಿಸಿತ್ತಷ್ಟೆ, ಈ ಮೊಕದಮೆಯು ಸೆಶ್ಶನ್ಸ್ ಕೋರ್ಟಿನಲ್ಲಿ ತನಕಿಯಾಗಿ ಸೆಶ್ಶನ್ಸ್ ಜಡ್ಜರು ಅಪಾದಿತರಲ್ಲಿ ಒಬ್ಬೊಬ್ಬನಿಗೆ ಆರಾರು ವಾರಗಳ ಕಠಿಣ ಸಜಾ ವಿಧಿಸಿದರು.

ಉಡುಪಿಯಲ್ಲಿ ವಕೀಲರಾಗಿರುವ ಮ| ರಾ| ರಾ| ಎಮ್ ವಿಟ್ಠಲ ಕಾಮತರವರು ಕುಂದಾಪುರದ ತಾಲೂಕು ಬೋರ್ಡ ಮೆಂಬರರಾಗಿ ನೇಮಿಸಲ್ಪಟ್ಟಿರುತ್ತಾರೆ

ತಲಶೇರಿಯಲ್ಲಿ ಅಬ್ಕಾರಿ ಇಲಾಖೆಯ ಅಸಿಸ್ಟೆಂಟ ಇನ್ಸ್‌ಪೆಕ್ಟರರಾದ ವಿ. ಜಿ ಶೆಟ್ಟಿ ದೊರೆಗಳವರಿಗೆ ಉಡುಪಿ ಸರ್ಕಲಿಗೆ ವರ್ಗವಾಗಿಯದೆ

ಈಚೆಗೆ ಕ್ರೈಸ್ತ ಸಮಾಜದೊಳಗೆ ಒಂದು ವಿವಾಹವು ನಡೆದಿರುವದು ವಧುವು ರೋಮನ್ ಕೆಥೋಲಿಕ ಸಮಾಜದ ಜಪ್ಪಿನಲ್ಲಿರುವ ಮಿಸ್ ಎಮ್ ಕ್ಯೂಲೋರವರು ಇವರಿಗೆ ಸುಮಾರು ೨ ಲಕ್ಷ ರೂಪಾಯಿಯ ಆಸ್ತಿ ಇದೆ ಸುಮಾರು ೫೦ ವರ್ಷ ವಯಸ್ಸು ವರನು ಬಲ್ಮಠದಲ್ಲಿ ಬಾಸೆಲ್ ಮಿಶ್ಶನ್ ಕ್ರೈಸ್ತ ಸಮಾಜದ ಹಿರಿಯರಾಗಿದ್ದ ಮೆ| ಸ್ಟೀಫನ್ ಸ್ಯಮನ್‌ರವರು ಇವರಿಗೆ ಸುಮಾರು ೭೫ ವರ್ಷ ವಯಸ್ಸಾಗಿರುವದು ವಧುವಿನ ಕುಟುಂಬದವರು ಕೆಲವು ಸಬಬಿನ ಮೇಲೆ ಈ ವಿವಾಹವು ಸಿಂಧವಾಗತಕ್ಕದಲ್ಲವೆಂತ ಸೆಶ್ಶನ್ಸ್ ಜಡ್ಜರಲ್ಲಿ ಮನವಿ ಮಾಡಿಕೊಂಡಿರುವರೆಂತ ತಿಳಿಯುತ್ತೇವೆ

ದೊಡ್ಡ ಸಾಹುಕಾರನಂತೆ ನಟಿಸುತ್ತಿದ್ದ ಪರಊರಿನವರೊಬ್ಬರು ಬೆಂಗಳೂರಿನವರೆಂದು ಹೇಳಿ ಇಲ್ಲಿಯ ಸಾಹುಕಾರರೊಬ್ಬರಲ್ಲಿ ಬಂದು, ಒಂದು "ಟ್ರಿವಲಿಂಗ್ ಬೇಗ್" ಎಂಬ ಚೀಲವನ್ನು ಅವರ ವಶಕೊಟ್ಟು ಅದರಲ್ಲಿ ೧೫,೦೦೦ ರೂಪಾಯಿಗಳಿವೆಂದು ಹೇಳಿ ಕೆಲವು ದಿನ ಅವರೊಡನೆ ಸಭ್ಯ ಮನುಷ್ಯನಂತೆ ವರ್ತಿಸಿ ನಂತರ ಸುಮಾರು ೮೦೦೦ ಮೌಲ್ಯದ ಮಹಾಲುಗಳನ್ನು ಸದರಿ ಸಾಹುಕಾರರಿಂದ ಪಡಕೊಂಡು ತನ್ನ ವಿಳಾಸಕ್ಕೆ ರೈಲ್ವೆ ಮೂಲಕ ಕಳುಹಿಸ ಹೇಳಿದ್ದಲ್ಲದೆ ೩೦೦ ಪವನುಗಳು ಸಹಾ ಬೇಕೆಂದು ಹೇಳಿದ್ದರಿಂದ ಸಾಹುಕಾರರು ನಗದಿ ಹಣವನ್ನು ಕೇಳಲು ಅವನು ಊರಿಗೆ ಹೋಗಿ ಕಳುಹಿಸಿಕೊಡುತ್ತೇನೆಂದು ಹೇಳಿದ್ದರಿಂದ ಅವನ ಮೇಲೆ, ಅನುಮಾನ ಹುಟ್ಟಿ ರೈಲ್ವೆ ಪಾಸ್ ಕಳುಹಿಸುವರೆ ಸ್ವಲ್ಪ ತಾಮಸ ಮಾಡಿದರೆಂದೂ ಮರುದಿನ ಆ ಆಸಾಮಿಯು ಬೆಳಗ್ಗಿನ ರೈಲ್ವೆಯಲ್ಲಿ ಪರಾರಿಯಾಗಿರುವನೆಂತಲೂ ಆ ಚೀಲದಲ್ಲಿ ಕಲ್ಲು ಮಣ್ಣುಗಳಲ್ಲದೆ ನಗದಿ ರೂಪಾಯಿಗಳೇನೂ ಇದ್ದಿಲ್ಲವೆಂದೂ ವಾರ್ತೆ ಇದೆ

ಇಲ್ಲಿಯ ಹೆಕ್ಕಿ ಕೆರೇಜುಗಳ ಆಫೀಸರರಾದ ಮೆ| ಡೇಸರವರಿಗೆ ೨ನೇ ಗ್ರೇಡಿಗೆ ಬಡ್ತಿಯಾಗಿರುವದರಿಂದ ಇವರ ಬದಲಿಗೆ ಮ| ರಾ| ರಾಮಕೃಷ್ಣಯ್ಯನವರು ಹೆಕ್ಕಿ ಕೆರೇಜು ಆಫೀಸರರಾಗಿ ನೇಮಿಸಲ್ಪಟ್ಟಿರುತ್ತಾರೆ ಹೊಸತಾಗಿ ನೇಮಿಸಲ್ಪಟ್ಟ ಆಫೀಸರರು ಕೂಡಾ ಮೆ| ಡೇಸರಂತೆಯೇ ಜಡ್ಕಾ ಗಾಡಿಗಳ ಓಟವನ್ನು ಹತೋಟಿಯಲ್ಲಿಡುವರೆ ಸಾಹಸಪಡುವರು ಎಂತ ನಂಬುತ್ತೇವೆ

ಮಂಗಳಾದೇವಿ ದೇವಸ್ಥಾನದಿಂದ ಅಲ್ಬರೀಸರ ಕಾರ್ಖಾನೆಗೆ ಹೋಗುವ ಮುನ್ಸಿಪಾಲ್ ದಾರಿಯ ಬದಿಯಲ್ಲಿ ಮಳೆಗಾಲದ ನೀರು ಹೋಗುವ ಸರಿಯಾದ ತೋಡುಗಳಿಲ್ಲದಿರುವದರಿಂದ ಮಳೆಯ ನೀರು ಬೀದಿಯ ಮೇಲೆ ಹರಿದುಹೋಗಿ ಬೀದಿಯಲ್ಲಿ ಹೊಂಡ ಬಿದ್ದದರಿಂದ ಪ್ರಯಾಣಿಕರಿಗೆ ನಡೆಯುವದು ಕಷ್ಟಸಾಧ್ಯವಾಗಿದೆಂತ ಒಬ್ಬ ಬಾತ್ಮಿದಾರರು ತಿಳಿಸುವರು

ಜಪ್ಪು ಗುಜ್ಜರಕೆರೆಯ ಬೀದಿ ಪ್ರಪಾತದಲ್ಲಿ ಮುನ್ಸಿಪಾಲಿಟಿಯವರು ಸುಮಾರು ೯ ಅಡಿ ಎತ್ತರಕ್ಕೆ ಕಟ್ಟಿಸಿದ ಒತ್ತೆಕಲ್ಲಿನ ಗೋಡೆಯು ಈ ಮಳೆಗಾಲದಲ್ಲಿ ಜರಿದು ಬಿದ್ದಿರುವದರಿಂದ ಪ್ರಯಾಣಿಕರಿಗೂ ಗಾಡಿಗಳಿಗೂ ವಿಶೇಷ ಅಪಾಯಕರವಾಗಿರುವದೆಂದು ಕೇಳುತ್ತೇವೆ. ಸಂಬಂಧಪಟ್ಟ ಅದಿಕಾರಿಗಳು ತ್ವರ್ಯದಲ್ಲಿ ಈ ಗೋಡೆಯನ್ನು ಜೋಡುಕಲ್ಲಿನಿಂದ ಕಟ್ಟಿಸಿ ಬದ್ರಪಡಿಸುವದು ವಿಹಿತವಾಗಿರುವದು

ಮಂಗಳೂರು ಮುನ್ಸಿಪಾಲಿಟಿಯಲ್ಲಿ ಕಳದ ವಾರ ಒಂದು ಪ್ಲೇಗು ಮರಣವಿತ್ತು.

ಇಲ್ಲಿ ಇದೇ ಕಳದ ತಾ. ೨೯ರ ವರೆಗೆ ೬೨ ಇಂಚು ೭೭ ಸೆಂಟ್ಸು ಮಳೆ ಬಿದ್ದಿರುವದು. ಕಳದ ವರ್ಷದ ಸರಾಸರಿ ೪೬ ಇಂಚು, ೨೬ ಸೆಂಟ್ಸುಗಳಾಗಿರುವದು

ಶೀತಾಂಗೊಳಿ ಪುತ್ತಿಗೆ ರಸ್ತೆಯ ಕೆಲಸವನ್ನು ಬೋರ್ಡಿನವರು ತೆಗದುಕೊಂಡಿದ್ದಾರಾಗಿ ವಾರ್ತೆ ಇದೆ.

ಗೌಡಸಾರಸ್ವತರ ಮೂಲ್ಕಿ ಶ್ರೀ ವೆಂಕಟರಮಣ ದೇವಸ್ಥಾನದ ಬಜಕರಲ್ಲಿ ಕೆಲವರು ಈ ಮೊದಲು ಇಲ್ಲಿಯ ಕಲಕ್ಟರ ದೊರೆಗಳವರಿಗೆ ಸದರಿ ದೇವಸ್ಥಾನದ ಆಡಳಿತೆ ಮೊಕ್ತೇಸರರ ಮೇಲೆ ದೇವಸ್ಥಾನದ ನಡವಳಿತೆಗೆ ಬೇಕಾದ ವ್ಯವಸ್ಥೆಯನ್ನು ಮಾಡಲಿಕ್ಕೆ ವ್ಯಾಜ್ಯವನ್ನು ಶಿವಿಲ್ ಕೋರ್ಟಿನಲ್ಲಿ ನಡಿಸಲಿಕ್ಕಾಗಿ ಅರ್ಜಿಮಾಡಿದ್ದರಿಂದ ಈ ಅರ್ಜಿ ಪ್ರಕಾರ ಕಲೆಕ್ಟರ ದೊರೆಗಳು ವ್ಯಾಜ್ಯ ಮಾಡಲು ಸಂಕ್ಶನ್ ಕೊಟ್ಟಿರುವರಾಗಿ ಕೇಳುತ್ತೇವೆ

ಇಲ್ಲಿಯ ಮುನ್ಸಿಫರಾದ ಮ| ರಾ| ರಾ| ಎಸ್. ವೆಂಕಟಸುಬ್ಬರಾಯರವರಿಗೆ ಗುಂಟೂರಿಗೆ ವರ್ಗವಾಗಿರುತ್ತದೆ

ಇಲ್ಲಿ ಮುನ್ಸಿಫರಾಗಿ ಮ| ರಾ| ರಾ| ಜಗನ್ನಾಥರಾವ್ ಎಂಬವರೊಬ್ಬರು ನೇಮಕಪಟ್ಟಿರುವರು.

ಇಲ್ಲಿ ಡಿಸ್ಟ್ರಿಕ್ಟ ಜಡ್ಜರಾಗಿದ್ದ ಮೆ. ಎಚ್. ಓ. ಡಿ ಹಾರ್ಡಿಂಜ ದೊರೆಗಳ ಹಿರೇ ಮಗ ಯುದ್ಧದಲ್ಲಿ ಮಡಿದರು ಎಂಬದಾಗಿ ತಿಳಿದು ವಿಷಾದಿಸುತ್ತೇವೆ.

ಬಾಸೆಲ್ ಮಿಶ್ಶನ್ ನೇಯುವ ಕಾರ್ಖಾನೆಯಲ್ಲಿ ಹೆಡ್‌ಕ್ಲಾರ್ಕರಾಗಿದ್ದ ಜೋರ್ಜ ಹರ್ಬರ್ಟರು ಕಾರ್ಖಾನೆಯ ಹಣವನ್ನು ದುರುಪಯೋಗ ಮಾಡಿದ್ದಾರಾಗಿ ಕಾರ್ಖಾನೆಯ ಮೆನೇಜರರು ಅವರ ಮೇಲೆ ಇಲ್ಲಿಯ ಡ್ಯುಪಿಟಿ ಕಲೆಕ್ಟರರಲ್ಲಿ ಪಿರ್ಯಾದು ದಾಖಲುಮಾಡಿದ್ದಾರೆಂದು ತಿಳಿಸಿತ್ತಷ್ಟೆ. ಅಪಾದಿತರು ಕೆಲಸಕ್ಕಿದ್ದ ಕಾರ್ಖಾನೆಯು ಶತ್ರುಗಳ ಕಡೆಯ ಕಾರ್ಖಾನೆಯಾಗಿರುವದರಿಂದ ವಾದಿಯು ಕೊಟ್ಟ ಪಿರ್ಯಾದಿಯನ್ನು ಯುದ್ಧ ತೀರುವ ತನಕ ತನಕಿ ಮಾಡಕೂಡದೆಂತ ಅಪಾದಿತರ ಕಡೆಯ ವಕೀಲರು ಇದೇ ತಾ. ೩ರಲ್ಲು ಡ್ಯುಪಿಟಿ ಕಲೆಕ್ಟರರಲ್ಲಿ ವಾದಿಸಿದಲ್ಲಿ ಡ್ಯುಪಿಟಿ ಕಲೆಕ್ಟರರವರು ಈ ವಾದವನ್ನು ಅಂಗೀಕರಿಸಲಿಲ್ಲವೆಂತಲೂ ಈ ವಿಷಯವಾದ ಚರ್ಚೆಯನ್ನು ಹೈಕೋರ್ಟಿನಲ್ಲಿ ವಾದಿಸುವರೆ ಸಮಯ ಕೊಡಬೇಕಾಗಿ ಅಪಾದಿತರ ಕಡೆಯ ವಕೀಲರು ಡ್ಯುಪಿಟಿ ಕಲೆಕ್ಟರರನ್ನು ಕೇಳಿಕೊಂಡದ್ದರಿಂದ ಈ ಮೊಕದಮೆಯ ತನಕಿಯನ್ನು ಇದೇ ತಾ ೨೬ಕ್ಕೆ ಮುಂದರಿಸಿಟ್ಟಿರುವರೆಂದೂ ತಿಳಿಯುತ್ತೇವೆ.

ಕಾಸರಗೋಡು, ಹೊಸದುರ್ಗ ಅತ್ತಕಡೆ ಸರ್ಕಿಟಿಗೆ ಹೋಗಿದ್ದ ಜಿಲ್ಲಾ ಕಲೆಕ್ಟರ ದೊರೆಗಳವರು ಸರ್ಕಿಟಿನಿಂದ ಹಿಂತೆರಳಿ ಬಂದಿರುತ್ತಾರೆ

ಜೀನಸು ಧಾರಣೆ. (ರಖಂ)

ಮುಸ್ಕತಿ ಅಕ್ಕಿ	5– 2–0	5–10–0
ಗಾಡಿ ರಾಶಿ ,,	5–13–0	4–14–6
ಗುಡ್ಡು ,,	4–14–0	5– 2–0
ಅವ್ವಲ್ ಬೆಳ್ತಿಗೆ,,	5– 6–0	5–10–0
ಗುಡ್ಡು ಬೆಳ್ತಿಗೆ ,,	5– 1–0	5– 4–0
ರಂಗೂನು ಬೆಳ್ತಿಗೆ ಗೋಣಿ ೧ರ	8–12–0	9– 4–0
ಗೋದಿ ಗೋಣಿ ೧ರ ...	13– 0 –0	14– 0–0
ಹುರುಳಿ ಗೋಣಿ ೧ರ ...	6– 8–0	7–12–0
ಕಡಲೆ ಗೋಣಿ ೧ರ. ,,	8– 8–0	10– 0–0
ತೊಗರಿ ಗೋಣಿ ೧ರ ...	10– 0–0	11– 8–0
ತೊಗರಿ ಬೇಳೆ ಗೋಣಿ ೧ರ.	12– 8–0	16– 0–0
ಉದ್ದು ಗೋಣಿ ೧ರ		10– 0–0
ಊರುಬೆಲ್ಲ ಖಂಡಿ ೧ರ ...		75– 0–0
ಉಪ್ಪು ಗೋಣಿ ೧ರ	3–12–0	3–14–0
ಕೊಬ್ರಿ ಖಂಡಿ ೧ರ	70– 0–0	75– 0–0
ಕೊಬ್ರಿ ಹಿಂಡಿ ಖಂಡಿ ೧ರ	10– 8–0	11– 0–0
ಎಳ್ಳಿಂಡಿ ಖಂಡಿ ೧ರ	25– 0–0	33–12–0
ಕೊಬ್ರಿ ಎಣ್ಣೆ ಮಣ ೧ರ.	5–10–0	5–12–0
ಎಳ್ಳೆಣ್ಣೆ ಮಣ ೧ರ(ಕುರಾಸನ)	3– 8–0	3– 9–0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ರ		5– 0–6
ಮೋರಿಸ್ ಸಕ್ಕರೆ ಮಣ ೧ರ		4– 12–0
ಕಾಫಿ ಖಂಡಿ ೧ರ	240– 0–0	252– 0–0
ಹೊಸಬೀಗೋಟು ಖಂಡಿ೧ರ.	94– 0–0	98– 0–0
ಹೊಸ ಗೇರುಬೀಜ ಮುಡಿ ೧ರ		2– 2–0
ಕಬ್ಬಿಣ ಖಂಡಿ ೧ರ		50– 0–0
ತಾಂಬ್ರ ತಗಡು ಮಣ ೧ರ.		19– 8–0
ತಾಂಬ್ರ ಪಾತ್ರೆಗಳು ಮಣ ೧ರ.		22– 0–0
ಚೀನಿ ಬೆಳ್ಳಿ ಶೇರು ೧ರ.		8–12–0

ಅನುಭವಸಿದ್ಧವಾದ ವನೌಷಧಗಳು.

೧. ಕುಂತಲಾನಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಿಂದ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಚಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨-೮-೦.

೩. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ

೪. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೫. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು ತೊಲೆಗೆ ೨ ರೂ.

ತಮ್ಮ ವಿಳಾಸ:—ಬಿ ಎಮ್. ನಾಥ್ ಮತ್ತು ಕಂಪೆನಿ,

ವೆಪರಿ ಪೋಸ್ಟು ಮದರಾಸು.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುಲ್ಮ, ಶ್ವಾಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦ ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨. ಗಂಧಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೩ ನಷ್ಟೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಬ್ರಹ್ಮಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗು ಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರಿಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

B. M. Nath & Co, *Ayurvedic Chemists*,

Vepery Post, MADRAS.

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.

ಬಲ್ಮಠ ಮಿಶ್ಶನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಶನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಪೆಬ್ಬ್ ಎಂಬ ಗುರುಸು ಕಲ್ಲು ಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ

ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‍ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ನಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ,

ಹಂಪನ್‍ಕಟ್ಟಾ, ಮಂಗಳೂರು.

NOTICE.

Stany Brothers,

Candle Garden, Mangalore,

ಬಲ್ಮಠ ಕದ್ರಿ ರಸ್ತೆ ಬಳಿ ನಮ್ಮ "ಕೆಂಡಲ್ ಗಾರ್ಡನ್" ಎಂಬ ಸ್ಥಳದಲ್ಲಿ 1908ನೇ ಇಸವಿ ಅಗೋಸ್ತಿನಿಂದ ಈವರೆಗೆ ನಡೆದು ಬಂದಿರುವ ಯಂತ್ರದಿಂದ ಹುರಿದು ತಯಾರಿಸುವ ನಮ್ಮ ಕಾಫಿ ಪುಡಿ ವ್ಯಾಪಾರವು ನಮ್ಮ ವಾಚಕರಿಗೆ ಗೋಚರವಾಗದ ಕಾರಣ ಈಗ ನಾವು ಪ್ರಕಟಿಸಿರುತ್ತೇವೆ.

ನಮ್ಮಲ್ಲಿ ನಾನಾ ಬಗೆಯ ಶಾಲಾ ಹುಡುಗರಿಗೆ ಅವಶ್ಯವುಳ್ಳ ಕೋಪಿ ಬುಕ್ ಇತ್ಯಾದಿ ಶಾಲಾ ಪುಸ್ತಕಗಳೂ, ಸೊಗಸಾದ ಅನೇಕ ವಿಧದ ತಿರುಚಿನಾಪಳ್ಳಿ ಚುರುಟುಗಳೂ, ನೀಲಗಿರಿ ಚಾ, ಇತರ ಸಾಮಾನುಗಳೂ ಕೂಡ ವ್ಯಾಪಾರಸ್ಥರಿಗೆ ಸುಲಭವಾದ ಖರೀದಿಯಲ್ಲಿ ದೊರಿಯುತ್ತದೆ.

ಕಾಫಿ ಪುಡಿಯು ರಾತ್ಲು ಒಂದಕ್ಕೆ 0—10—0ಯಿಂದ 0—5—0 ಧರದ ವರೇಗೂ ದೊರಿಯುತ್ತದೆ.

ಇತರ ಅನುಭವಗಳಿಗೆ ನಮ್ಮ ಮೆನೇಜರರ ಮೇಲಿನ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು.

Piedade Pinto,

Manager.

ESTABLISHED JULY 1906.

THE CANARA BANK, LIMITED, MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು

Authorised Capital	Rs.	300,000—0—0
Issued Capital		225,000—0—0
Subscribed Capital		218,800—0—0
Paid up Capital		193,800—0—0
Deposits		422,697-11—9
Reserve Fund		33,500—0—0

Besides the uncalled capital of Rs. 25,000/ 25% of the net profits are added annually to the Reserve Fund. Rs. 21,685/ have been invested in Government Paper of the face value of Rs. 22,500/-

Dividends of not less than 6% paid during the past years and a bonus of 1% to 2% paid in addition during the last three years.

Fixed Deposits of Rs. 50/ and above in multiples of Rs. 5/ received for 3, 6, 12 and 24 months @ 4, 4½, 5 and 5½% respectively at the discretion of the managing committee

Short-notice Deposits requiring one weeks notice of withdrawal after one month received @ 2½% per annum at the discretion of the managing committee

Current Deposit Account opened free of charge.

Savings Bank Account opened for any sum not less than 4 As and multiples thereof and interest paid @ 4⅜%.

Loans granted on proper securities and pledges.

Sealed Parcels for safe custody received on a moderate charge.

Canara Bank Ltd.,
Mangalore, 1st June 1915.

ನಿಯಮಿತ ಮೂಲ ಧನವು ರೂಪಾಯಿ	300,000—0—0
ಹುಟ್ಟಿಬಂದ ಮೂಲ ಧನವು ,,	225,000—0—0
ಪ್ರತಿಜ್ಞಾತ ಮೂಲ ಧನವು ,,	218,800—0—0
ಆಗತ ಮೂಲ ಧನವು ,,	193,800—0—0
ಠೇವಣಾತಿಯಾಗಿ ಕೊಡಲ್ಪಟ್ಟಿರುವ ಮೊಬಲಗು	422,697-11—9
ರಕ್ಷಿತ ಧನವು	33,500—0—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ... ಮುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದಲ್ಲದೆ ಹಿಸೆ ಮಾಲ್ಕರಿಗಳಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 21,685—0—0 ಸರಕಾರದ ರೂ. 22,500ರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುದಾರರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ "ಬೋನಸ್" ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾಗುವವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಇಲ್ಲಿ ಠೇವಣಾತಿಗಳು ಠೇವಣಿದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾದೀತು. ಈ ಠೇವಣಾತಿಗಳಿಗೆ ಸೇಕಡಾ 4⅜ರ ದರ ಬಡ್ಡಿಯು ಕೊಡೋಣಾಗುವುದು.

ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

ಮೊಹರು ಹಾಕಲ್ಪಟ್ಟ ಡಬ್ಬಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

P. Gopal Naik,
Secretary.

ಜಯವಿಜಯ

ಅಥವಾ

ತೂಗಾಡುವ 'ಅಸ್ಥಿಪಂಜರ'.

ಗುಜರಾಥಿ ಭಾಷೆಯಿಂದ ಕನ್ನಡದಲ್ಲಿ ಹೊಸತಾಗಿ ಭಾಷಾಂತರವಾದದ್ದು.

ಈ ಗ್ರಂಥದ ಕುರಿತು "ಸತ್ಯದೀಪಿಕೆ" ಎಂಬ ವಾರಪತ್ರಿಕೆಯು ಪಡುವ ಅಭಿಪ್ರಾಯ — "ಇದು ಬಹಳ ರಸಿಕವಾದ ಆಶ್ಚರ್ಯವುಳ್ಳ ಒಂದು ಕಥೆಯಾಗಿದೆ. ಅದನ್ನು ಓದತೊಡಗಿದವರಿಗೆ ಅದನ್ನು ತೀರಿಸುವ ತನಕ ವಿಶ್ರಾಂತಿ ದೊರಕದು. ದೇಶಸ್ಥರು ಸಹಾ ವಿಲಾಯತಿ ಕಾದಂಬರಿಗಳಂತೆ ಚೆಲೋ ಕಥೆಗಳನ್ನು ಬರೆಯಬಲ್ಲರೆಂದು ಇದರಿಂದ ಪ್ರಕಟವಾಗುತ್ತದೆ. ಇದರ ಸಾರಾಂಶವೂ ನೀತಿಯೂ ಕೂಡಾ ಘನವಾದದ್ದು. ನೀತಿವಂತರು ಅನೇಕಸಾರಿ ಶ್ರಮಪಡುವಾಗ ದುಷ್ಟರು ಕೆಲವು ಸಮಯ ಮೆರೆಯುವರೆಂದೂ ಆದರೆ ದುಷ್ಟರ ದುಷ್ಟತನವು ಬೈಲಾಗಿ ಅವರು ತಮ್ಮ ದುಷ್ಟತನಕ್ಕೆ ತಕ್ಕ ಪ್ರತಿಫಲವನ್ನು ಹೊಂದುವಾಗ ಸ್ಥಿತಿಯು ಕಡೆಗೆ ಜಯಿಸಿ ಬಾಳುವದೆಂದೂ ಈ ಕಥೆಯ ಕವಿಯು ತೋರಿಸುವನು. ಇದಲ್ಲದೆ ಈ ಕಥೆಯ ಹೂರದಲ್ಲಿ ~~ಬ್ಬಳಾದ ಅರೆಯಲ್ಲಿ ಪತಿವ್ರತಾ ಧರ್ಮವೂ ಇತರದಲ್ಲಿ ಬೇರೆ ಸದ್ಗುಣಗಳೂ~~ ಹೊಳೆಯುವವು. ಕರ್ನಾಟಕ ಬಲ್ಲವರೆಲ್ಲರೂ ಈ ಕಥೆಯನ್ನು ಓದಿಕೊಂಡು ಈ ಕಥೆಯ ನೀತಿಯಿಂದ ಲಾಭವನ್ನು ಪಡೆದಾರೆಂತ ನಂಬುತ್ತೇವೆ." ಇತ್ಯಾದಿ. ಪುಸ್ತಕದ ಕ್ರಯ 0—12—0. ವಿ. ಪಿ. ಬೇರೆ.

ವಿಳಾಸ:—

V. C. Amin,
C/o E. A. Goll Esq.
Sirdar Palace, Apollo Street,
BOMBAY.

ರೂ. 501 ಉಚಿತ!

ಬಲೂನ್ ಬ್ರೇಂಡ್ ಸಾಬೂನ್.

5 ನಿಮಿಷದೊಳಗೆ ಕೂದಲನ್ನು ಉದುರಿಸಿಬಿಡುವದಿಲ್ಲವೆಂಬದನ್ನು ಖಚಿತಪಡಿಸುವವರಿಗೆ ರೂ. 501 ಉಚಿತವಾಗಿ ಕೊಡೋಣಾಗುವದು. ಇದರಿಂದ ಚರ್ಮವು ಕೆಡದು. 3 ಸಾಬೂನುಗಳುಳ್ಳ ಪೆಟ್ಟಿಗೆ 1ಕ್ಕೆ 0—12—0; 2 ಪೆಟ್ಟಿಗೆಗಳ ವರೆಗೆ ವಿ. ಪಿ ಚಾರ್ಜು 0—5—0.

ರೂ. 2500 ಉಚಿತ!

ಸಿರಾಜಿ ಹೇರ್ ಡೈ ಎಂಬ ಕೇಶತೈಲವು ಬಿಳೀ ಮತ್ತು ನರೆತ ಕೂದಲನ್ನು ಕಪ್ಪು ಮಾಡುವದಿಲ್ಲವೆಂದು ತೋರಿಸುವವರಿಗೆ ರೂ. 2500 ಉಚಿತ.

ಈ ತೈಲವನ್ನು ಏನೊಂದು ಬಾಧಕಬಾರದಂತೆ ಅತಿ ನಿಪುಣತೆಯಿಂದ ತಯಾರು ಮಾಡಿರುತ್ತದೆ. ಇದರಿಂದ ಚರ್ಮದಲ್ಲಿ ಕಲೆಯಾಗದು. ಪೆಟ್ಟಿಗೆ 1ಕ್ಕೆ ರೂಪಾಯಿ 1—0—0; ವಿ. ಪಿ. ಬೇರೆ.

ವಿಳಾಸ:— ಎಫ್. ಎಲ್. ದವಾವಾಲಾ,
ಮಿರ್ಜ ಸ್ಟ್ರೀಟ್, ಮುಂಬಾಯಿ.

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡಿಸಬೇಕಾಗಿದೆ.

F. L. Davawala,
Mirza Street, BOMBAY.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

ಈ ಮುರಬ್ಬಾವು "ಸಾಲಾಮಿಸ್ರಿ"ಯಲ್ಲಿ ತಯಾರಿಸಲ್ಪಟ್ಟದ್ದು ಅಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

ಬೆಂಗಳೂರು ಸಿಟಿ ಟಪ್ಪಾಲು ಆಫೀಸಿನ ಸೇವಿಂಗ್ಸ್ ಬ್ಯಾಂಕಿನಲ್ಲಿ 15—3—15ರಲ್ಲು ಡಿಪಾಜಿಟು ಇಟ್ಟಿರುತ್ತೇವೆ.

ಮುರಬ್ಬಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥ ವಾಗಿ ತಯಾರುಮಾಡಿರುವ "ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ! ಸೇವಿಸಿರಿ!!

ಈ ಸಾಲಾಮಿಸ್ರೀ ಎಂಬದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು ಕಾಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಾಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನ ವಾಗಲಾರರು. ಅನೇಕರು ಉರುಳುಗಡ್ಡೆ, ಶಾಮುಗಡ್ಡೆ ಇವುಗಳನ್ನು ಪಕ್ವ ಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಹೇಳಿ ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದ್ದಲ್ಲಿ ಇದು ಸಾಲಾಮಿಸ್ರಿಯೇ ಅಥವಾ ಬೇರೆ ತರಹಾದ್ದೇ ಎಂಬುವುದು ತಿಳಿದು ಬರುತ್ತೆ.

ಈ ಮುರಬ್ಬವನ್ನು ಪ್ರತಿಯೊಬ್ಬರು ಸೇವಿಸುವ ಹಾಗೆ
ಕ್ಕೂ ಯುಕ್ತವಾದ ತರಾರು ಮಾರಲ್ಪಡುವದು.

- ಸಾಲಾಮಿಸ್ರಿ ಮುರಬ್ಬಾವು — ನೀರಿನಂತಿರುವ ಧಾತುವನ್ನು ಗಟ್ಟಿಪಡಿಸುವದು.
- ಸಾಲಾಮಿಸ್ರಿ ಮುರಬ್ಬಾವು — ಮೂತ್ರದೊಂದಿಗೆ ಧಾತುವು ಹೋಗುವುದನ್ನು ನಿಲ್ಲಿಸುವದು.
- ಸಾಲಾಮಿಸ್ರಿ ಮುರಬ್ಬಾವು — ಮೂತ್ರದಲ್ಲಿ ಉರಿಯುವದನ್ನು ನಿಲ್ಲಿಸುವುದು.
- ಸಾಲಾಮಿಸ್ರಿ ಮುರಬ್ಬಾವು — ಕ್ಷಣಕ್ಷಣಕ್ಕೂ ಮೂತ್ರವಾಗುವದನ್ನು ನಿಲ್ಲಿಸುವದು.
- ಸಾಲಾಮಿಸ್ರಿ ಮುರಬ್ಬಾವು — ನಿದ್ರೆಯಲ್ಲಿ ಧಾತುವು ಹೋಗುವದನ್ನು ನಿಲ್ಲಿಸುವದು
- ಸಾಲಾಮಿಸ್ರಿ ಮುರಬ್ಬಾವು — ಮೆದುಳಿಗೆ ಬಲವನ್ನು ಕೊಡುವದು.
- ಸಾಲಾಮಿಸ್ರಿ ಮುರಬ್ಬಾವು — ರಕ್ತವನ್ನು ವೃದ್ಧಿಪಡಿಸಿ ಧಾತುವನ್ನು ಶೇಖರಿಸುವದು.
- ಸಾಲಾಮಿಸ್ರಿ ಮುರಬ್ಬಾವು — ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವದು.
- ಸಾಲಾಮಿಸ್ರಿ ಮುರಬ್ಬಾವು — ಹಸಿವನ್ನು ಹೆಚ್ಚಿಸಿ ರಕ್ತವನ್ನು ಶೇಖರಿಸುವದು.
- ಸಾಲಾಮಿಸ್ರಿ ಮುರಬ್ಬಾವು — ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವದು.
- ಸಾಲಾಮಿಸ್ರಿ ಮುರಬ್ಬಾವು — ಉತ್ಸಾಹವು, ಬುದ್ಧಿ ಕುಶಲತೆಯು, ಶರೀರಕಾಂತಿಯು ಕೊಡುವದು.
- ಸಾಲಾಮಿಸ್ರಿ ಮುರಬ್ಬಾವು — ತಾಂಬ್ರ ಮತ್ತು ಭಂಗಾರ ಭಸ್ಮಕಿಂತಲು ಉತ್ತಮವಾದದ್ದು.
- ಸಾಲಾಮಿಸ್ರಿ ಮುರಬ್ಬಾವು — ಸ್ತ್ರೀಸಂಗಕ್ಕೆ ಮೊದಲು ಸ್ಖಲನವಾಗುವುದನ್ನು ನಿಲ್ಲಿಸುವದು.

ಒಂದು ಡಬ್ಬಿ ಮುರಬ್ಬವನ್ನು 15 ದಿನಗಳು ಉಪಯೋ
ಗಿಸುವದರಿಂದ ಪೂರಾ ಗುಣಕೊಡುತ್ತೆ. 2—3 ಡಬ್ಬಿ
ಮುರಬ್ಬವನ್ನು ಉಪಯೋಗಿಸುವದರಿಂದ ಜನ್ಮಾಂತರದ
ರೋಗವೂ ಗುಣಕೊಡುತ್ತೆ.

15 ತೊಲಿ ಮುರಬ್ಬಾವಿನ ಡಬ್ಬಿ 1ಕ್ಕೆ ರೂ. 2. ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ. ಟಪ್ಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿ ವರೆಗೆ ಆಣೆ 6

ಏಜಂಟರು:— ಡಿ. ಸಯ್ಯದ್ ಉಸ್ಮಾನ್ ಎಂಡ್ ಕೊ., ದೊಡ್ಡಪೇಟೆ, ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್, ಡಿಲ್ಲೀ ವೈದ್ಯರು, 5 ಹಾಜಿಸಾಹೇಬ್ ಮಹಡಿ ಅವೆನ್ಯು ರೋಡ್, ಬೆಂಗಳೂರು ಸಿಟಿ.

ದರ್ಬಾರ್ ಸಾಬೂನು.

ಅಪಾಯವಿಲ್ಲದ ರೋಮಸಂಹಾರಿ.

ಈ ಸಾಬೂನನ್ನು ರೋಮವಿರುವ ಸ್ಥಳದಲ್ಲಿ ಹಚ್ಚಿದರೆ ೫ ನಿಮಿಷಗಳೊಳಗಾಗಿ ರೋಮವು ಮಾಯವಾಗುವದು. ಉರಿ, ಸೆಕೆ, ಮುಂತಾದ ಬಾಧೆಗಳಿಲ್ಲವು. ಒಂದು ಸಾರಿ ಉಪಯೋಗಿಸಿದವರಿಗೆ ಗೊತ್ತಾಗುವದು. ಮರೆಯ ಬೇಡಿರಿ.

ಏಜಂಟರುಗಳು ಬೇಕಾಗಿದೆ!

೩ ಸಾಬೂನುಗಳಿರುವ ಪೆಟ್ಟಿಗೆ ೧ಕ್ಕೆ ...	ರೂ. ೦—೧೪—೦
೩ ಪೆಟ್ಟಿಗೆ ಒಂದೇ ಸಾರಿ ತೆಗದುಕೊಳ್ಳುವವರಿಗೆ	ರೂ. ೧—೧೦—೦

ಅಂಚೆ ಹಾಸಲು ೪ ಆಣೆ. ವರ್ತಕರಿಗೆ ಅನುಕೂಲವಾಗಿ ಕೊಡಲ್ಪಡುತ್ತದೆ.

ವಿಳಾಸ:—ವಿ. ಎ. ಎಸ್. ಪಾಣಿ, ನಂ. ೩, ಇರುಳಪ್ಪನಬೀದಿ, ಮದರಾಸು.

V. A. S. PANI, Erulappan St., MADRAS.

ಕಟೀಲ ನರಸಿಂಹಪೈ ಎಂಡ್ ಸನ್ಸ್,

ರಥಬೀದಿ, ಮಂಗಳೂರು.

ಇತರ ಕಡೆಗಳಿಂದ ವಸ್ತ್ರ ಇತ್ಯಾದಿಗಳನ್ನು ತಕ್ಕೊಳ್ಳುವ ಮೊದಲು ನಮ್ಮಲ್ಲಿಯ ದರಗಳನ್ನೂ ಸರಕುಗಳನ್ನೂ ಪರೀಕ್ಷಿಸಿ ನೋಡಿರಿ.

ನಗದಿ ಗಿರಾಕಿಗಳಿಗೆ ವಿಶೇಷ ಪ್ರಯೋಜನ ದೊರಕುವಂತೆ ನಮ್ಮ ದರಗಳನ್ನು ಇಟ್ಟಿರುತ್ತೇವೆ.

ಮಧುರಾ, ತಿರುಚಿನಾಪಳ್ಳಿ, ಸೇಲಂ, ಮದ್ರಾಸು, ಮುಂಬಾಯಿ, ಪೂನಾ, ಸೂರತ್, ಬೆಂಗಳೂರು, ಬನಾರಿಸ ಮೊದಲಾದ ನಾನಾ ವಿಧದ ವಸ್ತ್ರ ನೇಯಿಗೆಯಲ್ಲಿ ಪ್ರಖ್ಯಾತಪಟ್ಟ ಪ್ರಾಂತ್ಯಗಳಿಂದ ಎಲ್ಲಾ ಬಗೆಯ ಸರಕುಗಳನ್ನು ತರಿಸಿರುವೆವು. ಗಿರಾಕಿಗಳು ಬಂದು ಪರೀಕ್ಷಿಸಿ ನೋಡಬೇಕಾಗಿ ವಿಜ್ಞಾಪನೆ.

Kateel Narasimha Pai & Sons,
Cloth Merchants,
CAR STREET, Mangalore.

ಆತಂಕನಿಗ್ರಹ ಗುಳಿಗೆಗಳು.

ದೇಹದಲ್ಲಿ ಎಂಥಾ ಕಾಯಿಲೆ ಇರುವಲ್ಲಿ ಅದನ್ನು ಶೀಘ್ರದಲ್ಲಿ ಹೋಗಲಾಡಿಸುವ ಪ್ರಯತ್ನ ಮಾಡಿ ತಕ್ಕಂಥಾ ಔಷದವು ಸೇವಿಸಿ ಅದನ್ನು ಗುಣಹೊಂದಿಸದಿದ್ದರೆ ರಕ್ತವಾದ ದೇಹವು ಕ್ಷೀಣಿಸುವದು. ಆದಕಾರಣ ಹಾಗೂ ತಮಗೆ ಏನಾದರೂ ದೇಹಾಸೌಖ್ಯ ಕಂಡುಬರುವಲ್ಲಿ ತಕ್ಷಣವೇ ಆತಂಕನಿಗ್ರಹ ಗುಳಿಗೆಗಳನ್ನು ಸೇವಿಸಿ ನಂತರ ದೇಹವನ್ನು ನಿರೋಗಿಯನ್ನಾಗಿ ಮಾಡಿಸಿ ಅತಿ ಉತ್ತಮಕರವಾದ ರಕ್ತವೆಂಬ ಔಷದವು

ಕ್ರಯ 32 ಗುಳಿಗೆಗಳಿಗೆ 1 ರೂಪಾಯಿ

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,

ಆತಂಕನಿಗ್ರಹ ಔಷಧಾಲಯ, 22, ಬ್ರಾಡ್ವೇ, ಮದ್ರಾಸ

ನಮ್ಮ ಏಜಂಟರು — 1 ಮೆಸ್ಸರ್ಸ್. ರಫಯೆಲ್ ಎಂಡ್ ಕೊ, ದ್ರಿಚೊವಿಲ್ಲಿಂಗ
2 ಜುಬಿಲಿ ಕೇಕ್ ಬಜಾರ್, ಬೆಂಗಳೂರು ಮಂಗಳೂರು

S. U. N. & CO.,

BENARES CITY, U P

ದೊಡ್ಡ ಕಂಪನಿ! ಸೊಗಸಾದ ಸರಕುಗಳು!

ಈ ನಮ್ಮ ಕಂಪೆನಿಯಲ್ಲಿ ನೆಯಿದು ತಯಾರಿಸುವ ಉತ್ತಮವಾದ ಬನಾರಸ್ ರೇಶ್ಮೆ ಜರೀ ಶೀರೆಗಳು ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟಿ, ಮುಗಟ, ಜಗನ್ನಾಥ ಜಾಗಂಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗನ್ನು ಇನಾಮಾಗಿ ಕಳುಹಿಸಲಾದೀತು.

ನಮ್ಮ ವಿಳಾಸ — ಯುಸ್.ಯು.ಯನ್. ಮತ್ತು ಕಂಪೆನಿ, ಕಾಶಿ

ಚಿನ್ನ ಮತ್ತು ಬೆಳ್ಳಿಯ ಮೆಡಲುಗಳನ್ನು ಬಹುಮಾನವಾಗಿ ಪಡೆದ

ಸ್ಟೀವನ್ ಎಂಡ್ ಸನ್

ಬಿಸ್ಕುಟು ವ ಕೇಕುಗಳನ್ನು ತಯಾರಿಸುವವರು, ಮಂಗಳೂರು.

ಏಜಂಟರು — ಅಂತೋನಿ ಎಲ್ ರೇಗೊ, ಸ್ಟೇಟ್ ಎಂಟ್ ಬಜಾರ್, ಕಲ್ಲಿಕೋಟೆ
ಸ್ವದೇಶಿ ಎಂಪೋರಿಯಮ್, ಸೇಲಂ
ಕಣಕಾಸಬಾ ಚೆಟ್ಟಿಯರ್, ಲಾಲ್ ಗುಡಿ, ಪುವಲೂರ್, ತಿರುಚಿನಾಪಳ್ಳಿ.
ಎಮ್ ಪ್ಯಾಸ್ ಕೋರ್ಟ್, ಮಡಿಕೇರಿ
ವಿ ಬಾಲಕೃಷ್ಣ ನ್ಯಾಡು, ಬಿಗ್ ಬಜಾರ್ ಸ್ಟ್ರೀಟ್, ಕೊಯಂಬುತ್ತೂರು.
ಆರ್ನೋನ್ ಎಂಡ್ ಐಮನ್ ಶೊಪ್, ಉಡ್ಡಿ

ನೀವು ನಮ್ಮ ಬಿಸ್ಕುಟು ಇತ್ಯಾದಿಗಳಿಂದ ತೃಪ್ತಿಹೊಂದಿದರೆ ಇತರರಿಗೆ ಹೇಳಿರಿ ಇಲ್ಲವಾದರೆ ನಮಗೆ ತಿಳಿಸಿದರೆ ನಿಮ್ಮನ್ನು ತೃಪ್ತಿಪಡಿಸುವೆವು

ವಿಳಾಸ — **ಸ್ಟೀವನ್ ಎಂಡ್ ಸನ್, ಮಂಗಳೂರು**

ಪ್ಲೀಡರ್ ಎಂ. ಮಲ್ಲಾರಾಧ್ಯರಿಂದ ರಚಿತವಾದವುಗಳು.

ವ್ಯವಹಾರ ನಿರ್ಣಯ.

ಕನ್ನಡದ ಲಾ ಪುಸ್ತಕವು.

ತೃತೀಯ ಮುದ್ರಣ, 616 ಪುಟಗಳುಳ್ಳದ್ದು

ಕ್ರಯ, ದಪ್ಪ ಕಾಗದದ ಪ್ರತಿಗೆ . 1—8—0.
ಕ್ರಯ, ಗ್ಲೇಜ್ ,, ,, . 2—4—0.

ಪೋಸ್ಟೇಜು ಪ್ರತಿ 1ಕ್ಕೆ 4 ಆಣೆ

ಇದರಲ್ಲಿ ಹಿಂದೂ ಲಾ, ಮಹಮ್ಮದೀಯ ಲಾ, ಪೀನಲ್ ಕೋಡು ಇವು ವಿಸ್ತಾರವಾಗಿ ಬರೆಯಲ್ಪಟ್ಟಿವೆ. ಮೈಸೂರು, ಮದ್ರಾಸು, ಬೊಂಬಾಯಿ ದೇಶಗಳಿಗೆಲ್ಲಾ ಸಾಮಾನ್ಯವಾದ ಲಾ. ಮೃತಸ್ವತ್ತಿನ ವಿಲೇವಾರಿ, ಅನಾಥ ರಕ್ಷಣೆ ಕ್ರೈಸ್ತರ ವಾರಸ್ಸು ಹಕ್ಕು ಈ ವಿಷಯಕವಾದ ಖಾನೂನುಗಳೂ ಕ್ರಯ, ದಾನ, ವಿಲ್ಲು, ಹುಂಡಿ, ಗೇಣಿ ಮೊದಲಾದ ಸಮಸ್ತ ವ್ಯವಹಾರವನ್ನೊಳಗೊಂಡಿರುವ 92 ವಿಧದ ದಸ್ತಾವೇಜು ನಮೂನೆಗಳೂ, ಲಾ ಪ್ರಕಾರ ಸಿವಿಲ್ ಕ್ರಿಮಿನಲ್ ಕೋರ್ಟುಗಳಿಗೂ ಪೋಲೀಸಿಗೂ ಬರೆಯುವ ಅರ್ಜಿಗಳ 49 ನಮೂನೆಗಳೂ, ಅವುಗಳ ಸಂಬಂಧವಾದ ವಿಶೇಷ ವಿಷಯ ವಿಚಾರಗಳೂ ಬಹಳ ಚೆನ್ನಾಗಿ ಬರೆಯಲ್ಪಟ್ಟಿವೆ. ಇಷ್ಟು ದೊಡ್ಡ ಉಪಯುಕ್ತವಾದ ಗ್ರಂಥವನ್ನು ಇಷ್ಟು ಕಡಿಮೆ ಬೆಲೆಗೆ ಯಾರೂ ಮಾರುವುದಿಲ್ಲ.

"ತಖಾವಿ ಲಾ."

ಇದು ಕೃಷಿಯ ಅಭಿವೃದ್ಧಿಗಾಗಿಯೂ, ರೈತರ ಸಹಾಯಾರ್ಥವಾಗಿಯೂ ಸರಕಾರದವರು ಕೊಡುವ ಸಾಲ ಮೊದಲಾದ ಸಹಾಯ ವಿಷಯಕವಾದ ಲಾವನ್ನು ವಿವರಿಸುವ ಉಪಯುಕ್ತವಾದ ಪುಸ್ತಕ ಬೆಲೆ 8 ಆಣೆ ಪೋಸ್ಟೇಜು 2 ಆಣೆ

ನಮ್ಮ ವಿಳಾಸ — ಎಂ. ಎಂ ಪಂಡಿತಾರಾಧ್ಯ. ಮೈಸೂರು.

Estd. 1888 ಸ್ಥಾಪನೆ 1888.

K. B. RELE & Cos.,—BOMBAY

ಕೆ. ಬಿ. ರೇಳೆ ಕಂಪನಿಕೃತ

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳೆತ, ಕರೆ ಮತ್ತು ಹಟಮಾರಿ ಗಜಕರ್ಣವು ಈ ಮಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦—೨೫ ವರ್ಷಗಳ ಹಳೆತ, ಮೈಮನೆ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ೧ಕ್ಕೆ ೪ ಆಣೆ. ಟಪ್ಪಾಲು ಖರ್ಚು ೮ ಬಾಟ್ಲಿಗಳವರೆಗೆ ನಾಲ್ಕೇ ಆಣೆ

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳು ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಟ್ಟೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂಧುಗಳು ನೋವೋಣ, ತಲೆ ಕೈಕಾಲುಗಳುರಿಯೋಣ, ಕೈಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ೧ಕ್ಕೆ ರೂ. ೧—೪—೦. ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್

ಕೆ. ಬಿ. ರೇಳೆ ಸನ್ಸ ಕಂಪೆನಿ, ಗಿರಗಾಂವ ನಂ. ೪ ಮುಂಬಯಿ.

ಅಮೃತಾಂಜನ.

ಜಗತ್ಪ್ರಸಿದ್ಧವಾದ ಬೇನೆಹಾರಿ ಮುಲಾಮು

ಇದರ ಉಪಯೋಗದಿಂದ —ವಾತ, ಸಂದಿವಾತ, ತಲೆನೋವು, ಶಿರೋಭಾರ, ಅರ್ಧಾಂಗ ವಾಯು, ಉಳುಕು, ಎದೆ ನೋವು, ಸೊಂಟದ ನೋವು, ಶೀತ, ಕೆಮ್ಮು, ದಂತಶೂಲೆ, ಮೂಲವ್ಯಾಧಿ. ಚೇಳು ಕಡಿತ, ಆನೆಗಾಲು, ಸುಟ್ಟ ಘಾಯ, ಮೊದಲಾದ ಎಲ್ಲಾ ತರದ ನೋವುಗಳ ಮೇಲೆ ದಿವ್ಯ ಔಷಧವಾಗಿ ರುತ್ತದೆ ಸಾವಿರಾರು ಡಾಕ್ಟರರೂ, ಇದಕ್ಕೆ ಸರ್ಟಿಪಿಕೇಟುಗಳನ್ನು ಕೊಟ್ಟಿದ್ದಾರೆ ಪ್ರತಿ ತಿಂಗಳಲ್ಲೂ 25,000 ಬಾಟ್ಲಿಗಳು ಮಾರಲ್ಪಡುತ್ತವೆ ಬಾಟ್ಲಿ ಒಂದರ ಕಿಮ್ಮತು ಆಣೆ 8 ಡಜನ್ 1ಕ್ಕೆ ರೂ 5—4—0 ವಿ ಪಿ ಖರ್ಚು ಪ್ರತ್ಯೇಕ

ಎಚ್ಚರಿಕೆ:—ಅಮೃತಾಂಜನವನ್ನು ಪಡಕೊಳ್ಳುವಾಗ ಸುಂದರವಾದ ಮತ್ತು ಹಲವು ಭಾಷೆಗಳುಳ್ಳ ಕರಡಿಗೆ ಸಮೇತ ಪಡಕೊಳ್ಳಿರಿ

ಗಜಕರ್ಣದ ಮುಲಾಮು.

ಮೂರು ಸರ್ತಿ ತಾಗಿಸುವದರೊಳಗೆ ಗಜಕರ್ಣ ನಾಶವಾಗಿ ಹೋಗುವದು ಇದರಿಂದ ಉರಿಯು ಬರುವದಿಲ್ಲ ಚರ್ಮವು ಕಪ್ಪಾಗುವದಿಲ್ಲ. ಇದುವರೆಗೆ ಒಂದು ಮಿಲಿಯ ಡಬ್ಬಿಗಳು ಮಾರಲ್ಪಟ್ಟವು ರಾಜಾರಾಣಿ ಟ್ರೇಡ್ ಮಾರ್ಕ್ 0—6—0. 12 ಡಬ್ಬಿಗಳಿಗೆ 3—8—0 ವಿ ಪಿ ಪ್ರತ್ಯೇಕ

ದಂತಮಂಜನ.

ರಾಜಾರಾಣಿ ಟ್ರೇಡ್ ಮಾರ್ಕ್

ಈ ಮಂಜನದಿಂದ ಹಲ್ಲುಗಳನ್ನೆ ದಿನಾಗಲೂ ತಿಕ್ಕುವದರಿಂದ ಹಲ್ಲುನೋವು, ಹಲ್ಲುಗಳಿಂದ ಬರುವ ರಕ್ತ, ಹಲ್ಲುಗಳ ವಾಸನೆ, ಮುಂತಾದವುಗಳೆಲ್ಲಾ ನಿಲ್ಲುತ್ತವೆ: ಇದರಲ್ಲಿ ಹಲವು ನಮೂನೆಯ ಔಷದಗಳಿವೆ ಬರೀ ಚೋಕಿನ ಹುಡಿ ಅಲ್ಲ. ಡಬ್ಬಿ 1ಕ್ಕೆ 0—2—0 ವಿ ಪಿ ಪ್ರತ್ಯೇಕ

ಮೋಹಿನಿ ತೈಲ.

ಈಗ ಹಲವು ನಮೂನೆಯ ತೈಲಗಳು ಉಪಯೋಗಿಸಿದವರು ಈ ನಮ್ಮ ಸುಗಂಧಮಯವಾದ ಮೋಹಿನಿ ತೈಲವನ್ನು ಒಂದು ಸಾರಿ ಉಪಯೋಗಿಸಿ ನೋಡಿರಿ. ಇದರಲ್ಲಿ ಹ್ವೈಟ್ ಒಯಿಲ್ ಇಲ್ಲಾ: ಇದು ಗಿಡಮೂಲಿಕೆಗಳಿಂದಲೂ ಬದಾಮಿನ ಎಣ್ಣೆಯಿಂದಲೂ ತಯಾರಿಸಲ್ಪಟ್ಟಿದೆ ಇದರಿಂದ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ ಬೆಳೆಯುವವು

ಬಾಟ್ಲಿ ಒಂದರ ಕಿಮ್ಮತು ಆಣೆ 0—12—0.

ಸುಂದರಿ ಮುಲಾಮು.

ಮುದ್ದಣಗಳನ್ನು ನಾಶಪಡಿಸಿ ಮುಖವನ್ನು ಸುಂದರಗೊಳಿಸುವದು. ಡಬ್ಬಿ 1ಕ್ಕೆ ರೂ 0—8—0

ವಜ್ರಗುಟಿಕ.

ಧಾತುಪುಷ್ಟಿ, ಧಾತುವೃದ್ಧಿ, ಶಕ್ತಿವರ್ಧಕ 20 ಗುಳಿಗೆಗಳ ಡಬ್ಬಿ ಒಂದರ ರೂ 1—0—0

ಕೆ. ನಟರಾಜನ್ ಎಡಿಟರ್, ಇಂಡಿಯನ್ ಸೋಸಿಯಲ್ ರಿಫ್ರೊರ್ಮರ್:—ಅಮೃತಾಂಜನ ಎಲ್ಲಾ ಔಷಧಗಳಿಗಿಂತಲೂ ಒಹಳ ಉತ್ತಮವಾದ ಔಷಧ

ಡಬ್ಲ್ಯು ಮೆಕ್ಸವೆಲ್, ಮೈಸೂರು:—ಅಮೃತಾಂಜನದಿಂದ ಎಂಥಾ ಕಠಿಣವಾದ ವಾತ ನೋವಾದರೂ ನಿಲ್ಲುತ್ತದೆ

ಆರ್ ಆರ್. ಗಂಗೋಲಿ:—ಅಮೃತಾಂಜನ ವಾತ, ತಲೆನೋವುಗಳ ಮೇಲೆ ದಿವ್ಯ ಔಷದ

ಡಾಕ್ಟರ್ ಡಾಂಡೆಕರ್, ಎಲ್. ಎಮ್. ಎಂಡ್ ಎಸ್:—ಅಮೃತಾಂಜನ ಎಲ್ಲಾ ನೋವುಗಳ ಮೇಲೆ ದಿವ್ಯ ಔಷಧ

ನಮ್ಮ ಔಷಧಗಳನ್ನು ಪಡಕೊಳ್ಳುವಾಗ ಅಮೃತಾಂಜನ ಡಿಪ್ಪೊ, ಮುಂಬಯಿ ಎಂಬ ಹೆಸರನ್ನು ಓದಿನೋಡಿ ಪಡಕೊಳ್ಳಿರಿ

ಅಮೃತಾಂಜನ ರಖಮಾಗಿಯೂ, ಚಿಲ್ಲರೆಯಾಗಿಯೂ ಬೇಕಾದವರು ನಮ್ಮ ಮುಂಬಯಿ ಆಫೀಸಿಗೆನೇ ಬರಿಯಬೇಕು ಮದ್ರಾಸು ಆಫೀಸಿನವರು ರಖಮಾಗಿ ಅಮೃತಾಂಜನ ರವಾನಿಸಿ ಕೊಡುವ ಏರ್ಪಾಡು ಮಾಡಲಿಲ್ಲ

ಮಂಗಳೂರಲ್ಲಿ—ಎಲ್ಲಾ ಔಷಧಗಳು ಈ ಕೆಳಗಿನ ಕಂಪೆನಿಗಳಲ್ಲಿ ತಿಕ್ಕುವವು.

ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್, ಪರ್ಲ್ ಎಂಡ್ ಸನ್ಸ್, ದಿ ಊಲನ್ ಮಾರ್ಟ್, ಕೊಚ್ಚಿಕಾರ ಬ್ರದರ್ಸ್ ಉಡ್ಪಿ

ಅಮೃತಾಂಜನ ಡಿಪ್ಪೊ,

ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ ಟೌನ್, ಮದ್ರಾಸು.

109 ಫ್ರೇಯರ್ ರೋಡ,
ಮುಂಬಯಿ,

ಆತಂಕನಿಗ್ರಹ ಗುಳಿಗೆಗಳು.

ದೇಹದಲ್ಲಿ ಎಂಥಾ ಕಾಯಿಲೆ ಇರುವಲ್ಲಿ ಅದನ್ನು ಶೀಘ್ರದಲ್ಲಿ ಹೋಗಲಾಡಿಸುವ ಪ್ರಯತ್ನ ಮಾಡಿ ತಕ್ಕಂಥಾ ಔಷಧವು ಸೇವಿಸಿ ಅದನ್ನು ಗುಣಹೊಂದಿಸದಿದ್ದರೆ ರತ್ನವಾದ ದೇಹವು ಕ್ಷೀಣಿಸುವದು. ಆದಕಾರಣ ಹಾಗೂ ತಮಗೆ ಏನಾದರೂ ದೇಹಾಸೌಖ್ಯ ಕಂಡುಬರುವಲ್ಲಿ ತಕ್ಷಣವೇ ಆತಂಕನಿಗ್ರಹ ಗುಳಿಗೆಗಳನ್ನು ಸೇವಿಸಿ ನಂತರ ದೇಹ ಬಲವನ್ನು ಸಾಧಿಸಿ. ಅತಿ ಉತ್ತಮಕರವಾದ ರತ್ನವೆಂಬ ಔಷಧವು

ಕ್ರಯ. 32 ಗುಳಿಗೆಗಳಿಗೆ 1 ರೂಪಾಯಿ.

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,

ಆತಂಕನಿಗ್ರಹ ಔಷಧಾಲಯ, 22, ಬ್ರಾಡ್ವೇ, ಮದ್ರಾಸ.

ತಮ್ಮ ಏಜಂಟರು — 1. ಮೆಸ್ಸರ್ಸ್. ರಫಯೆಲ್ ಎಂಡ್ ಕೊ, ಟ್ರಿಚಿನೊಪೊಳ್ಳಿ.

2. ಜುಬಿಲಿ ಕೇಕ್ ಬಜಾರ್, ಬೆಂಗಳೂರು. ಮಂಗಳೂರು

ಚಿನ್ನ ಮತ್ತು ಬೆಳ್ಳಿಯ ಮೆಡಲ್ಲುಗಳನ್ನು ಬಹುಮಾನವಾಗಿ ಪಡೆದ

ಸ್ಟೀವನ್ ಎಂಡ್ ಸನ್

ಬಿಸ್ಕುಟು ವ ಕೇಕುಗಳನ್ನು ತಯಾರಿಸುವವರು, ಮಂಗಳೂರು.

ಏಜಂಟರು:— ಅಂತೋನಿ ಎಲ್ ರೇಗೊ, ಸ್ಟ್ರೀಟ್ ಬಜಾರ್, ಕಲ್ಲಿಕೋಟೆ.
ಸ್ವದೇಶಿ ಎಂಪೋರಿಯಮ್, ಸೇಲಂ.
ಕಠಕಾಸಬಾ ಚೆಟ್ಟಿಯರ್, ಲಾಲ್‌ಗುಡಿ, ಪುವಲೂರ್, ತಿರುಚಿನಾಪಳ್ಳಿ.
ಎನ್ ಬ್ರಾಸ್ ಶೋಪ್, ಮಡಿಕೇರಿ.
ವಿ. ಬಾಲಕೃಷ್ಣ ನ್ಯಾಡು, ಬಿಗ್ ಬಜಾರ್ ಸ್ಟ್ರೀಟ್, ಕೊಯಂಬುತ್ತೂರು.
ಅರ್ನೋನ್ ಎಂಡ್ ಬಿಯನ್ ಶೋಪ್, ಉಡ್ಪಿ.

ನೀವು ನಮ್ಮ ಬಿಸ್ಕುಟು ಇತ್ಯಾದಿಗಳಿಂದ ತೃಪ್ತಿಹೊಂದಿದರೆ ಇತರರಿಗೆ ಹೇಳಿರಿ. ಇಲ್ಲವಾದರೆ ನಮಗೆ ತಿಳಿಸಿದರೆ ನಿಮ್ಮನ್ನು ತೃಪ್ತಿಪಡಿಸುವೆವು.

ವಿಳಾಸ.— ಸ್ಟೀವನ್ ಎಂಡ್ ಸನ್, ಮಂಗಳೂರು

ಪ್ಲೀಡರ್ ಎಂ. ಮಲ್ಲಾರಾಧ್ಯರಿಂದ ರಚಿತವಾದವುಗಳು.

ವ್ಯವಹಾರ ನಿರ್ಣಯ.

ಕನ್ನಡದ ಲಾ. ಪುಸ್ತಕವು.

ತೃತೀಯ ಮುದ್ರಣ, 616 ಪುಟಗಳುಳ್ಳದ್ದು.

ಕ್ರಯ, ದಪ್ಪ ಕಾಗದದ ಪ್ರತಿಗೆ .. 1—8—0.
ಕ್ರಯ, ಗ್ಲೇಜ್ ,, ,, ... 2—4—0.

ಪೋಸ್ಟೇಜು ಪ್ರತಿ 1ಕ್ಕೆ 4 ಆಣೆ.

ಇದರಲ್ಲಿ ಹಿಂದೂ ಲಾ, ಮಹಮ್ಮದೀಯ ಲಾ, ಪೀನಲ್‌ಕೋಡು ಇವು ವಿಸ್ತಾರವಾಗಿ ಬರೆಯಲ್ಪಟ್ಟಿವೆ. ಮೈಸೂರು, ಮದ್ರಾಸು, ಬೊಂಬಾಯಿ ದೇಶಗಳಿಗೆಲ್ಲಾ ಸಾಮಾನ್ಯವಾದ ಲಾ. ವ್ಯಕ್ತಸ್ವತ್ತಿನ ವಿಲೇವಾರಿ, ಅನಾಥ ರಕ್ಷಣೆ, ಕ್ರೈಸ್ತರ ವಾರಸ್ಸು ಹಕ್ಕು ಈ ವಿಷಯಕವಾದ ಕಾನೂನುಗಳೂ, ಕ್ರಯ, ದಾನ, ವಿಲ್ಲು, ಹುಂಡಿ, ಗೇಣಿ ಮೊದಲಾದ ಸಮಸ್ತ ವ್ಯವಹಾರವನ್ನೊಳಗೊಂಡಿರುವ 92 ವಿಧದ ದಸ್ತಾವೇಜು ನಮೂನೆಗಳೂ, ಲಾ ಪ್ರಕಾರ ಸಿವಿಲ್ ಕ್ರಿಮಿನಲ್ ಕೋರ್ಟುಗಳಿಗೂ ಪೋಲೀಸಿಗೂ ಬರೆಯುವ ಅರ್ಜಿಗಳ 49 ನಮೂನೆಗಳೂ, ಅವುಗಳ ಸಂಬಂಧವಾದ ವಿಶೇಷ ವಿಷಯ ವಿಚಾರಗಳೂ ಬಹಳ ಚೆನ್ನಾಗಿ ಬರೆಯಲ್ಪಟ್ಟಿವೆ. ಇಷ್ಟು ದೊಡ್ಡ ಉಪಯುಕ್ತವಾದ ಗ್ರಂಥವನ್ನು ಇಷ್ಟು ಕಡಿಮೆ ಬೆಲೆಗೆ ಯಾರೂ ಮಾರುವುದಿಲ್ಲ.

"ತಖಾವಿ ಲಾ."

ಇದು ಕೃಷಿಯ ಅಭಿವೃದ್ಧಿಗಾಗಿಯೂ, ರೈತರ ಸಹಾಯಾರ್ಥವಾಗಿಯೂ ಸರಕಾರದವರು ಕೊಡುವ ಸಾಲ ಮೊದಲಾದ ಸಹಾಯ ವಿಷಯಕವಾದ ಲಾವನ್ನು ವಿವರಿಸುವ ಉಪಯುಕ್ತವಾದ ಪುಸ್ತಕ. ಬೆಲೆ 8 ಆಣೆ. ಪೋಸ್ಟೇಜು 2 ಆಣೆ.

ನಮ್ಮ ವಿಳಾಸ:— ಎಂ. ಎಂ. ಪಂಡಿತಾರಾಧ್ಯ. ಮೈಸೂರು.

S. U. N. & CO.,

BENARES CITY, U. P.

ದೊಡ್ಡ ಕಂಪೆನಿ! ಸೊಗಸಾದ ಸಾಮಾನುಗಳು!!

ಈ ನಮ್ಮ ಕಂಪೆನಿಯಲ್ಲಿ ನೆಯ್ದು ತಯಾರಿಸುವ ಉತ್ತಮವಾದ ಬನಾರಸ್ ರೇಷ್ಮೆ ಜರೀ ಶೀರೆಗಳು ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥ ಜಾಗಂಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗನ್ನು ಇನಾಮಾಗಿ ಕಳುಹಿಸಲಾಗುವುದು.

ತಮ್ಮ ವಿಳಾಸ:— ಯಸ್. ಯು. ಯನ್. ಮತ್ತು ಕಂಪೆನಿ, ಕಾಶಿ

Estd. 1888. ಸ್ಥಾಪನೆ 1888.

K. B. RELE & Cos.,—BOMBAY

ಕೆ. ಬಿ. ರೇಳೆ ಕಂಪನಿಕೃತ

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳತ, ಕರೆ ಮತ್ತು ಹಟಮಾರಿ ಗಜಕರ್ಣವು ಈ ಮಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦—೨೫ ವರ್ಷಗಳ ಹಳತ, ಪ್ರಯತ್ನ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ೧ಕ್ಕೆ ೪ ಆಣೆ. ಟಪಾಲು ಖರ್ಚು ೮ ಬಾಟ್ಲಿಗಳ ವರೆಗೆ ನಾಲ್ಕೇ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳೆಲ್ಲಾ ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಟ್ಟೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ಹುಣ್ಣು ಬೀಳೋಣ, ಪೀನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಬಾತುಕೊಳ್ಳೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ಕೈಕಾಲುಗಳುರಿಯೋಣ, ಕೈ ಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ರಕ್ತವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ೧ಕ್ಕೆ ರೂ. ೧—೪—೦. ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ್ನ ಕಂಪೆನಿ, ಗಿರಗಾಂವ ನಂ. ೪ ಮುಂಬಯಿ.

ಅಮೃತಾಂಜನ.

ಜಗತ್ಪ್ರಸಿದ್ಧವಾದ ಬೇನೆಹಾರಿ ಮುಲಾಮು

ಇದರ ಉಪಯೋಗದಿಂದ —ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗ ವಾಯು, ಉಳುಕು, ಎದೆನೋವು ಸೊಂಟದ ನೋವು, ಶೀತ, ಕೆಮ್ಮು, ದಂತಶೂಲೆ, ವ ಊಲವ್ಯಾಧಿ, ಹೇಳು ಕಡಿತ, ಆನೆಗಾಲು, ಸುಟ್ಟ ಗಾಯ, ಮೊದಲಾದ ಎಲ್ಲಾ ತರದ ನೋವುಗಳ ಮೇಲೆ ದಿವ್ಯ ಔಷಧವಾಗಿರುತ್ತದೆ ಸಾವಿರಾರು ಡಾಕ್ಟರರೂ, ಇದಕ್ಕೆ ಸರ್ಟಿಫಿಕೇಟುಗಳನ್ನು ಕೊಟ್ಟದ್ದಾರೆ ಪ್ರತಿ ತಿಂಗಳಲ್ಲೂ 25,000 ಬಾಟ್ಲಿಗಳು ಮಾರಲ್ಪಡುತ್ತವೆ ಬಾಟ್ಲಿ ಒಂದರ ಕಿಮ್ಮತು ಆಣೆ 8 ಡಜನ್ 1ಕ್ಕೆ ರೂ 5—4—0 ವಿ ಪಿ ಖರ್ಚು ಪ್ರತ್ಯೇಕ

ಎಚ್ಚರಿಕೆ:—ಅಮೃತಾಂಜನವನ್ನು ಪಡಕೊಳ್ಳುವಾಗ ಸುಂದರವಾದ ಮತ್ತು ಹಲವು ಭಾಷೆಗಳುಳ್ಳ ಕರಡಿಗೆ ಸಮೇತ ಪಡಕೊಳ್ಳಿರಿ

ಗಜಕರ್ಣದ ಮುಲಾಮು.

ಮೂರು ಸರ್ತಿ ಹಾಗಿಸುವದರೊಳಗೆ ಗಜಕರ್ಣ ನಾಶವಾಗಿ ಹೋಗುವದು ಇದರಿಂದ ಉರಿಯು ಬರುವದಿಲ್ಲ. ಚರ್ಮವು ಕಪ್ಪಾಗುವದಿಲ್ಲ ಇದುವರೆಗೆ ಒಂದು ಮಿಲಿಯ ಡಬ್ಬಿಗಳು ಮಾರಲ್ಪಟ್ಟವು ರಾಜಾರಾಣಿ ಟ್ರೇಡ್ ಮಾರ್ಕ್ 0—6—0. 12 ಡಬ್ಬಿಗಳಿಗೆ 3—8—0 ವಿ ಪಿ ಪ್ರತ್ಯೇಕ

ದಂತಮಂಜನ.

ರಾಜಾರಾಣಿ ಟ್ರೇಡ್ ಮಾರ್ಕ್

ಈ ಮಂಜನದಿಂದ ಹಲ್ಲುಗಳನ್ನು ದಿನಾಗಲೂ ತಿಕ್ಕುವದರಿಂದ ಹಲ್ಲುನೋವು, ಹಲ್ಲುಗಳಿಂದೆ ಬರುವ ರಕ್ತ, ಹಲ್ಲುಗಳ ವಾಸನೆ, ಮುಂತಾದವುಗಳೆಲ್ಲಾ ನಿಲ್ಲುತ್ತವೆ. ಇದರಲ್ಲಿ ಹಲವು ನಮೂನೆಯ ಔಷಧಗಳಿವೆ ಬರೀ ಚೋಕಿನ ಹುಡಿ ಅಲ್ಲ. ಡಬ್ಬಿ 1ಕ್ಕೆ 0—2—0 ವಿ ಪಿ ಪ್ರತ್ಯೇಕ.

ಮೋಹಿನಿ ತೈಲ.

ಈಗ ಹಲವು ನಮೂನೆಯ ತೈಲಗಳು ಉಪಯೋಗಿಸಿದವರು ಈ ನಮ್ಮ ಸುಗಂಧಮಯವಾದ ಮೋಹಿನಿ ತೈಲವನ್ನು ಒಂದು ಸಾರಿ ಉಪಯೋಗಿಸಿ ನೋಡಿರಿ. ಇದರಲ್ಲಿ ಹ್ವೈಟ್ ಒಯಿಲ್ ಇಲ್ಲಾ: ಇದು ಗಿಡಮೂಲಿಕೆಗಳಿಂದಲೂ ಬದಾಮಿನ ಎಣ್ಣೆಯಿಂದಲೂ ತಯಾರಿಸಲ್ಪಟ್ಟಿದೆ ಇದರಿಂದ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ ಬೆಳೆಯುವವು

ಬಾಟ್ಲಿ ಒಂದರ ಕಿಮ್ಮತು ಆಣೆ 0—12—0

ಸುಂದರಿ ಮುಲಾಮು.

ಮುದ್ದಣಗಳನ್ನು ನಾಶಪಡಿಸಿ ಮುಖವನ್ನು ಸುಂದರಗೊಳಿಸುವದ. ಡಬ್ಬಿ 1ಕ್ಕೆ ರೂ 0—8—0

ವಜ್ರಗುಟಿಕ.

ಧಾತುಪುಷ್ಟಿ, ಧಾತುವೃದ್ಧಿ, ಶಕ್ತಿವರ್ಧಕ 20 ಗುಳಿಗೆಗಳ ಡಬ್ಬಿ ಒಂದರ ರೂ 1—0—0.

ಕೆ. ನಟರಾಜನ್ ಎಡಿಟರ್, ಇಂಡಿಯನ್ ಸೋಸಿಯಲ್ ರಿಫೊರ್ಮರ್:—ಅಮೃತಾಂಜನ ಎಲ್ಲಾ ಔಷಧಗಳಿಗಿಂತಲೂ ಒಹಳ ಉತ್ತಮವಾದ ಔಷಧ

ಡಬ್ಲ್ಯು ಮೆಕ್ಸ್‌ವೆಲ್, ಮೈಸೂರು:—ಅಮೃತಾಂಜನದಿಂದ ಎಂಥಾ ಕಠಿಣವಾದ ವಾತ ನೋವಾದರೂ ನಿಲ್ಲುತ್ತದೆ

ಆರ್. ಆರ್. ಗಂಗೋಲಿ:—ಅಮೃತಾಂಜನ ವಾತ, ತಲೆನೋವುಗಳ ಮೇಲೆ ದಿವ್ಯ ಔಷಧ.

ಡಾಕ್ಟರ್ ಡಾಂಡೆಕರ್, ಎಲ್. ಎಮ್. ಎಂಡ್ ಎಸ್:—ಅಮೃತಾಂಜನ ಎಲ್ಲಾ ನೋವುಗಳ ಮೇಲೆ ದಿವ್ಯ ಔಷಧ

ನಮ್ಮ ಔಷಧಗಳನ್ನು ಪಡಕೊಳ್ಳುವಾಗ ಅಮೃತಾಂಜನ ಡಿಪೊ, ಮುಂಬಯಿ ಎಂಬ ಹೆಸರನ್ನು ಓದಿನೋಡಿ ಪಡಕೊಳ್ಳಿರಿ

ಅಮೃತಾಂಜನ ರಖಮಾಗಿಯೂ, ಚಿಲ್ಲರೆಯಾಗಿಯೂ ಬೇಕಾದವರು ನಮ್ಮ ಮುಂಬಯಿ ಆಫೀಸಿಗೆನೇ ಬರಿಯಬೇಕು. ಮದ್ರಾಸು ಆಫೀಸಿನವರು ರಖಮಾಗಿ ಅಮೃತಾಂಜನ ರವಾನಿಸಿ ಕೊಡುವ ಏರ್ಪಾಡು ಮಾಡಲಿಲ್ಲ

ಮಂಗಳೂರಲ್ಲಿ—ಎಲ್ಲಾ ಔಷಧಗಳು ಈ ಕೆಳಗಿನ ಕಂಪೆನಿಗಳಲ್ಲಿ ತಿಕ್ಕುವವು.

ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್, ಪರ್ಲ್ ಎಂಡ್ ಸನ್ಸ್, ದಿ ಊಲನ್ ಮಾರ್ಟ್, ಕೊಚ್ಚಿಕಾರ ಬ್ರದರ್ಸ್ ಉಡ್ಪಿ

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ ಟೌನ್, ಮದ್ರಾಸು.

109 ಫ್ರೇಯರ್ ರೋಡ,
ಮುಂಬಯಿ,

ನೇಟಿವ್ ಡಾಕ್ಟರ್ಸ್ ಮೂಲ್ಕಿ ಗಣಪಯ್ಯ ಎಂಡ್ ಸನ್ಸ್‌ರವರ

ಔಷಧಗಳು.

ಮಹಾಮದನ ಕಾಮೇಶ್ವರೀ ಲೇಹ್ಯ:—ಬಹಳ ಶ್ರಮಪಟ್ಟು ಕೆಲಸ ಮಾಡುವವರೂ, ಲೇಖಕರೂ, ಮತ್ತು ಇಂದ್ರಿಯ ದೌರ್ಬಲ್ಯ, ಅಜೀರ್ಣ, ಎದೆನೋವು, ಶರೀರಗಳ ಘಾತದಿಂದಾದ ನಿಶ್ಶಕ್ತಿ ಮೊದಲಾದ ಪ್ರಕೃತಿಯುಳ್ಳವರೂ ಇದನ್ನು ಸೇವಿಸಿದ್ದಲ್ಲಿ ಧಾತುಪುಷ್ಟಿಯಾಗಿ ಮುಖವು ಕಾಂತಿಗೊಳಿಸುವದು. ಸೇವನಾ ಕ್ರಮ—ಅಭ್ಯಾಸವುಳ್ಳವರು 1 ಪಾವಲಿ ತೂಕ ಯಾ ಗೋಲಗಾತ್ರ. ಅಭ್ಯಾಸಿಸುವವರು 2 ಆಣೆ ತೂಕ. ರಾತ್ರೆ ಊಟಾದ ಮೇಲೆ ಸೇವಿಸಿ ಹಾಲು ಕುಡಿಯತಕ್ಕದ್ದು.

1 ಶೇರಿನ ಡಬ್ಬಿಗೆ ಕ್ರಯ: 2—0—0.

ಚಂದ್ರೋದಯಾವರ್ತಿ:—ಕಣ್ಣಿಗೆ ಅಂಜನ ಮಾಡಿದ್ದಲ್ಲಿ ಬೆಳೆದ ದುರ್ಮಾಂಸ, ತಿಮಿರ, 3 ವರ್ಷದ ಹೂವು, ಇರಳುಕಣ್ಣು, ತಾಚಬಿಂದು ಗುಣ.

ಕ್ರಯ: ರೂ, 0—12—0.

ಮಹಾಜ್ವರಾಂಕುಶ:—ದಿವಸಕ್ಕೊಮ್ಮೆ ದ್ವಿತೀಯ, ತೃತೀಯ, ಚಾತುರ್ಥಿಕ ಜ್ವರಗಳ ಮೇಲೆ ರಾಮಬಾಣ. ಡಜನ್ ಕ್ರಯ: 0—8—0,

ಮೇಹಮುದ್ಗರವಟಿ:—20 ನಮೂನೆಯ ಪ್ರಮೇಹ, ಧಾತು ಗತಜ್ವರ, ಮೂತ್ರಕೃಚ್ಛ್ರ, ಅಶ್ಮರಿ, ಕಾಮಲೆ, ಪಾಂಡು ಗುಣ. ಡಜನ್ 1ರ ಕ್ರಯ: 1—2—0.

ಕೊಲೆರಾ ಯಾನೆ ವಾಂತಿಭೇದಿ ಗುಟಿಕೆ:—ಒಂದೆರಡು ಗುಟಿಕೆಯಿಂದ ವಾಂತಿಭೇದಿ ಕೂಡಲೇ ಗುಣ. ಡಜನ್ ಗುಟಿಕೆಯ ಕ್ರಯ: 0—12—0.

ಚಂದನಾಸವ:—ಮೇಹ, ಶುಕ್ಲಧಾತು ನಷ್ಟತ್ವ ಗುಣ. ಬಾಟ್ಲಿಗೆ ರೂ. 1.

ನಮ್ಮ ಔಷಧಾಲಯದಲ್ಲಿ ಅನೇಕ ವಿಧದ ಬೇರೆ ಔಷಧಗಳು ದೊರೆಯುತ್ತವೆ ಅಪೇಕ್ಷೆಯುಳ್ಳವರು ಕೇಟಲಾಗು ತರಿಸಿಕೊಳ್ಳಬಹುದು ಮೇಲಿನ ಔಷಧಗಳು ಬಹಳವಾಗಿ ಖರ್ಚಾಗುವದರಿಂದ ಕ್ರಯವನ್ನು ಕಡಿಮೆ ಮಾಡಿರುತ್ತದೆ.

ವಿಳಾಸ:— ಮೂಲ್ಕಿ ಗಣಪಯ್ಯ ಎಂಡ್ ಸನ್ಸ್,

ನೇಟಿವ್ ಡಾಕ್ಟರ್ಸ್,

ತೇರಬೀದಿ ಮನೆ ನಂಬ್ರ 268ನೇ, ಮಂಗಳೂರು.

ಹೊಸ ಹೊಸ ವಿಷಯಗಳು.

೧. ಶ್ರೀ ಭಗವದ್ಗೀತಾ ಸರ್ವರಿಗೂ ಅನುಕೂಲಿಸುವಂತೆ ಪ್ರತ್ಯೇಕ ಪ್ರತ್ಯೇಕವಾಗಿ ಪಾರಾಯಣ ಮಾಡುವವರಿಗೂ ಕಥಾರೂಪದಲ್ಲಿ ಓದುವವರಿಗೂ ಉಪಯೋಗವಾಗುವ ರೀತಿಯಲ್ಲಿ ಬಾಲಬೋಧಿನಿ ಎಂಬ ಅನ್ವರ್ಥ ನಾಮವುಳ್ಳ ಟೀಕಾ ತಾತ್ಪರ್ಯ ಸಹಿತವಾದ ಉತ್ತಮ ಪ್ರತಿ ಬೆಲೆ ೩—೦—೦.

೨. ವಿಷ್ಣುಪುರಾಣ ವ್ಯಾಸ ಪ್ರಣೀತವಾದ ಈ ಮಹಾ ಪುರಾಣದ ಪ್ರಥಮಾಂಶವು ಸಮೂಲವಾಗಿ ಕನ್ನಡಿಸಲ್ಪಟ್ಟಿರುವುದು. (ಸಕಲ ವಿಷಯ ಗರ್ಭಿತ) ೨-೮-೦.

೩. ಶ್ರೀ ಶಂಕರ ವಿಜಯ ಪ್ರತಿಯೊಂದು ಕುಟುಂಬದಲ್ಲಿಯೂ ಓದಿ ಕೃತಕೃತ್ಯರಾಗಬೇಕಾದ ಗ್ರಂಥ ಲೋಕೋದ್ಧಾರಮಾಡಿದ ಶ್ರೀಮಚ್ಛಂಕರ ಚರಿತ್ರೆಯಾಗಿರುವದರಿಂದ ಹೆಚ್ಚಿಗೆ ಹೇಳಲು ಯಾರು ತಾನೇ ಸಮರ್ಥರು? ಪ್ರತಿಪದ ಟೀಕಾ ತಾತ್ಪರ್ಯವೂ ಟಿಪ್ಪಣಿಗಳೂ ಸಹಾ ಬಹಳ ವಿಶದವಾಗಿ ಪ್ರಕಟಿಸಿರುವುದು. ಪ್ರಥಮ ಸಂಪುಟದ ಬೆಲೆ ೩—೦—೦.

೪ ರಘುವಂಶ ಮಹಾಕಾವ್ಯ ಪ್ರತಿ ಶ್ಲೋಕಕ್ಕೂ ಪದವಿಭಾಗ ಶಬ್ದಸಮಾಸ ಆಕಾಂಕ್ಷೆ, ವಿಗ್ರಹ ಟೀಕಾ ತಾತ್ಪರ್ಯ ಸಹಿತ ಸಂಸ್ಕೃತಾಭ್ಯಾಸಿಗಳಿಗೆ ಉಪಯೋಗವಾದ ಪ್ರತಿ ೧ನೇ ಸರ್ಗ ರೂ ೧—೦—೦. ೨ನೇ ಸರ್ಗ ರೂ ೧—೦—೦.

೫. ಇದರಂತೆಯೇ ಇರುವ ಕಿರಾತಾರ್ಜುನೀಯ ೧ನೇ ಸರ್ಗ ೦-೮-೦.

೬. ವಿವೇಕಚೂಡಾಮಣಿ (ಶ್ರೀಮಚ್ಛಂಕರಾಚಾರ್ಯ ಕೃತ ವೇದಾಂತ ಗ್ರಂಥ) ಪ್ರತಿಪದ ಟೀಕಾ ತಾತ್ಪರ್ಯ ಸಹಿತ ರೂ ೨—೪—೦

೭. ಋಗ್ವೇದ ನಿತ್ಯಕರ್ಮ ಪ್ರಾತರ್ಮಾಧ್ಯಾಹ್ನಿಕ ಸಾಯಂಸಂಧ್ಯಾ ದೇವತಾರ್ಚನೆ, ಬ್ರಹ್ಮಯಜ್ಞ, ಮಂತ್ರಪುಷ್ಪ, ದೇವತಾಸ್ತೋತ್ರಗಳು, ತರ್ಪಣವಿಧಿ ಆದಿಯಾಗಿ ೨೪ ವಿಧಗಳೊಂದಿಗೆ ಇರುವ ಪ್ರತಿ. ೦—೪—೦.

೮. ಇದರಂತೆ ಇರುವ ಯಜುರ್ವೇದ ನಿತ್ಯಕರ್ಮ ೦—೪—೦.

ವಿದ್ಯಾನಂದ ಮಾಸಪತ್ರಿಕೆ ವಾರ್ಷಿಕ ಚಂದಾಹಣಸಲು ಸೇರಿ ೨—೪—೦.

ಮಾದರಿ ಪತ್ರಿಕೆ, ಕ್ಯಾಟಲಾಗ್ (ಪುಸ್ತಕಪಟ್ಟಿ) ಉಚಿತವಾಗಿ ಪಡೆಯಬಹುದು.

ಬಾಣವಾಡಿ ಆದಿನಾರಾಯಣಶಾಸ್ತ್ರೀ,

ವಿದ್ಯಾನಂದ ಆಫೀಸ್,

ಶಂಕರಪುರ, ಬೆಂಗಳೂರು-ಸಿಟಿ.

ನೆಪ್ಚ್ಯೂನ್, ಬ್ಲೇಕ್ ಬರ್ಡ್, ಒಟೆರ್ ಮೇನ್, ಸ್ವಾನ್

ಇತ್ಯಾದಿ ವಿವಿಧ ನಮೂನೆಯ

ಫೌಂಟನ್ ಪೇನುಗಳು

ಈಗಲೇ ಬಂದಿವೆ.

ಕ್ರಯ 3 ರೂಪಾಯಿ ಲಾಗಾಯಿತು 12 ರೂಪಾಯಿ ವರೇಗೆ.

ಬೇಕಾದವರು ಬೇಗನೇ ಬರೆಯಿರಿ.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,

ರಥಬೀದಿ ಮಂಗಳೂರು.

ಸಂತೋಷಕರವಾದ ಪ್ರಕಟನೆ

ಸಂತೋಷಕರವಾದ ಬಹುಮಾನ! ಸಂತೋಷಕರವಾದ ಗಡಿಯಾರ!

ಸುಂದರವಾದ ಬೊಂಬೈ ರೆಗ್ಯುಲೇಟರ್ ವಾಚು. ಇದರ ಕ್ರಯ 8 ಬಹುಮಾನ ಸಮೇತ ರೂ. 3—4—0. 5 ವರುಷದ ಖಾತ್ರಿಯಾದ ಗ್ಯಾರಂಟಿ.



ಅಯ್ಯಾ ಮಿತ್ರರೆ!

ಈ ನಕ್ಷೆಯಲ್ಲಿ ತೋರಿಸಿರುವ ಜುಯಲ್ಡ್ ಮೈಲ್ ರೆಗ್ಯುಲೇಟರ್ ವಾಚು. 5 ರತ್ನಗಳುಳ್ಳ ಕಂಪನ್‌ಶೇಷನ್ ಬ್ಯಾಲನ್ಸ್. ಬಹು ಬಲಿಷ್ಠವಾದ ಗಡಿಯಾರ. ನಾಣ್ಯವಾದ ಯಂತ್ರದಲ್ಲಿಯೂ ಶ್ರೇಷ್ಠವಾದ ಲೀವರ್ ಕೆಲಸದಲ್ಲಿಯೂ ತಯಾರಿಸಲ್ಪಟ್ಟದ್ದು. ಇದು ನೋಡುವದಕ್ಕೆ ಬಹು ಸೊಗಸಾಗಿಯೂ, ಮುಚ್ಚಟವಾಗಿರುತ್ತೆ, ಅನೇಕ ವರ್ಷಗಳ ಪರ್ಯಂತರ ಬಾಳಿಕೆಬರುವಂಥಾದ್ದು. ನಮ್ಮ ಕಂಪೆನಿ ಹೊಸದಾಗಿರುವದರಿಂದ ಬಹಳ ಕ್ರಯವುಳ್ಳ ಬಹುಮತಿಗಳನ್ನು ಹಾಕಿರುತ್ತೇವೆ. ಬರೇ ಮಾತುಗಳಿಂದೇನು? ಕೂಡಲೇ ಈ ಗಡಿಯಾರವನ್ನು ಬರದು ತರಿಸಿಕೊಳ್ಳಿ.

ತ್ವರೆಮಾಡಿರಿ! ಮಾಫಕ್ ದರ! ತ್ವರೆಮಾಡಿರಿ!

ಸುಂದರವಾದ ಮೆಯಿಲ್ ರೆಗ್ಯುಲೇಟರ್ ವಾಚು

ಇದರ ಕ್ರಯ ರೂ. 2—12—0 ಮಾತ್ರ.

5 ವರುಷದ ಖಾತ್ರಿಯಾದ ಗ್ಯಾರಂಟಿ



ಅಯ್ಯಾ,

ಇಂಜನ್ ಮಾರ್ಕು ಅಂದರೆ ಗುರುತುಳ್ಳ ಪ್ರಖ್ಯಾತಿಹೊಂದಿ ಲೀವರ್ ಕೆಲಸದಲ್ಲಿ ತಯಾರಿಸಲ್ಪಟ್ಟದ್ದು. ಈ ಗಡಿಯಾರ ಶ್ರೇಷ್ಠವಾದ ಲೀವರ್ ಕೆಲಸದಲ್ಲಿಯೂ, ನಾಣ್ಯವಾದ ಯಂತ್ರದಲ್ಲಿಯೂ ತಯಾರಿಸಲ್ಪಟ್ಟದ್ದು. ಅನೇಕ ವರ್ಷಗಳ ಪರ್ಯಂತರ ಬಾಳಿಕೆಬರುವಂಥಾದ್ದು. ಬಹು ರಮಣೀಯವಾದ ವಾಚ್. ಇದು ನೋಡುವದಕ್ಕೆ ಸೊಗಸಾಗಿ ಇರುತ್ತೆ. ನಮ್ಮ ಕಂಪೆನಿ ಹೊಸದಾಗಿರುವದರಿಂದ ಬಹಳ ಕಮ್ಮಿ ಧಾರಣೆಗೆ ಮಾರುತ್ತೇವೆ. ಕೂಡಲೆ ಬರದು ತರಿಸಿಕೊಳ್ಳಿ.

ಮ್ಯಾನೇಜರ್ ಕಮಲರಾಮ್ ಎಂಡ್ ಕಂಪೆನಿ.

28 ಇರುಳಪ್ಪನ್ ಬೀದಿ,

ಮದ್ರಾಸು.

ಸ್ವದೇಶಾಭಿಮಾನಿಯ ನೋಟೀಸು.

ಚಂದಾದಾರರು ನಮಗೆ ಬರೆಯುವ ಎಲ್ಲಾ ಪತ್ರವ್ಯವಹಾರಗಳಲ್ಲಿ ತಮ್ಮ ತಮ್ಮ ವಿಳಾಸದೊಂದಿಗೆ ಇರುವ ರಿಜಿಸ್ಟರ ನಂಬರನ್ನು ತಪ್ಪದೆ ಬರಿಯುತಕ್ಕದ್ದು. ರಿಜಿಸ್ಟರು ನಂಬರು ಇಲ್ಲದ ಪತ್ರಗಳಿಗೆ ನಿಗಾ ಕೊಡಲಾರೆವು.

ಪತ್ರಿಕೆಗೆ ಚಂದಾದಾರರಾಗಿ ಸೇರಲಪೇಕ್ಷೆಯುಳ್ಳವರು ವರ್ಷ 1ರ ಚಂದಾ ಹಣ ರೂ. 2—1—0ನ್ನು ಮನಿಯಾರ್ಡರು ಮೂಲಕ ರವಾನಿಸುವದುತ್ತಮ. ವಿ. ಪಿ. ಮೂಲಕ ಕಳುಹಿಸಬೇಕೆಂದು ಬರಿಯುವಂಥವರಿಗೆ ಪತ್ರಿಕೆಯ ಹಿಂದಿನ ಸಂಚಿಕೆಯನ್ನು ವಿ. ಪಿ. ಮಾಡಿ ಕಳುಹಿಸಲಾಗುವದು. ವಿ. ಪಿ.ಯ ಮೊಬಲಗು ನಮಗೆ ತಲ್ಪಿದ ನಂತರವೇ ಪತ್ರಿಕೆಯನ್ನು ಕಳುಹಿಸಲು ಪ್ರಾರಂಭಿಸುವೆವು

ಪತ್ರಗಳನ್ನು ಬರಿಯುವಾಗ ತಮ್ಮ ಹೆಸರು, ವಿಳಾಸ ಮತ್ತು ಪೋಸ್ಟಾಫೀಸನ್ನು ಸ್ಪಷ್ಟಾಕ್ಷರದಲ್ಲಿ ಬರಿಯತಕ್ಕದ್ದು.

ಮ್ಯಾನೇಜರ್,
ಸ್ವದೇಶಾಬಿಮಾನಿ ಆಫೀಸು,
ಮಂಗಳೂರು, ದ ಕ.

ಈಗಲೇ ತಯಾರಾಗಿವೆ!

ಗ್ರಾಮ ಮುನ್ಸಿಫ ಕೋರ್ಟುಗಳಿಗೆ ಸಂಬಂಧಿಸಿದ ಫೋರ್ಮುಗಳು
100ಕ್ಕೆ ಆಣೆ 6 ಮಾತ್ರ.

ಕುರಿಫಂಡಿನ	ರಶೀದಿ	100ರ	ಪುಸ್ತಕ	1ಕ್ಕೆ	0—8—0
,,	,,	50ರ	,,	,,	0—4—0
ಇಂಗ್ಲೀಷು	,,	50ರ	,,	,,	0—8—0
,,	,,	25ರ	,,	,,	0—4—0
ಗೇಣಿ	,,	50ರ	,,	,,	0—6—0
,,	,,	25ರ	,,	,,	0—3—0
ಖಾಲಿ	,,	50ರ	,,	,,	0—4—0
,,	,,	25ರ	,,	,,	0—2—0
ಡೆಲಿವರಿ ಪುಸ್ತಕ 1ರ		.	.	.	0—8—0
ವಕಾಲತ್ ನಾಮೆ ವಗೈರೆ		.	.	100ಕ್ಕೆ	0-10—0.
ಗೇಣಿಚೀಟು ಫೋರ್ಮು		.	.	,,	0-12—0.
ಪರ್ಮೀಟು ಫೋರ್ಮು		.	.	,,	0-12—0.

ವಿಳಾಸ:— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಈಗಲೇ ಬಂದಿರುತ್ತವೆ! ಈಗಲೇ ಬಂದಿರುತ್ತವೆ

ಬೇಸಿಗೆಕಾಲಕ್ಕೂ ಮಳೆಗಾಲಕ್ಕೂ

ಉಪಯೋಗವಾಗುವಂಥಾ

ಪಾದರಕ್ಷೆ ಜೋಡುಗಳು!

ಕಾರವಾರಿನಲ್ಲಿ ಹದಮಾಡಿದ ಚರ್ಮದಿಂದ ನೂತನವಾಗಿ ತಯಾರಿಸಿದ ಒಳ್ಳೇ ಮೆಟ್ಟಿನ ಜೋಡುಗಳು ನಮ್ಮಲ್ಲಿ ಬಂದಿರುತ್ತವೆ. ನಮಗೆ ವಿಕ್ರಿತಕ್ಕೆ ಬೇಕಾಗುವಷ್ಟು ಊಚು ಜೋಡುಗಳು ಈ ಸಾರಿ ಸಿಕ್ಕಲಿಲ್ಲವಾದ್ದರಿಂದ ತಯಾರಿರುವ ಜೋಡುಗಳು ಖರ್ಚಾಗುವ ಮೊದಲೇ ಬೇಕಾದವರು ಬೇಗನೇ ನಮ್ಮಿಂದ ತರಿಸಿಕೊಳ್ಳಬೇಕಾಗಿ ನಮ್ಮ ಮಿತ್ರರಿಗೂ ಗಿರಾಕಿಯವರಿಗೂ ತಿಳಿಸುವರೆ ಸಂತೋಷಪಡುತ್ತೇವೆ.

								ಪ್ರತಿ ಜೋಡಿಗೆ
ಸಾದಾ	ಜೋಡುಗಳು	ಸಣ್ಣ	ಸ್ಯಾಜ್	ಕ್ರಯ			ರೂ	1—6—0.
ಡಿ.	ಡಿ.	ದೊಡ್ಡ	ಡಿ	,,		..	,,	1—8—0.
A ಮಾರ್ಕ್	ಮಳೆಗಾಲದ	ಸಣ್ಣ	ಡಿ	,,		.	,,	1-12—0.
ಡಿ	ಡಿ	ದೊಡ್ಡ	ಡಿ.	,,			,,	2—0—0.
ಡಿ	ಡಿ	ಸ್ಪೆಶಲ್		,,		...	,,	2—4—0.

ಜೆ. ಎಸ್. ಸೋಜ ಮತ್ತು ಕಂಪೆನಿ,
ಹಂಪನಕಟ್ಟಾ, ಮಂಗಳೂರು, ದ. ಕ.

ಔಷಧಿಗಳನ್ನು ತರಿಸಿಕೊಳ್ಳುವವರು ಹದಿನೆಂಟು ವರುಷಗಳಿಂದಿರುವ ಈ ಕಂಪನಿಗೆ ಬರೆಯಲು ಮರೆತುಬಿಡಬೇಡಿರಿ.

ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್,
ರಥಬೀದಿ ಮಂಗಳೂರು.

Shri Krishnan Brothers,

CHEMISTS & OPTICIANS, POST BOX NO. 165, MADRAS.

Compound Extract of Sarsaparilla with Iodides.

THE BEST BLOOD PURIFIER.

The best remedy for *Boils*, Pimples, Rheumatism, ...s, Sores, etc.

Price bottle Rs. 2 Packing and postage extra

Jasmine or Rose Scented Hair Oil.

THE BEST HAIR OIL.

They promote the growth of hair, render them beautiful. They are known for fragrance of fresh Jasmine or Rose flowers.

Price bottle As. 12 Packing and postage extra.

Rose Water.

The finest and genuine Parisian concentrated from pure petals

Price per lb 1 – 8 – 0 Packing and postage extra.

Gangau.

A NICE BURMESE PERFUME.

For the Handkerchief

It is a powerful and lasting perfume It is largely used by all classes of people throughout India, Burma and Ceylon.

Price bottle 1 – 4 – 0 }
Box of 3 bottles 3 – 8 – 0 } Postage & packing extra.

Bivine.

THE BEST BLOOD TONIC,

It increases the red corpuscles of the blood and makes people look bright, Rosy and Cheerful. It strengthens the exhausted nervous system.

Price per bottle Rs. 2 – 8 – 0. Postage & packing extra.

Asthma Cure.

THE BEST CURE FOR ASTHMA.

Guaranteed cure even worst cases of Asthma of many years duration.

Price per bottle Rs. 1 – 8 – 0. Packing and postage extra.

Our own Renowned Balm.

THE BEST CURER OF ALL KINDS OF PAINS.

Surest remedy for Rheumatism, pain in the Joints, Headache of all kinds, Chest complaints

Price per bottle As. 12. Packing and postage extra.

Chlorodyne and Camphorodyne.

The best medicine for cholera, dearrhœa, dysentery etc.

Price per bottle As. 10. Postage and packing extra.

ರಕ್ತ ಶುದ್ಧಿ ಬಗ್ಗೆ ಬಹಳ ಗುಣಕಾರಿಯಾಗಿರುವಂಥಾ ಆಯೊಡ್ಯಾಡ್ ಎಂಬ ಲವಣದಿಂದ ಕೂಡಿರುವ ಕಂಪೌಂಡ್ ಎಕ್ಸ್‌ಟ್ರೆಕ್ಟ್ ಒಪ್ ಸರ್ಸಪೆರಿಲ್ಲಾ.

ಇದರ ಸೇವನೆಯಿಂದ ಕುರುಗಳು, ಮುಖದ ಮೇಲೆ ಕಾಣಿಸಿಕೊಳ್ಳುವ ಮೊಡವೆ ಇತ್ಯಾದಿಗಳು ಅದೃಶ್ಯವಾಗುವವಲ್ಲದೆ ವಾತ, ವ್ರಣ ಸಹ ಗುಣಹೊಂದುವವು.

ಬಾಟ್ಲಿ ಒಂದಕ್ಕೆ ರೂ. ೨.

ಮಲ್ಲಿಗೆ ಅಥವಾ ಗುಲಾಬಿಹೂಗಳ ಸುವಾಸನೆಯಿಂದ ತುಂಬಿರುವ ಕೇಶವರ್ಧಕ ತೈಲವು.

ಇದರ ಉಪಯೋಗದಿಂದ ಕೂದಲುಗಳು ಸೊಗಸಾಗಿ ಬೆಳೆಯುವವು. ಅರಳಿದ ಮಲ್ಲಿಗೆ ಮತ್ತು ಗುಲಾಬಿ ಹೂವುಗಳ ನವೀನ ಪರಿಮಳವುಳ್ಳ ಈ ಎಣ್ಣೆಯು ಅದರ ಸುವಾಸನೆ ಬಗ್ಗೆ ಖ್ಯಾತಿಗೊಂಡಿರುವದು. ಬಾಟ್ಲಿ ೧ಕ್ಕೆ ಆಣೆ ೧೨.

ಗುಲಾಬಿ ನೀರು.

ತಾಜಾ ಪಾರೀಸು ನಗರದ ಗುಲಾಬಿಹೂವುಗಳ ಎಸಳುಗಳಿಂದ ತಯ್ಯಾರಿಸಲ್ಪಟ್ಟದ್ದು. ರಾತ್ಲ ಒಂದಕ್ಕೆ ರೂ. ೧—೮—೦.

ಗಂಗಾ.

ಕಿಸೆವಸ್ತ್ರಕ್ಕೆ ತಕ್ಕದಾದ ಪರಿಮಳ ದ್ರವ್ಯವು. ಇದನ್ನು ಲೇಪಿಸಿದರೆ ಸುಗಂಧವು ಬಹಳ ಕಾಲದವರೆಗಿರುವದು. ಹಿಂದೂಸ್ಥಾನ, ಬರ್ಮ ಮತ್ತು ಸಿಲೋನ್ ದೇಶಗಳಲ್ಲಿ ಬಹಳವಾಗಿ ಉಪಯೋಗಿಸಲ್ಪಡುತ್ತದೆ. ಬಾಟ್ಲಿ ಒಂದಕ್ಕೆ ಕ್ರಯ ರೂ. ೧—೪—೦, ಮೂರು ಬಾಟ್ಲಿಗಳುಳ್ಳ ಪೆಟ್ಟಿಗೆಯೊಂದಕ್ಕೆ ರೂ ೩—೮—೦.

ರಕ್ತವೃದ್ಧಿ ಬಗ್ಗೆ ಉತ್ಕೃಷ್ಟವಾದ ಔಷಧಿಯು.

ರಕ್ತವೃದ್ಧಿ ಬಗ್ಗೆ ಮುಖ್ಯವಾಗಿ ರಕ್ತದಲ್ಲಿ ಹೆಚ್ಚಿರಬೇಕಾದಂಥಾ ಕೆಲವು ಅಣುಗಳ ಬೆಳವಣಿಗೆಗೆ ಈ ಔಷಧಿಯು ಬಹಳ ಅನುಕೂಲವಾಗಿದೆ. ಜೀರ್ಣಾವಸ್ಥೆಯಲ್ಲಿರುವ ನರ ಸಂಸ್ಥಾಯುವನ್ನು ಸಹ ಇದು ಬಲಪಡಿಸುವದು. ಬಾಟ್ಲಿ ೧ಕ್ಕೆ ೨-೮-೦.

ನೇವಸಕ್ಕೆ ಸಿದ್ಧೌಷಧ.

ಅನೇಕ ವರ್ಷಗಳಿಂದ ಇದ್ದ ಕಠಿಣತರದ ನೇವಸವಾದರೂ ಈ ಔಷಧದಿಂದ ಗುಣವಾಗುವದು ಸೀಸೆ ೧ಕ್ಕೆ ರೂ. ೧—೮—೦.

ಬಹಳ ವರುಷಗಳಿಂದ ನಮ್ಮ ಅನುಭವದಿಂದ ಒಳ್ಳೇ ಗುಣಕಾರಿ ಎಂತ ಹೆಸರುವಾಸಿಯಾಗಿರುವ ಬೇನೆಹಾರಿ ಮುಲಾಮು ಅಥವಾ ಬಾಮ್.

ವಾತ, ಸಂದುವಾತ, ತಲೆಸಿಡಿತ, ಎದೆನೋವು ಮೊದಲಾದ ನೋವುಗಳ ನಿವಾರಣೆಗೆ ಇದು ಬಹಳ ಉಪಯೋಗಕರವಾಗಿದೆ. ಬಾಟ್ಲಿ ೧ಕ್ಕೆ ಆಣೆ ೧೨.

ಕ್ಲೋರೋಡ್ಯಾನ್ ಮತ್ತು ಕೆಂಫರೋಡ್ಯಾನ್.

ವಾಂತಿಭೇಧಿ, ಅತಿಸಾರ, ರಕ್ತಾತಿಸಾರ ಮೊದಲಾದವುಗಳ ಬಗ್ಗೆ. ಬಾಟ್ಲಿ ೧ಕ್ಕೆ ಆಣೆ ೧೦.

ಮೇಲಿನ ಔಷಧಿಗಳ ಕ್ರಯದಲ್ಲಿ ಟಪ್ಪಾಲು ಮೂಲಕ ಕಳುಹಿಸಿಕೊಡುವ ಖರ್ಚು ಕೂಡಿರದು. ಆದ್ದರಿಂದ ಟಪ್ಪಾಲು ಹಾಸಲು ಪ್ರತ್ಯೇಕವಿರುವುದು.

ವಿಳಾಸ:— **ಶ್ರೀ ಕೃಷ್ಣನ್ ಬ್ರದರ್ಸ್,** ಔಷಧಿ ವ್ಯಾಪಾರಸ್ಥರು, ಪೋಸ್ಟ್ ಬೋಕ್ಸ್ ನಂಬ್ರ 165, ಮದ್ರಾಸು.

ಸವಿನುಡಿಯ ಗ್ರಂಥಮಾಲೆ.

೧. ಪ್ರಶ್ನೋತ್ತರ ಲೇಖ್ಯಬೋಧಿನಿ. ಲೋಕವ್ಯವಹಾರವನ್ನು ಬೋಧಿಸುವುದು ... ... ೧—೭—೦

೨. The Self English Study ... / ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ ... / ಆಂಗ್ಲಭಾಷಾ ಪ್ರವೇಶದಾಯಿನಿ ... ೧—೩—೦

೩. The Self English Study ... / ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ ... / ಆಂಗ್ಲಭಾಷಾ ಪ್ರವೇಶದಾಯಿನಿ ... ೧—೩—೦

೪. The Self English Study ... / ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ ... / ಆಂಗ್ಲಭಾಷಾ ಪ್ರವೇಶದಾಯಿನಿ ... ೧—೩—೦

ಇವು ಮೂರು ಪುಸ್ತಕಗಳೂ ಬೋಧಕರ ಸಹಾಯವಿಲ್ಲದೆ ಇಂಗ್ಲಿಷ್‌ಭಾಷೆಯನ್ನು ತಿಳಿಸುವುದು.

೫. ಕಥಾ ಸರಿತ್ಸಾಗರ (ಪೂರ್ವಭಾಗ). ಪಾರ್ವತೀ ದೇವಿಗೆ ಪರಮೇಶ್ವರನು ಹೇಳಿದ ದಿವ್ಯವಾದ ಕಥೆಗಳು ... ... ೧—೧೨—೦

೬. ಮಾಧವೀ ಕಂಕಣ (ಬೆಂಗಾಳಿ ನಾವಲು). ಕೀರ್ತಿಶೇಷರಾದ ರಾಮೇಶ ಚಂದ್ರದತ್ತ ಮಹಾಶಯ ರಚಿತ. ಅಗತ್ಯ ಓದತಕ್ಕದ್ದು ೧—೮—೦

೭. ಭಾಷಾನಿಧಿ. ಒಂಭತ್ತು ಲಿಪಿ ಮತ್ತು ಒಂಭತ್ತು ಭಾಷೆಗಳನ್ನು ಬೋಧಕರ ಸಹಾಯವಿಲ್ಲದೆ ಕಲಿಸುವುದು.

೧.	ವರ್ಣ ಪರಿಜ್ಞಾನ (೧ನೆ ಪುಸ್ತಕ)		೧—೧೨—೦
೨.	ಶಬ್ದ ಪರಿಜ್ಞಾನ (೨ನೆ ಪುಸ್ತಕ)		೧—೧೨—೦
೩.	ವಾಕ್ಯ ಪರಿಜ್ಞಾನ (೩ನೆ ಪುಸ್ತಕ)		೧—೧೨—೦

೮. ಶಕ್ತಿ (ಬಂಗಾಳಿಯ ನಾವಲು). ಓದುವುದಕ್ಕೆ ಬಲು ಚೆನ್ನಾಗಿದೆ ... ... ೦—೧೨—೦

೯. ಭೂಮಿಯ ಆಳತೆ. ಬೋಧಕರ ಸಹಾಯವಿಲ್ಲದೆ ಈ ಶಂಕುಯೋಜನೆಯನ್ನು ಕಲಿಸುವುದು ... ... ೦—೧೨—೦

೧೦.	ಸಾವಿತ್ರೀ. (ಬಂಗಾಳಿಯ ನಾವಲು)	೦—೪—೦
೧೧.	ಸತೀ ದೇವಿ. (ಬಂಗಾಳಿಯ ನಾವಲು) ...	೦—೪—೦
೧೨.	ದಮಯಂತಿ. (ಬಂಗಾಳಿಯ ನಾವಲು) ...	೦—೪—೦
೧೩.	ಸಂಯುತೆ. (ಬಂಗಾಳಿಯ ನಾವಲು) ...	೦—೪—೦
೧೪.	ಶ್ರೀ ವಿವೇಕಾನಂದ ಸ್ವಾಮಿ. (ಸಚಿತ್ರ ಚರಿತ್ರೆ) ...	೦—೪—೦
೧೫.	ಶ್ರೀ ವಿವೇಕಾನಂದೋಪನ್ಯಾಸ. (ಹಿಂದೂಮತ) ...	೦—೪—೦
೧೬.	ತಾರಾನಾಥ. (ಜೀವನ ಚರಿತ್ರೆ)	೦—೪—೦
೧೭.	ದಾದಾಭಾಯಿ ನೌರೋಜಿ	೦—೧—೦
೧೮.	ಸರ್. ಟಿ. ಮಾಧವ ರಾವ್	೦—೧—೦
೧೯.	ಈಶ್ವರ ಚಂಧ ವಿದ್ಯಾಸಾಗರ...	೦—೧—೦
೨೦.	ರಾಮಮೋಹನರಾಯಿ	೦—೧—೦

ಭಾರತಿ ಸಂಪಂಗಿರಾಮು,
೪೨. ಸಿ. ಬೀದಿ ಕೋಟೆ, ಬೆಂಗಳೂರು ಸಿಟಿ.

ಅಶಕ್ತರಾದ ಸ್ತ್ರೀಯರಿರಾ!!!

ಗರ್ಭಾವಸ್ಥೆಯಲ್ಲಿಯ, ವ ಅನಂತರ ತೋರಿಬರುವ ಸರ್ವ ಬಗೆಯ ವಿಕಾರಗಳಿಗೆ ನಿಮಗೆ ಒಂದು ಉಪಾಯವು ಅಗತ್ಯವಿರುವುದು. ಆ ಉಪಾಯವಾದರೋ

"ಗುಡೆರಿನ್"

ಎಂಬ ಹೆಸರಿನ ಈ ಔಷಧವನ್ನು ಸೇವಿಸುವುದೇ! ಸೂರ್ಯನಕಿರಣಗಳು ಇಬ್ಬನಿಯ ಮೇಲೆ ಎರಗುತ್ತಲೇ ಇಬ್ಬನಿಯೆಲ್ಲವೂ ಹೇಗೆ ಆರಿಹೋಗುವುದೋ, ಅದೇ ಮರ್ಯಾದೆಯಲ್ಲಿ ಅಶಕ್ತರಾದ ಸ್ತ್ರೀಯರು ಈ "ಗುಡೆರಿನ್" ಎಂಬ ಔಷಧವನ್ನು ಸೇವಿಸುತ್ತಲೇ, ಅವರ ಶಾರೀರಕ ದುಃಖಗಳೆಲ್ಲವೂ ಉತ್ತರಕ್ಷಣದಲ್ಲಿಯೇ ಹುಟ್ಟಡಗಿ ಹೋಗುವವು. ಅನಿಯಮಿತವಾದ ಋತುಸ್ರಾವ, ಅಶಕ್ತತೆ, ಇವೆಲ್ಲ ರೋಗಗಳಿಗೆ ಇದು ರಾಮಬಾಣವೇ ಸರಿ.

ಹದಿನಾರು ಸಾವಿರ (16,000)

ಕೃಂತ ಹೆಚ್ಚು ಡಾಕ್ಟರರು ಬಹಳ ಸೂಕ್ಷ್ಮತೆಯಿಂದ ಈ "ಗುಡೆರಿನನ್ನು" ಶೋಧಿಸಿ, ಮೇಲೆ ಹೇಳಿದ ರೋಗಗಳಿಗೆ ಇದೇ ಸಿದ್ಧೌಷಧವೆಂದು ನಿರ್ಧಾರಗೈದಿರುವದರಿಂದ, ಈ ಔಷಧವು ಅಸಂಖ್ಯವಾದ ಔಷಧಾಲಯಗಳಲ್ಲಿ ಉಪಯೋಗಿಸಲ್ಪಡುತ್ತದೆ. ಇದು "ಹಿಸ್ಟಿರಿಯಾ" ಮೊದಲಾದ ಸ್ತ್ರೀಯರ ಋತುಸ್ರಾವ ಸಂಬಂಧಿಯಾದ ಸರ್ವರೋಗಗಳಿಗೂ ಮಹೋಪಕಾರಿಯು. ಪ್ರಕೃತ ಪ್ರಸೂತವಾದೊಡನೆ ಆಸವರಿಷ್ಟಾದಿಗಳನ್ನು ಉಪಯೋಗಿಸುವ ಬದಲಿಗೆ, ಇದನ್ನು ಉಪಯೋಗಿಸಿ ನೋಡಿದ್ದಲ್ಲಿ ಇದರ ಗುಣ ಶೀಘ್ರವಾಗಿ ಕಂಡುಬರುವದು. ಶೀಸೆ ೧ರ ಕ್ರಯ ರೂಪಾಯಿ 3—4—0. ಟ. ಖ. ಸೀಸೆಗೆ 0—7—0.

ದಿ. ಊಲನ್ ಮೂರ್. ಮಂಗಳೂರು,

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲ್ಲಿ ನಡದಿರುವ ಯಗ್ಜಬೀಶನ್‌ಗಳಲ್ಲಿ ಸುಮಾರ 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರಸಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ.

ಊದಬತ್ತಿಗಳು 4 ರೂ. ತೂಕದ ಶೇರು 1ಕ್ಕೆ ರೂ. 12—0—0, 5—0—0, 3—0—0. 2—8—0, 1—4—0, 1—0—0.

ಅರಗಜ ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2—0—0, 1—0—0, 0—12—0, 0—6—0.

ಸುಗಂಧಿ ಕಾಡ್ರ್ 1ಕ್ಕೆ 0—1—0. **ಬಾಲಗ್ರಹ** ದೂಪ ಟಿನ್ 1ಕ್ಕೆ 0—8—0. **ಸುವಾಸನೇ ಸುಣ್ಣ** ಶೀಸೆ 1ಕ್ಕೆ 0—2—0, ಇದಲ್ಲದೆ ಇನ್ನು **ಅನೇಕ ತರಹ ಸೆಂಟ್ಸು**ಗಳು, ಯಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಬಣ್ಣದ ಸಾಮಾನುಗಳು ಸಹ ಇರುತ್ತವೆ. ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್

ಸುಗಂಧಕಾರಿ, ಮೈಸೂರು.

ದಿ. ಇನ್‌ವೆನ್‌ಷನ್ ವಾಚು ರೂ. 3.



ಇದನ್ನು ಈಗ ತಾನೇ ತರಿಸಿರುತ್ತೇವೆ. ರಾಸ್ಕೋಪ್ ರೈಲ್ವೇ ವಾಚುಗಳಿಗಿಂತಲೂ ಬಹಳ ಶ್ರೇಷ್ಟವಾದುದಲ್ಲದೆ ಕಾಲವನ್ನು ಸಹಿತ ಬಹು ಕ್ರಮವಾಗಿ ತೋರಿಸತಕ್ಕದ್ದಾಗಿರುತ್ತದೆ. ಇದರ ನಮೂನೆಯಾದರೂ ಬಹಳ ಚೆನ್ನಾಗಿರುತ್ತದೆ. ಇದಕ್ಕೆ 5 ವರುಷದ ಗ್ಯಾರಂಟಿಯುಂಟು. ಇದರ ಕ್ರಯ ರೂ. 3—0—0. ಪೋಸ್ಟು ಖರ್ಚು ವಗೈರೆ ಮಾಫಿ ಇರುತ್ತೆ.

ನಿಕ್ಕಲ್ ಚಿಕ್ಕ ಸೈಜು ಲೇಡಿ ವಾಚು	ಕ್ರಯ 3—12—0
8 ದಿವಸಕ್ಕೆ ಬೀಗಕೊಡುವ ಕೈಗಡಿಯಾರ ...	,, 7—8—0
ರೈಲ್ವೇ ರೆಗ್ಯುಲೇಟರ್ ವಾಚು	,, 3—8—0
ರಾಸ್ಕೋಪ್ ವಾಚು	,, 2—12—0
ಸಾದಾ ಟೈಂಪೀಸು	,, 1—12—0
ಅಲಾರಂ ಟೈಂಪೀಸು	,, 2—14—0

ಎಡ್ರೆಸ್:— ಎ. ಟಿ. ಎನ್. ಜಯಾಕ್ಷಿ ಕಂಪೆನಿ,
ನಂ. 41 ಕಾಟುಪಿಳ್ಳಾರು ಕೋವಿಲ್ ಸ್ಟ್ರೀಟ್,
ಸಾಹುಕಾರುಪೇಟೆ, ಪೋಸ್ಟು ಮದರಾಸು.

B. Narasimha Prabhu,

Bantval,

(SOUTH CANARA).

AGENT FOR

Malabar and

South Canara.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ.

೧. ಕುಟುಂಬಜೀವನಿ—ಎಲ್ಲಾ ರೋಗಗಳನ್ನು ತ್ವರೆಯಾಗಿ ಗುಣಪಡಿಸುವದು. 16 ಔಷಧಗಳ ಸಂಗ್ರಹದ ಪೆಟ್ಟಿಗೆ 1ಕ್ಕೆ 8—0—0.

೨. ಶತಮೂಲಿಕಾ ಅಮರಸಂಜೀವನಿ—ಈ ಟೊನಿಕ್ ದ್ರಾವಕವು ನಿಶ್ಶಕ್ತರಿಗೆ ಚೈತನ್ಯ ಉಂಟುಮಾಡಿ ಅಮರತ್ವವನ್ನು ಕೊಡುತ್ತದೆ. ಬಾಟ್ಲಿ 1ಕ್ಕೆ 1—0—0.

೩. ಬಾಲಸಂಜೀವನಿ—ಮಧುರ ಟೊನಿಕ್ ಅಶಕ್ತ ಬಾಲಕರಿಗೆ ಸಶಕ್ತರಾಗಿ ಮಾಡಿ ವರ್ಧಮಾನ ಚಂದ್ರನಂತೆ ಬೆಳಗಿಸುತ್ತದೆ. ಬಾಟ್ಲಿ 1ಕ್ಕೆ 0—12—0.

೪. ವಸಂತ ಕುಸುಮಾಕರ —ಈ ಸುವಾಸಿಕ ತೈಲವು ಕೇಶ ವೃದ್ಧಿಮಾಡಿ ಶಿರೋರೋಗ ನೇತ್ರರೋಗಗಳನ್ನು ಶಮನಮಾಡಿ ಮೆದುಳನ್ನು ತಂಪು ಮಾಡಿ ಜ್ಞಾನಶಕ್ತಿ ಹೆಚ್ಚಿಸಿ, ಬುದ್ಧಿ ಭ್ರಮಣವನ್ನು ಗುಣಮಾಡುತ್ತದೆ. ಬಾಟ್ಲಿ 1ಕ್ಕೆ 1—0—0

೫. ಸುದರ್ಶನಮಾಲಿನಿ—ಈ ಸಿದ್ಧೌಷಧವು ಮೇಹವ್ರಣ ಇತ್ಯಾದಿ ಎಲ್ಲಾ ದುಸಾಧ್ಯ ವ್ರಣಗಳನ್ನು 7 8 ದಿವಸಗಳಲ್ಲಿ ಪೂರ್ಣ ಗುಣಪಡಿಸುವದು. ಕ್ರಯ 4—0—0.

೬. ಗರುಡಧ್ವಜ—ಇದು ಸರ್ಪ ಹುಚ್ಚುನಾಯಿ, ಚೇಳು, ಇಲಿ ಇತ್ಯಾದಿ ಸರ್ವ ಕಠಿಣ ವಿಷಗಳಿಗೆ ಸಂಜೀವನವಾಗಿರುತ್ತದೆ ಅನುಭವಸಿದ್ಧ 2—0—0

೭. ಆನಂದವನವಿಲಾಸ—ಇದು ಡೈಯಾಬಿಟಿಸ ಎಂಬ ಬಹುಮೂತ್ರ ರೋಗವನ್ನು 48 ದಿವಸಗಳಲ್ಲಿ ಪೂರ್ಣ ಗುಣಪಡಿಸುತ್ತದೆ. ಪೂರ್ಣ ಔಷಧಕ್ಕೆ 5—0—0.

ನಮ್ಮ ಡಿಸ್ಪೆನ್ಸರಿಯಲ್ಲಿ ಸಿದ್ಧ ಕಲ್ಪ ಧೈರ್ಯಾಗಿ ಪ್ರಯೋಗಗಳಿಂದ ತಯಾರಿಸಿದ ಪೌಡರ ಮಾತ್ರೆಗಳು, ಲೇಹ ಚೂರ್ಣಗಳು, ತೈಲ್ಯ ಘೃತಗಳು, ಆಸವಾರಿಷ್ಟಗಳೂ ಕುಂಬಾ ಇರುತ್ತವೆ. ಕ್ರಯವಿಲ್ಲದ ನಮ್ಮ ಕೆಟಲಗನ್ನು ತರಿಸಿಕೊಳ್ಳಿರಿ. ಏಜಂಟರು ಬೇಕು. ಹೆಚ್ಚು ಡಿಸ್‌ಕೌಂಟ್ ಸಿಕ್ಕುವದು.

ಎಮ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

ವಿನೋದ? ಮಾಸಪತ್ರಿಕೆ !!

"ಚಾತುರ್ಯ."

ಈ ಮಾಸಪತ್ರಿಕೆಯಲ್ಲಿ ಪತ್ತೆದಾರಿ ಕಥೆಗಳು, ಹಾಸ್ಯಲಹರಿಯು, ಹಾಸ್ಯ ವಿನೋದ, ನೀತಿಸಂಬಂಧ ಲೇಖನಗಳೂ, ಕಥೆಗಳೂ, ಕಾದಂಬರಿಗಳೂ ಪ್ರಕಟಿಸಲ್ಪಡುತ್ತೆ. ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ ೧ ರೂಪಾಯಿ. ಮಾದರಿ ಸಂಚಿಕೆಗೆ ೧ ಅಣೆ ಸ್ಟಾಂಪು ಕಳುಹಿಸಿರಿ.

ವಿಳಾಸ.— ಮ್ಯಾನೇಜರ್, "ಚಾತುರ್ಯ" ಬೆಂಗಳೂರು ಸಿಟಿ.

ಸೆನ್ ಸೆನ್. SEN SEN.)

ಕಂಠದಲ್ಲಿ ಉಂಟಾಗುವ ದೋಷಗಳನ್ನು ನಿವಾರಿಸಿ ಸುಖವನ್ನೀಯುವುದು.

ಶ್ವಾಸದಲ್ಲಿ ಸುವಾಸನೆಯನ್ನುಂಟುಮಾಡುವುದು

ಸೆನ್ ಸೆನ್ ಇದರ ಗುಣವು ಇಷ್ಟೇ ಅಲ್ಲ ಆರೋಗ್ಯವನ್ನು ಸರಿಪಡಿಸುತ್ತದೆ, ಬಹಳ ಮನೋಹರವಾದ ರುಚಿಯುಳ್ಳದ್ದಾಗಿದೆ ಸ್ವರವನ್ನು ಸ್ಪಷ್ಟಗೊಳಿಸಿ ಬಲಪಡಿಸುವದು, ಸಂಗೀತಗಾರರಿಗೆ, ಪ್ರಸಂಗಗಳನ್ನು ಮಾಡುವ ಉಪದೇಶಕರಿಗೆ, ಭಾಷಣಗಳನ್ನು ದೊಡ್ಡ ದೊಡ್ಡ ಸಭೆಗಳಲ್ಲಿ ಮಾಡುವವರಿಗೆ ಇದ ಬಹಳ ಉಪಯೋಗಕರವಾಗಿರುವುದು.

ಸೆನ್ ಸೆನ್ — ಇದರ ಕೆಲವು ಹರಳುಗಳನ್ನು ವೀಳ್ಯದೊಂದಿಗೆ ಸೇವಿಸಿದರೆ ವೀಳ್ಯದ ರುಚಿಯು ಬಹಳ ಸೊಗಸಾಗುವುದ

ಸೆನ್ ಸೆನ್ — ಅಜೀರ್ಣ ಮೊದಲಾದ ಜೀರ್ಣಕೋಶದ ದೋಷಗಳಿಗೆಲ್ಲಾ ದಿವ್ಯ ಔಷಧಿಯಾಗಿರುವುದು. ಕಂಠದಲ್ಲಿ ಬಹಳ ಶೀತಳವಾದ ಮತ್ತು ಸುಖಕರವಾದ ಭಾವನೆಯು ಇದರ ಸೇವನೆಯಿಂದ ಉಂಟಾಗುತ್ತದೆ ಬೀಡಿ, ಚುಟ್ಟಾ ವಗೈರೆಗಳನ್ನು ಸೇದಿದ ನಂತರ ಸೆನ್‌ಸೆನ್‌ನ್ನು ಉಪಯೋಗಿಸಿದರೆ ಬಾಯಿಯ ಕೆಟ್ಟ ವಾಸನೆಯನ್ನು ಹೋಗಗೊಳಿಸಿ ಸುವಾಸನೆಯನ್ನುಂಟುಮಾಡುವುದು 3 ಆಣೆ ಕ್ರಯದ ಒಂದು 'ಪೆಕೆಟನ್ನು' ಬಹಳ ಕಾಲ ಉಪಯೋಗಿಸಬಹುದು.

ಆರ್ಧಾಣೆಯ ಸ್ಟಾಂಪನ್ನು ಕಳುಹಿಸಿಕೊಟ್ಟರೆ ಮಾದರಿ ಪೆಕೆಟನ್ನು ಉಚಿತವಾಗಿ ಕಳುಹಿಸಿಕೊಡುವೆವು

Address — ನಮ್ಮ ವಿಳಾಸ —

Muller & Phipps, ಮುಲ್ಲರ್ ಎಂಡ್ ಫಿಪ್ಸ್,

21 Sankurama Chetty Street, 21 ಸಂಕುರಾಮುಚೆಟ್ಟಿ ರಸ್ತೆ,

MADRAS. ಮದರಾಸು

ಯುನಿವರ್ಸೆಲ್ ಎಸ್ಯುರೆನ್ಸ್ ಕೊ, ಲಿಮಿಟೆಡ್.

ಹೆಡ್ ಆಫೀಸು:—191, ಬೌ ಬಜಾರ, ಕಲ್ಕತ್ತಾ.

ಸರಕಾರದ ಭದ್ರತೆಯ ಮೇಲ್ವಿಚಾರದಲ್ಲಿ ನಡಿಯುತ್ತಿರುವುದು.

ಭಂಡವಾಳ ರೂ. 10,00,000.

ಈ ತನಕ ಕೊಡೋಣಾದ ವಿಮೆ ಹಕ್ಕುಗಳ ಮೊಬಲಗು ಶುಮಾರು 8,00,000.

ಫಂಡು—ರೂ. 3,00,000ಕ್ಕೆ ಮಿಕ್ಕಿದೆ.

ಸರಕಾರದವರ ಭದ್ರತೆಯಲ್ಲಿ ರೂ. 50,000ವಿರುವುದು.

ಚೀಪ್ ಇನ್ಶೂರೆನ್ಸ್ ಸ್ಕೀಮ್ ಎಂಬ ವೈದ್ಯಪರೀಕ್ಷೆ ಇಲ್ಲದೆ ವಿಮೆ ಉತ್ತರಾಯಿಸಿಕೊಳ್ಳಬಹುದಾದ ಸರ್ವರಿಗೂ ಸಾಧ್ಯವಾದ ಶುಲಭ ಕ್ರಮ.

ಈ ಪ್ರಾಂತ್ಯಗಳಲ್ಲಿ ಯಾವ ವಿಮೆ ಕಂಪೆನಿಗಳಲ್ಲಾದರೂ ಈತನಕ ಇಂಥಾ ಅಗ್ಗದರಗಳ ವಿಮೆ ಉತ್ತರಾಯಿಸುವ ಏರ್ಪಾಡೇ ಇರುವದಿಲ್ಲ. ಭಾರತೀಯರಲ್ಲಿ ವಿಶೇಷವಾಗಿರುವ ಬಡವರಗೋಸ್ಕರವೇ ಈ ಕ್ರಮವು ಏರ್ಪಡಿಸಲ್ಪಟ್ಟಿರುತ್ತದೆ. ಪ್ರೊವಿಡೆಂಟ್ ಫಂಡುಗಳ ಕ್ರಮದ ಪ್ರಕಾರ ಮುಂದಕ್ಕೆ ಸಂಭವಿಸಬಹುದಾದ ಅನನುಕೂಲತೆಗಳು ಇದರಲ್ಲಿರವು. ವಿಮೆ ಉತ್ತರಾಯಿಸಿಕೊಳ್ಳುವ ಈ ನವೀನ ಅಗ್ಗದರಗಳ ಏರ್ಪಾಡು ಬಹಳ ಉಪಯುಕ್ತವಾದದ್ದು ಎಂತ ವಿಮೆ ಸಂಘಗಳ ವಿಶೇಷ ಮಾಹಿತಿದಾರರ ಅಭಿಪ್ರಾಯವಿರುವುದು. ನಿಶ್ಚಿತವಾದ ವಿಮೆ ಮೊಬಲಗುಗಳ ರೂಪಾಯಿ ಮತ್ತು ಅರ್ಧ ರೂಪಾಯಿಗಳ ಪೊಲಿಸಿಗಳು ಈ ಕ್ರಮದ ಮೇರೆಗೆ ಕೊಡೋಣಾಗುವವು.

ಸಾಮಾನ್ಯ ವಿಮೆ ಇಲಾಖೆ.

ಈ ಕಂಪೆನಿಯ ಈ ಇಲಾಖೆಯಲ್ಲಿ ವಿಮೆ ಉತ್ತರಾಯಿಸಿಕೊಳ್ಳುವವರ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಲಿರುವುದು. ಸಾಧ್ಯವಿರುವ ಅತ್ಯಂತ ಕಡಿಮೆಯ ದರಗಳು ಸಂಪೂರ್ಣವಾದ ಭದ್ರತೆಯು ಈ ಇಲಾಖೆಯ ವಿಶೇಷ ಪ್ರಯೋಜನಗಳಾಗಿರುವುದು. ಕಂಪೆನಿಯ ಲೆಕ್ಕದ ಸ್ಥಿತಿಗತಿಯನ್ನು ತೋರಿಸುವ ಮೊಖಾಬಿಲೆ ಪಟ್ಟಿಗಳನ್ನು ಈ ಕಂಪೆನಿಯ ವಿಷಯ ಪತ್ರಗಳ ಅಭಿಪ್ರಾಯವೇನೆಂಬುದನ್ನೂ ತರಿಸಿ ನೋಡಿರಿ.

ಒಳ್ಳೇ ಚಟುವಟಿಕೆಯ ಜಾಣರಾದ ಏಜಂಟರುಗಳು ಬೇಕಾಗಿರುವರು. ಶರ್ತಗಳ ಬಗ್ಗೆ ಕೆಳಗಣ ವಿಳಾಸಕ್ಕೆ ಬರಕೊಳ್ಳಬಹುದು.

ವಿಳಾಸ:— ಲಕ್ಷ್ಮಣರಾವ್ ಬ್ರದರ್ಸ್,

ಚೀಫ್ ಏಜೆಂಟ್ಸ್, ಬೆಲ್ಲಾ, ಮೈಸೂರು, [illegible]

ನ್ಯಾಯದರ್ಪಣ.

ಹೊಸ ಪುಸ್ತಕ.

ಇಂಡಿಯಾ ದೇಶದ ಸಮಸ್ತ ಹಿಂದೂ ಜನರ ಸಾಮಾನ್ಯ ಧರ್ಮಗಳು, ಅವುಗಳನ್ನು ಅತಿಕ್ರಮಿಸಿ ನಡೆಯುವವರಿಗ ಉಂಟಾಗತಕ್ಕ ಫಲಗಳು, ಇವುಗಳನ್ನು ಕುರಿತು, ಗವರ್ನಮೆಂಟಿನವರಿಂದ ಅನೇಕ ಆಕ್ಟುಗಳು, ರೆಗ್ಯುಲೇಷನ್‌ಗಳು, ಶಾಸನಗಳು ವಗೈರೆ ವಿಧಾಯಕವಾಗಿ ಇರುತ್ತೆ ಇವುಗಳೆಲ್ಲಾ ಇಂಗ್ಲೀಷ್ ಭಾಷೆಯಲ್ಲಿಯೇ ಅಪಾರವಾಗಿ ಇರುತ್ತವೆ. ಇವುಗಳಲ್ಲಿ, "ಕಂಟ್ರಾಕ್ಟ್" ಅಂದರೆ ಕರಾರುಗಳು, "ಬ್ರೀಚ್ ಆಫ್ ಕಂಟ್ರಾಕ್ಟ್," ಅಂದರೆ ಒಪ್ಪಂದಕ್ಕೆ ತಪ್ಪಿ ನಡೆಯೋಣ, ದ್ರೋಹ, ಲಿಮಿಟೇಷನ್, ಛಾಪಾ ಕಾಗದ, ರಿಜಿಸ್ಟ್ರೇಷನ್, ಸಿವಿಲ್ ಪ್ರೊಸಿಡ್ಯೂರ್, ಕ್ರಿಮಿನಲ್ ಪ್ರೊಸಿಡ್ಯೂರ್, ಪೀನಲ್ ಕೋಡ್, ಹಿಂದೂ ಲಾ, ಮುಂತಾದ ಧರ್ಮಶಾಸ್ತ್ರಗಳಿಂದ, ಮನುಷ್ಯರ ನಿತ್ಯಾಚರಣೆಗೆ ಅವಶ್ಯಕವಾದ ಲೌಕಿಕ ವ್ಯವಹಾರ ಧರ್ಮಗಳ ಮುಖ್ಯ ಸಂಗತಿಗಳನ್ನೆಲ್ಲಾ ಆರಿಸಿ ಈ ಸಣ್ಣ ಪುಸ್ತಕವನ್ನು ರಚಿಸಿರುತ್ತೆ ಮತ್ತು ವಾಡಿಕೆಯಲ್ಲಿ ಇರತಕ್ಕ ನಾನಾ ವಿಧಗಳಾದ ದಸ್ತೈವಜುಗಳ ಅನೇಕ ನಮೂನೆಗಳು ಮತ್ತು ಕ್ರಿಮಿನಲ್ ರಿವಿನ್ಯೂ ಗ್ರಾಮ ಮುನಸೀಫ್ ಕೋರ್ಟುಗಳ ಮುಂದಿನ ದಾವಾ ವಗೈರೆ ಅರ್ಜಿಗಳ ಮಾದರಿಗಳು ಅಡಕವಾಗಿ ಇರುತ್ತೆ. ಬೆಲೆ 1—8—0. ವಿ. ಪಿ. 1—12—0.

ಲಾಯರ್ ಯಂ ಯಸ್. ನಂಜಪ್ಪನವರು,

ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

11ಪುಸ್ತಕಗಳನ್ನು ಒಟ್ಟಾಗಿ ತರಿಸಿಕೊಂಡರೆ ಪೋಸ್ಟೇಜು ಸೇರಿ 15—0—0 ಆಗುತ್ತೆ.

ಬಾಲಬೋಧ ಲಿಪಿಯ ಪುಸ್ತಕಗಳು.

ಋಗ್ವೇದ ಮಂತ್ರಸಂಹಿತಾ	1—0—0
,, ಬ್ರಹ್ಮಕರ್ಮ	2—8—0
,, ಸಂಧ್ಯಾವಂದನೆ	0—2—0
ಶಿಕ್ಷಾದಿ ಚತುಷ್ಟಯ	0—4—0
ಸಪ್ತಶತಿ ದೇವಿಮಹಾತ್ಮ್ಯ, ಸ್ಥೂಲಾಕ್ಷರ, ರೇಶ್ಮೆ ಬ್ಯಾಂಡ್	0 12—0
ಸಪ್ತಶತಿ ದೇವಿಮಹಾತ್ಮ್ಯ, ಮಧ್ಯಮಾಕ್ಷರ, ರೇಶ್ಮೆ ಬ್ಯಾಂಡ್	0 10—0
ಸಪ್ತಶತಿ ದೇವಿಮಹಾತ್ಮ್ಯ, ಸಣ್ಣಕ್ಷರ, ರೇಶ್ಮೆ ಬ್ಯಾಂಡ್	0—7—0
ಅಧ್ಯಾತ್ಮರಾಮಾಯಣ ರೇಶ್ಮೆಬ್ಯಾಂಡ್	1—0—0
ಸತ್ಯನಾರಾಯಣ ವ್ರತಕಥಾ	0—2—6
ವಿದುರನೀತಿ	0—8—0
ಭಗವದ್ಗೀತಾ, ಸ್ಥೂಲಾಕ್ಷರ, ರೇಶ್ಮೆ ಬ್ಯಾಂಡ್	0 12—0
ಭಗವದ್ಗೀತಾ ಮಧ್ಯಮಾಕ್ಷರ, ರೇಶ್ಮೆ ಬ್ಯಾಂಡ್	0—8—0
ಭಗವದ್ಗೀತಾ, ಸಣ್ಣ ಅಕ್ಷರ, ಕಾಗದ ಬ್ಯಾಂಡ್	0—6—0
ಭಗವದ್ಗೀತಾ, ಸಣ್ಣ ಅಕ್ಷರ, ರೇಶ್ಮೆ ಬ್ಯಾಂಡ್	0—4—0
ಮಹಾವಾಕ್ಯ ರತ್ನಾವಳಿ	0—3—0
ವಿಷ್ಣು ಸಹಸ್ರನಾಮಸ್ತೋತ್ರ, ಸ್ಥೂಲಾಕ್ಷರ, ರೇಶ್ಮೆ ಬ್ಯಾಂಡ್	0—4—0
ವಿಷ್ಣು ಸಹಸ್ರನಾಮಸ್ತೋತ್ರ, ಸ್ಥೂಲಾಕ್ಷರ, ಕಾಗದ ಬ್ಯಾಂಡ್	0—2—6
ವಿಷ್ಣು ಸಹಸ್ರನಾಮಸ್ತೋತ್ರ, ಮಧ್ಯಮಾಕ್ಷರ, ಕಾಗದ ಬ್ಯಾಂಡ್	0—2—0
ಪಂಚರತ್ನಗೀತಾ, ಸ್ಥೂಲಾಕ್ಷರ, ರೇಶ್ಮೆ ಬ್ಯಾಂಡ್.	1—0—0
ಪಂಚರತ್ನಗೀತಾ ಮಧ್ಯಮಾಕ್ಷರ, ರೇಶ್ಮೆ ಬ್ಯಾಂಡ್	0 12—0
ಪಂಚರತ್ನಗೀತಾ ಮಧ್ಯಮಾಕ್ಷರ, ಕಾಗದ ಬ್ಯಾಂಡು	0—6—0
ಬೃಹಸ್ತೋತ್ರ ರತ್ನಾಕರ 182 ಸ್ತೋತ್ರಗಳು ಅಡಗಿರುವ ರೇಶ್ಮೆ ಬ್ಯಾಂಡು	0 12—0
ಬೃಹಸ್ತೋತ್ರ ರತ್ನಾಕರ 182 ಸ್ತೋತ್ರಗಳು ಅಡಗಿರುವ ಕ್ಯಾಲಿಕೊ ಬ್ಯಾಂಡ್	0-10—0
ಬೃಹಸ್ತೋತ್ರ ರತ್ನಾಕರ 182 ಸ್ತೋತ್ರಗಳು ಅಡಗಿರುವ ಕಾಗದ ಬ್ಯಾಂಡ್	0—8—0
ಶಿವಲೀಲಾಮೃತ ದೊಡ್ಡ ಸ್ಸಾಜ್, ಸ್ಥೂಲಾಕ್ಷರ, ಅವ್ವಲ್	1—4—0
ಶಿವಲೀಲಾಮೃತ ದೊಡ್ಡ ಸ್ಸಾಜ್, ಸ್ಥೂಲಾಕ್ಷರ, ದುಯಂ	0-14—0
ಶಿವಗೀತಾ, ರೇಶ್ಮೆ ಬ್ಯಾಂಡ್	0—8—0
,, ಕಾಗದ ,,	0—5—0
ಶನಿಮಹಾತ್ಮೆ	0—4—0
ಪಂಚತಂತ್ರ	1—2—0
ವಿವೇಕರತ್ನಾಕರವೆಂಬ ಕೊಂಕಣಿ ಭಾಷೆಯ ಅಭಂಗ ಪದಗಳು ಬಾಲಬೋಧ ಲಿಪಿ	0—6—0
ಕನ್ನಡ ಅಕ್ಷರದ ಕೊಂಕಣಿ ಭಾಷೆಯ ಪುಸ್ತಕಗಳು	
ಚಂದ್ರಹಾಸ ನಾಟಕ	0—4—0
ಮಾನಸ ಚರಿತ್ರ ನಾಟಕ	0—4—0
ಸಾವಿತ್ರಿ ನಾಟಕ	0—4—0
ಸ್ವರ್ಣಗೌರೀವ್ರತಕಥಾ	0—1—0

ಈ ಮೇಲಿನವುಗಳಲ್ಲದೆ ಇನ್ನೂ ಅನೇಕಾನೇಕ ಸಂಸ್ಕೃತ, ಮರಾಟಿ, ಕನ್ನಡ ಪುಸ್ತಕಗಳೂ, ಶಾಲಾ ವಿದ್ಯಾರ್ಥಿಗಳಿಗೆ ಅಗತ್ಯವಿರುವ ಕಾಪಿ ಬೂಕುಗಳೂ, ಎಕ್ಸರ್‌ಸ್ಸಾಜ್ ಬೂಕುಗಳೂ, ಫೌಂಟನ್ ಪೇನು ಇತ್ಯಾದಿ ಬರವಣಿಗೆ ಸಾಮುಗ್ರಿಗಳೂ, ವರ್ಗ ಊರಿನ ಪುಸ್ತಕಗಳೂ ನಮ್ಮಲ್ಲಿ ಸುಲಭ ಕ್ರಯಕ್ಕೆ ದೊರೆಯುವವು. ಪರಸ್ಥಳದವರಿಗೆ ಅಗತ್ಯವಿರುವ ಯಾವತ್ತೂ ಮಹಾಲುಗಳು ಟಪ್ಪಾಲ ದ್ವಾರಾ ಕಳುಹಿಸಲ್ಪಡುವವು.

ನಮ್ಮ ವಿಳಾಸ:— ಕೆ. ಯಂ ದಾಸ ಪ್ರಭು,
ರಥಬೀದಿ, ಮಂಗಳೂರು.

ಅಪೂರ್ವ ಗ್ರಂಥ! ಅಪೂರ್ವ ಗ್ರಂಥ!!

ಬಳ್ಳಾರಿ ಶ್ರೀ ಮರಿಸ್ವಾಮಿಗಳು

ಸಕ್ಕರಿ ಕರಡೆಪ್ಪ

ಇವರ ಜೀವಿತ ಚರಿತ್ರೆ.

ಈ ಮಹಿಮರ ಚರಿತ್ರೆಯನ್ನು ಇಲ್ಲಿಯವರಿಗೂ ಯಾರೊಬ್ಬರು ಪ್ರಕಟನ ಮಾಡಿದ್ದಿಲ್ಲವೆಂಬುದು ತಿಳಿದದ್ದಾಗಿರುವದಷ್ಟೆ. ಇಂತಹ ಅದ್ಭುತ ಮಹಿಮಾಶಾಲಿಗಳ ಚರಿತ್ರೆಗಳು ಅವಶ್ಯಕವಾಗಿಯೂ ಆದರಣೀಯಗಳಾಗಿರುವವು ಇವರ ಮಹಿಮೆಯು ಅಸಾಧಾರಣವಾದುದು. ಒಂದೆ ದಿನ ಒಂದೆ ಕಾಲದಲ್ಲಿ ಬಳ್ಳಾರಿ, ಬೆಂಗಳೂರು, ಭೈರವಪುರ ಎಂಬ ಮೂರು ಸ್ಥಳಗಳಲ್ಲಿ ಸಮಾಧಿಯನ್ನು ಹೊಂದಿದರೆಂಬುದೊಂದೆ ಅಪ್ರತಿಮ ಪ್ರಭಾವವನ್ನು ಸೂಚಿಸುತ್ತಿರುವದು. ಇವರು ಅಲ್ಲಲ್ಲಿ ತೋರಿದ ಮಹಿಮೆಗಳು ಅನಂತವಾಗಿರುವವು; ಇದಲ್ಲದೆ ಇವರ ಶಿಷ್ಯನಾದ ಸಕ್ಕರಿಕರಡೆಪ್ಪನ ಅಪಾರ ಮಹಿಮೆಯು ವಿಶದವಾಗಿ ವರ್ಣಿಸಲ್ಪಟ್ಟಿರುವದು. ಈ ಸಕ್ಕರಿ ಶರಣನಂತಹ ಶರಣನು ಇದೀ ಕಾಲದಲ್ಲಿ ವೀರಶೈವ ಮತದೊಳಗೆ ಹುಟ್ಟುವದು ಅಪರೂಪ. ಈ ಗುರುಶಿಷ್ಯರೀರ್ವರ ಚರಿತ್ರೆಗಳು ಒಂದು ಗ್ರಂಥದಲ್ಲಿ ತಯಾರುಮಾಡಿರುವೆವು. ಈ ಗ್ರಂಥವನ್ನೋದುವವರು ಖಂಡಿತವಾಗಿಯೂ ನೀತಿ, ಭಕ್ತಿ, ಜ್ಞಾನಗಳ ಕಡೆ ಮನಸ್ಸನ್ನು ಕೊಡದಿರಲಾರರು. ಮತ್ತು ಇದಲ್ಲದೆ ಮೈಸೂರು ಶ್ರೀಮನ್ಮಹಾರಾಜ, ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರರವರು ಶಿಷ್ಯರಾದ ಕಂಬಳಿ ಸ್ವಾಮಿಗಳ ಸಮೇತ ಇರುವ ಮಹಾಸ್ವಾಮಿಗಳ ಭಾವಚಿತ್ರ ಪಟವು ಪ್ರಥಮ ಪುಟದಲ್ಲಿ ಅಂದವಾಗಿರಿಸಲ್ಪಟ್ಟಿರುವದು. ನಿಮ್ಮ ವಿಳಾಸ ಚನ್ನಾಗಿರಲಿ. ಇದರ ಬೆಲೆ ವಿ. ಪಿ. ಸಹಿತ ರೂ. 1—2—0.

ನಮ್ಮ ವಿಳಾಸ:— ಬಸವರಾಜ ಕಂಪೆನಿ, ಬಳ್ಳಾರಿ.

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ. ಸುಬ್ಬರಾಯಿಯವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ವಿರೋಚನೆ ಮಾತ್ರೆಗಳು.—ಸ್ವಲ್ಪವೂ ಹೊಟ್ಟೆನೋವು, ಆಯಾಸ ಯಾವದೂ ಉಂಟಾಗದಂತೆ ಸುಖವಾಗಿ ವಿರೋಚನೆಯಾಗುವದು ಮಲಬಂಧ, ಅಜೀರ್ಣ, ವಾಯು, ಎದೆಯುರಿಯುವುದು, ಪಿತ್ತ, ಜ್ವರ, ಇವುಗಳನ್ನು ವಾಸಿಮಾಡುವುದು. ಸೀಸೆ 1ಕ್ಕೆ 8 ಆಣೆ, ವಿ. ಪಿ ಚಾರ್ಜು 7 ಸೀಸೆವರಿವಿಗೂ 5 ಆಣೆ

ಜ್ವರಸಂಹಾರಿ.—ಎಲ್ಲಾ ವಿಧವಾದ ಜ್ವರ, ವಿಷಮ ಶೀತಜ್ವರ 2ರ 3ರ 4ರ, ಛಳಿ, ಇನ್‌ಪ್ಲುಯನ್ಸ್, ಚಳಿಜ್ವರ, ವಾತರೋಗ ಇವುಗಳನ್ನು ಸಂಪೂರ್ಣವಾಗಿ ವಾಸಿ ಮಾಡುವದು ಪೆಟ್ಟಿಗೆ 1ಕ್ಕೆ ರೂ. 1, ವಿ ಪಿ ಚಾರ್ಜು 5 ಆಣೆ

ಕೂದಲು ಉದುರಿಹೋಗುವದಕ್ಕೆ.—ಕೂದಲು ಬೇಡದಿರುವ ಸ್ಥಳಕ್ಕೆ ಹಚ್ಚಿದರೆ ಚರ್ಮಕ್ಕೆ ತೊಂದರೆಯಾಗದೆ 5 ನಿಮಿಷದಲ್ಲಿಯೇ ಉದುರಿಹೋಗುವದು. ಸೀಸೆ 1ಕ್ಕೆ 4 ಆಣೆ, ವಿ ಪಿ ಚಾರ್ಜು 6 ಸೀಸೆವರಿಗೂ 5 ಆಣೆ

ಸುಗಂಧ ದಂತಚೂರ್ಣ —ಎಲ್ಲಾ ವಿಧವಾದ ಹಲ್ಲುನೋವುಗಳನ್ನು ವಾಸಿ ಮಾಡಿ, ಆಹಾರವನ್ನು ಜೀರ್ಣಕ್ಕೆ ತರುವುದು ಸೀಸೆ 1ಕ್ಕೆ 3 ಆಣೆ, ವಿ ಪಿ 5 ಸೀಸೆವರಿಗೂ 5 ಆಣೆ.

ಸ್ಖಲಿತರಕ್ಷಣಿ —ಬಲಹೀನದಿಂದಲೂ, ಉಷ್ಣದಿಂದಲೂ, ಬಾಲ್ಯಾವಸ್ಥೆಗಳಲ್ಲಿ ನಡದಂಥಾ ಅತಿ ಸ್ತ್ರೀಸಂಭೋಗಗಳಿಂದಲೂ, ನಿದ್ರೆಯಲ್ಲಿಯೂ ಸ್ವಪ್ನದಲ್ಲಿಯೂ ಸ್ಖಲಿತವಾದ ಇಂದ್ರಿಯವನ್ನು ನಿಲ್ಲಿಸಿ ದೇಹದೃಢವನ್ನು ತರುವುದು ಸೀಸೆ 1ಕ್ಕೆ 8 ಆಣೆ, ವಿ ಪಿ ಚಾರ್ಜು 6 ಸೀಸೆವರಿಗೂ 5 ಆಣೆ

ಅತ್ಯುತ್ತಮವಾದ ಕಸ್ತೂರಿ.—ಕಾಶ್ಮೀರದಿಂದ ತರಿಸಿರುವದು. ಅತ್ಯುತ್ತಮವಾದದ್ದು ಮತ್ತು ಒಂದೇ ರಖಂ ಇರತಕ್ಕದ್ದು. ತೊಲೆ 1ಕ್ಕೆ ರೂ, 48 ಚಿಲ್ಲರೆಯಾಗಿ 1 ರೂಪಾಯಿಗೂ ದೊರಕುತ್ತದೆ ವಿ. ಪಿ ಅಲಾಯಿದ

ಚೇಳಿನ ಔಷಧಿ.—ಚೇಳು ಕಚ್ಚಿದ ಸ್ಥಳಕ್ಕೆ ಕೂಡಲೇ ಕೆಲವು ತೊಟ್ಟುಗಳನ್ನು ಬಿಟ್ಟರೆ ತಕ್ಷಣವೇ ಉರಿಯು ನಿಲ್ಲುವುದು ಪ್ರತಿ ಕುಟುಂಬದಲ್ಲಿಯೂ ಅವಶ್ಯಕವಾಗಿರಬೇಕಾದದ್ದು ಸೀಸೆ 1ಕ್ಕೆ 4 ಆಣೆ, ವಿ ಪಿ ಚಾರ್ಜು 6 ಸೀಸೆವರಿಗೂ 5 ಆಣೆ. 12 ಸೀಸೆಗಳನ್ನು ಒಂದಾವರ್ತಿ ತರಿಸಿಕೊಂಡರೆ ಬೆಲೆ ರೂ 1-8 ವಿ ಪಿ ಚಾರ್ಜು ಬೇರೆ.

ಮೇಹಹರಣತೈಲ.—ಇದನ್ನು ಬಿಳಿಬಟ್ಟೆಯಲ್ಲಿ ಹಚ್ಚಿ ರೋಗಗಳ ಮೇಲೆ ಹಾಕಿದರೆ, ಮೇಹದಿಂದುಂಟಾಗುವ ಕಂಠಮಾಲೆ ತೊಡಬಾಳೆ, ಗೆಡ್ಡೆಗಳು, ಕುಸುಮರೋಗ ವ್ರಣಗಳು, ಆಸನ ಪವುತ್ರಗಳು, ಲಿಂಗವ್ರಣ, ಯೋನಿವ್ರಣ, ಮುಂತಾದ ಸಕಲ ವ್ರಣಗಳು ಮತ್ತು ಗಾಯಗಳು ಅವುಗಳಲ್ಲಿ ಹುಟ್ಟುವ ಹುಳವನ್ನು ಕೊಂದು ಹುಣ್ಣನ್ನು ಆರಿಸಿ, ಚರ್ಮದಮೇಲಿನ ಹುರುಕನ್ನು ಸರಿಮಾಡಿ ಚೆನ್ನಾಗಿ ಬೆಳೆಯುವಂತೆ ಮಾಡುವದು ಸೀಸೆ 1ಕ್ಕೆ 8 ಆಣೆ, ವಿ. ಪಿ ಚಾರ್ಜು 3 ಸೀಸೆವರಿಗೂ 5 ಆಣೆ.

☞ ಈ ಪ್ರಾಂತ್ಯದಲ್ಲಿ ಕನ್ನಡ, ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವದಿಲ್ಲವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಿಳಿನಲ್ಲಾಗಲೀ ಸ್ಫುಟವಾಗಿ ತಿಳಿಯುವಂತೆ ಬರಿಯಬೇಕು.

MY ADDRESS.
P. SUBBA ROY,
Ayurvedic Pharmacy,
Sri Perumalkoil,
SANNATHY, TANJORE.

ನಮ್ಮ ವಿಳಾಸ:—
ಪಿ. ಸುಬ್ಬರಾಯಿ,
ಆಯುರ್ವೇದ ಔಷಧಶಾಲ,
ಶ್ರೀವೆಂಕಟೇಶ ಪೆರುಮಾಳ್ ದೇವಸ್ಥಾನ,
ಸನ್ನದಿ, ತಂಜಾವೂರು.

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶದಾಮವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಇಂತಹ ಕೇಶ ರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾವುದೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ



ಈ ತೈಲವನ್ನು ತೊಡೆದುಕೊಳ್ಳುತ್ತಲೇ, ಮಸ್ತಿಷ್ಕದ ಬೇನೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಬಿಗುಳಿ ಬಿದ್ದು ಹೋಗಲಾರವು, ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧ ವಾಸವೋ ಮದುರವೂ ಮೋಹಕವೂ ಆಗಿರುವುದು, ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳು ಮಾಡುವುದಕ್ಕಿಂತ ಒಂದೇಯೊಂದುಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ಪರೀಕ್ಷಿಸಿರಿ ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಒವ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳಕರ ಒಂದುಗಳ, ಒಸವನಗಲ್ಲಿ, ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ ಪಿ ದ್ವಾರಾ ರವಾನಿಸುವುದು.

ಸೀಸೆಯೊಂದರ ಕ್ರಯ ರೂ 1 0 0, ಅ ವೆ 0 4 0 ಬೇರೆ, 3 ಸೀಸೆಗಳ ಕ್ರಯ ರೂ. 2 10-0, ಅ. ವೆ. 0 7 0 ಬೇರೆ

ಸೂಚನೆ — ಅನೇಕ ದುರ್ವಿನೀತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬಿಕರಿಯಿಂದ ತಮಗೆ ಅಷ್ಟಲ್ಪ ಸಲಿಗೆಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು ಅಂಥಾ ಸಂದರ್ಭದಲ್ಲಿ ಮೋಸ ಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವಷ್ಟು ಮುತುವರ್ಜಿ ಮಾಡಿದರೆ ನೀವು ಕಂಪನಿಯ ಬೆಲೆಯಲ್ಲಿ ಸಿಲುಕಬೇಕಾದ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ

ಅತೀ ಮನೋಹರವಾದ ಸುರಭಿಯು!

ಒಟ್ಟೋ ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೊಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ಸೃಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೋ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ.

ಸಣ್ಣ ಸೀಸೆಯ ಬೆಲೆ ರೂ 0-8-0 ಒಂದು ಡ್ರಾಮಿನ (ಮೀಡಿಯಂ) ಸೀಸೆ 1ಕ್ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0 ಅಂಚೆಯ ವೆಚ್ಚ ಬೇರೆ 0-4-0. ಒಟ್ಟೋ ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12-0

ಅಮೇರಿಕದ ವಿಶಿಷ್ಟತೆ.

ಪ್ರೊಫೆಸರ್ ಜೇಮ್ಸರವರ "ಇಲೆಕ್ಟ್ರೋ ಟೋನಿಕ ಪರ್ಲ್ಸ್" ಅಥವಾ ವಿದ್ಯುಚ್ಛಕ್ತಿಯ ವಾಜೀಕರಣ ಮೌಕ್ತಿಕಗಳು.

ಇವು ಶಕ್ತಿಹೀನತೆಯಿಂದ ಉಂಟಾಗುವ ರೋಗಗಳನ್ನು, ನಿದ್ರಾನಾಶವನ್ನೂ, ಪಕ್ಷವಾತಗಳನ್ನೂ, ವಾತೋನ್ಮಾದವನ್ನೂ, ಅಪಸ್ಮಾರವನ್ನೂ ಧಾತು ದೌರ್ಬಲ್ಯವನ್ನೂ ನಾಶಮಾಡುತದೆ. ಕಳೆಗುಂದಿ ಬರುವ ಸ್ಮೃತಿಶಕ್ತಿಯನ್ನು ಉದ್ದೀಪಿಸುತ್ತವೆ. ಬುದ್ಧಿಯನ್ನು ಮತ್ತು ಮೆದುಳಿನ ಮೂಢತೆಯನ್ನು ಹೋಗಲಾಡಿಸುತ್ತವೆ; ಕಲಿಯುವದಕ್ಕೆ ಅಥವಾ ಕಾರ್ಯಗೈಯುವದಕ್ಕೆ ಬಿಡಲೊಲ್ಲದ ಅಶಕ್ತಿಯನ್ನು ಶಕ್ತಿರೂಪವಾಗಿ ಪರಿಣಮಿಸುವಂತೆ ಮಾಡುತ್ತವೆ. ಸರ್ವಾಂಗದಲ್ಲಿ ತೋರಿಬರುವ ಕ್ಷಾಮವೂ, ಅಕಾಲ ಕಾಲದಲ್ಲಿ ಸಂಭವಿಸುವ ಗ್ಲಾನಿಯೂ ಅತಿಶ್ರಮದಿಂದ ಮತ್ತು ದುರ್ವೃತ್ತಿಯಿಂದ ಉಂಟಾಗುವ ಕ್ಷೀಣಚೇತನೆಯೂ ಈ ಮುತ್ತುಗಳನ್ನು ಸೇವಿಸುವದರಿಂದ ಅಡಗಿಹೋಗುತ್ತವೆ. ಇವುಗಳಲ್ಲಿ ವೀರ್ಯದಾಯಿಗಳಾದ ಮತ್ತು ಮೆದುಳನ್ನು ಬೆಳೆಯಿಸಿ ವೃದ್ಧಿಗೈಯತಕ್ಕ ಪದಾರ್ಥಗಳಿರುವದರ ದೆಸೆಯಿಂದ ಇವು ವಿದ್ಯಾವ್ಯಾಸಂಗಿಗಳಿಗೂ, ಧರ್ಮೋಪದೇಶಕರಿಗೂ, ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಕೀಲರಿಗೂ ಗುಮಾಸ್ತರಿಗೂ, ಉಸ್ತಾದರಿಗೂ, ಪ್ರಾಯಿಕವಾಗಿ ಸಕಲ ಕಾರ್ಯಗಳಲ್ಲಿ ನಿರತರಾಗಿರುವ ಎಲ್ಲರಿಗೂ ಅಗತ್ಯವಾಗಿವೆ. ಶಾರೀರಿಕ ಪ್ರವೃತ್ತಿಯವರಿಗೆ ಮತ್ತು ಮಾನಸಿಕ ಪ್ರವೃತ್ತಿಯವರಿಗೆ ಒಂದೇ ತೆರನಾಗಿ ಅವಶ್ಯಕವಾಗಿರುತ್ತವೆ.

ವಾತಶೂಲದಲ್ಲಿ ಮತ್ತು ಮುಪ್ಪಿನಿಂದ ಉಂಟಾಗುವ ವೀರ್ಯಹೀನತೆಯಲ್ಲಿ ಈ ಮೌಕ್ತಿಕಗಳ ಗುಣವಾದರೋ ನಿಸ್ಸಂಶಯವು. ಇಂದ್ರಿಯಗಳ ಸುಖವೂ ಇವುಗಳ ಸೇವನೆಯಿಂದ ಕೂಡಲೇ ಲಭಿಸುತ್ತವೆ.

ರೋಗಜನ್ಯವಾದ ಸ್ನಾಯುವನ್ನು ಗುಣಮಾಡಿ, ರೋಗದಿಂದ ಅಳಿದ ದೇಹಭಾಗಗಳನ್ನು ಇವು ಮರಳಿ ರಚಿಸಗೈಯ್ಯುತ್ತವೆ. ರೋಗದಿಂದ ಮುರಿದು ಹೋದ ಅಥವಾ ಒಸವಳಿದು ಕುಂದಿದ ಅವಯವಗಳಿಗೆ ಇವು ಪುನಃ ಧಾತುಪುಷ್ಟಿಯನ್ನಿತ್ತು ಸಚೇತನಗೈಯುತ್ತವೆ. ಈ ಗುಳಿಗೆಗಳ ಅದ್ಭುತಕರವಾದ ಸುಫಲವು ಇವುಗಳನ್ನು ಸೇವಿಸುವದಕ್ಕೆ ತೊಡಗಿದ ದಿನದಿಂದಲೇ ಬೋಧೆಯಾಗುತ್ತದೆ. ಇವುಗಳನ್ನು ಸೇವಿಸಿದ ದಿನವೇ ನರಗಳಲ್ಲಿಯೂ ಬುದ್ಧಿಶಕ್ತಿಯಲ್ಲಿಯೂ ಚೇತನವು ತೋರುತ್ತಾ ದೇಹದಲ್ಲಿ ಧೈರ್ಯ, ಬಲ, ಸುಖ, ಇವುಗಳ ಸಂಚಾರವಾಗುತ್ತದೆ. ಜೀರ್ಣಶಕ್ತಿಯು ಉದ್ದೀಪಿತವಾಗಿ ಹಸಿವು ಆಶ್ಚರ್ಯಕರವಾಗಿ ಆರೋಗ್ಯಕಾಲದಲ್ಲಿ ತೋರಿಬರುವದಕ್ಕಿಂತ ಹೆಚ್ಚಾಗಿ ತೋರಿಬರುತ್ತದೆ. "ನಾಡಿಚಕ್ರ"ಯು ಕ್ರಮವನ್ನು ಅನುಸರಿಸುತ್ತದೆ; ಮುಖವು ಪುಷ್ಟವಾಗಿ ರಕ್ತಚಲನದ ಕುರುಹುಗಳನ್ನು ಸರಿಯಾಗಿ ತೋರ್ಪಡಿಸುತ್ತದೆ; ಕಣ್ಣುಗಳು ಉಜ್ವಲವಾಗಿ ದೃಷ್ಟಿಯು ಪ್ರಭೆಯನ್ನು ಹೊಂದಿ ಸೂಕ್ಷ್ಮವಾಗುತ್ತದೆ; ಗತಿಯು ದೃಢವಾಗುತ್ತದೆ ಶೀಲವು ಪ್ರಸನ್ನವಾಗುತ್ತದೆ; ಬುದ್ಧಿಯು ವಿಶೇಷವಾಗಿ ಅನಲಸವಾಗುತ್ತದೆ, ಸ್ಮೃತಿಶಕ್ತಿಯು ಗ್ರಾಹಿಯಾಗುತ್ತದೆ; ಮತ್ತು ದೇಹದ ಪುಷ್ಟಿಯು ವೃದ್ಧಿಯಾಗಿ ಶಕ್ತಿಯು ದಿನೇ ದಿನೇ ಮುಂಚಿನಂತೆಯೇ ತುಂಬಿಬರುತ್ತದೆ.

25 ಗುಳಿಗೆಗಳ ಸೀಸೆ 1ಕ್ಕೆ ಬೆಲೆ ರೂ. 1-4-0. 40 ಗುಳಿಗೆಗಳಿರುವ ಸೀಸೆ 1ಕ್ಕೆ ರೂ. 2-0-0 ಟಪ್ಪಾಲ್ ಖರ್ಚು ಸೀಸೆ ಒಂದಕ್ಕೆ ಆಣೆ 4.

ನಾವು ಕೇಳಿಕೊಳ್ಳದೆ ನಮಗೆ ಹಲವು ಮಹನೀಯರು ಬರೆದ ಪ್ರಮಾಣಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು.

ದಿವಾಕರ ಕೃಷ್ಣಾಜಿ ಧಾಹರೀ, ರಾ. ಪಾರಸಾವಣೀ, ತಾ, ರಾಮಟೇಕ, ಜಿ. ನಾಗಪುರ.—"ತಾವು ನಮಗೆ ಕೆಲವು ಸಮಯದ ಹಿಂದೆ ಕಳುಹಿಸಿದ "ಶಕ್ತಿವರ್ಧಕ" ಗುಟಿಕೆಗಳಿಂದ ನಮಗೆ ಉತ್ತಮವಾದ ಆರೋಗ್ಯಲಾಭವು ದೊರಕಿರುತ್ತದೆ, ಅವುಗಳ ಇನ್ನೊಂದು ಬಾಟಲಿಯನ್ನು ಕಳುಹಿಸಿಕೊಡಿರಿ.

2 ತುಕಾರಾಮ ಸೂರಾಮ, ಕೇಶಿಯರ್, ಬಂಗಾಲ ನಾಗಪುರ ರೈಲ್ವೆ, ಗೋರಖಪುರ—ನಾನು ತಮ್ಮಿಂದ ಪ್ರೊ. ಜೇಮ್ಸರ "ವಿದ್ಯುತ್ ಶಕ್ತಿವರ್ಧಕ" ಗುಟಿಕೆಗಳ ಮೂರು ಕುಪ್ಪಿಗಳನ್ನು ತರಿಸಿಕೊಂಡಿದ್ದೆನು. ಅವುಗಳಿಂದ ನಾನು ಪುಷ್ಕಳವಾದ ಸೌಖ್ಯಲಾಭ ಹೊಂದಿರುವೆನು; ಆದ್ದರಿಂದ ಇನ್ನು ಮೂರು ಕುಪ್ಪಿಗಳನ್ನು ಕಳುಹಿಸಿಕೊಡಿರಿ"

3 ಅಮೀರ್ ವಲ್ಲದ ಮುಹಮ್ಮದ ಭಾಯಿ ಇಬ್ರಾಹಿಮ್ [illegible], ಸನವೇಲ್—"ತಾವು ಕಳುಹಿಸಿದ ಪ್ರೊ ಜೇಮ್ಸರ ಗುಟಿಕೆಗಳಿಂದ ನನಗೆ ಆಶ್ಚರ್ಯಕಾರಕವಾದ ಗುಣವು ದೊರಕಿದೆ. ಅ[illegible] [illegible]"

4 ಎ. ಆರ್. ಚಾಕ್ಕೊ, ಡಿಸ್ಟ್ರಿಕ್ಟ ಕೋರ್ಟ ವಕೀಲ, ಕೊಟ್ಟಯಮ್, ತ್ರಾವಣಕೋರ್ ರಾಜ್ಯ—ಪ್ರೊ. ಜೇಮ್ಸರ ಗುಟಿಕೆಗಳ ಸೀಸೆಯೊಂದನ್ನು ತಮ್ಮಿಂದ ತರಿಸಿಕೊಂಡೆನಷ್ಟೇ. ಅವುಗಳನ್ನು ಉಪಯೋಗಿಸಿ ನಾನು ಒಳ್ಳೇ ಲಾಭವನ್ನು ಪಡೆದೆನು ಇನ್ನೆರಡು ಸೀಸೆಗಳನ್ನು ಕಳುಹಿಸುವುದು.

5 ಮಾನಜೀ ನರಸಿಂಗರಾವ್, ಸಂಸ್ಥಾನ ಪಲಟನ.—ಪ್ರೊ. ಜೇಮ್ಸರ ಗುಟಿಕೆಗಳಿಂದ ನಾನು ಹೆಚ್ಚಾದ ಗುಣವನ್ನು ಹೊಂದಿರುವದರಿಂದ, ಅವುಗಳ ಇನ್ನೆರಡು ಸೀಸೆಗಳನ್ನು ರವಾನಿಸಿರಿ.

THE ANGLO-INDIAN DRUG & CHEMICAL COMPANY, 16 MARKET BOMBAY 2.

ಪ್ರಧಾನ ಏಜಂಟರು: **ದಿ ಊಲನ್ ಮಾರ್ಟ್, ಮಂಗಳೂರು ದ. ಕನ್ನಡಾ.**

Printed & Published by V. S. Kamath at the Mangalore Trading Association's Sharada Press, Mangalore

Registered No. M. 498

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಕಂದಾನಿರ್ಣಯ:—ವರುಷ ೧ಕ್ಕೆ ರೂ. 1—4—0. ಟಪ್ಪಾಲು ಹಾಸಲು ಸೇರಿ ರೂ 2—1—0.

ಪುಸ್ತಕ IX — ಮಂಗಳೂರು ತಾ. 9ನೇ ಜುಲೈ ಶುಕ್ರವಾರ 1915. — ಸಂಚಿಕೆ 28

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೆಶಿಂತಾನ್.

(ರಜಿಸ್ಟರ್ಡ್)

ಇದನ್ನು ಸರ್ವದಾ ಉಪಯೋಗಿಸಿ, ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವದು. ಈ ಸೆಶಿಂತಾನದ ಸೇವನೆಯಿಂದುಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

1. ಇದು ಶಕ್ತಿಯನು ವೃದ್ಧಿ ಪಡಿಸುವುದಲ್ಲದೆ ತಲೆಯನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು.

2. ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವದು. ಮತ್ತು ಮೆದುಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು.

3. ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತ ಬಂದಲ್ಲಿ ತಿಂದನ್ನವು ಜೀರ್ಣವಾಗುವದಲ್ಲದೆ, ಕಾಲಪ್ರವೃತ್ತಿಯು ಕ್ರಮವಾಗಿ ಆಗುತ್ತದೆ; ಯಾವರೋಗಕ್ಕೂ ಅಸ್ಪದವುಂಟಾಗುವುದಿಲ್ಲವು.

4. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು.

5. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ ಎಲ್ಲ ಉದ್ಯೋಗದ ದೊಡ್ಡ ಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವವು.

6. ಬೇಸಿಗೆ ಮತ್ತು ಚಳಿಗಾಲಗಳಲ್ಲಿ ಎಲ್ಲ ತರದ ರೋಗವನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು.

7. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು.

ಅದುಕಾರಣ ಇಂತಹ ಗುಣಕಾರಿಯಾದ ಸೆಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ.

45 ಮಾತ್ರೆಗಳ ಪೊಟ್ಟಣ 1ಕ್ಕೆ	0—2—0	200 ಮಾತ್ರೆಗಳ ಪೊಟ್ಟ 1ಕ್ಕೆ	0—7—0	80 ಮಾತ್ರೆಗಳ ಟಿನ್ 1ಕ್ಕೆ	0—4—0	550 ಮಾತ್ರೆಗಳ ಮರದಪೆಟ್ಟಿಗೆ 1ಕ್ಕೆ	1—0—0
95 ,, ,,	0—4—0	200 ,, ಟಿನ್ ,,	0—9—0	100 ,, ಶೀಸೆ ,,	0—4—6	1200 ,, ,, ,,	2—0—0

1 ರೂಪಾಯಿಗೆ ಕಡಿಮೆಯಾಗಿ ವಿ. ಪಿ. ಮೂಲಕ ಕಳುಹಿಸಲ್ಪಡುವುದಿಲ್ಲವು. ಮತ್ತು ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

☞ ಭರತಖಂಡ, ಬರ್ಮ, ಮತ್ತು ಸಿಲೋನ್ ಈ ಪ್ರಾಂತ್ಯಗಳ ಎಲ್ಲಾ ಭಾಗದಲ್ಲೂ ಏಜಂಟರು ಬೇಕಾಗಿದೆ.

ಸೋಲ್ ಏಜಂಟ್ಸ್:—ಸೆಶಿಂತಾನ್ ಡಿಪೋ,

ಪ್ರಿನ್ಸೆಸ್ ಸ್ಟ್ರೀಟ್ ಬೊಂಬಾಯಿ ನಂ. 2.

ಯಂ. ಯಸ್. ರಾವ್ ಕಂಪೆನಿ.,

ಬುಕ್‌ಸೆಲರ್ಸ್, ಸ್ಟೇಷನರ್ಸ್ ಮತ್ತು ಕಮಿಷನ್ ಏಜಂಟ್ಸ್,

ಅವೆನ್ಯೂ ರೋಡ್, ಬೆಂಗಳೂರು ಸಿಟಿ.

M. S. RAO & CO.,

BOOK-SELLERS ETC.

AVENUE ROAD, BANGALORE CITY.

ಈವರಿವಿಗೆ ಇದ್ದ ಯಂ. ಸುಬ್ಬರಾವ್ ಬ್ರದರ್ಸ್, ಶಂಕರಪುರಂ, ಬೆಂಗಳೂರು ಸಿಟಿ— ಎಂಬ ವಿಳಾಸವನ್ನು ಮೇಲ್ಕಂಡಂತೆ ಬದಲಾಯಿಸಿದ್ದೇವೆ.

ನಮ್ಮಲ್ಲಿ ಎಲ್ಲಾ ವಿಧವಾದ ಕನ್ನಡ ಕಥೆಗಳೂ, ಬಿ. ವೆಂಕಟಾಚಾರ್ಯರಿಂದ ರಚಿತವಾದ ನಾವೆಲ್ಸುಗಳೂ, ಗವರ್ನಮೆಂಟ ಸ್ಕೂಲು ಪುಸ್ತಕಗಳೂ ದೊರೆಯುತ್ತವೆ. ಪುಸ್ತದಪಟ್ಟಿ ಹೊಸದಾಗಿ ಪ್ರಿಂಟಾಗಿದೆ. ಉಚಿತ.

M. S. RAO & Co.,

Please note:—We have changed our address from—M. Subba Rao Bros, Book-Sellers, Shankarapur, Bangalore City to—

M. S. RAO & Co.,

Book-Sellers, Stationers & Commission Agents,

AVENUE ROAD, BANGALORE CITY.

ESTABLISHED JULY 1906.

THE CANARA BANK, LIMITED, MANGALORE.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

೧೯೦೬ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs	300,000—0—0
Issued Capital	225,000—0—0
Subscribed Capital	218,800—0—0
Paid up Capital	193,800—0—0
Deposits	422,697-11—9
Reserve Fund	33,500—0—0

Besides the uncalled capital of Rs. 25,000/- 25% of the net profits are added annually to the Reserve Fund. Rs. 21,685/ have been invested in Government Paper of the face value of Rs.22,500/-

Dividends of not less than 6% paid during the past years and a bonus of 1% to 2% paid in addition during the last three years.

Fixed Deposits of Rs 50/ and above in multiples of Rs. 5/ received for 3, 6, 12 and 24 months @ 4, 4½, 5 and 5½% respectively at the discretion of the managing committee

Short-notice Deposits requiring one weeks notice of withdrawal after one month received @ 2½% per annum at the discretion of the managing committee

Current Deposit Account opened free of charge.

Savings Bank Account opened for any sum not less than 4 As and multiples thereof and interest paid @ 4½%.

Loans granted on proper securities and pledges

Sealed Parcels for safe custody received on a moderate charge.

Canara Bank Ltd ,
Mangalore, 1st June 1915.

ನಿಯಮಿತ ಮೂಲ ಧನವು ರೂಪಾಯಿ	300,000—0—0
ಹುಟ್ಟಿಬಂದ ಮೂಲ ಧನವು "	225,000—0—0
ಪ್ರತಿಜ್ಞಾತ ಮೂಲ ಧನವು "	218,800—0—0
ಆಗತ ಮೂಲ ಧನವು "	193,800—0—0
ರೇವಣಾತಿಯಾಗಿ ಕೊಡೋಣಾದ ಮೊಬಲಗುಗಳು ...	422,697-11 9
ರಕ್ಷಿತ ಧನವು	33,500—0—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡವುದಲ್ಲದೆ ಹಿಸೆ ಮಾಲ್ಕರಿಗಳಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ 21,685—0—0 ಸರಕಾರದ ರೂ. 22,500ರದ ಭದ್ರತಾಪತ್ರಗಳಲ್ಲಿ ರೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲು ಮಾಲಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ರೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ರೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಇಲ್ತಿ ರೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ರೇವಣಾತಿ ಇಡೋಣಾವೀತು. ಈ ರೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ

ಮೊಹರು ಹಾಕಲ್ಪಟ್ಟ ಡಬ್ಬಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

P. Gopal Naik,
Secretary.

ಜಯವಿಜಯ

ಅಥವಾ

ತೂಗಾಡುವ ಅಸ್ಥಿಪಂಜರ.

ಗುಜರಾಥಿ ಭಾಷೆಯಿಂದ ಕನ್ನಡದಲ್ಲಿ ಹೊಸತಾಗಿ ಭಾಷಾಂತರವಾದದು,

ಈ ಗ್ರಂಥದ ಕುರಿತು "ಸತ್ಯದೀಪಿಕೆ" ಎಂಬ ವಾರಪತ್ರಿಕೆಯು ಪಡುವ ಅಭಿಪ್ರಾಯ.—"ಇದು ಬಹಳ ರಸಿಕವಾದ ಆಶ್ಚರ್ಯವುಳ್ಳ ಒಂದು ಕಥೆಯಾಗಿದೆ. ಅದನ್ನು ಓದತೊಡಗಿದವರಿಗೆ ಅದನ್ನು ತೀರಿಸುವ ತನಕ ವಿಶ್ರಾಂತಿ ದೊರಕದು. ದೇಶಸ್ಥರು ಸಹಾ ವಿಲಾಯತಿ ಕಾದಂಬರಿಗಳಂತೆ ಚೆಲೋ ಕಥೆಗಳನ್ನು ಬರೆಯಬಲ್ಲರೆಂದು ಇದರಿಂದ ಪ್ರಕಟವಾಗುತ್ತದೆ ಇದರ ಸಾರಾಂಶವೂ ನೀತಿಯೂ ಕೂಡಾ ಘನವಾದದ್ದು ನೀತಿವಂತರು ಅನೇಕಸಾರಿ ಶ್ರಮಪಡುವಾಗ ದುಷ್ಟರು ಕೆಲವು ಸಮಯ ಮೆರೆಯುವರೆಂದೂ ಆದರೆ ದುಷ್ಟರ ದುಷ್ಟತನವು ಬೈಲಾಗಿ ಅವರು ತಮ್ಮ ದುಷ್ಟತನಕ್ಕೆ ತಕ್ಕ ಪ್ರತಿಫಲವನ್ನು ಹೊಂದುವಾಗ ನೀತಿಯು ಕಡೆಗೆ ಜಯಿಸಿ ಬಾಳುವದೆಂದೂ ಈ ಕಥೆಯ ಕವಿಯು ತೋರಿಸುವನು ಇದಲ್ಲದೆ ಈ ಕಥೆಯ ಶೂರರಲ್ಲಿ ಒಬ್ಬಳಾದ ಜಯೆಯಲ್ಲಿ ಪತಿವ್ರತಾ ಧರ್ಮವೂ ಇತರರಲ್ಲಿ ಬೇರೆ ಸದ್ಗುಣಗಳೂ ಹೊಳೆಯುವವು. ಕರ್ನಾಟಕ ಬಲ್ಲವರೆಲ್ಲರೂ ಈ ಕಥೆಯನ್ನು ಓದಿಕೊಂಡು ಈ ಕಥೆಯ ನೀತಿಯಿಂದ ಲಾಭವನ್ನು ಪಡೆದಾರೆಂತ ನಂಬುತ್ತೇವೆ." ಇತ್ಯಾದಿ. ಪುಸ್ತಕದ ಕ್ರಯ 0—12—0. ವಿ. ಪಿ. ಬೇರೆ.

ವಿಳಾಸ:—

V. C. Amin,
C/o E. A. Goll Esq.
Sirdar Palace, Apollo Street,
BOMBAY.

ರೂ 501 ಉಚಿತ!

ಬಲೂನ್ ಬ್ರೇಂಡ್ ಸಾಬೂನ್.

5 ನಿಮಿಷದೊಳಗೆ ಕೂದಲನ್ನು ಉದುರಿಸಿಬಿಡುವದಿಲ್ಲವೆಂಬದನ್ನು ಖಚಿತಪಡಿಸುವವರಿಗೆ ರೂ 501 ಉಚಿತವಾಗಿ ಕೊಡೋಣಾಗುವದು. ಇದರಿಂದ ಚರ್ಮವು ಕೆಡದು. 3 ಸಾಬೂನುಗಳುಳ್ಳ ಪೆಟ್ಟಿಗೆ 1ಕ್ಕೆ 0—12—0; 2 ಪೆಟ್ಟಿಗೆಗಳವರೆಗೆ ವಿ. ಪಿ ಚಾರ್ಜು 0—5—0.

ರೂ. 2500 ಉಚಿತ!

ಸಿರಾಜಿ ಹೇರ್ ಡೈ ಎಂಬ ಕೇಶತೈಲವು ಬಿಳೀ ಮತ್ತು ನರೆತ ಕೂದಲನ್ನು ಕಪು ಮಾಡುವದಿಲ್ಲವೆಂದು ತೋರಿಸುವವರಿಗೆ ರೂ. 2500 ಉಚಿತ.

ಈ ತೈಲವನ್ನು ಏನೊಂದು ಬಾಧಕಬಾರದಂತೆ ಅತಿ ನಿಪುಣತೆಯಿಂದ ತಯಾರು ಮಾಡಿರುತ್ತದೆ. ಇದರಿಂದ ಚರ್ಮದಲ್ಲಿ ಕಲೆಯಾಗದು. ಪೆಟ್ಟಿಗೆ 1ಕ್ಕೆ ರೂಪಾಯಿ 1—0—0; ವಿ. ಪಿ. ಬೇರೆ

ವಿಳಾಸ:— ಎಫ್. ಎಲ್. ದವಾವಾಲಾ,
ಮಿರ್ಜ ಸ್ಟ್ರೀಟ್, ಮುಂಬಾಯಿ.

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡಿಸಬೇಕಾಗಿದೆ.

F. L. Davawala,
Mirza Street, BOMBAY.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾವಂಜ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳ ೮ ಪಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ ೧೦ ಆಣೆ

೨ ಪ್ರಮೇಹರಿಪು ಬಿಂದು ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಚಿತವಾಗಿ ಗುಣ ಕೊಡುವದು ಬಾಟ್ಲಿಗೆ ೨-೮-೦

೩. ಶಂಕಚೇರಳ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೫. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು ತೊಲೆಗೆ ೨ ರೂ.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ಪರಿಸೆಯ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುಲ್ಮಶ್ವಾಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦ ಶಾಲ್ಮಲೀ ಪಾಕ ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ

೧೧. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ ೩ ಬಾಟ್ಲಿಗೆ ೧ ರೂ. ೬ ಆಣೆ

೧೨. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು ಉರಿಯುವದಿಲ್ಲ ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೩ ನವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುವಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು ವಿದ್ಯಾರ್ಥಿಗಳಿಗೆ ಅತ್ಯುತ್ತಮವು ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ-ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು

ನಮ್ಮ ವಿಳಾಸ:—ಬಿ ಎಮ್. ನಾಥ್ ಮತ್ತು ಕಂಪೆನಿ,

ವೆಪರಿ ಪೋಸ್ಟು ಮದರಾಸು.

B. M Nath & Co, *Ayurvedic Chemists,*

Vepery Post, MADRAS.

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.

ಬಲ್ಕುತ ಮಿಶ್ಯನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಯನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಬೆಬ್ಬ ಎಂಬ ಗುರುಸು ಕಲ್ಲು ಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ಧೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ನಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ,

ಹಂಪನ್‌ಕಟ್ಟ, ಮಂಗಳೂರು

ಯುನಿವರ್ಸೆಲ್ ಎಸ್ಯುರೆನ್ಸ್ ಕೊ, ಲಿಮಿಟೆಡ್.

ಹೆಡ್ ಆಫೀಸು —191, ಬೌ ಬಜಾರ, ಕಲ್ಕತ್ತಾ.

ಸರಕಾರದ ಭದ್ರತೆಯ ಮೇಲ್ವಿಚಾರದಲ್ಲಿ ನಡಿಯುತ್ತಿರುವುದು.

ಭಂಡವಾಳ ರೂ 10,00,000.

ಈ ತನಕ ಕೊಡೋಣಾದ ವಿಮೆ ಹಕ್ಕುಗಳ ಮೊಬಲಗು ಶುಮಾರು 8,00,000.

ಫಂಡು—ರೂ 3,00,000ಕ್ಕೆ ಮಿಕ್ಕಿದೆ.

ಸರಕಾರದವರ ಬದ್ರತೆಯಲ್ಲಿ ರೂ. 50,000ವಿರುವುದು

ಚೀಫ್ ಇನ್ಸೂರೆನ್ಸ್ ಸ್ಕೀಮ್ ಎಂಬ ವೈದ್ಯಪರೀಕ್ಷೆ ಇಲ್ಲದೆ ವಿಮೆ ಉತ್ತರಾಯಿಸಿಕೊಳ್ಳಬಹುದಾದ ಸರ್ವರಿಗೂ ಸಾಧ್ಯವಾದ ಶುಲಭ ಕ್ರಮ

ಈ ಪ್ರಾಂತ್ಯಗಳಲ್ಲಿ ಯಾವ ವಿಮೆ ಕಂಪೆನಿಗಳಲ್ಲಾದರೂ ಈತನಕ ಇಂಥಾ ಅಗ್ಗದರಗಳ ವಿಮೆ ಉತ್ತರಾಯಿಸುವ ಏರ್ಪಾಡೇ ಇರುವದಿಲ್ಲ ಭಾರತೀಯರಲ್ಲಿ ವಿಶೇಷವಾಗಿರುವ ಬಡವರಗೋಸ್ಕರವೇ ಈ ಕ್ರಮವು ಏರ್ಪಡಿಸಲ್ಪಟ್ಟಿರುತ್ತದೆ ಪ್ರೊವಿಡೆಂಟ ಫಂಡುಗಳ ಕ್ರಮದ ಪ್ರಕಾರ ಮುಂದಕ್ಕೆ ಸಂಭವಿಸಬಹುದಾದ ಅನನುಕೂಲತೆಗಳು ಇದರಲ್ಲಿರವು ವಿಮೆ ಉತ್ತರಾಯಿಸಿಕೊಳ್ಳುವ ಈ ನವೀನ ಅಗ್ಗ ದರಗಳ ಏರ್ಪಾಡು ಬಹಳ ಉಪಯುಕ್ತವಾದದ್ದು ಎಂತ ವಿಮೆ ಸಂಘಗಳ ವಿಶೇಷ ಮಾಹಿತಿದಾರರ ಅಭಿಪ್ರಾಯವಿರುವುದು. ನಿಶ್ಚಿತವಾದ ವಿಮೆ ಮೊಬಲಗುಗಳ ರೂಪಾಯಿ ಮತ್ತು ಅರ್ಧ ರೂಪಾಯಿಗಳ ಪೊಲಿಸಿಗಳು ಈ ಕ್ರಮದ ಮೇರೆಗೆ ಕೊಡೋಣಾಗುವವು

ಸಾಮಾನ್ಯ ವಿಮೆ ಇಲಾಖೆ.

ಈ ಕಂಪೆನಿಯ ಈ ಇಲಾಖೆಯಲ್ಲಿ ವಿಮೆ ಉತ್ತರಾಯಿಸಿಕೊಳ್ಳುವವರ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಲಿರುವುದು. ಸಾಧ್ಯವಿರುವ ಅತ್ಯಂತ ಕಡಮೆಯ ದರಗಳು ಸಂಪೂರ್ಣವಾದ ಭದ್ರತೆಯು ಈ ಇಲಾಖೆಯ ವಿಶೇಷ ಪ್ರಯೋಜನಗಳಾಗಿರುವುದು. ಕಂಪೆನಿಯ ಲೆಕ್ಕದ ಸ್ಥಿತಿಗತಿಯನ್ನು ತೋರಿಸುವ ಮೊಖಾಬಿಲೆ ಪಟ್ಟಿಗಳನ್ನು ಈ ಕಂಪೆನಿಯ ವಿಷಯ ಪತ್ರಗಳ ಅಭಿಪ್ರಾಯವೇನೆಂಬುದನ್ನೂ ತರಿಸಿ ನೋಡಿರಿ.

ಒಳ್ಳೇ ಚಟುವಟಿಕೆಯ ಜಾಣರಾದ ಏಜಂಟರುಗಳು ಬೇಕಾಗಿರುವರು. ಶರ್ತಗಳ ಬಗ್ಗೆ ಕೆಳಗಣ ವಿಳಾಸಕ್ಕೆ ಬರಕೊಳ್ಳಬಹುದು.

ವಿಳಾಸ:— ಲಕ್ಷ್ಮಣ ರಾವ್ ಬ್ರದರ್ಸ್,

ಚೀಫ್ ಏಜಂಟ್ಸ್, ಕೊಡಿಯಾಲ, ಪ್ರಾಂತ್ಯಗಳಿಗೂ; ...ಇವರಿಗೆ ಬರೆಯಬೇಕು.

ನೇಟಿವ್ ಡಾಕ್ಟರ್ಸ್ ಮೂಲ್ಕಿ ಗಣಪಯ್ಯ ಎಂಡ್ ಸನ್ಸ್‌ರವರ

ಔಷಧಗಳು.

ಮಹಾಮದನ ಕಾಮೇಶ್ವರೀ ಲೇಹ್ಯ:—ಬಹಳ ಶ್ರಮಪಟ್ಟು ಕೆಲಸ ಮಾಡುವವರೂ, ಲೇಖಕರೂ, ಮತ್ತು ಇಂದ್ರಿಯ ದೌರ್ಬಲ್ಯ ಅಜೀರ್ಣ, ಎದೆನೋವು, ಶರೀರಗಳ ಮಳಿತದಿಂದಾದ ನಿಶ್ಶಕ್ತಿ ಮೊದಲಾದ ಪ್ರಕೃತಿಯವರೂ ಇದನ್ನು ಸೇವಿಸಿದ್ದಲ್ಲಿ ಧಾತುಪುಷ್ಟಿಯಾಗಿ ಮುಖವು ಕಾಂತಿಗೊಳಿಸುವದು ಸೇವನಾ ಕ್ರಮ— ಅಭ್ಯಾಸವುಳ್ಳವರು 1 ನಾನಲಿ ತೂಕ ಯಾ ಗೋಲಗಾತ್ರ ಅಭ್ಯಾಸಿಸುವವರು 2 ಆಣೆ ತೂಕ ರಾತ್ರಿ ಊಟದ ಮೇಲೆ ಸೇವಿಸಿ ಹಾಲು ಕುಡಿಯತಕ್ಕದ್ದು

1 ಶೇರಿನ ಡಬಿಗೆ ಕ್ರಯ 2—0—0

ಚಂದ್ರೋದಯಾವರ್ತಿ:—ಕಣ್ಣಿಗೆ ಅಂಜನ ಮಾಡಿದ್ದಲ್ಲಿ ಬೆಳೆದ ದುರ್ಮಾಂಸ, ತಿಮಿರ, 3 ವರ್ಷದ ಹೂವು, ಇರಳುಕಣ್ಣು, ತಾಚಯಿಂದು ಗುಣ

ಕ್ರಯ ರೂ 0—12—0

ಮಹಾಜ್ವರಾಂಕುಶ: ದಿವಸಕ್ಕೊಮ್ಮೆ ದ್ವಿತೀಯ, ತೃತೀಯ, ಚಾತುರ್ಥಿಕ ಜ್ವರಗಳ ಮೇಲೆ ರಾಮಬಾಣ ಡಜನ್ ಕ್ರಯ 0—8—0,

ಮೇಹಮುದ್ಗರವಟಿ:—20 ನಮೂನೆಯ ಪ್ರಮೇಹ, ಧಾತು ಗತಜ್ವರ ಮೂತ್ರಕೃಚ್ಛ್ರ, ಅಶ್ಮರಿ, ಕಾಮಲ, ಪಾಂಡು ಗುಣ ಡಜನ್ 10 ಕ್ರಯ 1—2—0

ಕೋಲೆರಾ ಯಾನೆ ವಾಂತಿಭೇದಿ ಗುಟಿಕೆ:—ಒಂದೆರಡು ಗುಟಿಕೆಯಿಂದ ವಾಂತಿಭೇದಿ ಕೂಡಲೇ ಗುಣ ಡಜನ್ ಗುಟಿಕೆಯ ಕ್ರಯ 0—12—0

ಚಂದನಾಸವ:—ಮೇಹ, ಶುಕ್ಲಧಾತ ನಷ್ಟತ್ವ ಗುಣ ಬಾಟ್ಲಿಗೆ ರೂ 1

ನಮ್ಮ ಔಷಧಾಲಯದಲ್ಲಿ ಅನೇಕ ವಿಧದ ಬೇರೆ ಔಷಧಗಳು ದೊರೆಯುತ್ತವೆ ಅಪೇಕ್ಷೆಯುಳ್ಳವರು ಕೆಟಲಾಗು ತರಿಸಿಕೊಳ್ಳಬಹುದು ಮೇಲಿನ ಔಷಧಗಳು ಬಹಳವಾಗಿ ಖರ್ಚಾಗುವದರಿಂದ ಕ್ರಯವನ್ನು ಕಡಿಮೆ ಮಾಡಿರುತ್ತದೆ

ವಿಳಾಸ — ಮೂಲ್ಕಿ ಗಣಪಯ್ಯ ಎಂಡ್ ಸನ್ಸ್,

ನೇಟಿವ್ ಡಾಕ್ಟರ್ಸ್,

ತೇರವೀದಿ ಮನೆ ನಂಬ್ರ 268ನೇ, ಮಂಗಳೂರು

ಹೊಸ ಹೊಸ ವಿಷಯಗಳು.

೧. ಶ್ರೀ ಭಗವದ್ಗೀತಾ ಸರ್ವರಿಗೂ ಅನುಕೂಲಿಸುವಂತೆ ಪ್ರತ್ಯೇಕ ಪ್ರತ್ಯೇಕವಾಗಿ ಪಾರಾಯಣ ಮಾಡುವವರಿಗೂ ಕಥಾರೂಪದಲ್ಲಿ ಓದುವವರಿಗೂ ಉಪಯೋಗವಾಗುವ ರೀತಿಯಲ್ಲಿ ಬಾಲಬೋಧಿನಿ ಎಂಬ ಅನ್ವರ್ಥ ನಾಮವುಳ್ಳ ಟೀಕಾ ತಾತ್ಪರ್ಯ ಸಹಿತವಾದ ಉತ್ತಮ ಪ್ರತಿ ಬೆಲೆ ೬—೦—೦

೨. ವಿಷ್ಣುಪುರಾಣ ವ್ಯಾಸ ಪ್ರಣೀತವಾದ ಈ ಮಹಾ ಪುರಾಣದ ಪ್ರಥಮಾಂಶವು ಸಮೂಲವಾಗಿ ಕನ್ನಡಿಸಲ್ಪಟ್ಟಿರುವುದು (ಸಕಲ ವಿಷಯ ಗರ್ಭಿತ) ೩—೮—೦

೩ ಶ್ರೀ ಶಂಕರ ವಿಜಯ ಪ್ರತಿಯೊಂದು ಕುಟುಂಬದಲ್ಲಿಯೂ ಓದಿ ಕೃತಕೃತ್ಯರಾಗಬೇಕಾದ ಗ್ರಂಥ ಲೋಕೋದ್ಧಾರಮಾಡಿದ ಶ್ರೀಮಚ್ಛಂಕರ ಚರಿತ್ರೆಯಾಗಿರುವದರಿಂದ ಹೆಚ್ಚಿಗೆ ಹೇಳಿ ಯಾರು ತಾನೇ ಸಮರ್ಥರು? ಪ್ರತಿಪದ ಟೀಕಾ ತಾತ್ಪರ್ಯವೂ ಟಿಪ್ಪಣಿಗಳೂ ಸಹಾ ಬಹಳ ವಿಶದವಾಗಿ ಪ್ರಕಟಿಸಿರುವುದು ಪ್ರಥಮ ಸಂಪುಟದ ಬೆಲೆ ೬—೦—೦

೪ ರಘುವಂಶ ಮಹಾಕಾವ್ಯ ಪ್ರತಿ ಶ್ಲೋಕಕ್ಕೂ ಪದವಿಭಾಗ ಶಬ್ದಸಮಾಸ ಆಕಾಂಕ್ಷೆ ವಿಶದ ಟೀಕಾ ತಾತ್ಪರ್ಯ ಸಹಿತ ಸಂಸ್ಕೃತಾಭ್ಯಾಸಿಗಳಿಗೆ ಉಪಯೋಗವಾದ ಪ್ರತಿ ೧ನೇ ಸರ್ಗ ರೂ ೧—೦—೦ ೨ನೇ ಸರ್ಗ ರೂ ೧—೦—೦

೫ ಇದರಂತೆಯೇ ಇರುವ ಕಿರಾತಾರ್ಜುನೀಯ ೧ನೇ ಸರ್ಗ ೦ ೮-೦

೬. ವಿವೇಕಚೂಡಾಮಣಿ (ಶ್ರೀಮಚ್ಛಂಕರಾಚಾರ್ಯ ಕೃತ ವೇದಾಂತ ಗ್ರಂಥ) ಪ್ರತಿಪದ ಟೀಕಾ ತಾತ್ಪರ್ಯ ಸಹಿತ ರೂ ೨—೪—೦

೭ ಋಗ್ವೇದ ನಿತ್ಯಕರ್ಮ ಪ್ರಾತರ್ಮಾಧ್ಯಾಹ್ನಿಕ ಸಾಯಂಸಂಧ್ಯಾ ದೇವತಾರ್ಚನೆ, ಬ್ರಹ್ಮಯಜ್ಞ, ಮಂತ್ರಪುಷ್ಪ, ದೇವತಾಸ್ತೋತ್ರಗಳು, ತರ್ಪಣವಿಧಿ ಆದಿಯಾಗಿ ೫೦ ವಿಧಗಳೊಂದಿಗೆ ಇರುವ ಪ್ರತಿ. ೦—೪—೦

೮ ಇದರಂತೆ ಇರುವ ಯಜುರ್ವೇದ ನಿತ್ಯಕರ್ಮ ೦—೪—೦

ವಿದ್ಯಾನಂದ ಮಾಸಪತ್ರಿಕೆ ವಾರ್ಷಿಕ ಚಂದಾಹಾಸಲು ಸೇರಿ ೨—೪—೦

ಮಾದರಿ ಪತ್ರಿಕೆ, ಕ್ಯಾಟಲಾಗ್ (ಪುಸ್ತಕಪಟ್ಟಿ) ಉಚಿತವಾಗಿ ಪಡೆಯಬಹುದು

ಬಾಣವಾಡಿ ಆದಿನಾರಾಯಣಶಾಸ್ತ್ರೀ,

ವಿದ್ಯಾನಂದ ಆಫೀಸ್,

ಶಂಕರಪುರ, ಬೆಂಗಳೂರು ಸಿಟಿ

ಹುಳಬಿದ್ದ ಹುಣ್ಣುಗಳು.

ಪಡುಬಿದ್ರಿ ಕಾಡಿಪಟ್ಣ ಮೊಗೇರ ಕೀವು ಹೆಂಗಸು ಬರಿಯುವದು —ನನಗೆ ಸುಮಾರು ಆರು ವರ್ಷಗಳಿಂದ ಎರಡು ಕಾಲುಗಳಲ್ಲಿ ಬೊಕ್ಕೆಗಳು ಹುಟ್ಟಿ ಅದರಲ್ಲಿ ಕೀವು ಸುರಿಯುತ್ತ ಕೆಲವು ಸಣ್ಣ ಛಿದ್ರಗಳುಂಟಾಗಿ ಆ ಛಿದ್ರದಲ್ಲಿ ಹುಳಗಳು ತುಳುಕುತ್ತಿತ್ತಲ್ಲದೆ ಸದರಿ ವ್ರಣಗಳು ಕರಗಿ ಅರ್ಧಾಣೆ ಗಾತ್ರವಾಗಿತ್ತು. ಇದರಿಂದ ನಡಿಯಲಾರದೆ ಕಾಲಿಗೆ ವಸ್ತ್ರ ಕಟ್ಟಿ ಮಲಗಿದ್ದಲ್ಲಿಯೇ ಇದ್ದೆನು ದೈವವಶಾತ್ ತಮ್ಮ ಸಬ್ ಏಜಂಟರ ಭೇಟಿಯಾಗಿ ಪರೀಕ್ಷಾರ್ಥವಾಗಿ ಎರಡು ಸೀಸೆ ತಮ್ಮ ಯುಕಲಿಪ್ಟಸ್ ತೈಲವನ್ನು ಕೊಂಡುಕೊಂಡು ಹೊಟ್ಟೆಗೂ ತಕೊಂಡು ಹುಣ್ಣಿಗೂ ಹಚ್ಚಿದೆ ಎರಡು ಸೀಸೆ ಮುಗಿಯುವಷ್ಟರಲ್ಲಿ ನನ್ನ ಹುಣ್ಣುಗಳು ಒಣಗಿ ನಡಿಯಲು ಅನುಕೂಲವಾಗಿಯದೆ ಎಂಬದನ್ನು ತಿಳಿಸಲು ಸಂತೋಷಪಡುತ್ತೇನೆ

ಒಂದೇ ಸಲ ಕೊಡುವದರಲ್ಲಿ ಗುಣ!

ರಾ। ವೆಂಕಟಕೃಷ್ಣ ಆಚಾರಿ, ಶಂಕರನಾರಾಯಣ:—ನಿಮ್ಮಲ್ಲಿಂದ ತರಿಸಿದ ಯುಕಲಿಪ್ಟಸ್ ತೈಲವನ್ನು ಕೆಲವು ಕಾಲದಿಂದ ಕಠಿಣ ಹೊಟ್ಟೆನೋವಿನಿಂದ ನರಳುತ್ತಿದ್ದ ನನ್ನ ತಾಯಿಗೆ ಒಂದು ಸಲ ಕೊಡುವಷ್ಟರಲ್ಲಿ ಗುಣ ಉಂಟಾದಕಾರಣ ಮನಸ್ಸಿಗೆ ಬಾರಿ ಖುಸಿಯಾಗಿದೆ ಅರ್ಧ ಡಜನ್ ಸೀಸೆ ವಿ ಪಿ. ಮಾಡಿ ಕಳುಹಿಸಿರಿ.

ಇದು ಅಮೃತವೇ ಸರಿ!!

ಎಸ್ ಎಸ್ ರಾವ್, ಮಂಗಳೂರು —ನನ್ನ ಇಬ್ಬರು ಮಕ್ಕಳಿಗೆ ಒಂದು ಮಧ್ಯರಾತ್ರಿ ಫಕ್ಕನೇ ಉಕ್ಕಾಲುಜಲಾಬು ಉಂಟಾಗಿ ಏನುಮಾಡಬೇಕೆಂದರಿಯದೆ ಇರುವಲ್ಲಿ ತಮ್ಮಲ್ಲಿಂದ ಕೊಂಡುಕೊಂಡ ಯುಕಲಿಪ್ಟಸ್ ತೈಲದ ನೆನಪು ಹುಟ್ಟಿ ಅನುಪಾನ ಪತ್ರದಲ್ಲಿ ಬರದ ಪ್ರಕಾರ ನನ್ನ ಮಕ್ಕಳಿಗೆ ಪ್ರಯೋಗಿಸಿದ್ದಲ್ಲಿ ತಕ್ಷಣ ಗುಣವಾಯಿತು ಶೀತ, ಕೆಮ್ಮು ಜ್ವರ ಮೊದಲಾದ ಸರ್ವ ರೋಗಗಳಿಗೂ ಯುಕಲಿಪ್ಟಸ್ ತೈಲವನ್ನೇ ನಾನು ಪ್ರಯೋಗಿಸುತ್ತಿದ್ದೇನೆ ಇದು ಅಮೃತವೇ ಸರಿ ಎನ್ನುವುದರಲ್ಲಿ ಅನುಮಾನ ಇಲ್ಲ ಔನ್ಸ್ ಸೀಸೆ 1ಕ್ಕೆ 0—5—0. ವಿ, ಪಿ. ಬೇರೆ. ಡಜನ್ ಸೀಸೆಗಳಿಗೆ ವಿ ಪಿ ಸಹಿತ ರೂ 3—12—0 ಅನುಪಾನ ಪತ್ರಿಕೆ ಸೀಸೆಯೊಂದಿಗೆ.

ವಿಳಾಸ — ಏಜಂಟರು—

ಇಕ್ಲಿಪ್ಸ್ ಏಜನ್ಸಿ, ಮಂಗಳೂರು

ಸುಗಂಧವಿಲಾಸ, ರಥಬೀದಿ, ಮಂಗಳೂರು.

ಅನೇಕ ಯೋಗ್ಯತಾಪತ್ರಿಕೆಗಳನ್ನು ಪಡದಿರುವ (ರಿಜಿಸ್ಟರ್ಡ್)

ರಾಜಸುಂದರಿ ರೋಜ.

ಕೂದಲು ಬೆಳೆಯುವ ಪರಿಮಳ ತೈಲವು. 50 ವಿಧವಾದ ಇನಾಂ ಸಾಮಾನುಗಳ ಸಮೇತ ಡಬ್ಬಿ 1ಕ್ಕೆ ರೂ. 1 ಮಾತ್ರ

ಸ್ತ್ರೀಗಳು ತಲೆಕೂದಲು ಸುಂದರವಾಗಿ ಇರಬೇಕೆಂಬ ಉದ್ದೇಶವಾಗಿಯೂ, ಕೂದಲು ಉದುರುವದನ್ನು ತಡೆದು, ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವದು ಬಜಾರಿನಲ್ಲಿ ದೊರಿಯುವ ಕೀಳುತರವಾದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ, ನಿಮ್ಮ ಹಣವನ್ನೂ ತಲೆಯನ್ನೂ ಹಾಳು ಮಾಡುವದಕ್ಕಿಂತ ನಮ್ಮ ಪರಿಮಳ ತೈಲವನ್ನು ಉಪಯೋಗಿಸಿರಿ. ಈ ಲೋಕಪ್ರಖ್ಯಾತವಾದ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಬ್ಬಾಚಿದರೆ ಅದರ ಸುವಾಸನೆ ಹೇಳವದಕ್ಕೆ ಬರಿಯುವದಕ್ಕೆ ಆಗುವದಿಲ್ಲ ಮತ್ತು ಇದರ ಪರಿಮಳ ವಾಸನೆ ಸುತ್ತು ಇರುವ ಮನೆಗಳಿಗೆ ಹೋಗುವದು ಇದಲ್ಲದ ದೇಹದಲ್ಲಿ ಇರುವ ಉಷ್ಣವನ್ನು ತೆಗದು ಕಣ್ಣಿಗೆ ತಂಪು ಕೊಡುವದು ತಲೆಯಲ್ಲಿ ಇರುವ ಹೊಟ್ಟನ್ನು ಸರಿ ಮಾಡುವದು. ಮುಖಕ್ಕೆ ಕಾಂತಿಯನ್ನೂ, ದೇಹಕ್ಕೆ ಆರೋಗ್ಯವನ್ನೂ, ಮನಸಿಗೆ ಸಂತೋಷವನ್ನೂ, ಕೂದಲಿಗೆ ಆರೋಗ್ಯವನ್ನೂ ಕೊಡುವ ತೈಲ ಇದು ಒಂದೇ ಬೇರೊಂದಿಲ್ಲ, ಬರೀ ಮಾತುಗಳಿಂದ ವರ್ಣಿಸುವದರಲ್ಲಿ ಪ್ರಯೋಜನವಿಲ್ಲ. 1ನ್ನು ತರಿಸಿದರೆ ತಿಳಿಯುತ್ತ. ಇನಾಂ ಸಾಮಾನುಗಳ ಹೆಸರುಗಳು. ಸ್ತ್ರೀಯರು ಧರಿಸಿಕೊಳ್ಳುವ ಕೊಂಡಗಿಣಿ 6, ವೃಭರಣ 1, ಅದ್ದಾ 1, ತಾಂಬೂಲ ಮಾತ್ರೆ 30, ದಂತದ ಬಾಚಣಿಗೆ 1, ಸೊಗಸಾದ ರಾಜರಾಣಿ ಕಾರನೇಷನ್ ಪೆಟ್ಟಿಗೆ 1, ರವಿವರ್ಮ ಪೋಸ್ಟುಕಾರ್ಡ್ 6, ಸುವಾಸನೆ ಅತ್ತರು ಬಿಲ್ಲೆ 1, ಗಂಧ ಬಿಲ್ಲೆ 1, ಸ್ತ್ರೀಯರು ಧರಿಸುವ ಬ್ರೂಚ್ 1.

ನಮ್ಮ ವಿಳಾಸ— ಮ್ಯಾನೇಜರ್ ಡೈಯರ್ ಲಕ್ಷ್ಮಿ ಅಂಡು ಕಂಪೆನಿ,

ನಂ. 3 ಇರುಲಪ್ಪನ್ ಬೀದಿ, ಮದ್ರಾಸು.

ಸ್ವದೇಶಾಭಿಮಾನಿ

ಮಂಗಳೂರು, ಶುಕ್ರವಾರ ತಾರೀಕು 9ನೇ ಜುಲೈ 1915

ಬಾಲಿಕಾ ಪಾಠಶಾಲೆಯ ವಿಷಯ ಇನ್ನೂ ಕೆಲವು ಮಾತುಗಳು

ಸರಕಾರದವರು ಮಂಗಳೂರಲ್ಲಿ ಒಂದು ಸೆಕೆಂಡರಿ ಬಾಲಿಕಾ ಪಾಠಶಾಲೆಯನ್ನು ಸ್ಥಾಪಿಸುವುದು ಏಕೆ ಅಗತ್ಯವೆಂತ ಕಳೆದ ಸಂಚಿಕೆಯಲ್ಲಿ ಪ್ರಸ್ತಾಪಿಸಿದೆವು. ಇಂಥಾ ಸಂಸ್ಥೆಯ ಸ್ಥಾಪನೆಯು ಶೀಘ್ರದಲ್ಲಿಯೇ ಆಗಬೇಕಾಗಿದೆಂದು ಸೂಚಿಸುವ ಇನ್ನೂ ಕೆಲವು ನವೀನ ವಿದ್ಯಮಾನಗಳು ನಮ್ಮ ತಿಳುವಳಿಕೆಗೆ ಬಂದಿರುತ್ತವೆ. ಹಿಂದೂ ಬಾಲಿಕೆಯರ ಸಂಪರ್ಕವೇ ದೋಷಕರವೆಂತ ತಿಳಕೊಂಡು ಇಲ್ಲಿಯ ಕ್ರೈಸ್ತ ಸೆಕೆಂಡರಿ ಶಾಲೆಯೊಂದರಲ್ಲಿ ಹಿಂದೂ ಬಾಲಿಕೆಯರಿಗೆ ಈ ವರುಷ ಪ್ರವೇಶವು ದೊರಕಿರದೆಂದೂ ಸಂಪರ್ಕ ದೋಷ ಭಾವನೆಯು ಶಾಲೆಯಲ್ಲಿ ಬೆಳೆಯುತ್ತಿರುವದನ್ನು ನೋಡಿ ಕೆಲವು ಹಿಂದೂ ಬಾಲಿಕೆಯರ ಹೆತ್ತವರು ತಮ್ಮ ಮಕ್ಕಳನ್ನು ಶಾಲೆಯಿಂದ ಹಿಂದಕ್ಕೆ ಕರೆಸಿರುವರೆಂದೂ ಕೇಳುತ್ತೇವೆ. ಇಷ್ಟೇ ಅಲ್ಲ, ಇಲ್ಲಿಯ ವಿದ್ಯಾಧಿಕಾರಿಗಳಲ್ಲೊಬ್ಬರಾದ ಯುರೋಪಿಯ ಆಫೀಸರರು ಈ ಕ್ರೈಸ್ತ ಶಾಲೆಯಲ್ಲಿ ಕ್ರೈಸ್ತರಲ್ಲದ ಇತರ ಬಾಲಿಕೆಯರನ್ನು ಯಾವ ರೀತಿ ನಡಿಸುತ್ತಿರುವರೆಂಬುದನ್ನು ತಿಳಕೊಂಡು ಮಂಗಳೂರಲ್ಲಿ ಕ್ರೈಸ್ತರಲ್ಲದ ಬಾಲಿಕೆಯರ ಬಗ್ಗೆ ಒಂದು ಸೆಕೆಂಡರಿ ಶಾಲೆಯನ್ನು ಸ್ಥಾಪಿಸುವುದು ಅಗತ್ಯವಾಗಿದೆ ಎಂಬ ತನ್ನ ಅಭಿಪ್ರಾಯವನ್ನು ಕೆಲವು ಹಿಂದೂ ಗೃಹಸ್ಥರೊಡನೆ ಸೂಚಿಸಿರುವರೆಂಬದಾಗಿ ಸಹ ಕೇಳುತ್ತೇವೆ.

ಶಿಕ್ಷಣಾಭಿರುಚಿಯು ಹಿಂದೂ ಮತ್ತು ಕ್ರೈಸ್ತರಲ್ಲದ ಇತರ ಜಾತಿಯ ಬಾಲಿಕೆಯರಲ್ಲಿ ದಿನೆ ದಿನೆ ವೃದ್ಧಿಸುತ್ತಿರುವುದು. ಇದಕ್ಕೆ ಸಿಕ್ಕತಕ್ಕ ಶಾಲೆಗಳು ಇಲ್ಲದೆ ಹೋದರೆ ಕ್ರೈಸ್ತ ಶಾಲೆಗಳು ಎಷ್ಟು ದೋಷಕರವೆಂತ ಕಂಡುಬಂದರೂ ಕೆಲವರಾದರೂ ಈ ದೋಷಗಳೆಲ್ಲವನ್ನು ಮನ್ನಿಸಿಕೊಂಡು ಶಾಲಾ ಉಪಾಧ್ಯಾಯಿಗಳನ್ನು ಹೇಗಾದರೂ ಸಮಾಧಾನಪಡಿಸಿ ತಮ್ಮ ಮಕ್ಕಳಿಗೆ ಪ್ರವೇಶವು ದೊರಕುವಂತೆ ಪ್ರಯತ್ನಪಡುವರು. ಇಂಥಾ ಸಂದರ್ಭಗಳಲ್ಲಿ ಅನ್ಯರನ್ನು ದೂರಿ ಫಲವಿರದು. ಹಾಗೆ ದೂರುವುದು ಸರಿಯೂ ಅಲ್ಲ. ಇತ್ತಲಾಗೆ ಸಾಧಾರಣ ಹತ್ತು ಹನ್ನೆರಡು ವರುಷಗಳ ಕಾಲದಿಂದ ಬಾಲಿಕೆಯರ ಶಿಕ್ಷಣದ ಬಗ್ಗೆ ಇರುವ ಈ ವಿಪರೀತ ಅಡಚಣೆಗಳನ್ನು ಪೂರ್ಣ ತಿಳಿದವರಾಗಿದ್ದರೂ ಈ ವಿಷಯದಲ್ಲಿ ಏನೂ ತಿಳಿಯದವರಂತೆ ನಾವು ವರ್ತಿಸುತ್ತಿದ್ದೇವೆ. ಪ್ರತಿ ವರುಷದಲ್ಲಿಯೂ ಇಲ್ಲಿ ವಿದ್ಯಾವಂತರ ಸಂಖ್ಯೆಯು ಹೆಚ್ಚುತ್ತಿರುವುದು. ಆ ಜಾತಿಯವರನ್ನು ನೋಡಿ ಈ ಜಾತಿಯವರು ತಂತಮ್ಮ ಜಾತಿಯ ಹುಡುಗರ ಬಗ್ಗೆ ದ್ರವ್ಯಸಂಗ್ರಹವನ್ನು ಮಾಡುತ್ತ ಈ ಹೇರಳ ದ್ರವ್ಯ-ರಾಶಿಯನ್ನು ಕಲ್ಲು, ಮಣ್ಣು, ಸುಣ್ಣಗಳಲ್ಲಿ ರೂಪಾಂತರಗೊಳಿಸುತ್ತಿರುವರು. ಇನ್ನೂ ನಾನಾ ವಿಧಾನಗಳಲ್ಲಿ ಒಂದೊಂದೇ ಜಾತಿಯ ವಿದ್ಯಾಭಿವೃದ್ಧಿ ಸಾಧನೆಯಲ್ಲಿ ನಾವು ನಿರತರಾಗಿರುತ್ತೇವೆ. ಬಾಲೆಯರಿಗೆ ಉಚಿತವಾದ ಶಿಕ್ಷಣವು ಕೊಡೋಣಾದ ವಿನಹ ಯಥಾರ್ಥವಾದ ಅಭಿವೃದ್ಧಿಯನ್ನು ನಾವು ವಿದ್ಯೆಯಲ್ಲಿ ಪಡೆಯಲಾರೆವೆಂಬ ಮಾತನ್ನು ನಾವು ಪದೇ ಪದೇ ಹೇಳಿಕೊಳ್ಳುತ್ತಿರುವೆವು. ಹೀಗಿದ್ದರೂ ಸ್ತ್ರೀ ಶಿಕ್ಷಣ ಪ್ರಸರಣೆಯಲ್ಲಿ ನಾವು ಮಾಡಿದ ಸರಿಯಾದ ಒಂದು ಸಾಧನೆಯಾದರೂ ಇರೆದು. ಇದರ ಕಾರಣವೇನು? ಅಭಿಮಾನ, ಅದರಲ್ಲಿಯೂ ಹೆಮ್ಮಕ್ಕಳ ಅಭಿಮಾನವನ್ನು ಕಾಪಾಡುವುದರಲ್ಲಿ ಇನ್ನೂ ಅನಾದರತೆಯನ್ನು ತೋರುವುದೇ?

ಎಮ್. ವಿ. ಶಾಸ್ತ್ರಿಗಳವರ ಆಯುರ್ವೇದೌಷಧ ಗೃಹ, ಮಂಗಳೂರು.

ನಾಲ್ಕು ವರ್ಷಗಳ ತಮ್ಮ ಚಿಕಿತ್ಸೆ ಅನುಭವವನ್ನು ಎಮ್. ವಿ. ಶಾಸ್ತ್ರಿಗಳವರು ಒಂದು ಚಿಕ್ಕ ಪುಸ್ತಕ ರೂಪದಲ್ಲಿ ಪ್ರಕಟಿಸಿರುವರು. ಪಾಶ್ಚಾತ್ಯ ರೀತಿಗಳಲ್ಲಿ ಚಿಕಿತ್ಸೆಯನ್ನು ಪಡೆಯುತ್ತ ಆಯುರ್ವೇದ ಚಿಕಿತ್ಸಾ, ಶಾಸ್ತ್ರ ಕ್ರಮಗಳ ಪರಿಚಯವಿಲ್ಲದೆ ಇವುಗಳೆಲ್ಲವು ಅಣಲೆಕಾಯಿ ಪಂಡಿತರ ಅಪಾಯಕರ ಸಾಧನಗಳೆಂತ ತಿಳಿಯುವಂಥ ಅರ್ವಾಚೀನರಲ್ಲಿ ಹಲವರು ಶಾಸ್ತ್ರಿಗಳ ಈ ಚಿಕ್ಕ ಪುಸ್ತಕವನ್ನು ಓದಿ ನೋಡಿದರೆ ಆಯುರ್ವೇದ ವಿದ್ಯೆಯಲ್ಲಿ ಇಂಥವರಿಗೆ ವಿಶ್ವಾಸವು ಉಂಟಾಗದೆ ಇರದು. ಆಯುರ್ವೇದವು ಇತರ ವೈದ್ಯಗಳಂತೆ ಪರಿಪೂರ್ಣ ಯುಕ್ತಿಯುಕ್ತ ಮತ್ತು ಸ್ವತಂತ್ರ ವಿದ್ಯೆಯಾಗಿದೆ ಎಂಬುದನ್ನು ತೋರಿಸಿಕೊಟ್ಟು ಈ ವಿದ್ಯೆಯಲ್ಲಿ ಜನರಿಗೆ ಪೂರ್ಣಾಭಿಮಾನವೂ, ಗೌರವವೂ ಉಂಟಾಗುವ ಉದ್ದೇಶವನ್ನು ತಮ್ಮ ಮುಂದಿಟ್ಟುಕೊಂಡು ಶಾಸ್ತ್ರಿಗಳವರು ತಮ್ಮ ವೃತ್ತಿಯನ್ನನುಸರಿಸುತ್ತಿದ್ದಾರೆಂಬುದು ಶಾಸ್ತ್ರಿಗಳವರ ಈ ಚಿಕ್ಕ ಪುಸ್ತಕ ಪಠಣದಿಂದ ವಾಚಕರಿಗೆ ವ್ಯಕ್ತವಾಗದೆ ಇರದು. ಕಳೆದ ನಾಲ್ಕು ವರುಷಗಳಿಂದ ತಮ್ಮ ಔಷಧ ಗೃಹಕ್ಕೆ ಬಂದಿರುವ ರೋಗಿಗಳ ತಪಸೀಲು ಪಟ್ಟಿಯನ್ನು ತಯ್ಯಾರಿಸಿ ಈ ಪ್ರಾಂತ್ಯಗಳಲ್ಲಿ ಸಾಮಾನ್ಯವಾದ ರೋಗಗಳು ಯಾವುವೆಂಬುದನ್ನು ನಿಶ್ಚಯಿಸಿಕೊಂಡು, ಶಾಸ್ತ್ರಿಗಳವರು ರೋಗಿಗಳ ಚಿಕಿತ್ಸೆಯನ್ನು ಕೈಕೊಳ್ಳುತ್ತಿದ್ದಾರೆಂತ ಸೂಚಿಯಲ್ಲಿ ಬರೆದ ಇವರ ಅನುಭವದಿಂದ ತೋರಿಬರುತ್ತದೆ. ಆರ್ಯರ ಈ ಪ್ರಾಚೀನ ವಿದ್ಯೆಯು ಚರಕ ಮತ್ತು ಸುಶ್ರುತ ಮೊದಲಾದ ಮಹರ್ಷಿಗಳಂಥವರ ನಂತರದಲ್ಲಿ ಇದರ ಸಮರ್ಪಕವಾದ ವ್ಯವಸಾಯ ಪರಿಶೋಧನೆಗಳನ್ನು ಮಾಡುವಂಥವರಿಲ್ಲದೆ ಪ್ರಕೃತ ಜೀರ್ಣಾವಸ್ಥೆಗೆ ಬಂದಿದೆಯಾದರೂ ಈಗಲೂ ಸಹ ಇದನ್ನು ಉಚ್ಚಸ್ಥಿತಿಗೆ ತರಲು ತುಂಬಾ ಅವಕಾಶವಿದೆ ಎಂಬುದು ಶಾಸ್ತ್ರಿಗಳಂಥವರ ಪರಿಶ್ರಮದಿಂದ ತಿಳಕೊಳ್ಳಬಹುದು. ಬಾಲ್ಯದಿಂದ ಸಂಸ್ಕೃತ ವಿದ್ಯೆಯಲ್ಲಿಯೇ ನಿರತರಾಗಿದ್ದು ಮೈಸೂರು, ಕಾಶೀ ಪ್ರಾಂತ್ಯಗಳಲ್ಲಿರುವ ಸಂಸ್ಕೃತ ಪಾಠಶಾಲೆಗಳಲ್ಲಿ ತಮ್ಮ ಅಭ್ಯಾಸವನ್ನು ಬಲಪಡಿಸಿ ನಂತರ ಮದ್ರಾಸಿನ ರಾಜ್ಯವೈದ್ಯ ಡಿ. ಗೋಪಾಲಾಚಾರ್ಯರ ಆಯುರ್ವೇದ ಪಾಠಶಾಲೆಯಲ್ಲಿ ಕೆಲವು ವರುಷಗಳ ವರೆಗೆ ಶಿಕ್ಷಣವನ್ನು ಪಡೆದ ಆಯುರ್ವೇದ ಭೂಷಣ ಎಮ್. ವಿ. ಶಾಸ್ತ್ರಿಗಳವರು ಈ ವಿದ್ಯೆಯ ವ್ಯವಸಾಯವನ್ನು ಮಾಡಲು ತುಂಬಾ ಯೋಗ್ಯರಾಗಿರುವರು. ಇಂಥವರಿಗೆ ಇವರ ವೃತ್ತಿಯಲ್ಲಿ ಮಹಾಜನರ ಯಥೋಚಿತ ಪ್ರೋತ್ಸಾಹವು ಮಾತ್ರ ಬೇಕಾಗಿದೆ. ಇಂಥಾ ಪ್ರೋತ್ಸಾಹವು ಇವರಿಗೆ ದೊರಿಯಬೇಕೆಂದು ಅಪೇಕ್ಷಿಸುವೆವಲ್ಲದೆ ಇವರು ತಮ್ಮ ವರ್ಚಸ್ಸಿನಿಂದ ಅಣಲೆಕಾಯಿ ಪಂಡಿತರು ಮಾಡುವ ಹಾವಳಿಯನ್ನು ಸಾಧ್ಯವಾದಷ್ಟು ಮಟ್ಟಿಗೆ ವಿ ತಿಪಡಿಸಬೇಕೆಂಬುದಾಗಿ ಕೋರುತ್ತೇವೆ.

ಮದ್ರಾಸು ಗವರ್ನರವರ ಸಭೆಗೆ ನಮ್ಮ ಜಿಲ್ಲೆಯ ಮೆಂಬರರು.

ಗವರ್ನರವರ ನ್ಯಾಯವಿಧಾಯಕ ಸಭೆಗೆ ದಕ್ಷಿಣ ಕನ್ನಡಾ ಮತ್ತು ಮಲಬಾರು ಜಿಲ್ಲೆಗಳಲ್ಲಿರುವ ಬೋರ್ಡುಗಳ ಮತ್ತು ಮುನ್ಸಿಪಾಲಿಟಿಗಳ ತರಫಿನಿಂದಲೂ ವರ್ಗದಾರರ ತರಫಿನಿಂದಲೂ ಕೂಡ ಒಟ್ಟಿಗೆ ಇಬ್ಬರು ಮೆಂಬರುಗಳನ್ನು ಬರುವ ನವಂಬರ ತಿಂಗಳಲ್ಲಿ ಚುನಾಯಿಸತಕ್ಕದ್ದಾಗಿದೆ. ಈ ಸಂಗತಿ ಎಲ್ಲರಿಗೂ ಗೊತ್ತಿರುವಂಥಾದ್ದೇ ಸರಿ. ನ್ಯಾಯವಿಧಾಯಕ ಸಭೆಯ ಮೆಂಬರುಗಳ ಸಂಖ್ಯೆಯನ್ನು ಹೆಚ್ಚಿಸಿ ಅವುಗಳ ಕುರಿತು ಹೊಸ ಕ್ರಮ ನಿಬಂಧನೆಗಳನ್ನು ಜಾರಿಗೆ ತಂದ ತರುವಾಯ ಆ ಸಭೆಗೆ ನಮ್ಮ ಜಿಲ್ಲೆಯಿಂದ ಏನೋ ವಿಶ್ವಪ್ರಯತ್ನಗಳನ್ನು ಮಾಡಿ ಹಿಂದೆ ಒಂದಾವರ್ತಿ ಒಬ್ಬ ಮೆಂಬರನನ್ನು ಕಳುಹಿಸಿದ್ದೆವೆಂಬುದು ನಿಜ. ಆದರೆ ಅನಂತರ ಈ ರೀತಿ ಒಬ್ಬನನ್ನಾದರೂ ಚುನಾಯಿಸಿ ಕಳುಹಿಸಲಿಕ್ಕೆ ನಮಗೆ ಸಾಧ್ಯವಾಗಲಿಲ್ಲ.

ಕಾಲಕಾಲಕ್ಕೂ ಮಲಬಾರಿನಿಂದಲೇ ಮಲಬಾರಿಗಳನ್ನೇ ಚುನಾಯಿಸುತ್ತ ಬರುತ್ತಿರುವರು. ಮಲಬಾರಿನವರು ನಮಗಿಂತ ವಿದ್ವಾಂಸರೂ ಹೆಚ್ಚಿನ ಯೋಗ್ಯತೆವುಳ್ಳವರೂ ಎಂತ ಹೇಳ ಕೂಡುವುದಿಲ್ಲ. ಹಾಗಾದರೆ ಮಲಬಾರಿನವರೇ ವರ್ಷೇ ವರ್ಷೇ ಈ ಚುನಾವಣೆಯ ರಂಗಸ್ಥಳದಲ್ಲಿ ಜಯಪ್ರದರಾಗುವುದಕ್ಕೆ ಕಾರಣವೇನು? ಮಲಬಾರು ಜಿಲ್ಲೆಯು ವಿಸ್ತೀರ್ಣದಲ್ಲಿ ನಮ್ಮ ಜಿಲ್ಲೆಯಗಿಂತಲೂ ದೊಡ್ಡದಾಗಿದ್ದು, ಆ ಜಿಲ್ಲೆಯಲ್ಲಿ ವೋಟು ಮಾಡುವವರ ಸಂಖ್ಯೆಯು ನಮ್ಮವರಿಗಿಂತಲೂ ಅಧಿಕವಾಗಿದ್ದುದರಿಂದಲೇ ಅವರು ನಮ್ಮನ್ನು ತಳ್ಳಿಬಿಟ್ಟು ತಮ್ಮ ಜಿಲ್ಲೆಯವರನ್ನೇ ಚುನಾಯಿಸಲು ಶಕ್ತರಾದರು. ಮಲಬಾರಿಯ ಮೆಂಬರುಗಳು ಎಂತಹ ವಾಗ್ಮಿಗಳಾದರೂ ಎಷ್ಟು ಯೋಗ್ಯತೆವುಳ್ಳವರಾದರೂ ಅವರಿಗೆ ನಮ್ಮ ಜಿಲ್ಲೆಯಲ್ಲಿನ ಜನರ ಸಂಕಷ್ಟಗಳು, ಅವಶ್ಯಕತೆಗಳು, ಸ್ಥಿತಿಗತಿಗಳು ಇವೇ ಮೊದಲಾದುವುಗಳ ವಿಷಯದಲ್ಲಿ ನಮ್ಮ ಜಿಲ್ಲೆಯಿಂದ ಆರಿಸಲ್ಪಡಬಹುದಾದ ಮೆಂಬರನಿಗೆ ಇರುವಷ್ಟು ಜ್ಞಾನವು ಎಂದಿಗೂ ಇರಲಾರದು. ನಮ್ಮ ಜಿಲ್ಲೆಯ ಕಷ್ಟನಷ್ಟಗಳನ್ನು ನಿವಾರಣೆಮಾಡುವ ಬಗೆಯು ಅವರಿಗೆ ಸೂಚಿಸಲಿಕ್ಕೆ ಸಾಧ್ಯವೂ ಇಲ್ಲ. ಹೀಗಾಗಿ ಮಲಬಾರಿನವರು ನಮ್ಮ ಜಿಲ್ಲೆಯ ಪ್ರತಿನಿಧಿಗಳಾಗಲು ಸರ್ವಥಾ ಯೋಗ್ಯರಲ್ಲ.

ದಕ್ಷಿಣ ಕನ್ನಡಾ ಮತ್ತು ಮಲಬಾರು ಜಿಲ್ಲೆಗಳು ಸಮೀಪವರ್ತಿಯಾಗಿರುವುವೆಂಬ ಮಾತ್ರದಿಂದಲೇ ಈ ಜಿಲ್ಲೆಗಳು ಒಟ್ಟುಗೂಡಿ ಇಬ್ಬರು ಮೆಂಬರುಗಳನ್ನು ಚುನಾಯಿಸುವಂತೆ ಸರಕಾರದವರು ನಿರ್ಣಯಿಸಿದ್ದೆಂದು ತೋರುತ್ತದೆ. ಆದರೆ ನಮ್ಮ ಮತ್ತು ಮಲಬಾರಿಗಳ ಈ ಜೋಡಣೆಯಿಂದ ನಮಗೆ ಕ್ಷೇಮವಿಲ್ಲವೆಂಬುದು ಅನುಭವಸಿದ್ಧವಾಗಿದೆ. ಆದುದರಿಂದ ನಮ್ಮ ಜಿಲ್ಲೆಯಗೋಸ್ಕರವೇ ಒಬ್ಬ ಪ್ರತ್ಯೇಕ ಮೆಂಬರನನ್ನು ಚುನಾಯಿಸುವಂತೆ ಕ್ರಮನಿಬಂಧನೆಗಳನ್ನು ತಿದ್ದುಪಡಿ ಮಾಡಬೇಕೆಂದು ಸರಕಾರದವರಿಗೆ ಒಂದು ಬಿನ್ನಹಾ ಪತ್ರವನ್ನು ಬರಕೊಳ್ಳುವುದು ಸಕಾರಣವಾಗಿಯೂ ಅತ್ಯವಶ್ಯಕವಾಗಿಯೂ ಇರುವುದು. ಪರಂತು, ಈಗಿನ ವಿದ್ಯಮಾನಗಳಿಂದ ಪ್ರಕೃತ ಸಮಯದಲ್ಲಿ ಅದು ಈಗ ಸದ್ಯಕ್ಕೆ ಸಾಧ್ಯವಾಗುವ ಹಾಗಿಲ್ಲ. ಅದು ಸಾಧ್ಯವಾಗಬೇಕಾದರೆ ನಾವು ಸುಮ್ಮನೆ ಹತಾಶರಾಗಿ ಅಚೇತನರಾಗಿರಬಾರದು. ಪ್ರತಿ ಸಂದರ್ಭದಲ್ಲಿಯೂ—ನಾವು ಸೋತುಹೋದರೂ ಚಿಂತೆಯಿಲ್ಲ, ನಮ್ಮ ಜಿಲ್ಲೆಯ ಒಬ್ಬ ಮೆಂಬರನನ್ನು ಚುನಾಯಿಸಿ ಕಳುಹಿಸುವರೆ ಧೈರ್ಯದಿಂದ ಪ್ರಯತ್ನಗಳನ್ನು ಮಾಡಬೇಕು. ಮಲಬಾರು ಜಿಲ್ಲೆಯು ದೊಡ್ಡದಾಗಿದ್ದುದರಿಂದಲೂ ಅಲ್ಲಿಯ ವೋಟು ನೀಡುವವರ ಸಂಖ್ಯೆಯು ಅಧಿಕವಾಗಿದ್ದುದರಿಂದಲೂ ಆ ಪ್ರಳಯದ ಮುಂದೆ ನಮ್ಮ ಅಲ್ಪಜನ ಸಂಖ್ಯೆಯಿಂದ ಆರಿಸಲ್ಪಡುವವನಿಗೆ ಜಯಸಿಕ್ಕುವಂಥಾದ್ದು ಅಸಾಧ್ಯವೆಂದು ಎಣಿಸಿ ಹಿಂಜರಿಯದೆ, ಈ ಮೇಲಾಟದಲ್ಲಿ ನಾವು ಅದಷ್ಟು ಪ್ರಯತ್ನಮಾಡಿ ಒದ್ದಾಡಬೇಕು. ಈ ರೀತಿ ಪ್ರತಿ ಸಂದರ್ಭದಲ್ಲಿಯೂ ಎಷ್ಟು ಪ್ರಯತ್ನ ಮಾಡಿದರೂ ಕೂಡ ನಮಗೆ ಜಯಸಿಕ್ಕದೆ ಹೋದರೆ, ಕ್ರಮೇಣ ಈ ಮಲಬಾರು ಪ್ರಳಯದ ಮುಂದೆ ನಮಗೆ ನಮ್ಮ ಮೆಂಬರನನ್ನು ಕಳುಹಿಸಲಿಕ್ಕೆ ಸಾಧ್ಯವೇ ಇಲ್ಲವೆಂದು ಸರಕಾರದವರಿಗೆ ಸಮಾಧಾನವಾಗದೇ ಇರಲಾರದು. ಆಗ ಮಾತ್ರವೇ ಸರಕಾರದವರು ನಮ್ಮ ಜಿಲ್ಲೆಗೆ ಪ್ರತ್ಯೇಕ ಚುನಾವಣೆಯ ಹಕ್ಕನ್ನು ಕೊಟ್ಟಾರು.

ನಮ್ಮ ಮಲಬಾರಿ ಮಿತ್ರರು ಕೂಡಾ ನಮ್ಮ ಅವಸ್ಥೆಯನ್ನು ನೋಡಿ ಈ ವರ್ಷ ಇಬ್ಬರು ಮೆಂಬರುಗಳ ಪೈಕಿ ಒಬ್ಬನಾದರೂ ನಮ್ಮ ಜಿಲ್ಲೆಯವನಾಗಬೇಕೆಂದು ಸಮಾಧಾನಪಟ್ಟು ಬೋರ್ಡುಗಳ ಮತ್ತು ಮುನ್ಸಿಪಾಲಿಟಿಗಳ ತರಪಿನಿಂದ ನಮ್ಮ ಜಿಲ್ಲೆಯವನಿಗೆ ವೋಟು ಮಾಡದೆ ಇರಲಾರರು.

ಈ ಎಲ್ಲಾ ಕಾರಣಗಳಿಂದ ಬರುವ ನವಂಬರ ತಿಂಗಳಲ್ಲಿ ಆಗುವ ಚುನಾವಣೆಗಳಲ್ಲಿ ನಮ್ಮ ಜಿಲ್ಲೆಯಿಂದ ಒಬ್ಬನನ್ನಾದರೂ ಚುನಾಯಿಸುವುದಕ್ಕೆ ಮನಃಪೂರ್ವಕವಾದ ಪ್ರಯತ್ನಗಳನ್ನು ಮಾಡುವುದು ನಮ್ಮ ಪ್ರಥಮ ಕರ್ತವ್ಯವಾಗಿರುವುದು.

ಆದುದರಿಂದ ಮುನಿಸಿಪಾಲಿಟಿಗಳ ಮತ್ತು ಬೋರ್ಡುಗಳ ಎಲ್ಲಾ ಮೆಂಬರುಗಳು ಈ ವಿಷಯಗಳನ್ನು ಇಂದಿನಿಂದಲೇ ಆಲೋಚಿಸಿ ಈ ಕಾರ್ಯದಲ್ಲಿ ನಮ್ಮ ಜಿಲ್ಲೆಯಿಂದ ಒಬ್ಬರನ್ನು ಆರಿಸುವದರಲ್ಲಿ ಸಹಾಯಕರಾಗಬೇಕಾಗಿ ನಮ್ಮ ವಿನಂತಿಯಾಗಿರುವುದು.

ಬಹುಮಾನಾರ್ಹವಾದ ಬಿರುದುಗಳು.

ಪ್ರತಿ ವರ್ಷ ಸಂವತ್ಸರಾದಿಯ ದಿನವೂ ಮಹನೀಯರಾದ ನಮ್ಮ ಚಕ್ರವರ್ತಿಯವರ ಜನ್ಮೋತ್ಸವದ ದಿನವೂ ಬ್ರಿಟಿಷ್ ಸಾಮ್ರಾಜ್ಯದಲ್ಲಿ ಗಣನೀಯರೂ ರಾಜಭಕ್ತರೂ ಆದ ಪ್ರಜಾಜನರುಗಳಿಗೆ ಶ್ರೀಮನ್ಮಹಾರಾಜಾ ಚಕ್ರವರ್ತಿಯವರು ಹಲವು ವಿಧವಾದ ಬಿರುದುಗಳನ್ನು ಕೊಟ್ಟು ಸನ್ಮಾನಿಸುತ್ತಿರುವುದು ಸರಿಯಷ್ಟೇ. ಈ ವರ್ಷವೂ ಕಳೆದ ಜನ್ಮೋತ್ಸವದ ಕಾಲದಲ್ಲಿ ದಯಪಾಲಿಸೋಣಾದ ಬಿರುದುಗಳನ್ನು ಕುರಿತು ನಮ್ಮ ಪತ್ರಿಕೆಯ ಹಿಂದಿನ ಒಂದು ಸಂಚಿಕೆಯಲ್ಲಿ ಸಂಕ್ಷಿಪ್ತವಾಗಿ ಹೇಳಿಯೇ ಇರುವೆವು. ಒಟ್ಟಾಗಿ ಹೇಳುವುದಾದರೆ ಈ ಸಲ ಶ್ರೀಮಾನ್ ಚಕ್ರವರ್ತಿಯವರು ಅನುಗ್ರಹಿಸಿದ ಬಿರುದುಗಳಿಂದ ಅಧಿಕಾರಿಗಳು ಮಾತ್ರವೇ ಅಲ್ಲದೆ ಇತರರೂ ಕೂಡಾ ತುಂಬಾ ಸಂತೃಪ್ತರಾಗಿರುವಂತೆ ಕಂಡುಬರುತ್ತಿದೆ. ವಿಶೇಷ್ಯತಃ ಮೈಸೂರಿನ ಪ್ರಕೃತದ ದಿವಾನರಾದ ಶ್ರೀಮಾನ್ ವಿಶ್ವೇಶ್ವರಯ್ಯನವರಿಗೆ "ಸರ್" ಪದವಿಯನ್ನು ಕೊಟ್ಟು ಮನ್ನಿಸಿದುದು ಯಾವತ್ತು ಕನ್ನಡಿಗರಿಗೆ ಸಂತೋಷವನ್ನುಂಟುಮಾಡಿದೆ. ಈ ದೊಡ್ಡ ಮನುಷ್ಯರ ಮಹೋದ್ದೇಶಗಳೂ ಉತ್ಸಾಹವೂ ದೇಶಾಭಿಮಾನವೂ ಉದ್ಯಮಶೀಲತೆಯೂ ಸೌಜನ್ಯವೂ ವಿಸ್ಮಯವನ್ನುಂಟುಮಾಡತಕ್ಕವಾಗಿವೆ. ಇದಲ್ಲದೆ ಸಮಸ್ತ ಕರ್ನಾಟ ದೇಶದ ಸೌಭಾಗ್ಯವೇ ಮೈಸೂರು ಸೀಮೆಯ ಸೌಭಾಗ್ಯವೆಂದು ತಿಳಿದು ಕನ್ನಡಿಗರಲ್ಲಿ ಪರಸ್ಪರ ಸೌಹಾರ್ದ್ರವು ಬೆಳೆಯುವಂತೆ ಕನ್ನಡಿಗರನ್ನೆಲ್ಲ ಸಮ್ಮೇಳನರೂಪವಾಗಿ ಒಟ್ಟುಗೂಡಿಸಲು ಪ್ರೋತ್ಸಾಹಿಸಿ ಅಶೇಷ ಕರ್ನಾಟಕರ ಪ್ರೀತಿಗೌರವಗಳನ್ನು ಇವರು ಸಂಪಾದಿಸಿರುವುದರಿಂದ ಇವರಿಗೆ ಮಾಡಿದ ಬಹುಮಾನವು ಕರ್ನಾಟ ದೇಶಕ್ಕೆ ಮಾಡಿದ ಬಹುಮಾನವಾಯಿತೆಂದು ಸಮಸ್ತರೂ ಅಭಿಪ್ರಾಯಪಡುತ್ತಿರುವರು.

ಡಾಕ್ಟರ್ ರಾಸವಿಹಾರೀ ಘೋಷರಂತೆ ಘನವಿದ್ಯಾವಂತರೂ ದೇಶಾಭಿಮಾನಿಗಳೂ ದಾನಶೂರರೂ ಆದಂಥವರು ನಮ್ಮ ಜನರೊಳಗೆ ಹಲವರಿರಬಹುದೆಂದು ತೋರುವುದಿಲ್ಲ. ಇವರಿಗೆ "ಸರ್" ಪದವಿಯನ್ನು ಕೊಟ್ಟದ್ದೂ, ದಕ್ಷಿಣ ಆಫ್ರಿಕದಲ್ಲಿ ಭಾರತೀಯರಿಗೆ ಪ್ರಾಪ್ತವಾಗಿದ್ದ ದುರವಸ್ಥೆಯನ್ನು ನೋಡಿ ಸಹಿಸಲಾರದೆ ಪರಾರ್ಥಕ್ಕಾಗಿಯೇ ತನ್ನ ತನುಮನಧನಗಳನ್ನು ಸಮರ್ಪಿಸಿ ಕಾದಾಡಿ ಜಯಿಸಿದ ಅದ್ವಿತೀಯ ವೀರರಾದ ಶ್ರೀಯುತ ಮೋಹನಚಂದ್ರ ಗಾಂಧಿಯವರಿಗೆ ಸ್ವರ್ಣಪದಕದಿಂದ ಮನ್ನಿಸಿದುದೂ ನಮ್ಮ ದೊರೆತನದವರ ಗುಣಗ್ರಾಹಕವಾದ ನಿಷ್ಪಕ್ಷವಾದ ಬುದ್ಧಿಯನ್ನು ಚೆನ್ನಾಗಿ ವ್ಯಕ್ತಗೊಳಿಸುತ್ತಿದೆ.

ಹಾಗೆಯೇ, ಕಲಕತ್ತೆಯ "ವಂಗವಾಸಿ" ಎಂಬ ಬಂಗಾಳಿ ಪತ್ರಿಕೆಯ ಸಂಪಾದಕರಾದ ಶ್ರೀಯುತ ಬಾಬುವಿಹಾರಿಲಾಲ ಸರಕಾರ ಎಂಬ ಮಹನೀಯರಿಗೆ "ರಾಯಸಾಹೇಬ" ಪದವಿಯನ್ನು ಕೊಟ್ಟ ವಿಷಯವು ಇಂಡಿಯದಲ್ಲಿ ದೇಶಿಯ ಪತ್ರಿಕೆಗಳನ್ನು ನಡೆಯಿಸುತ್ತಲಿರುವ ಪ್ರತಿಯೊಬ್ಬರಿಗೂ ಪ್ರೋತ್ಸಾಹಕಾರಿಯಾಗಿ ಪರಿಣಮಿಸದಿರದೆಂದು ನಂಬುವೆವು. ದೇಶಭಾಷಾಪತ್ರಿಕೆಗಳನ್ನು ಗೌರವಿಸಿದುದು ಬಹುಶಃ ಇದೇ ಮೊದಲನೆಯಾವೃತ್ತಿಯಾಗಿರಬಹುದೆಂದು ನಮಗೆ ತೋರುತ್ತಿದೆ. ನಮ್ಮ ದೇಶದಲ್ಲಿ ಈ ಮುಂದೆ ದೇಶಭಾಷಾಪತ್ರಿಕೆಗಳೇ ಪ್ರಬಲ ಪರಿಣಾಮಕಾರಿಗಳಾಗತಕ್ಕವುಗಳಾಧುದರಿಂದ ಸರಕಾರದವರು ಈ ವರ್ಗದವರಲ್ಲಿ ಪ್ರಮುಖರಾದವರನ್ನು ಆಗಿಂದಾಗ ಇದೇ ರೀತಿ ಮನ್ನಿಸುತ್ತಿರುವುದು ರಾಜಪಕ್ಷ ಪ್ರಜಾಪಕ್ಷಗಳೆರಡಕ್ಕೂ ಶ್ರೇಯಸ್ಕರವಾಧುವುದೆಂದು ನಾವು ದೃಢಪಡುತ್ತಿರುವೆವು.

'ಆಶ್ಯಾಖಂಡದ ಕವಿಸಾರ್ವಭೌಮ'ನೆಂದು ನಮ್ಮ ವೈಸರಾಯಿಯವರಿಂದ ಸ್ತುತಿಸಲ್ಪಟ್ಟವರೂ ಸಾಹಿತ್ಯಶಾಖೆಯಲ್ಲಿ "ನೋಬೆಲ್" (Nobel) ಪಾರಿತೋಷಕವನ್ನು ಪಡೆದವರೂ ಆದ ಡಾ॥ ರವೀಂದ್ರನಾಥ ಠಾಕೂರರಿಗೆ "ಸರ್" ಪದವಿಯನ್ನು ಕೊಟ್ಟದ್ದೂ ಬೊಂಬಾಯಿ ಅಧಿಪತ್ಯದಲ್ಲಿ ಶ್ರೀಯುತ ರಣಛೋಡಬಾಯಿ ಉದಯರಾಮ ಎಂಬುವರಿಗೆ ಗ್ರಂಥಕರ್ತೃ (Author) ಎಂಬುದಾಗಿ ವಿಶೇಷಿಸಿ "ದಿವಾನ್‌ಬಹದ್ದೂರ್" ಪದವಿಯನ್ನು ಕೊಟ್ಟದ್ದೂ ಈ ಬಾರಿಯ ಬಿರುದುಗಳ ಪಟ್ಟಿಯಲ್ಲಿ ಕಂಡುಬಂದ ಇನ್ನೊಂದು ಮಹತ್ತರವಾದ ವಿಶೇಷವಾಗಿದೆ. ಸರಕಾರದಿಂದ ಗ್ರಂಥಕರ್ತೃತ್ವಕ್ಕಾಗಿ ಬಿರುದುಗಳು ಎಂದಾದರೂ ಬಂದಿರುವುವೇ ಇಲ್ಲವೇ ಎಂದು ಹೇಳುವುದು ಕಷ್ಟ. ಬಂದಿದ್ದರೂ ಉತ್ತರ ದೇಶದಲ್ಲೆಲ್ಲಾದರೂ ಬಂದಿರಬಹುದೇ ಹೊರತಾಗಿ ಈ ನಮ್ಮ ಮದ್ರಾಸ್ ಅಧಿಪತ್ಯದಲ್ಲಿ ಎಂದೂ ಬಂದಿರುವದಿಲ್ಲವೆಂದು ನಮಗೆ ನಂಬುಗೆಯಾಗಿ ತೋರುತ್ತಿದೆ. ಸರಕಾರದ ನವುಕರಿಯಲ್ಲಿರುವವರಿಗೂ ರಾಜಕೀಯ, ಸಾಮಾಜಿಕ, ಔದ್ಯೋಗಿಕ ಇತ್ಯಾದಿ ಶಾಖೆಗಳಲ್ಲಿ ಮುಂದೆಬಿದ್ದು ಕೆಲಸಮಾಡುವ ಸಜ್ಜನರುಗಳಿಗೂ ಅಪಾರವಾದ ಪ್ರಾಚ್ಯವೈದ್ಯಕ್ಕೆ ನಿಧಿಗಳಾದ ಪೂರ್ವಪದ್ಧತಿಯ ಪಂಡಿತ ಮಂಡಲಿಗೂ ಬಿರುದುಗಳನ್ನೂ ಪಾರಿತೋಷಕಗಳನ್ನೂ ದೊರೆತನದವರು ಮುಕ್ತಹಸ್ತರಾಗಿ ದಯಪಾಲಿಸುತ್ತಿರುವರು. ಇವರಲ್ಲಿಯೇ ಕೆಲವರು ಗ್ರಂಥಕರ್ತೃಗಳಾಗಿರುವುದೂ ಉಂಟು. ಆದರೆ ಲಾಭಪ್ರದವಾದ ಸಮಸ್ತ ಮಾರ್ಗಗಳನ್ನೂ ತೃಣೀಕರಿಸಿ ಕೆಲಕೆಲವುಬಾರಿ ಜನರ ನಿಂದಾಪರಿಹಾಸ್ಯಗಳನ್ನೂ ಕೂಡ ಸಹಿಸಿ ಕೇವಲ ಭಾಷಾಭಿವೃದ್ಧಿಯಲ್ಲಿಯೇ ದೃಷ್ಟಿ ಇಟ್ಟು ತಮ್ಮ ಮುಂದಿನ ಪೀಳಿಗೆಯವರ ಜ್ಞಾನೋನ್ನತಿಯೇ ತಮ್ಮ ಜೀವನದ ಪರಮಪುರುಷಾರ್ಥವೆಂದು ತಿಳಿದು ಅನೇಕಾವೃತ್ತಿ ಅಪಾರವಾದ ಧನನಷ್ಟಕ್ಕೂ ಗುರಿಯಾಗಿ ದೇಶಭಾಷೆಗಳಲ್ಲಿ ಉದ್ದಾಮವಾದ ಗ್ರಂಥಗಳನ್ನು ಬರೆದೂ, ಪ್ರಾಚೀನಗ್ರಂಥಗಳನ್ನು ಪ್ರಕಟಿಸಿಯೂ ವಿಜೃಂಭಣೆ ಇಲ್ಲದೆ ಅಹೋ ರಾತ್ರಿ ಕಷ್ಟಪಟ್ಟು ಕೆಲಸಮಾಡುತ್ತಲಿರುವ ಅರ್ವಾಚೀನ ವಿದ್ಯಾಸಂಪನ್ನರಾದ ಮಹನೀಯರ ಸಾಹಸಗಳ ಪ್ರಾಮುಖ್ಯತೆಯು ಇನ್ನೂ ನಮ್ಮ ಪ್ರಭುತನದವರ ಚಿತ್ತಕ್ಕೆ ಬಂದಿರುವಂತೆ ತೋರುವದಿಲ್ಲ ಎಂಬುದಾಗಿ ಗಣನೀಯರಾದ ನಮ್ಮ ಮಿತ್ರರೊಬ್ಬರು ನಮಗೆ ಬರೆದಿರುವರು. ಇವರ ಮಾತು ಯಥಾರ್ಥವಾದ್ದುದೆಂದೂ ಈ ಕುಂದಕವು ಕ್ಷಿಪ್ರದಲ್ಲಿಯೇ ನಿವಾರಿಸಲ್ಪಡತಕ್ಕದಾಗಿರುವುದೆಂದೂ ನಾವು ಒತ್ತಿ ಹೇಳುವೆವು.

ಉದಾಹರಣೆಯಾಗಿ ನಮ್ಮ ಕನ್ನಡವನ್ನು ಕುರಿತು ಆಲೋಚಿಸುವುದಾದರೆ ದಿವಂಗತರಾದ ಎಸ್. ಜಿ. ನರಸಿಂಹಾಚಾರ್ಯರವರು ಇಂಥ ಬಹುಮಾನಕ್ಕೆ ಕೇವಲ ಪಾತ್ರರಾಗಿದ್ದರೆಂದು ನಾವು ದೃಢವಾಗಿ ಹೇಳಬಲ್ಲೆವು. ಇವರಂತೆ ಕನ್ನಡದ ಉನ್ನತಿಗಾಗಿ ಕಷ್ಟಪಟ್ಟವರು ಇನ್ನೊಬ್ಬರು ಇರುವರೆಂದು ಹೇಳುವದು ಕಷ್ಟವಾಗಿದೆ. ಮತ್ತು ಇವರ ಅಕಾಲಿಕ ಮರಣದಿಂದ ಉಂಟಾದ ನಷ್ಟವು ಎಂದಾದರೂ ತುಂಬಿಬರಬಹುದೆಂದು ನಮಗೆ ತೋರುವುದಿಲ್ಲ. ಮೈಸೂರು ಸೀಮೆಯಲ್ಲಿ ಬಹುಕಾಲ ಉನ್ನತಾಧಿಕಾರಪದದಲ್ಲಿದ್ದು ಅಹರ್ನಿಶವೂ ಲೇಖನವ್ಯವಸಾಯದಲ್ಲಿ ಮಗ್ನರಾಗಿದ್ದು ಅಮರಣಾಂತ ಸಾಹ

ಷದಿಂದ ಬಂಗಾಳೀಭಾಷೆಯ ಉತ್ಕೃಷ್ಟವಾದ ನೂರಾರು ಕಾದಂಬರಿಗಳನ್ನು ಕನ್ನಡಕ್ಕೆ ಪರಿವರ್ತಿಸಿದ ಶ್ರೀಯುತ ಬಿ. ವೆಂಕಟಾಚಾರ್ಯರವರು ಇದೇ ವರ್ಗಕ್ಕೆ ಸೇರಿದ ಇನ್ನೊಬ್ಬರು. ಇವರಿಬ್ಬರ ಹೆಸರುಗಳು ಕನ್ನಡ ಸಾಹಿತ್ಯವಿರುವಷ್ಟು ದಿನವೂ ಕನ್ನಡಿಗರಿಂದ ಮರೆಯಲ್ಪಡಲಾರವಾದರೂ ಇವರಿಗೆ ಸರಕಾರದಿಂದ ತಕ್ಕಂತೆ ಮನ್ನಣೆಯು ದೊರೆಯದೆ ಹೋಯಿತಲ್ಲಾ! ಎಂದು ಚಿಂತಿಸುವೆವು. ಇನ್ನು ಕನ್ನಡಿಗರ ಪುಣ್ಯೋದಯದಿಂದ ಈಗಲೂ ಜೀವಿಸಿಕೊಂಡಿರುವವರೊಳಗೆ ಶ್ರೀಯುತ ಆರ್. ನರಸಿಂಹಾಚಾರ್ಯ ಎಮ್. ಎ. ಯುವರೂ ದೇಶಭಾಷಾಪತ್ರಿಕೆಗಳಿಗೆ ಜನಕದಂತಿರುವ ಶ್ರೀಯುತ ವೆಂಕಟಕೃಷ್ಣಯ್ಯನವರೂ ಮೈಸೂರಿನವರೊಳಗೆ ಇಂಥ ಬಹುಮಾನಗಳಿಗೆ ತುಂಬಾ ಯೋಗ್ಯರಾದವರೆಂದು ಕನ್ನಡಿಗರು ಏಕಾಭಿಪ್ರಾಯವಾಗಿ ಹೇಳದಿರಲಾರರು. ಇವರೊಳಗೆ ಮೊದಲನೆಯವರನ್ನು ಗುಣಗ್ರಾಹಿಗಳಾದ ಮೈಸೂರಿನ ಶ್ರೀಮನ್ಮಹಾರಾಜರವರು ಗೌರವಿಸಿಯೇ ಇರುವರು. ಇವರಂತೆಯೇ ಬೊಂಬಾಯಿಗೆ ಸೇರಿದ ಕರ್ನಾಟಕದಲ್ಲಿಯೂ ಇತರ ಕಡೆಗಳಲ್ಲಿಯೂ ಗಣನೀಯರಾದ ಕನ್ನಡ ಲೇಖಕರು ಇದ್ದೇ ಇರುವರು. ಲೇಖನ ವಿಸ್ತಾರಭಯದಿಂದ ಅವರೆಲ್ಲರ ಹೆಸರುಗಳನ್ನೂ ಯೋಗ್ಯತೆಗಳನ್ನೂ ಹೇಳದಿರಬೇಕಾಗಿದೆ. ಇದೇ ಮೇರೆಗೆ ನಮ್ಮ ಹಿಂದುಸ್ಥಾನದ ಇತರ ಭಾಷೆಗಳಲ್ಲಿಯೂ ಉದ್ದಾಮ ಗ್ರಂಥಕರ್ತೃಗಳು ಬಹುಜನರಿಲ್ಲದೆ ಇಲ್ಲ. ಇವರಲ್ಲಿ ಪ್ರಮುಖರಾದ ಕೆಲವರನ್ನು ಆಗಿಂದಾಗ ಬಿರುದುಗಳನ್ನೋ ಪದಕಗಳನ್ನೋ ಕೊಟ್ಟು ಮುಖ್ಯವಾಗಿ ಗ್ರಂಥಕರ್ತೃತ್ವಕ್ಕಾಗಿಯೇ ಕೊಟ್ಟದೆಂಬ ಸಂಗತಿಯನ್ನು ಸ್ಪಷ್ಟವಾಗಿ ಪ್ರಕಟಪಡಿಸಿ ಗೌರವಿಸುವದು ದೊರೆತನದವರ ಆದ್ಯಕರ್ತವ್ಯವಾಗಿರುವುದೆಂದು ನಾವು ಅಭಿಪ್ರಾಯಪಡುವೆವು.

ಮದ್ರಾಸು ಆಧಿಪತ್ಯದಲ್ಲಿ ವಾಙ್ಮಯಾಭಿವೃದ್ಧಿ.

(ಕಳೆದ ಸಂಚಿಕೆಯಿಂದ ಮುಂದರಿಸಿದುದು.)

ಚಾರಿತ್ರಿಕ (Historical) ಗ್ರಂಥಗಳು ತಮಿಳಿನಲ್ಲಿ ೧೩, ತೆಲುಗಿನಲ್ಲಿ ೭ ಮತ್ತು ಕನ್ನಡದಲ್ಲಿ ಎರಡು ಉಂಟಾದಂತೆ ತಿಳಿಯ ಬರುತ್ತಿದೆ. ಇವುಗಳೊಳಗೆ ಯಾವತ್ತು ತಮಿಳು ಮತ್ತು ಕನ್ನಡ ಪುಸ್ತಕಗಳೂ ಐದು ತೆಲುಗು ಪುಸ್ತಕಗಳೂ ಈಗ ಯೂರೋಪಿನಲ್ಲಿ ನಡೆಯುವ ಮಹಾ ಯುದ್ಧಕ್ಕೆ ಸಂಬಂಧ ಪಡುವವುಗಳಾಗಿವೆ. ತೆಲುಗಿನಲ್ಲಿ 'ಪೆದ್ದಾಪುರ ಸಂಸ್ಥಾನದ ಚರಿತ್ರೆ'ಯೊಂದು ಅಚ್ಚಾಗಿದೆ.

ವಿವಿಧ (miscellaneous) ಎಂಬ ಶಿರೋನಾಮೆಯ ಕೆಳಗೆ ಕನ್ನಡದಲ್ಲಿ 'ಒಕ್ಕಲಿಗನ ಕೈಪಿಡಿ' ಎಂಬ ಚಿಕ್ಕ ಪುಸ್ತಕವು ಮಂಗಳೂರಿನಲ್ಲಿ ಅಚ್ಚಾಗಿದೆ. ಬೇರೆ ಯಾವ ಭಾಷೆಯಲ್ಲಿಯೂ ವಿಶೇಷವಾಗಿ ಹೇಳತಕ್ಕ ಯಾವ ಪುಸ್ತಕವು ಆಗಿರುವುದಿಲ್ಲ.

ತತ್ವಜ್ಞಾನ (philosophy) ವಿಷಯವಾಗಿ ತಮಿಳಿನಲ್ಲಿ ಮೂರೂ ಮಲೆಯಾಳದಲ್ಲಿ ಒಂದೂ ಉಂಟಾಗಿದ್ದೆ. ಇವುಗಳೊಳಗೆ 'ಪರಿಣಾಮವಾದ'ವೆಂಬ ಮಲೆಯಾಳ ಪುಸ್ತಕವು ಹಿಂದೂಧರ್ಮರೀತ್ಯಾ ಪರಿಣಾಮವಾದ (theory of evolution) ವನ್ನು ವಿವರಿಸುವುದಾಗಿ ಮುಖ್ಯವಾಗಿದೆ.

ಕಾವ್ಯ (poetry) ಇಂಗ್ಲಿಷು ೧, ತಮಿಳು ೧೩ (ಒಂದು ಪುನರ್ಮುದ್ರಣ), ತೆಲುಗು ೧೮ (ಒಂದು ಪುನರ್ಮುದ್ರಣ), ಮಲೆಯಾಳ ೪, (ಒಂದು ಪುನರ್ಮುದ್ರಣ) ಕನ್ನಡ ೨ ಹೀಗೆ ಅಚ್ಚಾಗಿವೆ. ತಮಿಳು, ತೆಲುಗು, ಭಾಷೆಗಳಲ್ಲಿ ಅಚ್ಚಾದುವುಗಳೊಳಗೆ ಬಹುಭಾಗವೆಲ್ಲ ಪ್ರಾಚೀನ ಗ್ರಂಥಗಳೆಂದೂ ಅರ್ವಾಚೀನ ಕವಿಗಳ ಕಾವ್ಯಗಳು ಮಹತ್ವದ್ದುವು ಯಾವುವೂ ಇಲ್ಲವೆಂದೂ ಸಂದೇಹ ಬರುತ್ತಿದೆ. ಆದರೆ ಕವಿಯು ಅರ್ವಾಚೀನನೋ ಪ್ರಾಚೀನನೋ ಎಂದು ರಿಪೋರ್ಟಿನಿಂದ ಸ್ಪಷ್ಟವಾಗಿ ಕಂಡು ಹಿಡಿಯಬರುವುದಿಲ್ಲ. ಈ ವಿವರವನ್ನೂ ರಿಜಿಸ್ಟ್ರಾರವರು ಕೂಡ ತೊಡಗಿದರಾದರೆ ಅನುಕೂಲವಾಗಬಹುದು. ಕನ್ನಡದಲ್ಲಿ 'ವೇಂಕಟಗಿರಿ ಮಹಾತ್ಮ್ಯೆ' ಎಂಬುದು ಮಂಗಳೂರಲ್ಲಿ ಅಚ್ಚಾದ ದೊಡ್ಡ ಕಾವ್ಯವಾಗಿದೆ. ಬಳ್ಳಾರಿಯಲ್ಲಿ ಅಚ್ಚಾದ 'ಸಟೀಕಾ ಶಬರ ಶಂಕರ ವಿಲಾಸ'ವೇ ಎರಡನೆಯ ಕನ್ನಡ ಕಾವ್ಯವು. ಇದು ಬಹುಕಾಲಕ್ಕೆ ಹಿಂದೆ ಷಡಕ್ಷರಿ ಕವಿಯಿಂದ ಬರೆಯಲ್ಪಟ್ಟ ಉದ್ಗ್ರಂಥವು. ೧೮೭೭ನೇ ಇಸವಿಯಲ್ಲಿ ಇದೇ ಮುದ್ರಾಶಾಲೆಯಲ್ಲಿ ಇದೇ ಪಂಡಿತರು ಬರೆದ ಟೀಕೆಯೊಡನೆ ಇದೇ ಪ್ರಕಾಶಕರಿಂದ ಅಚ್ಚು ಹಾಕಿಸಲಾದ ಇದೇ ಗ್ರಂಥವನ್ನು ನಾವು ನೋಡಿರುವೆವು. ಆಗಲೇ ಅದರ ಮೂರನೆಯ ಮುದ್ರಣವಾಗಿದ್ದಿತು. ಹೀಗಿರುತ್ತ ಈ ಗ್ರಂಥವನ್ನು ಮೊದಲನೆಯ ಮುದ್ರಣವೆಂದು ರಿಪೋರ್ಟಿನಲ್ಲಿ ಹೇಳಿರುವುದು ಏಕೋ ವಿಚಿತ್ರವಾಗಿದೆ.

ಮತ (Religion) ಸಂಬಂಧವಾಗಿ ಇಂಗ್ಲಿಷಿನಲ್ಲಿ ೨೪ (ಮೂರು ಪುನರ್ಮುದ್ರಣ) ತಮಿಳಿನಲ್ಲಿ ೧೦೬ (ಏಳು ಪುನರ್ಮುದ್ರಣ), ತೆಲುಗಿನಲ್ಲಿ ೫೭ (ಏಳು ಪುನರ್ಮುದ್ರಣ) ಮಲೆಯಾಳದಲ್ಲಿ ೩ (ಒಂದು ಪುನರ್ಮುದ್ರಣ), ಕನ್ನಡದಲ್ಲಿ ೭ (ಒಂದು ಪುನರ್ಮುದ್ರಣ) ಪುಸ್ತಕಗಳು ಅಚ್ಚಾಗಿವೆ. ಇವುಗಳೊಳಗೆ ಇಂಗ್ಲಿಷ್ ಗ್ರಂಥಗಳೆಲ್ಲ ಥಿಯಾಸಾಫಿಗೂ ಕ್ರೈಸ್ತಧರ್ಮಕ್ಕೂ ಸಂಬಂಧ ಪಡುವವುಗಳಾಗಿವೆ. ಪ್ರತಿವರ್ಷ ಪಾದದಲ್ಲಿಯೂ ಬೇರೆ ಯಾವ ಭಾಷೆಗಿಂತಲೂ ತಮಿಳಿನಲ್ಲಿ ಮತಗ್ರಂಥಗಳು ಬಹಳ ಹೆಚ್ಚಾಗಿ ಪ್ರಚುರವಾಗುತ್ತಿರುವ ವಿಷಯವು ವಿಶೇಷವಾಗಿ ಗಮನಿಸಲ್ಪಡತಕ್ಕುದ್ದಾಗಿದೆ. ಇದು ದ್ರಾವಿಡ ಜನರಲ್ಲಿ ನೆಲಸಿರುವ ತೀವ್ರವಾದ ಮತಾಭಿಮಾನ ದ್ಯೋತಕವಾಗಿರಬಹುದಲ್ಲವೇ? ಕನ್ನಡದಲ್ಲಿ ನೂತನವಾಗಿ ಅಚ್ಚಾದುವುಗಳೊಳಗೆ 'ಶಿವಸ್ವರೋದಯ' ಮತ್ತು 'ಚೆನ್ನ ಬಸವಣ್ಣನವರ ವಚನಗಳು' ಎಂಬವು ವೀರಶೈವ ಧರ್ಮ ಪ್ರತಿಪಾದಕಗಳಾದ ಪ್ರಾಚೀನ ಪುಸ್ತಕಗಳಾಗಿವೆ. 'ವೀರಶೈವ ಧರ್ಮಸಿಂಧು'ವೆಂಬುದು ಅದೇ ಹೆಸರಿನ ಪುರಾತನ ಕಾವ್ಯದ ವಚನಾನುವಾದವು. 'ಶ್ರೀ ರಾಘವೇಂದ್ರ ತೀರ್ಥಸ್ವಾಮಿಗಳ ಚರಿತ್ರೆ'ಎಂಬ ಚಿಕ್ಕ ಪುಸ್ತಕವು ಪ್ರಸಿದ್ಧರಾದ ವೈಷ್ಣವ ಸ್ವಾಮಿಗಳ ಚರಿತ್ರೆಯಾಗಿದೆ. 'ಶಿವಲೀಲಾಮೃತ'ದಲ್ಲಿ ವೀರಶೈವ ಭಕ್ತರ ಕಥೆಗಳು ಹೇಳಲಾಗಿವೆ. 'ಪಂಪಾಕ್ಷೇತ್ರ ಮಹಾತ್ಮೆ'ಯು ಹಂಪೆಯ ಶ್ರೇಷ್ಠತ್ವವನ್ನು ಸ್ಥಾಪಿಸುವುದಾಗಿ ಸ್ಕಂದ ಪುರಾಣದ ಒಂದು ಚಿಕ್ಕ ಭಾಗವಾಗಿದೆ. ಈ ಸಮಸ್ತ ಪುಸ್ತಕಗಳು ಬಳ್ಳಾರಿಯಲ್ಲಿ ಅಚ್ಚಾಗಿವೆ.

ವೈಜ್ಞಾನಿಕ (scientific) ಪುಸ್ತಕಗಳು ಇಂಗ್ಲಿಷಿನಲ್ಲಿ ೨, ತಮಿಳಿನಲ್ಲಿ ೨, (ಒಂದು ಪುನರ್ಮುದ್ರಣ) ತೆಲುಗಿನಲ್ಲಿ ೧, ಕನ್ನಡದಲ್ಲಿ ೧ (ಒಂದು ಪುನರ್ಮುದ್ರಣ) ಅಚ್ಚಾಗಿವೆ. ತೆಲುಗಿನಲ್ಲಿ ಅಚ್ಚಾದ 'ಉದ್ಯಾನಕೃಷಿ' ಎಂಬ ಪುಸ್ತಕವು ಉತ್ತಮವಾಗಿರಬಹುದೆಂದು ತೋರುತ್ತಿದೆ. ಕನ್ನಡದಲ್ಲಿ ಪುನರ್ಮುದ್ರಿತವಾದ ಒಂದಾಣೆ ಬೆಲೆಯ 'ಗಣಿತಸಾರ'ವೆಂಬ ಶಾಲಾ ಪುಸ್ತಕವನ್ನು ನ್ಯಾಯವಾಗಿ ವಿದ್ಯಾವಿಷಯಕ (educational) ಎಂಬ ಶಿರೋನಾಮೆಯ ಕೆಳಗೆ ಕಾಣಿಸದೆ ಇಲ್ಲಿ ಏಕೆ ಕಾಣಿಸಿರುವರೋ ತಿಳಿಯದವರಾಗಿರುವೆವು.

ಇದೇ ರಿಪೋರ್ಟಿನಲ್ಲಿ ಬೇರೆ ಬೇರೆ ಭಾಷೆಗಳಲ್ಲಿ ಅಚ್ಚಾಗಿರುವ 'ನಿಯತಕಾಲಿಕ' (periodicals) ಗಳನ್ನು ಕುರಿತು ಸಹ ಹೇಳಿದೆ. ಈ ವಿಷಯವನ್ನು ಕೂಡ ಇಲ್ಲಿಯೇ ಹೇಳಿದೆವಾದರೆ ಲೇಖನವು ಬಹಳ ದೊಡ್ಡದಾಗುವುದೆಂಬ ಭಯದಿಂದ ಈಗಲೇ ಹೇಳದೆ ಮುಂದೆ ಸ್ವತಂತ್ರವಾಗಿ ಒಂದು ಲೇಖನವನ್ನು ಬರೆಯಬೇಕೆಂದಿರುವೆವು. ತಥಾಪಿ ಒಂದು ಸಂಗತಿಯನ್ನು ಕುರಿತು ಇಲ್ಲಿ ಹೇಳದಿರಲಾರೆವು. ಕನ್ನಡದಲ್ಲಿ 'ಸತ್ಯದೀಪಿಕೆ' ಮತ್ತು 'ಶ್ರೀ ಕೃಷ್ಣಸೂಕ್ತಿ' ಎಂಬೆರಡನ್ನು ಮತ (religion) ವಿಷಯಕವಾದ ನಿಯತಕಾಲಿಕ (periodicals) ಗಳೆಂದು ರಿಪೋರ್ಟಿನಲ್ಲಿ ಹೇಳಿದೆ. ಮೊದಲನೆಯದಾಗಿ ಇವೆರಡೂ ಮತ ವಿಷಯಕಗಳೆನ್ನುವುದೇ ಕೇವಲ ಅಸಂಬದ್ಧವಾಗಿ ತೋರುತ್ತಿದೆ. ಸಾಲದುದಕ್ಕೆ ಸತ್ಯದೀಪಿಕೆಯು ರಾಜಕೀಯ ವಿಷಯಕವಾದ ವಾರ ಪತ್ರಿಕೆಯಾಗಿದೆ. ಸತ್ಯದೀಪಿಕೆಯು 'ನಿಯತಕಾಲಿಕ' ವರ್ಗಕ್ಕೆ ಸೇರುವುದಾದರೆ 'ಸ್ವದೇಶಾಭಿಮಾನಿ'ಯೂ ಏತಕ್ಕೆ ಸೇರಕೂಡದೋ ನಾವು ಹೇಳಲಾರೆವು.

ಈ ಲೇಖನವನ್ನು ಮುಗಿಸುವುದಕ್ಕೆ ಮೊದಲು ಒಂದು ಸೂಚನೆಯನ್ನು ಮಾಡಬೇಕೆಂದಿರುವೆವು. ಇತ್ತಿತ್ತಲಾಗೆ ಯಾವತ್ತು ದೇಶಭಾಷೆಗಳಲ್ಲಿ ಪ್ರತ್ಯೇಕ ಪುಸ್ತಕಗಳಾಗಿ ಕಟ್ಟಲು ಅನುಕೂಲಿಸುವಂತೆ ಪುಟ ಸಂಖ್ಯೆ ಕೊಟ್ಟು ಎಷ್ಟೋ ಪುಸ್ತಕಗಳನ್ನು 'ನಿಯತಕಾಲಿಕ'ಗಳಲ್ಲಿ ಪ್ರಚುರಗೊಳಿಸುತ್ತಿರುವರು. ಶ್ರೀ ಕೃಷ್ಣಸೂಕ್ತಿಯೇ ಇಂಥ ೧೦-೧೫ ಪುಸ್ತಕಗಳನ್ನು ಪ್ರಕಾಶಪಡಿಸಿದೆ. ಈ ಯಾವ ಪುಸ್ತಕಗಳೂ ರಿಪೋರ್ಟಿನಲ್ಲಿ ಕಂಡು ಬರುವುದಿಲ್ಲ. ಇವನ್ನು ಸೇರಿಸಿದಲ್ಲದೆ ರಿಪೋರ್ಟಿನ ಪ್ರಯೋಜನವು ತುಂಬ ಕಡಿಮೆಯಾಗುವುದೆಂದು ನಾವು ಬೇರೆಯಾಗಿ ಹೇಳಬೇಕಾದುದ್ದಿಲ್ಲ. ಆದುದರಿಂದ ಪ್ರತಿ ರಿಪೋರ್ಟಿನಲ್ಲಿ ಇಂಥ ಪುಸ್ತಕಗಳೂ ಸೇರುವಂತೆ ಅಗತ್ಯವಾಗಿ ಏನಾದರೊಂದು ಏರ್ಪಾಡು ಮಾಡಬೇಕೆಂದು ನಾವು ಅಭಿಪ್ರಾಯಪಡುವೆವು.

ಪತ್ರವ್ಯವಹಾರ.

'ಶಾಲಾಸಮಾಪ್ತಿ' ಪರೀಕ್ಷೆಯ ಪ್ರಾಪ್ತಿ.

ಇವೇ ಕೆಲವು ವರ್ಷಗಳಿಂದ ಹೊಸತಾಗಿ ಜಾರಿಗೆ ಬಂದಿರುವ ಪರೀಕ್ಷೆಯನ್ನು ಇಂಗ್ಲಿಷಿನಲ್ಲಿ 'ಸ್ಕೂಲ್‌ಫಾಯ್ನಲ್' ಎಂದು ಕರೆವರು. ಅದನ್ನು ಭಾಷಾಂತರಿಸಿದರೆ, 'ಶಾಲಾಸಮಾಪ್ತಿ' ಎಂದು ಅರ್ಥವಾಗುವದು. ಇದು ವಾಸ್ತವಿಕವಾಗಿಯೂ ಈ ಪರೀ

ಕ್ಷೆಯು ಅನ್ವರ್ಥನಾಮವಾಗಿ ಪರಿಣಮಿಸಿ, ವಿದ್ಯಾರ್ಥಿಗಳಿಗೆ ವಿಶೇಷವಾಗಿ ಈ ವರ್ಷ ಅನರ್ಥಕರವಾದುದಾಗಿದೆ.

ಈ ಹೊಸ ಪರೀಕ್ಷೆಯನ್ನು ಉದ್ದೇಶಿಸಿ, ಇದರ ನಿಯಮಗಳನ್ನು ರೂಢಿಗೆ ತರುತ್ತಿರುವಾಗ, ಸರ್ ಬ್ರೂನ್‌ರೆಂಬ ನಮ್ಮ ಮಾಜಿ ಡೈರೆಕ್ಟರರು ಇದರ ಫಲವು ಕಾರ್ಯತಃ ಕೆಟ್ಟದ್ದು ಆಗಲಾಗದೆಂದೆಣಿಸಿದ್ದರೂ ವಿದ್ಯಾ ವಿಷಯಗಳಲ್ಲಿ ವಿಶೇಷ ವ್ಯಾಸಂಗವುಳ್ಳ ಡೊಕ್ಟರ್ ಮಿಲ್ಲರರೇ ಮುಂತಾದ ಪ್ರತಿಭಾಶಾಲಿಗಳು ಈ ಪರೀಕ್ಷೆಯ ದೆಸೆಯಿಂದ 'ಮಿಲಿಯ' ಕಟ್ಟಲೆಯ ವಿದ್ಯಾರ್ಥಿಗಳಿಗೆ ಮಿತಿಮೀರಿದ ದುರ್ದಶೆಯುಂಟಾಗಿ ಉಚ್ಚವಿದ್ಯಾಭ್ಯಾಸಕ್ಕೆ ತೊಡಕೂ, ಅವಹೇಳನವೂ, ತಿರಸ್ಕಾರವೂ ಉಂಟಾಗುವುದೆಂದು ನಿರ್ಣಯಿಸಿದ್ದರು. ಎಣಿಸಿದದು ಒಂದು, ಆದರೆ ಆದುದು ಬೇರೇ ಒಂದು!

ಬೇರೆ ಯಾವತ್ತು ಪರೀಕ್ಷೆಗಳಿಗೂ ಈ ಪರೀಕ್ಷೆಗೂ ಪ್ರಬಲವಾದ ಅನೇಕ ಪ್ರಭೇದಗಳಿವೆ. ಪ್ರತಿಯೊಂದು ಪರೀಕ್ಷೆಗೂ ಪೂರ್ಣ ಮನಸ್ಸಿನಿಂದ ಕಲಿತುಕೊಳ್ಳತಕ್ಕ ವಿಷಯಗಳಿವೆ, ಅವಲ್ಲಿ ಕೆಲವನ್ನು ಐಚ್ಛಿಕ ವಿಷಯಗಳಾಗಿ ಕಲಿಯುವ ರೂಢಿಯೇನೋ ಇರಬಹುದು. ಆದರೆ, ಈ ಪರೀಕ್ಷೆಯ ವಿಷಯಗಳಲ್ಲಿ ಕೆಲವನ್ನು ಮಾತ್ರ ಸಂಪೂರ್ಣ ಮನಸ್ಸಿನಿಂದಲೂ, ಉಳಿದುವುಗಳಲ್ಲಿ ಹಲವನ್ನು ಅರೆಮನಸ್ಸಿನಿಂದಲೂ, ಮಿಕ್ಕವುಗಳನ್ನು ಅಪೂರ್ಣ ಮನಸ್ಸಿನಿಂದಲೂ ಕಲಿಯಲೇ ಬೇಕು! ಭೂಗೋಳ ಶಾಸ್ತ್ರವನ್ನು ಮೊದಲೇ ಅರೆಮನಸ್ಸಿನಿಂದ ಕಲಿಯುತಲಿದ್ದ ಬಾಲಕರು ಈಗ ಅದನ್ನು ಸಂಪೂರ್ಣವಾಗಿಯೂ ಅಪೂರ್ಣ ಮನಸ್ಸಿನಿಂದ ಕಲಿಯಲೇ ಬೇಕಾಗಿದೆ. ವ್ಯವಹಾರ ಜ್ಞಾನವು ಹೆಚ್ಚಾಗುವ ಹಾಗೆ ಶಾಲೆಯಲ್ಲಿ ಪ್ರತ್ಯಕ್ಷಕಾರ್ಯದಿಂದ ಕಲಿಯತಕ್ಕ ವಿಷಯಗಳಿವೆ, ಇವುಗಳಲ್ಲಿ ಆಸಕ್ತಿಯು ಹೆಚ್ಚುತ್ತ ಬಾರದೆ ಹೋದರೆ, ವಿದ್ಯಾರ್ಥಿಗಳಿಗೆ ಬೇಕಾಗಿರುವ ಮಾರ್ಕುಗಳ ಸಂಖ್ಯೆಯು ದೊರಕದು. ಈ ಕಡೆ ಆಸಕ್ತಿಯಿಂದ ಕಲಿಯುವನೆಂದರೆ, ವಿದ್ಯಾರ್ಥಿಯು ಎರಡು ವರ್ಷಗಳಲ್ಲಿ ಕಲಿತುಕೊಳ್ಳಲಾಗದ ದಪ್ಪನಾದ ಹತ್ತೆಂಟು ಪುಸ್ತಕಗಳನ್ನು ಹತ್ತು ತಿಂಗಳೊಳಗೆ ಓದಿ ಕಲಿತು ಸಾಕಷ್ಟು ಅಭ್ಯಾಸಮಾಡಬೇಕಾಗಿದೆ. ಹೀಗೆ ವ್ಯವಹಾರ ಜ್ಞಾನ ವೊಂದೆಸೆ, ಪುಸ್ತಕ ಜ್ಞಾನವೊಂದೆಸೆಯಾಗಿ ವಿದ್ಯಾರ್ಥಿಯ ಮನಸ್ಸು ಪಾರಗಳ ಒಳಗಿರಬೇಕೋ, ಹೊರಗಿರಬೇಕೋ ಏನೆಂದು ತಿಳಿಯದು.

ಈ ಪರೀಕ್ಷೆಯಲ್ಲಿ ಒಬ್ಬ ವಿದ್ಯಾರ್ಥಿಯು ಪಾಸ್ ಹೊಂದಿದರೂ ಅವನು ಮುಂದಣ ವಿದ್ಯಾ ತರಗತಿಯನ್ನು ಸೇರದ ಹಾಗೆ,—ಕಾಲೇಜಿನ ವೈಕುಂಠ ದ್ವಾರಗಳನ್ನು ಮುಚ್ಚಲಾಗುವ ಉಪಾಯವಿದೆ. ದೇವರೇ ಕೊಟ್ಟರೂ, ಪೂಜಾರಿಯು ಬಿಟ್ಟು ಕೊಡದ ಹಾಗೆ ಆಗಿಂದಾಗ ಅಪೂರ್ವವಾದ ನಿಯಮಗಳಿವೆ. ನೂರರಲ್ಲಿ ೪೦ ಸಿಕ್ಕುವಲ್ಲಿ ೫೫ ಬೇಕಾದರೆ ಮಾರ್ಕುಗಳ ಮಟ್ಟಿಗೆ ದೊರಕಿರಲಿ, ಒಂದಾನೊಂದು ಸೂತ್ರದ ಪ್ರಕಾರ ೫೦ ದೊರಕದೆ ಇವನನ್ನು ಕಾಲೇಜಿನ ಸೂತ್ರಕ್ಕೆ ಬಾರದಂತೆ ಉಲ್ಲಂಘಿಸಲಾಗುವ ಅಪೂರ್ವ ಶಾಸನವಿದೆ. ಪಾಸೆಂದು ಹುಡುಗನು ಹಿಗ್ಗಿ ಶಾಲೆಗೆ ಹೊರಗಾಗುವನು, ಫೈಲೆಂದು ಹುಡುಗನು ಕುಗ್ಗಿ ಕಾಲೇಜಿಗೆ ಹೊರಗಾಗುವನು. ಹುಡುಗನು 'ಪಾಸೋ' 'ಫೈಲೋ' ಎಂದು ತಿಳಿಯುವುದು ಮಹಾ ಸಂಕಟ. ಅಂತೂ ಇಂತೂ ಶಾಲೆಗೂ ಕಾಲೇಜಿಗೂ ಹೊರಗಾಗಿ ಕೊನೆಗೆ ಈ ಪರೀಕ್ಷೆಗೆ ಓದುತ್ತಿದ್ದ ಹುಡುಗನು ಈ ವಿದ್ಯಾವ್ರತವನ್ನು ಉದ್ಯಾಪನಗೊಳಿಸಿ, ಶಾಲೋನ್ಮುಕ್ತನೂ, ಕೆಲವು ಸಾರಿ ಜೀವನ್ಮುಕ್ತನೂ ಆಗುವನು. ಇದಲ್ಲವೆ ಯಥಾರ್ಥವಾಗಿಯೂ 'ಶಾಲಾಸಮಾಪ್ತಿ'!

ಯಾವ ಪರೀಕ್ಷೆಯಲ್ಲಾದರೂ ಪಾಸಾದರೆ ಮಾತ್ರ ಒಂದು ಹಾಳೆ ಅಗಲದ ಕಾಗದದೊಳಗೆ ಅದರ 'ಸರ್ಟಿಫಿಕೇಟು' ಮುಗಿಯುವುದು. ಈ ಪರೀಕ್ಷೆಯಲ್ಲಿ ಫೈಲೇ ಆದರೂ ಒಂದು ಸರ್ಟಿಫಿಕೇಟು ಇದ್ದೇ ಇದೆ, ಮತ್ತೂ ಇದು, ಒಂದು ಪ್ರಕಾಂಡವಾದ ತೋಳುದ್ದದ ಪುಸ್ತಕಾಕಾರವನ್ನುಳ್ಳದ್ದಾಗಿ ಹುಡುಗನ 'ಹಣೆಬರಹ'ವನ್ನೂ, 'ಕರ್ಮಫಲ'ವನ್ನೂ ಕಲಿಯುಗದ ಬ್ರಹ್ಮ ಚಿತ್ರಗುಪ್ತಾದಿಯರಿಂದ ಸ್ಪಷ್ಟವಾಗಿ ಬರೆಸಿ,—ಮುಂದಣ ಫಲಭೋಗಕ್ಕಾಗಿ ಹುಡುಗನನ್ನು ಕಾಲೇಜಿನ ಧರ್ಮಸ್ವಾಮಿಗಳಿಗೆ ಒಪ್ಪಿಸಿಬಿಡುವುದು. ಹುಡುಗನ ಸ್ವತ್ವವು ಸರಿಯಾಗಿರುವ ಹಾಗೆ, 'ಕೇಡಿ'ಗಳಂತೆ ಅವನು ತನ್ನ ಕಯ್ಬೆರಳುಗಳ ಅಚ್ಚಿನಿಂದ ಆ ಸರ್ಟಿಫಿಕೇಟು ಗ್ರಂಥದ ಮೊದಲನೆ ಪುಟಗಳ ಪೀಠಿಕಾಧ್ಯಾಯದಲ್ಲೇ ಚಿತ್ರಿಸಬೇಕಾಗಿರುವುದು. ಅವುದೊಂದು ದೇವತೆಯನ್ನು ಅಥವಾ ಜಪವನ್ನು ಕೈಕೊಳ್ಳುವುದಕ್ಕೆ ಮೊದಲಾಗಿ ಅಂಗಾಂಗಗಳಿಂದಲೂ ಆ ದೇವತೆಯನ್ನು ಪೂಜಿಸುವಂತೆ,—ಇದೀಗ ವಿದ್ಯಾಂಬೆಯನ್ನು 'ಅಂಗುಷ್ಠಾಭ್ಯಾನ್ನಮಃ' 'ತರ್ಜನೀಭ್ಯಾನ್ನಮಃ' ಇತ್ಯಾದಿ ನಮಸ್ಕಾರ ಮೂಲಕವಾಗಿ ಆವಾಹನಗೈದು, ಕೊನೆಗೆ 'ಶಾಲಾಸಮಾಪ್ತಿ'ಯ ಪರೀಕ್ಷೆಯ ಆಚರಣೆಯಿಂದ ತನ್ನ ವಿದ್ಯಾಭ್ಯಾಸಕ್ಕೇ ಜಲಾಂಜಲಿಯನ್ನೀವುದು!

'ಶಾಲಾಸಮಾಪ್ತಿ' ಪರೀಕ್ಷೆಯಲ್ಲಿ ಫೈಲಾಗಿದ್ದರೂ ಪಾಸಾದಂತೆ ಕಾಲೇಜುಗಳನ್ನು ಸೇರಿದ ಹಲವು ತರುಣ ವಿದ್ಯಾ ಉಪಾಸಕರಿರುವರು. ಇವರು ಸಾಮಾನ್ಯವಾಗಿ ದನವಂತರು. ಪರದೇಶವನ್ನು ಸೇರಿದರೂ ಪೂರ್ಣ ಸಂಬಳತೆತ್ತು, ಅಥವಾ ಅನ್ಯ ಬಗೆಯ ಶಿಫಾರಿಸು ಪತ್ರ ದ್ವಾರಾ ಕಾಲೇಜು ವೈಕುಂಠದ ಜಯವಿಜಯರು ಈ ಸನಕಸನಂದರನ್ನು ಒಳಕ್ಕೆ ಶ್ರೀಸನ್ನಿಧಿಯ ಒಳಗೆ ಹೋಗಗೊಡುವರು. ಈ 'ಶಿಫಾರಸು' ಪತ್ರದ 'ಪಾಸ್' ಕಳೆದ ವರ್ಷದಲ್ಲಿ ಹೆಚ್ಚಾಗಿದ್ದುದರಿಂದ ಈಗ ಯುನಿವರ್ಸಿಟಿಯವರು ಪ್ರತಿಬಂಧಕಗಳನ್ನು ಕಲ್ಪಿಸಿರುವರು. ತಜ್ಜನ್ಯವಾದ ಆಚರಣೆಯಿಂದ ನೂರಕ್ಕೆ ಆರರಂತೆ ಪಾಸಾದ ಈ ವರ್ಷದ ವಿದ್ಯಾರ್ಥಿಗಳಲ್ಲಿ ಮೂರರಂತೆ ಮಾತ್ರ ಕಾಲೇಜವನ್ನು ಸೇರುವರಂತೆ,—ಎಂದರೆ, ನೂರರಲ್ಲಿ ತೊಂಬತ್ತೇಳು ಮಂದಿಗಳು ಬೂರುಗದ ಮರವನ್ನು ಕಾದ ಗಿಣಿಯಂತೆ ರಾರಾಜಿಸದೆ ಇರುವರೇ?

ಇಷ್ಟೂ ಸಾಲದೆ,—ಮತ್ತೊಂದು! ಈ ಪರೀಕ್ಷೆಯು ಸರಾಸರಿಗಳ ಗಲಭೆಯಲ್ಲೂ ಮಾರ್ಕುಗಳ ಅಸಂಖ್ಯಾತವಾದ ಸಂಖೆಗಳ ದಾಂಧಲೆಯಲ್ಲೂ ವಿಕಾಸಗೊಂಡಿರುವದು. ನಾಲ್ಕನೇ ಫೋರ್ಮಿನಿಂದ ಪರೀಕ್ಷೆಗೆ ಹೋಗುವ ವರೆಗೆ ಹುಡುಗನಿಗೆ ಗಂಟೆ ಗಂಟೆಗೆ, ಹೊತ್ತು ಹೊತ್ತಿಗೆ, ದಿನದಿನಕ್ಕೆ, ವಾರವಾರಕ್ಕೆ, ಮಾಸಮಾಸಕ್ಕೆ, ತ್ರೈಮಾಸಕ್ಕೊಮ್ಮೆ, ಅರ್ಧವರ್ಷಕ್ಕೊಮ್ಮೆ, ವರ್ಷಕ್ಕೊಮ್ಮೆ ಮಾರ್ಕುಗಳ ಸಾಲುಗಳನ್ನು ಉಪಾಧ್ಯಾಯರು ಬರೆಯುತ್ತಲಿದ್ದು ಕೊನೆಗೆ ಶಾಲಾ ಸಮಾಪ್ತಿ ಪರೀಕ್ಷೆಯ ಪರೀಕ್ಷಾ ಸಮಾಪ್ತಿಕಾಲದಲ್ಲೂ ಮತ್ತಷ್ಟು ಮಾರ್ಕುಗಳನ್ನು ಬರೆಯಬೇಕು. ಇವೆಲ್ಲವುಗಳ ಸರಾಸರಿಯು ಆಗಾಗ ನಡೆಯುತ್ತಲಿದ್ದು ಶಾಲಾ ಸರಾಸರಿ, ಪ್ರಾಂತಿಕ ಸರಾಸರಿಗಳೊಂದಿಗೆ ಈ ಪರೀಕ್ಷೆಗೆ ಬಂದ ಉಮೇದ್ವಾರನ ಮಾರ್ಕುಗಳ ಸರಾಸರಿಯನ್ನು ಹೋಲಿಸಬೇಕು! ಈ ಗಡಿಬಿಡಿಯಿಂದ ಹುಡುಗನ ಅವಸ್ಥೆಯೇ ಸ-ರಾ-ಸ-ರಿ! ಮಾರ್ಕುಗಳನ್ನು ಬರೆಯಬೇಕಾಗಿರುವ ಉಪಾಧ್ಯಾಯ ಚಿತ್ರಗುಪ್ತರು,—ದೇವರ ನಾಮವನ್ನು ಬರೆಯ ತೊಡಗಿದ್ದರೆ, ಒಂದೇ ಒಂದು ಮಾಸದೊಳಗೆ ಪರಂಧಾಮವನ್ನು ಸೇರಬಹುದು!! ನಿಜವಾಗಿಯೂ ಉಪಾಧ್ಯಾಯನೇ ಪರಮಗುರುವಾಗಿ ಘನತೇಜದಿಂದ ಮುಮುಕ್ಷುವಾಗಿ, ಪರೀಕ್ಷಾಪತ್ರಗಳ ಪರ್ಯಶಯನ(ಅವುಗಳನ್ನು ಪರೀಕ್ಷಿಸುವವರ ದರ್ಭಶಯನ)ದಲ್ಲಿ ನಾರಾಯಣನೇ ಆಗಲೂ ಬಹುದು!! ಯಮರಾಜನು ಹೇಗೆ ಜೀವಿಗಳ ಉಸಿರುಗಳ ನಿಮಿಷಗಳನ್ನು ಲೆಕ್ಕಮಾಡುತ್ತಲಿರುವನೋ ಹಾಗೆಯೇ ಈ ಬಡ ವಿದ್ಯಾರ್ಥಿಗಳನ್ನು ಅನಿಮೇಷ ಜಾಗ್ರತೆಯಿಂದ ಮಾರ್ಕುಮಾಡುತ್ತಲಿರುವರು! ಮತ್ತೂ,—ಈ ಮಾರ್ಕುಗಳಿಗೂ ಆ ಸರ್ಟಿಫಿಕೇಟು ಗ್ರಂಥದಲ್ಲಿ ಸ್ಥಳ ಬಿಟ್ಟಿದೆ!!

ವಿಶಾಲವಾದ ಗಂಗೊಳ್ಳಿ ನದಿಯ ಆಳವನ್ನು 'ಸರಾಸರಿ' ಮಾಡಿದವರೊಬ್ಬರಿದ್ದರು, ಇದ್ದರು, ಆದರೆ 'ಸರಾಸರಿ'ಯ ದೆಸೆಯಿಂದ ಅವರು ಈಗ ಇಲ್ಲ. ಕೆಲವು ಕಡೆ ನೂರಡಿ ಆಳವಾಗಿಯೂ, ಹಲವೆಡೆ ಎರಡೇ ಅಡಿ ಆಳವಾಗಿಯೂ ಇರುವ ಈ ಮಹಾ ನದಿಯ ಆಳವು 'ಸರಾಸರಿ' ಮೂರಡಿಯೆಂದು ಅವರು ಲೆಕ್ಕಪ್ರಕಾರ ಕಂಡುಹಿಡಿದರು. ಆ ಮೇಲೆ, ಮೂರಡಿ ಸರಾಸರಿ ಆಳದ ನೀರನ್ನು ಕಾಲ್ನಡೆಯಿಂದಲೇ ದಾಟಲಾಗುವುದೆಂದು ಅಳಿವೆಯ ಕಡೆ ನಡೆದೇ ಹೋದರು. ಹೋದವರು, ಹೋಗಿಯೇ ಹೋದರು, ಮರಳಲೇ ಇಲ್ಲ. ಅರಬಿಸಮುದ್ರದ ಸರಾಸರಿಯನ್ನು ಕಂಡು ಹಿಡಿಯುವ ಯುಕ್ತಿಯಲ್ಲಿ ಆಸಕ್ತರಾಗಿರುವರೆಂದು ಇನ್ನೂ ಹೇಳಲು ಅಡ್ಡಿ ಇದೆ. ಅದೂ ಒಂದು ಬಗೆಯ 'ಜೀವನ ಶಾಲಾ ಸಮಾಪ್ತಿಯ' ಸ—ರಾ—ಸ—ರಿ!!

M. N. K.

ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.

ಸ್ವಾಮೀ,

ಈ ಪರಿಷತ್ತಿನ ಕಾರ್ಯನಿರ್ವಾಹಕಕ್ಕೋಸ್ಕರ ಬೆಂಗಳೂರಲ್ಲಿ ಕನ್ನಡಿಗರ ಸಭೆಯು ಕೂಡಿದಾಗ ಒಂದು ಉಪಸಭೆಯನ್ನು ಮಾಡಿದ್ದರು. ಅಗ್ಯೆ ನಿಶ್ಚಯಿಸಲ್ಪಟ್ಟಂತೆ ಕಳೆದ ತಿಂಗಳಲ್ಲಿ ಈ ಉಪಸಭೆಯು ಕೂಡಬೇಕಿತ್ತು. ಉಪಸಭೆಯು ಕೂಡಿ ಏನೇನಷ್ಟು ಕಾರ್ಯವಿವರವನ್ನು ನಡೆಸಿದೆ, ಆಯಾ ಪ್ರಾಂತ್ಯಗಳಿಂದ ಆರಿಸಲ್ಪಟ್ಟ ಪ್ರತಿನಿಧಿಗಳು ಈ ಉಪಸಭೆಗೆ ಬಂದಿದ್ದರೋ ಎಂಬ ವಿಷಯದಲ್ಲಿ ಈ ಪರಿಷತ್ತಿಗೆ ಸಂಬಂಧಪಟ್ಟ ಬೆಂಗಳೂರಿನ ಮಹನೀಯರಲ್ಲಿ ಯಾರಾದರೂ ತಿಳಿಸುತ್ತಿದ್ದರೆ ಉಪಕಾರವಾಗುವದು. ಕನ್ನಡ ಸಾಹಿತ್ಯ ಪರಿಷತ್ತಿನ ಶಾಖೆಯೊಂದನ್ನು ಮಾಡುವ ಎಂತ ಇಲ್ಲಿ ಕೆಲವರು ಯೋಚಿಸುತ್ತಿದ್ದಾರೆ. ಮುಖ್ಯವಾಗಿ ಯಾವ ಕಾರ್ಯದ ಮೊದಲು ಬೆಂಗಳೂರಿನ ಮುಖ್ಯ ಸಭೆಯು ಏನುಮಾಡುತ್ತಿದೆ ಎಂಬದನ್ನು ತಿಳಿಯುವದು ಅಗತ್ಯವಾಗಿದೆ. ಆದ್ದರಿಂದ ಬಲ್ಲವರ್ಯಾರಾದರೂ ತಿಳಿಸಬೇಕೆಂಬ ವಿಜ್ಞಾಪನೆ.

ಕನ್ನಡದ ಕನ್ನಡಿಗ.

ಯುದ್ಧ ಸಮಾಚಾರ.

ತಾ. ೨೬ನೇ ಜೂನ್ ೧೯೧೫

ಜರ್ಮನರ ಒಂದು ಜಲಾಂತರ್ಗಾಮಿ ನಾವೆಯು ಬೋರ್ಕಮ್ ಎಂಬಲ್ಲಿ ಸಿಡಿದಿರುವದು. ಇಬ್ಬರು ನಾವಿಕರು ರಕ್ಷಣೆ ಹೊಂದಿರುವರು. ಉಳಿದವರು ಮುಳುಗಿರುವರು.

ಜೂನ್ ತಾ ೨೩ಕ್ಕೆ ಅಂತ್ಯವಾಗುವ ವಾರದಲ್ಲಿ ಬ್ರಿಟಿಷರ ೩ ವ್ಯಾಪಾರ ಹಡಗುಗಳನ್ನು ಜರ್ಮನರ ಜಲಾಂತರ್ಗಾಮಿ ನಾವೆಗಳು ಮುಳುಗಿಸಿರುವವು. ಬ್ರಿಟಿಷ ಬಂದರಗಳಿಗೆ ಹೋಗಿ ಬಂದ ವ್ಯಾಪಾರ ಹಡಗಗಳ ಸಂಖ್ಯೆ ೧೪೬೯.

ಸೌಸೆಜ್ ಪ್ರಾಂತ್ಯದಲ್ಲಿ ಫ್ರೆಂಚರು ಶತ್ರುಗಳ ಮೇಲೆ ನುಗ್ಗಿ ಹೋಗಿ ಮುಂದರಿದಿರುತ್ತಾರೆ. ಕೊಲೋನಿನಲ್ಲಿ ಮ್ಯುಸಿನ ಗುಡ್ಡಗಳಲ್ಲಿ ಕಠಿಣ ಕಾಳಗ ನಡೆಯುವ ಹಾಗೆ ಇದೆ. ಜರ್ಮನರು ಇಡೀ ರಣರಂಗದಲ್ಲಿ ಜೋರಾವರಿಯಿಂದ ಫ್ರೆಂಚರ ಮೇಲೆ ಬಿದ್ದು ವಿಷಕರವಾದ ಬೊಂಬುಗಳನ್ನೂ, ದ್ರಾವಕಗಳನ್ನೂ ಪ್ರಯೋಗಿಸಿದರು. ಶತ್ರುಗಳು ಮಿತ್ರರ ಹಳೇ ನೆಲೆಯ ಎರಡನೇ ಸಾಲನ್ನು ಭೇದಿಸಿ ನಂತರ ಹಿಂದಕ್ಕೆ ಅಟ್ಟಲ್ಪಟ್ಟರು. ಮಧ್ಯ ರಾತ್ರಿಗೆ ಪುನಃ ನುಗ್ಗಲು ಪ್ರಯತ್ನಿಸಿ ವಿಶೇಷ ನಷ್ಟಪಟ್ಟು ಚದರಿ ಹೋದರು. ಅರ‍್ರಾಸ್, ಮ್ಯೂಸ್ ಪ್ರಾಂತ್ಯದಲ್ಲಿ ನುಗ್ಗಿ ಬಂದ ಜರ್ಮನರು ಹಿಮ್ಮೆಟ್ಟಿರುತ್ತಾರೆ. ಮ್ಯೂಸ್ ಮತ್ತು ಐನೆಯ ಮಧ್ಯೆ ಕಠಿಣ ಕಾಳಗ ನಡೆದು ಶತ್ರುಗಳು ಹಿಂದಕ್ಕೆ ಓಡಿರುತ್ತಾರೆ. ಡೊನಾಯಿ ಎಂಬ ಸ್ಟೇಶನನ್ನು ಫ್ರೆಂಚ ವಿಮಾನಗಾಮಿಗಳು ಹಾಳುಗೆಡಿಸಿರುತ್ತಾರೆ.

ಇಂಗ್ಲಾಂಡಿನಲ್ಲಿ ಯುದ್ಧಸಾಮಾಗ್ರಿಗಳನ್ನು ತಯಾರು ಮಾಡುವ ಕೆಲಸಗಾರರನ್ನು ಒದಗಿಸುವ ಪ್ರಯತ್ನವು ಬಹು ಆಸಕ್ತಿಯಿಂದ ನಡಿಯುತ್ತಿದೆ. ಇಂಗ್ಲಾಂಡಿನ ಪ್ರತಿ ಪಟ್ಟಣದ ಸಭಾಸದನಗಳು ಕೆಲಸಗಾರರನ್ನು ಒದಗಿಸಿ ಕೊಡುವ ಕೊಠಡಿಗಳಾಗಿ ಮಾರ್ಪಟ್ಟಿವೆ. ಸಾವಿರಾರು ಜನರು ಯುದ್ಧಸಾಮಾಗ್ರಿಗಳನ್ನು ಮಾಡುವ ಕೆಲಸಕ್ಕೆ ತಮ್ಮನ್ನು ಒಪ್ಪಿಸಿಕೊಡುತ್ತಿದ್ದಾರೆ.

ಅಲೆಕ್ಝಾಂಡ್ರ ಮಹಾರಾಣಿಯವರು ಬ್ರೈಟನ್ ಆಸ್ಪತ್ರೆಯಲ್ಲಿರುವ ಗಾಯ ಒಡೆದ ಭಾರತೀಯ ಸೈನಿಕರನ್ನು ಸಂದರ್ಶಿಸಿರುತ್ತಾರೆ. ಆನಂತರ ರಾಣಿಯವರು ಚೇರೆಯಿಂದ ದೇರೆಗೆ ಹೋಗುತ್ತಿರಲು ಗಾಯ ಒಡೆದ ಒಬ್ಬ ಸಿಕ್ಖ ಸೈನಿಕನು ಬ್ರಿಟಿಷರಿಗೆ ಜಯವಾಗುವ ಹಾಗೆ ಪ್ರಾರ್ಥಿಸುತ್ತಿದ್ದದನ್ನು ಕಂಡರು. ಅಲ್ಲಿಂದ ಅಡಿಗೆ ಕೋಣೆಗೆ ಹೋಗಿ ಭಾರತೀಯರ ಬಗ್ಗೆ ತಯಾರಾದ ವಿಧವಿಧದ ಅಡಿಗೆಯ ರುಚಿ ನೋಡಿ ಸಂತೋಷಪಟ್ಟರು.

ಬರುವ ೧೯೧೬ನೇ ಮಾರ್ಚ ತಿಂಗಳ ಅಂತ್ಯದೊಳಗೆ ಬ್ರಿಟಿಷ ನೌಕಾವಳಿಗೆ ೨೫೦,೦೦೦ ಮತ್ತು ಹೆಚ್ಚಿಗೆ ೫೦ ಸಾವಿರ ಮಂದಿ ಆಫೀಸರರೂ ಸೈನಿಕರೂ ಬೇಕಾಗಿರುವರು ಎಂತ ತಿಳಿದು ಬಂದಿದೆ. ಜರ್ಮನಿಯಲ್ಲಿ ಸೆರೆಯಾಳುಗಳಾಗಿದ್ದ ೪೩೦ ಬ್ರಿಟಿಷರು ಇಂಗ್ಲಾಂಡಿಗೆ ಕಳುಹಿಸಲ್ಪಡುವರು. ಇಂಗ್ಲಾಂಡಿನಿಂದ ೨೧೦ ಜರ್ಮನರು ಜರ್ಮನಿಗೆ ಕಳುಹಿಸಲ್ಪಡುವರು.

ಶತ್ರುಗಳು ಲಿಂಬರ್ಗ, ಬ್ರಿಜಾನಿ, ಕಾಮೊಂಕ ರೈಲ್ವೆಗಳನ್ನು ಹಲ್ಲೆಮಾಡುತ್ತಿದ್ದಾರೆ. ನೀಸ್ಟರನ್ನು ದಾಟಿದ ಜರ್ಮನರನ್ನು ರುಶ್ಯನರು ಹಿಂದಕ್ಕೆ ಓಡಿಸಿರುತ್ತಾರೆ. ಉಳಿದ ಜರ್ಮನರು ಕೌಜ್ರಿ ಡಿಸ್ಟ್ರಿಕ್ಟನ್ನು ದಾಟಿರುತ್ತಾರೆ. ನೇಟು ರಣರಂಗದಲ್ಲಿ ಕಠಿಣ ಕಾಳಗ ನಡೆಯುತ್ತಿದೆ. ನೀಸ್ಟರಿನಲ್ಲಿ ಜರ್ಮನ ಮತ್ತು ಆಸ್ಟ್ರಿಯನರ ದೊಡ್ಡ ಸೇನೆಯನ್ನು ಹಿಂದಟ್ಟುವ ಕೆಲಸದಲ್ಲಿ ರುಶ್ಯನರು ಪುನಃ ೧೦೦೦ ಮಂದಿಯನ್ನು ಸೆರೆಹಿಡಿದಿರುತ್ತಾರೆ. ಗೆಲೀಸಿಯದ ಬೊಬ್ರ ಕಜುರೋಸ ರಣರಂಗದಲ್ಲಿ ಕಠಿಣ ಕಾಳಗ ನಡೆದು ರುಶ್ಯನರು ಹಿಂದೆ ಸರಿದಿರುವರು. ರುಶ್ಯನರು ೧೬೪೬ ಮಂದಿಯನ್ನು ಸೆರೆ ಹಿಡಿದಿರುತ್ತಾರೆ. ಗೆಲೀಸಿಯದ ೭ ವಾರಗಳ ಕದನದಲ್ಲಿ ರುಶ್ಯನರು ಶತ್ರುಗಳ ೧೩೫,೦೦೦ ಸೈನಿಕರನ್ನೂ, ೩೦೦ ಯಾಂತ್ರಿಕ ಫಿರಂಗಿಗಳನ್ನೂ, ೫೦ ಫಿರಂಗಿಗಳನ್ನೂ ಸೆರೆ ಹಿಡಿದಿರುತ್ತಾರೆ.

ಇಸೊನ್ಝೊ ರಣರಂಗದಲ್ಲಿ ಆಸ್ಟ್ರಿಯನರು ಇಟಲಿಯಾನರ ಮೇಲೆ ವಿಷಕರವಾದ ಗ್ಯಾಸನ್ನು ಬಿಟ್ಟಿರುತ್ತಾರೆ.

ಮೊಂಟೆನಿಗ್ರೊಯಾನರ ಸೇನೆಯು ಸ್ಕುಟಾರಿಯ ಸಮೀಪ ಬಂದಿಳಿದಿರುವದು. ಮೊಂಟೆನಿಗ್ರೊಯಾನರ ನಾವೆಯು ಆಸ್ಟ್ರಿಯಾನರ ೨ ವ್ಯಾಪಾರ ಹಡಗಗಳನ್ನು ಹಿಡಿದಿರುತ್ತದೆ.

ತಾರೀಕು ೨೯ನೇ ಜೂನ್.

೬೦೦ ಟನ್ ಭರಾವಣಿಯ "ಇಂದ್ರಾನಿ" ಎಂಬ ಹಡಗವನ್ನು ಜರ್ಮನ ಜಲಾಂತರ್ಗಾಮಿ ನಾವೆಯು ಐರಿಸ್ ಸಮುದ್ರದಲ್ಲಿ ಮುಳುಗಿಸಿರುವದು. ನಾವಿಕರು ರಕ್ಷಣೆಹೊಂದಿರುತ್ತಾರೆ.

ಅಮೇರಿಕ ಸರಕಾರದವರು ಜರ್ಮನಿಗೆ ಕಳುಹಿಸಿಕೊಟ್ಟ ಪತ್ರಕ್ಕೆ ಸಮರ್ಪಕವಾದ ಉತ್ತರ ಸಿಕ್ಕುವ ಹಾಗೆ ಇದೆ ಎಂತ ತಿಳಿದು ಬರುತ್ತದೆ.

ಇಟಲಿಯನರೊಡನೆ ಕಾದಾಡುವರೆ ಆಸ್ಟ್ರಿಯನರ ದೊಡ್ಡ ಬೆಂಬಲ ಸೇನೆಯು ಬಂದಿರುವದು. ಆದುದರಿಂದ ಮಲ್ಬರ್‌ಗೆರ್ಟ, ಲವರೋನ್ ಮತ್ತು ಟೊಲಿಮಿನಿಮೊ ಪ್ರಾಂತ್ಯಗಳಲ್ಲಿ ರಣರಂಗವು ಕಂದಕಗಳ ರಣರಂಗವಾಗಿ ಪರಿಣಮಿಸಿಯದೆ.

ಬಂಗಾಳ ಎಂಬ ಲೇನ್ಸರೋರು ಮುಂಬಾಯಿಗೆ ಬಂದು ತಲುಪಿರುವರು. ಇವರು 'ಮದ್ರಾಸ್' ಆಸ್ಪತ್ರೆಹಡಗದಲ್ಲಿ ಬಸ್ರಾಕ್ಕೆ ಹೋಗುವರು.

ತಾರೀಕು ೩೦ನೇ ಜೂನ್

ಅರ‍್ರಾಸಿನಲ್ಲಿ ಫ್ರೆಂಚರು ಮುಂದರಿಯುತ್ತಲಿದ್ದಾರೆ.

ಇಂಗ್ಲಾಂಡಿನಲ್ಲಿರುವ ಜನರ ಜನಸಂಖ್ಯೆಯನ್ನು ಮಾಡುವ ವಿಚಾರದು ನಡೆದದೆ. ಇದರಲ್ಲಿ ಕಾನೆಸುಮಾರಿ ಲೆಕ್ಕದಂತೆ ಪ್ರತಿ ಕುಟುಂಬದ ಜನರ ಪ್ರಾಯ, ಕಸಬು, ಇತ್ಯಾದಿಗಳು ತಕ್ಕೊಳ್ಳಲಾಗುವವು. ಈ ಕಾನೂನು ಮಸೂದೆಯನ್ನು ಮೆ। ವಾಲ್ಟರ್‌ಲೊಂಗ ಎಂಬವರು ಬ್ರಿಟಿಷ ಪಾರ್ಲಿಮೆಂಟ ಸಭೆಯಲ್ಲಿ ಇಟ್ಟು ೧೫ ವರ್ಷದಿಂದ ೬೫ ವರ್ಷದ ವರೆಗಿನ ಸ್ತ್ರೀಪುರುಷರ ಪ್ರಾಯ ಮತ್ತು ಕಸಬನ್ನು ಕಡ್ಡಾಯವಾಗಿ ರಿಜಿಸ್ತ್ರಿ ಮಾಡಿಸಬೇಕೆಂದೂ ಅವರಿಗೆ ಇರುವ ತಮ್ಮ ತಮ್ಮ ಸರ್ವಸಾಧಾರಣವಾದ ಕೆಲಸದೊಂದಿಗೆ ಯುದ್ಧ ಸಂಬಂಧವಾದ ಸ್ಪೆಶಲ್ ಕೆಲಸ ಕೊಡೋಣಾಗುವದೆಂದೂ ಇದರಿಂದ ಸರಕಾರದವರಿಗೆ ಪ್ರತಿ ಒಬ್ಬನ ಸಹಾಯಮಾಡುವ ಸಂಭವ ಉಂಟಾಗುವದೆಂದೂ ಹೇಳಿರುತ್ತಾರೆ.

ಒಜಾರೋ ಡಿಸ್ಟ್ರಿಕ್ಟಿನಲ್ಲಿ ವಿಸ್ತುಲದ ಎಡದಡದಲ್ಲಿ ಮೇಲ್ಬಾಯಿದ ಜರ್ಮನರು ವಿಶೇಷ ನಷ್ಟಹೊಂದಿ ಹಿಮ್ಮೆಟ್ಟಿರುತ್ತಾರೆ.

ತಾರೀಕು ೧ನೇ ಜುಲೈ

ಮೆಟ್ಜರಾಲಿನ ಪೂರ್ವದಲ್ಲಿ ಫ್ರೆಂಚರು ಎಲ್ಲಾ ನೆಲೆಗಳನ್ನು ಪುನಃ ಹಿಡಿದಿರುವರು.

ಬ್ರಿಟಿಷ ಪ್ರಧಾನಮಂತ್ರಿಯವರಾದ ಮಿ। ಅಸ್ಕ್ವಿತರವರು ಗಿಲ್ಡಹೋಲಿನಲ್ಲಿ ಧೀಮಣಕೊಟ್ಟು "ಬ್ರಿಟಿಷರು" ಅಂತ್ಯದ ವರೆಗೆ ಹೋರಾಡುವರು. ನಮ್ಮ ಬಲದ ಕಡೇ ಫಾರ್ಥಿಂಗ್, ನಮ್ಮ ಸೇನಾಬಲದ ಕಡೇ ಟಿನ್ ನಮ್ಮ ರಕ್ತದ ಕಡೇ ಬಿಂಧುವಿರುವ ವರೆಗೆ ಹೋರಾಡುವೆವು ಎಂದು ಹೇಳಿರುವರು.

ಜರ್ಮನರು ಲಬ್ಲಿನಿನ ವಿಸ್ಪ್ರಿಜ್ ನದಿ ಮತ್ತು ಪಶ್ಚಿಮ ಬಗ್ ಎಂಬಲ್ಲಿ ಮುಂದರಿಯುತ್ತಿದ್ದಾರೆ. ಟೊಮೊಸೊಫ್ ಪ್ರಾಂತ್ಯದಲ್ಲಿ ರುಶ್ಯನರ ರಿಯರ್‌ಗಾರ್ಡ ಸೇನೆಯು ಜರ್ಮನರನ್ನು ಓಡಿಸಿರುವದು. ಜರ್ಮನರಿಗೆ ನೀಸ್ಟರಿನಲ್ಲಿ ಹೊಸ ಸೇನೆಯು ಬಂದು ಕೂಡಿರುವದು.

ಮೊಂಟೆನಿಗ್ರೊಯನರು ಸಾನ್‌ಗಿವಾನ್ನಿಯನ್ನು ಹಿಡಿದಿರುವರೆಂದೂ ಅಲ್ಬಾನಿಯರು ಮೊಂಟೆನಿಗ್ರೊ ಅರಸರನ್ನು ತಮ್ಮ ಅರಸನಾಗಿ ಸ್ವೀಕರಿಸಿರುವರೆಂದೂ ವಾರ್ತೆ ಇದೆ.

ತಾರೀಕು ೨ನೇ ಜುಲೈ.

ಬಾಲ್ಟಿಕ್ ಕರಾವಳಿಯಲ್ಲಿರುವ ವಿಂಡೋ ಎಂಬಲ್ಲಿಗೆ ಜರ್ಮನರ ಯುದ್ಧನಾವೆಗಳು ಹಲ್ಲೆಮಾಡಿ ಕರೆಗಿಳಿಯಲು ಪ್ರಯತ್ನಿಸಿದರು. ಆದರೆ ರುಶ್ಯನರು ಶತ್ರುಗಳನ್ನು ಹಿಂದಕ್ಕಟ್ಟಿದರು. ಶತ್ರುಗಳ ಒಂದು ಡಿಸ್ಟ್ರೋಯರ್ ನಾವೆಯು ಸಿಡಿಮದ್ದಿಗೆ ಸಿಕ್ಕಾಗಿ ಮುಳುಗಿರುತ್ತದೆ.

ಜರ್ಮನರ U ೩೯ ಸಬ್‌ಮೆರಿನ್ ನೋರ್ವೇದೇಶದವರ ಒಂದು ವ್ಯಾಪಾರ ಹಡಗವನ್ನು ಮುಳುಗಿಸಿರುತ್ತದೆ. 'ಸ್ಕೊಟಿಸ್ ಮೊನಾರ್ಕ" ಮತ್ತು "ಅರ್ಮೀನಿಯನ್" ಎಂಬ ವ್ಯಾಪಾರ ಹಡಗಗಳನ್ನು ಸಬ್‌ಮೆರಿನ್ ನಾವೆಯು ಮುಳುಗಿಸಿರುತ್ತದೆ. "ಅರ್ಮೀನಿಯನ್" ನಾವೆಯಲ್ಲಿದ್ದ ಅಮೇರಿಕದೇಶದ ೨೦ ಮಂದಿ ಮುಳುಗಿ ಸತ್ತರು ಎಂಬ ವಾರ್ತೆ ಇದೆ.

ಅರ‍್ರಾಸಿನಲ್ಲಿ ಫ್ರೆಂಚರು ಪುನಃ ಸ್ವಲ್ಪ ಮುಂದರಿದಿರುತ್ತಾರೆ. ಆರ್ಗೋನ್ನೆಯಲ್ಲಿ ಜರ್ಮನರು ೩ ದಿವಸ ಎಡೆಬಿಡದೆ ಫಿರಂಗಿಗಳನ್ನು ಹಾರಿಸಿ ಎರಡಾವರ್ತಿ ನುಗ್ಗಿ ಬಂದರು. ಆದರೆ ಮಿತ್ರರು ಅವರನ್ನು ಓಡಿಸಿದರು. ಪುನಃ ಜರ್ಮನರು ನುಗ್ಗಿಬಂದು ಬಗಟೆಲ್ಲಿಯ ಸಮೀಪ ಫ್ರೆಂಚ ನೆಲೆಗಳನ್ನು ಮುರಿದರು. ಇತರ ಕಡೆಯಲ್ಲಿ ಜರ್ಮನರು ಕಠಿಣಕಾಳಗಮಾಡಿ ಹಿಮ್ಮೆಟ್ಟಿದರು. ಮುಖ್ಯವಾಗಿ ಆರ್ಗೋನ್ನೆಯಲ್ಲಿ ಕಠಿಣಕಾಳಗ ನಡೆಯುತ್ತಿರುವದು. ಮೆಟ್ಜರಾಲಿನಲ್ಲಿ ಇನ್ನೊಂದು ಕಠಿಣಕಾಳಗ ನಡೆದು ಜರ್ಮನರು ವಿಶೇಷ ನಷ್ಟಪಟ್ಟರು.

ಜರ್ಮನರು ತಮ್ಮ ದೇಶದಲ್ಲಿ ಹತ್ತಿಯಿಂದ ವಸ್ತ್ರ ಇತ್ಯಾದಿಗಳನ್ನು ಮಾಡಕೂಡದೆಂದು ಕಟ್ಟಾಜ್ಞೆ ಮಾಡಿರುತ್ತಾರೆಂತ ಜರ್ಮನಿಯ ಒಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಜರ್ಮನರು ವಿಪ್ರಿಜ್ ಮತ್ತು ಬಗ್‌ನದಿಗಳ ಮಧ್ಯೆ ನುಗ್ಗಿ ಬಂದಿರುವರು. ರುಶ್ಯನರು ಬಗ್‌ನದಿಯ ಮೇಲೆ ನುಗ್ಗಿಬಂದ ಜರ್ಮನರನ್ನು ಹಿಂದಟ್ಟಿರುತ್ತಾರೆ. ಹೆಲಿಸ್ ಎಂಬಲ್ಲಿ ಶತ್ರುಗಳು ನೀಸ್ಟರ್ ನದಿಯನ್ನು ದಾಟುತ್ತಿರುವದನ್ನು ರುಶ್ಯನರು ನೋಡಿ ಅವರ ಸೇನೆಯ ಕಡೆಗೆ ನುಗ್ಗಿಹೋಗಿ ಅವರನ್ನು ಹಿಂದಕ್ಕಟ್ಟಿ ಕೆಲವು ನೂರು ಸೈನಿಕರನ್ನು ಸೆರೆಹಿಡಿದಿರುವರು ಎಂತ ಪ್ರಕಟವಾಗಿದೆ.

ಕನ್‌ಸ್ಟಂಟಿನೋಪಲಿನಲ್ಲಿದ್ದ ಇಟಲಿ ರಾಯಭಾರಿಯನ್ನು ಇಟಲಿಯಾನರು ಹಿಂದೆ ಕರೆಯಿಸಿರುವರು.

ಮೊಂಟೆನಿಗ್ರೊಯಾನರು ಸ್ಕುಟಾರಿಯನ್ನು ಹಿಡಿದು ಆಸ್ಟ್ರಿಯನರ ದೆಸೆಯಿಂದ ನಿರ್ವಾಹವಿಲ್ಲದೆ ತಾವು ಸ್ಕುಟಾರಿಯನ್ನು ಸ್ವಾಧೀನಮಾಡಿಕೊಳ್ಳ ಬೇಕಾಯಿತೆಂತ ಶ್ರೇಷ್ಟ ರಾಜ್ಯಗಳಿಗೆ ತಿಳಿಸಿರುವರು.

ತಾರೀಕು ೩ನೇ ಜುಲೈ

ಜರ್ಮನರು ವಿಂಡೋ ಎಂಬಲ್ಲಿಗೆ ಬೊಂಬು ಹಾಕಿದ್ದರಿಂದ ಸ್ವಲ್ಪ ಮಾತ್ರ ನಷ್ಟ ಉಂಟಾಗಿರುವದು. ಪ್ರಾಣಾಪಾಯ ಉಂಟಾಗಲಿಲ್ಲವೆಂತ ಪ್ರಕಟವಾಗಿದೆ.

ಜರ್ಮನರ ಸಬ್‌ಮೆರಿನ್ ಬ್ರಿಟಿಷರ ೨ ವ್ಯಾಪಾರ ಹಡಗಗಳನ್ನು ಕೋರ್ನವಾಲ್ ಎಂಬಲ್ಲಿ ಮುಳುಗಿಸಿರುತ್ತದೆ. ಈ ಹಡಗಗಳ ನಾವಿಕರು ಫಾಲ್‌ಮೌತಿನಲ್ಲಿ ಇಳಿದಿರುತ್ತಾರೆ. ಇಟಲಿಯಾನರ ಒಂದು ನಾವೆಯನ್ನು ಜರ್ಮನರ ಸಬ್‌ಮೆರಿನ್ ಟೊರ್ಪೆಡೋ ಮೂಲಕ ಮುಳುಗಿಸಿರುತ್ತದೆ. ನಾವಿಕರಲ್ಲಿ ೯ ಮಂದಿ ಮುಳುಗಿ ಸತ್ತರು. ಇಬ್ಬರು ಗಾಯದಿಂದ ಸತ್ತರು.

'ಲೈಟ್‌ನಿಂಗ್' ಎಂಬ ಹೆಸರಿನ ಬ್ರಿಟಿಷರ ಒಂದು ಹಳೇ ಡಿಸ್ಟ್ರೋಯರ್ ಯುದ್ಧನಾವೆಯು ಸಿಡಿಮದ್ದಿನ ಗನಿ ಯಾ ಟೊರ್ಪೆಡೋದ ಹೊಡತದಿಂದ ಮುಳುಗಿರುವದು.

ಜರ್ಮನರು ಐಪ್ರೆ, ವೈಪ್ರೆಸ್, ಸೌಸೆಜನಲ್ಲಿ ಪ್ರಚಂಡವಾದ ಬೊಂಬುಗಳನ್ನು ಹಾರಿಸುತ್ತಲಿದ್ದಾರೆ. ಆದರೆ ಪ್ರಯೋಜನ ಹೊಂದಲಿಲ್ಲ. ಆರ್ಗೋನ್ನೆಯಲ್ಲಿಯೂ ವಿಷಕರವಾದ ಗ್ಯಾಸ್ ಮತ್ತು ಬೊಂಬುಗಳನ್ನು ಹಾಕಿ ವಿಶೇಷ ಯತ್ನದಿಂದ ನುಗ್ಗಿಬಂದ ಜರ್ಮನರಿಗೆ ಜಯವಾಗಲಿಲ್ಲ.

ಟ್ರಿಸ್ಟಿಗೆ ಕಳದ ಮೂರು ವಾರಗಳ ಟೆಲಗ್ರಾಫ್ ಟಪ್ಪಾಲು ಇತ್ಯಾದಿಗಳ ವ್ಯವಹಾರವು ನಡಿಯುವದಿಲ್ಲ. ಇಟಲಿಯಾನರು ಪ್ರತಿ ಕಡೆಯಲ್ಲಿ ಜಯಪ್ರದರಾಗ ತ್ತಾ ಮುಂದರಿಯುತ್ತಲಿದ್ದಾರೆ.

ಗೆಲೀಸಿಯದಲ್ಲಿ ಕಮಿಯೋಂಕ ಮತ್ತು ಹೆಲಿಸ್ಜ ಎಂಬ ಸ್ಥಳಗಳ ಮಧ್ಯೆ ರುಶ್ಯನರು ಜರ್ಮನರನ್ನು ಹಿಂದಟ್ಟಿರುತ್ತಾರೆ.

ತಾರೀಕು ೫ನೇ ಜುಲೈ.

ಬಾಲ್ಟಿಕ ಸಮುದ್ರದಲ್ಲಿ ರುಶ್ಯನರಿಗೂ ಜರ್ಮನರಿಗೂ ನೌಕಾವಳಿ ಯುದ್ಧ ನಡೆದು ಜರ್ಮನರ "ಅಲ್ಬಟ್ರೋಸ್" ಎಂಬ ಯುದ್ಧನಾವೆಯು ಕರೆ ಸೇರಿರುವದು. ೨೧ ನಾವಿಕರು ಹತರಾದರು. ೨೭ ಮಂದಿ ಗಾಯಪಟ್ಟರು. ಜರ್ಮನರ ಒಂದು ಯುದ್ಧ ಹಡಗವನ್ನು ರುಶ್ಯನರ ಜಲಾಂತರ್ಗಾಮಿ ನಾವೆಯು ಮುಳುಗಿಸಿರುವದು.

ಡರ್ಡನೆಲ್ಸಿನಲ್ಲಿ ಫ್ರೆಂಚಸೇನೆಯ ಜನರಲರಾದ ಗೌರಾಂಡರವರು ಕಠಿಣ ಗಾಯಪಟ್ಟಿರುತ್ತಾರೆ.

ಅರ್ಡಿನಾಬಿದಲ್ಲಿ ತುರ್ಕರಿಗೂ ಮಿತ್ರಸೇನೆಗಳಿಗೂ ಕದನವಾಗಿ ತುರ್ಕರು ಸೋತುಹೋಗಿರುತ್ತಾರೆ. ರುಶ್ಯನರ ಸಬ್‌ಮೆರಿನ್

ಕೆಪ್ಪುಸಮುದ್ರದಲ್ಲಿ ಶತ್ರುಗಳ ೩ ವ್ಯಾಪಾರ ಹಡಗಗಳನ್ನು ಮುಳುಗಿಸಿರುತ್ತದೆ.

ಫ್ರಾನ್ಸಿನಲ್ಲಿ ಮಿತ್ರಸೇನೆಕರು ಪ್ರತಿ ಕಡೆಯಲ್ಲಿಯೂ ಮುಂದರಿಯುತ್ತಲಿದ್ದು ನುಗ್ಗಿಬಂದ ಶತ್ರುಗಳನ್ನು ಹಿಂದಕ್ಕಟ್ಟಿರುತ್ತಾರೆ.

ಅಮೇರಿಕದ ನ್ಯೂಯಾರ್ಕ ನಗರದ ಸೆನೇಟ್ ಮಂದಿರದಲ್ಲಿ ಫಕ್ಕನೇ ಒಂದು ಸಿಡಿತ ಉಂಟಾಗಿರುವದು. ಅನಂತರ ಫ್ರೇಂಕ್ ಹೋಲ್ಟ್ ಎಂಬ ಜರ್ಮನನು ಮಿ॥ ಜೆ. ಪಿ. ಮೋರ್ಗನ್ ಎಂಬವರನ್ನು ಗುಂಡು ಹೊಡೆದು ಕೊಂದನು. ಯೂರೋಪಿಗೆ ಯುದ್ಧ ಸಾಮಗ್ರಿಗಳನ್ನು ಕಳುಹಿಸುವದನ್ನು ನಿಲ್ಲಿಸುವ ಹಾಗೆ ತಾನು ಮೋರ್ಗನರಿಗೆ ಗುಂಡು ಹೊಡೆದೆನೆಂದು ಆ ಜರ್ಮನ ಘಾತುಕನು ಒಪ್ಪಿರುತ್ತಾನಲ್ಲದೆ ಸೆನೇಟ್ ಮಂದಿರದಲ್ಲಾದ ಸಿಡಿತಕ್ಕೆ ತಾನೇ ಕಾರಣನೆಂದು ಅರಿಕೆ ಮಾಡಿರುತ್ತಾನೆ

ವಿಸ್ಚುಲ ಮತ್ತು ಬಗ್ ನದಿಗಳ ಮಧ್ಯೆ ನುಗ್ಗಿ ಬರುವ ಜರ್ಮನರನ್ನು ರುಶ್ಯನರು ತಡೆದಿರುವರು. ಬಗ್ ಮತ್ತು ಕಾರ್ಸ್ನಿಕದಲ್ಲಿ ಕಠಿಣ ಕಾಳಗ ನಡೆಯುತ್ತಿದೆ

ಇಟಲಿಯನರು ಕಾರ್ನಿಯದಲ್ಲಿ ಆಸ್ಟ್ರಿಯಾನರ ಕೆಲಸಗಳನ್ನು ಹಾಳುಪಡಿಸಿರುತ್ತಾರೆ ಪೋಲ್‌ಗ್ರೇಂಡೆಯ ಉತ್ತರದಲ್ಲಿ ನುಗ್ಗಿಬಂದ ಶತ್ರುಗಳನ್ನು ಎರಡಾವರ್ತಿ ಇಟಲಿಯನರು ಓಡಿಸಿರುವರು.

ಉತ್ತರ ಹಿಂದೂಸ್ಥಾನ.

ಇದೇ ಕಳದ ಜೂನು ೨೬ ತಾ॥ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೫೭೦ ಮಂದಿಗೆ ಪ್ಲೇಗು ಬೇನೆಯು ಸೋಂಕಿ ೪೧೨ ಮರಣಗಳಾದವು. ಈ ಪೈಕಿ ಮುಂಬಾಯಿಯಲ್ಲಿ ೧೩೮; ಬಂಗಾಳ ೫, ಬಿಹಾರ್ ೯ ಸಂಯುಕ್ತಸಂಸ್ಥಾನ ೧, ಪಂಜಾಬು ೧೯೦ ಬರ್ಮಾ ೪೨, ಮಧ್ಯಸಂಸ್ಥಾನ ೬, ಮೈಸೂರು ೨೧, ವಾಯುವ್ಯ ಸರಹದ್ದು ೨ ಮರಣಗಳಾಗಿರುವವು.

ಕುಷ್ಠರೋಗಿಗಳ ಬಗ್ಗೆ ಏರ್ಪಟ್ಟ ಮಿಶ್ಯನಿನ ವರದಿಯು ಈಗ ತಾನೇ ಪ್ರಕಟವಾಗಿರುವದು. ಹಿಂದೂಸ್ಥಾನದಲ್ಲಿ ಈ ಮಿಶ್ಯನಿನ ಆರೈಕೆಯಲ್ಲಿ ೪೨೭೦ ಕುಷ್ಠರೋಗಿಗಳಿರುವರು ಕುಷ್ಠರೋಗಿಗಳಿಂದ ಜನಿಸಿದ ಆರೋಗ್ಯವಂತರಾದ ಮಕ್ಕಳ ಬಗ್ಗೆ ಈ ಮಿಶ್ಯನಿನವರು ಮಾಡಿದ ಏರ್ಪಾಡಿನಿಂದ ಉತ್ಕೃಷ್ಟವಾದ ಫಲವು ಹುಟ್ಟಿಬಂದಿರುವದು.

ಮಿಯನ್ ಸಿಂಘಿನ ಬಾಜಪುರ ಎಂಬಲ್ಲಿ ಒಬ್ಬ ಕನ್‌ಸ್ಟೇಬಲನ ಮೇಲೆ ಅನಾಯಕಮಂಡಲಿಯವರಿಂದ ಒಂದು ಬೊಂಬು ಎಸೆಯಲ್ಪಟ್ಟಿರುವದು. ಬೊಂಬು ಸಿಡಿಯಲಿಲ್ಲ ಘಾತುಕನು ತಲೆ ತಪ್ಪಿಸಿಕೊಂಡಿರುವನು

ದಿನಜಪುರದ ಮುಜಾರಾಜರ ಬಿಹಾರಿ ಕೆಲಸದವನೊಬ್ಬನು ರೆವೆರೆಂಡ್ ಸಮ್ಮರ್ಸ್ ಎಂಬವರ ಕ್ರೈಸ್ತ ಕೆಲಸದವನಿಗೆ ದೊಣ್ಣೆಯಿಂದ ಹೊಡೆದು ಕೊಂದಿರುವನು ಮೃತನ ಹೆಂಡತಿ ಮತ್ತು ಮಗುವಿಗೂ ಕಠಿಣ ಗಾಯಪಡಿಸಿರುತ್ತಾನೆ. ಇವರು ಆಸ್ಪತ್ರೆಯಲ್ಲಿ ಮೋದಂಡ ಸ್ಥಿತಿಯಲ್ಲಿರುವರು. ಈ ಕೊಲೆಯ ಕಾರಣವು ಗೊತ್ತಾಗಲಿಲ್ಲ.

ಪಿಯಾನಿಯ ಒಂದು ಗ್ರಾಮದಲ್ಲಿ ಒಂದು ಸತಿಸಹಗಮನವು ನಡೆದ ವಾರ್ತೆಯು ಈಗ ತಾನೇ ಬಂದಿರುವದು ಸುಮಾರು ಒಂದು ವರ್ಷದಿಂದ ಅಸ್ವಸ್ಥದಲ್ಲಿದ್ದ ಗಂಡನು ಸತ್ತನೆಂಬ ವಾರ್ತೆಯು ಅವನ ಯುವಕಳಾದ ಪತ್ನಿಗೆ ಸಿಕ್ಕಿದಾಕ್ಷಣ ಗಂಡನ ಜೊತೆಯಲ್ಲಿಯೇ ತಾನು ಸಾಯುತ್ತೇನೆಂದು ಹೇಳಿದಳು. ಮೃತನ ದೇಹವನ್ನು ಸುಡುಗಾಡಿಗೆ ವೈಯುತ್ತಿರುವಾಗ ಈ ಹೆಂಗಸೂ ಶವದ ಜೊತೆಯಲ್ಲಿಯೇ ಹೋದಳು. ಸುಡುಗಾಡಿಗೆ ಬರಬಾರದೆಂತ ಅವಳನ್ನು ಒತ್ತಾಯಪಡಿಸಿದರೂ ಅವಳು ಕೇಳದೆ ಅಲ್ಲಿಗೆ ಬಂದೇ ಬಿಟ್ಟಳು ಗಂಡನ ಶವವು ಸುಡುತ್ತಿರುವಾಗ ಈ ವಿಧವೆಯು ಫಕ್ಕನೇ ಚಿತೆಗೆ ಹಾರಿದ್ದರಿಂದ ಸುತ್ತಲಿದ್ದವರು ಅವಳ ಜೀವವನ್ನು ಉಳಿಸುವರೆ ಪ್ರಯತ್ನಪಡುವಷ್ಟರಲ್ಲಿ ಸುಟ್ಟು ಹೋದಳು. ಈ ವಿಷಯವನ್ನು ಪೋಲಿಸ್ ಸಬ್ ಇನ್ಸ್‌ಪೆಕ್ಟರರಿಗೆ ತಿಳಿಸಿದ್ದರಿಂದ ಅವರು ಮೃತಳ ಸಂಬಂಧಿಕರಲ್ಲಿ ೯ ಮಂದಿಯನ್ನು ಕೈದುಮಾಡಿರುತ್ತಾರೆ. ಈ ಸತಿಸಹಗಮನದ ವಾರ್ತೆಯನ್ನು ಕೇಳಿದ ಅಜುಬಾಜಿನ ಜನರು ಚಿತಿಯ ಬಳಿಗೆ ಹೋಗಿ ಕೈಮುಗಿದು ಬಂದಿರುತ್ತಾರೆ.

—:o.—

ಲಾಹೋರಿನಲ್ಲಿ ಪ್ರಕಟವಾಗುವ “ಸೇವಕಾ ಧರ್ಮಪ್ರಚಾರಕ” ಎಂಬ ಪತ್ರಿಕೆಯಲ್ಲಿ ಅವಾಚ್ಯವಾದ ಒಂದು ಪ್ರಕಟನೆಯನ್ನು ಪ್ರಸಿದ್ಧಮಾಡಿದ್ದರಿಂದ ಈ ಪತ್ರಿಕೆಯ ಪ್ರಕಾಶಕರಿಗೆ ೫೦ ರೂಪಾಯಿಯ ಜುಲುಮಾನೆ ವಿಧಿಸೋಣಾಗಿರುವದ.

ಗ್ವಾಲಿಯೋರಿನಲ್ಲಿ ಲಾಷ್ಕರ್ ಇಂಡಸ್ಟ್ರಿಯಲ್ ಕೋ-ಒಪರೇಟಿವ್ ಸೊಸೈಟಿ ಎಂಬ ಹೆಸರಿನಿಂದ ಒಂದು ಪರಸ್ಪರ ಸಹಾಯಕ ಸಂಘವು ಸ್ಥಾಪಿಸೋಣಾಗಿರುವದು. ಗ್ವಾಲಿಯೋರಿನಲ್ಲಿ ಈ ಮೊದಲು ಪರಸ್ಪರ ಸಹಾಯಕ ಸಂಘಗಳು ಸ್ಥಾಪಿಸಲ್ಪಟ್ಟಿದ್ದಿಲ್ಲ. ಸ್ಥಾಪಿಸಲ್ಪಟ್ಟ ಈ ಸಂಘಕ್ಕೆ ೨॥ ಲಕ್ಷ ರೂಪಾಯಿಗಳ ಮೂಲಧನವಿದೆ ಸಿಂಧಿಯಾ ಮಹಾರಾಜರವರು ಈ ಸಂಘದ ಪೋಷಕರಾಗಿರುವರು.

ಲಾಹೋರು ರಾಜದ್ರೋಹ ಒತ್ತೂರಿ ಮೊಕದ್ದಮೆಯಲ್ಲಿ ತಪ್ಪಿಸಿಕೊಂಡಿದ್ದ ರತ್ನಸಿಂಘನೆಂಬವನನ್ನು ಹೊಸರ್‌ಪುರ ಡಿಸ್ಟ್ರಿಕ್ಟನಲ್ಲಿ ಕೈದುಮಾಡಿರುತ್ತಾರೆ. ಇವನನ್ನು ಹಿಡಿದು ಕೊಟ್ಟವರಿಗೆ ೨೦೦೦ ರೂಪಾಯಿ ಬಹುಮಾನ ಕೊಡೋಣಾಗುವದೆಂದು ಸರಕಾರದವರು ಪ್ರಕಟಿಸಿದ್ದರು.

ಯುದ್ಧಕ್ಕೆ ಬೇಕಾದ ಯುದ್ಧಸಾಮಗ್ರಿಗಳನ್ನು ಒದಗಿಸುವ ಕೆಲಸವು ಹಿಂದೂಸ್ಥಾನದ ಸರಕಾರದವರಿಂದ ಕೈಕೊಳ್ಳಲ್ಪಡುವದು ಈ ಸಂಬಂಧ ತಕ್ಕ ಏರ್ಪಾಡು ಮಾಡುವದೆ ಮಿ॥ ವಿಕ್ಟರ್ ಬೈಲಿರವರು ಇಂಡಿಯಾ ಸರಕಾರದವರಿಂದ ನೇಮಿಸಲ್ಪಟ್ಟಿರುತ್ತಾರೆ.

ರಾಜಕೀಯೋದ್ಯೋಗ ಸಭೆಯವರು ಹಿಂದೂಸ್ಥಾನದಲ್ಲಿ ತನಕ ನಡಿಸಿದ ಕುರಿತು ವರದಿ ಮಾಡುವ ಬಗ್ಗೆ ಇದೇ ಕಳದ ಮೇ ತಾ. ೨೭ರಲ್ಲು ಕೂಡಿಬಂದಿರುತ್ತಾರೆ.

ಪೂರ್ವ ಬಂಗಾಳದ ಟಿಪ್ಪಾರ ಮತ್ತು ನೋಕಾಳಿ ಎಂಬಲ್ಲಿ ಜನರು ನಿರ್ಗತಿಕರಾಗಿ ಪಡುವ ಕಷ್ಟದ ವಾರ್ತೆಯು ಪುನಃ ಪುನಃ ಬರುತ್ತಿರುವದು ಕೆಲವು ಜನರು ಆಹಾರವಿಲ್ಲದೆ ಅಸ್ಥಿಪಂಜರದಂತಾಗಿರುವರು.. ಕೆಲವರಿಗೆ ೩-೪ ದಿವಸಕ್ಕೊಂದಾವರ್ತಿಯಾದರೂ ಆಹಾರ ದೊರಕುವುದು ಕಷ್ಟವಾಗಿದೆ. ಕಷ್ಟದಲ್ಲಿರುವವರಿಗೆ ಸರಕಾರದವರು ಸಹಾಯ ಮಾಡುತ್ತಿರುವರಾದರೂ ಈ ಸಹಾಯವು ಸಾಕಷ್ಟು ಇರದು, ಪಕೋರ್ತಿ ಮತ್ತು ಪೇಟಾಬಾದಿನಲ್ಲಿ ಕೆಲವರು ಆಹಾರವಿಲ್ಲದೆ ಸತ್ತು ಹೋದರು

ಸಿಮ್ಲಾದಲ್ಲಿ ತಾ. ೨೯ರಲ್ಲು ವಿಷಾದಕರವಾದ ಒಂದು ಅವಗಡವು ನಡೆದಿರುವದ. ಜಾಸ್ಸಿಯ ೮ನೇ ಅಶ್ವ ಪಡೆಯ ಇಬ್ಬರು ಸವಾರರು ಫಕ್ಕನೇ ಸಿಟ್ಟಿದ್ದು ೪ ಆಫೀಸರರನ್ನೂ, ಇಬ್ಬರು ಸೇನಿಕರನ್ನೂ ಗುಂಡು ಹೊಡೆದು ಕೊಂದರು. ಇಬ್ಬರು ಆಫೀಸರರು ಗಾಯಪಟ್ಟರು. ನಂತರ ಘಾತುಕರು ಸ್ವಘಾತ ಮಾಡಿಕೊಂಡರು.

ಹಿಂದೂಸ್ಥಾನದಲ್ಲಿರುವ ಕ್ರೈಸ್ತ ಸಭೆಗಳ ಶತ್ರುವು ಮಧ್ಯಪಾನವಾಗಿದೆ. ಈ ದುರಭ್ಯಾಸವು ಭಾರತೀಯ ಕ್ರೈಸ್ತರಲ್ಲಿಯೂ ವೃದ್ಧಿಯಾಗುತ್ತಿದೆ ಖಾಸಗಿ ಕೆಲಸಗಳಲ್ಲಿರುವ ಕ್ರೈಸ್ತರು ಮಾತ್ರವಲ್ಲ ಮಿಶ್ಯನ್ ಸೊಸೈಟಿಗಳಿಂದ ಸಂಬಳ ಪಡೆಯುವ ಮಿಶ್ಯನ್ ಕೆಲಸದವರೂ, ಮಿಶ್ಯನ್ ಉಪಾಧ್ಯಾಯರೂ, ಏಜಂಟರೂ ಈ ದುರಭ್ಯಾಸದಲ್ಲಿ ಸಿಕ್ಕೊಂಡಿದ್ದಾರೆ. ಈ ದುರಭ್ಯಾಸದ ಹುಟ್ಟಡಗಿಸುವರೆ ಒಂದು ಸೊಸೈಟಿಯನ್ನು ಏರ್ಪಡಿಸುವದೂ ಈ ಸಂಬಂಧವಾದ ಪಹಿಗಳನ್ನು ಪ್ರಕಟಿಸಿ ಶಾಲೆಗಳಲ್ಲಿಯೂ ಅನಾಥಾಲಯಗಳಲ್ಲಿಯೂ ಮಧ್ಯಪಾನ ಅಭ್ಯಾಸದಿಂದ ಉಂಟಾಗುವ ಕೆಡಕನ್ನು ಬೋಧಿಸುವ ಏರ್ಪಾಡು ಮಾಡುವದೂ ಅಗತ್ಯವೆಂತ ಮುಂಬಾಯಿಯ “ಬೊಂಬೆ ಗ್ಲೀನರ್” ಎಂಬ ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಕಲ್ಕತ್ತೆಯಲ್ಲಿ ಭಾಷಣಗಳನ್ನು ಮಾಡಕೂಡದಾಗಿ ಪೋಲಿಸ್ ಕಮಿಷನರವರಿಂದ ಆಜ್ಞೆ ದೊರಕಿದ ಮೌಲ್ವಿಲಿಕಾತ್ ಹುಶೇನರವರು ಪೋಲಿಸ್ ಕಮಿಷನರವರಿಗೆ ಮಾಡಿದ ಒಂದು ಅರ್ಜಿಯಲ್ಲಿ ಈ ರೀತಿ ಬರೆದಿರುವರು.—ಕಳೆದ ಸಾಯಂಕಾಲ (ಆದಿತ್ಯವಾರ) ೬ ಗಂಟೆಗೆ ಪೂರ್ವ ಬಂಗಾಳದಲ್ಲಿ ನಿರ್ಗತಿಕರಾಗಿರುವವರ ಬಗ್ಗೆ ವಂತಿಗೆಯನ್ನು ಕೂಡಿಸುವ ಉದ್ದೇಶದಿಂದ ಕೆಲವು ಯುವಕರ ಸಂಗಡ ದಾರಿಯಲ್ಲಿ ಹೋಗುತ್ತಿದ್ದೆನು. ಪ್ರಜಾಜನರು ನಮ್ಮ ಕಡೆ ಲಕ್ಷ್ಯಕೊಡುವ ಹಾಗೆ ಕೆಲವು ಯುವಕರು ಗಾಯನಮಾಡುತ್ತಿದ್ದರು. ಕಾಲೇಜ್ ಸ್ಕ್ವಾಯರಿನಲ್ಲಿರುತ್ತಿದ್ದ ೩ ಕನ್‌ಸ್ಟೇಬಲರು ಫಕ್ಕನೇ ನಮ್ಮ ಗುಂಪನ್ನು ಚದರಿಸಿ, ಜನ ಸಾಮಾನ್ಯರ ಬಗ್ಗೆ ಯಾವ ಕೆಲಸವನ್ನಾದರೂ ಕೈಕೊಳ್ಳಲು ನಿನ್ನನ್ನು ಬಿಡುವುದಿಲ್ಲ ಎಂದು ಕೂಗಿದರು. ನೀವು ಹೀಗೆ ಹೇಳಲು ನಿಮಗೆ ಯಾವ ಆಧಾರವಿದೆಂದು ಅವರನ್ನು ಕೇಳಿ, ಆ ಆಧಾರವನ್ನು ತೋರಿಸಲಿಕ್ಕೆ ಹೇಳಿದೆನು. ಇದರಿಂದ ಅವರು ಮತ್ತಷ್ಟು ಸಿಟ್ಟುಗೊಂಡು ನನ್ನನ್ನು ಪೋಲಿಸ್ ಸ್ಟೇಶನಿಗೆ ಕೊಂಡುಹೋಗುತ್ತೇವೆಂದು ಹೇಳಿದರು. ನಾನು ಕೂಡಲೇ ಒಪ್ಪಿಕೊಂಡು ಅವರನ್ನು ಹಿಂಬಾಲಿಸಲಿಕ್ಕಿರುವಾಗ ಅವರು ನಾನಿದ್ದ ಸ್ಥಳವನ್ನು ಬಿಟ್ಟು ಹೋದರು. ಕನ್‌ಸ್ಟೇಬಲರು ನನ್ನ ಈ ಕೆಲಸಕ್ಕೆ ಕೈಹಾಕಿದ್ದು ಬರೇ ಸ್ವಾರ್ಥಪರರಾಗಿಯಲ್ಲದೆ ಹೀಗೆ ಮಾಡಲು ಅವರಿಗೆ ಬೇರೆ ಯಾವ ಕಾರಣವೂ ಇದ್ದಿಲ್ಲ.

ಯುನೈಟೆಡ್ ಪ್ರಾವಿನ್ಸಿನ ಕಾಂಗ್ರೆಸ್ ಕಮಿಟಿಯವರು ತಮ್ಮ ಕಮಿಟಿಯ ಪ್ರೆಸಿಡೆಂಟರಾಗಿದ್ದ ಡಾಕ್ಟರ್ ಬೆನರ್ಜಿಯವರು ಮೃತರಾದುದರಿಂದ ಅವರ ಬದಲಿಗೆ ಬಹುಮಾನಪಟ್ಟ ಡಾಕ್ಟರ್ ಟಿ. ಸಾಪ್ರೂರವರನ್ನು ಪ್ರೆಸಿಡೆಂಟರಾಗಿ ನೇಮಿಸಿರುವರು. ಬರುವ ಕಾಂಗ್ರೆಸ್ ಸಭೆಗೆ ಸರ್. ಸುಬ್ರಮಣ್ಯ ಅಯ್ಯರವರನ್ನು ಪ್ರೆಸಿಡೆಂಟರಾಗಿ ಆರಿಸಬಹುದೆಂತ ಈ ಕಮಿಟಿಯವರು ರಾಷ್ಟ್ರೀಯ ಸಭೆಯ ಸ್ವಾಗತ ಕಮಿಟಿಗೆ ತಿಳಿಸಿರುತ್ತಾರೆ.

ರಂಗಪುರದಲ್ಲಿ ಗುಂಡು ಹೊಡೆದು ದಾಂದಲೆ ನಡಿಸಿದ ಮೊಕದ್ದಮೆಯಲ್ಲಿ ವಿಚಾರಣೆಗೆ ಗುರಿಮಾಡಲ್ಪಟ್ಟು ನಂತರ ಖುಲಾಸಾ ಮಾಡಲ್ಪಟ್ಟ ಶೇಖಾದರ್ ಖಿರ್ ಎಂಬವನಿಗೆ ನೂತನ ದೇಶ ರಕ್ಷಣಾ ವಿಧಿಗನುಸಾರವಾಗಿ ಮಿಯನ್‌ಸಿಂಗಿನ ಕಿಶೋರ್‌ಗಂಜಿಗೆ ಹೋಗಿರಬೇಕೆಂಬದಾಗಿ ಅಪ್ಪಣೆಯಾಗಿರುವದು

ಕಲ್ಕತ್ತೆಯ ಅಪ್ಪರ್ ಸರ್ಕ್ಯುಲರ್ ರೋಡಿನಲ್ಲಿ ಕಳದ ಜೂನ್ ತಾ ೨೬ರಲ್ಲು ಒಂದು ಅವಗಡವು ನಡೆದಿರುವದು. ಐಶ್ವರ್ಯವಂತರಾದ ಜಗತ್ ಚಂದ್ರ ಬೆನರ್ಜಿಯವರು ಅವರ ಖಾಸಗಿ ಗಾಡಿಯಲ್ಲಿ ಪ್ರಯಾಣ ಮಾಡುತ್ತಿರುವಾಗ ಅದಕ್ಕೆ ಎದುರಾಗಿ ಬರುತ್ತಿದ್ದ ಟ್ರಾಮ್ ಗಾಡಿಯು ಫಕ್ಕನೇ ತಾಗಿ ಗಾಡಿಯವನೂ, ಜಮಿನ್ದಾರರೂ ಕೊಲ್ಲಲ್ಪಟ್ಟರು ದಾರಿಯಲ್ಲಿ ಹೋಗುತ್ತಿದ್ದ ಒಬ್ಬ ಯುವಕನಿಗೂ ಜಖಂ ಆಗಿರುವದು. ಆದರೆ ಅಷ್ಟು ಕಠಿಣವಲ್ಲ. ಮೃತರಾದ ಜಮೀನ್ದಾರರಿಗೆ ಸುಮಾರು ೬೦ ವರ್ಷ ವಯಸ್ಸು

ಇದೇ ಕಳದ ತಾ. ೨೬ರಲ್ಲು ಮುಂಬಾಯಲ್ಲಿ ಕಠಿಣ ಬಿರುಮಳೆ ಗರೆದಿರುವದು. ೨೪ ತಾಸಿನೊಳಗೆ ೯ ಇಂಚು ಮಳೆ ಬಿದ್ದಿರುವದು, ಇದರಿಂದ ಮುಂಬಾಯಿಯ ತಗ್ಗು ಪ್ರದೇಶಗಳಲ್ಲಿ ನೆರೆ ತುಂಬಿ ಬೀದಿಗಳಲ್ಲಿ ಮೊಣಕಾಲುದ್ದ ನೀರು ತುಂಬಿತ್ತು. ಫೋರ್ಟಿನ ಹೊರಗೆ ಟ್ರಾಮ್ ಬಂಡಿಗಳು ನಡಿಯಲಿಲ್ಲ. ಎಸ್‌ಪ್ಲನೇಡ್ ಮೈದಾನು ಮತ್ತು ಇತರ ಮೈದಾನುಗಳು ಸರೋವರಗಳ ಹಾಗೆ ತೋರಿದವು. ಅನೇಕ ಮರಗಳೂ, ಮನೆಗಳೂ ಬಿದ್ದು ಹೋದವು. ಆದರೆ ಪ್ರಾಣಾಪಾಯವಾಗಲಿಲ್ಲ. ಬೈಕುಲದಿಂದ ವಿಕ್ಟೋರಿಯ ಟರ್ಮಿನಸಿನ ವರೆಗಿನ ರೈಲ್ವೆ ಲೈನುಗಳು ನೀರಿನ ಅಡಿಯಲ್ಲಿದ್ದವು. ಕೆಲವು ಕಡೆ ರೈಲ್ವೆ ಲೈನುಗಳಲ್ಲಿ ೪ ಅಡಿ ಎತ್ತರಕ್ಕೆ ನೀರು ನಿಂತಿತ್ತು.

ಗುರುದಾಸಪುರ ಎಂಬಲ್ಲಿಯ ಬ್ರಾಹ್ಮಣ ಮತಭ್ರಾಂತನಾದ ಒಬ್ಬ ಮುಲ್ಲನು ತನ್ನ ಹೆಂಡತಿಯನ್ನು ಕೊಂದು ದೇವತೆಗೆ ಯಜ್ಞ ಮಾಡಿ ತಲೆ ತಪ್ಪಿಸಿಕೊಂಡಿರುವನು. ನಂತರ ಪೋಲಿಸಿನವರು ಅವನನ್ನು ಹರಿದ್ವಾರದಲ್ಲಿ ಕೈದುಮಾಡಿರುತ್ತಾರೆ, ಈಗ ಘಾತುಕನು ಹುಚ್ಚನಂತೆ ನಟಿಸುತ್ತಿದ್ದಾನೆ.

ಮುಂಬಾಯಿಯ ಡಾಕ್ಟರ್ ಸೈಯದ್ ಎಸ್. ಮಹಮ್ಮದ್ ಎಮ್. ಬಿ. ಸಿ. ಎಮ್‌ರವರು ಇಂಡಿಯನ್ ಮೆಡಿಕಲ್ ಸರ್ವಿಸಿಗೆ ಸೇರಿಸಲ್ಪಟ್ಟಿದ್ದಾರೆ. ಇವರು ಬೇಗನೇ ರಣರಂಗಕ್ಕೆ ಹೋಗುವರು.

ಲಾಹೋರು ಮೆಡಿಕಲ್ ಕಾಲೇಜಿಯ ಡಾಕ್ಟರ್ ಮಾಲಿಕ್ ಎ. ಸಿಂಘರವರು ಇಂಡಿಯನ್ ಮೆಡಿಕಲ್ ಸರ್ವಿಸಿಗೆ ಸೇರಿಸಲ್ಪಟ್ಟಿರುವರು. ಇವರೂ ರಣರಂಗಕ್ಕೆ ಹೊಗುವದರಲ್ಲಿದ್ದಾರೆ.

ವಿವಾಹವಾದ ಹುಡುಗಿಯರನ್ನು ಮಾರಿದ್ದಾರೆಂದು ಆಪಾದಿಸಲ್ಪಟ್ಟು ಆಗ್ರದ ಸೆಶ್ಯನ್ಸ್ ಜಡ್ಜರಿಂದ ಕಾರಾಗೃಹ ಶಿಕ್ಷೆ ವಿಧಿಸಲ್ಪಟ್ಟ ಎವಾಜ್ ಆಲಿ ಮತ್ತು ಇತರರು ಅಲ್ಲಹಾಬಾದ್ ಹೈಕೋರ್ಟಿಗೆ

ಮೇಲು ಮಾಡಿಕೊಂಡಿರುವರು. ಈ ಮೊಕದಮೆಯ ವೃತ್ತಾಂತವು ಈ ರೀತಿಯಾಗಿರುವದು. ಮುಸ್ಸಾಮತ್ ಜಮಾಯಿ ಎಂಬ ಒಬ್ಬ ಯುವತಿಯು ಗಂಡನ ಮನೆಯಿಂದ ಓಡಿ ಹೋಗಿ ಮುತ್ರ ಎಂಬ ಸ್ಥಳದ ಅಗ್ರಕ್ಕೆ ಹೋಗುತ್ತಿರುವಾಗ ಗ್ರಾಮ ಚೌಕಿದಾರನಾದ ಇಮಾಮ್ ಅಲಿಯು ಅವಳನ್ನು ದಾರಿಯಲ್ಲಿ ನಿಲ್ಲಿಸಿ ತನ್ನ ಮನೆಗೆ ಕರಕೊಂಡು ಹೋಗಿ ಒಂದು ತಿಂಗಳ ವರೆಗೆ ಇಟ್ಟುಕೊಂಡು ನಂತರ ಮಣಿಧರ ಮತ್ತು ಹರಿಲಾಲಜಾಟರವರಿಗೆ ೪೦ ರೂಪಾಯಿಗೆ ಮಾರಿದನು. ಇವರು ಅವಳನ್ನು ಜೂರಜಾಟ್ ಎಂಬವನಿಗೆ ೪೦ ರೂಪಾಯಿಗೆ ಮಾರಿದರು. ಈ ಹುಡುಗಿಯನ್ನು ಜೂರಜಾಟನು ತನ್ನ ಮನೆಗೆ ಕರಕೊಂಡು ಹೋಗಿ ನೋಡಿದಲ್ಲಿ ಅವಳು ತನ್ನ ಜಾತಿಯವಳಲ್ಲವಾದುದರಿಂದ ತನ್ನ ಹಣವನ್ನು ಹಿಂದೆ ಕೊಟ್ಟು ಹುಡುಗಿಯನ್ನು ಕರಕೊಂಡು ಹೋಗಬೇಕೆಂದು ಹೇಳಿದಲ್ಲಿ ಅವರು ಅವಳನ್ನು ಪುನಃ ೬೦ ರೂಪಾಯಿಗೆ ಕೈಲೋ ಜಾಟನೆಂಬವನಿಗೆ ಮಾರಿದರು. ಕೈಲೋ ಜಾಟನು ಅವಳನ್ನು ತನ್ನ ಗ್ರಾಮಕ್ಕೆ ಅಗ್ಗಾಡಿಯಲ್ಲಿ ಕೊಂಡುಹೋಗಲಿಕ್ಕಿರುವಾಗ ದಾರಿಯಲ್ಲಿ ಒಬ್ಬ ಚೌಕಿದಾರನು ಆ ಹುಡುಗಿಯ ಕುರಿತು ಕೆಲವು ಪ್ರಶ್ನೆಮಾಡಿದಲ್ಲಿ ಅನುಮಾನ ಹುಟ್ಟಿ ಅವರನ್ನು ಸ್ಟೇಶನಿಗೆ ಕರಕೊಂಡು ಹೋದನು. ನಂತರ ಎಲ್ಲಾ ಗುಟ್ಟು ಹೊರಬಿತ್ತು.

~~~~~

ದಕ್ಷಿಣ ಕನ್ನಡ.

~~~~~

ಕುಂಬಳೆ. ಶೀತಳಂಗೋಲಿ— ಪುತ್ತಿಗೆ ರಸ್ತೆಯ ಕೆಲಸವು ಬೋರ್ಡಿನವರಿಂದ ತೆಗೆದುಕೊಂಡಿರುವದಾಗಿ ವರ್ತಮಾನವಿದೆ. ಅತ್ತಕಡೆಯ ಸಾಮಾನು ವ ಜನರು ಸಹಾ ಹೇರಳವಾಗಿ ಕುಂಬಳೆಗೆ ಆಮದುರಫ್ತಾಗುವ ಕಾರಣ ಸದರಿ ರಸ್ತೆಯನ್ನು ಬೋರ್ಡಿನವರು ತ್ವರ್ಯ ಸೆಂಕ್ಷನ್ ಮಾಡಿ ವ್ಯಾಪಾರಕ್ಕೆ ಹೆಚ್ಚಿನ ಸೌಕರ್ಯವನ್ನುಂಟು ಮಾಡುವರಾಗಿ ನಂಬುತ್ತೇವೆ.

ಇಲ್ಲಿಯ ಪರಸ್ಪರ ಸಹಾಯಕ ಸಂಘದ ಜನರಲ್ ಮೀಟಿಂಗ್ ಇದೇ ಜೂನ್ ತಾ. ೨೫ರಲ್ಲು ಆಫೀಸಿನ ಕಟ್ಟಡದಲ್ಲಿ ಜರಗಿತು. ಈ ಸಂಘವು ಅಲ್ಪ ಕಾಲದಲ್ಲಿಯೇ ಒಳ್ಳೇ ಸ್ಥಿತಿಗೆ ಬಂದಿರುತ್ತದೆ. ಈ ಸಭೆಯಲ್ಲಿ ಫಿಕ್ಸೆಡ್ ಡಿಪೋಜಿಟ್ಟನ್ನು ಜಾರಿಗೆ ತಂದಿರುವದರಿಂದ ಸಂಘವು ಇನ್ನೂ ಹೆಚ್ಚಿನ ಅಭಿವೃದ್ಧಿಯಾಗುವದರಲ್ಲಿದೆ ಎಂತ ತಿಳಿದು ಸಂತೋಷ ಪಡುತ್ತೇವೆ.

ಇಲ್ಲಿಯ ಮೀನು ಮಾರ್ಕೆಟಿನ ವ ಗಾಡಿ ಚೌಕದ ಕುರಿತು ಪೋಲಿಸ್ ವಿಚಾರಣೆ ನಡೆಯುವದಾಗಿ ಕೇಳುತ್ತೇವೆ, ಲೋಕಲ್ ಫಂಡ್ ಪ್ರಕಟಣೆಯ ನಂಬ್ರ ೬ರಿಂದ ೧೪ರ ವರೇಗಿನ ಕಲಂಗಳು ಇಲ್ಲಿ ಮಾತ್ರ ಜಾರಿಯಲ್ಲಿಲ್ಲದಿರುವದು ಶೋಚನಿಯವಾಗಿದೆ. ಇನ್ನಾದರೂ ಜಾರಿಗೆ ಬರಬಹುದೆಂತ ನಂಬುತ್ತೇವೆ.

~~~~~

ಕಾಪು:— ಇಲ್ಲಿಂದ ಶಿರ್ವಕ್ಕೆ ಸೀದಾ ಒಂದು ರಾಜರಸ್ತೆ ಸರಕಾರದವರು ಮಾಡಿಸುವದು ವಿಹಿತವಾದದ್ದು ಎಂತ ಒಮ್ಮೆ ಸ್ವದೇಶಾಭಿಮಾನಿ ಪತ್ರಿಕೆಯಲ್ಲಿ ಸೂಚಿಸಿರುತ್ತದಷ್ಟೆ. ಆ ವಿಷಯ ಸರಕಾರದವರಿಂದ ಎಷ್ಟರ ಮಟ್ಟಿಗೆ ಮುಂದರಿಸಲ್ಪಟ್ಟಿತು ಎಂತ ತಿಳಿಯೆವು ಆದಾಗ್ಯೂ ಚಿಂತಿಲ್ಲ. ಮಲ್ಲಾರು ಗ್ರಾಮದಲ್ಲಿ ಎರಡು ಬೋರ್ಡು ಹಿಂದೂಸ್ಥಾನೀ ಶಾಲೆಯೂ ಕಾಪು ಪಡು ಗ್ರಾಮದಲ್ಲಿ ಎರಡು ಬೋರ್ಡು ಶಾಲೆಗಳೂ ಇರುತ್ತವೆ ಈ ಮಧ್ಯದಲ್ಲಿರತಕ್ಕ ಗ್ರಾಮಗಳಿಂದ ಈ ಮೂರು ಶಾಲೆಗಳಿಗೆ ಹೋಗುವ ಮಕ್ಕಳಿದ್ದಾರೆ. ತನ್ಮಧ್ಯೆ ಒಂದು ತೋಡು ಇದೆ. ಈ ಮಳೆಗಾಲದಲ್ಲಿ ತೋಡಿನ ದೆಸೆಯಿಂದ ಮಕ್ಕಳು ಪಡುವ ತೊಂದರೆಯನ್ನು ಮಾಜಿ ಶಾಲಾ ಸ. ಅ. ಇನ್ಸ್‌ಪೆಕ್ಟರರಾದ ರಾ. ಕೆ. ಎನ್. ವಿಶ್ವೇಶ್ವರರಾಯರು ಅರಿತವರಾಗಿ ಬೋರ್ಡಿನಿಂದ ಒಂದು ಸಂಕ ಕಟ್ಟಿಸಲ್ಪಡುವರೆ ಸಾಧ್ಯವಾಗದೆ ಇದ್ದಾಗ್ಯೂ ಒಂದು ಮರದ ಅಡ್ಡ ಹಾಕಿಸುವರೆ ರೂ ೪—೧—೦ ಸೆಂಕ್ಷನ್ ಮಾಡಿಸಿದ್ದಕ್ಕೆ ನಾವುಗಳು ತುಂಬಾ ಕೃತಜ್ಞರಾಗಿದ್ದೆವು ಈಗ ಸದರಿ ಮರದ ತುಂಡು ಕುಂಬಾಗಿ ಬಿದ್ದುಹೋಗಿದೆ. ಜನರ ಪ್ರಯೋಜನಾರ್ಥವಾಗಿ ಅಲ್ಲಲ್ಲಿ ಹೊಸರಸ್ತೆಗಳನ್ನೂ ಸಂಕಗಳನ್ನೂ ಕಟ್ಟಿಸಿಕೊಡುವ ಸರಕಾರದವರು ಇಲ್ಲಿಯ ತೋಡಿಗೆ ಶಾಶ್ವತವಾಗಿ ಬಾಳುವ ಒಂದು ಸಂಕವನ್ನು ಕಟ್ಟಿಸಿಕೊಟ್ಟಲ್ಲಿ ಊರ ಜನರಿಗೂ ಮುಖ್ಯವಾಗಿ ಶಾಲೆಗೆ ಹೋಗುವ ಒಡಮಕ್ಕಳಿಗೂ ಎಷ್ಟರ ಪ್ರಯೋಜನವಿದೆ ಎಂತ ಇಲ್ಲಿ ಪ್ರತ್ಯೇಕ ಬರಿಯಬೇಕಾದ್ದಿಲ್ಲ ಆದ್ದರಿಂದ ಈ ವಿಷಯ ಶಾಲಾ ಇಲಾಖಾ ಮೇಲಾಪೀಸರರು ಸರಕಾರದವರ ಚಿತ್ತಕ್ಕೆ ಬರ ಮಂತೆ ತಕ್ಕ ವಿಜ್ಞಾಪನೆ ಮಾಡಿ ನಮ್ಮಗಳ ಕಷ್ಟವನ್ನು ಬೇಗನೆ ಹೋಗುವಂತೆ ಮಾಡ್ಯಾರು ಎಂದು ನಾವುಗಳು ಪೂರ್ಣ ಭರವಸೆ ಇಟ್ಟಿರುತ್ತೇವೆ

ಕಳೆದ ವರ್ಷ ಪಾಂಗಾಳ ಕಡವಿನ ಗುತ್ತೆದಾರನಾಗಿದ್ದ ಕೊರಗಸೆಟ್ಟಿ ಎಂಬಾತನು ಅಕಸ್ಮಾತ್ತಾಗಿ ನೆತ್ತರು ಕಾರುತ್ತಾ ಕಳೆದ ವಾರ ಮೃತಿಹೊಂದಿದನು ಎಂದು ತಿಳಿಸುವರೆ ವಿಷಾದವಾಗಿದೆ

ಟ್ರಾಫಿಕ್ ರೈಲ್ವೆ ಇಲಾಖೆಯಿಂದ ಪಡುಬಿದ್ರೆ ಮತ್ತು ಉದ್ಯಾವರದಲ್ಲಿ ಗಾಡಿ ವ ಜನರ ಸಂಖ್ಯೆ ಆಚೆಈಚೆ ಹಾದು ಹೋಗುವ ಲೆಖ್ಖವನ್ನು ಇಡುವರೆ ಇಬ್ಬರು ಪೇದೆಯರು ಮತ್ತು ಒಬ್ಬೊಬ್ಬ ಗುಮಾಸ್ತರನ್ನಿಟ್ಟಿದ್ದರು. ಆ ಪೈಕಿ ಉದ್ಯಾವರದ ಇಸಂನ್ನು ಹೋಗಗೊಳಿಸಿದರು ಪಡುಬಿದ್ರೆದ್ದು ಈಗಲೂ ನಡೆಯುತ್ತಲಿದೆ ಕಾರ್ಕಳ, ಉಡ್ಪಿ, ಮಂಗಳೂರಿಗೆ ಮಧ್ಯ ಸ್ಥಳವಾಗಿದ್ದು ಜನ ವ ಗಾಡಿ ಸಂಚಾರಕ್ಕೆ ಯೋಗ್ಯವಾಗಿ ಯಾವಾಗಲೂ ಇರತಕ್ಕ ಈ ಊರಲ್ಲಿ ಕೆಲವು ಕಾಲ ಲೆಖ್ಖ ಪರಿಶೋಧನೆ ನೋಡುವದು ವಿಹಿತವಾಗಿದೆ.

~~~~~

ಪೊಳಲಿ: — ಕಳೆದ ಸಂಚಿಕೆಯೊಂದರಲ್ಲಿ ತಿಳಿಸಿದಂತೆ ವೇ| ಅಡಿಗಳು ಪದ್ಮನಾಭ ಭಟ್ರವರು ಇಲ್ಲಿ ಒಂದು ಸಂಸ್ಕೃತ ಶಾಲೆಯನ್ನು ಸ್ಥಾಪಿಸಿರುವರು. ಈ ಶಾಲೆಗೆ ಸೇರುವ ವಿದ್ಯಾರ್ಥಿಗಳಿಗೆ ಧರ್ಮಾರ್ಥವಾಗಿಯೇ ವಾರವು ಹೇಳಿಕೊಡೋಣಾಗುವದು ಈ ನವೀನ ಶಾಲೆಯನ್ನು ಶ್ರೀ ರಾಜರಾಜೇಶ್ವರಿ ಭಂಡಾರದ ಕಡೆಯಿಂದ ನಡಿಸಬೇಕೆಂತಲೂ ಈ ಮೊದಲು ವೇ| ಸುಬ್ರಾಯ ತಂತ್ರಿಗಳು ಸ್ಥಾಪಿಸಿದ ಸಂಸ್ಕೃತ ಶಾಲೆಯನ್ನು ಇದಕ್ಕೆ ಸೇರಿಸಬೇಕೆಂತಲೂ ನಿರ್ಣಯವಾಗಿರುವದು

ಇಲ್ಲಿ ತಾ ೧ನೇ ಗುರುವಾರ ಬೆಳಿಗ್ಯೆ ೯ ಘಂಟೆ ಸಮಯಕ್ಕೆ ಒಂದು ಸುಳಿಗಾಳಿಯು ಬಂದು ಅನೇಕ ಮನೆಗಳ ಮಾಡುಗಳ ಛಾವಣಿಯನ್ನೆಲ್ಲಾ ಬರಿದಾಗಿ ಮಾಡಿತು. ಕೆಲವು ತೆಂಗಿನಮರಗಳು ಬಿದ್ದುಹೋಗಿಯದೆ.

ಇಲ್ಲಿ ಕಳೆದ ೧೯೧೪ನೇ ಇಸವಿ ಒಕ್ಟೋಬರ ಲಾಗಾಯತು ತಪ್ಪದ ಕ್ರಮವಂತೆ ನಡದು ಬರುವ ಮಾಸಿಗ ಪೋಸ್ಟಾಪೀಸನ್ನು ಗವರ್ನಮೆಂಟಿನವರು ಮಂಜೂರು ಮಾಡದೆ ಇರುವ ಕಾರಣವೇನೋ ತಿಳಿಯದು ಕಳೆದ ಅಕ್ಟೋಬರ ತಿಂಗಳ ನಂತರ ಜುಮ್ಲ ಒಂದು ಹೋದ ಕಾಗದ ಪತ್ರಗಳು ಈ ಕೆಳಗೆ ವಿವರಿಸಿದಂತೆ ಆಗಿರುತ್ತದೆ. ಕಳೆದ ಒಕ್ಟೋಬರ ೨೫ರಿಂದ ಜೂನ್ ತಿಂಗಳ ವರೆಗೆ ೩೨೪೫ ಕಾಗದಗಳು ಹೋಗಿರುತ್ತವೆ. ೨೩೬೬ ಪತ್ರಗಳು ಬಂದಿರುತ್ತವೆ. ಒಟ್ಟಿಗೆ ಕಳೆದ ತಿಂಗಳುಗಳಲ್ಲಿ ಕಾಗದ ಕವರು ವಿ. ಪಿ. ವಗೈರೆ ೫೬೧೧ ಪತ್ರಗಳ ವೈವಾಟಿರುವಾಗ ಪೊಳಲಿಯಲ್ಲಿ ಆದಷ್ಟು ಬೇಗನೆ ಪೋಸ್ಟಾಫೀಸನ್ನು ಇಲಾಖೆಯವರು ಮಂಜೂರು ಮಾಡುವರೆಂದು ನಂಬಿರುತ್ತೇವೆ

~~~~~

ವೇಣೂರು: — ತಾ. ೩ನೇ ಶನಿವಾರ ಮಧ್ಯಾನ್ಹ ೧೨ ಘಂಟೆ ಸಮಯ ವೇಣೂರು ಮಾಗಣೆ ನಿಟ್ಟಡೆ ಗ್ರಾಮದ ಪಂಡಿಜೆ ದಂಬೆ ಗೋವಿಂದ ಭಟ್ಟರ ಮನೆಯಲ್ಲಿ ಜೋರು ಮಳೆಬರುತ್ತಿರುವಾಗ್ಯೆ ಹಪ್ಪಳ ಒಣಹಾಕುವರೆ ಮಾಡಿದ ಅಟ್ಟೊಳಿಗೆಗೆ ಬೆಂಕಿ ಹಿಡಿದು ಮನೆಗೆ ತಾಗಿ ಮನೆಯೊಳಗಿದ್ದ ಅಕ್ಕಿ, ಅಡಿಕೆ, ವಸ್ತ್ರ ಮುಂತಾದವುಗಳು ಅಗ್ನಿವಾಲಾಗಿರುತ್ತವೆ ಮನೆಯವರು ಉಟ್ಟ ಅರುವೆ ಮಾತ್ರ ಸಿಕ್ಕಿಯದೆ. ಸಾಧಾರಣ ೬೦೦ ರೂಪಾಯಿ ನಷ್ಟವಾಗಬಹುದು

~~~~~

ವಿಟ್ಲ:— ಕಳೆದ ಸಂಚಿಕೆಯಲ್ಲಿ ಪ್ರಕಟವಾದ ೧೦೦೦ ರೂಪಾಯಿ ಎಂಬದು ರೂಪಾಯಿ ೧೦೦ ಮಾತ್ರ ಎಂತ ತಿದ್ದುಪಡಿ ಆಗತಕ್ಕದ್ದು.

~~~~~

ಸುರತಕಲ್: — ಉಡುಪಿಯ ಅಷ್ಟಮಠಗಳ ಪೈಕಿ ಕೃಷ್ಣಾಪುರ ಮಠದ ಶ್ರೀ ಪಾದಂಗಳವರು ಸ್ವಮಠವಾದ ಇಲ್ಲಿಯ ಕೃಷ್ಣಾಪುರ ಮಠಕ್ಕೆ ಕೆಲವು ದಿನಗಳ ಹಿಂದೆ ಚಿತ್ತೈಸಿರುವರು ಇವರು ಸಮ್ಮದಲ್ಲಿ ಮಂಗಳೂರಿನಿಂದ ಉಡುಪಿಗೆ ಹೋಗುವ ರಾಜರಸ್ತೆಯಿಂದ ಕೃಷ್ಣಾಪುರ ಮಠದ ತನಕ ರಸ್ತೆ ಹಾಕಿಸುವದರಲ್ಲಿದ್ದಾರೆಂಬ ವದಂತಿ ಇದೆ. ವೈರಾಗಿಗಳೇ ಮೊದಲಾದ ಪರಸ್ಥಳೀಕ ಪ್ರಯಾಣೀಕರು ಮಾರ್ಗದಿಂದ ಸುಮಾರು ೧| ಮೈಲು ದೂರವಿರುವ ಈ ಕೃಷ್ಣಾಪುರ ಮಠಕ್ಕೆ ಬರಲು ದಾರಿ ತಿಳಿಯದೆ ಎಲ್ಲೆಲ್ಲಿ ಕಲ್ಲುಮುಳ್ಳುದಾರಿಯಲ್ಲಿ ಬಹಳೇ ಸುತ್ತಿ, ಪ್ರಯಾಸದಿಂದ ಬರಬೇಕಾಗುತ್ತಿತ್ತು ಕತ್ತಲಾದರಂತೂ ಆ ಶ್ರಮವನ್ನು ಕೇಳಬೇಕಾದುದಿಲ್ಲ ಆದುದರಿಂದ ಧಾರ್ಮಿಕ ಶಿರೋಮಣಿಗಳಾದ ಶ್ರೀ ಪಾದಂಗಳವರು ದಾರಿಗರ ಶ್ರಮ ನಿವಾರಕವಾದ ಈ ಸತ್ಕಾರ್ಯವನ್ನು ಕೈಗೊಳ್ಳುವ ಆಲೋಚನೆಯು ಸ್ತುತ್ಯಾರ್ಹವಾದುದು ಶ್ರೀ ಪಾದಂಗಳವರು ಸಂಸ್ಥಾನಕ್ಕೆ ಅಲಂಕಾರವೂ, ಯೋಗ್ಯವೂ ಆದ ಈ ಪುಣ್ಯಕಾರ್ಯವನ್ನು ಆದಷ್ಟು ಬೇಗನೇ ನೆರವೇರಿಸುವರಾಗಿ ಪೂರ್ಣ ನಂಬಿರುತ್ತೇವೆ

~~~~~

ಕೋಟ:— ಇದೇ ಜೂನು ತಾ ೨೨ನೇ ದಿವಸ ಉಡ್ಪಿ ತಾಲೂಕು ಕೋಟ ಕಸಬೆಗೆ ನೆರೆಹೊರೆಯಲ್ಲಿರುವ ಮೂರು ನಾಲ್ಕು ಗ್ರಾಮದ ಕೆಲವು ಮುಖ್ಯಸ್ಥರು ಮಾತ್ರ ಕೋಟ ಬೋರ್ಡು ಶಾಲೆಯಲ್ಲಿ ಸಬ್ ಅಸಿಸ್ಟಾಂಟ್ ಇನ್ಸ್‌ಪೆಕ್ಟರ್ ಮ| ರಾ| ಮಂಗೇಶರಾಯರ ಸಮಕ್ಷಮದಲ್ಲಿ ಸಭೆ ಸೇರಿ ಕೋಟ ಕಸಬೆಯಲ್ಲಿ ಒಂದು ಲೋವರ್ ಸೆಕಂಡರಿ ಶಾಲೆಯು ಆಗಬೇಕೆಂಬ ತಮ್ಮ ಮನಃಪೂರ್ವಕ ವಿಜ್ಞಾಪನೆಯನ್ನು ತಿಳಿಸಿ ಆ ಸಭೆಯಲ್ಲಿಯೇ ಕೂಡಿದವರೆಲ್ಲರೂ ಧಾರಾಳವಾಗಿ ವಂತಿಗೆ ಹಾಕಿ ಆ ದಿವಸವೇ ೨೩೦ ರೂಪಾಯಿ ವಂತಿಗೆಯಾಯಿತು ಲೋಕೋಪಕಾರಾರ್ಥವಾದ ಈ ಕೆಲಸದಲ್ಲಿ ಕುತೂಹಲವೂ ಪ್ರೋತ್ಸಾಹತೆಯೂ ಇದ್ದು ವಂತಿಗೆ ಕೊಡುವ ಇನ್ನೂ ಅನೇಕರು ನೆರೆಹೊರೆಯ ಗ್ರಾಮಗಳಲ್ಲಿದ್ದಾರೆ ತಮ್ಮ ಅಭಿಲಾಷೆಯನ್ನು ಬೋರ್ಡಿನವರು ತಮ್ಮ ಪೂರ್ಣ ಸಹಾಯದಿಂದ ನೆರವೇರಿಸುವರೆಂದು ಗ್ರಾಮಸ್ಥರು ಕೋರುತ್ತಾರೆ.

ಮಂಗಳೂರು.

ಇಲ್ಲಿಯ ಡಿಸ್ಟ್ರಿಕ್ಟ ಮತ್ತು ಸೆಶ್ಶನ್ಸ್ ಜಡ್ಜರವರು ಇದೇ ಬರುವ ಅಗೋಸ್ತು ತಿಂಗಳಲ್ಲಿ ರಜೆಯ ಮೇಲೆ ಹೋಗುವದರಲ್ಲಿದ್ದಾರೆಂದು ಕೇಳುತ್ತೇವೆ

ಇಲ್ಲಿಯ ಮುನ್ಸಿಫರಾದ ಮ| ರಾ ಎಸ್ ವೆಂಕಟ ಸುಬ್ಬರಾಯರಿಗೆ ಗುಂಟೂರಿಗೆ ವರ್ಗವಾಗಿರುವದರಿಂದ ಇದೇ ತಾ. ೬ರಲ್ಲು ಮೈಲ್ ಬಂಡಿಯಲ್ಲಿ ಗುಂಟೂರಿಗೆ ಪ್ರಯಾಣ ಬೆಳಸಿದರು

ಇಲ್ಲಿಯ ಮುನ್ಸಿಫರಾಗಿ ನೇಮಿಸಲ್ಪಟ್ಟ ಜಗನ್ನಾಥ ರಾಯರು ಬರುವ ವಾರ ಇಲ್ಲಿಗೆ ಬರುವರೆಂದು ತಿಳಿಯುತ್ತೇವೆ

ಬಂಟ್ವಾಳ ಸ್ಟೇಶನರಿ ಸಬ್ ಮೆಜಿಸ್ಟ್ರೇಟರವರಿಂದ ಇಲ್ಲಿಯ ಸೆಶ್ಶನ್ಸಿಗೆ ಕಮಿಟ್‌ಮಾಡಲ್ಪಟ್ಟ ತುಂಗನಾಯಕನ ಖೂನಿ ಮೊಕದಮೆಯ ತನಕಿಯು ಕಳೆದ ವಾರ ಇಲ್ಲಿಯ ಸೆಶ್ಶನ್ಸಿನಲ್ಲಿ ನಡೆದಿರುವದು. ಮೃತ ತುಂಗನಾಯಕನ ಸಹೋದರರಾದ ಗೋಪನ್ನಾಯಕ ಮತ್ತು ರುಕ್ಮನ್ನಾಯಕರೆಂಬಿಬ್ಬರು ಕೂಡಿ ತುಂಗನ್ನಾಯಕನನ್ನು ಕೊಂದಿದ್ದರೆಂಬದಾಗಿ ಈ ಮೊಕದಮೆಯಲ್ಲಿ ಆಪಾದಿಸಲ್ಪಟ್ಟಿದ್ದರು ಇವರ ತನಕಿ ನಡೆದು ಜಡ್ಜರು ಗೋಪನ್ನಾಯಕನಿಗೆ ಜೀವಾಂತ ಬಂಕೋಲಿ ಶಿಕ್ಷೆಯನ್ನು ವಿಧಿಸಿ, ಎರಡನೇ ಆಪಾದಿತ ರುಕ್ಮನ್ನಾಯಕನಿಗೆ ಖುಲಾಸುಪಡಿಸಿದರು.

ಮಂಗಳೂರಲ್ಲಿ ಇದೇ ತಾ ೬ರ ವರೆಗೆ ೩೮ ಅಂಗುಲ ೫೯ ಸೆಂಟ್ಸಗಳ ಮಳೆ ಬಿದ್ದಿರುವದು ಕಳೆದ ವರ್ಷದ ಸರಾಸರಿ ೫೬ ಅಂಗುಲ ೭೦ ಸೆಂಟ್ಸ.

ತಕ್ಕ ರುಜುವಾತಿಲ್ಲ ಎಂಬ ಸಬಬಿನ ಮೇಲೆ ಕಳೆದ ವಾರ ಸೆಶ್ಶನ್ಸ ಜಡ್ಜರವರಿಂದ ಖುಲಾಸು ಮಾಡಲ್ಪಟ್ಟ ಕೆ ಡಿ. ಸಾಯಿರಿ ಬ್ಯಾರಿಯು ಇದೇ ತಾ ೩ರಲ್ಲು ಬೋಳಾರದ ಮುಂಡಪ್ಪ ಬೆಲ್ಚಾಡನ ಮನೆಗೆ ಕನ್ನ ಹಾಕಿದನೆಂಬದಾಗಿ ಕೈದುಮಾಡಲ್ಪಟ್ಟಿರುತ್ತಾನೆ ತಾ. ೩ನೇ ರಾತ್ರಿ ಸದರಿ ಮುಂಡಪ್ಪ ಬೆಲ್ಚಾಡನ ಮನೆಗೆ ಕನ್ನ ಹಾಕುತ್ತಿರುವಾಗ ಅವರಿಗೆ ಎಚ್ಚರವಾಗಿ ಕೂಗಿಕೊಂಡದ್ದರಿಂದ ಕಳ್ಳನು ಓಡಿಹೋದನು. ಈ ಬೊಬ್ಬೆಯನ್ನು ಕೇಳಿ ಬೀಟಿನ ಕೆಲಸದಲ್ಲಿದ್ದ ಹೆಡ್‌ಕನ್‌ಸ್ಟೇಬಲ್ ಡೇಸರವರು ಬೊಬ್ಬೆ ಕೇಳಿದ ಸ್ಥಳಕ್ಕೆ ಹೋಗುತ್ತಿರುವಾಗ ಓಡಿ ಬರುತ್ತಿದ್ದ ಕೆ. ಡಿ ಸಾಯಿರಿ ಬ್ಯಾರಿಯನ್ನು ಕಂಡು ಕನ್ನ ಕೊರೆಯುವ ಬರ್ಮ ಇತ್ಯಾದಿ ಸಾಹಿತ್ಯಗಳ ಸಹಿತ ಅವನನ್ನು ಕೈದುಮಾಡಿರುತ್ತಾರೆ.

ಮೆ| ಕಾಕುಸೇಟರ ಬಂಡಸಾಲೆಗೆ ಹಗಲು ಹೊತ್ತು ನುಗ್ಗಿ ಕಳವು ಮಾಡಲು ಯತ್ನಿಸಿದ ತಾಳಿಪಾಡಿ ಗ್ರಾಮದ ಸಂಕಪ್ಪ ಶೆಟ್ಟಿ ಎಂಬವನನ್ನು ಪೋಲೀಸಿನವರು ಕೈದುಮಾಡಿ ವಿಚಾರಣೆಗೆ ಗುರಿಪಡಿಸಿದ್ದಲ್ಲಿ ಬೆಂಚ್ ಕೋರ್ಟಿನಲ್ಲಿ ಸದರಿ ಸಂಕಪ್ಪ ಶೆಟ್ಟಿಗೆ ಒಂದು ತಿಂಗಳ ಸಜಾ ವಿಧಿಸೋಣಾಗಿಯದೆ.

ಕಾಸರಗೋಡಿನಿಂದ ಚಿನ್ನದ ತಾಳಿ ಒಂದನ್ನು ಕಳವು ಮಾಡಿ ಇಲ್ಲಿಯ ಚಿನಿವಾರ ಕಟ್ಟೆಯಲ್ಲಿ ಮಾರುತ್ತಿರುವಾಗ ಅನುಮಾನದ ಮೇಲೆ ಸಬ್ ಇನ್ಸ್‌ಪೆಕ್ಟರ್ ಲೋಬೋರವರಿಂದ ಕೈದು ಮಾಡಲ್ಪಟ್ಟು ವಿಚಾರಣೆಗೆ ಗುರಿಮಾಡಲ್ಪಟ್ಟ ಕಣ್ಣ ಯಾನೆ ಜೋಯಿ ಎಂಬವನಿಗೆ ೩ ತಿಂಗಳ ಕಠಿಣ ಸಜಾ ವಿಧಿಸೋಣಾಯಿತು

ಬಿಜೈಯ ರೋಜಿನ ಶಿಕೇರಾಬಾಯಿ ಮನೆಯಿಂದ ಎರವಾಗಿ ಭಂಗಾರದ ನಗವನ್ನು ಕೊಂಡುಕೊಂಡು ಅದನ್ನು ಜುಗಾರು ಆಡಿ ದುರುಪಯೋಗ ಮಾಡಿದ್ದಾನಾಗಿ ಆಪಾದಿಸಲ್ಪಟ್ಟ ಬಾಬಿ ಯಾನೆ ಅಲ್ಬರ್ಟ್ ಶಿಕೇರನಿಗೆ ಟೌನ್ ಮೆಜಿಸ್ಟ್ರೇಟರು ೩ ತಿಂಗಳ ಕಠಿಣ ಸಜಾ ವಿಧಿಸಿದರು.

ಇದೇ ತಾ. ೫ನೇ ಬೆಳಿಗ್ಗೆ ಒಬ್ಬ ಮಾಪಿಳ್ಳೆಯು ಮಾರ್ಕೆಟಿನ ಬಳಿ ಒಬ್ಬ ಗೌಡಸಾರಸ್ವತರ ಮನೆಯಿಂದ ತಾಂಬ್ರದ ಪಾತ್ರೆಗಳನ್ನು ಕದ್ದೊಯ್ಯುತ್ತಿರುವಾಗ ಬೀಟಿನ ಪೋಲಿಸಿನವರು ಅವನನ್ನು ಪಾತ್ರೆಗಳ ಸಹಿತ ಕೈದುಮಾಡಿರುತ್ತಾರೆ

ತಾಂಡೇಲ ಇಸೂಬನು ಶೆಪ್ಪರ್ಡ ಕಂಪೆನಿಯ ಒಂದು ತರ್ಪಾಲೆಯನ್ನು ಕಳವುಮಾಡಿ ಮಮ್ಮದೆಗೆ ವಿಕ್ರಯಿಸುತ್ತಿರುವಾಗ ಹೆಡ್‌ಕನ್‌ಸ್ಟೇಬಲ್ ಮಂಜುನಾಥನವರು ಅನುಮಾನದ ಮೇಲೆ ಕೈದುಮಾಡಿ ವಿಚಾರಣೆಗೆ ಗುರಿಮಾಡಿದಲ್ಲಿ ಇಸೂಬನು ಕಳವು ಮಾಡಿದ್ದಾಗಿ ರುಜುವಾತಾದ್ದರಿಂದ ಅವನಿಗೆ ಒಂದೂವರೆ ತಿಂಗಳ ಸಜಾ ವಿಧಿಸೋಣಾಯಿತು

ಇದೇ ತಾ ೫ನೇ ರಾತ್ರಿ ಪಳನೀರಿನಲ್ಲಿ ಕಳ್ಳರು ಒಂದು ಅಂಗಡಿಗೆ ಕನ್ನ ಹಾಕಿ ಅಕ್ಕಿ ಇತ್ಯಾದಿಗಳನ್ನು ಕಳವು ಮಾಡಿರುತ್ತಾರೆ

ಇದೇ ಕಳೆದ ತಾರೀಕು 4ನೇ ಆದಿತ್ಯವಾರ ಅಪರಾಹ್ನ ಘಂಟೆ 5ಕ್ಕೆ ಶ್ರೀ ಶಿವಭಕ್ತಿಯೋಗ ಪ್ರಾರ್ಥನಾ ಸಂಘದ ಸದಸ್ಯರು ವಗೈರರು ಶ್ರೀ ಗೋಕರ್ಣನಾಥ ದೇವಸ್ಥಾನದಲ್ಲಿ ನೆರೆದುಬಂದು, ಕಳೆದ ಮೇ ತಾರೀಕು 21ನೇಯ ಸ್ವದೇಶಾಭಿಮಾನಿ ಪತ್ರಿಕೆಯಲ್ಲಿ ಪ್ರಕಟಿಸೋಣಾದ ಪ್ರಕಾರ ದೇವಸ್ಥಾನದ ಅಧ್ಯಕ್ಷರೂ ಈ ಸಂಘದ ಪೋಷಕರೂ ಆದ ಮ| ರಾ| ರಾ| ಯು ಕೊರಗಪ್ಪನವರ ಅಳಿಯ ವ ಈ ಸಂಘದ ಸದಸ್ಯರಾದ ಮ| ರಾ| ರಾ| ಬಿ ಬಾಬುರವರು ಸಂಘದ ಸದಸ್ಯರಾಗಿರುವ ವಿದ್ಯಾರ್ಥಿಗಳಿಗೆ ಪ್ರಥಮ ದರ್ಜೆಯಿಂದ ಸ್ಕೂಲ್ ಫೈನಲ್ ಕ್ಲಾಸಿನ ವರೆಗೆ ತಮ್ಮ ತಮ್ಮ ವರ್ಷಾವಧಿ ಪರೀಕ್ಷೆಗಳಲ್ಲಿ ತೇರ್ಗಡೆಪಟ್ಟು ಮೇಲಿನ ವರ್ಗದಲ್ಲಿ ಕಲಿಯಲಿಕ್ಕೆ ಉಪಯುಕ್ತವಾದ ಪ್ರಾಮುಖ್ಯ ಪುಸ್ತಕಗಳನ್ನು ಉಚಿತವಾಗಿ ಕೊಡುವರೆ ಕೈವರ್ತಿಸಿದ ರೂಪಾಯಿ 75ಕ್ಕೆ ಮಿಕ್ಕಿದ ಮೌಲ್ಯದ ಪುಸ್ತಕಗಳನ್ನು ಅಂದಿನ ಸಭಾಧ್ಯಕ್ಷರಾದ ಮುನ್ಸಿಪ್ ಕೋರ್ಟಿನ ವಕೀಲರಾದ ಮ| ರಾ| ರಾ| ಅಡಿಗೆ ಶ್ರೀನಿವಾಸರಾಯರಿಂದ ಆಯಾಯ ವಿದ್ಯಾರ್ಥಿಗಳಿಗೆ ಕೊಡಿಸಿದರು ತದನಂತರ ಸಭಾಧ್ಯಕ್ಷರು ಮ| ರಾ| ರಾ| ಬಾಬು ರವರ ಈ ಉದಾರಗುಣವನ್ನೂ, ಸ್ವಜಾತಿಯ ಕಡೆ ಗಿರುವ ಅಭಿಮಾನವನ್ನೂ ಕೊಂಡಾಡಿ ಇದೇ ರೀತಿಯಲ್ಲಿ ಇತರ ಸ್ವಾರ್ಥತ್ಯಾಗಿಗಳಾದ ಜಾತಿಬಾಂಧವರು ಸಹ ತಮ್ಮ ಬಡಜಾತಿಯ ಏಳಿಗೆಯನ್ನು ಬಯಸಿ ತಮ್ಮಿಂದಕೈಲಾದ ಸಹಾಯ ಮಾಡಿದರೆ ಈ ಸಮುದಾಯದ ತರುಣರ ವಿದ್ಯಾಭ್ಯಾಸವು ಬೇಗನೇ ವೃದ್ಧಿಯಾದೀತಾಗಿ ತಿಳಿಯ ಹೇಳಿದ್ದಲ್ಲದೆ ವಿದ್ಯಾರ್ಥಿಗಳಿಗೆ ಸಹ ಅವರು ಅನುಸರಿಸತಕ್ಕ ಬುದ್ಧಿಮಾರ್ಗಗಳಿಂದೊಡಗೂಡಿದ ಅರ್ಥಗರ್ಭಿತವಾದ ಚಲೋ ಭಾಷಣವನ್ನು ಕೊಟ್ಟರು ಕಡೆಗೆ ಸತ್ಪುರುಷರೂ ಧಾರ್ಮಿಕರೂ ಆದ ಮ| ರಾ| ರಾ| ಬಾಬುರವರ ಪರೋಪಕಾರ ಭಾವನೆಗೆ ಅವರನ್ನು ಸಂಘದ ಕಡೆಯಿಂದ ಕೃತಜ್ಞತಾಪೂರ್ವಕ ವಂದಿಸಿ ಸಭಾಧ್ಯಕ್ಷರಿಗೆ ಧನ್ಯವಾದಗಳನ್ನಿತ್ತು ಸಭಿಕರನ್ನು ಗಂಧ, ಪುಷ್ಪ, ಪನ್ನೀರುಗಳಿಂದ ಉಪಚರಿಸಿ, ಅಂದಿನ ಸಭೆಯನ್ನು ಸಮಾಪ್ತಿ ಮಾಡಲಾಯಿತು

ತಿರುವಾಂಕೂರು ಯಾನೆ ಅನಂತಶಯನ ಸಂಸ್ಥಾನದ ದಯಾಳು ಮಹಾರಾಜರವರ ಸರಕಾರದ ಅಪ್ಪಣೆ ಪ್ರಕಾರ ಆರ್ಕಿಯೊಲೊಜಿಕಲ್ ಇಲಾಖೆಯ ಟಿ. ಎ. ಗೋಪಿನಾಥರಾವ್ ಅವರ್ಗಳ್ ಎಮ್ ಎ ಇವರು ಹಿಂದು ದೇವರ್ಕಳ ಮೂರ್ತಿಗಳ ವಿಷಯ ವಿವರಿಸಿ ಬರೆದ ರೂ ೩೦ ಕ್ರಯಬಾಳುವ (Elements of Iconography) ಎಂಬ 4 ಪುಸ್ತಕಗಳನ್ನು ಶ್ರೀ ಶಿವಭಕ್ತಿಯೋಗ ಪ್ರಾರ್ಥನಾ ಸಂಘದ ಪುಸ್ತಕ ಭಂಡಾರಕ್ಕೆ ಧರ್ಮಾರ್ಥವಾಗಿ ದಯಪಾಲಿಸಬೇಕಾಗಿ ಈ ಸಂಘದ ಅಧ್ಯಕ್ಷ ಡಿ ಪಿ. ಡಬ್ಲ್ಯು ಕಂಟ್ರಾಕ್ಟರ್ ಮ| ರಾ| ರಾ| ಯುಮ್. ದೂಮಪ್ಪನವರು ವಿಜ್ಞಾಪಿಸಿಕೊಂಡ ಮೇರೆಗೆ, ಪ್ರಕೃತ ಛಾಪೆಯಾಗಿರುವ ಎರಡು ಪುಸ್ತಕಗಳು ಸಂಸ್ಥಾನದ ಈ ಸಂಘಕ್ಕೆ ಸರಕಾರದವರಿಂದ ತಲಪಿರುತ್ತದೆ. ತಿರುವಾಂಕೂರು ಮಹಾರಾಜರವರ ಈ ದಾನವನ್ನು ಸಂಘದವರು ಅತ್ಯಾದರದಿಂದ ಸ್ವೀಕರಿಸಿರುತ್ತಾರೆ.

ಮದ್ರಾಸ್ ಆಸ್ಪತ್ರಿ ಹಡಗ ಫಂಡಿಗೆ ತಿಂಗಳ ವಂತಿಗೆ ಕೊಟ್ಟವರ ಹೆಸರುಗಳೂ ಮೊಬಲಗುಗಳೂ:— ಮೆ| ಬಿ ಸಿ. ಸ್ಮಿತ್ ರೂ. ೩೫; ಮೆ| ಎಚ್. ಆರ್ ಮೋರ್ಗನ್ ರೂ ೩೦; ಮೆ| ಸಿ. ಎಚ್ ಮೋರ್ಗನ್ ರೂ ೬೦, ಮೆ| ಆರ್. ಸಿ. ಪರ್ಸಿವಾಲ್ ರೂ. ೨೫; ಮೆ| ಎಡ್ ಇ ಕೌಚ್‌ಮೆನ್ ರೂ ೨೫; ಮೆ| ಎಚ್. ಮೇಲಿಮ್ ರೂ ೨೦; ಮಂಗಳೂರು ಪೋಲಿಸ್ ಸ್ಪೋರ್ಟ್ಸ್ ಕ್ಲಬ್ಬಿನವರು ರೂ ೨೦, ರಾವ್‌ಬಹದ್ದೂರ್ ಎನ್. ಸುಬ್ಬರಾವ್ ರೂ ೨೦, ಮಂಗಳೂರು ಗವರ್ನಮೆಂಟ್ ಕಾಲೇಜಿನ ಉಪಾಧ್ಯಾಯರು ರೂ ೧೫, ಮೆ| ಎಚ್. ಹಾರ್ಟ ರೂ ೧೫, ಮ| ರಾ| ಟಿ. ಭವಾನಿರಾವ್ ರೂ. ೧೫; ಲೋರ್ಡ ಬಿಶೋಪ್ ಡಾಕ್ಟರ್ ಪೌಲು ಪೆರಿನಿ ಎಸ್. ಜೆ. ರೂ ೧೦; ಮೆ| ಎಚ್. ಎಫ್. ಹಿಕೊಕ್ ರೂ. ೧೦; ಮೆ ಸಿ ಡೇವಿಸ್ ರೂ ೧೦; ಮ| ರಾ| ರಾ| ಎಸ್. ರಘುನಾಥಯ್ಯ ರೂ ೭; ಮ| ರಾ| ಆರ್ ಎಮ್. ರೋಯಿ ರೂ ೫, ರಾಯಿಸಾಹೇಬ್ ಡಾಕ್ಟರ್ ವಿ. ವರ್ಗಿಸ್ ರೂ. ೫, ಮೆ| ಟಿ ರೋಬರ್ಟ್ಸರ ಮೂಲಕ ರೂ. ೪-೧೧-೧; ರಾವ್‌ಬಹದ್ದೂರ್ ಆರ್. ರಾಮರಾವ್ ರೂ ೪.

ಮುಂದರಿಯುವದು.

ಬಂಟರ ಯಾನೆ ನಾಡವರ ಸಂಘ

ಕಿರಿಬಾಗಿಲು ಶಂಕರ ಬಂಟರಲ್ಲಿ ಆದ ವಿವಾಹದ ಸಂಬಂಧ ಪಟೇಲ ತಿಮ್ಮಪ್ಪ ಆಳ್ವರ ಮುಖಾಂತರ ವಸೂಲಾದ್ದು ರೂಪಾಯಿ ೨—೦—೦. ಬೆಳ್ಳೂರು ಲಕ್ಕಣ ಪೂಂಜರಲ್ಲಿ ಅವರ ಮಗ ಮತ್ತು ಅಳಿಯಂದಿರಿಗೆ ಆದ ವಿವಾಹದ ಸಂಬಂಧ ವಸೂಲಾದ್ದು ರೂಪಾಯಿ ೫-೦-೦.

A. B. Shetty.
ಕೋಶಾಧಿಕಾರಿ.

ಜೀನಸು ಧಾರಣೆ. (ರಖಂ)

ಮಸ್ಕತಿ ಅಕ್ಕಿ	5— 2—0	5—10—0
ಗಾಡಿ ರಾಶಿ ,,	4—11—0	4—12—6
ಗುಡ್ಡು ,,	4—14—0	5— 0—0
ಅನ್ವಲ್ ಬೆಳ್ತಿಗೆ,,	5—14—0	6— 4—0
ಗುಡ್ಡು ಬೆಳ್ತಿಗೆ ,,	5— 4—0	5— 6—0
ರಂಗೂನು ಬೆಳ್ತಿಗೆ ಗೋಣಿ ೧ರ	9—10—0	9— 8—0
ಗೋಧಿ ಗೋಣಿ ೧ರ ...	13— 0—0	14— 0—0
ಹುರುಳಿ ಗೋಣಿ ೧ರ ...	6— 8—0	7—12—0
ಕಡಲೆ ಗೋಣಿ ೧ರ, ,,	8— 8—0	10— 0—0
ತೊಗರಿ ಗೋಣಿ ೧ರ ...	10— 0—0	11— 8—0
ತೊಗರಿ ಬೇಳೆ ಗೋಣಿ ೧ರ.	12— 8—0	16— 0—0
ಉದ್ದು ಗೋಣಿ ೧ರ		10— 0—0
ಊರುಬೆಲ್ಲ ಖಂಡಿ ೧ರ ...		75— 0—0
ಉಪ್ಪು ಗೋಣಿ ೧ರ	3—12—0	3—14—0
ಕೊಬ್ರಿ ಖಂಡಿ ೧ರ	70— 0—0	75— 0—0
ಕೊಬ್ರಿ ಹಿಂಡಿ ಖಂಡಿ ೧ರ		14— 0—0
ಎಳ್ಳಿಂಡಿ ಖಂಡಿ ೧ರ	25— 0—0	33—12—0
ಕೊಬ್ರಿ ಎಣ್ಣೆ ಮುಡಿ ೧ರ.	5—10—0	5—12—0
ಎಳ್ಳೆಣ್ಣೆ ಮುಡಿ ೧ರ(ಕುರಾಸನ)		3—12—0
ಚಿಮಣಿ ಎಣ್ಣೆ ಪೆಟ್ಟಿಗೆ ೧ರ		5— 0—6
ಮೋರಿಸ್ ಸಕ್ಕರೆ ಮುಡಿ ೧ರ		4— 12—0
ಕಾಫಿ ಖಂಡಿ ೧ರ	240— 0—0	252— 0—0
ಹೊಸಬೆಳಗೋಟು ಖಂಡಿ೧ರ.	94— 0—0	98— 0—6
ಹೊಸ ಗೇರುಬೀಜ ಮುಡಿ ೧ರ		2— 2—0
ಕಬ್ಬಿಣ ಖಂಡಿ ೧ರ.		50— 0—0
ತಾಂಬ್ರ ತಗಡು ಮುಣ ೧ರ.		19— 8—0
ತಾಂಬ್ರ ಪಾತ್ರೆಗಳು ಮುಣ ೧ರ.		22— 0—0
ಚೀನಿ ಬೆಳ್ಳಿ ಸೇರು ೧ರ.		18—12—0

ಮಾರಾಟಕ್ಕೆ ಸಿದ್ಧವಿರುವುದು! ಮಾರಾಟಕ್ಕೆ ಸಿದ್ಧವಿರುವುದು!

ವೇಂಕಟಗಿರಿ ಮಹಾತ್ಮೆ.

ಪದ್ಮಾವತೀ ಕಲ್ಯಾಣದಿಂದ ಪೂರ್ಣವಾಗಿರುವುದು.

(ಸಂಸ್ಕೃತ ಭವಿಷ್ಯತ್ಪುರಾಣದಿಂದ)

ಮಂಗಳೂರಲ್ಲಿ ಸ್ವರ್ಗಸ್ಥರಾಗಿ ಹೋದ ಮುಲ್ಕಿ ಕವಿ ರಾಮಕೃಷ್ಣಯ್ಯನವರಿಂದ ಭಾಮಿನಿ ಷಟ್ಪದಿಯಲ್ಲಿ ಕನ್ನಡಿಸಲ್ಪಟ್ಟಿರುವುದು.

959 ಪದ್ಯಗಳಿರುವ 15 ಅಧ್ಯಾಯಗಳಿಂದ ಕೂಡಿರುವುದು. ಕಾವ್ಯರಚನೆಯು ಬಹು ಮೃದುರವೂ ಸುಲಭವೂ ಆಗಿರುವುದರಿಂದ ಸರ್ವರಿಗೂ ಅನುನಿತ್ಯದ ಪಠಣಪುಸ್ತಕವಾಗಿರಲು ಉಚಿತವಾಗಿರುವುದು. ವೆಂಕಟೇಶನು ಗಿರಿಯಲ್ಲಿ ನಡೆಸಿದ ಅದ್ಭುತ ವೃತ್ತಾಂತಗಳು ವಾಚಕರ ಮನಃಖಚಿತವಾಗುವಂತೆ ಈ ಗ್ರಂಥವು ಯಥೋಚಿತ ಚಿತ್ರಪಠಗಳಿಂದ ಕೂಡಿರುವುದು. ಕ್ರಯ ಪ್ರತಿಯೊಂದಕ್ಕೆ ರೂ. 1—8—0. ಟಪ್ಪಾಲು ಹಾಸಲು ಬೇರೆ.

ಕವಿ ಎಂಡ್ ಸನ್ಸ್,
ಮಂಗಳೂರು.

ಡಾಕ್ಟರ್ ನವರತ್ನರ ಪಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ. 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ. ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ. ಪ್ರಯೋಗಿಸಲು ಸುಲಭವಾಗಿದೆ. ಪರಿಮಳ, ಕೆಡದ ಬಣ್ಣ, ಬಹಳ ಅಗ್ಗ. ಕಪ್ ಮತ್ತು ಬ್ರಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ. 1. ಟಪ್ಪಾಲು ಚಾರ್ಜು 0—4—0.

Dr. Navaratna & Sons,
Kalbadevi Road, BOMBAY.

ಏಜಂಟರು:—ದಿ. ಊಲನ್ ಮಾರ್ಟ್,
ಮಾಧವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ.

೧. ಕುಟುಂಬಜೀವನಿ—ಎಲ್ಲಾ ರೋಗಗಳನ್ನು ತ್ವರೆಯಾಗಿ ಗುಣಪಡಿಸುವದು. 16 ಔಷಧಗಳ ಸಂಗ್ರಹದ ಪೆಟ್ಟಿಗೆ 1ಕ್ಕೆ 8—0—0.

೨. ಶತಮೂಲಿಕಾ ಅಮರಸಂಜೀವನಿ—ಈ ಟೊನಿಕ್ ದ್ರಾವಕವು ನಿತ್ರಾಣರಿಗೆ ಚೈತನ್ಯ ಉಂಟುಮಾಡಿ ಅಮರತ್ವವನ್ನು ಕೊಡುತ್ತದೆ. ಬಾಟ್ಲಿ 1ಕ್ಕೆ 1—0—0.

೩. ಬಾಲಸಂಜೀವನಿ—ಮಧುರ ಟೊನಿಕ್ ಅಶಕ್ತ ಬಾಲಕರಿಗೆ ಸಶಕ್ತರಾಗಿ ಮಾಡಿ ವರ್ಧಮಾನ ಚಂದ್ರನಂತೆ ಬೆಳಗಿಸುತ್ತದೆ. ಬಾಟ್ಲಿ 1ಕ್ಕೆ 0—12—0.

೪. ವಸಂತ ಕುಸುಮಾಕರ—ಈ ಸುವಾಸಿಕ ತೈಲವು ಕೇಶ ವೃದ್ಧಿಮಾಡಿ ಶಿರೋರೋಗ ನೇತ್ರರೋಗಗಳನ್ನು ಶಮನಮಾಡಿ ಮೆದುಳನ್ನು ತಂಪು ಮಾಡಿ ಜ್ಞಾನಶಕ್ತಿ ಹೆಚ್ಚಿಸಿ, ಬುದ್ಧಿ ಭ್ರಮಣವನ್ನು ಗುಣಮಾಡುತ್ತದೆ. ಬಾಟ್ಲಿ 1ಕ್ಕೆ 1—0—0

೫. ಸುದರ್ಶನಮಾಲಿನಿ—ಈ ಸಿದ್ಧೌಷಧವು ಮೇಹವ್ರಣ ಇತ್ಯಾದಿ ಎಲ್ಲಾ ದುಸಾಧ್ಯ ವ್ರಣಗಳನ್ನು 7-8 ದಿವಸಗಳಲ್ಲಿ ಪೂರ್ಣ ಗುಣಪಡಿಸುವದು. ಕ್ರಯ 4—0—0.

೬. ಗರುಡಧ್ವಜ—ಇದು ಸರ್ಪ ಹುಚ್ಚುನಾಯಿ, ಚೇಳು, ಇಲಿ ಇತ್ಯಾದಿ ಸರ್ವ ಶಕಿಣ ವಿಷಗಳಿಗೆ ಸಂಜೀವನವಾಗಿರುತ್ತದೆ. ಅನುಭವಸಿದ್ಧ 2—0—0.

೭. ಆನಂದವನವಿಲಾಸ—ಇದು ಡ್ಯಾಬಿಟಿಸ ಎಂಬ ಬಹುಮೂತ್ರ ರೋಗವನ್ನು 48 ದಿವಸಗಳಲ್ಲಿ ಪೂರ್ಣ ಗುಣಪಡಿಸುತ್ತದೆ. ಪೂರ್ಣ ಔಷಧಕ್ಕೆ 5—0—0.

ನಮ್ಮ ಡಿಸ್ಪೆನ್ಸರಿಯಲ್ಲಿ ಸಿದ್ಧ ಕಲ್ಪ ಧೈರಾಗಿ ಪ್ರಯೋಗಗಳಿಂದ ತಯಾರಿಸಿದ ಪೌಡರ ಮಾತ್ರೆಗಳು, ಲೇಹ ಚೂರ್ಣಗಳು, ತೈಲ್ಯ ಘೃತಗಳು, ಆಸವಾರಿಷ್ಟಗಳೂ ತುಂಬಾ ಇರುತ್ತವೆ. ಕ್ರಯವಿಲ್ಲದ ನಮ್ಮ ಕೆಟಲಗನ್ನು ತರಿಸಿಕೊಳ್ಳಿರಿ. ಏಜಂಟರು ಬೇಕು. ಹೆಚ್ಚು ಡಿಸ್‌ಕೌಂಟ್ ಸಿಕ್ಕುವದು.

ಎಮ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

ವಿನೋದ! ಮಾಸಪತ್ರಿಕೆ!!

"ಚಾತುರ್ಯ."

ಈ ಮಾಸಪತ್ರಿಕೆಯಲ್ಲಿ ಪತ್ತೆದಾರಿ ಕಥೆಗಳು, ಹಾಸ್ಯಲಹರಿಯು, ಹಾಸ್ಯ, ವಿನೋದ, ನೀತಿಸಂಬಂಧ ಲೇಖನಗಳೂ, ಕಥೆಗಳೂ, ಕಾದಂಬರಿಗಳೂ ಪ್ರಕಟಿಸಲ್ಪಡುತ್ತೆ. ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ ೧ ರೂಪಾಯಿ. ಮಾದರಿ ಸಂಚಿಕೆಗೆ ೧ ಆಣೆ ಸ್ಟಾಂಪು ಕಳುಹಿಸಿರಿ.

ವಿಳಾಸ:— ಮ್ಯಾನೇಜರ್, "ಚಾತುರ್ಯ"
ಬೆಂಗಳೂರು ಸಿಟಿ.

ಕರ್ಣಾಟಕ ವೃತ್ತ ಮತ್ತು ಧನಂಜಯ.

ಕಳೆದ 25 ವರ್ಷಗಳಿಂದ ಭಾಷಾ ಸೇವೆಯನ್ನೂ ದೇಶ ಸೇವೆಯನ್ನೂ ಮಾಡುತ್ತಿರುವ ಈ ವಾರಪತ್ರಿಕೆಯು ಧಾರವಾಡದಲ್ಲಿ ಪ್ರತಿ ಮಂಗಳವಾರವೂ ಪ್ರಕಟಿಸಲ್ಪಡುವದು.

ಲೋಕವ್ಯವಹಾರದ ಉಪಯುಕ್ತ ವಿಷಯಗಳ ಸದಭಿಪ್ರಾಯವನ್ನು ಜನರಲ್ಲಿ ಉಂಟುಮಾಡುವಂಥ ಚಲೋ ಸ್ಫುಟ ಲೇಖಗಳುಳ್ಳ ಮುಂಬಯಿ ಕರ್ಣಾಟಕದ ಉತ್ತಮ ತರಗತಿಯ ಈ ಪತ್ರವನ್ನು ದಕ್ಷಿಣಕನ್ನಡದವರೂ ಓದುವದು ಅಗತ್ಯ.

ದೊಡ್ಡ ರೊಯಲ್ ಸ್ಯಾಜಿನ ಈ ಪತ್ರಿಕೆಗೆ ವಾರ್ಷಿಕ ಚಂದಾ ಮೊಬಲಗು ಟಪ್ಪಾಲು ಹಾಸಲು ಸೇರಿ ರೂ. ೨—೪—೦ ಆಗಿರುತ್ತದೆ; ಚಂದಾದಾರರಾಗಿ ಸೇರಲಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವದು.

ಮ್ಯಾನೇಜರ್, ಕರ್ಣಾಟಕ ವೃತ್ತ ಮತ್ತು ಧನಂಜಯ,
ಮಂಗಳವಾರಪೇಟೆ, ಧಾರವಾಡ.

ಮಾರಾಟಕ್ಕೆ ಸಿದ್ಧವಿದೆ! ನೂತನ ಸಂಗ್ರಹ!!

ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ

ಮತ್ತು

ಭೂತಾಳಪಾಂಡ್ಯರಾಯನ ಅಳಿಯಕಟ್ಟು

ಈ ನವೀನ ಗ್ರಂಥದಲ್ಲಿ ಪರಶುರಾಮಾವತಾರದ ಕಥೆಯೂ, ಪುಳಿನಾಪುರ ಮಹಾತ್ಮೆಯೂ, ಭರತಖಂಡದ ಕ್ಷತ್ರಿಯ ರಾಜವಂಶಾವಳಿಯೂ, ಧರ್ಮರಾಯನ ನಂತರ ಕಲಿಯುಗದಲ್ಲಿ ರಾಜ್ಯವಾಳಿದ 30 ಅರಸರ ಹೆಸರುಗಳೂ, ಕಾಲಗಳೂ ಪರಶುರಾಮ ಸೃಷ್ಟಿಗೆ ಸೇರಿದ 77 ದ್ವೀಪಗಳೂ, ಕನ್ನಡ ಜಿಲ್ಲೆಯ ಪೂರ್ವರಾಜರ ಸಂತತಿಯೂ, ಅವರು ಆಳಿದ ವರ್ಷಗಳೂ ಹೆಸರುಗಳೂ, ಕನಕವರ್ಮ ವೀರವರ್ಮರ ಚರಿತ್ರೆಯೂ, ವೀರವರ್ಮನು ಮಯೂರವರ್ಮನಾಗಿ ಬಂಟರ ಮತ ಸ್ಥಾಪಿಸಿದ ಕಥೆಗಳೂ, ಮಯೂರವರ್ಮನು ಮಾರ್ಕಾಂಡೇಯರಿಂದ ರಾಜನೀತಿಗಳನ್ನು ಕೇಳಿದ ಕಥೆಯೂ, ಅಹಿಕ್ಷೇತ್ರದಿಂದ ಬ್ರಾಹ್ಮಣರನ್ನು ತರಿಸಿದ ಕಥೆಯೂ, ಬ್ರಾಹ್ಮಣರಿಗೆ 32 ಗ್ರಾಮಗಳಲ್ಲಿ ನೇಮಿಸಿದ 326 ಭೇದಗಳು (ಜನನಗಳೂ) ಅವರಿಗೆ ನೇಮಿಸಿದ ಬಹುಮಾನ ಮರ್ಯಾದೆಗಳೂ ಕೂಟ ಮರ್ಯಾದೆಗಳೂ, ಜೈನರಿಗೂ ಬ್ರಾಹ್ಮಣರಿಗೂ ದ್ವೇಷದ ಕಾರಣಗಳೂ, ಭೂತಾಳ ಪಾಂಡ್ಯನ ಪೂರ್ವಚರಿತ್ರೆಯೂ, ದೇವಪಾಂಡ್ಯನ ಹಡಗಿನ ವಿವರಗಳೂ, ಭೂತಾಳಪಾಂಡ್ಯನ ಪೂರ್ಣಕಥೆಯೂ, ಭೂತರಾಜನಾದ ಕುಂಡೋಧರನ ಪ್ರತಾಪಗಳೂ, ಭೂತಾಳಪಾಂಡ್ಯನ ಪಟ್ಟಾಭಿಷೇಕವೂ, ದೇವಪಾಂಡ್ಯನ ಹಡಗಿನ ವ್ಯಾಪಾರದ ಕಥೆಯೂ ಅಳಿಯ ಕಟ್ಟು ಆದ ಕಾರಣವು ಭೂತಾಳಪಾಂಡ್ಯನು ನೇಮಿಸಿದ 14 ಕಟ್ಟು, 16 ಕಟ್ಟಳೆಗಳೂ, ಭೂತಾಳ ಪಾಂಡ್ಯನ ವಿವಾಹವೂ, ಕುಂಡೋಧರನು ಮಹಿಷಾಸುರನಾದ ಕಥೆಯೂ ಭೂತಾಳ ಪಾಂಡ್ಯನು ಮಕ್ಕಳಿಗೆ ವಿಂಗಡಿಸಿದ ಸ್ಥಳ ಮಾನಮರ್ಯಾದೆಗಳೂ, ಅವನ ನಂತರ ಅಳಿಯ ವಿದ್ಯುಮ್ನಪಾಂಡ್ಯನ ಆಳಿಕೆಯೂ, ಆತನು ತನ್ನ ಮಕ್ಕಳಿಗೆ ವಿಂಗಡಿಸಿದ ಮಾನಮರ್ಯಾದೆಗಳೂ, ಚೌಟ ಬಂಗರ ಸಂಸ್ಥಾನದ ನಗರಗಳೂ, ಸ್ಥಳ ನಾಮಾವಳಿಗಳೂ, ಕೇರಳದ 43 ಜಾತಿಗಳೂ, ಹೋಬಳಿ ಮನೆತನಗಳೂ, ಮರ್ಯಾದೆಗಳ ಶಾಸನವೂ, ಪೂರ್ವ ಮರ್ಯಾದೆಗಳ ಕ್ರಮವೂ, 2ನೇ "ಭೂತಾಳಪಾಂಡ್ಯ"ನ ಚರಿತ್ರೆಯೂ, ಅಳಿಯಸಂತಾನದ 60 ಬಳಿಗಳೂ, ಚೌಟ ಬಂಗರ ಸಂಸ್ಥಾನದ ಮಾಗಣೆ, ಸೀಮೆ, ಒಳ ಅರಸರು, ಅವರ ಸ್ಥಳ ಮಾನಮರ್ಯಾದೆಗಳು ವಗೈರೆಯೂ ಜೈನ ಬಂಟರ 60 ಜನನ (ನಾಮಕೀರ್ತಿಗಳೂ) 7 ರಾಜದೈವಗಳ ಚರಿತ್ರೆಯೂ, ಉಡುಪಿಯ ಇತಿಹಾಸ, ವಿಜಯನಗರದ ಆಡಳಿತೆ ಕಂದಾಯ ಕ್ರಮ, ಪೂರ್ವದ ಕೆಲವು ಸಂಗ್ರಹಗಳು, ಬಂಗಾಡಿ ತಾಮ್ರಶಾಸನ, ಪಲ್ಲಿ ಪಾಡಿ ಶಿಲಾಶಾಸನ, ಉಳ್ಳಾಲ ತಾಮ್ರಶಾಸನ, ಬಂಟಕಲ್ಲಿನ ಶಿಲಾಶಾಸನ, ನಂದಳ್ಕೆ ತಾಮ್ರಶಾಸನ, ವೇಣೂರಿನ ತಾಮ್ರಶಾಸನ, ಅನುಭವಗಳ ಸಂಗ್ರಹ, ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ದೇವಸ್ಥಾನಗಳು, ಬಾರ್ಕೂರು ಪಂಚಲಿಂಗೇಶ್ವರ ದೇವಸ್ಥಾನದ ಮರ್ಯಾದೆ ಪಟ್ಟಿ, ಮೊಗಲ್ ರಾಜರ ವಂಶಾವಳಿ, ಭರತಖಂಡಕ್ಕೆ ಅನ್ಯರಾಜರ ಪ್ರವೇಶ ಕಾಲಗಳು, ಜಿಲ್ಲೆಯ ಮಹನೀಯರ ಪಟ್ಟಿ, ಶ್ರೀಮನ್ ಪಂಚಮ ಜಾರ್ಜ ಬಾದಶಹರ ಚರಿತ್ರೆ ವಗೈರೆ ಅನೇಕಾನೇಕ ಸಂಗ್ರಹಗಳು ಭರಿತವಾದ ನವೀನ ಗ್ರಂಥ. 296 ಪುಟಗಳು ಭರಿತವಾಗಿ ಸದಾ ಕೈಯಲ್ಲಿರುವುದಕ್ಕೆ ಅನುಕೂಲವಾದ ಈ ಪುಸ್ತಕವು ಅಳಿಯಕಟ್ಟಿನವರಿಗೂ ಮಕ್ಕಳ ಕಟ್ಟಿನವರಿಗೂ ಶಾಲಾ ಉಪಾಧ್ಯಾಯರುಗಳಿಗೂ ವಿದ್ಯಾರ್ಥಿಗಳಿಗೂ ಸರ್ವರಿಗೂ ಅತ್ಯಗತ್ಯವುಳ್ಳದ್ದಾಗಿದೆ. **ಪ್ರತಿ ಒಂದಕ್ಕೆ ರೂ. 1—4—0.**

ಹೆಚ್ಚಿಗೆ ಪ್ರತಿಗಳನ್ನು ಕೊಂಡುಕೊಳ್ಳುವವರಿಗೂ ವ್ಯಾಪಾರಸ್ಥರಿಗೂ ಒಳ್ಳೇ ಕಮಿಷನ್ ಕೊಡಲಾಗುವದು.

ಕುಶಲಮಂದಿರ,
ಶ್ರೀರಾಜರಾಜೇಶ್ವರಿ ದೇವಸ್ಥಾನ,
ಪೊಳಲಿ.

ಎನ್. ಎ. ಶೀನಪ್ಪ ಹೆಗ್ಗಡೆ,
ಅಮುಣಂಜೆಗುತ್ತು,
ಗುರುಪುರ ಪೋಸ್ಟು, ದ. ಕ.

Box Locks. **Padlocks.**



ಧಾರಣೆ ಸುಲಭ! **ಅಲಿಗರ್ ಬೀಗಗಳು.** ಧಾರಣೆ ಸುಲಭ!

ಭದ್ರವಾಗಿಯೂ, ಹೊರವ ಗಿಯೂ ಇರುವುದು ಬೇರೆ ಬೀಗವಕ್ಕೆ ಮುಕ್ಕಾಲುವಕ್ಕೆ ಆಗುವುದಿಲ್ಲ ನೋಡುವುದಕ್ಕೆ ಅಂದವಾಗಿಯೂ ಇರುವುದು ಇದೇ ಮಾದರಿ ಬೀಗಗಳನ್ನು ಇಂಜಿನಿಯರ್ ಇಲಾಖೆಗಳಿಗೂ, ಬ್ಯಾಂಕುಗಳಿಗೂ, ಸರಕಾರಿ ಆಫೀಸ ಗಳಿಗೂ ಸಪ್ಲೈಮಾಡಿದೆ

ನಾಲ್ಕು ಚಕ್ರಗಳಿರುವ ಬೀಗಗಳ

ನಂಬ್ರ	1	2	3	4	5
	0—12—0	0—15—0	1—4—0	1—10—0	..

ಆರು ಚಕ್ರಗಳಿರುವ ಬೀಗಗಳು

1—2—0 1—8—0 2—4—0 3—0—0 3—8—0

ಲ್ವರ್ ಬೀಗಗಳು

—14—0 0—5—0 0—6—0 0—8—0 0—10—0

ಟ್ರಂಕುಗಳಿಗೆ ಹಾಕುವ ಕೊಂಡಿ ಬಗ್ಗಿಸಿರುವ ಬೀಗ ಒಕ್ಕೆ 0—13—0

೪, ೫, ೬ನೇ ನಂಬರು ಬೀಗಗಳನ್ನು ಬಾಗಲುಗಳಿಗೂ ಕಬ್ಬಿಣದ ಪೆಟ್ಟಿಗೆಗಳಿಗೂ ಉಪಯೋಗಿಸಬಹುದು ಏಜೆಂಟರುಗಳಿಗೆ ಕಮಿಷನ್ ದೊರೆಯುತ್ತೆ ಹಾಸಲು ಪ್ರತ್ಯೇಕ

ಮರದ ಪೆಟ್ಟಿಗೆಗಳಿಗೂ, ಮೇಜುಗಳಿಗೂ, ಬೀರೂಗಳಿಗೂ ಹಾಕುವ ೬ ಚಕ್ರಗಳಿರುವ ಬೀಗಗಳು ಒಕ್ಕೆ 1—8—0, 1—12—0.

ವಿಳಾಸ — ಎಚ್ ಎಸ್ ರಾವ್ ಆಂಡ್ ಬ್ರದರ್ಸ್,

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಶಾಶ್ವತವಾದ ಆರೋಗ್ಯವನ್ನು

ಹೊಂದುವದಕ್ಕೆ ಸುಲಭವಾದ ಮಾರ್ಗವು.

ಮದನಮಂಜರಿ ಮಾತ್ರೆಗಳು

ಉಪಯೋಗಿಸುವದೇ ಆಗಿರುವದು. ಈ ಮಾತ್ರೆಗಳು ಅಜೀರ್ಣವು ಮಲಬಂಧ, ಮನೋವ್ಯಥೆ, ಜ್ಞಾಪಕಶಕ್ತಿ ಇಲ್ಲದಿರುವದು, ನರಗಳ ಬಲಹೀನತೆ, ಅಶಕ್ತಿ, ಸ್ವಪ್ನಸ್ಖಲಿತ, ಬಹುಮೂತ್ರ, ಮೂತ್ರಕೋಶ ಸಂಬಂಧವಾದ ವ್ಯಾಧಿಗಳ , ನಪುಂಸಕತ್ವ ಮುಂತಾದ ವ್ಯಾಧಿಗಳನ್ನು ಶೀಘ್ರದಲ್ಲಿಯೇ ಬೇರು ಸಹಿತವು ಕಿತ್ತು ಹಾಕಿ ಪುರುಷರಿಗೆ ಸಂತತ ಪುರುಷತ್ವವನ್ನು ಕೊಡುವವು ಇದು ನಾಟಿಯುಲ ನ ಮಾಣಿಕ್ಯ ಔಷಧಿಯಾಗಿರುತ್ತದೆ. ಕಳೆದ 25 ವರುಷ ಕಾಲದಲ್ಲಿ ಸಾವಿರಾರು ರೋಗಿಗಳನ್ನು ಸ್ವಸ್ಥಪಡಿಸಿದೆ. ನಿಮ್ಮನ್ನು ಕೂಡ ಸ್ವಸ್ಥ ಮಾಡುವವು. 40 ಮಾತ್ರೆಗಳ ಡಬ್ಬಿ ಕ್ರಯ ರೂ 1—0—0

ಉಚಿತ ಕ್ರಯವು ಇಲ್ಲ ಹಾಸಲು ಇಲ್ಲ

144 ಪುಟಗಳುಳ್ಳ ವೈದ್ಯಸಾರಸಂಗ್ರಹವಾದ

ವೈದ್ಯವಿದ್ಯ .

ಪುಸ್ತಕದಲ್ಲಿ ಶಾಶ್ವತವಾದ ಆರೋಗ್ಯವನ್ನು ಪಡೆಯಲು ಅತ್ಯವಶ್ಯವಾದ ವಿಷಯಗಳು ಭರಿತವಾಗಿವೆ ನಿಮ್ಮ ವಿಳಾಸವನ್ನು ತಿಳಿಸಿದರೆ ನಿಮಗೆ ಒಂದು ಪ್ರತಿ ಉಚಿತವಾಗಿ ಕಳುಹಿಸಲ್ಪಡುವದು.

ರಾಜವೈದ್ಯ ನಾರಾಯಣಜಿ ಕೇಶವಜಿ

20 ಚೀನಾ ಬಜಾರ್ ರೋಡ್,

ಮದರಾಸು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾವಯಹರು ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ಕಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಹೊರತ (ಬಾರ), ಮೈ ಸೆಳುಕು, ಶೀತ



ವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ಅಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಾಯಿ ಹೊತ್ತು ಸುವಾಸನೆಯಾಗುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ಕಳೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಮುಟ್ಟು ಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ, 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1ರಿಂದ 12 ಕುಪ್ಪಿ ವರೆಗೆ ಪೋಸ್ಟೇಜು 4 ಆಣೆ.

ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವಿನಿಯಾಗಿದೆ, ಕೈಬಿಡಲ್ಪಟ್ಟಂತೆಂದು ತೋರಿದಾಗಲೂ ಆಶ್ಚರ್ಯಕರವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿ! ಒಂದೇ ಒಂದು ಬುಡ್ಡಿಯು ನಿಮ್ಮಲ್ಲಿರಲಿ! ಚಿಕಿತ್ಸೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರೆಯನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು ಬೆಲೆ ರೂ. 1, ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ತಮ್ಮ ವಿಳಾಸ:—"ಶ್ರೀ ಸೀತಾರಾಘವ ವೈದ್ಯಶಾಲಾ"

ಮೈಸೂರು

ಬಹು ಮನೋಹರ! ಅದ್ಭುತ!

ವಸಂತ ಕೋಕಿಲ

ಎಂಬ

ನೂತನವಾದ ಹೊಸ ಕಾದಂಬರೀ ಕಥೆ.

ರಸಿಕ ಶಿರೋಮಣಿಗಳೇ,

"ವಸಂತ ಕೋಕಿಲ" ಎಂಬ ಇಂದ್ರಜಾಲ ಮಹೇಂದ್ರಜಾಲಗಳನ್ನು ಸ್ಪಷ್ಟವಾಗಿ ತೋರಿಸುವ ಅತ್ಯದ್ಭುತ ಚಮತ್ಕಾರವಾದ ಹೊಸ ಕಾದಂಬರೀ ಕಥೆಯು ಅಚ್ಚಾಗಿ ಈಗ ತಾನೇ ವಿಕರಿಗೆ ಸಿದ್ಧವಾಗಿದೆ ಈ ಗ್ರಂಥದಲ್ಲಿ ಶೃಂಗಾರಾದಿ ನವರಸಗಳು ತುಂಬಿ ತುಳುಕುತ್ತಿವೆ ಇದುವರೆಗೆ ಪ್ರಚುರವಾಗಿರುವ ಎಲ್ಲಾ ಕಥೆಗಳಿಗಿಂತಲೂ ಮಿಗಿಲಾದಷ್ಟು ರಸ್ಯವುಳ್ಳದ್ದಾಗಿದೆ ವರ್ಣನಾಭಾಗಗಳು ಎಲ್ಲರಿಗೂ ತಿಳಿಯುವ ಹಾಗೆಯೂ ಸ್ವಾಭಾವವಾಗಿಯೂ ಇವೆ ಭಾಷಾಶೈಲಿಯು ಅತ್ಯುತ್ತಮವಾಗಿದೆ. ಓದುವದಕ್ಕಾರಂಭಿಸಿದ ವಾಚಕರ ಮನಸ್ಸನ್ನು ಸಂಪೂರ್ಣವಾಗಿ ಆಕರ್ಷಿಸಿ ಮುಗಿಯುವವರಿಗೂ ಅನೇಕವನ್ನು ಒಟ್ಟುಮಾಡಿ ಉಲ್ಲಾಸಗೊಳಿಸುವ ಹಾಗಿದೆ ತಮ್ಮ ಜ್ಞಾನ, ಭಕ್ತಿ, ವೈರಾಗ್ಯ ಮೊದಲಾದ ವೇದಾಂತ ವಿಷಯಗಳನ್ನೂ ಚೆನ್ನಾಗಿ ತಿಳಿಸುತ್ತದೆ. ಕಥಾ ಸಂವಿಧಾನವು ಹೊಸ ಮಾದರಿಯಾಗಿ ಆಶ್ಚರ್ಯಕರವಾಗಿದೆ ಪ್ರಕಟವಾಗಿ ಶೃಂಗಾರ ರಸವನ್ನು ವರ್ಣಿಸದೆ ಇರುವುದರಿಂದ ಎಲ್ಲಾ ಸ್ತ್ರೀಜನರಿಗೆ ಓದುವುದಕ್ಕೆ ಅರ್ಹವಾಗಿದೆ. ಇದರಲ್ಲಿ ೯ ಪ್ರಕರಣಗಳೂ ೨೩೬ ಪುಟಗಳೂ ಇವೆ. ಉತ್ತಮವಾದ ಕಾಗದ, ಸುಂದರವಾದ ಅಕ್ಷರ, ತಪ್ಪಿಲ್ಲದೆ ಸುಂದರವಾಗಿ ಮುದ್ರಿಸಿದೆ. ಬೇಕಾದವರೆಲ್ಲರೂ ಕೆಳಗಣ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಕ್ರಯ ರೂ. ೧—೦—೦ ಮಾತ್ರ.

ವಿಳಾಸ:— ಟಿ. ಎ. ಮಾಣಿಕ್ಯಂ ಶೆಟ್ಟಿ,

ಮಾಣಿಕ್ಯಮಂದಿರ ಬುಕ್ ಡಿಪೋ,

ಬಳ್ಳಾರಿ.

ಬಾಲಬೋಧ ಲಿಪಿಯ ಪುಸ್ತಕಗಳು.

ಋಗ್ವೇದಿ ಮಂತ್ರಸಂಹಿತಾ	1—0—0
„ ಬ್ರಹ್ಮಕರ್ಮ	2—8—0
„ ಸಂಧ್ಯಾವಂದನೆ	0—2—0
ಶಿಕ್ಷಾದಿ ಚತುಷ್ಟಯ	0—4—0
ಸಪ್ತಶತಿ ದೇವಿಮಹಾತ್ಮ್ಯ, ಸ್ಥೂಲಾಕ್ಷರ, ರೇಶ್ಮೆ ಬ್ಯಾಂಡ್	0-12—0
ಸಪ್ತಶತಿ ದೇವಿಮಹಾತ್ಮ್ಯ, ಮಧ್ಯಮಾಕ್ಷರ, ರೇಶ್ಮೆ ಬ್ಯಾಂಡ್	0-10—0
ಸಪ್ತಶತಿ ದೇವಿಮಹಾತ್ಮ್ಯ, ಸಣ್ಣಾಕ್ಷರ, ರೇಶ್ಮೆ ಬ್ಯಾಂಡ್	0—7—0
ಅಧ್ಯಾತ್ಮರಾಮಾಯಣ ರೇಶ್ಮೆಬ್ಯಾಂಡ್	1—0—0
ಸತ್ಯನಾರಾಯಣ ವ್ರತಕಥಾ	0—2—6
ವಿದುರನೀತಿ	0—8—0
ಭಗವದ್ಗೀತಾ, ಸ್ಥೂಲಾಕ್ಷರ, ರೇಶ್ಮೆ ಬ್ಯಾಂಡ್	0-12—0
ಭಗವದ್ಗೀತಾ ಮಧ್ಯಮಾಕ್ಷರ, ರೇಶ್ಮೆ ಬ್ಯಾಂಡ್	0—8—0
ಭಗವದ್ಗೀತಾ, ಸಣ್ಣ ಅಕ್ಷರ, ಕಾಗದ ಬ್ಯಾಂಡ್	0—6—0
ಭಗವದ್ಗೀತಾ, ಸಣ್ಣ ಅಕ್ಷರ, ರೇಶ್ಮೆ ಬ್ಯಾಂಡ್	0—4—0
ಮಹಾವಾಕ್ಯ ರತ್ನಾವಳಿ	0—3—0
ವಿಷ್ಣುಸಹಸ್ರನಾಮಸ್ತೋತ್ರ, ಸ್ಥೂಲಾಕ್ಷರ, ರೇಶ್ಮೆ ಬ್ಯಾಂಡ್	0—4—0
ವಿಷ್ಣುಸಹಸ್ರನಾಮಸ್ತೋತ್ರ, ಸ್ಥೂಲಾಕ್ಷರ, ಕಾಗದ ಬ್ಯಾಂಡ್	0—2—6
ವಿಷ್ಣುಸಹಸ್ರನಾಮಸ್ತೋತ್ರ, ಮಧ್ಯಮಾಕ್ಷರ, ಕಾಗದ ಬ್ಯಾಂಡ್	0—2—0
ಪಂಚರತ್ನಗೀತಾ, ಸ್ಥೂಲಾಕ್ಷರ, ರೇಶ್ಮೆ ಬ್ಯಾಂಡ್.	1—0—0
ಪಂಚರತ್ನಗೀತಾ ಮಧ್ಯಮಾಕ್ಷರ, ರೇಶ್ಮೆ ಬ್ಯಾಂಡ್	0-12—0
ಪಂಚರತ್ನಗೀತಾ ಮಧ್ಯಮಾಕ್ಷರ, ಕಾಗದ ಬ್ಯಾಂಡು	0—8—0
ಬೃಹತ್ಸ್ತೋತ್ರ ರತ್ನಾಕರ 182 ಸ್ತೋತ್ರಗಳು ಅಡಗಿರುವ ರೇಶ್ಮೆ ಬ್ಯಾಂಡು	0-12—0
ಬೃಹತ್ಸ್ತೋತ್ರ ರತ್ನಾಕರ 182 ಸ್ತೋತ್ರಗಳು ಅಡಗಿರುವ ಕ್ಯಾಲಿಕೊ ಬ್ಯಾಂಡ್	0-10—0
ಬೃಹತ್ಸ್ತೋತ್ರ ರತ್ನಾಕರ 182 ಸ್ತೋತ್ರಗಳು ಅಡಗಿರುವ ಕಾಗದ ಬ್ಯಾಂಡ್	0—8—0
ಶಿವಲೀಲಾಮೃತ ದೊಡ್ಡ ಸ್ಯಾಜ್, ಸ್ಥೂಲಾಕ್ಷರ, ಅವ್ವಲ್	1—4—0
ಶಿವಲೀಲಾಮೃತ ದೊಡ್ಡ ಸ್ಯಾಜ್, ಸ್ಥೂಲಾಕ್ಷರ, ದುಯಂ	0-14—0
ಶಿವಗೀತಾ, ರೇಶ್ಮೆ ಬ್ಯಾಂಡ್	0—8—0
„ ಕಾಗದ „	0—5—0
ಶನಿಮಹಾತ್ಮ್ಯ	0—4—0
ಪಂಚತಂತ್ರ	1—2—0
ವಿವೇಕರತ್ನಾಕರವೆಂಬ ಕೊಂಕಣಿ ಭಾಷೆಯ ಅಭಂಗ ಪದಗಳು ಬಾಲಬೋಧ ಲಿಪಿ	0—6—0
ಕನ್ನಡ ಅಕ್ಷರದ ಕೊಂಕಣಿ ಭಾಷೆಯ ಪುಸ್ತಕಗಳು	
ಚಂದ್ರಹಾಸ ನಾಟಕ	0—4—0
ಮಾನಸ ಚರಿತ್ರ ನಾಟಕ	0—4—0
ಸಾವಿತ್ರಿ ನಾಟಕ	0—4—0
ಸ್ವರ್ಣಗೌರೀವ್ರತಕಥಾ	0—1—0

ಈ ಮೇಲಿನವುಗಳಲ್ಲದೆ ಇನ್ನೂ ಅನೇಕಾನೇಕ ಸಂಸ್ಕೃತ, ಮರಾಟಿ, ಕನ್ನಡ ಪುಸ್ತಕಗಳೂ, ಶಾಲಾ ವಿದ್ಯಾರ್ಥಿಗಳಿಗೆ ಅಗತ್ಯವಿರುವ ಕೋಪಿ ಬೂಕುಗಳೂ, ಎಕ್ಸರ್‌ಸ್ಯಾಜ್ ಬೂಕುಗಳೂ, ಫೌಂಟನ್ ಪೇನು ಇತ್ಯಾದಿ ಬರವಣಿಗೆ ಸಾಮಗ್ರಿಗಳೂ, ವರ್ಗ ಊಳಿಗ ಪುಸ್ತಕಗಳೂ ನಮ್ಮಲ್ಲಿ ಸುಲಭ ಕ್ರಯಕ್ಕೆ ದೊರೆಯುವವು. ಪರಸ್ಥಳದವರಿಗೆ ಅಗತ್ಯವಿರುವ ಯಾವತ್ತೂ ಮಾಲುಗಳು ಟಪ್ಪಾಲ ದ್ವಾರಾ ಕಳುಹಿಸಲ್ಪಡುವವು.

ನಮ್ಮ ವಿಳಾಸ:— ಕೆ. ಯಂ. ದಾಸ ಪ್ರಭು,
ರಥಬೀದಿ, ಮಂಗಳೂರು.

ಅಪೂರ್ವ ಗ್ರಂಥ! ಅಪೂರ್ವ ಗ್ರಂಥ!!

ಬಳ್ಳಾರಿ ಶ್ರೀ ಮರಿಸ್ವಾಮಿಗಳು

ಸಕ್ಕರಿ ಕರಡೆಪ್ಪ

ಇವರ ಜೀವಿತ ಚರಿತ್ರೆ.

ಈ ಮಹಿಮರ ಚರಿತ್ರೆಯನ್ನು ಇಲ್ಲಿಯವರಿಗೂ ಯಾರೊಬ್ಬರು ಪ್ರಕಟನ ಮಾಡಿದ್ದಿಲ್ಲವೆಂಬುದು ತಿಳಿದದ್ದಾಗಿರುವದಷ್ಟೆ. ಇಂತಹ ಅದ್ಭುತ ಮಹಿಮಾಶಾಲಿಗಳ ಚರಿತ್ರೆಗಳು ಅವಶ್ಯಕವಾಗಿಯೂ ಆದರಣೀಯಗಳಾಗಿರುವವು. ಇವರ ಮಹಿಮೆಯು ಅಸಾಧಾರಣವಾದುದು. ಒಂದೆ ದಿನ ಒಂದೆ ಕಾಲದಲ್ಲಿ ಬಳ್ಳಾರಿ, ಬೆಂಗಳೂರು, ಭೈರವಪುರ ಎಂಬ ಮೂರು ಸ್ಥಳಗಳಲ್ಲಿ ಸಮಾಧಿಯನ್ನು ಹೊಂದಿದರೆಂಬುದೊಂದೆ ಅಪ್ರತಿಮ ಪ್ರಭಾವವನ್ನು ಸೂಚಿಸುತ್ತಿರುವದು. ಇವರು ಅಲ್ಲಲ್ಲಿ ತೋರಿದ ಮಹಿಮೆಗಳು ಅನಂತವಾಗಿರುವವು; ಇದಲ್ಲದೆ ಇವರ ಶಿಷ್ಯನಾದ ಸಕ್ಕರಿಕರಡೆಪ್ಪನ ಅಪಾರ ಮಹಿಮೆಯು ವಿಶದವಾಗಿ ವರ್ಣಿಸಲ್ಪಟ್ಟಿರುವದು. ಈ ಸಕ್ಕರಿ ಶರಣನಂತಹ ಶರಣನು ಇದೀ ಪ್ರಪಂಚದಲ್ಲಿ ವೀರಶೈವ ಮತದೊಳಗೆ ಹುಟ್ಟುವದು ಅಪರೂಪ. ಆ ಗುರುಶಿಷ್ಯರೀರ್ವರ ಚರಿತ್ರೆಗಳು ಒಂದು ಗ್ರಂಥದಲ್ಲಿ ತಯಾರುಮಾಡಿರುವೆವು. ಈ ಗ್ರಂಥವನ್ನೋದುವವರು ಖಂಡಿತವಾಗಿಯೂ ನೀತಿ, ಭಕ್ತಿ, ಜ್ಞಾನಗಳ ಕಡೆ ಮನಸ್ಸನ್ನು ಕೊಡದಿರಲಾರರು. ಮತ್ತು ಇದಲ್ಲದೆ ಮೈಸೂರು ಶ್ರೀಮನ್ಮಹಾರಾಜ, ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರರವರು ಶಿಷ್ಯರಾದ ಕಂಬಳಿ ಸ್ವಾಮಿಗಳ ಸಮೇತ ಇರುವ ಮಹಾಸ್ವಾಮಿಗಳ ಛಾಯಾಚಿತ್ರ ಪಟವು ಪ್ರಥಮ ಪುಟದಲ್ಲಿ ಅಂದವಾಗಿರಿಸಲ್ಪಟ್ಟಿರುವದು.

ನಿಮ್ಮ ವಿಳಾಸ ಚೆನ್ನಾಗಿರಲಿ. ಇದರ ಬೆಲೆ ವಿ. ಪಿ. ಸಹಿತ ರೂ. 1—2—0.

ನಮ್ಮ ವಿಳಾಸ:— ಬಸವರಾಜ ಕಂಪೆನಿ, ಬಳ್ಳಾರಿ.

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ. ಸುಬ್ಬರಾಯಿಯವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ಮಧುರಧ್ವನಿ ಮಾತ್ರೆ:—ಧ್ವನಿಯಲ್ಲಿರುವ ನ್ಯೂನತೆಗಳನ್ನು ಪರಿಮಾಡಿ, ಮನೋಹರವಾದ ಧ್ವನಿಯನ್ನುಂಟುಮಾಡಿ ಸ್ಫುಟವಾಗಿ ಮಾತನಾಡುವುದಕ್ಕೆ ವಿಶೇಷ ಅನುಕೂಲಪಡಿಸಿಕೊಡುವದು. ಮುಖ್ಯವಾಗಿ ಸಂಗೀತಗಾರರು, ಉಪನ್ಯಾಸಕರು ಮೊದಲಾದವರಿಗೆ ಬಹಳ ಸಹಕಾರಿಯು. ಇದರ ಸೇವನೆಯಿಂದ ಭಾರವಾದ ಧ್ವನಿಯು ಸರಿಯಾಗುವದು. ಹಾಡಿದರೆ ಕಿವಿಗಿಂಪಾಗುವಂತೆ ಧ್ವನಿಯು ಹೊರಡುವದು.

ಸೀಸೆ 1ಕ್ಕೆ 8 ಆಣೆ. ವಿ. ಪಿ. ಚಾರ್ಜು 6 ಸೀಸೆವರೆಗೂ 5 ಆಣೆ.

ಸ್ನಾನಕ್ಕೆ ಸುವಾಸನಾ ಪುಡಿ:—ಸುವಾಸನೆಯುಳ್ಳ ಈ ಪುಡಿಯನ್ನು ಸ್ನಾನ ಕಾಲದಲ್ಲಿ ಪ್ರಾಯದ ಗಂಡಸರೂ, ಹೆಂಗಸರೂ, ಮುದುಕರೂ, ಸಣ್ಣ ಮಕ್ಕಳೂ ಉಪಯೋಗಿಸುವುದಕ್ಕೆ ಅನುಕೂಲವಾಗಿರುವದು. ಚರ್ಮಗತವಾದ ಕೊಳೆಯನ್ನೂ, ಬೆವರಿನ ದುರ್ಗಂಧವನ್ನೂ ಹೋಗಲಾಡಿಸಿ, ಚರ್ಮವನ್ನು ಮೃದುವಾಗಿ, ಮಿಂಚುವಂತೆ ಹೊಳಪುಹುಟ್ಟಿ, ತಂಪನ್ನುಂಟುಮಾಡುವದು. ಅದಲ್ಲದೆ ದೇಹದಲ್ಲಿ ಸರ್ವದಾ ಸುಗಂಧವಿರುವಂತೆ ಮಾಡುವದು. ಪ್ರತಿಯೊಬ್ಬರೂ ಉಪಯೋಗಿಸಲಿಕ್ಕೆ ಯೋಗ್ಯವಾಗಿದೆ. ಪೆಟ್ಟಿಗೆ 1ಕ್ಕೆ 8 ಆಣೆ. ವಿ. ಪಿ. ಚಾರ್ಜು 2 ಪೆಟ್ಟಿಗೆಗಳವರೆಗೂ 5 ಆಣೆ.

ಸಂಜೀವನ ಮಾತ್ರೆಗಳು:—ಮಕ್ಕಳಿಗೆ ಜ್ವರ, ನರಗಳ ಸೆಳೆತ, ನಿದ್ರೆಬಾರದಿರುವದು, ಅಧಿಕವಾಗಿ ಹೊಸುವದು, ಛಳಿ, ಕೆಮ್ಮಲು, ತಲೆನೋವು, ನೆಗಡಿ, ಇನ್ನೂ ಮಕ್ಕಳಿಗೆ ಬರುವ ಅಜೀರ್ಣಸಂಬಂಧವಾದ ರೋಗಗಳಿಗೆ ಒಳ್ಳೇ ಮದ್ದಾಗಿರುವದು. ಇದನ್ನು ದೊಡ್ಡವರು ಸಹ ಉಪಯೋಗಿಸಬಹುದು. ಸೀಸೆ 1ಕ್ಕೆ 10 ಆಣೆ. 1ರಿಂದ 6 ಸೀಸೆವರೇಗೆ ವಿ. ಪಿ. ಚಾರ್ಜು 5 ಆಣೆ ಪ್ರತ್ಯೇಕವು.

ಮಹಾಗೋರೋಜನ ಮಾತ್ರೆ:—ಎಲ್ಲಾ ವಿಧವಾದ ಜ್ವರಗಳಿಗೂ, ವಿಷಮ ಶೀತಜ್ವರ, ಎರಡರ ಜ್ವರ, ಪ್ರತಿದಿನಜ್ವರ ಇವುಗಳಿಗೆ ಅದ್ವಿತೀಯವಾದ ಔಷಧವು. ಮಲನಾಡು ಜ್ವರ, ಹೊಟ್ಟೆಯಲ್ಲಿ ಗಸ್ತೆ ಆಗಿದ್ದರೆ, ಮಕ್ಕಳಿಗೆ ಬರುವ ಜ್ವರ, ಆಮಶಂಕೆ, ಅತಿಸಾರ, ನರಗಳ ಎಳೆತ, ನಿದ್ರೆಬಾರದಿರೋಣ, ಹೆಚ್ಚಾಗಿ ಹೊಸುವದು, ಛಳಿ, ಕೆಮ್ಮಲು, ತಲೆನೋವು, ಮಕ್ಕಳಿಗೂ ದೊಡ್ಡವರಿಗೂ ಅಜೀರ್ಣ ಇವುಗಳನ್ನು ಪರಿಹಾರ ಮಾಡುವದು. ಸೀಸೆ 1ಕ್ಕೆ 10 ಆಣೆ. ವಿ. ಪಿ. 9 ಸೀಸೆವರೆಗೂ 5 ಆಣೆ.

ಚರ್ಮರೋಗಕ್ಕೆ ಔಷಧಿ:—ಮಕ್ಕಳಿಗೆ ಬರುವ ಕರಪಾಸು, ಕುರಿ, ಕುರುಕಾಲು, ಗಜ್ಜಿ, ಮತ್ತು ದೊಡ್ಡವರಿಗೆ ಗಜ್ಜಿ ಸಂಬಂಧವಾದ ವ್ಯಾಧಿಗಳು, ಸುಂಡು, ತಲೆಯಲ್ಲಿಯೂ ಇತರ ಕಡೆಗಳಲ್ಲಿಯೂ ನೋವನ್ನೂ ಅನಂತರ ಉರಿಯನ್ನೂ ಉಂಟುಮಾಡುವ ಎಲ್ಲಾ ಹುಣ್ಣುಗಳಿಗೆ ಹೊರಗೆ ಹಚ್ಚುವದರಿಂದಲೇ ಬಹು ಶೀಘ್ರತೆಯಾಗಿ ವಾಸಿಯಾಗುವವು. ಬೆಲೆ ಸೀಸೆ 1ಕ್ಕೆ 8 ಆಣೆ. ವಿ. ಪಿ. ಚಾರ್ಜು 2 ಸೀಸೆವರೆಗೂ 5 ಆಣೆ.

☞ ಈ ಪ್ರಾಂತ್ಯದಲ್ಲಿ ಕನ್ನಡ, ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವದಿಲ್ಲವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಿಳುನಲ್ಲಾಗಲೀ ಸ್ಫುಟವಾಗಿ ತಿಳಿಯುವಂತೆ ಬರಿಯಬೇಕು.

MY ADDRESS.

P. SUBBA ROY,
Ayurvedic Pharmacy,
Sri Perumalkoil,
SANNATHY, TANJORE.

ನಮ್ಮ ವಿಳಾಸ:—

ಪಿ. ಸುಬ್ಬರಾಯಿ,
ಆಯುರ್ವೇದ ಔಷಧಶಾಲ,
ಶ್ರೀ ವೆಂಕಟೇಶ ಪೆರುಮಾಳ್ ದೇವಸ್ಥಾನ,
ಸನ್ನದಿ, ತಂಜಾವೂರು

B. Narasimha Prabhu,

Bantval,

(SOUTH CANARA).

AGENT FOR

Malabar and

South Canara.

ಸೆನ್ ಸೆನ್. SEN SEN.)

ಕಂಠದ ಮತ್ತು ಬಾಯಿಯ ದೋಷಗಳನ್ನು ನಿವಾರಿಸಿ ಸುಖವನ್ನೀಯುವುದು.

ಶ್ವಾಸಕ್ಕೆ ಸುವಾಸನೆಯನ್ನುಂಟು ಮಾಡುವುದು

ಸೆನ್ ಸೆನ್ ಇದು ರುಚಿ ಇಷ್ಟೇ ಅಲ್ಲ ಆರೋಗ್ಯವನ್ನು ಸರಿಪಡಿಸುತ್ತದೆ ಬಹಳ ವಿನೋದವಾದ ರುಚಿಯ ಶುದ್ಧ ಮಿಠಾಯಿ ಸ್ವರವನ್ನು ಸ್ಪಷ್ಟಗೊಳಿಸಿ ಬಲಪಡಿಸುವದು ಸಂಗೀತಗಾರರಿಗೆ ಪ್ರಸಂಗಗಳನ್ನು ಮಾಡುವ ಉಪದೇಶಕರಿಗೆ, ಭಾಷಣಗಳನ್ನು ದೊಡ್ಡ ದೊಡ್ಡ ಸಭೆಗಳಲ್ಲಿ ಮಾಡುವ ಧನಿಗಳಿಗೆ ಇದು ಬಹಳ ಉಪಯೋಗಕರವಾಗಿರುವುದು

ಸೆನ್ ಸೆನ್ — ಇದರ ಕೆಲವು ಹರಳುಗಳನ್ನು ವೀಳ್ಯದೊಂದಿಗೆ ಸೇವಿಸಿದರೆ ವೀಳ್ಯದ ರುಚಿಯು ಬಹಳ ಸೊಗಸಾಗುವುದು

ಸೆನ್ ಸೆನ್ ಅಜೀರ್ಣ ಮೊದಲಾದ ಜೀರ್ಣಕೋಶದ ದೋಷಗಳಿಗೆಲ್ಲಾ ದಿವ್ಯ ಔಷಧಿಯಾಗಿರುವುದು ಕಂಠದಲಿ ಬಹಳ ಸೀತಳವಾದ ಮತ್ತು ಸುಖಕರವಾದ ಭಾವನೆಯು ಇದರ ಸೇವನೆಯಿಂದ ಉಂಟಾಗುತ್ತದೆ ಬೀಡಿ, ಚುಟ್ಟಾ ವಗೈರೆಗಳನ್ನು ಸೇದಿದ ನಂತರ ಸೆನ್‌ಸೆನ್ನು ಉಪಯೋಗಿಸಿದರೆ ಬಾಯಿಯ ಕೆಟ್ಟ ವಾಸನೆಯನ್ನು ಹೋಗಗೊಳಿಸಿ ಸುವಾಸನೆಯನ್ನುಂಟುಮಾಡುವುದು 3 ಆಣೆ ಕ್ರಯದ ಒಂದು ಪೆಕೆಟನ್ನು ಬಹಳ ಕಾಲ ಉಪಯೋಗಿಸಬಹುದು

ಅರ್ಧಾಣೆಯ ಸ್ಟಾಂಪನ್ನು ಕಳುಹಿಸಿಕೊಟ್ಟರೆ ನಮೂನೆ ಪೆಕೆಟನ್ನು ಉಚಿತವಾಗಿ ಕಳುಹಿಸಿಕೊಡುವೆವು

Address —	ನಮ್ಮ ವಿಳಾಸ —
Muller & Phipps,	ಮುಲ್ಲರ್ ಎಂಡ್ ಫಿಪ್ಸ್,
21 Sankurama Chetty Street	21 ಸಂಕುರಾಮುಚೆಟ್ಟಿ ರಸ್ತೆ,
MADRAS	ಮದರಾಸು

ನ್ಯಾಯದರ್ಪಣ.

ಹೊಸ ಪುಸ್ತಕ.

ಇಂಡಿಯಾ ದೇಶದ ಸಮಸ್ತ ಹಿಂದೂ ಜನರ ಸಾಮಾನ್ಯ ಧರ್ಮಗಳು, ಅವುಗಳನ್ನು ಅತಿಕ್ರಮಿಸಿ ನಡೆಯುವವರಿಗೆ ಉಂಟಾಗತಕ್ಕ ಫಲಗಳು, ಇವುಗಳನ್ನು ಕುರಿತು, ಗವರ್ನಮೆಂಟಿನವರಿಂದ ಅನೇಕ ಆಕ್ಟುಗಳು, ರೆಗ್ಯುಲೇಷನ್‌ಗಳು, ಶಾಸನಗಳು ವಗೈರೆ ವಿಧಾಯಕವಾಗಿ ಇರುತ್ತೆ ಇವುಗಳೆಲ್ಲಾ ಇಂಗ್ಲೀಷ್ ಭಾಷೆಯಲ್ಲಿಯೇ ಅಪಾರವಾಗಿ ಇರುತ್ತವೆ ಇವುಗಳಲ್ಲಿ, "ಕಂಟ್ರಾಕ್ಟ್" ಅಂದರೆ ಕರಾರುಗಳು, "ಬ್ರೀಚ್ ಆಫ್ ಕಂಟ್ರಾಕ್ಟ್" ಅಂದರೆ ಒಪ್ಪಂದಕ್ಕೆ ತಪ್ಪಿ ನಡೆಯೋಣ, ದ್ರೋಹ, ಲಿಮಿಟೇಷನ್, ಛಾಪಾ ಕಾಗದ, ರಿಜಿಸ್ಟ್ರೇಷನ್, ಸಿವಿಲ್ ಪ್ರೊಸಿಡ್ಯೂರ್, ಕ್ರಿಮಿನಲ್ ಪ್ರೊಸಿಡ್ಯೂರ್, ಪೀನಲ್ ಕೋಡ್, ಹಿಂದೂ ಲಾ, ಮುಂತಾದ ಧರ್ಮಶಾಸ್ತ್ರಗಳಿಂದ, ಮನುಷ್ಯರ ನಿತ್ಯಾಚರಣೆಗೆ ಅವಶ್ಯಕವಾದ ಲೌಕಿಕ ವ್ಯವಹಾರ ಧರ್ಮಗಳ ಮುಖ್ಯ ಸಂಗತಿಗಳನ್ನೆಲ್ಲಾ ಆರಿಸಿ ಈ ಸಣ್ಣ ಪುಸ್ತಕವನ್ನು ರಚಿಸಿರುತ್ತೆ ಮತ್ತು ವಾಡಿಕೆಯಲ್ಲಿ ಇರತಕ್ಕ ನಾನಾ ವಿಧಗಳಾದ ದಸ್ತಾವೇಜುಗಳ ಅನೇಕ ನಮೂನೆಗಳು ಮತ್ತು ಕ್ರಿಮಿನಲ್ ರಿವಿನ್ಯೂ ಗ್ರಾಮ ಮುನಸೀಫ್ ಕೋರ್ಟುಗಳ ಮುಂದಿನ ದಾವಾ ವಗೈರೆ ಅರ್ಜಿಗಳ ಮಾದರಿಗಳು ಅಡಕವಾಗಿ ಇರುತ್ತೆ. ಬೆಲೆ 1—8—0 ವಿ. ಪಿ 1—12—0

ಲಾಯರ್ ಯಂ ಯಸ್. ನಂಜಪ್ಪನವರು,

ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

11 ಪುಸ್ತಕಗಳನ್ನು ಒಟ್ಟಾಗಿ ತರಿಸಿಕೊಂಡರೆ ಪೋಸ್ಟೇಜು ಸೇರಿ 15-0-0 ಆಗುತ್ತೆ.

ಚುರುಕಾದ ಏಜಂಟರು ಬೇಕಾಗಿರುವರು! ಧಾರಾಳವಾದ ಕಮಿಶನ್!!!

ಮುಂದಿನ ಅಭಿವೃದ್ಧಿಗೆ ತುಂಬಾ ಅವಕಾಶವುಳ್ಳ ವೃತ್ತಿ!!!

ಮುಂಬಾಯಿ ಲೈಫ್ ಎಸ್ಯುರೆನ್ಸ್ ಕಂಪೆನಿ,

(ಲಿಮಿಟೆಡ).

(1908ರಲ್ಲಿ ಸ್ಥಾಪಿಸಲ್ಪಟ್ಟಿತು).

ಪ್ರಧಾನ ಆಫೀಸು ಮುಂಬಯಿ.

ಅಧ್ಯಕ್ಷರು: — ಒಹುಮಾನಪಟ್ಟ ಮಿ। ಲಲ್ಲುಬಾಯಿ ಸಾಮಲ್ ದಾಸರವರು, ಸಿ ಐ ಇ ಜೆ. ಪಿ

ಈ ಜಿಲ್ಲೆಯಲ್ಲಿ ಹಲವು ಸಂಪನ್ನ ಸ್ಥಿತಿಯ ದೇವಸ್ಥಾನಗಳನ್ನೂ ವ್ಯಾಪಾರ ಭಂಡಸಾಲೆಗಳನ್ನೂ ಗೌಡಸಾರಸ್ವತರು ಸ್ಥಾಪಿಸಿರುವರು. ವಕೀಲಿ, ಸರಕಾರದ ಹುದ್ದೆಗಳನ್ನು ಪಡದಿರುವಂಥ ಹಲವು ವಿದ್ಯಾವಂತರು ಇವರಲ್ಲಿರುವರು. ಹೀಗಿರುವುದರಿಂದ ಇಂಥವರು ಸ್ಮಾರಕ ಫಂಡಿನ ದ್ರವ್ಯಸಂಚಯವಾಗಿ ಒಂದು ಲಕ್ಷ ರೂಪಾಯಿಗಳನ್ನಾದರೂ ಕೂಡಿಸಬೇಕಿತ್ತು. ಇದಕ್ಕೆ ಅಗತ್ಯವುಳ್ಳ ಉದಾರಬುದ್ಧಿಯು ಈ ಜಾತಿಯವರಿಂದ ದಿನೇ ದಿನೇ ದೂರ ಸಾರುತ್ತಿರುವುದು ಜಾತಿಯವರ ದುರ್ಭಾಗ್ಯವೆನ್ನಬೇಕಾಗಿದೆ. ಈ ಜಾತಿಯವರಲ್ಲಿ ಜಿಲ್ಲೆಯ ಆಯಾ ಪ್ರಾಂತ್ಯಗಳಲ್ಲಿ ಜಾತಿ ಕಲಹಗಳು ದೇವಸ್ಥಾನಗಳ ದುರ್ವ್ಯಾಜ್ಯಗಳು ಇವುಗಳ ಬಗ್ಗೆ ಇತ್ತಲಾಗೆ ಖರ್ಚಾದ ಮೊಬಲಗುಗಳು ಬಹಳವಾಗಿವೆ. ಇನ್ನು ನಾನಾ ರೂಪಗಳಲ್ಲಿ ಇವರಲ್ಲಿ ವ್ಯರ್ಥವಾಗಿ ಹೋಗುವ ದ್ರವ್ಯರಾಶಿಯನ್ನು ಪರಿಗಣಿಸಿದರೆ ಇಂಥಾ ಒಂದು ಲಕ್ಷದ ರೂಪಾಯಿಗಳ ಫಂಡುಗಳನ್ನು ಒಂದಕ್ಕಿಂತ ಹೆಚ್ಚಾಗಿ ಸ್ಥಾಪಿಸಬಹುದೆಂದು ಎಂಥವರಿಗಾದರೂ ತೋರದೆ ಇರದು. ಆದರೆ ಮಾಡತಕ್ಕದ್ದೇನು? ಇದಕ್ಕೆ ಈ ಜಾತಿಯ ವಿದ್ಯಾವಂತರು ಉತ್ತರ ಕೊಡಲಿ!

PROGRESSIVE INDIA!
ಪುರೋಗಾಮಿ ಭಾರತ!

ದಯಾಘನನಾದ ಪರಮಾತ್ಮನ ಅನುಗ್ರಹದಿಂದ ದಿನಕ್ರಮವಾಗಿ ನಮ್ಮ ಮಾತೃಭೂಮಿಯು ಬ್ರಿಟಿಷ್ ಮಹಾಪ್ರಭುಗಳ ಶೀತಳವಾದ ಛತ್ರಚ್ಛಾಯೆಯಲ್ಲಿ ಸರ್ವತೋಮುಖವಾಗಿ ಅಭಿವೃದ್ಧಿ ಹೊಂದುತ್ತಿರುವುದೆಂಬ ವಿಷಯವು ನಿಷ್ಪಕ್ಷಪಾತಬುದ್ಧಿಯಿಂದ ವಿವೇಚಿಸುವ ಸಮಸ್ತರಿಗೂ ಅವಗತವಾಗಿಯೇ ಇರುವುದು. ಈಚೀಚೆಗೆ ಈ ಅಭಿವೃದ್ಧಿಯ ಕುರುಹುಗಳು ಇನ್ನಷ್ಟು ಸ್ಫುಟವಾಗಿಯೂ ವಿಸ್ತಾರವಾಗಿಯೂ ಗೋಚರಿಸುತ್ತಲಿರುವುದಕ್ಕಾಗಿ ನಾವು ತುಂಬಾ ಸಂತೋಷಿಸುತ್ತಿರುವೆವು.

ಕ್ರಿಸ್ತಶಕದ ೧೮೫೭ನೇ ವರ್ಷವು ಭಾರತವರ್ಷದ ಇತಿಹಾಸದಲ್ಲಿ ಹಲವು ಕಾರಣಗಳಿಂದ ಬಹು ಮುಖ್ಯವಾಗಿದೆ ಎನ್ನಬಹುದು. ಆ ವರ್ಷದಲ್ಲಿಯೇ ದುರಭಿಮಾನ ಮೂಲವಾಗಿ ಹುಟ್ಟಿದ ಮಹಾ ವಿಪ್ಲವವು (mutiny) ಕ್ಷೇಮದಿಂದ ಪರಿಹಾರವಾಗಿ, ಪರರಾಜರ ವಿಷಯವಾಗಿ ಭಾರತೀಯ ಪ್ರಜಾಜನರಿಗಿದ್ದ ವೈಮನಸ್ಯವು ನಷ್ಟವಾಗಿ, ಇಂಗ್ಲಿಷ್ ದೊರೆತನವು ನಮ್ಮ ದೇಶದಲ್ಲಿ ನೆಲೆಯಾಗಿ ನಿಂತಿತು. ಮತ್ತು ದೇಶದಲ್ಲಿ ಶಾಂತತೆಯೂ ಜನರ ಧನಪ್ರಾಣಗಳಿಗೆ ಭದ್ರತೆಯೂ ಉಂಟಾಯಿತು. ಇನ್ನು ಅದೇ ವರ್ಷದಲ್ಲಿಯೇ ಹಿಂದೂಸ್ಥಾನದ ಮುಖ್ಯವಾದ ಮೂರು ರಾಜಧಾನಿಗಳಲ್ಲಿಯೂ ಯುನಿವರ್ಸಿಟಿಗಳೆಂಬ ವಿದ್ಯಾಪೀಠಗಳು ಸ್ಥಾಪಿಸಲ್ಪಟ್ಟವು, ಮತ್ತು ಹಲವು ಶತಮಾನಗಳ ಅರಾಜಕತೆಯಿಂದ ಭಾರತ ಸಂತಾನರಲ್ಲಿ ಉಂಟಾಗಿರುತ್ತಿದ್ದ ಅವಿವೇಕಾಜ್ಞಾನಗಳು ನಷ್ಟವಾಗಲು ಅವಕಾಶವುಂಟಾಯಿತು. ಈ ವಿದ್ಯಾಪೀಠಗಳಿಂದ ಭಾರತೀಯರಿಗೆ ಉಂಟಾದ ಅಭೂತಪೂರ್ವವಾದ ಲಾಭಗಳನ್ನು ಇಷ್ಟಿಷ್ಟೆಂದು ವರ್ಣಿಸಿ ಹೇಳಲು ನಾವು ಅಸಮರ್ಥರಾಗಿರುವೆವು. ಇವುಗಳಲ್ಲಿ ದೊರೆತ ವಿದ್ಯಾದಾನದ ಮೂಲವಾಗಿಯೇ ಅಂದಿನಿಂದೀಚೆಗೆ ಜನರುಗಳಲ್ಲಿ ಜ್ಞಾನೋನ್ನತಿಯುಂಟಾಗಿ, ತಾವು ಯಾರು? ತಮ್ಮ ಸದ್ಯಸ್ಥಿತಿಯು ಹೇಗಿರುವುದು? ತಮ್ಮ ಉತ್ತರಾಭಿವೃದ್ಧಿಗೆ ಅನುಕೂಲವಾದ ಸಾಧನಗಳಾವುವು? ಇತ್ಯಾದಿ ಹಲವು ವಿಧವಾದ ಪ್ರಶ್ನೆಗಳು ಸುಸಂಸ್ಕೃತರಾದ ಪ್ರಜಾಮುಖಂಡರ ಚಿತ್ತಗಳಲ್ಲಿ ಅಂಕುರಿಸಿದುವು, ಮತ್ತು ಅದುವರೆಗೆ ಸಾವಿರಾರು ಭೇದಗಳಿಂದ ಪೀಡಿತರಾಗಿದ್ದ ನಮ್ಮ ಜನರುಗಳು ಮೆಲ್ಲಮೆಲ್ಲನೆ ಸಂಘಶಕ್ತಿಯ ಪ್ರಯೋಜನವನ್ನರಿತವರಾದರು.

ಈ ಸಂಘಶಕ್ತಿಯನ್ನು ಬೆಳೆಯಿಸುವುದಕ್ಕಾಗಿ ೧೮೮೫ನೇ ಇಸವಿಯಲ್ಲಿ ಅಖಿಲ ಭಾರತವರ್ಷದ ಮುಖಂಡರೆಲ್ಲರೂ ಒಂದಾಗಿ ರಾಷ್ಟ್ರೀಯ ಸಭೆ (National Congress) ಎಂಬ ರಾಜಕೀಯ ಮಹಾ ಸಭೆಯನ್ನು ಹೊರಡಿಸಿ, ಸೇತು ಹಿಮಾಚಲ ಪರ್ಯಂತವಾದ ಭರತಖಂಡದ ಸಮಸ್ತ ನಿವಾಸಿಗಳೂ ಒಂದೇ ಜನಾಂಗದವರೆಂಬ ಸಂಗತಿಯನ್ನು ಜಗತ್ತಿಗೆಲ್ಲ ನಿದರ್ಶನವಾಗಿ ತೋರಿಸಿಕೊಟ್ಟರು. ಇದು ಹೊರಟ ಕೆಲವು ಕಾಲದೊಳಗಾಗಿ ಇದನ್ನೇ ಅನುಸರಿಸಿ ಸಾಮಾಜಿಕ ಪರಿಷತ್ತು (Social Conference), ಏಕೇಶ್ವರವಾದಿಗಳ ಸಭೆ (Theistic Conference) ಔದ್ಯೋಗಿಕ ಪ್ರದರ್ಶನ ಮತ್ತು ಪರಿಷತ್ತು (Industrial Exhibition and Conference), ಇತ್ಯಾದಿ ಸಭೆಗಳೂ ಅದೇ ಕಾಲಸ್ಥಳಗಳಲ್ಲಿ ಪ್ರತಿವರ್ಷವೂ ನಡೆಯತೊಡಗಿದುವು. ಈ ಸಭೆಗಳೆಲ್ಲ ಪ್ರಾಯಶಃ ಹೇಮಂತ ಋತುವಿನಲ್ಲಿಯೇ ಬೇರೆ ಬೇರೆ ಮುಖ್ಯಪಟ್ಟಣಗಳಲ್ಲಿ ನಡೆಯುತ್ತಿದ್ದು ಆಯಾ ಪಟ್ಟಣಗಳ ಹಾಗೂ ಪ್ರಾಂತ್ಯಗಳ ಮಹಾಜನರುಗಳಿಗೆ ಮಹೋತ್ಸವ ಸ್ವರೂಪವಾಗಿ ನಿಂತು ಆನಂದ ಹೇತುಕಗಳಾಗಿವೆ.

ಮುಂದೆ, ವಿದ್ಯಾಪ್ರಸಾರವು ಹೆಚ್ಚುತ್ತ ಹೋದ ಹಾಗೆಯೂ, ದೇಶೋನ್ನತಿಗಾಗಿ ಕೆಲಸ ಮಾಡತಕ್ಕ ಅಭಿಮಾನಿಗಳ ಸಂಖ್ಯೆಯು ಬೆಳೆಯುತ್ತ ಹೋದ ಹಾಗೆಯೂ, ಈ ಇಷ್ಟು ಸ್ವಲ್ಪ ಸಭೆಗಳಿಂದಲೂ ಇಷ್ಟು ಸ್ವಲ್ಪವಾದ ವ್ಯವಸಾಯ ಕ್ಷೇತ್ರಗಳಿಂದಲೂ ನಮ್ಮ ಮಾತೃಭೂಮಿಯು ತಕ್ಕಂತೆ ವರ್ಧಿಸಲಾರದೆಂಬ ಭಾವನೆಯು ಮಹಾಜನರುಗಳಲ್ಲಿ ಮೂಡಿತು; ಮತ್ತು ಹೀಗಾಗಿ ಕ್ರಮಶಃ ವಿದ್ಯಾವಿಷಯಕ ಸಭೆಗಳೂ, ಸಹಕಾರಿ ತತ್ವಪ್ರಸಾರಕ ಸಭೆಗಳೂ, ವೈದ್ಯಕೀಯ ಸಮ್ಮೇಳನಗಳೂ, ಮಹಿಳಾ ಸಭೆಗಳೂ, ದೀನೋದ್ಧರಣ ಸಭೆಗಳು ಇತ್ಯಾದಿ ಇನ್ನು ಹಲವು ವಿಧವಾದ ಸಭೆಗಳೂ ವಸಂತಋತುವಿನಲ್ಲಿ ಅಲ್ಲಲ್ಲಿ ಸೇರತೊಡಗಿದುವು.

ಈ ತರುವಾಯ, ಬಹು ವಿಸ್ತಾರವಾದ ದೇಶಕ್ಕೆಲ್ಲ ಒಂದೇ ಸಭೆ ನೆರೆಯಿಸಿದ ಪಕ್ಷದಲ್ಲಿ ಪಾಶ್ಚಿಮಾತ್ಯ ವಿದ್ಯಾಗಂಧವಿಲ್ಲದ ಜನಸಾಮಾನ್ಯರಲ್ಲಿ ಹಲವು ವಿಧವಾದ ಈ ಚಟುವಟಿಕೆಗಳು ವ್ಯಾಪಿಸುವುದು ಅಶಕ್ಯವೆಂಬ ವಿಷಯವು ಪ್ರಜಾನಾಯಕರಲ್ಲಿ ಹುಟ್ಟಿತು; ಮತ್ತು ಪ್ರತಿ ಒಬ್ಬರೂ ತಮ್ಮ ತಮ್ಮ ಭಾಗದ, ಜಾತಿಯ, ಭಾಷೆಯ, ಸಮಾಜದ, ಮತದ ಮಟ್ಟಿಗೆ ಕೆಲಸಮಾಡಿದರಾದರೆ ಅದರ ಸುಪರಿಣಾಮವು ಯಾವತ್ತು ಭಾರತ ವರ್ಷದಲ್ಲಿಯೂ ಉಂಟಾಗಿ ಎಲ್ಲ ಕಡೆಗಳಲ್ಲಿಯೂ ಏಕಪ್ರಕಾರವಾದ ಉನ್ನತಿಗೆ ಅನುಕೂಲವಾಗುವುದೆಂಬುದನ್ನು ಜನರು ಮನಗಂಡರು. ಯಾವುದಕ್ಕೂ ಮುಖ್ಯವಾಗಿ, ಸಮಸ್ತ ಜನರಲ್ಲಿಯೂ ಜಾಗೃತಿಯುಂಟಾಗಬೇಕಾದರೆ, ಸಾಧ್ಯವಾದ ಮಟ್ಟಿಗೂ, ಯಾವತ್ತು ಸಭೆಗಳ ಕಾರ್ಯಗಳನ್ನು ಆಯಾ ದೇಶಭಾಷೆಗಳಿಂದಲೇ ನಿರ್ವಹಿಸಿಕೊಳ್ಳಬೇಕೆಂಬ ವಿವೇಕ ಬುದ್ಧಿಯು ಉದಯಿಸಿತು. ಹಾಗೆಯೇ, ಮಹಾಜನರುಗಳಲ್ಲಿ ಸಾಮಾನ್ಯತಃ ಉತ್ಸಾಹವುಂಟಾಗಿ, ನೂತನವಾದ ಈ ಅಭಿಪ್ರಾಯಗಳು ಮೂಡಿ, ಜನರುಗಳ ಅಜ್ಞಾನವು ತೊಲಗಿ, ನಿವೃತ್ತಿಭಾವವು ಅಳಿದು, ಭೂಮಂಡಲದಲ್ಲಿರುವ ಮುಖ್ಯ ಮುಖ್ಯ ಜನಾಂಗಗಳೊಡನೆ ನಾವೂ ಸಮಾನಸ್ಕಂದರೆನ್ನಿಸಬೇಕಾದರೆ, ದೇಶಭಾಷಾ ಸಾಹಿತ್ಯವನ್ನು ಬೆಳೆಯಿಸಿ, ಅದರಲ್ಲಿ ಅರ್ವಾಚೀನ ಸಂಸ್ಕೃತಿಗೆ ಅಗತ್ಯವಾಗಿ ಬೇಕಾದಂಥ ಸಮಸ್ತ ಸಾಹಿತ್ಯವೈಜ್ಞಾನಿಕ ಗ್ರಂಥಗಳನ್ನು ಹುಟ್ಟಿಸುವಂತೆ ಮಾಡುವುದು ಅತ್ಯಾವಶ್ಯಕವೆಂಬ ಮಹಾ ತತ್ವವು ಕೂಡ, ಪಾಶ್ಚಿಮಾತ್ಯ ವಿಜೃಂಭಣೆಯಿಂದ ಕೇವಲ ಮೋಹಿತರಾಗಿ ಅದು ಪರ್ಯಂತ ದೇಶಭಾಷೆಗಳನ್ನು ನಿಂದಾದೃಷ್ಟಿಯಿಂದ ನೋಡುತ್ತಿದ್ದ ಆಂಗ್ಲ ವಿದ್ಯಾಪರಿಣತರಾದ ನಮ್ಮ ಸಮಾಜನಾಯಕರುಗಳ ಗಮನಕ್ಕೆ ಬಂದಿತು. ಅಂದಿನಿಂದೀಚೆಗೆ ಪ್ರತಿ ಪ್ರಾಂತ್ಯದಲ್ಲಿಯೂ, ಪ್ರತಿ ಜಿಲ್ಲೆಯಲ್ಲಿಯೂ, ಪ್ರತಿ ತಾಲೂಕಿನಲ್ಲಿಯೂ, ಹೆಚ್ಚೇಕೆ? ಪ್ರತಿ ಗ್ರಾಮದಲ್ಲಿಯೂ ಎಂಬಂತೆ ಪ್ರತಿವರ್ಷವೂ ಹಲವು ವಿಧವಾದ ಮಹಾಸಭೆಗಳು ಸೇರತೊಡಗಿ, ವ್ಯವಹಾರಗಳೆಲ್ಲ ಬಹುಶಃ ದೇಶಭಾಷೆಗಳಲ್ಲಿಯೇ ನಡೆಯಲು ಪ್ರಾರಂಭವಾಗಿರುವುದು. ಇಷ್ಟೇ ಅಲ್ಲದೆ, ಆಯಾ ಭಾಷೆಗಳನ್ನಾಡತಕ್ಕ ಜನರುಗಳು ತಮ್ಮ ತಮ್ಮ ಸಾಹಿತ್ಯ ಪರಿಷತ್ತುಗಳನ್ನೂ ಕೆಲವು ವರ್ಷಗಳಿಂದೀಚೆಗೆ ನಡೆಯಿಸ ತೊಡಗಿರುವರು. ಇದನ್ನೆಲ್ಲ ಕಂಡು ಯಾವ ದೇಶಾಭಿಮಾನಿಯು ತಾನೇ ಸಂತೋಷಪಡಲಾರನು? ಯಾವ ಭಾರತಪುತ್ರನ ಹೃದಯಕಮಲವು ವಿಕಸಿತವಾಗದಿರಬಲ್ಲುದು?

ನಮ್ಮ ದೇಶಬಂಧುಗಳ ಏಳಿಗೆಯ ಈ ಉದ್ಯಮಗಳನ್ನೆಲ್ಲ, ಅವುಗಳ ಪ್ರಾಮುಖ್ಯತೆಗನುಗುಣವಾಗಿ ಆಗಿಂದಾಗ ನಮ್ಮ ಪತ್ರಿಕೆಯಲ್ಲಿ ವಿಸ್ತಾರವಾಗಿಯೋ ಸಂಕ್ಷಿಪ್ತವಾಗಿಯೋ ಕೊಡುತ್ತಲೇ ಬಂದಿರುವೆವು. ಹೀಗಾದುದರಿಂದ ಅನೇಕ ವರ್ಷಗಳು ಮೊದಲುಗೊಂಡು ನಡೆದುಬಂದಿರುವ ರಾಜಕೀಯ, ಸಾಮಾಜಿಕ, ಔದ್ಯೋಗಿಕವೇ ಮೊದಲಾದ ಉದ್ಯಮಗಳ ಸಂಗತಿಯನ್ನು ಸ್ವಲ್ಪಮಟ್ಟಿಗಾದರೂ ನಮ್ಮ ವಾಚಕರುಗಳು ತಿಳಿದವರಾಗಿಯೇ ಇರುವರು. ಆದರೆ ಸಾಹಿತ್ಯವಿಷಯಕವಾದ ಪರಿಷತ್ತುಗಳು ಭಾರತವರ್ಷದಲ್ಲಿ ನೂತನವಾಗಿ—ಬರೀ ಇತ್ತಲಾಗೆ ಮಾತ್ರ—ಹೊರಟಿರುವುದರಿಂದ ಅವುಗಳ ಪರಿಚಯವು ನಮ್ಮ ಕರ್ಣಾಟ ಬಂಧುಗಳಿಗೆ, ವಿಶೇಷತಃ ಮೂಲೆಪಾಲಾಗಿ ಬಿದ್ದಿರುವ ನಮ್ಮ ಜಿಲ್ಲೆಯವರಿಗೆ, ಅಷ್ಟಾಗಿ ಇರಲಾರದೆಂದು ಗ್ರಹಿಸಲು ಅವಕಾಶವಿದೆ. ಈ ಅರಿಯಮೆಯನ್ನು ಹೋಗಗೊಳಿಸಿ ನಮ್ಮ ಜನರಲ್ಲಿಯೂ ವಾಙ್ಮಯಾಭಿಮಾನವೂ ದೇಶಭಕ್ತಿಯೂ ಹೆಚ್ಚುವಂತೆ ಮಾಡಲು ಯಥಾಮತಿಯಾಗಿ ಪ್ರಯತ್ನಿಸಬೇಕೆಂಬುದೇ ನಮ್ಮ ಉದ್ದೇಶವಾಗಿದ್ದು ಈ ಲೇಖನವನ್ನು ಪೀಠಿಕಾ ರೂಪವಾಗಿ ಬರೆದಿರುವೆವು.

ಕಳೆದ ಮೇ ತಿಂಗಳ ಮೊದಲನೆಯ ವಾರದಲ್ಲಿ ಬೆಂಗಳೂರಿನಲ್ಲಿ ಸೇರಿದ ಕರ್ಣಾಟಕ ಸಾಹಿತ್ಯ ಸಮ್ಮೇಳನವೇ ಕರ್ಣಾಟ ಭಾಷಾರಮಣಿಯ ಚೊಚ್ಚಲ ಮಗುವೆನ್ನಬಹುದಾಗಿದೆ. ಇದಕ್ಕೆ ಮೊದಲು ಧಾರವಾಡದಲ್ಲಿಯೂ ಒಂದೆರಡು ತಡವೆ ಗ್ರಂಥಕರ್ತೃಗಳ ಸಮ್ಮೇಳನಗಳು ನೆರೆದಿರುವುದು ನಿಜವಾದರೂ ಅವುಗಳಿಗೆ ಅಷ್ಟು ಮಹತ್ವವೂ ರಾಷ್ಟ್ರೀಯ ಸ್ವರೂಪವೂ ಉಂಟಾಗಿರಲಿಲ್ಲ, ಮಾತ್ರವಲ್ಲದೆ ಅವುಗಳ ದೆಸೆಯಿಂದ ವಾಙ್ಮಯಾಭಿವೃದ್ಧಿಗೆ ಅನುಕೂಲವಾದ ಯಾವ ಫಲಪ್ರಾಪ್ತಿಯೂ ಉಂಟಾದಂತೆ ಕಂಡುಬಂದಿರುವುದಿಲ್ಲ. ಬೆಂಗಳೂರಿನಲ್ಲಿ ನಡೆದ ಸಮ್ಮೇಳನದ ಮತ್ತು ಸ್ಥಾಪಿಸಿದ ಸಾಹಿತ್ಯ ಪರಿಷತ್ತಿನ ಸಂಗತಿಯೇ ಬೇರೆ. ಕನ್ನಡಿಗರು ಏಕಮನಸ್ಕತೆಯಿಂದ ಶ್ರದ್ಧಾಪುರಸ್ಸರವಾಗಿ ಕೆಲಸಮಾಡಿದರಾದರೆ ಭಗವಂತನ ದಯೆಯಿಂದಲೂ ಪೂರ್ವಿಕರ ಆಶೀರ್ವಾದಬಲದಿಂದಲೂ ಮೈಸೂರು ದೊರೆಗಳ ಸಹಾಯದಿಂದಲೂ ಈ ಸಂಸ್ಥಾಪನೆಯ ಮೂಲವಾಗಿ ಕನ್ನಡಿಗರಲ್ಲಿ ಸರ್ವತೋಮುಖವಾದ ಉನ್ನತಿಯುಂಟಾಗಬಹುದೆಂಬ ಆಶೆಗೆ ತುಂಬಾ ಆಸ್ಪದವಿರುವುದು. ಈ ಪರಿಷತ್ತಿನ ಸ್ಥಾಪನೆಯಿಂದ ಬಾಡಿ ಬಳಲಿ ಕುಂದಿಹೋಗಿರುತ್ತಿದ್ದ ಕರ್ಣಾಟಕರ ಮನೋರಥ ತರುವು ಪುನಃ ಉಜ್ಜೀವಿಸಿಕೊಂಡಿದೆ. ಕನ್ನಡಿಗರಲ್ಲಿ ನೂತನವಾದ ಸಂಘಶಕ್ತಿಯುಂಟಾಗಿದೆ, ಮತ್ತು ಸಮಸ್ತ ಕರ್ಣಾಟ ದೇಶಬಾಂಧವರು ಈ ಸಂಸ್ಥಾಪನೆಯು ಮಹಾ ವೃಕ್ಷವಾಗಿ ಬೆಳೆಯಲೆಂದು ಅಹರ್ನಿಶವೂ ಅಭಿಲಾಷೆಪಡುತ್ತಿದ್ದು ಅದರ ಸತ್ಫಲಗಳನ್ನು ಮೆಲ್ಲುವುದಕ್ಕೆ ಅತ್ಯಾತುರರಾಗಿ ಇದಿರುನೋಡುತ್ತಿರುವರು.

ಕಳೆದ ನವಂಬರು ತಿಂಗಳಲ್ಲಿ ಲಕ್ಷ್ಮಣಾವತಿ (Lucknow)ಯಲ್ಲಿ ಹಿಂದೀ ಸಾಹಿತ್ಯ ಸಮ್ಮೇಳನದ ೫ನೆಯ ಅಧಿವೇಶನವು ನೆರೆದಿತ್ತು. ಏಪ್ರಿಲ್ ತಿಂಗಳಲ್ಲಿ

ವರ್ಧಮಾನಪುರಿಯಲ್ಲಿ (Burdwan) ವಂಗೀಯ ಸಾಹಿತ್ಯ ಪರಿಷತ್ತಿನ ೮ನೇ ಸಭೆಯೂ, ಸೂರತ್ತಿನಲ್ಲಿ ಗುಜರಾತೀ ಸಾಹಿತ್ಯ ಪರಿಷತ್ತಿನ ೫ನೆಯ ಕೂಟವೂ ಬಳ್ಳಾರಿಯಲ್ಲಿ ಆಂಧ್ರ ಸಾಹಿತ್ಯ ಪರಿಷತ್ತಿನ ನಾಲ್ಕನೇ ಸಭೆಯೂ ಸೇರಿದ್ದಿತು. ಮೇ ತಿಂಗಳಲ್ಲಿ ಮಹಾರಾಷ್ಟ್ರ ಸಾಹಿತ್ಯ ಸಮ್ಮೇಳನದ ೮ನೆಯ ಸಭೆಯೂ, ನಾಟ್ಯ ಸಮ್ಮೇಳನದ ೧೧ನೇ ಸಭೆಯೂ, ಬೊಂಬಾಯಿಯಲ್ಲಿ ಸೇರಿದ್ದಿತು ಆಗಲೇ ಪೂನಾ ಪಟ್ಟಣದಲ್ಲಿ 'ವಸಂತ ವ್ಯಾಖ್ಯಾನಮಾಲಾ' ಮಂಡಲಿಯವರ ಕಡೆಯಿಂದ ಆಯಾ ವಿಷಯಗಳಲ್ಲಿ ಪಾರಂಗತರಾಗಿದ್ದ ವಿದ್ವಾಂಸರು ಪ್ರಾಯಶಃ ದೇಶಭಾಷೆಯಲ್ಲಿಯೇ ಮೂವತ್ತು ವ್ಯಾಖ್ಯಾನಗಳನ್ನು ಕೊಟ್ಟಿದ್ದರು, ಮತ್ತು ಆ ನಗರಿಯಲ್ಲಿಯೇ ಭಾರತೇತಿಹಾಸ ಸಂಶೋಧಕ ಮಂಡಲದವರ ಮೂರನೇ ಮಹಾಸಭೆಯೂ ನೆರೆದಿದ್ದಿತು ಇನ್ನು ಆ ತಿಂಗಳಲ್ಲಿಯೇ ಆಂಧ್ರ ಮಹಾಜನರುಗಳ ೩ನೆಯ ಪರಿಷತ್ತು ವಿಶಾಖಪಟ್ಟಣದಲ್ಲಿ ಕೂಡಿದ್ದಿತು. ಮತ್ತು ತಮಿಳು ಸಾಹಿತ್ಯ ಸಂಘದವರ ವಾರ್ಷಿಕ ಸಭೆಯು ಮಧುರೆಯಲ್ಲಿಯೂ, ಮಲೆಯಾಳ ಸಾಹಿತ್ಯ ಪರಿಷತ್ತಿನ ಸಾಂವತ್ಸರಿಕ ಸಭೆಯು ತ್ರಿಶಿವಪುರಿ (Trichur) ಯಲ್ಲಿಯೂ ಸೇರಿದ್ದಿತು ಹೀಗೆ ಮೊಟ್ಟಮೊದಲಲ್ಲಿ ಹೇಮಂತ ಋತುವಿಗೆ ಇರುತ್ತಿದ್ದ ಗೌರವವು ಮಹಾಜನರುಗಳ ಇಂಥ ಚಟುವಟಿಕೆಗಳ ಮೂಲವಾಗಿ ವಸಂತರ್ತುವಿಗೂ ಬರತೊಡಗಿರುವುದೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕೆಂಬಂತಿಲ್ಲ.

ಮಹಾಜನೋ ಯೇನ ಗತಸ್ಸಪಂಥಾ" ಎಂಬುದಾಗಿ ನಮ್ಮ ಹಿರಿಯರು ಹೇಳಿರುವರಲ್ಲವೇ? ಆದುದರಿಂದ ನಮಗೂ ಪೂರ್ವದಲ್ಲಿ ಇಂಥ ಪರಿಷತ್ತುಗಳನ್ನು ಸಫಲವಾಗಿ ನಡೆಯಿಸಿದವರ ಅನುಭವವು ಕನ್ನಡಿಗರಿಗೆ ತುಂಬಾ ಪ್ರಯೋಜನಕಾರಿಯಾಗದಿರದೆಂದು ನಾವು ಭಾವಿಸುವೆವು ಆ ಅನುಭವದ ಮೂಲವಾಗಿ ಯಾವ ಮಾರ್ಗದಿಂದ ಹೋದೆವಾದರೆ ಅಪಾಯವಿರುವುದೆಂಬುದೂ ಯಾವ ದಾರಿಯು ನಮ್ಮ ಉದ್ದಿಷ್ಟ ಹೇತುವನ್ನು ಸುಲಭವಾಗಿ, ಅತ್ಯಲ್ಪ ಶ್ರಮದಿಂದ, ನಮಗೆ ದೊರೆಯಿಸಿ ಕೊಡಲಾಪುದೆಂಬುದೂ ಕರ್ಣಾಟ ಪರಿಷತ್ತೆಂಬ ನಮ್ಮ ಹಸುಗೂಸು ಬಾಲರೋಗಗಳಿಗೆ ತುತ್ತಾಗದಂತೆ ಅದನ್ನು ಹೇಗೆ ಬಳೆಯಿಸಬಹುದೆಂಬುದೂ ಸ್ಪಷ್ಟವಾಗಿ ನಮಗೆ ಗೋಚರಿಸದಿರದು. ಹೀಗಾದುದರಿಂದ ಸಾಹಿತ್ಯ ವಿಷಯಕವಾದ ಈ ಮಹಾಸಭೆಗಳ ವೃತ್ತಾಂತಗಳೊಳಗಿಂದ ಸಾರವತ್ತಾದ ಅಂಶಗಳನ್ನು ಆಯ್ದುಕೊಂಡು ಮುಂದಿನ ಸಂಚಿಕೆಯಿಂದ ಮೊದಲ್ಗೊಂಡು 'ಸ್ವದೇಶಾಭಿಮಾನಿ'ಯಲ್ಲಿ ಕ್ರಮಕ್ರಮವಾಗಿ ಪ್ರಚುರಪಡಿಸಿ, ಕೊನೆಗೆ ಅವುಗಳೊಳಗಣ ಗುಣದೋಷಗಳನ್ನು ವಿವೇಚಿಸಿ, ಅವುಗಳೊಳಗೆ ಕನ್ನಡಿಗರಿಗೆ ಗ್ರಾಹ್ಯವಾದ ಅಂಶಗಳು ಯಾವುವೆಂಬುದನ್ನು ತೋರಿಸಿಕೊಡಬೇಕೆಂದಿರುವೆವು ಈ ನಮ್ಮ ಉದ್ಯೋಗವು ಕನ್ನಡಿಗರಿಗೆ ಜ್ಞಾನವರ್ಧಕವೂ ಮನೋರಂಜಕವೂ ಆಗದಿರದೆಂದು ಕೋರುವೆವು.

ಪದಾರ್ಥಗಳ ಬೆಲೆಯೇರಲು ಕಾರಣವೇನು?

(ಮ। ಪ್ರ ಕೆ ರಾಮಚಂದ್ರರಾವ್, ಬಿ ಎ, ಎಲ್ ಸಿ ಇ ಅವರಿಂದ)

ಪದಾರ್ಥಗಳ ಬೆಲೆಯೇರಲು ಕಾರಣವೇನು? ಅದರಲ್ಲಿಯೂ ಈ ೧೫, ೨೦ ವರ್ಷಗಳಿಂದ? ಇದು ಯಾವಾಗಲೂ ಹೀಗೆಯೇ ಇರುವುದೇ? ಇದ್ದರೆ ಮುಂದೆ ಗತಿಯೇನು?—ಈ ವಿಷಯಗಳನ್ನು ಕುರಿತು ಸ್ವಲ್ಪ ವಿಚಾರಮಾಡಬೇಕು. ಈಗ ಪೂರ್ವದಂತೆ ಇಲ್ಲದೆ, ಇಲ್ಲಿನ ಪದಾರ್ಥಗಳು ಇತರ ದೇಶಗಳಿಗೆ ಹೋಗುವುದಕ್ಕೂ, ಅಲ್ಲಿನ ಪದಾರ್ಥಗಳು ಇಲ್ಲಿಗೆ ಬರುವುದಕ್ಕೂ ಬೇಕಾದಷ್ಟು ಅವಕಾಶವಾಗಿದೆ ಹೀಗೆ ನಮ್ಮ ದೇಶಕ್ಕೂ ಲೋಕದ ಇತರ ಭಾಗಗಳಿಗೂ ಸಂಬಂಧವುಂಟಾಗಿರುವುದರಿಂದ, ಅಲ್ಲಿ ಆಗುವ ವಿಶೇಷಗಳಿಗೆ ನಮ್ಮ ದೇಶವೂ ಗುರಿಯಾಗಬೇಕಾಗಿದೆ ಆದುದರಿಂದ ಪದಾರ್ಥಗಳ ಬೆಲೆಯೇರಲು, ಲೋಕಕ್ಕೆಲ್ಲಾ ಸಂಬಂಧಿಸಿದ ಮೂರು ಮುಖ್ಯ ಕಾರಣಗಳನ್ನು ಹೇಳಬಹುದು. ಅವು,—

೧. ಬಂಗಾರವು ಹೆಚ್ಚಾಗಿ ಉತ್ಪತ್ತಿಯಾಗುತ್ತಿರುವುದೂ, ೨. ನಂಬಿಕೆಯ ಮೇಲೆ ವ್ಯಾಪಾರವು ಅಧಿಕವಾಗುತ್ತಿರುವುದೂ, ೩. ಅನರ್ಥಕಾರಿಯಾದ ಯುದ್ಧಗಳು ಸಂಭವಿಸುತ್ತಿರುವುದೂ.

ಇಷ್ಟೇ ಅಲ್ಲದೆ, ಅದಕ್ಕೆ ನಮ್ಮ ದೇಶದಲ್ಲಿಯೇ ಕೆಲವು ಕಾರಣಗಳಿವೆ —

೧. ಬರುತ್ತ ಬರುತ್ತ ಆಹಾರಸಾಮಗ್ರಿಗಳ ಉತ್ಪತ್ತಿಯು ಕಡಿಮೆಯಾಗುತ್ತಿದೆ. ೨. ಈ ದೇಶದ ಪದಾರ್ಥಗಳಿಗೆ ಇಲ್ಲಿಯೂ ಹೊರಗೂ ಗಿರಾಕಿ ಹೆಚ್ಚುತ್ತಿದೆ. ೩. ಇಲ್ಲಿಂದ ಅನ್ಯದೇಶಗಳಿಗೆ ಮಾತ್ರವೇ ಅಲ್ಲದೆ, ನಮ್ಮ ದೇಶದಲ್ಲಿಯೇ ಪ್ರಯಾಣ ಸೌಕರ್ಯವು ಹೆಚ್ಚಿ, ಸಾಮಾನುಗಳು ಬರುವುದಕ್ಕೂ ಹೋಗುವುದಕ್ಕೂ ಹೊಸ ಹೊಸ ಮಾರ್ಗಗಳು ಏರ್ಪಾಡಾಗಿ ದಿನೇ ದಿನೇ ಹೆಚ್ಚುತ್ತಿವೆ. ೪. ಮತ್ತು, ಅಲ್ಲಲ್ಲಿ (ಬ್ಯಾಂಕು ಎಂದರೆ) ಕುಸೀದಾಲಯಗಳು ಸ್ಥಾಪಿತವಾಗಿ, ಆ ಸೌಕರ್ಯದಿಂದ, ಲೇವಾದೇವಿಗಳ ಕೆಲಸಕ್ಕೆ ಅಧಿಕ ಅವಕಾಶವುಂಟಾಗಿ, ದುಡ್ಡು ಓಡಿಯಾಡುವುದು ಹೆಚ್ಚಾಗುತ್ತಿದೆ.

ಮೇಲ್ಕಂಡ ಎಲ್ಲಾ ಕಾರಣಗಳಿಂದ, ಸರಾಸರಿ ಎಲ್ಲಾ ಸಾಮಾನುಗಳನ್ನೂ ಸೇರಿಸಿ ನೋಡಿದರೆ, ನಮ್ಮ ದೇಶದಲ್ಲಿ ಹಿಂದೆ ನೂರು ರೂಪಾಯಿ ಬೆಲೆಯಿದ್ದ ಪದಾರ್ಥಕ್ಕೆ ಈಗ ೧೩೯ ರೂ ಆಗಿದೆ ಇಷ್ಟೊಂದು ಹೆಚ್ಚಾಗಿ ಬೆಲೆಯೇರಿರುವುದು ಪ್ರಪಂಚದ ಮತ್ತೆ ಯಾವ ಭಾಗದಲ್ಲಿಯೂ ಇಲ್ಲ

ಬಂಗಾರವು ಹೆಚ್ಚಾಗಿ ಉತ್ಪತ್ತಿಯಾದರೆ, ಪದಾರ್ಥಗಳ ಬೆಲೆ ಹೆಚ್ಚುವುದು ಹೇಗೆ?—ಎಂದು ಕೆಲವರು ಆಶ್ಚರ್ಯಪಡಬಹುದು. ಗಿರಾಕಿ ಹೆಚ್ಚದೆ ಒಂದೇ ಸಮನಾಗಿದ್ದು, ಮಾರಾಟಕ್ಕೆ ಪದಾರ್ಥಗಳು ಹೆಚ್ಚು ಹೆಚ್ಚಾಗಿ ಬಂದು ತುಂಬುತ್ತಿದ್ದರೆ, ಅವುಗಳ ಬೆಲೆ ಕಡಿಮೆಯಾಗುವುದು ಸಹಜವೇ ಆಗಿದೆ ಹಾಗೆಯೇ, ಪದಾರ್ಥದ ಉತ್ಪತ್ತಿಯು ಹೆಚ್ಚದೆ, ಗಿರಾಕಿಯೂ ಮೊದಲಿನಂತೆ ಒಂದೇ ಸಮನಾಗಿದ್ದು, ದೇಶದಲ್ಲಿ ಹಣ ಮಾತ್ರ ಹೆಚ್ಚಿದರೆ, ಆ ಪದಾರ್ಥದ ಬೆಲೆಯು ಏರಲೇ ಬೇಕಾಗುವುದು ಇದು ಅರ್ಥಶಾಸ್ತ್ರದ ಸಿದ್ಧಾಂತ ಅಲ್ಲದೆ, ನಂಬಿಕೆಯ ಮೇಲೆ ವ್ಯಾಪಾರವು ಹೆಚ್ಚುತ್ತಿರುವುದರಿಂದ ಪದಾರ್ಥದ ಬೆಲೆಯೇರುವುದು ವ್ಯಾಪಾರಧರ್ಮದಲ್ಲಿ ಅನುಭವಸಿದ್ಧವೇ ಆಗಿದೆ ಆ ವಿಚಾರವಿರಲಿ ಈಗ ಎಲ್ಲರಿಗೂ ಗೊತ್ತಾದ ಮತ್ತೊಂದು ವಿಷಯವಿದೆ ಏನೆಂದರೆ,—ಯುದ್ಧದ ಅನರ್ಥಪರಿಣಾಮ ಅದರಲ್ಲಿಯೂ ಈಗ ನಡೆಯುತ್ತಿರುವ ಪ್ರಚಂಡ ಯುದ್ಧವು ಪದಾರ್ಥಗಳ ಬೆಲೆಯನ್ನು ಏರಿಸುವುದರಲ್ಲಿ ಮಹಾ ಘೋರವಾಗಿ ಪರಿಣಮಿಸುತ್ತದೆ. ಯುದ್ಧದಲ್ಲಿ ಎಷ್ಟು ಲಕ್ಷೋಪಲಕ್ಷ ಮಂದಿ ಶೂರರು ಹತರಾಗುವರು! ಪದಾರ್ಥಗಳ ಉತ್ಪತ್ತಿಗೂ, ದೇಶಾಭಿವೃದ್ಧಿ ಕಾರ್ಯಕ್ಕೂ ನಿರತರಾಗಬಹುದಾಗಿದ್ದ ಇಷ್ಟೊಂದು ಜನಗಳ ಶಕ್ತಿ ಸಾಹಸಗಳು ನಾಶವಾಗುತ್ತಿರುವುವು ಐಶ್ವರ್ಯಾಭಿವೃದ್ಧಿಗೆ ಸಾಧಕವಾಗಬಹುದಾದ ಬಂಡವಾಳವು ಯುದ್ಧದ ವೆಚ್ಚಕ್ಕೆಂದು ಹಾಳಾಗುತ್ತಿರುವದು. ಯುದ್ಧಸನ್ನಾಹಕ್ಕೆ ಬೇಕಾಗುವ ಸೈನಿಕರಿಗೂ, ಹಡಗುಗಳಿಗೂ, ಇತರ ಸಾಮಗ್ರಿಗಳಿಗೂ ಹಣವು ಅನ್ಯಾಯವಾಗಿ ಅಳಿಯುತ್ತಿರುವುದು ದೇಶದ ಉತ್ಪತ್ತಿಯನ್ನು ಹೆಚ್ಚಿಸುವುದರಲ್ಲಿ ಸಮರ್ಥರಾದ ಎಷ್ಟೋ ಮಂದಿ ಜನರು ಯುದ್ಧದಲ್ಲಿ ಮನುಷ್ಯ ಸಂಹಾರಕ್ಕಾಗಿ ನಿಯೋಗಿಸಲ್ಪಟ್ಟಿರುವರು. ಎಂದಿನಂತೆ ಚಿನ್ನದ ಉತ್ಪತ್ತಿಯನ್ನು ಒಂದೇ ನೆಲೆಯಲ್ಲಿ ಇಡದಿದ್ದರೂ, ಈ ಕ್ರೂರ ಯುದ್ಧದ ಪರಿಣಾಮದಿಂದ ನಮ್ಮ ಮುಂದಿನ ತಲೆಯವರಿಗೆ ಬಂಡವಾಳವು ಸಿಕ್ಕದೆ ದುರ್ಭಿಕ್ಷವಾಗಿ, ಪದಾರ್ಥಗಳ ಬೆಲೆಯೂ ವಿಪರೀತವಾಗಿ ಹೆಚ್ಚಿ, ಮಹಾ ವಿಪತ್ತು ಸಂಭವಿಸುವುದರಲ್ಲಿ ಸಂದೇಹವಿಲ್ಲ

ಅನ್ಯದೇಶಗಳಲ್ಲಿರುವುದಕ್ಕಿಂತಲೂ ನಮ್ಮ ದೇಶದಲ್ಲಿ ಪದಾರ್ಥಗಳ ಬೆಲೆಯು ಅಪರಿಮಿತವಾಗಿ ಏರಲು ಕಾರಣವೇನು? ಅದರಲ್ಲಿಯೂ ಕ್ಷಾಮಕಾಲದಲ್ಲಾಗಲಿ ಸುಗ್ಗಿಯಕಾಲಕ್ಕೆ ಮುಂಚೆಯಾಗಲಿ ಮತ್ತೂ ಏರುವುದು ಮುಖ್ಯವಾಗಿ ಧಾನ್ಯ, ಬೇಳೆ ದಿನಸುಗಳು, ಎಳ್ಳು-ಹರಳು ಮೊದಲಾದ ಎಣ್ಣೆಯ ಬೀಜಗಳು, ಕಟ್ಟಡದ ಸಾಮಾನುಗಳು, ಚರ್ಮ ಇಂತಹ ಪದಾರ್ಥಗಳ ದರವು ಒಂದೇ ಸಮನಾಗಿ ಏರಿದೆ ರಸ್ತೆಗಳ ಸೌಕರ್ಯವೂ, ಕ್ಷಾಮದ ಬಾಧೆಯೂ ಕಡಿಮೆಯಾದ ಕೆಲವು ಮೂಲೆಗಳಲ್ಲಿ ಮಾತ್ರ ಬೆಲೆ ತುಂಬಾ ಹೆಚ್ಚಿಲ್ಲ ಹಿಂದೆ ಹೇಳಿದಂತೆ, ಮಾರ್ಗ ಸೌಕರ್ಯವು ಚೆನ್ನಾಗಿರುವುದೂ, ಲೇವಾದೇವಿಯ ಕೆಲಸವು ಅಭಿವೃದ್ಧಿಯಾಗುತ್ತಿರುವುದೂ, ನಮ್ಮ ಸೀಮೆಯ ಪದಾರ್ಥಕ್ಕೆ ಹೊರಗೆ ಗಿರಾಕಿ ಹೆಚ್ಚಿರುವುದೂ—ಈ ಮೂರು ಮುಖ್ಯ ಕಾರಣಗಳಿಂದ ನಮ್ಮ ದೇಶದಲ್ಲಿ ಪದಾರ್ಥಗಳ ಬೆಲೆ ಏರಿದೆ ರೈಲುರಸ್ತೆಗಳೂ ಬಂಡಿಯ ರಸ್ತೆಗಳೂ ಹೆಚ್ಚಿ ಮಾರ್ಗಸೌಕರ್ಯವು ಚೆನ್ನಾಗುವುದರಿಂದ ದೇಶದ ಎಲ್ಲಾ ಭಾಗಗಳ ಬೆಲೆಯೂ ಒಂದೇ ನೆಲೆಗೆ ಬರುತ್ತದೆ ನಮ್ಮ ದೇಶದ ಪದಾರ್ಥಗಳು ಹೊರಗಿನ ದೇಶಕ್ಕೆ ಹೆಚ್ಚಾಗಿ ಸಾಗಿಹೋಗುವ ಮಾತ್ರದಿಂದಲೇ ನಮ್ಮ ದೇಶವು ಸುಭಿಕ್ಷವಾಗಿದೆಯೆಂದೂ, ಜನರು ನೆಮ್ಮದಿಯಾಗಿರುವರೆಂದೂ ತಿಳಿಯಕೂಡದು. ಹಾಗಾಗುವುದು ನಿಜವಾದರೆ, ಈಗ ೨೫ ವರ್ಷಗಳ ಕೆಳಗೆ ಇಲ್ಲಿಂದ ಅನ್ಯದೇಶಕ್ಕೆ ೯೦ ಕೋಟಿ ೬೩ ಲಕ್ಷ ರೂಪಾಯಿಗಳ ಸಾಮಾನು ಸಾಗಿಹೋಯಿತು. ಈಗ ಅದು ಹೆಚ್ಚಿ ಸುಮಾರು ೨೪೪ ಕೋಟಿ ರೂಪಾಯಿಗಳ ಸಾಮಾನಿನಷ್ಟು ಸಾಗುತ್ತಿದೆ. ಆದರೇನು? ಬೆಲೆ ಇಳಿಯಿತೇ? ನೆಮ್ಮದಿ ಹೆಚ್ಚಿತೇ? ನಮ್ಮ ದೇಶದಲ್ಲಿ ಬೆಳೆದ ಪದಾರ್ಥಗಳು ನಮಗೆ ಸಾಕಾದಷ್ಟು ನಿಲ್ಲದೆ, ಹೆಚ್ಚು ಹೆಚ್ಚಾಗಿ ಹೊರಗೆ ಹೋಗುವುದರಿಂದ ಬೆಲೆಯೇರುವುದು ಸಹಜವೇ ಆಗಿದೆ ಇಲ್ಲಿನ ವ್ಯಾಪಾರದ ಮುಕ್ಕಾಲೂ ಮೂರು ವೀಸೆ ಪಾಲು ಅನ್ಯದೇಶೀಯರ ವಶದಲ್ಲಿಯೇ ಇದೆ ಆದ ಪ್ರಯುಕ್ತ ಲಾಭವೂ ಅವರದೇ ಆಗಿದೆ. ಬಂದೊಂದಾಗಿ ಹುಡುಕಿ ಆರಿಸಿದಂತೆ ಅಲ್ಲಿಷ್ಟು ಇಲ್ಲಿಷ್ಟು ಲಾಭವು ಈ ದೇಶೀಯರ ಪಾಲಾಗಿದೆ. ಏನೂ ಇಲ್ಲದಿರುವುದಕ್ಕಿಂತ ಇಷ್ಟಕ್ಕೇ ಸಂತೋಷಪಡಬೇಕು.

ಆಹಾರಸಾಮಗ್ರಿಗಳು ಒದಗುವುದು ಕಡಿಮೆಯಾಗಿ, ಅದರಿಂದಲೇ ನಮ್ಮ ದೇಶದಲ್ಲಿ ಪದಾರ್ಥಗಳ ಬೆಲೆಯೇರಲು ಅವಕಾಶವಾಗಿದೆಯೆಂದು ಕೆಲವರು ಹೇಳುತ್ತಾರೆ. ಹಾಗಾಗಿರುವುದಕ್ಕೆ ಅವರು ಮೂರು ಕಾರಣಗಳನ್ನು ತೋರಿಸುತ್ತಾರೆ (೧) ಕಾಲಕಾಲದಲ್ಲಿ ಮಳೆ ಹುಯ್ಯದೆ ಇರುವುದರಿಂದಲೂ ಅಥವಾ ಅಕಾಲದಲ್ಲಿ ಮಳೆ ಹುಯ್ಯುತ್ತಿರುವುದರಿಂದಲೂ, (೨) ಅದಕ್ಕಾಗಿ ಆಹಾರಕ್ಕೆ ಬೇಕಾಗುವ ಪೈರುಗಳನ್ನು ಬಿಟ್ಟು, ನಂಬಿಕೆಯಾಗಿ ಕೈಗೆ ಬರುವ ಇತರ ಪೈರುಗಳನ್ನು ಬೆಳೆಯುತ್ತಿರುವುದರಿಂದಲೂ (೩) ಪ್ರಜಾಸಂಖ್ಯೆಯು ಹೆಚ್ಚುತ್ತ ಬಂದಿರುವುದಕ್ಕೆ ತಕ್ಕಂತೆ, ಭೂಮಿಯ ಸಾಗುವಳಿಯನ್ನೂ ಹೆಚ್ಚಿಸಿ ಉತ್ಪತ್ತಿಯನ್ನು ಅಭಿವೃದ್ಧಿಪಡಿಸಿಕೊಳ್ಳದೆ ಇರುವುದರಿಂದಲೂ ಹಾಗಾಗಿದೆಯೆಂದು ಅವರ ಅಭಿಪ್ರಾಯ. ಆಹಾರಕ್ಕೆ ಅತ್ಯವಶ್ಯವಾಗಿ ಬೇಕಾಗುವ ಬತ್ತ, ರಾಗಿ, ಗೋದಿ, ಜೋಳ ಮೊದಲಾದ ಪೈರುಗಳನ್ನು ಬೆಳೆಯುವುದು ಕಡಿಮೆ ಮಾಡಿ, ಅವುಗಳ ಸ್ಥಾನದಲ್ಲಿ ಕೈಗಾರಿಕೆ ಅಥವಾ ವ್ಯಾಪಾರಕ್ಕೆ ಬೇಕಾಗುವ ಹತ್ತಿ, ಹರಳು, ಪುಂಡಿ, ಕುಸುಂಬೆ ಮೊದಲಾದ ಪೈರುಗಳನ್ನು ಬೆಳೆಸುತ್ತ ಬಂದಿರುವುದರಿಂದ ಆಹಾರಪದಾರ್ಥಗಳ ಬೆಲೆಯು ಏರಿದೆಯೆಂದು ಹೇಳಬಹುದು.

ವ್ಯಾಪಾರ ಕಾಲದಲ್ಲಿ ತಕ್ಕಷ್ಟು ಹಣವನ್ನು ಒದಗಿಸಿಕೊಡುವುದಕ್ಕಾಗಿ ಈಚೆಗೆ ಇಂಡಿಯಾ ಸರ್ಕಾರದವರು ಪ್ರತಿವರ್ಷವೂ ಹೊಸತಾಗಿ ರೂಪಾಯಿ ನಾಣ್ಯಗಳನ್ನು ಹಾಕುತ್ತ ಬಂದಿರುವುದರಿಂದ ಆ ಮೂಲಕವೂ ಪದಾರ್ಥಗಳ ಬೆಲೆ ಏರಲು ಕಾರಣವಾಗಿದೆಯೆಂದು ಹೇಳಬಹುದು. ಏಕೆಂದರೆ—ನಮ್ಮ ದೇಶದಲ್ಲಿ ವರ್ಷಕಾಲವೂ ವ್ಯಾಪಾರವು ಒಂದೇ ಸಮನಾಗಿರುವುದಿಲ್ಲವೆಂಬ ಸಂಗತಿ ಎಲ್ಲರಿಗೂ ತಿಳಿದಿದೆ. ಸುಗ್ಗಿಯ ಕಾಲದಲ್ಲಿ ಮಾತ್ರ ವ್ಯಾಪಾರವು ಪ್ರಬಲವಾಗಿ ನಡೆಯುವುದರಿಂದ ಆಗಿನ ಮಟ್ಟಿಗೆ ನಾಣ್ಯವು ಹೆಚ್ಚಾಗಿ ಬೇಕಾಗುವುದು. ಉಳಿದ ತಿಂಗಳುಗಳಲ್ಲಿ ವ್ಯಾಪಾರವು ಕಡಿಮೆಯಾದಾಗ ಆ ನಾಣ್ಯವೂ ಏನಾಗಬೇಕು? ಅದರ ಮೇಲಿರುವ ಬೆಲೆಗೆ ತಕ್ಕಂತೆ ರೂಪಾಯಿ ನಾಣ್ಯದಲ್ಲಿ ರೂಪಾಯಿ ತೂಕ ಬೆಳ್ಳಿಯಿದ್ದರೆ, ಹೆಚ್ಚಾಗಿ ನಿಂತುಹೋಗುವ ನಾಣ್ಯಗಳನ್ನು ಬೇರೆ ಎಷ್ಟೋ ವಿಧಗಳಿಂದ ಉಪಯೋಗವಾಡಿಕೊಳ್ಳಬಹುದಿತ್ತು. ಈಗಲಾದರೋ ಹಾಗಿಲ್ಲದೆ, ಆ ನಾಣ್ಯಗಳೂ ಅನಾವಶ್ಯಕವಾಗಿ ಜನರ ಕಯ್ಯಲ್ಲಿ ನಿಂತುಬಿಡುತ್ತವೆ. ಈ ಸಂದರ್ಭದಲ್ಲಿ, ಪೇಟೆಗೆ ಬರುವ ಪದಾರ್ಥವು ಹೆಚ್ಚದೆ, ದೇಶದಲ್ಲಿ ಹೀಗೆ ಹಣವು ಮಾತ್ರ ಹೆಚ್ಚಿದರೆ, ಪದಾರ್ಥಗಳು ತಗ್ಗಾಗಿ, ಅವುಗಳ ಬೆಲೆಯೇರುವುದು ಸಹಜವಾಗಿಯೇ ಇದೆ. ಅಲ್ಲದೆ, ಇದು ನಮ್ಮ ದೇಶದಲ್ಲಿ ಇನ್ನೂ ಕೆಲವು ಕಾಲ ಹೀಗೆಯೇ ನಡೆಯುತ್ತ ಹೋಗುವುದರಲ್ಲಿ ಸಂದೇಹವಿಲ್ಲ.

"ಬೆಲೆಯೇರಿದ ಮಾತ್ರದಿಂದಲೇ ಏನು? ಇದರಿಂದ ಸಂಬಳಗಾರಿಗೆಯಲ್ಲಿ ಜೀವಿಸುವವರಿಗೂ, ಕೂಲಿನಾಲಿಮಾಡಿ ಇಷ್ಟೇ ಎಂದು ಗೊತ್ತಾದ ಹಣವನ್ನು ಸಂಪಾದಿಸಿ ಜೀವಿಸುವವರಿಗೂ, ಆಗಾಗ ಇಷ್ಟಿಷ್ಟು ದೊರೆತ ಹಣದಿಂದ ಜೀವಿಸುವ ಇತರ ವೃತ್ತಿಯವರಿಗೂ ಕಷ್ಟವಾಗಿರಬಹುದು. ಒಟ್ಟಿನ ಮೇಲೆ ನೋಡಿದರೆ, ಬೆಲೆಯೇರಿದ ಕಾರಣದಿಂದ ಹಿಂದುದೇಶಕ್ಕೆ ಕ್ಷೇಮಾಭ್ಯುದಯವುಂಟಾಗಿ ಅಭಿವೃದ್ಧಿ ಸೂಚಕವಾಗಿದೆ"—ಎಂದು ಕೆಲವರು ಅಭಿಪ್ರಾಯಪಡುತ್ತಾರೆ. ತಾವು ಹೇಳುವುದಕ್ಕೆ ಆಧಾರವಾಗಿ ಆವರು ದಿನ್ನಪಟ್ಟಿಯನ್ನೂ ಜನರು ಉಪಯೋಗಿಸಿಕೊಂಡಿರುವ ಚಿನ್ನ ಬೆಳ್ಳಿ ನಾಣ್ಯಗಳ ಲೆಕ್ಕವನ್ನೂ ಕೊಡುತ್ತಾರೆ. ಆಗಲಿ. ಈಚೆಗೆ ಐಶ್ವರ್ಯವು ಸ್ವಲ್ಪ ಹೆಚ್ಚಿರಬಹುದು. ಸಾಮಾನ್ಯ ಜನರಲ್ಲಿಯೂ ಕೊಂಚಮಟ್ಟಿಗೆ ವ್ಯಾಪಿಸಿರಬಹುದು. ಏನು ಭಾಗ್ಯ? ನಮ್ಮ ಭರತಖಂಡದ ಜನಸಂಖ್ಯೆಯು ಅಲ್ಪವಲ್ಲ. ಪ್ರಪಂಚದ ೫ರಲ್ಲಿ ಒಂದು ಭಾಗವಿದೆ. ಮೂವತ್ತು ಮೂರು ಕೋಟಿ ಈ ೩೩ ಕೋಟಿ ಜನಸಮುದಾಯದಲ್ಲಿ ಅಷ್ಟಿಷ್ಟು ಚಿನ್ನದ ಚೂರುಗಳೊ, ಒಂದೆರಡು ಲಕ್ಷ ಬೆಳ್ಳಿಯ ಚೂರುಗಳೊ ಹರಡಿರುವ ಮಾತ್ರದಿಂದಲೇ ಮಹಾ ಭಾಗ್ಯವಾಯಿತೇ? ಲೆಕ್ಕಹಾಕಿದರೆ ಒಬ್ಬೊಬ್ಬರಲ್ಲಿ ಎಷ್ಟು ಹಣವಿದ್ದಂತಾಯಿತು? ಪಶ್ಚಿಮದೇಶದಲ್ಲಿರುವ ಒಬ್ಬೊಬ್ಬನ ಹಣದೊಂದಿಗೆ ಇದನ್ನು ಹೋಲಿಸಿ ನೋಡಲಿ. ಆದಾಗ ಹಾನೇನು? ಮಹಾ ಭಾಗ್ಯವಲ್ಲ. ಏಕೆಂದರೆ, ಹಿಂದೆ ೧೦ ರೂಪಾಯಿ ಸಂಪಾದಿಸುತ್ತಿದ್ದವನಿಗೆ ಈಗ ೨೦ ರೂ. ಬರುತ್ತಿದ್ದು, ಅಷ್ಟು ಹಣವೂ ಆವನು ಪೂರ್ವದಲ್ಲಿ ತೆಗೆದುಕೊಳ್ಳುತ್ತಿದ್ದಷ್ಟೇ ಪದಾರ್ಥಗಳನ್ನು ಈಗಲೂ ಕೊಂಡುಕೊಳ್ಳುವುದಕ್ಕೆ ವೆಚ್ಚವಾಗುತ್ತಿದ್ದರೆ ಏನಾದಹಾಗಾಯಿತು? ಐಶ್ವರ್ಯ ಹೆಚ್ಚಿತೇ? ಸೌಖ್ಯ ಹೆಚ್ಚಿತೇ? ಇನ್ನಿಷ್ಟು ಹೆಚ್ಚು ನಾಣ್ಯಗಳು ಕಯ್ಯಲ್ಲಿ ಝಣಝಣಿಸುವುದೊಂದೇ ತೃಪ್ತಿ. ಅಷ್ಟು ಹೊರತು ಬೇರೆ ಇಲ್ಲ. "ಹಿಂದೆ ಲಂಕೆಯಲ್ಲಿ ಬಂಗಾರದ ಇಟ್ಟಿಗೆಗಳೇ ಎದ್ದುವು. ಇದ್ದರೇನು? ಕ್ಷೌರಕ್ಕೆ ಒಂದೊಂದು ಇಟ್ಟಿಗೆಯನ್ನು ಕೊಡಬೇಕಾಗಿತ್ತಂತೆ!" ಇದರಿಂದ ಏನೂ ಸಾರ್ಥಕವಿಲ್ಲ. ಜನಗಳು ನಿಜವಾಗಿ ಅಭಿವೃದ್ಧಿಗೆ ಬರಬೇಕಾದರೆ, ಅವರ ಶಕ್ತಿ ಹೆಚ್ಚಬೇಕು, ಅವರ ಸಾಮರ್ಥ್ಯವು ಹೆಚ್ಚಬೇಕು, ಅವರ ಬುದ್ಧಿಸೂಕ್ಷ್ಮತ್ವವು ಬಲಪಡಬೇಕು, ಸಾಹಸ ಪ್ರಯತ್ನಗಳು ಬೇರೂರಬೇಕು, ಕಾರ್ಯಸಾಧನಶಕ್ತಿಯು ಚಿಗುರಬೇಕು, ದೇಶಾಭ್ಯುದಯ ಕಾರ್ಯಗಳು ಎಡೆಬಿಡದೆ ನಡೆಯಬೇಕು. ಇದರಿಂದ ದೇಶವು ಉತ್ತಮಸ್ಥಿತಿಗೆ ಬರುವುದು, ಪ್ರಜಾಕ್ಷೇಮವು ಎಲ್ಲೆಲ್ಲಿಯೂ ನೆಲೆಗೊಳ್ಳುವುದು. ಅ. ಪ.

ಪತ್ರವ್ಯವಹಾರ.

ಶಾಲೆಯ ಆಡಳಿತೆದಾರರು ಮಾಡತಕ್ಕುದೇನು?

ಅಯ್ಯಾ ಆಡಳಿತೆದಾರರ ಸ್ನೇಹಿತರೇ,

ಈ ಪತ್ರಿಕೆಯ ೨ನೇ ತಾರೀಕಿನ ಸಂಚಿಕೆಯಲ್ಲಿ ತಾವು ಮೇಲಿನ ಪ್ರಶ್ನೆಯನ್ನು ಹಾಕಿರುವಿರಲ್ಲವೆ? ತಾವು ಹೇಳುವ ಮಾತುಗಳೆಲ್ಲವೂ ಸಹಜವಾದುವು. ಆಡಳಿತೆದಾರರು ತಮ್ಮ ಸ್ನೇಹಿತರೆನ್ನುವಿರಿ. ಆದರೆ ಆ ತಮ್ಮ ಸ್ನೇಹಿತರು ಶಾಲೆಯ ಸಂಬಂಧವಾಗಿ ಏನೇನು ಕೆಲಸಗಳನ್ನು ಮಾಡುತ್ತಾರೆಂಬುದು ಮಾತ್ರ ತಮಗೆ ತಿಳಿದಿರುವಂತೆ ಕಾಣಿಸುವುದಿಲ್ಲ. ಆದುದರಿಂದ ಮೊದಲು ಅದನ್ನು ನಿಷ್ಕರ್ಷೆ ಮಾಡಿಕೊಳ್ಳಿರಿ. ಆಮೇಲೆ ಏನೇನು ಮಾಡಬೇಕೆಂದು ಹೇಳಲು ಸಾಧ್ಯವಾಗುವುದು.

ಉಪಾಧ್ಯಾಯರುಗಳನ್ನು ಮಾಡುವುದಕ್ಕೆಂದು ಸರಕಾರದವರೊಂದು ಯಂತ್ರವನ್ನು ನಿರ್ಮಿಸಿರುವರು. ಆ ಯಂತ್ರಕ್ಕೆ ಟ್ರೈನಿಂಗ್ ಶಾಲೆಯೆಂದು ಹೆಸರು. ಆದರೆ ಹೊಲಸು ವಸ್ತುಗಳನ್ನು ಬಿಟ್ಟು ಒಳ್ಳೆಯ ವಸ್ತುಗಳನ್ನು ಮಾತ್ರ ತೆಗೆದುಕೊಳ್ಳುವಷ್ಟು ಸಾಮರ್ಥ್ಯವು ಆ ಯಂತ್ರಕ್ಕಿಲ್ಲ. ಆದುದರಿಂದ ಆ ಯಂತ್ರಗಳಿಂದ ಹೊರಡುವ ಮಾಲುಗಳು ಅಷ್ಟೊಂದು ಉತ್ಕೃಷ್ಟವಾಗಿರುವುದಿಲ್ಲ. ಉತ್ತಮವಾದ ಸಾಮಾನುಗಳನ್ನೇ ಉಪಯೋಗಿಸಬೇಕೆಂದರೆ ಏಕಾಗಬಾರದು? ಭಾರತೀಯ.

ಯುದ್ಧವು ಪ್ರಾಪ್ತವಾದ್ದರಿಂದ ಉಂಟಾದ ಅನುಭವ.

ಯುರೋಪ ಖಂಡದಲ್ಲಿ ಪ್ರಾಪ್ತವಾದ ಯುದ್ಧದಿಂದ ಇದರ ಫಲವು ಭೂಲೋಕದಲ್ಲಿ ನಾನಾ ವಿಧಾನಗಳಲ್ಲಿ ಅನುಭವಕ್ಕೆ ಬಂದಿರುವದು. ಇಂಥಾ ಅನುಭವವನು ಬರೆಕೊಳ್ಳುವದು ನನ್ನಂಥವನಿಗೆ ಸಾಧ್ಯವಲ್ಲ. ಆದರೆ ನಾನು ತಿಳಿದಿರುವಮಟ್ಟಿಗೆ ಅದೇನೆಂಬುದನ್ನು ತಮ್ಮ ಪತ್ರಿಕೆಗೆ ಬರೆಕೊಳ್ಳಲು ಧೈರ್ಯಗೊಂಡಿರುವೆನು. ಸಾಧಾರಣ ೩ನೇ ಫೋರ್ಮ್ ವರೇಗೆ ಇಂಗ್ಲಿಷು ಕಲಿತುಕೊಂಡು ಈಗ ಜೀವನದ ಬಗ್ಗೆ ಚಿಲ್ಲರೆ ವ್ಯಾಪಾರವನ್ನು ಮಾಡುತ್ತಲಿದ್ದೇನೆ. ಭಂಡಸಾಲೆಗಳಲ್ಲಿ ಸಾಮಾಗ್ರಿಗಳನು ಪಡಕೊಂಡು ಅವುಗಳನ್ನು ವಿಕ್ರಯಿಸಿ ನಂತರ ಸಾವಕಾರರಿಗೆ ಹಣಕೊಡುವ ವಾಡಿಕೆಯಿಂದ ನನ್ನ ವೃತ್ತಿಯನ್ನು ನಡಿಸುತ್ತಿದ್ದೆನು. ಈಗ ಪ್ರಕೃತಕ್ಕೆ ಇಂಥಾ ವೃತ್ತಿಯು ಬಹಳ ಕಷ್ಟಸಾಧ್ಯವಾಗಿ ಬಂದದೆ. ಸಾಮುಗ್ರಿಗಳನ್ನು ಕಡವಾಗಿ ಕೊಟ್ಟ ಸಾವಕಾರನು ಅವನ್ನು ಭಂಡಸಾಲೆಯಿಂದ ಹೊರಪಡಿಸಿದ ಸಾಯಂಕಾಲ ಅಥವಾ ತಪ್ಪಿದರೆ ಮರುದಿನವೇ ಬಂದು ವಸೂಲಿ ಕೇಳುವನು. ಕೆಲವು ಸಾವುಕಾರರ ವೈವಾಟಗಳೇ ಬಹಳಮಟ್ಟಿಗೆ ಕಡಿಮೆಯಾಗಿವೆ. ಇವರಲ್ಲಿ ಬಹಳ ಸ್ವಲ್ಪ ಜನರಲ್ಲಿ ವೈವಾಟವು ಮುಬಾರೆಯಾಗಿ ಲಾಭವನ್ನು ಸಾಧಾರಕಟ್ಟಳೆಯಲ್ಲಿ ಸಂಪಾದಿಸುತ್ತಿರುವರು. ಬೇಂಕುಗಳಿಂದ ಹಣವು ಸಾಲವಾಗಿ ಸರಿಯಾಗಿ ದೊರಕದ್ದರಿಂದ ಸಾವಕಾರರು ಕುಗ್ಗಿಹೋಗಿರುವರೆಂದೂ ಇವರಲ್ಲಿ ಹಣವಿದ್ದವರು ಅಂದರೆ ಬೇಂಕಿಗೆ ಸಾಲದ ಬಗ್ಗೆ ಹೋಗದೆ ವ್ಯಾಪಾರನಡಿಸುವ ಸಾಮರ್ಥ್ಯವಿದ್ದವರು ವಿಶೇಷ ಲಾಭಕರವಾದ ರೀತಿಯಲ್ಲಿ ವ್ಯಾಪಾರ ನಡಿಸುತ್ತಿರುವರೆಂದೂ ತೋರಿಬಂದಿರುವದು. ಒಂದೇ ಒಂದು ಮಾತಿನಲ್ಲಿ ಹೇಳುವದಾದರೆ ಸಾಕಷ್ಟು ಭಂಡವಾಳವಿದ್ದು ವ್ಯಾಪಾರ ನಡಿಸುವವರು ಎಷ್ಟು ಜನರು, ವ್ಯಾಪಾರದ ಬಗ್ಗೆ ಬೇಕಾದಂಥಾ ಮೂಲಧನವನ್ನೇ ಬೇಂಕುಗಳಿಂದ ಪಡಕೊಂಡು ವ್ಯಾಪಾರವೃತ್ತಿಯನ್ನು ವಹಿಸಿಕೊಂಡವರು ಎಷ್ಟು ಜನರೆಂಬದು ಈ ಯುದ್ಧಕಾಲದಲ್ಲಿ ತಿಳಿದುಬಂದ ಹಾಗೆ ಆಯಿತು. ಅದ್ದರಿಂದ ಏನು? ಭಂಡವಾಳವನ್ನು ಬೇಂಕುಗಳಿಂದ ಪಡದು ವ್ಯಾಪಾರ ನಡಿಸಕೂಡದೇ? ಕೂಡದಾದರೆ ಬೇಂಕುಗಳು ಯಾಕೆ ಸ್ಥಾಪಿಸಲ್ಪಟ್ಟವು, ಅವುಗಳ ಉಪಯೋಗ ಏನೆಂಬದು ಇಂಥಾ ವೇಳೆಯಲ್ಲಿ ಸರಿಯಾಗಿ ತಿಳಕೊಳ್ಳುವದು ಉತ್ತಮ. ಇಂಥಾ ವಿಷಯದಲ್ಲಿ ಬರೆಯುವ ಶಕ್ತಿಯು ನನಗಿಲ್ಲದ್ದರಿಂದ ನಿಮ್ಮ ವಾಚಕಸ್ತೋಮದಲ್ಲಿ ಬಲ್ಲವರು ಯಾರಾದರೂ ಈ ಸಂಧಿಯಲ್ಲಿ ಈ ವಿಷಯವನ್ನು ಚರ್ಚಿಸಿ ಬರದರೆ ಚಲೋದಾಗುತ್ತಿತ್ತು. ಆಡುವವರ ಮಕ್ಕಳು ಆಡಬೇಕು, ಬೇಡುವದರ ಮಕ್ಕಳು ಬೇಡಬೇಕು, ಎಂಬ ನಾಣ್ನುಡಿಯ ಅರ್ಥವು ಸರ್ವರಿಗೂ ತಿಳಿಯುವಂತೆ ಇದರಿಂದ ಸಾಧ್ಯವಾಗುತ್ತದೆ. ಮತ್ತು ಈ ನಾಣ್ನುಡಿಯು ಸೂಚಿಸುವ ಬುದ್ಧಿವಾದವನ್ನು ಲಕ್ಷ್ಯಕ್ಕೆ ತಾರದೆ ವರ್ತಿಸುತ್ತಿರುವ ವ್ಯಾಪಾರಸ್ಥರ ಅನರ್ಥಕಾರಿ ವೈವಾಟಗಳು ಯಾವದೆಂದು ತೋರಿಸಿಕೊಡಲು ಸಾಧ್ಯವಾಗುತ್ತದೆ.

ಚಿಲ್ಲರೆ ವ್ಯಾಪಾರಸ್ಥ.

ಯುದ್ಧ ಸಮಾಚಾರ.

———o———

ತಾರೀಕು ೬ನೇ ಜುಲೈ.

ಜರ್ಮನರ ಮುಣುಗಿಹೋದ ೪೩೦ ಸಬ್‌ಮೆರಿನನ್ನು ೩೬ ತಾಸಿನ ನಂತರ ಜರ್ಮನರು ಎತ್ತಿದರು. ನಾವಿಕರಲ್ಲಿ ಒಬ್ಬನು ಮಾತ್ರ ಸತ್ತಿದ್ದನು.

ಬ್ರಿಟಿಷರ ೫೦೦೦ ಟನ್ ಭರಾವಣೆಯ 'ಆಂಗ್ಲೊ ಕಲಿಫೋರ್ನಿಯ' ಎಂಬ ಹಡಗಕ್ಕೆ ಜರ್ಮನರ ಸಬ್‌ಮೆರಿನ್ ನಾವೆಯು ಗುಂಡು ಹಾರಿಸಿರುವದು. ಕೆಪ್ಟನನ ಸಹಿತ ೧೨ ಮಂದಿ ಹತರಾಗಿರುವರು. ೮ ಮಂದಿ ಗಾಯ ಒಡೆದಿರುವರು. ಹಡಗವು ಕ್ವೀನ್ಸ್‌ಟೌನಿಗೆ ಬಂದು ತಲಪಿರುತ್ತದೆ.

ಇಟಲಿಯನರಿಗೂ ಆಸ್ಟ್ರಿಯನರಿಗೂ ಯುದ್ಧ ಪ್ರಾರಂಭವಾದ ಕೂಡಲೇ ಇಟಲಿಯನರು ಹಿಡಿದು ಹಾಕಿದ ಜರ್ಮನರ ವ್ಯಾಪಾರ ಹಡಗಗಳಲ್ಲಿ "ಬೆಯರ್ನ್" ಎಂಬ ಹಡಗದಲ್ಲಿ ಅರ್ಧ ಮಿಲಿಯ ರಿವ್ವೊಲ್ವರುಗಳೂ, ೧೦೦,೦೦೦ ರೈಫಲ್‌ಗಳೂ, ೩೦೦,೦೦೦ ಪೆಟ್ಟಿಗೆ ಗುಂಡು ಮದ್ದುಗಳೂ, ೪ ವಾಯುನಾವೆಗಳೂ, ವಾಯು ನಾವೆಗಳ ೧೦೦೦ ಬೊಂಬುಗಳೂ, ೧೪ ಫಿರಂಗಿಗಳೂ, ನೂರಾರು ಟನ್ ಸಿಮೆಂಟೂ, ಎರಡು ವಯರ್‌ಲೆಸ್ ಟೆಲಿಗ್ರಾಫ್ ಸ್ಟೇಶನುಗಳ ಸಾಹಿತ್ಯಗಳೂ ಇದ್ದವು.

ಅರ್‍ರಾಸಿನಲ್ಲಿ ನಡೆದ ಕದನದಲ್ಲಿ ಜರ್ಮನರು ವಿಶೇಷ ನಷ್ಟಪಟ್ಟಿರುತ್ತಾರೆ. ಎರಡಾವರ್ತಿ ನುಗ್ಗಿ ಬಂದ ಜರ್ಮನರು ಹಿಮ್ಮೆಟ್ಟಿರುತ್ತಾರೆ. ಜರ್ಮನರು ಕೆಲವು ಸಾರಿ ಕಂದಕಗಳನ್ನು ಬಿಟ್ಟು ಹೊರಬಂದರು. ಆದರೆ ಮಿತ್ರ ಸೇನಿಕರು ಅವರನ್ನು ಹತಬಡಿದು ಹಿಂದಕ್ಕಟ್ಟಿದರು. ಲಿಬ್ರಿಂತಿನಲ್ಲಿ ಹಲ್ಲೆ ಮಾಡಿದ ಶತ್ರುಗಳನ್ನು ಮಿತ್ರರ ಫಿರಂಗಿಗಳು ತಕ್ಷಣ ಸೋಲಿಸಿರುವವು.

ಯುದ್ಧವು ಇದೇ ಒಕ್ಟೋಬರ ತಿಂಗಳೊಳಗೆ ತೀರುವದೆಂದು ಜರ್ಮನ ಕೈಸರರವರು ಹೇಳಿರುವರೆಂತ ಬೆರ್ಲಿನ್ ನಗರದಿಂದ ಬಂದಿರುವ ತಟಸ್ಥ ರಾಜ್ಯಗಳೊಂದರ ಒಬ್ಬ ಗೃಹಸ್ಥರು ಹೇಳಿರುತ್ತಾರೆ.

ಜೀವದ ಮರವೆ ಇಲ್ಲದೆ ನುಗ್ಗಿ ಬಂದ ಆಸ್ಟ್ರಿಯನರನ್ನು ಇಟಲಿಯನರು ರಣರಂಗದಲ್ಲೆಲ್ಲಾ ಹಿಂದಟ್ಟಿರುತ್ತಾರೆ. ಇಟಲಿಯನರ ದೊಡ್ಡ ಫಿರಂಗಿಗಳು ಮಲ್ಬರ್ಗೆಟ್ಟೊ ಕೋಟೆಯನ್ನು ನೆಲಸಮ ಮಾಡುವ ಕೆಲಸದಲ್ಲಿ ನಿರತವಾಗಿರುವವು. ಹೆನ್ಸೆಲ್ ಕೋಟೆಗೆ ನಿನ್ನೆಯ ದಿನ ಹೆಚ್ಚಿನ ಹಾನಿಯಾಗಿರುವದು

ಕಾರ್ನಿಯ ರಣರಂಗದಲ್ಲಿ ಆಸ್ಟ್ರಿಯನರು ಪ್ರಚಂಡವಾದ ತೋಪುಗಳೊಡನೆ ತಾವು ಕಳಕೊಂಡ ಸ್ಥಳಗಳನ್ನು ಇಟಲಿಯನರಿಂದ ಪಡೆಯಲು ಪ್ರಯತ್ನಿಸಿದರು. ಆದರೆ ಇಟಲಿಯನರು ಅವರನ್ನು ಸೋಲಿಸಿದರು. ಅದಲ್ಲದೆ ಇಟಲಿಯನರು ೫೮೦ ಸೇನಿಕರನ್ನೂ ೩ ಫಿರಂಗಿಗಳನ್ನೂ ಅನೇಕ ರೈಫಲ್ ಕೋವಿಗಳನ್ನೂ, ಮೆಶಿನ್‌ಗನ್ ಎಂಬ ಫಿರಂಗಿಗಳಿಗೆ ಬೇಕಾಗುವ ಯುದ್ಧ ಸಾಹಿತ್ಯಗಳನ್ನೂ ಸೆರೆ ಹಿಡಿದಿರುತ್ತಾರೆ.

ತಾರೀಕು ೭ನೇ ಜುಲೈ.

ಡರ್ಡನೆಲ್ಸಿನ ಹೆಲೆಸ್ ಭೂಶಿರ ಬಳಿ "ಸಾರ್ತಜ್" ಎಂಬ ವ್ಯಾಪಾರ ಹಡಗವು ಮುಣುಗಿಸಲ್ಪಟ್ಟಿರುವದು. ೬೬ ಮಂದಿ ಕಾಣೆಯಾಗಿರುವರು.

ಇಂಗ್ಲಿಷ್ ಕಾಲುವೆಯಲ್ಲಿ ಫ್ರೆಂಚರ ಡಿಸ್ಟ್ರೋಯರ್ ನಾವೆಗಳು ಜರ್ಮನರ ಎರಡು ಸಬ್‌ಮೆರಿನ್‌ಗಳಿಗೆ ಗುಂಡುಹಾರಿಸಿರುವವು. ಒಂದು ಸಬ್‌ಮೆರಿನ್‌ಗೆ ಹಲವು ಗುಂಡುಗಳು ಬಿದ್ದಿರುವವು.

ಬ್ರಿಟಿಷರ ಸೇನೆಯಲ್ಲಿ ರಕ್ತಪ್ರವಾಹವಾಗಿ ಹಿಮ್ಮೆಟ್ಟಿದರು ಎಂತ ಕಳೆದ ರಾತ್ರಿ ಜರ್ಮನರು ಪ್ರಕಟಿಸಿದ್ದರು - ಆದರೆ ಈ ವಾರ್ತೆಯ ಸತ್ಯಾರ್ಥವು ಈ ರೀತಿಯಾಗಿರುವದು. ಬ್ರಿಟಿಷರು ಫ್ರೆಂಚ ತೋಪು ಸೇನೆಯ ಸಹಾಯದಿಂದ ಯ್ಪರ್-ಎಸ್ರೆಯ ಪೂರ್ವ ಪಾರ್ಶ್ವದಲ್ಲಿ ಶತ್ರುಗಳನ್ನು ಸೋಲಿಸಿ ಶತ್ರುಗಳ ಕೆಲವು ಕಂದಕಗಳನ್ನು ಹಿಡಿದರು ಎಂಬುದೇ.

ಅರ್‍ರಾಸಿನ ಕದನವು ಇನ್ನೂ ಕಠಿಣ ರೀತಿಯಿಂದ ನಡೆಯುತ್ತದೆ. ಸೌಸೆಜ್ ಸ್ಟೇಶನು ಫ್ರೆಂಚರ ಕೈಯಲ್ಲಿ ಉಳಿದಿರುತ್ತದೆ. ಜರ್ಮನರು ರಾತ್ರಿ ಕಾಲದಲ್ಲಿ ಅರ್‍ರಾಸಿನ ಮೇಲೆ ಗುಂಡು ಹಾರಿಸಿರುವರು. ಆರ್ಗೊನ್ನೆಯ ಕದನವು ಅತಿ ಕಠಿಣವಾಗಿ ಪರಿಣಮಿಸಿರುವದು. ಮ್ಯೂಸ್ ಶಿಖರಗಳಿಂದ ಜರ್ಮನರು ಎರಡಾವರ್ತಿ ಹಿಂದೆ ಓಡಿರುವರು. ವರ್ಡನ್ ಮತ್ತು ಥಲೂನ್ಸ್ ಮಧ್ಯೆಯಿರುವ ವ್ಯವಹಾರವನ್ನು ಕಡಿದುಬಿಡಬೇಕೆಂಬದಾಗಿ ಶತ್ರುಗಳು ಮಾಡಿದ ಪ್ರಯತ್ನವು ವ್ಯರ್ಥವಾಗಿರುವದು.

ಇಂಗ್ಲಾಂಡಿನ ಹಾರ್‌ವಿಚ್ ಕೋಟೆಯ ಮೇಲೆ ಜರ್ಮನರ ವಾಯುನಾವೆಗಳು ಬೊಂಬುಗಳನ್ನು ಹಾಕಿದವೆಯೆಂತ ಜರ್ಮನರು ಪ್ರಕಟಿಸಿದ್ದಾರೆ ಆದರೆ ಬ್ರಿಟಿಷ ಸರಕಾರದವರು ಈ ರೀತಿ ಪ್ರಕಟಿಸಿರುವರು. ಜುಲೈ ತಾರೀಕು ೩ರಲ್ಲು ಜರ್ಮನರ ೩ ವಾಯುನಾವೆಗಳು ಹಾರ್‌ವಿಚಿನ ಮೇಲೆ ಕಾಣಿಸಿಕೊಂಡವು ನಮ್ಮ ವಾಯು ನಾವೆಗಳು ಅವನ್ನು ಹಿಂದೆ ಓಡಿಸಿದವು. ಜರ್ಮನರು ಸಮುದ್ರದ ಮೇಲೆ ಬೊಂಬುಗಳನ್ನು ಹಾಕಿ ಓಡಿಹೋದರು.

ಆಫ್ರಿಕದಲ್ಲಿ ಜನರಲ್ ಬೋಥಾರವರ ಸೇನೆಯು ೧೬ ತಾಸಿನಲ್ಲಿ ೬೨ ಮೈಲು ನಡೆದು ಒಟಾವಕ್ಕೆ ಹೋಗಿರುವದು.

ಇಂಗ್ಲಾಂಡಿನಲ್ಲಿ ಹೊಸತಾಗಿ ಜಾರಿಗೆ ಬಂದ "ನೇಶನಲ್ ರಿಜಿಸ್ಟರ್ ಬಿಲ್" ಎಂಬ ಮಸೂದೆಯು ಎರಡನೇ ಸಲ ಪಾರ್ಲಿಮೆಂಟ್ ಸಭೆಯ ಮುಂದಿಡಲ್ಪಟ್ಟು, ಬಹುಮತಿಯನ್ನು ಹೊಂದಿರುತ್ತದೆ

ಪೂರ್ವ ರಣರಂಗದಲ್ಲಿ ಶತ್ರುಗಳು ಲಬ್ಲಿನಿನ ಸಮೀಪ ಕಠಿಣ ಕಾಳಗ ಮಾಡಿ ಕ್ರಾಸ್ನಿಕ್ ಮತ್ತು ವೈಪ್ರಿಜ್ ಮಧ್ಯೆ ಇರುವ ರಣರಂಗದತ್ತ ಕಡೆ ಮುಂದರಿದಿರುವರು. ವೈಪ್ರಿಜ್ ಮತ್ತು ಬಗ್ ನದಿಗಳ ಮಧ್ಯೆ ರುಶ್ಯನರು ಶತ್ರುಗಳನ್ನು ಸೋಲಿಸಿ ನೂರಾರು ಮಂದಿ ಸೇನಿಕರನ್ನು ಸೆರೆಹಿಡಿದಿರುವರು

ರುಶ್ಯನರ ವಾಯುನಾವೆಗಳು ಪ್ರಿಜೆಮೊಸ್ಲ ಎಂಬಲ್ಲಿದ್ದ ಜರ್ಮನರ ಮದ್ದುಗುಂಡುಗಳನ್ನು ತಯಾರಿಸುವ ಸ್ಟೇಶನಿಗೆ ಬೊಂಬು ಹಾಕಿ ಹಿಂತೆರಳಿರುವವು ಇದರಿಂದ ಸುಮಾರು ೩೦ ಸಾವಿರ ಗುಂಡುಗಳು ಸಿಡಿದು ಹೋಗಿರುವದೆಂಬ ವಾರ್ತೆ ಬಂದಿರುತ್ತದೆ.

ಇಟಲಿಯನರು ಟೊಲ್ಮಿನೊವನ್ನು ಸ್ವಾಧೀನ ಮಾಡಿಕೊಂಡಿರುತ್ತಾರೆ ಮಲ್ಬರ್ಗೆಟ್ಟೊ ಮತ್ತು ಪ್ರೆಡಿಲ್‌ನಲ್ಲಿ ಇಟಲಿಯನರು ೪೦೦೦ ಮಂದಿಯನ್ನು ಸೆರೆಹಿಡಿದಿರುತ್ತಾರೆ. ಇಟಲಿಯನರ ವಾಯುನಾವೆಗಳು ಟ್ರಿಸ್ಟೆಯ ಮೇಲೆ ಬೊಂಬುಗಳನ್ನು ಬಿಸಾಡಿ ಸುರಕ್ಷಿತವಾಗಿ ಹಿಂತೆರಳಿರುವವು.

ತಾರೀಕು ೮ನೇ ಜುಲೈ

ಬ್ರಿಟಿಷರು ಪಿಲ್ಕೆಮಿನ ದಕ್ಷಿಣ ಪಶ್ಚಿಮ ಪ್ರಾಂತ್ಯದಲ್ಲಿ ಪಡಕೊಂಡ ಕಂದಕಗಳನ್ನು ಹಿಂದಕ್ಕೆ ಪಡಕೊಳ್ಳಲು ಜರ್ಮನರು ಮಾಡಿದ ಪ್ರಯತ್ನವು ವ್ಯರ್ಥವಾಗಿದೆ ಬ್ರಿಟಿಷರು ನುಗ್ಗಿ ಬಂದ ಜರ್ಮನ ಸೇನೆಯನ್ನು ಓಡಿಸಿ ೮೦ ಮಂದಿಯನ್ನು ಸೆರೆಹಿಡಿದು ಅನೇಕರನ್ನು ಹತಬಡದಿರುವರು ಮ್ಯೂಸಿನಲ್ಲಿ ಜರ್ಮನರು ಕಳೆದ ತಾ. ೨೭ರಲ್ಲು ಹಿಡಕೊಂಡಿದ್ದ ಕಂದಕಗಳನ್ನು ಮಿತ್ರ ಸೇನಿಕರು ಹಿಂದಕ್ಕೆ ಪಡಕೊಂಡಿರುತ್ತಾರೆ ಸೌಸೆಜ್ ಸ್ಟೇಶನನ್ನು ಹಾರಿಸಿಬಿಡಲು ಜರ್ಮನರು ಭಗೀರಥ ಪ್ರಯತ್ನ ಪಟ್ಟರು. ಆದರೆ ಸಫಲ ಹೊಂದಲಿಲ್ಲ ಮ್ಯೂಸ್ ಶಿಖರಗಳಲ್ಲಿ ಜರ್ಮನರಿಗೆ ಆದ ನಷ್ಟವು ಅಷ್ಟಿಷ್ಟಲ್ಲ ಆದರೆ ಪುನಃ ರಾತ್ರಿ ಕಾಲದಲ್ಲಿ ಹಲ್ಲೆ ಮಾಡಿ ವಿಶೇಷ ನಷ್ಟಪಟ್ಟು ಹಿಮ್ಮೆಟ್ಟಿವರು. ಬ್ಯೂಸ್-ಲಿಪೆಟ್ರೆಯಲ್ಲಿ ಮೇಲ್ಬಾಯಿದ ಜರ್ಮನ ಸೇನೆಯನ್ನು ಫ್ರೆಂಚರು ತಕ್ಷಣ ಹಿಂದಕ್ಕೆ ಅಟ್ಟಿರುತ್ತಾರೆ.

ಅಮೇರಿಕದಲ್ಲಿ ಮಿ। ಮೋರ್ಗನರನ್ನು ಕೊಲ್ಲಲು ಯತ್ನಿಸಿದ ಹೊಲ್ಟ್ ಎಂಬ ಜರ್ಮನನು ಸ್ವಘಾತ ಮಾಡಿಕೊಂಡಿರುವನು

ಪೂರ್ವ ರಣರಂಗದಲ್ಲಿ ಕ್ರಾಸ್ನಿಕ್ ಕಡೆಗೆ ನುಗ್ಗಿ ಬರುತ್ತಿದ್ದ ಶತ್ರು ಸೇನಿಕರ ಮೇಲೆ ರುಶ್ಯನರು ಬಿದ್ದು ಶತ್ರು ಸೇನೆಯಲ್ಲಿ ವಿಶೇಷ ನಷ್ಟಪಡಿಸಿ, ೩೦೦೦ ಮಂದಿಯನ್ನು ಸೆರೆಹಿಡಿದಿರುವರು ಸುಮಾರು ೩೦೦೦ ಶತ್ರು ಸೇನಿಕರು ರುಶ್ಯನರ ರಣರಂಗದಲ್ಲಿ ಸತ್ತು ಬಿದ್ದಿದ್ದರು ಕದನವು ಅತಿ ಕಠಿಣ ತರದ್ದಾಗಿತ್ತು, ಅದೇ ದಿನ ಪುನಃ ಮೇಲ್ಬಾಯಿದ ಶತ್ರುಗಳನ್ನು ರುಶ್ಯನರು ಓಡಿಸಿರುತ್ತಾರೆ.

ದಕ್ಷಿಣ ಆಫ್ರೀಕದ ಯೂನ್ಯನ್ ಸರಕಾರದವರು ಫ್ರಾನ್ಸಿನಲ್ಲಿ ಕಾದಾಡುವ ಬ್ರಿಟಿಷ ಸೇನೆಯ ಸಹಾಯಕ್ಕಾಗಿ ಒಂದು ಸೇನೆಯನ್ನು ಕಳುಹಿಸಿಕೊಡುವರೆ ಮಾತುಕೊಟ್ಟಿರುತ್ತಾರೆ.

ತಾರೀಕು ೯ನೇ ಜುಲೈ.

ಬ್ರಿಟಿಷರ ವಾಯುನಾವೆಗಳು ಸ್ಮಿರ್ನ ಮತ್ತು ಐವಾಲಿಯ ಮೇಲೆ ಬೊಂಬುಗಳನ್ನು ಎಸೆದಿರುವವು.

ಯುದ್ಧ ಪ್ರಾರಂಭವಾದಂದಿನಿಂದ ಮೇ ತಾ. ೩೧ರ ವರೆಗೆ ಫ್ರೆಂಚ ಸೇನೆಯಲ್ಲಿ ೪೦೦,೦೦೦ ಮಂದಿ ಹತರಾದರು. ೭೦೦,೦೦೦ ಮಂದಿ ಗಾಯಪಟ್ಟರು, ೩೦೦,೦೦೦ ಮಂದಿ ಕಾಣೆಯಾಗಿರುವರು ಎಂತ ಫ್ರೆಂಚ ರಿಲೀಫ್ ಕಮಿಟಿಯವರು ಪ್ರಕಟಿಸಿರುತ್ತಾರೆ

ರುಶ್ಯನರಿಗೆ ಬಂಬಲ ಸೇನೆಯು ಬಂದು ಕೂಡಿದ್ದರಿಂದ ಅವರು ಕ್ರಾಸ್ನಿಕ್ ಉತ್ತರದಲ್ಲಿ ನುಗ್ಗಿ ಬಂದು, ಆಸ್ಟ್ರಿಯನರ ಆರ್ಚಡ್ಯೂಕ್ ಜೋಸೆಫರ ಸೇನೆಯ ಮೇಲೆ ಬಿದ್ದಿರುವರು. ರುಶ್ಯನರಿಗೆ ಬಲವಾದ ರಿಜರ್ವ್ ಸೇನೆಯುದ್ದುದರಿಂದ ಕದನವು ಅತಿ ತೀಕ್ಷ್ಣವಾಗಿರುವದು ಎಂತ ಆಸ್ಟ್ರಿಯನರು ಪ್ರಕಟಿಸಿರುತ್ತಾರೆ

ರುಶ್ಯನರು ಈ ಕದನದಲ್ಲಿ ೩೦೦೦ ಮಂದಿಯನ್ನು ಸೆರೆ ಹಿಡಿದಿರುತ್ತಾರೆ

ಕೈಸರರು ಪೋಲೆಂಡಿನ ಲೊಡ್ಜ ಪಟ್ಟಣವನ್ನು ಸಂದರ್ಶಿಸಿ ಅಲ್ಲಿರುವ ಯೆಹೂದ್ಯರ ಸಿನಗೋಗ್ ಎಂಬ ಮಂದಿರವನ್ನು ಪ್ರವೇಶಿಸಿ "ನಾನು ನಿಮ್ಮನ್ನು ರಕ್ಷಿಸುವದಕ್ಕಾಗಿ ದೇವರಿಂದ ಕಳುಹಿಸಲ್ಪಟ್ಟ ಮೆಸೀಯನು" ಎಂದು ಹೇಳಿರುವರು ಎಂತ 'ಜೂಯಿಸ್ ವರ್ಲ್ಡ್' ಎಂಬ ಪತ್ರಿಕೆಯಲ್ಲಿ ಪ್ರಕಟವಾಗಿದೆ

ತಾರೀಕು ೧೦ನೇ ಜುಲೈ.

ರುಶ್ಯನರ ಡಿಸ್ಟ್ರೋಯರ್ ನಾವೆಗಳು ಬೊಸ್ಪರಸಿನ ಬಳಿ ತುರ್ಕರ ಒಂದು ಸಬ್‌ಮೆರಿನ್ ನಾವೆಗೆ ಗುಂಡು ಹಾರಿಸಿರುವದು ಎಂತ ಸೆಬಸ್ಟೋಪಲಿನಿಂದ ತಂತೀ ಬಂದದೆ.

ಬಾಲ್ಟಿಕ್ ಸಮುದ್ರದಲ್ಲಿ ಜರ್ಮನ ಯುದ್ಧ ಹಡಗಗಳ ಮೇಲ್ಬಾಯಿದ ಸಬ್ ಮೆರಿನ್ ನಾವೆಯು ಬ್ರಿಟಿಷರದ್ದಾಗಿತ್ತು ಎಂತ ಪೆಟ್ರೊಗ್ರೇಡಿನಲ್ಲಿ ಪ್ರಕಟವಾಗಿದೆ

ಎಡ್ರಿಯಾಟಿಕಿನಲ್ಲಿ ಇಟಲಿಯನರ "ಅಮಾಲ್ಫಿ" ಎಂಬ ಕ್ರೂಯಿಸರ್ ನಾವೆಯನ್ನು ಶತ್ರುಗಳ ಟೋರ್ಪೆಡೋ ಮುಣುಗಿಸಿರುವದು. ಇಟಲಿಯನರ ಹಡಗದಲ್ಲಿದ್ದ ಪತಿ ಒಬ್ಬನೂ ರಕ್ಷಿಸಲ್ಪಟ್ಟಿರುವನ.

ಡರ್ಡನೆಲ್ಸಿನಲ್ಲಿ ಜುಲೈ ತಾ. ೫ರಲ್ಲು ತುರ್ಕರು ಪ್ರಚಂಡವಾದ ಗುಂಡಿನ ಮಳೆಯನ್ನು ಸುರಿಸಿದರು ಹೆಚ್ಚು ಕಡಿಮೆಯಂದರೆ ೫೦೦೦ ಶೆಲ್ಲುಗಳನ್ನು ಹಾರಿಸಿದರು. ಮಿತ್ರರು ಅತಿ ಸಾಹಸದಿಂದ ಕಾದಾಡಿ ಶತ್ರುಗಳನ್ನು ಹಿಂದಕ್ಕೆ ಓಡಿಸಿದರು.

ಸಣಬಿನ ಹಗ್ಗ, ವಸ್ತ್ರ, ಗೋಣಿ ಚೀಲ ಇತ್ಯಾದಿಗಳನ್ನು ಇತರ ಯಾವ ಸ್ಥಳಕ್ಕೂ ಕಳುಹಿಸಕೂಡದೆಂದು 'ಲಂಡನ್ ಗಜೆಟ್' ನಲ್ಲಿ ಪ್ರಕಟವಾಗಿದೆ.

ಎಂಜರ್ಸ್ ಮತ್ತು ಸೌಸೆಜನ ಮಧ್ಯೆ ಪುನಃ ಮೇಲ್ಬಾಯಿದ ಜರ್ಮನ ಸೇನಿಕರಿಗೂ ಫ್ರೆಂಚರ ಪದಾತಿಸೇನೆಗೂ ಕಠಿಣ ಕಾಳಗ ನಡೆಯುತ್ತಿದೆ. ಜರ್ಮನರು ಪ್ರಚಂಡವಾದ ಬೊಂಬಿನ ಮಳೆ ಸುರಿದು ನುಗ್ಗಿ ಬಂದರೂ ಸಫಲಹೊಂದದೆ ಸೋತುಹೋದರು. ಫ್ರೆಂಚರು ಸೌಸೆಜ್ ಪಟ್ಟಕ್ಕೆ ಮುಂದರಿದು ಜರ್ಮನರ ಕಂದಕಗಳ ಸಾಲನ್ನು ಹಿಡಿದು, ಅದರಲ್ಲಿದ್ದ ಸೇನಿಕರನ್ನು ನಿರ್ನಾಮ ಮಾಡಿ ಜಯಪ್ರದರಾದರು ಬೆಲ್ಜಿಯಮಿನಲ್ಲಿಯೂ ಮೇಲ್ಬಾಯಿದ್ದ ಜರ್ಮನರು ಹಿಮ್ಮೆಟ್ಟಿರುತ್ತಾರೆ.

ವೊಸೆಜೆಸಿನಲ್ಲಿ ಫ್ರೆಂಚರಿಗೆ ಒಂದು ವಿಶೇಷವಾದ ಜಯವಾಗಿರುವದು. ಫ್ರೆಂಚರು ಜರ್ಮನರು ಬಲಕಾಯಿಸಿಕೊಳ್ಳಲು ಏರ್ಪಡಿಸಿದ ಕೆಲಸಗಳನ್ನೆಲ್ಲಾ ಹಾಳುಪಡಿಸಿ ೭೦೦ ಗಜ ರಣರಂಗದಲ್ಲಿ ಜರ್ಮನರ ಬಹು ಮಂದಿ ಸೇನಿಕರನ್ನೂ ೧೯ ಆಫೀಸರರನ್ನೂ ಸೆರೆಹಿಡಿದರು.

ಜರ್ಮನರ ನೈರುತ್ಯ ಆಫ್ರೀಕದಲ್ಲಿದ್ದ ಜರ್ಮನ ಸೇನೆಯೆಲ್ಲಾ ಯೂನ್ಯನ್ ಸರಕಾರದ ಸೇನೆಗೆ ಶರಣಾಗತವಾಗಿರುವದು. ಆದುದರಿಂದ ಅಲ್ಲಿಯ ಕದನವು ನಿಂತಿರುತ್ತದೆ. ಜರ್ಮನರು ಶರ್ತಗಳೇನೂ ಇಲ್ಲದೆ ಶರಣಾಗತರಾಗಿರುವರು ಎಂತ ಪ್ರಕಟವಾಗಿದೆ.

ನೇಶನಲ್ ರಿಜಿಸ್ಟರ್ ಬಿಲ್ ಬ್ರಿಟಿಷ ಪಾರ್ಲಿಮೆಂಟ್ ಸಭೆಯಲ್ಲಿ ಮೂರನೇ ಸಾರಿ ಓದಲ್ಪಟ್ಟು ಬಹುಮತಿಯನ್ನು ಪಡೆಯಿತು.

ರುಶ್ಯನರ ಉತ್ಕೃಷ್ಟವಾದ ಸೇನೆಯು ಆಸ್ಟ್ರಿಯನರ ಸೇನೆಯನ್ನು ಕ್ರಾಸ್ನಿಕ್ ಉತ್ತರದಲ್ಲಿ ಸೋಲಿಸಿರುವದು ಎಂತ ಆಸ್ಟ್ರಿಯನರು ಪ್ರಕಟಿಸಿರುತ್ತಾರೆ.

ಸೋಮವಾರದಿಂದ ಬೃಹಸ್ಪತಿವಾರದ ವರೆಗೆ ರುಶ್ಯನರು ಶತ್ರುಗಳ ೧೧ ಸಾವಿರ ಸೇನಿಕರನ್ನೂ, ಕೆಲವು ಡಜನ್ ಫಿರಂಗಿಗಳನ್ನೂ ಹಿಡಿದಿರುತ್ತಾರೆ.

ಇಟೆಲಿಯನರ ದೊಡ್ಡ ಫಿರಂಗಿಗಳು ಕೊರ್ಟಿಯ ಕೋಟೆಗಳನ್ನು ನೆಲಸಮ ಮಾಡಿರುತ್ತವೆ. ಕಾರ್ಸೋದ ಪ್ರಸ್ತ ಭೂಮಿಯಲ್ಲಿ ಇಟೆಲಿಯನರು ೧೪೦೦ ಸೇನಿಕರನ್ನು ಸೆರೆಹಿಡಿದಿರುತ್ತಾರೆ. ಇಸೊನ್ಜೊ ನೈಲ್ಸಿಗೆ ಹೋಗುವ ದಾರಿಯಲ್ಲಿರುವ ಪೊಡ್ಗೋರ ಎಂಬ ಪ್ರಾಮುಖ್ಯ ಸ್ಥಳವನ್ನು ಇಟಲಿಯನರು ಹಿಡಿದಿರುತ್ತಾರೆ.

ತಾರೀಕು ೧೨ನೇ ಜುಲೈ.

ಲುಸಿತಾನಿಯ ಹಡಗವನ್ನು ಜರ್ಮನರು ಮುಳುಗಿಸಿದ ಸಂಬಂಧ ಅಮೇರಿಕಾದವರು ಜರ್ಮನಿಗೆ ಕೊಟ್ಟ ಪತ್ರಕ್ಕೆ ಜರ್ಮನರು ಸಮರ್ಪಕವಾದ ಉತ್ತರ ಕೊಟ್ಟಿರುವದಿಲ್ಲ

ಪಶ್ಚಿಮ ರಣರಂಗದಲ್ಲಿ ಬ್ರಿಟಿಷರಿಗೂ ಫ್ರೆಂಚರಿಗೂ ಅಲ್ಲಲ್ಲಿ ಜಯವಾಗುತ್ತದೆ.

ಮಿ। ಅಸ್ಕ್ವಿತರವರೂ, ಕ್ರೂಪ್ರಭುಗಳವರೂ, ಕಿಚನರ್ ಪ್ರಭುಗಳವರೂ ಕೆಲ್ಲಿಗೆ ಹೋಗಿ ಸರ್‌ಜ್ಹೋನ್ ಫ್ರೆಂಚ, ಮಿಲ್ಲರೆಂಡ್, ತೋಮಾಸ್ ಮತ್ತು ಜನರಲ್ ಜೊಫ್ರೆಯ ಕೂಡ ಕನ್ಸರೆನ್ಸ್ ಮಾಡಿರುತ್ತಾರೆ ಮಿ। ಅಸ್ಕ್ವಿತರವರು ಬ್ರಿಟಿಷ ಸೇನೆಯ ಮುಖ್ಯ ಪಾಳೆಯಕ್ಕೆ ಹೋಗಿ ಸೇನೆಗಳನ್ನು ಸಂದರ್ಶಿಸಿರುವರು. ಕಿಚನರ್ ಪ್ರಭುಗಳವರು ಫ್ರೆಂಚಸೇನೆಯನ್ನೂ ಭಾರತೀಯ ಸೇನಿಕರನ್ನೂ ಸಂದರ್ಶಿಸಿರುತ್ತಾರೆ.

ನೈರುತ್ಯ ಅಫ್ರೀಕದ ಜರ್ಮನ ವಸಾಹತಿಯ ಜರ್ಮನ್ ಗವರ್ನರರು ಜನರಲ್ ಬೋಥರವರಿಗೆ ತಾ. ೯ನೇ ಬೆಳಗ್ಗೆ ೨ ಗಂಟೆಗೆ ಶರಣಾಗತರಾದರು. ಇಲ್ಲಿದ್ದ ಜರ್ಮನರ ೨೦೪ ಆಫೀಸರರೂ ೩೧೬೬ ಸೇನಿಕರೂ ೩೭ ಫಿರಂಗಿಗಳೂ ೨೨ ಮೆಶೀನ್‌ಗನ್ ಎಂಬ ಫಿರಂಗಿಗಳೂ ಯೂನ್ಯನ್ ಸೇನೆಗೆ ಸೆರೆ ಬಿದ್ದರು ಜನರಲ್ ಬೋಥರವರ ಈ ಸಾಹಸ ಕಾರ್ಯಕ್ಕಾಗಿ ಲೋಕದಲ್ಲೆಲ್ಲಾ ಮಹಾ ಸಂತೋಷ ಉಂಟಾಗಿರುವದು.

ರುಶ್ಯನರು ಲಬ್ಲಿನಿನ ದಕ್ಷಿಣ ಪ್ರಾಂತ್ಯದಲ್ಲೆಲ್ಲಾ ಶತ್ರುಗಳ ಮೇಲೆ ನುಗ್ಗಿಹೋಗಿ ಈ ತನಕ ೧೫ ಸಾವಿರ ಶತ್ರು ಸೇನಿಕರನ್ನು ಸೆರೆ ಹಿಡಿದರು.

ತುರ್ಕರ ಸೇನೆಯು ಏಡನ್ ಹಿಂಟರ್‌ಲೇಂಡಿನ ಲಾಹಜ ಎಂಬಲ್ಲಿಗೆ ಹೋಗಿ ಅವರ ಸುಲ್ತಾನರೊಡನೆ ಕದನಕ್ಕೆ ನಿಲ್ಲಲು ಪ್ರಯತ್ನಿಸಿದರು. ಲಾಹಜಿಯ ಸುಲ್ತಾನರು ಇಂಗ್ಲಿಷರ ಸಹಾಯವನ್ನು ಕೇಳಿಕೊಂಡರು. ಶತ್ರುಗಳು ಲಾಹಾಜಿಯ ಮೇಲೆ ನುಗ್ಗಿ ಬಂದರು ಲಾಹಾಜಿಗೆ ಬ್ರಿಟಿಷರ ಬೆಂಬಲ ಸೇನೆಯು ಹೋಗಿ ಸೇರಲು ತಡವಾದ್ದರಿಂದ ಲಾಹಾಜಿಯ ಸೇನೆಯು ಹಿಂದೆ ಸರಿಯಲು ನಿರ್ಣಯಿಸಿ ತಾ. ೫ರಲ್ಲು ಸೇನೆಯು ಏಡನಿಗೆ ಹಿಂದೆ ಸರಿಯಿತು. ಶತ್ರುಗಳು ಅವರನ್ನು ಹಿಂಬಾಲಿಸಲಿಲ್ಲ ಬ್ರಿಟಿಷರ ೩ ಆಫೀಸರರು ಘಾಯಪಟ್ಟರು. ತುರ್ಕರ ಒಬ್ಬ ಮೆಜರ್ ಮತ್ತು ೧೩ ಸೇನಿಕರು ಬ್ರಿಟಿಷರ ಸೆರೆ ಬಿದ್ದರು

ಈಜಿಪ್ತಿನ ಸುಲ್ತಾನರು ಬೆಳಗ್ಗೆ ಗಾಡಿಯಲ್ಲಿ ಹೋಗುತ್ತಿರುವಾಗ ಯಾರೋ ಒಬ್ಬ ಘಾತುಕನು ಗಾಡಿಯ ಕಿಟಕಿಯ ಬಳಿ ಬೊಂಬು ಬಿಸಾಡಿದನು. ಅದು ಕುದುರೆಯ ಕೆಳಗೆ ಬಿದ್ದು ಸಿಡಿಯಲಿಲ್ಲ ಘಾತುಕನು ತಪ್ಪಿಸಿಕೊಂಡಿರುವನು

——⊙——

ಉತ್ತರ ಹಿಂದೂಸ್ಥಾನ.

ವೈಸರಾಯ ಕಾರ್ಯನಿರ್ವಾಹಕ ಸಭೆಯ ಮೆಂಬರರಾಗಿದ್ದ ಬಹುಮಾನಪಟ್ಟ ಸರ್, ಸೈಯ್ಯದ್ ಅಲಿ ಇಮಾಮ್ ಕೆ. ಸಿ. ಐ. ಇರವರ ಬದಲಿಗೆ ಬೇರಿಷ್ಟರರಾದ ಮಿ। ಜೋರ್ಜ ರಿವರ್ಸ್ ಲೌಂಡೆಸರವರು ವೈಸರಾಯರವರ ಕಾರ್ಯನಿರ್ವಾಹಕ ಸಭೆಯ ಮೆಂಬರರಾಗಿ ನೇಮಿಸಲ್ಪಟ್ಟಿರುತ್ತಾರೆ.

ಮುಂಬಾಯಿಯ ಪೋಸ್ಟಾಫೀಸ್ ಕ್ಲಾರ್ಕನಾಗಿದ್ದ ಲೊಪ್ಜಿ ಪೊಸ್ತೊಸ್ಜಿ ಮೋಟವಾಲ ಎಂಬ ಪಾರ್ಶಿಯು ಕಲ್ಕತ್ತೆಯ ಜೆ. ಮದನ ಎಂಬವರಿಂದ ರಿಜಿಸ್ಟ್ರಿಮಾಡಿ ಕಳುಹಿಸಲ್ಪಟ್ಟ ೪೦೦೦ ರೂಪಾಯಿಯ ಹುಂಡಿಯನ್ನು ಕಳವು ಮಾಡಿ ಅಲ್ಲಹಾಬಾದ್ ಬೇಂಕಿನಲ್ಲಿ ಅದನ್ನು ವರಾಯಿಸಲು ಪ್ರಯತ್ನಿಸಿದ್ದನೆಂಬದಾಗಿ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದನು. ಅಪಾದಿತನಿಗೆ ಮುಂಬಾಯಿ ಹೈಕೋರ್ಟಿನಲ್ಲಿ ೭ ವರ್ಷಗಳ ಕಠಿಣ ಸಜಾ ವಿಧಿಸೋಣಾಯಿತು

ಮುಂಬಾಯಿ ಪ್ರಾಂತಿಕ ಸಭೆಯು ಇದೇ ತಾರೀಕು ೧೦, ೧೧, ೧೨ರಲ್ಲು ಪೂನೆಯಲ್ಲಿ ಕೂಡು ಬಂದಿರುವದು. ಮಿ। ಎಚ್ ಎ. ವಾಡಿಯರವರು ಈ ಸಭೆಯ ಅಧ್ಯಕ್ಷರಾಗಿದ್ದರು

ಮುಂಬಾಯಿಯ ಡಾಕ್ಟರ್ ರಜಬಾಲಿ ಪಟೇಲರವರ ಮನೇ ಕೆಲಸದಲ್ಲಿದ್ದ ಭಾಕು ಓಕ ಎಂಬವನು ರಜಬಾಲಿಯವರ ಪತ್ನಿ ಸಿರಿನ್ ಬಾಯಿರವರ ಕೂಡ ಹೆಚ್ಚಿಗೆ ಸಂಬಳ ಕೂಡಲೇ ಕೊಡಬೇಕೆಂದು ಕೇಳಿದ್ದಲ್ಲಿ ಅವರು ಕೊಡಲು ನಿರಾಕರಿಸಿದ್ದರಿಂದ ಸದರಿ ಸೇವಕನು ಅವರನ್ನು ಕೊಂದು ಬಿಟ್ಟನು ಈ ಮೊಕದಮೆಯು ಮುಂಬಾಯಿ ಹೈಕೋರ್ಟಿನಲ್ಲಿ ತನಕಿಯಾಗಿ ಜಸ್ಟಿಸ್ ದಾವರರು ಅಪಾದಿತನಿಗೆ ಫಾಶೀ ಶಿಕ್ಷೆಯನ್ನು ವಿಧಿಸಿದರು

"ಗಿಲ್‌ಫೋರ್ಡ್ ಕೆಸ್‌ಲ್" ಎಂಬ ಆಸ್ಪತ್ರಿ ಹಡಗವು ಸೂವೆಜ್ ಬಂದರದಿಂದ ಗಾಯ ಒಡೆದ ಭಾರತೀಯ ಸೇನಿಕರನ್ನು ಮುಂಬಾಯಿಗೆ ತಂದಿರುವದು.

ಭಾವನಗರದ ಮಹಾರಾಜರವರೂ ಮಹಾರಾಣಿಯವರೂ ಕಳೆದ ಆದಿತ್ಯವಾರ ಮುಂಬಾಯಿಗೆ ಒಂದು ಲೇಡಿ ಹಾರ್ಡಿಂಜ ಆಸ್ಪತ್ರಿಯಲ್ಲಿ ಶೈತ್ಯೋಪಚಾರ ಹೊಂದುತ್ತಲಿರುವ ಗಾಯ ಒಡೆದ ಸೇನಿಕರನ್ನು ಸಂದರ್ಶಿಸಿ, ಪ್ರತಿ ಸೇನಿಕನನ್ನು ಕುರಿತು ಏನು ಬೇಕೆಂದು ಕೇಳಲು ಒಬ್ಬನು ತಕ್ಷಣ ತನಗೆ ಒಂದು ಕಾಲು ಬೇಕೆಂದನು. ಮಹಾರಾಣಿಯವರು ಕೂಡಲೇ ತನ್ನ ಲೆಕ್ಕದಲ್ಲಿ ಅವನಿಗೆ ಒಂದು ಕೃತಕ ಕಾಲನ್ನು ತರಿಸಿಕೊಡಲು ಹುಕುಂ ಮಾಡಿದರು: ಪನ್ನಾದ ಮಹಾರಾಣಿಯವರು ಇನ್ನೊಬ್ಬ ಸೇನಿಕನಿಗೆ ಒಂದು ಕೃತಕ ಕಾಲನ್ನು ತರಿಸಿಕೊಡುತ್ತೇನೆಂತ ಮಾತು ಕೊಟ್ಟರು.

ತಾರೀಕು ೭ರಲ್ಲು ಡಾರ್ಜಿಲಿಂಗಿನಲ್ಲಿ ಭೂಕಂಪ ಉಂಟಾಗಿರುವದು.

ವಿಜಾಪುರ ಹೈಸ್ಕೂಲಿನ ಬೋರ್ಡಿಂಗ್ ಹೌಸಿನಲ್ಲಿದ್ದ ೧೪ ಮಂದಿಗೆ ಫಕ್ಕನೇ ವಾಂತಿಭೇದಿಯು ಸೋಂಕಿತು. ಇಬ್ಬರು ಶಾಲೆಯಲ್ಲೇ ಸತ್ತರು. ಇಬ್ಬರು ಮನೆಗೆ ಹೋಗುವಾಗ ಸತ್ತರು ಎಂಬ ವಾರ್ತೆ ಬಂದಿರುವದು.

ಚಿತಗೊಂಗಿನಲ್ಲಿ ಗೋಪಾಲ ಚಂದ್ರ ಬಾಸುರವರು ತನ್ನ ಪತ್ನಿ ಸಹಿತ ಮನೆಯಲ್ಲಿರುವಾಗ ೧೨ ಘಂಟೆಗೆ ಫಕ್ಕನೇ ಒಂದು ಬೊಂಬು ಸಿಡಿಯಿತು. ಗೋಪಾಲ ಚಂದ್ರರವರಿಗೆ ಇದರಿಂದ ಸ್ವಲ್ಪ ಗಾಯವಾಗಿರುವದು. ಆದರೆ ಅವರ ಪತ್ನಿಯವರಿಗೆ ಕಠಿಣ ಗಾಯಗಳಾಗಿವೆ. ಡಾಕ್ಟರ್ ಮಿತ್ರರವರು ಇಬ್ಬರ ಗಾಯಗಳಿಂದಲೂ ಕಬ್ಬಿಣದ ಮೊಳೆಗಳನ್ನು ಹೊರತೆಗೆದಿರುತ್ತಾರೆ. ಬೊಂಬು ಅಲ್ಲಿಗೆ ಹೇಗೆ ಬಂತೆಂಬದು ತಿಳಿಯದು.

ಚಾರು ಶೀಲಾ ಹಾಜಿ ಬೊಳಾಯಿ ಎಂಬ ಕಲ್ಕತ್ತೆಯ ಹಿಂದೂ ವಿಧವೆಯೊಬ್ಬಳು ಕೋಣೆಯನ್ನು ಮುಚ್ಚಿ ಬೆಂಕಿ ಕೊಟ್ಟು ಆತ್ಮಹತ್ಯ ಮಾಡಿಕೊಂಡಿರುವಳೆಂಬ ವಾರ್ತೆ ಬಂದಿರುವದು.

ಡಿಲ್ಲಿ ರಾಜದ್ರೋಹ ಪಿತೂರಿ ಮೊಕದಮೆಯಲ್ಲಿ ಫಾಶಿ ಶಿಕ್ಷೆ ವಿಧಿಸಲ್ಪಟ್ಟ ಬಾಲಮುಕುಂದನ ಪತ್ನಿಯು ಗಂಡನನ್ನು ಫಾಶಿಗೆ ಹಾಕಿದಾಕ್ಷಣ ಸತಿಸಹಗಮನವನ್ನು ಮಾಡಿಕೊಂಡಳೆಂತ "ಪಂಜಾಬಿ" ಪತ್ರಿಕೆಯಲ್ಲಿ ಪ್ರಕಟವಾಗಿದೆ .

ಜುಲೈ ತಾ. ೩ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೬೮೩ ಮಂದಿಗೆ ಪ್ಲೇಗ ಬೇನೆಯು ಸೋಂಕಿ ೪೮೦ ಮಂದಿ ಮೃತರಾದರು. ಈ ಪೈಕಿ ಮುಂಬಾಯಲ್ಲಿ ೧೩೯, ಮದ್ರಾಸ್ ೩; ಬಂಗಾಳ ೧; ಬಿಹಾರ್ ಮತ್ತು ಒರಿಸ್ಸ ೫, ಸಂಯುಕ್ತ ಸಂಸ್ಥಾನ ೧; ಪಂಜಾಬು ೬೩; ಒವರ್ಮ ೩೮; ಮೈಸೂರು ೨೮; ವಾಯುವ್ಯ ಸರಹದ್ದು ೨ ಮರಣಗಳಾದವು.

ದಕ್ಷಿಣ ಹಿಂದೂಸ್ಥಾನ.

ಬರೋಡೆಯ ಗಾಯಕವಾಡರವರೂ, ಬರೋಡೆಯ ಮಹಾರಾಣಿಯವರೂ ತಿರುವಾಂಕೋಡು ಮಹಾರಾಣಿಯವರ ಅಥಿತಿಗಳಾಗಿರುವರು.

ಸರ್. ಸಿ. ಶಂಕರನ್ ನಾಯರರ ಬದಲಿಗೆ ಹೈಕೋರ್ಟಿನ ಆಕ್ಟಿಂಗ್ ಜಸ್ಟಿಸರಾಗಿ ನೇಮಿಸಲ್ಪಟ್ಟ ಮ। ರಾ। ಕೆ. ಶ್ರೀನಿವಾಸ ಐಯ್ಯಂಗಾರರವರು ತಾ. ೧೨ರಲ್ಲು ಕೆಲಸ ಪ್ರಾರಂಭಿಸಿರುತ್ತಾರೆ.

ಕೊಯಮುತ್ತೂರಿನಲ್ಲಿ ತಾ. ೧೧ರಲ್ಲು ವ್ಯವಸಾಯ ಕನ್ಫರೆನ್ಸ್ ಕೂಡಿಬಂದಿರುವದು. ವ್ಯವಸಾಯ ಸಂಬಂಧವಾದ ಸಾಹಿತ್ಯಗಳು, ಹಿಂದೂಸ್ಥಾನದ ಗ್ರಾಮಗಳನ್ನು ವೃದ್ಧಿಗೆ ತರುವ ಬಗೆ ಹೇಗೆ ಎಂಬಿತ್ಯಾದಿ ವಿಷಯವಾದ ಲೇಖನಗಳು ಈ ಸಭೆಯಲ್ಲಿ ಆಯಾ ಗ್ರಹಸ್ಥರಿಂದ ಓದಲ್ಪಟ್ಟಿರುತ್ತವೆ

ದಕ್ಷಿಣ ಕನ್ನಡ.

ಪೆರಡಾಲ:— ಮಹಾಜನ ಸಂಸ್ಕೃತ ಪಾಠಶಾಲೆಯ ಸಂಸ್ಥಾಪಕರಾಗಿ ಇತರ ಅನೇಕ ಸತ್ಕಾರ್ಯಗಳನ್ನು ಮಾಡಿದವರಾದ ಹವ್ಯಕ ಮತದ ಕಮಿಟಿ ಮೆಂಬರ್ ಬ್ರ ಶ್ರೀ. ಖಂಡಿಗೆ ಶಂಭಟ್ಟರವರು ಇದೇ ಜುಲೈ ತಾ. ೧೦ನೇ ಶನಿವಾರ ಪ್ರಾತಃಕಾಲ ಸ್ವರ್ಗಸ್ತರಾದರು ಎಂಬ ದುಃಖಕರವಾದ ವರ್ತಮಾನವನ್ನು ನಮ್ಮ ಮಿತ್ರಮಂಡಲಿಯವರಿಗೆ ತಿಳಿಸಲು ಅತ್ಯಂತ ವಿಷಾದ ಪಡುತ್ತೇನೆ. ಈ ವ್ಯಸನದ ದೆಸೆಯಿಂದ ಸದರಿ ಮಹಾಜನ ಸಂಸ್ಕೃತ ಪಾಠಶಾಲೆಯಲ್ಲಿ ಈ ತಾರೀಕಿನ ಲಾಗಾಯಿತು ೩ ದಿವಸಗಳ ವರೆಗೆ ರಜೆ ಕೊಡೋಣಾಗಿಯದೆ.

ಕಾಪು:— ಉಡ್ಪಿ ರೇಂಜು ಸ್ಕೂಲುಗಳ ಸಬ್ ಅಸಿಸ್ಟಾಂಟ್ ಇನ್ಸ್‌ಪೆಕ್ಟರರಾದ ಮ। ರಾ। ಯು. ಮಂಗೇಶರಾಯರವರು ಇಲ್ಲಿಗೆ ಚಿತ್ತೈಸಿ ಇಲ್ಲಿಯ ಬೋರ್ಡ್ ಶಾಲೆಗಳ ವರ್ಷಾವಧಿ ಪರೀಕ್ಷೆಯನ್ನು ಮಾಡುವವರಾದರು.

ನಂತರ ತಾ. ೧೧—೭—೧೫ನೇ ಶನಿವಾರ ಮಧ್ಯಾಹ್ನ ೩ ಘಂಟೆಗೆ ಇಲ್ಲಿಯ ಬೋರ್ಡ್ಸ ಕನ್ನಡ ಶಾಲೆಯಲ್ಲಿ ಅಜುಬಾಜಿನ ಎಲ್ಲಾ ಶಾಲೆಗಳ ಉಪಾಧ್ಯಾಯರುಗಳ ಮಹಾ ಸಭೆಯು ಇನ್ಸ್ಪೆಕ್ಟರರವರ ಅಧ್ಯಕ್ಷತೆಯಿಂದ ಜರಗಿತು ನಿಯಮಿತ ಪ್ರಾರ್ಥನಾ ಹಾಡು ಇತ್ಯಾದಿಗಳು ನಡೆದ ನಂತರ ಅಧ್ಯಕ್ಷರು ನೆರೆದುಬಂದ ಎಲ್ಲಾ ಉಪಾಧ್ಯಾಯರಿಗೆ ಚಿದರಳತೆ, ಭೂಗೋಳ ಕಲಿಸುವದರ ಕುರಿತು ವಿಷದವಾಗಿ ವಿವರಿಸಿದರು. ಅಲ್ಲದೆ ಕನ್ನಡ ಶಾಲೆಯ ಬಾಲಕಿಯರಿಗೆ ಇನಾಮು ಹಂಚಿದರು ಕಡೆಗೆ ಸರ್ವರೂ ಒಡಗೂಡಿ ರಾಜಗೀತವನ್ನು ಹಾಡಿ ಶಾಲಾ ಉಪಾಧ್ಯಾಯರುಗಳಿಂದ ಮಾಡಲ್ಪಟ್ಟ ಸಾಭಿಮಾನಗಳನ್ನು ಸ್ವೀಕರಿಸಿಕೊಂಡು ಸುಮಾರು ೫ ಘಂಟೆಗೆ ನೆರೆದ ಉಪಾಧ್ಯಾಯರುಗಳು ಅಗಲುವವರಾದರು. ತದನಂತರ ಸಭೆಗೆ ಚಿತ್ತೈಸಿದ್ದ ಊರ ಪ್ರಮುಖರೊಡನೆ ಇನ್ಸ್ಪೆಕ್ಟರವರು ಶಾಲಾ ಕಟ್ಟೋಣ ವಿಸ್ತರಿಸಿ ಕಟ್ಟಿಸುವ ಕಾರಣಾಂತರವನ್ನು ಸರಸವಾಗಿ ಮಾತನ್ನಾಡಿದರಲ್ಲದೆ ಕಟ್ಟೋಣ ಕಟ್ಟಿಸಿ ಕೊಡುವರೆ ಒಪ್ಪಿಕೊಂಡ ಮ| ರಾ| ಮಲ್ಲಾರು ಪರೇಲರಾದ ಕಾಂತಪ್ಪಸೆಟ್ಟರವರ ಉದಾರ ಮನಸ್ಸಿಗೆ ತಾನು ತುಂಬಾ ಸಂತೋಷಪಡುವೆನೆಂತಲೂ ಸದರಿಯವರು ಆದಷ್ಟು ಬೇಗನೆ ಕಟ್ಟಿಸಿ ಕೊಟ್ಟಲ್ಲಿ ಮಕ್ಕಳಿಗೆ ತುಂಬಾ ಉಪಕಾರವಿದೆ ಎಂತಲೂ ಹೇಳಿ ಸಭೆಯನ್ನು ಮುಕ್ತಾಯ ಪಡಿಸಿ ಇನ್ಸ್ಪೆಕ್ಟರರವರು ಯಮಾರ್ಳತ್ತಕಡೆ ತೆರಳುವವರಾದರು

~~~~~

ಪೊಳಲಿ:—ಇಲ್ಲಿ ಇದೇ ಕಳದ ತಾ ೫ರಿಂದ ತಾ. ೧೦ರ ವರೆಗೆ ದಿನಕ್ಕೆ ಒಂದು ಮಳೆ ಸಹಾ ಇಲ್ಲದೆ ರೈತರ ಸಾಗುವಳಿಗೆ ತುಂಬಾ ತೊಂದರೆಯಾಗಿಯದೆ. ಕೆಲವು ಗದ್ದೆಗಳು ಒಣಗಿ ಒಡದು ಹೋಗಿಯವೆ ನೆಟ್ಟಿಗದ್ದೆಗಳು ಪೂರ್ಣ ಸುಟ್ಟುಹೋಗಿ ಒಹಳ ನಷ್ಟವಾಗುವ ಸಂಭವವಿದೆ. ರೈತರು ಆಕಾಶವನ್ನೇ ನೋಡುತ್ತಾ ಹಗಲನ್ನು ಕಳೆಯುವರು ಪ್ರತಿಯೊಬ್ಬರಿಗೂ ಮಳೆ ವ್ಯಸನವಲ್ಲದೆ ಬೇರೇನೂ ಕಾಣುವದಿಲ್ಲ. ಈ ರೀತಿ ಇನ್ನೊಂದೆರಡು ದಿವಸ ಮಳೆ ಹೋದರೆ ಗೇಣಿವಕ್ಕಲುಗಳು ಗೇಣಿ ಕೊಡುವ ಸಂಭವವಿಲ್ಲ. ರೈತರಿಗೆ ಹೇರಳ ನಷ್ಟವಾಗ ಬಹುದು. —

ಗುರುಪುರದಿಂದ ಪೊಳಲಿಗಾಗಿ ಬಂಟ್ವಾಳಕ್ಕೆ ರಾಜರಸ್ತೆ ಮಾಡಿಸುವರೆ ಡಿಸ್ಟ್ರಿಕ್ಟ್ ಇಂಜಿನಿಯರು ಈ ಕಡೆ ಬರುವರೆಂದು ಕೇಳಿ ತುಂಬಾ ಸಂತೋಷಪಡುತ್ತೇವೆ ಪೊಳಲಿಗಾಗಿ ರಾಜರಸ್ತೆಯು ಹೋಗುವದು ರೈತರಿಗೂ ಯಾತ್ರಸ್ತರಿಗೂ ತುಂಬಾ ಸಂತೋಷಕರ

~~~~~

ಮಂಗಳೂರು.

——o——

ದಕ್ಷಿಣ ಕನ್ನಡಾ ಡಿಸ್ಟ್ರಿಕ್ ಕಲೆಕ್ಟರರ ಆಫೀಸು:—ಮು| ರಾ| ರಾ| ಯು. ಬಿ ವೆಂಕಟ್ರಮಣಯ್ಯನವರು ರಜೆ ತೀರಿದ್ದನಂತರ ತನ್ನ ಖಾಯಂ ಸಬ್ ಮೇಜಿಸ್ಟ್ರೇಟ ಕೆಲಸವನ್ನು ಕುಂದಾಪುರದಲ್ಲಿ ಮಾಡಬೇಕೆಂದು ಹುಕುಂ ಆಗಿರುವದು.

ಡ್ಯುಪಿಟಿ ತಹಸೀಲದಾರ, ಸಬ್ ಮೇಜಿಸ್ಟ್ರೇಟ ಮತ್ತು ಆಕ್ಟಿಂಗ್ ಲೇಂಡ್ ರಿಕೋರ್ಡ್ಸ ತಹಸೀಲದಾರರಾಗಿರುವ ಮು| ರಾ| ಎಚ್. ಶಂಕರರಾಯರು ರೂ. ೧೫೦-೧೦-೨೦೦ರ ಖಾಯಂ ಲೇಂಡ್ ರಿಕೋರ್ಡ್ಸ ತಹಸೀಲದಾರರಾಗಿ ನೇಮಿಸಲ್ಪಟ್ಟಿರುತ್ತಾರೆ.

ಆಕ್ಟಿಂಗ್ ಡ್ಯುಪಿಟಿ ತಹಸೀಲದಾರ ಮತ್ತು ಸಬ್ ಮೇಜಿಸ್ಟ್ರೇಟರಾಗಿರುವ ಮು| ರಾ| ಎಮ್. ರಘುವೇಂದ್ರರಾಯರು ರೂ. ೧೫೦ರ II ಗ್ರೇಡ್ ಡ್ಯುಪಿಟಿ ತಹಸೀಲದಾರ ಮತ್ತು ಸಬ್ ಮೇಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿರುತ್ತಾರೆ

ಆಕ್ಟಿಂಗ್ ಸ್ಟೇಶನರಿ ಡ್ಯುಪಿಟಿ ತಹಸೀಲದಾರ ಮತ್ತು ಸಬ್ ಮೇಜಿಸ್ಟ್ರೇಟರಾಗಿರುವ ಮು| ಎಫ್. ಲೋಬರವರು ಮು| ರಾ| ಎಮ್ ರಘುವೇಂದ್ರರಾಯರ ಬದಲಿಗೆ ಕಲೆಕ್ಟರ ಆಫೀಸಿನ ರೂ ೫೦ರ ೨ನೇ ಎಕೌಂಟ್ಯಾಂಟರಾಗಿ ನೇಮಿಸಲ್ಪಟ್ಟಿರುವರು.

೧ನೇ ಗ್ರೇಡ್ ಲೇಂಡ್ ರಿಕೋರ್ಡ್ಸ ಇನ್ಸ್ಪೆಕ್ಟರರಾಗಿರುವ ರಾ| ಕೆ ನಾಗಪ್ಪಯ್ಯನವರು ರೂ ೪೦ರ ೧ನೇ ಗ್ರೇಡ್ ರೆವಿನ್ಯು ಇನ್ಸ್ಪೆಕ್ಟರರಾಗಿ ನೇಮಿಸಲ್ಪಟ್ಟಿರುತ್ತಾರೆ ಇವರು ಉಡ್ಪಿ ಫಿರ್ಕದಲ್ಲಿ ಕೆಲಸಮಾಡಬೇಕಾಗುವದು

೧ನೇ ಗ್ರೇಡ್ ರೆವಿನ್ಯು ಇನ್ಸ್ಪೆಕ್ಟರರಾದ ರಾ| ಜಿ. ದತ್ತಾತ್ರಿಯರಾಯರು ರೂ ೪೦ರ ೧ನೇ ಗ್ರೇಡ್ ಲೇಂಡ್ ರಿಕೋರ್ಡ್ಸ ಇನ್ಸ್ಪೆಕ್ಟರರಾಗಿ ನೇಮಿಸಲ್ಪಟ್ಟಿರುತ್ತಾರೆ. ಆದರೆ ಮಂಗಳೂರು ಡಿವಿಜನಲ್ ಆಫೀಸಿನ ಆಕ್ಟಿಂಗ್ ೨ನೇ ಕ್ಲಾರ್ಕ ಕೆಲಸದಲ್ಲಿರಬೇಕಾಗುವದು

೨ನೇ ಗ್ರೇಡ್ ರೆವಿನ್ಯು ಇನ್ಸ್ಪೆಕ್ಟರರಾದ ರಾ| ಜಿ ಶ್ರೀನಿವಾಸ ಶ್ಯಾನುಭಾಗರು ಆಕ್ಟಿಂಗ್ ೧ನೇ ಗ್ರೇಡ್ ಲೇಂಡ್ ರಿಕೋರ್ಡ್ಸ ಇನ್ಸ್ಪೆಕ್ಟರರಾಗಿ ನೇಮಿಸಲ್ಪಟ್ಟಿರುವರು ಆದರೆ ಕಾಸರಗೋಡು ಫಿರ್ಕಾ ರೆವಿನ್ಯು ಇನ್ಸ್ಪೆಕ್ಟರ ಕೆಲಸದಲ್ಲಿರಬೇಕಾಗುವದು

ಕಾರ್ಕಳ ತಾಲೂಕು ಆಫೀಸಿನ ಕ್ಲಾರ್ಕ ರಾ| ಕೆ ರಾಮನ್ನಾಕರು ಆಕ್ಟಿಂಗ್ ೨ನೇ ಗ್ರೇಡ್ ರೆವಿನ್ಯು ಇನ್ಸ್ಪೆಕ್ಟರರಾಗಿ ನೇಮಿಸಲ್ಪಟ್ಟಿರುವರು ಆದರೆ ಕಾರ್ಕಳ ತಾಲೂಕಿನಲ್ಲಿ ಲೇಂಡ್ ರಿಕೋರ್ಡ್ಸ ಇನ್ಸ್ಪೆಕ್ಟರ ಕೆಲಸ ನೋಡಬೇಕಾಗುವದು

ರಾ| ಎಮ್ ಸುಬ್ಬರಾಯರವರು ಇತರ ಡ್ಯುಟಿಯ ಮೇಲಿರುವದ್ದರಿಂದ ೨ನೇ ಗ್ರೇಡ್ ರೆವಿನ್ಯು ಇನ್ಸ್ಪೆಕ್ಟರ ರಾ| ಎಮ್ ಹರಿಕಾಮತರು ಆಕ್ಟಿಂಗ್ ೧ನೇ ಗ್ರೇಡ್ ರೆವಿನ್ಯು ಇನ್ಸ್ಪೆಕ್ಟರರಾಗಿ ಬೈಂದೂರು ಫಿರ್ಕದಲ್ಲಿ ಕೆಲಸದಲ್ಲಿರಬೇಕಾಗಿದೆ

ಕಲೆಕ್ಟರ ಆಫೀಸಿನ ಕ್ಲಾರ್ಕ ರಾ| ಯು ಅಪ್ಪಯ್ಯನವರು ಆಕ್ಟಿಂಗ್ ೨ನೇ ಗ್ರೇಡ್ ರೆವಿನ್ಯು ಇನ್ಸ್ಪೆಕ್ಟರರಾಗಿ ನೇಮಿಸಲ್ಪಟ್ಟು ಬೆಳ್ತಂಗಡಿ ಫಿರ್ಕದಲ್ಲಿ ಕೆಲಸ ನೋಡಬೇಕಾಗುವದು

ಕುಂದಾಪುರ ಡಿವಿಜನಲ್ ಆಫೀಸಿನ ೨ನೇ ಕ್ಲಾರ್ಕರಾಗಿರುವ ರಾ| ಎಸ್ ರಾಮಕೃಷ್ಣಕಾಮತರವರು ೧ನೇ ಗ್ರೇಡ್ ರೆವಿನ್ಯು ಇನ್ಸ್ಪೆಕ್ಟರರಾಗಿ ನೇಮಿಸಲ್ಪಟ್ಟು ಮಂಗಳೂರು ಫಿರ್ಕದಲ್ಲಿ ಕೆಲಸ ನೋಡಬೇಕಾಗುವದು.

೧ನೇ ಗ್ರೇಡ್ ಲೇಂಡ್ ರಿಕೋರ್ಡ್ಸ ಇನ್ಸ್ಪೆಕ್ಟರರಾದ ರಾ| ಪಿ ಆನಂದರಾಯರು ಕುಂದಾಪುರ ಡಿವಿಜನಲ್ ಆಫೀಸಿನ ೨ನೇ ಕ್ಲಾರ್ಕರಾಗಿ ನೇಮಿಸಲ್ಪಟ್ಟಿರುವರು

೧ನೇ ಗ್ರೇಡ್ ರೆವಿನ್ಯು ಇನ್ಸ್ಪೆಕ್ಟರರಾದ ರಾ| ಎಸ್. ಡಿ ಸೋಜರವರು ೧ನೇ ಗ್ರೇಡ್ ಲೇಂಡ್ ರಿಕೋರ್ಡ್ಸ ಇನ್ಸ್ಪೆಕ್ಟರರಾಗಿ ನೇಮಿಸಲ್ಪಟ್ಟಿರುವರು ಆದರೆ ಕಲೆಕ್ಟರ ಆಫೀಸಿನಲ್ಲಿ ಆಕ್ಟಿಂಗ್ ಕ್ಲಾರ್ಕರ ಕೆಲಸ ಮಾಡಬೇಕಾಗುವದು.

೨ನೇ ಗ್ರೇಡ್ ರೆವಿನ್ಯು ಇನ್ಸ್ಪೆಕ್ಟರರಾದ ಮು| ಸಿ ಪ್ಯಾಸರವರು ಆಕ್ಟಿಂಗ್ ೧ನೇ ಗ್ರೇಡ್ ಲೇಂಡ್ ರಿಕೋರ್ಡ್ಸ ಇನ್ಸ್ಪೆಕ್ಟರರಾಗಿ ನೇಮಿಸಲ್ಪಟ್ಟಿರುವರು ಆದರೆ ಪುತ್ತೂರು ಫಿರ್ಕದಲ್ಲಿ ರೆವಿನ್ಯು ಇನ್ಸ್ಪೆಕ್ಟರ ಕೆಲಸದಲ್ಲಿರಬೇಕಾಗುವದು

ಉಪ್ಪಿನಂಗಡಿ ತಾಲೂಕು ಆಫೀಸಿನ ಕ್ಲಾರ್ಕರಾದ ರಾ| ಬಿ ರಾಮಪ್ಪರವರು ಆಕ್ಟಿಂಗ್ ೨ನೇ ಗ್ರೇಡ್ ರೆವಿನ್ಯು ಇನ್ಸ್ಪೆಕ್ಟರರಾಗಿ ನೇಮಿಸಲ್ಪಟ್ಟಿರುವರು ಆದರೆ ಮಂಗಳೂರು ತಾಲೂಕು ಲೇಂಡ್ ರಿಕೋರ್ಡ್ಸ ಇನ್ಸ್ಪೆಕ್ಟರ ಕೆಲಸದಲ್ಲಿರಬೇಕಾಗುವದು

೧ನೇ ಗ್ರೇಡ್ ರೆವಿನ್ಯು ಇನ್ಸ್ಪೆಕ್ಟರರಾದ ರಾ| ಕೆ ಶ್ರೀನಿವಾಸರಾಯರು ೧ನೇ ಗ್ರೇಡ್ ಲೇಂಡ್ ರಿಕೋರ್ಡ್ಸ ಇನ್ಸ್ಪೆಕ್ಟರರಾಗಿ ನೇಮಿಸಲ್ಪಟ್ಟು ಕುಂದಾಪುರ ತಾಲೂಕಿನಲ್ಲಿ ಕೆಲಸ ಮಾಡಬೇಕಾಗುವದು

ರಾ| ಎಮ್. ರಾಮಪ್ಪನವರು ಇತರ ಡ್ಯುಟಿಯ ಮೇಲಿರುವದರಿಂದ ಕುಂದಾಪುರ ಡಿವಿಜನಲ್ ಆಫೀಸಿನ ಕ್ಲಾರ್ಕರಾಗಿರುವ ರಾ| ಪಿ. ವಾಮನಭಂಡಾರಿಯವರು ಆಕ್ಟಿಂಗ್ ೨ನೇ ಗ್ರೇಡ್ ಇನ್ಸ್ಪೆಕ್ಟರರಾಗಿ ನೇಮಿಸಲ್ಪಟ್ಟಿದ್ದಾರೆ.

೨ನೇ ಗ್ರೇಡ್ ರೆವಿನ್ಯು ಇನ್ಸ್ಪೆಕ್ಟರರಾದ ರಾ| ಟಿ. ನರಸಿಂಗರಾಯರು ೨ನೇ ಗ್ರೇಡ್ ಲೇಂಡ್ ರಿಕೋರ್ಡ್ಸ ಇನ್ಸ್ಪೆಕ್ಟರರಾಗಿ ನೇಮಿಸಲ್ಪಟ್ಟಿದ್ದಾರೆ. ಆದರೆ ಪುತ್ತೂರು ಡಿವಿಜನಲ್ ಆಫೀಸಿನ ಆಕ್ಟಿಂಗ್ ೨ನೇ ಕ್ಲಾರ್ಕ ಕೆಲಸದಲ್ಲಿರಬೇಕಾಗುವದು.

೧ನೇ ಗ್ರೇಡ್ ಲೇಂಡ್ ರಿಕೋರ್ಡ್ಸ ಇನ್ಸ್ಪೆಕ್ಟರರಾದ ರಾ| ಎಸ್ ಗೋಪಾಲರಾಯರು ೧ನೇ ಗ್ರೇಡ್ ರೆವಿನ್ಯು ಇನ್ಸ್ಪೆಕ್ಟರರಾಗಿ ನೇಮಿಸಲ್ಪಟ್ಟು ಬ್ರಹ್ಮಾವರ ಫಿರ್ಕದಲ್ಲಿ ಕೆಲಸ ಮಾಡಬೇಕಾಗುವದು.

೨ನೇ ಗ್ರೇಡ್ ಲೇಂಡ್ ರಿಕೋರ್ಡ್ಸ ಇನ್ಸ್ಪೆಕ್ಟರರಾಗಿರುವ ರಾ| ಬಿ ಕೆ ಕೃಷ್ಣರಾಯರು ೨ನೇ ಗ್ರೇಡ್ ರೆವಿನ್ಯು ಇನ್ಸ್ಪೆಕ್ಟರರಾಗಿ ನೇಮಿಸಲ್ಪಟ್ಟು ಕಾರ್ಕಳ ಫಿರ್ಕದಲ್ಲಿ ಕೆಲಸ ಮಾಡಬೇಕಾಗುವದು.

ಕಾಸರಗೋಡು ತಾಲೂಕು ಆಫೀಸಿನ ಕ್ಲಾರ್ಕ ರಾ| ಎ ನಾರಾಯಣರಾಯರು ಆಕ್ಟಿಂಗ್ ೨ನೇ ಗ್ರೇಡ್ ಲೇಂಡ್ ರಿಕೋರ್ಡ್ಸ ಇನ್ಸ್ಪೆಕ್ಟರರಾಗಿ ನೇಮಿಸಲ್ಪಟ್ಟು ಉಪ್ಪಿನಂಗಡಿ ತಾಲೂಕಿನಲ್ಲಿ ಕೆಲಸ ಮಾಡಬೇಕಾಗುವದು

೨ನೇ ಗ್ರೇಡ್ ರೆವಿನ್ಯು ಇನ್ಸ್ಪೆಕ್ಟರರಾದ ರಾ| ಎಚ್ ನರಸಿಂಗರಾಯರು ೨ನೇ ಗ್ರೇಡ್ ಲೇಂಡ್ ರಿಕೋರ್ಡ್ಸ ಇನ್ಸ್ಪೆಕ್ಟರರಾಗಿ ನೇಮಿಸಲ್ಪಟ್ಟು ಕಾಸರಗೋಡು ತಾಲೂಕಿನಲ್ಲಿ ಕೆಲಸ ಮಾಡಬೇಕಾಗುವದು

೨ನೇ ಗ್ರೇಡ್ ಲೇಂಡ್ ರಿಕೋರ್ಡ್ಸ ಇನ್ಸ್ಪೆಕ್ಟರರಾದ ರಾ| ಬಿ ನರಸಿಂಗರಾಯರು ೨ನೇ ಗ್ರೇಡ್ ರೆವಿನ್ಯು ಇನ್ಸ್ಪೆಕ್ಟರರಾಗಿ ನೇಮಿಸಲ್ಪಟ್ಟು ಗುರ್ಪುರ ಫಿರ್ಕದಲ್ಲಿ ಕೆಲಸ ಮಾಡಬೇಕಾಗುವದು

ರಾ| ಆರ್ ವಾಸುದೇವರಾಯರು ರಜೆಯಲ್ಲಿರುವದರಿಂದ ಮಂಗಳೂರು ತಾಲೂಕು ಆಫೀಸಿನ ಕ್ಲಾರ್ಕರಾದ ರಾ| ಎಸ್. ಯು ಕೃಷ್ಣರಾಯರು ಆಕ್ಟಿಂಗ್ ೨ನೇ ಲೇಂಡ್ ರಿಕೋರ್ಡ್ಸ ಇನ್ಸ್ಪೆಕ್ಟರರಾಗಿ ನೇಮಿಸಲ್ಪಟ್ಟು ಉಡ್ಪಿ ತಾಲೂಕಿನಲ್ಲಿ ಕೆಲಸ ಮಾಡಬೇಕಾಗಿರುವದು.

ಕಾಸರಗೋಡು ತಾಲೂಕು ಆಫೀಸಿನ ಕ್ಲಾರ್ಕ ರಾ| ಎಸ್. ಸುಬ್ರಾಯಕಾಮತರು ಗುರ್ಪುರ ಫಿರ್ಕದ ಟೆಂಪರರಿ ರೆವಿನ್ಯು ಇನ್ಸ್ಪೆಕ್ಟರರಾಗಿ ನೇಮಿಸಲ್ಪಟ್ಟಿರುವರು ಆದರೆ ಶಂಕರನಾರಾಯಣ ಫಿರ್ಕದಲ್ಲಿ ಕೆಲಸ ಮಾಡಬೇಕಾಗುವದು

ಕಲೆಕ್ಟರ ಆಫೀಸಿನ ಕ್ಲಾರ್ಕರಾದ ಮು| ಅಹಮದ್ ಹುಸೇನ್ ಖಾನರವರು ಕೋಟ ಫಿರ್ಕದ ಟೆಂಪರರಿ ರೆವಿನ್ಯು ಇನ್ಸ್ಪೆಕ್ಟರರಾಗಿ ನೇಮಿಸಲ್ಪಟ್ಟಿರುವರು ಆದರೆ ಉಪ್ಪಿನಂಗಡಿ ಫಿರ್ಕದಲ್ಲಿ ಕೆಲಸ ಮಾಡಬೇಕಾಗಿರುವದು

ದಕ್ಷಿಣ ಕನ್ನಡಾ ಜಿಲ್ಲಾ ಕಲೆಕ್ಟರ ದೊರೆಗಳಾದ ಮು| ಇ ಎಸ್ ಲ್ಯೊಯ್ಡ್ ಐ ಸಿ ಎಸ್ ದೊರೆಗಳವರು ಇತರ ಡ್ಯೂಟಿಯ ಮೇಲೆ ನೇಮಿಸಲ್ಪಟ್ಟಿರುವದರಿಂದ ಸಬ್ ಕಲೆಕ್ಟರ್ ಮತ್ತು ಜ್ಯೊಂಟ್ ಮೇಜಿಸ್ಟ್ರೇಟರಾಗಿರುವ ಮು| ಎ ಜೆ ಕರ್ಗೆನ್‌ವೆನ್ ಐ ಸಿ ಎಸ್ ದೊರೆಗಳವರು ಆಕ್ಟಿಂಗ್ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿರುತ್ತಾರೆ.

ಇಲ್ಲಿಯ ಡಿಸ್ಟ್ರಿಕ್ಟ್ ಮುನ್ಸಿಫರಾಗಿ ನೇಮಿಸಲ್ಪಟ್ಟ ಮು| ರಾ| ಜಗನ್ನಾಥರಾವ್‌ರವರು ಇದೇ ತಾ. ೧೧ರಲ್ಲು ಇಲ್ಲಿಗೆ ತಲಪಿ ತಾ ೧೨ರಲ್ಲು ಚಾರ್ಜು ತಕ್ಕೊಂಡಿರುವರು

ಬೈಸಿಕಲ್ ರಿಪೇರರ್ ತಿಮ್ಮಪ್ಪ ಬಂಗೇರನು ಪೋರ್ಟು ಆಫೀಸಿನ ಕ್ಲಾರ್ಕರಾದ ಮಿ| ಲೋಬೋರವರ ರಿಪೇರಿಗೆ ಕೊಟ್ಟ ಬೈಸಿಕಲನ್ನು ದುರುಪಯೋಗ ಮಾಡಿದ್ದನಾಗಿ ಇ. ಪಿ ಕೋಡಿನ ೪೦೬ನೇ ಪ್ರಕರಣದ ಮೇಲೆ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದನಷ್ಟೆ. ಈ ಮೊಕದಮೆಯು ವಿಚಾರಣೆ ನಡೆದು ಆಪಾದಿತನಿಗೆ ೩ ತಿಂಗಳ ಕಠಿಣ ಸಜಾ ವಿಧಿಸೋಣಾಗಿರುವದು

ಕಳೆದ ವಾರ ಸೆಷನ್ಸ್ ಕೋರ್ಟಿನಲ್ಲಿ ಕುಂದಾಪುರ ಸಬ್ ಮೆಜಿಸ್ಟ್ರೇಟರಿಂದ ಕಮಿಟ್ ಮಾಡಲ್ಪಟ್ಟ ದರೋಡೆ ಮೊಕದಮೆಯು ತನಕೆಯಾಯಿತು, ಈ ಮೊಕದಮೆಯಲ್ಲಿ ಇಬ್ಬರು ಬ್ರಾಹ್ಮಣರು, ೫ ಮಹಮ್ಮದೀಯರು ಕೂಡಿ ಕುಂದಾಪುರ ತಾಲೂಕು ಕುಂದಬಾರಂದಾಡಿ ಗ್ರಾಮದ ವೆಂಕಟ್ರಮಣ ಎಂಬವರ ಮನೆಗೆ ರಾತ್ರಿಕಾಲ ನುಗ್ಗಿ ದರೋಡೆ ನಡಿಸಲು ಯತ್ನ ನಡಿಸಿದ್ದರೆಂಬದಾಗಿ

ಆಪಾದಿಸಲ್ಪಟ್ಟಿದ್ದರು. ಸೆಶ್ಯನ್ಸ್ ಜಡ್ಜರು ಈ ಮೊಕದಮೆಯನ್ನು ತನಿಕೆ ನಡಿಸಿ ತಕ್ಕ ರುಜುವಾತಿಲ್ಲ ಎಂಬ ಸಬಬಿನ ಮೇಲೆ ಮುದ್ದೆಯಾಳಿಯುರೆಲ್ಲರನ್ನು ಖುಲಾಸು ಪಡಿಸಿದರು.

ಮಾರಿಗುಡಿ ಜಾತ್ರೆಗೆ ಹೋಗಿದ್ದವರ ಕಿಸೆಯಿಂದ ಕಳವು ಮಾಡಿದ್ದನಾಗಿ ಸೆಶ್ಯನ್ಸ್ ವಿಚಾರಣೆಗೆ ಗುರಿಮಾಡಲ್ಪಟ್ಟ ಕೆ. ಡಿ. ಅಣ್ಣುಸೆಟ್ಟಿಗೆ ಸೆಶ್ಯನ್ಸ್ ಜಡ್ಜರು ಒಂದು ವರ್ಷದ ಕಠಿಣ ಸಜಾ ವಿಧಿಸಿದರು.

ಮೆಸ್ಸರ್ಸ್ ಹೆಬ್ಬಾರ ಬ್ರದರ್ಸ್‌ರವರು ಇಲ್ಲಿಯ ಮರಾ| ಬಿ. ಸುಬ್ಬಯ ಸೆಟ್ಟರವರಿಗೆ ೭ ಜನರು ಕೂತುಕೊಳ್ಳುವ ಮೋಟರ್ ಬಂಡಿ ಎಂದು ಹೇಳಿ ೪—೫ ಜನರು ಕೂತುಕೊಳ್ಳುವ ಹದಾದ ಮೋಟರ್ ಬಂಡಿಯನ್ನು ಕಳುಹಿಸಿಕೊಟ್ಟಿದ್ದರಾಗಿ ಮ| ರಾ| ಬಿ ಸುಬ್ಬಯ್ಯ ಸೆಟ್ಟರವರು ಇಲ್ಲಿಯ ಡ್ಯುಪಿಟಿ ಕಲೆಕ್ಟರರಲ್ಲಿ ಮೆಸ್ಸರ್ಸ್ ಹೆಬ್ಬಾರ ಬ್ರದರ್ಸ್‌ರವರ ಮೇಲೆ ದಗಾ ಫಿರ್ಯಾದಿ ಕೊಟ್ಟಿದ್ದರು. ಡ್ಯುಪಿಟಿ ಕಲೆಕ್ಟರವರು ಈ ಮೊಕದಮೆಯು ತನಿಕೆ ನಡಿಸಿ ಮೊಕದಮೆಯನ್ನು ತೆಗೆದು ಹಾಕಿದರೆಂಬುದಾಗಿ ಕೇಳುತ್ತೇವೆ.

ಇದೇ ಕಳದ ಜುಲೈ ತಾ. ೯ನೇ ಶುಕ್ರವಾರ ಇಲ್ಲಿಯ ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗ್ ಜರಗಿತು. ಈ ಡಿಸ್ಟ್ರಿಕ್ಟಿನಲ್ಲಿರುವ ದಾರಿ ಇತ್ಯಾದಿಗಳ ಮಳೆಗಾಲದ ದುರುಸ್ತಿ ಬಗ್ಯೆ ಖರ್ಚಾದ ಹಣದ ಲೆಕ್ಕವು ಈ ಸಭೆಯ ಮುಂದಿಡಲ್ಪಟ್ಟು ಬೋರ್ಡಿನವರಿಂದ ಸೆಂಕ್ಶನ್ ಆಯಿತು.

ಕುಂದಾಪುರ ತಾಲೂಕಿನಲ್ಲಿ ಕಾರಿಜೆ ಗ್ರಾಮದಲ್ಲಿ ಒಂದು ರಸ್ತೆಯನ್ನು ಮಾಡುವರೆ ರೂ. ೩೨೦೦; ಕೋಣಿಯಿಂದ ಕೋಟೇಶ್ವರದ ವರೆಗೆ ದಾರಿಯನ್ನು ಕಡಿಯುವರೆ ರೂ. ೨೪೨೦ ಸೆಂಕ್ಶನ್ ಆಯಿತು.

ಮಂಗಳೂರಿನ ಹಳೇ ಬಪ್ಪು ರಸ್ತೆಯನ್ನು ದುರುಸ್ತಿ ಮಾಡುವ ಬಗ್ಗೆ ಬೋರ್ಡಿನವರು ೪೦೦೦ ರೂಪಾಯಿ ಸೆಂಕ್ಶನ್ ಮಾಡಿರುವರು.

ಮಂಗಳೂರು ಪಾಣೆಮಂಗಳೂರು ರೈಲ್ವೆಯನ್ನು ತೆರೆಯುವ ಬಗ್ಗೆ ಸರ್ವೆ ಮಾಡುವ ಕೆಲಸವನ್ನು ಎಸ್. ಐ. ರೈಲ್ವೆ ಕಂಪೆನಿಯವರು ಇಂಪೀರಿಯಲ್ ಫಂಡಿನ ಖರ್ಚಿನಿಂದ ಕೈಕೊಳ್ಳುವರೆಂದೂ ಡಿಸ್ಟ್ರಿಕ್ಟ್ ಬೋರ್ಡಿನವರು ಈ ಬಗ್ಗೆ ಖರ್ಚು ಕೊಡುವ ಅವಶ್ಯವಿಲ್ಲವೆಂದೂ ರೈಲ್ವೆ ಬೋರ್ಡಿನವರಿಂದ ಬಂದ ಪತ್ರವು ಬೋರ್ಡು ಮೀಟಿಂಗಿನ ಮುಂದಿಡೋಣಾಯಿತು.

ಮಂಗಳೂರು ಉಳ್ಳಾಲ ರೈಲ್ವೆ ಸಂಬಂಧ ಎಸ್. ಐ. ರೈಲ್ವೆ ಕಂಪೆನಿ ಏಜಂಟರಿಂದ ಬಂದ ಪತ್ರವು ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗಿನ ಮುಂದಿಡೋಣಾಯಿತು. ಮತ್ತೆ ಒಂದು ಸರ್ವೆ ಮಾಡುವ ಬಗ್ಗೆ ಬೇಕಾದ ಹಣವು ಡಿಸ್ಟ್ರಿಕ್ಟ್ ಬೋರ್ಡಿನವರಿಂದ ಕೊಡೋಣಾಗಲಿಕ್ಕಿಲ್ಲ ಎಂಬದಾಗಿ ಈ ದಿನದ ಸಭೆಯಲ್ಲಿ ನಿರ್ಣಯವಾಗಿರುವದು.

ಮೈಸೂರು ಸರಕಾರದವರು ಕಳಸದಿಂದ ಮೈಸೂರು ಸಂಸ್ಥಾನದ ಗಡಿಯುವರೆಗೆ ದಾರಿಯನ್ನು ಕಡಿಯುವದಾದರೆ ಎಳನೀರ್ ಗಟ್ಟದ ಮಾರ್ಗವಾಗಿ ಬೆಳ್ತಂಗಡಿಯಿಂದ ಮೈಸೂರು ಸರಹದ್ದಿನ ವರೆಗೆ ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಬೋರ್ಡಿನವರು ಮಾರ್ಗವನ್ನು ಮಾಡುವರೋ ಎಂಬದಾಗಿ ಮೈಸೂರು ಸಂಸ್ಥಾನದ ಅಸಿಸ್ಟಾಂಟ್ ರೆಸಿಡೆಂಟರವರಿಂದ ಬಂದ ಪತ್ರವು ಸಭೆಯ ಮುಂದಿಡಲ್ಪಟ್ಟಿತು. ಈ ರಸ್ತೆಯನ್ನು ಬೋರ್ಡಿನವರು ಸಂತೋಷದಿಂದ ತೆರೆಯುವರೆ ಸಿದ್ಧರಾಗಿದ್ದಾರೆಂದೂ ಈ ಬಗ್ಗೆ ಡಿಸ್ಟ್ರಿಕ್ಟ್ ಬೋರ್ಡು ಇಂಜಿನಿಯರರ ಆಲೋಚನೆ ಕೇಳಿ ತಗಲಬಹುದಾದ ಖರ್ಚಿನ ಅಂದಾಜು ಪಟ್ಟಿಯನ್ನು ತಯಾರಿಸುವರೆ ಅವರನ್ನು ಕೇಳಿಕೊಳ್ಳಬೇಕೆಂದೂ ಸಭೆಯಲ್ಲಿ ನಿರ್ಣಯವಾಯಿತು.

ಅಸ್ಸಾಯಿಗೋಳಿಯಿಂದ ಕುನ್ನಾಡ್ ವರೆಗೆ ಒಂದು ದಾರಿಯನ್ನು ಕಡಿಯುವರೆ ರೂ. ೪೫೩೦; ತಣ್ಣೀರು ಭಾವಿಯಲ್ಲಿ ಒಂದು ಶಾಲೆಯನ್ನು ಕಟ್ಟಿಸುವರೆ ರೂ. ೨೪೬೦; ಮುಲ್ಕಿಯಲ್ಲಿ ಹುಡುಗರ ಶಾಲೆ ಕಟ್ಟಿಸುವರೆ ರೂ. ೬೯೯೦ ಸೆಂಕ್ಶನ್ ಆಗಿದೆ.

ಇಲ್ಲಿಯ ಟೌನ್ ಪೋಲಿಸ್ ಸಬ್ ಇನ್ಸ್‌ಪೆಕ್ಟರರಾದ ರಾ| ಕಳಂಬಿ ರಾಮಚಂದ್ರರಾಯರಿಗೆ ಸುಳ್ಯಕ್ಕೆ ವರ್ಗವಾಗಿಯದೆ.

ಪ್ರಿಟೆಷರಿಗೆ ದಕ್ಷಿಣ ಆಫ್ರಿಕದಲ್ಲಿ ಆದ ಜಯದ ವಾರ್ತೆಯು ಇಲ್ಲಿಗೆ ತಾ. ೧೨ರಲ್ಲು ತಲಪಿದಾಕ್ಷಣ ಇಲ್ಲಿಯ ಸರಕಾರಿ ಆಫೀಸುಗಳಲ್ಲಿಯೂ, ಶಾಲೆಗಳಲ್ಲಿಯೂ ಖಾಸಗಿ ಕಾರ್ಖಾನೆ, ಕಂಪೆನಿ ಇತ್ಯಾದಿಗಳಲ್ಲಿಯೂ ಬ್ರಿಟಿಷ್ ಜಯಪತಾಕೆಯು ಏರಿಸಲ್ಪಟ್ಟಿತು. ಶಾಲೆಗಳ ಮಕ್ಕಳಿಗೆ ಸಂತೋಷಾರ್ಥವಾಗಿ ರಜೆಯು ಕೊಡೋಣಾಗಿತ್ತು. ಸೈಂಟ್ ಆಲೋಷಿಯಸ್ ಕಾಲೇಜಿಗೆ ಇಡೀ ದಿನ ರಜೆ ಇತ್ತು.

ಬಪ್ಪಿನ ಮಿಸ್. ಎಮ್. ಕ್ಯೊಲೋರವರಿಗೂ ಬಲ್ಮರದ ಮಿ| ಸ್ಟೀಫನ್ ಸಿಮಿಯೋನರಿಗೂ ಆದ ವಿವಾಹವನ್ನು ರದ್ದುಮಾಡಬೇಕಾಗಿ ವಧುವಿನ ಕುಟುಂಬದವರು ಸೆಶನ್ಸ್ ಜಡ್ಜರಲ್ಲಿ ಮನವಿ ಮಾಡಿಕೊಂಡಿದ್ದರೆಂದು ತಿಳಿಸಿತ್ತಷ್ಟೆ. ಇದೇ ತಾ. ೧೪ರಲ್ಲು ಮಿಸ್. ಎಮ್. ಕ್ಯೊಲೋರವರು ಸೆಶನ್ಸ್ ಕೋರ್ಟಿಗೆ ಖುದ್ದಾಗಿ ಹಾಜರಾಗಬೇಕಾಗಿ ಜಡ್ಜರು ಕೊಟ್ಟ ಹುಕುಮಿನ ಪ್ರಕಾರ ಅವರು ಹಾಜರಾದಲ್ಲಿ ಜಡ್ಜರು ಈ ಸಂಬಂಧ ಮಿಸ್. ಕ್ಯೊಲೋರವರ ಕೂಡೆ ಕೆಲವು ಪ್ರಶ್ನೆಗಳನ್ನು ಕೇಳಿ, ನಂತರ ಮಿಸ್ ಕ್ಯೊಲೋರವರನ್ನು ವೈದ್ಯರು ನೋಡಿ ಅಭಿಪ್ರಾಯ ಹೇಳಬೇಕೆಂದು ಅಜ್ಞಾಪಿಸಿರುವರೆಂದು ತಿಳಿಯುತ್ತೇವೆ.

ಮಂಗಳೂರು ತಹಸೀಲದಾರರಾಗಿದ್ದ ರಾ| ತಿ. ಆನಂದರಾಯರು ಆಕ್ಟಿಂಗ್ ಡ್ಯಪಿಟಿ ಕಲೆಕ್ಟರರಾಗಿ ನೇಮಿಸಲ್ಪಟ್ಟಿರುವರು. ಇವರು ಸದ್ಯದಲ್ಲಿ ಕುಂದಾಪುರ ಡಿವಿಜನಿನ ಚಾರ್ಜು ತಕ್ಕೊಳ್ಳುವರಾಗಿ ವರ್ತಮಾನವಿದೆ.

ತಾ. 14ನೇ ಬುಧವಾರ ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ಕಾಶೀ ಮಠದ ಸ್ವರ್ಗಸ್ಥ ಗುರುಗಳವರ ಪುಣ್ಯತಿಥಿಯು ಬಹಳ ವಿಜ್ರಂಭಣೆಯಿಂದ ಆಚರಿಲ್ಪಟ್ಟಿತು. ಈ ದಿನ ದೇವಸ್ಥಾನದಲ್ಲಿ ಸಹಸ್ರ ಭೋಜನ, ಉತ್ಸವ, ಪೂಜೆ, ಇತ್ಯಾದಿ ವಿನಿಯೋಗಗಳು ಸಾಂಗ್ಯವಾಗಿ ನೆರೆದವು.

ಮಂಗಳೂರಿನ ಮಹಿಳಾ ಸಭೆಯವರು ಇಲ್ಲಿಯ ಗಣಪತಿ ಸೆಕೆಂಡರಿ ಶಾಲೆಯಲ್ಲಿ ಕುಲಸ್ತ್ರೀಯರಿಗೆ ಕೆಲವು ಉಪಯುಕ್ತ ಉಪನ್ಯಾಸಗಳನ್ನು ಕೊಡಿಸುವ ಏರ್ಪಾಡನ್ನು ಮಾಡಿರುತ್ತಾರೆ. ಪ್ರಥಮ ಉಪನ್ಯಾಸವು ರಾ| ತೊನ್ಸೆ ಮಂಗೇಶರಾಯರಿಂದ ಇದೇ ಬರುವ ಆದಿತ್ಯವಾರ 4 ಗಂಟೆಗೆ ಕೊಡೋಣಾಗುವುದು.

~~~~

ಮದ್ರಾಸ್ ಆಸ್ಪತ್ರೆ ಹಡಗ ಫಂಡಿಗೆ ತಿಂಗಳ ವಂತಿಗೆ ಕೊಟ್ಟವರ ಮೊಬಲಗುಗಳೂ ಹೆಸರುಗಳೂ.

ಕಳದ ಸಂಚಿಕೆಯಿಂದ ಮುಂದರಿಸಿದುದು.

ರಾವ್ ಬಹದ್ದೂರ್ ಎ. ರಾಮಯ್ಯ ಪೂಂಜ ರೂ. ೩; ದಿವಾನ್ ಬಹದ್ದೂರ್ ಎಮ್. ಎಮ್. ಬಂಗೇರ ರೂ. ೩; ಮಿ| ಎಸ್. ಆಲ್ವರಿಸ್ ರೂ. ೩; ಮ. ರಾ. ಎಚ್. ಕೊರಗಪ್ಪ ರೂ. ೨—೮—೦; ಮ. ರಾ. ಆರ್. ಶಿವರಾವ್ ರೂ. ೨; ಮ. ರಾ. ಎ. ಶ್ರೀನಿವಾಸಪೈ ರೂ. ೨; ಮ. ರಾ. ಕೆ. ಪಿ. ರಾಮರಾವ್ ರೂ. ೨; ಮ. ರಾ. ಎ. ದೇವಪ್ಪ ಪೂಂಜ ರೂ. ೨. ಡಾಕ್ಟರ್ ಎಲ್. ಪಿ. ಫೆರ್ನಾಂಡಿಸ್ ರೂ. ೨; ದಿವಾನ್ ಬಹದ್ದೂರ್ ಎ. ಪಿಂಟೋ ರೂ. ೨; ಮ. ರಾ. ಕತ್ರಿ ನರಶಿಂಗರಾವ್ ರೂ. ೨; ಮ. ರಾ. ಕಬಾಡ ರಾಮರಾವ್ ರೂ. ೨; ಮ. ರಾ. ಗೊಲ್ಲರಕೇರಿ ಕೃಷ್ಣರಾವ್ ರೂ. ೨; ಮ. ರಾ. ಯು. ಕೃಷ್ಣಯ್ಯ ರೂ. ೧; ಮ. ರಾ. ಗಂಗೊಳ್ಳಿ ಕೃಷ್ಣರಾವ್ ರೂ. ೧; ಮ. ರಾ. ಯು. ರಾಘುವೇದ್ರರಾವ್ ರೂ. ೧; ಮಿ| ಜಿ. ಎಲ್. ಸಾಲ್ಡಾಂಞ್ಣ ರೂ. ೧; ಮಿ| ಎಸ್. ಲೋಬೊ ರೂ ೧; ಮ. ರಾ. ವಿ. ರಾಮರಾವ್ ರೂ. ೧; ಮ. ರಾ. ಯು. ಬಾಬುರಾವ್ ರೂ. ೧; ಮ. ರಾ. ಯು. ಕೃಷ್ಣಯ್ಯ ಸುಲಯ ರೂ. ೧; ಮ. ರಾ. ಎ. ಬಿ. ಶೆಟ್ಟಿ ರೂ. ೧; ಮ. ರಾ. ಬಿ. ಎಮ್. ಹೆಗಡೆ ರೂ. ೧; ಮ. ರಾ. ಎನ್. ಒಡಿಯಪ್ಪ ಗುರಿಕಾರ ರೂ. ೧; ಮ. ರಾ. ಎನ್. ಜಿ. ಸುವರ್ಣ ರೂ. ೧; ಮಿ| ಜೆ. ಸಿಕೇರ ರೂ. ೧; ಮ. ರಾ. ಎಲ್. ರಾಮರಾವ್ ರೂ. ೧; ಮ. ರಾ. ಗೋಪಾಲಕೃಷ್ಣರಾವ್ ರೂ. ೧; ಮ. ರಾ. ಕತ್ರಿ ಮಂಗೇಶರಾವ್ ಆ. ೮; ಮ. ರಾ. ಎಸ್. ಅಮೃತರಾವ್ ಆ. ೮; ಮ. ರಾ. ಆರ್. ಪಿ. ಪಂಡಿತ್ ಆ. ೮; ಮ. ರಾ. ಟಿ. ಮಂಗೇಶರಾವ್ ಆ. ೮, ಮ. ರಾ. ಐತಪ್ಪ ಪೂಜಾರಿ ಆ. ೮; ಮ. ರಾ. ಬಿ. ಬಾಬು ಆ. ೮; ಮ. ರಾ. ಎಮ್. ದೂಮಪ್ಪ (ಕಂಟ್ರಾಕ್ಟರ್) ಆ. ೮; ಮ. ರಾ. ಬಿ. ಪದ್ಮಪ್ಪ ಆ. ೮; ಮ. ರಾ. ಎಚ್. ವೀರಪ್ಪ ಆ. ೮; ಮ. ರಾ. ಕೆ. ಅಮಣ್ಣ ಆ. ೮; ಮ. ರಾ. ಪಿ. ವೆಂಕಟರಾವ್ ಆ. ೪; ಮ. ರಾ. ಬಿ. ಎಮ್. ತಿಂಗಳಾಯ ಆ. ೪; ಮ. ರಾ. ಎನ್. ಉಮ್ಮಪ್ಪ ಆ ೪; ಮ. ರಾ. ಬಿ. ಸೋಮಪ್ಪ ಆ. ೪; ಮ. ರಾ. ಸೋಮಯ್ಯ ಮೇಸ್ತ್ರಿ ಆ. ೪; ಮ. ರಾ. ಎನ್. ಮುತ್ತಪ್ಪ ಆ. ೪; ಜುಮ್ಲ ರೂ. ೩೬೬—೧೧—೧

~~~~

ನೋಟೀಸು.

ರೂ. ೧೦೦ ಇನಾಮು.

ಈ ಕೆಳಗೆ ತೋರಿಸಿದ ಕರನ್ಸಿ ನೋಟುಗಳು ಆರು, ಇದೇ ತಿಂಗಳ ತಾ. 12ರಲ್ಲು ಬೇಂಕಿನಿಂದ ಪಡಕೊಂಡು ನಮ್ಮ ಭಂಡಸಾಲೆಗೆ ಬರುವಾಗ್ಯೆ ಕಾಣೆಯಾಗಿ ಹೋಗಿಯವೆ. ಸದರಿ ನೋಟುಗಳ ನಂಬ್ರ ಮತ್ತು ವಿವರ.

1. C. B. 8	21442	ರೂಪಾಯಿ	100—0—0
C. B. 5	61091	„	100—0—0
C. B. 11	11536	„	100—0—0
C. B. 3	34081	„	100—0—0

ಇನ್ನು 2 ನೋಟುಗಳ ನಂಬ್ರ ತಿಕ್ಕಲಿಲ್ಲ. ಹೀಗೆ ರೂಪಾಯಿ 600—0—0ರ ನೋಟುಗಳು ಕಾಣೆಯಾಗಿರುತ್ತವೆ. ಸದರಿ ನೋಟುಗಳು ತಲಾಶಿಮಾಡಿ ಕೊಟ್ಟವರಿಗೆ ರೂಪಾಯಿ 100—0—0 ಇನಾಮು ಕೊಡಲಾಗುತ್ತದೆ.

ಸಾ| ಮುಹಮ್ಮದ್ ಇಬ್ರಾಹಿಂ ಮುಹಮ್ಮದ್ ಜಾಫರ್ ಮತ್ತು ಕಂಪನಿ,
ಮರ್ಚಂಟ್ಸ್, ಬಂದರ,
ಮಂಗಳೂರು.

ತಾ. 14—7—1915.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾಭರಣ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳ ೩ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಚಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨-೮-೦.

೩. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವ ಲೇಹ. ರಕ್ತ ಅಥವಾ ಮೊಳೆಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೫. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು ತೊಲೆಗೆ ೨ ರೂ.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುರ್ಲುಶ್ವಾಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦ ಕಲ್ಯಾಣ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತಬಾಧೆಗಳನ್ನು ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೩ ಸರ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಬ್ರಹ್ಮಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ನಮ್ಮ ವಿಳಾಸ:—ಬಿ ಎಮ್. ನಾಥ್ ಮತ್ತು ಕಂಪೆನಿ,

ವೆಪರಿ ಪೋಸ್ಟು ಮದರಾಸು.

B. M. Nath & Co., *Ayurvedic Chemists,*

Vepery Post. MADRAS.

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.

ಬಲ್ಲಾರ ಮಿಶ್ಶನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಶನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಪೆಬ್ಲ್ ಎಂಬ ಗುರುಸು ಕಲ್ಲು ಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ಧೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.



ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ನಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ,

ಹಂಪನ್‌ಕಟ್ಟಾ, ಮಂಗಳೂರು

ಯುನಿವರ್ಸೆಲ್ ಎಸ್ಯುರೆನ್ಸ್ ಕೊ, ಲಿಮಿಟೆಡ್.

ಹೆಡ್ ಆಫೀಸು:—191, ಬೌ ಬಜಾರ, ಕಲ್ಕತ್ತಾ.

ಸರಕಾರದ ಭದ್ರತೆಯ ಮೇಲ್ವಿಚಾರದಲ್ಲಿ ನಡಿಯುತ್ತಿರುವುದು.

ಭಂಡವಾಳ ರೂ. 10,00,000.

ಈ ತನಕ ಕೊಡೋಣಾದ ವಿಮೆ ಹಕ್ಕುಗಳ ಮೊಬಲಗು ಸುಮಾರು 8,00,000.

ಫಂಡು—ರೂ. 3,00,000ಕ್ಕೆ ಮಿಕ್ಕಿದೆ.

ಸರಕಾರದವರ ಭದ್ರತೆಯಲ್ಲಿ ರೂ. 50,000ವಿರುವುದು.

ಚೀಫ್ ಇನ್ಸೂರೆನ್ಸ್ ಸ್ಕೀಮ್ ಎಂಬ ವೈದ್ಯಪರೀಕ್ಷೆ ಇಲ್ಲದೆ ವಿಮೆ ಉತ್ತರಾಯಿಸಿಕೊಳ್ಳಬಹುದಾದ ಸರ್ವರಿಗೂ ಸಾಧ್ಯವಾದ ಸುಲಭ ಕ್ರಮ.

ಈ ಪ್ರಾಂತ್ಯಗಳಲ್ಲಿ ಯಾವ ವಿಮೆ ಕಂಪೆನಿಗಳಲ್ಲಾದರೂ ಈತನಕ ಇಂಥಾ ಅಗ್ಗ ದರಗಳ ವಿಮೆ ಉತ್ತರಾಯಿಸುವ ಏರ್ಪಾಡೇ ಇರುವದಿಲ್ಲ. ಭಾರತೀಯರಲ್ಲಿ ವಿಶೇಷವಾಗಿರುವ ಬಡವರಗೋಸ್ಕರವೇ ಈ ಕ್ರಮವು ಏರ್ಪಡಿಸಲ್ಪಟ್ಟಿರುತ್ತದೆ. ಪ್ರೊವಿಡೆಂಟ ಫಂಡುಗಳ ಕ್ರಮದ ಪ್ರಕಾರ ಮುಂದಕ್ಕೆ ಸಂಭವಿಸಬಹುದಾದ ಅನನುಕೂಲತೆಗಳು ಇದರಲ್ಲಿರವು. ವಿಮೆ ಉತ್ತರಾಯಿಸಿಕೊಳ್ಳುವ ಈ ನವೀನ ಅಗ್ಗ ದರಗಳ ಏರ್ಪಾಡು ಬಹಳ ಉಪಯುಕ್ತವಾದದ್ದು ಎಂತ ವಿಮೆ ಸಂಘಗಳ ವಿಶೇಷ ಮಾಹಿತಿದಾರರ ಅಭಿಪ್ರಾಯವಿರುವುದು. ನಿಶ್ಚಿತವಾದ ವಿಮೆ ಮೊಬಲಗುಗಳ ರೂಪಾಯಿ ಮತ್ತು ಅರ್ಧ ರೂಪಾಯಿಗಳ ಪೊಲಿಸಿಗಳು ಈ ಕ್ರಮದ ಮೇರೆಗೆ ಕೊಡೋಣಾಗುವವು.

ಸಾಮಾನ್ಯ ವಿಮೆ ಇಲಾಖೆ.

ಈ ಕಂಪೆನಿಯ ಈ ಇಲಾಖೆಯಲ್ಲಿ ವಿಮೆ ಉತ್ತರಾಯಿಸಿಕೊಳ್ಳುವವರ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಲಿರುವುದು. ಸಾಧ್ಯವಿರುವ ಅತ್ಯಂತ ಕಡಿಮೆಯ ದರಗಳು ಸಂಪೂರ್ಣವಾದ ಭದ್ರತೆಯು ಈ ಇಲಾಖೆಯ ವಿಶೇಷ ಪ್ರಯೋಜನಗಳಾಗಿರುವುದು. ಕಂಪೆನಿಯ ಲೆಕ್ಕದ ಸ್ಥಿತಿಗತಿಯನ್ನು ತೋರಿಸುವ ಮೊಖಾಬಿಲೆ ಪಟ್ಟಿಗಳನ್ನು ಈ ಕಂಪೆನಿಯ ವಿಷಯ ಪತ್ರಗಳ ಅಭಿಪ್ರಾಯವೇನೆಂಬುದನ್ನೂ ತರಿಸಿ ನೋಡಿರಿ.

ಒಳ್ಳೇ ಚಟುವಟಿಕೆಯ ಜಾಣರಾದ ಏಜಂಟರುಗಳು ಬೇಕಾಗಿರುವರು. ಶರ್ತಗಳ ಬಗ್ಗೆ ಕೆಳಗಣ ವಿಳಾಸಕ್ಕೆ ಬರಕೊಳ್ಳಬಹುದು.

ವಿಳಾಸ:— ಲ ಣ ರಾವ್ ಬ್ರದರ್ಸ್,

ಚೀಫ್ ಏಜಂಟ್ಸ್, ಕೆನರಾ, ಮೈಸೂರು, ಕೊಡಗು; ಪೋಸ್ಟು [illegible]

ESTABLISHED JULY 1906.

THE CANARA BANK, LIMITED, MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0
Issued Capital	225,000—0—0
Subscribed Capital	219,100—0—0
Paid up Capital	194,100—0—0
Deposits	421,405—9—6
Reserve Fund	3,500—0—0

Besides the uncalled capital of Rs. 25,000/- 25% of the net profits are added annually to the Reserve Fund. Rs. 21,685/ have been invested in Government Paper of the face value of Rs. 22,500/-

Dividends of not less than 6% paid during the past years and a bonus of 1% to 2% paid in addition during the last three years.

Fixed Deposits of Rs. 50/-and above in multiples of Rs. 5/ received for 3, 6, 12 and 24 months @ 4, 4½, 5 and 5½% respectively at the discretion of the managing committee

Short-notice Deposits requiring one weeks notice of withdrawal after one month received @ 2½% per annum at the discretion of the managing committee

Current Deposit Account opened free of charge.

Savings Bank Account opened for any sum not less than 4 As. and multiples thereof and interest paid @ 4⅛%.

Loans granted on proper securities and pledges.

Sealed Parcels for safe custody received on a moderate charge.

Canara Bank Ltd.,
Mangalore, 1st July 1915.

ನಿಯಮಿತ ಮೂಲ ಧನವು ರೂಪಾಯಿ	300,000—0—0
ಹುಟ್ಟಿಬಂದ ಮೂಲ ಧನವು „	225,000—0—0
ಪ್ರತಿಜ್ಞಾತ ಮೂಲ ಧನವು „	219,100—0—0
ಆಗತ ಮೂಲ ಧನವು „	194,100—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು ...	421,405—9—6
ರಕ್ಷಿತ ಧನವು	33,500—0—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡವುದಲ್ಲದೆ ಹಸಿ ಮೌಲ್ಯಗಳಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 21,685—0—0 ಸರಕಾರದ ರೂ. 22,500ರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುಮಾಲಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಇಲ್ಲಿ ಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾದೀತು. ಈ ಠೇವಣಾತಿಗಳಿಗೆ ಸೇಕಡಾ 4⅛ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ

ಮೊಹರು ಹಾಕಲ್ಪಟ್ಟ ಡಬ್ಬಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

P. Gopal Naik,
Secretary.

ಜಯವಿಜಯ

ಅಥವಾ

ತೂಗಾಡುವ ಅಸ್ಥಿಪಂಜರ.

ಗುಜರಾಥಿ ಭಾಷೆಯಿಂದ ಕನ್ನಡದಲ್ಲಿ ಹೊಸತಾಗಿ ಭಾಷಾಂತರವಾದದ್ದು,

ಈ ಗ್ರಂಥದ ಕುರಿತು "ಸತ್ಯದೀಪಿಕೆ" ಎಂಬ ವಾರಪತ್ರಿಕೆಯು ಪಡುವ ಅಭಿಪ್ರಾಯ:—"ಇದು ಬಹಳ ರಸಿಕವಾದ ಆಶ್ಚರ್ಯವುಳ್ಳ ಒಂದು ಕಥೆಯಾಗಿದೆ. ಅದನ್ನು ಓದತೊಡಗಿದವರಿಗೆ ಅದನ್ನು ತೀರಿಸುವ ತನಕ ವಿಶ್ರಾಂತಿ ದೊರಕದು. ದೇಶಸ್ಥರು ಸಹಾ ವಿಲಾಯತಿ ಕಾದಂಬರಿಗಳಂತೆ ಚೆಲೋ ಕಥೆಗಳನ್ನು ಬರೆಯಬಲ್ಲರೆಂದು ಇದರಿಂದ ಪ್ರಕಟವಾಗುತ್ತದೆ. ಇದರ ಸಾರಾಂಶವೂ ನೀತಿಯೂ ಕೂಡಾ ಘನವಾದದ್ದು. ನೀತಿವಂತರು ಅನೇಕಸಾರಿ ಶ್ರಮೆಪಡುವಾಗ ದುಷ್ಟರು ಕೆಲವು ಸಮಯ ಮೆರೆಯುವರೆಂದೂ ಆದರೆ ದುಷ್ಟರ ದುಷ್ಟತನವು ಬೈಲಾಗಿ ಅವರು ತಮ್ಮ ದುಷ್ಟತನಕ್ಕೆ ತಕ್ಕ ಪ್ರತಿಫಲವನ್ನು ಹೊಂದುವಾಗ ನೀತಿಯು ಕಡೆಗೆ ಜಯಿಸಿ ಬಾಳುವದೆಂದೂ ಈ ಕಥೆಯ ಕವಿಯು ತೋರಿಸುವನು. ಇದಲ್ಲದೆ ಈ ಕಥೆಯ ಶೂರರಲ್ಲಿ ಒಬ್ಬಳಾದ ಜಯೆಯಲ್ಲಿ ಪತಿವ್ರತಾ ಧರ್ಮವೂ ಇತರರಲ್ಲಿ ಬೇರೆ ಸದ್ಗುಣಗಳೂ ಹೊಳೆಯುವವು. ಕರ್ನಾಟಕ ಬಲ್ಲವರೆಲ್ಲರೂ ಈ ಕಥೆಯನ್ನು ಓದಿಕೊಂಡು ಈ ಕಥೆಯ ನೀತಿಯಿಂದ ಲಾಭವನ್ನು ಪಡೆದಾರೆಂತ ನಂಬುತ್ತೇವೆ." ಇತ್ಯಾದಿ. ಪುಸ್ತಕದ ಕ್ರಯ 0—12—0. ವಿ. ಪಿ. ಬೇರೆ.

ವಿಳಾಸ:—

V. C. Amin,
C/o E. A. Goll Esq.
Sirdar Palace, Apollo Street,
BOMBAY.

ರೂ 501 ಉಚಿತ!

ಬಲೂನ್ ಬ್ರೇಂಡ್ ಸಾಬೂನ್.

5 ನಿಮಿಷದೊಳಗೆ ಕೂದಲನ್ನು ಉದುರಿಸಿಬಿಡುವದಿಲ್ಲವೆಂಬದನ್ನು ಖಚಿತಪಡಿಸುವವರಿಗೆ ರೂ. 501 ಉಚಿತವಾಗಿ ಕೊಡೋಣಾಗುವದು. ಇದರಿಂದ ಚರ್ಮವು ಕೆಡದು. 3 ಸಾಬೂನುಗಳುಳ್ಳ ಪೆಟ್ಟಿಗೆ 1ಕ್ಕೆ 0—12—0; 2 ಪೆಟ್ಟಿಗೆಗಳ ವರೆಗೆ ವಿ, ಪಿ ಚಾರ್ಜು 0—5—0.

ರೂ. 2500 ಉಚಿತ!

ಸಿರಾಜಿ ಹೇರ್ ಡೈ ಎಂಬ ಕೇಶತೈಲವು ಬಿಳೀ ಮತ್ತು ನರೆತ ಕೂದಲನ್ನು ಕಪ್ಪು ಮಾಡುವದಿಲ್ಲವೆಂದು ತೋರಿಸುವವರಿಗೆ ರೂ. 2500 ಉಚಿತ.

ಈ ತೈಲವನ್ನು ಏನೊಂದು ಬಾಧಕಬಾರದಂತೆ ಅತಿ ನಿಪುಣತೆಯಿಂದ ತಯಾರು ಮಾಡಿರುತ್ತದೆ. ಇದರಿಂದ ಚರ್ಮದಲ್ಲಿ ಕಲೆಯಾಗದು. ಪೆಟ್ಟಿಗೆ 1ಕ್ಕೆ ರೂಪಾಯಿ 1—0—0; ವಿ. ಪಿ. ಬೇರೆ.

ವಿಳಾಸ:— ಎಫ್. ಎಲ್. ದವಾವಾಲಾ,
ಮಿರ್ಜ ಸ್ಟ್ರೀಟ್, ಮುಂಬಾಯಿ.

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡಿಸಬೇಕಾಗಿದೆ.

F. L. Davawala,
Mirza Street, BOMBAY.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

ಈ ಮುರಬ್ಬಾವು "ಸಾಲಾಮಿಸ್ರಿ"ಯಲ್ಲಿ ತಯಾರಿಸಲ್ಪಟ್ಟದ್ದು ಅಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

ಬೆಂಗಳೂರು ಸಿಟಿ ಟಪ್ಪಾಲು ಆಫೀಸಿನ ಸೇವಿಂಗ್ಸ್ ಬ್ಯಾಂಕಿನಲ್ಲಿ 15—3—15ರಲ್ಲು ಡಿಪಾಜಿಟು ಇಟ್ಟಿರುತ್ತೇವೆ.

ಮುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ "ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ ! ಸೇವಿಸಿರಿ !!

ಈ ಸಾಲಾಮಿಸ್ರೀ ಎಂಬದು ಒಂದು ಗಿಡದ ಹಣ್ಣಾಗಿರುತ್ತದೆ ಕಾಬೂಲು ಕಾಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು ಶಕ್ತಿಯಲ್ಲಿ ಕಾಬೂಲ್ ಕಾಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು ಅನೇಕರು ಉರುಳುಗಡ್ಡೆ, ಶಾಮುಗಡ್ಡೆ ಇವುಗಳನ್ನು ಪಕ್ವ ಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಹೇಳಿ ಮೋಸಪಡಿಸುವರು ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದ್ದಲ್ಲಿ ಇದು ಸಾಲಾಮಿಸ್ರಿಯೇ ಅಥವಾ ಬೇರೆ ತರಹಾದ್ದೇ ಎಂಬುವುದು ತಿಳಿದು ಬರುತ್ತೆ.

ಈ ಮುರಬ್ಬಾವನ್ನು ಸ್ತ್ರೀಯೊಬ್ಬರು-ಸ್ಪರ್ಶಿಸದ ಹಾಗೆ
ಹೊಂದ ಮುಟ್ಟದೆ ತಯಾರು ಮಾಡಲ್ಪಟ್ಟದ್ದು.

ಸಾಲಾಮಿಸ್ರಿ ಮುರಬ್ಬಾವು— ನೀರಿನಂತಿರುವ ಧಾತುವನ್ನು ಗಟ್ಟಿಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು— ಮೂತ್ರದೊಂದಿಗೆ ಧಾತುವು ಹೋಗುವುದನ್ನು ನಿಲ್ಲಿಸುವದು
ಸಾಲಾಮಿಸ್ರಿ ಮುರಬ್ಬಾವು— ಮೂತ್ರದಲ್ಲಿ ಉರಿಯುವದನ್ನು ನಿಲ್ಲಿಸುವುದು
ಸಾಲಾಮಿಸ್ರಿ ಮುರಬ್ಬಾವು— ಕ್ಷಣಕ್ಷಣಕ್ಕೂ ಮೂತ್ರವಾಗುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು— ಸ್ವಪ್ನದಲ್ಲಿ ಧಾತುವು ಹೋಗುವದನ್ನು ನಿಲ್ಲಿಸುವದು
ಸಾಲಾಮಿಸ್ರಿ ಮುರಬ್ಬಾವು— ಮೆದುಳಿಗೆ ಬಲವನ್ನು ಕೊಡುವದು
ಸಾಲಾಮಿಸ್ರಿ ಮುರಬ್ಬಾವು— ರಕ್ತವನ್ನು ವೃದ್ಧಿಪಡಿಸಿ ಧಾತುವನ್ನು ಶೇಖರಿಸುವದು
ಸಾಲಾಮಿಸ್ರಿ ಮುರಬ್ಬಾವು— ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವದು
ಸಾಲಾಮಿಸ್ರಿ ಮುರಬ್ಬಾವು— ಹಸಿವನ್ನು ಹೆಚ್ಚಿಸಿ ರಕ್ತವನ್ನು ಶೇಖರಿಸುವದು.
ಸಾಲಾಮಿಸ್ರಿ ಮುರಬ್ಬಾವು— ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವದು
ಸಾಲಾಮಿಸ್ರಿ ಮುರಬ್ಬಾವು— ಉತ್ಸಾಹವು, ಬುದ್ಧಿ ಕುಶಲತೆಯು, ಶರೀರಕಾಂತಿಯು ಕೊಡುವದು.
ಸಾಲಾಮಿಸ್ರಿ ಮುರಬ್ಬಾವು— ತಾಂಬ್ರ ಮತ್ತು ಭಂಗಾರ ಭಸ್ಮಕಿಂತಲು ಉತ್ತಮವಾದದ್ದು.
ಸಾಲಾಮಿಸ್ರಿ ಮುರಬ್ಬಾವು— ಸ್ತ್ರೀಸಂಗಕ್ಕೆ ಮೊದಲು ಸ್ಖಲನವಾಗುವುದನ್ನು ನಿಲ್ಲಿಸುವದು.

ಒಂದು ಡಬ್ಬಿ ಮುರಬ್ಬಾವನ್ನು 15 ದಿನಗಳು ಉಪಯೋ
ಗಿಸುವದರಿಂದ ಪೂರಾ ಗುಣಕೊಡುತ್ತೆ 2—3 ಡಬ್ಬಿ
ಮುರಬ್ಬಾವನ್ನು ಉಪಯೋಗಿಸುವದರಿಂದ ಜನ್ಮಾಂತರದ
ರೋಗ ಗುಣಕೊಡುತ್ತೆ

15 ತೊಲೆ ಮುರಬ್ಬಾವಿನ ಡಬ್ಬಿ 1ಕ್ಕೆ ರೂ. 2 ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ. ಟಪ್ಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿ ವರೆಗೆ ಆಣೆ 6

ಏಜಂಟರು:— ಡಿ. ಸಯ್ಯದ್ ಉಸ್ಮಾನ್ ಎಂಡ್ ಕೊ.
ದೊಡ್ಡಪೇಟೆ, ಬೆಂಗಳೂರು ಸಿಟಿ

ಡಿ. ಮನ್ನಾಲಾಲ್, ಡಿಲ್ಲೀ ವೈದ್ಯರು,
5 ಹಾಜಿಸಾಹೇಬ್ ಮಹದಿ ಅವೆನ್ಯು ರೋಡ್, ಬೆಂಗಳೂರು ಸಿಟಿ.

ದರ್ಬಾರ್ ಸಾಬೂನು.

ಅಪಾಯವಿಲ್ಲದ ರೋಮಸಂಹಾರಿ.

ಈ ಸಾಬೂನನ್ನು ರೋಮವಿರುವ ಸ್ಥಳವಲ್ಲಿ ಹಚ್ಚಿದರೆ ೫ ನಿಮಿಷಗಳೊಳಗಾಗಿ ರೋಮವು ಮಾಯವಾಗುವದು. ಉರಿ, ಸೆಕೆ, ಮುಂತಾದ ಬಾಧೆಗಳಿಲ್ಲವು. ಒಂದು ಸಾರಿ ಉಪಯೋಗಿಸಿದವರಿಗೆ ಗೊತ್ತಾಗುವದು. ಮರೆಯ ಬೇಡಿರಿ

ಏಜಂಟರುಗಳು ಬೇಕಾಗಿದೆ!

೩ ಸಾಬೂನುಗಳಿರುವ ಪೆಟ್ಟಿಗೆ ೧ಕ್ಕೆ ... ರೂ ೦—೧೪—೦
೩ ಪೆಟ್ಟಿಗೆ ಒಂದೇ ಸಾರಿ ತೆಗದುಕೊಳ್ಳುವವರಿಗೆ ರೂ. ೧—೧೦—೦
ಅಂಚೆ ಹಾಸಲು ೪ ಆಣೆ. ವರ್ತಕರಿಗೆ ಅನುಕೂಲವಾಗಿ ಕೊಡಲ್ಪಡುತ್ತದೆ

ವಿಳಾಸ.—ವಿ. ಎ. ಎಸ್. ಪಾಣಿ,
ನಂ. ೩, ಇರುಳಪ್ಪನಬೀದಿ, ಮದರಾಸು.

V. A. S. PANI,
Erulappan St., MADRAS.

ಕಟೀಲ ನರಸಿಂಹಪೈ ಎಂಡ್ ಸನ್ಸ್,

ರಥಬೀದಿ, ಮಂಗಳೂರು.

ಇತರ ಕಡೆಗಳಿಂದ ವಸ್ತ್ರ ಇತ್ಯಾದಿಗಳನ್ನು ತಕ್ಕೊಳ್ಳುವ ಮೊದಲು ನಮ್ಮಲ್ಲಿಯ ದರಗಳನ್ನೂ ಸನಗುಗಳನ್ನೂ ಪರೀಕ್ಷಿಸಿ ನೋಡಿರಿ.

ನಗದಿ ಗಿರಾಕಿಗಳಿಗೆ ವಿಶೇಷ ಪ್ರಯೋಜನ ದೊರಕುವಂತೆ ನಮ್ಮ ದರಗಳನ್ನು ಇಟ್ಟಿರುತ್ತೇವೆ

ಮಧುರಾ, ತಿರುಚಿನಾಪಳ್ಳಿ, ಸೇಲಂ, ಮದ್ರಾಸು, ಮುಂಬಾಯಿ, ಪೂನಾ, ಸೂರತ್, ಬೆಂಗಳೂರು, ಬನಾರಿಸ ಮೊದಲಾದ ನಾನಾ ವಿಧದ ವಸ್ತ್ರ ನೇಯಿಗೆಯಲ್ಲಿ ಪ್ರಖ್ಯಾತಪಟ್ಟ ಪ್ರಾಂತ್ಯಗಳಿಂದ ಎಲ್ಲಾ ಬಗೆಯ ಸನಗುಗಳನ್ನು ತರಿಸಿರುವೆವು. ಗಿರಾಕಿಗಳು ಬಂದು ಪರೀಕ್ಷಿಸಿ ನೋಡಬೇಕಾಗಿ ವಿಜ್ಞಾಪನೆ

Kateel Narasimha Pai & Sons,
Cloth Merchants,
CAR STREET, Mangalore.

ಅತಂಕನಿಗ್ರಹ ಗುಳಿಗೆಗಳು.

ದೇಹದಲ್ಲಿ ಎಂಥಾ ಕಾಯಿಲೆ ಇರುವಲ್ಲಿ ಅದನ್ನು ಶೀಘ್ರದಲ್ಲಿ ಹೋಗಲಾಡಿ ಸುವ ಪ್ರಯತ್ನ ಮಾಡಿ ತಕ್ಕಂಥಾ ಔಷಧವು ಸೇವಿಸಿ ಅದನ್ನು ಗುಣಹೊಂದಿಸದಿದ್ದರೆ ಆರೋಗ್ಯವಾದ ದೇಹವು ಕ್ಷೀಣಿಸುವದು. ಆದಕಾರಣ ಹಾಗೂ ತಮಗೆ ಏನಾದರೂ ಅನಾರೋಗ್ಯ ಕಂಡುಬರುವಲ್ಲಿ ತಕ್ಷಣವೇ ಅತಂಕನಿಗ್ರಹ ಗುಳಿಗೆಗಳನ್ನು ಸೇವಿಸಿ ಉತ್ತರ ದೇಹಬಲವನ್ನು ಸ್ಥಾಪಿಸಿ. ಅತಿ ಉತ್ತಮಕರವಾದ ರಕ್ತವೆಂಬ ಔಷಧವು

ಕ್ರಯ 32 ಗುಳಿಗೆಗಳಿಗೆ 1 ರೂಪಾಯಿ.

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,

ಅತಂಕನಿಗ್ರಹ ಔಷಧಾಲಯ, 22, ಬ್ರಾಡ್ವೇ, ಮದ್ರಾಸ

ನಮ್ಮ ಏಜಂಟರು:— 1. ಮೆಸ್ಸರ್ಸ್, ರಘಯೆಲ್ ಎಂಡ್ ಕೊ., ದ್ವಿಟೊಬಿಲ್ಡಿಂಗ್,
2. ಜುಬಿಲಿ ಕೇಶ್ ಬಜಾರ್, ಬೆಂಗಳೂರು. ಮಂಗಳೂರು.

S. U. N. & CO.,

BENARES CITY, U. P.

ದೊಡ್ಡ ಕಂಪನಿ! ಸೂಗಸಾದ ಸರಕುಗಳು!!

ಈ ನಮ್ಮ ಕಂಪೆನಿಯಲ್ಲಿ ನೆಯಿದು ತಯಾರಿಸುವ ಉತ್ತಮವಾದ ಬನಾರಸ್ ರೇಶ್ಮೆ ಜರಿ ಶೀರೆಗಳು ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥ ಜಾಗಂಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗನ್ನು ಇನಾಮಾಗಿ ಕಳುಹಿಸಲಾಗುವದು.

ನಮ್ಮ ವಿಳಾಸ:— ಯಸ್. ಯು. ಯನ್ ಮತ್ತು ಕಂಪೆನಿ, ಕಾಶಿ

THE GREATEST TREASURE [illegible]

ಸತ್ಯಾರ್ಥ ಪ್ರಕಾಶ.

ಮೊದಲನೇ ೧೦ ಅಧ್ಯಾಯಗಳ ಕನ್ನಡ ಭಾಷಾಂತರ

ಇದರಲ್ಲಿ ಪ್ರಾಣಿಗಳಿಗೆ ಪರಸ್ಪರ ಸಂಬಂಧವು ಹ್ಯಾಗೆ [illegible] ಜೀವದ ಮತ್ತು ಪರಮೇಶ್ವರನ ಸಂಬಂಧವೂ, ಪರಮೇಶ್ವರನ ಓಂಕಾರಾದಿ [illegible] ವ್ಯಾಖ್ಯೆಯೂ, ಮಕ್ಕಳ ಶಿಕ್ಷಣ ಪದ್ಧತಿಯೂ, ಬ್ರಹ್ಮಚರ್ಯಾದಿ ಆಶ್ರಮಗಳ ವರ್ಣನವೂ, ಬ್ರಾಹ್ಮಣ, ಕ್ಷತ್ರಿಯ ವೈಶ್ಯ ಶೂದ್ರರಿಗೆ ಮತ್ತು ಅಂತ್ಯಜರಿಗೆ ಹಾಗೂ ಸ್ತ್ರೀಯರಿಗೆ ವೇದಾಧ್ಯಯನದ ಅಧಿಕಾರವು ಇದ್ದ ಬಗ್ಗೆ ಸಪ್ರಮಾಣ ವಿವೇಚನವೂ, ಜಗತ್ತಿನ ಉತ್ಪತ್ತಿ ಸ್ಥಿತಿ ಮತ್ತು ಪ್ರಳಯಗಳ ವಿಚಾರವೂ, ಬಂಧ ಮೋಕ್ಷಗಳ ವಿಷಯವೂ, ಭಕ್ಷ್ಯಾಭಕ್ಷ್ಯಗಳ ವಿವೇಚನವೂ, ವೇದಾದಿ ಸಚ್ಛಾಸ್ತ್ರಗಳ ಆಧಾರದಿಂದ ಶ್ರೀ ಸ್ವಾಮಿ ದಯಾನಂದ ಸರಸ್ವತಿಗಳವರು ಚನ್ನಾಗಿ ಮಾಡಿದ್ದಾರೆ. ಶ್ರೀ ಸ್ವಾಮಿ ದಯಾನಂದ ಸರಸ್ವತಿಯವರ ಚರಿತ್ರವೂ, ಅವರು ಮಿಶನರಿ ಮತ್ತು ಮೌಲ್ವಿಗಳೊಡನೆ ಮಾಡಿದ ತರ್ಕಗಳೂ ವ ಸನಾತನ ವೈದಿಕಧರ್ಮದ ಸತ್ಯಾರ್ಥವನ್ನು ಬೋಧಿಸುವ ಗಹನ ವಿಷಯಗಳೂ ಇದರಲ್ಲಿ ಕೊಟ್ಟಿದೆ. ಕಿಮ್ಮತ್ತು ರೂ. ೧—೮—೦. ವಿದ್ಯಾರ್ಥಿಯರಿಗೆ ರೂ. ೧—೪—೦. ಟಪ್ಪಾಲು ಖರ್ಚು ಬೇರೆ. ಪುಟ 560.

ಸತ್ಯಾರ್ಥ ಪ್ರಕಾಶ.

(೧೧ನೇ ಅಧ್ಯಾಯದ ಕನ್ನಡ ಭಾಷಾಂತರ)

ಇದರಲ್ಲಿ ಆರ್ಯಾವರ್ತ ದೇಶದಿಂದಲೇ ಇತರ ದೇಶಗಳು ವಿದ್ಯೆಯನ್ನು ಪ್ರಾಚೀನ ಕಾಲದಲ್ಲಿ ಕಲಿಯುತ್ತಿದ್ದವೆಂತಲೂ ಆರ್ಯಾವರ್ತ ದೇಶದ ಅವನತಿಯ ಕಾರಣಗಳೂ ಅದ್ವೈತಮತ, ಮೂರ್ತಿಪೂಜೆ, ತಪ್ತಮುದ್ರಾಧಾರಣೆ, ಗಯಾಶ್ರಾದ್ಧ, ಪುರಾಣಗಳು, ಜ್ಯೋತಿಷ, ಬ್ರಾಹ್ಮಸಮಾಜ ಪ್ರಾರ್ಥನಾಸಮಾಜ ಮುಂತಾದ ಬಹಳ ಪಂಥಗಳ ಪರೀಕ್ಷೆಗಳು ಮಾಡಿಯದೆ. ಕಿಮ್ಮತ್ತು ಆಣೆ 8. ವಿದ್ಯಾರ್ಥಿಯರಿಗೆ ಆಣೆ ೬. ಡೆಮಿ ಅಷ್ಟಪತ್ರದ ಪುಟ ೧೫೦, ಟಪ್ಪಾಲು ಖರ್ಚು ಬೇರೆ.

ಈ ಗ್ರಂಥವನ್ನು ಹಿಂದೀ ಭಾಷೆಯೊಳಗಿನಿಂದ ಕನ್ನಡದಲ್ಲಿ ಸುಬ್ರಾವ್ ಶೇವಗಿರಿ ಕಾರ್ಕಳ, ಬಿ. ಎ. ಎಲ್. ಎಲ್. ಬಿ., ಹ್ಯಾಕೋರ್ಟು ವಕೀಲ್, ರಂಗೂನ್, ಇವರು ಮಾಡಿರುತ್ತಾರೆ. ಹಿಂದು (ಆರ್ಯ) ಧರ್ಮಾಭಿಮಾನಿಯಾದ ಪ್ರತಿಯೊಬ್ಬನು ಸಂಗ್ರಹಿಸಲಿಕ್ಕೆ ಯೋಗ್ಯವಾದ ಅತ್ಯಾವಶ್ಯಕ ಗ್ರಂಥವು. ಇದರ ಬೆಲೆಯಾದರೂ ಸರ್ವರೂ ಕೊಂಡುಕೊಳ್ಳುವಂತೆ ತೀರ ಕಮ್ಮಿ ಬೆಲೆಯನ್ನು ಇಟ್ಟಿರುತ್ತದೆ.

ಸಿಗುವ ವಿಳಾಸ — ಎಸ್. ಎಲ್. ಕಾಮತ್ ಧಾಕಪ್ಪನವರ,
ಪೋಸ್ಟು ಶಿರ್ಶಿ, ಜಿಲ್ಲಾ ಉತ್ತರ ಕನ್ನಡ.

Estd 1888 — ಸ್ಥಾಪನೆ 1888.

K. B. RELE & Cos.,—BOMBAY

ಕೆ. ಬಿ. ರೇಳೆ ಕಂಪನಿಕೃತ

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮುಲಮು.

ಎಷ್ಟೋ ಹಳಕ, ಕರೆ ಮತ್ತು ಹಟಮಾರಿ ಗಜಕರ್ಣವು ಈ ಮುಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦—೨೫ ವರ್ಷಗಳ ಹಳಕ, ಕ್ರಿಮನೆ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ಒಕ್ಕೆ ೪ ಆಣೆ. ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ನಾಲ್ಕೇ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲಿಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳು ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಹಣ್ಣುಗಳು, [illegible] ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪಿನಸವೆಂಬ [illegible] ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, [illegible] ಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು [illegible] ಕೈಕಾಲುಗಳುರಿಯೋಣ, ಕೈ ಮೇಲೆ ಕರಿ ಕಲೆ ಬೀಳೋಣ, [illegible] ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ [illegible] ವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ಒಕ್ಕೆ [illegible] ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್.

ಬಿ. ರೇಳೆ ಸನ್ಸ ಕಂಪೆನಿ ಗಿರಗಾಂವ ನಂ. ೪ ಮುಂಬಯಿ

ಅಮೃತಾಂಜನ.

ಜಗತ್ಪ್ರಸಿದ್ಧವಾದ ಬೇನೆಹರಿ ಮುಲಾಮು.

ಇದರ ಉಪಯೋಗದಿಂದ — ವಾತ, ಸಂಧಿವಾತ, ತಲೆನೋವು, ಶಿರೋಭಾರ ಅರ್ಧಾಂಗ ವಾಯು, ಉಳುಕು, ಎದೆ ನೋವು, ಸೊಂಟ ನೋವು, ಶೀತ, ಕೆಮ್ಮು, ಗಂಟಲೂತ, ಮಲವ್ಯಾಧಿ, ಚೇಳು ಕಡಿತ, ಊತಗಳು, ಸುಟ್ಟ ಗಾಯ, ನೋವುಗಳು ಎಲ್ಲಾ ತರದ ನೋವುಗಳ ಮೇಲೆ ದಿವ್ಯ ಔಷಧವಾಗಿರುತ್ತದೆ. ಸಾವಿರಾರು ಜನರು, ಇದಕ್ಕೆ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ಪ್ರತಿ ತಿಂಗಳಲ್ಲೂ 25,000 ಬಾಟ್ಲಿಗಳು ಮಾರಲ್ಪಡುತ್ತವೆ. ಬಾಟ್ಲಿ ಒಂದರ ಕಿಮ್ಮತ್ತು ಆಣೆ 8. ಡಜನ್ 1ಕ್ಕೆ ರೂ 4—4—0 ವಿ. ಪಿ. ಖರ್ಚು ಪ್ರತ್ಯೇಕ.

ಎಚ್ಚರಿಕೆ:—ಅಮೃತಾಂಜನವನ್ನು ಪಡಕೊಳ್ಳುವಾಗ ಸುಂದರವಾದ ಮತ್ತು **ಹಲವು ಭಾವಗಳುಳ್ಳ** ಕರಡಿಗೆ ಪರೀಕ್ಷಿಸಿ ಪಡಕೊಳ್ಳಿರಿ.

ಗಜಕರ್ಣದ ಮುಲಾಮು.

ಮೂರು ಸರ್ತಿ ಹಾಕುವದರೊಳಗೆ ಗಜಕರ್ಣ ನಾಶವಾಗಿ ಹೋಗುವದು. **ಇದರಿಂದ ಉರಿಯು** ಬರುವದಿಲ್ಲ. ಚರ್ಮವು ಕಪ್ಪಾಗುವದಿಲ್ಲ. ಇದುವರೆಗೆ **ಎರಡು ಮಿಲಿಯ** ಡಬ್ಬಿಗಳು ಮಾರಲ್ಪಟ್ಟವು. ರಾಜಾರಾಣಿ ಟ್ರೇಡ್ ಮಾರ್ಕ **0—6—0. 12** ಡಬ್ಬಿಗಳಿಗೆ 3—8—0 ವಿ. ಪಿ. ಪ್ರತ್ಯೇಕ.

ದಂತಮಂಜನ.

ರಾಜಾರಾಣಿ ಟ್ರೇಡ್ ಮಾರ್ಕ

ಈ ಮಂಜನದಿಂದ ಹಲ್ಲುಗಳನ್ನು ದಿನಾಗಲೂ ತಿಕ್ಕುವದರಿಂದ ಹಲ್ಲುನೋವು, **ಹಲ್ಲುಗಳಿಂದ ಬರುವ** ರಕ್ತ, ಹಲ್ಲುಗಳ ವಾಸನೆ, ಮುಂತಾದವುಗಳೆಲ್ಲಾ ನಿಲ್ಲುತ್ತವೆ. **ಇದರಲ್ಲಿ ಹಲವು** ನಮೂನೆಯ ಔಷಧಗಳಿವೆ. ಬರೀ ಚೋಕಿನ ಹುಡಿ ಅಲ್ಲ. ಡಬ್ಬಿ **1ಕ್ಕೆ 0—2—0** ವಿ. ಪಿ. ಪ್ರತ್ಯೇಕ.

ಮೋಹಿನಿ ತೈಲ.

ಈಗ ಹಲವು ನಮೂನೆಯ ತೈಲಗಳು ಉಪಯೋಗಿಸಿದವರು **ಈ ನಮ್ಮ** ಸುಗಂಧವಾದ **ಮೋಹಿನಿ ತೈಲವನ್ನು** ಒಂದು ಸಾರಿ **ಉಪಯೋಗಿಸಿ ನೋಡಿರಿ.** ಇದರಲ್ಲಿ ಕ್ಯಾಸ್ಟರ್ ಒಯಿಲ್ ಇಲ್ಲಾ. ಇದು ಗಿಡಮೂಲಿಕೆಗಳಿಂದಲೂ **ಬದಾಮಿನ** ಎಣ್ಣೆಯಿಂದಲೂ ತಯಾರಿಸಲ್ಪಟ್ಟಿದೆ. ಇದರಿಂದ ಕೂದಲುಗಳು **ಉದ್ದವಾಗಿಯೂ,** ನಯವಾಗಿಯೂ ಕಪ್ಪಾಗಿಯೂ ಬೆಳೆಯುವವು.

ಬಾಟ್ಲಿ ಒಂದರ ಕಿಮ್ಮತ್ತು ಆಣೆ 0—12—0

ಸುಂದರಿ ಮುಲಾಮು.

ಮುದ್ದಣಗಳನ್ನು ನಾಶಪಡಿಸಿ ಮುಖವನ್ನು ಸುಂದರಗೊಳಿಸುವದು. **ಡಬ್ಬಿ** 1ಕ್ಕೆ ರೂ 0—8—0

ವಜ್ರಗುಟಿಕ.

ಧಾತುಪುಷ್ಟಿ ಧಾತುವೃದ್ಧಿ ಶಕ್ತಿವರ್ಧಕ. 20 ಗುಳಿಗೆಗಳ ಡಬ್ಬಿ ಒಂದರ ರೂ 1—0—0

ಕೆ ನಟರಾಜನ್ ಎಡಿಟರ್, ಇಂಡಿಯನ್ ಸೋಶಿಯಲ್ **ರಿಫ಼ೊ**ರ್ಮರ್:—ಅಮೃತಾಂಜನ ಎಲ್ಲಾ ಔಷಧಗಳಿಗಿಂತಲೂ ಬಹಳ **ಉತ್ತಮವಾದ** ಔಷಧ.

ಡಬ್ಲ್ಯು ಮೆಕ್ಸ್‌ವೆಲ್, ಮೈಸೂರು.—ಅಮೃತಾಂಜನದಿಂದ **ಎಂಥಾ** ಕಠಿಣವಾದ ವಾತ ನೋವಾದರೂ ನಿಲ್ಲುತ್ತದೆ.

ಆರ್ ಆರ್ ಗಂಗೋಲಿ:—ಅಮೃತಾಂಜನ ವಾತ, **ತಲೆನೋವುಗಳ** ಮೇಲೆ ದಿವ್ಯ ಔಷಧ.

ಡಾಕ್ಟರ್ ಡಾಂಡೆಕರ್, ಎಲ್ ಎಮ್. ಎಂಡ್ ಎಸ್:—ಅಮೃತಾಂಜನ ಎಲ್ಲಾ ನೋವುಗಳ ಮೇಲೆ ದಿವ್ಯ ಔಷಧ.

ನಮ್ಮ ಔಷಧಗಳನ್ನು ಪಡಕೊಳ್ಳುವಾಗ ಅಮೃತಾಂಜನ ಡಿಪೊ, ಮುಂಬಯಿ ಎಂಬ ಹೆಸರನ್ನು ಓದಿನೋಡಿ ಪಡಕೊಳ್ಳಿರಿ.

ಅಮೃತಾಂಜನ ರಖಮಾಗಿಯೂ, ಚಿಲ್ಲರೆಯಾಗಿಯೂ ಬೇಕಾದವರು **ನಮ್ಮ** ಮುಂಬಯಿ ಆಫೀಸಿಗೇನೇ ಬರೆಯಬೇಕು. ಮದ್ರಾಸು ಆಫೀಸಿನವರು **ರಖಮಾಗಿ** ಅಮೃತಾಂಜನ ರವಾನಿಸಿ ಕೊಡುವ ಏರ್ಪಾಡು ಮಾಡಲಿಲ್ಲ.

ಮಂಗಳೂರಲ್ಲಿ—ಎಲ್ಲಾ ಔಷಧಗಳು ಈ ಕೆಳಗಿನ ಕಂಪೆನಿಗಳಲ್ಲಿ ಸಿಕ್ಕುವವು.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್, ಪರ್ಸ್ ಎಂಡ್ ಸನ್ಸ್, ದಿ ಊಲನ್ ಮಾರ್ಟ್, ಕೊಚ್ಚಿಕಾರ ಬ್ರದರ್ಸ್ ...

ಅಮೃತಾಂಜನ ಡಿಪೊ,

... ತಂಬುಚೆಟ್ಟಿ ಸ್ಟ್ರೀಟ್, **109 ಫ್ರೇಯರ್ ರೋಡ,**

... ಟೌನ್, ಮದ್ರಾಸು. **ಮುಂಬಯಿ.**

ನೆಪ್ಚೂನ್, ಬ್ಲೇಕ್ ಬರ್ಡ್, ಒಟರ್ ಮೇನ್, ಸ್ವೋನ್

ಇತ್ಯಾದಿ ವಿವಿಧ ನಮೂನೆಯ

ಫೌಂಟನ್ ಪೇನುಗಳು

ಈಗಲೇ ಬಂದಿವೆ.

ಕ್ರಯ 3 ರೂಪಾಯಿ ಲಾಗಾಯಿತು 12 ರೂಪಾಯಿ ವರೆಗೆ.

ಬೇಕಾದವರು ಬೇಗನೇ ಬರೆಯಿರಿ.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,

ರಥಬೀದಿ ಮಂಗಳೂರು.

ಶ್ರೀ ರಾಮನಾಮಸ್ತುತಿ.

ಇದು ಸುಂದರವಾದ ಸಣ್ಣ ಪುಸ್ತಕ! ಭಜನೆಗೂ ಪಾರಾಯಣಕ್ಕೂ ಯೋಗ್ಯವಾಗಿದೆ. ವ್ಯಾಪಾರಿಗಳು ವಿ ಪಿ ಮೂಲಕ ತರಿಸಿ ಮಾರುವದು ವಿಶೇಷ ಲಾಭಕರ! ಬೆಲೆ 100 ಪುಸ್ತಕಗಳಿಗೆ 0—7—0 300ಕ್ಕೆ 1—2—0 500ಕ್ಕೆ 1—12—0 1000ಕ್ಕೆ ರೂ 3—0—0

ನಮ್ಮ ವಿಳಾಸ

ವಿ. ಪಿ. ಡಿಪೋ,

ಕೋಲಾರ್

ಗಮನ ಕೊಡಿರಿ! ತ್ವರೆ ಮಾಡಿರಿ!

ಶ್ರೀ ಮಾಂಗಿರೀಷ ಬಾಮ್

ತಲೆನೋವು, ಒರ್ಕೆನ್ನೆ ನೋವು, ಹಲ್ಲು ನೋವು, ಸೊಂಟನೋವು, ಎಲ್ಲಾ ಶ್ವಾಸ ರೋಗಗಳು, ಉಳುಕು, ವಾಯುವಿನಿಂದ ಹೊಟ್ಟೆ ಉಬ್ಬರಿಸುವದು, ಇವುಗಳನ್ನು ಶೀಘ್ರವಾಗಿ ಗುಣಪಡಿಸುವದು. ಸ್ಕ್ರೂ ಬಾಯಿಯ ಲೋಹದ ಮುದುರುವ ನಳಿಗೆಗಳಲ್ಲಿರುವದರಿಂದ ಬಾಟ್ಲಿಗಳಲ್ಲಿರುವ ಬಾಮುಗಳೋಪಾದಿ ಸೂರ್ಯನ ಬೆಳಕಿಗೂ, ಗಾಳಿಗೂ, ಕಾಗದೆ ಎಷ್ಟು ಕಾಲಕ್ಕೂ ಹಾಳಾಗುವದಿಲ್ಲ. ನಳಿಗೆಯ ಅಡಿಯನ್ನು ಮಾತ್ರ ಒತ್ತಿದಲ್ಲಿ ಬೇಕಾದಷ್ಟು ಮಾತ್ರ ಬಾಮ್ ಹೊರಗೆ ಬರುವದು ಇದಲ್ಲದೆ ಪ್ರತಿ ನಳಿಗೆಯಲ್ಲಿ ಬಾಟ್ಲಿಗಳಲ್ಲಿರುವದರ 1½ ಪಾಲು ಬಾಮು ಇರುವದು ನಳಿಗೆ ಕ್ರಯ ರೂ 0—8—0

ವಿಸ್ಫೋಟಿಕ ಘುಟ್ಕಂ, ಸಿಡುಬು, ಕೋರ, ಕೊಪ್ಪೆ ಮಕ್ಕಳಚೇಷ್ಟೆ, ಮುಂತಾದ ಜಾಡ್ಯಗಳಿಗೆ ಅತ್ಯುತ್ತಮವಾದ್ದು ಸಿಡುಬು ಮುಂತಾದ ಅಂಟುರೋಗಗಳಲ್ಲಿ ಜ್ವರ ಕಾಣಿಸಿಕೊಳ್ಳುವಾಗ ಒಂದು, ಯಾ ಎರಡು ಮಾತ್ರೆಯನ್ನು ಬಿಸಿ ನೀರಿನಲ್ಲಿ ತೇದು ಕೊಟರೆ ಕೂಡಲೇ ಜ್ವರ ಗುಣವಾಗುವದು. ಮಕ್ಕಳ ಚೇಷ್ಟೆಗೆ ಒಂದು ಮಾತ್ರೆಯಂತೆ ಪ್ರತಿದಿನವೂ ಮೊಲೆಹಾಲಿನಲ್ಲಿ ತೇದು ದಿನಕ್ಕೆ 2 ಸಾರಿ ಕೊಟ್ಟರೆ ಪೀಡೆಯು ಪರಿಹಾರವಾಗಿ ದೃಢಕಾಯರಾಗಿ ಬೆಳೆಯುವರು. ಎಲ್ಲಾ ತರದ ಜ್ವರಗಳಿಗೂ ಉತ್ತಮವಾದ್ದು 12 ಮಾತ್ರೆಗಳ ಪೊಟ್ಲ 1ಕ್ಕೆ 0—6—0

ಸ್ವರಸುಖಿ ಕೆಮ್ಮು, ಗಂಟಲುನೋವು, ಧ್ವನಿ ಒಡಲಾಗುವದು, ಅಗ್ರ ಮುಂತಾದವುಗಳಿಗೆ ಅತ್ಯುತ್ತಮ ಎಲೆ ಅಡಿಕೆಯ ಸಂಗಡ ತಿನ್ನುವುದರಿಂದ ಹಲ್ಲುಗಳಿಗೂ, ಜೀರ್ಣಕ್ಕೂ ಸಹಕಾರಿ ದೊಡ್ಡ ಪೊಟ್ಲ 1ಕ್ಕೆ 0—1—6 ಸ್ಯಾಂಪಲ್ ಪೊಟ್ಲ 0—0—6

ಕಾರ್ಬೋಲಿಕ್ ಟೂತ್ ಪೌಡರ್ ಈ ದಂತಮಂಜನದ ಹುಡಿಯಿಂದ ಹಲ್ಲುಗಳನ್ನು ಪ್ರತಿದಿನವೂ ತಿಕ್ಕುವುದರಿಂದ, ಹಲ್ಲುಹುಳುಕ, ಹಲ್ಲುನೋವು, ವಸಡುಹುಣ್ಣು, ಮುಂತಾದವುಗಳು ಗುಣವಾಗಿ ಹಲ್ಲುಗಳು ಬಲವಾಗುವವು ದೊಡ್ಡ ಡಬ್ಬಿ 1ರ ಕ್ರಯ 0—2—0 ಸ್ವಶ್ಲಾಘನೆಯು ಯೋಗ್ಯವಲ್ಲ ಒಮ್ಮೆ ತರಿಸಿ ಪರೀಕ್ಷಿಸಿದರೆ ತಿಳಿದೀತ

ಇವುಗಳ ವಿನಹಾ ಆಯುರ್ವೇದವನ್ನು ಅನುಸರಿಸಿ ತಯ್ಯಾರಿಸಿದ ಅನೇಕ ಔಷಧಗಳು ನಮ್ಮಲ್ಲಿ ತಯ್ಯಾರಿರುತ್ತವೆ ರೋಗ ಪ್ರಕೃತಿಯನ್ನು ಈ ಕೆಳಗಿನ ವಿಳಾಸಕ್ಕೆ ಅರ್ಧ ಆಣೆ ಟಪ್ಪಾಲ್‌ಚೀಟು ಸಮೇತ ಬರಕೊಂಡಲ್ಲಿ ತಕ್ಕ ಔಷಧದ ದರವನ್ನು ತಿಳಿಸಲಾದೀತು. 1 ಡಜನ್ ಬಾಮ್ ತರಿಸಿಕೊಳ್ಳುವವರಿಗೆ ಒಂದು ಟ್ಯೂಬ್ ಹೆಚ್ಚಿಗೆ ಕೊಡಲಾದೀತು ಟಪ್ಪಾಲ್ ಹಾಸಲು ಮಾಫಿ. ಏಜಂಟರಾಗುವವರಿಗೆ ಭರಪೂರ ಕಮ್ಮಿಶನ್ ಕೊಡಲಾದೀತು.

M. D. R. & SONS
Srimangireesh Aushadhalaya
UDIPI. S. C.

WANTED.

"Wanted an English knowing travelling **Inspector** for the purposes of checking the intimations of **marriage** claims in Udipi and Mangalore side **on a salary of** Rs 40 to 50 per month including T allowances. **Apply** with copies of testimonials to the **Secretary, Universal Assurance Co., Ltd.**, *191 Bow Bazaar Street Calcutta*"

ಸಂತೋಷಕರವಾದ ಪ್ರಕಟನೆ

ಸಂತೋಷಕರವಾದ ಬಹುಮಾನ! ಸಂತೋಷಕರವಾದ **ಗಡಿಯಾರ!**

ಸುಂದರವಾದ ಬೊಂಬೈ ರೆಗ್ಯುಲೇಟರ್ ವಾಚು. ಇದರ ಕ್ರಯ 8 ಬಹುಮಾನ ಸಮೇತ ರೂ. 3—4—0 5 ವರುಷದ ಖಾತ್ರಿಯಾದ ಗ್ಯಾರಂಟಿ.

ಅಯ್ಯಾ ಮಿತ್ರರ!

ಈ ನಕ್ಷೆಯಲ್ಲಿ ತೋರಿಸಿರುವ ಜುಯಲ್ಡ್ ಮೈಲ್ ರೆಗ್ಯುಲೇಟರ್ ವಾಚು. 5 ರತ್ನಗಳುಳ್ಳ ಕಂಪನ್‌ಶೇಷನ್ ಬ್ಯಾಲೆನ್ಸ್ ಬಹು ಬಲಿಷ್ಠವಾದ ಗಡಿಯಾರ. ನಾಜೂಕಾದ ಯಂತ್ರದಲ್ಲಿಯೂ ಶ್ರೇಷ್ಠವಾದ ಲೀವರ್ ಕೆಲಸದಲ್ಲಿಯೂ ತಯಾರಿಸಲ್ಪಟ್ಟದ್ದು. ಇದು ನೋಡುವದಕ್ಕೆ ಬಹು ಸೊಗಸಾಗಿಯೂ, ಮುಚ್ಚಟೆಯಾಗಿರುತ್ತೆ, ಅನೇಕ ವರ್ಷಗಳ ಪರ್ಯಂತರ ಬಾಳಿಕೆಬರುವಂಥಾದ್ದು. ನಮ್ಮ ಕಂಪೆನಿ ಹೊಸದಾಗಿರುವದರಿಂದ ಬಹಳ ಕ್ರಯವುಳ್ಳ ಬಹುಮತಿಗಳನ್ನು ಹಾಕಿರುತ್ತೇವೆ. ಬರೇ ಮಾತುಗಳಿಂದೇನು? ಕೂಡಲೇ ಈ ಗಡಿಯಾರವನ್ನು ಬರದು ತರಿಸಿಕೊಳ್ಳಿ

ತ್ವರೆಮಾಡಿರಿ! ಮೂಸಕ ದರ! ತ್ವರೆಮಾಡಿರಿ!

ಸುಂದರವಾದ ಮೈಲ್ ರೆಗ್ಯುಲೇಟರ್ ವಾಚು

ಇದರ ಕ್ರಯ ರೂ 2—12—0 ಮಾತ್ರ.

5 ವರುಷದ ಖಾತ್ರಿಯಾದ ಗ್ಯಾರಂಟಿ



ಅಯ್ಯಾ,

ಇಂಜನ್ ಮಾರ್ಕು ಅಂದರೆ ಗುರುತುಳ್ಳ *ಪ್ರಖ್ಯಾತಿ ಹೊಂದಿ ಲೀವರ್ ಕೆಲಸದಲ್ಲಿ ತಯಾರಿಸಲ್ಪಟ್ಟದ್ದು. ಈ ಗಡಿಯಾರ ಶ್ರೇಷ್ಠವಾದ ಲೀವರ್ ಕೆಲಸದಲ್ಲಿಯೂ, ನಾಜೂಕಾದ ಯಂತ್ರದಲ್ಲಿಯೂ ತಯಾರಿಸಲ್ಪಟ್ಟದ್ದು ಅನೇಕ ವರ್ಷಗಳ ಪರ್ಯಂತರ ಬಾಳಿಕೆಬರುವಂಥಾದ್ದು ಬಹು ರಮಣೀಯವಾದ ವಾಚ್. ಇದು ನೋಡುವದಕ್ಕೆ ಸೊಗಸಾಗಿ ಇರುತ್ತೆ ನಮ್ಮ ಕಂಪೆನಿ ಹೊಸದಾಗಿರುವದರಿಂದ ಬಹಳ ಕಮ್ಮಿ ಧಾರಣೆಗೆ ಮಾರುತ್ತೇವೆ ಕೂಡಲೆ ಬರದು ತರಿಸಿಕೊಳ್ಳಿ.

(GENTLEMAN WRIST WATCH).

ಜೆಂಟಲ್‌ಮನ್ ರಿಸ್ಟು ವಾಚು.

ಇದರ ಕ್ರಯ ಚರ್ಮದ ಪಟ್ಟಿ ಸಹಿತ ರೂ. 3—8—0.

ಈ ಕೈಗಡಿಯಾರ ಬಹು ಬಲಿಷ್ಠವಾದ ಸಾಮಾನುಗಳಿಂದ ತಯಾರಿಸಲ್ಪಟ್ಟದ್ದು. ಈ ಕೈಗಡಿಯಾರ ಕೈಯಲ್ಲಿ ಕಟ್ಟಿಕೊಳ್ಳಲಿಕ್ಕೆ ಲಾಯಖಾದುದು. ಸರಿಯಾದ ಕಾಲವನ್ನು ತೋರಿಸತಕ್ಕದ್ದು ಈ ಕೈಗಡಿಯಾರವನ್ನು ಜಾಗ್ರತೆ ತರಿಸಿಕೊಳ್ಳಿ.

ಮ್ಯಾನೇಜರ್ ಕಮಲರಾಮ್ ಎಂಡ್ ಕಂಪೆನಿ,
28 [illegible]
[illegible]

ಸ್ವದೇಶಾಭಿಮಾನಿಯ ನೋಟೀಸು.

ಚಂದಾದಾರರು ನಮಗೆ ಬರೆಯುವ ಎಲ್ಲಾ ಪತ್ರವ್ಯವಹಾರಗಳಲ್ಲಿ ತಮ್ಮ ತಮ್ಮ ವಿಳಾಸದೊಂದಿಗೆ ಇರುವ ರಿಜಿಸ್ಟರ ನಂಬರನ್ನು ತಪ್ಪದೆ ಬರಿಯತಕ್ಕದ್ದು ರಿಜಿಸ್ಟರು ನಂಬರು ಇಲ್ಲದ ಪತ್ರಗಳಿಗೆ ನಿಗಾ ಕೊಡಲಾರೆವು.

ಪತ್ರಿಕೆಗೆ ಚಂದಾದಾರರಾಗಿ ಸೇರಲಪೇಕ್ಷೆಯುಳ್ಳವರು ವರ್ಷ 1ರ ಚಂದಾ ಹಣ ರೂ 2—1—0ನ್ನು ಮನಿಯಾರ್ಡರು ಮೂಲಕ ರವಾನಿಸುವದುತ್ತಮ. ವಿ. ಪಿ ಮೂಲಕ ಕಳುಹಿಸಬೇಕೆಂದು ಬರಿಯುವಂಥವರಿಗೆ ಪತ್ರಿಕೆಯ ಹಿಂದಿನ ಸಂಚಿಕೆಯನ್ನು ವಿ. ಪಿ. ಮಾಡಿ ಕಳುಹಿಸಲಾಗುವದು ವಿ ಪಿ ಯ ಮೊಬಲಗು ನಮಗೆ ತಲ್ಪಿದ ನಂತರವೇ ಪತ್ರಿಕೆಯನ್ನು ಕಳುಹಿಸಲು ಪ್ರಾರಂಭಿಸುವೆವು

ಪತ್ರಗಳನ್ನು ಬರಿಯುವಾಗ ತಮ್ಮ ಹೆಸರು, ವಿಳಾಸ ಮತ್ತು ಪೋಸ್ಟಾಫೀಸನ್ನು ಸ್ವಷ್ಟಾಕ್ಷರದಲ್ಲಿ ಬರಿಯತಕ್ಕದ್ದು

ಮ್ಯಾನೇಜರ್,
ಸ್ವದೇಶಾಭಿಮಾನಿ ಆಫೀಸು,
ಮಂಗಳೂರು, ದ ಕ

ಈಗಲೇ ತಯಾರಾಗಿವೆ!

ಗ್ರಾಮ ಮುನ್ಸಿಫ ಕೋರ್ಟುಗಳಿಗೆ ಸಂಬಂಧಿಸಿದ ಫೋರ್ಮುಗಳು
100ಕ್ಕೆ ಆಣೆ 6 ಮಾತ್ರ

ಕುರಿಫಂಡಿನ ರಶೀದಿ		100ರ	ಪುಸ್ತಕ	1ಕ್ಕೆ	0—8—0
,,	,,	50ರ	,,	,,	0—4—0
ಇಂಗ್ಲೀಷು	,,	50ರ	,,	,,	0—8—0
,,	,,	25ರ	,,	,,	0—4—0
ಗೇಣಿ	,,	50ರ	,,	,,	0—6—0
,,	,,	25ರ	,,	,,	0—3—0
ಖಾಲಿ	,,	50ರ	,,	,,	0—4—0
,,	,,	25ರ	,,	,,	0—2—0
ಡೆಲಿವರಿ ಪುಸ್ತಕ 1ರ	.	.	.		0—8—0
ವಕಾಲತ್‌ನಾಮೆ ವಗೈರೆ	.	.	100ಕ್ಕೆ		0-10—0.
ಗೇಣಿಚೀಟು ಫೋರ್ಮು	.	.	,,		0-12—0.
ಪರ್ಮೀಟು ಫೋರ್ಮು		.	,,		0-12—0.

ವಿಳಾಸ:— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಈಗಲೇ ಬಂದಿರುತ್ತವೆ! ಈಗಲೇ ಬಂದಿರುತ್ತವೆ!!

ಬೇಸಿಗೆಕಾಲಕ್ಕೂ ಮಳೆಗಾಲಕ್ಕೂ

ಉಪಯೋಗವಾಗುವಂಥಾ

ಪಾದರಕ್ಷೆ ಜೋಡುಗಳು!

ಕಾರವಾರಿನಲ್ಲಿ ಹದಮಾಡಿದ ಚರ್ಮದಿಂದ ನೂತನವಾಗಿ ತಯಾರಿಸಿದ ಒಳ್ಳೇ ಮೆಟ್ಟಿನ ಜೋಡುಗಳು ನಮ್ಮಲ್ಲಿ ಬಂದಿರುತ್ತವೆ. ನಮಗೆ ವಿಕ್ರಿತಕ್ಕೆ ಬೇಕಾಗುವಷ್ಟು ಊಚು ಜೋಡುಗಳು ಈ ಸಾರಿ ಸಿಕ್ಕಲಿಲ್ಲವಾದ್ದರಿಂದ ತಯಾರಿರುವ ಜೋಡುಗಳು ಖರ್ಚಾಗುವ ಮೊದಲೇ ಬೇಕಾದವರು ಬೇಗನೇ ನಮ್ಮಿಂದ ತರಿಸಿಕೊಳ್ಳಬೇಕಾಗಿ ನಮ್ಮ ಮಿತ್ರರಿಗೂ ಗಿರಾಕಿಯವರಿಗೂ ತಿಳಿಸುವರೆ ಸಂತೋಷಪಡುತ್ತೇವೆ.

							ಪ್ರತಿ ಜೋಡಿಗೆ
ಸಾದಾ ಜೋಡುಗಳು		ಸಣ್ಣ ಸ್ಟ್ಯಾಜ್	ಕ್ರಯ			ರೂ	1—6—0
ಡಿ.	ಡಿ.	ದೊಡ್ಡ	ಡಿ	,,		,,	1—8—0.
A ಮಾರ್ಕ್ ಮಳೆಗಾಲದ		ಸಣ್ಣ	ಡಿ	,,	.	,,	1-12—0
ಡಿ	ಡಿ	ದೊಡ್ಡ	ಡಿ	,,		,,	2—0—0.
ಡಿ	ಡಿ	ಸ್ಪೆಶಲ್		,,	.	,,	2—4—0.

ಜೆ ಎಸ್ ಸೋಜ್ಹ ಮತ್ತು ಕಂಪೆನಿ,
ಹಂಪನಕಟ್ಟಾ, ಮಂಗಳೂರು, ದ ಕ.

NOTICE.

In the Court of the District Munsif of Kundapur.

O. P. No $\frac{27}{15}$

Balamma (minor) widow of Seshappa Sheregara, by next friend Kodi Subraya Sheregara } Petitioner

AND

Balayya Sheregara & another C Petitioners.

Take notice that the next friend of the minor petitioner has applied for the issue of a succession Certificate to this court, empowering him to collect on behalf of the Minor Petitioner, the debts due to her deceased husband Seshappa Sheregara of Kandavara Village, Coondapoor Taluk and that objections to the grant of such certificate will be heard before the said Court on 22nd July 1915 at 10 A. M.

Coondapoor, 4th July 1915. }

K. K. Bhandari
Pleader for Petitioner.

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

ಕ್ರಮ ನಂಬ್ರ $\frac{327}{1915}$.

ಕಲ್ಯಾಣಪುರ ಶಿವರಾವ್ ಸಹಾ . . . ವಾದಿರು
(ವಕೀಲ್—ಮಿಸ್ಟರ್. ಕೆ ಪಿ ಅಚ್ಯುತಯ್ಯ)
ಮತ್ತು
ಚಂದಾವರ ರಾಘವೇಂದ್ರ ರಾವ್ . . ಪ್ರತಿವಾದಿ.

ಕಾಸರಗೋಡು ಶ್ರೀ ಪಾಂಡುರಂಗ ದೇವಸ್ಥಾನದ ಬಾಬ್ತು ಪ್ರತಿವಾದಿಯ ಸ್ವಾಧೀನ ಇರುವ ಕೆಲವು ಸೊತ್ತುಗಳನ್ನು ಬರಮಾಡಿಕೊಳ್ಳುವ ಬಗ್ಗೆ ಕಾಸರಗೋಡು ಕಸಬಾ ನಿವಾಸಿಕ ಸಾರಸ್ವತ ಬ್ರಾಹ್ಮಣ ಹತ್ತು ಸಮಸ್ತರ ಕಡೆಯಿಂದ 1ನೇ ಕಲ್ಯಾಣಪುರ ಶಿವರಾವ್, 2ನೇ ವ ಆನಂದರಾವ್, 3ನೇ ಚಂದಾವರ ಶ್ರೀನಿವಾಸರಾವ್, 4ನೇ ಚಂದಾವರ ರಾಮರಾವ್, 5ನೇ ಎಸ್. ಎಸ್ ರಾಮರಾವ್, 6ನೇ ಬಗ್ಗೆ ಸುಬ್ರಾವ್, 7ನೇ ಮಂಜೇಶ್ವರ ಕೃಷ್ಣಯ್ಯ ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವು ಇದೇ ಬರುವ ಅಗೋಸ್ತು 16ಕ್ಕೆ ಪ್ರಥಮ ತನಿಕೆಗೆ ಇಟ್ಟದೆ ಎಂಬ ಸಂಗತಿ ಕಾಸರಗೋಡು ನಿವಾಸಿಕರು ಸದರಿ ಸಾರಸ್ವತ ಬ್ರಾಹ್ಮಣ ಮಂಡಳಿಯ ಎಲ್ಲಾ ಮೆಂಬರರಿಗೆ ಈ ಮೂಲಕ ತಿಳಿಸಲಾಗುತ್ತದೆ.

V. Kunhiraman Nair,
District Munsif.

Shri Krishnan Brothers,

CHEMISTS & OPTICIANS, POST BOX NO. 165, MADRAS.

Compound Extract of Sarsaparilla with Iodides.

THE BEST BLOOD PURIFIER

The best remedy for *Boils*, Pimples, Rheumatism, Ulcers, Sores, etc.

Price bottle Rs 2 Packing and postage extra

Jasmine or Rose Scented Hair Oil.

THE BEST HAIR OIL.

They promote the growth of hair, render them beautiful. They are known for fragrance of fresh Jasmine or Rose flowers.

Price bottle As 12 Packing and postage extra.

Rose Water.

The finest and genuine Parisian concentrated from pure petals

Price per lb 1—8—0 Packing and postage extra.

gangau.

A NICE BURMESE PERFUME.

For the Handkerchief

It is a powerful and lasting perfume. It is largely used by all classes of people throughout India, Burma and Ceylon

Price bottle 1—4—0 } Postage & packing extra
Box of 3 bottles 3—8—0 }

Bivine.

THE BEST BLOOD TONIC.

It increases the red corpuscles of the blood and makes people look bright, Rosy and Cheerful. It strengthens the exhausted nervous system.

Price per bottle Rs. 2—8—0 Postage & packing extra.

Asthma Cure.

THE BEST CURE FOR ASTHMA.

Guaranteed cure even worst cases of Asthma of many years duration

Price per bottle Rs 1—8—0 Packing and postage extra.

Our own wnedne Balm.

THE BEST CURER OF ALL KINDS OF PAINS.

Surest remedy for Rheumatism, pain in the Joints, Headache of all kinds, Chest complaints

Price per bottle As 12 Packing and postage extra.

Chlorodyne and Camphorodyne.

The best medicine for cholera, dearrhœa, dysentery etc

Price per bottle As 10 Postage and packing extra.

ರಕ್ತ ಶುದ್ಧಿ ಬಗ್ಗೆ ಬಹಳ ಗುಣಕಾರಿಯಾಗಿರುವಂಥಾ ಆಯೊಡ್ಯಾಡ್ ಎಂಬ ಲವಣದಿಂದ ಕೂಡಿರುವ

ಕಂಪೌಂಡ್ ಎಕ್ಸ್ಟ್ರೆಕ್ಟ್ ಒವ್ ಸರ್ಸಪರಿಲ್ಲಾ.

ಇದರ ಸೇವನೆಯಿಂದ ಕುರುಗಳು, ಮುಖದ ಮೇಲೆ ಕಾಣಿಸಿಕೊಳ್ಳುವ ಮೊಡವೆ ಇತ್ಯಾದಿಗಳು ಅದೃಶ್ಯವಾಗುವವಲ್ಲದೆ ವಾತ, ವೃಣ ಸಹ ಗುಣಹೊಂದುವವು.

ಬಾಟ್ಲಿ ಒಂದಕ್ಕೆ ರೂ ೨

ಮಲ್ಲಿಗೆ ಅಥವಾ ಗುಲಾಬಿಹೂಗಳ ಸುವಾಸನೆಯಿಂದ ತುಂಬಿರುವ

ಕೇಶವರ್ಧಕ ತೈಲವು.

ಇದರ ಉಪಯೋಗದಿಂದ ಕೂದಲುಗಳು ಸೊಗಸಾಗಿ ಬೆಳೆಯುವವು. ಅರಳಿದ ಮಲ್ಲಿಗೆ ಮತ್ತು ಗುಲಾಬಿ ಹೂವುಗಳ ನವೀನ ಪರಿಮಳವುಳ್ಳ ಈ ಎಣ್ಣೆಯು ಅದರ ಸುವಾಸನೆ ಬಗ್ಗೆ ಖ್ಯಾತಿಗೊಂಡಿರುವದು. ಬಾಟ್ಲಿ ೧ಕ್ಕೆ ಅಣೆ ೧೨

ಗುಲಾಬಿ ನೀರು.

ತಾಜಾ ಪಾರೀಸು ನಗರದ ಗುಲಾಬಿಹೂವುಗಳ ಎಸಳುಗಳಿಂದ ತಯ್ಯಾರಿ ಸಲ್ಪಟ್ಟದ್ದು. ಪೌಂಡು ಒಂದಕ್ಕೆ ರೂ. ೧—೮—೦.

ಗಂಗಾ.

ಕಿಸೆವಸ್ತ್ರಕ್ಕೆ ತಕ್ಕದಾದ ಪರಿಮಳ ದ್ರವ್ಯವು. ಇದನ್ನು ಲೇಪಿಸಿದರೆ ಸುಗಂಧವು ಬಹಳ ಕಾಲದವರೆಗಿರುವದು. ಹಿಂದೂಸ್ಥಾನ, ಬರ್ಮ ಮತ್ತು ಸಿಲೋನ್ ದೇಶಗಳಲ್ಲಿ ಬಹಳವಾಗಿ ಉಪಯೋಗಿಸಲ್ಪಡುತ್ತದೆ. ಬಾಟ್ಲಿ ಒಂದಕ್ಕೆ ಕ್ರಯ ರೂ. ೧—೪—೦, ಮೂರು ಬಾಟ್ಲಿಗಳುಳ್ಳ ಪೆಟ್ಟಿಗೆಯೊಂದಕ್ಕೆ ರೂ. ೩—೮—೦.

ರಕ್ತವೃದ್ಧಿ ಬಗ್ಗೆ ಉತ್ಕೃಷ್ಟವಾದ ಔಷಧಿಯು.

ರಕ್ತವೃದ್ಧಿ ಬಗ್ಗೆ ಮುಖ್ಯವಾಗಿ ರಕ್ತದಲ್ಲಿ ಹೆಚ್ಚಿರಬೇಕಾದಂಥಾ ಕೆಲವು ಅಣುಗಳ ಬೆಳವಣಿಗೆಗೆ ಈ ಔಷಧಿಯು ಬಹಳ ಅನುಕೂಲವಾಗಿದೆ. ಜೀರ್ಣಾವಸ್ಥೆಯಲ್ಲಿರುವ ನರ ಸಂಸ್ಥಾಯವನ್ನು ಸಹ ಇದು ಬಲಪಡಿಸುವದು. ಬಾಟ್ಲಿ ೧ಕ್ಕೆ ೨-೮-೦.

ನೇವಸಕ್ಕೆ ಸಿದ್ಧೌಷಧ.

ಅನೇಕ ವರ್ಷಗಳಿಂದ ಇದ್ದ ಕಠಿಣತರದ ನೇವಸವಾದರೂ ಈ ಔಷಧದಿಂದ ಗುಣವಾಗುವದು. ಸೀಸೆ ೧ಕ್ಕೆ ರೂ. ೧—೮—೦.

ಬಹಳ ವರುಷಗಳಿಂದ ನಮ್ಮ ಅನುಭವದಿಂದ ಒಳ್ಳೇ ಗುಣಕಾರಿ ಎಂತ ಹೆಸರುವಾಸಿಯಾಗಿರುವ ಬೇನೆಹಾರಿ ಮುಲಾಮು ಅಥವಾ ಬಾಮ್.

ವಾತ, ಸಂಧುವಾತ, ತಲೆಸಿಡಿತ, ಎದೆನೋವು ಮೊದಲಾದ ನೋವುಗಳ ನಿವಾರಣೆಗೆ ಇದು ಬಹಳ ಉಪಯೋಗಕರವಾಗಿದೆ. ಬಾಟ್ಲಿ ೧ಕ್ಕೆ ಅಣೆ ೧೨.

ಕ್ಲೋರೋಡ್ಯಾನ್ ಮತ್ತು ಕೆಂಫರೋಡ್ಯಾನ್.

ವಾಂತಿಭೇಧಿ, ಅತಿಸಾರ, ರಕ್ತಾತಿಸಾರ ಮೊದಲಾದವುಗಳ ಬಗ್ಗೆ. ಬಾಟ್ಲಿ ೧ಕ್ಕೆ ಅಣೆ ೧೦

ಮೇಲಿನ ಔಷಧಗಳ ಕ್ರಯದಲ್ಲಿ ಟಪ್ಪಾಲು ಮೂಲಕ ಕಳುಹಿಸಿಕೊಡುವ ಖರ್ಚು ಕೂಡಿರದು. ಆದ್ದರಿಂದ ಟಪ್ಪಾಲು ಹಾಸಲು ಪ್ರತ್ಯೇಕವಿರುವುದು.

ವಿಳಾಸ:— ಶ್ರೀ ಕೃಷ್ಣನ್ ಬ್ರದರ್ಸ್, ಔಷಧಿವ್ಯಾಪಾರಸ್ಥರು, ಪೋಸ್ಟ್ ಬೋಕ್ಸ ನಂಬ್ರ 165, ಮದ್ರಾಸು.

ಸವಿನುಡಿಯ ಗ್ರಂಥಮಾಲೆ.

೧. ಪ್ರಶ್ನೋತ್ತರ ಲೇಖ್ಯಬೋಧಿನಿ. ಲೋಕವ್ಯವಹಾರವನ್ನು ಬೋಧಿಸುವುದು ... ... ೧—೭—೦

೨. The Self English Study ..
ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ ... (ಇಂಗ್ಲೀಷು ವರ್ಣಮಾಲೆ ಮೊದಲು) ೧—೩—೦
ಆಂಗ್ಲಭಾಷಾ ಪ್ರವೇಶದಾಯಿನಿ ..

೩. The Self English Study ..
ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ ... ೧—೩—೦
ಆಂಗ್ಲಭಾಷಾ ಪ್ರವೇಶದಾಯಿನಿ ...

೪. The Self English Study ...
ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ ... ೧—೩—೦
ಆಂಗ್ಲಭಾಷಾ ಪ್ರವೇಶದಾಯಿನಿ ...

ಇವು ಮೂರು ಪುಸ್ತಕಗಳೂ ಬೋಧಕರ ಸಹಾಯವಿಲ್ಲದೆ ಇಂಗ್ಲಿಷ್‌ಭಾಷೆಯನ್ನು ತಿಳಿಸುವುದು.

೫. ಕಥಾ ಸರಿತ್ಸಾಗರ (ಪೂರ್ವಭಾಗ). ಪಾರ್ವತೀ ದೇವಿಗೆ ಪರಮೇಶ್ವರನು ಹೇಳಿದ ದಿವ್ಯವಾದ ಕಥೆಗಳು .. ... ೧-೧೨—೦

೬. ಮಾಧವೀ ಕಂಕಣ (ಬೆಂಗಾಳಿ ನಾವಲು). ಕೀರ್ತಿಶೇಷರಾದ ರಾಮೇಶ ಚಂದ್ರದತ್ತ ಮಹಾಶಯ ರಚಿತ. ಅಗತ್ಯ ಓದತಕ್ಕದ್ದು ೧—೮—೦

೭. ಭಾಷಾನಿಧಿ. ಒಂಭತ್ತು ಲಿಪಿ ಮತ್ತು ಒಂಭತ್ತು ಭಾಷೆಗಳನ್ನು ಬೋಧಕರ ಸಹಾಯವಿಲ್ಲದೆ ಕಲಿಸುವುದು.

೧ ವರ್ಣ ಪರಿಜ್ಞಾನ (೧ನೆ ಪುಸ್ತಕ) ... ... ೧-೧೨—೦
೨. ಶಬ್ದ ಪರಿಜ್ಞಾನ (೨ನೆ ಪುಸ್ತಕ) ... ... ೧-೧೪—೦
೩. ವಾಕ್ಯ ಪರಿಜ್ಞಾನ (೩ನೆ ಪುಸ್ತಕ) ... .. ೧-೧೨—೦

೮. ಶಕ್ತಿ (ಬಂಗಾಳೆಯ ನಾವಲು). ಓದುವುದಕ್ಕೆ ಬಲು ಚೆನ್ನಾಗಿದೆ ... ... ೦ ೧೫—೦

೯. ಭೂಮಿಯ ಅಳತೆ. ಬೋಧಕರ ಸಹಾಯವಿಲ್ಲದೆ ಈ ಕಂಕುಬೋಜಣೆಯನ್ನು ಕಲಿಸುವುದು ೦-೧೨-೦

೧೦. ಸಾವಿತ್ರೀ. (ಬಂಗಾಳೆಯ ನಾವಲು) ... ... ೦—೪—೦
೧೧. ಸತೀ ದೇವಿ. (ಬಂಗಾಳೆಯ ನಾವಲು) ... ೦—೪—೦
೧೨ ದಮಯಂತಿ. (ಬಂಗಾಳೆಯ ನಾವಲು) ... ೦—೪—೦
೧೩. ಸಂಯುತೆ. (ಬಂಗಾಳೆಯ ನಾವಲು) ... ೦—೪—೦
೧೪. ಶ್ರೀ ವಿವೇಕಾನಂದ ಸ್ವಾಮಿ. (ಸಚಿತ್ರ ಚರಿತ್ರೆ) ೦—೪—೦
೧೫. ಶ್ರೀ ವಿವೇಕಾನಂದೋಪನ್ಯಾಸ. (ಹಿಂದೂಮತ) ... ೦—೪—೦
೧೬. ತಾರಾನಾಥ. (ಜೀವನ ಚರಿತ್ರೆ) .. ... ೦—೪—೦
೧೭. ದಾದಾಭಾಯಿ ನೌರೋಜಿ ... ... ೦—೧—೦
೧೮. ಸರ್ ಟಿ. ಮಾಧವ ರಾವ್ .. .. ೦—೧—೦
೧೯. ಈಶ್ವರ ಚಂದ್ರ ವಿದ್ಯಾಸಾಗರ... ... ... ೦—೧—೦
೨೦. ರಾಮಮೋಹನರಾಯಿ ... ... ೦—೧—೦

ಭಾರತಿ ಸಂಪಂಗಿರಾಮು,
೪೨. ಸಿ. ಪೇಟೆ ಕೋಟೆ, ಬೆಂಗಳೂರು ಸಿಟಿ.

ಅಶಕ್ತರಾದ ಸ್ತ್ರೀಯರಿರಾ!!!

ಗರ್ಭಾವಸ್ಥೆಯಲ್ಲಿಯು, ವ ಅನಂತರ ತೋರಿಬರುವ ಸರ್ವ ಬಗೆಯ ವಿಕಾರಗಳಿಗೆ ನಿಮಗೆ ಒಂದು ಉಪಾಯವು ಅಗತ್ಯವಿರುವುದು ಆ ಉಪಾಯವಾವದೋ

"ಗುಡೆರಿನ್"

ಎಂಬ ಹೆಸರಿನ, ಈ ಔಷಧವನ್ನು ಸೇವಿಸುವುದೇ! ಸೂರ್ಯನಕಿರಣಗಳು ಇಬ್ಬನಿಯ ಮೇಲೆ ಎರಗುತ್ತಲೇ ಇಬ್ಬನಿಯೆಲ್ಲವೂ ಹೇಗೆ ಆರಿಹೋಗುವುದೋ, ಅದೇ ಮರ್ಯಾದೆಯಲ್ಲಿ ಅಶಕ್ತರಾದ ಸ್ತ್ರೀಯರು ಈ "ಗುಡೆರಿನ್" ಎಂಬ ಔಷಧವನ್ನು ಸೇವಿಸುತ್ತಲೇ, ಅವರ ಶಾರೀರಕ ದುಃಖಗಳೆಲ್ಲವೂ ಅತ್ಯಲ್ಪಕಾಲದಲ್ಲಿಯೇ ಹುಟ್ಟಡಗಿ ಹೋಗುವವು. ಅನಿಯಮಿತವಾದ ಋತುಸ್ರಾವ, ಅಶಕ್ತತೆ, ಇವೆಲ್ಲ ರೋಗಗಳಿಗೆ ಇದು ರಾಮಬಾಣವೇ ಸರಿ.

ಹದಿನಾರು ಸಾವಿರ (16,000)

ಸ್ತ್ರೀಕ ಹೆಚ್ಚು ಡಾಕ್ಟರರು ಬಹಳ ಸೂಕ್ಷ್ಮತೆಯಿಂದ ಈ "ಗುಡೆರಿನನ್ನು" ಶೋಧಿಸಿ, ಮೇಲೆ ಹೇಳಿದ ರೋಗಗಳಿಗೆ ಇದೇ ಸಿದ್ಧೌಷಧವೆಂದು ನಿರ್ಧಾರಗೈದಿರುವದರಿಂದ, ಈ ಔಷಧವು ಅಸಂಖ್ಯವಾದ ಔಷಧಾಲಯಗಳಲ್ಲಿ ಉಪಯೋಗಿಸಲ್ಪಡುತ್ತದೆ. ಇದು "ಹಿಸ್ಟಿರಿಯಾ" ಮೊದಲಾದ ಸ್ತ್ರೀಯರ ಋತುಸ್ರಾವ ಸಂಬಂಧವಾದ ಸರ್ವರೋಗಗಳಿಗೂ ಮಹೋಪಕಾರಿಯು. ಪ್ರಕೃತ ಪ್ರಸೂತವಾದೊಡನೆ ಅನೇಕ ಔಷಧಿಗಳನ್ನು ಉಪಯೋಗಿಸುವ ಬದಲಿಗೆ, ಇದನ್ನು ಉಪಯೋಗಿಸಿ ನೋಡಿದ್ದಲ್ಲಿ ಇದರ ಗುಣ [illegible] ತಿಳಿಯುವದು. ಸೀಸೆ ೧ರ ಕ್ರಯ ರೂಪಾಯಿ 3-4-0. ಟ. ಖ. ಸೀಸೆಗೆ 0-7-0.

ದಿ. ಯೂನಿಯನ್ ಮಾರ್ಟ್. ಮಂಗಳೂರು.

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲ್ಲಿ ನಡದಿರುವ ಯಗ್ಜಬೀಶನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರತಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ.

ಊದಬತ್ತಿಗಳು 4 ರೂ. ತೂಕದ ಶೇರು 1ಕ್ಕೆ ರೂ, 12-0-0, 5-0-0, 3-0-0. 2—8—0, 1—4—0, 1—0—0.

ಅರಗಜ ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2—0—0, 1—0—0 0—12—0, 0—6—0

ಸುಗಂಧಿ ಕಾಡುರ್ 1ಕ್ಕೆ 0—1—0. **ಬಾಲಗ್ರಹ** ಧೂಪ ಟಿನ್ 1ಕ್ಕೆ 0—8—0. **ಸುವಾಸನೇ ಸುಣ್ಣ** ಶೀಸೆ 1ಕ್ಕೆ 0-2-0, ಇದಲ್ಲದೆ ಇನ್ನು **ಅನೇಕ ತರಹ ಸೆಂಟ್ಸು**ಗಳು, ಯಸೆನ್ಸಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಬಣ್ಣದ ಸಾಮಾನುಗಳು ಸಹ ಇರುತ್ತವೆ. ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್

ಸುಗಂಧಕಾರಿ, ಮೈಸೂರು.

ದಿ. ಇನ್‌ವೆನ್ಷನ್ ವಾಚು ರೂ. 3.



ಇದನ್ನು ಈಗ ತಾನೇ ತರಿಸಿರುತ್ತೇವೆ. ರಾಸ್ಕೋಪ್ ರೈಲ್ವೇ ವಾಚುಗಳಿಗಿಂತಲೂ ಬಹಳ ಶ್ರೇಷ್ಠವಾದುದಲ್ಲದೆ ಕಾಲವನ್ನು ಸಹಿತ ಬಹು ಕ್ರಮವಾಗಿ ತೋರಿಸತಕ್ಕದ್ದಾಗಿರುತ್ತದೆ. ಇದರ ನಮೂನೆಯಾದರೂ ಬಹಳ ಚೆನ್ನಾಗಿರುತ್ತದೆ. ಇದಕ್ಕೆ 5 ವರುಷದ ಗ್ಯಾರಂಟಿಯುಂಟು. ಇದರ ಕ್ರಯ ರೂ. 3—0—0. ಪೋಸ್ಟು ಖರ್ಚು ವಗೈರೆ ಮಾಫಿ ಇರುತ್ತೆ.

ನಿಕ್ಕಲ್ ಚಿಕ್ಕ ಸೈಜು ಲೇಡಿ ವಾಚು ...	...	ಕ್ರಯ 3-12-0
8 ದಿವಸಕ್ಕೆ ಬೀಗಕೊಡುವ ಕೈಗಡಿಯಾರ	...	,, 7-8-0
ರೈಲ್ವೇ ರೆಗ್ಯುಲೇಟರ್ ವಾಚು ...	...	,, 3-8-0
ರಾಸ್ಕೋಪ್ ವಾಚು	...	,, 2-12-0
ಸಾದಾ ಟೈಂಪೀಸು	...	,, 1-12-0
ಅಲಾರಂ ಟೈಂಪೀಸು	...	,, 2-14-0

ಎಡ್ರೆಸ್:— ಎ ಟಿ. ಎನ್. ಜಯಾಕ್ಷಿ ಕಂಪೆನಿ,
ನಂ. 41 ಕಾಟುಪಿಳ್ಳಾರು ಕೋವಿಲ್ ಸ್ಟ್ರೀಟ್,
ಸಾಹುಕಾರುಪೇಟೆ, ಪೋಸ್ಟು ಮದರಾಸು.

B. Narasimha Prabhu,

Bantval,

(SOUTH CANARA).

AGENT FOR

Malabar and

South Canara.

ಸೆನ್ ಸೆನ್. SEN SEN.)

ಕಂಠದಲ್ಲಿ ಉಂಟಾಗುವ ದೋಷಗಳನ್ನು ನಿವಾರಿಸಿ ಸುಖವನ್ನೀಯುವುದು.

ಶ್ವಾಸದಲ್ಲಿ ಸುವಾಸನೆಯನ್ನುಂಟುಮಾಡುವುದು

ಸೆನ್ ಸೆನ್ ಇದರ ಗುಣವು ಇಷ್ಟೇ ಅಲ್ಲ. ಆರೋಗ್ಯವನ್ನು ಸರಿಪಡಿಸುತ್ತದೆ, ಬಹಳ ಮನೋಹರವಾದ ರುಚಿಯುಳ್ಳದ್ದಾಗಿದೆ. ಸ್ವರವನ್ನು ಸ್ಪಷ್ಟಗೊಳಿಸಿ ಬಲಪಡಿಸುವದು, ಸಂಗೀತಗಾರರಿಗೆ, ಪ್ರಸಂಗಗಳನ್ನು ಮಾಡುವ ಉಪದೇಶಕರಿಗೆ, ಭಾಷಣಗಳನ್ನು ದೊಡ್ಡ ದೊಡ್ಡ ಸಭೆಗಳಲ್ಲಿ ಮಾಡುವಂಥವರಿಗೆ ಇದು ಬಹಳ ಉಪಯೋಗಕರವಾಗಿರುವುದು

ಸೆನ್ ಸೆನ್ — ಇದರ ಕೆಲವು ಹರಳುಗಳನ್ನು ವೀಳ್ಯದೊಂದಿಗೆ ಸೇವಿಸಿದರೆ ವೀಳ್ಯದ ರುಚಿಯು ಬಹಳ ಸೊಗಸಾಗುವುದು

ಸೆನ್ ಸೆನ್ — ಅಜೀರ್ಣ ಮೊದಲಾದ ಜೀರ್ಣಕೋಶದ ದೋಷಗಳಿಗೆಲ್ಲಾ ದಿವ್ಯ ಔಷಧಿಯಾಗಿರುವುದು. ಕಂಠದಲ್ಲಿ ಬಹಳ ಸೀತಳವಾದ ಮತ್ತು ಸುಖಕರವಾದ ಭಾವನೆಯು ಇದರ ಸೇವನೆಯಿಂದ ಉಂಟಾಗುತ್ತದೆ. ಬೀಡಿ, ಚುಟ್ಟಾ ವಗೈರೆಗಳನ್ನು ಸೇದಿದ ನಂತರ ಸೆನ್‌ಸೆನ್‌ನ್ನು ಉಪಯೋಗಿಸಿದರೆ ಬಾಯಿಯ ಕೆಟ್ಟ ವಾಸನೆಯನ್ನು ಹೋಗಗೊಳಿಸಿ ಸುವಾಸನೆಯನ್ನುಂಟುಮಾಡುವುದು. 3 ಆಣೆ ಕ್ರಯದ ಒಂದು 'ಪೆಕೆಟನ್ನು' ಬಹಳ ಕಾಲ ಉಪಯೋಗಿಸಬಹುದು.

ಅರ್ಧಾಣೆಯ ಸ್ಟಾಂಪನ್ನು ಕಳುಹಿಸಿಕೊಟ್ಟರೆ ಮಾದರಿ ಪೆಕೆಟನ್ನು ಉಚಿತವಾಗಿ ಕಳುಹಿಸಿಕೊಡುವೆವು

Address:—	ನಮ್ಮ ವಿಳಾಸ —
Muller & Phipps.	ಮುಲ್ಲರ್ ಎಂಡ್ ಫಿಪ್ಸ್,
21 Sankurama Chetty Street,	21 ಸಂಕುರಾಮಚೆಟ್ಟಿ ರಸ್ತೆ,
MADRAS.	ಮದರಾಸು.

ನ್ಯಾಯದರ್ಪಣ.

ಹೊಸ ಪುಸ್ತಕ

ಇಂಡಿಯಾ ದೇಶದ ಸಮಸ್ತ ಹಿಂದೂ ಜನರ ಸಾಮಾನ್ಯ ಧರ್ಮಗಳು, ಅವುಗಳನ್ನು ಅತಿಕ್ರಮಿಸಿ ನಡೆಯುವವರಿಗೆ ಉಂಟಾಗತಕ್ಕ ಫಲಗಳು, ಇವುಗಳನ್ನು ಕುರಿತು, ಗವರ್ನಮೆಂಟಿನವರಿಂದ ಅನೇಕ ಆಕ್ಟುಗಳು, ರೆಗ್ಯುಲೇಷನ್‌ಗಳು, ಶಾಸನಗಳು ವಗೈರೆ ವಿಧಾಯಕವಾಗಿ ಇರುತ್ತೆ. ಇವುಗಳೆಲ್ಲಾ ಇಂಗ್ಲೀಷ್ ಭಾಷೆಯಲ್ಲಿಯೇ ಅಪಾರವಾಗಿ ಇರುತ್ತವೆ. ಇವುಗಳಲ್ಲಿ, "ಕಂಟ್ರಾಕ್ಟ್" ಅಂದರೆ ಕರಾರುಗಳು, "ಬ್ರೀಚ್ ಆಫ್ ಕಂಟ್ರಾಕ್ಟ್" ಅಂದರೆ ಒಪ್ಪಂದಕ್ಕೆ ತಪ್ಪಿ ನಡೆಯೋಣ, ದ್ರೋಹ, ಲಿಮಿಟೇಷನ್, ಛಾಪಾ ಕಾಗದ, ರಿಜಿಸ್ಟ್ರೇಷನ್, ಸಿವಿಲ್ ಪ್ರೊಸಿಡ್ಯೂರ್, ಕ್ರಿಮಿನಲ್ ಪ್ರೊಸಿಡ್ಯೂರ್, ಪೀನಲ್ ಕೋಡ್, ಹಿಂದೂ ಲಾ, ಮುಂತಾದ ಧರ್ಮಶಾಸ್ತ್ರಗಳಿಂದ, ಮನುಷ್ಯರ ನಿತ್ಯಾಚರಣೆಗೆ ಅವಶ್ಯಕವಾದ ಲೌಕಿಕ ವ್ಯವಹಾರ ಧರ್ಮಗಳ ಮುಖ್ಯ ಸಂಗತಿಗಳನ್ನೆಲ್ಲಾ ಆರಿಸಿ ಈ ಸಣ್ಣ ಪುಸ್ತಕವನ್ನು ರಚಿಸಿರುತ್ತೆ ಮತ್ತು ವಾಡಿಕೆಯಲ್ಲಿ ಇರತಕ್ಕ ನಾನಾ ವಿಧಗಳಾದ ದಸ್ತೈವಜುಗಳ ಅನೇಕ ನಮೂನೆಗಳು ಮತ್ತು ಕ್ರಿಮಿನಲ್ ರಿವಿನ್ಯು ಗ್ರಾಮ ಮುನಸೀಫ್ ಕೋರ್ಟುಗಳ ಮುಂದಿನ ದಾವಾ ವಗೈರೆ ಅರ್ಜಿಗಳ ಮಾದರಿಗಳು ಅಡಕವಾಗಿ ಇರುತ್ತೆ. ಬೆಲೆ 1—8—0. ವಿ. ಪಿ. 1—12—0

ಲಾಯರ್ ಯಂ ಯಸ್. ನಂಜಪ್ಪನವರು,

ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

11 ಪುಸ್ತಕಗಳನ್ನು ಒಟ್ಟಾಗಿ ತರಿಸಿಕೊಂಡರೆ ಪೋಸ್ಟೇಜು ಸೇರಿ 15-0-0 ಆಗುತ್ತೆ.

ಚುರುಕಾದ ಏಜಂಟರು ಬೇಕಾಗಿರುವರು! ಧಾರಾಳವಾದ ಕಮಿಷನ್!!

ಮುಂದಿನ ಅಭಿವೃದ್ಧಿಗೆ ತುಂಬಾ ಅವಕಾಶವುಳ್ಳ ವೃತ್ತಿ!!!

ಮುಂಬಾಯಿ ಲೈಫ್ ಎಸ್ಯುರೆನ್ಸ್ ಕಂಪೆನಿ,

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು).

ಪ್ರಧಾನ ಆಫೀಸು: ಮುಂಬಯಿ.

ಅಧ್ಯಕ್ಷರು: — ಒಹುಮಾನಪಟ್ಟ ಮಿ। ಲಲ್ಲುಬಾಯಿ ಸಾಮಲ್ ದಾಸರವರ್ಣು, ಸಿ। ಐ. ಇ. ಜೆ. ಪಿ.

ಎಕ್ಚುವೆರಿ: — ಮಿ। ಜೋರ್ಜ್‌ಕಿಂಗ್ ಎಫ್. ಐ. ಎ. ಎಫ್. ಐ. ಎ.

ಮೆಡಿಕಲ್ ರಿಫರಿಗಳು. — ಡಾಕ್ಟಾರ್ ಆರ್. ರಾವ್, ಎಮ್. ಡಿ. ಡಿ. ಎಸ್. ಸಿ. (ಲಂಡನ್)

ಗೌರವಾರ್ಥಕ ಮ್ಯಾನೇಜರ್: — ರಾ। ಕೆ. ಸುಬ್ರಮಣ್ಯಯ್ಯರ್, ಬಿ. ಎ. ಜೆ. ಪಿ. ಎಫ್. ಎಸ್. ಎ. ಎ. (ಲಂಡನ್).

ವಿಮೆದಾರರ ವಿಮೆ ಪತ್ರಗಳ ಶರ್ತಗಳ ಪ್ರಕಾರ ಸಿಕ್ಕುವ ಹಣವು ಈ ಕಂಪೆನಿಯಲ್ಲಿ ಬಹಳ ಭದ್ರವಾಗಿರುವದೆಂತ ಲಕ್ಕ ವ್ಯವಸ್ಥಾಪಕರು ಅಭಿಪ್ರಾಯಪಟ್ಟಿರುವರು.

ತರುಣಾವಸ್ಥೆಯಲ್ಲಿರುವ ಈ ಕಂಪೆನಿಯು ಮುಂದಕ್ಕೆ ಇನ್ನೂ ಬಹಳ ಅಭಿವೃದ್ಧಿಯನ್ನು ಹೊಂದುವ ವಿಶೇಷ ಸಂಭವಗಳಿಂದ ಕೂಡಿರುವುದೆಂದು "ಕೊಮರ್ಸ್" ಎಂಬ ಪತ್ರಿಕೆಯ ಅಭಿಪ್ರಾಯವಾಗಿರುವುದು.

ಇಂಡಿಯಾ ಸರಕಾರದ ಭದ್ರತೆಯಲ್ಲಿ ರೂ. 1,55,000ವನ್ನು ಠೇವಣಾತಿಯಾಗಿಟ್ಟಿರುವದು.

ಹಣ ಕಳುಹಿಸಿಕೊಡುವ ಏಜನ್ಸಿ ಬಗ್ಗೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ:—

ಕೊಟ್ಟಾರಿ ಬ್ರದರ್ಸ್, ಉಡುಪಿ,

ಕನ್ನಡಾ, ಮಲಬಾರು, ತಿರುವಾಂಕೋಡು, ಮತ್ತು

ಕೂರ್ಗ ಪ್ರಾಂತ್ಯಗಳ ಪ್ರಾಮುಖ್ಯ ಏಜಂಟರು.

ಸೂಚನೆ. — ಮಂಗಳೂರಲ್ಲಿರುವ ಈ ಕಂಪೆನಿಯ ವಿಮೇದಾರರು ತಮ್ಮ ವಿಮೆ ಮೊಬಲಗುಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಟ್ಟು ಆ ಬಗ್ಗೆ ರಶೀದಿಯನ್ನು ಕೊಟ್ಟಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು

ಉಡ್ಪಿ, 3—7—1914.

ಮಹಾಶಯರೆ!

ಮುಂಬಾಯಿ ಲೈಫ್ ಎಸ್ಯುರೆನ್ಸ್ ಕಂಪೆನಿ ಎಂಬುವ ಜೀವವಿಮೆ ಉತ್ತರಾಯಿಸುವ ಸಂಘದ ಬಗ್ಗೆ ತಾವು ಏನೊಂದೂ ವಿಳಂಬವಿಲ್ಲದ, ರೂ. ೪೫೦—10—0ನ್ನು ನನಗೆ ಪಾವತಿಮಾಡಿದುದಕ್ಕಾಗಿ ಅತಿ ಉಪಕಾರವಾಯಿತು. ಸದರಿ ಪೋಲಿಸಿಯನ್ನು ಕುರಿತಾದ ಅಗತ್ಯವಾದ ಪತ್ರಗಳನ್ನು ಅವರಿಗೆ ಮುಟ್ಟಿಸಿದ ಮೂರೇ ದಿನಗಳೊಳಗಾಗಿ ನನಗೆ ಸಲ್ಲತಕ್ಕ ವಿಮೆಯ ಐವಜನ್ನು ತಮ್ಮ ಕಂಪೆನಿಯ ಡೈರೆಕ್ಟರುಗಳು ನನಗೆ ಪಾವತಿಮಾಡಿಸಿದುದಕ್ಕೋಸ್ಕರ ನನ್ನ ಧನ್ಯವಾದಗಳನ್ನು ಅವರಿಗೆ ದಯೆಯಿಟ್ಟು ತಿಳಿಸಿ. ಈ ತೆರದಲ್ಲಿ ಪೋಲಿಸಿದಾರರೊಡನೆ ಯಥಾರ್ಥವಾದ ರೀತಿಯಲ್ಲೂ ನಂಬುಗೆಯುಂಟಾಗುವಂತೆಯೂ ವರ್ತಿಸುವ ತಮ್ಮ ವಿಮೆ ಕಂಪೆನಿಯಿಂದ ಪ್ರತಿಯೊಬ್ಬನೂ ಒಂದೊಂದು ಪೋಲಿಸಿಯನ್ನಾದರೂ ಪಡೆಕೊಳ್ಳುವುದು ಉಚಿತವೆಂದು ನನ್ನ ಅಪೇಕ್ಷೆ.

(ದಸ್ಕತು) ಹಾಡಾಡಿ ಆನಂದರಾಯ ಘಡಿಯಾರನ ಋಜು.

(93ರನೇ ಪೋಲಿಸಿಯ ವಿಮಾ ಹಣವನ್ನು ಪಡೆಯಲು ಅಧಿಕಾರವುಳ್ಳವನು).

ಉಡ್ಪಿ, ತಾ. 20—8—1914.

ನನ್ನ ಎಳೇ ಪ್ರಾಯದಲ್ಲಿ ಮೃತರಾದ ನನ್ನ ಗಂಡ ಕೆ. ಎಲ್. ಪ್ರಭುಗಳ ವಿಮೆ ಪತ್ರಗಳನ್ನು ನಾನು ಕಳುಹಿಸಿಕೊಟ್ಟ ಕೆಲವೇ ದಿನಗಳೊಳಗಾಗಿ ಮುಂಬಾಯಿ ಲೈಫ್ ಎಸ್ಯುರೆನ್ಸ್ ಕಂಪೆನಿಯವರು ನನಗೆ ತತ್ಸಂಬಂಧವಾದ ಹಣವನ್ನು ಪಾವತಿಮಾಡಿಸಿದಾದಕ್ಕೆ ನಾನು ಕೃತಜ್ಞಳಾಗಿರುವೆನು. ನನ್ನ ಒಬ್ಬನೇ ಬಾಲಕನಿಗೆ ಇದೊಂದೇ ಮಾತ್ರ ಪಿತ್ರಾರ್ಜಿತವಾದ ಧನವಾಗಿದೆ. ಅಂತಹ ಬಡ ಹುಡುಗನಿಗೆ ಇದೊಂದು ಅಪೂರ್ವವಾದ ಮಹಾದಾನವನ್ನು ಮಾಡಿಕೊಟ್ಟುದಕ್ಕೆ ಪ್ರತಿಯಾಗಿ ನಿಮ್ಮ ಕಂಪೆನಿಯು ಚಿರಕಾಲವೂ ಸೌಭಾಗ್ಯದಲ್ಲಿರಲಿ!

ಭವಾನೀಬಾಯಿ, Pol. No. 1738.

ಸಾಕ್ಷಿ — ಭವಾನೀಬಾಯಿಯ ಸೋದರ ರಾ। ಕೆ. ರಂಗಪ್ಪ ನಾಗಪ್ಪ.

ಮಂಗಳೂರು, ತಾ. 30—10—1914.

ಸಾಧ್ಯವಾದಷ್ಟು ಕಡಿಮೆ ಸಮಯದೊಳಗಾಗಿ ನನಗೆ ಪಾವತಿಯಾಗತಕ್ಕ ಹಣವನ್ನು ಕೊಡಾಯಿಸಿದುದಕ್ಕೋಸ್ಕರ ಬೊಂಬೇ ಲೈಫ್ ಎಸ್ಯುರೆನ್ಸ್ ಕಂಪೆನಿಯವರಿಗೆ ನನ್ನ ಧನ್ಯವಾದಗಳನ್ನು ಪ್ರೀತಿಪೂರ್ವಕವಾಗಿ ಮುಟ್ಟಿಸಿರಿ! 'ಕ್ಲೈಮು' ಪ್ರಕಾರ ಎಲ್ಲ ಹಣವನ್ನು ಪಡೆಕೊಳ್ಳುವ ಹಾಗೆ ಕಂಪೆನಿಯ ಏಜಂಟರೇ ತಮ್ಮಿಂದಾಗುವಷ್ಟರ ಸಹಾಯವನ್ನು ಮಾಡುತ್ತಿರುವರಾದುದರಿಂದ ಎನಗೆ ಯಾವ ತೊಂದರೆಗಳೂ ಉಂಟಾಗಲಿಲ್ಲ. ಹಣವನ್ನು ನಾವಿದ್ದ ಸ್ಥಳಕ್ಕೆ ಬಂದು ಕೊಟ್ಟರು — [illegible] ತಮ್ಮ ಕಂಪೆನಿಯ ವಿಶೇಷ ಗುಣ. ನಿಮ್ಮ ಸಂಘಕ್ಕೆ [illegible]

ಅರ್ಕಳ ರಾಮಚಂದ್ರ ಶ್ಯಾನಭೋಗನ ಋಜು.

(Pol. No. 2319ನೆಯ [illegible]).

ಬಾಲಬೋಧ ಲಿಪಿಯ ಪುಸ್ತಕಗಳು.

ಋಗ್ವೇದ ಮಂತ್ರಸಂಹಿತಾ	1—0—0
,, ಬ್ರಹ್ಮಕರ್ಮ	2—8—0
,, ಸಂಧ್ಯಾವಂದನೆ	0—2—0
ಶಿಕ್ಷಾದಿ ಚತುಷ್ಟಯ	0—4—0
ಸಪ್ತಶತಿ ದೇವಿಮಹಾತ್ಮೆ, ಸ್ಥೂಲಾಕ್ಷರ, ರೇಶ್ಮೆ ಬ್ಯಾಂಡ್	0 12—0
ಸಪ್ತಶತಿ ದೇವಿಮಹಾತ್ಮೆ, ಮಧ್ಯಮಾಕ್ಷರ, ರೇಶ್ಮೆ ಬ್ಯಾಂಡ್	0 10—0
ಸಪ್ತಶತಿ ದೇವಿಮಹಾತ್ಮೆ, ಸಣ್ಣಕ್ಷರ, ರೇಶ್ಮೆ ಬ್ಯಾಂಡ್	0—7—0
ಅಧ್ಯಾತ್ಮರಾಮಾಯಣ ರೇಶ್ಮೆಬೈಂಡ್	1—0—0
ಸತ್ಯನಾರಾಯಣ ವ್ರತಕಥಾ	0—2—6
ವಿದುರನೀತಿ	0—8—0
ಭಗವದ್ಗೀತಾ, ಸ್ಥೂಲಾಕ್ಷರ, ರೇಶ್ಮೆ ಬ್ಯಾಂಡ್	0 12—0
ಭಗವದ್ಗೀತಾ ಮಧ್ಯಮಾಕ್ಷರ, ರೇಶ್ಮೆ ಬ್ಯಾಂಡ್	0—8—0
ಭಗವದ್ಗೀತಾ, ಸಣ್ಣ ಅಕ್ಷರ, ಕಾಗದ ಬ್ಯಾಂಡ್	0—6—0
ಭಗವದ್ಗೀತಾ, ಸಣ್ಣ ಅಕ್ಷರ, ರೇಶ್ಮೆ ಬ್ಯಾಂಡ್	0—4—0
ಮಹಾವಾಕ್ಯ ರತ್ನಾವಳಿ	0—3—0
ವಿಷ್ಣು ಸಹಸ್ರನಾಮಸ್ತೋತ್ರ, ಸ್ಥೂಲಾಕ್ಷರ, ರೇಶ್ಮೆ ಬ್ಯಾಂಡ್	0—4—0
ವಿಷ್ಣು ಸಹಸ್ರನಾಮಸ್ತೋತ್ರ, ಸ್ಥೂಲಾಕ್ಷರ, ಕಾಗದ ಬ್ಯಾಂಡ್	0—2—6
ವಿಷ್ಣು ಸಹಸ್ರನಾಮಸ್ತೋತ್ರ, ಮಧ್ಯಮಾಕ್ಷರ, ಕಾಗದ ಬ್ಯಾಂಡ್	0—2—0
ಪಂಚರತ್ನಗೀತಾ, ಸ್ಥೂಲಾಕ್ಷರ, ರೇಶ್ಮೆ ಬ್ಯಾಂಡ್	1—0—0
ಪಂಚರತ್ನಗೀತಾ ಮಧ್ಯಮಾಕ್ಷರ, ರೇಶ್ಮೆ ಬ್ಯಾಂಡ್	0 12—0
ಪಂಚರತ್ನಗೀತಾ ಮಧ್ಯಮಾಕ್ಷರ, ಕಾಗದ ಬ್ಯಾಂಡು	0—6—0
ಬೃಹಸ್ತೋತ್ರ ರತ್ನಾಕರ 182 ಸ್ತೋತ್ರಗಳು ಅಡಗಿರುವ ರೇಶ್ಮೆ ಬ್ಯಾಂಡು	0 12—0
ಬೃಹಸ್ತೋತ್ರ ರತ್ನಾಕರ 182 ಸ್ತೋತ್ರಗಳ ಅಡಗಿರುವ ಕ್ಯಾಲಿಕೊ ಬ್ಯಾಂಡ್	0 10—0
ಬೃಹಸ್ತೋತ್ರ ರತ್ನಾಕರ 182 ಸ್ತೋತ್ರಗಳು ಅಡಗಿರುವ ಕಾಗದ ಬ್ಯಾಂಡ್	0—8—0
ಶಿವಲೀಲಾಮೃತ ದೊಡ್ಡ ಸ್ಯಾಜ್, ಸ್ಥೂಲಾಕ್ಷರ, ಅವಲ್	1—4—0
ಶಿವಲೀಲಾಮೃತ ದೊಡ್ಡ ಸ್ಯಾಜ್ ಸ್ಥೂಲಾಕ್ಷರ ದುಯಂ	0 14—0
ಶಿವಗೀತಾ ರೇಶ್ಮೆ ಬ್ಯಾಂಡ್	0—8—0
,, ಕಾಗದ ,,	0—5—0
ಶನಿಮಹಾತ್ಮೆ	0—4—0
ಪಂಚತಂತ್ರ	1—2—0
ವಿವೇಕರತ್ನಾಕರವೆಂಬ ಕೊಂಕಣೆ ಭಾಷೆಯ ಅಭಂಗ ಪದಗಳು ಬಾಲಬೋಧ ಲಿಪಿ	0—6—0
ಕನ್ನಡ ಅಕ್ಷರದ ಕೊಂಕಣೆ ಭಾಷೆಯ ಪುಸ್ತಕಗಳು	
ಚಂದ್ರಹಾಸ ನಾಟಕ	0—4—0
ಮಾನಸ ಚರಿತ್ರ ನಾಟಕ	0—4—0
ಸಾವಿತ್ರಿ ನಾಟಕ	0—4—0
ಸ್ವರ್ಣಗೌರೀವ್ರತಕಥಾ	0—1—0

ಈ ಮೇಲಿನವುಗಳಲ್ಲದೆ ಇನ್ನೂ ಅನೇಕಾನೇಕ ಸಂಸ್ಕೃತ, ಮರಾಟಿ, ಕನ್ನಡ ಪುಸ್ತಕಗಳೂ, ಶಾಲಾ ವಿದ್ಯಾರ್ಥಿಗಳಿಗೆ ಅಗತ್ಯವಿರುವ ಕೋಪಿ ಬೂಕುಗಳೂ, ಎಕ್ಸರ್‌ಸ್ಯಾಜ್ ಬೂಕುಗಳೂ, ಫೌಂಟನ್ ಪೇನು ಇತ್ಯಾದಿ ಬರವಣಿಗೆ ಸಾಮುಗ್ರಿಗಳೂ, ವರ್ಗ ಊಳಿಗ ಪುಸ್ತಕಗಳೂ ನಮ್ಮಲ್ಲಿ ಸುಲಭ ಕ್ರಯಕ್ಕೆ ದೊರೆಯುವವು. ಪರಸ್ಥಳದವರಿಗೆ ಅಗತ್ಯವಿರುವ ಯಾವತ್ತೂ ವಸ್ತುಗಳು ಟಪ್ಪಾಲ ದ್ವಾರಾ ಕಳುಹಿಸಲ್ಪಡುವವು

ನಮ್ಮ ವಿಳಾಸ — ಕೆ. ಯಂ ದಾಸ ಪ್ರಭು,
ರಥಬೀದಿ, ಮಂಗಳೂರು

ಅಪೂರ್ವ ಗ್ರಂಥ! ಅಪೂರ್ವ ಗ್ರಂಥ!!

ಬಳ್ಳಾರಿ ಶ್ರೀ ಮರಿಸ್ವಾಮಿಗಳು

ಸಕ್ಕರಿ ಕರಡೆಪ್ಪ

ಇವರ ಜೀವಿತ ಚರಿತ್ರೆ.

ಈ ಮಹಿಮರ ಚರಿತ್ರೆಯನ್ನು ಇಲ್ಲಿಯವರಿಗೂ ಯಾರೊಬ್ಬರು ಪ್ರಕಟನ ಮಾಡಿದ್ದಿಲ್ಲವೆಂಬುದು ತಿಳಿದದ್ದಾಗಿರುವದಷ್ಟೆ. ಇಂತಹ ಅದ್ಭುತ ಮಹಿಮಾಶಾಲಿಗಳ ಚರಿತ್ರೆಗಳು ಅವಶ್ಯಕವಾಗಿಯೂ ಆದರಣೀಯಗಳಾಗಿರುವವು ಇವರ ಮಹಿಮೆಯು ಅಸಾಧಾರಣವಾದುದು. ಒಂದೆ ದಿನ ಒಂದೆ ಕಾಲದಲ್ಲಿ ಬಳ್ಳಾರಿ, ಬೆಂಗಳೂರು, ಭೈರವಪುರ ಎಂಬ ಮೂರು ಸ್ಥಳಗಳಲ್ಲಿ ಸಮಾಧಿಯನ್ನು ಹೊಂದಿದರೆಂಬುದೊಂದೆ ಅಪ್ರತಿಮ ಪ್ರಭಾವವನ್ನು ಸೂಚಿಸುತ್ತಿರುವದು ಇವರು ಅಲ್ಲಲ್ಲಿ ತೋರಿದ ಮಹಿಮೆಗಳು ಅನಂತವಾಗಿರುವವು; ಇದಲ್ಲದೆ ಇವರ ಶಿಷ್ಯನಾದ ಸಕ್ಕರಿಕರಡೆಪ್ಪನ ಅಪಾರ ಮಹಿಮೆಯು ಶದವಾಗಿ ವರ್ಣಿಸಲ್ಪಟ್ಟಿರುವದು ಈ ಸಕ್ಕರಿ ಶರಣನಂತಹ ಶರಣನು ಇಡೀ ಪ್ರಪಂಚದಲ್ಲಿ ವೀರಶೈವ ಮತದೊಳಗೆ ಹುಟ್ಟುವದು ಅಪರೂಪ. ಆ ಗುರುಶಿಷ್ಯರೀರ್ವರ ಚರಿತ್ರೆಗಳು ಒಂದು ಗ್ರಂಥದಲ್ಲಿ ತಯಾರುಮಾಡಿರುವೆವು. ಈ ಗ್ರಂಥವನ್ನೋದುವವರು ಖಂಡಿತವಾಗಿಯೂ ನೀತಿ, ಭಕ್ತಿ, ಜ್ಞಾನಗಳ ಕಡೆ ಮನಸ್ಸನ್ನು ಕೊಡದಿರಲಾರರು. ಮತ್ತು ಇದಲ್ಲದೆ ಮೈಸೂರು ಶ್ರೀಮನ್ಮಹಾರಾಜ, ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರರವರು ಶಿಷ್ಯರಾದ ಕಂಬಳಿ ಸ್ವಾಮಿಗಳ ಸಮೇತ ಇರುವ ಮಹಾಸ್ವಾಮಿಗಳ ಛಾಯಾಚಿತ್ರ ಸಹಿತ ಪ್ರಥಮ ಪುಟದಲ್ಲಿ ಅಂದವಾಗಿರಿಸಲ್ಪಟ್ಟಿರುವದು. ನಮ್ಮ ವಿಳಾಸ ತಿಳುಹಿರಿ. ಇದರ ಬೆಲೆ ವಿ. ಪಿ. ಸಹಿತ ರೂ. 1—8—0.

ನಮ್ಮ ವಿಳಾಸ— ಬಸವರಾಜ ಕಂಪೆನಿ, ಬಳ್ಳಾರಿ.

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ. ಸುಬ್ಬರಾಯಿಯವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ಕೇಶ ಸುವಾಸಿನಿ:— ಈ ತೈಲವು ಪೂರ್ವ ಪಶ್ಚಿಮ ದೇಶಗಳ ಅಮೂಲ್ಯ ಸುವಾಸನಾ ದ್ರವ್ಯಯುಕ್ತವಾಗಿ ತುಂಬಾ ಪರಿಮಳ ಕೊಡುವಂಥಾದ್ದಾಗಿರುತ್ತದೆ ಇದರಿಂದ ಕೂದಲು, ಮೀಸೆಗಳು, ಕಣ್ಣು ರೆಪ್ಪೆಗಳು ಸಮೃದ್ಧಿಯಿಂದ ಬೆಳೆಯುತ್ತವೆ ತಲೆಗೂ, ಮೆದುಳಿಗೂ, ಕಣ್ಣುಗಳಿಗೂ ತಂಪುಕೊಡುತ್ತದೆ ಬೋಳುತಲೆ, ಸುಂಡು ಮುಂತಾದ್ದನ್ನು ವಾಸಿಮಾಡುತ್ತದೆ ವಿಲಾಯತಿಯ ಪರಿಮಳ ವಸ್ತುಗಳ ಮೇಲೆ ಪ್ರೀತಿ ಇರುವವರಿಗೆ ಅಚ್ಚುಮೆಚ್ಚಿನದ್ದಾಗಿರುತ್ತದೆ ಬೆಲೆ ಸೀಸೆ ಒಂದಕ್ಕೆ ರೂ 1—0—0 ವಿ ಪಿ ಚಾರ್ಜು 2 ಸೀಸೆವರಿಗೂ 5 ಅಣೆ.

ರಕ್ತಾಮೃತ:— ಕಾಫಿ, ಟೀ ಇವುಗಳಿಗೆ ಬದಲಾಗಿ ಉಪಯೋಗಿಸುವ ಚೂರ್ಣವು ಅನೇಕ ಬೇರುಗಳಿಂದಲೇ ಮಾಡಲ್ಪಟ್ಟಿದೆ ಕಾಫಿ, ಟೀ ಇವುಗಳಿಂದುಂಟಾಗುವ ಕೇಡುಗಳೊಂದೂ ಇಲ್ಲದೆ, ಜೀರ್ಣಶಕ್ತಿಯನ್ನು ಹೆಚ್ಚಿಸಿ, ಕ್ಷಯ ರೋಗ ತಲೆನೋವು ಮುಂತಾದ್ದನ್ನು ಹೋಗಲಾಡಿಸುವದು. ರಕ್ತಶುದ್ಧಿಯನ್ನು ಮಾಡಿ ನರ ಸಂಬಂಧವನ್ನು ಬಲಪಡಿಸುತ್ತದೆ ಇದನ್ನು ಬಿಡದೆ ಉಪಯೋಗಿಸುತ್ತಿದ್ದರೆ, ಅಜೀರ್ಣದಿಂದಲೂ ಮಧುಮೂತ್ರದಿಂದಲೂ ಕಷ್ಟಪಡುವವರು ಶೀಘ್ರದಲ್ಲಿ ಗುಣಹೊಂದುವರು ಜ್ವರದವರಿಗೂ ಬಸುರು ಬಾಣಂತಿಯರಿಗೂ, ವಾಂತಿಭೇದಿ ಮುಂತಾದ ರೋಗ ಕಾಲಗಳಲ್ಲಿಯೂ ಶರೀರದ ಉಷ್ಣವನ್ನು ನಿಶ್ಚಯವಾಗಿ ತಗ್ಗಿಸುವದು ವಿದ್ಯಾರ್ಥಿಗಳಿಗೂ, ಉದ್ಯೋಗಸ್ಥರಿಗೂ, ಅನಿಷ್ಟವಾದ ಕಾಫಿ, ಟೀ ಮುಂತಾದುವುಗಳಿಗೆ ಬದಲಾಗಿ ಮಕ್ಕಳು ದೊಡ್ಡವರೆಲ್ಲರು ಉಪಯೋಗಿಸಬಹುದು ಅರ್ಧ ತೊಲೆ ಚೂರ್ಣವು ಒಂದು ಬಟ್ಟಲು ಕಷಾಯಕ್ಕೆ ಸಾಕು 20 ಸಲಕ್ಕೆ ಉಪಯೋಗಿಸುವಷ್ಟು ಚೂರ್ಣವಿರುವ ಟಿನ್ ಒಂದಕ್ಕೆ 6 ಅಣೆ ವಿ ಪಿ ಚಾರ್ಜು 3 ಅಣೆ 8 ಅಣೆ ತಪಾಲಾ ಸ್ಟಾಂಪುಗಳನ್ನು ನಮಗೆ ಕಳುಹಿಸುವವರಿಗೆ 1 ಟಿನ್ ಮುಂದಾಗಿ ಹಾಸಲ್ ಕೊಟ್ಟು ಕಳುಹಿಸಲ್ಪಡುವದು

ಸರ್ಬತ್ತುಗಳು:— ದ್ರಾಕ್ಷೆ, ಸುಗಂಧಪಾಲೆ, ಗುಲಾಬಿ, ಬಾಳೆ, ನಿಂಬೆ, ಕಿತ್ತಳೆ, ಬಾದಾಮಿ, ಸೇಬು, ದಾಳಿಂಬೆ, ಸೊಂಟೆ ಮುಂತಾದ ಹಣ್ಣುಗಳ ರಸಗಳು ಇದರಲ್ಲಿ 5 ತೊಟ್ಟನ್ನು ಸೇರಿಸಿದರೆ 1 ಬಟ್ಟಲು ನೀರಿಗಾಗಲಿ ಸೋಡಾವಿಗಾಗಲಿ ಆಯಾ ಹಣ್ಣುಗಳ ವಾಸನೆಯಿಂದ ಅತಿ ಮನೋಹರ ರುಚಿಕರವಾಗಿರುವದು ಅಂಗಡಿಗಳಲ್ಲಿ ಮಾರುವ ರಸಗಳಿಗಿಂತಲೂ ಎಷ್ಟೋ ಅಗ್ಗವಾಗಿಯೂ ಮತ್ತು ವಿ ಪಿ ಚಾರ್ಜುಗಳು ಕಡಿಮೆಯಾಗುವಂತೆಯೂ ಮಾಡಲ್ಪಟ್ಟಿದೆ ಒಂದು ಸೀಸೆ ರಸದಿಂದ ರುಚಿಕರವಾದ 50 ಬಟ್ಟಲು ಪಾನಕವನ್ನು ಮಾಡಬಹುದು ಸೀಸೆ ಒಂದಕ್ಕೆ ಅಣೆ 0—8—0. ವಿ ಪಿ ಚಾರ್ಜು 3 ಸೀಸೆವರಿಗೂ 5 ಅಣೆ

☞ ಈ ಪ್ರಾಂತ್ಯದಲ್ಲಿ ಕನ್ನಡ, ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವದಿಲ್ಲವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಿಳಿನಲ್ಲಾಗಲೀ ಸ್ಪುಟವಾಗಿ ತಿಳಿಯುವಂತೆ ಬರಿಯಬೇಕು.

MY ADDRESS.
P. SUBBA ROY,
Ayurvedic Pharmacy,
Sri Perumalkoil,
SANNATHY, TANJORE.

ನಮ್ಮ ವಿಳಾಸ.—
ಪಿ. ಸುಬ್ಬರಾಯಿ,
ಆಯುರ್ವೇದ ಔಷಧಶಾಲಾ,
ಶ್ರೀ ವೆಂಕಟೇಶ ಪೆರುಮಾಳ್ ದೇವಸ್ಥಾನ,
ಸನ್ನದಿ, ತಂಜಾವೂರು.

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶದಾಮವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ? ಇಂತಹ ಕೇಶ ರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾಪ ಉಪಕರಣವಾವುದೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿ



ಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿ ...ದೆ. ಈ ತೈಲವನ್ನು ತೊಡೆದುಕೊಳ್ಳುತ್ತಲೇ, ... ಸ್ಕದ ಬೇನೆಯು ತಣ್ಣಗಾಗಿ, ಮನಸ್ಸು ಉ... ...ದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ... ನ್ನು ಕೊಡೆಯ ತೊಡಗದ ಒಳಕ ಎಂದಿಗೂ ... ಳಿ ಬಿದ್ದು ಹೋಗಲಾರವು ; ಆದರೆ ಅವು ... ಬೆಳೆದು ಸಮೃದ್ಧವಾಗುವವು. ಇದರ ...ಗ. ...ವಾದರೋ ಮಧುರವೂ ಮೋಹಕವೂ ಆಗಿರು...

ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳು ಮಾಡುವುದಕ್ಕಿಂತ ಒಂದೇಯೊಂದುಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಒಫ್ ಮೇರಿಟ್ "ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗ್ರಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳಕರ ಬಂಧುಗಳು, ಬಸವನಗಲ್ಲಿ, ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. ದ್ವಾರಾ ರವಾನಿಸುವುದು

ಸೀಸೆಯೊಂದರ ಕ್ರಯ ರೂ. 1-0-0, ಅ. ವೆ. 0-4-0 ಬೇರೆ; 3 ಸೀಸೆಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ.

ಸೂಚನೆ.— ಅನೇಕ ದುರ್ವಿಶ್ವಾಸಿತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬಳಿಯಿಂದ ತಮಗೆ ಅಷ್ಟು ನಫೆಯೇ ದೊರಕುತ್ತದೆಂದು, ನೀವು «ಕಾಮಿನಿಯಾ ತೈಲ" ವನ್ನು ಕೇಳಿದರೆ, «ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಆದೆ" ಎಂದು ಅವರಿಗೆ ಬಹಳ ಲಾಭದೊರಕುವ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸ ಹೋಗದಂತೆ «ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅದರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ... ದಿಂದಲೇ ಕೊಂಡುಕೊಳ್ಳುವದನ್ನು ... ಮಾಡಿದರೆ ನೀವು ... ಬೆಲೆಯಲ್ಲಿ ಸಿಲುಕಬೇಕಾದ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೋ ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಅಲ್ಕೊಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈಚಟ್ಟಿಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ತಟಕುಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೊ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ.

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ಮೀಡಿಯಂ) ಸೀಸೆ 1ಕ್ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0 ಅಂಚೆಯ ವೆಚ್ಚ ಬೇರೆ 0-4-0. ಒಟ್ಟೊ ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12-0

ಅಮೇರಿಕದ ವಿಶಿಷ್ಟತೆ.

ಪ್ರೊಫೆಸರ್ ಜೇಮ್ಸರವರ "ಇಲೆಕ್ಟ್ರೋ ಟೋನಿಕ್ ಪಿಲ್ಸ್" ಅಥವಾ ವಿದ್ಯುಚ್ಛಕ್ತಿಯ ವಾಜೀಕರಣ ಮೌಕ್ತಿಕಗಳು.

ಇವು ಶಕ್ತಿಹೀನತೆಯಿಂದ ಉಂಟಾಗುವ ರೋಗಗಳನ್ನು, ನಿದ್ರಾನಾಶವನ್ನೂ,



ಪಕ್ಷವಾತಗಳನ್ನೂ, ವಾತೋನ್ಮಾದವನ್ನೂ, ಅಪಸ್ಮಾರವನ್ನೂ ಧಾತು ದೌರ್ಬಲ್ಯವನ್ನೂ ನಾಶಮಾಡುತ್ತದೆ. ಕಳೆಗುಂದಿ ಬರುವ ಸ್ಮೃತಿಶಕ್ತಿಯನ್ನು ಉದ್ದೀಪಿಸುತ್ತವೆ. ಬುದ್ಧಿಯ ಮತ್ತು ಮೆದುಳಿನ ಮಂದತೆಯನ್ನು ಹೋಗಲಾಡಿಸುತ್ತವೆ; ಕಲಿಯುವದಕ್ಕೆ ಅಥವಾ ಕಾರ್ಯಗೈಯುವದಕ್ಕೆ ಬಿಡಲೊಲ್ಲದ ಅಶಕ್ತಿಯನ್ನು ಶಕ್ತಿರೂಪವಾಗಿ ಪರಿಣಮಿಸುವಂತೆ ಮಾಡುತ್ತವೆ. ಸರ್ವಾಂಗದಲ್ಲಿ ತೋರಿಬರುವ ಶ್ರಮವೂ, ಅಕಾಲ ಕಾಲದಲ್ಲಿ ಸಂಭವಿಸುವ ಗ್ಲಾನಿಯೂ ಅತಿಶ್ರಮದಿಂದ ಮತ್ತು ದುರ್ವೃತ್ತಿಯಿಂದ ಉಂಟಾಗುವ ಕ್ಷೀಣಚೇತನೆಯೂ ಈ ಮುತ್ತುಗಳನ್ನು ಸೇವಿಸುವದರಿಂದ ಅಡಗಿ ಹೋಗುತ್ತವೆ. ಇವುಗಳಲ್ಲಿ ವೀರ್ಯದಾಯಿಗಳಾದ ಮತ್ತು ಮೆದುಳನ್ನು ಬೆಳೆಯಿಸಿ ...ಸ್ಥೈರ್ಯಯುಳ್ಳ ಪದಾರ್ಥಗಳಿರುವದರ ದೆಸೆಯಿಂದ ಇವು ವಿದ್ಯಾವ್ಯಾಸಂಗಗಳಿಗೂ, ಧರ್ಮೋಪದೇಶಕರಿಗೂ, ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಕೀಲರಿಗೂ ಗುಮಾಸ್ತರಿಗೂ, ಉಸ್ತಾದರಿಗೂ, ಪ್ರಾಯಿಕವಾಗ ಸಕಲ ಕಾರ್ಯಗಳಲ್ಲಿ ನಿರತರಾಗಿರುವ ಎಲ್ಲರಿಗೂ ಅಗತ್ಯವಾಗಿವೆ. ಶಾರೀರಿಕ ಪ್ರವೃತ್ತಿಯವರಿಗೆ ಮತ್ತು ಮಾನಸಿಕ ಪ್ರವೃತ್ತಿಯವರಿಗೆ ಒಂದೇ ತೆರನಾಗಿ ಅವಶ್ಯಕವಾಗಿರುತ್ತವೆ.

ವಾತಶೂಲದಲ್ಲಿ ಮತ್ತು ಮುಪ್ಪಿನಿಂದ ಉಂಟಾಗುವ ವೀರ್ಯಹೀನತೆಯಲ್ಲಿ ಈ ಮೌಕ್ತಿಕಗಳ ಗುಣವಾದರೋ ನಿಸ್ಸಂಶಯವು. ಇಂದ್ರಿಯಗಳ ಸುಖವೂ ಇವುಗಳ ಸೇವನೆಯಿಂದ ಕೂಡಲೇ ಲಭಿಸುತ್ತವೆ.

ರೋಗಜನ್ಯವಾದ ಸ್ವಾವವನ್ನು ಗುಣಮಾಡಿ, ರೋಗದಿಂದ ಉಳಿದ ದೇಹಭಾಗಗಳನ್ನು ಇವು ಮರಳಿ ಚೇತನಗೈಯ್ಯುತ್ತವೆ. ರೋಗದಿಂದ ಮುರಿದು ಹೋದ ಅಥವಾ ಬಸವಳಿದು ಕುಂದಿದ ಅವಯವಗಳಿಗೆ ಇವು ಪುನಃ ಧಾತುಪುಷ್ಟಿಯನ್ನಿತ್ತು ಸಚೇತನಗೈಯುತ್ತವೆ. ಈ ಗುಳಿಗೆಗಳ ಅದ್ಭುತಕರವಾದ ಸುಫಲವು ಇವುಗಳನ್ನು ಸೇವಿಸುವದಕ್ಕೆ ತೊಡಗಿದ ದಿನದಿಂದಲೇ ಬೋಧೆಯಾಗುತ್ತದೆ. ಇವುಗಳನ್ನು ಸೇವಿಸಿದ ದಿನವೇ ನರಗಳಲ್ಲಿಯೂ ಬುದ್ಧಿಶಕ್ತಿಯಲ್ಲಿಯೂ ಚೇತನವು ಮೊಳೆತು ದೇಹದಲ್ಲಿ ಧೈರ್ಯ, ಬಲ, ಸುಖ, ಇವುಗಳ ಸಂಚಾರವಾಗುತ್ತದೆ. ಜೀರ್ಣಶಕ್ತಿಯು ಉದ್ದೀಪಿತವಾಗಿ ಹಸಿವು ಆಶ್ಚರ್ಯಕರವಾಗಿ ಆರೋಗ್ಯಕಾಲದಲ್ಲಿ ತೋರಿಬರುವದಕ್ಕಿಂತ ಹೆಚ್ಚಾಗಿ ತೋರಿಬರುತ್ತದೆ. "ನಾಡಿ"ಯು ಕ್ರಮವನ್ನು ಅನುಸರಿಸುತ್ತದೆ; ಮುಖವು ಶುದ್ಧವಾಗಿ ರಕ್ತಚಲನದ ಕುರುಹುಗಳನ್ನು ಸರಿಯಾಗಿ ತೋರ್ಪಡಿಸುತ್ತದೆ; ಕಣ್ಣುಗಳು ಉಜ್ವಲವಾಗಿ ದೃಷ್ಟಿಯು ಪ್ರಭೆಯನ್ನು ಹೊಂದಿ ಸೂಕ್ಷ್ಮವಾಗುತ್ತದೆ; ಗತಿಯು ದೃಢವಾಗುತ್ತದೆ. ಶೀಲವು ಪ್ರಸನ್ನವಾಗುತ್ತದೆ; ಬುದ್ಧಿಯು ವಿಶೇಷವಾಗಿ ಅನಲಸವಾಗುತ್ತದೆ; ಸ್ಮೃತಿಶಕ್ತಿಯು ಗ್ರಾಹಿಯಾಗುತ್ತದೆ; ಮತ್ತು ದೇಹದ ಪುಷ್ಟಿಯು ವೃದ್ಧಿಯಾಗಿ ಶಕ್ತಿಯು ದಿನೇ ದಿನೇ ಮುಂಚಿನಂತೆಯೇ ತುಂಬಿಬರುತ್ತದೆ.

25 ಗುಳಿಗೆಗಳ ಸೀಸೆ 1ಕ್ಕೆ ಬೆಲೆ ರೂ. 1-4-0. 40 ಗುಳಿಗೆಗಳಿರುವ ಸೀಸೆ 1ಕ್ಕೆ ರೂ. 2-0-0 ಟಪ್ಪಾಲ್ ಖರ್ಚು ಸೀಸೆ ಒಂದಕ್ಕೆ ಆಣೆ 4.

ನಾವು ಕೇಳಿಕೊಳ್ಳದೆ ನಮಗೆ ಹಲವು ಮಹನೀಯರು ಬರದ ಪ್ರಮಾಣಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು.

ದಿವಾಕರ ಕೃಷ್ಣಾಜಿ ದಾಹರೀ, ಡಾ. ಶಾರಸಾವಣಿ, ತಾ, ರಾಮಟೇಕ್, ಜಿ. ನಾಗಪುರ.—«ತಾವು ನಮಗೆ ಕೆಲವು ಸಮಯದ ಹಿಂದೆ ಕಳುಹಿಸಿದ «ಶಕ್ತಿವರ್ಧಕ" ಗುಟಿಕೆಗಳಿಂದ ನಮಗೆ ಉತ್ತಮವಾದ ಆರೋಗ್ಯಲಾಭವು ದೊರಕಿರುತ್ತದೆ ; ಅವುಗಳ ಇನ್ನೊಂದು ಬಾಟ್ಲಿಯನ್ನು ಕಳುಹಿಸಿಕೊಡಿರಿ.

2 ತುಕಾರಾಮ ಸಖಾರಾಮ, ಕೇಶಿಯರ್, ಬಂಗಾಲ ನಾಗಪುರ ರೈಲ್ವೆ, ಗೋರಖಪುರ—ನಾನು ತಮ್ಮಿಂದ ಪ್ರೊ. ಜೇಮ್ಸರ «ವಿಮ್ಸ್ ಶಕ್ತಿವರ್ಧಕ" ಗುಟಿಕೆಗಳ ಮೂರು ಡಬ್ಬಿಗಳನ್ನು ತರಿಸಿಕೊಂಡಿದ್ದೆನು. ಅವುಗಳಿಂದ ನಾನು ವಿಶ್ವಸನೀಯವಾದ ಸೌಖ್ಯಲಾಭ ಹೊಂದಿರುವೆನು. ಆದ್ದರಿಂದ ಇನ್ನು ಮೂರು ಡಬ್ಬಿಗಳನ್ನು ಕಳುಹಿಸಿಕೊಡಿರಿ."

3 ಅಮೀರ್ ವಲ್ಲದ ಮಹಮ್ಮದ ಭಾಯಿ ಇಬ್ರಾಹಿಮ್ ಪಾಟಿಲ್, ಸನವೇರ್—«ತಾವು ಕಳುಹಿಸಿದ ಪ್ರೊ. ಜೇಮ್ಸರ ಗುಟಿಕೆಗಳಿಂದ ನನಗೆ ಆಶ್ಚರ್ಯಕಾರಕವಾದ ಗುಣವು ದೊರಕಿದೆ; ಅವನ್ನು ಪುನಃ ರವಾನಿಸಿರಿ."

4 ... ವಕೀಲ, ... —

«ಪ್ರೊ. ಜೇಮ್ಸರ ಗುಟಿಕೆಗಳ ಸೀಸೆಯೊಂದನ್ನು ತಮ್ಮಿಂದ ತರಿಸಿಕೊಂಡಿದ್ದೆನು. ಅವುಗಳನ್ನು ಉಪಯೋಗಿಸಿ ನಾನು ಒಳ್ಳೇ ಲಾಭವನ್ನು ಪಡೆದೆನು. ಇನ್ನೆರಡು ಸೀಸೆಗಳನ್ನು ಕಳುಹಿಸುವುದು.

5 ಮಾಮಲೇ ನರಸಿಂಗರಾವ್, ಸಂಸ್ಥಾನ ಪಟನ.— ಪ್ರೊ. ಜೇಮ್ಸರ ಗುಟಿಕೆಗಳಿಂದ ನಾನು ... ಗುಣವನ್ನು ಹೊಂದಿರುವದರಿಂದ, ಅವುಗಳ ಇನ್ನೆರಡು ಸೀಸೆಗಳನ್ನು ರವಾನಿಸಿರಿ.

THE ANGLO INDIAN DRUG & CHEMICAL COMPANY, 16 MARKET BOMBAY 2

ಪ್ರಧಾನ ಏಜಂಟರು: — ದಿ ಊಲನ್ ಮಾರ್ಟ್, ಮಂಗಳೂರು ದ. ಕನಡಾ.

Printed & Published by V. S. Kamath at the Mangalore Trading Association's Sharada Press, Mangalore.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ:—ಮುಂಗಡ ಗಿಕ್ಕೆ ರೂ. 1—4—0. ಟಪ್ಪಾಲು ಹಾಸಲು ಸೇರಿ ರೂ. 2—1—0.

ಪುಸ್ತಕ IX ಮಂಗಳೂರು ತಾ. 23ನೇ ಜುಲಾಯಿ ಶುಕ್ರವಾರ 1915. ಸಂಚಿಕೆ 30

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೆಶಿಂತಾನ್.

(ರಿಜಿಸ್ಟರ್ಡ್)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೆಶಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

1. ಇದು ಶಕ್ತಿಯನ್ನು ವೃದ್ಧಿ ಪಡಿಸುವುದಲ್ಲದೆ, ತಲೆಸೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು.

2. ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತು ಪ್ರಿಯರಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು.

3. ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತ ಬಂದಲ್ಲಿ ತಿಂದನ್ನವು ಜೀರ್ಣವಾಗುವದಲ್ಲದೆ, ಕಾಲಪ್ರವೃತ್ತಿಯು ಕ್ರಮವಾಗಿ ಆಗುತ್ತದೆ ಯಾವರೋಗಕ್ಕೂ ಅಸ್ಪದವುಂಟಾಗುವುದಿಲ್ಲವು.

4. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು.

5. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ ಎಲ್ಲ ಉದ್ಯೋಗದ ದೊಡ್ಡ ಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವವು.

6. ಬೇಸಿಗೆ ಮತ್ತು ಚಳಿಗಾಲಗಳಲ್ಲಿ ಎಲ್ಲ ತರದ ರೋಗವನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು.

7. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು.

ಅದ್ದುಕಾರಣ ಇಂತಹ ಗುಣಕಾರಿಯಾದ ಸೆಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ.

45 ಮಾತ್ರೆಗಳ ಪೊಟ್ಟಣ 1ಕ್ಕೆ 0—2—0	200 ಮಾತ್ರೆಗಳ ಪೊಟ್ಟಣ 1ಕ್ಕೆ 0—7—0	80 ಮಾತ್ರೆಗಳ ಟಿನ್ 1ಕ್ಕೆ 0—4—0	550 ಮಾತ್ರೆಗಳ ಮರದಪೆಟ್ಟಿಗೆ1ಕ್ಕೆ 1—0—0
95 „ „ „ 0—4—0	200 „ ಟಿನ್ „ 0—9—0	100 „ ಶೀಸೆ „ 0—4—6	1200 „ „ „ 2—0—0

1 ರೂಪಾಯಿಗೆ ಕಡಿಮೆಯಾಗಿ ವಿ. ಪಿ. ಮೂಲಕ ಕಳುಹಿಸಲ್ಪಡುವುದಿಲ್ಲವು. ಮತ್ತು ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

☞ ಭರತಖಂಡ, ಬರ್ಮ, ಮತ್ತು ಸಿಲೋನ್ ಈ ಪ್ರಾಂತ್ಯಗಳ ಎಲ್ಲಾ ಭಾಗದಲ್ಲೂ ಏಜಂಟರು ಬೇಕಾಗಿದೆ.

ಸೋಲ್ ಏಜಂಟ್ಸ್:—ಸೆಶಿಂತಾನ್ ಡಿಪೋ,
ಪ್ರಿನ್ಸೆಸ್ ಸ್ಟ್ರೀಟ್ ಬೊಂಬಾಯಿ ನಂ. 2.

FREE! FREE!!
S.T.A. Perpetual Calendar.
Beautiful and Artistic.
As. 10 each. Postage Extra.
HOW TO GET IT FREE?
Apply with Postage.

Eucalyptus Oil.
(PURE & BEST.
As. 4 per 1 oz. bottle.
Packing & Postage Extra.
S. S. RAO & Co.,
Bangalore City.

ಯಂ. ಯಸ್. ರಾವ್ ಕಂಪೆನಿ.,
ಬುಕ್‌ಸೆಲರ್ಸ್; ಅವಿನ್ಯೂರೋಡ್, ಬೆಂಗಳೂರು ಸಿಟಿ.

ಕನ್ನಡ ಹೊಸ ಪುಸ್ತಕಗಳು—ಕಾದಂಬರಿಗಳು.

ಸಂಗೀತಸಮಯಸಾರ, ಹೊಸ ಪುಸ್ತಕ	1—4	ಸ್ತ್ರೀಧರ್ಮನೀತಿ, (ಸ್ತ್ರೀಯರಿಗೆ ಅತ್ಯಾವಶ್ಯಕವಾದದ್ದು)	0—9
ಪ್ರಬಂಧ ಮುಕ್ತಾವಳಿ, ಕನ್ನಡ ವಾಕ್ಯರಚನೆಯ ವಿಧಾನವನ್ನು ಹೊಸ ಮತ್ತು ಸುಲಭವಾದ ರೀತಿಯಲ್ಲಿ ವಿವರಿಸಿದೆ)	0-12	~~ದುರ್ಗೇಶನಂದಿನಿ (ಬಂಗಾಳಿ ನಾವೆಲ್)~~	~~0-12~~
ಅರೇಬಿಯನ್ ನೈಟ್ಸ್, ಹೊಸ ಮುದ್ರಣ	2—2	ಪ್ರಹ್ಲಾದ, ಡಿ. (ಭಕ್ತಿದಾರಿಕಥೆ)	0 12
ಮುದ್ರಾಮಂಜೂಷ ಡಿ.	1-10	ವಿಷವಿವಾಹ, ಹೊಸ ಮುದ್ರಣ	0—4
ಭಕ್ತವಿಜಯ, (ವಿಷ್ಣು ಭಕ್ತರ ಕಥೆಗಳು) ಹೊಸ ಮುದ್ರಣ	3—2	ಶೋಭನೆ, ಡಿ.	0-12
ದೃಷ್ಟಿಯು, (ಅನೇಕ ರಹಸ್ಯಗಳು ವಿವರಿಸುತ್ತಿದೆ)	0—5	ಚಂದ್ರಪ್ರಭಾ, ಹೊಸ ಕಾದಂಬರಿ	0-12
[illegible], ಹೊಸ ಮುದ್ರಣ	0—[illegible]	ಚಂಪಕ	0—4
		ತ್ರೈಲೋಕ ವಿಜಯಂ, [illegible]	1-8

ಯಂ. ಸುಬ್ಬರಾವ್, ಶಂಕರಪುರಂ, ಬೆಂಗಳೂರು ಸಿಟಿ—ಈ ವಿಳಾಸವನ್ನು ಮೇಲ್ಕಂಡಂತೆ ಬದಲಾಯಿಸಿದೆ.

ನಮ್ಮಲ್ಲಿ ಎಲ್ಲಾ ವಿಧವಾದ ಕನ್ನಡ [illegible]ಗಳೂ, ಬಿ. ವೆಂಕಟಾಚಾರ್ಯರ ನಾವೆಲ್‌ಗಳೂ, ಗವರ್ನಮೆಂಟ್ ಸ್ಕೂಲು ಪುಸ್ತಕಗಳೂ ದೊರೆಯುತ್ತವೆ. ಪುಸ್ತಕದ ಪಟ್ಟಿ ಪ್ರಿಂಟಾಗುತ್ತಿದೆ.

ಯಂ. ಯಸ್. ರಾವ್ ಎಂಡ್ ಕೋ.,
ಬೆಂಗಳೂರು ಸಿಟಿ.

ESTABLISHED JULY 1906.

THE CANARA BANK, LIMITED, MANGALORE.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು;

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0
Issued Capital	225,000—0—0
Subscribed Capital	219,100—0—0
Paid up Capital	194,100—0—0
Deposits	421,405—9—6
Reserve Fund	33,500—0—0

Besides the uncalled capital of Rs. 25,000/- 25% of the net profits are added annually to the Reserve Fund. Rs. 21,685/ have been invested in Government Paper of the face value of Rs. 22,500/-

Dividends of not less than 6% paid during the past years and a bonus of 1% to 2% paid in addition during the last three years.

Fixed Deposits of Rs. 50/-and above in multiples of Rs. 5/ received for 3, 6, 12 and 24 months @ 4, 4½, 5 and 5½%. respectively at the discretion of the managing committee

Short-notice Deposits requiring one weeks notice of withdrawal after one month received @ 2½% per annum at the discretion of the managing committee

Current Deposit Account opened free of charge.

Savings Bank Account opened for any sum not less than 4 As and multiples thereof and interest paid @ 4½%.

Loans granted on proper securities and pledges.

Sealed Parcels for safe custody received on a moderate charge

ನಿಯಮಿತ ಮೂಲ ಧನವು ರೂಪಾಯಿ	300,000—0—0
ಹುಟ್ಟಿಬಂದ ಮೂಲ ಧನವು ,, ...	225,000—0—0
ಪ್ರತಿಜ್ಞಾತ ಮೂಲ ಧನವು ,, ...	219,100—0—0
ಆಗತ ಮೂಲ ಧನವು ,, ...	194,100—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು ...	421,405—9—6
ರಕ್ಷಿತ ಧನವು	33,500—0—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 21,685—0—0 ಸರಕಾರದ ರೂ. 22,500ರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುಮಾಲಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣಿದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿಇಡೋಣಾದೀತು. ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ

ಮೊಹರು ಹಾಕಲ್ಪಟ್ಟ ಡಬ್ಬಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

Canara Bank Ltd,
Mangalore, 1st July 1915.

P. Gopal Naik,
Secretary.

ಸ್ವದೇಶಾಭಿಮಾನಿಯ ನೋಟೀಸು.

ಚಂದಾದಾರರು ನಮಗೆ ಬರೆಯುವ ಎಲ್ಲಾ ಪತ್ರವ್ಯವಹಾರಗಳಲ್ಲಿ ತಮ್ಮ ತಮ್ಮ ವಿಳಾಸದೊಂದಿಗೆ ಇರುವ ರಿಜಿಸ್ಟರ ನಂಬರನ್ನು ತಪ್ಪದೆ ಬರಿಯತಕ್ಕದ್ದು. ರಿಜಿಸ್ಟರು ನಂಬರು ಇಲ್ಲದ ಪತ್ರಗಳಿಗೆ ನಿಗಾ ಕೊಡಲಾರೆವು.

ಪತ್ರಿಕೆಗೆ ಚಂದಾದಾರರಾಗಿ ಸೇರಲಪೇಕ್ಷೆಯುಳ್ಳವರು ವರ್ಷ 1ರ ಚಂದಾ ಹಣ ರೂ 2—1—0ನ್ನು ಮನಿಯಾರ್ಡರು ಮೂಲಕ ರವಾನಿಸುವದುತ್ತಮ. ವಿ. ಪಿ. ಮೂಲಕ ಕಳುಹಿಸಬೇಕೆಂದು ಬರಿಯುವಂಥವರಿಗೆ ಪತ್ರಿಕೆಯ ಹಿಂದಿನ ಸಂಚಿಕೆಯನ್ನು ವಿ. ಪಿ ಮಾತಿ ಕಳುಹಿಸಲಾಗುವದು. ವಿ ಪಿ ಯ ಮೊಬಲಗು ನಮಗೆ ತಲ್ಪಿದ ನಂತರವೇ ಪತ್ರಿಕೆಯನ್ನು ಕಳುಹಿಸಲು ಪ್ರಾರಂಭಿಸುವೆವು.

ಪತ್ರಗಳನ್ನು ಬರಿಯುವಾಗ ತಮ್ಮ ಹೆಸರು, ವಿಳಾಸ ಮತ್ತು ಪೋಸ್ಟಾಫೀಸನ್ನು ಸ್ಪಷ್ಟಾಕ್ಷರದಲ್ಲಿ ಬರಿಯತಕ್ಕದ್ದು.

ಮ್ಯಾನೇಜರ್,
ಸ್ವದೇಶಾಭಿಮಾನಿ ಆಫೀಸು,
ಮಂಗಳೂರು, ದ ಕ.

ರೂ 501 ಉಚಿತ!

ಬಲೂನ್ ಬ್ರೇಂಡ್ ಸಾಬೂನ್.

5 ನಿಮಿಷದೊಳಗೆ ಕೂದಲನ್ನು ಉದುರಿಸಿಬಿಡುವದಿಲ್ಲವೆಂಬದನ್ನು ಖಚಿತಪಡಿಸುವವರಿಗೆ ರೂ. 501 ಉಚಿತವಾಗಿ ಕೊಡೋಣಾಗುವದು. ಇದರಿಂದ ಚರ್ಮವು ಕೆಡದು. 3 ಸಾಬೂನುಗಳುಳ್ಳ ಪೆಟ್ಟಿಗೆ 1ಕ್ಕೆ 0—12—0; 2 ಪೆಟ್ಟಿಗೆಗಳ ವರೆಗೆ ವಿ. ಪಿ ಚಾರ್ಜು 0—5—0.

ರೂ. 2500 ಉಚಿತ!

ಸಿರಾಜಿ ಹೇರ್ ಡೈ ಎಂಬ ಕೇಶತೈಲವು ಬಿಳೀ ಮತ್ತು ನರೆತ ಕೂದಲನ್ನು ಕಪ್ಪು ಮಾಡುವದಿಲ್ಲವೆಂದು ತೋರಿಸುವವರಿಗೆ ರೂ. 2500 ಉಚಿತ.

ಈ ತೈಲವನ್ನು ಏನೊಂದು ಬಾಧಕಬಾರದಂತೆ ಅತಿ ನಿಪುಣತೆಯಿಂದ ತಯಾರು ಮಾಡಿರುತ್ತದೆ. ಇದರಿಂದ ಚರ್ಮದಲ್ಲಿ ಕಲೆಯಾಗದು. ಪೆಟ್ಟಿಗೆ 1ಕ್ಕೆ ರೂಪಾಯಿ 1—0—0; ವಿ. ಪಿ. ಬೇರೆ.

ವಿಳಾಸ:— ಎಫ್. ಎಲ್. ದವಾವಾಲ್ಲಾ,
ಮಿರ್ಜಾ ಸ್ಟ್ರೀಟ್, ಮುಂಬಾಯಿ.

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡಿಸಬೇಕಾಗಿದೆ.

F. L. Davawala,
Mirza Street, BOMBAY.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಲಕಾಂತ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨-೮-೦.

೩. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೫. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ಕಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು ತೊಲೆಗೆ ೨.ರೂ.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುಲ್ಮಶ್ವಾಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ

೧೧. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೩. ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗು ಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಪಟ್ಟಿಯ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ನಮ್ಮ ವಿಳಾಸ:—ಬಿ ಎಮ್. ನಾಥ್ ಮತ್ತು ಕಂಪೆನಿ,

ವೇಪರಿ ಪೋಸ್ಟು ಮದರಾಸು.

B. M. Nath & Co., *Ayurvedic Chemists*,

Vepery Post. MADRAS.

ಬನ್ನಿರಿ! ನೋಡಿರಿ!! ತಿಳಿಯಿರಿ!!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.

ಬಲ್ಕತ ಮಿಶ್ಯನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಯನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಬೆಲ್ಲ ಎಂಬ ಗುರುಸು ಕಲ್ಲು ಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ಧೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ನಗದಿ.

ವಿಳಾಸ:—

ಜೆ. ಎಸ್. ಸೋಜ ಎಂಡ್ ಕಂಪೆನಿ,

ಹಂಪನ್‌ಕಟ್ಟ, ಮಂಗಳೂರು

ಯುನಿವರ್ಸೆಲ್ ಎಸ್ಯುರೆನ್ಸ್ ಕೊ, ಲಿಮಿಟೆಡ್.

ಹೆಡ್ ಆಫೀಸು:—191, ಬೌ ಬಜಾರ, ಕಲ್ಕತ್ತಾ.

ಸರಕಾರದ ಭದ್ರತೆಯ ಮೇಲ್ವಿಚಾರದಲ್ಲಿ ನಡಿಯುತ್ತಿರುವುದು.

ಭಂಡವಾಳ ರೂ. 10,00,000.

ಈ ತನಕ ಕೊಡೋಣಾದ ವಿಮೆ ಹಕ್ಕುಗಳ ಮೊಬಲಗು ಸುಮಾರು 8,00,000.

ಫಂಡು—ರೂ. 3,00,000ಕ್ಕೆ ಮಿಕ್ಕಿದೆ.

ಸರಕಾರದವರ ಭದ್ರತೆಯಲ್ಲಿ ರೂ. 50,000ವಿರುವುದು.

ಚೀಫ್ ಇನ್ಸೂರೆನ್ಸ್ ಸ್ಕೀಮ್ ಎಂಬ ವೈದ್ಯಪರೀಕ್ಷೆ ಇಲ್ಲದೆ ವಿಮೆ ಉತ್ತರಾಯಿಸಿಕೊಳ್ಳಬಹುದಾದ ಸರ್ವರಿಗೂ ಸಾಧ್ಯವಾದ ಸುಲಭ ಕ್ರಮ.

ಈ ಪ್ರಾಂತ್ಯಗಳಲ್ಲಿ ಯಾವ ವಿಮೆ ಕಂಪೆನಿಗಳಲ್ಲಾದರೂ ಈತನಕ ಇಂಥಾ ಅಗ್ಗದರಗಳ ವಿಮೆ ಉತ್ತರಾಯಿಸುವ ಏರ್ಪಾಡೇ ಇರುವದಿಲ್ಲ. ಭಾರತೀಯರಲ್ಲಿ ವಿಶೇಷವಾಗಿರುವ ಬಡವರಗೋಸ್ಕರವೇ ಈ ಕ್ರಮವು ಏರ್ಪಡಿಸಲ್ಪಟ್ಟಿರುತ್ತದೆ. ಪ್ರೊವಿಡೆಂಟ್ ಫಂಡುಗಳ ಕ್ರಮದ ಪ್ರಕಾರ ಮುಂದಕ್ಕೆ ಸಂಭವಿಸಬಹುದಾದ ಅನನುಕೂಲತೆಗಳು ಇದರಲ್ಲಿರವು. ವಿಮೆ ಉತ್ತರಾಯಿಸಿಕೊಳ್ಳುವ ಈ ನವೀನ ಅಗ್ಗ ದರಗಳ ಏರ್ಪಾಡು ಬಹಳ ಉಪಯುಕ್ತವಾದದ್ದು ಎಂತ ವಿಮೆ ಸಂಘಗಳ ವಿಶೇಷ ಮಾಹಿತಿದಾರರ ಅಭಿಪ್ರಾಯವಿರುವುದು. ನಿಶ್ಚಿತವಾದ ವಿಮೆ ಮೊಬಲಗುಗಳ ರೂಪಾಯಿ ಮತ್ತು ಅರ್ಧ ರೂಪಾಯಿಗಳ ಪೊಲಿಸಿಗಳು ಈ ಕ್ರಮದ ಮೇರೆಗೆ ಕೊಡೋಣಾಗುವವು.

ಸಾಮಾನ್ಯ ವಿಮೆ ಇಲಾಖೆ.

ಈ ಕಂಪೆನಿಯ ಈ ಇಲಾಖೆಯಲ್ಲಿ ವಿಮೆ ಉತ್ತರಾಯಿಸಿಕೊಳ್ಳುವವರ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಲಿರುವುದು. ಸಾಧ್ಯವಿರುವ ಅತ್ಯಂತ ಕಡಮೆಯ ದರಗಳು ಸಂಪೂರ್ಣವಾದ ಭದ್ರತೆಯು ಈ ಇಲಾಖೆಯ ವಿಶೇಷ ಪ್ರಯೋಜನಗಳಾಗಿರುವುದು. ಕಂಪೆನಿಯ ಲೆಕ್ಕದ ಸ್ಥಿತಿಗತಿಯನ್ನು ತೋರಿಸುವ ಮೊಖಾಬಿಲೆ ಪಟ್ಟಿಗಳನ್ನು ಈ ಕಂಪೆನಿಯ ವಿಷಯ ಪತ್ರಗಳ ಅಭಿಪ್ರಾಯವೇನೆಂಬುದನ್ನೂ ತರಿಸಿ ನೋಡಿರಿ.

ಒಳ್ಳೇ ಚಟುವಟಿಕೆಯ ಜಾಣರಾದ ಏಜಂಟರುಗಳು ಬೇಕಾಗಿರುವರು. ಶರ್ತಗಳ ಬಗ್ಗೆ ಕೆಳಗಣ ವಿಳಾಸಕ್ಕೆ ಬರಕೊಳ್ಳಬಹುದು.

ವಿಳಾಸ:— ಲಕ್ಷ್ಮಣ ರಾವ್ ಬ್ರದರ್ಸ್,

[illegible]

ನೇಟಿವ್ ಡಾಕ್ಟರ್ಸ್ ಮೂಲ್ಕಿ ಗಣಪಯ್ಯ ಎಂಡ್ ಸನ್ಸ್‌ರವರ

ಔಷಧಗಳು.

ಮಹಾಮದನ ಕಾಮೇಶ್ವರೀ ಲೇಹ್ಯ:—ಒಹಳ ಶ್ರಮಪಟ್ಟು ಕೆಲಸ ಮಾಡುವವರೂ, ಲೇಖಕರೂ, ಮತ್ತು ಇಂದ್ರಿಯ ದೌರ್ಬಲ್ಯ, ಅಜೀರ್ಣ, ಎದೆನೋವು, ಶರೀರಗಳ ಘಳಿತದಿಂದಾದ ನಿಶ್ಶಕ್ತಿ, ಮೊದಲಾದ ಪ್ರಕೃತಿಯುಳ್ಳವರೂ ಇದನ್ನು ಸೇವಿಸಿದ್ದಲ್ಲಿ ಧಾತುಪುಷ್ಟಿಯಾಗಿ ಮುಖವು ಕಾಂತಿಗೊಳಿಸುವದು. ಸೇವನಾ ಕ್ರಮ— ಅಭ್ಯಾಸವುಳ್ಳವರು 1 ಪಾವಲಿ ತೂಕ ಯಾ ಗೋಲಗಾತ್ರ, ಅಭ್ಯಾಸಿಸುವವರು 2 ಆಣೆ ತೂಕ. ರಾತ್ರೆ ಊಟಾದ ಮೇಲೆ ಸೇವಿಸಿ ಹಾಲು ಕುಡಿಯತಕ್ಕದ್ದು

1 ಸೇರಿನ ಡಬ್ಬಿಗೆ ಕ್ರಯ: 2—0—0.

ಚಂದ್ರೋದಯಾವರ್ತಿ:—ಕಣ್ಣಿಗೆ ಅಂಜನ ಮಾಡಿದ್ದಲ್ಲಿ ಬೆಳೆದ ದುರ್ಮಾಂಸ, ತಿಮಿರ, 3 ವರ್ಷದ ಹೂವು, ಇರಳುಕಣ್ಣು, ತಾಜದಿಂದು ಗುಣ

ಕ್ರಯ ರೂ 0—12—0

ಮಹಾಜ್ವರಾಂಕುಶ:—ದಿವಸಕ್ಕೊಮ್ಮೆ ದ್ವಿತೀಯ, ತೃತೀಯ, ಚಾತುರ್ಥಿಕ ಜ್ವರಗಳ ಮೇಲೆ ರಾಮಬಾಣ. ಡಜನ್ ಕ್ರಯ 0—8—0,

ಮೇಹಮುದ್ಗರವಟಿ:—20 ನಮೂನೆಯ ಪ್ರಮೇಹ, ಧಾತು ಗತಜ್ವರ ಮೂತ್ರಕೃಛ್ರ, ಅಶ್ಮರಿ, ಕಾಮಲೆ, ರೊಂದು ಗುಣ ಡಜನ್ 1ರ ಕ್ರಯ 1—2—0.

ಕೊಲೆರಾ ಯಾನೆ ವಾಂತಿಭೇದಿ ಗುಟಿಕೆ:—ಒಂದೆರಡು ಗುಟಿಕೆಯಿಂದ ವಾಂತಿಭೇದಿ ಕೂಡಲೇ ಗುಣ. ಡಜನ್ ಗುಟಿಕೆಯ ಕ್ರಯ. 0—12—0.

ಚಂದನಾಸವ:—ಮೇಹ, ಶುಕ್ಲಧಾತು ನಷ್ಟತ್ವ ಗುಣ ಬಾಟ್ಲಿಗೆ ರೂ 1

ನಮ್ಮ ಔಷಧಾಲಯದಲ್ಲಿ ಅನೇಕ ವಿಧದ ಬೇರೆ ಔಷಧಗಳು ದೊರೆಯುತ್ತವೆ ಅಪೇಕ್ಷೆಯುಳ್ಳವರು ಕೆಟಲಾಗು ತರಿಸಿಕೊಳ್ಳಬಹುದು ಮೇಲಿನ ಔಷಧಗಳು ಬಹಳವಾಗಿ ಖರ್ಚಾಗುವದರಿಂದ ಕ್ರಯವನ್ನು ಕಡಿಮೆ ಮಾಡಿರುತ್ತದೆ

ವಿಳಾಸ — ಮೂಲ್ಕಿ ಗಣಪಯ್ಯ ಎಂಡ್ ಸನ್ಸ್,
ನೇಟಿವ್ ಡಾಕ್ಟರ್ಸ್,
ತೇರವೀದಿ ಮನೆ ನಂಬ್ರ 268ನೇ, ಮಂಗಳೂರು

ಹೊಸ ಹೊಸ ವಿಷಯಗಳು.

೧. ಶ್ರೀ ಭಗವದ್ಗೀತಾ ಸರ್ವರಿಗೂ ಅನುಕೂಲಿಸುವಂತೆ ಪ್ರತ್ಯೇಕ ಪ್ರತ್ಯೇಕವಾಗಿ ಪಾರಾಯಣ ಮಾಡುವವರಿಗೂ ಕಥಾರೂಪದಲ್ಲಿ ಓದುವವರಿಗೂ ಉಪಯೋಗವಾಗುವ ರೀತಿಯಲ್ಲಿ ಬಾಲಬೋಧಿನಿ ಎಂಬ ಅನ್ವರ್ಥ ನಾಮವುಳ್ಳ ಟೀಕಾ ತಾತ್ಪರ್ಯ ಸಹಿತವಾದ ಉತ್ತಮ ಪ್ರತಿ, ಬೆಲೆ ೩—೦—೦

೨. ವಿಷ್ಣುಪುರಾಣ ವ್ಯಾಸ ಪ್ರಣೀತವಾದ ಈ ಮಹಾ ಪುರಾಣದ ಪ್ರಥಮಾಂಶವು ಸಮೂಲವಾಗಿ ಕನ್ನಡಿಸಲ್ಪಟ್ಟಿರುವುದು (ಸಕಲ ವಿಷಯ ಗರ್ಭಿತ) ೨—೮—೦.

೩. ಶ್ರೀ ಶಂಕರ ವಿಜಯ ಪ್ರತಿಯೊಂದು ಕುಟುಂಬದಲ್ಲಿಯೂ ಓದಿ ಕೃತಕೃತ್ಯರಾಗಬೇಕಾದ ಗ್ರಂಥ ಲೋಕೋದ್ಧಾರಮಾಡಿದ ಶ್ರೀಮಚ್ಛಂಕರ ಚರಿತ್ರೆಯಾಗಿರುವದರಿಂದ ಹೆಚ್ಚಿಗೆ ಹೇಳಲು ಯಾರು ತಾನೇ ಸಮರ್ಥರು? ಪ್ರತಿಪದ ಟೀಕಾ ತಾತ್ಪರ್ಯವೂ ಟಿಪ್ಪಣಿಗಳೂ ಸಹಾ ಬಹಳ ವಿಶದವಾಗಿ ಪ್ರಕಟಿಸಿರುವುದು ಪ್ರಥಮ ಸಂಪುಟದ ಬೆಲೆ ೩—೦—೦

೪ ರಘುವಂಶ ಮಹಾಕಾವ್ಯ ಪ್ರತಿ ಶ್ಲೋಕಕ್ಕೂ ಪದವಿಭಾಗ ಶಬ್ದ ಸಮಾಸ ಆಕಾಂಕ್ಷೆ ವಿಗ್ರಹ ಟೀಕಾ ತಾತ್ಪರ್ಯ ಸಹಿತ ಸಂಸ್ಕೃತಾಭ್ಯಾಸಿಗಳಿಗೆ ಉಪಯೋಗವಾದ ಪ್ರತಿ ೧ನೇ ಸರ್ಗ ರೂ ೧—೦—೦ ೨ನೇ ಸರ್ಗ ರೂ. ೧—೦—೦

೫. ಇದರಂತೆಯೇ ಇರುವ ಕಿರಾತಾರ್ಜುನೀಯ ೧ನೇ ಸರ್ಗ ೦-೮-೦

೬ ವಿವೇಕಚೂಡಾಮಣಿ (ಶ್ರೀಮಚ್ಛಂಕರಾಚಾರ್ಯ ಕೃತ ವೇದಾಂತ ಗ್ರಂಥ) ಪ್ರತಿಪದ ಟೀಕಾ ತಾತ್ಪರ್ಯ ಸಹಿತ ರೂ ೨—೪—೦

೭ ಋಗ್ವೇದ ನಿತ್ಯಕರ್ಮ ಪ್ರಾತರ್ಮಾಧ್ಯಾಹ್ನಿಕ ಸಾಯಂಸಂಧ್ಯಾ ದೇವತಾರ್ಚನೆ, ಬ್ರಹ್ಮಯಜ್ಞ, ಮಂತ್ರಪುಷ್ಪ, ದೇವತಾಸ್ತೋತ್ರಗಳು, ತರ್ಪಣವಿಧಿ ಆದಿಯಾಗಿ ೪೪ ವಿಧಗಳೊಂದಿಗೆ ಇರುವ ಪ್ರತಿ. ೦—೪—೦.

೮ ಇದರಂತೆ ಇರುವ ಯಜುರ್ವೇದ ನಿತ್ಯಕರ್ಮ ೦—೪—೦.

ವಿದ್ಯಾನಂದ ಮಾಸಪತ್ರಿಕೆ ವಾರ್ಷಿಕ ಚಂದಾಹಾಸಲು ಸೇರಿ ೨—೪—೦

ಮಾದರಿ ಪತ್ರಿಕೆ, ಕ್ಯಾಟಲಾಗ್ (ಪುಸ್ತಕಪಟ್ಟಿ) ಉಚಿತವಾಗಿ ಪಡೆಯಬಹುದು.

ಬಾಣಮಾಡಿ ಆದಿನಾರಾಯಣಶಾಸ್ತ್ರಿ,
ವಿದ್ಯಾನಂದ ಆಫೀಸ್,
ಶಂಕರಪುರ, ಬೆಂಗಳೂರು ಸಿಟಿ.

ಹುಳಬಿದ್ದ ಹುಣ್ಣುಗಳು.

ಪಡುಬಿದ್ರಿ ಕಾಡಿಪಟ್ಣ ಮೊಗೇರ ಶೀನ ಹೆಂಗಸು ಬರಿಯುವದು —ನನಗೆ ಸುಮಾರು ಆರು ವರ್ಷಗಳಿಂದ ಎರಡು ಕಾಲುಗಳಲ್ಲಿ ಬೊಕ್ಕೆಗಳು ಹುಟ್ಟಿ ಅದರಲ್ಲಿ ಕೀವು ಸುರಿಯುತ್ತ ಕೆಲವು ಸಣ್ಣ ಛಿದ್ರಗಳುಂಟಾಗಿ ಆ ಛಿದ್ರದಲ್ಲಿ ಹುಳಗಳು ತುಳುಕುತ್ತಿತ್ತಲ್ಲದೆ ಸದರಿ ವ್ರಣಗಳು ಕರಗಿ ಅರ್ಧಾಣೆ ಗಾತ್ರವಾಗಿತ್ತು. ಇದರಿಂದ ನಡಿಯಲಾರದೆ ಕಾಲಿಗೆ ವಸ್ತ್ರ ಕಟ್ಟಿ ಮಲಗಿದ್ದಲ್ಲಿಯೇ ಇದ್ದೆನು. ದೈವವಶಾತ್ ತಮ್ಮ ಸಬ್ ಏಜಂಟರ ಭೇಟಿಯಾಗಿ ಪರೀಕ್ಷಾರ್ಥವಾಗಿ ಎರಡು ಸೀಸೆ ತಮ್ಮ ಯುಕಲಿಪ್ಟಸ್ ತೈಲವನ್ನು ಕೊಂಡುಕೊಂಡು ಹೊಟ್ಟೆಗೂ ತಕ್ಕೊಂಡು ಹುಣ್ಣಿಗೂ ಹಚ್ಚಿದೆ. ಎರಡು ಸೀಸೆ ಮುಗಿಯುವಷ್ಟರಲ್ಲಿ ನನ್ನ ಹುಣ್ಣುಗಳು ಒಣಗಿ ನಡಿಯಲು ಅನುಕೂಲವಾಗಿಯದೆ ಎಂಬದನ್ನು ತಿಳಿಸಲು ಸಂತೋಷಪಡುತ್ತೇನೆ

ಒಂದೇ ಸಲ ಕೊಡುವದರಲ್ಲಿ ಗುಣ!

ರಾ| ವೆಂಕಟಕೃಷ್ಣ ಆಚಾರಿ, ಶಂಕರನಾರಾಯಣ:—ನಿಮ್ಮಲ್ಲಿಂದ ತರಿಸಿದ ಯುಕಲಿಪ್ಟಸ್ ತೈಲವನ್ನು ಕೆಲವು ಕಾಲದಿಂದ ಕಠಿಣ ಹೊಟ್ಟೆನೋವಿನಿಂದ ನರಳುತ್ತಿದ್ದ ನನ್ನ ತಾಯಿಗೆ ಒಂದು ಸಲ ಕೊಡುವಷ್ಟರಲ್ಲಿ ಗುಣ ಉಂಟಾದಕಾರಣ ಮನಸ್ಸಿಗೆ ಬಾರಿ ಖುಸಿಯಾಗಿದೆ ಅರ್ಧ ಡಜನ್ ಸೀಸೆ ವಿ. ಪಿ. ಮಾಡಿ ಕಳುಹಿಸಿರಿ,

ಇದು ಅಮೃತವೇ ಸರಿ!!

ಎಸ್ ಎಸ್. ರಾವ್, ಮಂಗಳೂರು—ನನ್ನ ಇಬ್ಬರು ಮಕ್ಕಳಿಗೆ ಒಂದು ಮಧ್ಯರಾತ್ರಿ ಫಕ್ಕನೇ ಉಕ್ಕಾಲುಜುಲಾಬು ಉಂಟಾಗಿ ಏನುಮಾಡಬೇಕೆಂದರಿಯದೆ ಇರುವಲ್ಲಿ ತಮ್ಮಲ್ಲಿಂದ ಕೊಂಡುಕೊಂಡ ಯುಕಲಿಪ್ಟಸ್ ತೈಲದ ನೆನಪು ಹುಟ್ಟಿ ಅನುಪಾನ ಪತ್ರದಲ್ಲಿ ಬರದ ಪ್ರಕಾರ ನನ್ನ ಮಕ್ಕಳಿಗೆ ಪ್ರಯೋಗಿಸಿದ್ದಲ್ಲಿ ತಕ್ಷಣ ಗುಣವಾಯಿತು ಶೀತ, ಕೆಮ್ಮು, ಜ್ವರ ಮೊದಲಾದ ಸರ್ವ ರೋಗಗಳಿಗೂ ಯುಕಲಿಪ್ಟಸ್ ತೈಲವನ್ನೇ ನಾನು ಪ್ರಯೋಗಿಸುತ್ತಿದ್ದೇನೆ ಇದು ಅಮೃತವೇ ಸರಿ ಎನ್ನುವುದರಲ್ಲಿ ಅನುಮಾನ ಇಲ್ಲ. ಔನ್ಸ್ ಸೀಸೆ 1ಕ್ಕೆ 0—5—0. ವಿ. ಪಿ. ಬೇರೆ. ಡಜನ್ ಸೀಸೆಗಳಿಗೆ ವಿ ಪಿ ಸಹಿತ ರೂ 3—12—0. ಅನುಪಾನ ಪತ್ರಿಕೆ ಸೀಸೆಯೊಂದಿಗೆ.

☞ ನಮ್ಮಲ್ಲಿ ಹೋಮಿಯೋಪಥಿ ಔಷಧಿಗಳು ದೊರೆಯುತ್ತವೆ.

ವಿಳಾಸ:— ಇಕ್ಲಿಪ್ಸ್ ಏಜನ್ಸಿ, ಮಂಗಳೂರು.

ಏಜಂಟರು:— ಸುಗಂಧವಿಲಾಸ, ರಥಬೀದಿ, ಮಂಗಳೂರು.

ಅನೇಕ ಯೋಗ್ಯತಾಪತ್ರಿಕೆಗಳನ್ನು ಪಡದಿರುವ (ರಜಿಸ್ಟರ್ಡ್)

ರಾಜಸುಂದರಿ ರೋಜ.

ಕೂದಲು ಬೆಳೆಯುವ ಪರಿಮಳ ತೈಲವು. 50 ವಿಧವಾದ ಇನಾಂ ಸಾಮಾನುಗಳ ಸಮೇತ ಡಬ್ಬಿ 1ಕ್ಕೆ ರೂ. 1 ಮಾತ್ರ.

ಸ್ತ್ರೀಗಳು ತಲೆಕೂದಲು ಸುಂದರವಾಗಿ ಇರಬೇಕೆಂಬ ಉದ್ದೇಶವಾಗಿಯೂ ಕೂದಲು ಉದುರುವದನ್ನು ತಡದು, ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವವರು ಬಜಾರಿನಲ್ಲಿ ದೊರೆಯುವ ಕೀಳುತರವಾದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ, ನಿಮ್ಮ ಹಣವನ್ನೂ, ತಲೆಯನ್ನೂ, ಹಾಳು ಮಾಡುವದಕ್ಕಿಂತ ನಮ್ಮ ಪರಿಮಳ ತೈಲವನ್ನು ಉಪಯೋಗಿಸಿರಿ. ಈ ಲೋಕಪ್ರಖ್ಯಾತವಾದ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಬಾಚಿದರೆ ಅದರ ಸುವಾಸನೆ ಹೇಳುವದಕ್ಕೆ ಬರೆಯುವದಕ್ಕೆ ಆಗುವದಿಲ್ಲ ಮತ್ತು ಇದರ ಪರಿಮಳ ವಾಸನೆ ಸುತ್ತು ಇರುವ ಮನೆಗಳಿಗೆ ಹೋಗುವದು ಇದಲ್ಲದೆ ದೇಹದಲ್ಲಿ ಇರುವ ಉಷ್ಣವನ್ನು ತೆಗೆದು ತಣ್ಣಗೆ ತಂಪು ಕೊಡುವದು. ತಲೆಯಲ್ಲಿ ಇರುವ ಮದಡನ್ನು ಸರಿ ಮಾಡುವದು. ಮುಖಕ್ಕೆ ಕಾಂತಿಯನ್ನೂ, ದೇಹಕ್ಕೆ ಆರೋಗ್ಯವನ್ನೂ, ಮನಸಿಗೆ ಸಂತೋಷವನ್ನೂ, ಕೂದಲಿಗೆ ಆರೋಗ್ಯವನ್ನೂ ಕೊಡುವ ತೈಲ ಇದು ಒಂದೇ. ಬೇರೊಂದಿಲ್ಲ, ಬರೀ ಮಾತುಗಳಿಂದ ವರ್ಣಿಸುವದರಲ್ಲಿ ಪ್ರಯೋಜನವಿಲ್ಲ 1ನ್ನು ತರಿಸಿದರೆ ತಿಳಿಯುತ್ತೆ. ಇನಾಂ ಸಾಮಾನುಗಳ ತಪಶೀಲು. ಸ್ತ್ರೀಯರು ಧರಿಸಿಕೊಳ್ಳುವ ಕೊಂಡಗಿಣ 6, ವೈಭರಣ 1, ಅದ್ದಾ 1, ಕಾಂಬೂಲ ಮಾತ್ರೆ 30, ಕುಂಕದ ಬಾಣಿಗೆ 1, ಸೊಗಸಾದ ರಾಜರಾಣಿ ಕಾರನೇಷನ್ ಪೆಟ್ಟಿಗೆ 1, ರವಿವರ್ಮ ... 6, ಸುವಾಸನೆ ಅತ್ತರು ಬಿಲ್ಲೆ 1, ಗಂಧ ಬಿಲ್ಲೆ 1, ಸ್ತ್ರೀಯರು ಧರಿಸುವ ಬ್ರೂಚ್ 1.

ನಮ್ಮ ವಿಳಾಸ:— ಮ್ಯಾನೇಜರ್ ಡೈಯರ್ ಲಕ್ಷ್ಮಿ ಅಂಡು ಕಂಪೆನಿ,
ನಂ. 3 ಇರುಲಪ್ಪನ್ ಬೀದಿ, ಮದ್ರಾಸು.

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 23ನೇ ಜುಲಾಯಿ 1915.

ಮದ್ರಾಸು ವಿಶ್ವವಿದ್ಯಾಲಯದವರ ವಿಕ್ಷಿಪ್ತವರ್ತನ

(೧) ಪೂರ್ವ ಸ್ಥಿತಿ

ಈ ವರ್ಷ ನಡೆದ ಇಂಟರ್‌ಮೀಡಿಯಟ್ (Intermediate) ಪರೀಕ್ಷೆಯ ಫಲಿತಾಂಶದ ಮತ್ತು ಸ್ಕೂಲ್ ಫೈನಲ್ ಎಂಬ ಶಾಲಾಭ್ಯಾಸಪೂರಣ ಪರೀಕ್ಷೆಯ ವಿಷಯವಾಗಿ ಮಾಡೋಣಾದ ಕ್ರಮಗಳ ದೆಶೆಯಿಂದ ಮದ್ರಾಸು ಯೂನಿವರ್ಸಿಟಿಯ ವರ್ತನವು ಈಗ ಆಬಾಲವೃದ್ಧರಿಗೆಲ್ಲ ಏಕಮಾತ್ರವಾದ ಚರ್ಚಾವಿಷಯವಾಗಿ ನಿಂತಿದೆ ಪ್ರಸ್ತುತದಲ್ಲಿ ಸರ್ವವರ್ಗಗಳ ಜನರೂ ಅದನ್ನು ನಿಂದಿಸುತ್ತಲೂ ಶಪಿಸುತ್ತಲೂ ಇರುವರೆಂದು ಹೇಳಿದರೆ ಅದು ಅತ್ಯುಕ್ತಿಯಾಗಲಾರದು ಇತರ ಯೂನಿವರ್ಸಿಟಿಗಳಲ್ಲಿ ಕಾಣಬಾರದಿದ್ದ ಅನನ್ಯ ಸಾಧಾರಣವಾದ ಕೆಲಕೆಲವು ಗುಣಗಳು ಬಹುಕಾಲದಿಂದಲೂ ಮದ್ರಾಸು ಯೂನಿವರ್ಸಿಟಿಯಲ್ಲಿ ಇದ್ದೇ ಇದ್ದವು. ಆಗಿಂದಾಗ ಪರೀಕ್ಷಾ ಕ್ರಮಗಳನ್ನು ಹೆಚ್ಚು ಕಡಿಮೆ ಮಾಡುವುದು, ಬಹು ತೀವ್ರವಾದ ಪ್ರಶ್ನಪತ್ರಿಕೆಗಳನ್ನು ಕೊಡುವುದು, ಬಹು ಸ್ವಲ್ಪ ಸಂಖ್ಯಾಕರನ್ನು ತೇರಗೊಡುವುದು, ಸಕಾಲಕ್ಕೆ ಮೊದಲೇ ಪ್ರಶ್ನಪತ್ರಿಕೆಗಳು ಪ್ರಕಟವಾಗುವುದು, ಪರೀಕ್ಷ್ಯರ ವಿಷಯದಲ್ಲಿ ಕಿಂಚಿತ್ತಾದರೂ ಸಹಾನುಭೂತಿಯಿಲ್ಲದಿರುವುದು, ಇತ್ಯಾದಿಯಾಗಿ ಹಲವು ವಿಶಿಷ್ಟ ಲಕ್ಷಣಗಳಿಂದ ಮದ್ರಾಸು ಯೂನಿವರ್ಸಿಟಿಯವರು ಉಪಲಕ್ಷಿತರಾಗಿದ್ದರು ಇಷ್ಟಾಗಿಯೂ ಮದ್ರಾಸಿನ ಪದವೀಧರರನ್ನು ಭಾರತ ವರ್ಷದ ಇತರ ಭಾಗಗಳ ಜನರು ಕೇವಲ ತಿರಸ್ಕಾರದಿಂದ ಕಾಣುತ್ತಿದ್ದರು. ಆದರೆ ಇದು ಬಹಳ ಮಟ್ಟಿಗೆ ದುರಭಿಮಾನ ಸ್ವಭಾವವನ್ನು ಸೂಚಿಸುತ್ತಿದ್ದಿತೇ ಹೊರತಾಗಿ ಹಾಗೆ ತಿರಸ್ಕಾರದಿಂದ ಕಾಣತಕ್ಕ ದೋಷಗಳೇನೂ ನಮ್ಮ ಪದವೀಧರರಲ್ಲಿದ್ದುವೆಂದು ನಾವು ಸರ್ವಥಾ ಒಪ್ಪಲಾರೆವು ಅದು ಹಾಗಿರಲಿ

ಮದ್ರಾಸು ಯೂನಿವರ್ಸಿಟಿಯಲ್ಲಿ ಕಂಡು ಬರುತ್ತಿದ್ದ ದೋಷಗಳೇ ಆಗಲಿ, ಇತರ ಯಾವ ದೋಷಗಳೇ ಆಗಲಿ ಉಳಿದ ಭಾರತೀಯ ಯೂನಿವರ್ಸಿಟಿಗಳಲ್ಲಿಯೂ ಇದ್ದುವೋ ಹೇಗೆಂದು ನಮಗೆ ತಿಳಿಯದು. ಏವಂಚ ಒಂದು ದೋಷ ಮಾತ್ರ ಇಂಡಿಯದ ಸಮಸ್ತ ವಿಶ್ವವಿದ್ಯಾಲಯಗಳಲ್ಲಿಯೂ ಏಕಪ್ರಕಾರವಾಗಿ ಇದ್ದಿತು, ಪ್ರಾಯಶಃ ಪ್ರತಿ ಯೂನಿವರ್ಸಿಟಿಯಲ್ಲಿಯೂ ಸದಸ್ಯರೊಳಗೆ ದೇಶೀಯರೇ ಯುರೋಪಿಯರಿಗಿಂತ ಅಧಿಕ ಸಂಖ್ಯಾಕರಾಗಿದ್ದರು ಇಷ್ಟೇ ಅಲ್ಲದೆ ಈ ದೇಶೀಯ ಸದಸ್ಯರೊಳಗೆ ಪ್ರಾಯಶಃ ಬಹು ಪಕ್ಷದವರು ಯುರೋಪಿಯ ಸದಸ್ಯರ ಮಾತಿಗೆ ಸೊಪ್ಪು ಹಾಕದಂಥ ಸ್ವತಂತ್ರ ಬುದ್ಧಿಯ ವಕೀಲರೇ ಮೊದಲಾದವರಾಗಿದ್ದರು ಕೇವಲ ಅಯೋಗ್ಯರಾದ ಕೆಲವರೂ ದೇಶೀಯ ಸದಸ್ಯರೊಳಗಿದ್ದರು ನಿಜ, ಆದರೆ ಅವರು ತಮ್ಮ ನ್ಯೂನತೆಯನ್ನು ತಾವೇ ತಿಳಿದು, ಯೂನಿವರ್ಸಿಟಿಯ ಸಮಸ್ತ ವ್ಯವಹಾರಗಳಿಂದ ನಿರ್ಲಿಪ್ತರಾಗಿ ನಿಂತು, ಪದವೀದಾನ ಸಮಾರಂಭ (Convocation) ಕಾಲದಲ್ಲಿ ಮಾತ್ರ ಸರ್ವಾಭರಣ ಭೂಷಿತರಾಗಿ ವೇದಿಕೆಯನ್ನಲಂಕರಿಸಿ ತಮ್ಮ ಗೌರವವನ್ನು ಪ್ರಪಂಚಕ್ಕೆ ಪ್ರಕಟಗೊಳಿಸಿ ಅಷ್ಟರಿಂದಲೇ ತೃಪ್ತರಾಗುತ್ತಿದ್ದರು ಹೀಗೆ ಕೆಲಕೆಲವು ದೋಷಗಳು ಇದ್ದೇ ಇದ್ದುವಾದರೂ ಒಟ್ಟಾರೆ ವಿದ್ಯಾಪ್ರಸಾರಣವು ಆಗಳಿನ ದಿನಗಳಲ್ಲಿ ತಕ್ಕ ಮಟ್ಟಿಗೆ ಚೆನ್ನಾಗಿಯೇ ನಡೆಯುತ್ತಿದ್ದಿತೆಂದು ಹೇಳಬಹುದು

ಆದರೆ ಇಂಥ ಈ ಯೂನಿವರ್ಸಿಟಿಗಳ ಘಟನಾ ಪದ್ಧತಿಯು ಅಘಟಿತಘಟನಾ ಸಮರ್ಥರಾದ ಲಾರ್ಡ್ ಕರ್ಜನ್‌ರವರಿಗೆ ಸಮರ್ಪಕವಲ್ಲವೆಂದು ಕಂಡು ಬಂದಿತು. ಅವರು ತಮ್ಮ ಆಡಳಿತೆಯ ಕಾಲದಲ್ಲಿ ಪುನಃ ನವಸೃಷ್ಟಿಯನ್ನು ಮಾಡಿ ಯಾವತ್ತು ಯೂನಿವರ್ಸಿಟಿಗಳ ರಚನೆಯನ್ನೇ ಮಾರ್ಪುಗೊಳಿಸಬೇಕೆಂದು ಸಂಕಲ್ಪಿಸಿದರು ಮುಖ್ಯವಾಗಿ ಅರ್ವಾಚೀನ ಯುರೋಪಿಯ ಯೂನಿವರ್ಸಿಟಿಗಳ ಚಾಲಕರ ಗೌರವವೂ ವಿದ್ಯಾರ್ಥಿಗಳ ಅಭ್ಯಾಸದ ಗಾಂಭೀರ್ಯವೂ ನಮ್ಮ ಯೂನಿವರ್ಸಿಟಿಗಳಿಗೆ ಬರಬೇಕಾದರೆ (೧) ಸದಸ್ಯರ ಸಂಖ್ಯೆಯನ್ನು ಕಡಿಮೆ ಮಾಡುವುದೂ, (೨) ಅವರ ಸದಸ್ಯತ್ವದ ಕಾಲವನ್ನು ಕ್ಲಪ್ತಗೊಳಿಸುವುದೂ, (೩) ವಿಶೇಷವಾಗಿ ಶಿಕ್ಷಕರುಗಳನ್ನೇ ಸದಸ್ಯರನ್ನಾಗಿ ಮಾಡುವುದೂ, (೪) ಪರೀಕ್ಷೆಗಳ ಕಾಠಿಣ್ಯವನ್ನು ಅಧಿಕ ತೀವ್ರವಾಗಿರಿಸುವುದೂ ಆವಶ್ಯಕವೆಂದು ಅವರು ಕಂಡುಕೊಂಡರು ಸಾಮಾನ್ಯ ಜನರು ಪ್ರಾಥಮಿಕ ಮಾಧ್ಯಮಿಕ ಶಿಕ್ಷಣದಿಂದಲೇ ಸಂತುಷ್ಟರಾಗಿರಬೇಕೆಂದೂ ಕೇವಲ ಕುಶಾಗ್ರ ಬುದ್ಧಿಯ ಕೆಲವರಿಗೆ ಮಾತ್ರ ವಿಶ್ವವಿದ್ಯಾಲಯದ ಪದವಿಗಳು ದೊರೆಯಬೇಕೆಂದೂ ಇವರು ದೃಢಾಭಿಪ್ರಾಯವುಳ್ಳವರಾಗಿದ್ದರು ಹೀಗಾದ ದರಿಂದ ಈ ತಮ್ಮ ಉದ್ದೇಶವನ್ನು ಸಾಧಿಸುವದಕ್ಕಾಗಿ ಮೊದಲಲ್ಲಿ ಒಂದು "ಕಮಿಶನ್" ನೇಮಿಸಿಯೂ ತದನಂತರದಲ್ಲಿ ಒಂದು ಶಾಸನ (act)ವನ್ನೇರ್ಪಡಿಸಿಯೂ ಭಾರತೀಯ ವಿದ್ಯಾಭ್ಯಾಸದ ಪ್ರಗತಿಯ ವಿಷಯದಲ್ಲಿ ತಮಗಿದ್ದ ಅಭಿಮಾನವನ್ನು ವ್ಯಕ್ತಗೊಳಿಸಿ ಅವರು ಕೃತಕೃತ್ಯರಾದರು. ಆ ಕಾಲದಲ್ಲಿಯೇ ದೇಶೀಯರೊಳಗೆ ಹಲವರು ಇದರ ಪರಿಣಾಮವು ಎಂದೆಂದಿಗೂ ಸುಕರವಾಗದೆಂದು ಖಂಡಿತ ವಾಕ್ಯಗಳಿಂದ ನಿವೇದಿಸಿದರಾದರೂ 'ಬಡವನ ಮಾತು ಅಡಿಯಲ್ಲಿ ಹೋಯಿತು', ಎಂಬಂತೆ ಅವರ ಮಾತುಗಳು ಬರೇ ಅರಣ್ಯರೋದನವಾದವು

(೨) ಪುನಸ್ಸೃಷ್ಟಿ

೧೯೦೪ನೇ ಇಸವಿಯ ಆಕ್ಟಿಗನುಗುಣವಾದ ನೂತನ ರಚನೆಯ ಫಲವಾಗಿ ಯೂನಿವರ್ಸಿಟಿಗಳ ರೂಪವೇ ಬೇರೆಯಾಯಿತು. ಪೂರ್ವದಲ್ಲಿದ್ದ ಸದಸ್ಯರೆಲ್ಲ ಸನ್ಮಾನಿತರು (Honorary) ಗಳಾದರು ಅವರ ಸ್ಥಳದಲ್ಲಿ ಐದೈದು ವರ್ಷಗಳ ಕಾಲ ಮಾತ್ರ ಸದಸ್ಯರಾಗಿರತಕ್ಕ ಮತ್ತು ಅದರಲ್ಲಿ ಎರಡು ಭಾಗಕ್ಕೆ ಕಡಿಮೆಯಾಗದಂತೆ ಉಪಾಧ್ಯಾಯರಾಗಿರತಕ್ಕ ಸುಮಾರ ೧೦೦ ಮಂದಿ ದೊಡ್ಡ ಮನುಷ್ಯರು ವಿರಾಜಮಾನರಾದರು ವ್ಯವಸ್ಥಾಪಕ ಮಂಡಲ (syndicate) ದಲ್ಲಿ ಬಹುಪಕ್ಷದವರು ಮಹಾಪಂಡಿತರಾದ ವಿದ್ಯಾಗುರುಗಳಾದರು ಮೊದಲಿನ ಪರೀಕ್ಷೆಗಳೆಲ್ಲ ತಲೆಕೆಳಗಾದುವು, ಮತ್ತು ಅಭ್ಯಾಸ ಕ್ರಮಗಳಲ್ಲಿ ಪ್ರಬಲವಾದ ಮಾರ್ಪುಗಳುಂಟಾಗಿ ಮದ್ರಾಸಿನಲ್ಲಿಯೂ ಇತರತ್ರವೂ ಪ್ರಾಚ್ಯ ದೇಶಭಾಷೆಗಳು ಆವಶ್ಯಕ (compulsary) ವರ್ಗದಿಂದ ತೆಗೆದುಹಾಕಲ್ಪಟ್ಟು, ಅವುಗಳ ಬದಲಾಗಿ ಇಂಗ್ಲೀಷ್ ಭಾಷಾಭ್ಯಾಸವೊಂದು ಮಾತ್ರ ಸರ್ವ ಪ್ರಧಾನವಾಗಿ ನಿಂತಿತು. ಇನ್ನು ಇದೇ ಮೇರೆಗೆ ಯೂನಿವರ್ಸಿಟಿಯ ಕೆಲಸಗಳು ಸರಾಗವಾಗಿಯೂ ಸಮರ್ಪಕವಾಗಿಯೂ ನಡೆಯುವಂತೆ ತಜ್ಞರೇ ಸೇರಿರುವ ಹಲವು ನೂರಾರು ಕಮಿಟಿಗಳೂ ಬೋರ್ಡುಗಳೂ ಏರ್ಪಡಿಸಲಾದುವು

ಮದ್ರಾಸು ಯೂನಿವರ್ಸಿಟಿಯ ೧೯೧೫ನೇ ವರ್ಷದ 'ಕೆಲೆಂಡರು' ಮೇರೆಗೆ ಆ ಯೂನಿವರ್ಸಿಟಿಯಲ್ಲಿ ಆರು ಮಂದಿ ಉದ್ಯೋಗ ಪ್ರಯುಕ್ತ (Ex-officio) ಸಭಿಕರೂ ೯೬ ಮಂದಿ ಸಾಮಾನ್ಯ ಸಭಿಕರೂ ಇರುವಂತೆ ತಿಳಿಯಬರುತ್ತಿದೆ ಇದರಲ್ಲಿ ಉದ್ಯೋಗ ಪ್ರಯುಕ್ತರೊಳಗೆ ಒಬ್ಬರೂ ಸಾಮಾನ್ಯರೊಳಗೆ ನಲವತ್ತಯಿದು ಜನರೂ ದೇಶೀಯರೆಂದು ಕಂಡುಬರುತ್ತದೆ ಈ ನಲವತ್ತಯಿದು ದೇಶೀಯರೊಳಗೆ ಸುಮಾರು ಇಪ್ಪತ್ತಯಿದು ಮಂದಿ ಮಾತ್ರ ವಕೀಲರೇ ಮೊದಲಾದ ಸ್ವತಂತ್ರ ಜೀವಿಗಳಾಗಿದ್ದು ಉಳಿದವರಲ್ಲಿ ಕೆಲವರು ಸರ್ಕಾರೀ ಶಾಲೆಗಳಲ್ಲಿ ಈಗಲೂ ಕೆಲಸ ಮಾಡುವವರು ಅಥವಾ ಈಗಾಗಲೇ ಕೆಲಸದಿಂದ ನಿವೃತ್ತರಾದವರಾಗಿಯೂ, ಬೇರೆ ಕೆಲವರು ಸಹಾಯ ದ್ರವ್ಯ ಹೊಂದುವ ಕಾಲೇಜುಗಳಿಗೆ ಸಂಬಂಧಪಟ್ಟವರಾಗಿಯೂ ಇರುವರು. ಯೂರೋಪೀಯ ಸದಸ್ಯರಲ್ಲಿ ಸುಮಾರು ನಲವತ್ತಮೂರು ಮಂದಿ ಈಗಲೂ ಶಿಕ್ಷಕ ವರ್ಗಕ್ಕೆ ಸಂಬಂಧಪಟ್ಟವರಾಗಿರುವರು 'ಸಿಂಡಿಕೇಟಿಗೆ ಸೇರಿದ ೧೫ ಗ್ರಹಸ್ಥರೊಳಗೆ ಇಬ್ಬರು ದೇಶೀಯರು, ಇವರಿಬ್ಬರೂ ಶಿಕ್ಷಕರೇ ಮತ್ತು ಯೂರೋಪೀಯರೊಳಗೆ ಒಬ್ಬರು ವಿದ್ಯಾಧಿಕಾರಿಗಳೂ ಎಂಟು ಮಂದಿ ಶಿಕ್ಷಕರೂ ಆಗಿರುವರು. ಹೀಗೆ ನೂತನ ರಚನೆಯ ದೆಸೆಯಿಂದ ಸರ್ವ ವಿದ್ಯಾಪಾರಂಗತರಾದ ಮಹಾ ಮಹಾ ಪಂಡಿತರೇ ಯೂನಿವರ್ಸಿಟಿಯ ಆಡಳಿತದಲ್ಲಿ ತುಂಬಿ ತುಳುಕುತ್ತಿರುವರೆಂಬುದು ಸ್ಪಷ್ಟವಾಗುತ್ತಿದೆ ಇಂಥಾ ಈ ವಿಶ್ವವಿದ್ಯಾಲಯದಲ್ಲಿ ಯಾವ ಕೊರತೆಯೂ ಉಳಿಯದಂತೆ ಆಡಳಿತವೂ ವಿದ್ಯಾಭ್ಯಾಸವೂ ಪರಿಷ್ಕಾರವಾಗಿ ನಡೆಯುತ್ತಿರಲು ಬಹುದೆಂದೂ ಬೇಕೆಂದೂ ಮಹಾ ಜನರುಗಳು ಏಕಾಭಿಪ್ರಾಯದಿಂದ ಕೋರಿದರಾದರೆ ಯೂನಿವರ್ಸಿಟಿಯವರ ಮೇಲೆ ಅತಿಮಾನುಷವಾದ ಭಾರವನ್ನು ಹೊರಿಸಿದಂತಾಗಲೀ ಅವರಿಂದ ಅನನ್ಯ ಸಾಧಾರಣವಾದ ಕಾರ್ಯಕ್ಷಮತೆಯನ್ನು ಅಪೇಕ್ಷಿಸದಂತಾಗಲೀ ಆಗುವುದೆಂದು ನಾವು ಭಾವಿಸಲಾರೆವು.

ಮಹಾರಾಷ್ಟ್ರ ಸಾಹಿತ್ಯ ಸಮ್ಮೇಳನ.

(ಮೊದಲನೆಯ ದಿನದ ವೃತ್ತಾಂತವು.)

ಈ ಸಮ್ಮೇಳನದ ಎಂಟನೆಯ ಅಧಿವೇಶನವು ಬೊಂಬಾಯಿಯ ಮಾಧವಬಾಗೆಂಬ ಭವನದಲ್ಲಿ ಕಳೆದ ಮೇ ೧೬ನೇ ತೇದಿ ರವಿವಾರ ಮಧ್ಯಾಹ್ನದಲ್ಲಿ ಪ್ರಾರಂಭವಾಯಿತು ಮಹಾರಾಷ್ಟ್ರಕ್ಕೆ ಸೇರಿದ ಬೇರೆ ಬೇರೆ ಪಟ್ಟಣಗಳಿಂದಲೂ ಮಹಾರಾಷ್ಟರ ಉಪನಿವೇಶನಗಳಿಂದ ಬಡೋದೆ, ಇಂದೂರು, ಗ್ವಾಲೇರು ಮುಂತಾದ ಪ್ರಾಂತಗಳಿಂದಲೂ ಅನೇಕಾನೇಕ ಪುರುಷರೂ, ಸ್ತ್ರೀಯರೂ ಪ್ರತಿನಿಧಿಗಳಾಗಿ ಬಂದಿದ್ದರು. ಸಭಾಭವನವು ವಿದ್ಯಾಧನ ಸಂಪನ್ನರಾದ ಹಲವು ದೊಡ್ಡ ಮನುಷ್ಯರಿಂದ ಕಿಕ್ಕಿರಿಯುವಂತಿದ್ದಿತು ಪ್ರತಿನಿಧಿಗಳೂ ಸ್ವಾಗತ ಮಂಡಲಿಗೆ ಸೇರಿದವರೂ, ಪ್ರೇಕ್ಷಕರೂ ಸೇರಿ ಜನ ಸಮುದಾಯವು ಒಂದು ಸಾವಿರಕ್ಕೆ ಕಡಿಮೆಯಾಗಿರಲಿಲ್ಲವೆಂದು ತಿಳಿಯಬರುತ್ತದೆ

ಮೊದಲಲ್ಲಿ ಬೊಂಬಾಯಿಯ ಪ್ರಸಿದ್ಧ ನಾಗರೀಕರೂ ಸ್ವಾಗತ ಮಂಡಳಿಯ ಅಧ್ಯಕ್ಷರೂ ಆದ ಸರ್ ಭಾಲಚಂದ್ರಕೃಷ್ಣ ಭಾಟವಡೇಕರ್ ಎಂಬ ಮಹನೀಯರು ಸಭಿಕರಿಗೆ ಸುಸ್ವಾಗತವನ್ನಿತ್ತು ಇಂತೆಂದರು "ಮೊದಲನೆಯ ಐದು ಸಮ್ಮೇಳನಗಳು ಪೂನಾ ಸಾತಾರೆಗಳಲ್ಲಿಯೂ, ಆರನೆಯದು ಶ್ರೀಮನ್ಮಹಾರಾಜರವರ ಆಶ್ರಯದಲ್ಲಿ ಬಡೋದೆಯೊಳಗೂ ತದನಂತರ ಏಳನೆಯದು ೧೯೦೮ನೇ ಸಂವತ್ಸರದಲ್ಲಿ ಅಂಕೋಲೆಯಲ್ಲಿಯೂ ನಡೆದು ಆ ಏಳನೆಯ ಅಧಿವೇಶನದಲ್ಲಿ "**ಮಹಾರಾಷ್ಟ್ರ ಸಾಹಿತ್ಯ ಪರಿಷತ್ತು**" ಎಂಬ ಸ್ಥಾಯಿಯಾದ ಸಂಸ್ಥಾಪನೆಯು ಉಂಟಾಗಿ ನಿಬಂದನೆಗಳು ಏರ್ಪಟ್ಟು ಅದರ ಮುಖ್ಯ ಸ್ಥಳವು ಬೊಂಬಾಯಿ ಆಗಿರಬೇಕೆಂದು ಗೊತ್ತುಪಡಿಸಲಾಯಿತು. ವಾಙ್ಮಯವು ರಾಷ್ಟ್ರೋತ್ಕರ್ಷದ ಒಂದು ಆದರ್ಶವಾಗಿದೆ .. ..ಶಾಸ್ತ್ರಗಳ ಮತ್ತು ಶಿಕ್ಷಣದ ಬಲದಿಂದ ಪೃಥಿವಿಯ ಮೇಲಣ ಸಮಸ್ತ ರಾಷ್ಟ್ರಗಳು ದ್ರುತಗತಿಯಿಂದ ಮುಂದರಿಸಿ ಹೋಗುತ್ತಿವೆ ಜಗತ್ತಿನ ಈ ಪ್ರಗತಿಯಲ್ಲಿ ನಮ್ಮ ರಾಷ್ಟ್ರವೂ ಹಿಂದೆ ಬೀಳದಂತೆ ಮಾಡತಕ್ಕ ದೊಡ್ಡ ಭಾರವು ನಮ್ಮ ಗ್ರಂಥ ಕರ್ತೃಗಳ ಮೇಲಿದೆ...... ಶ್ರೇಷ್ಠವಾದ ಗ್ರಂಥಕರ್ತೃಗಳ ಲೇಖನಿಯಲ್ಲಿಯೂ, ವಾಣಿಯಲ್ಲಿಯೂ ಎಂಥ ಅಗಾಧವಾದ ಸಾಮರ್ಥ್ಯವಿದೆಯೆಂದು ವರ್ಣಿಸಿ ಹೇಳುವುದು ಅಸಾಧ್ಯವು. ಡಾಂಟೇ (Dante) ಕವಿಯು ಅಪ್ರತಿಮವಾದ ತನ್ನ ಕೃತಿಯ ಮೂಲಕ ಇಟಲೀ ರಾಷ್ಟ್ರವನ್ನು ಉನ್ನತಿಗೆ ತಂದನು ರಾಮದಾಸ ಸ್ವಾಮಿಗಳ ದಾಸಬೋಧವನ್ನು ಮಹಾರಾಷ್ಟ್ರೀಯರು ಮರೆಯಲು ಶಕ್ಯವಲ್ಲ .... ಗ್ರಂಥಕರ್ತೃರುಗಳು ರಾಷ್ಟ್ರದ ಶಿಕ್ಷಕರೂ ನೇತಾರರುಗಳೂ ಆಗಿರುವರು ."

"ವಂಗೀಯ ಸಾಹಿತ್ಯ ಪರಿಷತ್ತಿನ ಅಧಿವೇಶನವು ಮೊನ್ನೆ ತಾನೇ ವರ್ಧಮಾನಪುರಿಯಲ್ಲಿ ಆದುದರ ವೃತ್ತಾಂತವನ್ನು ನೀವು ಓದಿರಬಹುದು ಬಂಗಾಳೀ ಜನರು ತಮ್ಮ ಕೆಲಸವನ್ನು ಬಹಳ ಅಚ್ಚುಕಟ್ಟಾಗಿ ಮಾಡುತ್ತಿರುವರು.. .. ಅವರ ಪರಿಷತ್ತಿನಲ್ಲಿ ಭಾಷೆ, ಇತಿಹಾಸ, ಕಾದಂಬರಿ, ತತ್ವಜ್ಞಾನ, ವಿಜ್ಞಾನವೇ ಮೊದಲಾದ ಬೇರೆ ಬೇರೆ ವಿಷಯಗಳನ್ನು ಪ್ರತಿ ಪ್ರತ್ಯೇಕ ಶಾಖೆಗಳಾಗಿ ಮಾಡಿಕೊಂಡು ಪ್ರತಿ ವಿಷಯವನ್ನೂ ವಿಶೇಷ ರೀತಿಯಿಂದ ವಿವೇಚಿಸುತ್ತಿರುವರು...,. ಒಂದೊಂದೇ ವಿಷಯವನ್ನು ತಮ್ಮದಾಗಿ ಮಾಡಿಕೊಂಡು ಅಭ್ಯಸಿಸುವ ಜನರುಗಳ ಸಂಖ್ಯೆಯು ಹೆಚ್ಚಾಗಿದ್ದರೆ ಮಾತ್ರವೇ ಪರಿಷತ್ತಿನಲ್ಲಿ ಇಂಥಾ ವಿಭಾಗಗಳನ್ನು ಮಾಡೋಣವು ಪ್ರಯೋಜನಕಾರಿಯಾಗುವುದು ಅನ್ಯಥಾ ಆಗಲಾರದು "

"ಪ್ರಕೃತದಲ್ಲಿ ವರ್ಷಾನ ವರ್ಷ ಒಟ್ಟುಗೂಡಿ ಪರಸ್ಪರ ಪರಿಚಯಮಾಡಿಕೊಳ್ಳುವುದೂ, ಒಬ್ಬೊಬ್ಬರ ಅಡಚಣೆಗಳೇನೆಂದು ತಿಳಿದುಕೊಳ್ಳುವುದೂ, ಇದು ವರೆಗೆ ಆದುದೇನೆಂದೂ, ಮುಂದೆ ಆಗತಕ್ಕುದ್ದೇನೆಂದೂ ಶಾಂತಚಿತ್ತರಾಗಿ ಆಲೋಚಿಸಿ ಮುಂದಿನ ದಿಕ್ಪಥವನ್ನು ಗೊತ್ತುಪಡಿಸಿಕೊಳ್ಳುವುದೂ ಇವೇ ಮೊದಲಾದ ಕೆಲಸಗಳನ್ನು ಪ್ರಥಮತಃ ಕೆಲವು ಕಾಲ ಪರ್ಯಂತ ನಾವು ಮಾಡುತ್ತಿರಬೇಕು ಸದ್ಯದಲ್ಲಿ ಪರಿಷತ್ತಿನ ಉಪಶಾಖೆಗಳನ್ನು ಮಹಾರಾಷ್ಟ್ರದ ದೊಡ್ಡದೊಡ್ಡ ಭಾಗಗಳ ಮುಖ್ಯ ಪಟ್ಟಣಗಳಲ್ಲಿ ಸ್ಥಾಪಿಸುವುದು ಅತ್ಯಗತ್ಯವಾಗಿದೆ . ದೂರ ದೂರದಲ್ಲಿರುವ ಹಲವು ಲೇಖಕರು ತಮ್ಮ ತಮ್ಮ ಶಕ್ತ್ಯಾನುಸಾರವಾಗಿ ಭಾಷಾ ಸೇವೆಯನ್ನು ಮಾಡುತ್ತಲೇ ಇರುವರು ಅವರಿಗೆಲ್ಲ ಸಂಘಟಿತ ಸ್ವರೂಪವನ್ನು ಕೊಟ್ಟು ಐಕವಾಕ್ಯತೆಯನ್ನುಂಟುಮಾಡುವುದು ಪರಿಷತ್ತಿನ ಆದ್ಯಕರ್ತವ್ಯವಾಗಿದೆ......"

"ಈಗಳಿನ ನಮ್ಮ ಗ್ರಂಥಕರ್ತೃಗಳಲ್ಲಿ ಒಂದು ವಿಷಯವನ್ನು ಕುರಿತು ನಿರಂತರ ವ್ಯಾಸಂಗ ಮಾಡಿ ತಮ್ಮ ಪರಿಶ್ರಮದ ಪ್ರಯೋಜನವನ್ನು ವಾಚಕರಿಗೆ ಕೊಡಲು ತಕ್ಕವರಾದ ಜನರ ಸಂಖ್ಯೆ ಬಹು ಸ್ವಲ್ಪವಾಗಿದೆ. ಏನೋ ಹೇಗೋ ಬರೆದು ಪುಟ ಸಂಖ್ಯೆಯನ್ನು ಬೆಳೆಯಿಸುವವರೇ ಅಧಿಕರು.......ನಮ್ಮ ರಾಷ್ಟ್ರವು ಉನ್ನತಿಗೆ ಬರುವುದಕ್ಕೂ ಸಂಸಾರವು ಸುಖದಿಂದ ಸಾಗುವುದಕ್ಕೂ ಉದಾತ್ತವಾದ ಸುವಿಚಾರ ಪರಿಪ್ಲುತವಾದ ಗ್ರಂಥಗಳು ಅತ್ಯಾವಶ್ಯಕವಾಗಿವೆ ಇಂಥ ಗ್ರಂಥಗಳನ್ನು ಬರೆಯತಕ್ಕವರಲ್ಲಿ ವ್ಯಾಸಂಗವೂ ಲೋಕನಿರೀಕ್ಷಣವೂ ಜಗತ್ತಿನಲ್ಲಿ ನಡೆಯುವ ವ್ಯವಹಾರಗಳ ಪರಿಚಯವೂ ಮೊದಲಾದ ಗುಣಗಳಿರಬೇಕು. ಈ ಗುಣಗಳನ್ನು ಬರಮಾಡಿಕೊಳ್ಳುವುದು ಅಸಾಧ್ಯವಲ್ಲ; ಕಷ್ಟಪಟ್ಟು ಕೆಲಸ ಮಾಡಲು ಇಷ್ಟವಿರಬೇಕು; ಸಂಸ್ಕರಣವಾಗಬೇಕೆಂಬ ಪ್ರಬಲವಾದ ಇಚ್ಛೆಯಿರಬೇಕು ಮತ್ತು ಸ್ವಲ್ಪ ಶ್ರಮದಿಂದ ಅಧಿಕ ಫಲವನ್ನು ಹೊಂದಬೇಕೆಂಬ ದುರಾಶೆಯನ್ನು ಬಿಟ್ಟುಬಿಡಬೇಕು... ಈಗ ಪ್ರತಿ ವರ್ಷವೂ ಸಾವಿರಾರು ಸುಶಿಕ್ಷಿತ ಪದವೀಧರರು ವಿಶ್ವವಿದ್ಯಾಲಯಗಳಿಂದ ಹೊರಡುತ್ತಿರುವರು. ಇವರಲ್ಲಿ ಅನೇಕರು ನಿಸ್ಸಂದೇಹವಾಗಿ ಅತ್ಯಂತ ಮೇಧಾವಿಗಳು ಕುಶಾಗ್ರ ಬುದ್ಧಿಯುಳ್ಳವರು. ಅವರು ತಮ್ಮ ತಮ್ಮ ಮೆಚ್ಚಿಕೆಯ ವಿಷಯವನ್ನು ಕುರಿತು ವಿಶಿಷ್ಟ ವ್ಯವಸಾಯ ಮಾಡಲು ಕೈಕೊಂಡರೆ ಎಷ್ಟೋ ಕೆಲಸವಾಗುವಂತಿದೆ ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಯವರು 'ಸಾಹಿತ್ಯ ಪತ್ರಿಕೆ' ಎಂಬ ಮಾಸ ಪತ್ರಿಕೆಯನ್ನು ನಡೆಯಿಸುರುವರು. ಇದರಲ್ಲಿ ಗ್ರಂಥ ಸಮಾಲೋಚನವೂ ವಾಙ್ಮಯ ವಿಷಯವಾದ ಚರ್ಚೆಯೂ ಚೆನ್ನಾಗಿ ಆಗುತ್ತಿದೆ..."

"ಸಾಮಾನ್ಯ ವಾಚಕರ ತೃಷ್ಣೆಯನ್ನು ತೃಪ್ತಿಗೊಳಿಸಿ ಅವರಲ್ಲಿ ಸುವಿಚಾರವನ್ನುಂಟುಮಾಡತಕ್ಕ ಗ್ರಂಥಗಳು ನಮ್ಮಲ್ಲಿ ಸ್ವಲ್ಪಮಾತ್ರವಿವೆ. ಮುಖ್ಯವಾಗಿ ಹೆಂಗಸರ ಮತ್ತು ಮಕ್ಕಳ ವಿಷಯದಲ್ಲಿ ಸ್ವಲ್ಪವೂ ಲಕ್ಷ್ಯಗೊಡಲ್ಪಡುವುದಿಲ್ಲ. ಸಾಧಾರಣತಃ ನಾವು ಯಾವನೊಬ್ಬ ಪಾಶ್ಚಿಮಾತ್ಯ ಪ್ರಕಾಶಕನ ಪುಸ್ತಕಗಳ ಪಟ್ಟಿಯನ್ನು ನೋಡಿದೆವಾದರೆ ಮಕ್ಕಳ ಅನುಕೂಲತೆಯ ಕಡೆಗೆ ದೊಡ್ಡ ದೊಡ್ಡ ಲೇಖಕರು ಕೂಡ ಎಷ್ಟು ಗಮನಕೊಡುತ್ತಿರುವರೆಂಬುದು ತಿಳಿಯಬರುವುದು. ಬಾಲ ವಾಙ್ಮಯವು (Juvenile Literature) ಪ್ರಾಯಶಃ ನಮ್ಮಲ್ಲಿ ಇಲ್ಲವೇ ಇಲ್ಲವೆನ್ನಬಹುದು, 'High Roads of History', 'High Roads of Geography'. 'High Roads of Literature', ಇವೇ ಮೊದಲಾದ ನೆಲ್ಸನ್ (Nelson) ಕಂಪೆನಿಯವರ ಪುಸ್ತಕಮಾಲೆಯನ್ನು ನೋಡಿದ ಪಕ್ಷದಲ್ಲಿ ನಾವು ಚಕಿತರಾಗದಿರೆವು. ಇಷ್ಟು ಚೆಲುವಾದ ಪುಸ್ತಕಗಳನ್ನು ಇಷ್ಟು ಸ್ವಲ್ಪ ಬೆಲೆಗೆ ಹೇಗೆ ಕೊಡಲು ಸಾಧ್ಯವೆಂಬುದನ್ನು ಅವರಿಂದ ನಮ್ಮ ಪ್ರಕಾಶಕರುಗಳು ಕಲಿತುಕೊಳ್ಳಬೇಕಾಗಿದೆ.

"ಪರಿಷತ್ತಿನಲ್ಲಿ ಚರ್ಚಿಸುವುದಕ್ಕಾಗಿ ಹಲವರು ಹಲವು ಸೂಚನೆಗಳನ್ನು ಕಳುಹಿಸಿರುವರು ಇವುಗಳೊಳಗೆ ಕೆಲಕೆಲವು ಮುಂದೆ ಕ್ರಮವಾಗಿ ಚರ್ಚಿಸಲ್ಪಡಲೇ ಪಡುವುವು. ಉಳಿದುವುಗಳಲ್ಲಿ ಕೆಲವನ್ನು ಇಲ್ಲಿ ಹೇಳುವೆನು. ಪ್ರಸಿದ್ಧರಾದ ಗ್ರಂಥ ಲೇಖಕರುಗಳಿಗೆ 'ವಾಚಸ್ಪತಿ' ಮೊದಲಾದ ಬಿರುದುಗಳನ್ನು ಪರಿಷತ್ತಿನವರು ಕೊಡಬೇಕೆಂಬುದು ಒಂದು ಸೂಚನೆ ಇಂಥ ಬಹುಮಾನದ ಪದವಿಗಳನ್ನು ಕೊಡತಕ್ಕಷ್ಟು ಯೋಗ್ಯತೆಯು ನಮ್ಮ ಪರಿಷತ್ತಿಗೆ ಇದುವರೆಗೆ ಬಂದುದಿಲ್ಲವಾಗಿ ಈ ಸೂಚನೆಯನ್ನು ಈಗಲೇ ಅಂಗೀಕರಿಸಲು ಸಾಧ್ಯವಾಗಲಾರದು. ಔದ್ಯೋಗಿಕ ಮತ್ತು ಶಾಸ್ತ್ರೀಯ ವಿಷಯಗಳನ್ನು ಸಮ್ಮೇಳನದವರು ಚರ್ಚೆಗೆ ಇಡಬೇಕೆಂಬುದು ಎರಡನೆಯ ಸೂಚನೆ. ಮೊದಲನೆಯದಾಗಿ ಈ ವಿಷಯಗಳು ಸಾಹಿತ್ಯದಲ್ಲಿ ಸೇರುವುವೇ ಎಂಬುದೇ ಸಂದೇಹವಾಗಿದೆ ಇಷ್ಟೇ ಅಲ್ಲದೆ, ಇದು ತಜ್ಞರಿಗೆ ತಕ್ಕುದಾದ ಕೆಲಸವಾಗಿದ್ದು ಪರಿಷತ್ತಿನ ಸಾಮಾಜಿಕರು ಚರ್ಚಿಸಲು ಬರುವಂತಿಲ್ಲ. ಹಾಗೆಯೇ, ಹಿಂದೂ ಮತ ವಿಷಯಕವಾದ ಸರ್ವಮಾನ್ಯ ಗ್ರಂಥವನ್ನು ಪರಿಷತ್ತಿನವರು ಬರೆಯಿಸಬೇಕೆಂದು ಕೂಡ ಒಂದು ಸೂಚನೆ ಬಂದಿರುವುದು. ಆದರೆ ಸಾಹಿತ್ಯ ಭಕ್ತರಾದ ಸಮಸ್ತ ಮತೀಯರೂ ಈ ಪರಿಷತ್ತಿಗೆ ಸೇರಿರುವುದರಿಂದ ಈ ಸೂಚನೆಯು ನಮಗೆ ಮಾನ್ಯವಾಗುವಂತಿಲ್ಲ."

ತರುವಾಯ ಮಿರಜೆ ಸಂಸ್ಥಾನದ ಅಧಿಪತಿಗಳಾದ ಶ್ರೀಮಂತ ಸರ್ ಗಂಗಾಧರರಾವ್ ಉರ್ಫ್ ಬಾಳಾಸಾಹೇಬ ಪಟವರ್ಧನ ಕೆ. ಸಿ. ಐ. ಇ.ಯವರನ್ನು ಸಮ್ಮೇಳನದ ಅಧ್ಯಕ್ಷರಾಗುವಂತೆ ಪ್ರಾರ್ಥಿಸಿ ಮಾಡಿದ ಭಾಷಣದಲ್ಲಿ—ಮುದ್ರಣಕಲೆಯು ಈ ದೇಶದಲ್ಲಿ ಪ್ರಚಲಿತವಾಗುವುದಕ್ಕೆ ಮೊದಲು ಶ್ರೀಮಂತ ಬಾಳಾಸಾಹೇಬರವರ ಪೂರ್ವಜರೊಬ್ಬರು, ತಾಮ್ರದ ತಗಡುಗಳ ಮೂಲವಾಗಿ ಅನೇಕ ಪ್ರತಿಗಳನ್ನು ತೆಗೆಯಬರುವುದೆಂಬುದನ್ನು ಕೇಳಿ, ಭಗವದ್ಗೀತೆಯ ೧೦೦ ಪ್ರತಿಗಳನ್ನು ಆ ರೀತಿಯಾಗಿ ಮುದ್ರಿಸಿ ಬ್ರಾಹ್ಮಣರಿಗೆ ಹಂಚಿಸಿದ್ದರು—ಎಂಬ ಸಂಗತಿಯನ್ನು "ಡಾಕ್ಟರ್ ನಾನಾಸಾಹೇಬ ದೇಶಮುಖರು ಸಭಿಕರಿಗೆ ತಿಳಿಯಪಡಿಸಿದರು.

ಬಳಿಕ ಶ್ರೀಮಂತ ಪಟವರ್ಧನರು ಅಗ್ರಾಸನವನ್ನಲಂಕರಿಸಿ ಮಾತನಾಡುತ್ತ 'ಈ ಮೊದಲು ಡಾ॥ ದೇಶಮುಖರು ಉಲ್ಲೇಖಿಸಿದ ನನ್ನ ಪೂರ್ವಜರು ನನಗೆ ಆರು ತಲೆ ಹಿಂದಿನವರು. ಆ ತಾಮ್ರದ ತಗಡುಗಳು ಮುರುಕು ತಾಮ್ರವೆಂದು ಮಾರಲಾಗಿದ್ದು

ದ್ದರಲ್ಲಿ ಕೆಲಕೆಲವು ತುಂಡುಗಳು ನನಗೆ ಸಾತಾರೆಯಲ್ಲಿ ಸಿಕ್ಕಿದುವು" ಎಂಬುದಾಗಿ ಹೇಳಿ, ಪ್ರಾಚೀನ ಮರಾಟೀ ಕವಿಗಳ ಗ್ರಂಥಗಳೊಳಗಿಂದ ಭಕ್ತಿ, ಚಿತ್ತಶುದ್ಧಿ, ವೈರಾಗ್ಯ ಮುಂತಾದ ವಿಷಯಗಳನ್ನು ನಿರೂಪಿಸುವ ವಚನಗಳನ್ನು ಸಂಗ್ರಹಿಸಿ ಪುಸ್ತಕರೂಪವಾಗಿ ಅಚ್ಚುಹಾಕಿಸಬೇಕೆಂದು ಸೂಚಿಸಿದರು.

ತದನಂತರ ರಾಜಭಕ್ತಿ ಪ್ರದರ್ಶಕವೂ ಮಹಾಯುದ್ಧದಲ್ಲಿ ಬ್ರಿಟಿಷರಿಗೆ ಜಯವಾಗಲೆಂಬ ಆಶಯ ಸೂಚಕವೂ ಆದ ಮೊದಲನೆಯ ನಿರ್ಣಯವು ಸಭೆಯಲ್ಲಿ ಸರ್ವಾನುಮತದಿಂದ ಅಂಗೀಕರಿಸಲಾಯಿತು. ಈ ವಿಷಯವನ್ನು ಕುರಿತು ಸೌ॥ ಗಂಗೂಬಾಯಿ ಖೇಡಕರ್ ಎಂಬಾಕೆಯವರೂ ಪೋಷಿಸಿ ಮಾತನಾಡಿದ್ದರು. ಮುಂದೆ, ಕಾರ್ಯನಿಯಾಮಕ ಉಪಸಭೆಯನ್ನೇರ್ಪಡಿಸುವ ವಿಷಯವಾಗಿ ಎರಡನೆಯ ನಿರ್ಣಯವು ಅಂಗೀಕರಿಸಲ್ಪಟ್ಟು ಸಭೆಯ ಅಂದಿನ ಕೆಲಸವು ಮುಗಿಸಲಾಯಿತು.

ಪತ್ರವ್ಯವಹಾರ.

ಗ್ರಾಮ ಮುನ್ಸಿಫ್ ಕೋರ್ಟುಗಳ ವಕೀಲರ ಫೀಸು.

ಅಯ್ಯಾ ಪತ್ರಿಕಾಕರ್ತರೇ,

ಗ್ರಾಮಕೋರ್ಟು ಆಕ್ಟಿನ ೨೧ನೇ ಪ್ರಕರಣ ಪ್ರಕಾರ ಗ್ರಾಮ ಕೋರ್ಟು ಮುಂದೆ ನಡಿಯುವ ಯಾವದಾದರೊಂದು ಮೊಕದಮೆಯಲ್ಲಿ ಯಾವನಾದರೂ ಕಕ್ಷಿಗಾರನು ತನ್ನ ಕಡೆಯಿಂದ ಹಾಜರಾಗಿ ವ್ಯವಹರಿಸುವಗೋಸ್ಕರ ಯಾವ ಮನುಷ್ಯನನ್ನಾದರೂ ವಕಾಲತು ನಾಮೆಯ ಮೂಲಕ ನೇಮಿಸಬಹುದೆಂಬದಾಗಿ ನಿಯಮವಿರುವದಷ್ಟೆ. ಕಕ್ಷಿಗಾರರಿಗೆ ಗ್ರಾಮಕೋರ್ಟಿಗೆ ಹಾಜರು ಆಗಿ ಸ್ವತಹಾ ವ್ಯವಹರಿಸುವರೆ ತಮ್ಮ ತೊಂದರೆಗಳ ಸಂಬಂಧ ಆಗದಿರುವದರಿಂದ ವ್ಯವಹರಿಸುವರೆ ಒಬ್ಬನನ್ನು ವಕೀಲನಾಗಿ ನೇಮಿಸುವ ಅಗತ್ಯಬೀಳುತ್ತದೆ. ಕೂಲಿಕೆಲಸದವನಾದರೂ ತಾನು ಮಾಡಿದ ಕೆಲಸದ ಮಜೂರಿಗೆ ಕೈಚಾಚುವನು. ಗ್ರಾಮ ಕೋರ್ಟುಗಳಲ್ಲಿ ವ್ಯವಹರಿಸುವ ವಕೀಲರಿಗೆ ತಕ್ಕಷ್ಟು ಪ್ರತಿಫಲಕೊಡದೆ ವ್ಯವಹರಿಸುವದುಂಟೇ? ಡಿಸ್ಟ್ರಿಕ್ ಮುನ್ಸಿಫ್ ಕೋರ್ಟುಗಳಲ್ಲ್ಯಾದರೋ ವ್ಯವಹರಿಸುವ ವಕೀಲರಿಗೆ ತೆರತಕ್ಕ ರುಸುಮಿನ ದರದ ನಿಬಂಧನೆ ಇರುವದು, ವ ರುಸುಂ ವಸೂಲು ಆದ್ದಾಗಿ ಸರ್ಟಿಫಿಕೇಟು ಕೋರ್ಟಿಗೆ ದಾಕಲು ಮಾಡುವ ಕಾಯಿದೆಯು ಇರುವದಲ್ಲದೆ ರುಸುಮಿನ ಐವಜು ಡಿಕ್ರಿಯಲ್ಲಿ ಸೇರಿಸುವ ವಾಡಿಕೆಯುಂಟು. ಗ್ರಾಮಕೋರ್ಟಿನಲ್ಲಿ ವ್ಯವಹರಿಸುವ ವಕೀಲರಿಗೆ ತೆರಬೇಕಾದ ರುಸುಮಿನ ದರವೆಷ್ಟು? ಅದನ್ನು ಡಿಕ್ರಿಯಲ್ಲಿ ಸೇರಿಸುವ ಬಗೆ ಹೇಗೆ? ಸೇರಿಸದೆ ಬಿಡುವದರಿಂದ ಕಕ್ಷಿಗಾರರಿಗೆ ನಷ್ಟವಲ್ಲವೆ? ಈ ವಿನಹಾ ದೂರ ಗ್ರಾಮದ ಪ್ರತಿವಾದಿರಿಗೆ ಆಗಲಿ ಸಾಕ್ಷಿಗಾರರಿಗೆ ಆಗಲಿ ಪ್ರೊಸೆಸ್ಸ್ ಭತ್ತೆ ಹಾಜರು ಮಾಡಿದಾಗ್ಯೂ ಅದನ್ನು ಡಿಕ್ರಿಯಲ್ಲಿ ನಮೂದಿಸಿ ಬಿಟ್ಟುಬಿಡುವ ಪದ್ಧತಿಯು ರೂಢಿಯಾಗಿದೆ. ಹೀಗಾಗಿ ಗ್ರಾಮ ಕೋರ್ಟುಗಳಲ್ಲಿ ವ್ಯವಹರಣೆ ಖರ್ಚು ಕಡಿಮೆಯಾದರೂ ಮಾಡಿದ ಖರ್ಚು ವ್ಯರ್ಥವಾಗುವದೇ ಸರಿ. ಮೇಲಾಧಿಕಾರಿಗಳು ಈ ಕುರಿತು ತಕ್ಕ ನಿಗಾಕೊಡುವರೆಂದು ಕೋರುತ್ತೇವೆ.

ಟಪ್ಪಾಲ ಮೇಲಾಧಿಕಾರಿಗಳ ಸನ್ನಿಧಿಗೆ.

ಪತ್ರಕರ್ತರೇ,

ತಮ್ಮ ಅಮೌಲ್ಯ ಪತ್ರಿಕೆಯಲ್ಲಿ ಈ ಕೆಳಗಿನ ಬಡ ಮತ್ತು ನಮ್ರಭಾವದ ವಿನಂತಿಗೆ ಕೊಂಚ ಸ್ಥಳ ದಯಪಾಲಿಸುವರಾಗಿ ಬೇಡಿಕೊಂಡಿದ್ದೇನೆ

ಯಮಾರ್ಗಳಲ್ಲಿದ್ದ ಟಪ್ಪಾಲ ಬ್ರೆಂಚಾಫೀಸು ತೆಗೆದುಹಾಕಲ್ಪಟ್ಟಂದಿನಿಂದ ಈ ಸಂಬಂಧ ಒದಗುತ್ತಲಿರುವ ಮಹತ್ತರವಾದ ನಷ್ಟ ಮತ್ತು ಸಂಕಷ್ಟಗಳಿಗೆ ಗುರಿಯಾಗುತ್ತಲಿರುವ ಯಮಾರ್ಗಳ ನಿವಾಸಿಕರು ಮನವಿ ಮೂಲಕ, ವೃತ್ತ ಪತ್ರಿಕಾ ಮೂಲಕ ಗೋಳಿಡುತ್ತಾ ತಮ್ಮ ಗೋಳು ಅರಣ್ಯ ರೋಧನವಾದುದಕ್ಕಾಗಿ ಬಹಳ ವಿಷಾದಪಡುತ್ತಿದ್ದಾರೆ. ಅಲ್ಲದೆ ಇದೇ ಕಳೆದ ಎಪ್ರಿಲ್ ತಿಂಗಳಾದಿಯಿಂದ ನೂತನವಾಗಿ ಏರ್ಪಡಿಸಲ್ಪಟ್ಟಾದ ವ್ಯವಸ್ಥೆಯಿಂದ ಎಂಥಾ ತೊಂದರೆಗಳು ಒದಗಿರಬಹುದೆಂಬ ಸಂಗತಿಗೆ ಯಮಾರ್ಗಳಲ್ಲಿ ಇಟ್ಟಿರುವ ಟಪ್ಪಾಲ ಪೆಟ್ಟಿಗೆಯೇ ಸಾಕ್ಷಿಯಾಗಿರುತ್ತದೆ. ಸದರಿ ಪೆಟ್ಟಿಗೆಯಲ್ಲಿ ಎಪ್ರಿಲ್ ತಿಂಗಳ ಮಧ್ಯದಲ್ಲಿ ಯಮಾರ್ಗಳ ದೊಡ್ಡ ಪಟ್ಟಣ ಹತ್ತು ಸಮಸ್ತರು ಮುಂಬಯಿಯಲ್ಲಿರುವ ತಮ್ಮ ಹತ್ತು ಸಮಸ್ತರಿಗೂ, ದೊಡ್ಡ ಪಟ್ಟಣ ಮತ್ತು ಸಣ್ಣ ಪಟ್ಟಣ ಸೇರಿ ಎರಡು ಪಟ್ಟಣದ ಹತ್ತು ಸಮಸ್ತರಿಗೂ ಮತ್ತು ದೊಡ್ಡ ಪಟ್ಟಣ ಸಣ್ಣ ಪಟ್ಟಣ ಮತ್ತು ಉಚ್ಚಿಲ ಸೇರಿ ಮೂರು ಪಟ್ಟಣದ ಹತ್ತು ಸಮಸ್ತರಿಗೂ ವರುಷಾವಧಿ ನೇಮುಕದಂತೆ ದೈವದೇವರ ಶ್ರೀಮುಡಿ ಗಂಧ ಪ್ರಸಾದದೊಡನೆ ತಂತಮ್ಮ ಭಂಡಾರಾಭಿವೃದ್ಧಿಯ ವಿಷಯ ಬರಕೊಂಡ ಪತ್ರಗಳು ಹಾಕಲ್ಪಟ್ಟು ಈ ತನಕ ವಿಳಾಸದಾರರಿಗೆ ತಲ್ಪದೆ ಇರುತ್ತಾ ಬಹಳ ತರದ ತೊಂದರೆ ಮತ್ತು ನಷ್ಟಕ್ಕೆ ಗುರಿಯಾಗಿರುತ್ತಾರಲ್ಲದೆ ಸದರಿ ಪೆಟ್ಟಿಗೆಯಲ್ಲಿ ಇಡಲ್ಪಟ್ಟ ಖಾಸಗಿ ಪತ್ರಗಳನೇಕ ವಿಳಾಸದಾರರಿಗೆ ತಲ್ಪದೆ ಇರುವ ಅಡಚಣೆಯಿಂದ ಅಗತ್ಯ ಮತ್ತು ಜರೂರಿ ಕೆಲಸಗಳಿಗೆ ಬಹಳವಾಗಿ ತೊಂದರೆಯಾಗಿರುತ್ತದೆಂಬುದನ್ನು ಪ್ರತ್ಯೇಕ ಹೇಳಬೇಕೆಂತಿಲ್ಲ. ಈ ಮೊದಲಾದ ತೊಂದರೆಗಳಿಗೊಳಪಟ್ಟು ದಿಕ್ಕು ಕಾಣದಿರುವ ಯಮಾರ್ಗಳ ನಿವಾಸಿಕರಲ್ಲಿ ನಮ್ಮ ದಯಾಳು ಟಪ್ಪಾಲ ಉದ್ಯೋಗಸ್ಥರಿಗೆ ಕರುಣ ಬಾರದಿರುವುದು ಪರಮಾಶ್ಚರ್ಯ. ಇನ್ನಾದರೂ ಈ ಅಡಚಣೆಗಳಿಂದ ವಿಮುಕ್ತರಾಗುವಂತೆ ಪ್ರಜಾ ಜನಹಿತಕಾಂಕ್ಷಿಗಳಾದ ನಮ್ಮ ದಯಾಳು ಟಪ್ಪಾಲ ಮೇಲುದ್ಯೋಗಸ್ಥರು ತಕ್ಕ ವ್ಯವಸ್ಥೆಗೊಳಿಸುವರಾಗಿಯೂ ತೆಗೆದುಹಾಕಲ್ಪಟ್ಟಾದ ಬ್ರೆಂಚಾಫೀಸು ಪುನಃ ಸ್ಥಾಪಿಸುವಂತೆ ಹುಕುಂ ದಯಪಾಲಿಸುವರಾಗಿಯೂ ನಿಶ್ಚಲವಾದ ನಂಬಿಕೆಯಿಂದ ಪ್ರಾರ್ಥಿಸಿ ಬೇಡಿಕೊಂಡಿದ್ದೇವೆ. ಈ ಸಂಬಂಧ ಯಮಾರ್ಗಳ ಗ್ರಾಮ ಮುನ್ಸೀಫರಾದ ಮ. ರಾ. ರಾ. ಕುಮಾರಯ್ಯರವರೂ, ಅದಮಾರು ಶ್ರೀಪಾದಂಗಳವರೂ ತಕ್ಕ ಪ್ರಯತ್ನ ಮಾಡದೆ ಇರಲಾರರೆಂದು ದೃಢವಾಗಿ ನಂಬಿಕೊಂಡಿರುವ,

ತಮ್ಮ ಅತ್ಯಂತ ವಿಧೇಯ,

ಪಟ್ಟಣಿಗ.

ಶಾಲಾ ಸಮಾಪ್ತಿ ಪರೀಕ್ಷೆಯ ಪ್ರಾಪ್ತಿ.

(೨ನೆಯ ಲೇಖ.)

ಕಳೆದ ವಾರ ಈ ಪರೀಕ್ಷೆಯ ಸರಾಸರಿಯನ್ನು ಕುರಿತು ಬರೆದರು. ಈ ಬಾರಿ, ನಾನೂ ಒಂದು ಸರಾಸರಿ ಲೆಕ್ಕವನ್ನು ಹೇಳುವೆನು. ಈ ಪರೀಕ್ಷೆಗೆ ಹೋದವರಲ್ಲಿ ಸೇಕಡಾ ಹತ್ತರಂತೆ ಮಾರ್ಕುಗಳ ಮಟ್ಟಿಗೆ ತೇರ್ಗಡೆ ಹೊಂದಿರಬಹುದು. ಆದರೆ, ಇವರಲ್ಲಿ ಮೂರರಲ್ಲೊಂದು ಪಾಲು ಕೋಲೇಜನ್ನು ಸೇರುವರು. ಅಲ್ಲಿ ಎರಡು ವರ್ಷಗಳ ನಂತರ 'ಇಂಟರ್‌ಮಿಡಿಯೆಟ್'ದಲ್ಲಿ ಪರೀಕ್ಷೆಯ ಫಲವು, ಈಗ ತೋರುವಂತೆ, ಸೇಕಡಾ ಇಪ್ಪತ್ತೇಳರಂತೆ ಇರುವುದು; ಎಂದರೆ ಸಾವಿರ ಸ್ಕೂಲ್‌ಫೈನಲಿಗೆ ಹೋದವರಲ್ಲಿ ಒಂಭತ್ತು ಜನರು ಇಂಟರಮಿಡಿಯೆಟ್ ಪಾಸಾಗುವರು. ಇವರೂ ಬೀಏಗೆ ಹೋದರೆ, ಈ ವರ್ಷ ಸೇಕಡಾ ೩೦ರಂತೆ ಪಾಸಾಗಿರುವ ಕಾರಣ, ಹೆಚ್ಚಾದರೆ ಮೂರು ಜನರು ಈ 'ಡಿಗ್ರಿ'ಯನ್ನು ಪಡೆದು ಚತುರ್ಭುಜರಾಗಬಹುದು. ಆ ಸಾವಿರಕ್ಕೆ ಈ ಮೂರರಂತೆ, ಅಥವಾ, ಸ್ಕೂಲಫೈನಲಿಗೆ ಓದಿದ ಮುನ್ನೂರರಲ್ಲಿ ಒಬ್ಬನಂತೆ ಹೇಗೂ ಬೀ ಏ ಯಾಗಬಹುದು. ಅತ್ತ, ಸ್ಕೂಲುಫೈನಲಿನ ಪರೀಕ್ಷೆಯಾಗುವ ಮೊದಲು ಮೂರು ವರ್ಷ ವಿದ್ಯಾಭ್ಯಾಸವಾಗಬೇಕು; ಆ ಮೂರು ವರ್ಷಗಳ ಮೊದಲು ಒಟ್ಟಾಗಿ ಓದುತ್ತಲಿದ್ದ ಮೂರನೇ ಫೋರ್ಮಿನ ನೂರು ವಿದ್ಯಾರ್ಥಿಗಳಲ್ಲಿ ಸರಾಸರಿ ಮೂರನೆಯ ಒಂದಂಶದಂತೆ ಮಾತ್ರ ಸ್ಕೂಲಫೈನಲಿಗೆ ಹೋಗುವರು; ಎಂದರೆ, III ಫೋರ್ಮಿನಲ್ಲಿ ಓದುವ ಹೆಚ್ಚುಕಡಿಮೆ ಸಾವಿರ ವಿದ್ಯಾರ್ಥಿಗಳಲ್ಲಿ ಒಬ್ಬನು ಬೀ. ಏ. ಯಾಗುವನು. ಪುನಃ ಬಾಲಕದರ್ಜೆಯಲ್ಲಿ ಐವತ್ತು ಮಕ್ಕಳು ಓದುತಲಿದ್ದರೆ, ಇವರಲ್ಲಿ III ಫೋರ್ಮಿಗೆ ಮುಟ್ಟುವವರು ಹದಿನೈದು-ಹದಿನಾರು, ಎನ್ನಬಹುದು. ಹೀಗೆ, ಬಾಲಕದರ್ಜೆಯಲ್ಲೋದುವ ಮೂರು ಸಾವಿರ ವಿದ್ಯಾರ್ಥಿಗಳಲ್ಲಿ ಕಾಲಕ್ರಮೇಣ (ಹದಿನೈದು ವರ್ಷಗಳ ವ್ಯಾಸಂಗದನಂತರ) ಒಬ್ಬನು, ಮತ್ತೂ ಬದುಕಿದ್ದರೆ, ಬಿ. ಎ. ಆಗುವದೆಂದು ಆಯ್ತು!!! ಒಬ್ಬಂಟಿಗನಾದ ಈ ಬೀ ಏಯು, ಮಿಕ್ಕುಳಿದವರೆಲ್ಲರ ವಿದ್ಯಾಭಿಲಾಷೆಯ ಫಲಸೂಚಕನೋ? ಅಥವಾ, ಇವರೆಲ್ಲಮಪ್ಪು ಜನರ ತಲೆಹಾರುವ ಸಾಮರ್ಥ್ಯವುಳ್ಳವನು? ನಿಜವಾಗಿಯೂ ಹಿರಿಯರ ಹೇಳಿಕೆಯು ಯಥಾರ್ಥವಾಯ್ತು. ವಿದ್ಯಾ ಪ್ರಚ್ಛನ್ನ ಗುಪ್ತಂ ಧನಂ!

ಬರುತ್ತಾ ಬರುತ್ತಾ ರಾಯನ ಕುದುರೆಯು ಕತ್ತೆಯಾಯಿತೆಂದು ಗಾದೆಯಿದೆ ಅದರಂತೆ ಈ ವರ್ಷ ದೊರಕಿರುವುದಕ್ಕಿಂತಲೂ ಹೆಚ್ಚಿನ ಮಾರ್ಕುಗಳನ್ನು ಪಡೆಯಲಿಚ್ಛಿಸಿ, ವಿದ್ಯಾರ್ಥಿಯು ಚೆನ್ನಾಗಿ ಒಂದು ವರ್ಷ ಕಲಿತುಕೊಂಡು, ಪುನಃ ಪರೀಕ್ಷೆಗೆ ಹೋಗುವನು. ಈ ದ್ವಿತೀಯಾವರ್ತನೆಯಲ್ಲಿ, ಸರಾಸರಿಯಾಗಿ ನೋಡಿದರೆ, ಕಳೆದ ವರ್ಷ ೪೦ ಮಾರ್ಕು ಪಡೆದವರು ಈ ವರ್ಷ ೩೦ನ್ನು ಪಡೆದಿರುವರಂತೆ! ಚೆನ್ನಾಗಿ ಓದಿ ಕಣ್ಣಿಗೆ ಕಾವೇರಿತು; ಅದನ್ನು ಆಣಗಿಸುವಂತೆ, ಈ ಪುನಃ ಕಡಿಮೆ ಮಾರ್ಕುಗಳನ್ನು ವಿದ್ಯಾರ್ಥಿಯು ಪಡೆದು ಅತ್ತುಕೊಂಡು, ಕಣ್ಣೀರಿನಿಂದ ಆ ಕಾವನ್ನು ಶೀತಲಗೊಳಿಸಬೇಕಾಗಿದೆ. ಪರಂತು, ಸರ್ಟಿಫಿಕೇಟಿನ ಮಟ್ಟಿಗೆ ಮಾರ್ಕುಗಳು ದೊರೆವಂತೆ, ಅವನ

ಪುನಹ ಪರೀಕ್ಷೆಗೆ ಹೋದರೆ, ಈ ಸರಾಸರಿಯ ದೆಸೆಯಿಂದ, ಬರುವ ವರ್ಷ ೨೦, ಅನಂತರ ೧೦, ಕೊನೆಗೆ ೦ ಸೊನ್ನೆ ಪಡೆಯುವ ಅಪೂರ್ವ ಸಂಭವವಿದೆ. ಆದರೆ, ಮಾರ್ಕು ಶೂನ್ಯನಾದ ವಿದ್ಯಾರ್ಥಿಯನ್ನು ವಿದ್ಯಾಶೂನ್ಯನಾದ ಪಶುವೆಂದು ಹೇಳಲಾಗುವುದಿಲ್ಲ. ಅವನಲ್ಲಿ ಅನ ಭವವಿದೆ, ಮೊದಲು ಮೆಟ್ರಿಕ್ಯುಲೇಶನ್ ಪರೀಕ್ಷೆಗೆ, ಕನ್ನಡ ಪದ್ಯಪುಸ್ತಕದಲ್ಲಿ, ಮಹಾಭಾರತದೊಳಗಣ ಒಂದೊಂದು ಪರ್ವವು ಒಂದೊಂದು ವರ್ಷ ಇರುತ್ತಿದ್ದಿತು. ಹೀಗೆ ಹದಿನೆಂಟು ವರ್ಷ ಮೆಟ್ರಿಕ್ಯುಲೇಶನಿನಲ್ಲಿ ಫೈಲಾದ ಹುಡುಗನು, ಸಮಗ್ರ ಭಾರತೇತಿಹಾಸದ (ಹದಿನೆಂಟೂ ಪರ್ವಗಳ) ಅನುಭವವನ್ನು ಪಡೆದು, ಆಟದಲ್ಲಿ ಭಾಗವತನಾದರೂ ಆಗುವ ಸೌಭಾಗ್ಯವು ತಾನಾಗಿ ಉಂಟಾಗುತ್ತಿದ್ದಿತು. ಈಗ ನಿಮ್ಮ ಆರ್ಥ ಪಡನು ಹೊಸಹೊಸ ಇಂಗ್ಲಿಷು ಪುಸ್ತಕಗಳನ್ನು ಬೇರೆಬೇರೆಯಾಗಿ ಕಲಿತುಕೊಂಡರೆ, ಎಷ್ಟು ವರ್ಷ ಹೋದರೂ, ಅವುದೊಂದು ಪೂರಾ ಓದಿದ ಅಧಿಕಾರವಾಗಲಿ ಜ್ಞಾನವಾಗಲಿ ಉಂಟಾಗದು. ಈ ಇಂಗ್ಲಿಷು ಕಲಿತ ಹುಡುಗರು ಬರೆವ ಇಂಗ್ಲೀಷು ಅತೀ ಶ್ರುತಿದುಷ್ಟವು, ವ್ಯಾಕರಣ ವಿರುದ್ಧವೂ ಆದುದೆಂದು ಪರೀಕ್ಷಕರು ಅಭಿಪ್ರಾಯಪಟ್ಟಿರತ್ತ,—ಪ ತ್ತೂ ಪಠ್ಯಪುಸ್ತಕಗಳ ಸಂಖ್ಯೆಯನ್ನು ಹೆಚ್ಚಿಸಿ, ಬರುವ ಲಾಭವೇನು? I am sorry I have not passed this year too, (ಈ ವರ್ಷವೂ ನಾನು ಪಾಸಾಗಲಿಲ್ಲೆಂದು ದುಃಖಪಡುತ್ತೇನೆ) ಎಂದು ಇಂಗ್ಲಿಷಿನಲ್ಲಿ ಬರೆಯಬೇಕಾದರೆ ಹುಡುಗನು ಅಷ್ಟು ಗ್ರಂಥಗಳನ್ನು ಓದಬೇಕಾಗಿದೆಯೆ? ಅವನಾ ಸಾಲ ಮಾಗಿದ ಮೇಲೆ, ಹಳ್ಳಿಯಲ್ಲಿಯ ಕಪ್ಪೆ ಕೊಕ್ಕರೆಗಳೊಡನೆ, ನಾಲ್ಕೆಂಟು ಇಂಗ್ಲಿಷು ಉಚ್ಚಾರಗಳನ್ನು ಆಡಿಸಿಡಲೆಂದೇ ಇಷ್ಟನ್ನೂ ಕಲಿಯಬೇಕೇ?

ವಿದ್ಯಾರ್ಥಿಗಳ ಪಿತೃವರೇ, ಉಪಾಧ್ಯಾಯರು ನಿಮಗೆ ವಿಶೇಷವಾಗಿ ಕೃತಜ್ಞರು. ಅವರ ಜೀವನದಾರಿಹೊಡ, ಸ್ಕೂಲಫ್ಯಾನಲಿಗೆ ಓಡುವ ಹುಡುಗರ ವ್ಯಯಸಾಧಕವಾದ ನೀವು ವಿಶೇಷ ಆಧಾರಭೂತರು. ಆ ಪರೀಕ್ಷೆಯಲ್ಲಾಗಲಿ, ಅಲ್ಲಿಂದ ಬತ್ತಾಟವಿದ್ದು, ಆದರ ಕೆಳ ಕ್ಲಾಸುಗಳಲ್ಲೂ ಹಾಗೆಯೆ, ಪರಸ್ಪರ ಸಂಬಂಧದಿಂದ, ಫೈಲಾಗಿ ಬರುತ್ತಿರುವ ಹುಡುಗರು ನಿಮ್ಮೊಡನೆ ಮೊರೆಯಿಟ್ಟರೆ, ಉಪಾಧ್ಯಾಯರನ್ನು ದೂರದಿರಿ. ಕಾಲಸಿತಿಯ ಯಾರನ್ನೂ ಲೆಕ್ಕಿಸುವುದಿಲ್ಲ. ನೀವೂ ನಾವೂ ಮುಂದಣ ಜನಾಂಗದ ಏಳಿಗೆಗ ಉತ್ತರವಾದಿಯರು. ಆ ಉತ್ತರವಾದಿತ್ವವನ್ನು ಅರಿತುಕೊಂಡಿದ್ದರೆ, ಇಂತಹ ಕಠಿನ ದಂಡನೆಯ ವಿದ್ಯಾಭ್ಯಾಸದಿಂದ ಬಿಡುಗಡೆ ಹೊಂದುವಹಾಗೆ, ನಮ್ಮ ಜನಾಂಗಕ್ಕೆ ಈಗ ಉಂಟಾಗಿರುವ ಪರೀಕ್ಷೆಗಳ ಕಾಠಿನ್ಯದಿಂದ ಮುಕ್ತಿ ದೊರೆವಂತೆ, ದಯಾಳು ಸರಕಾರಕ್ಕೆ ಮೊರೆಯಿಡಿ.

K

ಸ್ವದೇಶಾಭಿಮಾನಿ ಪತ್ರ ಸಂಪಾದಕರಿಗೆ,

ಸ್ವಾಮಿಾ,

ತಮ್ಮ ಇದೇ ತಿಂಗಳು ೧೬ನೇ ತಾರೀಕಿನ ಸಂಚಿಕೆಯಲ್ಲಿ "ಕಂಡದ್ದನ್ನು ಕಂಡಹಾಗೆಯೇ ಹೇಳಿದರೇನು" ಎಂಬ ಪ್ರಶ್ನೆ ಕೇಳುತ್ತೀರಷ್ಟೆ? ನಾನು ಉತ್ತರ ಕೊಡುತ್ತೇನೆ. ತಾವು ಕಂಡದ್ದನ್ನು ಕಂಡಹಾಗೆ ಹೇಳಿದರೂ ಏನೂ ಪ್ರಯೋಜನವಿಲ್ಲ. ಜೂನು 15ನೆ ತಾರೀಕಿನ ಕೊಂಕಣಿ ದಿರ್ವೆಂ ಜುಲಾಯಿ ೧೬ನೆ ತಾರೀಕು ವರೆಗೆ ತಾವು ಹೊರತು ಬೇರೆ ಯಾರೂ ಹಿಂದುವಾಪಿಗಳು ನೋಡಲಿಲ್ಲವೆಂತ ತಾವು ತಿಳಕೊಳ್ಳುತ್ತೀರೇ?

ಸ್ವಾಮಿಾ, ಕ್ರೈಸ್ತರು ದೇವರಿಂದ ಆರಿಸಲ್ಪಟ್ಟ ಪುಣ್ಯವಂತ ಜನರು, ಸ್ವರ್ಗದ ಬೀಗದ ಕೈ ಅಂತೂ ಗುರು ಕ್ರಿಸ್ತನಾದ ಪೋಪ್ ಮಹಾಸ್ವಾಮಿಗಳ ಹತ್ತರವುಂಟು. ನಾವು ಹಿಂದುಗಳು ಪಾಪಿಷ್ಠರೂ ಅನಂತ ಕಾಲದವರೆಗೆ ನರಕದ ಗಂಧಕ ಸರೋವರದಲ್ಲಿ ಸುಡಲ್ಪಡುವಂಥವರು. ನಮ್ಮ ಮತ ಸುಳ್ಳು, ನಮ್ಮ ದೇವರು ಸುಳ್ಳು, ನಮ್ಮ ವೇದಗಳೂ, ಉಪನಿಷತ್ತುಗಳೂ, ಶಾಸ್ತ್ರಗಳೂ, ಪುರಾಣಗಳೂ ಸರ್ವವೂ ಸುಳ್ಳು, ನಮ್ಮ ಹಿರಿಯರಾದ ಋಷಿಗಳು ಮೂರ್ಖರು. ನಾವೂ ಮೂರ್ಖರು. ನಮ್ಮ ಇಂಡಿಯದಲ್ಲಿ ಇದುವರೆಗೆ ಒಬ್ಬ ಪುಣ್ಯಾತ್ಮನಾದರೂ ಹುಟ್ಟಿದ್ದಿಲ್ಲ. ಆದುದರಿಂದ ಶಾಲೆಗಳಿಗೂ, ಅಂಗಡಿಗಳಿಗೂ, ಕಾರಖಾನೆಗಳಿಗೂ, ವಿಲಾಯತಿ ಸಂತರ ಹೆಸರುಗಳನ್ನಿಡಬೇಕಾಯಿತು. ನಮ್ಮ ಸ್ವದೇಶ ಬಂಧುಗಳಾದ ಕ್ರೈಸ್ತರು ಕ್ರೈಸ್ತಮತ ಅವಲಂಬಿಸುವ ಮೊದಲು ಅವರ ಹಿರಿಯರು ನಮ್ಮ ಹಾಗೆಯೇ ಮೂರ್ಖಪಾಪಿಗಳಾಗಿದ್ದು ಅವರ ಆತ್ಮಗಳೆಲ್ಲ ಇದುವರೆಗೂ, ನರಕದಲ್ಲಿ ಕಠಿಣ ಯಾತನೆ ಅನುಭವಿಸುತ್ತಲೇ ಇದ್ದಾವೆ. ನಮ್ಮ ಗುರುಗಳಿಗೆ ನಮ್ಮ ಪಾಪಗಳನ್ನು ಕೇಳಿ ಕ್ಷಮೆ ಮಾಡುವ ಅಧಿಕಾರ ಭಗವಂತನು ಇದುವರೆಗೂ ಕೊಡಲಿಲ್ಲ. ಒಂದು ವೇಳೆ ನಾವು ಪುಣ್ಯಕಾರ್ಯಗಳೇ ಮಾಡಿ ನಮ್ಮ ಆತ್ಮಗಳು ಸ್ವರ್ಗಕ್ಕೆ ಹೋದರೂ, ನಮ್ಮ ಗುರುತ ದೇವರಿಗೆ ಹೇಳಲಿಕ್ಕೆ ಆತನ ಮಗನಾಗಲೀ ಮುತ್ತಾಲೀಕನಾಗಲೀ ನಮ್ಮ ಸಹಾಯಕ್ಕೆ ಬರುವುದಿಲ್ಲ. ದೇವಸ್ಥಾನಗಳೆಂತ ಮಾಡಿ ಕಪ್ಪು ಶಿಲೆಯ ಪ್ರತಿಮೆಗಳನ್ನು ಆರಾಧಿಸುತ್ತೇವೆ ಹೊರತು ಚಂದವಾದ ಬಿಳಿ ಮಾರ್ಬಲಿನ ಬೊಂಬೆಗಳನ್ನು ನಾವು ಇಡುವುದಿಲ್ಲ. ತೀರ್ಥವೆಂತ ನೀರು ಕುಡಿಯುತ್ತೇವೆ ಹೊರತು ವೈನು ಕುಡಿಯುವುದಿಲ್ಲ. ನಾವು ಇಂತಹ ಮೂರ್ಖಪಾಪಿಗಳೆಂಬದು ತಮಗೆ ಇದುವರೆಗೂ ತಿಳಿಯಲಿಲ್ಲವೇ?

ಆದುದರಿಂದ ನಮಗೂ ನಮ್ಮ ಮಕ್ಕಳಿಗೂ ಪುಣ್ಯವಂತರಾದ ಕ್ರೈಸ್ತರು ತುಚ್ಛೀಕರಿಸುವುದೂ ನಮ್ಮ ಹಿಂದೂ ಶಾಲೆಗಳಿಗೆ ಮಕ್ಕಳನ್ನು ಕಳುಹಿಸುವುದಕ್ಕೆ ಕ್ರೈಸ್ತರು ಬಯಪಡುವುದೂ ನ್ಯಾಯವೇ ಸರಿ. ತಾವು ಅಲ್ಲವೆಂತ ತಿಳಕೊಳ್ಳುತ್ತೀರಾದರೆ ನಾನು ಕೆಳಗೆ ಬರೆದ ಪ್ರಶ್ನೆಗಳಿಗೆ ಉತ್ತರಕೊಡಿರಿ.

ಪ್ರಾಥಮಿಕ ಶಾಲೆಗಳಲ್ಲಿ ಸ್ವಲ್ಪ ಮಟ್ಟಿಗಾದರೂ ವಿದ್ಯಾರ್ಥಿಗಳಿಂದ ಸಂಬಳವೂ ಸರಕಾರದವರಿಂದ ಗ್ರೇಂಟೂ ಸಿಕ್ಕುತ್ತದೆ. ಒಬ್ಬ ಉಪಾಧ್ಯಾಯನು ನಡಿಸುವ ಒಂದು ಪ್ರಾಥಮಿಕ ಶಾಲೆಗೆ ತಿಂಗಳಿಗ ರೂಪಾಯಿ ೪ ಯಾ ೫ ಹೆಚ್ಚಿಗೆ ಖರ್ಚು ತಗಲುವುದು. ಹೀಗಿರುತ್ತ, ಆಕ್ಕಿಮುಡಿಯಷ್ಟು ದೊಡ್ಡದಾಗಿ ಬೆಳದ ಹೊಟ್ಟೆಗಳಿರುವ ಹಿಂದು ವರ್ಗದಾರರು ಸ್ವತಂತ್ರದ ಶಾಲೆ ಇಡುವ ಬದಲಿಗೆ ಹಳ್ಳಿಗಳಲ್ಲಿ ತಮ್ಮ ಮಕ್ಕಳನ್ನು ಏಕೆ ಇಗರ್ಜಿ ಶಾಲೆಗಳಿಗೆ ಕಳುಹಿಸುತ್ತಾರೆ?

ಮಂಗಳೂರು ಶಹರಿನಲ್ಲಿ ಗವರ್ನಮೆಂಟು ಕೋಲೇಜು, ಕೆನರಾ ಹೈಸ್ಕೂಲು, ಗಣಪತಿ ಸೆಕೆಂಡರಿ ಸ್ಕೂಲು, ಮೊದಲಾದ ಸಂಸ್ಥೆಗಳಿರುತ್ತಾ ಕೆಲವು ಹಿಂದು ಹುಡುಗರು ನಿರ್ಲಜ್ಜರಾಗಿ ಏಕೆ ಕ್ರೈಸ್ತರ ಶಾಲೆಗಳಿಗೆ ಹೋಗುತ್ತಾರೆ?

ನಮ್ಮ ಕೋಟೆದಲ್ಲಿ ನಾವು ಹೇಗೂ ಕೈದೀಸಬಹುದೆಂಬ ಗಾದೆಯ ಮಾತುಂಟು. ಕ್ರೈಸ್ತರ ಶಾಲೆಗಳಲ್ಲಿ ಪಾದ್ರಿ ಸಾಹೇಬರು ಯುಕ್ತ ಕಂಡಂತೆ ವರ್ತಿಸಬಹುದು, ಆದರೆ ಬೋರ್ಡು ಶಾಲೆಗಳಲ್ಲಿ ಕಾತೆಕಿಸ್ಮ ಕಲಿಸುವ ಅನುಕೂಲತೆ ಬಗ್ಗೆ ಕ್ರೈಸ್ತ ಉಪಾಧ್ಯಾಯನನ್ನು ತಾಲೂಕು ಬೋರ್ಡಿನವರು ನೇಮಿಸುವದರ ಅರ್ಥವೇನು? ಬೋರ್ಡ ಶಾಲೆಗಳಲ್ಲಿ ಹಿಂದು ಉಪಾಧ್ಯಾಯರು ತಮ್ಮ ತಮ್ಮ ಮತಾನುಸಾರ ಏನಾದರೂ ಕಾರ್ಯ ಮಾಡಿದರೆ ಪಾದ್ರಿ ಸಾಹೇಬರಿಗೆ ಸಿಟ್ಟು ಬಂದು ಬೋರ್ಡು ಶಾಲೆಗೆ ಹೋಗಿ ಉಪಾಧ್ಯಾಯರನ್ನು ಗದರಿಸುವದರ ಅರ್ಥವೇನು? ಹಿಂದು ಉಪಾಧ್ಯಾಯರು ಪಾದ್ರಿ ಸಾಹೇಬರ ಗದ್ದಲಕ್ಕೆ ಬಗ್ಗಿ ತಾಳ್ಮೆ ಸಹಿಸಿಕೊಳ್ಳುವದರ ಅರ್ಥವೇನು? ತಿರುವೈಲು ಶಾಲೆಯಲ್ಲಿ ನಡೆದ ಸಂಗತಿ ತಮಗೆ ಮರೆತ ಹೋಯಿತೇ?

ಸ್ವಾಮಿಾ, ನಮಗೆ ಮತಾಭಿಮಾನವೂ ಇಲ್ಲ, ಕುಲಾಭಿಮಾನವೂ ಇಲ್ಲ. ಸ್ವಾಭಿಮಾನವೂ ಇಲ್ಲ. "ಊರು ಮೇಲೆ ನೂರು ಬಿದ್ದರೆ ಶ್ಯಾನುಭಾಗರಿಗೆ ಕೆಟ್ಟದ್ದೇನು?" ಎಂಬ ನಾಣ್ಣುಡಿ ಈಗಿನ ಕಾಲದಲ್ಲಿ ನಮ್ಮಲ್ಲಿ ಹಿರಿಯರಿಗೂ ಕಿರಿಯರಿಗೂ ವೇದವಾಕ್ಯವಾಗಿರುತ್ತದೆ. ನಮಗೆ ಮರ್ಯಾದೆ ಇಲ್ಲದ ಕಾರಣ ಕ್ರೈಸ್ತರನ್ನು ನಾವು ದೂರಿ ಪ್ರಯೋಜನವಿಲ್ಲ.

ತಮಗೆ ಇಷ್ಟವಿದ್ದರೆ ತಮ್ಮ ವಾಪದ ಸ್ವದೇಶಾಭಿಮಾನಿಯಲ್ಲಿ ನನ್ನ ಈ ಪಾಪದ ಪತ್ರಕ್ಕೆ ಸ್ವಲ್ಪ ಎಡೆಕೊಡಿರಿ.

ಇತಿ ನಮಸ್ಕಾರವು,

ಪಾಪಿ ದಾಸುಭಟ್ಟ.

ಮದ್ಯ ಮತ್ತು ಮಾಂಸ.

ಇವುಗಳ ನಿಷೇಧ ಮತ್ತು ಸ್ವೀಕಾರದ ಕುರಿತು ಚಲೋದಾದ ಒಂದು ಉಪನ್ಯಾಸವನ್ನು ಅರ್ಧತಾವು ಕಾಗದದಲ್ಲಿ ೩೫ ಪಂಕ್ತಿಗೆ ಮಿಕ್ಕದೆ ಸ್ಫುಟವಾದ ಅಕ್ಷರಗಳಿಂದ ತಾ ೩೦—೭—೧೫ರ ಒಳಗೆ ಒಂದು ಈ ಕೆಳಗಿನ ವಿಳಾಸದಾರರಿಗೆ ಕಳುಹಿಸುವ ಉಮೇದ್ವಾರರಲ್ಲಿ ಯಾರಿಂದ ಬರೆಯಲ್ಪಟ್ಟದ್ದು ಉತ್ತಮ ತರಗತಿಯಾಗಿ ಆರಿಸಲ್ಪಡುತ್ತದೋ ಅಂಥಾ ಮೆಂಬರರಿಗೆ ನಮ್ಮ "ಸಹಾನುಭೂತಿ ಸಂಘ"ದ ಪ್ರೆಸಿಡೆಂಟರಿಂದ "ಸ್ವಾಮಿ ವಿವೇಕಾನಂದ" ಎಂಬ ಪುಸ್ತಕವು ಕಳುಹಿಸಲ್ಪಡುತ್ತದೆ. ಸ್ತ್ರೀಲೇಖಕರಲ್ಲಿ ಯಾರಾದರೂ ಉತ್ತಮ ತರಗತಿಯಲ್ಲಿ ಬರದು ಇನಾಮಿಗೆ ಅರ್ಹರಾಗಿ ಕಂಡುಬಂದರೆ, ಪುಸ್ತಕದ ಜತೆಯಲ್ಲಿ ಅವರಿಗೆ ಒಂದು ರೂಪಾಯಿ ಹೆಚ್ಚಿಗೆ ಕಳುಹಿಸಲ್ಪಡಬೇಕಾಗುವದು. ಲೇಖಕರು ತಮ್ಮ ವಿಳಾಸವನ್ನು ಸರಿಯಾಗಿ ಬರದು ತಿಳಿಸಬೇಕು.

Address—

V. S Bangera.
SECRETARY.
Sahanubhoothi Sangham
Belma, Ullal, S. C.

ಯುದ್ಧ ಸಮಾಚಾರ.

ತಾರೀಖು ೧೩ನೇ ಜುಲೈ.

ರುಫಿಗಿ ಎಂಬ ನದಿಯೊಳಗೆ ನುಗ್ಗಿ ಅವಿತುಕೊಂಡಿದ್ದ ಜರ್ಮನರ "ಕೊನಿಗ್ಸ್‌ಬರ್ಗ್" ನಾವೆಯ ಮೇಲೆ ಬ್ರಿಟಿಷರ "ಸೆವರ್ನ್" ಮತ್ತು "ಮರ್ಸಿ" ಎಂಬ ನಾವೆಗಳು ಜುಲಾಯಿ ತಾ. ೪ರಲ್ಲು ಹಲ್ಲೆ ಮಾಡಿದವು. "ಕೊನಿಗ್ಸ್‌ಬರ್ಗ್" ನಾವೆಯು ಮರುಗುಂಡು ಹಾರಿಸಿತು. ಆದರೆ ಬ್ರಿಟಿಷರ ನಾವೆಗಳು ಅದನ್ನು ಮೌನಪಡಿಸಿದವು. ತಾ. ೧೧ರಲ್ಲು ಪುನಃ ಬ್ರಿಟಿಷರ ನಾವೆಗಳು ಹಲ್ಲೆಮಾಡಿ ಜರ್ಮನರ ಕೊನಿಗ್ಸ್‌ಬರ್ಗ್ ನಾವೆಯನ್ನು ಪೂರ್ಣ ನಾಶಪಡಿಸಿದವು. ಬ್ರಿಟಿಷರಲ್ಲಿ ೪ ಮಂದಿ ಹತರಾಗಿರುವರು. ೬ ಮಂದಿ ಗಾಯಪಟ್ಟಿರುವರು.

ಪಶ್ಚಿಮ ರಣರಂಗದಲ್ಲಿ ರಾತ್ರಿಕಾಲ ಕಠಿಣ ಯುದ್ಧ ನಡದಿರುವದು. ಜರ್ಮನರು ಅರ್‍ರಾಸಿನಲ್ಲಿ ನುಗ್ಗಿ ಬಂದು ವಿಷಕರವಾದ ಗ್ಯಾಸನ್ನು ಪ್ರಯೋಗಿಸಿ ಸೌಸೆಜಿನ ಮೇಲೆ ಮಧ್ಯರಾತ್ರಿ ಹಲ್ಲೆಮಾಡಿದರು. ಆದರೆ ಜಯಹೊಂದಲಿಲ್ಲ. ಅನಂತರ ಬೆಳಗ್ಗೆ ೨ ಗಂಟೆಗೆ ಪುನಃ ಜರ್ಮನರು ಮೇಲ್ಬಾಯಿದು ಸೌಸೆಜಿನ ಸಿಮೆಟ್ರಿಯನ್ನೂ ಕಂದಕಗಳ ಕೆಲವಂಶವನ್ನೂ ಹಿಡಕೊಂಡರು. ದಕ್ಷಿಣದಲ್ಲಿಯೂ ಕಠಿಣ ಕಾಳಗ ನಡದದೆ. ಆದರೆ ಫ್ರೆಂಚರು ತಮ್ಮ ನೆಲೆಯನ್ನು ಕಾಪಾಡಿಕೊಂಡಿರುವರು. ಶತ್ರುಗಳು ಕೆಲವು ಕಡೆಗಳಲ್ಲಿ ನುಗ್ಗಿ ಬಂದು ತಮ್ಮ ಎಲ್ಲಾ ಬಗೆಯ ತೋಪುಗಳಿಂದ ಗುಂಡುಹಾರಿಸಿದರೂ ಪ್ರಯೋಜನಹೊಂದದೆ ಹಿಮ್ಮೆಟ್ಟಿರುವರು. ಪೊವ್ರೆ ಎಂಬಲ್ಲಿ ನುಗ್ಗಿ ಬಂದ ಜರ್ಮನರು ವಿಶೇಷ ನಷ್ಟಹೊಂದಿ ಹಿಮ್ಮೆಟ್ಟಿರುತ್ತಾರೆ.

ಲಿಂಬರ್ಸ್ಪೈಡ್ ಮತ್ತು ನ್ಯೂವೋರ್ಟಿನಲ್ಲಿ ಜರ್ಮನರು ವಿಷಕರವಾದ ಗುಂಡುಗಳನ್ನು ಕ್ರಾಸ್ಸಿ ಮತ್ತು ಸೊಸೆಜಿನಲ್ಲಿರುವ ಫ್ರೆಂಚರ ಕಂದಕಗಳಿಗೆ ಹಾಕಿದರು. ಆದರೆ ಫ್ರೆಂಚರು ಜರ್ಮನ ಸೇನೆಯ ಮೇಲೆ ನುಗ್ಗಿಹೋಗಿ ಕಳಕೊಂಡ ಕಂದಕಗಳನ್ನು ಪುನಃ ಪಡೆದಿರುತ್ತಾರೆ.

ನೈರುತ್ಯ ಜರ್ಮನ್ ಆಫ್ರೀಕದಲ್ಲಿ ಜನರಲ್ ಬೋಥರವರ ಸೇನೆಗೆ ಆದ ಜಯ ಸಂಬಂಧ ಜೋರ್ಜ ಸಾರ್ವಭೌಮರವರು ಜನರಲ್ ಬೋಥರವರನ್ನು ಅಭಿನಂದಿಸಿರುವರು.

ಕಳದ ವಾರ ರುಶ್ಯನರ ಸೇನೆಯಿಂದ ಸೋಲಿಸಲ್ಪಟ್ಟ ಆಸ್ಟ್ರಿಯನರ ಸೇನೆಯಲ್ಲಿ ೨೬ ತಾಸಿನೊಳಗೆ ೧೩ ಸಾವಿರ ಸೇನಕರು ಮಡಿದರು ಎಂತ ಇನ್ಸ್‌ಬರ್ಗಿನ ಒಬ್ಬ ಬಾತ್ಮೀದಾರರು ಒಂದು ಪತ್ರಿಕೆಗೆ ಬರದಿರುವರು.

ಇಟಲಿಯನರ ಸೇನೆಗೆ ಟ್ರಿಸ್ಟಿಗೆ ಹೋಗಲು ಒಂದೇ ದಿವಸದ ಹಾದಿ ಇರುವದಾದರೂ ಇಟಲಿ ಜನರಲ್ ಕೆಡೋರ್ನರವರು ಟ್ರಿಸ್ಟಿ ಪಟ್ಟಣದ ಹಿಂದೆ ಇರುವ ಪರ್ವತಗಳನ್ನೆಲ್ಲಾ ವಶಮಾಡಿಕೊಳ್ಳುವ ವರೆಗೆ ಟ್ರಿಸ್ಟಿಗೆ ಮುಂದರಿಯುವದಾಗಿಲ್ಲವೆಂತ ತಿಳಿದು ಬಂದದೆ.

ತಾರೀಖು ೧೪ನೇ ಜುಲೈ.

ಲಿಬ್ರಿಂತಿನಲ್ಲಿ ಜರ್ಮನರು ಬಹಳ ಸಾಹಸದಿಂದ ಮಿತ್ರ ಸೇನಾನೆಲೆಗಳ ಕಡೆಗೆ ನುಗ್ಗಿಬಂದರು. ಆದರೆ ಮಿತ್ರಸೇನಿಕರು ಶತ್ರುಸೇನೆಯನ್ನು ಚದರಿಸಿ ಪೂರ್ಣವಾಗಿ ಹಿಂದಕ್ಕಟ್ಟಿದರು. ಪೊಸೆಜಿಸಿನಲ್ಲಿ ಜರ್ಮನರು ಸೋಲಿಸಲ್ಪಟ್ಟಿರುತ್ತಾರೆ.

ಲಬ್ಲಿನಿನ ದಕ್ಷಿಣದಲ್ಲಿ ರುಶ್ಯನರು ನುಗ್ಗಿಹೋಗಿ ಜಯಪ್ರದರಾಗಿರುವರು.

ತಾರೀಖು ೧೫ನೇ ಜುಲೈ.

ಶತ್ರುಗಳು ಬೆಲ್ಜಿಯಮ್ ಮತ್ತು ಫ್ರಾನ್ಸಿನಲ್ಲಿರುವ ಬ್ರಿಟಿಷ ಮತ್ತು ಫ್ರೆಂಚ ಸೇನಾನೆಲೆಗಳ ಮೇಲೆ ವಿಷಕರವಾದ ಗುಂಡುಗಳನ್ನು ಹಾರಿಸಿರುವರು. ಯುವರಾಜರ ಬಲವಾದ ಸೇನೆಯು ಅಗೋರ್ನ್ನೆಯಲ್ಲಿ ನುಗ್ಗಿಬಂದು ಸೋತುಹೋಗಿರುವದು. ಪುನಃ ಬಲವಾಗಿ ಶತ್ರುಸೇನೆಯು ಮೇಲ್ಬಾಯಿದುದರಿಂದ ಕೆಲವು ಕಡೆಗಳಲ್ಲಿ ಮಿತ್ರರು ಶತ್ರುಗಳಿಗೆ ತುಸ ಬಿಟ್ಟುಕೊಟ್ಟರು. ನಂತರ ಶತ್ರುಗಳನ್ನು ಮುಂದರಿಯುವ ಹಾಗೆ ತಡೆದು ಹಿಂದಕ್ಕೆ ಅಟ್ಟಿರುವರು.

ಜರ್ಮನರು ಫ್ರೆಂಚ ಮತ್ತು ಬ್ರಿಟಿಷ ನೆಲೆಗಳ ಮೇಲೆ ಗುಂಡು ಹಾರಿಸಿದ ನಂತರ ಬ್ರಿಟಿಷರು ಹಿಡಿದಿದ್ದ ಪಿಲ್ಕೆಮ್ ಎಂಬಲ್ಲಿಯ ಕಂದಕಗಳ ಮೇಲೆ ಹಲ್ಲೆಮಾಡಿದರು. ಆದರೆ ಬ್ರಿಟಿಷ ಸೇನಿಕರು ಅವರನ್ನು ಸುಲಭವಾಗಿ ಹಿಂದಕ್ಕಟ್ಟಿದರು. ಜರ್ಮನರು ಅರ್‍ರಾಸ್ ಮತ್ತು ಸೆಸ್ಸೋಸ್ಸಿನ ಮೇಲೆ ಪ್ರಚಂಡವಾದ ಬೊಂಬುಗಳನ್ನು ಹಾಕಿರುವರು. ಅರ್ಗೋನ್ನೆಯಲ್ಲಿ ನುಗ್ಗಿಬಂದ ಶತ್ರುಗಳ ಬಲವು ಪೂರ್ಣವಾಗಿ ಕುಂದಿಸಲ್ಪಟ್ಟಿರುವದು.

ಬರ್ಲಿನಿನ ಬೇಂಕಿನ ಮೆನೇಜರರು ಕೈಸರರಿಗೆ ಭೇಟಿಕೊಟ್ಟು ಇನ್ನೊಂದು ಛಳಿಕಾಲದ ವರೆಗೆ ಯುದ್ಧವು ಮುಂದರಿಯುವದಾದರೆ ಜರ್ಮನ್ ಸಾಮ್ರಾಜ್ಯವು ಪೂರ್ಣವಾಗಿ ದಿವಾಳಿಯಾಗುವದೆಂತ ತಿಳಿಸಿರುವರು ಎಂಬದಾಗಿ ತಿಳಿದು ಬರುತ್ತದೆ.

ಈಜಿಪ್ತಿನ ಸುಲ್ತಾನನಿಗೆ ಬೊಂಬುಹಾಕಿ ಕೊಲ್ಲಲೆತ್ನಿಸಿದವರಲ್ಲಿ ಅನುಮಾನದ ಮೇಲೆ ೪ ಯುವಕರು ಕೈದುಮಾಡಲ್ಪಟ್ಟಿರುವರು.

ತಾರೀಖು ೧೬ನೇ ಜುಲೈ.

ಶತ್ರುಗಳು ಡನ್‌ಕರ್ಕಿನ ಪೂರ್ವದಲ್ಲಿರುವ ಫುರ್ನೆಸ್ ಎಂಬ ಸ್ಥಳದ ಮೇಲೆ ಗುಂಡುಹಾರಿಸಿರುತ್ತಾರೆ. ಅರ್‍ರಾಸಿನ ಉತ್ತರದಲ್ಲಿ ಜರ್ಮನರು ಎರಡಾವರ್ತಿ ತಮ್ಮ ಕಂದಕಗಳನ್ನು ಬಿಟ್ಟು ಹೊರಬರಲು ಯತ್ನಿಸಿ ಸಫಲಹೊಂದಲಿಲ್ಲ. ಈ ಪ್ರಾಂತ್ಯದಲ್ಲೆಲ್ಲಾ ತೋಪಿನ ಕದನವು ನಡೆಯುತ್ತಿದೆ. ಅರ್‍ರಾಸಿನ ಕೆಥೆಡ್ರಲ್ ಇರುವ ಸ್ಥಳದಲ್ಲಿ ಹೆಚ್ಚಿನ ಹಾನಿಯಾಗಿರುವದು. ಅರ್ಗೋನ್ನೆ ಅಡವಿಯ ಪಶ್ಚಿಮದಲ್ಲಿ ಜರ್ಮನರ ಕೆಲವು ಕಂದಕಗಳ ಸಾಲನ್ನು ಫ್ರೆಂಚರು ಹಿಡದಿರುತ್ತಾರೆ. ಡೋವಾಯಿ ಮತ್ತು ಲಿಲ್ಲೆಯ ಮಧ್ಯೆ ಇರುವ ವಿಲಿಟರಿ ರೈಲ್ವೆ ಸಂದುಕಟ್ಟಿನ ಮೇಲೆ ಮಿತ್ರರ ವಾಯುನಾವಿಕರು ಬೊಂಬುಗಳನ್ನು ಹಾಕಿರುವರು.

ರಾತ್ರಿಕಾಲದಲ್ಲಿ ಫ್ರೆಂಚರು ಅರ್‍ರಾಸಿನ ಉತ್ತರದಲ್ಲಿ ಜರ್ಮನರ ಕಂದಕಗಳ ಒಂದು ಸಾಲನ್ನು ಸ್ವಾಧೀನಮಾಡಿಕೊಂಡಿರುತ್ತಾರೆ.

ಹಿಂದೂಸ್ಥಾನದ ಸ್ಟೇಟ್ ಸೆಕ್ರಟರಿಯವರಾದ ಮಿ| ಚೆಂಬರ್ಲೇನರವರೂ ಅವರ ಪತ್ನಿಯವರೂ ಬ್ರೈಟನಿನಲ್ಲಿರುವ ಗಾಯಒಡೆದ ಭಾರತೀಯರ ಆಸ್ಪತ್ರೆಯನ್ನು ಸಂದರ್ಶಿಸಿರುವರು. ಮಿ| ಚೆಂಬರ್ಲೇನರವರು ಆಸ್ಪತ್ರೆಯ ಪ್ರತಿ ಒಂದು ಏರ್ಪಾಡಿನ ಕುರಿತು ಸೂಕ್ಷ್ಮ ವಿಚಾರವನ್ನು ಮಾಡಿ, ಆಹಾರ ಸಂಬಂಧವಾಗಿ ಭಾರತೀಯ ಸೇನಿಕರಿಗೆ ಈ ಆಸ್ಪತ್ರೆಯಲ್ಲಿರುವ ಏರ್ಪಾಡನ್ನು ನೋಡಿ ಸಂತೋಷಪಟ್ಟರು. ಆಸ್ಪತ್ರೆಯಲ್ಲಿ ಗುಣಹೊಂದಿ, ಯುದ್ಧಮಾಡಲು ಅಸಮರ್ಥರಾಗಿರುವ ಸೇನಿಕರು ಬೇಗನೆ ಹಿಂದೂಸ್ಥಾನಕ್ಕೆ ಕಳುಹಿಸಲ್ಪಡುವರೆಂದೂ ಹಿಂದೂಸ್ಥಾನದಲ್ಲಿ ಅವರನ್ನು ಅವರವರ ಮನೆಗೆ ಕಳುಹಿಸುವ ಮತ್ತು ಕೆಲವರಿಗೆ ಕೃತಕ ಕೈಕಾಲುಗಳನ್ನು ಒದಗಿಸಿಕೊಡುವ ಏರ್ಪಾಡು ಮಾಡಿಯದೆಂದೂ ಮಿ| ಚೆಂಬರ್ಲೇನರವರು ಹೇಳಿದ್ದುದರಿಂದ ಸೇನಿಕರು ಅತಿ ಸಂತೋಷಪಟ್ಟರು. ಮಿ| ಚೆಂಬರ್ಲೇನರು ಎರಡನೇ ದಿನ ಆಸ್ಪತ್ರೆಯನ್ನು ಸಂದರ್ಶಿಸಿದಾಗ ಎಲ್ಲಾ ಆಸ್ಪತ್ರೆಯ ಭಾರತೀಯ ಆಫೀಸರರು ಹಾಜರಿದ್ದು ಮಿ| ಚೆಂಬರ್ಲೇನರೊಡನೆ ವಿಕ್ಟೋರಿಯ ಕ್ರೊಸ್ ಬಹುಮಾನವನ್ನು ಹೊಂದಿ ಇನ್ನೂ ಜರ್ಮನರ ವಿಷಗ್ಯಾಸಿನಿಂದ ರೋಗಸ್ಥನಾಗಿರುವ ಸುಭೇದಾರ ಮಿರ್‌ದಾಸ್ತನಿಗೆ ಹಸ್ತಲಾಘವ ಮಾಡಿ ಭಾರತೀಯ ಸೇನಿಕರೂ ಆಫೀಸರರೂ ಧನ್ಯವಾದವನ್ನಿತ್ತರು.

ಜರ್ಮನರು ವಾರ್ಸೋಗೆ ಉತ್ತರದಲ್ಲಿರುವ ಪ್ರಾಂತ್ಯದಲ್ಲಿ ಮುಂದರಿದು, ನೆರ್ಯೂ ಸರಹದ್ದಿನಮೇಲೆ ನುಗ್ಗಿಹೋಗಿ ಪಿಸ್ಸಾ ನದಿಯ ಬಲದಡದಲ್ಲಿರುವ ರುಶ್ಯನರ ಕಂದಕಗಳನ್ನು ಹಿಡಿದಿರುತ್ತಾರೆ. ಆದರೆ ರುಶ್ಯನರು ಶತ್ರುಗಳನ್ನು ಅಲ್ಲಿಂದ ಹಿಂದಕ್ಕೆ ಓಡಿಸಿದರು. ಶತ್ರುಗಳ ಪ್ರಚಂಡ ಸೇನೆಯು ಒರಿಜಿಡ್ಸ್ ಮತ್ತು ಲೈಡೀನಿಯ ನದಿಗಳ ಮಧ್ಯೆ ಮುಂದರಿದಿರುವದು. ರುಶ್ಯನರು ಕದನಕ್ಕೆ ನಿಲ್ಲದೆ ಎರಡನೇ ನೆಲೆಗೆ ಹಿಂದೆ ಸರಿದಿರುತ್ತಾರೆ.

ಲಬ್ಲಿನಿನ ದಕ್ಷಿಣದಲ್ಲಿ ನಡೆದ ಕಾಳಗದಲ್ಲಿ ರುಶ್ಯನರು ಜುಲೈ ತಾ. ೪ರಿಂದ ೧೧ರ ವರೆಗೆ ೨೨,೬೬೧ ಶತ್ರುಸೇನಿಕರನ್ನು ಸೆರೆಹಿಡಿದಿರುವರು. ಖೋಮ್ ಪ್ರಾಂತ್ಯದಲ್ಲಿಯೂ ಕದನವು ನಡೆಯುತ್ತಿದೆ.

ತಾರೀಖು ೧೭ನೇ ಜುಲೈ.

ಜುಲೈ ತಾ. ೧೨ರಲ್ಲು ದರ್ಡನೆಲ್ಸಿನಲ್ಲಿ ದಿನವೆಲ್ಲಾ ಕಠಿಣ ಕಾಳಗ ನಡೆದು ಶತ್ರುಗಳು ಬಲವಾಗಿ ಭಲಕಾಯಿಸಿಕೊಂಡ ಎರಡು ಸ್ಥಳಗಳು ಮಿತ್ರರಿಗೆ ಸ್ವಾಧೀನವಾಗಿರುವವು. ಎಡಪಾರ್ಶ್ವದಲ್ಲಿದ್ದ ಬ್ರಿಟಿಷ ಸೇನಿಕರು ಅದೇ ದಿನ ಶತ್ರುಗಳ ಎರಡು ಸಾಲುಗಳನ್ನು ಹಿಡಿದು ೪೦೦ ಗಜ ಮುಂದರಿದಿರುವರು. ರಾತ್ರಿಕಾಲ ನುಗ್ಗಿಬಂದ ಶತ್ರುಗಳು ಹಿಮ್ಮೆಟ್ಟಿರುವರು. ತನ್ಮಧ್ಯೆ ಫ್ರೆಂಚರು ಕರ್‌ವೆಸ್‌ಡರ್ ನದಿಯ ಕಡೆಗೆ ನುಗ್ಗಿಹೋಗಿ ಮೇಲ್ಬಾಯಿದ ಶತ್ರುಗಳನ್ನು ಪ್ರತಿಸಾರಿ ಎಂಬಂತೆ ಹಿಂದಕ್ಕಟ್ಟಿದರು. ೪೨೨ ಶತ್ರುಸೇನಿಕರು ಸೆರೆಬಿದ್ದಿರುವರು.

ಜರ್ಮನರ ಜಲಾಂತರ್ಗಾಮಿ ನಾವೆಯು ನೋರ್ವೇಯವರ "ರೆಮ್" ಎಂಬ ನಾವೆಯನ್ನು ಮುಳುಗಿಸಿರುತ್ತದೆ.

ಕಳದ ರಾತ್ರಿ ಶತ್ರುಗಳು ಐನೆ ನದಿಯ ಬಲಕಡೆಯಲ್ಲಿ ಸ್ವೊಸನ್ನಿನ ಪಶ್ಚಿಮದಲ್ಲಿರುವ ಒಂದು ಸ್ಥಳದ ಮೇಲೆ ೪೦೦೦ ಗುಂಡುಗಳನ್ನು ಹಾರಿಸಿ, ಮಿತ್ರರು ಬಲಕಾಯಿಸಿಕೊಂಡ ಸ್ಥಳಕ್ಕೆ ಹಾನಿಮಾಡಲು ನೋಡಿದರು. ಆದರೆ ಸೋತುಹೋದರು.

ಆಫ್ರೀಕದ ಕೆಮರೂನಿನಲ್ಲಿ ಮಿತ್ರಸೇನಿಕರು ನಗೆಂಡ್ರೆ ಎಂಬ ಸ್ಥಳವನ್ನು ಸ್ವಾಧೀನಮಾಡಿಕೊಂಡಿರುತ್ತಾರೆ.

ಶತ್ರುಗಳು ಪೂರ್ವರಣರಂಗದಲ್ಲಿ ರಿಗ ಮತ್ತು ಶಾವಲಿ ಪ್ರಾಂತ್ಯದಲ್ಲಿ ನುಗ್ಗಿ ಹೋಗಲು ಪ್ರಾರಂಭಿಸಿರುತ್ತಾರೆ. ಒರ್ಜೆಜ್ ಮತ್ತು ವಿಕ್ರ ಎಂಬ ನದಿಗಳ ಮಧ್ಯೆ ರುಶ್ಯನರು ಶತ್ರುಗಳನ್ನು ಓಡಿಸಿರುತ್ತಾರೆ. ಆಸ್ಟ್ರಿಯನರ ಸೇನಿಕರು ಕೆಲವು ಕಡೆಗಳಲ್ಲಿ ನೀಸ್ಟರ್ ನದಿಯನ್ನು ದಾಟಿರುತ್ತಾರೆ.

ತಾರೀಖು ೧೮ನೇ ಜುಲೈ.

ಮ್ಯೂಸಿನ ಶಿಖರಗಳಲ್ಲಿ ಮೇಲ್ಬಾಯಿದ ಜರ್ಮನರ ದೊಡ್ಡ ಸೇನೆಯು ಹಿಮ್ಮೆಟ್ಟಿರುವದು. ಶತ್ರುಗಳಿಗೆ ವಿಶೇಷ ನಷ್ಟವಾಗಿದೆ. ಶತ್ರುಗಳಿಗೆ ಮಿತ್ರರ ಕಂದಕದ ಒಂದಂಶವು ಒಂದು ಕಡೆಯಲ್ಲಿ ದೊರಕಿರುವದು. ಮರುದಿನ ಫ್ರೆಂಚರು ಪುನಃ ಕಾಳಗಮಾಡಿ ಕಳಕೊಂಡ ಸ್ಥಳಗಳನ್ನು ಹಿಂದಕ್ಕೆ ಪಡೆದು ಶತ್ರುಸೇನಿಕರಲ್ಲಿ ೨೦೦ ಮಂದಿಯನ್ನು ಸೆರೆಹಿಡಿದಿರುತ್ತಾರೆ.

ಪೂರ್ವ ರಣರಂಗದಲ್ಲಿ ಶತ್ರುಗಳು ವಿಂಡೋ ಮತ್ತು ವೆಂಟ ನದಿಗಳ ಬಲದಡಗಳನ್ನು ಆಕ್ರಮಿಸಿಕೊಂಡಿದ್ದಾರೆ. ರುಶ್ಯನರು ಒರ್ಜಿಟ್ಸ್ ಮತ್ತು ಪಿಸ್ಸಾ ನದಿಗಳ ಮಧ್ಯೆಯಿಂದ ಹಿಂದೆ ಸರಿದಿರುವರು. ಒರ್ಜಿಟ್ಸ್ ನದಿಯ ಪೂರ್ವದಲ್ಲಿ ನುಗ್ಗಿಬಂದ ಜರ್ಮನರನ್ನು ರುಶ್ಯನರು ಹಿಂದಕ್ಕಟ್ಟಿರುವರು.

ವೈಪ್ರಿಜ್ ಮತ್ತು ಬಗ್ ನದಿಗಳ ಮಧ್ಯೆಯೂ ಕದನಗಳು ನಡೆಯುತ್ತಿವೆ. ಇಲ್ಲಿ ಗ್ನೋಡಿಕಿನ ಸಮೀಪ ನೀಸ್ಟರ್ ನದಿಯನ್ನು ದಾಟುತ್ತಲಿದ್ದ ಶತ್ರುಗಳನ್ನು ರುಶ್ಯನರು ಹಿಂದಕ್ಕಟ್ಟಿರುತ್ತಾರೆ.

ಒರ್ಜಿಟ್ಸ್ ನದಿಯನ್ನು ದಾಟಿದ ಶತ್ರುಗಳ ಮೂರು ಸೇನಾಂಗಗಳ ಮೇಲೆ ರುಶ್ಯನರ ಬಿವ್ರು ಸನ್ಮುಖಕಾಳಗಮಾಡಿ ಅವರನ್ನು ನಿರ್ನಾಮ ಮಾಡಿದರೆಂಬ ವಾರ್ತೆ ಬಂದಿರುತ್ತದೆ.

ಆಸ್ಟ್ರಿಯನರು ೧೨೦೦ ಅಡಿಗಿಂತಲೂ ಎತ್ತರವಾಗಿರುವ ವೆನಸ್ಮೊಲೋ ಮತ್ತು ಬ್ರಿಜಿಯೋ ಕಣಿವೆಗಳನ್ನು ದಾಟಿ ಇಟಲಿಯನರ ನೆಲೆಯ ಮೇಲೆ ನುಗ್ಗಿಬರಲು ಯತ್ನಿಸಿದರು. ಆದರೆ ಹಿಮ್ಮೆಟ್ಟಿದರು. ಅನಂತರ ಇಟಲಿಯನರು ಆ ಎರಡು ಕಣಿವೆಗಳನ್ನೂ ಸ್ವಾಧೀನಮಾಡಿಕೊಂಡರು. ಆಸ್ಟ್ರಿಯನರು ಕಾರ್ನಿಯ ಸರಹದ್ದಿನಲ್ಲಿಯೂ ಕತ್ತಲೆಯ ಕಾಲ ಎರಡಾವರ್ತಿ ಹಲ್ಲೆಮಾಡಿದರು. ಆದರೆ ಎರಡಾವರ್ತಿಯೂ ವಿಶೇಷ ನಷ್ಟಹೊಂದಿ ಸೋತುಹೋದರು.

ಆಸ್ಟ್ರಿಯನರ ವಾಯುನಾವಿಕರು ಬಾರಿ ಎಂಬಲ್ಲಿಗೆ ಬೊಂಬುಗಳನ್ನು ಹಾಕಿರುವದರಿಂದ ೬ ಮಂದಿ ಹತರಾಗಿರುತ್ತಾರೆ. ಬಾರಿಯಿಂದ ಹಿಂದೆಹೋಗುತ್ತಿದ್ದ ಆಸ್ಟ್ರಿಯನರ ಒಂದು ವಿಮಾನವನ್ನು ಇಟಲಿಯನರ ವಿಮಾನನಾವಿಯು ಕೆಳಗೆ ದೊಬ್ಬಿ ಇಬ್ಬರು ವಿಮಾನಗಾಮಿಗಳನ್ನು ಹಿಡಿದಿರುತ್ತಾನೆ.

ಕಾಡೋರು ರಣರಂಗದಲ್ಲಿ ಇಟಲಿಯನರು ಎತ್ತರವಾದ, ಕಷ್ಟಕರವಾದ ಪ್ರಾಂತ್ಯಗಳನ್ನು ಹಿಡಿದಿರುತ್ತಾರೆ.

ದರ್ಡನೆಲ್ಸಿನಲ್ಲಿ ಮಿತ್ರರು ತುರ್ಕರ ಸೇನೆಯ ೨ನೇ ಸಾಲನ್ನು ಹಿಡಿದಿರುತ್ತಾರೆ.

ಟರ್ಕಿಯವರು ಮಿತ್ರರೊಡನೆ ಪ್ರತ್ಯೇಕ ಸಂಧಾನಮಾಡಿಕೊಳ್ಳಲಿಕ್ಕಿದ್ದಾರೆಂತಲೂ ಈ ಸಂಬಂಧ ಸ್ವಿಜರ್‌ಲೇಂಡಿಗೆ ತಮ್ಮ ಪ್ರತಿನಿಧಿಗಳನ್ನು ಕಳುಹಿಸಿದ್ದಾರೆಂದೂ ವಾರ್ತೆ ಇದೆ.

ಉತ್ತರ ಹಿಂದೂಸ್ಥಾನ.

ಹಿಂದೂಸ್ಥಾನದಿಂದ ಪ್ಲೇಗುಬೇನೆಯ ಸೋಂಕು ಪೂರಾ ಹೋಗಿಬಿಡುವ ಸಂಭವವು ತೋರುತ್ತಿದೆ. ಇದೇ ಜುಲೈ ತಾ. ೧೦ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ಪ್ಲೇಗುಬೇನೆಯಿಂದ ೩೮೫ ಮಂದಿ ಮಾತ್ರ ಸತ್ತಿರುವರು. ಈ ಪೈಕಿ ಮುಂಬಾಯಿ ಸಂಸ್ಥಾನದಲ್ಲಿ ೧೬೬೧; ಪಂಜಾಬಿನಲ್ಲಿ ೧೫೨; ಬರ್ಮದಲ್ಲಿ ೪೬; ಮೈಸೂರಿನಲ್ಲಿ ೧೪; ಹಿಂದೂಸ್ಥಾನದ ಇತರ ಎಲ್ಲಾ ಪ್ರಾಂತ್ಯಗಳಲ್ಲಿ ಒಟ್ಟಿಗೆ ೯ ಮಂದಿಗೆ ಪ್ಲೇಗುಬೇನೆಯು ಸೋಂಕಿ ೮ ಮಂದಿ ಮಾತ್ರ ಸತ್ತಿರುವರು ಎಂತ ಪ್ರಕಟವಾಗಿದೆ.

ಕಳ್ಳ ನಾಣ್ಯಗಳನ್ನು ಮಾಡಿದ್ದರಾಗಿ ಆಪಾದಿಸಲ್ಪಟ್ಟ ಅಲ್ಲಹಾಬಾದಿನ ಕಣ್ಣಯ್ಯ ಮತ್ತು ಇನ್ನೊಬ್ಬನಿಗೆ ಫೆರೂಕಬಾದಿನ ಸೆಶ್ಶನ್ಸ್ ಜಡ್ಜರವರು ವಿಧಿಸಿದ ಟಾಪು ಶಿಕ್ಷೆಯನ್ನು ಅಲ್ಲಹಾಬಾದ್ ಹೈಕೋರ್ಟಿನವರು ಖಾಯಂ ಮಾಡಿ ಇಂಥಾ ತಕ್ಷೀರು ಕಠಿಣವಾದದ್ದು ಮಾತ್ರವಲ್ಲ ಕ್ರೂರವಾದದ್ದಾಗಿದೆ, ಯಾಕಂದರೆ ಇಂಥಾ ಕಳ್ಳ ನಾಣ್ಯಗಳಿಂದ ಜನರಿಗೆ ನಷ್ಟವಾಗುತ್ತದೆ ಮತ್ತು ಅಂಥಾ ನಾಣ್ಯಗಳನ್ನು ಪಡಕೊಂಡವರು ನಾನಾ ತೊಂದರೆಗಳಿಗೆ ಬೀಳಬೇಕಾಗುತ್ತದೆಂಬದಾಗಿ ಅಭಿಪ್ರಾಯಪಟ್ಟಿರುತ್ತಾರೆ

~~~~

ಬಂಗಾಳದ ಖಾಮಿಪುರ ಎಂಬ ಗ್ರಾಮದಲ್ಲಿರುವ ವಸಂತ ಕುಮಾರ ಚಟರ್ಜಿಯವರ ಮನೆಗೆ ತಾ ೧೪ರಲ್ಲು ಸುಮಾರು ೧೦ ಮಂದಿ ದರೋಡೆಕಾರರು ನುಗ್ಗಿ ಆ ಮನೆಯಲ್ಲಿದ್ದ ಪೆಟ್ಟಿಗೆ ಒಡೆದು ಸುಮಾರು ೧೦೦೦ ರೂಪಾಯಿ ಕ್ರಯ ಬಾಳುವ ಚಿನ್ನಾಭರಣಗಳನ್ನು ಸುಲಕೊಂಡು ಹೋಗಿರುವರು

~~~~

ಕಲ್ಕತ್ತಾ ಯುನಿವರ್ಸಿಟಿಯ ಕಳೆದ ಪರೀಕ್ಷೆಯಲ್ಲಿ ಸೋಫಿಯಾಕಾಜಿ ಎಂಬ ಮಹಮ್ಮದಿ ಹುಡುಗಿ ಬಿ ಎ ಪರೀಕ್ಷೆಯಲ್ಲಿ ತೇರ್ಗಡೆಪಟ್ಟಳು ಮಹಮ್ಮದಿ ಮತದ ಗೋಷಾ ಸ್ತ್ರೀಯರಲ್ಲಿ ಇದುವರೆಗೆ ಬಿ ಎ ವರೆಗೆ ವಿದ್ಯೆ ಹೊಂದಿದವರು ಯಾರೂ ಇರಲಿಲ್ಲ ಇದೇ ಪ್ರಥಮ ದೃಷ್ಟಾಂತವು

~~~~

ಬಂಗಾಳದ ಡಕ್ಕಾ ಪಟ್ಟಣದಲ್ಲಿ ಒಬ್ಬ ಬ್ರಾಹ್ಮಣನು ಸಾಲವಾಗಿ ನೆಂಟಸ್ತಿಕೆ ಸಿಕ್ಕದ್ದರಿಂದ ತನ್ನ ಮೂರು ಹೆಣ್ಣು ಮಕ್ಕಳನ್ನು ಒಬ್ಬನೇ ಅಳಿಯನಿಗೆ ವಿವಾಹ ಮಾಡಿ ಕೊಟ್ಟಿದ್ದನು. ಕೆಲವು ದಿವಸಗಳ ಹಿಂದೆ ಆ ಅಳಿಯನು ಮೃತನಾದನು ಮೂವರು ಮಗಳಂದಿರು ಏಕಕಾಲದಲ್ಲಿ ವಿಧವೆಯರಾದರು

~~~~

ಬೈಬಲ್ ವೇದವು ೪೫೬ ಭಾಷೆಗಳಲ್ಲಿ ತರ್ಜುಮೆ ಮಾಡಲ್ಪಟ್ಟಿತು ೧೯೧೪ನೆ ಇಸವಿಯಲ್ಲಿ ೬ ಹೆಚ್ಚಿಗೆ ಭಾಷೆಗಳಲ್ಲಿ ತರ್ಜುಮೆ ಮಾಡಲ್ಪಟ್ಟಿದೆ ದಕ್ಷಿಣ ಬರ್ಮದ ಒಂದು ಭಾಷೆ, ನಿಕೋಬಾರ ದ್ವೀಪಗಳ ಜನರ ಒಂದು ಭಾಷೆ, ತೀಬೇತು ದೇಶದ ಮಂಚಾದವೆಂಬ ಒಂದು ಭಾಷೆ, ಜರ್ಮನ್ ಆಫ್ರಿಕದ ಕಾಡು ಜನರ ವೆಂಡೂ ಎಂಬ ಒಂದು ಭಾಷೆ, ದಕ್ಷಿಣ ನಿಗೇರಿಯದ ಇಡ್ಸೊ ಎಂಬ ಒಂದು ಭಾಷೆ, ಚೀನಿ ದೇಶದ ದಕ್ಷಿಣ ಮತ್ತು ಪಶ್ಚಿಮ ಪ್ರಾಂತ್ಯದ ಮೂಲ ನಿವಾಸಿಕರ ಕೋಪು ಎಂಬ ಒಂದು ಭಾಷೆ ಹೀಗೆ ೬ ಭಾಷೆಗಳಲ್ಲಿ ತರ್ಜುಮೆ ಆಗಿದೆ ಹಿಂದು ಮತಾಭಿಮಾನಿಗಳು ತಮ್ಮ ಧರ್ಮಪ್ರಚಾರಗೋಸ್ಕರ ಎಷ್ಟರ ಮಟ್ಟಿಗೆ ಸಾಹಸಪಡುತ್ತಾರೆಂಬದು ಆಲೋಚಿಸ ತಕ್ಕ ವಿಷಯವು

~~~~

ಆಸ್ಸಾಮಿನಲ್ಲಿ ದೇಶಭಾಷೆ ಶಾಲೆಗಳಲ್ಲಿ ವಿದ್ಯಾರ್ಥಿಗಳಿಂದ ಸಂಬಳ ಪಡಕೊಳ್ಳದೇನೇ ವಿದ್ಯೆ ಕೊಡಬೇಕಾಗಿ ಸರಕಾರದವರು ಆಜ್ಞೆ ಕೊಟ್ಟರು. ಅಂದಿನಿಂದ ಪ್ರಾಥಮಿಕ ಶಾಲೆಗಳ ಮತ್ತು ಮಧ್ಯ ದರ್ಜೆ ಶಾಲೆಗಳ ಸಂಖ್ಯೆ ಆ ದೇಶದಲ್ಲಿ ಏರುತ್ತಾ ಬರುತ್ತದೆ

~~~~

ಇದೇ ತಾ. ೫ರಲ್ಲು ಬಾರಿಸಾಲಿಗೆ ಸೇರಿದ ಒಂದು ಗ್ರಾಮದಲ್ಲಿ ಒಂದು ದೊಡ್ಡ ಕಳವು ನಡೆದು ಸುಮಾರು ೩೦೦೦ ರೂಪಾಯಿ ಕ್ರಯ ಬಾಳುವ ಚಿನ್ನಾಭರಣಗಳು ಕಳವಾದವು. ಈ ಕಳವಿನ ಸಂಬಂಧ ಪೋಲಿಸಿನವರು ಅನುಮಾನದ ಮೇಲೆ ಒಬ್ಬ ಯುವಕ ಮಹಮ್ಮದೀಯನನ್ನು ಕೈದು ಮಾಡಿ ಸ್ಟೇಶನಿನಲ್ಲಿಟ್ಟಿದ್ದರು. ಅವನು ತನ್ನ ಕೈಯಲ್ಲಿದ್ದ ಒಂದ ಕೈವಸ್ತ್ರವನ್ನು ಕುತ್ತಿಗೆಗೆ ಬಿಗಿದು ಸ್ವಘಾತ ಮಾಡಿಕೊಂಡಿರುವನು

~~~~

ಮುಂಬಾಯಿಯ ಮೆಸರ್ಸ್ ಡಬ್ಲ್ಯು ಎಂಡ್ ಎ ಗ್ರೆಹಮ್ ಕಂಪೆನಿಯ ಮೆನೇಜರರಾಗಿದ್ದ ಬಹುಮಾನಪಟ್ಟ ಕೆಪ್ಟನ್ ಗ್ರೇಹಮರವರು ತಾ ೧೫ರಲ್ಲು ಮುಂಬಾಯಿಗೆ ಬಂದ "ಮದ್ರಾಸ್" ಆಸ್ಪತ್ರಿ ಹಡಗದಿಂದ ಗಾಯಪಟ್ಟ ಸೇನಿಕರನ್ನು ಬಂದರಕ್ಕೆ ಇಳಿಸುವ ಕೆಲಸದಲ್ಲಿರುವಾಗ ಫಕ್ಕನೇ ಕಾಲು ಜಾರಿ ಕಲ್ಲಿದ್ದಲು ಹಾಕಿಡುವ ಒಬ್ಬೆಯ ಅಂಕಣಕ್ಕೆ ಬಿದ್ದು ಕಠಿಣ ಜಖಂ ಹೊಂದಿ ಮೃತರಾದರೆಂಬ ದುಃಖಕರವಾದ ವಾರ್ತೆಯು ಬಂದಿರುವದು

~~~~

ಖಾನ್‌ಪುರದ ಮುಸ್ಸಮತ್ ಮಾಧಾನ್ ಎಂಬ ಹೆಂಗಸು ತನ್ನ ಭಾವಮೈದುನನನ್ನೂ ಇನ್ನೊಬ್ಬನನ್ನೂ ಕೊಂದಳೆಂಬದಾಗಿ ಆಪಾದಿಸಲ್ಪಟ್ಟಿದ್ದಳು ಖಾನ್‌ಪುರದ ಸೆಶ್ಶನ್ಸ್ ಜಡ್ಜರು ಆ ಹೆಂಗಸಿಗೆ ಫಾಶೀ ಶಿಕ್ಷೆಯನ್ನು ವಿಧಿಸಿದರು ಆಪಾದಿತಳು ಅಲ್ಲಹಾಬಾದ್ ಹೈಕೋರ್ಟಿಗೆ ಮಾಡಿಕೊಂಡ ಅಪೀಲಿನಲ್ಲಿಯೂ ಫಾಶೀ ಶಿಕ್ಷೆಯೇ ಕಾಯಂ ಆಯಿತು

~~~~

ಡಕ್ಕಾ ಜಿಲ್ಲೆಯಿಂದ ಒಬ್ಬ ಗುಮಾಸ್ತನು ಅಕ್ಕಿಯನ್ನು ತರುವ ಬಗ್ಗೆ ಬಕರಗಂಜ್ ಡಿಸ್ಟ್ರಿಕ್ಟಿಗೆ ಹೋಗಿದ್ದನು ಅಕ್ಕಿಯನ್ನು ಕೊಂಡುಕೊಂಡು ದೋಣಿಯಲ್ಲಿ ಹಿಂದೆ ಬರುವಾಗ ದೋಣಿ ನಡಿಸುತ್ತಿದ್ದ ೫ ಮಂದಿ ಅಂಬಿಗರು ಅವನನ್ನು ಕೊಂದು ನದಿಗೆ ಹಾಕಿ ದೋಣಿಯನ್ನು ರಾಜಪುರಗಾಟ್ ಎಂಬಲ್ಲಿಗೆ ಕೊಂಡು ಹೋಗಿ ಅಲ್ಲಿ ಅಕ್ಕಿ ಮಾರುತ್ತಿರುವಾಗ ಅನುಮಾನದ ಮೇಲೆ ಪೋಲಿಸಿನವರು ಅವರಲ್ಲಿ ಒಬ್ಬನನ್ನು ಹಿಡಿದಿರುವರು. ೪ ಮಂದಿ ತಪ್ಪಿಸಿಕೊಂಡಿರುವರು.

~~~~

ಖಾನ್‌ಪುರದ ಬಾನ್ಸಿ ಎಂಬವನು ಮೂರು ಮಕ್ಕಳ ಆಭರಣಗಳನ್ನು ತೆಗೆದು ಮೂವರನ್ನೂ ಬಾವಿಗೆ ಹಾಕಿದ್ದರಿಂದ ಒಂದು ಮಗು ಸತ್ತು ಹೋಯಿತು ಉಳಿದ ಇಬ್ಬರು ಮಕ್ಕಳನ್ನು ನೆರೆಹೊರೆಯವರು ಮೇಲಕ್ಕೆ ತೆಗೆದು ಬದುಕಿಸಿದರು ಈ ಮೊಕದ್ದಮೆಯ ತನಿಕೆಯಾಗಿ ಸೆಶ್ಶನ್ಸ್ ಜಡ್ಜರು ಆಪಾದಿತನಿಗೆ ಫಾಶಿ ಶಿಕ್ಷೆಯನ್ನು ವಿಧಿಸಿದರು ಆಪಾದಿತನು ಹೈಕೋರ್ಟಿಗೆ ಮಾಡಿಕೊಂಡ ಅಪೀಲಿನಲ್ಲಿಯೂ ಮೊದಲನೇ ಶಿಕ್ಷೆಯೇ ಕಾಯಂ ಆಯಿತು

~~~~

ಅಸ್ಸಾಮಿನ ಕಚ್ಛಾರಿನಲ್ಲಿ ಕೆಲವು ದಿವಸಗಳಿಂದ ಎಡೆಬಿಡದೆ ಮಳೆ ಗರೆದು ನೆರೆ ಬಂದು ಪ್ರದೇಶವೆಲ್ಲಾ ನೆರೆಯಿಂದ ತುಂಬಿರುವದು ರಸ್ತೆಗಳೂ, ಓಣಿಗಳೂ, ತಗ್ಗು ಪ್ರದೇಶದ ಮನೆ, ಪೇಟೆಗಳೂ ನೆರೆಯ ಪಾಲಾಗಿರುವವು. ಸುಮಾರು ೫-೬ ಮನೆಗಳ ವಿನಹಾ ಉಳಿದ ಮನೆಗಳೆಲ್ಲಾ ನೀರಿನ ಅಡಿಯಲ್ಲಿವೆ. ಸಿವಿಲ್ ಸರ್ಜನರ ಮನೆಯಲ್ಲಿ ೨ ಅಡಿ ನೀರು ತುಂಬಿ ಮನೆಯು ಬಿದ್ದು ಹೋಗಿಯದೆ. ದನಕರುಗಳು, ಕೋರ್ಟು ಕಮಿಷನರರ ಆಫೀಸು, ಸರ್ಕೀಟ್ ಹೌಸ್ ಶಾಲೆ ಇತ್ಯಾದಿ ಕಟ್ಟೋಣಗಳಲ್ಲಿ ಮರೆ ಹೊಕ್ಕೊಂಡವೆ. ಟೆಲಿಗ್ರಾಫ್, ರೈಲ್ವೆ, ಟಪಾಲು, ಸ್ಟೀಮರ್ ವ್ಯವಹಾರಗಳು ನಿಂತು ಹೋದುದರಿಂದ ಪಟ್ಟಣದ ಸ್ಥಿತಿಯು ಭಯಂಕರವಾಗಿದೆ. ನಿರ್ಗತಿಕರಾದವರಿಗೆ ಅಕ್ಕಿ ಹಂಚುವ ಏರ್ಪಾಡು ಮಾಡಿ ೧೦೦೦ ಮಣ ಅಕ್ಕಿ ಹಂಚಲಾಗಿರುವದು. ಕೆಲವರು ನೆರೆಯಲ್ಲಿ ಮುಣುಗಿ ಸತ್ತಿರುವರು ನೆರೆಯಿಂದ ಉಂಟಾದ ಕಷ್ಟವು ದಿನೇ ದಿನೇ ಹೆಚ್ಚುತ್ತಲೇ ಇದೆ

~~~~

ಸರ್ ತಾರಕನಾಥ ಪಾಲಿತರವರು ಕಲ್ಕತ್ತೆಯ ಯುನಿವರ್ಸಿಟಿಗೆ ಮಾಡಿದ ದಾನವನ್ನು ರದ್ದು ಮಾಡಬೇಕಾಗಿ ಅವರ ಮಗ ಬ್ಯಾರಿಸ್ಟರ್ ಜಿತೇಂದ್ರನಾಥಪಾಲಿತರವರು ತಂದ ದಾವೆಯನ್ನು ಕಲ್ಕತ್ತಾ ಹೈಕೋರ್ಟಿನ ಜಸ್ಟಿಸ್ ಇಮಾಮರವರೂ, ಜಸ್ಟಿಸ್ ಮೆ. ಗ್ರೇವೆಸರವರೂ ತನಿಕೆ ನಡಿಸಿ ಸರ್ ತಾರಕನಾಥರವರ ದಾನವು ನ್ಯಾಯವಾದುದೆಂಬ ತೀರ್ಮಾನ ಕೊಟ್ಟು ದಾವೆಯನ್ನು ತಳ್ಳಿ ಹಾಕಿದರು

~~~~

ಸರ್ ಮುರ್ರೆ ಹೆಮಿಕ್ ಕೆ. ಸಿ. ಎಸ್. ಐರವರು ಇಂಡಿಯಾ ಕೌನ್ಸಿಲಿನ ಮೆಂಬರರಾಗಿ ನೇಮಿಸಲ್ಪಟ್ಟಿರುತ್ತಾರೆ

~~~~

ದಕ್ಷಿಣ ಹಿಂದೂಸ್ಥಾನ

ಕೊಯಂಬುತ್ತೂರು ಗವರ್ನಮೆಂಟ್ ಕೊಲೇಜಿನ ವರ್ಷೋತ್ಸವಕ್ಕೆ ಕೊಡೋಣಾದ ಆಮಂತ್ರಣದ ಲೇಖನಗಳಲ್ಲಿ ವಿಲಾಯತಿ ಅತಿಥಿಗಳನ್ನು ಪ್ರೆಸಿಡೆಂಟರೂ ದೇಶಿಯ ಅತಿಥಿಗಳನ್ನು ವ್ಯಾಯ ಪ್ರೆಸಿಡೆಂಟರೂ ಅಭಿನಂದಿಸುವರಾಗಿ ಬರೆದ ಕಾರಣ ಇಂತಹ ಭೇದ ಮಾಡಿದ್ದು ದೇಶಿಯ ಅತಿಥಿಗಳ ಮಾನಕ್ಕೆ ಕೊರತೆಯಾಗುತ್ತದೆಂತ ಕೆಲವು ಪತ್ರಸಂಪಾದಕರು ತಿಳಕೊಳ್ಳುತ್ತಾರೆ.

~~~~

ಬಹುಮಾನಪಟ್ಟ ಸರ್ ಶಂಕರನ್ ನಾಯರರು ಮೈಸೂರು ಮಹಾರಾಣಿಯವರ ಹೆಸರಿನ ವಾಣಿವಿಲಾಸ ಪಂಚಮ ಶಾಲೆಯನ್ನು ಸಂದರ್ಶಿಸಿದಾಗ ಅತಿಥಿಯ ಬಹುಮಾನ ಪತ್ರವು ಓದೋಣಾಯಿತು. ಸರ್ ಶಂಕರನ್ ನಾಯರರು ಬಹುಮಾನ ಪತ್ರಕ್ಕೆ ಉತ್ತರ ಕೊಡುವಾಗ ಅಂತ್ಯಜರ ಉದ್ಧರಣೆ ವಿನಹ ಜನಾಂಗಕ್ಕೆ ಏಳಿಗೆ ಇಲ್ಲವೆಂತಲೂ ದಕ್ಷಿಣ ಹಿಂದುಸ್ಥಾನದ ಪಂಚಮರ ಸ್ಥಿತಿ ಅತೀ ಕಷ್ಟಕರವಾದದ್ದೆಂತಲೂ ಇಂಥವರ ಉದ್ಧರಣೆಗೋಸ್ಕರ ಮಾಡುವ ಸಾಧನೆ ಬಹಳ ಶ್ಲಾಘನೀಯವೆಂತಲೂ ಹೇಳಿದರು.

~~~~

ಕಳೆದ ವರುಷ ತ್ರಾವಣಕೂರ ಸಂಸ್ಥಾನದವರು ಸರಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವಾಗ ಜಾತಿಭೇದ ಮನ್ನಿಸದೆ ಹೊಲೆಯರ ಮಕ್ಕಳನ್ನು ಸಹ ಸೇರಿಸಿಕೊಳ್ಳಬೇಕೆಂತ ಸರಕಾರಿ ಆಜ್ಞೆಯಾಗಿತ್ತು. ಈ ಆಜ್ಞೆ ರದ್ದುಮಾಡಬೇಕೆಂತ ಮೇಲು ಜಾತಿಗಳು ಮಹಾರಾಜರವರಿಗೂ, ದಿವಾನರವರಿಗೂ ಮನವಿ ಮಾಡಿಕೊಂಡರೂ, ಕೆಲವು ಹಳ್ಳಿಗಳಲ್ಲಿ ಜನರು ತುಮುಲೋತ್ಪತ್ತಿ ಮಾಡಿದರೂ, ಪ್ರಕಟಿಸಿದ ಆಜ್ಞೆ ರದ್ದು ಮಾಡೋಣವಾಗಲಿಲ್ಲ. ಅದರ ಬದಲಿಗೆ ಇನ್ನೂ ಹೆಚ್ಚಾಗಿ ಪಂಚಮರ ಮಕ್ಕಳ ವಿದ್ಯಾಪ್ರದಾನದ ಬಗ್ಗೆ ಏರ್ಪಾಡು ಮಾಡೋಣವಾಗುತ್ತದೆ ಇತ್ತಲಾಗೆ ಮೈಸೂರು ತ್ರಾವಣಕೂರು ಮೊದಲಾದ ದೇಶಿಯ ಸಂಸ್ಥಾನಗಳಲ್ಲಿ ಬ್ರಿಟಿಷ ಸಂಸ್ಥಾನಕ್ಕಿಂತಲೂ ಅಂತ್ಯಜರ ಅಭಿವೃದ್ಧಿ ಅಧಿಕವಾಗಿ ಆಗುತ್ತದೆಂತ ಲೋಕಾಭಿಪ್ರಾಯವುಂಟು.

~~~~
~~~~

ಪಾಲಘಾಟಿನಲ್ಲಿ ಪಂಚಮರ ಉದ್ಧರಣೆ ಸಂಘದವರು ಸ್ಥಾಪಿಸಿದ್ದ ಪ್ರಾಥಮಿಕ ಪಂಚಮ ಶಾಲೆಯಲ್ಲಿ ವಿದ್ಯಾಭ್ಯಾಸ ಮುಗಿಸಿದ ಇಬ್ಬರು ಹೊಲೆಯರ ಹುಡುಗರನ್ನು ಪಾಲಘಾಟ ಶಹರಿನ ವಿಕ್ಟೋರಿಯಾ ಕೋಲೇಜಿನಲ್ಲಿ ಮುಂದಿನ ವಿದ್ಯಾಭ್ಯಾಸದ ಬಗ್ಗೆ ಸೇರಿಸಿಕೊಂಡಿದ್ದಾರೆ.

ಇಂಡೋರಿನ ಮಹಾರಾಣಿಯವರು ಬೆಂಗಳೂರಿಗ ಚಿತ್ತೈಸಿ ಅಲ್ಲಿಯ ವಿಕ್ಟೋರಿಯ ಆಸ್ಪತ್ರಿಯನ್ನು ಸಂದರ್ಶಿಸಿ ಆಸ್ಪತ್ರಿಗೆ ೧೦,೦೦೦ ರೂಪಾಯಿ ದಾನ ಮಾಡಿರುತ್ತಾರೆ.

ಬೆಂಗಳೂರಿನಲ್ಲಿ ಕಳ್ಳ ನಾಣ್ಯಗಳನ್ನು ಮಾಡಿದ್ದನಾಗಿ ಸಿಕ್ಕಿ ಬಿದ್ದ \ ಶೇಕ್ ಮಹಮ್ಮದ್ ಎಂಬವನನ್ನು ಸಿಟಿ ಮೇಜಿಸ್ಟ್ರೇಟರು ಸೆಶ್ಶನ್ಸಿಗೆ ಕಮಿಟ್ ಮಾಡಿರುತ್ತಾರೆ

ಕಲಿಕೋಟೆಗೆ ಸೇರಿದ ಕುಣ್ಣಮಂಗಲಮ್ ಸ್ಟೇಶನಿನ ಪೋಲೀಸಿನವರು ಕಳ್ಳ ನಾಣ್ಯಗಳನ್ನು ಮಾಡುತ್ತಿದ್ದವರ ಪತ್ತೆಯನ್ನು ಮಾಡಿರುವರು. ಅಚ್ಯುತ್ತ ಎಂಬ ಪೋಲೀಸ್ ಹೆಡ್‌ಕನ್‌ಸ್ಟೇಬಲನು ತನ್ನ ಊರಿನ ಉಡುಪನ್ನು ಹಾಕಿಕೊಂಡು ಒಂದು ಅಂಗಡಿಯಲ್ಲಿ ಸುಮ್ಮನೆ ಕುಳಿತಿರುವಾಗ ..ಎನ್ನು ಮತ್ತು ಅಬ್ದುಲ್ಲ ಎಂಬ ಇಬ್ಬರು ಮಾಪಿಳ್ಳೆಯರು ಆ ಅಂಗಡಿಗೆ ಬಂದು ಸಕ್ಕರೆಗೆಂತ ೨ ಆಣೆಯ ನಾಣ್ಯವನ್ನು ಅಂಗಡಿಯವನಿಗೆ ಕೊಟ್ಟರು. ಹತ್ತಿರ ಕುಳಿತಿದ್ದ ಹೆಡ್‌ಕನ್‌ಸ್ಟೇಬಲನು ಅದರ ಬಣ್ಣವನ್ನು ನೋಡಿ ಅನುಮಾನಪಟ್ಟು ನಾಣ್ಯವನ್ನು ಚೆನ್ನಾಗಿ ಪರೀಕ್ಷಿಸಿ, ಕಳ್ಳ ನಾಣ್ಯವೆಂದು ತಿಳಕೊಂಡು ನಾಣ್ಯವು ನಿಮ್ಮ ಕೈಯಲ್ಲಿ ಹೇಗೆ ಬಂತೆಂದು ಅವರನ್ನು ಕೇಳಲು ಒಬ್ಬನು ಕೂಡಲೇ ಕಾಲಿಗೆ ಬುದ್ಧಿಹೇಳಿದ್ದನು. ಹೆಡ್‌ಕನ್‌ಸ್ಟೇಬಲನು ಮತ್ತೊಬ್ಬನನ್ನು ಅಂಗಡಿಯವನ ವಶಕೊಟ್ಟು ಓಡಿಹೋದ ಆಸಾಮಿಯನ್ನು ಬೆನ್ನಟ್ಟಿ ಹಿಡಿದು ತಂದು, ಇಬ್ಬರನ್ನೂ ಪೋಲೀಸ್ ಸ್ಟೇಶನಿಗೆ ಕೊಂಡುಹೋದನು ಅಲ್ಲಿ ಅವರನ್ನು ಜಡ್ತಿ ಮಾಡಲು ಸುಮಾರು ೨೦ ರೂಪಾಯಿಯ ಒಂದಾಣೆ, ಎರಡಾಣೆ, ನಾಲ್ಕಾಣೆಯ ಕಳ್ಳ ನಾಣ್ಯಗಳು ಸಿಕ್ಕಿದವು. ಖಾಜಾ ನಾಣ್ಯಕ್ಕೂ ಅವಕ್ಕೂ ಬಣ್ಣದಲ್ಲಿ ಮಾತ್ರ ವ್ಯತ್ಯಾಸವಿತ್ತು. ಆಪಾದಿತರು ತಾವು ಪಾಲ್ಘಾಟ್, ಮಂಕರಾಯಿ, ಪಾರ್ಲಿ, ಶೊರನೂರು, ತ್ರಿಚೂರು, ತಿರೂರು, ಕಲಿಕೋಟೆ ಮೊದಲಾದ ಸ್ಥಳಗಳಲ್ಲಿ ಈ ಕಳ್ಳ ನಾಣ್ಯಗಳ ಚಲಾವಣೆ ಮಾಡಿರುವೆವೆಂದು ಅರಿಕೆ ಮಾಡಿರುವದರಿಂದ ತನಕಿ ಬಗ್ಗೆ ಆಯಾ ಸ್ಥಳಗಳಿಗೆ ಪೋಲೀಸಿನವರು ಹೋಗಿರುತ್ತಾರೆ

ಕಲಿಕೋಟೆಯ ಇಬ್ಬರು ತೀಯರು ಕರೆನ್ಸಿ ನೋಟಿನ ಸಂಬಂಧ ಸರಕಾರದವರನ್ನು ಮೋಸಗೊಳಿಸಲು ನೋಡಿದ ಮೊಕದ್ದಮೆಯ ತನಕಿಯು ಕಲ್ಲಿಕೋಟೆಯ ಡಿವಿಜನಲ್ ಮೇಜಿಸ್ಟ್ರೇಟರಿಂದ ನಡಿಯುತ್ತಿದೆ ಈ ಮೊಕದ್ದಮೆಯಲ್ಲಿ ಆಪಾದಿತರು ಮುಂಬಾಯಿಯ ಪೇಪರ್ ಕರೆನ್ಸಿ ಕಮಿಷನರಲ್ಲಿಗೆ ಹೋಗಿ ೫ ರೂಪಾಯಿಗಳ ಎರಡು ಮುಂಬಾಯಿ ಅರ್ಧ ನೋಟುಗಳನ್ನು ಕೊಟ್ಟು ಉಳಿದ ಅರ್ಧ ನೋಟುಗಳು ಕಾಣೆಯಾಗಿರುವದೆಂದು ಹೇಳಿ ರೂಪಾಯಿ ಕೊಡಬೇಕೆಂದು ಕೇಳಿಕೊಂಡರು. ಕಮಿಷನರರು ತನಕಿ ನಡಿಸಿ ಈ ಸಂಬಂಧದ ಕರೆನ್ಸಿ ಅರ್ಧ ನೋಟಿನ ಮೌಲ್ಯವು ಪಾರ್ಲಿ ಎಂಬ ಸ್ಥಳದ ಮಾನ್ಯ ಸಾಹುಕಾರರೊಬ್ಬರಿಗೆ ಕೊಟ್ಟಿದೆ ಎಂದು ತಿಳಿದು ಬಂದದರಿಂದ ಈ ಆಪಾದಿತರನ್ನು ವಿಚಾರಣೆಗೆ ಗುರಿಪಡಿಸಿದರು. ತನಕಿ ನಡಿಯುತ್ತಿದೆ.

ದಕ್ಷಿಣ ಕನ್ನಡ.

ನಿಲೇಶ್ವರ: — ಇಲ್ಲಿ ಚಂದಾರೆ ವ ಇತರ ಕಡೆಗಳ ಲೈಸನ್ಸ್ ಪಡಕೊಂಡ ಗಾಂಜಾ ಅಂಗಡಿಗಳಿಂದ ಬಂಗಿಯನ್ನು ಅನೇಕರು ಸ್ವಂತ ಉಪಯೋಗಕ್ಕೆಂತ ಹೆಚ್ಚು ಪಡಕೊಂಡು ಅಲ್ಲಲ್ಲಿ ಕಳ್ಳಾಟಿಕೆಯಿಂದ ಮಾರುವ ಪದ್ಧತಿಯು ಈ ತೆಳಚೆಗೆ ಹೆಚ್ಚಾಗಿಯದೆ ಇಲಾಖಾ ಅದಿಕಾರಸ್ಥರು ಈ ವಿಷಯದಲ್ಲಿ ನಿಗಾ ಕೊಡುವದು ಅತ್ಯಗತ್ಯ

ಹೊಸದುರ್ಗ: — ಎಲ್ಲಾ ದಿಕ್ಕಿನಲ್ಲಿರುವ ಮೇರೆಗೆ ಮಳೆಯು ಕಳದ ಕೆಲವು ದಿನಗಳಲ್ಲಿ ಇಲ್ಲಿ, ಸಹಾ ಇಲ್ಲದೆ ಶಿಕೆಕಾಲದೋಪಾದಿ ನೆಲವು ಕಾಯ್ದು ರೈತರ ಗೋಳಾಟ ಹೇಳುವಂಥಾದ್ದಲ್ಲ ಮೊನ್ನೆಯಿಂದ ವೇಘರಾಜನ ಬೇಟಿಯಾಗಿ ಪರ್ಜನ್ಯನು ಸುರಿಯಲಿಕ್ಕೆ ತೊಡಗಿದ್ದಾನೆ ಇದೀ ತಿಂಗಳು ಈ ರೀತಿಯಲ್ಲಿ ಮಳೆ ಸುರಿದರೆ ಕೃಷಿಗಾರರ ದುಃಖ ಮಾರ್ಪಡುವರೆ ಅಡ್ಡಿಯಿಲ್ಲ ಎಂತ ಅಬಿಪ್ರಾಯಪಡುತ್ತಾರೆ ಎಷ್ಟು ಸಮಾಧಾನಪಟ್ಟರೂ ಸಂವತ್ಸರದ ಫಲ ಅನುಬವಿಸದೆ ಇರಲಾಗುವದುಂಟೆ?

ಇಲ್ಲಿಯ ಡಿಪ್ಯುಟಿ ತಹಸೀಲದಾರರಾದ ರಾ| ಕೆ ರಾಮನಾಯರ್ರರಿಗೆ ಮಂಗಳೂರು ಹಜೂರು ಕಚೇರಿಗೆ ವರ್ಗ ಮಾಡೋಣಾಗಿಯದೆ

ಇಲ್ಲಿಯ ಪೋಸ್ಟು ಮಾಸ್ಟರರಿಗೂ ವರ್ಗವಾಗಿಯದೆಂತ ತಿಳಿಯುತ್ತೇವೆ

ಮಂಗಳೂರಿನಿಂದ ಇಲ್ಲಿ ಹಾದುಹೋಗುವ ಲೋಕಲ್ ಫಂಡ್ ರಸ್ತೆಯು ಸಾಧಾರಣ ಇಲ್ಲಿ ವರೆಗೂ ಯೋಗ್ಯ ರೀತಿಯಲ್ಲಿ ಇರುತ್ತದೆ ಅದನ್ನು ಪಯ್ಯನ್ನೂರು ರಸ್ತೆಗೆ ತದೋಪಾದಿಯಲ್ಲಿ ಹೊಸತಾಗಿ ರಚಿಸಿ ಕೂಡಿಸುವ ಇರಾದೆಯು ಲೋಕಲ್ ಫಂಡಿನವರಿಗೆ ಇರುತ್ತದೆಂತಲೂ ತತ್ಕಾಲಕ್ಕೆ ಕಾಂಞಂಗಾಡಿನಿಂದ ನಿಲೇಶ್ವರ ವರೇಗೆ ರಸ್ತೆ ಕಾವ ಗಾರಿ ನಡಿಯುತ್ತದೆಂತಲೂ ಸಹ ಕೇಳುತ್ತೇವೆ.

ವ್ಯವಸಾಯ ಸಂಘದ ಡೈರೆಕ್ಟರವರ ಸವಾರಿಯು ಇಲ್ಲಿ ಚಿತ್ತೈಸೋಣಾಗಿಯದೆ. ಒಂದೆರಡು ದಿವಸ ಇಲ್ಲಿ ವಸ್ತಿ ಮಾಡಿ ನಿಲೇಶ್ವರ ಚರ್ವತ್ತೂರು ಅತ್ತಕಡೆ ತೆರಳೋಣಾಗುತ್ತದೆಂತಲೂ ತೆಂಗಿನಕಾಯಿ ತೋಟದ ಬಗ್ಗೆ ಒಳ್ಳೆ ಸ್ಥಳವನ್ನು ಪರಿಶೋಧಿಸುವ ಉದ್ದೇಶದಿಂದ ಸರ್ಕೀಟು ಇತ್ತಕಡೆ ಬೆಳೆಸೋಣಾಗಿದೆಂತಲೂ ಸಹ ತಿಳಿಯುತ್ತೇವೆ

ನಮ್ಮ ಇಲ್ಲಿಯ ಮಿಶ್ಯನ್ ಎಲಿಮೆಂಟರಿ ಶಾಲಾ ಮುಖ್ಯೋಪಾಧ್ಯಾಯರು ಶಾಲೆಯ ಮಕ್ಕಳಿಗೆ ಖಾಸಗಿ ಕಲಿಸುವಿಕೆಯ ಒಂದು ತರಗತಿಯನ್ನು ಇತ್ತಲಾಗಿ ತೆರದಿರುತ್ತಾರಾಗಿ ತಿಳಿಯುತ್ತೇವೆ ಇದರಿಂದ ಉಪಾಧ್ಯಾಯರಿಗೆ ಒಳ್ಳೆದೆಂತ ಗ್ರಹಿಸುವದಾದರೆ ಖಾಸಗಿ ಶಿಕ್ಷಣದಿಂದ ಶಿಷ್ಯರಿಗೆ ಏನಾದರೂ ಬಾಧಕ ಇರುತ್ತದೊ ಎಂಬದನ್ನು ಈ ಪತ್ರದ ಹಿಂದಿನ ಸಂಚಿಕೆಯೊಂದರಲ್ಲಿ ಭಾರತೀಯರೊಬ್ಬರು ಬರದ ಲೇಖನವನ್ನು ಈ ಉಪಾಧ್ಯಾಯರು ಕಲಿತು ಮರೆತಿರುವರೋ ಏನೆಂದು ದೇವರೇ ಬಲ್ಲ

ಇಲ್ಲಿ ಕುಂಞಪ್ಪ ಎಂಬ ಬಿಲ್ಲವಗೆ ವಾಂತಿಭೇದಿ ತೊಡಗಿ ಶುರುವಾದ ೨೪ ತಾಸುಗಳೊಳಗೆ ಮರಣ ಪಟ್ಟಿರುತ್ತಾನೆ. ಸದರಿ ಮರಣವು ವಾಂತಿಭೇದಿಯಿಂದಲ್ಲ, ಅಜೀರ್ಣದ ಸಂಬಂಧ ಉಂಟಾದದ್ದು ಎಂತ ವೈದ್ಯ ಉದ್ಯೋಗಸ್ಥರೂ ಇತರರೂ ಅಭಿಪ್ರಾಯಪಡುತ್ತಾರೆ.

ಬೇಕ್ಲ: — ಇಲ್ಲಿ ಹೊಸತಾಗಿ ಒಂದು ಫಿರ್ಕಾ ರಚನೆಯಾಗಿ ರಾ| ಕೇಶವ ಕುಡ್ವ ಎಂಬವರನ್ನು ಹಂಗಾಮಿ ರೆವಿನ್ಯು ಇನ್ಸ್‌ಪೆಕ್ಟರ ಹುದ್ದೆಗೆ ನೇಮಿಸಿರುತ್ತಾರೆ. ಕ್ರಮೇಣ ಈ ಹುದ್ದೆಯನ್ನು ಕಾಯಂ ಪಡಿಸಿ ನಮಗೆ ಒಬ್ಬ ರೆವಿನ್ಯು ಇನ್ಸ್‌ಪೆಕ್ಟರರನ್ನು ನೇಮಿಸಿದರೆ ಬಹಳ ಪ್ರಯೋಜನಕರವೇ ಸರಿ

ಇಲ್ಲಿಯ ಟಪ್ಪಾಲ್ ಆಫೀಸಿನಲ್ಲಿ ಬಟ್ವಾಡೆ ಆಗುವ ಕಾಗದ ಪತ್ರಗಳು ಹಪ್ತೆ ವ ಅದಕ್ಕಿಂತ ಹೆಚ್ಚಿನ ಡೇರಿಯಿಂದ ಬಟ್ವಾಡೆ ಆಗುತ್ತದೆಂತ ಒಬ್ಬ ಬಾತ್ಮಿದಾರರು ನಮಗೆ ತಿಳಿಸುತ್ತಾರೆ ಇಂಥಾ ರೈಲ್ವೆ ಕರಾವಳಿಯಲ್ಲಿ ಕಾಗದ ಪತ್ರಗಳು ಡೇರಿಮಾಡದೆ ಆಗ್ಯಾಗ್ಯೆ ಬಟ್ವಾಡೆ ಮಾಡಿಸುವ ವಿಲೆವಾರಿ ಇಲಾಖೆಯವರು ಮಾಡಿಸಿದ್ದಾದರೆ ಎಷ್ಟೋ ಉಪಕಾರವಾಗುತ್ತಿತ್ತು

ಪುತ್ತೂರು: — ಇದೇ ೧೯೧೫ನೇ ಇಸವಿ ಒಕ್ಟೋಬರ ಲಾಗಾಯಿತು ೧೯೧೫ನೇ ಇಸವಿ ಸಪ್ಟಂಬರ ಆಖ್ಯೆರಿಗೆ ಅಂತ್ಯವಾಗುವ ವರುಷದ ಬಗ್ಯೆ ಶೇಂದಿಗುತ್ತೆಗಳು ಇದೇ ಬರುವ ಅಗೋಸ್ತು ತಾ ೨೮ಲ್ಲು ಮಂಗಳೂರು ತಾ ೩ ಕಾರ್ಕಳ, ತಾ ೪ ಬೆಳ್ತಂಗಡಿ, ತಾ ೬ ೭ ಉಡ್ಪಿ, ತಾ ೭ ಪುತ್ತೂರು, ತಾ ೧೦ ಕಾಸರಗೋಡು, ತಾ. ೧೦ ವ ೧೧ ಕುಂದಾಪುರ, ತಾ ೧೨ ಹೊಸದುರ್ಗ, ಮೊಕ್ಕಾಮುಗಳಲ್ಲಿ ಬಿಯಾಬು ಡಿವಿಜನ ಆಫೀಸರರಿಂದ ಏಲಂ ಮಾಡೋಣಾಗುವದೆಂದು ಪ್ರಕಟವಾಗಿದೆ

ಇಲ್ಲಿಯ ಪಂಚಮ ಹುಡುಗರಿಗೋಸ್ಕರ ಶಾಲೆ ಕಟ್ಟೋಣವು ಸಿದ್ಧವಾಗಿರುವದು

ಇದೇ ತಿಂಗಳ ತಾ ೧೪ರಲ್ಲು ಪಂಚಮರ ಶಾಲೆ ವಿದ್ಯಾರ್ಥಿಗಳಿಗೆ ಇಲ್ಲಿಯ ಶೇಂದಿ ಶರಾಬ ಗುತ್ತೆದಾರ ಮ| ರಾ ರಾ ಎಶಿಯಣ್ಣಪೂಜಾರಿಯವರ ಕಡೆಯಿಂದ ಸ್ಲೇಟು ಕಡ್ಡಿಗಳು ಮತ್ತು ಮಿಠಾಯಿ ಹಂಚಲ್ಪಟ್ಟಿರುವದು.

ಕಾಪು: — ಪುನರ್ವಸು ನಕ್ಷತ್ರದ ವ ಳಯು ಬಾರದಿರುವದರಿಂದ ಜನರು ನೆಟ್ಟಂಥಾ ಬೆಳೆಯೆಲ್ಲ ಸೂರ್ಯನ ತಾಪದಿಂದ ಹಣ್ಣಾಗುತ್ತಾ ಬಂದಿತು. ಈ ವರ್ಷದ ಬೆಳೆಯೇ ನಷ್ಟವಾಯಿತಲ್ಲಾ ಎಂದು ಜನರು ಮರುಗುತ್ತಿರುವರು ಬಹ್ವಾರೆ ಇದು ರಾಕ್ಷಸ ಸಂವತ್ಸರದ ಮಹಿಮೆ ಎಂದೆನ್ನಬಹುದಾಗಿದೆ

ಸಾಂಗಾಳದಲ್ಲಿ ಅಂಗಡಿ ವ್ಯಾಪಾರ ಮಾಡುತ್ತಿರುವ ಆಜಿ ಬ್ಯಾರಿ ತಮ್ಮ ಆಮದೆ ಬ್ಯಾರಿ ಎಂಬವನು ಒಬ್ಬ ಮೊಗೇರ ಹುಡುಗನಿಗೆ ೬ ಪೈದು ಹಲಸಿನ ಹಣ್ಣು ತಿನ್ನಲಿಕ್ಕೆ ಕಡವಾಗಿ ಕೊಟ್ಟಿದ್ದನು ಕಡ ತಕ್ಕೊಂಡು ತಿಂದು ಹೋದ ಆಸಾಮಿಯು ೨ ತಿಂಗಳಿಂದ ಸದರಿ ಬ್ಯಾರಿಯ ಕಣ್ಣಿಗೆ ದೃಶ್ಯವಾಗಲಿಲ್ಲ. ಕಳದವಾರ ಬ್ಯಾರಿಯು ಉಡ್ಪಿ ತಾಲೂಕು ಕಚೇರಿ ಸಮೀಪ ಹೋಗುವಾಗ ಮೊಗೇರ ಹುಡುಗನು ಅಕಸ್ಮತ್ ಸಿಕ್ಕಿಬಿಟ್ಟನು. ಕೂಡಲೇ ಬ್ಯಾರಿಗೆ ಕೋಪೋದ್ರೇಕವಾಗಿ ಮೊಗೇರ ಹುಡುಗನನ್ನು ಕೈಹಿಡಿದು ನಿಲ್ಲಿಸಿ ೬ ಪೈ ಕೊಡದೆ ಮುಂದೆ ಕಾಲಿಡಲು ಬಿಡೆನೆಂಬಿತ್ಯಾದಿ ಕೆಲವು ಕೆಟ್ಟ ಮಾತುಗಳಿಂದ ಬೈಯುತ್ತಿರುವ ಈ ಗದ್ದಲವು ಸಮೀಪವಿರುವ ಪೋಲೀಸ್ ಆಫೀಸರರ ತಿಳುವಳಿಕೆಗೆ ಬಂದು ಇಬ್ಬರನ್ನೂ ಮೇಜಿಸ್ಟ್ರೇಟರ ಕೋಣೆಗೆ ಕೊಂಡುಹೋಗಿ ಬಿಟ್ಟರು. ಉಡ್ಪಿ. ಮೇಜಿಸ್ಟ್ರೇಟರು ತಕ್ಕ ತನಕಿ ನಡಿಸಿ ಬ್ಯಾರಿಗೆ ರೂ. ೫ ಜುಲುಮಾನೆ ವಿಧಿಸಿದರು.

ಉಡುಪಿ:—ಆದ್ರಾ ನಕ್ಷತ್ರದಲ್ಲಿ ಮಳೆಯು ಸರಿಯಾಗಿ ಸುರಿದರೂ ಪುನರ್ವಸು ಪ್ರವೇಶನಂತರ ಅಂದರೆ ಈ ತಾ. ೪ರ ಲಾಗಾಯ್ತು ಮಳೆಯು ಸುತರಾಂ ಇಲ್ಲ ಬೇಸಾಯಗಾರರ ಗೋಳಿಗೆ ಪಾರವೇ ಇಲ್ಲ ಬೆಟ್ಟು ಗದ್ದೆ ಸಾಗುವಳಿಗೆ ಉಪಕ್ರಮವೇ ಇಲ್ಲ ಬೈಲು ಗದ್ದೆಗಳ ಸಾಗುವಳಿಯು ಮುಕ್ಕಾಲಂಶವಾಗಿದ್ದರೂ ಅವನ್ನು ಕೂಡಾ ನೀರಿಲ್ಲದೆಯೂ, ಬಿಸಲಿನ ಝಳದಿಂದಲೂ ಒಣಗಿ ಹೋಗಿಯದೆ ಶೆಖೆ ಜಾಸ್ತಿಯಾಗಿ ಅಲ್ಲಲ್ಲಿ ವಿಷಮಜ್ವರಾದಿಗಳು ಆರಂಭವಾಗಿವೆ

ಕಳೆದ ತಾ ೨೬ನೆ ರಾತ್ರಿ ಪುತ್ತಿಗೆ ಮಠದಲ್ಲಿ ದನಗಳಿಗೆ ಮಡ್ಡಿ ಬೇಯಿಸುವ ಸುಮಾರು ಎರಡೂವರೆ ಮಣದ ತಾಂಬ್ರದ ಕೊಪ್ಪರಿಗೆಯನ್ನು ಕುದ್ದನೆಂಬವನು ಕದ್ದು ಕೊಂಡು ಗೋವಿಂದ ಮರ್ತಪ್ಪ ಎಂಬವನಲ್ಲಿ ಒಚ್ಚಿಟ್ಟದ್ದರಿಂದ ಕಳ್ಳನು ೬ ತಿಂಗಳ ಕಠಿಣ ಸಜೆಗೂ, ಒಚ್ಚಿಟ್ಟು ಕೊಂಡವನು ೪ ತಿಂಗಳ ಸಜೆಗೂ, ೧೦೦ ರೂಪಾಯಿ ಜುರುಮಾನೆಗೂ ಗುರಿಯಾದರು

ಶ್ರೀ ಫಲಿಮಾರು ಮಠದ ಬಾಲ ಯತಿಗಳು ಇದೇ ತಾ ೯ರಲ್ಲು ಇಲ್ಲಿಗೆ ದಯಮಾಡುವವರಾದರು ಇವರು ಇಲ್ಲಿಗ ಪ್ರಥಮತಃ ಒಂದದ್ದರಿಂದ ಪುರಜನರು ಇದಿರ್ಗೊಂಡು ಬಹು ವಿಜೃಂಭಣೆಯಿಂದ ಪಟ್ಣ ಪ್ರವೇಶ ಮಾಡಿಸುವವರಾದರು ಶ್ರೀ ಚಂದ್ರೇಶ್ವರ, ಅನಂತೇಶ್ವರ ಸರ್ವಾಜ್ಞಾಚಾರ್ಯರ ಹಾಗೆಯೇ ಶ್ರೀಕೃಷ್ಣದರ್ಶನ ಸೇವಾದಿಗಳನ್ನು ಮಾಡಿಕೊಂಡು ಅದೇ ದಿವಸ ಶ್ರೀ ಅದಮಾರು, ಸೋದೆ, ಬಂಡಾರಕೇರಿ ಶ್ರೀಪಾದಂಗಳವರೊಡನೆ ಭಂಡಾರಕೇರಿ ಮಠಕ್ಕೆ ಚಿತ್ತೈಸಿ ಅಲ್ಲಿ ಮೂರು ದಿವಸಗಳಲ್ಲಿ ಶ್ರೀರಾಮಕೃಷ್ಣ ಸಹಿತ ಶ್ರೀಗೋಪಿನಾಥ ದೇವರ, ಶ್ರೀ ಪ್ರಾಣದೇವರ ಮತ್ತು ಶ್ರೀ ವಾದಿರಾಜ ಸ್ವಾಮಿಗಳವರ ಅನುಜರಾದ ವೃಂದಾವನಸ್ಥ ಸುರೋತ್ತಮ ತೀರ್ಥದ ದರ್ಶನ ಸೇವಾದಿಗಳನ್ನು ಮಾಡಿಕೊಂಡು ತಾ ೧೬ಕ್ಕೆ ತಿರಿಗಿ ಇಲ್ಲಿಗೆ ದಯಮಾಡುವವರಾದರು

ತಾ. ೧೩ರಲ್ಲು ಹೊಸತಾಗಿ ಕಟ್ಟಿಸುತ್ತಿರುವ ಬೋಜನ ಶಾಲೆಯಲ್ಲಿ ಪರ್ಯಾಯ ಸೀರೂರು ಶ್ರೀಪಾದಂಗಳವರು ಪ್ರಾಣ ದೇವರ ವಿಗ್ರಹವನ್ನು ಸುಮುಹೂರ್ತದಲ್ಲಿ ವಿಧ್ಯುಕ್ತ ಪ್ರಕಾರ ಪುನಃ ಪ್ರತಿಷ್ಠಾ ಮಾಡುವವರಾದರು

ಮಂಗಳೂರು.

ಮ|ರಾ| ಡಿ ಆನಂದರಾಯರು ಇತರ ಡ್ಯೂಟಿಯ ಮೇಲೆ ನೇಮಿಸಲ್ಪಟ್ಟದ್ದರಿಂದ ಆಕ್ಟಿಂಗ್ IV ಗ್ರೇಡ್ ತಹಸೀಲದಾರರಾಗಿರುವ ಮ ರಾ. ಬಿ ಮಂಜುನಾಥ ಬಾಳಿಗರು ರೂ ೨೦೦ರ ಆಕ್ಟಿಂಗ್ III ಗ್ರೇಡ್ ತಹಸೀಲದಾರರಾಗಿ ನೇಮಿಸಲ್ಪಟ್ಟಿರುತ್ತಾರೆ

ಕಲೆಕ್ಟರ ಆಫೀಸಿನ ಇಂಗ್ಲಿಷ್ ಹೆಡ್‌ಕ್ಲಾರ್ಕರಾಗಿರುವ ಮೆ| ಪ್ರ್ಯಾಸರವರು ರೂ. ೧೫೦ರ ಆಕ್ಟಿಂಗ್ IV ಗ್ರೇಡ್ ತಹಸೀಲದಾರರಾಗಿ ನೇಮಿಸಲ್ಪಟ್ಟಿರುತ್ತಾರೆ

ಹೊಸದುರ್ಗದ ಡೆಪ್ಯುಟಿ ತಹಸೀಲದಾರ ಮತ್ತು ಸಬ್ ಮೇಜಿಸ್ಟ್ರೇಟರಾಗಿರುವ ಮ| ರಾ| ಕೆ ರಾಮನ್ ನಾಯರರವರು ಕಲೆಕ್ಟರ ಆಫೀಸಿನ ಆಕ್ಟಿಂಗ್ ಇಂಗ್ಲಿಷ್ ಹೆಡ್‌ಕ್ಲಾರ್ಕರಾಗಿ ನೇಮಿಸಲ್ಪಟ್ಟಿರುವರು

ಸ್ಪೇಶಲ್ ಡೆಪ್ಯುಟಿ ತಹಸೀಲದಾರರಾಗಿರುವ ಮ| ರಾ| ಬಿ. ವೆಂಕಟ್ರಮಣಯ್ಯನವರು ಹೊಸದುರ್ಗದ ಆಕ್ಟಿಂಗ್ ಡೆಪ್ಯುಟಿ ತಹಸೀಲದಾರರಾಗಿ ನೇಮಿಸಲ್ಪಟ್ಟಿರುತ್ತಾರೆ.

ಜಿಲ್ಲಾ ಕಲೆಕ್ಟರರಾದ ಮಿ| ಲ್ಯಾಯನ್ಸ್ ದೊರೆಗಳವರು ಇದೇ ತಾ ೨೧ರಲ್ಲು ಸಬ್ ಕಲೆಕ್ಟರರಾದ ಮಿ| ಕರ್ಗೆನ್ ವೆನ್ ದೊರೆಗಳವರಿಗೆ ಚಾರ್ಜು ಕೊಟ್ಟಿರುವರು.

ಇಲ್ಲಿಯ ತಹಸೀಲದಾರರಾದ ಮ| ರಾ| ಡಿ ಆನಂದರಾಯರು ತಾ ೨೧ರಲ್ಲು ಟೌನ್ ಡೆಪ್ಯುಟಿ ತಹಸೀಲದಾರರವರಿಗ ಚಾರ್ಜು ಕೊಟ್ಟು ಮಧ್ಯಾನ್ಹದ ನಂತರ ಸಬ್ ಕಲೆಕ್ಟರವರಿಂದ ಚಾರ್ಜು ತಕ್ಕೊಂಡಿರುವರು

ಪದವಿನಲ್ಲಿ ತಾಂಬ್ರದ ಪಾತ್ರ ಇತ್ಯಾದಿಗಳನ್ನು ಕಳವು ಮಾಡಿದ್ದನಾಗಿ ಆಪಾದಿಸಲ್ಪಟ್ಟು ಸೆಶ್ಶನ್ಸಿಗೆ ಕಮಿಟ್ ಮಾಡಲ್ಪಟ್ಟ ಮುಂಡಪ್ಪ ಕೊಟ್ಟಾರಿಗೆ ಸೆಶ್ಶನ್ಸ್ ಜಡ್ಜರವರು ೯ ತಿಂಗಳ ಕಠಿಣ ಸಜಾ ವಿಧಿಸಿದರು

ಕೇಡಿ ಬಾಬು ಯಾನೆ ಮಾನುವೇಲ್ ಫೆರ್ನಾಂದಿಸನು ಫಳನೀರಿನಲ್ಲಿ ದುರುಸ್ತಿ ಬಗ್ಗೆ ಕೊಟ್ಟ ಪಾತ್ರೆಗಳನ್ನೂ ಅಂಗಡಿಯಿಂದ ಒಂದು ಮನೆಗೆ ಕೊಂಡುಹೋಗಲಿಕ್ಕೆ ಕೊಟ್ಟ ಒಂದು ಮುಡಿ ಅಕ್ಕಿಯನ್ನೂ ದುರುಪಯೋಗ ಮಾಡಿದ್ದನಾಗಿ, ವಿಚಾರಣೆಗೆ ಗುರಿಯಾಗಿದ್ದನು ಡೆಪ್ಯುಟಿ ಕಲೆಕ್ಟರರವರು ಆಪಾದಿತನಿಗೆ ೩ ವರ್ಷಗಳ ಕಠಿಣ ಸಜಾ ವಿಧಿಸಿದರು

ಮ ರಾ ಬರ್ಕಾಡಿ ತಿಮ್ಮಪ್ಪ ಹೆಗಡೆಯರ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರಿಯು ಖಾಲಿಬಿದ್ದ ಸಂದರ್ಭದಲ್ಲಿ ಕುಂದಾಪುರ ತಾಲೂಕು ಬೋರ್ಡಿನ ಪ್ರತಿನಿಧಿಗಳ ಚುನಾವಣೆಯು ತಾ ೨೦ರಲ್ಲಿ ಇಲ್ಲಿ ನಡೆಯಿತು ಮ ರಾ ಸದಾಶಿವಬಟ್ಟ್ ಬಿ ಎ ಬಿ ಎಲ್, ಇವರು ಮ ರಾ ಮರ್ಕಡ ಸುಬ್ಬಯ್ಯಶೆಟ್ಟರನ್ನು ಚುನಾಯಿಸಬೇಕೆಂತ ಸೂಚಿಸಿದ್ದನ್ನು ಮ ರಾ ಕೌಡೂರು ಸುಬ್ಬಯ್ಯಹೆಗಡೆಯರು ಅನುಮೋದಿಸಿದ ನಂತರ, ಮ ರಾ ವಿಟ್ಠಲ್ ಕಾಮತ್, ಬಿ ಎ ಬಿ ಎಲ್ ಇವರು ಮ ರಾ ಸದಾಶಿವಬಟ್ ಇವರನ್ನು ಚುನಾಯಿಸಬೇಕೆಂದು ಸೂಚಿಸಲು, ಅದನ್ನು ಮ ರಾ ರಾಜಗೋಪಾಲಕೃಷ್ಣರಾಯರು ಅನುಮೋದಿಸಿದರು ಅದಾದ ಮೇಲೆ ಸೇರಿದ್ದ ಮೆಂಬರರ ಪೈಕಿ ಶಾಲೆಗಳ ಸಬ್ ಅಸಿಸ್ಟಾಂಟ್ ಇನ್ಸ್‌ಪೆಕ್ಟರ್ ಮ ರಾ ಯು. ಮಂಗೇಶರಾವ್, ಬಿ ಎ ಎಲ್ ಟಿ ಯವರು ಒಳ್ಳೆಯ ಮಾತುಗಳಿಂದ ಮ ರಾ ಭಟ್ಟರವರ ಸುಗುಣಗಳನ್ನು ವಿವರಿಸಿ, ಮುಂದೆ ಅವರು ಮದರಾಸಿನ ನ್ಯಾಯವಿಧಾಯಕ ಸಭೆಯ ಮೆಂಬರರಾಗಿ ಆರಿಸಲ್ಪಡುವ ಸಂಭವವಿರುವದರಿಂದ, ಅಂಥಾ ಸಂದರ್ಭವನ್ನು ಬೋರ್ಡಿನವರು ಹೋಗಗೊಡಿಸಬಾರದೆಂತಲೂ, ಮ ರಾ ಸುಬ್ಬಯ್ಯ ಶೆಟ್ಟರು ಈ ಸಂಗತಿಯನ್ನು ಆಲೋಚಿಸಿ, ಹಿಂದೆಗೆಯುವದು ಉತ್ತಮವೆಂತಲೂ ಹೇಳಿದರು. ಆದನ್ನೇ ಅನುಮೋದಿಸಿ ಮ ರಾ ಭಟ್ಟರವರು ಒಂದುವೇಳೆ ಬೋರ್ಡಿನವರು ಒಂದೇ ಮತದಿಂದ ತಮ್ಮನ್ನು ಚುನಾಯಿಸುವದಾದರೆ ತಾನು ಡಿಸ್ಟ್ರಿಕ್ಟ್ ಬೋರ್ಡಿಗೆ ಚುನಾಯಿಸಲ್ಪಡಲಿಕ್ಕೆ ಸಿದ್ಧವಿದ್ದೇನೆಂತ ತಮ್ಮ ಮನಸ್ಸಿನಲ್ಲಿ ತೋರಿಬಂದ ಅಭಿಪ್ರಾಯವನ್ನು ಸಭೆಯ ಮುಂದೆ ಸೂಚಿಸಿದ ಮೇಲೆ ಮ. ರಾ ಸುಬ್ಬಯ್ಯ ಶೆಟ್ಟರು ತಾನು ಹಿಂದೆಗೆಯುವೆನೆಂದು ಹೇಳಿದರು. ಕೂಡಿ ಬಂದ ಸಭಿಕರ ಒಂದೇ ಮತದಿಂದ ಮ. ರಾ ಭಟ್ಟರವರು ಡಿಸ್ಟ್ರಿಕ್ಟ್ ಬೋರ್ಡು ಮೆಂಬರರಾಗಿ ಚುನಾಯಿಸಲ್ಪಟ್ಟರು

ಬಂದರದ ಸಾ| ಮಹುಮ್ಮದ್ ಇಬ್ರಾಹಿಂ ಮಹಮ್ಮದ್ ಜಾಫರ್ ಮತ್ತು ಕಂಪೆನಿಯವರ ಕಾಣೆಯಾಗಿ ಹೋದ ನೂರು ರೂಪಾಯಿಗಳ 6 ಕರೆನ್ಸಿ ನೋಟುಗಳೂ ದೊರಕಿರುತ್ತವೆಂತ ಸದರಿ ಕಂಪೆನಿಯವರು ತಿಳಿಸಿರುತ್ತಾರೆ.

4 ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು

5. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ ಎಲ್ಲ ಉದ್ಯೋಗದ ದೊಡ್ಡ ಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವವು

6. ಬೇಸಿಗೆ ಮತ್ತು ಚಳಿಗಾಲಗಳಲ್ಲಿ ಎಲ್ಲ ತರದ ರೋಗವನ್ನೂ ಒಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು

7. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು

ಅದುಕಾರಣ ಇಂತಹ ಗುಣಕಾರಿಯಾದ ಸೆಶಿಂತಾನದ ಒಂದು ಪೊಟ್ಲವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ

45 ಮಾತ್ರೆಗಳ ಪೊಟ್ಲ 1ಕ್ಕೆ 0—2—0 200 ಮಾತ್ರೆಗಳ ಪೊಟ್ಲ 1ಕ್ಕೆ 0—7—0 80 ಮಾತ್ರೆಗಳ ಟಿನ್ 1ಕ್ಕೆ 0—4—0 550 ಮಾತ್ರೆಗಳ ಮರದಪೆಟ್ಟಿಗೆ 1ಕ್ಕೆ 1—0—0
96 ,, ,, ,, 0—4—0 200 ,, ಟಿನ್ ,, 0—9—0 100 ,, ಶೀಸೆ ,, 0—4—6 1200 ,, ,, , 2—0—0

1 ರೂಪಾಯಿಗೆ ಕಡಿಮ್ಮೆಯಾಗಿ ವಿ ಪಿ ಮೂಲಕ ಕಳುಹಿಸಲ್ಪಡುವುದಿಲ್ಲವು ಮತ್ತು ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು

☞ ಭರತಖಂಡ, ಬರ್ಮ, ಮತ್ತು ಸಿಲೋನ್ ಈ ಪ್ರಾಂತ್ಯಗಳ ಎಲ್ಲಾ ಭಾಗದಲ್ಲೂ ಏಜಂಟರು ಬೇಕಾಗಿದೆ

ಸೋಲ್ ಏಜಂಟ್ಸ್ — ಸೇಶಿಂತಾನ್ ಡಿಪ್ಪೋ,
ಪ್ರಿನ್ಸೆಸ್ ಸ್ಟ್ರೀಟ್ ಬೊಂಬಾಯಿ ನಂ 2.

FREE! FREE!!
S·T·A·Perpetual Calendar
Beautiful and Artistic
As. 10 each Postage Extra.
How to get it Free?
Apply with Postage.

Eucalyptus Oil
(Pure & Best
As. 4 per 1 oz. bottle
Packing & postage Extra.
M. S. RAO & Co.,
[illegible] City.

ಯಂ. ಯಸ್. ರಾವ್ ಕಂಪೆನಿ,

ಬುಕ್‌ಸೆಲರ್ಸ್, ಅವಿನ್ಯೂರೋಡ್, ಬೆಂಗಳೂರು ಸಿಟಿ.

ಕನ್ನಡ ಹೊಸ ಪುಸ್ತಕಗಳು — ಕಾದಂಬರಿಗಳು

ಸಂಗೀತಸಮಯಸಾರ, ಹೊಸ ಪುಸ್ತಕ	1—4
ಪ್ರಬಂಧ ಮುಕ್ತಾವಳಿ, ಕನ್ನಡ ವಾಕ್ಯರಚನೆಯ ವಿಧಾನವನ್ನು ಹೊಸ ಮತ್ತು ಸುಲಭವಾದ ರೀತಿಯಲ್ಲಿ ವಿವರಿಸಿದೆ)	0 12
ಅರೇಬಿಯನ್ ನೈಟ್ಸ್, ಹೊಸ ಮುದ್ರಣ	2—2
ಮುದ್ರಾಮಂಜೂಷ ,,	1—10
ಭಕ್ತವಿಜಯ, (ವಿಷ್ಣು ಭಕ್ತರ ಕಥೆಗಳ) ಹೊಸ ಮುದ್ರಣ . .	3—2
ಮೈತ್ರೇಯಿ, (ಅನೇಕ ರಹಸ್ಯಗಳು ಏವರಿಸಲ್ಪಟ್ಟಿವೆ) . . .	0—5
ವಾಲ್ಮೀಕಿಯ ಜಯ, ಹೊಸ ಮುದ್ರಣ	0—[illegible]
ಸ್ತ್ರೀಧರ್ಮನೀತಿ, (ಸ್ತ್ರೀಯರಿಗೆ ಅತ್ಯಾವಶ್ಯಕವಾದದು)	0—9
ದುರ್ಗಾದಾಸ (ಬಂಗಾಳಿ ನಾವಿಲ್)	0—12
ಪ್ರಫುಲ್ಲ, ,, (ಪತ್ತೆದಾರಿ ಕಥೆ)	0 12
ವಿಷವಿವಾಹ, ಹೊಸ ಮುದ್ರಣ	0—4
ಶೋಭನೆ, ,,	0 12
ಚಂದ್ರಪ್ರಭಾ, ಹೊಸ ಕಾದಂಬರಿ	0—12
ಚಂಪಕ . . .	0—4
ಪ್ರಿಂರೋಜ ವಿಜಯಂ, ಗೋಲ್ಡ್‌ಸ್ಮಿತ್ ಕವಿಯ ವಿಕಾರ್ ಆಫ್ ವೇಕ್‌ಫೀಲ್ಡ್‌ನ ಭಾಷಾಂತರ	[illegible]

ಯಂ. ಸುಬ್ಬರಾವ್, ಶಂಕರಪುರಂ, ಬೆಂಗಳೂರು ಸಿಟಿ— ಈ ವಿಳಾಸವನ್ನು ಮೇಲ್ಕಂಡಂತೆ ಬದಲಾಯಿಸಿದೆ

ನಮ್ಮಲ್ಲಿ ಎಲ್ಲಾ ವಿಧವಾದ ಕನ್ನಡ ಕಥೆಗಳೂ, ಬಿ. ವೆಂಕಟಾಚಾರ್ಯರ ನಾವಿಲ್‌ಗಳೂ, ಗವರ್ನಮೆಂಟ್ ಸ್ಕೂಲು ಪುಸ್ತಕಗಳೂ ದೊರೆಯುತ್ತವೆ. ಪುಸ್ತಕದ ಪಟ್ಟಿ ಪ್ರಿಂಟಾಗುತ್ತಿದೆ.

ಯಂ. ಯಸ್. ರಾವ್ ಎಂಡ್ ಕೊ.,
ಬೆಂಗಳೂರು ಸಿಟಿ.

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶದಾಮವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ? ಇಂತಹ ಕೇಶ ರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾವುದೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೂಡಿಸುತ್ತಿದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅತ್ಯಂತ ಉಪಕಾರಿಯಾಗಿರುತ್ತದೆ ಈ ತೈಲವನ್ನು ತೊಡೆದುಕೊಳ್ಳುತ್ತಲೇ, ಮಸಿಷ್ಕದ ಬೇನೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಜಾರಿ ಬಿದ್ದು ಹೋಗಲಾರವು ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು ಇದರ ಸುಗಂಧ ವಾದರೋ ಮಧುರವೂ ಮೋಹಕವೂ ಆಗಿರುವುದು, ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳು ಮಾಡುವುದಕ್ಕಿಂತ ಒಂದೇಯೊಂದುಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ಪರೀಕ್ಷಿಸಿರಿ ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಒಫ್ ಮೇರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗ್ರಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ



ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳಕರ ಒಂದುಗಳು, ಒಸವನಗಲ್ಲಿ, ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ ಪಿ ದ್ವಾರಾ ರವಾನಿಸುವುದು

ಸೀಸೆಯೊಂದರ ಕ್ರಯ ರೂ 1 0 0, ಅ ವೆ 0 4 0 ಬೇರೆ, 3 ಸೀಸೆಗಳ ಕ್ರಯ ರೂ. 2 10 0, ಅ ವೆ 0 7 0 ಬೇರೆ

ಸೂಚನೆ — ಅನೇಕ ದುರ್ನೀತಿಕರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬಳಿಯಿಂದ ತಮಗೆ ಅತ್ಯಲ್ಪ ಸಫೆಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು ಅಂಥಾ ಸಂದರ್ಭದಲ್ಲಿ ಮೋಸ ಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ, ಅವರಲ್ಲಿ ಇದು ಇಲ್ಲವೆಂದರೆ ತಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವದನ್ನು ಮರೆಯಬಾರದು ಇದರಿಂದ ನೀವು ಹಿಂದಿನ ಬೆಲೆಯಲ್ಲಿ ನಿಜವಾದ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ

ಅತೀವ ಮನೋಹರವಾದ ಸುರಭಿಯು!

ಒಟ್ಟೋ ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ ಕೋಮಲ ಚಿರಸ್ಥಾಯಿ ಮತ್ತು ಅತ್ಯುತ್ತಮವು ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು ಇದರಲ್ಲಿ ಮದಿರೆಯ (ಆಲ್ಕೊಹೋಲ್) ಸಂಪರ್ಕವಿಲ್ಲವು ಒಂದೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ ಈ ಒಟ್ಟೋ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ

ಸಣ್ಣ ಸೀಸೆಯ ಬೆಲೆ ರೂ 0-8 0 ಒಂದು ಡ್ರಾಮಿನ (ಮಿಡಿಯಂ) ಸೀಸೆ 1ಕ್ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ 2-0-0 ಅಂಚೆಯ ವೆಚ್ಚ ಬೇರೆ 0-4-0. ಒಟ್ಟೋ ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12-0

ಅಮೇರಿಕದ ವಿಶಿಷ್ಟತೆ.

ಪ್ರೊ ಫೆಸರ್ ಜೇಮ್ಸರವರ "ಇಲೆಕ್ಟ್ರೋ ಟೋನಿಕ ಪರ್ಲ್ಸ್" ಅಥವಾ ವಿದ್ಯುಚ್ಛಕ್ತಿಯ ವಾಜೀಕರಣ ಮೌಕ್ತಿಕಗಳು

ಇವು ಶಕ್ತಿಹೀನತೆಯಿಂದ ಉಂಟಾಗುವ ರೋಗಗಳನ್ನು, ನರಪ್ರನಾಶವನ್ನೂ ಪಕ್ಷವಾತಗಳನ್ನೂ, ವಾತರೋಗಾದಿಗಳನ್ನೂ, ಅಪಸ್ಮಾರವನ್ನೂ ಧಾತುದೌರ್ಬಲ್ಯವನ್ನೂ ವಾಸಿಮಾಡುತ್ತವೆ. ಕಳೆಗುಂದಿ ಬರುವ ಸ್ಮೃತಿಶಕ್ತಿಯನ್ನು ಉದ್ದೀಪಿಸುತ್ತವೆ ಬುದ್ಧಿಯ ಮತ್ತು ಮೆದುಳಿನ ಮೂಢತೆಯನ್ನು ಹೋಗಲಾಡಿಸುತ್ತವೆ; ಕಲಿಯುವದಕ್ಕೆ ಅಥವಾ ಕಾರ್ಯಗೈಯುವದಕ್ಕೆ ಬಿಡಲೊಲ್ಲದ ಅಶಕ್ತಿಯನ್ನು ಶಕ್ತಿರೂಪವಾಗಿ ಪರಿಣಮಿಸುವಂತೆ ಮಾಡುತ್ತವೆ ಸರ್ವಾಂಗದಲ್ಲಿ ತೋರಿಬರುವ ಕ್ಷಾಮವೂ, ಅಕಾಲ ಕಾಲದಲ್ಲಿ ಸಂಭವಿಸುವ ಗ್ಲಾನಿಯೂ ಅತಿಶ್ರಮದಿಂದ ಮತ್ತು ದುರ್ವ್ಯಸನಿತ್ವದಿಂದ ಉಂಟಾಗುವ ಕ್ಷೀಣಚೇತನವೂ ಈ ಮುತ್ತುಗಳನ್ನು ಸೇವಿಸುವದರಿಂದ ಅಡಗಿ ಹೋಗುತ್ತವೆ. ಇವುಗಳಲ್ಲಿ ವೀರ್ಯದಾಯಗಳಾದ ಮತ್ತು ಮೆದುಳನ್ನು ಬೆಳೆಯಿಸಿ ವೃದ್ಧಿಗೊಳಿಸತಕ್ಕ ಪದಾರ್ಥಗಳಿರುವದರ ದೆಸೆಯಿಂದ ಇವು ವಿದ್ಯಾವ್ಯಾಸಂಗಗಳಿಗೂ, ಧರ್ಮೋಪದೇಶಕರಿಗೂ, ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಕೀಲರಿಗೂ ಗುಮಾಸ್ತರಿಗೂ, ಉಸ್ತಾದರಿಗೂ, ಪ್ರಾಯಿಕವಾಗಿ ಸಕಲ ಕಾರ್ಯಗಳಲ್ಲಿ ನಿರತರಾಗಿರುವ ಎಲ್ಲರಿಗೂ ಆಗತ್ಯವಾಗಿವೆ. ಶಾರೀರಿಕ ಪ್ರವೃತ್ತಿಯವರಿಗೆ ಮತ್ತು ಮಾನಸಿಕ ಪ್ರವೃತ್ತಿಯವರಿಗೆ ಒಂದೇ ತೆರನಾಗಿ ಅವಶ್ಯಕವಾಗಿರುತ್ತವೆ.

ನೀತಿಶೂನ್ಯತನದಿಂದ ಮತ್ತು ಮುಪ್ಪಿನಿಂದ ಉಂಟಾಗುವ ವೀರ್ಯಹೀನತೆಯಲ್ಲಿ ಈ ಮೌಕ್ತಿಕಗಳ ಗುಣವಾದರೋ ನಿಸ್ಸಂಶಯವು. ಇಂದ್ರಿಯಗಳ ಸುಖವು ಇವುಗಳ ಸೇವನೆಯಿಂದ ಕೂಡಲೇ ಲಭಿಸುತ್ತವೆ

ರೋಗಜನ್ಯವಾದ ಸ್ತಬ್ಧವನ್ನು ಗುಣಮಾಡಿ, ರೋಗದಿಂದ ಉಳಿದ ದೇಹಭಾಗಗಳನ್ನು ಇವು ಮರಳಿ ಚೇತನಗೈಯ್ಯುತ್ತವೆ ರೋಗದಿಂದ ಮುರಿದು ಹೋದ ಅಥವಾ ಒಸವಳಿದು ಕುಂದಿದ ಅವಯವಗಳಿಗೆ ಇವು ಪುನಃ ಧಾತುಪುಷ್ಟಿಯನ್ನಿತ್ತು ಸಚೇತನಗೈಯುತ್ತವೆ ಈ ಗುಳಿಗೆಗಳ ಅದ್ಭುತಕರವಾದ ಸುಫಲವು ಇವುಗಳನ್ನು ಸೇವಿಸುವದಕ್ಕೆ ತೊಡಗಿದ ದಿನದಿಂದಲೇ ಬೋಧೆಯಾಗುತ್ತದೆ ಇವುಗಳನ್ನು ಸೇವಿಸಿದ ದಿನವೇ ನರಗಳಲ್ಲಿಯೂ ಬುದ್ಧಿಶಕ್ತಿಯಲ್ಲಿಯೂ ಚೇತನವು ತೋರುತ್ತಿದೆ ದೇಹದಲ್ಲಿ ಸ್ಥೈರ್ಯ, ಬಲ, ಸುಖ, ಇವುಗಳ ಸಂಚಾರವಾಗುತ್ತದೆ ಜೀರ್ಣಶಕ್ತಿಯು ಉದ್ದೀಪಿತವಾಗಿ ಹಸಿವು ಆಶ್ಚರ್ಯಕರವಾಗಿ ಆರೋಗ್ಯಕಾಲದಲ್ಲಿ ತೋರಿಬರುವದಕ್ಕಿಂತ ಹೆಚ್ಚಾಗಿ ತೋರಿಬರುತ್ತದೆ "ಜಾಡಿಗೆ"ಯು ಕ್ರಮವನ್ನು ಅನುಸರಿಸುತ್ತದೆ; ಮುಖವು ಶುದ್ಧವಾಗಿ ರಕ್ತಚಲನದ ಕುರುಹುಗಳನ್ನು ಸರಿಯಾಗಿ ತೋರ್ಪಡಿಸುತ್ತದೆ; ಕಣ್ಣುಗಳು ಉಜ್ವಲವಾಗಿ ದೃಷ್ಟಿಯು ಪ್ರಭೆಯನ್ನು ಹೊಂದಿ ಸೂಕ್ಷ್ಮವಾಗುತ್ತದೆ, ಗತಿಯು ದೃಢವಾಗುತ್ತದೆ ಶೀಲವು ಪ್ರಸನ್ನವಾಗುತ್ತದೆ, ಬುದ್ಧಿಯು ವಿಶೇಷವಾಗಿ ಅನಲಸವಾಗುತ್ತದೆ, ಸ್ಮೃತಿಶಕ್ತಿಯು ಗ್ರಾಹಿಯಾಗುತ್ತದೆ, ಮತ್ತು ದೇಹದ ಪುಷ್ಟಿಯು ವೃದ್ಧಿಯಾಗಿ ಶಕ್ತಿಯು ದಿನೇ ದಿನೇ ಮುಂಚಿನಂತೆಯೇ ಹೊಂದಿಬರುತ್ತದೆ.

25 ಗುಳಿಗೆಗಳ ಸೀಸೆ 1ಕ್ಕೆ ಬೆಲೆ ರೂ. 1-4-0. 40 ಗುಳಿಗೆಗಳಿರುವ ಸೀಸೆ 1ಕ್ಕೆ ರೂ. 2 0-0 ಟಪ್ಪಾಲ್ ಖರ್ಚು ಸೀಸೆ ಒಂದಕ್ಕೆ ಆಣೆ 4.

ನಾವು ಕೇಳಿಕೊಳ್ಳದೆ ನಮಗೆ ಹಲವು ಮಹನೀಯರು ಬರೆದ ಪ್ರಮಾಣಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು

ದಿವಾಕರ ಕೃಷ್ಣಾಜಿ ದಾತಾರೀ, ರಾ. ಪಾರಸಾವನೀ, ತಾ, ರಾಮಟೇಕ, ಜಿ. ನಾಗಪುರ.—"ತಾವು ನಮಗೆ ಕೆಲವು ಸಮಯದ ಹಿಂದೆ ಕಳುಹಿಸಿದ "ಶಕ್ತಿವರ್ಧಕ" ಗುಳಿಗೆಗಳಿಂದ ನಮಗೆ ಉತ್ತಮವಾದ ಆರೋಗ್ಯಲಾಭವು ದೊರಕಿರುತ್ತದೆ , ಅವುಗಳ ಇನ್ನೊಂದು ಬಾಟಲಿಯನ್ನು ಕಳುಹಿಸಿಕೊಡಿರಿ.

2 ತುಕಾರಾಮ ಸಖಾರಾಮ, ಕೇಶಿಯರ್, ಬಂಗಾಲ ನಾಗಪುರ ರೈಲ್ವೆ, ಗೋರಖಪುರ—ತಾವು ತಮ್ಮಿಂದ ಪ್ರೊ ಜೇಮ್ಸರ "ವಿದ್ಯುತ್ ಶಕ್ತಿವರ್ಧಕ" ಗುಳಿಗೆಗಳ ಮೂರು ಕುಪ್ಪಿಗಳನ್ನು ತರಿಸಿಕೊಂಡಿದ್ದೆನು ಅವುಗಳಿಂದ ನಾನು ಪುಷ್ಕಳವಾದ ಸೌಖ್ಯಲಾಭ ಹೊಂದಿರುವೆನು, ಆದ್ದರಿಂದ ಇನ್ನು ಮೂರು ಕುಪ್ಪಿಗಳನ್ನು ಕಳುಹಿಸಿಕೊಡಿರಿ

3 ಅಮೀರ್ ವಲ್ಲದ ಮಹಮ್ಮದ ಭಾಯಾ ಇಬ್ರಾಹಿಮ್ ಪಾಟೀಲ್, ಪನವೇಲ್—"ತಾವು ಕಳುಹಿಸಿದ ಪ್ರೊ ಜೇಮ್ಸರ ಗುಳಿಗೆಗಳಿಂದ ನನಗೆ ಆಶ್ಚರ್ಯಕಾರಕವಾದ ಗುಣವು ದೊರೆಕಿದೆ. ಅವನ್ನು ಪುನಃ ರವಾನಿಸಿರಿ"

4 ವಿ ಆರ್ ಚಾಕ್ಸ್ಯ ಡಿಸ್ಟ್ರಿಕ್ಟ ಕೋರ್ಟ್ ವಕೀಲ, ಕೊಟ್ಟಯಮ್, ತ್ರಾವಣಕೋರ್ ಸ್ಟೇಟ್ —ಪ್ರೊ ಜೇಮ್ಸರ ಗುಳಿಗೆಗಳ ಸೀಸೆಯೊಂದನ್ನು ತಮ್ಮಿಂದ ತರಿಸಿಕೊಂಡೆನು, ಅವುಗಳನ್ನು ಉಪಯೋಗಿಸಿ ನಾನು ಒಳ್ಳೇ ಲಾಭವನ್ನು ಪಡೆದೆನು ಇನ್ನೆರಡು ಸೀಸೆಗಳನ್ನು ಕಳುಹಿಸಿಕೊಡಿರಿ.

5 ಮಾನಜೀ ನರಸಿಂಗರಾವ್, ಸಂಸ್ಥಾನ ಪಟ್ಟಣ.—ಪ್ರೊ, ಜೇಮ್ಸರ ಗುಳಿಗೆಗಳಿಂದ ನಾನು ಹೆಚ್ಚಿನ ಗುಣವನ್ನು ಹೊಂದಿರುವದರಿಂದ, ಅವುಗಳ ಇನ್ನೆರಡು ಸೀಸೆಗಳನ್ನು ರವಾನಿಸಿರಿ.

THE ANGLO INDIAN DRUG & CHEMICAL COMPANY, 16 MARKET BOMBAY 2.

ಪ್ರಧಾನ ಏಜಂಟರು: ದಿ ಊಲನ್ ಮಾರ್ಟ್, ಮಂಗಳೂರು ದ. ಕನ್ನಡ.

Printed & Published by V. S. Kamath at the Mangalore Trading Association's Sharada Press, Mangalore.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ:—ವರುಷ ಒಂದಕ್ಕೆ ರೂ. 1—4—0. ಟಪ್ಪಾಲು ಹಾಸಲು ಸೇರಿ ರೂ 2—1—0

ಪುಸ್ತಕ IX | ಮಂಗಳೂರು ತಾ 30ನೇ ಜುಲಾಯಿ ಶುಕ್ರವಾರ 1915. | ಸಂಚಿಕೆ 31

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೆಶಿಂತಾನ್.

(ರಿಜಿಸ್ಟರ್ಡ್)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೆಶಿಂತಾನದ ಸೇವನೆಯಿಂದುಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

1. ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ ತಲೆಯನೋವು, ತಲೆತಿರುಗುವದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು

2. ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತು ಮೆದುಳಿನ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು.

3. ಊಟಮಾಡಿದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತ ಬಂದಲ್ಲಿ ತಿಂದನ್ನವು ಜೀರ್ಣವಾಗುವದಲ್ಲದೆ, ಕಾಲಪ್ರವೃತ್ತಿಯು ಕ್ರಮವಾಗಿ ಆಗುತ್ತದೆ ಯಾವರೋಗಕ್ಕೂ ಅಸ್ಪದವುಂಟಾಗುವುದಿಲ್ಲವು.

4. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ, ಕೆಮ್ಮನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು.

5. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ ಎಲ್ಲ ಉದ್ಯೋಗದ ದೊಡ್ಡ ಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವವು.

6. ಬೇಸಿಗೆ ಮತ್ತು ಚಳಿಗಾಲಗಳಲ್ಲಿ ಎಲ್ಲ ತರದ ರೋಗವನ್ನೂ ಒಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು

7. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು.

ಅದುಕಾರಣ ಇಂತಹ ಗುಣಕಾರಿಯಾದ ಸೆಶಿಂತಾನದ ಒಂದು ಪೊಟ್ಲವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ.

45 ಮಾತ್ರೆಗಳ ಪೊಟ್ಲ 1ಕ್ಕೆ 0—2—0	200 ಮಾತ್ರೆಗಳ ಪೊಟ್ಲ 1ಕ್ಕೆ 0—7—0	80 ಮಾತ್ರೆಗಳ ಟಿನ್ 1ಕ್ಕೆ 0—4—0	550 ಮಾತ್ರೆಗಳ ಮರದಪೆಟ್ಟಿಗೆ 1ಕ್ಕೆ 1—0—0
95 ,, ,, ,, 0—4—0	200 ,, ಟಿನ್ ,, 0—9—0	100 ,, ಶೀಸೆ ,, 0—4—6	1200 ,, ,, ,, 2—0—0

1 ರೂಪಾಯಿಗೆ ಕಡಿಮೆಯಾಗಿ ವಿ. ಪಿ. ಮೂಲಕ ಕಳುಹಿಸಲ್ಪಡುವುದಿಲ್ಲವು. ಮತ್ತು ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

☞ ಭರತಖಂಡ, ಬರ್ಮ, ಮತ್ತು ಸಿಲೋನ್ ಈ ಪ್ರಾಂತ್ಯಗಳ ಎಲ್ಲಾ ಭಾಗದಲ್ಲೂ ಏಜಂಟರು ಬೇಕಾಗಿದೆ.

ಸೋಲ್ ಏಜಂಟ್ಸ್:—ಸೆಶಿಂತಾನ್ ಡಿಪೋ,

ಪ್ರಿನ್ಸೆಸ್ ಸ್ಟ್ರೀಟ್ ಬೊಂಬಾಯಿ ನಂ 2.

FREE! FREE!!

S.T.A. Perpetual Calendar.

Beautiful and Artistic.

As. 10 each. Postage Extra.

HOW TO GET IT FREE?

Apply with Postage.

Eucalyptus Oil.

(PURE & BEST.

As. 4 per 1 oz. bottle.

Packing & postage Extra.

M. S. RAO & Co.,

Bangalore City.

ಯಂ. ಯಸ್. ರಾವ್ ಕಂಪೆನಿ,

ಬುಕ್‌ಸೆಲರ್ಸ್, ಅವಿನ್ಯೂರೋಡ್, ಬೆಂಗಳೂರು ಸಿಟಿ.

ಕನ್ನಡ ಹೊಸ ಪುಸ್ತಕಗಳು—ಕಾದಂಬರಿಗಳು

ಸಂಗೀತಸಮಯಸಾರ, ಹೊಸ ಪುಸ್ತಕ 1—4	ಸ್ತ್ರೀಧರ್ಮನೀತಿ, (ಸ್ತ್ರೀಯರಿಗೆ ಅತ್ಯಾವಶ್ಯಕವಾದದ್ದು) 0—9
ಪ್ರಬಂಧ ಮುಕ್ತಾವಳಿ, ಕನ್ನಡ ವಾಕ್ಯರಚನೆಯ ವಿಧಾನವನ್ನು ಹೊಸ ಮತ್ತು ಸುಲಭವಾದ ರೀತಿಯಲ್ಲಿ ವಿವರಿಸಿದೆ) 0-12	[illegible] 0-12
ಅರೇಬಿಯನ್ ನೈಟ್ಸ್, ಹೊಸ ಮುದ್ರಣ 2—2	ಪ್ರಫುಲ್ಲ, ಡಿ (ಪತ್ತೇದಾರಿ ಕಥೆ) 0 12
ಮುದ್ರಾಮಂಜೂಷ ಡಿ 1-10	ವಿಷವಿವಾಹ, ಹೊಸ ಮುದ್ರಣ 0—4
ಭಕ್ತವಿಜಯ, (ವಿಷ್ಣು ಭಕ್ತರ ಕಥೆಗಳು.) ಹೊಸ ಮುದ್ರಣ 3—2	ಶೋಭನೆ, ಡಿ. 0-12
ಮೈತ್ರೇಯಿ, (ಅನೇಕ ರಹಸ್ಯಗಳು ವಿವರಿಸಲ್ಪಟ್ಟಿವೆ) 0—5	ಚಂದ್ರಪ್ರಭಾ, ಹೊಸ ಕಾದಂಬರಿ 0-12
ಶಾಂತಿ [illegible] ಹೊಸ ಮುದ್ರಣ 0—8	ಚಂಪಕ 0—4
	ಪ್ರಿಂರೋಜ ವಿಜಯಂ, ಗೋಲ್ಡ್‌ಸ್ಮಿತ್ ಕವಿಯ ವಿಕಾರ್ ಆಫ್ ವೇಕ್‌ಫೀಲ್ಡ್‌ನ ಭಾಷಾಂತರ

ಯಂ. ಸುಬ್ಬರಾವ್, ಶಂಕರಪುರಂ, ಬೆಂಗಳೂರು ಸಿಟಿ—ಈ ವಿಳಾಸವನ್ನು ಮೇಲ್ಕಂಡಂತೆ ಬದಲಾಯಿಸಿದೆ.

ನಮ್ಮಲ್ಲಿ ಎಲ್ಲಾ ವಿಧವಾದ ಕನ್ನಡ ಕಥೆಗಳೂ, ಬಿ. ವೆಂಕಟಾಚಾರ್ಯರ ನಾವಿಲ್‌ಗಳೂ, ಗವರ್ನಮೆಂಟ್ ಸ್ಕೂಲು ಪುಸ್ತಕಗಳೂ ದೊರೆಯುತ್ತವೆ. ಪುಸ್ತಕದ ಪಟ್ಟಿ ಪ್ರಿಂಟಾಗುತ್ತಿದೆ.

ಯಂ. ಯಸ್. ರಾವ್ ಎಂಡ್ ಕೊ.

ಬೆಂಗಳೂರು ಸಿಟಿ.

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶದಾಮವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾಪ ಉಪಕರಣವಾವುದೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ



ಈ ತೈಲವನ್ನು ತೊಡೆದುಕೊಳ್ಳುತ್ತಲೇ, ಮಸ್ತಿಷ್ಕದ ಬೇನೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು, ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳು ಮಾಡುವುದಕ್ಕಿಂತ ಒಂದೇಯೊಂದುಬಾರಿ ಈ "ಕಾಮಿನಿಯಾ ತೈಲ"ವನ್ನು ಉಪಯೋಗಿಸಿ ಪರೀಕ್ಷಿಸಿರಿ ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಒಫ್ ಮೇರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ

ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳಕರ ಬಂಧುಗಳು, ಒಸವನಗಲ್ಲಿ, ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೊಂದು ಶೀಸೆಯನ್ನು ಕೂಡಲೇ ವಿ ಪಿ ದ್ವಾರಾ ರವಾನಿಸುವದು.

ಶೀಸೆಯೊಂದರ ಕ್ರಯ ರೂ. 1-0-0, ಅ ವೆ 0-4-0 ಬೇರೆ, 3 ಶೀಸೆಗಳ ಕ್ರಯ ರೂ. 2-10-0, ಅ. ವೆ. 0 7 0 ಬೇರೆ

ಸೂಚನೆ — ಅನೇಕ ದುರ್ವಿವೇಕರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬಳಕೆಯಿಂದ ತಮಗೆ ಅಷ್ಟಲ್ಲ ಸಹಾಯ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ"ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭದೊರಕ ತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು ಅಂಥಾ ಸಂದರ್ಭದಲ್ಲಿ ಮೋಸ ಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ, ಅದರಲ್ಲಿ ಇದು ಇಲ್ಲವೆಂದರೆ ತಪ್ಪಿಲ್ಲದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವದನ್ನು ದುಹರುಬಾನ್ ಮಾಡಿದರೆ ನೀವು ಹಂಚಳರ ಬಲೆಯಲ್ಲಿ ಸಿಲುಕಬೇಕಾದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ

ಅತೀ ಮನೋಹರವಾದ ಸುರಭಿಯು!

ಒಟ್ಟೋ ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೊಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ಸ್ವಾಭಾವಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳಕೊಳ್ಳುವುದು. ಇಂದೇ ಒಂದು ಶೀಸೆಯನ್ನು ತರಿಸಿಕೊಳ್ಳಿರಿ.

ಸಣ್ಣ ಶೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ಮೀಡಿಯಂ) ಶೀಸೆ 1ಕ್ಕೆ 0-12-0. ಅರ್ಧ ಔನ್ಸಿನ ದೊಡ್ಡ ಶೀಸೆಯ ಬೆಲೆ ರೂ. 2-0-0 ಅಂಚೆಯ ವೆಚ್ಚ ಬೇರೆ 0-4-0. ಒಟ್ಟೋ ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12-0

ಅಮೇರಿಕದ ವಿಶಿಷ್ಟತೆ.

ಪ್ರೊಫೆಸರ್ ಜೇಮ್ಸರವರ "ಇಲೆಕ್ಟ್ರೋ ಟೋನಿಕ ಪರ್ಲ್ಸ್" ಅಥವಾ ವಿದ್ಯುಚ್ಛಕ್ತಿಯ ವಾಜೀಕರಣ ಮೌಕ್ತಿಕಗಳು,

ಇವು ಶಕ್ತಿಹೀನತೆಯಿಂದ ಉಂಟಾಗುವ ರೋಗಗಳನ್ನು, ನಿದ್ರಾನಾಶವನ್ನೂ

ಪಕ್ಷವಾತಗಳನ್ನೂ, ವಾತೋನ್ಮಾದವನ್ನೂ, ಅಪಸ್ಮಾರವನ್ನೂ ಧಾತುದೌರ್ಬಲ್ಯವನ್ನೂ ನಾಶಮಾಡುತ್ತದೆ. ಕಳೆಗುಂದಿ ಬರುವ ಸ್ಮೃತಿಶಕ್ತಿಯನ್ನು ಉದ್ದೀಪಿಸುತ್ತವೆ ಬುದ್ಧಿಯ ಮತ್ತು ಮೆದುಳಿನ ಮೂಢತೆಯನು ಹೋಗಲಾಡಿಸುತ್ತವೆ; ಕಲಿಯುವದಕ್ಕೆ ಅಥವಾ ಕಾರ್ಯಗೈಯುವದಕ್ಕೆ ಬಿಡಲೊಲ್ಲದ ಅಶಕ್ತಿಯನ್ನು ಶಕ್ತಿರೂಪವಾಗಿ ಪರಿಣಮಿಸುವಂತೆ ಮಾಡುತ್ತವೆ ಸರ್ವಾಂಗದಲ್ಲಿ ತೋರಿಬರುವ ಶ್ರಮವನ್ನೂ, ಅಕಾಲ ಕಾಲದಲ್ಲಿ ಸಂಭವಿಸುವ ಗ್ಲಾನಿಯೂ ಅತಿಶ್ರಮದಿಂದ ಮತ್ತು ದುರ್ವ್ಯಸನದಿಂದ ಉಂಟಾಗುವ ಕ್ಷೀಣಚೇತನೆಯೂ ಈ ಮುತ್ತುಗಳನ್ನು ಸೇವಿಸುವದರಿಂದ ಅಡಗಿ ಹೋಗುತ್ತವೆ. ಇವುಗಳಲ್ಲಿ ವೀರ್ಯವಾಯುಗಳಾದ ಮತ್ತು ಮೆದುಳನ್ನು ಬೆಳೆಯಿಸಿ ವೃದ್ಧಿಗೈಯಲಾಪ ಪದಾರ್ಥಗಳಿರುವದರ ದೆಸೆಯಿಂದ ಇವು ವಿದ್ಯಾವ್ಯಾಸಂಗಗಳಿಗೂ, ಧರ್ಮೋಪದೇಶಕರಿಗೂ, ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಕೀಲರಿಗೂ ಗುಮಾಸ್ತರಿಗೂ, ಉಸ್ತಾದರಿಗೂ, ಪ್ರಾಯಿಕವಾಗಿ ಸಕಲ ಕಾರ್ಯಗಳಲ್ಲಿ ನಿರತರಾಗಿರುವ ಎಲ್ಲರಿಗೂ ಅಗತ್ಯವಾಗಿವೆ. ಶಾರೀರಿಕ ಪ್ರವೃತ್ತಿಯವರಿಗೆ ಮತ್ತು ಮಾನಸಿಕ ಪ್ರವೃತ್ತಿಯವರಿಗೆ ಒಂದೇ ತೆರನಾಗಿ ಅವಶ್ಯಕವಾಗಿರುತ್ತವೆ.

ಮೇಹಶೂಲದಲ್ಲಿ ಮತ್ತು ಮುಪ್ಪಿನಿಂದ ಉಂಟಾಗುವ ವೀರ್ಯಹೀನತೆಯಲ್ಲಿ ಈ ಮೌಕ್ತಿಕಗಳ ಗುಣವಾದರೋ ನಿಸ್ಸಂಶಯವು. ಇಂದ್ರಿಯಗಳ ಸುಖವೂ ಇವುಗಳ ಸೇವನೆಯಿಂದ ಕೂಡಲೇ ಲಭಿಸುತ್ತವೆ.

ರೋಗಜನ್ಯವಾದ ಸ್ರಾವವನ್ನು ಗುಣಮಾಡಿ, ರೋಗದಿಂದ ಈಳಿದ ದೇಹಭಾಗಗಳನ್ನು ಇವು ಮರಳಿ ರಚನಗೈಯುತ್ತವೆ ರೋಗದಿಂದ ಮುದುರಿ ಹೋದ ಅಥವಾ ಒಸವಳದು ಕುಂದಿದ ಅವಯವಗಳಿಗೆ ಇವು ಪುನಃ ಧಾತುಪುಷ್ಟಿಯನ್ನಿತ್ತು ಸಚೇತನಗೈಯುತ್ತವೆ. ಈ ಗುಳಿಗೆಗಳ ಅದ್ಭುತಕರವಾದ ಸುಫಲವು ಇವುಗಳನ್ನು ಸೇವಿಸುವದಕ್ಕೆ ತೊಡಗಿದ ದಿನದಿಂದಲೇ ಬೋಧೆಯಾಗುತ್ತದೆ. ಇವುಗಳನ್ನು ಸೇವಿಸಿದ ದಿನವೇ ನರಗಳಲ್ಲಿಯೂ ಬುದ್ಧಿಶಕ್ತಿಯಲ್ಲಿಯೂ ಚೇತನವು ತೋರಿತು ದೇಹದಲ್ಲಿ ಧೈರ್ಯ, ಬಲ, ಸುಖ, ಇವುಗಳ ಸಂಚಾರವಾಗುತ್ತದೆ. ಜೀರ್ಣಶಕ್ತಿಯು ಉದ್ದೀಪಿತವಾಗಿ ಹಸಿವು ಆಶ್ಚರ್ಯಕರವಾಗಿ ಆರೋಗ್ಯಕಾಲದಲ್ಲಿ ತೋರಿಬರುವದಕ್ಕಿಂತ ಹೆಚ್ಚಾಗಿ ತೋರಿಬರುತ್ತದೆ. "ಜಾಡರ"ಯು ಕ್ರಮವನ್ನು ಅನುಸರಿಸುತ್ತದೆ; ಮುಖವು ಶುಭ್ರವಾಗಿ ರಕ್ತಚಲನದ ಕುರುಹುಗಳನ್ನು ಸರಿಯಾಗಿ ತೋರ್ಪಡಿಸುತ್ತದೆ; ಕಣ್ಣುಗಳು ಉಜ್ವಲವಾಗಿ ದೃಷ್ಟಿಯು ಪ್ರಭೆಯನ್ನು ಹೊಂದಿ ಸೂಕ್ಷ್ಮವಾಗುತ್ತದೆ; ಗತಿಯು ದೃಢವಾಗುತ್ತದೆ. ಶೀಲವು ಪ್ರಸನ್ನವಾಗುತ್ತದೆ, ಬುದ್ಧಿಯು ವಿಶೇಷವಾಗಿ ಅನಲಸವಾಗುತ್ತದೆ; ಸ್ಮೃತಿಶಕ್ತಿಯು ಗ್ರಾಹಿಯಾಗುತ್ತದೆ; ಮತ್ತು ದೇಹದ ಪುಷ್ಟಿಯು ವೃದ್ಧಿಯಾಗಿ ಶಕ್ತಿಯು ದಿನೇ ದಿನೇ ಮುಂಚಿನಂತೆಯೇ ತುಂಬಿಬರುತ್ತದೆ.

25 ಗುಳಿಗೆಗಳ ಸೀಸೆ 1ಕ್ಕೆ ಬೆಲೆ ರೂ. 1-4-0. 40 ಗುಳಿಗೆಗಳಿರುವ ಸೀಸೆ 1ಕ್ಕೆ ರೂ. 2-0-0 ಟಪ್ಪಾಲ್ ಖರ್ಚು ಸೀಸೆ ಒಂದಕ್ಕೆ ಆಣೆ 4.

ನಾವು ಕೇಳಿಕೊಳ್ಳದೆ ನಮಗೆ ಹಲವು ಮಹನೀಯರು ಬರೆದ ಪ್ರಮಾಣಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು.

ದಿವಾಕರ ಕೃಷ್ಣಾಜಿ ದಾಹರಿ, ರಾ. ಶಾರಸಾವಣೀ, ತಾ, ರಾಮಟೇಕ, ಜಿ. ನಾಗಪುರ.—"ತಾವು ನಮಗೆ ಕೆಲವು ಸಮಯದ ಹಿಂದೆ ಕಳುಹಿಸಿದ "ಶಕ್ತಿವರ್ಧಕ" ಗುಟಿಕೆಗಳಿಂದ ನಮಗೆ ಉತ್ತಮವಾದ ಆರೋಗ್ಯಲಾಭವು ದೊರಕಿರುತ್ತದೆ; ಅವುಗಳ ಇನ್ನೊಂದು ಬಾಟಲಿಯನ್ನು ಕಳುಹಿಸಿಕೊಡಿರಿ.

2 ತುಕಾರಾಮ ಸಖಾರಾಮ, ಕೇಶಿಯರ್, ಬಂಗಾಲ ನಾಗಪುರ ರೈಲ್ವೆ, ಗೋರಖಪುರ — ನಾನು ತಮ್ಮಿಂದ ಪ್ರೊ. ಜೇಮ್ಸರ "ವಿದ್ಯುತ್ ಶಕ್ತಿವರ್ಧಕ" ಗುಟಿಕೆಗಳ ಮೂರು ಡಬ್ಬಿಗಳನ್ನು ತರಿಸಿಕೊಂಡಿದ್ದೆನು. ಅವುಗಳಿಂದ ನಾನು ಪುಷ್ಕಳವಾದ ಸೌಖ್ಯಲಾಭ ಹೊಂದಿರುವೆನು. ಆದ್ದರಿಂದ ಇನ್ನು ಮೂರು ಡಬ್ಬಿಗಳನ್ನು ಕಳುಹಿಸಿಕೊಡಿರಿ"

3 ಅಮೀರ್ ವಲ್ಲದ ಮಹಮ್ಮದ ಖಾಯಾ ಇಬ್ರಾಹಿಮ್ ಪಾಟೀಲ್, ಪನವೇಲ್—"ತಾವು ಕಳುಹಿಸಿದ ಪ್ರೊ. ಜೇಮ್ಸರ ಗುಟಿಕೆಗಳಿಂದ ನನಗೆ ಆಶ್ಚರ್ಯಕಾರಕವಾದ ಗುಣವು ದೊರಕಿದೆ, ಅವನ್ನು ಪುನಃ ರವಾನಿಸಿರಿ"

4 ಬಿ. ಆರ್. ಚಾಕೆತ್ತು, ಡಿಸ್ಟ್ರಿಕ್ಟ್ ಕೋರ್ಟ್ ವಕೀಲ, [illegible] — "ಪ್ರೊ. ಜೇಮ್ಸರ ಗುಟಿಕೆಗಳ ಸೀಸೆಯೊಂದನ್ನು ತಮ್ಮಿಂದ ತರಿಸಿಕೊಂಡೆನು. ಅವುಗಳನ್ನು ಉಪಯೋಗಿಸಿ ನಾನು ಒಳ್ಳೇ ಲಾಭವನ್ನು ಪಡೆದೆನು. ಇನ್ನೆರಡು ಸೀಸೆಗಳನ್ನು ಕಳುಹಿಸಿರಿ."

5 ಮಾನಾಜೀ ನರಸಿಂಗರಾವ್, ಸಂಸ್ಥಾನ ಪಲಟನ — ಪ್ರೊ. ಜೇಮ್ಸರ ಗುಟಿಕೆಗಳಿಂದ ನಾನು [illegible]ಗುಣವನ್ನು ಹೊಂದಿರುವದರಿಂದ, ಅವುಗಳ ಇನ್ನೆರಡು ಸೀಸೆಗಳನ್ನು ರವಾನಿಸಿರಿ.

THE ANGLO INDIAN DRUG & CHEMICAL COMPANY, 16 MARKET BOMBAY 2.

ಪ್ರಧಾನ ಏಜಂಟರು: **ದಿ ಊಲನ್ ಮಾರ್ಟ್, ಮಂಗಳೂರು ದ. ಕನ್ನಡಾ.**

Printed & Published by V. S. Kamath at the Mangalore Trading Association's Sharada Press, Mangalore

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ — ವರುಷ ಒಕ್ಕೆ ರೂ. 1—4—0. ಟಪ್ಪಾಲು ಹಾಸಲು ಸೇರಿ ರೂ. 2—1—0

ಸ್ವರ. IX — ಮಂಗಳೂರು ತಾ 30ನೇ ಜುಲಾಯಿ ಶುಕ್ರವಾರ 1915. — ಸಂಚಿಕೆ 31

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು

ಸೇಶಿಂತಾನ್.

(ರಿಜಿಸ್ಟರ್ಡ್)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದ್ದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೇಶಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

1. ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ ತಲೆಯುನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು.

2. ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತು ಮೆದುಳಿನ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು.

3. ಊಟವಾದನಂತರ ಅಥವಾ ಫಲಾಹಾರವನ್ನುಪಯೋಗಿಸಿದಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತ ಬಂದಲ್ಲಿ ತಿಂದನ್ನವು ಜೀರ್ಣವಾಗುವದಲ್ಲದೆ, ಕಾಲಪ್ರವೃತ್ತಿಯು ಕ್ರಮವಾಗಿ ಆಗುತ್ತದೆ ಯಾವರೋಗಕ್ಕೂ ಅಸ್ವಸ್ಥವುಂಟಾಗುವದಿಲ್ಲವು.

4. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ, ಕೆಮ್ಮನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು.

5. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ ಎಲ್ಲ ಉದ್ಯೋಗದ ದೊಡ್ಡ ಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವವು.

6. ಬೇಸಿಗೆ ಮತ್ತು ಚಳಿಗಾಲಗಳಲ್ಲಿ ಎಲ್ಲ ತರದ ರೋಗವನ್ನೂ ಒಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು

7. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು.

ಅದುಕಾರಣ ಇಂತಹ ಗುಣಕಾರಿಯಾದ ಸೇಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ.

40 ಮಾತ್ರೆಗಳ ಪೊಟ್ಟ 1ಕ್ಕೆ 0—2—0	200 ಮಾತ್ರೆಗಳ ಪೊಟ್ಟ 1ಕ್ಕೆ 0—7—0	80 ಮಾತ್ರೆಗಳ ಟಿನ್ 1ಕ್ಕೆ 0—4—0	550 ಮಾತ್ರೆಗಳ ಮರದಪೆಟ್ಟಿಗೆ 1ಕ್ಕೆ 1—0—0
95 „ „ „ 0—4—0	200 „ ಟಿನ್ „ 0—9—0	100 „ ಶೀಸೆ „ 0—4—6	1200 „ „ „ 2—0—0

1 ರೂಪಾಯಿಗೆ ಕಡಿಮೆಯಾಗಿ ವಿ. ಪಿ. ಮೂಲಕ ಕಳುಹಿಸಲ್ಪಡುವುದಿಲ್ಲವು. ಮತ್ತು ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

☞ ಭರತಖಂಡ, ಬರ್ಮ, ಮತ್ತು ಸಿಲೋನ್ ಈ ಪ್ರಾಂತ್ಯಗಳ ಎಲ್ಲಾ ಭಾಗದಲ್ಲೂ ಏಜಂಟರು ಬೇಕಾಗಿದೆ.

ಸೋಲ್ ಏಜಂಟ್ಸ್:—ಸೇಶಿಂತಾನ್ ಡಿಪೋ,

ಪ್ರಿನ್ಸೆಸ್ ಸ್ಟ್ರೀಟ್ ಬೊಂಬಾಯಿ ನಂ. 2.

FREE! FREE!!

S.T.A. Perpetual Calendar.

Beautiful and Artistic.

As. 10 each. Postage Extra.

HOW TO GET IT FREE?

Apply with Postage.

Eucalyptus Oil.

(PURE & BEST.

As. 4 per 1 oz. bottle.

Packing & postage Extra.

M. S. RAO & Co.,

Bangalore City.

ಯಂ. ಯಸ್. ರಾವ್ ಕಂಪೆನಿ.,

ಬುಕ್‌ಸೆಲ್ಲರ್ಸ್, ಅವಿನ್ಯೂರೋಡ್, ಬೆಂಗಳೂರು ಸಿಟಿ.

ಕನ್ನಡ ಹೊಸ ಪುಸ್ತಕಗಳು — ಕಾದಂಬರಿಗಳು

ಸಂಗೀತಸಮಯಸಾರ, ಹೊಸ ಪುಸ್ತಕ	1—4
ಪ್ರಬಂಧ ಮುಕ್ತಾವಳಿ, ಕನ್ನಡ ವಾಕ್ಯರಚನೆಯ ವಿಧಾನವನ್ನು ಹೊಸ ಮತ್ತು ಸುಲಭವಾದ ರೀತಿಯಲ್ಲಿ ವಿವರಿಸಿದೆ)	0—12
ಅರೇಬಿಯನ್ ನೈಟ್ಸ್, ಹೊಸ ಮುದ್ರಣ	2—2
ಮುದ್ರಾಮಂಜೂಷ ಡಿ.	1—10
ಭಕ್ತವಿಜಯ, (ವಿಷ್ಣು ಭಕ್ತರ ಕಥೆಗಳು) ಹೊಸ ಮುದ್ರಣ	3—2
ಮೈತ್ರೇಯಿ, (ಅನೇಕ ರಹಸ್ಯಗಳು ವಿವರಿಸಲ್ಪಟ್ಟಿವೆ)	0—5
ಮಾಲತೀ[illegible] ಹೊಸ ಮುದ್ರಣ	0—[illegible]
ಸ್ತ್ರೀಧರ್ಮನೀತಿ, (ಸ್ತ್ರೀಯರಿಗೆ ಅತ್ಯಾವಶ್ಯಕವಾದದ್ದು)	0—9
ದುರ್ಗಾದಾಸ (ಬಂಗಾಳಿ ನಾವಿಲ್)	0—12
ಪ್ರಫುಲ್ಲ, ಡಿ (ಪತ್ತೇದಾರಿ ಕಥೆ)	0—12
ವಿಷವಿವಾಹ, ಹೊಸ ಮುದ್ರಣ	0—4
ಶೋಭನೆ, ಡಿ.	0—12
ಚಂದ್ರಪ್ರಭಾ, ಹೊಸ ಕಾದಂಬರಿ	0—12
ಚಂಪಕ	0—4
ಪ್ರಿಂರೋಜ ವಿಜಯಂ, ಗೋಲ್ಡ್‌ಸ್ಮಿತ್ ಕವಿಯ (ವಿಕಾರ್ ಆಫ್ ವೇಕ್‌ಫೀಲ್ಡ್‌ನ ಭಾಷಾಂತರ)	[illegible]

ಯಂ. ಸುಬ್ಬರಾವ್, ಶಂಕರಪುರಂ, ಬೆಂಗಳೂರು ಸಿಟಿ—ಈ ವಿಳಾಸವನ್ನು ಮೇಲ್ಕಂಡಂತೆ ಬದಲಾಯಿಸಿದೆ.

ನಮ್ಮಲ್ಲಿ ಎಲ್ಲಾ ವಿಧವಾದ ಕನ್ನಡ ಕಥೆಗಳೂ, ಬಿ. ವೆಂಕಟಾಚಾರ್ಯರ ನಾವಿಲ್‌ಗಳೂ, ಗವರ್ನಮೆಂಟ್ ಸ್ಕೂಲು ಪುಸ್ತಕಗಳೂ ದೊರೆಯುತ್ತವೆ. ಪುಸ್ತಕದ ಪಟ್ಟಿ ಪ್ರಿಂಟಾಗುತ್ತಿದೆ.

ಯಂ. ಯಸ್. ರಾವ್ ಎಂಡ್ ಕೊ.,

ಬೆಂಗಳೂರು ಸಿಟಿ.

ESTABLISHED JULY 1906.

THE CANARA BANK, LIMITED, MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು;

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs . ..	300,000—0—0
Issued Capital	225,000—0—0
Subscribed Capital	219,100—0—0
Paid up Capital	194,100—0—0
Deposits	421,405—9—6
Reserve Fund	33,500—0—0

Besides the uncalled capital of Rs. 25,000/ 25% of the net profits are added annually to the Reserve Fund. Rs. 11,685/ have been invested in Government Paper of the face value of Rs 22,500/-

Dividends of not less than 6% paid during the past years and a bonus of 1% to 2% paid in addition during the last three years.

Fixed Deposits of Rs 50/ and above in multiples of Rs. 5/ received for 3, 6, 12 and 24 months @ 4, 4½, 5 and 5½% respectively at the discretion of the managing committee

Short-notice Deposits requiring one weeks notice of withdrawal after one month received @ 2½% per annum at the discretion of the managing committee

Current Deposit Account opened free of charge

Savings Bank Account opened for any sum not less than 4 As and multiples thereof and interest paid @ 4½%

Loans granted on proper securities and pledges

Sealed Parcels for safe custody received on a moderate charge

Canara Bank Ltd,
Mangalore, 1st July 1915

ನಿಯಮಿತ ಮೂಲ ಧನವು ರೂಪಾಯಿ	300,000—0—0
ಹುಟ್ಟಿಬಂದ ಮೂಲ ಧನವು ,, ...	225,000—0—0
ಪ್ರತಿಜ್ಞಾತ ಮೂಲ ಧನವು ,, ...	219,100—0—0
ಆಗತ ಮೂಲ ಧನವು ,, ...	194,100—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು ...	421,405—9—6
ರಕ್ಷಿತ ಧನವು	33,500—0—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳ ಲ್ಪಡದಿರುವ ರೂ 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 21,685—0—0 ಸರಕಾರದ ರೂ. 22,500ರದ ಭದ್ರಪತ್ರಗಳಲ್ಲಿ ಠೇವಣಾತಿ ಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲು ಮಾಲಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮ ವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬ ಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾ ದಾವು

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂ ಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳ ಲಾದಾವು.

"ಕರೆಂಟ್ ಎಕೌಂಟ್" ಎಂಬ ಹಾಲ್ತಿ ಠೇವಣಾತಿಗಳು ಠೇವಣೆದಾರರ ಅನುಕೂ ಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋ ಣಾದೀತು ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ

ಮೊಹರು ಹಾಕಲ್ಪಟ್ಟ ಡಬ್ಬಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

P. Gopal Naik,
Secretary.

ಅತ್ಯುಪಯುಕ್ತವಾದ ಪುಸ್ತಕಗಳು.

ವೆಂಕಟಗಿರಿ ಮಹಾತ್ಮೆ (ಭಾಮಿನಿ ಷಟ್ಪದಿ)	ರೂ. ೧—೮—೦.
ಭೂತಾಳಪಾಂಡ್ಯರಾಯನ ಕಟ್ಟು	,, ೧—೪—೦.
ರೆಡಿರೆಕ್ಕನರ್ ಎಂಬ ಸುಲಭ ರೀತಿಯಿಂದ ಬಡ್ಡಿ ಇತ್ಯಾದಿಗಳನ್ನು ಲೆಕ್ಕಿಸುವ ಪುಸ್ತಕ	,, ೩—೮—೦.
ಹನುಮದ್ರಾಮಾಯಣ	,, ೨—೧—೦.
ಕೃಷ್ಣಾಕುಮಾರಿ (ನಾವೆಲ್)	,, ೦-೧೦—೦
ಸತ್ಯರಾಜಾ ಪೂರ್ವದೇಶ ಯಾತ್ರೆಗಳು	,, ೦—೮—೦.
ಸದಾಹಾರ ವಿವೇಚನೆ	,, ೦—೨—೦.
ಮಹಾರಾಣಿ ಗೃಹಶೀಲೆ	,, ೦—೩—೦.
ಪೇಶ್ವೆ ನಾರಾಯಣರಾವ್	,, ೦—೩—೦.
ಬಾಲಿಕಾ ನೀತಿಮಾಲಿಕೆ	,, ೦—೨—೦.

ವಿಳಾಸ —

ಮ್ಯಾನೇಜರ್,
ಶಾರದಾ ಛಾಪಖಾನೆ,
ಮಂಗಳೂರು.

ರೂ 501 ಉಚಿತ!

ಒಲೂನ್ ಬ್ರೇಂಡ್ ಸಾಬೂನ್.

5 ನಿಮಿಷದೊಳಗೆ ಕೂದಲನ್ನು ಉದುರಿಸಿಬಿಡುವದಿಲ್ಲವೆಂಬದನ್ನು ಖಚಿತಪಡಿಸು ವವರಿಗೆ ರೂ. 501 ಉಚಿತವಾಗಿ ಕೊಡೋಣಾಗುವದು. ಇದರಿಂದ ಚರ್ಮವು ಕೆಡದು. 3 ಸಾಬೂನುಗಳುಳ್ಳ ಪೆಟ್ಟಿಗೆ 1ಕ್ಕೆ 0—12—0; 2 ಪೆಟ್ಟಿಗೆಗಳ ವರೆಗೆ ವಿ ಪಿ ಚಾರ್ಜು 0—5—0

ರೂ. 2500 ಉಚಿತ!

ಸಿರಾಜಿ ಹೇರ್ ಡೈ ಎಂಬ ಕೇಶತೈಲವು ಬಿಳೀ ಮತ್ತು ನರೆತ ಕೂದಲನ್ನು ಕಪ್ಪು ಮಾಡುವದಿಲ್ಲವೆಂದು ತೋರಿಸುವವರಿಗೆ ರೂ. 2500 ಉಚಿತ.

ಈ ತೈಲವನ್ನು ಏನೊಂದು ಬಾಧಕಬಾರದಂತೆ ಅತಿ ನಿಪುಣತೆಯಿಂದ ತಯಾರು ಮಾಡಿರುತ್ತದೆ. ಇದರಿಂದ ಚರ್ಮದಲ್ಲಿ ಕಲೆಯಾಗದು. ಪೆಟ್ಟಿಗೆ 1ಕ್ಕೆ ರೂಪಾಯಿ 1—0—0, ವಿ. ಪಿ. ಬೇರೆ

ವಿಳಾಸ:— ಎಫ್. ಎಲ್. ದವಾವಾಲಾ,
ಮಿರ್ಜ ಸ್ಟ್ರೀಟ್, ಮುಂಬಾಯಿ.

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡಿಸಬೇಕಾಗಿದೆ.

F. L. Davawala,
Mirza Street, BOMBAY.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಕಾಂತಾ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳ ೮ ಪಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ರೂ ೧೦ ಆಣೆ

೨ ಪ್ರಮೇಹರಿಪು ಬಿಂದು ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಚಿತವಾಗಿ ಗುಣ ಕೊಡುವದು ಬಾಟ್ಲಿಗೆ ೨-೮-೦

೩. ಕುಂಕುಮೇರಳ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ ರಾತಲಿಗೆ ೨ ರೂ

೫. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ಕಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು ತೊಲೆಗೆ ೨ ರೂ.

ತಮ್ಮ ವಿಳಾಸ:—ಬಿ. ಎಮ್. ನಾಥ್ ಮತ್ತು ಕಂಪೆನಿ,
ವೆಪರಿ ಪೋಸ್ಟು ಮದರಾಸು.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ಪರಿಸೆಯು ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುರ್ಲುಶ್ವಾಸ, ಕಫ, ಕ್ಷಯಗಳ ಮೇಲೆ ಅನುಭಾವವು. ರಾತಲಿಗೆ ೨ ರೂ.

೧೦ ಕಾಲ್ಮಲೀ ಪಾಕ ಸ್ವಪ್ನಾವಸ್ಥೆ, ಮೂತ್ರಕೃಚ್ಛ, ಧಾತುಪತನ, ದೌರ್ಬಲ್ಯಗಳು ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು ರಾತಲಿಗೆ ೨ ರೂ.

೧೧ ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨ ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು ಉರಿಯುವದಿಲ್ಲ ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೩ ಸಪ್ತೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ

೧೪ ಪ್ರಜ್ಞಾ ಸಾರಸ್ವತ ಚೂರ್ಣ ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣಶಕ್ತಿಯನ್ನು ಬೆಳೆಯಿಸುವದೂ ನಾಲಿಗೆಗೆ ಪಟುತ್ವವನ್ನು ಕೊಡುವದೂ, ಕಂಠಸ್ವರವನ್ನು ಮಧುರವಾಗಿರಿಸುವದೂ ವಿದ್ಯಾರ್ಥಿಗಳಿಗೆ ಅತ್ಯುತ್ತಮವು ೧೦ ತೊಲೆಗೆ ೨ ರೂ. ೮ ಆಣೆ

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೋಕ್ತವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಪಟ್ಟಿಯ ಕೆಟಲಾಗು ನೋಡಿರಿ ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು

B. M. Nath & Co, *Ayurvedic Chemists*,
Vepery Post, MADRAS.

ಬನ್ನಿರಿ! ನೋಡಿರಿ!! ತಿಳಿಯಿರಿ!!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.

ಕಲ್ಕತ್ತ ಮಿಶ್ಯನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಯನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಪೆಬ್ಬ ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ನಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ,
ಹಂಪನ್‌ಕಟ್ಟೆ, ಮಂಗಳೂರು

ಯುನಿವರ್ಸೆಲ್ ಎಸ್ಯುರೆನ್ಸ್ ಕೊ, ಲಿಮಿಟೆಡ್.

ಹೆಡ್ ಆಫೀಸು:—191, ಬೌ ಬಜಾರ, ಕಲ್ಕತ್ತಾ

ಸರಕಾರದ ಭದ್ರತೆಯ ಮೇಲ್ವಿಚಾರದಲ್ಲಿ ನಡಿಯುತ್ತಿರುವುದು.

ಭಂಡವಾಳ ರೂ 10,00,000.

ಈ ತನಕ ಕೊಡೋಣಾದ ವಿಮೆ ಹಕ್ಕುಗಳ ಮೊಬಲಗು ಶುಮಾರು 8,00,000.

ಫಂಡು—ರೂ. 3,00,000ಕ್ಕೆ ಮಿಕ್ಕಿದೆ.

ಸರಕಾರದವರ ಬದ್ರತೆಯಲ್ಲಿ ರೂ. 50,000ವಿರುವುದು

ಚೀಫ್ ಇನ್ಸೂರೆನ್ಸ್ ಸ್ಕೀಮ್ ಎಂಬ ವೈದ್ಯಪರೀಕ್ಷೆ ಇಲ್ಲದೆ ವಿಮೆ ಉತ್ತರಾಯಿಸಿಕೊಳ್ಳಬಹುದಾದ ಸರ್ವರಿಗೂ ಸಾಧ್ಯವಾದ ಸುಲಭ ಕ್ರಮ.

ಈ ಪ್ರಾಂತ್ಯಗಳಲ್ಲಿ ಯಾವ ವಿಮೆ ಕಂಪೆನಿಗಳಲ್ಲಾದರೂ ಈತನಕ ಇಂಥಾ ಅಗ್ಗದರಗಳ ವಿಮೆ ಉತ್ತರಾಯಿಸುವ ಏರ್ಪಾಡೇ ಇರುವದಿಲ್ಲ. ಭಾರತೀಯರಲ್ಲಿ ವಿಶೇಷವಾಗಿರುವ ಬಡವರಗೋಸ್ಕರವೇ ಈ ಕ್ರಮವು ಏರ್ಪಡಿಸಲ್ಪಟ್ಟಿರುತ್ತದೆ ಪ್ರೊವಿಡೆಂಟ್ ಫಂಡುಗಳ ಕ್ರಮದ ಪ್ರಕಾರ ಮುಂದಕ್ಕೆ ಸಂಭವಿಸಬಹುದಾದ ಅನನುಕೂಲತೆಗಳು ಇದರಲ್ಲಿರವು ವಿಮೆ ಉತ್ತರಾಯಿಸಿಕೊಳ್ಳುವ ಈ ನವೀನ ಅಗ್ಗ ದರಗಳ ಏರ್ಪಾಡು ಬಹಳ ಉಪಯುಕ್ತವಾದದ್ದು ಎಂತ ವಿಮೆ ಸಂಘಗಳ ವಿಶೇಷ ಮಾಹಿತಿದಾರರ ಅಭಿಪ್ರಾಯವಿರುವುದು. ನಿಶ್ಚಿತವಾದ ವಿಮೆ ಮೊಬಲಗುಗಳ ರೂಪಾಯಿ ಮತ್ತು ಅರ್ಧ ರೂಪಾಯಿಗಳ ಪೊಲಿಸಿಗಳು ಈ ಕ್ರಮದ ಮೇರೆಗೆ ಕೊಡೋಣಾಗುವವು

ಸಾಮಾನ್ಯ ವಿಮೆ ಇಲಾಖೆ.

ಈ ಕಂಪೆನಿಯ ಈ ಇಲಾಖೆಯಲ್ಲಿ ವಿಮೆ ಉತ್ತರಾಯಿಸಿಕೊಳ್ಳುವವರ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಲಿರುವುದು. ಸಾಧ್ಯವಿರುವ ಅತ್ಯಂತ ಕಡಮೆಯ ದರಗಳು ಸಂಪೂರ್ಣವಾದ ಭದ್ರತೆಯು ಈ ಇಲಾಖೆಯ ವಿಶೇಷ ಪ್ರಯೋಜನಗಳಾಗಿರುವುದು. ಕಂಪೆನಿಯ ಲೆಕ್ಕದ ಸ್ಥಿತಿಗತಿಯನ್ನು ತೋರಿಸುವ ಮೊಬಾಬಿಲಿ ಪಟ್ಟಿಗಳನ್ನು ಈ ಕಂಪೆನಿಯ ವಿಷಯ ಪತ್ರಗಳ ಅಭಿಪ್ರಾಯವೇನೆಂಬುದನ್ನೂ ತರಿಸಿ ನೋಡಿರಿ.

ಒಳ್ಳೇ ಚಟುವಟಿಕೆಯ ಜಾಣರಾದ ಏಜಂಟರುಗಳು ಬೇಕಾಗಿರುವರು. ಶರ್ತಗಳ ಬಗ್ಗೆ ಕೆಳಗಣ ವಿಳಾಸಕ್ಕೆ ಬರಕೊಳ್ಳಬಹುದು.

ವಿಳಾಸ:— ಲಕ್ಷ್ಮಣರಾವ್ ಬ್ರದರ್ಸ್,
ಚೀಫ್ ಏಜಂಟ್ಸ್, ...

ನೇಟಿವ್ ಡಾಕ್ಟರ್ಸ್ ಮೂಲ್ಕಿ ಗಣಪಯ್ಯ ಎಂಡ್ ಸನ್ಸ್‌ರವರ

ಔಷಧಗಳು.

ಮಹಾಮದನ ಕಾಮೇಶ್ವರೀ ಲೇಹ್ಯ:—ಬಹಳ ಶ್ರಮಪಟ್ಟು ಕೆಲಸ ಮಾಡುವವರೂ, ಲೇಖಕರೂ, ಮತ್ತು ಇಂದ್ರಿಯ ದೌರ್ಬಲ್ಯ ಅಜೀರ್ಣ, ಎದೆನೋವು, ಶರೀರಗಳ ಘಳಿತದಿಂದಾದ ನಿಶ್ಶಕ್ತಿ ಮೊದಲಾದ ಪ್ರಕೃತಿಯುಳ್ಳವರೂ ಇದನ್ನು ಸೇವಿಸಿದ್ದಲ್ಲಿ ಧಾತುಪುಷ್ಟಿಯಾಗಿ ಮುಖವು ಕಾಂತಿಗೊಳಿಸವದು. ಸೇವನಾ ಕ್ರಮ—ಅಭ್ಯಾಸವುಳ್ಳವರು 1 ಪಾವಲಿ ತೂಕ ಯಾ ಗೋಲಗಾತ್ರ ಅಭ್ಯಾಸಿಸುವವರು 2 ಆಣೆ ತೂಕ ರಾತ್ರೆ ಊಟದ ಮೇಲೆ ಸೇವಿಸಿ ಹಾಲು ಕುಡಿಯತಕ್ಕದ್ದು

1 ಸೇರಿನ ಡಬ್ಬಿಗೆ ಕ್ರಯ. 2—0—0

ಚಂದ್ರೋದಯಾವರ್ತಿ:—ಕಣ್ಣಿಗೆ ಅಂಜನ ಮಾಡಿದ್ದಲ್ಲಿ ಬೆಳೆದ ದುರ್ಮಾಂಸ, ತಿಮಿರ, 3 ವರ್ಷದ ಹೂವು, ಇರಳುಕಣ್ಣು, ತಾಚಬಿಂದು ಗುಣ

ಕ್ರಯ: ರೂ 0—12—0

ಮಹಾಜ್ವರಾಂಕುಶ:—ದಿವಸಕ್ಕೊಮ್ಮೆ ದ್ವಿತೀಯ, ತೃತೀಯ, ಚಾತುರ್ಥಿಕ ಜ್ವರಗಳ ಮೇಲೆ ರಾಮಬಾಣ. ಡಜನ್ ಕ್ರಯ. 0—8—0,

ಮೇಹಮುದ್ಗರವಟಿ.—20 ನಮೂನೆಯ ಪ್ರಮೇಹ, ಧಾತು ಗತಜ್ವರ ಮೂತ್ರಕೃಚ್ಛ್ರ, ಅಶ್ಮರಿ, ಕಾಮಲೆ, ಸಾಂಡು ಗುಣ ಡಜನ್ 1ರ ಕ್ರಯ: 1—2—0

ಕೊಲೆರಾ ಯಾನೆ ವಾಂತಿಭೇದಿ ಗುಟಿಕೆ:—ಒಂದೆರಡು ಗುಟಿಕೆಯಿಂದ ವಾಂತಿಭೇದಿ ಕೂಡಲೇ ಗುಣ ಡಜನ್ ಗುಟಿಕೆಯ ಕ್ರಯ. 0—12—0

ಚಂದನಾಸವ:—ಮೇಹ, ಶುಕ್ಲಧಾತು ನಷ್ಟತ್ವ ಗುಣ ಬಾಟ್ಲಿಗೆ ರೂ. 1

ನಮ್ಮ ಔಷಧಾಲಯದಲ್ಲಿ ಅನೇಕ ವಿಧದ ಬೇರೆ ಔಷಧಗಳು ದೊರೆಯುತ್ತವೆ. ಅಪೇಕ್ಷೆಯುಳ್ಳವರು ಕೆಟಲಾಗು ತರಿಸಿಕೊಳ್ಳಬಹುದು. ಮೇಲಿನ ಔಷಧಗಳು ಬಹಳವಾಗಿ ಖರ್ಚಾಗುವದರಿಂದ ಕ್ರಯವನ್ನು ಕಡಿಮೆ ಮಾಡಿರುತ್ತದೆ.

ವಿಳಾಸ — ಮೂಲ್ಕಿ ಗಣಪಯ್ಯ ಎಂಡ್ ಸನ್ಸ್,
ನೇಟಿವ್ ಡಾಕ್ಟರ್ಸ್,
ತೇರಬೀದಿ ಮನೆ ನಂಬ್ರ 2ನೇ, ಮಂಗಳೂರು

ಹೊಸ ಹೊಸ ವಿಷಯಗಳು.

೧ ಶ್ರೀ ಭಗವದ್ಗೀತಾ ಸರ್ವರಿಗೂ ಅನುಕೂಲಿಸುವಂತೆ ಪ್ರತ್ಯೇಕ ಪ್ರತ್ಯೇಕವಾಗಿ ಪಾರಾಯಣ ಮಾಡುವವರಿಗೂ ಕಥಾರೂಪದಲ್ಲಿ ಓದುವವರಿಗೂ ಉಪಯೋಗವಾಗುವ ರೀತಿಯಲ್ಲಿ ಬಾಲಬೋಧಿನಿ ಎಂಬ ಅನ್ವರ್ಥ ನಾಮವುಳ್ಳ ಟೀಕಾ ತಾತ್ಪರ್ಯ ಸಹಿತವಾದ ಉತ್ತಮ ಪ್ರತಿ ಬೆಲೆ ೩—೦—೦.

೨. ವಿಷ್ಣುಪುರಾಣ ವ್ಯಾಸ ಪ್ರಣೀತವಾದ ಈ ಮಹಾ ಪುರಾಣದ ಪ್ರಥಮಾಂಶವು ಸಮೂಲವಾಗಿ ಕನ್ನಡಿಸಲ್ಪಟ್ಟಿರುವುದು. (ಸಕಲ ವಿಷಯ ಗರ್ಭಿತ) ೨-೮-೦.

೩. ಶ್ರೀ ಶಂಕರ ವಿಜಯ ಪ್ರತಿಯೊಂದು ಕುಟುಂಬದಲ್ಲಿಯೂ ಓದಿ ಕೃತಕೃತ್ಯರಾಗಬೇಕಾದ ಗ್ರಂಥ ಲೋಕೋದ್ಧಾರಮಾಡಿದ ಶ್ರೀಮಚ್ಛಂಕರ ಚರಿತ್ರೆಯಾಗಿರುವದರಿಂದ ಹೆಚ್ಚಿಗೆ ಹೇಳಲು ಯಾರು ತಾನೇ ಸಮರ್ಥರು? ಪ್ರತಿಪದ ಟೀಕಾ ತಾತ್ಪರ್ಯವೂ ಟಿಪ್ಪಣಿಗಳೂ ಸಹಾ ಬಹಳ ವಿಶದವಾಗಿ ಪ್ರಕಟಿಸಿರುವುದು ಪ್ರಥಮ ಸಂಪುಟದ ಬೆಲೆ ೩—೦—೦.

೪ ರಘುವಂಶ ಮಹಾಕಾವ್ಯ ಪ್ರತಿ ಶ್ಲೋಕಕ್ಕೂ ಪದವಿಭಾಗ ಶಬ್ದಸಮಾಸ ಆಕಾಂಕ್ಷೆ ವಿಗ್ರಹ ಟೀಕಾ ತಾತ್ಪರ್ಯ ಸಹಿತ ಸಂಸ್ಕೃತಾಭ್ಯಾಸಿಗಳಿಗೆ ಉಪಯೋಗವಾದ ಪ್ರತಿ ೧ನೇ ಸರ್ಗ ರೂ ೧—೦—೦ ೨ನೇ ಸರ್ಗ ರೂ. ೧—೨—೦.

೫ ಇದರಂತೆಯೇ ಇರುವ ಕಿರಾತಾರ್ಜುನೀಯ ೧ನೇ ಸರ್ಗ ೦-೮-೦

೬ ವಿವೇಕಚೂಡಾಮಣಿ (ಶ್ರೀಮಚ್ಛಂಕರಾಚಾರ್ಯ ಕೃತ ವೇದಾಂತ ಗ್ರಂಥ) ಪ್ರತಿಪದ ಟೀಕಾ ತಾತ್ಪರ್ಯ ಸಹಿತ ರೂ. ೨—೪—೦

೭. ಋಗ್ವೇದ ನಿತ್ಯಕರ್ಮ ಪ್ರಾತರ್ಮಾಧ್ಯಾಹ್ನಿಕ ಸಾಯಂಸಂಧ್ಯಾ ದೇವತಾರ್ಚನೆ, ಬ್ರಹ್ಮಯಜ್ಞ, ಮಂತ್ರಪುಷ್ಪ, ದೇವತಾಸ್ತೋತ್ರಗಳು, ತರ್ಪಣವಿಧಿ ಆದಿಯಾಗಿ ಎಲ್ಲ ವಿಧಗಳೊಂದಿಗೆ ಇರುವ ಪ್ರತಿ. ೦—೪—೦

೮ ಇದರಂತೆ ಇರುವ ಯಜುರ್ವೇದ ನಿತ್ಯಕರ್ಮ ೦—೪—೦.

ವಿದ್ಯಾನಂದ ಮಾಸಪತ್ರಿಕೆ ವಾರ್ಷಿಕ ಚಂದಾ ಹಾಸಲು ಸೇರಿ ೨—೪—೦ ಮಾದರಿ ಪತ್ರಿಕೆ, ಕ್ಯಾಟಲಾಗ್ (ಪುಸ್ತಕಪಟ್ಟಿ) ಉಚಿತವಾಗಿ ಪಡೆಯಬಹುದು.

ಬಾಣವಾಡಿ ಆದಿನಾರಾಯಣಶಾಸ್ತ್ರಿ,
ವಿದ್ಯಾನಂದ ಆಫೀಸ್,
ಶಂಕರಪುರ, ಬೆಂಗಳೂರು ಸಿಟಿ.

ಹುಳಬಿದ್ದ ಹುಣ್ಣುಗಳು.

ಪಡುಬಿದ್ರೆ ಕಾಡಿಪಟ್ಣ ಮೊಗೇರ ಕೀಪ್ರು ಹೆಂಗಸು ಬರಿಯುವದು:—ನನಗೆ ಸುಮಾರು ಆರು ವರ್ಷಗಳಿಂದ ಎರಡು ಕಾಲುಗಳಲ್ಲಿ ಬೊಕ್ಕೆಗಳು ಹುಟ್ಟಿ ಅದರಲ್ಲಿ ಕೀವು ಸುರಿಯುತ್ತ ಕೆಲವು ಸಣ್ಣ ಛಿದ್ರಗಳುಂಟಾಗಿ ಆ ಛಿದ್ರದಲ್ಲಿ ಹುಳಗಳು ತುಳುಕುತ್ತಿತ್ತಲ್ಲದೆ ಸದರಿ ವ್ರಣಗಳು ಕರಗಿ ಅರ್ಧಾಣೆ ಗಾತ್ರವಾಗಿತ್ತು. ಇದರಿಂದ ನಡಿಯಲಾರದೆ ಕಾಲಿಗೆ ವಸ್ತ್ರ ಕಟ್ಟಿ ಮಲಗಿದ್ದಲ್ಲಿಯೇ ಇದ್ದೆನು. ದೈವವಶಾತ್ ತಮ್ಮ ಸಬ್ ಏಜಂಟರ ಭೇಟಿಯಾಗಿ ಪರೀಕ್ಷಾರ್ಥವಾಗಿ ಎರಡು ಸೀಸೆ ತಮ್ಮ ಯುಕಲಿಪ್ಟಸ್ ತೈಲವನ್ನು ಕೊಂಡುಕೊಂಡು ಹೊಟ್ಟೆಗೂ ತಕ್ಕೊಂಡು ಹುಣ್ಣಿಗೂ ಹಚ್ಚಿದೆ. ಎರಡು ಸೀಸೆ ಮುಗಿಯುವಷ್ಟರಲ್ಲಿ ನನ್ನ ಹುಣ್ಣುಗಳು ಒಣಗಿ ನಡಿಯಲು ಅನುಕೂಲವಾಗಿಯದೆ ಎಂಬದನ್ನು ತಿಳಿಸಲು ಸಂತೋಷಪಡುತ್ತೇನೆ

ಒಂದೇ ಸಲ ಕೊಡುವದರಲ್ಲಿ ಗುಣ!

ರಾ! ವೆಂಕಟಕೃಷ್ಣ ಆಚಾರಿ, ಶಂಕರನಾರಾಯಣ:—ನಿಮ್ಮಲ್ಲಿಂದ ತರಿಸಿದ ಯುಕಲಿಪ್ಟಸ್ ತೈಲವನ್ನು ಕೆಲವು ಕಾಲದಿಂದ ಕಠಿಣ ಹೊಟ್ಟೆನೋವಿನಿಂದ ನರಳುತ್ತಿದ್ದ ನನ್ನ ತಾಯಿಗೆ ಒಂದು ಸಲ ಕೊಡುವಷ್ಟರಲ್ಲಿ ಗುಣ ಉಂಟಾದಕಾರಣ ಮನಸ್ಸಿಗೆ ಭಾರಿ ಖುಶಿಯಾಗಿದೆ. ಅರ್ಧ ಡಜನ್ ಸೀಸೆ ವಿ. ಪಿ. ಮಾಡಿ ಕಳುಹಿಸಿರಿ.

ಇದು ಸಂಜೀವಿನಿಯೇ ಸರಿ!!

ಮ! ರಾ! ತುಕ್ರಪ್ಪ, ಟಿ ಎಮ್ಮಾರ್ಳಕಾರ್, ಮುಂಬೈ:—ಕೆಲವು ಸಮಯದಿಂದ ಕೆಮ್ಮು ಉಬ್ಬಸದಿಂದ ಪೀಡಾಪಡುತ್ತಿದ್ದ ಹುಡುಗಿಯೊಬ್ಬಳಿಗೂ ಹಲವು ಕಾಲದಿಂದ ಹೊಟ್ಟೆನೋವಿನಿಂದ ನರಳುತ್ತಿದ್ದ ಮುದುಕಿಯೊಬ್ಬಳಿಗೂ ನಿಮ್ಮಲ್ಲಿ ದೊರೆಯತಕ್ಕ ಯುಕಲಿಪ್ಟಸ್ ತೈಲವನ್ನು ನನ್ನ ಸ್ನೇಹಿತರಾದ ವೈ. ಕೊರಗಪ್ಪನವರಿಂದ ಪಡಕೊಂಡು ಕೊಟ್ಟಲ್ಲಿ ಇಬ್ಬರೂ ಗುಣಹೊಂದಿರುತ್ತಾರೆ. ಕೆಮ್ಮು, ಉಬ್ಬಸ, ಹೊಟ್ಟೆನೋವು, ಸರ್ವ ತರದ ವಾಯುರೋಗಗಳಿಗೆ ಇದು ಸಂಜೀವಿನಿಯಂತೆ ಇದೆ. ಆದುದರಿಂದ 2 ಡಜನ್ ವಿ ಪಿ ಮಾಡಿ ಕಳುಹಿಸಿರಿ. ಔನ್ಸ್ ಸೀಸೆ 1ಕ್ಕೆ 0—5—0. ಡಜನ್ ಸೀಸೆಗಳಿಗೆ ವಿ. ಪಿ. ಸಹಿತ ರೂ. 3—12—0. ಅನುಪಾನ ಪತ್ರಿಕೆ ಸೀಸೆಯೊಂದಿಗೆ.

☞ ನಮ್ಮಲ್ಲಿ ಹೋಮಿಯೋಪತಿ ಮತ್ತು ಬಿಸ್ಕ್ಯು ರೆಮಿಡಿಸ್‌ಗಳೆಂಬ ಔಷಧಗಳು ದೊರೆಯುತ್ತವೆ.

ವಿಳಾಸ:— ಇಕ್ಲಿಪ್ಸ್ ಏಜನ್ಸಿ, ಮಂಗಳೂರು.

ಏಜಂಟರು:— ಸುಗಂಧವಿಲಾಸ, ರಥಬೀದಿ, ಮಂಗಳೂರು.

ಅನೇಕ ಯೋಗ್ಯತಾಪತ್ರಿಕೆಗಳನ್ನು ಪಡದಿರುವ (ರಜಿಸ್ಟರ್ಡ)

ರಾಜಸುಂದರಿ ರೋಜ.

ಕೂದಲು ಬೆಳೆಯುವ ಪರಿಮಳ ತೈಲವು. 50 ವಿಧವಾದ ಇನಾಂ ಸಾಮಾನುಗಳ ಸಮೇತ ಡಬ್ಬಿ 1ಕ್ಕೆ ರೂ. 1 ಮಾತ್ರ.

ಸ್ತ್ರೀಗಳು ತಲೆಕೂದಲು ಸುಂದರವಾಗಿ ಇರಬೇಕೆಂಬ ಉದ್ದೇಶವಾಗಿಯೂ, ಕೂದಲು ಉದುರುವದನ್ನು ತಡೆದು, ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವವರು ಬಜಾರಿನಲ್ಲಿ ದೊರಿಯುವ ಕೀಳುತರವಾದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ, ನಿಮ್ಮ ಹಣವನ್ನೂ ತಲೆಯನ್ನೂ ಹಾಳು ಮಾಡುವದಕ್ಕಿಂತ ನಮ್ಮ ಪರಿಮಳ ತೈಲವನ್ನು ಉಪಯೋಗಿಸಿರಿ. ಈ ಲೋಕಪ್ರಖ್ಯಾತವಾದ ಎಣ್ಣೆಯನ್ನ ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಬಾಚಿದರೆ ಅದರ ಸುವಾಸನೆ ಹೇಳುವದಕ್ಕೆ ಬರೆಯುವದಕ್ಕೆ ಆಗುವದಿಲ್ಲ ಮತ್ತು ಇದರ ಪರಿಮಳ ವಾಸನೆ ಸುತ್ತು ಇರುವ ಮನೆಗಳಿಗೆ ಹೋಗುವದು ಇದಲ್ಲದೆ ದೇಹದಲ್ಲಿ ಇರುವ ಉಷ್ಣವನ್ನು ತಗದು ಕಣ್ಣಿಗೆ ತಂಪು ಕೊಡುವದು. ತಲೆಯಲ್ಲಿ ಇರುವ ಹೊಡಡನ್ನು ಸರಿ ಮಾಡುವದು. ಮುಖಕ್ಕೆ ಕಾಂತಿಯನ್ನೂ, ದೇಹಕ್ಕೆ ಆರೋಗ್ಯವನ್ನೂ, ಮನಸಿಗೆ ಸಂತೋಷವನ್ನೂ, ಕೂದಲಿಗೆ ಆರೋಗ್ಯವನ್ನೂ ಕೊಡುವ ತೈಲ ಇದು ಒಂದೇ ಬೇರೊಂದಿಲ್ಲ, ಬರೀ ಮಾತುಗಳಿಂದ ವರ್ಣಿಸುವದರಲ್ಲಿ ಪ್ರಯೋಜನವಿಲ್ಲ 1ನ್ನು ತರಿಸಿದರೆ ತಿಳಿಯುತ್ತೆ. ಇನಾಂ ಸಾಮಾನುಗಳ ತಪಶೀಲು. ಸ್ತ್ರೀಯರು ಧರಿಸಿಕೊಳ್ಳುವ ಕೊಂತಗಿಣಿ 6, ವೈಭವಣಿ 1, ಅದ್ದಾ 1, ತಾಂಬೂಲ ಮಾತ್ರೆ 30, ದಂತದ ಬಾಚಣಿಗೆ 1, ಸೊಗಸಾದ ರಾಜರಾಣಿ ಕಾರನೇಷನ್ ಪೆಟ್ಟಿಗೆ 1, ರವಿವರ್ಮ ಪೋಸ್ಟ್‌ಕಾರ್ಡ್ 6, ಸುವಾಸನೆ ಅತ್ತರು ಬೆಲ್ಲಿ 1, ಗಂಧ ಬಿಲ್ಲೆ 1, ಸ್ತ್ರೀಯರು ಧರಿಸುವ ಬ್ರೂಚ್ 1.

ನಮ್ಮ ವಿಳಾಸ:— ಮ್ಯಾನೇಜರ್ ಧೈರ್ಯ ಲಕ್ಷ್ಮಿ ಅಂಡು ಕಂಪೆನಿ,
ನಂ. 3 ಇರುಲಪ್ಪನ್ ಬೀದಿ, ಮದ್ರಾಸು.

ಸ್ವದೇಶಾಭಿಮಾನಿ

ಮಂಗಳೂರು, ಶುಕ್ರವಾರ ತಾರೀಖು 30ನೇ ಜುಲಾಯಿ 1915.

ಮದ್ರಾಸು ವಿಶ್ವವಿದ್ಯಾಲಯದವರ ವಿಕ್ಷಿಪ್ತ ವರ್ತನ.

ಮಹಾಜನರುಗಳ ಕ್ಷೋಭ.

ನಮ್ಮ ಯೂನಿವರ್ಸಿಟಿಗಳ ಪುನಸ್ಸೃಷ್ಟಿಯ ದೆಶೆಯಿಂದ ಉಂಟಾದ ಹಲವು ಮಾರ್ಪಾಟುಗಳನ್ನು ತೋರಿಸಿ, ಈ ಮುಂದಾದರೂ ಯೂನಿವರ್ಸಿಟಿಯವರ ಆಡಳಿತೆಯು ಸಮರ್ಪಕವಾಗಿರಬೇಕಾಗಿದ್ದಿತೆಂದೂ, ಹಾಗೆ ಮಹಾ ಜನರುಗಳು ಅಪೇಕ್ಷಿಸಿದರೆ ಅದು ಅಸಾಧ್ಯವಾದ ಅಪೇಕ್ಷೆಯೆಂದು ಯಾರೂ ಹೇಳಲು ಕಾರಣವಿಲ್ಲವೆಂದೂ ಹಿಂದಿನ ಸಂಚಿಕೆಯಲ್ಲಿ ನಿರೂಪಿಸಿದ್ದೆವು.

ಆದರೆ ವಸ್ತುಸ್ಥಿತಿಯು ಮಾತ್ರ ಕೇವಲ ವಿಪರೀತವಾಗಿರುವಂತೆ ತೋರುತ್ತಿದೆ. ಯುನಿವರ್ಸಿಟಿಯ ಯಾವ ಕೆಲಸವೂ ತಕ್ಕಂತೆ ನಡೆಯುತ್ತಿರುವುದೆಂದು ಹೇಳ ಬರುವಂತಿಲ್ಲ. ಪರೀಕ್ಷೆಗಳಲ್ಲಿಯೂ ಅಭ್ಯಾಸ ಕ್ರಮಗಳಲ್ಲಿಯೂ ದಿನನಿತ್ಯವೆಂಬಂತೆ ಹೆಚ್ಚು ಕಡಿಮೆಗಳಾಗುತ್ತಿವೆ. ಯಾವುದೋ ಗೊತ್ತುಗುರಿಯಿಲ್ಲದ ಜಿಲ್ಲೆಯಲ್ಲಿ ಪ್ರತಾಪಶಾಲಿಗಳಾದ ಯಾರೋ "ಕಲೆಕ್ಟರು" ದೊರೆಗಳ ಆಡಳಿತೆ ನಡೆಯುತ್ತಿದ್ದಾಗ ಬೆಳಗಿನ ಊಟಮಾಡಿ "ಕಚೇರಿ"ಗೆ ಹೋದ "ನವುಕರ"ರು ಸಾಯಂಕಾಲ ಮನೆಗೆ ಬರುತ್ತ ತಮ್ಮ ತಮ್ಮ ಕೆಲಸ ಉಳಿಸಿಕೊಂಡು ಬರುವರೋ ಕಳೆದುಕೊಂಡು ಬರುವರೋ ಹೇಳುವುದು ಇತರರಿಗೆ ಮಾತ್ರವಲ್ಲದೆ ಅವರವರಿಗೂ ಪ್ರಯಾಸವಾಗಿದ್ದಿತಂತೆ. ಇದು ರಾವಣೇಶ್ವರನ ಕಾಲದ ಸಮಾಚಾರವೋ ಕಂಸಾಸುರನ ಕಾಲದ ಸಮಾಚಾರವೋ ತಿಳಿಯದು. ಅಷ್ಟು ಪ್ರಾಚೀನಕಾಲದ ಸಮಾಚಾರವಾದರೆ ಬಹುಶ್ಯ ಇದರಲ್ಲಿ ತಥ್ಯಾಂಶವೇನೂ ಇರಲಾರದೆಂದು ತೋರುತ್ತದೆ. ಆ ಕಾಲದಲ್ಲಿ 'ಕಚೇರಿ'ಗಳೂ 'ಕಲೆಕ್ಟರು'ಗಳೂ ಎಲ್ಲಿ? ಅದು ಹಾಗಿರಲಿ, ಆದರೆ ನಮ್ಮ ಮದ್ರಾಸು ಯೂನಿವರ್ಸಿಟಿಯ ವಿದ್ಯಾರ್ಥಿಗಳ ಗತಿಯು ಮಾತ್ರ ನಿಜವಾಗಿ ಹೀಗಾಗಿರುವುದೆಂದು ನಿರ್ದಾಕ್ಷಿಣ್ಯವಾಗಿ ಹೇಳಬಹುದಾಗಿದೆ. ಪರೀಕ್ಷೆಯಲ್ಲಿ ಎಂದಾದರೂ ತೇರುವೆವೋ ಇಲ್ಲವೋ ಎಂಬ ವಿಷಯದಲ್ಲಿ ಮಾತ್ರವಲ್ಲದೆ, ಒಂದು ಪರೀಕ್ಷೆಗೆ ಓದಲು ಪ್ರಾರಂಭಿಸಿದ ಕಾಲದಲ್ಲಿ ಇದ್ದ ಅಭ್ಯಾಸ ಕ್ರಮವು ಪರೀಕ್ಷಾ ಕಾಲದಲ್ಲಿಯೂ ಉಳಿಯಬಹುದೋ? ಒಂದು ಸಲ ಉತ್ತೀರ್ಣನಾಗದಿದ್ದರೆ ಮುಂದಿನ ಪರೀಕ್ಷೆಯ ಕಾಲದಲ್ಲಿಯೂ ಅದೇ, ಅಭ್ಯಾಸ ಕ್ರಮವು ಊರ್ಜಿತವಿರಬಹುದೇ? ಕೊನೆಗೆ ಆ ಪರೀಕ್ಷೆಯನ್ನೇ ತೆಗೆದುಹಾಕಿ ಅದರ ಸ್ಥಳದಲ್ಲಿ ಬೇರೆಯೊಂದನ್ನು ಏರ್ಪಡಿಸಲಾರರಷ್ಟೆ? ಎಂಬಿಷ್ಟರ ಮಟ್ಟಿಗೆ ಕೂಡ ನಮ್ಮ ವಿದ್ಯಾರ್ಥಿಗಳಿಗೆ ಧೈರ್ಯತಪ್ಪಿ ಅಹೋ ರಾತ್ರಿ ತಲ್ಲಣಿಸಲು ತೊಡಗಿರುವರು. ಆರು ತಿಂಗಳಿಗೊಮ್ಮೆ ಪ್ರತಿ ಭಾರಿಯೂ "ಸೆನೇಟು" ಸಭೆ ಸೇರಿದಾಗ ಅಭ್ಯಾಸ ಕ್ರಮಗಳಲ್ಲಿ ಮಹತ್ತರವಾದ ಬದಲಾವಣೆಗಳುಂಟಾಗುತ್ತಿವೆ; ಮತ್ತು ಸದಸ್ಯರುಗಳೊಳಗೆ ಒಂದು ವಿಧವಾದ ಅಂಧ ಪಕ್ಷಾಭಿಮಾನವೂ ಪ್ರಬಲವಾಗಿರುವಂತೆ ತೋರುತ್ತಿದೆ. ಆಯಾ ಪರೀಕ್ಷೆಗಳಿಗೆ ಆಯಾ ಉಪಶಾಖೆಯವರು (Board of studies) ಗೊತ್ತು ಪಡಿಸುವ ಪಠ್ಯಪುಸ್ತಕಗಳ ಯೋಗ್ಯತೆಯಂತೂ ಕೇವಲ ಅವರ್ಣನೀಯವಾಗಿದೆ. ಅವುಗಳನ್ನು ಆಕ್ಷೇಪಿಸಿ ನೂರಾರು ಲೇಖನಗಳು ಬೇರೆ ಬೇರೆ ವೃತ್ತ ಪತ್ರಿಕೆಗಳಲ್ಲಿ ದಿನ ನಿತ್ಯವೆಂಬಂತೆ ಅಚ್ಚಾಗುತ್ತಿವೆ. ಪರಂತು, ವಿದ್ಯಾರ್ಥಿಗಳ ಮತ್ತು ಪಾಠಶಾಲೆಗಳ ಸಂಖ್ಯೆಯನ್ನು ಕಡಿಮೆ ಮಾಡುವ, ಹಾಗೆಯೇ ದೊರೆತ ವಿದ್ಯಾಭ್ಯಾಸವು ಪ್ರಾಯಶಃ ದೇಶಹಿತಕಾರಿಯಾಗದಂತೆ ಮಾಡುವ ವಿಷಯದಲ್ಲಿ ಮಾತ್ರ ಯೂನಿವರ್ಸಿಟಿಯ ನವಸೃಷ್ಟಿ ಕರ್ತೃಗಳ ಉದ್ದೇಶವು ಬಹಳ ಮಟ್ಟಿಗೆ ಸಿದ್ಧಿಸಿದಂತೆ ತೋರುತ್ತಿದೆ.

ಹೀಗೆ ಕೆಲವು ಕಾಲದಿಂದೀಚೆಗೆ ನಮ್ಮ ಯೂನಿವರ್ಸಿಟಿ ವ್ಯವಹಾರಗಳ ವಿಷಯದಲ್ಲಿ ಜನರೊಳಗೆ ಒಂದು ವಿಧವಾದ ಮೂಕಕ್ಷೋಭೆ ಉಂಟಾಗಿಯೇ ಇದ್ದಿತು. ಅದು ಈ ವರ್ಷದ ಪರೀಕ್ಷಾ ಫಲಗಳ ಮತ್ತು ಹೊಸ ಕ್ರಮಗಳ ದೆಶೆಯಿಂದ ಬಳೆದು ಉಕ್ಕೇರುವಂತಾಗಿ ವ್ಯಕ್ತಸ್ವರೂಪವನ್ನು ತಳೆದಿದೆ. ಮದ್ರಾಸು ಪಟ್ಟಣದಲ್ಲಿ ಮಾತ್ರವಲ್ಲದೆ ಹೊರಗೂ ಪ್ರತಿ ಊರಲ್ಲಿಯೂ ಯೂನಿವರ್ಸಿಟಿಯನ್ನು ಆಕ್ಷೇಪಿಸಿ ಪರಿಹಾಸ್ಯಕ್ಕೀಡುಪಡಿಸಿ, ನಿಷೇಧಿಸಿ ಸಾರ್ವಜನಿಕ ಮಹಾ ಸಭೆಗಳು ಅಹರ್ನಿಶವೂ ನಡೆಯುತ್ತಿವೆ. ಪ್ರತಿ ನಿತ್ಯವೂ ವರ್ತಮಾನ ಪತ್ರಿಕೆಗಳ ಅರ್ಧ ಭಾಗವೆಲ್ಲ ಈ ವಿಷಯವಾದ ಲೇಖನಗಳಿಂದಲೇ ತುಂಬಿಕೊಂಡಿರುವುದು ಕಂಡುಬರುತ್ತಿದೆ. ಮೈಸೂರು, ಹೈದರಬಾದು ಮುಂತಾದ ದೇಶೀಯ ಸಂಸ್ಥಾನಗಳಲ್ಲಿ ತಮಗೆ ಮದ್ರಾಸು ಯೂನಿವರ್ಸಿಟಿಯೊಡನಿರುವ ಸಂಬಂಧವನ್ನು ತಪ್ಪಿಸಬೇಕೆಂದೂ ಸಾಧ್ಯವಾದರೆ ತಮಗಾಗಿ ಸ್ವತಂತ್ರ ಯೂನಿವರ್ಸಿಟಿಗಳನ್ನೇ ಹೊರಡಿಸಬೇಕೆಂದೂ ಜನರಲ್ಲಿ ಪ್ರಬಲವಾದ ಚಳುವಳಿಯುಂಟಾಗಿದೆ. ನಿರಾಶರಾದ ಸಾವಿರಾರು ವಿದ್ಯಾರ್ಥಿಗಳು ತಮ್ಮ ಸ್ವಂತ ಯೂನಿವರ್ಸಿಟಿಗೆ ಶರಣು ಹೊಡೆದು ಬೇರೆ ಯೂನಿವರ್ಸಿಟಿಗಳಿಗೆ ಹೋಗ ತೊಡಗಿರುವರು. ಯಾವ ಯೂನಿವರ್ಸಿಟಿಯ ವಿಷಯವಾಗಿಯೂ, ಮಹಾಜನರುಗಳಲ್ಲಿಯೂ, ವಿದ್ಯಾರ್ಥಿಗಳಲ್ಲಿಯೂ ಇಷ್ಟು ಕ್ಷೋಭೆ ಉಂಟಾಗಿರುವದು ನಮ್ಮ ದೇಶದ ಚರಿತ್ರೆಯಲ್ಲಿ ಕೇವಲ ಅಭೂತಪೂರ್ವವಾಗಿದೆ. ತಥಾಪಿ ಅದರ ದೆಸೆಯಿಂದ ಯೂನಿವರ್ಸಿಟಿಯ ಚಾಲಕರ ಮೇಲೆ ಯಾವ ಸುಪರಿಣಾಮವೂ ಆದ ಹಾಗೆ ಕಂಡುಬರುವುದಿಲ್ಲ. ಮದ್ರಾಸು ಯೂನಿವರ್ಸಿಟಿಯು ಯೂರೋಪೀಯ ಪಂಡಿತಮ್ಮನ್ಯರ ಕೈಯಲ್ಲಿ ಸಿಲುಕಿ ಬಿದ್ದಿರುವುದೆಂದೂ ಅವರಿಗೆ ಭಾರತೀಯ ವಿದ್ಯಾಭ್ಯಾಸದ ಅವಶ್ಯಕತೆಗಳಾವುವೂ ತಿಳಿಯವೆಂದೂ, ತಿಳಿಯಲು ಇಷ್ಟವೂ ಇಲ್ಲವೆಂದೂ ಶ್ರೀ ಅನ್ನಿಬಿಸೆಂಟ್ ಅಮ್ಮನವರು ಅಪ್ಪಣೆಕೊಡಿಸಿರುವರು. ಇದರ ಸತ್ಯಾಸತ್ಯ ನಿರ್ಣಯವನ್ನು ನಮ್ಮ ವಾಚಕ ವರ್ಗವೇ ಮಾಡಲಿ! ಆದರೆ ಆಡಳಿತೆಯ ಸ್ಥಿರತೆಯ ವಿಷಯದಲ್ಲಿ ಮಾತ್ರ ನಮ್ಮ ಯೂನಿವರ್ಸಿಟಿಯವರು ಪಂಡಿತಯೋಗ್ಯವಾದ ಕಾರ್ಯ ಕ್ಷಮತೆಯನ್ನು ತೋರಿಸುತ್ತಿರುವುದಿಲ್ಲವೆಂಬುದನ್ನೂ ಉಚ್ಚ ವಿದ್ಯಾಭ್ಯಾಸ ರಥವು ಋಜು ಮಾರ್ಗದಿಂದ ಸರಾಗವಾಗಿ ಓಡುತ್ತಿರುವುದಿಲ್ಲವೆಂಬುದನ್ನೂ ಮಾತ್ರ ನಾವು ನಿರುಪಾಯವಾಗಿ ವ್ಯಸನದೊಡನೆ ಒಪ್ಪಬೇಕಾಗಿದೆ.

ಯೂನಿವರ್ಸಿಟಿಯವರ ಆಡಳಿತದ ಈ ದುರವಸ್ಥೆಯನ್ನು ಕಣ್ಣಾರೆ ನೋಡ್ಡಿ ಸಹಿಸಲಾರದೆ ಪರಿಹಾಸ್ಯಪಟುಗಳಾದ ನಮ್ಮ ಮಿತ್ರರೊಬ್ಬರು "ಕೆಲವು ಕಾಲದ ಮಟ್ಟಿಗೆ ಅವರ ಆಡಳಿತವನ್ನೇ ತಪ್ಪಿಸಿ ದೊರೆತನದವರು ತಾವೇ ಆಡಳಿತೆ ನೋಡಿದರೆ ಹೇಗೆ?" ಎಂದು ನಮಗೆ ಬರೆದು ಕೇಳಿರುವರು. ಇದು ಬಹುಶಃ ಅವರ ವಾಡಿಕೆಯ ಪರಿಹಾಸ್ಯದ ಮಾತಾಗಿರಬಹುದೆಂದು ತೋರುತ್ತಿದೆ. ಏವಂಚ ಅಸಮರ್ಪಕವಾಗಿ ಕೆಲಸ ಮಾಡುವ ಮುನಿಸಿಪಾಲಿಟಿಗಳನ್ನೂ, ಲೋಕಲ್‌ಬೋರ್ಡುಗಳನ್ನೂ ಅಧಿಕಾರದಿಂದ ತಪ್ಪಿಸಿ ಸರಕಾರದವರು ತಾವೇ ಅವನ್ನು ತತ್ಕಾಲವಾಗಿ ವಹಿಸಿಕೊಂಡ ಸಂಗತಿಗಳು ಆಗಿಂದಾಗ ಕೇಳಬರುತ್ತಿವೆ; ಮತ್ತು ಶಾಸನಗಳಲ್ಲಿ ಇಂಥ ವ್ಯವಸ್ಥೆಗೆ ಅವಕಾಶವಿದೆಯೆಂಬುದೂ ನಿಜವೇ. ಆದರೆ ಯೂನಿವರ್ಸಿಟಿಯ ಆಕ್ಟಿನಲ್ಲಿಯೇ ಆಗಲೀ ಇತರ ಯಾವ ಆಕ್ಟಿನಲ್ಲೇ ಆಗಲೀ ಯೂನಿವರ್ಸಿಟಿಗಳ ಆಡಳಿತವನ್ನು ಸರಕಾರದವರು ವಹಿಸಿಕೊಳ್ಳಲು ಆಸ್ಪದವಿರುವ ಯಾವುದಾದರೂ ನಿಬಂಧನೆ ಇರಬಹುದೆಂದು ನಾವು ನೆನಸುವದಿಲ್ಲ. ಒಂದು ವೇಳೆಗೆ ಇದ್ದರೂ ಅಂಥಾ ಕಾಲವೂ ಗತಿಯೂ ಸರಸ್ವತೀ ತಾಂಡವಶಾಲೆಯಾದ ನಮ್ಮ ವಿಶ್ವವಿದ್ಯಾಲಯಕ್ಕೆ ಬಾರದಿರಲೆಂದು ಪರಮಾತ್ಮನನ್ನು ಏಕೋಭಾವದಿಂದ ಪ್ರಾರ್ಥಿಸುವೆವು.

ಆನಂದಿಬಾಯಿ ಮತ್ತು ತುಳಸಿಬಾಯಿ.

ಪೂನೆಯಲ್ಲಿ ಸ್ಥಾಪಿತವಾಗಿರುವ ಪಂಡಿತ ಖರ್ವೆಯವರ ವಿತಂತಾಲಯದಂಥ ಸಂಸ್ಥೆಗಳಿಂದ ಸಮಾಜಕ್ಕೆ ಉಂಟಾಗುವ ಪ್ರಯೋಜನವೇನೆಂಬುದು ಆ ಆಶ್ರಮದಲ್ಲಿ ಶಿಕ್ಷಣ ಹೊಂದಿದ ಆನಂದಿಬಾಯಿ ಮತ್ತು ತುಳಸಿಬಾಯಿ ಇವರ ಮೂಲಕ ಈ ಪ್ರಾಂತ್ಯಗಳಲ್ಲಿ ವ್ಯಕ್ತವಾಗುವ ಸಂದರ್ಭಗಳನ್ನು ಸೂಚಿಸಲು ಸಂತೋಷಪಡುತ್ತೇವೆ. ನಾಲ್ಕಾರು ವರ್ಷಗಳ ಹಿಂದೆ ಸ್ವಜಾತಿಯ ಸಮುದಾಯದವರ ಶಿಕ್ಷಣದ ಬಗ್ಗೆ ವಿಶೇಷವಾಗಿ ಶ್ರಮಪಟ್ಟಂಥ ಸ್ವಾರ್ಥರಹಿತರಾದ ಸ್ವರ್ಗಸ್ಥ ಅಮೆಂಬಳ ಸುಬ್ರಾಯಪೈಗಳವರ ಅಪೇಕ್ಷೆ ಪ್ರಕಾರ ಇಲ್ಲಿಯ ಓನರೆರಿ ಮೇಜಿಸ್ಟ್ರೇಟರಾಗಿರುವ ಮ॥ ರಾ॥ ರಾ॥ ಸುಜೀರ ನಾಗಪ್ಪ ನಾಯಕರವರು ತಮ್ಮ ಸೊಸೆಯಂದಿಯರಾದ ಆನಂದಿಬಾಯಿ ಮತ್ತು ತುಳಸಿಬಾಯಿಯವರನ್ನು ಪೂನೆಯ ವಿಧವಾ ಗೃಹಕ್ಕೆ ಶಿಕ್ಷಣದ ಬಗ್ಗೆ ಕಳುಹಿಸಿದ್ದರು. ಗೌಡ ಸಾರಸ್ವತರ

ಸಂಪನ್ನ ಕುಟುಂಬಗಳಿಂದ ವಿಧವೆಯರನ್ನು ಶಿಕ್ಷಣದ ಬಗ್ಗೆ ವಿತಂತಾಲಯಗಳಿಗೆ ಕಳುಹಿಸಿಕೊಟ್ಟಿದ್ದು ಇದೇ ಪ್ರಥಮ ಸರ್ತಿಯಾಗಿತ್ತು. ಆನಂದಿಬಾಯಿಯವರಿಗೆ ತಮ್ಮ ಪತಿಗಳ ವಿಯೋಗ ಕಾಲದಲ್ಲಿ ೧೧ ವರ್ಷ ಪ್ರಾಯವಾಗಿತ್ತು. ಅಕ್ಷರಗಳ ಪರಿಚಿತಿಯು ಸಹ ಇವರಿಗೆ ಆಗ್ಯೆ ಇದ್ದಿಲ್ಲ. ಸುಜೀರ ಗ್ರಾಮದಲ್ಲಿರುವ ತಮ್ಮ ತವರು ಮನೆಯಲ್ಲಿ ಕಲಿತ ಮರಾಟಿ ಮತ್ತು ಕನ್ನಡ ಭಾಷೆಗಳ ಅಕ್ಷರಮಾಲೆಯ ಅಭ್ಯಾಸದ ಹೊರತು ಪೂನೆಗೆ ಹೋಗುವಾಗ ಪಾಠಪುಸ್ತಕಗಳ ಪರಿಚಿತಿಯು ಸಹ ಇವರಿಗೆ ಇರಲಿಲ್ಲ. ಪೂನೆಯ ವಿತಂತಾಶ್ರಮಕ್ಕೆ ಸೇರಿದ ನಾಲ್ಕು ವರ್ಷಗಳ ಕಾಲದಲ್ಲಿ ಇವರೂ ತುಳಸಿಬಾಯಿಯವರೂ ವರ್ನಾಕ್ಯುಲರ್ ೭ನೇ ದರ್ಜೆಯ ಪರೀಕ್ಷೆಯಲ್ಲಿ ತೇರ್ಗಡೆಪಟ್ಟರು. ಆನಂದಿಬಾಯಿಯವರು ಮೆಟ್ರಿಕ್ಯುಲೇಷನ್ ಪರೀಕ್ಷೆಯ ಬಗ್ಗೆ ಕಲಿಯಲು ಅಲ್ಲಿಯ ಮಹಿಳಾ ವಿದ್ಯಾಲಯವನ್ನು ಸೇರಿರುವರು.

ಇಲ್ಲಿಯ ಹಿಂದೂ ಸ್ತ್ರೀಸಮಾಜದ ಅದರಲ್ಲಿಯೂ ಮುಖ್ಯವಾಗಿ ಗೌಡಸಾರಸ್ವತರ ಸ್ತ್ರೀಸಮಾಜದ ಶಿಕ್ಷಣದ ಏಳಿಗೆಯನ್ನು ಸಾಧಿಸುವ ಉದ್ದೇಶದಿಂದ ಪೂನೆಯಲ್ಲಿ ವಿದ್ಯಾಭ್ಯಾಸವನ್ನು ಪಡೆದ ಆನಂದಿಬಾಯಿ ಮತ್ತು ತುಳಸಿಬಾಯಿಗಳವರ ಪೈಕಿ ತುಳಸಿಬಾಯಿಯವರು ತಮಗೆ ಇನ್ನೂ ಪಾಠಶಾಲೆಗಳಲ್ಲಿ ಕಲಿಯುವುದಕ್ಕೆ ವಯಸ್ಸು ಸ್ವಲ್ಪ ಅಧಿಕವಾದ್ದರಿಂದ ಪೂನೆಯನ್ನು ಬಿಟ್ಟು ಇಲ್ಲಿಗೆ ಬಂದಿರುತ್ತಾರೆ. ಪ್ರತಿನಿತ್ಯದಲ್ಲಿಯೂ ಶಾಲೆಗೆ ಬರಲಾಗದ ಸ್ತ್ರೀಯರಿಗೆ ಕೆಲವು ಪಾಠಗಳನ್ನು ಹೇಳಿಕೊಡುವ ಏರ್ಪಾಡನ್ನು ವಾರದ ಕೆಲವು ದಿನಗಳಲ್ಲಾದರೂ ಕೆನರಾ ಬಾಲಿಕಾ ಪಾಠಶಾಲೆಯಲ್ಲಿ ತುಳಸಿಬಾಯಿಯವರು ಮಾಡಲುದ್ದೇಶಿಸಿರುವರಾಗಿ ತಿಳಿಯುತ್ತೇವೆ. ವಿದ್ಯಾಪ್ರೇಮಿಗಳಾದ ಸುಬ್ರಾಯಪೈಗಳವರು ಗತಿಸಿಹೋಗಿದ್ದರೂ ಇವರ ಸಹವಾಸ ಸ್ನೇಹಗಳ ಪ್ರಯೋಜನವನ್ನು ಪಡೆದಿರುವ ವಿದ್ಯಾವಂತ ಮಹನೀಯರು ಗೌಡಸಾರಸ್ವತರಲ್ಲಿ ಹಲವರಿರುವರು. ಇವರು ತುಳಸಿಬಾಯಿಯವರ ಪ್ರಯತ್ನಗಳಲ್ಲಿ ಬೇಕಾದ ಸಹಕಾರವನ್ನೂ ಪ್ರೋತ್ಸಾಹವನ್ನೂ ಕೊಡುವರೆಂಬದಾಗಿ ನಂಬಿದ್ದೇವೆ. ಪಾಂಗಾಳದ ಸಾವಕಾರ ನಾಯಕರ ಮನೆಯ ತಿಮ್ಮನಾಯಕರ ಪುತ್ರಿಗಳಾದ ತುಳಸಿಬಾಯಿಯವರ ಪರಿಚಿತಿಯು ಇಲ್ಲಿಯ ಗೌಡಸಾರಸ್ವತರ ಸ್ತ್ರೀಯರಲ್ಲಿ ಅನೇಕರಿಗಿರಬಹುದು. ಪುರಾಣಗಳನ್ನು ಓದಿ ಹೇಳಲು ತುಳಸಿಬಾಯಿಯವರು ಬಲು ಜಾಣರೆಂಬದಾಗಿ ತಿಳಿದಿದ್ದೇವೆ. ಇವರು ಕೈಕೊಂಡಿರುವ ವಿದ್ಯಾ ಸೇವೆಯನ್ನು ಸಾರ್ಥಕಗೊಳಿಸುವ ಯತ್ನವು ಸ್ವಜಾತಿಯ ಭಗಿನಿಯರ ಮೇಲೆ ಸಹ ಹೊಂದಿದೆ. ಕ್ಲುಪ್ತಕಾಲಗಳಲ್ಲಿ ತಂತಮ್ಮ ಮನೆ ಕೆಲಸಗಳನ್ನು ತೀರಿಸಿಕೊಂಡು ಪಾಠಗಳನ್ನು ಕೇಳಿ ತಿಳಕೊಳ್ಳಲು ಕ್ರಮವಾಗಿ ಬರುವ ರೂಢಿಯನ್ನು ಮಾಡಿಕೊಳ್ಳಬೇಕಾಗಿರುವ ಶ್ರಮವನ್ನು ಸ್ವಜಾತಿ ಭಗಿನಿಯರು ಕೈಕೊಂಡರೆ ಮಾತ್ರ ತುಳಸಿಬಾಯಿಯವರಿಗೆ ಅವರ ಪ್ರಯತ್ನಗಳಲ್ಲಿ ಪ್ರೋತ್ಸಾಹ ದೊರಕುವುದು.

ಮಹಾರಾಷ್ಟ್ರ ಸಾಹಿತ್ಯ ಸಮ್ಮೇಳನ.

ಎಂಟನೆಯ ಅಧಿವೇಶನವು.

(ಎರಡನೆಯ ದಿನದ ವೃತ್ತಾಂತ.)

ಪೂರ್ವೋಕ್ತ ಸ್ಥಳದಲ್ಲಿಯೇ ಎರಡನೆಯ (ಮೇ ತಾರೀಕು ೧೭ನೇ) ದಿನವೂ ಸಭೆ ಸೇರಿತು.

ಮೂರನೆಯ ನಿರ್ಣಯದ ಮೂಲವಾಗಿ ಶ್ರೀಯುತ ವಿನಾಯಕರಾವ್ ಓಕ ಇತ್ಯಾದಿ ಆಯಿವರು ಗ್ರಂಥಕರ್ತೃಗಳ ಮತ್ತು ಬಹುಮಾನಪಟ್ಟ ಗೋಖಲೆಯವರ ಮರಣಗಳ ದೆಸೆಯಿಂದ ತಮಗುಂಟಾದ ದುಃಖವನ್ನೂ ತನ್ಮೂಲವಾಗಿ ಮಹಾರಾಷ್ಟ್ರೀಯ ಸಾಹಿತ್ಯಕ್ಕೂ ಸಮಾಜಕ್ಕೂ ಉಂಟಾದ ನಷ್ಟವನ್ನೂ ಸೂಚಿಸಲಾಯಿತು. ವಕ್ತೃಗಳೊಳಗೆ ವಿದುಷಿಯೂ ಗ್ರಂಥಕರ್ತೃಯೂ ಆದ ಶ್ರೀಮತಿ ಕಾಶೀಬಾಯಿ ಕಾನೀಟಕರ್ ಎಂಬವರು ಒಬ್ಬರಾಗಿದ್ದರು.

ಬಳಿಕ ಅರ್ವಾಚೀನ ಮತ್ತು ಪ್ರಾಚೀನಕವಿತೆ, ಹಾಗೆಯೇ ಸಯಮಕ ನಿರ್ಯಮಕ ಕವಿತೆಗಳ ವಿಷಯವಾಗಿ ಬಂದಿದ್ದ ಮೂರು ಉಪನ್ಯಾಸಗಳ ಸಾರಾಂಶವನ್ನು ಹೇಳಲಾಯಿತು. 'ಪಾಶ್ಚಿಮಾತ್ಯ ವಾಙ್ಮಯಗಳೊಳಗಿಂದ ಉತ್ಕೃಷ್ಟವಾದ ವಿಚಾರರತ್ನಗಳನ್ನು ಕವಿತಾಬದ್ಧವಾಗಿ ತಮ್ಮ ಭಾಷೆಗೆ ತರಬೇಕೆಂದೂ, ಪಾಶ್ಚಿಮಾತ್ಯ ಪದ್ಧತಿಯನ್ನನುಸರಿಸಿ ಸ್ವತಂತ್ರ ಕಾವ್ಯಗಳನ್ನು ಬರೆಯಿಸಬೇಕೆಂದೂ, ಇತಿಹಾಸ ಪ್ರಸಿದ್ಧರಾದ ಮಹನೀಯರ ಚರಿತ್ರೆಗಳನ್ನು ಕುರಿತು ಕಾವ್ಯಗಳನ್ನೂ ಬರೆದು ಸಮಾಜಜಾಗ್ರತಿಯನ್ನುಂಟು ಮಾಡಬೇಕೆಂದೂ, ಆಧುನಿಕ ಕವಿತೆಗೂ ಯಮಕವು ಅತ್ಯಾವಶ್ಯಕವೆಂದೂ' ಮೊದಲನೆಯ ಲೇಖನದಲ್ಲಿ ಪ್ರತಿಪಾದಿಸಿದ್ದಿತು.

"ಮೋಡೀ (ಹಿಂದವೀ) ಲಿಪಿಯನ್ನು ಸರ್ಕಾರಿ ದಫ್ತರುಗಳಿಂದ ತೆಗೆದುಹಾಕಬೇಕೆಂದೂ ಕೊಟ್ಟ ತಮ್ಮ ಅಪ್ಪಣೆಯನ್ನು 'ರದ್ದು'ಪಡಿಸುವಂತೆ ಸರ್ಕಾರದವರನ್ನ ವಿಜ್ಞಾಪಿಸಿಕೊಳ್ಳಬೇಕೆಂದು ಮೂರನೆಯ ನಿರ್ಣಯವಾಯಿತು. 'ಅಶೋಕರಾಜ ಕಾಲದಿಂದ ಮೊದಲ್ಗೊಂಡು ಈ ಲಿಪಿಯು ಪ್ರಚಾರದಲ್ಲಿದ್ದಂತೆಯೂ, ಕ್ರಿ. ಶ. ೧೧೫೫ ರಲ್ಲಿ ಆ ಲಿಪಿಯಿಂದ ಬರೆಯಲಾದ ಒಂದು ಲೇಖನವು ದೊರೆತಿರುವುದೆಂದೂ, ಬ್ರಿಟಿಷ್ ಆಡಳಿತದಲ್ಲಿಯೂ ಅದೇ ಲಿಪಿಯು ಇದುವರೆಗೆ ಪ್ರಚಾರದಲ್ಲಿದ್ದ ಬಳಿಕ, ದೊಡ್ಡ 'ಆಫೀಸರು'ಗಳಿಗೆ ಓದಲು ಪ್ರಯಾಸವಾಗುವ ಕಾರಣ ಕಣ್ಣುಮುಚ್ಚಿ 'ಸಹಿ'ಮಾಡಬೇಕಾಗುತ್ತದೆಂಬ ನೆಪವಿಟ್ಟು ಅದನ್ನು ಈಗ ತೆಗೆದುಹಾಕುವುದು ಅಸಮಂಜಸವೆಂದೂ, ಯಾವ ಲಿಪಿಯಾದರೂ ಸರಿಯೆ, ಅವಸರದಿಂದ ಬರೆದುದು ಸುಗಮವಾಗಿರುವುದಿಲ್ಲವೆಂದೂ, ಇಂಗ್ಲಿಷಿನಲ್ಲಿಯೂ ಅಚ್ಚಿನ ಲಿಪಿಯಿಂದ ಕೈ ಬರಹದ ಲಿಪಿಯು ಪ್ರತ್ಯೇಕವಾಗಿರುವುದೆಂದೂ, ದೊರೆತನದವರಿಗೆ ಈ ಮೊದಲು ಮಾಡಿದ ಒಂದು ವಿಜ್ಞಾಪನೆಗೆ ನಿರಾಶೆಯ ಉತ್ತರ ದೊರೆತರೂ ಪುನಃ ಪ್ರಾರ್ಥಿಸಿಕೊಳ್ಳಬೇಕೆಂದೂ, ಇತ್ಯಾದಿಯಾಗಿ ಅನೇಕರು ಈ ನಿರ್ಣಯವನ್ನು ಕುರಿತು ಮಾತನಾಡಿದರು.

'ನೂತನ ಗ್ರಂಥಲೇಖಕರುಗಳಿಗೆ ಉತ್ತೇಜನ ಕೊಡುವ ಮಾರ್ಗಗಳು' ಎಂಬ ಶಿರೋನಾಮೆಯ ಕೆಳಗೆ ಮೂರು ಲೇಖನಗಳು ಬಂದಿದ್ದುವು. ಗ್ರಂಥಕರ್ತೃಗಳಿಗೆ ಪರಿಷತ್ತಿನವರು ಯೋಗ್ಯತಾದರ್ಶಕವಾದ ಪ್ರಶಂಸಾ ಪತ್ರಿಕೆಗಳನ್ನು ಕೊಡಬೇಕೆಂದೂ, ವರ್ಷಾನುವರ್ಷ ಉಂಟಾಗುವ ಗ್ರಂಥಗಳ ಒಂದು ಪಟ್ಟಿಯನ್ನು ಸಿದ್ಧಪಡಿಸಿ ಪ್ರಚುರಗೊಳಿಸಬೇಕೆಂದೂ, ಉತ್ತಮವಾಗಿ ಕಂಡು ಬಂದ ಗ್ರಂಥಗಳ ಕೆಲವು ಪ್ರತಿಗಳನ್ನು ಪರಿಷತ್ತಿನವರು ಒಟ್ಟಾಗಿ ಕೊಂಡುಕೊಂಡು ತಮ್ಮ ಸಾಮಾಜಿಕರುಗಳಿಗೆ ಅನುಕೂಲವಾದ ದರಗಳಿಂದ ಬೆಲೆಗೆ ಕೊಡಬೇಕೆಂದೂ, ಮರಾಟೀ ಭಾಷೆಯನ್ನು ವಿಶ್ವವಿದ್ಯಾಲಯದ ಪರೀಕ್ಷೆಗಳಿಗೆ ಅಂಗೀಕರಿಸುವಂತೆ ಪ್ರಯತ್ನಪಟ್ಟರೆ ಗ್ರಂಥಪ್ರಕಾಶನಕ್ಕೆ ಸಹಾಯವಾಗುವುದೆಂದೂ, ಸಮ್ಮೇಳನದ ಉಪಶಾಖೆಗಳಾಗಿ ಗ್ರಂಥಕರ್ತೃಗಳ ಒಂದು ಮಂಡಲವನ್ನೂ, ಮುದ್ರಕ, ಪ್ರಕಾಶಕ, ವಿಕ್ರಯಕರ ಒಂದು ಮಂಡಲವನ್ನೂ ಏರ್ಪಡಿಸಬೇಕೆಂದೂ, ಮುದ್ರಕ ಮಂಡಲದವರು ಸಹಕಾರ ತತ್ವವನ್ನವಲಂಬಿಸಿ ಅನುಕೂಲವಾದ ದರಗಳಿಂದ ಪುಸ್ತಕಗಳನ್ನು ಅಚ್ಚು ಹಾಕಿ ಮಾರುವುದಕ್ಕೆ ಅನುಕೂಲಪಡಿಸಿಕೊಂಡಿರಬೇಕೆಂದೂ, ಇವೇ ಮೊದಲಾದ ಅನೇಕ ಸೂಚನೆಗಳು ಆ ಲೇಖನಗಳಲ್ಲಿದ್ದುವು.

ತರುವಾಯ "ಹಿಂದೂಸ್ಥಾನದ ಶಾಲೆಗಳಲ್ಲಿಯೂ ಯೂನಿವರ್ಸಿಟಿಗಳಲ್ಲಿಯೂ ಆರ್ಟ್ಸ್" ಶಾಖೆಯ ಯಾವತ್ತು ಪರೀಕ್ಷೆಗಳ ಅಭ್ಯಾಸಕ್ರಮದಲ್ಲಿ ದೇಶಭಾಷೆಗಳು ಆವಶ್ಯಕ ವಿಷಯವಾಗಿರತಕ್ಕದ್ದು" ಎಂಬ ಅಯಿದನೆಯ ನಿರ್ಣಯವು ಸಭೆಯವರಿಂದ ಅಂಗೀಕರಿಸೋಣಾಯಿತು. ಇದನ್ನು ಕುರಿತು ಮಾತನಾಡುತ್ತ ಪ್ರಸಿದ್ಧಕಾದಂಬರೀ ಲೇಖಕರಾದ ಮ. ಹರಿನಾರಾಯಣ ಆಪಟೆ ಎಂಬವರು—'ಈ ನಿರ್ಣಯವು ವಿಚಿತ್ರವಾಗಿದೆ. ದೇಶ ನಮ್ಮದು, ಸರ್ಕಾರವೂ ನಮ್ಮದು; ಜನರು ನಮ್ಮವರು, ಇನ್ನು ಭಾಷೆಯೂ ನಮ್ಮದೇ, ಹೀಗಿರುತ್ತ ನಮ್ಮ ಭಾಷೆಯನ್ನು ನಮಗೆ ಕಲಿಸಿರೆಂದು ಬೇಡುವುದರ ಅರ್ಥವೇನು? ಕೆಲವು ವರ್ಷಗಳಿಗೆ ಹಿಂದೆ ನ್ಯಾಯಮೂರ್ತಿಗಳಾದ ರಾನಡೆಯವರ ಪ್ರಯತ್ನಗಳಿಂದ ದೇಶಭಾಷೆಗಳು (ಬೊಂಬಾಯಿ) ಎಮ್. ಎ. ಪರೀಕ್ಷೆಗೆ ಅಂಗೀಕರಿಸಲಾದುವು. ಮೊದಲಲ್ಲಿ ಪ್ರವೇಶ ಪರೀಕ್ಷೆಯ ಅಭ್ಯಾಸಕ್ರಮದಲ್ಲಿಯೂ ದೇಶಭಾಷೆಗಳು ಸಮಾವಿಷ್ಟವಾಗಿದ್ದುವು; ಆದರೆ ಮುಂದೆ ಅವುಗಳಲ್ಲಿ ಪರೀಕ್ಷಿಸುವ ಕೆಲಸವನ್ನು ಯೂನಿವರ್ಸಿಟಿಯವರು ಆಯಾ ಶಾಲೆಗಳಿಗೇ ಒಪ್ಪಿಸಿ ಬಿಟ್ಟರು. ಮರಾಟಿಯಲ್ಲಿ ಉಚ್ಚ ಪರೀಕ್ಷೆಗಳಿಗೆ ಬೇಕಾದಷ್ಟು ವಾಙ್ಮಯವಿಲ್ಲವೆಂಬ ಮಾತು ನಿರಾಧಾರವಾದುದು. ಎಮ್. ಎ. ಗೆ ಬೇಕಾದ ಗ್ರಂಥಗಳಿದ್ದ ಬಳಿಕ ಅದಕ್ಕೂ ಕೆಳಗಣ ಪರೀಕ್ಷೆಗಳಿಗೆ ತಕ್ಕ ಪುಸ್ತಕಗಳಿಲ್ಲವೆನ್ನುವುದು ಯುಕ್ತಿಯುಕ್ತವಾಗಲಾರದು" ಎಂಬುದಾಗಿ ಹೇಳಿದರು.

'ಮಾಧ್ಯಮಿಕ (Secondary) ಶಿಕ್ಷಣವನ್ನು ಯಾವತ್ತು ವಿದ್ಯಾಶಾಲೆಗಳಲ್ಲಿ ದೇಶಭಾಷಾಮೂಲವಾಗಿಯೆ ಕೊಡತಕ್ಕದ್ದು' ಎಂಬುದು ಆರನೆಯ ನಿರ್ಣಯವಾಗಿ ಅಂಗೀಕರಿಸಲ್ಪಟ್ಟಿತು. ಈ ವಿಷಯವನ್ನು ಪ್ರತಿಪಾದಿಸುತ್ತ ಶ್ರೀಯುತ ಆಪಟೆಯವರು 'ಯೂನಿವರ್ಸಿಟಿಗಳನ್ನು ಸ್ಥಾಪಿಸಿ ಅರ್ಧ ಶತಮಾನಕ್ಕೂ ಅಧಿಕಕಾಲ ಕಳೆದ ಬಳಿಕ, ರಾನಡೆ, ಗೋಖಲೆ ಮೊದಲಾದ ಮಹನೀಯರನ್ನುಂಟು ಮಾಡಿರತಕ್ಕ ಆ ಯೂನಿವರ್ಸಿಟಿಗಳ ಪದ್ಧತಿಯನ್ನು ಬದಲಾಯಿಸಬೇಕೆಂದು ಕೇಳಲು ಕಾರಣವೇನೆಂಬ ಪ್ರಶ್ನೆ ಹುಟ್ಟಬಹುದಾಗಿದೆ. ಆದರೆ ದೇಶಭಾಷಾ ಮೂಲವಾಗಿ ಶಿಕ್ಷಣ ಕೊಟ್ಟಿದ್ದರಾದರೆ ಒಂದಕ್ಕೆ ನೂರರಂತೆ ರಾನಡೆಯರೂ ಗೋಖಲೆಯರೂ ಹುಟ್ಟದೆ ಇರುತ್ತಿರಲಿಲ್ಲವೆಂಬುದನ್ನು ಎಣಿಸಿಕೊಳ್ಳಬೇಕಾಗಿದೆ. ಪರಭಾಷೆಯಿಂದ ಅಭ್ಯಾಸಮಾಡುವುದೂ ಮತ್ತು ಪಾಠ ಮೂಲವಾಗಿ ಕಲಿಸದೆ ಕನ್ನಡಿಯಲ್ಲಿ ತೋರುವ ವಿಪರೀತ ಚಿತ್ರಮೂಲವಾಗಿ

ಕಲಿಸುವುದೂ ಒಂದಾಗಿದೆಯೆನ್ನಬಹುದು. ಜರ್ಮನಿಯಲ್ಲಿ ನಮ್ಮಲ್ಲಿಗಿಂತ ಅಧಿಕ ವಿಷಯಗಳನ್ನು ಅಧಿಕ ಸುಕರವಾಗಿ ಕಲಿಸುವರು. ಇದಕ್ಕೆ ಯಾವತ್ತು ವಿಷಯಗಳನ್ನು ದೇಶಭಾಷಾ ಮೂಲವಾಗಿ ಕಲಿಸುತ್ತಿರುವುದೇ ಕಾರಣವಾಗಿರುವುದೆಂದು ಒಬ್ಬ ಜರ್ಮನ್ ಪಂಡಿತರು ಹೇಳಿರುವರು' ಎಂದರು

ಇದೇ ವಿಷಯುವನ್ನು ಸಮರ್ಥಿಸಿ 'ಈ ವಿಷಯದಲ್ಲಿ ಸರ್ಕಾರದವರು ಪ್ರತಿಕೂಲರಾಗಿರುವರೆಂದು ಕೆಲವರು ಮಾತನಾಡಿಕೊಳ್ಳುವುದು ತಪ್ಪೆಂಬುದಾಗಿಯೂ, ಕೆಲವು ಮಟ್ಟಿಗೆ ವಿದ್ಯಾರ್ಥಿಗಳೂ ಅವರ ಹೆತ್ತವರೂ ವಿರುದ್ಧರಾಗಿರುವರೆಂಬುದಾಗಿಯೂ, ದೇಶಭಾಷೆಗಳಲ್ಲಿ ಪಾರಿಭಾಷಿಕ ಶಬ್ದಗಳಿಲ್ಲವೆಂಬುದಾಗಿ ಆಕ್ಷೇಪಿಸುವುದು ನ್ಯಾಯವಲ್ಲವೆಂಬುದಾಗಿಯೂ, ಪ್ರವೇಶ ಪರೀಕ್ಷೆಗೆ ಬೇಕಾದಷ್ಟು ಪರಿಭಾಷೆಯು (ದೇಶಭಾಷೆ) ಪ್ರೈಸಿಂಗ್ ಕಾಲೇಜುಗಳಲ್ಲಿ ಈ ಮೊದಲೇ ಸಿದ್ಧವಾಗಿರುವುದೆಂಬುದಾಗಿಯೂ ಸರ್ಕಾರದವರು ಈ ವಿಷಯದಲ್ಲಿ ಆಗಿಂದಾಗ ಅನುಕೂಲಾಭಿಪ್ರಾಯವನ್ನೇ ಪ್ರಕಟಿಸಿರುವರೆಂಬುದಾಗಿಯೂ ಪ್ರೊ। ಮ ರಾ ಪರಾಂಜಪೆ, ಎಮ್ ಎ ಯವರು, ಹೇಳಿದರು.

ಇಂಗ್ಲಿಷ್ ಭಾಷೆಯೊಂದನ್ನುಳಿದು ಸರ್ವ ವಿಷಯಗಳನ್ನು ಎಮ್ ಎ ಪರ್ಯಂತ ಯಾವತ್ತು ಪರೀಕ್ಷೆಗಳಿಗೆ ದೇಶಭಾಷೆಯಿಂದಲೇ ಕಲಿಸಬೇಕೆಂದು ಪ್ರೊ ವಿಜಾಪುರಕರ್‌ಯವರೂ, ದೇಶಭಾಷಾ ಮೂಲಕ ವಿದ್ಯಾಭ್ಯಾಸ ನಡೆದರೆ ಕಾಲವು ದುರ್ವ್ಯಯವಾಗದೆ ಶರೀರವು ಕೂಡ ಕೆಡದೆಂದು ಸೌ। ಕಾಶೀಬಾಯಿ ಕಾನೀಟಕರ್‌ಯವರೂ ಹೇಳಿದರು

ಆ ಮೇಲೆ "ಗಂಡು ಮತ್ತು ಮಕ್ಕಳ ಶಿಕ್ಷಣ ಕಾರ್ಯದಲ್ಲಿ ಉಪಯೋಗಿಸತಕ್ಕಂಥ ವಿಶಿಷ್ಟ (special) ವಾಙ್ಮಯವನ್ನು ಸಿದ್ಧಪಡಿಸಲು ಉಪಕ್ರಮಿಸತಕ್ಕದ್ದು" ಎಂಬ ಏಳನೆಯ ನಿರ್ಣಯವು ಸಭೆಯಲ್ಲಿ ಅಂಗೀಕೃತವಾಯಿತ. ಮಕ್ಕಳ ಕೈಗೆ ಬೀಳುವ ಪುಸ್ತಕಗಳು ಅವರಿಗೆ ತಾನಾಗಿ ಮೆಚ್ಚಿಕೆಯಾಗುವಂತೆ ನೋಡುವುದಕ್ಕೆ ಚೆಲುವಾಗಿ ದಿವ್ಯವಾದ ಅಕ್ಷರಗಳಿಂದಲೂ ಮಧುರವಾದ ಭಾಷೆಯಿಂದಲೂ ಚೆಲುವಾದ ಚಿತ್ರಗಳಿಂದಲೂ ಕೂಡಿರಬೇಕೆಂದೂ, ಇದೇ ರೀತಿಯಲ್ಲಿ ವಾಙ್ಮಯೇತಿಹಾಸಾದಿ ವಿಷಯಗಳನ್ನೂ ಮಕ್ಕಳಿಗೆ ಕಲಿಸಬೇಕೆಂದೂ, ಸ್ತ್ರೀಪುರುಷರ ಚರಿತ್ರೆಗಳನ್ನು ಮಕ್ಕಳ ಮುಂದೆ ಸುಲಭವಾದ ಭಾಷೆಯಿಂದ ಬರೆದಿಟ್ಟರೆ ನಿರಾಯಾಸವಾಗಿ ನೀತಿ ಶಿಕ್ಷಣವು ದೊರೆತಂತಾಗುವುದೆಂದೂ, ಮಕ್ಕಳ ಮಾನಸ ಶಾಸ್ತ್ರವನ್ನು ಬಲ್ಲವರು ಈ ಕಾರ್ಯದಲ್ಲಿ ಪ್ರವರ್ತಿಸಬೇಕೆಂದೂ ಹಲವರು ಈ ನಿರ್ಣಯವನ್ನು ಕುರಿತು ಮಾತನಾಡಿದರು

'ಆಗಿಂದಾಗ ನೂತನವಾಗಿ ಪ್ರಚುರವಾಗುವ ವಾಙ್ಮಯವನ್ನು ನಿಷ್ಪಕ್ಷಪಾತ ಬುದ್ಧಿಯಿಂದ [illegible]ಶೀಲಿಸಿ ಅದನ್ನು ಕುರಿತು ಅಧಿಕಾರಯುಕ್ತ ಮಂಡಲಿಯವರ ಅಭಿಪ್ರಾಯವು ತಿಳಿದುಬರುವುದು ಅವಶ್ಯವಾಗಿರುವುದರಿಂದ ಅದಕ್ಕಾಗಿ ಸಾಹಿತ್ಯ ಪರಿಷತ್ತಿನ ಕಾರ್ಯ ನಿರ್ವಾಹಕರು ಒಂದು ವಿಶೇಷ ಉಪಸಭೆಯನ್ನು ನಿಯಮಿಸತಕ್ಕದ್ದು" ಎಂಬದಾಗಿ ಎಂಟನೆಯ ನಿರ್ಣಯವಾಯಿತು

ತದನಂತರ 'ವಾಙ್ಮಯ ಸೇವೆಯನ್ನು ವಿಶೇಷವಾಗಿ ಮಾಡಿ ಅಸಾಧಾರಣವಾದ ಕೀರ್ತಿಯನ್ನು ಸಂಪಾದಿಸಿರುವ ಪ್ರತಿಭಾಶಾಲಿಗಳಾದ ಕವಿಗಳಿಗೂ ಲೇಖಕರುಗಳಿಗೂ ಸಾರ್ವಜನಿಕರೀತ್ಯಾ ಬಹುಮಾನ ಮಾಡುವುದಕ್ಕಾಗಿ ಯಾವುದೊಂದು ಕ್ರಮಬದ್ಧವಾದ ಏರ್ಪಾಡು ಇರಬೇಕಾದುದು ಅವಶ್ಯವಾಗಿರುವುದರಿಂದ ಅಂಥ ಸಯುಕ್ತಿಕವಾದ ಏರ್ಪಾಡನ್ನು ಮುಂದಿನ ಸಮ್ಮೇಲನದ ಕಾಲದಲ್ಲಿ ಕಾರ್ಯನಿರ್ವಾಹಕ ಸಭೆಯವರು ಸಿದಗೊಳಿಸಿ ತರತಕ್ಕದ್ದು' ಎಂದು ಒಂಬತ್ತನೆಯ ನಿರ್ಣಯವು ಸಭಿಕರಿಂದ ಒಪ್ಪಲಾಯಿತು ಹೀಗೆ ಬಹುಮಾನ ಕೊಡುವುದು ಖಂಡಿತವಾಗಿ ಗೊತ್ತಾದರೆ ಪದಕಗಳನ್ನು ಕೊಡುವ ಬಗ್ಗೆ ೧೦೦ ರೂಪಾಯಿ ಕೊಡುವೆನೆಂದು ಡಾ। ತಾಂಬೇ ಎಂಬವರೂ, ಕಾರ್ಯನಿರ್ವಾಹಕರೂ ತಾನೂ ಗೊತ್ತುಪಡಿಸುವ ವಿಷಯದಲ್ಲಿ ಉತ್ತಮವಾದ ಕಾವ್ಯವನ್ನು ಬರೆದವರಿಗೆ ೧೦೦ ರೂಪಾಯಿ ಕೊಡುವೆನೆಂದು 'ಕಾವ್ಯರತ್ನಾವಳಿ'ಯ ಕರ್ತೃಗಳಾದ ಮ। ಫಡಣೀಸರೂ ಒಪ್ಪಿಕೊಂಡರು.

ಇಲ್ಲಿಗೆ ಅಧಿವೇಶನದ ಎರಡನೆಯ ದಿನದ ಕಾರ್ಯಗಳು ಮುಗಿದು ಸಭಾವಿಸರ್ಜನವಾಯಿತು.

ಬೊಂಬಾಯಿ ಕರ್ನಾಟಕದವರ ಅಡಚಣಿಗಳು.

ಬೊಂಬಾಯಿ ನ್ಯಾಯವಿಧಾಯಕ ಸಭೆಯು ಕಳೆದ ಜುಲೈ ತಾ. ೧೨ನೇ ಸೋಮವಾರ ಸೇರಿದ್ದಾಗ ಆನರೆಬಲ್ ರಾವಸಾಹೇಬ ವೆಂಕಟೇಶ ಶ್ರೀನಿವಾಸ ನಾಯಕರವರು ತಮ್ಮ ಭಾಷಣದಲ್ಲಿ; "ಬೊಂಬಾಯಿಯ ವಿಶ್ವವಿದ್ಯಾಲಯದಲ್ಲಿ ಕರ್ನಾಟಕ ಪ್ರಾಂತ್ಯದ ಪ್ರತಿನಿಧಿಗಳನ್ನು ಈಗ ಇರುವುದಕ್ಕಿಂತ ಅಧಿಕವಾಗಿ ನೇಮಿಸಲು ಸರಕಾರದವರು ಏರ್ಪಾಡು ಮಾಡಬೇಕೆಂದೂ, ಸೋಲಾಪುರ ಜಿಲ್ಲೆಯಲ್ಲಿ ಕನ್ನಡವು ಮಾತೃಭಾಷೆಯಾಗಿರುವ ಜನರೇ ಪ್ರಾಯಶಃ ಇರತಕ್ಕ ೭೦ ಗ್ರಾಮಗಳನ್ನು ವಿಜಾಪುರ ಜಿಲ್ಲೆಗೆ ಸೇರಿಸಬೇಕೆಂದೂ, ಇದಾಗದಿದ್ದರೆ ಇದನ್ನು ಪ್ರತ್ಯೇಕವಾದ ಒಂದು ಪೇಠಾ ಎಂದರೆ ಸಬ್ ತಾಲೂಕು ಮಾಡಬೇಕೆಂದೂ, ಈ ಎಪ್ಪತ್ತು ಗ್ರಾಮಗಳಲ್ಲಿಯೂ ಒಂದೇ ಕನ್ನಡ ಶಾಲೆ ಇರುವುದರಿಂದ ಅಲ್ಲಿಯ ಕನ್ನಡಿಗರು ಮರಾಠೀ ಜನಗಳಲ್ಲಿ ಬೆರೆತುಹೋಗಿ ತಮ್ಮ ಸ್ವಭಾಷೆಗೆ ಎರವಾಗಿರುವರೆಂದೂ" ವಿಜ್ಞಾಪಿಸಿಕೊಂಡರು ಈ ಆಕ್ಷೇಪಣೆಗೆ ಪ್ರತ್ಯುತ್ತರವಾಗಿ ಬೊಂಬಾಯಿಯ ವಿದ್ಯಾಧಿಕಾರಿಗಳಾದ ಆ। ವಿ। ಶಾರ್ಪ್ (Sharp) ಸಾಹೇಬರವರು 'ಕಳೆದ ವರ್ಷದಲ್ಲಿ ಯೂನಿವರ್ಸಿಟಿಯವರು ತುಂಬಾ ಹಣವನ್ನು ವೆಚ್ಚ ಮಾಡಿದ್ದರೆಂದೂ, ದೂರದೂರದ "ಗ್ರಹಸ್ಥರನ್ನು ಸೆನೇಟಿನ ಸಭಿಕರಾಗಿ ನಿಯಮಿಸಿದ ಪಕ್ಷದಲ್ಲಿ ಈ ವೆಚ್ಚವು ಬಹಳವಾಗಿ ಹೆಚ್ಚುವುದೆಂದೂ" ಅಪ್ಪಣೆ ಕೊಡಿಸಿದರು

ಧಾರವಾಡದಲ್ಲಿ ಒಂದು ಕಾಲೇಜನ್ನು ನೂತನವಾಗಿ ಹೊರಡಿಸುವುದು ಅಗತ್ಯವೇ? ಅಥವಾ ಅಧಿಪತ್ಯದಲ್ಲಿ ಈಗ ಇರುವ ಬೇರೆ ಕಾಲೇಜುಗಳನ್ನೇ ವಿದ್ಯಾಪ್ರಸಾರಕ್ಕೆ ಅಧಿಕ ಸಮರ್ಪಕವಾಗುವಂತೆ ಮಾಡಿದರೆ ಬೊಂಬಾಯಿ ಕರ್ನಾಟಕದವರ ನ್ಯೂನತೆಯು ಪರಿಹಾರವಾಗಲಾರದೇ? ಎಂಬುದಾಗಿ ಬೊಂಬಾಯಿ ಯೂನಿವರ್ಸಿಟಿಯವರ ಅಭಿಪ್ರಾಯಕ್ಕಾಗಿ ಸರಕಾರದವರು ಬರೆದು ಕಳುಹಿಸಿದ್ದರು 'ಧಾರವಾಡದಲ್ಲಿ ಮಾತ್ರವಲ್ಲದೆ ಅಧಿಪತ್ಯದ ಇತರ ಭಾಗಗಳಲ್ಲಿಯೂ ಕಾಲೇಜುಗಳನ್ನು ಹೊರಡಿಸುವುದು ಅಗತ್ಯವೆಂದು ಸೆನೇಟಿನವರು ಅಭಿಪ್ರಾಯಪಡುತ್ತಿದ್ದಾರೆ—ಎಂಬ ಅರ್ಥವನ್ನು ಕೊಡುವ ಒಂದು ನಿರ್ಣಯವನ್ನು ಸರ್ ನಾರಾಯಣ ಚಂದಾವರಕಾರರವರು ಮುಂದಿನ ಸೆನೇಟ ಸಭೆಯ ಮುಂದೆ ತರುವರೆಂದು ತಿಳಿಯ ಬರುತ್ತಿದೆ

ಪತ್ರವ್ಯವಹಾರ.

ಪಾಂಜಲ್, ಪನ್ನಿಗೋಲು,
ತಾ 18—7—15

ಅಯ್ಯಾ ಪತ್ರಕರ್ತರೇ,

ಮತವೈಮನಸ್ಸಿನಿಂದ ಕ್ರೈಸ್ತ ಹಿಂದುಗಳಿಗೂ, ಹಿಂದು ಮುಸಲ್ಮಾನರಿಗೂ ಆಗ್ಯಾಗ್ಯೆ ಬೇರೆ ಊರುಗಳಲ್ಲಿ ಆಗುವ ಜಗಳಗಳ ವಿಷಯ ನಾವು ಆಗ್ಯಾಗ್ಯೆ ನಿಮ್ಮ ಪತ್ರದಲ್ಲಿ ಓದುತ್ತೇವೆ ಆದರೆ ಇದು ಹ್ಯಾಗೆ? ಮತಭೇದದಿಂದ ನೆರೆಕರೆಯುವರಿಗೆ ಯಾಕೆ ಜಗಳ ಹುಟ್ಟಬೇಕು? ತಮ್ಮ ತಮ್ಮ ಮತದ ಧರ್ಮವನ್ನು ತಮ್ಮ ತಮ್ಮ ಒಳಗೆ ವರ್ತಿಸಿ, ಸಾಮಾಜಿಕ ಐಕ್ಯವನ್ನು ಯಾಕೆ ಕಾಪಾಡಬಾರದು? ಎಂಬ ಸಂಗತಿಗಳು ನನಗೆ ಬಹಳ ಮನವಿಚಾರಕ್ಕೆ ಕಾರಣ ಕೊಡುತ್ತಿದ್ದವು. ಆದರೆ ಜೂನ್ ೩ ತಾ ೧೫ರಲ್ಲಿ ನಮ್ಮ ರೊ ಕ ಕ್ರೈಸ್ತರಿಗಾಗಿ ನಡಿಸುವ ಕೊಂಕೆನಿ ದಿರ್ವೆಂ ಎಂಬ ಪತ್ರದಲ್ಲಿ ಕೊಟ್ಟ ಹಿಂದುಗಳ ಮನಸ್ಸನ್ನು ನೋಯಿಸುವ ದೂಷಣೆಯುನ್ನೂ, ತಮ್ಮ ಮೊನ್ನೆ ತಾ ೧೬ನೆಯ ಪತ್ರ ಸಂಚಿಕೆಯಲ್ಲಿ ಅದರ ವಿಷಯ ಬರೆದ ಸಂವಾದಕರ ಲಿಪಿಯು ಈ ಮತಬೇದ ವಿಷಯ ವೈಮನಸ್ಸು ಹ್ಯಾಗೆ ಹುಟ್ಟಿಸಬಹುದೆಂದು ನನಗೆ ಕಂಡುಬರುವ ಹಾಗೆ ಮಾಡುತ್ತವೆ.

ನಮ್ಮ ಪಾಂಜಲ್ ಗ್ರಾಮದಲ್ಲಿ ಮತಭೇದವು ವಿಪರೀತವಾಗಿದ್ದರೂ, ಸಾಮಾಜಿಕ ಒಕ್ಕಟ್ಟು ಘಟ್ಟಿಯಾಗಿರದಿದ್ದರೆ ಕಾಲತೆಗೆಯುವದು ಬಹಳ ಕಷ್ಟವಾಗಬೇಕು. ಅದು ಹೇಗೆಂದರೆ:—ನಮ್ಮ ಹಳ್ಳಿಗೆ ಬೇಕಾದ ಸಾಮಾನು ಸಿಕ್ಕುವ ಅಂಗಡಿಯು ಇದಿನೆಬ್ಯಾರಿದ್ದಾಗಿರುತ್ತದೆ—ಗ್ರಾಮದ ಪಟೇಲರು ನಾರಾಯಣ ಭಟ್ಟರೂ, ನಮ್ಮ ಧನಿಯು ಶ್ಯಾಂತಪ್ಪಶೆಟ್ಟಿಯವರೂ, ಹಣದಾರನು ಶಿದ್ಧಭಂಗರೂ, ಬಡಿಗೆಯುವನೊಬ್ಬನು ವೀರಪ್ಪ ಆಚಾರಿಯೂ ಆಗಿರುತ್ತಾರೆ. ನಾವು ರೊ. ಕ. ಕ್ರೈಸ್ತರಾದರೂ ಬೇರೆಯವರ, ಹೆಚ್ಚಾಗಿ ಬಂಟರ ಗದ್ದೆಗಳನ್ನು ಸಾಗುವಳಿಮಾಡಿ ಜೀವನೋಪಾಯ ನಡಿಸುವ ಬಡರೈತರಾಗಿರುತ್ತೇವೆ ಹೀಗಿರುತ್ತಾ ನಾವೆಲ್ಲರೂ ಮತಭೇದಕ್ಕೆ ಲಕ್ಷಕೊಡದೆ ಒಂದೇ ತಂದೆತಾಯಿ ಮಕ್ಕಳಂತೆ ಜೀವಿಸದೆ ಹ್ಯಾಗೆ ಇರುವದು?

ಇತ್ತಲಾಗೆ ಸದರ್ಹಿ ಕೊಂಕೆನಿ ದಿರ್ವೆಂ ಇವು ಅನಾವಶ್ಯ ಕೊಂಕೆಮಾತುಗಳನ್ನಾಡಿ ಈ ಮತಭೇದ ವಿಷಯ ಮನಕ್ಲೇಶ ಹುಟ್ಟಿಸಿದ್ದು ಬಹಳ ಬೇಜಾರಮಾತ್ರವಲ್ಲಾ; ಭಯಕ್ಕೂ ಕಾರಣಕೊಡುತ್ತದೆ. ಅದು ಹೇಗೆಂದರೆ, ಅನ್ಯಮತಸ್ಥರನ್ನು ದೂಷಿಸಿದಕ್ಕಾಗಿ ನಮ್ಮ ಗ್ರಾಮದ ಮುಸಲ್ಮಾನರೂ, ಬ್ರಾಹ್ಮಣರೂ, ಬಂಟರೂ, ಬೇರೆ ಹಿಂದುಗಳೂ, ಸರ್ವರೂ ಕೂಡಿ ನಮ್ಮನ್ನು ರೊ. ಕ. ಕ್ರೈಸ್ತರನ್ನು ಬಹಿಷ್ಕಾರಮಾಡಿದರೆ ನಾವು ಸತ್ತೇಹೋದೆವು. ಇದಿನೆಬ್ಯಾರಿಯು ಕಡ ಮಾತ್ರವಲ್ಲಾ ನಗದಿ ಹಣಕ್ಕೆ ಸಹಾ ಸಾಮಾನು ಕೊಡುವದಿಲ್ಲವಾದರೆ ಪ್ರತಿ ಒಂದು ಚಿಲ್ಲರೆ ವಸ್ತುವಿಗೂ, ನಾವು

೨-೬ ಮೈಲು ದೂರದಲ್ಲಿರುವ ಪೇಟೆಗೆ ಹೋಗುವ ಅವಶ್ಯ ಬೀಳುತ್ತದಲ್ಲಾ. ಅಲ್ಲಿ ಸಹ ಕಟ್ಟು ನಡಿಸಿದರೆ ನಾವು ಏನುಮಾಡುವದು. ಮಾತ್ರವಲ್ಲಾ ಉಳಿದವರು ನಮಗೆ ಯಾವತ್ತು ಸಾಹಿತ್ಯಕೊಡುವದಿಲ್ಲವಾದರೆ ನಾವು ಸಾಗುವಳಿ ಕೆಲಸ ಹ್ಯಾಗೆ ನಡಿಸುವದು?

ಮುಖ್ಯವಾಗಿ ನಮ್ಮ ಧನಿಗಳಾದ ಶಾಂತಪ್ಪ ಶೆಟ್ಟಿಯವರು—ಅಪ್ಪಾ, ಪರಿಶುದ್ಧ ರೊಕ್ಕ ಕ್ರೈಸ್ತರೇ ನಿಮಗೆ ನಮ್ಮ ಶಿಕ್ಷಕರಾದ ಹಿಂದುಗಳ ಸ್ಥಳ ಬೇಡ, ನೀವು ನರಕಕ್ಕೆ ಹೋಗುವಿರಿ, ಆದಕ್ಕಾಗಿ ನೀವು ಇಲ್ಲಿ ನಿಲ್ಲುವದೇ ಅವಶ್ಯವಿಲ್ಲವೆಂದು ನಮ್ಮನ್ನು ಕುಟುಂಬ ಸಮೇತ ಓಡಿಸಿಬಿಟ್ಟರೆ ನಾವು ಗದ್ದೆ ಹುಡುಕಿ ಎಲ್ಲಿ ಹೋಗುವದು? ಇಡೀ ಹಳ್ಳಿಯವರು ನಮ್ಮ ೬ ೧೦ ವ ನೆಯವರನ್ನು ಮತಕ್ಕಾಗಿ ಹಿಂಸೆಪಡಿಸಿದರೆ ಯಾವ ತರದಲ್ಲಿ ನಿವಾರಣೆ ಹೊಂದಬಹುದು?

ನಮ್ಮ ಪಾದ್ರಿಸಾಹೇಬರ ಹತ್ತರ ದೂರು ತಕ್ಕೊಂಡುಹೋಗಬಹುದು. ಆದರೆ ನಮ್ಮನ್ನು ಹ್ಯಾಗೆ ಕಾಪಾಡಬಲ್ಲರು? ನಮ್ಮ ಇಷ್ಟು ಜನ ಕ್ರೈಸ್ತ ರೈತರಿಗೆ ಸಾಗುವಳಿ ಬಗ್ಗೆ ಭೂಮಿ ಕ್ರೈಸ್ತ ಧನಿಕರಲ್ಲಿ ಇದೆಯೇ? ನಮ್ಮ ಜೀವನೋಪಾಯಕ್ಕೆನೇ ಹಿಂದುಗಳ ಮೇಲೆ ನಾವು ನೆಲಗೊಂಡಿದ್ದಾಗ ಅವರನ್ನು ಖುಶಾಲಾಗಿ ಜೀವನೋಪಾಯವನ್ನು ಮಾಡುವ ಪಾದ್ರಿಸಾಹೇಬರುಗಳೂ, ಮಂಗಳೂರು ಪಟ್ಟಣಿಗ ಕ್ರೈಸ್ತರೂ ಅನಾವಶ್ಯ ಮತಭೇದಕ್ಕಾಗಿ ಚರ್ಚೆ ಎಬ್ಬಿಸಿ, ನಮ್ಮ ಧನಿಕರನ್ನೂ, ಪ್ರೋತ್ಸಾಹಕರನ್ನೂ ಈ ಪ್ರಕಾರ ಮನನೊಂದಿಸಿ ಸದರಿ ಕ್ರಿಯೆಯ ಫಲವಾಗಿ ನಾವು ಬಡ ಕ್ರೈಸ್ತರು ಸಾಯುವ ಹಾಗೆ ಮಾಡುವದು ಯಾತರ ನ್ಯಾಯ ?

ಆದ್ದರಿಂದ ಪ್ರಿಯ ಪತ್ರಕರ್ತರೇ, ಕೊಂಕಣಿದಿರ್ವೆಂ ಇವು ಎಬ್ಬಿಸಿದ ವಾದವಿವಾದವನ್ನು ನೀವು ನೀವು ಪಟ್ಟಣಿಗರೇ ನೋಡಿಕೊಳ್ಳಬೇಕಲ್ಲದೆ ಅದನ್ನು ನಮ್ಮ ಹಳ್ಳಿಗಳಿಗೆ ಸೋಂಕಿಸಿ ನಮ್ಮನ್ನು ಇಲ್ಲಿ ಹಿಂಸೆಪಡಿಸಬಾರದಾಗಿ ಇದರ ಮೂಲಕ ದೈನ್ಯಭಾವದಿಂದ ಬೇಡಿಕೊಳ್ಳುತ್ತೇನೆ

ಇಂತಿ ಪ್ರೀತಿಯಿರುವದು ರೊಕ್ಕ ಪಾವ್ಲು.

ಕ್ರಿಸ್ತ ಯೇಸು ಸ್ವಾಮಿಯೂ ಕನಡಾ ಜಿಲ್ಲೆಯ ಕೆಥೊಲಿಕರೂ.

	ಕ್ರಿಸ್ತ ಯೇಸು ಸ್ವಾಮಿಯ ಬೋಧನೆ	ಕನಡಾ ಜಿಲ್ಲೆಯ ಕೆಥೊಲಿಕರ ಅನುಸರಣೆ
1	ದೇವರಾದ ಜಗನಂತನು ಒಬ್ಬನಾಗಿರುತ್ತಾನೆ. ಆತನೊಬ್ಬನ ಚಿತ್ತಕ್ಕೆ ವಿಧೇಯರಾಗಿ ನಡೆಯಿರಿ	ತಂದೆಯೂ ಮಗನೂ ಪರಿಶುದ್ಧಾತ್ಮನೂ ಎಂಬ 3 ದೇವರುಗಳು ಇವರ ಪ್ರತಿನಿಧಿಗಳಾದ ಪಾದ್ರಿ ಸಾಹೇಬರಿಗೆ ವಿಧೇಯರಾಗಿ ನಡೆಯಿರಿ
2	ನಿನ್ನನ್ನು ನೀನು ಪ್ರೀತಿಸುವಂತೆಯೇ ನಿನ್ನ ನೆರೆಯವನನ್ನು ಪ್ರೀತಿಸು	ನಿನ್ನ ನೆರೆಯವನು ಕೆಥೊಲಿಕನಾದರೆ ಆತನನ್ನು ಪ್ರೀತಿಸು ಇಲ್ಲವಾದರೆ ತುಚ್ಛೀಕರಿಸು
3	ಮನುಷ್ಯರು ದೇವರ ಮಕ್ಕಳಾಗಿರುತ್ತಾರೆ. ಆದುದರಿಂದ ಸರ್ವರನ್ನು ಪ್ರೀತಿಸಿರಿ ಯಾರ ಕಡೆಗೂ ಅಪ್ರೀತಿ ಬೆಳೆಸಬೇಡಿರಿ	ಕೆಥೊಲಿಕರು ದೇವರ ಮಕ್ಕಳಾಗಿರುತ್ತಾರೆ. ಹಿಂದೂಗಳು ಸೈತಾನನ ಮಕ್ಕಳು ಅವರ ಸಂಪರ್ಕ ನಿಮಗೆ ಬೇಡಾ ಅವರ ಶಾಲೆಗೆ ಮಕ್ಕಳನ್ನು ಕಳುಹಿಸಿ ಕೊಡಬೇಡಿರಿ
4	ಸ್ವರ್ಗ ರಾಜ್ಯವು ನಿಮ್ಮ ಅಂತರ್ಯದಲ್ಲಿ ಉಂಟು. ಹೊರಗೆ ಇಲ್ಲ. ಆದುದರಿಂದ ಅಂತರ್ಯವನ್ನು ಶುದ್ಧ ವಿಟ್ಟು ದೇವರ ಚಿತ್ತಾನುಸ್ಮರಣೆ ಮಾಡಿರಿ.	ಸ್ವರ್ಗ ರಾಜ್ಯವು ಪಾದ್ರಿ ಸಾಹೇಬರ ಜೇಬಿನಲ್ಲಿ ಉಂಟು. ಬೇರೆ ಎಲ್ಲಿಯೂ ಇಲ್ಲ. ಆದುದರಿಂದ ಶುದ್ಧಾಂತಃಕರಣದಿಂದ ಅವರ ಚಿತ್ತಾನುಸ್ಮರಣೆ ಮಾಡಿರಿ ಪುಣ್ಯವು ಪಾರಲೋಕಾಗುವಾಗ ಕ್ರಿಯಕ್ಕೆ ಪಡಕೊಳ್ಳಿರಿ.
5.	ನಿಮ್ಮ ಪಾಪಗಳನ್ನು ನಿರ್ವಂಚನೆಯಿಂದಲೂ, ಪಶ್ಚಾತಾಪದಿಂದಲೂ, ದೇವರ ಮುಂದೆ ಹೇಳಿಕೊಳ್ಳಿರಿ. ದಯಾಳುವಾದ ಆತನು ಕ್ಷಮಿಸುವನು.	ನಿಮ್ಮ ಪಾಪಗಳನ್ನು ದೇವರ ಪ್ರತಿನಿಧಿಗಳಾದ ಪಾದ್ರಿ ಸಾಹೇಬರ ಕಿವಿಯಲ್ಲಿ ಗುಟ್ಟಿನಲ್ಲಿ ಹೇಳಿರಿ, ಅವರು ನಿಮ್ಮನ್ನು ಕ್ಷಮಿಸುವರು.
6.	ಬಹು ಸರ್ತಿ ನಮಗೆ ಮಕ್ಕಳ ಬಾಯಿಯಿಂದಲೂ, ಮೂಕರ ಬಾಯಿಯಿಂದಲೂ ಜ್ಞಾನ ದೊರಕುವುದುಂಟು.	ಪಾದ್ರಿ ಸಾಹೇಬರ ಬೋಧನೆ ಮಾತ್ರ ಕೇಳಿರಿ. ಅವರು ಹೊಗಳುವ ಪುಸ್ತಕಗಳನ್ನು ಮಾತ್ರ ಓದಿರಿ. ಅವರು ದೂಷಿಸುವ ಪುಸ್ತಕಗಳನ್ನು ಓದಿದರೆ, ಅಥವ ಅವರು ಒಪ್ಪದ ಭಾಷಣಗಳನ್ನು ಕೇಳಿದರೆ, ಹಿಂದುಗಳೊಡನೆ ಸಂಭಾಷಣೆ ಮಾಡಿದರೆ ಪಾಪಕ್ಕೆ ಗುರಿಯಾಗುವಿರಿ.
7.	ಯಾವ ಪಾಪಕ್ಕೂ ಕ್ಷಮೆ ಸಿಕ್ಕುವುದು. ಆದರೆ ಪರಿಶುದ್ಧಾತ್ಮನನ್ನು ನಿಂದಿಸುವ ಬ್ಲೆಸ್ಫೆಮಿಗೆ ಅನಂತ ಕಾಲದ ವರೆಗೆ ನರಕ ಯಾತನೆ ಸಿಕ್ಕುವುದು.	ಯಾವ ಪಾಪಕ್ಕೂ ಕ್ಷಮೆ ಸಿಕ್ಕುವುದು. ಪರಿಶುದ್ಧಾತ್ಮನ ಪ್ರತಿನಿಧಿಯಾದ ಪಾದ್ರಿ ಸಾಹೇಬರ ಪಾಪಗಳನ್ನು ಉಚ್ಚರಿಸುವ ಬ್ಲೆಸ್ಫೆಮಿಗೆ ಅನಂತ ಕಾಲದ ವರೆಗೆ ನರಕ ಯಾತನೆಗೆ ಗುರಿಯಾಗುವಿರಿ
8.	ಯಾವಾತನು ಪರಲೋಕದಲ್ಲಿರುವ ನನ್ನ ತಂದೆಯ ಚಿತ್ತವನ್ನು ಮಾಡುತ್ತಾನೊ, ಆತನೇ ನನ್ನ ಸಹೋದರನೂ ಸಹೋದರಿಯೂ, ಆತನೇ ನನಗೆ ಪ್ರಿಯನಾಗಿರುತ್ತಾನೆ.	ಯಾವಾತನು ಪಾದ್ರಿ ಸಾಹೇಬರಿಗೆ ವಿಧೇಯನಾಗಿ ನಡಕೊಳ್ಳುತ್ತಾನೊ, ಆತ ಯೇಸು ಸ್ವಾಮಿಗೆ ಪ್ರಿಯನಾದ ಕೆಥೊಲಿಕನು. ಅವರ ಅನುಜ್ಞೆಯನ್ನು ಅಲಕ್ಷಿಸಿ ನಡಕೊಳ್ಳುವವರು ಪಾಪಿಗಳೂ, ಸಿಸ್ಮೇಟಿಕರೂ ಆಗಿರುತ್ತಾರೆ.

ಸ್ವಾಮಿ, ಸ್ವದೇಶಾಭಿಮಾನಿ ಪತ್ರಾಧಿಪರೇ,

ಚಿಕ್ಕನಾದ ಒಬ್ಬ ನ್ಯಾಕನು ಕೊಂಕಣಿ ದಿರ್ವೆಂಯಲ್ಲಿ ಹಿಂದುಗಳ ಶಾಲೆಗೆ ಹೋಗಿ ಕೆಥೊಲಿಕ ಮಕ್ಕಳು ಹಾಳಾಗದಂತೆಯೂ ಅವರ ಹೆತ್ತವರು ದೇವರ ಮುಂದೆ ಅಪರಾಧಿಗಳಾಗದಂತೆಯೂ ತನ್ನ ಭಾವವನ್ನು ವ್ಯಕ್ತಗೊಳಿಸಿದ್ದು ನನಗೆ ಆಶ್ಚರ್ಯ ತೋರುವದಿಲ್ಲ

35 ವರುಷಗಳ ಹಿಂದೆ ಕೆಥೊಲಿಕರೂ ಹಿಂದುಗಳೂ ಪರಸ್ಪರ ಪ್ರೀತಿಭಾವದಿಂದ ನಡಕೊಳ್ಳುತ್ತಿದ್ದರು. ಮಿಲಾಗ್ರಿ, ರುಜಾರಿಯೊ ಶಾಲೆಗಳಲ್ಲಿಯೂ, ಪ್ರೊಟೆಸ್ಟಾಂಟ್ ಮಿಶ್ಯನಿನವರ ಶಾಲೆಗಳಲ್ಲಿಯೂ ಗವರ್ನಮೆಂಟ್ ಶಾಲೆಗಳಲ್ಲಿಯೂ ಕೆಥೊಲಿಕ ವಿದ್ಯಾರ್ಥಿಗಳೂ ಹಿಂದು ವ ಇತರ ವಿದ್ಯಾರ್ಥಿಗಳೂ ಒಂದು ಕುಟುಂಬದ ಮಕ್ಕಳಂತೆ ಪರಸ್ಪರ ಪ್ರೀತಿ ಬೆಳೆಸಿ ವರ್ತಿಸುವಂಥವರಾಗಿದ್ದರು. ಇತ್ತಲಾಗೆ ಕೆಥೊಲಿಕ ವಿದ್ಯಾರ್ಥಿಗಳು ಕೆಥೊಲಿಕರಲ್ಲದವರ ಶಾಲೆಗಳಿಗೆ ಹೋಗುವುದನ್ನು ಬಿಟ್ಟುಬಿಟ್ಟರು, ಅನ್ಯ ಮತದ ವಿದ್ಯಾರ್ಥಿಗಳೊಡನೆ ಚಿಕ್ಕಂದಿನಿಂದಲೂ ಅಪ್ರೀತಿ ಬೆಳೆಸುತ್ತಲೇ ಬರುತ್ತಾರೆ. ಕೆಥೊಲಿಕ ಹಿರಿಯರು ಸಹ ಹಿಂದುಗಳೊಡನೆ ಕ್ಲಬ್ಬುಗಳಲ್ಲಾಗಲಿ, ಲೆಕ್ಚರು ಯಾನೆ ಭಾಷಣಗಳಾಗುವ ಸ್ಥಾನಗಳಲ್ಲಾಗಲಿ ಇತರ ಸಭೆಗಳಲ್ಲಾಗಲಿ ಒಟ್ಟು ಕೂಡುವುದೂ ನಿಂತುಹೋಯಿತು.

ನಮ್ಮ ದೇಶೀಯ ಕೆಥೊಲಿಕ ಬಂಧುಗಳೂ ನಾವೂ ಒಂದೇ ರಕ್ತದವರು, ಒಂದೇ ದೇಶದವರು, ಮೈಬಣ್ಣದಲ್ಲಿ ಮತ್ತು ಪೋಶಾಕ ಶೃಂಗಾರದಲ್ಲಿ ಒಂದೇ ಆಗಿರುತ್ತೇವೆ. ಒಂದೇ ಅರಸುತನದೊಳಗೆ ಸಮಾನವಾಗಿ ರಕ್ಷಣೆ ಹೊಂದುವ ಪ್ರಜೆಗಳಾಗಿ ಸುಖವೂ ದುಃಖವೂ ಸಂಪತ್ತು ಮತ್ತು ದಾರಿದ್ರವೂ ಕಾಯಿದೆ ಕಾನೂನೂ ನಮಗೆ ಏಕಪ್ರಕಾರವಾಗಿದ್ದು ವರ್ತಿಸುವಂಥವರು. ಟೆಸ್ರಾಲ್ಯಕ್ಕೆ ಹೋಗುವುದಕ್ಕೆ ನಮ್ಮ ಮೈಬಣ್ಣದ ದೆಸೆಯಿಂದ ನಮಗೂ ನಮ್ಮ ಕೆಥೊಲಿಕ ಬಂಧುಗಳಿಗೂ ಟಿಕೇಟು ಸಿಕ್ಕುವ ಸಂಗತಿಯಲ್ಲಿಯೂ ಆಫ್ರಿಕ ಮೊದಲಾದ ದೇಶಗಳಲ್ಲಿ "ಇಂಡಿಯದ ಕೂಲಿ ಆಳುಗಳು" ಎಂಬ ಒಂದೇ ಬಹುಮಾನದ ಹೆಸರಿನಿಂದ ಕರೆಯಲ್ಪಡುವ ಸಂಗತಿಯಲ್ಲಿಯೂ ನಾವು ಒಂದೇ ಕುಟುಂಬದ ಮಕ್ಕಳಂತೆ ಆಗಿರುತ್ತಾ ಮೇಲೆ ವಿವರಿಸಿದಂತೆ ಧರ್ಮದ ಹೆಸರಿನಲ್ಲಿ ನಮ್ಮ ಕೆಥೊಲಿಕ ಬಂಧುಗಳೂ ನಮ್ಮ ಕಡೆಗೆ ದಿನೇ ದಿನೇ ಅಪ್ರೀತಿಯ ಭಾವ ಬೆಳೆಸುತ್ತಲೇ ಬಂದರೆ ಕಾಲಕ್ರಮದಲ್ಲಿ ಇದರ ಪರಿಣಾಮವೇನಾಗುವುದು—ನಮ್ಮ ಪ್ರಿಯ ಕೆಥೊಲಿಕ ಬಂಧುಗಳು ವಿವೇಚಿಸಿ ನೋಡಲಿ ! ಮೊದಲಿನಂತೆಯೇ ಏಕೆ ಪ್ರೀತಿಯಿಂದಿರಬಾರದು?

ಇತಿ ನಮಸ್ಕಾರ,

ತಾ. 26—7—1915. ಪಾಪಿ ದಾಸನು.

ಯುದ್ಧ ಸಮಾಚಾರ.

ತಾ. ೨೦ನೇ ಜುಲಾಯಿ.

ಸೌಸೆಜ್ ಮತ್ತು ಆರ್ಗೋನ್ನೆಯಲ್ಲಿ ಮೇಲ್ಬಾಯಿದ ಜರ್ಮನರು ಹಿಂದಕ್ಕಟ್ಟಲ್ಪಟ್ಟಿದ್ದಾರೆ.

ಪೋಲೇಂಡಿನ ವಾಯುವ್ಯ ಮತ್ತು ನೈರುತ್ಯದಲ್ಲಿ ಭಯಂಕರ ಕಾಳಗವು ನಡೆಯುತ್ತಿದೆ. ಜುಲಾಯಿ ತಾ ೧೭ರಿಂದ ರುಶ್ಯನರು ಬಿಸ್ಸ ಮತ್ತು ವಿಸ್ತುಲನದಿಯ ನಡುವೆಯಿಂದ ನೇರು ಕಡೆಗೆ ಹಿಂದ ಸರಿಯುತ್ತಿದ್ದಾರೆಂತ ಜರ್ಮನರು ಪ್ರಕಟಿಸಿರುವರು.

ಶತ್ರುಗಳ ಸೇನೆಗೆ ಎರಡಷ್ಟು ರಿಜರ್ವ್ ಸೇನೆಯು ಬಂದು ಕೂಡಿದ್ದರಿಂದ ರುಶ್ಯನರು ಪೋಲ್ಯ ಪ್ರಾಂತ್ಯದಿಂದ ಕೆಶಾನ್ ಎಂಬ ಸ್ಥಳದ ದಕ್ಷಿಣ ಕಡೆಗೆ ಸರಿದಿರುವರು, ವಿಸ್ತುಲ ಮತ್ತು ಬಗ್ ನದಿಗಳ ಮಧ್ಯೆ ಜರ್ಮನರು ಕಾಳಗಕ್ಕೆ ನುಗ್ಗಿ ಬಂದಿರುವರು ಪಿಸ್ತ್ರಿಜಿನ ಪೂರ್ವದಲ್ಲಿ ನುಗ್ಗಿ ಬಂದ ಶತ್ರುಗಳನ್ನು ರುಶ್ಯನರು ಹಿಂದಕ್ಕೆ ಓಡಿಸಿರುತ್ತಾರೆ ಶತ್ರುಗಳು ತಿರಿಗಿ ತಿರಿಗಿ ರುಶ್ಯನರ ಬಾರ್ಬೆಡ್ ಸರಿಗೆಯನ್ನು ಮುರಿದು ಮುಂದೆ ನುಗ್ಗಲು ಪ್ರಯತ್ನಿಸಿದರು. ಆದರೆ ರುಶ್ಯನರು ರೈಫಲ್ಸ್ ಕೋವಿಗಳಿಂದಲೂ ಸನೀನುಗಳಿಂದಲೂ ಕದನ ಮಾಡಿ ಶತ್ರುಗಳನ್ನು ಹಿಂದಕ್ಕಟ್ಟಿದರು ಕಠಿಣ ಕಾಳಗ ನಡೆದ ನಂತರ ಶತ್ರುಗಳು ಪಿಸ್ತ್ರಿಜಿನ ಪೂರ್ವದಲ್ಲಿ ತುಸ ಜಯ ಹೊಂದಿದರು ವಿಸ್ತುಲ ನದಿಯ ಬಳಿ ಆಸ್ಟ್ರಿಯಾನರ ಮತ್ತು ಜರ್ಮನರ ೧೪ ಕೋರ್ ಸೇನೆಗಳಿವೆಯೆಂದೂ ಬಗ್ ನದಿಯ ಬಳಿ ೮ ಕೋರ್ ಸೇನೆಗಳಿವೆಯೆಂದೂ ನೇರು ಲೈನಿನಲ್ಲಿ ೭ ಕೋರ್ ಸೇನಾಂಗಗಳಿವೆಯೆಂದೂ ರಿಗ್ಗ ಮತ್ತು ಶಾವಲಿಯಲ್ಲಿ ೭ ಕೋರ್ ಮತ್ತು ನೀಮೆನಿನಲ್ಲಿ ೫ ಕೋರ್ ಸೇನೆಗಳಿವೆಯೆಂದೂ ತಿಳಿದುಬಂದದೆ.

ಅಗೋಸ್ತು ತಾ. ೪ರಲ್ಲಿ ಯುದ್ಧ ಪ್ರಾರಂಭವಾದ ವರ್ಷೋತ್ಸವವು ಬ್ರಿಟಿಷ ಸಾಮ್ರಾಜ್ಯದಲ್ಲಿ ಆಚರಿಸೋಣಾಗುವದು

ಆಸ್ಟ್ರಿಯ ಹಂಗೇರಿಯದಲ್ಲಿ ವಾಂತಿಭೇದಿ ರೋಗವು ತಲೆದೋರಿ ದಿವಸಕ್ಕೆ ೧೦೦೦ ಜನತಂಕ ಆದಕ್ಕೆ ತುತ್ತಾಗುತ್ತಿದ್ದಾರೆ

ಆಸ್ಟ್ರೇಲಿಯದಲ್ಲಿ ಹೊಸ ಸೇನೆಗೆ ೧೫ ದಿವಸದೊಳಗೆ ೫೩,೪೦೦ ಮಂದಿ ಬಂದು ಸೇರಿಕೊಂಡಿದ್ದಾರೆ.

ಭಾವ ನಗರದ ಮಹಾರಾಜರವರು ತನ್ನ ಸಂಸ್ಥಾನದ ರೈಲ್ವೆ ವರ್ಕ್ ಶೋಪನ್ನು ಯುದ್ಧ ಸಾಮಾಗ್ರಿಗಳನ್ನು ತಯಾರು ಮಾಡುವ ಬಗ್ಗೆ ಬ್ರಿಟಿಷ ಸರಕಾರದವರಿಗೆ ಬಿಟ್ಟು ಕೊಡಲು ಒಪ್ಪಿಗೆ ಕೊಟ್ಟಿರುವದಲ್ಲದೆ ಸರಕಾರದವರಿಗೆ ಯುದ್ಧ ಸಾಲವಾಗಿ ೨೧೬,೦೦೦ ರೂಪಾಯಿ ಕೊಟ್ಟಿರುತ್ತಾರೆ ಪನ್ನಾ ಮಹಾರಾಜರವರು ಯುದ್ಧದ ಬಗ್ಗೆ ಸಾಲವಾಗಿ ೩೦,೦೦೦ ರೂಪಾಯಿ ಕೊಟ್ಟಿರುವರು.

ತಾ. ೨೧ನೇ ಜುಲಾಯಿ.

ಇಟಲಿಯನರ "ಗ್ಯಾರಿಬಾಲ್ಡಿ" ಎಂಬ ಕ್ರೂಜರ್ ನಾವೆಯು ಕೆಟ್ಟರೋದ ಬಳಿ ಮುಳುಗಿಸಲ್ಪಟ್ಟಿರುತ್ತದೆ ನಾವಿಕರಲ್ಲಿ ಹೆಚ್ಚಿನವರು ರಕ್ಷಣೆ ಹೊಂದಿರುತ್ತಾರೆ.

ವಾಸ್ಗೆಸ್ ಗುಡ್ಡ ಶಿಖರಗಳಲ್ಲಿ ನುಗ್ಗಿ ಬಂದ ಜರ್ಮನರು ವಿಶೇಷ ನಷ್ಟಪಟ್ಟು ಹಿಮ್ಮೆಟ್ಟಿರುತ್ತಾರೆ

ಜರ್ಮನರ ಯುದ್ಧ ಸಾಹಿತ್ಯ ಮಾಡುವ ಕ್ರುಪ್ ಕಾರ್ಖಾನೆಯ ಕೆಲಸಗಾರರಲ್ಲಿ ಕೆಲವರು ಮುಷ್ಕರ ಹಿಡಿದಿರುವರೆಂಬ ವಾರ್ತೆ ಇದೆ.

ಬಾಲ್ಟಿಕಿನಿಂದ ಬೆಸ್ಸಾರಾಬಿಯದ ವರೆಗೆ ಇರುವ ೧೦೦೦ ಮೈಲುಗಳ ರಣರಂಗದಲ್ಲಿ ಈಗ ಕಠಿಣ ಕದನವು ನಡೆಯುತ್ತಿದೆ ಜರ್ಮನರ ಜನರಲ್ ಹಿಂಡೆನ್‌ಬರ್ಗ್‌ರು ಉತ್ತರದಲ್ಲಿಯೂ ಜನರಲ್ ಮೆಕೆನ್‌ಸನ್‌ರು ದಕ್ಷಿಣದಲ್ಲಿಯೂ ರುಶ್ಯನರ ಮೇಲೆ ನುಗ್ಗಿ ಹೋಗುತ್ತಿದ್ದಾರೆ. ರುಶ್ಯನರು ಜರ್ಮನರ ಸೇನೆಯಲ್ಲಿ ವಿಶೇಷ ನಷ್ಟ [illegible] ನಂತರ ಸ್ವಲ್ಪ ಹಿಂದೆರಳಿರುವರು ಎಂತ ತಿಳಿದು ಬಂದದೆ. [illegible] ಪ್ರಾಂತ್ಯದಲ್ಲಿ ಅತ್ಯಂತ ದೊಡ್ಡ ಕದನವಾಗಿ ಜರ್ಮನರ ಜನರಲ್ ಬುಲ್ಲೊ ರವರು [illegible] ನದಿಯನ್ನು ದಾಟಿ ಮಿಟಾವೋದ ದಕ್ಷಿಣ ಮತ್ತು ಉತ್ತರದಲ್ಲಿ ಮುಂದರಿಯುತ್ತಲಿದ್ದಾರೆ. ಜನರಲ್ ಮೆಕೆನ್‌ಸನರ ಸೇನೆಯು [illegible] ಮತ್ತು ಬಗ್ ನದಿಗಳ ಮಧ್ಯೆ [illegible] ರುಶ್ಯನರು [illegible] ಉತ್ತರದಲ್ಲಿ ನುಗ್ಗಿ ಬಂದ ಜರ್ಮನರನ್ನು ಹತ್ತುಸಾರಿ ಹಿಂದೆ ಓಡಿಸಿರುತ್ತಾರೆ ರುಶ್ಯನರು ಆಸ್ಟ್ರಿಯಾನರ ೨೦೦೦ ಸೇನಿಕರನ್ನು ಶೆರೆ ಹಿಡಿದಿರುತ್ತಾರೆ

ಡರ್ಡನೆಲ್ಸಿನಲ್ಲಿ ಜೂನ್ ತಿಂಗಳ ಅಂತ್ಯದ ವರೆಗೆ ಬ್ರಿಟಿಷರ ನೌಕಾಸೇನೆ ಮತ್ತು ಭೂಸೇನೆಯಲ್ಲಿ ಒಟ್ಟಿಗೆ ೫೪೧ ಆಧೀಸರರು ಹತರಾಗಿರುವರು ೧೨೫೭ ಮಂದಿ ಗಾಯವಟ್ಟಿರುವರು ೧೩೫ ಮಂದಿ ಕಾಣೆಯಾಗಿರುವರು ೭೫೪೩ ಸೇನಿಕರು ಹತರಾಗಿರುವರು, ೨೫,೫೫೭ ಸೇನಿಕರು ಗಾಯಪಟ್ಟಿರುವರು ೭೪೭೧ ಕಾಣೆಯಾಗಿರುವರು ಎಂತ ಬ್ರಿಟಿಷ ಪ್ರಧಾನ ಮಂತ್ರಿಯಾಗಿರುವ ಮಿ। ಅಸ್ಕ್ವಿತರವರು ಪಾರ್ಲಿಮೆಂಟ್ ಸಭೆಯಲ್ಲಿ ಹೇಳಿರುತ್ತಾರೆ

ಬ್ರಿಟಿಷರ ಸಬ್ ಮೆರಿನ್ ನಾವೆಯು ೨ ಹಡಗಗಳನ್ನೂ ಎರಡು ಲೈಟರ್ ಎಂಬ ನಾವೆಗಳನ್ನೂ ಮುಳುಗಿಸಿರುವದು ಎಂತ ಕನ್‌ಸ್ಟಂಟಿನೋಪಲಿನಿಂದ ವಾರ್ತೆ ಬಂದಿರುವದು

ಇಸೊನ್ಸೊ ರಣರಂಗದಲ್ಲಿ ಇಟಲಿಯನರಿಗೆ ಒಂದು ಪ್ರಖ್ಯಾತ ಜಯವಾಗಿರುವದು ಇಟಲಿಯಾನರು ೨೦೦೦ ಶತ್ರುಸೇನಿಕರನ್ನೂ ೬ ಮೆಶಿನ್‌ಗನ್‌ಗಳನ್ನೂ ೧೫೦೦ ರೈಫಲ್ ಕೋವಿಗಳನ್ನೂ ಹೆಚ್ಚು ಮದ್ದು ಗುಂಡುಗಳನ್ನೂ ಹಿಡಿದಿರುತ್ತಾರೆ ಕರಿಂತಿಯದ ಹೆರ್ಮನ್ ಕೋಟೆಗೆ ವಿಶೇಷ ಹಾನಿಯಾಗಿರುವದು

ತಾ. ೨೨ನೇ ಜುಲಾಯಿ.

ಅಲ್ಸೆಸಿನ ಎಪ್ರೆಮೊಂಟ್ ಅಡವಿಯಲ್ಲಿ ನುಗ್ಗಿ ಬಂದ ಜರ್ಮನರನ್ನು ಫ್ರೆಂಚರು ಎರಡಾವರ್ತಿ ಸೋಲಿಸಿರುವರು ಫೆಕ್ಟ್ ಕಣಿವೆಯ ಪೂರ್ವದಿಕ್ಕಿನಲ್ಲಿ ಫ್ರೆಂಚರು ಜರ್ಮನರು ಬಲಕಾಯಿಸಿಕೊಂಡ ಸ್ಥಳಗಳನ್ನು ಹಿಡಕೊಂಡಿದ್ದಾರೆ ಅದಲ್ಲದೆ ಫ್ರೆಂಚ ವಿಮಾನಗಾಮಿಗಳು ಕನ್‌ಫ್ಲೇನ್ಸ್ ಎಂಬವರ ಮೇಲೆ ಬೊಂಬುಗಳನ್ನು ಬಿಸಾಡಿ ಹಾನಿಪಡಿಸಿರುವರು

ಜರ್ಮನರು ವಾರ್ಸೊವನ್ನು ಪಡಿಯಲು ಮಾಡುತ್ತಿರುವ ಕದನಗಳು ಅತಿ ತೀಕ್ಷ್ಣತೆಯಿಂದ ನಡೆಯುತ್ತಿವೆ ಶತ್ರುಗಳು ಈ ಕೆಲಸದಲ್ಲಿ ಮೊದಲಾಗಿ ಸ್ವಲ್ಪ ಜಯಪ್ರದರಾದರೂ ವಿಶೇಷ ನಷ್ಟಪಟ್ಟಿರುವರು ಜರ್ಮನರು ಹಲ್ಲೆಮಾಡಿ ಪೊಲಾರಿ ಎಂಬ ಗ್ರಾಮವನ್ನು ಸ್ವಾಧೀನ ಮಾಡಿಕೊಂಡಿರುತ್ತಾರೆ ಆದರೆ ದಕ್ಷಿಣ ಕಡೆಯಲ್ಲಿ ಹಲ್ಲೆ ಮಾಡಿದ ಜರ್ಮನರು ಹಿಮ್ಮೆಟ್ಟಿರುವರು ಲಬ್ಲಿನಿನ ಕೊಲ್ಮ ರೈಲ್ವೇ ದಕ್ಷಿಣ ಪ್ರಾಂತ್ಯದ ಕದನವು ಅತಿ ಕಠಿಣವಾಗಿರುವದು ರುಶ್ಯನರು ದಿನವೆಲ್ಲಾ ಜರ್ಮನ್ ಜನರಲ್ ಮೆಕೆನ್‌ಸನರ ಸೇನೆಯನ್ನು ಓಡಿಸಿದರು ಆದರೆ ಕಡೆಗೆ ಅರುಣೋದಯದಲ್ಲಿ ಜರ್ಮನರು ಕ್ರಸನ್‌ಸ್ಟೊ ಎಂಬ ಸ್ಥಳವನ್ನು ಹಿಡಕೊಂಡರು ಆದಾಗ್ಯೂ ರುಶ್ಯನರು ಆ ದಿನ ದೃಢ ಸಂಕಲ್ಪದಿಂದ ಮೇಲ್ಬಾಯಿದ ಜರ್ಮನರನ್ನು ಕ್ರಸ್ನೊಸ್ಟೊ ಎಂಬಲ್ಲಿ ಹಿಂದಕಟ್ಟಿದರು ಅದಕ್ಕಿಂತಲೂ ಪೂರ್ವಕಡೆಯಲ್ಲಿ ಮೇಲ್ಬಾಯಿದು ಬಂದ ಜರ್ಮನರನ್ನು ರುಶ್ಯನರು ನಾಲ್ಕಾವರ್ತಿ ಹಿಂದಕ್ಕಟ್ಟಿದರು

ಶತ್ರುಗಳು ಶವಾಲಿ ಪ್ರಾಂತ್ಯದಲ್ಲಿ ನುಗ್ಗಿಬರುತ್ತಿದ್ದಾರೆ

ಇಟಲಿಯನರು ಇಸೊನ್ಸೊ ರಣರಂಗದಲ್ಲೆಲ್ಲಾ ನುಗ್ಗಿ ಹೋಗಿರುವರು, ಕಾರ್ಸೊ ಪ್ರಸ್ತಭೂಮಿಯಲ್ಲಿ ಇನ್ನೂ ಕೆಲವು ಕಂದಕಗಳು ಇಟಲಿಯನರಿಗೆ ಸಿಕ್ಕಿರುತ್ತವೆ ೫೦೦ ಶತ್ರು ಸೇನಿಕರೂ ಇಟಲಿಯಾನರ ಶೆರೆಬಿದ್ದಿರುವರು

ತಾ. ೨೩ನೇ ಜುಲಾಯಿ.

ಜರ್ಮನರು ಈ ವರೆಗೆ ತಟಸ್ಥರಾಜ್ಯಗಳ ೯೫ ಹಡಗಗಳನ್ನು ಮುಳುಗಿಸಿದರು ಎಂತ ಡಾಕ್ಟರ್ ಮೆಕೆನ್ನಾರರವರ ಬ್ರಿಟಿಷ ಕಾಮನ್ಸ ಸಭೆಯಲ್ಲಿ ಹೇಳಿರುತ್ತಾರೆ.

ವೈಪ್ರೆಸಿನ ಪೂರ್ವದಲ್ಲಿ ಬ್ರಿಟಿಷರು ನುಗ್ಗಿ ಹೋಗಿ ಸಿಡಿಮದ್ದಿನ ಗಣಿಗಳನ್ನು ಹಾರಿಸಿದ ವಿಷಯವನ್ನು ಜರ್ಮನರು ಒಪ್ಪಿರುವರು

ಜರ್ಮನರು ನೇರೂ ನದಿಯ ಶಾಖೆಗಳಲ್ಲಿ ಮುಂದರಿದು ಒಸ್ಟ್ರೊಲೆಂಕ ಎಂಬಲ್ಲಿ ನೇರೂ ನದಿಯ ಬಳಿಗೆ ತಲ್ಪಿರುತ್ತಾರೆ. ರುಶ್ಯನರ ಬಲವಾದ ಬೆಂಬಲ ಸೇನೆಯು ಅಲ್ಲಿಗೆ ಬಂದಿರುವದೆಂದೂ ರುಶ್ಯನರು ಜರ್ಮನ ಸೇನೆಯ ಮೇಲೆ ನುಗ್ಗಿ ಹೋಗಿರುವರೆಂದೂ ಜರ್ಮನರು ಪ್ರಕಟಿಸಿರುವರು.

ರಣರಂಗದಲ್ಲೆಲ್ಲಾ ಕಠಿಣ ಕಾಳಗವು ನಡೆಯುತ್ತಿದೆ. ಕೆಲವು ಕಡೆಗಳಲ್ಲಿ ರುಶ್ಯನರು ಜರ್ಮನರ ಹಲ್ಲೆಯನ್ನು ತಡೆದು, ಅವರನ್ನು ಸೋಲಿಸಿರುವರು. ಲುಬ್ಲಿನಿನ ಪಶ್ಚಿಮದಲ್ಲಿ ಕದನವು ನಡೆಯುತ್ತಿದೆ. [illegible] ಎಂಬಲ್ಲಿ [illegible] ಹಾರಿಸಿರುವರು. ಮತ್ತು ನೇರು ನದಿಯ ಸಂಕದ ಮೇಲೆ ಹಲ್ಲೆ ಮಾಡಿರುತ್ತಾರೆ ಲಬ್ಲಿನ ಪ್ರಾಂತ್ಯದಲ್ಲಿ ಹಲ್ಲೆ ಮಾಡುತ್ತಿರುವ ಜರ್ಮನ ಸೇನೆಯನ್ನು ಹೊಡೆಲ್ ಪಿಯಾಸ್ಕಿ ಎಂಬಲ್ಲಿ ರುಶ್ಯನರು ಓಡಿಸಿರುವರು ನೇರೂ ನದಿಯ ಬಲದಡದಲ್ಲಿ ರುಶ್ಯನರು ಶತ್ರುಗಳ ಮೇಲ್ಬಾಯಿದು ಅವರನ್ನು ಹಿಮ್ಮೆಟ್ಟಿರುತ್ತಾರೆ ಎಪ್ರೆಜ್ ನದಿಯ ಎರಡು ದಡಗಳ ಮೇಲೆಯೂ ಕಠಿಣ ಕಾಳಗ ನಡೆಯುತ್ತಿದೆ. ಜರ್ಮನರು ವಿಶೇಷ ನಷ್ಟ ಹೊಂದಿ ಹಿಮ್ಮೆಟ್ಟಿರುವರು

ರುಶ್ಯನರು ಬಗ್ ನದಿಯನ್ನು ದಾಟಿದ ಜರ್ಮನರನ್ನು ಸೋಕಲ್ ಪ್ರಾಂತ್ಯದಲ್ಲಿ ಹಿಂದಕಟ್ಟಿ ೧೦೦೦ ಮಂದಿಯನ್ನು ಶೆರೆ ಹಿಡಿದಿರುವರು

ಚೊಲ್ಮನ ಹತ್ತಿರ ಹಿಡಿಯಲ್ಪಟ್ಟ ಒಬ್ಬ ಆಸ್ಟ್ರಿಯಾನ್ ಶೆರೆಯವನು ಈ ರೀತಿ ಹೇಳಿರುವನು ಜರ್ಮನರ ಶೆರೆ ಬಿದ್ದ ೫೦೦೦ ರುಶ್ಯ ಸೇನಿಕರನ್ನು ಜರ್ಮನರು ರವರುಸ್ಕದಲ್ಲಿ ಗುಂಡು ಹೊಡೆದು ಕೊಂದಿರುವರು ಈ ಹತಸಾಕ್ಷಿಯರನ್ನು ಹೂಣಿಟ್ಟ ಗೋರಿಗಳನ್ನು ಆಸ್ಟ್ರಿಯನ ಬೆಂಬಲ ಸೇನೆಯಲ್ಲಿ ನಾವು ಬರುವಾಗ ನೋಡಿದೆವು ಎಂತ ಅವನು ಹೇಳಿರುತ್ತಾನೆ

ಜರ್ಮನರು ಈಗ ವಿಷಕರವಾದ ಎಸಿಡ್ ತುಂಬಿದ ಬೊಂಬುಗಳನ್ನು ಪ್ರಯೋಗಿಸುತ್ತಿರುವರೆಂತ ತಿಳಿದು ಬಂದದೆ

ಶತ್ರುಗಳು ವಾರ್ಸೊ ಮತ್ತು ರಿಗ್ಗಾಕ್ಕೆ ಬರುವ ಯತ್ನದಲಿರುವದರಿಂದ ರುಶ್ಯದ ಎಲ್ಲಾ ದೇವಮಂದಿರಗಳಲ್ಲಿ ಪ್ರಾರ್ಥನೆಗಳು ನಡೆಯುತ್ತಿವೆ

ಕಾರ್ಸೊ ಪ್ರಸ್ತ ಭೂಮಿಯ ಕದನಗಳು ಅತಿ ಕಠಿಣವಾಗಿರುವವು ಈಚೆಗೆ ಇಟಲಿಯಾನರಿಗೆ ದೊರಕಿದ ಜಯದ ಫಲವಾಗಿ ಗೋರಿಜಿಯ ಮತ್ತು ಮೊನ್‌ಫಾಲ್ಕೋನಿನ ಮಧ್ಯೆ ಇರುವ ಪ್ರದೇಶವೆಲ್ಲಾ ಇಟಲಿಯಾನರ ಕೈಸೇರಿರುವವು

ಇಟಲಿಯನರು ಕಂದಕಗಳನ್ನು ವಿಶೇಷ ಸಾಹಸದಿಂದ ಹಿಡಿದಿರುತ್ತಾರೆ ಶೆರೆ ಬಿದ್ದ ೨೦೦೦ಕ್ಕಿಂತ ಹೆಚ್ಚಿನ ಆಸ್ಟ್ರಿಯ ಸೇನಿಕರು ಉದಿನ ಪಟ್ಟಣಕ್ಕೆ ತಲಪಿರುತ್ತಾರೆ

ಇಸೊನ್ಸೊ ರಣರಂಗದಲ್ಲಿ ಕಠಿಣ ಕಾಳಗವು ನಡೆಯುತ್ತಿದೆ ಇಟಲಿಯಾನರು ಪಾಲ್ಗದಲ್ಲಿ ಮುಂದರಿದು ಗೋರಿಜಿಯ ಪರ್ವತ ಶಿಖರಕ್ಕೆ ಹೋಗುವ ದಾರಿಯಲ್ಲಿರುವ ಶತ್ರು ನೆಲೆಯ ಒಂದಂಶವನ್ನು ಹಿಡಿದಿರುತ್ತಾರೆ

ಏಡೆನಿನಲ್ಲಿರುವ ಬ್ರಿಟಿಷ ಸೇನಿಕರು ತಾ ೨೧ರಲ್ಲು ತುರ್ಕರ ಮೇಲೆ ಬಿದ್ದು ಅವರನ್ನು ಓಡಿಸಿ ೫ ಮೈಲುಗಳ ವರೆಗೆ ಅಟ್ಟಿರುವರು

ತಾ. ೨೪ನೇ ಜುಲಾಯಿ.

ಟೆಬ್ರಿಜೋಂಡಿಗೆ ಯುದ್ಧ ಸಾಮಾಗ್ರಿಗಳನ್ನು ಕೊಂಡು ಹೋಗುತ್ತಿದ್ದ ತುರ್ಕಿಯರ ೫೯ ವ್ಯಾಪಾರ ಹಡಗಗಳನ್ನು ರುಶ್ಯನರು ಮುಳುಗಿಸಿರುತ್ತಾರೆ

ಜರ್ಮನರ ಕೆಲವು ಡಿಸ್ಟ್ರೋಯರ್ ನಾವೆಗಳು ಜೀಬುರ್ಗೆಗೆ ಬಂದಿರುವವು ಇವು ರಾತ್ರಿಕಾಲ ಇಂಗ್ಲಿಷ್ ಕಾಲುವೆಯ ಮೂಲಕ ಬಂದಿರುತ್ತವೆ ಇದೇ ರೀತಿ ಜಲಂತರ್ಗಾಮಿ ನಾವೆಗಳೂ ಕಳುಹಿಸಲ್ಪಡುವವು ಎಂತ ಝುಂಟಿನಿಂದ ವಾರ್ತೆ ಬಂದದೆ.

ಜುಲಾಯಿ ತಾ. ೨೧ಕ್ಕೆ ಅಂತ್ಯವಾಗುವ ವಾರದಲ್ಲಿ ಜರ್ಮನ ಸಬ್‌ಮೆರಿನಗಳು ವ್ಯಾಪಾರ ಹಡಗಗಳನ್ನು ಮುಳುಗಿಸಲಿಲ್ಲ ಎಂತ ಬ್ರಿಟಿಷ ಸರಕಾರದವರು ಪ್ರಕಟಿಸಿರುತ್ತಾರೆ

ಕೈಸರರು ವಾರ್ಸೊವನ್ನು ಪ್ರವೇಶಿಸುವ ಸಂದರ್ಭ ಬಿದ್ದರೆ ರಾಣಿಯವರೊಡನೆ ವಾರ್ಸೊ ಪಟ್ಟಣವನ್ನು ಪ್ರವೇಶಿಸುವ ಆಲೋಚನೆ ಮಾಡಿರುವರೆಂದೂ ರಾಣಿಯವರಿಗೆ ಈ ಸಂಬಂಧ ಪೋಸೆನಿಗೆ ಬರಲು ಅಜ್ಞೆಯಾಗಿರುವದೆಂದೂ ವಾರ್ತೆ ಇದೆ.

ಜನರಲ್ ಬೋಥರವರು ನೈರುತ್ಯ ಆಫ್ರಿಕದಿಂದ ಕೇಪ್ ಟೌನಿಗೆ ಹಿಂದೆರಳಿ ಬಂದರು ಪಟ್ಟಣಿಗರು ಅತಿ ವಿಜೃಂಭಣೆಯಿಂದ ಅವರನ್ನು ಸ್ವಾಗತ ಮಾಡಿಕೊಂಡಿರುತ್ತಾರೆ.

ಇಟಲಿಯಾನರು ಮೊಂಟೆನಿರೋ ರಣರಂಗದಿಂದ ಕಾರ್ಸೊದ ವರೆಗೆ ಮುಂದರಿದಿರುವರು, [illegible] ಕಡೆಯಲ್ಲಿಯೂ ಇಟಲಿಯಾನರು ತಮ್ಮ ನೆಲೆಯನ್ನು [illegible]ಕೊಂಡಿರುತ್ತಾರೆ. ಇಟಲಿಯಾನರು ಪುನಃ ಶತ್ರುಗಳ ೫೦೦ [illegible] ಯುದ್ಧ ಸಾಮಾಗ್ರಿಗಳ[illegible] ತೆಗೆದುಕೊಂಡಿರುತ್ತಾರೆ.

ತಾ. ೨೬ನೇ ಜುಲಾಯಿ.

ಪಶ್ಚಿಮ ರಣರಂಗದಲ್ಲಿ ಫ್ರೆಂಚ ಮತ್ತು ಬ್ರಿಟಿಷ ಸೇನಿಕರಿಗೆ ಫೊನ್ವ್ಯ ಫೊಸೆಜಿಸ್ ಮೊದಲಾದ ಸ್ಥಳಗಳಲ್ಲಿ ಜಯವಾಗಿರುವದು.

ವಾರ್ಸ್ಯೋವನ್ನು ರಕ್ಷಿಸುವದಕ್ಕೋಸ್ಕರ ರುಶ್ಯನರು ಅತಿ ಕಠಿಣ ಕಾಳಗ ಮಾಡುತ್ತಿದ್ದಾರೆ. ನೇರೂ ಲೈನಿನಲ್ಲಿರುವ ಕೋಟೆಗಳನ್ನು ರುಶ್ಯನರು ಕಾಪಾಡಿಕೊಂಡಿರುವರು. ವಾರ್ಸ್ಯೊ ಮತ್ತು ಇವನ್ಗೊರ್ಡ್ ಪ್ರಾಂತ್ಯದಲ್ಲಿ ಕದನ ನಡೆಯುವ ವೃತ್ತಾಂತವು ಜರ್ಮನರ ವಾರ್ತೆಗಳಲ್ಲಿ ಇಲ್ಲ.

ರುಶ್ಯನರು ಜರ್ಮನರನ್ನು ಇವನ್ಗೊರ್ಡ್ ಪ್ರಾಂತ್ಯದಿಂದ ವಿಶೇಷ ನಷ್ಟಪಡಿಸಿ ಓಡಿಸಿರುವರು. ಏಪ್ರಿಜನ ಎಡ ದಡದಲ್ಲಿ ಜರ್ಮನರು ಕೆಲವು ಕಂದಕಗಳನ್ನು ಹಿಡಿದು ಮುಂದರಿದರು. ಆದರೆ ರುಶ್ಯನರು ಅವರನ್ನು ಪ್ರತಿಕಡೆಯಲ್ಲಿ ಹಿಂದಟ್ಟಿ ೫೦೦ ಸೇನಿಕರನ್ನೂ ೬ ಫಿರಂಗಿಗಳನ್ನೂ ಸೆರೆಹಿಡಿದಿರುತ್ತಾರೆ.

ಇಟಲಿಯನರು ಗೊರಿಸ್ಸದ ಸಮೀಪ ಇನ್ನೂ ಕೆಲವು ಕಂದಕಗಳನ್ನು ಹಿಡಿದಿರುತ್ತಾರೆ. ೧೫೦೦ ಆಸ್ಟ್ರಿಯ ಸೇನಿಕರು ಇಟಲಿಯನರ ಸೆರೆ ಬಿದ್ದಿರುವರು. ಒಟ್ಟಿಗೆ ಈ ವರೆಗೆ ೩೦,೦೦೦ ಆಸ್ಟ್ರಿಯನ ಸೇನಿಕರು ಇಟಲಿಯನರ ಕೈಗೆ ಸಿಕ್ಕಿದರು ಎಂತ ಪ್ರಕಟವಾಗಿದೆ.

ಉತ್ತರ ಹಿಂದೂಸ್ಥಾನ.

ಕಳೆದ ವಾರ ಹಿಂದೂಸ್ಥಾನದಲ್ಲೆಲ್ಲಾ ಪ್ಲೇಗು ಮರಣದಿಂದ ೪೪೧ ಮಂದಿ ಮೃತರಾದರು. ಈ ಪೈಕಿ ಮುಂಬಾಯಿ ಸಂಸ್ಥಾನ ಒಂದರಲ್ಲೇ ೨೫೧ ಮಂದಿ ತುತ್ತಾದರು. ಬರ್ಮ ೭೧; ಪಂಜಾಬು ೬೮; ಮೈಸೂರು ೨೪; ಸಂಯುಕ್ತ ಸಂಸ್ಥಾನ ೬; ಬಿಹಾರ್, ಒರಿಸ್ಸ ಮತ್ತು ಬಂಗಾಳ ಇವುಗಳಲ್ಲಿ ಒಂದೊಂದು ಮರಣಗಳಾದವು. ಹಿಂದೂಸ್ಥಾನದ ಇತರ ಭಾಗಗಳಲ್ಲಿ ಪ್ಲೇಗುಬೇನೆಯ ಸೋಂಕು ಇದ್ದಿಲ್ಲ.

ಬಂಗಾಳದಲ್ಲಿ ನೆರೆಯಿಂದ ದುರಾವಸ್ಥೆಗೆ ಸಿಕ್ಕಿಕೊಂಡ ಜನರಿಗೆ ಸಹಾಯವನ್ನು ಒದಗಿಸಿಕೊಡುವ ರಾಮಕೃಷ್ಣ ಮಿಶ್ಯನಿನವರು ಪ್ರಕಟಿಸಿದ ವರದಿಯಲ್ಲಿ ಈ ರೀತಿ ತೋರಿಬರುವದು:— ಪೂರ್ವ ಬಂಗಾಳದ ಸ್ಥಿತಿಯು ಹಿಂದಿಗಿಂತ ಈಗ ಸ್ವಲ್ಪ ಒಳ್ಳೇದಿದೆ. ಈ ಮಿಶ್ಯನಿನವರು ಟಿಪ್ಪಾರ ಜಿಲ್ಲೆಯ ೮ ಸ್ಥಳಗಳಲ್ಲಿ ತಮ್ಮ ಕೆಲಸವನ್ನು ಪ್ರಾರಂಭಿಸಿ ೪೫೭೫ ಮಂದಿಗೆ ಸಹಾಯವನ್ನೊದಗಿಸಿಕೊಡುತ್ತಿದ್ದಾರೆ. ನೋಕಾಲಿ ಡಿಸ್ಟ್ರಿಕ್ಟಿನ ೫ ಕಡೆಗಳಲ್ಲಿ ೨೨೦೩ ಮಂದಿಗೆ ಸಹಾಯ ಮಾಡುತ್ತಿರುವರು. ಈಗ ಟಿಪ್ಪಾರದ ಕೆಲವು ಗ್ರಾಮಗಳಲ್ಲಿ ಜನರು ಬೆಳೆಕೊಯ್ಯಲು ಪ್ರಾರಂಭಿಸಿದ್ದರಿಂದಲೂ ಕೆಲವು ಜನರು ಮಾತ್ರ ನಿರಾಧಾರಿಗಳಾಗಿರುವದರಿಂದಲೂ ಈ ಮಿಶ್ಯನಿನವರು ೫ ಸ್ಥಳಗಳಲ್ಲಿಯ ತಮ್ಮ ಕೆಲಸವನ್ನು ನಿಲ್ಲಿಸುವರು. ಮೆಜಿಸ್ಟ್ರೇಟರ ಮನವಿ ಮೇರೆಗೆ ಈ ಮಿಶ್ಯನಿನವರು ನೋಕಾಲಿ ಡಿಸ್ಟ್ರಿಕ್ಟಿನ ಇನ್ನು ಕೆಲವು ಗ್ರಾಮಗಳಲ್ಲಿ ತಮ್ಮ ಕೆಲಸಗಳನ್ನು ಪ್ರಾರಂಭಿಸುವರು. ಬಂಗಾಳ ಸರಕಾರದವರು ಕೂಡಾ ನಿರ್ಗತಿಕರಾಗಿರುವ ಜನರ ಸಹಾಯ ಬಗ್ಗೆ ವ್ಯವಸಾಯ ಸಾಲವಾಗಿ ೧,೨೫,೦೦೦ ರೂಪಾಯಿ ಕೊಟ್ಟಿರುವರು.

ಸಿಮ್ಲಕ್ಕೆ ಹೋಗಿದ್ದ ಮೈಸೂರು ಯುವರಾಜರವರು ಇದೇ ತಾರೀಕು ೨೪ರಲ್ಲು ಮುಂಬಾಯಿಗೆ ಬಂದು ತಲಪಿರುತ್ತಾರೆ.

ಮುಂಬಾಯಿಯ ಸೇಟ್ ವಿಠಲ್‌ದಾಸ್ ಗೋಪಾಲದಾಸರವರು ಹಿಂದೂ ಮಕ್ಕಳ ವಿದ್ಯಾಭ್ಯಾಸಕ್ಕೋಸ್ಕರ ೧,೦೦,೦೦೦ ರೂಪಾಯಿಗಳನ್ನೂ ಕಾಪೋಲು ಬೋರ್ಡಿಂಗ್ ಶಾಲೆಯ ಫಂಡಿಗೆ ೫೦೦೦ ರೂಪಾಯಿಗಳನ್ನೂ ಕೊಡಬೇಕೆಂದು ತನ್ನ ವಿಲ್‌ನಾಮೆಯಲ್ಲಿ ಬರದಿರುತ್ತಾರೆ.

ಮುಂಬಾಯಿ ಗವರ್ನರರಾದ ವಿಲಿಂಗ್ಡನ್ ಪ್ರಭುಗಳವರು ತಾರೀಕು ೨೨ನೇ ಸಾಯಂಕಾಲ ಪೂನೆಯಲ್ಲಿ "ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ"ಯನ್ನು ಸಂದರ್ಶಿಸಿದರು. ಈ ಸೊಸೈಟಿಯ ಪ್ರೆಸಿಡೆಂಟರಾಗಿರುವ ಬಹುಮಾನಪಟ್ಟ ವಿ. ಎಸ್. ಶ್ರೀನಿವಾಸ ಶಾಸ್ತ್ರಿಯವರೂ ಮುಂಬಾಯಿ ಬ್ರೇಂಚಿನ ಸೀನಿಯರ್ ಮೆಂಬರರಾಗಿರುವ ದೇವಧರರವರೂ ಪ್ರಭುಗಳವರನ್ನು ಸ್ವಾಗತ ಮಾಡಿಕೊಂಡು, ಪೂನೆಯಲ್ಲಿದ್ದ ಈ ಸೊಸೈಟಿ ಮೆಂಬರರ ಭೇಟಿಯನ್ನು ಗವರ್ನರ ಪ್ರಭುಗಳವರಿಗೆ ಮಾಡಿಸಿದರು. ಅನಂತರ ಗವರ್ನರ ಪ್ರಭುಗಳವರು ಮಾನ್ಯ ಗತ ಗೋಖಲೆಯವರು ದಕ್ಷಿಣ ಆಫ್ರೀಕದಲ್ಲಿ ಸಂದರ್ಶಿಸಿದಾಗ ಅವರಿಗೆ ಅಲ್ಲಿಯವರು ಓದಿದ ಬಹುಮಾನ ಪತ್ರಗಳನ್ನೂ ಬಹಳ ಕ್ರಯಬಾಳುವ ಕರಡಿಗೆಗಳನ್ನೂ ನೋಡಿ ಸಂತುಷ್ಟರಾದರು. ಇನ್ನು ಸೊಸೈಟಿಯ ಇತರ ಕಾರ್ಯವೃತ್ತಾಂತಗಳನ್ನು ನೋಡಿ ತಿಳಕೊಂಡು ಮೆಂಬರರೊಡನೆ ಚಾ ತಕ್ಕೊಂಡು ಈ ಸೊಸೈಟಿಯ ಕೆಲಸವನ್ನು ಕಂಡು ತನಗುಂಟಾದ ಸಂತೋಷವನ್ನು ಪ್ರದರ್ಶಿಸಿದರು.

ಫರಿದಕೋಡ್ ಸ್ಟೇಟಿನಲ್ಲಿ ತಾ. ೧೯ರಲ್ಲು ಆಯುಧಪಾಣಿಗಳಾದ ದರಾಯಿತರು ಒಬ್ಬ ಸಾಹುಕಾರರ ಮನೆಗೆ ನುಗ್ಗಿ ಸಾಹುಕಾರನಿಗೂ ಅವನ ಹೆಂಡತಿಗೂ ಕೋವಿಯಿಂದ ಸುಟ್ಟು, ಸೊತ್ತುಗಳನ್ನು ಕೊಂಡುಹೋಗಿರುವರು.

ಕಲ್ಕತ್ತೆಯ ಶನ್‌ಮಾಗಂಜಿ ಸಬ್ ಡಿವಿಜನಿನಲ್ಲಿ ಒಬ್ಬ ಹುಚ್ಚನಿಂದ ಖೂನಿ ನಡೆದ ವೃತ್ತಾಂತವು ಬಂದಿರುವದು. ೧೮ ವರ್ಷ ವಯಸ್ಸಿನ ಬೆಪಿನ್ ಚಂದ್ರ ಭಟ್ಟಾಚಾರ್ಜಿ ಎಂಬ ಯುವಕನ ಸಹೋದರನೊಬ್ಬನು ಈಚೆಗೆ ಮೃತನಾದನು. ನಂತರ ಬೆಪಿನ ಚಂದ್ರ ಭಟ್ಟಾಚಾರ್ಜಿಗೆ ಹುಚ್ಚು ಹಿಡಿದಂತೆ ಆಯಿತು. ಒಂದು ದಿನ ಅವನು ಕಠಿಣ ರೀತಿಯಿಂದ ವರ್ತಿಸಿದ್ದರಿಂದ ಅವನನ್ನು ಹಗ್ಗ ಮತ್ತು ಸರಪಣಿಯಿಂದ ಕಟ್ಟಿ ಹಾಕಿದರು. ಸಾಯಂಕಾಲದಲ್ಲಿ ಅವನು ತುಸ ಶಾಂತವಾದುದರಿಂದ ತಾಯಿಯು ಅವನನ್ನು ತನ್ನೊಡನೆ ಕೋಣೆಯಲ್ಲಿ ಮಲಗಿಸಿಕೊಂಡಳು. ಮಧ್ಯ ರಾತ್ರಿ ಅವನು ತಾಯಿಯ ಮೇಲೆ ಬಿದ್ದನು. ಅವಳು ಕೂಗಿಕೊಂಡದ್ದರಿಂದ ನೆರೆಹೊರೆಯವರು ಬಾಗಲು ತೆರೆದು ನೋಡಲು ಅವಳು ಸತ್ತಿದ್ದಳು. ಬೆಪಿನನು ನೆರೆಹೊರೆಯವರಿಗೆ "ತಾಯಿಯು ನನ್ನ ಕೈಗಳನ್ನು ಬಿಡಿಸಿದಳು. ನಾನು ತಾಯಿಯನ್ನು ಈ ಕಷ್ಟಕರವಾದ ಲೋಕದಿಂದ ಬಿಡುಗಡೆ ಮಾಡಿದೆನು" ಎಂದು ಹೇಳಿದನು.

ಬಂಗಾಳದ ನೆರೆಯಲ್ಲಿ ಉಂಟಾದ ಕಷ್ಟಗಳಿಂದ ರೈತರು ಜಮೀನ್ದಾರರಿಗೆ ಗೇಣಿ ಕೊಡುವ ಹಾಗಿಲ್ಲ. ಜಮೀನ್ದಾರರು ಸರಕಾರದ ರೆವಿನ್ಯೂ ಕೊಡುವ ಬಗ್ಗೆ ಸಾಲಕೊಂಡುಕೊಳ್ಳುತ್ತಿದ್ದಾರೆ. ನೋಕಾಲಿ ಡಿಸ್ಟ್ರಿಕ್ಟಿನ ಕಷ್ಟವು ವಿಪರೀತವಾಗಿದೆ. ಇನ್ನೂ ಮೂರು ವಾರಗಳ ವರೆಗೆ ಅಲ್ಲಿಯ ನಿರ್ಗತಿಕರಿಗೆ ಸಹಾಯ ಮಾಡಬೇಕಾಗುವದು. ೨೫ ಕಡೆಗಳಲ್ಲಿ ೩೭೨೫ ರೂಪಾಯಿ ಹಂಚಲ್ಪಟ್ಟಿರುವದು.

ಬಿಹಾರಿನ ಕಟಕಿನಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಪ್ರಕಟವಾಗುವ "ಸ್ಟಾರ್ ಆಫ್ ಉತ್ಕಲ್" ಎಂಬ ಪತ್ರಿಕೆಯ ಸಂಪಾದಕರು ೨೦೦೦ ರೂಪಾಯಿ ಠೇವಣಾತಿ ಇಡಬೇಕೆಂದು ಕಟಕಿನ ಮೇಜಿಸ್ಟ್ರೇಟರು ಅಜ್ಞಾಪಿಸಿದ್ದರಿಂದ ಈ ಪತ್ರಿಕೆಯು ನಿಲ್ಲಿಸಲ್ಪಟ್ಟಿರುವದು.

ಕಲ್ಕತ್ತೆಯ ಒಬ್ಬ ೧೩ ವರ್ಷ ವಯಸ್ಸಿನ ಹುಡುಗನು ಭೂತಾನಿನಲ್ಲಿ ತಯಾರಿಸಿದ ಸಾರಾಯಿಯನ್ನು ಕೊಂಡು ಹೋಗುತ್ತಿರುವಾಗ ಅಬ್ಕಾರಿ ಪ್ಯಾದೆಯೊಬ್ಬನು ಅವನನ್ನು ಕೈದುಮಾಡಿದ್ದಲ್ಲಿ ಹುಡುಗನ ಕೈಯಲ್ಲಿದ್ದ ೧ ಟಿನ್ ಪೆಟ್ಟಿಗೆಯಲ್ಲಿ ಸಾರಾಯಿ ತುಂಬಿದ ೨೮ ಬಾಟ್ಲಿಗಳೂ ಕೈಯಲ್ಲಿ ಒಂದು ಬಾಟ್ಲಿಯೂ ಸಿಕ್ಕಿತು. ಇವನನ್ನು ವಿಚಾರಣೆಗೆ ಗುರಿಮಾಡಿದ್ದಲ್ಲಿ ಮೇಜಿಸ್ಟ್ರೇಟರು ೨ ವರ್ಷಗಳ ಸಜಾ ವಿಧಿಸಿದರು. ಆದರೆ ಸಣ್ಣ ಪ್ರಾಯದವನಾದುದರಿಂದ ರಿಫೊರ್ಮೆಟರಿ ಶಾಲೆಗೆ ಕಳುಹಿಸಬೇಕೆಂಬದಾಗಿ ಹುಕುಂ ಮಾಡಿರುತ್ತಾರೆ. ಇವನ ಅಣ್ಣನಿಗೆ ಇದೇ ತಕ್ಸೀರಿನ ಮೇಲೆ ಹಿಂದೆ ಶಿಕ್ಷೆಯಾಗಿರುವದೆಂತ ವಿಚಾರಣೆಯ ಕಾಲ ತಿಳಿದುಬಂದಿರುವದು.

ಡಕ್ಕದಲ್ಲಿ ರಾಜದ್ರೋಹಕರವಾದ ವಹಿಗಳನ್ನು ಹಂಚಿದನೆಂಬ ತಕ್ಸೀರಿನ ಮೇಲೆ ಅಬ್ದುಲ್ಲ ಅದೇಜನೆಂಬವನು ಕೈದು ಮಾಡಲ್ಪಟ್ಟಿರುತ್ತಾನೆ.

ದಕ್ಷಿಣ ಹಿಂದೂಸ್ಥಾನ

ದಕ್ಷಿಣ ಮಲಬಾರದಲ್ಲಿ ಟಾನೂರು ರೈಲ್ವೇ ಸ್ಟೇಶನಿನ ೫ ಮೈಲು ದೂರದಲ್ಲಿ ಕೆಲವು ಆಯುಧಪಾಣಿಗಳಾದ ಮಾಪಿಳ್ಳೆಯರು ಒಬ್ಬ ನಂಬೂದ್ರಿ ಗೃಹಸ್ಥನ ಮನೆಗೆ ಹೋಗಿ, ದ್ರವ್ಯವಿಟ್ಟ ಸ್ಥಳವನ್ನು ತೋರಿಸದಿದ್ದರೆ ಕೊಲ್ಲುತ್ತೇವೆಂತ ಹೆದರಿಸಿ, ಸುಮಾರು ೬೦೦೦ ರೂಪಾಯಿ ಮೌಲ್ಯದ ಒಡವೆಗಳನ್ನು ಸುಲಕೊಂಡು ಹೋಗಿರುವರೆಂತ ವಾರ್ತೆ ಬಂದದೆ.

ಬರೋಡೆಯ ಗಾಯಕವಾಡರವರು ಮಹಾರಾಣಿಯವರ ಸಹಿತ ಕೆಲವು ದಿವಸಗಳಲ್ಲಿ ತಿರುವಂಕೋಡು ಸಂಸ್ಥಾನವನ್ನು ಸಂದರ್ಶಿಸಿ ತಾ. ೨೧ರಲ್ಲು ಬೆಂಗಳೂರಿಗೆ ಹೋಗಿರುತ್ತಾರೆ.

ಉದಕಮಂಡಲದ ಒಬ್ಬ ಮಹಮ್ಮದೀ ಉಪಾಧ್ಯಾಯನೂ ಅವನ ಹೆಂಡತಿಯೂ ಕಳ್ಳ ನಾಣ್ಯಗಳನ್ನು ಮಾಡುತ್ತಿದ್ದಾರಾಗಿ ಅನುಮಾನದಿಂದ ಕೈದುಮಾಡಲ್ಪಟ್ಟಿದ್ದಾರೆ. ಇಬ್ಬರೂ ಅನುಮಾನದ ಮೇಲೆ ಕೈದು ಮಾಡಲ್ಪಟ್ಟದ್ದರಿಂದ ಜಾಮೀನಿನ ಮೇಲೆ ಬಿಡಬೇಕೆಂಬದಾಗಿ ವಾದಿಸಿದ್ದಲ್ಲಿ ಮೆಜಿಸ್ಟ್ರೇಟರು ಒಬ್ಬೊಬ್ಬರಿಂದ ೨೦೦ ರೂಪಾಯಿಯ ಜಾಮೀನು ತಕ್ಕೊಂಡು ಬಿಟ್ಟಿರುತ್ತಾರೆ.

ಇದೇ ತಾ. ೨೮ರಲ್ಲು ಈರೋಡಿನಲ್ಲಿ ಥಿಯೋಸಫಿ ಮತದ ಕನ್ಫರೆನ್ಸ್ ಕೂಡಿ ಬಂದಿರುವದು. ಸ್ವಾಗತ ಭಾಷಣವಾದ ನಂತರ ಜಸ್ಟಿಸ್ ಸದಾಶಿವ ಅಯ್ಯರರು ಸ್ವಾಗತ ಭಾಷಣಕ್ಕೆ ಕಾಲೋಚಿತ ಉತ್ತರ ಕೊಟ್ಟರು.

ದಕ್ಷಿಣ ಕನ್ನಡ.

ಹೊಸದುರ್ಗ:— ಇಲ್ಲಿ ವರ್ಗವಾಗಿ ಹೋದ ಮೇಜಿಸ್ಟ್ರೇಟರ ಬದಲಿಗೆ ಮ. ರಾ. ವಿ. ವೆಂಕಟರಾವ್ ಬಿ. ಎ. ಯವರು ಹಾಜರಾಗಿ ಚಾರ್ಜು ವಹಿಸಿಕೊಂಡಿದ್ದಾರೆ.

ಶಾಲಾ ಅಸಿಸ್ಟ್ಯಾಂಟ ಇನ್ಸ್‌ಪೆಕ್ಟರವರ ಸವಾರಿಯು ಇಲ್ಲಿಗೆ ಚಿತ್ತೈಸೋಣಾಗಿಯದೆ. ಎಲಿಮೆಂಟರಿ ಶಾಲೆಗಳನ್ನು ಸಂದರ್ಶಿಸಿ ಹಿಂದೆರಳುವರಾಗಿ ತಿಳಿಯುತ್ತೇವೆ.

ಮಂಗಳೂರಿನಿಂದ ಕಣ್ಣಾನ್ನೂರು ವರೇಗೆ ಓಡುತ್ತಿರುವ ಮೋಟರ್ ಗಾಡಿಯನ್ನು ಬೇಗನೇ ತೆಗೆದು ಮಂಗಳೂರಿನಿಂದ ಹೊಸದುರ್ಗದ್ದ ವರೇಗೆ ಇಡುವರಾಗಿ ವರ್ತಮಾನ ಕೇಳುತ್ತೇವೆ. ಹೆಚ್ಚಿನ ಜನರಿಗೆ ಉಪಯೋಗವಿರುವ ಈ ಗಾಡಿಯನ್ನು ತನ್ಮಧ್ಯೆ ತೆಗೆಯುವದೆಂದರೆ ಹೊಸದುರ್ಗ ಅತ್ತಕಡೆ ತೆಂಕಲಾಗಿನ ನಿವಾಸಿಕರಿಗೆ ಬಹಳ ತೊಂದರೆಯೇ ಸರಿ.

ಕುವಿಪ್ರಗೆಳಲ್ಲಿ ಕೆಲಸದ ಬಗ್ಯೆ ನಾಲ್ಕು ತಿಂಗಳಿಗೆ ಹಂಗಾಮಿಯಾಗಿ ಒಬ್ಬ ರೆವಿನ್ಯು ಇನ್ಸ್‌ಪೆಕ್ಟರ್ ಮತ್ತು ಒಬ್ಬ ಪ್ಯಾದೆ; ಲೇಂಡ್‌ರಿಕಾರ್ಡ ಕೆಲಸದ ಬಗ್ಯೆ ಇಬ್ಬರು ಸ್ಪೆಶಲ್ ಲೇಂಡ್‌ರಿಕಾರ್ಡ ಇನ್ಸ್‌ಪೆಕ್ಟರರು ವ ಒಬ್ಬ ಪ್ಯಾದೆ ಮತ್ತು ಒಬ್ಬ ಚೆಯಿನ್‌ಮೇನ್ ನೊಕ್ರೂರಿ ಬಗ್ಯೆ ಸೆಂಕ್ಷನ್ ಒಂದಿರುತ್ತದೆ.

ಪುತ್ತೂರು:— ಇಲ್ಲಿಯ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿ ಪ್ರೊಸೆಸ್‌ಸರ್ವರ ಗೌಡಮಾಲಿಂಗನು ಸರಕಾರಿ ಹಣ ದುರುಪಯೋಗ ಪಡಿಸಿದ ಸಂಬಂಧ ಇಲ್ಲಿಯ ಡಿವಿಜನ್ ಡಿಪ್ಯುಟಿ ಕಲೆಕ್ಟರರಲ್ಲಿ ತನಿಕೆ ನಡಿಯುತ್ತಿದ್ದ ಮೊಕದ್ದಮೆಯಲ್ಲಿ ಮುದ್ದೆಯಾಲಿಗೆ ಡಿಪ್ಯುಟಿ ಕಲೆಕ್ಟರರವರು ತಾರೀಕು ೨೪ರಲ್ಲು ಆರು ಹಪ್ತೆಗಳ ಕಠಿಣ ಸಜಾ ವಿಧಿಸಿರುವರು.

ಸಿಸ್ಲಾ ಹತ್ಯಡ್ಕ ಗ್ರಾಮದ ಚಪ್ಪಮಕ್ಕೆ ಸದಾಶಿವ ಭಟ್ಟರಲ್ಲಿ ದರೋಡೆ ಕಳವು ಮಾಡಿದ್ದಾಗಿ ಕೊಕ್ಕಡ ಗ್ರಾಮದ ರಾಮಣ್ಣ ನ್ಯಾಕ, ಕೊಗ್ಗ ನ್ಯಾಕ; ಚಾಯಿ ಬ್ಯಾರಿ, ಸುಲೆಮಾನ ಬ್ಯಾರಿ, ಮಾರಾಟಿ ದೇವು, ವಿಷ್ಣುಶಬರಾಯ, ಅಪ್ಪು ಗೌಡ, ಕೆರಿಯ ಗೌಡ, ರಾಮಣ್ಣ ಗೌಡ ವಗೈರೆರ ಮೇಲೆ ಇಲ್ಲಿಯ ಡಿವಿಜನ್ ಡಿಪ್ಯುಟಿ ಮೇಜಿಸ್ಟ್ರೇಟರವರಲ್ಲಿ ತನಿಕೆ ನಡಿಯುತ್ತಿದ್ದ ಮೊಕದ್ದಮೆಯಲ್ಲಿ ತಾರೀಕು ೨೪ಲ್ಲು ಮುದ್ದೆಯಾಲೆಯರನ್ನು ರುಜುವಾತಿಲ್ಲವೆಂತ ಖುಲಾಸು ಮಾಡಿರುವರು.

ಬಂಟ್ವಾಳ:— ಕಳೆದ ಶನಿವಾರ (ತಾ. ೧೭)ನೇ ಇಲ್ಲಿಯ ಪರಸ್ಪರ ಸಹಾಯಕ ಸಂಘದ ವರ್ಷಾವಧಿ ರಿಪೋರ್ಟನ್ನು ಮಹಾ ಜನರಿಗೆ ಓದಿ ಮಂಜೂರು ಮಾಡೋಣಾಯಿತು. ಈ ಸಂಘವು (ನಂ. ೧೧೧೨) ಸ್ಥಾಪಿತವಾಗಿ ಇನ್ನೂ ಎರಡು ವರ್ಷಗಳಾಗದೆ ಇದ್ದರೂ, ಇದರ ದೆಶೆಯಿಂದ ಉಂಟಾಗಿರುವ ಮಹತ್ತರವಾದ ಕಾರ್ಯಗಳು ಹೆಚ್ಚೇ ಆಗಿವೆ. ಕಳೆದ ಮತ್ತೂ ಈ ವರ್ಷದ ಕೆಲ ಸಂಗತಿಗಳನ್ನು ತಿಳಿದುಕೊಂಡರೆ ಇದು ಸರಿಯಾಗಿ ತಿಳಿದೇ ಬರುವದು. ಸದಸ್ಯರ ಸಂಖ್ಯೆಯು ೩೦೩ರಿಂದ ೫೧೮ಕ್ಕೆ ಏರಿರುವದು; ಪಾಲುಗಳ ಸಂಖ್ಯೆಯು ಈಗ ೧೩೨೫, ಮೊದಲು ೬೫೩ ಮಾತ್ರ ಇದ್ದಿತು. ಡಿಪಾಜಿಟ್ಟುಗಳ (ಠೇವಣಾತಿ) ೬೭೦೦ ರೂಪಾಯಿಗಳಿಂದ [illegible] ರೂಪಾಯಿಗಳಿಗೆ ಹೆಚ್ಚಿರುವುದು; ಇದರಿಂದ ರೂ. ೬೦೦೦ [illegible]ರಿನ ಸೆಂಟ್ರಲ್ ಬ್ಯಾಂಕಿನಲ್ಲಿ ಇಟ್ಟಿದೆ. ಪಂಚಾಯಿತದಾರರ ಸಭೆಗಳು ೯೮ ಬಾರಿ ಸೇರಿದ್ದುವು; ೫ ಮಹಾ ಜನರ ಸಭೆಗಳೂ ಇದ್ದವು. ಸಂಘವು ರೂ. [illegible] ಮೊಬಲಗಿನ [illegible] ಸಾಲಗಳನ್ನು ಕೊಟ್ಟಿತು; ಇದರಲ್ಲಿ ವಿಶೇಷವಾಗಿ ರೂಪಾಯಿ ೧೦೦ಕ್ಕೆ ಮೀರದ ಸಣ್ಣ ಸಾಲಗಳು [illegible] ಇದ್ದುವು.—ಇವುಗಳ ಜುಮ್ಲಾ ಮೊಬಲಗು ರೂ. ೨೯೬೮೦. ವರ್ಷಾಂತ್ಯದೊಳಗೆ ೫೫೪ ಸಾಲಗಳು ರೂ. ೩೭೬೪೧ ಸಂಪೂರ್ಣವಾಗಿಯೂ ವಸೂಲಾದವು; ಮತ್ತು ಕಳೆದ ವರ್ಷದಂತೆಯೇ ಒಬ್ಬರಾದರೂ ವಾಯಿದೆಯನ್ನು ತಪ್ಪದೆ ಸಾಲದ ಹಣವನ್ನು ತಂದಿರುವರು. ಬಡ ಬೇಸಾಯಿಗಳಿಗೆ ರೂ. ೪೧೫೭೮ ವರೆಗೆ ೧೦೨ ಸಾಲಗಳನ್ನು ಕೊಟ್ಟಿದೆ. ಇಷ್ಟು ವಹಿವಾಟಿನ ದೆಶೆಯಿಂದ ರೂ. ೪೭೫ಕ್ಕೆ ವಿಶಾರಿ ನಫೆಯುಂಟಾಗಿರುವುದು.

ಈ ವೃತ್ತಾಂತದಿಂದ ತಿಳಿಯತಕ್ಕ ಅಂಶವೇನೆಂದರೆ:— ಎರಡು ವರ್ಷಗಳ ಹಿಂದೆ ಯಾರು ಕೊ-ಓಪರೇಟಿವ್ ಸಂಘಗಳ ಹೆಸರೆತ್ತಿದರೆ ನಕ್ಕುಬಿಡುತಲಿದ್ದರೊ, ಯಾರಿಗೆ ಕುರಿ (ಚೀಟು) ಫಂಡುಗಳೆನ್ನು ಕುರಿತು ಹೆಚ್ಚಿನ ಪಕ್ಷಪಾತವಿದ್ದಿತೊ, ಅಂತಹ ಗೃಹಸ್ಥರೇ ಈಗ ಈ ಸಂಘದ ಕಾರ್ಯವೃತ್ತಾಂತವನ್ನು ಕೇಳಿ ಶ್ಲಾಘನೆ ಮಾಡಿರುವರೆಂದೂ ಬಡಸಾಯಿಗಳಿಗೆ ನಿಜವಾಗಿಯೂ ಸುಲಭದಲ್ಲಿ ಉಪಕಾರ ಉಂಟಾಗಿರುವುದೆಂದೂ ಅರಿತುಕೊಳ್ಳಬಹುದಾಗಿದೆ. ಪರಸ್ಪರ ಸಹಾಯಕ ಸಂಘಗಳಿಂದ ದನ ಸಹಾಯವು ತೀರಾ ಬಡವರಿಗೆ, ವಹಿವಾಟವು ಹೆಚ್ಚಿದಂತೆ ಬಡವರ ಕಡೆಗೆ ಲಕ್ಷ್ಯವೂ ಹೆಚ್ಚುತ್ತ ಬಂದರೆ, ಅದೇ ಆ ಸಂಘಕ್ಕೆ ಕೀರ್ತಿಯನ್ನಬಹುದು. ಊರ ಜನರಲ್ಲಿ ವಿಶ್ವಾಸವೂ ನಂಬಿಕೆಯೂ ಹೆಚ್ಚಿ, ಒಬ್ಬರೊಡನೆ ಮತ್ತೊಬ್ಬರು ಕಲೆತು ಸಹಾಯ ಮಾಡ ತೊಡಗಿರುವುದು ಈ ಸಂಘದ ಸಲ್ಲಕ್ಷಣವಾಗಿರುವುದು

ಇರಲಿ, ಈ ಪರಸ್ಪರ ಧನಸಂಚಯ ಸಹಾಯಗಳಿಂದುಂಟಾದ ಕಳೆದ ಮತ್ತು ಈ ವರ್ಷದ ರೂಪಾಯಿ ೬೦೦ರ ನಫೆಯನ್ನು ಯಾವ ರೀತಿಯಲ್ಲೂ ವಿನಿಯೋಗಿಸದೆ ಒಂದು ಮೂಲೆಯಲ್ಲಿ ಕಟ್ಟಿರಿಸಿ ಅದನ್ನು ಆಪದ್ಧನವೆಂದು ಕರೆದು ನಿಶ್ಚಿಂತರಾಗಿ ಕೂತುಕೊಳ್ಳುವುದು ಯಾರ ಉಪಕಾರಕ್ಕೂ ಬಾರದು. ಯೋಗ್ಯರಾಗಿ, ಅಂಗಗಳಲ್ಲಿ ಊನತೆಯುಂಟಾಗಿರುವ ಯಾವ ಕೆಲಸವನ್ನೂ ಮಾಡಲಾರದ ಬಡಬಗ್ಗರಿಗೆ ಈ ಧನದಲ್ಲಿ ಒಂದು ಪೈಯಾದರೂ ದೊರೆಯ ಬಾರದೆ? ಶಿಕ್ಷಣೆಗೆ ಗತಿ ತೋರದ ಸಾಪದ ವಿದ್ಯಾರ್ಥಿಗಳಿಗೆ ನಾಲ್ಕಾಣೆಯನ್ನೂ ಕೊಡಲಾಗದೆ? ಬೇಡಿಕೊಂಡರೆ,—'ನಾಕಾಣೆ' ಎಂದು ಸುಮ್ಮನಿರುವುದೆ? ಪರಸ್ಪರ ಸಹಾಯವನ್ನು ಕುರಿತೇ ನಾಲ್ಕು ಪಾಠಗಳನ್ನು ಶಾಲಾ ಹುಡುಗರಿಗೆ ಕಲಿಸುವ ಹಾಗೆ ಉಪಾಧ್ಯಾಯರಿಗೆ ಉತ್ತೇಜನ ಕೊಡಲು, ಈ ಕಡೆಯ ಶಾಲೆಗಳಿಗೆ ಈ ಸಂಘದವರು ನಾಲ್ಕು ಪುಸ್ತಕಗಳನ್ನು ತರಿಸಿ ಕೊಟ್ಟು, ಅದರಿಂದ ಕಲಿಸಿದ ಪಾಠಗಳಲ್ಲಿ ವರ್ಷಕ್ಕೊಮ್ಮೆಯಾದರೂ ಪರೀಕ್ಷೆ ಮಾಡಿ ವಿದ್ಯಾರ್ಥಿಗಳಿಗೆ ಬಹುಮಾನವನ್ನು ಕೊಡಿಸುವ ಹಾಗೂ ಕೆಲ ರೂಪಾಯಿಗಳನ್ನು ವಿನಿಯೋಗಿಸಲಾಗದೆ? ಅಥವಾ ನಮ್ಮ ಸಮಾಜದ ಸ್ಥಿತಿಯು ಉತ್ತಮವಾಗುವ ಹಾಗೂ ಶಿಕ್ಷಣೆಯು ಜನ ಸಮಾನ್ಯರಲ್ಲಿ ಹರಡುವ ಹಾಗೂ, ಸಾಮಾನ್ಯವಾದ ನಾಲ್ಕಾರು ಕನ್ನಡ ಪುಸ್ತಕ, ಪತ್ರ, ಪತ್ರಿಕೆಗಳನ್ನಾದರೂ ತರಿಸಿ, ಆತುರವುಳ್ಳವರು ಓದುವ ಹಾಗೆ ಅನುಕೂಲಿಸ ಬಾರದೆ? ಪರಸ್ಪರ ಸಹಾಯದ ತತ್ವಗಳು ಜಾಮೀನು ನಿಲ್ಲುವುದಕ್ಕೂ, ಸಾಲ ಕೇಳುವುದಕ್ಕೂ, ರುಜು ಹಾಕುವುದಕ್ಕೂ ಮಾತ್ರವಲ್ಲೆಂದೂ, ಹಣದ ಸದುಪಯೋಗವು ಉಂಟಾಗುವ ಹಾಗೆ ಅಗತ್ಯವಾದ ವ್ಯವಸ್ಥೆಯುಂಟಾಗಬೇಕೆಂದೂ ಪಂಚಾಯಿತದಾರರಿಗೆ ವಿನಂತಿಸಿರುವೆನು.

ಸದರಿ ಸಭೆಯಲ್ಲಿ ರಾ। ಎಚ್. ಗಣಪತಿರಾಯರೂ, ರಾ। ಇನ್ಸ್‌ಪೆಕ್ಟರ್ ಗಿರಿಯಪ್ಪನವರೂ, ಪರಸ್ಪರ ಸಹಾಯವನ್ನು ಕುರಿತು ಬೋಧನೆ ಮಾಡಿದರು ಇವರು ಇದು ಕಾರಣ ನಮ್ಮ ಕೃತಜ್ಞಾರ್ಹರಾಗಿರುವರು.

ಅಧ್ಯಕ್ಷರಾಗಿ ಇಂತಹ ಸುವ್ಯವಸ್ಥೆಯನ್ನುಂಟುಮಾಡಿರುವ ರಾ। ರಾ। ಕೆ. ಕೃಷ್ಣರಾಯರೂ ಅವರ ಸಹಕಾರಿಗಳೂ ನಮ್ಮ ವಂದನೆಯನ್ನು ಸ್ವೀಕರಿಸಿಕೊಳ್ಳಲಿ.

ಉಡುಪಿ, ತಿವಹಳ್ಳಿ: — ನಮ್ಮ ನಿಟ್ಟೂರು ಶಾಲೆಯ ಉಪಯೋಗದ ಬಗ್ಯೆ ಮ. ರಾ. ಬಡ್ಡಿಲಾಯ ನರ್ಸಿಂಗರಾಯರವರು ಕಟ್ಟಿಸಿದ ಕಟ್ಟೋಣದಲ್ಲಿ ತಾ. ೧೯ರಲ್ಲು ಪ್ರವೇಶಿಸಿದ ಶಾಲೆಯು ಧ್ವಜತೋರಣಗಳಿಂದ ಶೃಂಗರಿಸಲ್ಪಟ್ಟಿತ್ತು. ಸದರಿ ಗ್ರಾಮದ ಪಟೇಲರು ವಗೈರೆ ಸಭೆಯನ್ನು ಅಲಂಕರಿಸಿದ್ದರು. ಮ. ರಾ. ರಾ. ಉಡುಪಿ ಸಬ್ ರೇಂಜ್ ಶಾಲೆಗಳ ಸುಪರ್‌ವ್ಯಾಜರವರು ಸಭಿಕರ ಕೋರಿಕೆಯ ಮೇರೆಗೆ ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ್ದರು ಶಾಲಾ ಮಕ್ಕಳು ದೇವರ ಪ್ರಾರ್ಥನೆಯನ್ನು ಹಾಡಿದನಂತರ ಸದರಿ ಶಾಲೆಯ ಮುಖ್ಯ ಉಪಾಧ್ಯಾಯರು ಶಾಲೆ ಸ್ಥಾಪಿಸೋಣಾದಂದಿನಿಂದ ಈ ವರೇಗಿನ ಸಂಕ್ಷಿಪ್ತ ವರದಿಯನ್ನು ಓದಿದ ನಂತರ ಅಧ್ಯಕ್ಷರು ಉಪಾಧ್ಯಾಯರಿಗೂ ಮಕ್ಕಳಿಗೂ ಅವರವರ ಕರ್ತವ್ಯದ ಕುರಿತು ಸುರಸವಾದ ಮಾತುಗಳಿಂದ ಬೋಧಿಸಿದರು. ನಂತರ ಪಟೇಲರು ಸಹಾ ಹೆತ್ತವರ ಕರ್ತವ್ಯಗಳನ್ನು ಕುರಿತು ವಿವರಿಸಿದರು. ನಂತರ ನಮ್ಮ ಮಹಾರಾಜಾ ಚಕ್ರವರ್ತಿಯವರಿಗೆ ಈಗ ನಡಿಯುವ ಯುದ್ಧದಲ್ಲಿ ಜಯವಾಗಲೆಂದು ಪ್ರಾರ್ಥಿಸಿದ ನಂತರ ರಾಜಾಗೀತವನ್ನು ಹಾಡಿ ಸಭೆಯ ಕೆಲಸವು ಮುಗಿಯಿತು. ನಂತರ ನೆರೆದು ಬಂದ ಸದ್ಗೃಹಸ್ಥರಿಗೂ, ಶಾಲಾ ಮಕ್ಕಳಿಗೂ ತಾಂಬೂಲ ಉಪಹಾರಾದಿ ಪದಾರ್ಥಗಳನ್ನು ಹಂಚಿದ ನಂತರ ಎಲ್ಲರೂ ಅಗಲಿದರು.

ತಾ ೧೭ರ ಲಾಗಾಯಿತು ಯಥಾ ಪ್ರಕಾರ ಮಳೆ ಸುರಿಯಲಿಕ್ಕೆ ಆರಂಭವಾಗಿರುವದು. ಅವಶಿಷ್ಟ ಸಾಗುವಳಿ ಕೆಲಸವು ಪೂರ್ಣವಾಗಿರುವದು. ಜವಸಗಳ ಬೆಲೆಗಳು ಚಡಾವಾಗಿಯೆ ಇದೆ. ಕಳವು ಮಾಲನ್ನು ಬಚ್ಚಿಟ್ಟುಕೊಂಡ ಗೋವಿಂದ ಮರ್ತಪ್ಪನಿಗೆ ಆದ ಸಜೆ ಮತ್ತು ಜುರುಮಾನೆಯಲ್ಲಿ ಅಪ್ಪೀಲಿನಲ್ಲಿ ಸಜೆಯು ವಜಾವಾಗಿ ಜುರುಮಾನೆಯು ಕಾಯಂ ಆಗಿರುವದು.

ತಾ. ೨೦ನೇ ರಾತ್ರೆ ಇಲ್ಲಿಗೆ ಸಮೀಪದ ಮೂಡಬೆಟ್ಟು ಎಂಬಲ್ಲಿ ಗಾಣಿಗ ಕೃಷ್ಣ ಎಂಬವನಲ್ಲಿ ಕಳ್ಳರು ಕನ್ನ ಹಾಕಿ ಸುಮಾರು ಒಂದುವರೆ ಸಾವಿರ ರೂಪಾಯಿಗಳ ಚಿನ್ನಾಭರಣ ನಗದು ಹಣ ಸಹ ವೈದರು. ಹೀಗೆಯೇ ತೋನ್ಸೆಯಲ್ಲಿಯೂ ಒಂದು ಕಡೆ ನಡೆದಿರುವದಂತೆ. ಮಲಬಾರ ಕಡೆಯಿಂದ ಕೆಲವರು ಮಾಪಿಳ್ಳೆಯರು ಬಂದು ಅಲ್ಲಲ್ಲಿ ಮಾಪಿಳ್ಳೆಯರ ಮನೆಗಳಲ್ಲಿದ್ದು ಈ ಕೃತ್ಯ ನಡಿಸುತ್ತಿರುವದಾಗಿ ವದಂತಿ ಇರುವದು.

ಸುಮಾರು ಹತ್ತು ವರ್ಷಗಳಿಂದಲೂ ಸಂಚಾರದಲ್ಲಿರುವ ಶ್ರೀ ಪೇಜಾವರ ಶ್ರೀಪಾದಂಗಳವರು ಬದರಿಕಾಶ್ರಮ ಯಾತ್ರಾ ಉದ್ದಿಶ್ಯ ಪರಿವಾರ ಸಹಿತವಾಗಿ ಈ ತಾ. ೨೩ಕ್ಕೆ ಹರಿದ್ವಾರಕ್ಕೆ ತಲಪಿರುವದಾಗಿ ವಾರ್ತೆ ಬಂದಿರುವದು.

ಮಂಗಳೂರು.

ಕುಂದಾಪುರ [illegible] ಆಫೀಸರರು ಜುಲಾಯಿ ತಾ. ೨೮ ಮಂಗಳೂರಿಂದ [illegible]; ತಾ. ೨೯ [illegible]

ಆಗೋಸ್ತು ತಿಂಗಳ ತಾ. ೫ ರಾತ್ರಿಗಳಿಂದ ಉಡ್ಪಿ; ತಾ. ೬ರಿಂದ ೮ರ ವರೆಗೆ ಉಡ್ಪಿ; ತಾ. ೯ ಉಡ್ಪಿಯಿಂದ ಕುಂದಾಪುರ ಈ ರೀತಿ ಸರ್ಕೀಟು ಬೆಳಸುವರು.

ಕಲೆಕ್ಟರ ಆಫೀಸಿನ ೧ನೇ ರಿಕಾರ್ಡ ಕ್ಲಾರ್ಕರಾದ ಮ. ರಾ. ವಿ ವೆಂಕಟರಾಯರು ಇತರ ಡ್ಯೂಟಿಯ ಮೇಲಿರುವದರಿಂದ ಕಲೆಕ್ಟರ ಆಫೀಸಿನ ೩ನೇ ಕರಸ್ಪೊಂಡೆಂಟ ಕ್ಲಾರ್ಕರಾದ ಮ ರಾ ಎಸ್ ಕೃಷ್ಣಪ್ಪನವರು ೧ನೇ ರಿಕಾರ್ಡ ಕ್ಲಾರ್ಕರಾಗಿಯೂ, ಮ ರಾ ಎ ತಿಮ್ಮಪ್ಪ ಪೂಂಜರವರು ೩ನೇ ಕರಸ್ಪೊಂಡೆಂಟ ಕ್ಲಾರ್ಕರಾಗಿಯೂ ಮ ರಾ ಎಮ್ ಸುಬ್ಬರಾಯರು ೪ನೇ ಕರಸ್ಪೊಂಡೆಂಟ ಕ್ಲಾರ್ಕರಾಗಿಯೂ, ೨ನೇ ಗ್ರೇಡ್ ರೆವಿನ್ಯೂ ಇನ್ಸ್‌ಪೆಕ್ಟರರಾದ ಮ ರಾ ಬಿ ಸೋಮಪ್ಪನವರು ಕಲೆಕ್ಟರ ಆಫೀಸಿನ ೩ನೇ ಅಕೌಂಟಾಂಟರಾಗಿಯೂ ನೇಮಿಸಲ್ಪಟ್ಟಿರುತ್ತಾರೆ

ಪುತ್ತೂರು ತಾಲೂಕು ಆಫೀಸಿನ ಹೆಡ್ ಎಕೌಂಟಾಂಟರಾದ ಮ| ರಾ| ವೈ ವೆಂಕಪ್ಪನವರು ೩ ತಿಂಗಳು ೨೦ ದಿವಸಗಳ ಪ್ರಿವಿಲೆಜ್ ರಜೆ ತಕ್ಕೊಂಡಿರುವದರಿಂದ ಪುತ್ತೂರು ಡಿವಿಜನಲ್ ಆಫೀಸಿನ ಹೆಡ್ ಕ್ಲಾರ್ಕರಾದ ಮ| ರಾ| ಯು ಅನಂತಯ್ಯನವರು ಪುತ್ತೂರು ತಾಲೂಕು ಆಫೀಸಿನ ಹೆಡ್ ಎಕೌಂಟಾಂಟರಾಗಿ ನೇಮಿಸಲ್ಪಟ್ಟಿರುವರು

ಮ| ರಾ| ಯು ಅನಂತಯ್ಯನವರು ಇತರ ಡ್ಯೂಟಿಯ ಮೇಲಿರುವದರಿಂದ ಕುಂದಾಪುರ ಡಿವಿಜನಲ್ ಆಫೀಸಿನ ೨ನೇ ಕ್ಲಾರ್ಕರಾದ ಮ| ರಾ| ಪಿ ಆನಂದರಾಯರು ಪುತ್ತೂರು ಡಿವಿಜನಲ್ ಆಫೀಸಿನ ಆಕ್ಟಿಂಗ್ ಹೆಡ್ ಕ್ಲಾರ್ಕರಾಗಿ ನೇಮಿಸಲ್ಪಟ್ಟಿರುವರು

ಇಲ್ಲಿಯ ಗವರ್ನಮೆಂಟ ಟ್ರೈನಿಂಗ್ ಕಾಲೇಜು ಅಸಿಸ್ಟಾಂಟ ಮಾಸ್ತರರವರಾದ ಮ| ರಾ| ಎಮ್ ಬಾಬು ಬಿ. ಎ. ಎಲ್ ಟಿ ಯವರೂ ರಾ| ಕೊಳಲೂರು ರಾಮರಾಯರವರೂ ಸಬ್ ಅಸಿಸ್ಟಾಂಟ ಟೆಸ್ಟ ಪರೀಕ್ಷೆಯಲ್ಲಿ ಪಾಸಾಗಿರುತ್ತಾರೆ

ಈ ವರ್ಷ ಗವರ್ನಮೆಂಟ ಟ್ರೈನಿಂಗ್ ಶಾಲೆಯಿಂದ ಪರೀಕ್ಷೆಗೆ ನಿಂತ ಫೈನಲ್ ಎಲಿಮೆಂಟರಿ ಗ್ರೇಡಿನ ೧೬ ವಿದ್ಯಾರ್ಥಿಗಳಲ್ಲಿ ೮ ಮಂದಿಯೂ, ಗವರ್ನಮೆಂಟ ಹುಡುಗಿಯರ ಟ್ರೈನಿಂಗ್ ಶಾಲೆಯಲ್ಲಿ ಪರೀಕ್ಷೆಗೆ ನಿಂತ ೪ ಮಂದಿಯಲ್ಲಿ ಎಲ್ಲರೂ ಪಾಸಾಗಿರುವರೆಂತ ತಿಳಿಯುತ್ತೇವೆ

ಸೋಮವಾರ ಬೆಳಿಗ್ಗೆ ಮಿಶ್ಶನ್ ಶಾಪಿನ ವಠಾರದಲ್ಲಿ ವಾರಿಸುದಾರರಿಲ್ಲದ ಒಬ್ಬನು ಸತ್ತುಬಿದ್ದಿದ್ದನು ಮಿಶ್ಶನ್ ಶಾಪಿನ ಮೆನೇಜರರು ಪೋಲೀಸರವರಿಗೆ ವರದಿ ಮಾಡಿ ಶವವನ್ನು ತೆಗೆಸಿರುತ್ತಾರೆ

ಇದೇ ಕಳೆದ ಶನಿವಾರ ಬಲ್ಮಠ ಕಲ್ಪಣೆಯಲ್ಲಿ ವಾಸಿಸುವ ಮಿ| ಗಾಬ್ರಿಯೇಲ್ ರತ್ನರವರ ಮನೆಯಿಂದ ಒಂದು ರೊಸ್ಕೊಪ್ ವಾಚು ೫ ರೂಪಾಯಿ ಕ್ರಯದ ಬೆಳ್ಳಿ ಸರಪಣಿಯೊಡನೆ ಹಗಲು ೪ ಗಂಟೆಗನೇ ಕಳವು ಆಗಿರುವದೆಂತ ತಿಳಿಯುತ್ತೇವೆ

ಕಳೆದ ಹಪ್ತೆಯಲ್ಲಿ ಮಿಶ್ಶನ್ ಹೈಸ್ಕೂಲಿನ ಎದುರಿನ ಒಂದು ಅಂಗಡಿಗೂ ರಾತ್ರಿಕಾಲ ಕನ್ನ ಬಿದ್ದಿರುವದಂತೆ

ಇಲ್ಲಿಯ ಡಿಸ್ಟ್ರಿಕ್ಟ ಮತ್ತು ಸೆಶ್ಶನ್ಸ್ ಜಡ್ಜರವರಿಗೆ ಬರುವ ಒಕ್ಟೋಬರ ತಿಂಗಳಿಂದ ಮೂರು ತಿಂಗಳ ರಜೆ ಸೆಂಕ್ಷನ್ ಆಗಿರುವದೆಂತ ಕೇಳುತ್ತೇವೆ

ಅಧ್ಯಾಪಕ ವಿದ್ಯಾರ್ಥಿ ಸಂಘ ಎಂಬ ಹೆಸರಿನಿಂದ ಇಲ್ಲಿನ ಟ್ರೈನಿಂಗ್ ಶಾಲೆಯ ವಿದ್ಯಾರ್ಥಿಗಳು ತಮ್ಮೊಳಗೆ ಒಂದು ಸಂಘವನ್ನೇರ್ಪಡಿಸಿರುವರು. ವಿದ್ಯಾರ್ಥಿಗಳು ಶಿಕ್ಷಣ ಕ್ರಮವನ್ನು ಒಂದೆರಡು ವರ್ಷಗಳ ವರೆಗೆ ಕಲಿತು ತಂತಮ್ಮ ಶಾಲೆಗಳಿಗೆ ಹಿಂದೆರಳಿದಾಗ ಪರಸ್ಪರ ಪರಿಚಿತಿಯನ್ನು ಮರೆಯದ ಹಾಗೆ ಪರಿಶೀಲಗಿನ ಅನುರಾಗವನ್ನು ಹೆಚ್ಚಿಸುವ ಈ ಸಂಘವು ತುಂಬಾ ಅಗತ್ಯವಾದುದು. ಇಂತಹ ಸಂಘವನ್ನು ನಿರ್ಮಿಸುವುದರಲ್ಲಿ ,ಕಳೆದ ವರ್ಷ ಸೋಧೋದಸೂ ಎದೆಗುಂದದೆ ಅದನ್ನು ಈ ವರ್ಷ ಪುನಃ ಮಾಡಿದುದು ಶ್ಲಾಘನೀಯವಾಗಿದೆ. ಅದನ್ನು ಆಗಗೊಳಿಸಿದ ಟ್ರೈನಿಂಗ್ ಶಾಲೆಯ ಮುಖ್ಯೋಪಾಧ್ಯಾಯ ಮ ರಾ ಟಿ ಮಂಗೇಶರಾಯರವರ ಉಪಕಾರವು ಆ ಶಾಲಾ ವಿದ್ಯಾರ್ಥಿಗಳು ಸದಾ ಸ್ಮರಿಸುವಂತಹದ್ದಾಗಿದೆ.

ಪ್ರತಿಯೊಂದು ತರಗತಿಯ ವಿದ್ಯಾರ್ಥಿಗಳಿಗೂ ಸಂಘದ ಆಡಳಿತೆಯಲ್ಲಿ ವಿಚಾರವಿರುವಂತೆ ಆಯಾ ತರಗತಿಯಿಂದ ಒಬ್ಬೊಬ್ಬನನ್ನು ಒಂದೊಂದು ಕೆಲಸಕ್ಕೆ ನೇಮಿಸಿರುವರು ಸಂಘದ ಕಾರ್ಯದರ್ಶಿಯಾಗಿ ಅಪ್ಪರ್ ಸೆಕಂಡರಿ ವಿದ್ಯಾರ್ಥಿಯಾದ ಅರಿಕೆರೆ ವೆಂಕಟರಾಯರನ್ನೂ ಕೋಶಾಧಿಕಾರಿಯಾಗಿ ಲೋವರ್ ಸೆಕಂಡರಿ ವಿದ್ಯಾರ್ಥಿಯಾದ ಮರೋಳಿ ವೆಂಕಟರಾಯರನ್ನೂ ಕಮಿಟಿ ಮೆಂಬರರಾಗಿ ಬೇರೆ ಅಬ್ದುಲ್ ಶಾ ಚಾಮ್ಮದರನ್ನೂ ಪಿ ಮುರಾರಿರಾಯರನ್ನೂ, ಬಿ ಕೃಷ್ಣರಾಯರನ್ನೂ ಮೊದಲನೆ ಬಾರಿ ಕೂಡಿದ ಸಭಿಕರು ನೇಮಿಸಿರುವರು ಈ ಕಾರ್ಯಾಧಿಕಾರಿಗಳು ತಮ್ಮ ವಶವಾಗಿಟ್ಟ ಕೆಲಸಗಳನ್ನು ತನುಮನದಿಂದ ಮಾಡುವರೆಂದು ಸದಸ್ಯರು ನಂಬಿರುತ್ತಾರೆ

ಸಂಘದ ಕಾರ್ಯನಿರ್ವಾಹವಾದರೋ ಇಲ್ಲಿ ಮೂರು ವರ್ಷಗಳಿಂದ ನೆಲೆಗೊಂಡ "ಸ್ಟೂಡೆಂಟ್ಸ್ ಬ್ರದರ್ಸ್‌ಹೂಡ" ಎಂಬ ವಿದ್ಯಾರ್ಥಿ ಸಂಘದ ಕಾರ್ಯನಿರ್ವಾಹದಂತೆಯೇ ಇರುವುದು ಆದರೆ ಇಲ್ಲಿ ಓದುವ ಪತ್ರಗಳು, ಮಾಡುವ ಭಾಷಣಗಳು, ತರ್ಕಿಸುವ ವಿಷಯಗಳು ಕನ್ನಡದಲ್ಲಿಯೇ ಆಗುವುವು ಸದಸ್ಯರಿಂದ ವಂತಿಗೆ ಮೂರಾಣೆ ಪ್ರಕಾರ ವಂತಿಗೆ ತೆಗೆದುಕೊಂಡು ಒಟ್ಟು ಕೂಡಿದ ಹಣದಿಂದ ಮುಖ್ಯವಾದ ಕನ್ನಡ ಪಹಿಗಳನ್ನೂ ಪತ್ರಿಕೆಗಳನ್ನೂ ತರಿಸಬೇಕಾಗಿಯೂ ಸದಸ್ಯರು ನಿರ್ಧರಿಸಿರುವರು. ವರ್ಷ ವರ್ಷವೂ ಈ ವಿದ್ಯಾರ್ಥಿಗಳು ಬೇರೆಯಾದರೂ ಸಂಘಕ್ಕೆ ಹೊಸ ಸದಸ್ಯರು ಕೂಡಿ ಉತ್ಸಾಹದಿಂದ ಅದನ್ನು ನಡಿಸಿ ಸಂಘವನ್ನು ಚಿರಂಜೀವಿಯಾಗಿ ಮಾಡುವರೆಂದು ನಂಬಿದ್ದೇವೆ

ಮ| ರಾ| ಪಜೀರ ರಾಮಕೃಷ್ಣಯ್ಯನವರು ಕೆಲವು ದಿವಸಗಳಿಂದ ದೇಹಾಲಸ್ಯಗಳಲ್ಲಿದ್ದು ನಿನ್ನೆಯ ದಿನ ಪ್ರಾತಃಕಾಲ ಗತಿಸಿದರೆಂಬದನ್ನು ತಿಳಿಸಲು ವಿಷಾದಿಸುತ್ತೇವೆ ಇವರು ಬಹಳ ವರ್ಷಗಳಿಂದ ಇಲ್ಲಿಯ ಸೈಂಟ್ ಅಲೋಸಿಯಸ್ ಕಾಲೇಜಿನ ಕನ್ನಡ ಪಂಡಿತರಾಗಿದ್ದರು ಅದಲ್ಲದೆ ಇವರು ಹೊಮಿಯೋಪತಿ ಔಷಧಿಗಳ ಚಿಕಿತ್ಸೆಯನ್ನು ಮುಖ್ಯವಾಗಿ ಪಟ್ಟಣದ ಬಡವರ್ಗದವರಲ್ಲಿ ಮಾಡಿಕೊಂಡಿದ್ದು ಮಧ್ಯ ರಾತ್ರಿ ಎಂತ ನೋಡದೆ ಕರದಾಗಲೆಲ್ಲಾ ರೋಗಿಗಳ ಮನೆಗೆ ಹೋಗಿ ಧರ್ಮಾರ್ಥವಾಗಿ ಔಷಧೋಪಚಾರ ಮಾಡುತ್ತಿದ್ದುದರಿಂದ ಪಟ್ಟಣಿಗರಲ್ಲಿ ಇವರ ಮರಣದಿಂದ ಹೆಚ್ಚಿನ ವಿಷಾದ ಉಂಟಾಗಿರುವದು

~~~~~~

ಸಹಕಾರ.

ಸರ್ಕಲಾರು ನಂಬ್ರ ೧೧

ಸಂಘಗಳಿಂದ ಪಡಕೊಂಡ ಸಾಲಗಳ ವಿನಿಯೋಗ

೧. ಸಂಘದಿಂದ ಕೊಡಲ್ಪಡುವ ಸಾಲಗಳು ಉಪಯೋಗಕರವಾದ ಕಾರ್ಯಗಳಿಗೋಸ್ಕರ ಮಾತ್ರವಾಗಿರುತ್ತವೆಂಬುದು ಸಹಕಾರ ಸಂಘಗಳಿಗೆ ಸೇರಿದವರೆಲ್ಲರಿಗೂ ಗೊತ್ತಿದೆ ಸಂಘದ ನಿಬಂಧನೆಗಳಲ್ಲೆಲ್ಲಾ ಇದು ಒಂದು ಮುಖ್ಯವಾದ ಕ್ರಮವಾಗಿರುತ್ತದೆ, ಮತ್ತು ಉಪಯೋಗಕರವಾದ ಕಾರ್ಯಗಳೆಂದರೆ ಯಾವವು ಎಂಬದನ್ನು ಸಷ್ಟಪ್ರವಾಗಿ ಕ್ರಮಗಳಲ್ಲೇ ನಮೂದಿಸಿಯದೆ ಆದಕಾರಣ ಸಾಲಗಳನ್ನು ಪಡೆಯಲಪೇಕ್ಷಿಸುವವನು ಪ್ರತಿಯೊಬ್ಬನೂ ಸಾಲಗಳ ಉದ್ದೇಶಗಳನ್ನು ವಿಶದವಾಗಿ ಅರ್ಜಿಗಳಲ್ಲೇ ನಮೂದಿಸಬೇಕಾಗಿರುತ್ತದೆ.

೨. ತಮ್ಮ ಸ್ಥಿತಿಗತಿಗಳನ್ನು ಅದಷ್ಟು ಮಟ್ಟಿಗೆ ಸಾಲಗಳನ್ನು ಕೊಡುವ ಸಾವಕಾಶದಿಂದ ಮರೆಗೊಳಿಸುವದು ಸಾಲಗಾರರಿಗೆಲ್ಲಾ ಸ್ವಭಾವಿಕವಾಗಿರುವ ಗುಣವಾಗಿರುತ್ತದಷ್ಟೇ. ಸಾಲ ಕೇಳುವವನ ಸ್ಥಿತಿಗತಿಗಳನ್ನು ನಿರ್ಧರಿಸುವುದಕ್ಕೂ ಆತನ ಗರ್ಜಿನ ಸತ್ಯತ್ವದ ಕುರಿತು ವಿಚಾರಿಸುವುದಕ್ಕೂ ಸಾಲದ ಉದ್ದೇಶವು ಸಂಘದ್ದೇ ಎಂಬ ತಿಳುವಳಿಕೆಯು ಮುಖ್ಯವಾಗಿರುತ್ತದೆ. ಸಾಲಗಾರರು ತಾವು ಕೇಳುವುದನ್ನು ತಿರಸ್ಕರಿಸುವ ಸಂಭವವಿರಬಹುದೆಂಬ ಊಹೆಯಿಂದ ಕೆಲವುವೇಳೆ ನಿಜವಾದ ಉದ್ದೇಶಗಳನ್ನು ಅಡಗಿಸಿ ಯಥಾರ್ಥವೆಂದು ತೋರಬಹುದಾದ ಇತರ ಉದ್ದೇಶಗಳನ್ನೇ ಕಾಣಿಸಲೂಬಹುದು. ಆದುದರಿಂದ ಸಾಲಕೇಳುವವರು ನಮೂದಿಸುವ ಉದ್ದೇಶಗಳ ಕುರಿತು ಪಂಚಾಯತರು ವಿಶೇಷವಾಗಿ ಶೋಧನೆ ಮಾಡುವುದು ಅತಿ ಅಗತ್ಯವಾಗಿರುತ್ತದೆ.

೩ ಸಾಲಗಳನ್ನು ಕೊಟ್ಟನಂತರವೂ ಅವುಗಳನ್ನು ಪಡೆದ ಉದ್ದೇಶಗಳಿಗೇನೇ ವಿನಿಯೋಗಿಸುತ್ತಾರೆಯೋ ಏನೆಂಬದನ್ನು ವಿಚಾರಿಸಿ ತಿಳಿದುಕೊಳ್ಳುವುದಕ್ಕೆ ಪಂಚಾಯತರೂ ಇತರ ಮೆಂಬರರೂ ಪ್ರಯತ್ನಿಸಬೇಕು, ಸಂಘದಿಂದ ಪಡೆದ ಯಾವದೊಂದು ಸಾಲವನ್ನು ದುರ್ವಿನಿಯೋಗ ಮಾಡಿದ್ದು ಪಂಚಾಯತರಿಗೆ ಕಂಡು ಬಂದರೆ, ಆ ಸಾಲಕ್ಕೆ ನಿಶ್ಚಯಿಸಿದ ವಾಯಿದೆಯನ್ನು ರದ್ದುಮಾಡಿ ಇದನ್ನು ಕೂಡಲೇ ವಸೂಲು ಮಾಡುವ ಅಧಿಕಾರವು ಪ್ರತಿ ಸಂಘದ ಕ್ರಮಗಳಲ್ಲಿಯೂ ಪಂಚಾಯತರಿಗೆ ಕೊಡಲ್ಪಡುವುದು. ದುರ್ವಿನಿಯೋಗವೆಂದರೆ ಕೆಟ್ಟ ಉದ್ದೇಶಗಳಿಗೇನೇ ಉಪಯೋಗಿಸುವದೆಂದು ಅರ್ಥವಲ್ಲ ಒಂದು ಉದ್ದೇಶಕ್ಕೆ ಎಂದು ತೆಗೆದುಕೊಂಡ ಹಣವನ್ನು ಇನ್ನೊಂದು ಒಳ್ಳೇ ಉದ್ದೇಶಕ್ಕೆ ಉಪಯೋಗಿಸಿದರೂ ಅದು ದುರ್ವಿನಿಯೋಗವೇ ಆಗುತ್ತದೆ ಈ ವಿಷಯಗಳನ್ನೆಲ್ಲಾ ಚೆನ್ನಾಗಿ ಗ್ರಹಿಸಿ ಪಂಚಾಯತರೂ ಮೆಂಬರರೂ ಯಥೋಚಿತವಾಗಿ ನಡೆಯಬೇಕಾಗಿರುತ್ತದೆ

ದಕ್ಷಿಣಕನ್ನಡಾ ಸೆಂಟ್ರಲ್ ಕೋಆಪರೇಟಿವ್ ಬೇಂಕ್, ಲಿಮಿಟೆಡ್
ಪುತ್ತೂರು, ತಾ 26-7-1915.

ಎಮ್ ಅನಂತರಾವ್
ಕಾರ್ಯದರ್ಶಿ.

ಜೀನಸು ಧಾರಣೆ. (ರಖಂ)

ಮುಸ್ಕಿ ಅಕ್ಕಿ	5-4-0	5-12-0
ಗಾಡಿ ರಾಶಿ ,,	4-11-0	4-13-0
ಗುಡ್ಡ ,,	4-14-0	5-0-0
ಅಪ್ಪಲ್ ಬೆಳ್ತಿಗೆ ,,	5-12-0	6-4-0
ಗುಡ್ಡ ಬೆಳ್ತಿಗೆ ,,	5-[illegible]-0	5-6-0
ರಂಗೂನು ಬೆಳ್ತಿಗೆ ಗೋಣಿ ೧ರ	9-8-0	9-4-0
ಗೋಧಿ ಗೋಣಿ ೧ರ	13-[illegible]-0	14-0-0
ಹುರುಳಿ ಗೋಣಿ ೧ರ	6-[illegible]-0	7-12-0
ಕಡಲೆ ಗೋಣಿ ೧ರ ,,	8-[illegible]-0	9-8-0
ತೊಗರಿ ಗೋಣಿ ೧ರ	10-0-0	11-8-0
ತೊಗರಿ ಬೇಳೆ ಗೋಣಿ ೧ರ.	12-8-0	15-0-0
ಉದ್ದು ಗೋಣಿ ೧ರ		10-0-0
ಉರುಬಿಲ್ಲ ಖಂಡಿ ೧ರ ..	...	75-0-0
ಉಪ್ಪು ಗೋಣಿ ೧ರ	3-12-0	3-14-0
ಕೊಬ್ಬರಿ ಖಂಡಿ ೧ರ .	70-0-0	75-0-0
ಕೊಬ್ಬರಿ ಹಿಂಡಿ ಖಂಡಿ ೧ರ		14-0-0
ಎಳ್ಳಿಂಡಿ ಖಂಡಿ ೧ರ	25-0-0	33-12-0
ಕೊಬ್ಬರಿ ಎಣ್ಣೆ ಮಣ ೧ರ.	5-14-0	6-0-0
ಎಳ್ಳೆಣ್ಣೆ ಮಣ ೧ರ (ಕುರಾಸನ)	3-12-0	3-10-0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ರ		5-0-0
ಮೋರಿಸ್ ಸಕ್ಕರೆ ಮಣ ೧ರ		4-12-0
ಕಾಫಿ ಖಂಡಿ ೧ರ	240-0-0	252-0-0
ಹೊಸಬೇಗೋಟು ಖಂಡಿ ೧ರ	94-0-0	[illegible]-0-0
ಹೊಸ ಗೇರುಬೀಜ ಮುಡಿ ೧ರ		[illegible]-2-0
ಕಬ್ಬಿಣ ಖಂಡಿ ೧ರ		[illegible]-0-0
ತಾಂಬ್ರ ತಗಡು ಮಣ ೧ರ.		[illegible]-0-0
ತಾಂಬ್ರ ಪಾತ್ರೆಗಳು ಮಣ ೧ರ.		[illegible]-0-0
ಚೀನಾ ಬೆಳ್ಳಿ ಸೇರು ೧ರ.		18-12-0
~~~~~~

ಸ್ವದೇಶಾಭಿಮಾನಿಯ ನೋಟೀಸು.

ಚಂದಾದಾರರು ನಮಗೆ ಬರೆಯುವ ಎಲ್ಲಾ ಪತ್ರ ವ್ಯವಹಾರಗಳಲ್ಲಿ ತಮ್ಮ ತಮ್ಮ ವಿಳಾಸದೊಂದಿಗೆ ಇರುವ ರಿಜಿಸ್ಟರ ನಂಬರನ್ನು ತಪ್ಪದೆ ಬರಿಯತಕ್ಕದ್ದು ರಿಜಿಸ್ಟರು ನಂಬರು ಇಲ್ಲದ ಪತ್ರಗಳಿಗೆ ನಿಗಾ ಕೊಡಲಾರೆವು.

ಪತ್ರಿಕೆಗೆ ಚಂದಾದ್ದಾರರಾಗಿ ಸೇರಲಪೇಕ್ಷೆಯುಳ್ಳವರು ವರ್ಷ 1ರ ಚಂದಾ ಹಣ ರೂ. 2—1—0ನ್ನು ಮನಿಯಾರ್ಡರು ಮೂಲಕ ರವಾನಿಸುವದುತ್ತಮ ವಿ ಪಿ ಮೂಲಕ ಕಳುಹಿಸಬೇಕೆಂದು ಬರಿಯುವಂಥವರಿಗೆ ಪತ್ರಿಕೆಯ ಹಿಂದಿನ ಸಂಚಿಕೆಯನ್ನು ವಿ ಪಿ ಮಾಡಿ ಕಳುಹಿಸಲಾಗುವದು. ವಿ ಪಿ.ಯು ಮೊಬಲಗು ನವ ಗೆ ತಲ್ಪಿದ ನಂತರವೇ ಪತ್ರಿಕೆಯನ್ನು ಕಳುಹಿಸಲು ಪ್ರಾರಂಭಿಸುವೆವು

ಪತ್ರಗಳನ್ನು ಬರಿಯುವಾಗ ತಮ್ಮ ಹೆಸರು, ವಿಳಾಸ ಮತ್ತು ಪೋಸ್ಟಾಫೀಸನ್ನು ಸ್ಪಷ್ಟಾಕ್ಷರದಲ್ಲಿ ಬರಿಯತಕ್ಕದ್ದು.

ಮ್ಯಾನೇಜರ್,
ಸ್ವದೇಶಾಭಿಮಾನಿ ಆಫೀಸು,
ಮಂಗಳೂರು, ದ ಕ

B. Narasimha Prabhu,
Bantval, (SOUTH CANARA).
AGENT FOR
Malabar and South Canara.

WANTED.

A clerk, good salary and prospects. Civil experience necessary Apply in own handwriting with testimonials to—

J. H. A. Mascarenhas,
High Court Vakil,
MANGALORE.

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ.

ಕ್ರಮ ಅರ್ಜಿ ನಂಬ್ರ 52/1915

ಪಿಯಾದ ಶಿಕೇರ, ಪೇದ್ರು ಶಿಕೇರರ ಮಗ, ಮಂಗಳೂರು ಶ್ಯಾಹಾರ ಕರಂಗಲಪಾಡಿಯಲ್ಲಿರುವವ } ಅರ್ಜಿದಾರ.

ಮಂಗಳೂರು ಶ್ಯಾಹಾರ ಕರಂಗಲಪಾಡಿಯಲ್ಲಿ 1915ನೇ ಇಸವಿ ಮಾರ್ಚಿ ತಾರೀಕು 11ರಲ್ಲು ಮೃತಪಟ್ಟ ಪೇದ್ರು ಶಿಕೇರರು ಸಧರಿ ಇಸವಿ ಜನವರಿ ತಾರೀಕು 12ರಲ್ಲು ಬರದಿಟ್ಟ ವೀಲು ನಾಮೆಯ ಪ್ರೊಬೇಟನ್ನು ಅಪೇಕ್ಷಿಸಿ ಮೃತನ ಮಗ ವ ಎಕ್ಸಿಕ್ಯೂಟರನಾದ ಮೇಲ್ಕಂಡ ಅರ್ಜಿದಾರನು ಒಪಕೊಂಡ ಅರ್ಜಿಯು ಬರುವ ಆಗೋಸ್ತು ತಾರೀಕು 12ಕ್ಕೆ ಸದರಿ ಕೋರ್ಟಿನಲ್ಲಿ ತನಕಿಗ ಇಟ್ಟಿರುತ್ತದೆ. ಆ ಕುರಿತು ಆಕ್ಷೇಪಿಸುವವರು ತಮ್ಮ ಆಕ್ಷೇಪಣೆಗಳನ್ನು ಸದರಿ ಕೋರ್ಟಿಗೆ ಜ್ಯಾಹೀರು ಮಾಡಿಕೊಳ್ಳತಕ್ಕದ್ದು

ಮಂಗಳೂರು, ತಾ 27-7 1915. } **P. D'Souza,** *Pleader for Petitioner*

ನೋಟೀಸು.

ದಕ್ಷಿಣಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ

O P 7-/131

ಉದಿಯಾವರ ಲಕ್ಷ್ಮಣರಾವ್ ಕೂಡಾ—ಅರ್ಜಿದಾರರು

ಮಂಗಳೂರು ಶಾಹರಿನಲ್ಲಿ ತಾ 24—5—15ಲ್ಲು ಮೃತಪಟ್ಟ ಉದಿಯಾವರ ಕೃಷ್ಣಯ್ಯನವರ ಸಾಲಗಳನ್ನು ವಸೂಲು ಮಾಡುವರೆ ಅವರ ಮಗಂದಿರ ಪೈಕಿ 1ನೇ ಅರ್ಜಿದಾರನ ಹೆಸರಿಗೆ ಸರ್ಟಿಫಿಕೇಟು ಕೊಡಬೇಕಾಗಿ ಅಪೇಕ್ಷಿಸಿ ಅವರ ಮಗಂದಿರು ಬರಕೊಂಡ ಸದರಿ ಅರ್ಜಿಯು ಇದೇ ಇಸವಿ ಬರುವ ಆಗೋಸ್ತು ತಾ 19ಲ್ಲು ಪೂರ್ವಾಹ್ನ ೧೧ ಘಂಟೆಗೆ ಸದರಿ ಕೋರ್ಟಿನಲ್ಲಿ ತನಕಿಗೆ ನಿಶ್ಚೈಸಿರುವದರಿಂದ ಆಕ್ಷೇಪಣೆ ಇದ್ದವರು ಅವರ ಆಕ್ಷೇಪಣೆಗಳನ್ನು ಸದರಿ ಕೋರ್ಟಿನಲ್ಲಿ ಆ ತಾರೀಕಿಗೆ ಜಾಹೀರು ಮಾಡಿಕೊಳ್ಳತಕ್ಕದ್ದು

ತಾ 28—7—1915

(Sd) **K L Narayana Rao,**
Vakil for Petitioners

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ.

ಕ್ರಮ ಅರ್ಜಿ ನಂಬ್ರ 68/1915

ಲಕ್ಷ್ಮಿ ಯಾನೆ ಪದ್ಮಾವತಿ ಅಮ್ಮ— ಅರ್ಜಿದಾರ

ಮತ್ತು

ರುಕ್ಮಿಣಿ ಯಾನೆ ನಾಗಮ್ಮ— ರೆಸ್ಪೊಂಡೆಂಟ್

ಅರ್ಜಿದಾರಳ ಮ್ಯಾನರ ಮಗನಾದ ವಿಟ್ಠಪ್ಪನ ದೇಹದ ಮತ್ತು ಆಸ್ತಿಯ ಗಾರ್ಡಿಯನಳಾಗಿ ತನ್ನನ್ನು ನೊಕರೂರು ಮಾಡಬೇಕಾಗಿ ವಗ್ಯೆರೆ ಸದರಿ ಅರ್ಜಿದಾರಳು ಅರ್ಜಿ ಕೊಟ್ಟಿರುವದರಿಂದ ಆಕ್ಷೇಪಣೆ ಇದ್ದವರು ತಮ್ಮ ಆಕ್ಷೇಪಣೆಗಳನ್ನು ಬರುವ ಆಗೋಸ್ತು ತಿಂಗಳು ೨೬ನೇ ತಾರೀಕಿಗೆ ಕೋರ್ಟಿನಲ್ಲಿ ಹಾಜರುಪಡಿಸತಕ್ಕದ್ದು

ಮಂಗಳೂರು ತಾ 29—7—15. } ಅಮ್ಮೆಂಬಳ ಶ್ರೀನಿವಾಸ ಪೈ. ಅರ್ಜಿದಾರಳ ಕಡೆಯ ವಕೀಲ.

ಕನ್ನಡ ಅಕ್ಷರದ ಗ್ರಂಥಗಳು.

ಶ್ರೀಮದ್ಭಾಗವತ ದ್ವಾದಶಸ್ಕಂದಗಳಡಗಿರುವ ಅವ್ವಲ್ ಪ್ರತಿ ಕ್ಯಾಲಿಕೊ ಬ್ಯಾಂಡ	3	8	0
೩ ಸಾದಾ ಬ್ಯಾಂಡ ದಶಮಸ್ಕಂದ	1	8	0
ದಶಪರ್ವ ಭಾರತ	2	0	0
ಅಶ್ವಪರ್ವ ೩ ಅವ್ವಲ್ ಪ್ರತಿ	1	8	0
೩ ಸಾದಾ	1	0	0
ಭಾರತ ಕಥಾಸಂಗ್ರಹ	0	6	0
ಜೈಮಿನಿ ಭಾರತ ಅವ್ವಲ್ ಕ್ಯಾಲಿಕೊ ಬ್ಯಾಂಡ	1	8	0
೩ ೩ ಸಾದಾ ಬ್ಯಾಂಡ	1	4	0
೩ ದುಯ್ಯಂ ೩	0	12	0
ಜೈಮಿನಿ ಭಾರತ ಕಥಾಸಂಗ್ರಹ	0	12	0
ಜೈಮಿನಿ ಭಾರತ ಸಟೀಕಾ ತಾತ್ಪರ್ಯ ಸಮೇತ ಅವ್ವಲ್	4	8	0
ತೊರವೆ ರಾಮಾಯಣ ಅವ್ವಲ್ ಕ್ಯಾಲಿಕೊ ಬ್ಯಾಂಡ	2	0	0
೩ ಸಾದಾ ಬ್ಯಾಂಡ	1	4	0
ರಾಮಾಯಣ ಕಥಾಸಂಗ್ರಹ	0	12	0
ಸೀತಾ ಚರಿತ್ರ	1	2	0
ರಾಜಶೇಖರ ವಿಲಾಸ	0	8	0
ಗಯೋಪಾಖ್ಯಾನ ಕನ್ನಡಪದ್ಯ ಕಾವ್ಯ	0	8	0
ನಾಗವರ್ಮ ಛಂದಸ್ಸು	0	6	0
ಸಪ್ತಶತಿ ದೇವಿ ಮಹಾತ್ಮೆ	0	6	0
ದೇವೀಮಹಾತ್ಮೆ ಕಥಾ ಸಂಗ್ರಹ	0	6	0
ಅನುಭವಾಮೃತ	0	12	0
ವಿವೇಕಚಿಂತಾಮಣಿ	0	12	0
ಹಟಯೋಗಪ್ರದೀಪಿಕಾ	1	4	0
ಪರಮಾನುಭವಬೋಧೆ	1	0	0
ನಿಜದೀಪಿಕಾಶಿರೋರತ್ನ	1	4	0
ಭಗವದ್ಗೀತಾ ಸಂಸ್ಕೃತ ಶ್ಲೋಕ ಮತ್ತು ಅರ್ಥ, ಕಿತ್ತನಾರು ಬ್ಯಾಂಡ	0	10	0
೩ ರಾಮಕೃಷ್ಣಸೂರಿ, ಪ್ರತಿಪದ ಟೀಕು ತಾತ್ಪರ್ಯ ಸಹ	2	0	0
ಸತ್ಯನಾರಾಯಣವ್ರತಕಥಾ	0	4	0
ವ್ರತವಲ್ಲಿ (40 ವ್ರತಗಳು ಅಡಗಿರುತ್ತ)	1	0	0
ಕೈವಲ್ಯ ಪದ್ಧತಿ ಕನ್ನಡ ಟೀಕು	0	12	0
ಭಾಷಾಕುಸುಮ ಮಂಜರಿ	0	8	0
ಮಣಿಮಂಜರಿ ಕನ್ನಡ ಟೀಕ.	0	14	0
ಟೀಕಾ ಗುರು ಬಾಲಪ್ರಬೋಧಿಕೆ, ಅವ್ವಲ್ ಕ್ಯಾಲಿಕೊ ಬ್ಯಾಂಡ	3	0	0
೩ ತ್ರಿಖಾಂಡ ಅಮರಕೋಶ, ಅವ್ವಲ್ ಕ್ಯಾಲಿಕೊ ಬ್ಯಾಂಡ	1	12	0
೩ ೩ ಸಾದಾಬ್ಯಾಂಡ	0	14	0
ಮೂಲ ತ್ರಿಖಾಂಡ ಅಮರಕೋಶ	[illegible]	4	0
೩ ಪ್ರಥಮ ಖಾಂಡ ೩	0	1	0
ಕರ್ನಾಟಕ ಶಬ್ದಮಂಜರಿ	0	4	0
ಧನಂಜಯನಿಘಂಟು	0	4	0
5 ಭಾಷಾವಕಬ್ಲೆರಿ	0	4	0

ಇವುಗಳಲ್ಲದೆ ಕನ್ನಡ, ಸಂಸ್ಕೃತ ಮರಾಠಿ ಪುಸ್ತಕಗಳೂ, ಶಾಲಾ ವಿದ್ಯಾರ್ಥಿಗಳ ಉಪಯೋಗದ ಎಕ್ಸರಸೈಜ್ ಪುಸ್ತಕ, ಡ್ರೋಯಿಂಗ್ ಪುಸ್ತಕ, ಗ್ರಾಫ್ ಎಕ್ಸರಸೈಜ್ ಪುಸ್ತಕ, ಮತ್ತು ನಾನಾತರದ ಬರವಣಿಗೆ ಸಾಮಗ್ರಿಗಳೂ ಇತ್ಯಾದಿ ಸುಲಭ ಕ್ರಯಕ್ಕೆ ದೊರೆಯುತ್ತವೆ

ಕೆ. ಎಮ್. ದಾಸಪ್ರಭು,
ರಥಬೀದಿ,
ಮಂಗಳೂರು.

ಮರಣ.

ಜಪ್ಪಿನ ಕ್ರೈಸ್ತ ಸಮುದಾಯದ ಪೈಕಿ ಒಬ್ಬರಾದ ಯೊಹನ್ನೆಸ್ ಬಂಗೇರರ ಹೆಂಡತಿ ತಬಿಥ ಎಂಬಾಕೆಯು ಬಾಣಂತಿ ರೋಗದಿಂದ ಇದೇ ಜುಲೈ 24ರಲ್ಲು ಮೃತಪಟ್ಟಳು. ತಾಯಿಯನ್ನು ಕಳಕೊಂಡ ಮೂರು ಸಣ್ಣ ಮಕ್ಕಳನ್ನೂ ಪತಿಯನ್ನೂ ಸ್ವಾಮಿ ದೇವರು ಅನುಗ್ರಹಿಸಿ ನಡಿಸಲಿ. ಮೃತಪಟ್ಟಾಕೆಯು ಮನೆವಾರ್ತೆಯಲ್ಲಿ ಸಮುದಾಯಕ್ಕೆ ಮೇಲ್ಪಂಕ್ತಿಯಾಗಿದ್ದಳು.

E. S.

Box Locks. **Padlocks.**





ಧಾರಣೆ ಸುಲಭ! ಆಲಿಗರ್ ಬೀಗಗಳು. ಧಾರಣೆ ಸುಲಭ!

ಭದ್ರವಾಗಿಯೂ, ಭಾರವಾಗಿಯೂ ಇರುವುದು. ಒಂದರ ಬೀಗದಕ್ಕೆ ಮತ್ತೊಂದಕ್ಕೆ ಆಗುವ **ದಿಲ್ಲ.** ನೋಡುವುದಕ್ಕೆ ಅಂದವಾಗಿಯೂ ಇರುವುದು. ಇದೇ ಮಾದರಿ ಬೀಗಗಳನ್ನು ಇಂಜಿನಿಯರ್ ಇಲಾಖೆಗಳಿಗೂ, ಬ್ಯಾಂಕುಗಳಿಗೂ, ಸರಕಾರಿ ಆಫೀಸುಗಳಿಗೂ ಸಪ್ಲೈ ಮಾಡಿದೆ.

ನಾಲ್ಕು ಚಕ್ರಗಳಿರುವ ಬೀಗಗಳು.

ನಂಬ್ರ	1	2	3	4	5
	0–12–0	0–15–0	1–4–0	1–10–0	.....

ಆರು ಚಕ್ರಗಳಿರುವ ಬೀಗಗಳು.

1–2–0 1–8–0 2–4–0 3–0–0 3–8–0

ಮಿಲ್ಲರ್ ಬೀಗಗಳು.

0–4–0 0–5–0 0–6–0 0–8–0 0–10–0

ಟ್ರಂಕುಗಳಿಗೆ ಹಾಕುವ ಕೊಂಡಿ ಬಗ್ಗಿಸಿರುವ ಬೀಗ ೧ಕ್ಕೆ 0–13–0

೩, ೪, ೫ನೇ ನಂಬರು ಬೀಗಗಳನ್ನು ಬಾಗಲುಗಳಿಗೂ ಕಬ್ಬಿಣದ ಪೆಟ್ಟಿಗೆಗಳಿಗೂ ಉಪಯೋಗಿಸಬಹುದು. ಏಜೆಂಟರುಗಳಿಗೆ ಕಮಿಷನ್ ದೊರೆಯುತ್ತೆ. ಹಾಸಲು ಪ್ರತ್ಯೇಕ.

ಮರದ ಪೆಟ್ಟಿಗೆಗಳಿಗೂ, ಮೇಜುಗಳಿಗೂ, ಬೀರೂಗಳಿಗೂ ಹಾಕುವ ೪ ಚಕ್ರಗಳಿರುವ ಬೀಗಗಳು ೧ಕ್ಕೆ 1–8–0, 1–12–0.

ವಿಳಾಸ:— ಎಚ್. ಎನ್. ರಾವ್ ಆಂಡ್ ಬ್ರದರ್ಸ್,

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

೧

ರೋಗಾಮಯಹರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಮುತ್ತಿನ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ಮಾಡಿರುವುದು. ಶೀತಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ಬಾರು), ಮೈ ನವೆ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲು ನೋವು, ಕೆಮ್ಮಲು, ನೆಗಡಿ, ಬಿಕ್ಕಳಿಕೆ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಾಯಿ ಚೊಕ್ಕವಾಗಿ ಸುವಾಸನೆಯಾಗುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿ ಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಮುಟ್ಟು ಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೈಕಪ್ಪಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ, 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1ರಿಂದ 12ರ ಕುಪ್ಪಿ ವರೆಗೆ ಅಂಚೇಖರ್ಚು 4 ಆಣೆ.



೨. ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ(ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವಿನಿಯಾಗಿದೆ. ಕೈಮೀರಿತೆಂದು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಕೆಗೆ, ಮೂತ್ರವು ಕಟ್ಟಿದ ಕೂಡಲೆ ಕೊಡುವ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಬೇಕಾಗುವದು! ಒಂದೇ ಒಂದು ಬುದ್ದಿಯು ನಿಮ್ಮಲ್ಲಿರಲಿ! ಡಾಕ್ಟರ ಉಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ. 1; ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ನಮ್ಮ ವಿಳಾಸ:—"ಶ್ರೀ ಸೀತಾರಾಘವ ವೈದ್ಯಶಾಲಾ"

ಮೈಸೂರು

ಅತ್ತರು ಮತ್ತು ಸುರಭಿಗಳಲ್ಲಿ ಮಕುಟವರ್ಧನದಂತಿರುವ

ಒಟ್ಟೊ ಮೋಹಿನಿ.

(ರಿಜಿಸ್ಟರ್ಡ್.)

ಅನೇಕ ವಸ್ತುಪ್ರದರ್ಶನಗಳಲ್ಲಿ ಪ್ರದರ್ಶಿಸಲ್ಪಟ್ಟು ಕಡೆಗೆ ಅದರ ರಮ್ಯವಾದ ಅತ್ಯಂತ ಶಾಶ್ವತವಾದ ಪರಿಮಳಕ್ಕಾಗಿ ಚಿನ್ನ ಬೆಳ್ಳಿಯ ಪದಕಗಳನ್ನು ಪಡೆದಿದೆ. ಎಲವಸ್ತ್ರದಲ್ಲಿ ನಾಲ್ಕು ತಟಕುಗಳನ್ನು ತಾಗಿಸುವುದರಿಂದ ಹಿಡಿ ತುಂಬಾ ಮಲ್ಲಿಗೆ ಹೂ ಇದ್ದ ಪರಿಮಳವುಂಟಾಗುವುದು. ಈ ಹೂಗಳು ಕೃತಕವಾದವುಗಳಾದರೂ ನೈಸರ್ಗಿಕ ಹೂವಿನಂತೆ ಪ್ರತಿ ಸಾಯಂಕಾಲ ಬಾಡಿಹೋಗದು. ಆದರೆ ತನ್ನ ಪರಿಮಳವನ್ನು 4 ದಿವಸಗಳಿಗಿಂತಲೂ ಹೆಚ್ಚಿಗೆ ಕೊಡುತ್ತಿರುವದು. ಆದುದರಿಂದ ಒಟ್ಟೊ-ಮೋಹಿನಿಯು ಶಾಶ್ವತವಾದ ಸುರಭಿಯೆಂದು ಕರೆಯಲ್ಪಟ್ಟು ಈ ಕಾಲಕ್ಕೆ ತಕ್ಕುದಾದ ಬಹುಮಾನವಾಗಿ ಕೊಡತಕ್ಕ ದ್ರವ್ಯವಾಗಿದೆ. ಇದರ ಪರಿಮಳವು ಶಾಶ್ವತವಲ್ಲವೆಂದು ದೃಢಮಾಡಿಕೊಡುವವರಿಗೆ 100 ರೂಪಾಯಿಗಳ ಬಹುಮಾನ ಕೊಡಲಾಗುವದು. ಆದುದರಿಂದ ಯಾಕೆ ಈ ಬಹುಮಾನವನ್ನು ಪಡೆಯಲು ಪ್ರಯತ್ನಿಸಲಾಗದು?

ಕ್ರಯ ಅರ್ಧ ಔನ್ಸ್ ಸೀಸೆಗೆ 2–0–0. 1 ಡ್ರಾಮ್ ಸೀಸೆಗೆ 0–12–0. ಪರಿಮಳದ ಕಾರ್ಡುಗಳು ಡಜನ್ 1ಕ್ಕೆ 0–12–0.

***Proprietors:*—The Oriental Drug & Chemical Co.**
***Sole Agents:*—MOHINI AGENCY,**
3 Fida Building, Jumma Musjid,
BOMBAY.

ಪ್ರೊಪ್ರೈಟರರು:—ಓರಿಯಂಟಲ್ ಡ್ರೆಗ್ ಎಂಡ್ ಕೆಮಿಕಲ್ ಕೋ.
ಪ್ರಾಮುಖ್ಯ ಏಜಂಟರು:—ಮೋಹಿನಿ ಏಜನ್ಸಿ,
3 ಫಿಡಾ ಬಿಲ್ಡಿಂಗ್, ಜುಮ್ಮಾ ಮಸೀದ್,
ಬೊಂಬಾಯಿ.

ಅಪೂರ್ವ ಗ್ರಂಥ! ಅಪೂರ್ವ ಗ್ರಂಥ!!

ಬಳ್ಳಾರಿ ಶ್ರೀ ಮರಿಸ್ವಾಮಿಗಳು

ಸಕ್ಕರಿ ಕರಡೆಪ್ಪ

ಇವರ ಜೀವಿತ ಚರಿತ್ರೆ.

ಈ ಮಹಿಮರ ಚರಿತ್ರೆಯನ್ನು ಇಲ್ಲಿಯವರಿಗೂ ಯಾರೊಬ್ಬರು ಪ್ರಕಟನ ಮಾಡಿದ್ದಿಲ್ಲವೆಂಬುದು ತಿಳಿದದ್ದಾಗಿರುವದಷ್ಟೆ. ಇಂತಹ ಅದ್ಭುತ ಮಹಿಮಾಶಾಲಿಗಳ ಚರಿತ್ರೆಗಳು ಅವಶ್ಯಕವಾಗಿಯೂ ಆದರಣೀಯಗಳಾಗಿರುವವು. ಇವರ ಮಹಿಮೆಯು ಅಸಾಧಾರಣವಾದುದು. ಒಂದೆ ದಿನ ಒಂದೆ ಕಾಲದಲ್ಲಿ ಬಳ್ಳಾರಿ, ಬೆಂಗಳೂರು, ಭೈರವಪುರ ಎಂಬ ಮೂರು ಸ್ಥಳಗಳಲ್ಲಿ ಸಮಾಧಿಯನ್ನು ಹೊಂದಿದರೆಂಬುದೊಂದೆ ಅಪ್ರತಿಮ ಪ್ರಭಾವವನ್ನು ಸೂಚಿಸುತ್ತಿರುವದು. ಇವರು ಅಲ್ಲಲ್ಲಿ ತೋರಿದ ಮಹಿಮೆಗಳು ಅನಂತವಾಗಿರುವವು; ಇದಲ್ಲದೆ ಇವರ ಶಿಷ್ಯನಾದ ಸಕ್ಕರಿಕರಡೆಪ್ಪನ ಅಪಾರ ಮಹಿಮೆಯು ವಿಶದವಾಗಿ ವರ್ಣಿಸಲ್ಪಟ್ಟಿರುವದು. ಈ ಸಕ್ಕರಿ ಶರಣನಂತಹ ಶರಣನು ಇಡೀ ಪ್ರಪಂಚದಲ್ಲಿ ವೀರಶೈವ ಮತದೊಳಗೆ ಹುಟ್ಟುವದು ಅಪರೂಪ. ಆ ಗುರುಶಿಷ್ಯರೀರ್ವರ ಚರಿತ್ರೆಗಳು ಒಂದು ಗ್ರಂಥದಲ್ಲಿ ತಯಾರುಮಾಡಿರುವೆವು ಈ ಗ್ರಂಥವನ್ನೋದುವವರು ಖಂಡಿತವಾಗಿಯೂ ನೀತಿ, ಭಕ್ತಿ, ಜ್ಞಾನಗಳ ಕಡೆ ಮನಸ್ಸನ್ನು ಕೊಡದಿರಲಾರರು. ಮತ್ತು ಇದಲ್ಲದೆ ಮೈಸೂರು ಶ್ರೀಮನ್ಮಹಾರಾಜ, ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರರವರು ಶಿಷ್ಯರಾದ ಕಂಬಳಿ ಸ್ವಾಮಿಗಳ ಸಮೇತ ಇರುವ ಮಹಾಸ್ವಾಮಿಗಳ ಛಾಯಾಚಿತ್ರ ಪಟವು ಪ್ರಥಮ ಪುಟದಲ್ಲಿ ಅಂದವಾಗಿರಿಸಲ್ಪಟ್ಟಿರುವದು. ನಿಮ್ಮ ವಿಳಾಸ ಚೆನ್ನಾಗಿರಲಿ. ಇದರ ಬೆಲೆ ವಿ. ಪಿ ಸಹಿತ ರೂ 1—2—0.

ನಮ್ಮ ವಿಳಾಸ:— ಬಸವರಾಜ ಕಂಪೆನಿ, ಬಳ್ಳಾರಿ.

ಶಾಶ್ವತವಾದ ಆರೋಗ್ಯವನ್ನು

ಹೊಂದುವದಕ್ಕೆ ಸುಲಭವಾದ ಮಾರ್ಗವು.

ಮದನಮಂಜರಿ ಮಾತ್ರೆಗಳು

ಉಪಯೋಗಿಸುವದೇ ಆಗಿರುವದು. ಈ ಮಾತ್ರೆಗಳು ಅಜೀರ್ಣವು ಮಲಬಂಧ, ಮನೋವ್ಯಥೆ, ಜ್ಞಾಪಕಶಕ್ತಿ ಇಲ್ಲದಿರುವದು, ನರಗಳ ಬಲಹೀನತೆ, ಅಶಕ್ತಿ, ಸ್ವಪ್ನಸ್ಖಲಿತ, ಬಹುಮೂತ್ರ, ಮೂತ್ರಕೋಶ ಸಂಬಂಧವಾದ ವ್ಯಾಧಿಗಳು, ನಪುಂಸಕತ್ವ ಮುಂತಾದ ವ್ಯಾಧಿಗಳನ್ನು ಶೀಘ್ರದಲ್ಲಿಯೇ ಬೇರು ಸಹಿತವು ಕಿತ್ತು ಹಾಕಿ ಪುರುಷರಿಗೆ ಸಂತತ ಪುರುಷತ್ವವನ್ನು ಕೊಡುವವು ಇದು ಸಾಟಿಯಿಲ್ಲದ ಟಾನಿಕ್ಕು ಔಷಧಿಯಾಗಿರುತ್ತದೆ. ಕಳೆದ 25 ವರುಷ ಕಾಲದಲ್ಲಿ ಸಾವಿರಾರು ರೋಗಿಗಳನ್ನು ಸ್ವಸ್ಥಪಡಿಸಿದೆ. ನಿಮ್ಮನ್ನು ಕೂಡ ಸ್ವಸ್ಥ ಮಾಡುವದು. 40 ಮಾತ್ರೆಗಳ ಡಬ್ಬಿ ಕ್ರಯ ರೂ. 1—0—0.

ಉಚಿತ ಕ್ರಯವು ಇಲ್ಲ ಹಾಸಲು ಇಲ್ಲ

144 ಪುಟಗಳುಳ್ಳ ವೈದ್ಯಸಾರಸಂಗ್ರಹವಾದ

ವೈದ್ಯವಿದ್ಯ

ಪುಸ್ತಕದಲ್ಲಿ ಶಾಶ್ವತವಾದ ಆರೋಗ್ಯವನ್ನು ಪಡೆಯಲು ಅತ್ಯವಶ್ಯವಾದ ವಿಷಯಗಳು ಭರಿತವಾಗಿವೆ. ನಿಮ್ಮ ವಿಳಾಸವನ್ನು ತಿಳಿಸಿದರೆ ನಿಮಗೆ ಒಂದು ಪ್ರತಿ ಉಚಿತವಾಗಿ ಕಳುಹಿಸಲ್ಪಡುವದು.

ರಾಜವೈದ್ಯ ನಾರಾಯಣಜಿ ಕೇಶವಜಿ

20 ಚೀನಾ ಬಜಾರ್ ರೋಡ್,

ಮದರಾಸು.

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ. ಸುಬ್ಬರಾಯಿಯವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ಚ್ಯವನಪ್ರಾಶನ:— ಗಂಟಲಿನಲ್ಲಿಯೂ, ಶ್ವಾಸಕೋಶದಲ್ಲಿಯೂ ಉಂಟಾಗುವ ಎಲ್ಲಾ ವ್ಯಾಧಿಗಳಿಗೂ ಇದು ಅತ್ಯುತ್ತಮವಾದ ಗುಣಕಾರಿಯಾಗಿದೆ. ಶ್ಲೇಷ್ಮ ಸಂಬಂಧವಾದ ಎಲ್ಲಾ ವ್ಯಾಧಿಗಳಿಗೂ ಇದರಿಂದ ಸಂಪೂರ್ಣ ಗುಣ ಕಂಡುಬಂದಿದೆ. ನಮ್ಮ ಚ್ಯವನಪ್ರಾಶನ ಎಲ್ಲಾ ವಿಧವಾದ ಕಫಗಳು, ಗೂರಲು, ಉಬ್ಬಸ, ಕ್ಷಯರೋಗ, ಗಾರ್ದಭಸ್ವರದಂತಹ ಒಡ್ಡಧ್ವನಿ, ಗಂಟಲಿನಲ್ಲಿ ಜನಿಸಿ ಇರತಕ್ಕ ಸಕಲ ವಿಧವಾದ ಹುಣ್ಣುಗಳು ಮೊದಲಾದವುಗಳನ್ನು ಕ್ಷಿಪ್ರದಲ್ಲಿಯೇ ವಾಸಿಮಾಡುವುದಲ್ಲದೆ ಶಕ್ತಿವರ್ಧಕವಾದ ಟಾನಿಕ್ ಆಗಿದೆ. ಅನೇಕರು ನಮ್ಮ ಚ್ಯವನಪ್ರಾಶವನ್ನು ಉಪಯೋಗಿಸಿ ಸರ್ವೋತ್ಕೃಷ್ಟವೆಂದು ತಿಳಿಸಿದ್ದಾರೆ. ಇದರ ಬೆಲೆ ಪೆಟ್ಟಿಗೆ 1ಕ್ಕೆ 2 ರೂಪಾಯಿ. ವಿ. ಪಿ. ಚಾರ್ಜು 5 ಅಣೆ.

ಮಕರಧ್ವಜ:— ನಮ್ಮ ಮಕರಧ್ವಜಕ್ಕೆ ಸಮಾನವಾದ ತಯಾರಿಯು ಮತ್ತಾವ ಬಗೆ ವೈದ್ಯಶಾಸ್ತ್ರದಲ್ಲಿಯೂ ಇಲ್ಲವೇ ಇಲ್ಲ. ಈ ನಮ್ಮ ಮಕರಧ್ವಜಕ್ಕೆ ಬಗ್ಗದ ವ್ಯಾಧಿಯು ಭೂಲೋಕದಲ್ಲಿ ಇಲ್ಲವೇ ಇಲ್ಲ. ಅನೇಕ ರೋಗಗಳು ಇದರ ಸೇವನೆಯಿಂದ ಸಂಪೂರ್ಣವಾಗಿ ಮಾಯುತ್ತವೆ ಎಂತಹ ಕಠಿನ ವ್ಯಾಧಿಯಾದರೂ ಕಡಿಮೆಯಾಗಿಯೇ ತೀರಬೇಕು. ಯಾವ ಕಾರಣದಿಂದಲಾಗಲಿ ಹುಟ್ಟುವ ಶರೀರ ದುರ್ಬಲತೆ, ವಿಷಮ ಶೀತಜ್ವರ, ಹೊಟ್ಟೆಯೊಳಗಣ ಗೆಡ್ಡೆ, ಮತ್ತು ಮುಖ್ಯವಾಗಿ ತಮ್ಮ ಮರ್ಮವ್ಯಾಧಿಗೆ ತಕ್ಕ ಶಾಂತಿಯಾದ ಮದ್ದೇ ನಾಸ್ತಿಯೆಂದು ಚಿಂತಿಸುವ ಎಲ್ಲಾ ನಾಸ್ತಿಕರ ಪ್ರಮೇಹ ಸಂಬಂಧವೂ, ಉರಿಮೂತ್ರ, ಪ್ರಸವಿಸಿದೊಡನೆಯೆ ಹೆಂಗಸರಿಗುಂಟಾಗತಕ್ಕ ಸಕಲ ಬಾಧೆಗಳೂ, ಕೆಮ್ಮು, ಶೀತ, ಉಬ್ಬಸ, ಗೂರಲು, ನಾನಾ ತರವಾದ ಜ್ವರಗಳು, ಮಹಾಮಾರಿಯುಪದ್ರ, (ಪ್ಲೇಗ್) ಚುರುಕಿಲ್ಲದ ಮಿದುಡು, ಮಹೋದರ ರೋಗ, ಕಾಲರಾ, ಅತಿಸಾರ, ಹೊಟ್ಟೆ ಬಾಡಿಸುವಿಕೆಯು, ಅಗ್ನಿಮಾಂದ್ಯದಿಂದುಂಟಾಗತಕ್ಕ ಅಜೀರ್ಣರೋಗಗಳು, ಮಿತಿಮೀರಿ ಸಂಭೋಗ ಮಾಡೋಣದರಿಂದ ಉಂಟಾಗತಕ್ಕ ನಪುಂಸಕತ್ವ, ನರಗಳ ದಾರ್ಢ್ಯ ಕಡಿಮೆಯಾಗಿರೋಣ, ತಲೆ ತಿರುಗುವಿಕೆ ಇವೇ ಮೊದಲಾದ ಅನೇಕ ವ್ಯಾಧಿಗಳಿಗೆ ಇದು ಖಂಡಿತವಾಗಿ ರಾಮಬಾಣವಾಗಿದೆ. ಅದರ ಉತ್ಕೃಷ್ಟತೆಯನ್ನು ಅಷ್ಟಿಷ್ಟೆಂದು ಹೇಳುವುದಕ್ಕಾಗುವುದಿಲ್ಲ. ಇದರ ಕ್ರಯ ತೊಲಾ 1ಕ್ಕೆ 24 ರೂಪಾಯಿ. ಒಂದು ವಾರದ ಉಪಯೋಗಕ್ಕೆ ಸಾಕಾದಷ್ಟು ಔಷಧಕ್ಕೆ 1 ರೂಪಾಯಿ. ವಿ. ಪಿ. ಚಾರ್ಜು 5 ಅಣೆ. ಅವಶ್ಯ ಇದನ್ನು ಸರ್ವರು ತರಿಸಿಕೊಳ್ಳಬೇಕು.

☞ ಈ ಪ್ರಾಂತ್ಯದಲ್ಲಿ ಕನ್ನಡ, ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವದಿಲ್ಲವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಳುನಲ್ಲಾಗಲೀ ಸ್ಫುಟವಾಗಿ ತಿಳಿಯುವಂತೆ ಬರಿಯಬೇಕು.

MY ADDRESS.

P. SUBBA ROY,
Ayurvedic Pharmacy,
Sri Perumalkoil,
SANNATHY, TANJORE.

ನಮ್ಮ ವಿಳಾಸ:—

ಪಿ. ಸುಬ್ಬರಾಯಿ,
ಆಯುರ್ವೇದ ಔಷಧಶಾಲೆ,
ಶ್ರೀ ವೆಂಕಟೇಶ ಪೆರುಮಾಳ್ ದೇವಸ್ಥಾನ,
ಸನ್ನಧಿ, ತಂಜಾವೂರು.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ.

೧. ಕುಟುಂಬಜೀವನಿ—ಎಲ್ಲಾ ರೋಗಗಳನ್ನು ತ್ವರಿಯಾಗಿ ಗುಣಪಡಿಸುವದು. 16 ಔಷಧಗಳ ಸಂಗ್ರಹದ ಪೆಟ್ಟಿಗೆ 1ಕ್ಕೆ 8—0—0

೨. ಶತಮೂಲಿಕಾ ಅಮರಸಂಜೀವನಿ—ಈ ಟೋನಿಕ್ ದ್ರಾವಕವು ವಿದ್ಯಾರ್ಥಿಗಳಿಗೆ ಚೈತನ್ಯ ಉಂಟುಮಾಡಿ ಅಮರತ್ವವನ್ನು ಕೊಡುತ್ತದೆ. ಬಾಟ್ಲಿ 1ಕ್ಕೆ 1—0—0.

೩. ಬಾಲಸಂಜೀವನಿ—ಮಧುರ ಟೋನಿಕ್ ಅಶಕ್ತ ಬಾಲಕರಿಗೆ ಸಶಕ್ತರಾಗಿ ಮಾಡಿ ವರ್ಧಮಾನ ಚಂದ್ರನಂತೆ ಬೆಳಗಿಸುತ್ತದೆ. ಬಾಟ್ಲಿ 1ಕ್ಕೆ 0—12—0.

೪. ವಸಂತ ಕುಸುಮಾಕರ—ಈ ಸುವಾಸಿಕ ತೈಲವು ಕೇಶ ವೃದ್ಧಿಮಾಡಿ ಶಿರೋರೋಗ ನೇತ್ರರೋಗಗಳನ್ನು ಶಮನಮಾಡಿ ಮೆದುಳನ್ನು ತಂಪು ಮಾಡಿ ಜ್ಞಾನಶಕ್ತಿ ಹೆಚ್ಚಿಸಿ, ಬುದ್ಧಿ ಭ್ರಮಣವನ್ನು ಗುಣಮಾಡುತ್ತದೆ. ಬಾಟ್ಲಿ 1ಕ್ಕೆ 1—0—0

೫. ಸುದರ್ಶನಮಾಲಿನಿ—ಈ ಸಿದ್ಧೌಷಧವು ಮೇಹವ್ರಣ ಇತ್ಯಾದಿ ಎಲ್ಲಾ ದುಸಾಧ್ಯ ವ್ರಣಗಳನ್ನು 7 8 ದಿವಸಗಳಲ್ಲಿ ಪೂರ್ಣ ಗುಣಪಡಿಸುವದು. ಕ್ರಯ 4—0—0.

೬. ಗರುಡಧ್ವಜ—ಇದು ಸರ್ಪ ಹುಚ್ಚುನಾಯಿ, ಚೇಳು, ಇಲಿ ಇತ್ಯಾದಿ ಸರ್ವ ಕಠಿಣ ವಿಷಗಳಿಗೆ ಸಂಜೀವನವಾಗಿರುತ್ತದೆ ಅನುಭವಸಿದ್ಧ 2—0—0

೭. ಆನಂದವನವಿಲಾಸ—ಇದು ಡ್ಯಾಬಟೀಸ ಎಂಬ ಬಹುಮೂತ್ರ ರೋಗವನ್ನು 48 ದಿವಸಗಳಲ್ಲಿ ಪೂರ್ಣ ಗುಣಪಡಿಸುತ್ತದೆ. ಪೂರ್ಣ ಔಷಧಕ್ಕೆ 5—0—0.

ನಮ್ಮ ಡಿಸ್ಪೆನ್ಸರಿಯಲ್ಲಿ ಸಿದ್ಧ ಕಲ್ಪಗಳಾಗಿ ಪ್ರಯೋಗಗಳಿಂದ ತಯಾರಿಸಿದ ಪೌಡರ ಮಾತ್ರೆಗಳು, ಲೇಹ ಚೂರ್ಣಗಳು, ತೈಲ ಘೃತಗಳು, ಆಸವಾರಿಷ್ಟಗಳೂ ತುಂಬಾ ಇರುತ್ತವೆ. ಕ್ರಯವಿಲ್ಲದ ನಮ್ಮ ಕೆಟಲಾಗನ್ನು ತರಿಸಿಕೊಳ್ಳಿರಿ ಏಜಂಟರು ಬೇಕು. ಹೆಚ್ಚು ಡಿಸ್‌ಕೌಂಟ್ ಸಿಕ್ಕುವದು.

ಎಮ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

ಸೆನ್ ಸೆನ್. SEN SEN.)

ಕಂಠದಲ್ಲಿ ಉಂಟಾಗುವ ದೋಷಗಳನ್ನು ನಿವಾರಿಸಿ ಸುಖವನ್ನೀಯುವುದು

ಶ್ವಾಸದಲ್ಲಿ ಸುವಾಸನೆಯನ್ನುಂಟುಮಾಡುವುದು.

ಸೆನ್ ಸೆನ್ ಇದರ ಗುಣವು ಇಷ್ಟೇ ಅಲ್ಲ ಆರೋಗ್ಯವನ್ನು ಸಂಪಡಿಸುತ್ತದೆ, ಬಹಳ ಮನೋಹರವಾದ ರುಚಿಯುಳ್ಳದ್ದಾಗಿದೆ, ಸ್ವರವನ್ನು ಸ್ಪಷ್ಟಗೊಳಿಸಿ ಬಲಪಡಿಸುವದು, ಸಂಗೀತಗಾರರಿಗೆ, ಪ್ರಸಂಗಗಳನ್ನು ಮಾಡುವ ಉಪದೇಶಕರಿಗೆ, ಭಾಷಣಗಳನ್ನು ದೊಡ್ಡ ದೊಡ್ಡ ಸಭೆಗಳಲ್ಲಿ ಮಾಡುವಂಥವರಿಗೆ ಇದು ಬಹಳ ಉಪಯೋಗಕರವಾಗಿರುವುದು.

ಸೆನ್ ಸೆನ್—ಇದರ ಕೆಲವು ಹರಳುಗಳನ್ನು ವೀಳ್ಯದೊಂದಿಗೆ ಸೇವಿಸಿದರೆ ವೀಳ್ಯದ ರುಚಿಯು ಬಹಳ ಸೊಗಸಾಗುವುದು.

ಸೆನ್ ಸೆನ್—ಅಜೀರ್ಣ ಮೊದಲಾದ ಜೀರ್ಣಕೋಶದ ದೋಷಗಳಿಗೆಲ್ಲಾ ದಿವ್ಯ ಔಷಧಿಯಾಗಿರುವುದು. ಕಂಠದಲ್ಲಿ ಬಹಳ ಶೀತಳವಾದ ಮತ್ತು ಸುಖಕರವಾದ ಭಾವನೆಯು ಇದರ ಸೇವನೆಯಿಂದ ಉಂಟಾಗುತ್ತದೆ ಬೀಡಿ, ಚುಟ್ಟಾ ವಗೈರೆಗಳನ್ನು ಸೇದಿದ ನಂತರ ಸೆನ್‌ಸೆನ್‌ನ್ನು ಉಪಯೋಗಿಸಿದರೆ ಬಾಯಿಯ ಕೆಟ್ಟ ವಾಸನೆಯನ್ನು ಹೋಗಗೊಳಿಸಿ ಸುವಾಸನೆಯನ್ನುಂಟುಮಾಡುವುದು. 3 ಆಣೆ ಕ್ರಯದ ಒಂದು 'ಪೆಕೆಟನ್ನು' ಬಹಳ ಕಾಲ ಉಪಯೋಗಿಸಬಹುದು.

ಅರ್ಧಾಣೆಯ ಸ್ಟಾಂಪನ್ನು ಕಳುಹಿಸಿಕೊಟ್ಟರೆ ಮಾದರಿ ಪೆಕೆಟನ್ನು ಉಚಿತವಾಗಿ ಕಳುಹಿಸಿಕೊಡುವೆವು.

Address:— ನಮ್ಮ ವಿಳಾಸ —

Muller & Phipps, ಮುಲ್ಲರ್ ಎಂಡ್ ಫಿಪ್ಸ್,

21 Sarkurama Chetty Street, 21 ಸಂಕುರಾಮಚೆಟ್ಟಿ ರಸ್ತೆ,

MADRAS. ಮದರಾಸು.

ನ್ಯಾಯದರ್ಪಣ.

ಹೊಸ ಪುಸ್ತಕ

ಇಂಡಿಯಾ ದೇಶದ ಸಮಸ್ತ ಹಿಂದೂ ಜನರ ಸಾಮಾನ್ಯ ಧರ್ಮಗಳು, ಅವುಗಳನ್ನು ಅತಿಕ್ರಮಿಸಿ ನಡೆಯುವವರಿಗೆ ಉಂಟಾಗತಕ್ಕ ಫಲಗಳು, ಇವುಗಳನ್ನು ಕುರಿತು, ಗವರ್ನಮೆಂಟಿನವರಿಂದ ಅನೇಕ ಆಕ್ಟುಗಳು, ರೆಗ್ಯುಲೇಷನ್‌ಗಳು, ಶಾಸನಗಳು ವಗೈರೆ ವಿಧಾಯಕವಾಗಿ ಇರುತ್ತೆ. ಇವುಗಳೆಲ್ಲಾ ಇಂಗ್ಲೀಷ್ ಭಾಷೆಯಲ್ಲಿಯೇ ಅಪಾರವಾಗಿ ಇರುತ್ತವೆ. ಇವುಗಳಲ್ಲಿ, "ಕಂಟ್ರ್ಯಾಕ್ಟ್" ಅಂದರೆ ಕರಾರುಗಳು, "ಬ್ರೀಚ್ ಆಫ್ ಕಂಟ್ರ್ಯಾಕ್ಟ್" ಅಂದರೆ ಒಪ್ಪಂದಕ್ಕೆ ತಪ್ಪಿ ನಡೆಯೋಣ, ದ್ರೋಹ, ಲಿಮಿಟೇಷನ್, ಖಾಸಾ ಕಾಗದ, ರಿಜಿಸ್ಟ್ರೇಷನ್, ಸಿವಿಲ್ ಪ್ರೊಸಿಡ್ಯೂರ್, ಕ್ರಿಮಿನಲ್ ಪ್ರೊಸಿಡ್ಯೂರ್, ಪೀನಲ್ ಕೋಡ್, ಹಿಂದೂ ಲಾ, ಮುಂತಾದ ಧರ್ಮಶಾಸ್ತ್ರಗಳಿಂದ, ಮನುಷ್ಯರ ನಿತ್ಯಾಚರಣೆಗೆ ಅವಶ್ಯಕವಾದ ಲೌಕಿಕ ವ್ಯವಹಾರ ಧರ್ಮಗಳ ಮುಖ್ಯ ಸಂಗತಿಗಳನ್ನೆಲ್ಲಾ ಆರಿಸಿ ಈ ಸಣ್ಣ ಪುಸ್ತಕವನ್ನು ರಚಿಸಿರುತ್ತೆ ಮತ್ತು ವಾಡಿಕೆಯಲ್ಲಿ ಇರತಕ್ಕ ನಾನಾ ವಿಧಗಳಾದ ದಸ್ತೈವಜುಗಳ ಅನೇಕ ನಮೂನೆಗಳು ಮತ್ತು ಕ್ರಿಮಿನಲ್ ರಿವಿನ್ಯು ಗ್ರಾಮ ಮುನಸೀಫ್ ಕೋರ್ಟುಗಳ ಮುಂದಿನ ದಾವಾ ವಗೈರೆ ಅರ್ಜಿಗಳ ಮಾದರಿಗಳು ಅಡಕವಾಗಿ ಇರುತ್ತೆ. ಬೆಲೆ 1—8—0. ವಿ. ಪಿ. 1—12—0.

ಲಾಯರ್ ಯಂ ಯಸ್. ನಂಜಪ್ಪನವರು,

ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

11ಪುಸ್ತಕಗಳನ್ನು ಒಟ್ಟಾಗಿ ತರಿಸಿಕೊಂಡರೆ ಪೋಸ್ಟೇಜು ಶೇರಿ 15-0-0 ಆಗುತ್ತೆ.

ಚುರುಕಾದ ಏಜಂಟರು ಬೇಕಾಗಿರುವರು! ಧಾರಾಳವಾದ ಕಮಿಶನ್!!

ಮುಂದಿನ ಅಭಿವೃದ್ಧಿಗೆ ತುಂಬಾ ಅವಕಾಶವುಳ್ಳ ವೃತ್ತಿ!!!

ಮುಂಬಾಯಿ ಲ್ಯಾಫ್ ಎಸ್ಯುರೆನ್ಸ್ ಕಂಪೆನಿ,

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು).

ಪ್ರಧಾನ ಆಫೀಸು: ಮುಂಬಯಿ.

ಅಧ್ಯಕ್ಷರು:—ಬಹುಮಾನಪಟ್ಟ ಮೆ| ಲಲ್ಲುಬಾಯಿ ಸಾಮಲ್ ದಾಸರವರು, ಸಿ. ಐ. ಇ. ಜೆ. ಪಿ.

ಎಕ್ಚುವೆರಿ:—ಮೆ| ಜೋರ್ಜ್‌ಕಿಂಗ್ ಎಫ್. ಐಸ್. ಎ ಎಫ್. ಐ. ಎ.

ಮೆಡಿಕಲ್ ರಿಫರಿಗಳು.—ಡಾಕ್ಟರ್ ಆರ್. ರಾವ್, ಎಮ್. ಬಿ. ಡಿ. ಎಸ್. ಸಿ (ಲಂಡನ್)

ಗೌರವಾರ್ಥಕ ಮ್ಯಾನೇಜರ್:—ರಾ| ಕೆ. ಸುಬ್ರಮಣ್ಯಯ್ಯರ್, ಬಿ. ಎ. ಜೆ. ಪಿ. ಎಫ್. ಎಸ್. ಎ. ಎ. (ಲಂಡನ್)

ವಿಮೆದಾರರ ವಿಮೆ ಪತ್ರಗಳ ಶರ್ತಗಳ ಪ್ರಕಾರ ಸಿಕ್ಕುವ ಹಣವು ಈ ಕಂಪೆನಿಯಲ್ಲಿ ಬಹಳ ಭದ್ರವಾಗಿರುವದೆಂತ ಲೆಕ್ಕ ವ್ಯವಸ್ಥಾಪಕರು ಅಭಿಪ್ರಾಯಪಟ್ಟಿರುವರು.

ತರುಣಾವಸ್ಥೆಯಲ್ಲಿರುವ ಈ ಕಂಪೆನಿಯು ಮುಂದಕ್ಕೆ ಇನ್ನೂ ಬಹಳ ಅಭಿವೃದ್ಧಿಯನ್ನು ಹೊಂದುವ ವಿಶೇಷ ಸಂಭವಗಳಿಂದ ಕೂಡಿರುವುದೆಂದು "ಕೊಮರ್ಸ್" ಎಂಬ ಪತ್ರಿಕೆಯ ಅಭಿಪ್ರಾಯವಾಗಿರುವುದು.

ಇಂಡಿಯಾ ಸರಕಾರದ ಭದ್ರತೆಯಲ್ಲಿ ರೂ. 1,55,000ವನ್ನು ಠೇವಣಾತಿಯಾಗಿಟ್ಟಿರುವದು

ಹಣ ಕಳುಹಿಸಿಕೊಡುವ ಏಜನ್ಸಿ ಒಗ್ಗೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ:—

ಕೊಟ್ಟಿಕಾರ್ ಬ್ರದರ್ಸ್, ಉಡುಪಿ,

ಕನ್ನಡಾ, ಮಲೆಬಾರ, ತಿರುವಾಂಕೋಡು, ಮತ್ತು ಕೊಚ್ಚಿ ಪ್ರಾಂತ್ಯಗಳ ಪ್ರಾಮುಖ್ಯ ಏಜಂಟರು.

ಸೂಚನೆ.—ಮಂಗಳೂರಲ್ಲಿರುವ ಈ ಕಂಪೆನಿಯ ವಿಮೇದಾರರು ತಮ್ಮ ವಿಮೆ ವೊಬಲಗುಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಟ್ಟು ಆ ಬಗ್ಗೆ ರಶೀದಿಯನ್ನು ಕೊಟ್ಟಿಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು.

ಉಡ್ಪಿ, 3—7—1914.

ಮಹಾಶಯರೆ!

ಮುಂಬಾಯಿ ಲ್ಯಾಫ್ ಎಸ್ಯುರೆನ್ಸ್ ಕಂಪೆನಿ ಎಂಬುವ ಜೀವವಿಮೆ ಉತ್ತರಾಯಿಸುವ ಸಂಘದವರು ಬಗ್ಗೆ ತಾವು ಏನೊಂದೂ ವಿಳಂಬವಿಲ್ಲದೆ, ರೂ. 986—10—0ನ್ನು ನನಗೆ ಪಾವತಿಮಾಡಿದುದಕ್ಕಾಗಿ ಅತೀ ಉಪಕಾರವಾಯಿತು. ಸದರಿ ಪೋಲಿಸಿಯನ್ನು ಕುರಿತಾದ ಅಗತ್ಯವಾದ ಪತ್ರಗಳನ್ನು ಅವರಿಗೆ ಮುಟ್ಟಿಸಿದ ಮೂರೇ ದಿನಗಳೊಳಗಾಗಿ ನನಗೆ ಸಲ್ಲತಕ್ಕ ವಿಮೆಯ ಐವಜನ್ನು ತಮ್ಮ ಕಂಪೆನಿಯ ಡೈರೆಕ್ಟರುಗಳು ನನಗೆ ಪಾವತಿಮಾಡಿಸಿದುದಕ್ಕೋಸ್ಕರ ನನ್ನ ಧನ್ಯವಾದಗಳನ್ನು ಅವರಿಗೆ ದಯೆಯಿಟ್ಟು ತಿಳಿಸಿ. ಈ ತರದಲ್ಲಿ ಪೋಲಿಸಿದಾರರೊಡನೆ ಯಥಾರ್ಥವಾದ ರೀತಿಯಲ್ಲಿ ನಂಬುಗೆಯುಂಟಾಗುವಂತೆಯೂ ವರ್ತಿಸುವ ತಮ್ಮ ವಿಮೆ ಕಂಪೆನಿಯಿಂದ ಪ್ರತಿಯೊಬ್ಬನೂ ಒಂದೊಂದು ಪೋಲಿಸಿಯನ್ನಾದರೂ ಪಡಕೊಳ್ಳುವುದು ಉಚಿತವೆಂದು ನನ್ನ ಆಲೋಚನೆ.

(ದಸ್ಕತು) ಹಾರಾಡಿ ಆನಂದರಾಯ ಪೊಡಿಯಾರನ ರುಜು.

(935ನೇ ಪೋಲಿಸಿಯ ವಿಮಾ ಹಣವನ್ನು ಪಡೆಯಲು ಅಧಿಕಾರವುಳ್ಳವನು).

ಉಡ್ಪಿ, ತಾ. 20—8—1914.

ನನ್ನ ಎಳೇ ಪ್ರಾಯದಲ್ಲಿ ಮೃತರಾದ ನನ್ನ ಗಂಡ ಕೆ. ಎಲ್. ಪ್ರಭುಗಳ ವಿಮೆ ಪತ್ರಗಳನ್ನು ನಾನು ಕಳುಹಿಸಿಕೊಟ್ಟ ಕೆಲವೇ ದಿನಗಳೊಳಗಾಗಿ ಮುಂಬಾಯಿ ಲ್ಯಾಫ್, ಎಸ್ಯುರೆನ್ಸ್ ಕಂಪೆನಿಯವರು ನನಗೆ ತತ್ಸಂಬಂಧವಾದ ಹಣವನ್ನು ಪಾವತಿಮಾಡಿಸಿದುದಕ್ಕೆ ನಾನು ಕೃತಜ್ಞಳಾಗಿರುವೆನು. ನನ್ನ ಒಬ್ಬನೇ ಬಾಲಕನಿಗೆ ಇದೊಂದೇ ಮಾತ್ರ ಪಿತ್ರಾರ್ಜಿತವಾದ ಧನವಾಗಿದೆ. ಅಂತಹ ಬಡ ಹುಡುಗನಿಗೆ ಇದೊಂದು ಅಪೂರ್ವವಾದ ಮಹಾದಾನವನ್ನು ಮಾಡಿಕೊಟ್ಟುದಕ್ಕೆ ಪ್ರತಿಯಾಗಿ ನಿಮ್ಮ ಕಂಪೆನಿಯು ಚಿರಕಾಲವೂ ಸೌಭಾಗ್ಯದಲ್ಲಿರಲಿ!

ಭವಾನೀಬಾಯಿ, Pol. No. 1738.

ಸಾಕ್ಷಿ—ಭವಾನೀಬಾಯಿಯ ಸೋದರ ರಾ| ಕೆ. ರಂಗಪ್ಪ ನಾಗಪ್ಪ.

ಮಂಗಳೂರು, ತಾ. 30—10—1914.

ಸಾಧ್ಯವಾದಷ್ಟು ಕಡಿಮೆ ಸಮಯದೊಳಗಾಗಿ ನನಗೆ ಪಾವತಿಯಾಗತಕ್ಕ ಹಣವನ್ನು ಸಲಾಯಿಸಿದುದಕ್ಕೋಸ್ಕರ ಬೊಂಬೇ ಲ್ಯಾಫ್ ಎಸ್ಯುರೆನ್ಸ್ ಕಂಪೆನಿಯವರಿಗೆ ನನ್ನ ಧನ್ಯವಾದಗಳನ್ನು ಪ್ರೀತಿಪೂರ್ವಕವಾಗಿ ಮುಟ್ಟಿಸಿರಿ! 'ಕ್ಲೈಮು' ಪ್ರಕಾರ ಎಲ್ಲ ಹಣವನ್ನು ಪಡಕೊಳ್ಳುವ ಹಾಗೆ ಕಂಪೆನಿಯ ಏಜಂಟರೇ ತಮ್ಮಿಂದಾಗುವಷ್ಟರ ಸಹಾಯವನ್ನು ಮಾಡುತ್ತಿರುವರಾದುದರಿಂದ ನನಗೆ ಯಾವ ತೊಂದರೆಗಳೂ ಉಂಟಾಗಲಿಲ್ಲ ಹಣವನ್ನು ನಾವಿದ್ದ ಸ್ಥಳಕ್ಕೆ ಬಂದು ತಲ್ಪಿತು.—ಇದೊಂದು ತಮ್ಮ ಕಂಪೆನಿಯ ವಿಶೇಷ ಗುಣ. ನಿಮ್ಮ ಸಂಘಕ್ಕೆ ಸದಾ ವಿಜಯವು ಆಗಲಿ.

ಅರ್ಕಳ ರಾಮಚಂದ್ರ ಶ್ಯಾನಭಾಗನ ರುಜು.

(Pol. No. 2319ನೆಯ ದಾರಿ [illegible]).

ಅಮೃತಾಂಜನ.

ಜಗತ್ಪ್ರಸಿದ್ಧವಾದ ಬೇನೆಹಾರಿ ಮುಲಾಮು

ಇದರ ಉಪಯೋಗದಿಂದ:—ವಾತ, ಸಂದಿವಾತ, ತಲೆನೋವು, ಶಿರೋಭಾರ, ಅರ್ಧಾಂಗ ವಾಯು, ಉಳುಕು, ಎದೆ ನೋವು, ಸೊಂಟದ ನೋವು, ಶೀತ, ಕೆಮ್ಮು, ದಂತಶೂಲೆ, ಮೂಲವ್ಯಾಧಿ, ಚೇಳು ಕಡಿತ, ಆನೆಗಾಲು, ಸುಟ್ಟ ಗಾಯ, ಮೊದಲಾದ ಎಲ್ಲಾ ತರದ ನೋವುಗಳ ಮೇಲೆ ದಿವ್ಯ ಔಷಧವಾಗಿರುತ್ತದೆ. ಸಾವಿರಾರು ಡಾಕ್ಟರರೂ, ಇದಕ್ಕೆ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ಪ್ರತಿ ತಿಂಗಳಲ್ಲೂ 25,000 ಬಾಟ್ಲಿಗಳು ಮಾರಲ್ಪಡುತ್ತವೆ. ಬಾಟ್ಲಿ ಒಂದರ ಕಿಮ್ಮತು ಆಣೆ 8. ಡಜನ್ 1ಕ್ಕೆ ರೂ. 5—4—0. ವಿ. ಪಿ. ಖರ್ಚು ಪ್ರತ್ಯೇಕ.

ಎಚ್ಚರಿಕೆ:—ಅಮೃತಾಂಜನವನ್ನು ಪಡಕೊಳ್ಳುವಾಗ ಸುಂದರವಾದ ಮತ್ತು **ಹಲವು ಛಾಪೆಗಳುಳ್ಳ** ಕರಡಿಗೆ ಸಮೇತ ಪಡಕೊಳ್ಳಿರಿ.

ಗಜಕರ್ಣದ ಮುಲಾಮು.

ಮೂರು ಸರ್ತಿ ತಾಗಿಸುವದರೊಳಗೆ ಗಜಕರ್ಣ ನಾಶವಾಗಿ ಹೋಗುವದು. **ಇದರಿಂದ** ಉರಿಯು ಬರುವದಿಲ್ಲ, ಚರ್ಮವು ಕಪ್ಪಾಗುವದಿಲ್ಲ. ಇದುವರೆಗೆ ಒಂದು ಮಿಲಿಯ ಡಬ್ಬಿಗಳು ಮಾರಲ್ಪಟ್ಟವು. ರಾಜಾರಾಣಿ ಟ್ರೇಡ್ ಮಾರ್ಕ್ 0—6—0. 12 ಡಬ್ಬಿಗಳಿಗೆ 3—8—0. ವಿ. ಪಿ. ಪ್ರತ್ಯೇಕ.

ದಂತಮಂಜನ.

ರಾಜಾರಾಣಿ ಟ್ರೇಡ್ ಮಾರ್ಕ್.

ಈ ಮಂಜನದಿಂದ ಹಲ್ಲುಗಳನ್ನು ದಿನಾಗಲೂ ತಿಕ್ಕುವದರಿಂದ ಹಲ್ಲುನೋವು, **ಹಲ್ಲುಗಳಿಂದ** ಬರುವ ರಕ್ತ, ಹಲ್ಲುಗಳ ವಾಸನೆ, ಮುಂತಾದವುಗಳೆಲ್ಲಾ ನಿಲ್ಲುತ್ತವೆ. **ಇದರಲ್ಲಿ** ಹಲವು ನಮೂನೆಯ ಔಷಧಗಳಿವೆ. ಬರೀ ಚೋಕಿನ ಹುಡಿ **ಅಲ್ಲ.** ಡಬ್ಬಿ 1ಕ್ಕೆ 0—2—0. ವಿ. ಪಿ. ಪ್ರತ್ಯೇಕ.

ಮೋಹಿನಿ ತೈಲ.

ಈಗ ಹಲವು ನಮೂನೆಯ ತೈಲಗಳು ಉಪಯೋಗಿಸಿದವರು ಈ ನಮ್ಮ ಸುಗಂಧಮಯವಾದ ಮೋಹಿನಿ ತೈಲವನ್ನು ಒಂದು ಸಾರಿ ಉಪಯೋಗಿಸಿ ನೋಡಿರಿ. ಇದರಲ್ಲಿ ಹ್ವೈಟ್ ಒಯಿಲ್ ಇಲ್ಲಾ: ಇದು ಗಿಡಮೂಲಿಕೆಗಳಿಂದಲೂ ಬದಾಮಿನ ಎಣ್ಣೆಯಿಂದಲೂ ತಯಾರಿಸಲ್ಪಟ್ಟಿದೆ. ಇದರಿಂದ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ ಬೆಳೆಯುವವು.

ಬಾಟ್ಲಿ ಒಂದರ ಕಿಮ್ಮತು ಆಣೆ 0—12—0.

ಸುಂದರಿ ಮುಲಾಮು.

ಮುದ್ದಣಗಳನ್ನು ನಾಶಪಡಿಸಿ ಮುಖವನ್ನು ಸುಂದರಗೊಳಿಸುವದು. ಡಬ್ಬಿ 1ಕ್ಕೆ ರೂ 0—8—0.

ವಜ್ರಗುಟಿಕ.

ಧಾತುಪುಷ್ಟಿ, ಧಾತುವೃದ್ಧಿ, ಶಕ್ತಿವರ್ಧಕ. 20 ಗುಳಿಗೆಗಳ ಡಬ್ಬಿ ಒಂದರ ರೂ. 1—0—0.

ಕೆ. ನಟರಾಜನ್ ಎಡಿಟರ್, ಇಂಡಿಯನ್ ಸೋಶಿಯಲ್ ರಿಫೋರ್ಮರ್:—ಅಮೃತಾಂಜನ ಎಲ್ಲಾ ಔಷಧಗಳಿಗಿಂತಲೂ ಬಹಳ ಉತ್ತಮವಾದ ಔಷಧ.

ಡಬ್ಲ್ಯು ಮೆಕ್ಸವೆಲ್, ಮೈನಾಡ:—ಅಮೃತಾಂಜನದಿಂದ ಎಂಥಾ ಕಠಿಣವಾದ ವಾತ ನೋವಾದರೂ ನಿಲ್ಲುತ್ತದೆ.

ಆರ್. ಆರ್. ಗಂಗೋಲಿ:—ಅಮೃತಾಂಜನ ವಾತ, ತಲೆನೋವುಗಳ ಮೇಲೆ ದಿವ್ಯ ಔಷಧ.

ಡಾಕ್ಟರ್ ಡಾಂಡೆಕರ್, ಎಲ್. ಎಮ್. ಎಂಡ್ ಎಸ್:—ಅಮೃತಾಂಜನ ಎಲ್ಲಾ ನೋವುಗಳ ಮೇಲೆ ದಿವ್ಯ ಔಷಧ.

ನಮ್ಮ ಔಷಧಗಳನ್ನು ಪಡಕೊಳ್ಳುವಾಗ ಅಮೃತಾಂಜನ ಡಿಪೋ, ಮುಂಬಯಿ ಎಂಬ ಹೆಸರನ್ನು ಓದಿನೋಡಿ ಪಡಕೊಳ್ಳಿರಿ.

ಅಮೃತಾಂಜನ ರಖಮಾಗಿಯೂ, ಚಿಲ್ಲರೆಯಾಗಿಯೂ ಬೇಕಾದವರು ನಮ್ಮ ಮುಂಬಯಿ ಆಫೀಸಿಗೆನೇ ಬರೆಯಬೇಕು. ಮದ್ರಾಸು ಆಫೀಸಿನವರು ರಖಮಾಗಿ ಅಮೃತಾಂಜನ ರವಾನಿಸಿ ಕೊಡುವ ಏರ್ಪಾಡು ಮಾಡಲಿಲ್ಲ.

ಮಂಗಳೂರಲ್ಲಿ—ಎಲ್ಲಾ ಔಷಧಗಳು ಈ ಕೆಳಗಿನ ಕಂಪೆನಿಗಳಲ್ಲಿ ಸಿಕ್ಕುವವು.

ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್, ಪರ್ಲ್ ಎಂಡ್ ಸನ್ಸ್, ದಿ ಊಲನ್ ಮಾರ್ಟ್, ಕೊಚ್ಚಿಕಾರ ಬ್ರದರ್ಸ್ ಉಡ್ಪಿ.

ಅಮೃತಾಂಜನ ಡಿಪೋ,

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ ಟೌನ್, ಮದ್ರಾಸು.

109 ಫ್ರೇಯರ್ ರೋಡ,
ಮುಂಬಯಿ,

ಕರ್ನಾಟಕ ವೃತ್ತ ಮತ್ತು ಧನಂಜಯ.

ಕಳೆದ 25 ವರ್ಷಗಳಿಂದ ಭಾಷಾ ಸೇವೆಯನ್ನೂ ದೇಶ ಸೇವೆಯನ್ನೂ ಮಾಡುತ್ತಿರುವ ಈ ವಾರಪತ್ರಿಕೆಯು ಧಾರವಾಡದಲ್ಲಿ ಪ್ರತಿ ಮಂಗಳವಾರವೂ ಪ್ರಕಟಿಸಲ್ಪಡುವದು. ಲೋಕವ್ಯವಹಾರದ ಉಪಯುಕ್ತ ವಿಷಯಗಳ ಸದಭಿಪ್ರಾಯವನ್ನು ಜನರಲ್ಲಿ ಉಂಟುಮಾಡುವಂಥ ಚಲೋ ಸ್ಫುಟ ಲೇಖಗಳುಳ್ಳ ಮುಂಬಯಿ ಕರ್ನಾಟಕದ ಉತ್ತಮ ತರಗತಿಯ ಈ ಪತ್ರವನ್ನು ದಕ್ಷಿಣಕನ್ನಡದವರೂ ಓದುವದು ಅಗತ್ಯ.

ದೊಡ್ಡ ರೊಯಲ್ ಸ್ಯಾಜಿನ ಈ ಪತ್ರಿಕೆಗೆ ವಾರ್ಷಿಕ ಚಂದಾ ಮೊಬಲಗು ಟಪ್ಪಾಲು ಹಾಸಲು ಸೇರಿ ರೂ ३—४—० ಆಗಿರುತ್ತದೆ, ಚಂದಾದಾರರಾಗ ಸೇರಲಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು,

ಮ್ಯಾನೇಜರ್, ಕರ್ನಾಟಕ ವೃತ್ತ ಮತ್ತು ಧನಂಜಯ,
ಮಂಗಳವಾರಪೇಟೆ, ಧಾರವಾಡ

ಶ್ರೀ ರಾಮನಾಮಸ್ತುತಿ.

ಇದು ಸುಂದರವಾದ ಸಣ್ಣ ಪುಸ್ತಕ; ಜಪಸೆಗೂ ಪಾರಾಯಣಕ್ಕೂ ಯೋಗ್ಯವಾಗಿದೆ. ವ್ಯಾಪಾರಿಗಳು ವಿ ಪಿ ಮೂಲಕ ತರಿಸಿ ಮಾರುವುದು ವಿಶೇಷ ಲಾಭಕರ! ಬೆಲೆ 100 ಪುಸ್ತಕಗಳಿಗೆ 0—7—0 300ಕ್ಕೆ 1—2—0 500ಕ್ಕೆ 1—12—0 1000ಕ್ಕೆ ರೂ 3—0—0.

ನಮ್ಮ [illegible]
ವಿ. ಪಿ ಡಿಸ್ಸೋ,
ಕೋಲಾರ್

ಗಮನ ಕೊಡಿರಿ! ತ್ವರೆ ಮಾಡಿರಿ!!

ಶ್ರೀ ಮಾಂಗಿರೀಷ ಬಾಮ್

ತಲೆನೋವು, ಒಕ್ಕೆನ್ನೆ ನೋವು, ಹಲ್ಲುನೋವು, ಸೊಂಟನೋವು, ಎಲ್ಲಾ ಪ್ರಕಾರದ ರೋಗಗಳ, ಉಳುಕು, ವಾಯುವಿನಿಂದ ಹೊಟ್ಟೆ ಉಬ್ಬರಿಸುವದು, ಇವುಗಳನ್ನು ಶೀಘ್ರವಾಗಿ ಗುಣಪಡಿಸುವದು. ಸ್ಕ್ರೂ ಬಾಯಿಯ ಲೋಹದ ಮುಚ್ಚುಳವುಳ್ಳ ನಳಿಗೆಗಳಲ್ಲಿರುವದರಿಂದ ಬಾಟ್ಲಿಗಳಲ್ಲಿರುವ ಬಾಮುಗಳೋಪಾದಿ ಸೂರ್ಯನ ಬೆಳಕಿಗೂ, ಗಾಳಿಗೂ, ಹಾಗದೆ ಎಷ್ಟು ಕಾಲಕ್ಕೂ ಹಾಳಾಗುವದಿಲ್ಲ. ನಳಿಗೆಯ ಅಡಿಯನ್ನು ಮಾತ್ರ ಒತ್ತಿದಲ್ಲಿ ಬೇಕಾದಷ್ಟು ಮಾತ್ರ ಬಾಮ್ ಹೊರಗೆ ಬರುವದು. ಇದಲ್ಲದೆ ಪ್ರತಿ ನಳಿಗೆಯಲ್ಲಿ ಬಾಟ್ಲಿಗಳಲ್ಲಿರುವದರ 1½ ಪಾಲು ಬಾಮು ಇರುವದು. ನಳಿಗೆ ಕ್ರಯ ರೂ 0—8—0

ವಿಸ್ಫೋಟಿಕ ಮುಟ್ಯಂ, ಸಿಡುಬು, ಕೋರ, ಕೊಪ್ಪೆ ಮಕ್ಕಳ ಹೇಷ್ಟೆ, ಮುಂತಾದ ವ್ಯಾಧಿಗಳಿಗೆ ಅತ್ಯುತ್ತಮವಾದ್ದು. ಸಿಡುಬು ಮುಂತಾದ ಅಂಟುರೋಗಗಳಲ್ಲಿ ಜ್ವರ ಕಾಣಿಸಿಕೊಳ್ಳುವಾಗ ಒಂದು, ಎರಡು ಮಾತ್ರೆಯನ್ನು ಬಿಸಿ ನೀರಿನಲ್ಲಿ ತೇಯ್ದು ಕೊಟ್ಟರೆ ಕೂಡಲೆ ಜ್ವರ ಗುಣವಾಗುವದು. ಮಕ್ಕಳ ಹೇಷ್ಟೆಗೆ ಒಂದು ಮಾತ್ರೆಯಂತೆ ಪ್ರತಿದಿನವೂ ಮೊಲೆಹಾಲಿನಲ್ಲಿ ತೇಯ್ದು ದಿನಕ್ಕೆ 2 ಸಾರಿ ಕೊಟ್ಟರೆ ಪೀಡೆಯು ಪರಿಹಾರವಾಗಿ ದೃಢಕಾಯವಾಗಿ ಬೆಳೆಯುವರು. ಎಲ್ಲಾ ತರದ ಜ್ವರಗಳಿಗೂ ಉತ್ತಮವಾದ್ದು. 12 ಮಾತ್ರೆಗಳ ಪೊಟ್ಟಣ 1ಕ್ಕೆ 0—6—0

ಸ್ವರಸುಖಿ. ಕೆಮ್ಮು, ಗಂಟಲುನೋವು, ಧ್ವನಿ ಒಡೆಯಾಗುವದು, ಅಸ್ತ್ರ ಮುಂತಾದವುಗಳಿಗೆ ಅತ್ಯುತ್ತಮ [illegible] ಅತಿಕೆಯ ನಂಗಡ ತಿನ್ನುವುದರಿಂದ ಹಲ್ಲುಗಳಿಗೂ, ಜೀರ್ಣಕ್ಕೂ ಸಹಕಾರಿ. ದೊಡ್ಡ ಪೊಟ್ಟಣ 1ಕ್ಕೆ 0—1—6 ಸ್ಯಾಂಪಲ್ ಪೊಟ್ಟಣ 0—0—6

ಮುಂದೆ ಅಧ್ಯಕ್ಷರ ಮತ್ತು ಇತರರ ಉಪಕಾರಗಳನ್ನು ಸ್ಮರಿಸತಕ್ಕ ನಿರ್ಣಯಗಳಾಗಿ ಅಧ್ಯಕ್ಷರ ಉಪಸಂಹಾರಾತ್ಮಕ ಭಾಷಣದೊಡನೆ ಸಮ್ಮೇಳನದ ಎಂಟನೆಯ ಅಧಿವೇಶನವು ಸಂಪೂರ್ಣವಾಯಿತು.

ಸಮ್ಮೇಲನದಲ್ಲಿ ಓದುವುದಕ್ಕಾಗಿ ಅಪೇಕ್ಷಿಸಿದ ಹತ್ತು ವಿಷಯಗಳೊಳಗೆ ಎಂಟು ವಿಷಯಗಳನ್ನು ಕುರಿತು ನಲವತ್ತಯಿದು ನಿಬಂಧಗಳು ಬಂದಿದ್ದುವು. ಇವುಗಳೊಳಗೆ ಎರಡು ಸ್ತ್ರೀಯರು ಬರೆದುವುಗಳು. ಹಾಗೆಯೇ ಹದಿನೇಳು ಕವಿತೆಗಳೂ ಬಂದಿದ್ದುವು.

ಮಹಾರಾಷ್ಟ್ರ ಸಾಹಿತ್ಯ ಪರಿಷತ್ತಿಗೆ ಒಬ್ಬರು ಅಧ್ಯಕ್ಷರೂ, ಐವರು ಉಪಾಧ್ಯಕ್ಷರೂ, ಇಪ್ಪತ್ತು ಮಂದಿ ಕಾರ್ಯನಿರ್ವಾಹಕ ಸಭಿಕರೂ, ಇಬ್ಬರು ಕಾರ್ಯದರ್ಶಿಗಳೂ ಇರುವರೆಂದೂ, ಆಜೀವ ಸಭಾಸದರಾಗತಕ್ಕವರು ನೂರು ರೂಪಾಯಿಯನ್ನೂ, ಸಾಮಾನ್ಯ ಸಭಾಸದರು ಪ್ರತಿ ವರ್ಷ ಮೂರು ರೂಪಾಯಿಯನ್ನೂ ಕೊಡಬೇಕಾಗಿರುವುದೆಂದೂ ತಿಳಿಯಬರುತ್ತಿದೆ.

ಬಳ್ಳಾರಿ ಜಿಲ್ಲಾ ಪರಿಷತ್ತು.

ಕಳೆದ ಜುಲಾಯಿ ೨೪ನೇ ತಾರೀಕಿನ ದಿನ ಹೊಸಪೇಟೆಯಲ್ಲಿ ಬಳ್ಳಾರಿ ಜಿಲ್ಲೆಯ ಪರಿಷತ್ತು ನೆರೆದು ಮೂರು ದಿನಗಳ ಪರ್ಯಂತ ನಡೆಯಿತು. ರಾಷ್ಟ್ರೀಯ ಮತ್ತು ಪ್ರಾಂತಿಕ ಸಭೆಗಳು ಪ್ರತೀ ವರುಷವೂ ಕೂಡುತ್ತಿರುವಂತೆ ಇಂಥಾ ಜಿಲ್ಲಾ ಸಭೆಗಳು ಕೂಡ ಪ್ರತಿ ಜಿಲ್ಲೆಯಲ್ಲಿ ಆಗಿಂದಾಗ ಸೇರುತ್ತಿದ್ದರೆ ಅದರಿಂದ ಆಯಾ ಜಿಲ್ಲೆಯವರ ಕಷ್ಟನಿಷ್ಠುರಗಳು ಸರಕಾರದವರ ತಿಳುವಳಿಕೆಗೆ ಬರುವಂತಾಗುವುದು ಮಾತ್ರವೇ ಅಲ್ಲದೆ ಆಯಾ ಜಿಲ್ಲೆಯ ಬೇರೆ ಬೇರೆ ಪಂಗಡದ ಜನರೊಳಗೆ ಅಕೃತ್ರಿಮವಾದ ಮೈತ್ರಿಯುಂಟಾಗುವುದಕ್ಕೂ ತುಂಬಾ ಸಹಾಯವಾಗುತ್ತದೆ. ಈ ವಿಷಯವು ನಮ್ಮ ದಕ್ಷಿಣಕನ್ನಡ ಜಿಲ್ಲೆಯ ಮುಖಂಡರಿಗೂ ಗಮನಕ್ಕೆ ಬಾರದಿರುವುದು ಶೋಚನೀಯವಾಗಿದೆ.

ಬಳ್ಳಾರಿ ಜಿಲ್ಲಾ ಪರಿಷತ್ತಿನಲ್ಲಿ ನಡೆದ ಕಾರ್ಯಗಳೆಲ್ಲಾ ಪ್ರಾಯಶಃ ಆ ಜಿಲ್ಲೆಯವರಿಗೆ ಮಾತ್ರ ಸಂಬಂಧಪಟ್ಟವುಗಳಾಗಿದ್ದುವಾದರೂ ಒಂದು ವಿಷಯವು ಮಾತ್ರ ಅಶೇಷ ಕರ್ಣಾಟಕರಿಂದ ಲಕ್ಷಿಸಲಡ್ಪಲು ತಕ್ಕದಾಗಿದೆಯೆಂದು ನಾವು ತಿಳಿಯುವೆವು. ಪರಿಷತ್ತಿನಲ್ಲಿ ಅಂಗೀಕರಿಸಲಾದ ಇತರ ನಿರ್ಣಯಗಳೊಂದಿಗೆ "ಬಳ್ಳಾರಿ ಜಿಲ್ಲೆಯ ಪಶ್ಚಿಮ ಭಾಗದ ಯಾವತ್ತು ತಾಲೂಕುಗಳಲ್ಲಿ ತೆಲುಗಿನ ಬದಲಾಗಿ ಕನ್ನಡವನ್ನು ಎರಡನೆಯ ದೇಶಭಾಷೆಯಾಗಿ ಏರ್ಪಡಿಸ ತಕ್ಕದ್ದು" ಎಂಬುದೂ ಒಂದು ನಿರ್ಣಯವಾಗಿದ್ದಿತು. ಈ ಸೂಚನೆಯನ್ನು ಸಭಿಕರ ಮುಂದಿಡುತ್ತ ಮ. ರಾ. ಕೆ. ಗುಂಡೂರಾಯರವರು ಪಶ್ಚಿಮ ಭಾಗದ ತಾಲೂಕುಗಳಲ್ಲಿ ಜನರಿಗೆ ಕನ್ನಡವೇ ಮಾತೃಭಾಷೆಯಾಗಿರುವುದೆಂದೂ, ಹೀಗಿದ್ದು ಕೂಡ ಅದು ಕೇವಲ ಅಲಕ್ಷ್ಯಭಾವದಿಂದ ಕಾಣಲ್ಪಡುತ್ತಿರುವುದೆಂದೂ ಜನರಿಗೆ ಇಂಗ್ಲಿಷು ಮಾತನಾಡ ಬರುವಷ್ಟು ಧಾರಾಳವಾಗಿ ಕನ್ನಡವನ್ನಾಡಲು ಬರುವುದಿಲ್ಲವೆಂದೂ, ಆದುದರಿಂದ ಕನ್ನಡವನ್ನು ಪಶ್ಚಿಮ ಭಾಗದ ಯಾವತ್ತು ತಾಲೂಕುಗಳಲ್ಲಿ ಎರಡನೆಯ ಭಾಷೆಯಾಗಿ ಮಾಡತಕ್ಕದು ಅಗತ್ಯವೆಂದೂ ಹೇಳಿದರು. ಮ. ಕೃಷ್ಣರಾಯರ ಅನುಮೋದನವೂ ಮ। ಬಿ. ನರಸಿಂಹಾಚಾರ್ಯರವರ ಸಮರ್ಥನವೂ ದೊರೆತು ಈ ನಿರ್ಣಯವು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು.

ಪರಿಷತ್ತಿನ ನಡವಳಿಕೆಗಳ ಈ ಭಾಗವನ್ನು ವೃತ್ತ ಪತ್ರಗಳಲ್ಲಿ ಬಂದ ಬಹು ಸಂಕ್ಷಿಪ್ತವಾದ ವೃತ್ತಾಂತದಿಂದ ನಾವು ತೆಗೆದುಕೊಂಡಿರುವೆವು 'ತೆಲುಗಿ'ಗೆ ಬದಲಾಗಿ ಎರಡನೆಯ ದೇಶಭಾಷೆ (Second Vernacular in the place of Telugu) ಎಂಬುದರ ತಾತ್ಪರ್ಯವೇನೆಂದು ಸ್ಪಷ್ಟವಾಗಿ ನಮಗೆ ತಿಳಿಯಲಿಲ್ಲವು ನಮಗೆ ತಿಳಿದ ಮಟ್ಟಿಗೆ ಬಳ್ಳಾರಿ ಜಿಲ್ಲೆಯಲ್ಲೆಲ್ಲಾ ತೆಲುಗಿಗೆ ಎರಡನೇಯದಾಗಿ ಕನ್ನಡವೂ ದೇಶಭಾಷೆಯೆಂದು ಈ ಮೊದಲೇ ಸರಕಾರದವರು ಅಂಗೀಕರಿಸಿರುವರು. ಆದುದರಿಂದ ಪಶ್ಚಿಮ ಭಾಗದ ತಾಲೂಕುಗಳಲ್ಲಿ ತೆಲುಗನ್ನು ಸಂಪೂರ್ಣವಾಗಿ ತೆಗೆದು ಹಾಕಿ ಕನ್ನಡ ಒಂದನ್ನು ಮಾತ್ರ ಊರ್ಜಿತವಿಡಬೇಕೆಂಬುದೇ ಈ ನಿರ್ಣಯದ ಆಶಯವಾಗಿರಬಹುದೆಂದು ನಾವು ಗ್ರಹಿಸಿಕೊಳ್ಳಬೇಕಾಗಿದೆ

ಈ ನಿರ್ಣಯವು ಬಹು ಸಮಂಜಸವಾದುದೆಂದು ಪ್ರತ್ಯೇಕವಾಗಿ ಹೇಳಬೇಕೆಂಬುದಿಲ್ಲ. ಬಳ್ಳಾರಿ ಜಿಲ್ಲೆಯಲ್ಲಿ ಒಟ್ಟು ಒಂಬತ್ತು ತಾಲೂಕುಗಳೂ ಸೊಂಡೂರೆಂಬ ಒಂದು ದೇಶೀಯ ಸಂಸ್ಥಾನವೂ ಇರುವುವು. ಇವುಗಳೊಳಗೆ ಹರಪನಹಳ್ಳಿ, ಹೊಸಪೇಟೆ, ಕೂಡಲಿಗಿ ತಾಲೂಕುಗಳೂ, ಸೊಂಡೂರು ಸಂಸ್ಥಾನವೂ ಕೇವಲ ಕನ್ನಡವಾಗಿವೆ ಹೂವಿನ ಹಡಗಲಿ ತಾಲೂಕಿನಲ್ಲಿ ಹತ್ತಕ್ಕೆ ಒಂಬತ್ತರಂತೆಯೂ, ಆಲೂರು ಬಳ್ಳಾರಿ ತಾಲೂಕುಗಳಲ್ಲಿ ಅರ್ಧಕ್ಕಿಂತ ಹೆಚ್ಚಾಗಿಯೂ ಜನರು ಕನ್ನಡಿಗರೇ ಆಗಿರುವರು ರಾಯದುರ್ಗ, ಆದವಾನಿ, ತಿರುಗುಪ್ಪ ತಾಲೂಕುಗಳಲ್ಲಿ ಮಾತ್ರ ತೆಲುಗು ತಕ್ಕಮಟ್ಟಿಗೆ ಪ್ರಬಲವಾಗಿದೆ. ಹೀಗಿದ್ದು ಕೂಡ ವಾಸ್ತವವಾಗಿ ನೋಡಿದರೆ ಬಳ್ಳಾರಿ ಜಿಲ್ಲೆಯೆಲ್ಲಾ ತೆಲುಗಿನಿಂದಲೆ ತುಂಬಿರುವದೋ ಎಂಬಂತೆ ತೋರುತ್ತಿದೆ ಆಂಧ್ರ ಸಾಹಿತ್ಯ ಪರಿಷತ್ತಿನ ಕಳೆದ ಸಭೆಯು ಕೂಡ ಬಳ್ಳಾರಿಯಲ್ಲಿ ಸೇರಿದ್ದು ಇದಕ್ಕೆ ಒಂದು ನಿದರ್ಶನವೆನ್ನಬಹುದು. ಹೀಗಾದುದರಿಂದ ಬಳ್ಳಾರಿ ಜಿಲ್ಲೆಯ ಕನ್ನಡಿಗರು ಸಾವಕಾಶವಾಗಿಯಾದರೂ ತಮ್ಮ ಮಾತೃಭಾಷೆಯ ವಿಷಯದಲ್ಲಿ ಜಾಗರೂಕರಾದುದನ್ನು ನೋಡಿ ನಾವು ಬಹಳವಾಗಿ ಹರ್ಷಿಸುವೆವು.

ಪರಿಷತ್ತಿನಲ್ಲಿ ಆದ ನಿರ್ಣಯವೇನೋ ಚೆನ್ನಾಗಿಯೇ ಆಯಿತು ಆದರೆ ಕನ್ನಡಿಗರು ಇದಕ್ಕೂ ಅಧಿಕವಾಗಿ ತಮ್ಮ ನೆಲೆಯನ್ನು ದೃಢಪಡಿಸತಕ್ಕ ನಿರ್ಣಯವನ್ನು ತರಲು ಅಸಾಧ್ಯವಾಗಿದ್ದಿತೆಂದು ನಾವು ಹೇಳಲಾರೆವು ಯಾವ ಜಿಲ್ಲೆಯಲ್ಲಿಯೇ ಆಗಲಿ ಎರಡು ಭಾಷೆಗಳಿದ್ದರೆ ಅವುಗಳೊಳಗೆ ಒಂದು ಭಾಷೆಯು ಆಯಾ ಜಿಲ್ಲೆಯ ಪರಿಸ್ಥಿತಿಯ ದೆಸೆಯಿಂದ ಮೂಲೆ ಪಾಲಾಗುವುದು ಖಂಡಿತವು ಬಳ್ಳಾರಿ ಜಿಲ್ಲೆಯ ಪರಿಸ್ಥಿತಿಯನ್ನು ನೋಡಿದರೆ, ಅದಕ್ಕೆ ಉತ್ತರದಲ್ಲಿ ಮೊಗಲಾಯಿ ಸೀಮೆಯೂ, ಪಶ್ಚಿಮದಲ್ಲಿ ಬೊಂಬಾಯಿ ಆಧಿಪತ್ಯವೂ, ದಕ್ಷಿಣದಲ್ಲಿ ಮೈಸೂರು ಸೀಮೆಯೂ ತಗಲಿಕೊಂಡಿವೆ. ಮದ್ರಾಸಿಗೆ ಸೇರಿದ ಯಾವ ಕನ್ನಡ ಜಿಲ್ಲೆಗೂ ಅದರ ಸಂಬಂಧವಿಲ್ಲ. ಪಶ್ಚಾಂತರದಲ್ಲಿ ತೆಲುಗು ಜಿಲ್ಲೆಗಳೇ ಅದರ ಪೂರ್ವ ಭಾಗದ ನೆರೆಗಳಾಗಿವೆ ಹೀಗಾದುದರಿಂದ ಸರಕಾರದವರು ಕನ್ನಡವನ್ನು ಕೂಡ ದೇಶಭಾಷೆಯಾಗಿ ಮನ್ನಿಸಿದರೂ ಪರಸ್ಪರ ಸಂಪರ್ಕವಿರುವ ತೆಲುಗು ಜಿಲ್ಲೆಗಳ ಮತ್ತು ಭಾಷೆಯ ಪ್ರಾಬಲ್ಯವೇ ಅಲ್ಲಿ ಹೆಚ್ಚಾಗಿರಬಹುದಲ್ಲದೆ ಕನ್ನಡವು ಮುಂದಕ್ಕೆ ಬರಬಹುದಾದ ಸಂದರ್ಭವು ಕಿಂಚಿತ್ತಾದರೂ ಇರುವುದಿಲ್ಲ. ಹೀಗಾದುದರಿಂದ ಕನ್ನಡಿಗರೂ ಕನ್ನಡವೂ ಆ ಜಿಲ್ಲೆಯಲ್ಲಿ ಪ್ರಬಲವಾಗಬೇಕೆಂಬುದು ಕನ್ನಡ ಜನರ ಮನೀಷೆಯಾಗಿದ್ದರೆ, ಬಳ್ಳಾರಿಗೆ ಸೇರಿದ ತೆಲುಗು ತಾಲೂಕುಗಳನ್ನು ಪ್ರತ್ಯೇಕಿಸಿ, ಅನಂತಪುರ ಜಿಲ್ಲೆಗೆ ಸೇರಿಸಿ ಅನಂತಪುರಕ್ಕೆ ಸೇರಿರುವುದಾದರೂ ಕೇವಲ ಕರ್ಣಾಟಮಯವಾಗಿರುವ ಮಡಕಶಿರಾ ತಾಲೂಕನ್ನು ಬಳ್ಳಾರಿ ಜಿಲ್ಲೆಗೆ ಸೇರಿಸಿ ತನ್ಮೂಲವಾಗಿ ಉಂಟಾಗತಕ್ಕ ಹೊಸ ಬಳ್ಳಾರಿ ಜಿಲ್ಲೆಗೆ ಕನ್ನಡ ಒಂದೇ ದೇಶಭಾಷೆಯೆಂದು ಸರಕಾರದವರು ಆಜ್ಞಾಪಿಸುವಂತೆ ಬೇಡಿಕೊಳ್ಳುವದು ಅವರ ಆದ್ಯಕರ್ತವ್ಯವಾಗಿದೆ

ಹೀಗೆ ಮಾಡುವುದು ಕೇವಲ ದುಸ್ಸಾಧ್ಯವಾದ ವಿಷಯವೂ ಅಲ್ಲ ಒಂದೇ ಅಧಿಪತ್ಯಕ್ಕೆ ಸೇರಿದ ಜಿಲ್ಲೆಗಳನ್ನು ಸರಕಾರದವರು ಆಗಿಂದಾಗ ಪುನರೇರ್ಪಡಿಸುತ್ತಲೇ ಇರುವರು. ಈ ವಿಷಯದಲ್ಲಿ ಬೇರೆ ಅಧಿಪತ್ಯಗಳಿಂದ ಆಕ್ಷೇಪಣೆಗಳು ಬರುವಂತೆಯೂ ಇರುವುದಿಲ್ಲ. ಇನ್ನು ಸಮಸ್ತ ಕರ್ಣಾಟಕರೂ ಈ ಕಾರ್ಯದಲ್ಲಿ ಬಳ್ಳಾರಿಯ ನಮ್ಮ ಬಂಧುಗಳ ವಿಷಯದಲ್ಲಿ ಸಹಾನುಭೂತಿಯನ್ನು ತೋರಿಸದೆ ಇರಲಾರರು ಪರಂತು ಮುಖ್ಯವಾಗಿ ಬಳ್ಳಾರಿಯವರೇ ಈ ಕಾರ್ಯದಲ್ಲಿ ಮುಂದಾಗಿ ಬಂದು ಪ್ರವರ್ತಿಸಬೇಕಾಗಿರುವುದು. ಹಾಗೆ ಮಾಡಿದರಾದರೆ ಕಾಲಾಂತರದಲ್ಲಿ ಅವರ ಸದುದ್ದೇಶವು ಸಿದ್ಧಿಸದೆ ಹೋಗಲಾರದು. ಈ ಕಡೆಗೆ ಅವರ ಗಮನವು ಹೋಗದಿರದೆಂದು ನಂಬುವೆವು.

ಅಖಿಲ ಭಾರತವರ್ಷೀಯ ವಿದ್ವತ್ಪರಿಷತ್ತು, ಬೆಂಗಳೂರು.

ಈ ಪರಿಷತ್ತಿನ ವ್ಯಾಖ್ಯಾನಮಾಲೆಯನ್ನು ಪ್ರಾರಂಭಿಸುವ ಮಹಾಸಭೆಯು [illegible] ಮಾಸದಲ್ಲಿ ಕಳೆದ ಮೇ [illegible] ನೇ ಶನಿವಾರ ಪ್ರಾತಃಕಾಲ ಒಂಭತ್ತುವರೆ ಘಂಟೆಯ ಸಮಯದಲ್ಲಿ ಬಡೋದಾ ಸಂಸ್ಥಾನದ ಶ್ರೀಮನ್ಮಹಾರಾಜ ಗಾಯಕವಾಡರವರಿಂದ ನಡೆಯಿಸಲ್ಪಟ್ಟಿತು. ಸಂಸ್ಥಾನದ ದೊಡ್ಡ ದೊಡ್ಡ ಅಧಿಕಾರಿಗಳೂ, ಪ್ರಜಾ ಪ್ರಮುಖರೂ, ಪ್ರೇಕ್ಷಕರೂ, ವಿದ್ಯಾರ್ಥಿಗಳೂ ಬಹು ಸಂಖ್ಯೆಯಲ್ಲಿ ಬಂದು ಸೇರಿದ್ದರು

ಈ ಪರಿಷತ್ತಿನ ಸ್ಥಾಪಕರಾದ ಮತ್ತು ಸಂಸ್ಕೃತದ ಪುನರುಜ್ಜೀವನಕ್ಕಾಗಿ ವಿಶೇಷ ಶ್ರಮವನ್ನು ವಹಿಸಿ ಕುರ್ತಕೋಟಿಯ ಮಹಾಭಾಗವತರೆಂದು ಪ್ರಸಿದ್ಧರಾದ ಶ್ರೀಯುತ ಲಿಂಗೇಶಶರ್ಮ ವಿದ್ಯಾಭೂಷಣರವರು ಮೊದಲು ಪರಿಷತ್ತಿನ ಉದ್ದೇಶಾಭಿಪ್ರಾಯಗಳನ್ನು ವಿವರಿಸುವ ಅಭಿನಂದನ ಪತ್ರಿಕೆಯನ್ನು ಓದಿದರು. ಪೌರ್ವಾತ್ಯರೂ ಪಾಶ್ಚಿಮಾತ್ಯರೂ ಒಬ್ಬರೊಬ್ಬರ ಬಲವನ್ನೂ ಮಹತ್ವವನ್ನೂ ತಿಳಿದು ಪ್ರಯೋಜನ ಹೊಂದುವಂತೆ ಸೌಹಾರ್ದ್ರವನ್ನು ಬೆಳೆಯಿಸುವುದೇ ಈ ಸಂಸ್ಥಾಪನೆಯ ಉದ್ದೇಶವೆಂದೂ, ಇದು ಶ್ರೀಮನ್ಮಹಾರಾಜರವರ ಜನ್ಮೋತ್ಸವದ ಕಾಲದಲ್ಲಿ ಕಳೆದ ವರ್ಷ ಸ್ಥಾಪಿಸಲಾಯಿತೆಂದೂ, ದೇಶೀಯ ಮಹನೀಯರ ಸಹಾಯವು ಇದಕ್ಕೆ ಚೆನ್ನಾಗಿ ದೊರೆತಿರುವುದೆಂದೂ ವ್ಯಾಖ್ಯಾನಗಳನ್ನು ಮಾಡಿಸುವ, ಮತ್ತು ತ್ರೈಮಾಸಿಕ ಮೂಲವಾಗಿ ಸಂಸ್ಕೃತವನ್ನು ಪುನರುಜ್ಜೀವಿಸುವಂತೆ ಮಾಡುವ ಕಾರ್ಯವು ಈಗ ಕೈಕೊಳ್ಳಲಾಗುವುದೆಂದೂ ಅದರಲ್ಲಿ ಹೇಳಲಾಗಿದ್ದಿತು. ಅನಂತರ ಪೂನಾ ಪಟ್ಟಣದ ಫರ್ಗ್ಯೂಸನ್ ಕಾಲೇಜಿನ ಪ್ರೊಫೆಸರ್ ಮಿ' ಆರ್ ಡಿ. ರಾನಡೆ ಎಂ ಎ ಯವರು ಉಪನಿಷತ್ತುಗಳ ವಿಚಾರವಾಗಿ ಬೋಧಪ್ರದವಾದ ಉಪನ್ಯಾಸವನ್ನು ಮಾಡಿದರು. ಸೃಷ್ಟಿಯ ವಿಷಯದಲ್ಲಿ ಭಾರತೀಯರಿಗೂ, ಗ್ರೀಕರಿಗೂ ಏಕರೀತಿಯಾದ ಅಭಿಪ್ರಾಯಗಳಿರುವುವೆಂತಲೂ, ಪ್ರಪಂಚವು ಜಲದಿಂದಲೂ, ಆಕಾಶದಿಂದಲೂ, ಶೂನ್ಯದಿಂದಲೂ ಉತ್ಪತ್ತಿಯಾಯಿತೆಂದು ಗ್ರೀಕರು ಬಿನ್ನಬಿನ್ನವಾದ ಅಭಿಪ್ರಾಯವುಳ್ಳವರಾಗಿರುವಂತೆಯೇ ಭಾರತೀಯರ ಉಪನಿಷತ್ತುಗಳಲ್ಲಿಯೂ ಬಿನ್ನಾಭಿಪ್ರಾಯಗಳಿರುವುವೆಂತಲೂ, ಇದರಲ್ಲಿ ಒಬ್ಬರ ಅಭಿಪ್ರಾಯಗಳನ್ನು ಮತ್ತೊಬ್ಬರು ಅನುಸರಿಸಿದರೆಂಬುದನ್ನಾಗಲಿ, ಅಥವಾ ಈ ಅಭಿಪ್ರಾಯಗಳು ಆಯಾ ಜನಾಂಗದವರಲ್ಲಿ ಸ್ವತಂತ್ರವಾಗಿ ಹುಟ್ಟಿ ಬೆಳೆದುವೆಂಬುದನ್ನಾಗಲಿ ಹೇಳುವುದು ತನ್ನ ಕರ್ತವ್ಯವಲ್ಲವೆಂತಲೂ, ಮತ್ತಾದ ಇನ್ನೂ ಅನೇಕ ಉಪಯುಕ್ತ ವಿಷಯಗಳನ್ನು ಮಿ॥ ರಾನಡೆಯವರು ಹೇಳಿದರು.

ತರುವಾಯ ಅಧ್ಯಕ್ಷರಾಗಿದ್ದ ಗಾಯಕವಾಡ ಮಹಾರಾಜರವರು ರಸಪರಿಪುಷ್ಟವಾದ ಭಾಷಣವನ್ನು ಕೊಡುತ್ತ ಇಂತೆಂದರು — "ಮಹಾಶಯರೆ, ಮಿ॥ ರಾನಡೆಯವರಿಂದ ಕೊಡಲ್ಪಟ್ಟ ಉಪನ್ಯಾಸದ ವಿಚಾರವಾಗಿ ಮಾತನಾಡಬೇಕೆಂಬ ಅಭಿಪ್ರಾಯವು ನಾವು ಇಲ್ಲಿಗೆ ಬಂದಾಗ ಇರಲಿಲ್ಲ ವಿಷಯಗಳನ್ನು ತಿಳಿದುಕೊಳ್ಳುವುದಕ್ಕಾಗಿ ಒಂದೇ ಹೊರತು ನಮ್ಮ ಅಭಿಪ್ರಾಯಗಳನ್ನು ಸೂಚಿಸುವುದಕ್ಕಾಗಿ ಅಲ್ಲ. ಮಿ॥ ರಾನಡೆಯವರ ಉಪನ್ಯಾಸವು ಪ್ರಾಮುಖ್ಯವಾದುದಾಗಿಯೂ, ಸರ್ವರಿಗೂ ಪ್ರಯೋಜನಕಾರಿಯಾದುದಾಗಿಯೂ ಇದೆ ಉಪನಿಷತ್ತುಗಳಲ್ಲಿ ಎಲ್ಲಾ ವಿಧವಾದ ವಿಷಯಗಳೂ ಚರ್ಚಿಸಲ್ಪಟ್ಟಿವೆ, ಅವುಗಳಲ್ಲಿ ಜಗತ್ತೂ ಜೀವಾತ್ಮರುಗಳೂ, ಅವುಗಳ ಪರಸ್ಪರ ಸಂಬಂಧ ಭೇದಗಳೂ ಸಮಾವೇಶವಾಗಿವೆ ಸ್ವಾಭಾವಿಕವಾಗಿ ಮನುಷ್ಯನಲ್ಲಿ ತಾನಾರೆಂಬ ವೃತ್ತಿಗಳು ಉದ್ಭವವಾಗುತ್ತವೆ. ಆಗ ತತ್ವಶಾಸ್ತ್ರವು ತಲೆಹಾಕಿ, ಆಶ್ಚರ್ಯವನ್ನು ಹುಟ್ಟಿಸುತ್ತದೆ. ಆ ಆಶ್ಚರ್ಯವು ಚಾರ್ವಾಕ ತತ್ವಕ್ಕೂ, ಚಾರ್ವಾಕ ತತ್ವವು ಶೂನ್ಯವಾದಕ್ಕೂ, ಶೂನ್ಯವಾದವು ಗೂಢವಾದಕ್ಕೂ, ಗೂಢವಾದವು ವಿಶ್ವದೇವತಾ ವಾದಕ್ಕೂ, ವಿಶ್ವದೇವತಾವಾದವು ಸಂಶಯಕ್ಕೂ ಅನುಕ್ರಮವಾಗಿ ಸಾಗಿಹೋಗುವುವು ಜನಗಳ ವಿಧವಿಧವಾದ ಬುದ್ಧಿಕೌಶಲ್ಯಾನುಸಾರವಾಗಿ ಸದ್ವಸ್ತುವು ವಿಧವಿಧವಾಗಿ ವರ್ಣಿಸಲ್ಪಟ್ಟಿರುವುದು ಆದರೆ ಈ ವಿವಿಧ ವ್ಯಾಖ್ಯಾನಗಳಿಗೆಲ್ಲಾ ಐಕಮತ್ಯವು ಆಧಾರವಾಗಿರುವುದು. ಇಂತಹ ವಿಷಯಗಳಲ್ಲಿ ನಮ್ಮಂತಹವರು ಹೆಚ್ಚು ಮಾತನಾಡುವುದು ತಪ್ಪು. ಭರತಖಂಡವು ಆರ್ಷೇಯದಿಂದಲೂ ವೈದಿಕ ವೃತ್ತಿಯ ದೇಶವಾಗಿದೆ. ಆದಕಾರಣ ಅಹಂಕಾರ ಮಮಕಾರಗಳನ್ನು ಬಿಟ್ಟು, ನಮ್ಮ ಪ್ರಾಚೀನ ತತ್ವ ಶಾಸ್ತ್ರಾಧ್ಯಯನಮಾಡುವುದು, ನಮ್ಮ ದೇಶದ ತರುಣರೆಲ್ಲರಿಗೂ ಕರ್ತವ್ಯವಾಗಿದೆ. ನಮ್ಮ ಯೌವನಸ್ಥರು ಭೂತಕಾಲದ ವ್ಯಾಪಾರಗಳನ್ನು ಪ್ರಸ್ತುತ ಕಾಲದ ದೃಷ್ಟ್ಯಾ ಪರಿಶೀಲಿಸಿ, ಅವುಗಳನ್ನು ತಮ್ಮ ಮುಂದಣ ಜೀವನದಲ್ಲಿ ಆಚರಣೆಗೆ ತರಬೇಕು. ಮಹಾ ಭಾಗವತರು ಅಭಿನಂದನ ಪತ್ರಿಕೆಯಲ್ಲಿ ಬಡೋದಾ ಸಂಸ್ಥಾನದ ಸಂಸ್ಕೃತ ಕಾಲೇಜಿನ ವಿಷಯವನ್ನೂ, ವಿದ್ಯಾಪ್ರಸಾರಣೆಯಲ್ಲಿ ನಮಗಿರುವ ಆಸಕ್ತಿಯನ್ನೂ ಕುರಿತು ಸೂಚಿಸಿರುವರು. ನಮ್ಮ ದೇಶಕ್ಕೆ ಭಾರತೀಯನು ಮಾಡಬೇಕಾದ ಅತ್ಯುತ್ತಮ ಸೇವೆಯು ವಿದ್ಯಾಪ್ರಸಾರದ ಮೂಲಕವೇ ಆಗಿದೆ. ಅನುಕೂಲ ಸ್ಥಿತಿಯಲ್ಲಿರುವವರು [illegible] ಯ ಮಾಡಬೇಕಾದುದು ಕರ್ತವ್ಯವಾಗಿದೆ. [illegible]

ಒಂದು ಪಂಗಡದಲ್ಲಿಯೇ ಆಗಲಿ, ಪ್ರತಿಯೊಬ್ಬನೂ ಅವನೆಷ್ಟೇ ಕೀಳ್ದೆಸೆಯಲ್ಲಿರಲಿ— ವಿದ್ಯಾಭ್ಯಾಸವನ್ನು ಮಾಡಬೇಕು. ಮಾನಸಿಕ ಮತ್ತು ಶಾರೀರಿಕ ಶಕ್ತಿಗಳನ್ನು ಅಭಿವೃದ್ಧಿಗೊಳಿಸುವುದರಲ್ಲಿ ತಿಳಿವಳಿಕೆಯು ರಚನಾ ವಿಶೇಷವಾಗಿದೆ. ವಿದ್ಯಾಭ್ಯಾಸವು ತಿಳಿವಳಿಕೆಯನ್ನು ಹುಟ್ಟಿಸುವುದು. ಆದುದರಿಂದ ಪ್ರತಿಯೊಬ್ಬರೂ ವಿದ್ಯಾಭ್ಯಾಸ ಮಾಡಬೇಕು ಸರ್ವರಿಗೂ ತಿಳಿವಳಿಕೆಯಾಗುವಂತೆ ಮಿ|| ರಾನಡೆಯವರು ಕೊಡುವಂತಹ ಉಪನ್ಯಾಸಗಳು ಪ್ರಚುರಪಡಿಸಲಾಗಬೇಕು. ತಿಳಿವಳಿಕೆಯು ಗುಡಿಸಲುಗಳಿಗೂ ಪ್ರವೇಶಿಸುವಂತಾಗಬೇಕು ಏಕೆಂದರೆ, ಗುಡಿಸಲುಗಳು ಅರಮನೆಗಳಿಂದು ತ್ಪನ್ನವಾಗುವುದಿಲ್ಲ ಆದರೆ ಗುಡಿಸಲುಗಳಿಂದ ಅರಮನೆಗಳುತ್ಪನ್ನವಾಗುತ್ತವೆ"— ಎಂದು ಅಪ್ಪಣೆ ಕೊಡಿಸಿದ. ಬಳಿಕ ಪರಿಷತ್ತಿನ ಸ್ಥಾಪಕರನ್ನು ವಂದಿಸಿದರು.

ಅನಂತರ ಸರ್ದಾರ್ ಎಂ ಕಾಂತರಾಜ ಅರಸ್, ಸಿ ಎಸ್ ಐ, ಯವರು ಮಹಾರಾಜರವರಿಗೆ ವಂದನೆಗಳನ್ನು ಸಮರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು ಪ್ರೊ ರಾನಡೆಯವರು ಉಪನಿಷದ್ವಿಚಾರ್ರವಾಗಿ ಕೊಟ್ಟ ಹಲವು ಉಪನ್ಯಾಸಗಳು ಅಚ್ಚಾಗುವುವೆಂದು ತಿಳಿಯಬರುತ್ತಿದೆ ಸಂಸ್ಕೃತದ ಮತ್ತು ದೇಶಭಾಷೆಗಳ ಅಭ್ಯುದಯದಲ್ಲಿಯೇ ಭಾರತವರ್ಷದ ಉತ್ತರಾಭ್ಯುದಯವೂ ಇರುವುದೆಂದು ನೆರೆನಂಬಿದವರಾದ ನಾವು ಶ್ರೀ ಮಹಾಭಾಗವತರ ಪ್ರಯತ್ನಗಳನ್ನು ಶ್ಲಾಘಿಸಿ ಈ ಪರಿಷತ್ತು ಚಿರಸ್ಥಾಯಿಯಾಗಲೆಂದು ಕೋರುವೆವು

ಸಹಕಾರದ ಒಂದು ಮಹತ್ಕಾರ್ಯ.

(ಪುತ್ತೂರು ಪರಸ್ಪರ ಸಹಾಯಕ ಸಂಘದಲ್ಲಿ ನಡೆದುದು.)

ಸ್ವರ್ಗೀಯ ಮಹಾ ಪುರುಷರಾದ ಗೋಖಲೆಯವರಿಂದ ಸ್ಥಾಪಿಸಲ್ಪಟ್ಟು ಹಿಂದೂಸ್ಥಾನವನ್ನು ಉದ್ಧಾರಮಾಡಲು ಬದ್ಧಕಂಕಣರಾದ ಭಾರತ ಸೇವಾ ಸಮಾಜದವರಿಗೆ (Servants of India) ವರ್ಷಂಪ್ರತಿ ಶಾಶ್ವತವಾಗಿ ದ್ರವ್ಯಸಹಾಯವನ್ನು ಮಾಡುವುದಕ್ಕಾಗಿ ಪುತ್ತೂರು ಪರಸ್ಪರ ಸಹಾಯಕ ಸಂಘದವರು ಒಂದು ನವೀನವಾದ ಉಪಾಯವನ್ನು ಕಂಡುಹಿಡಿದಿರುತ್ತಾರೆ ಇದೇ ತಿಂಗಳ ತಾ. ೧ನೇ ಆದಿತ್ಯವಾರ ದಿವಸ ಜರಗಿದ ಈ ಸಂಘದ ಮಹಾಸಭೆಯಲ್ಲಿ ಸಂಘದ ಅಧ್ಯಕ್ಷರು ಗೋಖಲೆಯವರ ಸತ್ಕಾರ್ಯಗಳ ವಿಷಯವಾಗಿ ಒಂದು ಉಪನ್ಯಾಸ ಮಾಡಿದ್ದಲ್ಲದೆ, ಆ ಮಹಾತ್ಮರ ಚಿರಸ್ಮಾರಕವಂತಿರುವ ಭಾರತ ಸೇವಾ ಸಮಾಜದವರು ಭಾರತೀಯರ ಉತ್ತರೋತ್ತರಕ್ಕಾಗಿಯೂ, ಕ್ಷಾಮಡಾಮರಗಳು ಹಿಂದೂಸ್ಥಾನದೊಳಗೆ ಪ್ರಾಪ್ತವಾದ ಸಮಯದಲ್ಲಿ ಪೀಡಿತ ಜನರನ್ನು ಅವರ ಸಂಕಷ್ಟಗಳಿಂದ ಮೇಲಕ್ಕೆತ್ತುವುದಕ್ಕಾಗಿಯೂ, "ನೇಶನಲ್ ಕೊಂಗ್ರೆಸ್" ಎಂಬ ರಾಷ್ಟ್ರೀಯ ಸಭೆಯ ಏರ್ಪಾಟಿನಲ್ಲಿ ಮತ್ತು ಇತರ ಎಲ್ಲಾ ವಿಧದ ಮಹಾಕಾರ್ಯಗಳಲ್ಲಿ ಮಾಡುತ್ತಿರುವ ಸತ್ಪ್ರಯತ್ನಗಳ ವಿಷಯವಾಗಿ ಸವಿಸ್ತಾರವಾಗಿ ಮಾತನಾಡಿದರು ಮತ್ತು ಈ ರೀತಿ ಸ್ವಾರ್ಥತ್ಯಾಗ ಪೂರಿತವಾದ ಸೌಕರ್ಯಗಳನ್ನು ಪ್ರತಿಫಲದ ಮೇಲೆ ದೃಷ್ಟಿ ಇಡದೆ ತಮ್ಮ ಮನೋವಾಕ್ಕಾಯಗಳಿಂದ ಭಾರತಮಾತೆಯ ಸೇವೆಯಲ್ಲೇ ಮಗ್ನರಾಗಿ ನಮ್ಮ ಏಳಿಗೆಯ ಕಾರ್ಯದಲ್ಲಿ ಕಟಿಬದ್ಧರಾದ ಭಾರತ ಸೇವಾ ಸಮಾಜದವರಿಗೆ ಯಾವ ರೀತಿಯಲ್ಲಾದರೂ ಶಾಶ್ವತವಾಗಿ ದ್ರವ್ಯಸಹಾಯ ಮಾಡುವುದು ನಮ್ಮಗಳ ಪ್ರಥಮ ಕರ್ತವ್ಯವೆಂಬುದಾಗಿಯೂ ವಿವರಿಸಿದರು. ಅದಲ್ಲದೆ ಮನಸ್ಸುಳ್ಳವರು ಸಂಘದಲ್ಲಿ "ಪ್ರೊವಿಡೆಂಟು ಡಿಪೋಜಿಟ್ಟಾ"ಗಿ ಇಟ್ಟ ಹಣದ ಮೇಲಿನ ಬಡ್ಡಿಯನ್ನು ವರ್ಷವರ್ಷವೂ ಭಾರತ ಸೇವಾ ಸಮಾಜಕ್ಕೆ ಕಳುಹಿಸುವ ಏರ್ಪಾಟು ಮಾಡಿದರೆ ಅದರಷ್ಟು ಉತ್ಕೃಷ್ಟವಾದ ಉಪಾಯವು ಬೇರೆ ಯಾವುದೂ ಇಲ್ಲವೆಂದು ಕೂಡಾ ಅಧ್ಯಕ್ಷರು ಸೂಚಿಸಿದರು.

ತಕ್ಷಣವೇ ಸಭಿಕರಲ್ಲಿ ಅನೇಕರು ಉತ್ಸಾಹದಿಂದೆದ್ದು ತಂತಮ್ಮ ಪ್ರೊವಿಡೆಂಟು ಡಿಪೋಜಿಟುಗಳ ಬಡ್ಡಿಯನ್ನು ವರ್ಷಂಪ್ರತಿ ಸಂಘದವರೇ ಭಾರತ ಸೇವಾ ಸಮಾಜಕ್ಕೆ ಕಳುಹಿಸಿಕೊಡುವಂತೆ ಮಾಡಬೇಕೆಂಬುದಾಗಿ ಸಂಘಕ್ಕೆ ಒಂದು ಅಧಿಕಾರ ಪತ್ರವನ್ನು ಬರೆದುಕೊಟ್ಟರು. ಆ ದಿವಸದ ಮಹಾಸಭೆಯಲ್ಲಿ ಹಾಜರು ಇಲ್ಲದೆ ಇದ್ದ ಅನೇಕರು ಈ ವರ್ತಮಾನವನ್ನು ಕೇಳಿ ಪ್ರತಿದಿನವೂ ಗುಂಪುಗುಂಪಾಗಿ ಸಂಘದ ಆಫೀಸಿಗೆ ಬಂದು ತಂತಮ್ಮ ಪ್ರೊವಿಡೆಂಟು ಡಿಪೋಜಿಟುಗಳ ಬಡ್ಡಿಯನ್ನು ಕೂಡಾ ಭಾರತ ಸೇವಾ ಸಮಾಜಕ್ಕೆ ಕಳುಹಿಸಬೇಕಾಗಿ ಸಂಘದ ಕಾರ್ಯದರ್ಶಿಗಳೊಡನೆ ಮನವಿಮಾಡಿಕೊಳ್ಳುತ್ತಾರಂತೆ! ಸತ್ಕಾರ್ಯಕ್ಕೆ ತಾವೂ ಸಹಾಯಮಾಡಬೇಕೆಂಬುದಾಗಿ ತಾವು ಮುಂದೆ ನಾವು ಮುಂದೆ ಎಂದು ಮುಂದರಿಸಿ ಬರುವ ಈ ಪುತ್ತೂರು ಪರಸ್ಪರ ಸಹಾಯಕ ಸಂಘದ ಮೆಂಬರುಗಳ ಉತ್ಸಾಹವೂ ಕುತೂಹಲವೂ ಸದಾ ಶ್ಲಾಘನೀಯವಾದುದಲ್ಲವೆ? ನಮ್ಮ ಜಿಲ್ಲೆಯ ಇತರ ಪರಸ್ಪರ ಸಹಾಯಕ ಸಂಘಗಳು ಸಹ ಈ ರೀತಿ ಭಾರತ ಸೇವಾ ಸಮಾಜಕ್ಕೆ ಕಿಂಚಿತ್ತಾದರೂ ಶಾಶ್ವತವಾದ ದ್ರವ್ಯಸಹಾಯ ಮಾಡಿದರೆ ಸಹಕಾರವೆ ನಮ್ಮ ಮಾತೃಭೂಮಿಯ ಏಳಿಗೆಯ ಕಾರ್ಯದಲ್ಲಿ ಮುಂದಾಳಾಗಿ ನಿಂತು ಅಭಯವನ್ನು ಕೊಟ್ಟ ಹಾಗೆ ಆದೀತು.

ಪತ್ರವ್ಯವಹಾರ.

ಹಿಂದು ವರ್ಗದಾರರಿಗೆ ವಿನಂತಿ.

ಸ್ವದೇಶಾಭಿಮಾನಿ ಪತ್ರ ಸಂಪಾದಕರಿಗೆ.

ಸ್ವಾಮಿಾ,

ಪ್ರಾಥಮಿಕ ಶಾಲೆಗಳ ಸಂಖೆಯನ್ನೇರಿಸಿ ವಿದ್ಯಾ ಪ್ರಸರಣ ಮಾಡುವುದು ಸರಕಾರದವರ ಉದ್ದೇಶವಾಗಿರುತ್ತದೆ ಖಾಸಗಿ ಶಾಲೆಗಳನ್ನಿಟ್ಟರೆ ಸರಕಾರದವರು ಉದಾರ ಹಸ್ತದಿಂದ ಗ್ರೇಂಟೂ ಕೊಡುತ್ತಾರೆ. ಆದುದರಿಂದ ಖರ್ಚು ಬಹಳ ತಗಲುವುದಿಲ್ಲ

೪೦ ವಿದ್ಯಾರ್ಥಿಗಳ ವರೆಗೆ ಒಬ್ಬ ಮಾಸ್ತರನು ಸಾಕು. ತಿಂಗಳಿಗೆ ೧೦ ರೂಪಾಯಿ ತಲಬು ಕೊಡುವುದಾದರೆ ಯೋಗ್ಯ ಮಾಸ್ತರನು ಸಿಕ್ಕುವನು. ಕೆಲವು ಕಡೆಯಲ್ಲಿ ರೂ ಲಕ್ಕೂ ಮಾಸ್ತರು ಸಿಕ್ಕುವರು.

ಅಂದಾಜು ಹುಟ್ಟುವಳಿ		ಅಂದಾಜು ಖರ್ಚು.	
೪೦ ವಿದ್ಯಾರ್ಥಿಗಳಿಂದ ಸರಾಸರಿ ಒಂದು ಆಣೆ ಪ್ರಕಾರ ಒಂದು ವರುಷಕ್ಕೆ ಸಿಕ್ಕಬಹುದಾದ ಫೀಸು	ರೂ ೩೦-೦-೦	ಮಾಸ್ತರನ ವರುಷಾವಧಿ ಸಂಬಳ	ರೂ. ೧೨೦-೦-೦
೪ಆಣೆ ಪ್ರಕಾರ ಕೆಪಿಟೇಶನ್ ಗ್ರೇಂಟು	ರೂ. ೨೦-೦-೦	ಸಾದಿಲವಾರು ...	ರೂ. ೧೨-೦-೦
ಮಾಸ್ತರನ ಬಗ್ಗೆ ಗ್ರೇಂಟು	ರೂ. ೪೨-೦-೦	ಕಟ್ಟೋಣದ ಬಾಡಿಗೆ	ರೂ. ೧೨-೦-೦
ಶೇಕಡಾ ೫೦ರ ಪ್ರಕಾರ ಹೆಚ್ಚಿಗೆ ಸಿಕ್ಕಬಹುದಾದ ಗ್ರೇಂಟು	ರೂ ೪೬-೦-೦	ಜುಮ್ಲಾ	ರೂ. ೧೪೪-೦-೦
ಜುಮ್ಲಾ	ರೂ. ೧೩೮-೦-೦		

ಕಟ್ಟೋಣವನ್ನು ವರ್ಗದಾರರೇ ಕಟ್ಟಿಸುವುದಾದರೆ ಅದರ ಅರ್ಧಾಂಶ ಖರ್ಚು ಮೇಜು, ಕುರ್ಚಿ, ಬೇಂಚು ಮೊದಲಾದ ಸಾಮಾನಿನ ಅರ್ಧಾಂಶ ಖರ್ಚು ಸರಕಾರದವರು ಗ್ರೇಂಟಾಗಿ ಕೊಡುತ್ತಾರೆ.

ಉಪಾಯಗಳು ಇಷ್ಟು ಸುಲಭವಾಗಿರುವಾಗ ನಮ್ಮ ಹಿಂದು ವರ್ಗದಾರರು ತಮ್ಮ ತಮ್ಮ ಹಳ್ಳಿಗಳಲ್ಲಿ ಸ್ವತಂತ್ರ ಶಾಲೆಗಳನ್ನಿಟ್ಟು ಏತಕ್ಕೆ ತಮ್ಮ ಸ್ವಾಭಿಮಾನ ಕಾಪಾಡಿಕೊಳ್ಳಕೂಡದು? ತಮ್ಮ ಮತವನ್ನೂ, ತಮ್ಮ ಕುಲವನ್ನೂ, ತಮ್ಮ ಹಿರಿಯರನ್ನೂ ದೂಷಿಸುವ ಉಪಾಧ್ಯಾಯರ ಹಂಗಿನಲ್ಲಿ ಏತಕ್ಕೆ ತಮ್ಮ ಮಕ್ಕಳನ್ನು ಹಾಕಬೇಕು?

ಮೇಲೆ ಕಾಣಿಸಿದ ನನ್ನ ಅಂದಾಜು ಪಟ್ಟಿಯಲ್ಲಿ ಅಥವ ಇತರ ಅಭಿಪ್ರಾಯದಲ್ಲಿ ತಪ್ಪು ಇರುವುದಾದರೆ ತಮ್ಮ ವಾಚಕರಲ್ಲಿ ಯಾರಾದರೂ ದಯಮಾಡಿ ತಿದ್ದಬಹುದು.

ತಾ 2-8-1915. ದಾಸುಭಟ್ಟ.

ಅಯ್ಯಾ ಪತ್ರಿಕಾಕರ್ತರೇ,

ನಮ್ಮಲ್ಲಿಯ ಪಂಚಮರ ಮಕ್ಕಳಿಗಾಗಿ ದಯಾಳು ಸರಕಾರದವರು ಕಳೆದ ಫೆಬ್ರವರಿ ತಿಂಗಳಲ್ಲಿ ಒಂದು ಶಾಲೆಯನ್ನು ಸ್ಥಾಪಿಸಿರುವರು ಮತ್ತು ಅದಕ್ಕಾಗಿ ಒಂದು ಕಟ್ಟೋಣ ಕಟ್ಟಿಸಿರುವರು. ಶಾಲೆಯ ಉಪಾಧ್ಯಾಯರನ್ನಾಗಿ ನೇಮಿಸಿದ ಮಿ| ಎಲ್. ಡಿ ಸೋಜರವರ ಪ್ರಯತ್ನದಿಂದ ಶಾಲೆಗೆ ವಿದ್ಯಾರ್ಥಿಗಳಂತೂ ಹೆಚ್ಚುತ್ತಲಿರುವರು. ಈಗಲೆ ಮೂವತ್ತನಾಲ್ಕು ವಿದ್ಯಾರ್ಥಿಗಳಿರುವರು. ವಿದ್ಯಾರ್ಥಿಗಳ ಹೆತ್ತವರು ಕೂಲಿ ಕೆಲಸದಿಂದಲೂ ಕಟ್ಟಿಗೆ ಮಾರಾಟದಿಂದಲೂ ತಮ್ಮ ತಮ್ಮ ಕುಟುಂಬದ ವ ಮಕ್ಕಳ ಜೀವನ ನಡಿಸುವದೇ ಕಷ್ಟವಾಗಿರುತ್ತ, ಶಾಲೆಗೆ ಹೋಗುವ ವಿದ್ಯಾರ್ಥಿಗಳಿಗೆ ಉಡುವುದು ಕೊಡುವರೆ ಹಣಕಾಸು ಎಲ್ಲಿ? ವಿದ್ಯಾರ್ಥಿಗಳು ಬರೆ ಕೌಪೀನವನ್ನು ಉಟ್ಟು ಶಾಲೆಗೆ ಸೇರುವದು ನಾಚಿಗೆಗೇಡಲ್ಲವೇ? ಅಯ್ಯಾ, ಮಹಮ್ಮದಿ ಮತಸ್ಥರಿಗಂತೂ ಈಗ ರಮಜಾನ ತಿಂಗಳು, ಈ ತಿಂಗಳಾಂತ್ಯದಲ್ಲಿ ಇಲ್ಲಿಯ ಸಾವಕಾರ ಮ. ರಾ. ರಾ. ಮೊಖದಂ ಇಸ್ಮಾಲಿ ಸಾಹೇಬರವರು ವರುಷಂಪ್ರತಿ ಬಡಬಗ್ಗರಿಗೆ ಅಕ್ಕಿ ಗಂಜಿ ವಸ್ತ್ರ ದಾನಮಾಡುವ ವಾಡಿಕೆ ಇರುತ್ತದೆಯಷ್ಟೆ. ಅದೇ ಸಮಯ ಪಂಚಮ ವಿದ್ಯಾರ್ಥಿಗಳಿಗೂ ಇವರಾಗಲೀ, ಪುತ್ತೂರಿನ ಇತರ ಗೃಹಸ್ಥರಲ್ಲಿ ಯಾರಾದರೂ ಶಾಲೆಗೆ ಹೋಗಲಿಕ್ಕೆ ಉಡುಪನ್ನು ಕೊಡುವ ಏರ್ಪಾಡು ಮಾಡಬೇಕಾಗಿ ವಿಜ್ಞಾಪಿಸುವ,

ಪುತ್ತೂರು.
ತಾ. ೩-ನೇ ಜುಲಾಯಿ ೧೯೧೫. } ಪಂಚಮ ವಿದ್ಯಾರ್ಥಿಗಳ ಹಿತಚಿಂತಕ.

ಯುದ್ಧ ಸಮಾಚಾರ.

ತಾ. 27ನೇ ಜುಲಾಯಿ

ಇಟಲಿಯ ಬಳಿಯ ಇರುವ ಪೆಲಗೋಸಾ ಎಂಬ ತಂತಿ ರಾಜ್ಯವಾದ ದ್ವೀಪವನ್ನು ಶತ್ರುಗಳಿಂದ ಹಿಡಿದು ಇಟಲಿಯವರು ಸ್ವಾಧೀನ ಮಾಡಿಕೊಂಡರು.

ಅಮೇರಿಕದವರ ಒಂದು ಹಡಗನ್ನೂ ಬ್ರಿಟಿಷರ ಒಂದು ಹಡಗನ್ನೂ ಶತ್ರುಗಳು ನೋರ್ತ್‌ಸೀಯಲ್ಲಿ ಮುಳುಗಿಸಿದರು

ರುಶ್ಯರ ನೀಮೆಶ್ ಪ್ರಾಂತ್ಯದಲ್ಲಿ ಮುಂದರಿಸಿದ ಜರ್ಮನರು ವಾರ್ಸೋ ಮುಂದುಗಡೆಯಲ್ಲಿ ನಿರೋಧಿಸಲ್ಪಟ್ಟಿದ್ದಾರೆಂದೂ ಫೋನ್ ಬುಲೋ ಎಂಬ ಜರ್ಮನ ಸೇನಾನಿಯನ್ನು ಅಡ್ಡಕಟ್ಟಿದ್ದಾರೆಂದೂ ಪೀಟ್ರೋಗ್ರಾಡ ಸಮಾಚಾರವಿದೆ

ಜರ್ಮನರು ಯುದ್ಧದಲ್ಲಿ ಮಾಡುವ ಕುಹಕೋಪಾಯಗಳನ್ನು ಮುರಿಯುವದಕ್ಕಾಗಿ ರುಶ್ಯದವರು ಇನ್ನೊಂದು ಬಗೆಯ ಹಂಚಿಕೆಯನ್ನು ಕಂಡುಹಿಡಿದಿರುತ್ತಾರೆ. ಸೈನ್ಯದವರು ನಿ ತಲ್ಲಿಯ ತಮ್ಮ ಮುಂದುಗಡೆ ಒಂದು ಹಳ್ಳವನ್ನು ತೋಡಿ ಅದರಲ್ಲಿ ಎಣ್ಣೆಯನ್ನೂ ಇತರ ಔಷಧಗಳನ್ನೂ ತುಂಬುವರು ಜರ್ಮನರ ಪಾಳಯದಿಂದ ವಿಷದ ಗಾಳಿಯು ಹೊರಡುವದಕ್ಕೆ ಪ್ರಾರಂಭವಾಗುತ್ತಲೇ ರುಶ್ಯರು ಈ ಔಷಧಿಗಳನ್ನೂ ಹೊತ್ತಿಸಿಬಿಡುವರು ಹೀಗೆ ಏಳುವ ಹೊಗೆಯು ಆ ವಿಷ ಗಾಳಿಯನ್ನು ಚದರಿಸಿಬಿಡುವದು. ಇತ್ತಿತ್ತಲಾಗೆ ಜರ್ಮನರು ವಿಷವಾಯು ಪ್ರಯೋಗವನ್ನು ನಿಲ್ಲಿಸಿ ಬಿಟ್ಟೇಬಿಟ್ಟಿದ್ದಾರೆ

ಸರ್ವಿಯವು ಮೆಲ್ಲನೇ ಕಣ್ಣುಬಿಟ್ಟಿದೆ. ಅಲ್ಲಿ ಹರಡಿದ್ದ ಸನ್ನಿಪಾತ ವ್ಯಾಧಿಯು ಹುಟ್ಟಡಗಿಹೋಯಿತು, ಸಾಹಿತ್ಯ ಸಾಮಗ್ರಿಗಳು ಬಂದು ಸೈನ್ಯವು ತಿರಿಗಿ ಎದ್ದುನಿಂತಿದೆ, ದೇಶದ ಪ್ರಾಂತ್ಯಗಳನ್ನು ಫ್ರೆಂಚ ವಾಯುವಿಮಾನಗಳೂ, ರಾಜಧಾನಿಯನ್ನು ನಮ್ಮವರ ಸೈನ್ಯದವರೂ ಭದ್ರವಾಗಿ ಕಾಯುತ್ತಿದ್ದಾರೆ. ಸರ್ವಿಯದ ಹತ್ತಿರ ಇನ್ನೂ ಇರುವ ೩ ಲಕ್ಷ ಸೈನ್ಯವು ಶತ್ರುಗಳ ಮೇಲೆ ದಾಳಿ ಇಡುವುದಕ್ಕೆ ಮುಂದರಿಸಿರುತ್ತದೆ.

ಆಫ್ರಿಕದಲ್ಲಿ ಜನರಲ್ ಬೋಥರು ಸೆರೆಹಿಡಿದ ಜರ್ಮನರ ಕೈಯಲ್ಲಿ ದೊರೆತ ಕೆಲವು ಭೂಪಟಗಳಲ್ಲಿ ಇಡೀ ದಕ್ಷಿಣ ಆಫ್ರಿಕವು ಜರ್ಮನರ ವಶವಾಯಿತೆಂತ ತೋರಿಸಿತ್ತು ಜರ್ಮನರು ನೀಗ್ರೊ ಜನರ ಮೇಲೆ ನಡಿಸಿದ ಅತ್ಯಾಚಾರಗಳನ್ನು ಕುರಿತು ಬೋಥರು ಹೇಳಿದ್ದೇನಂದರೆ, ಈ ಜರ್ಮನರ ಅಧಿಕಾರವೆಂದರೆ ನೀಗ್ರೊ ಜನರಿಗೆ ಬಡಿದ ಮಹಾಮ್ಮಾರಿ ೨೧,೦೦೦ ನೀಗ್ರೊಗಳನ್ನು ಈವರೆಗೆ ಅವರು ಕೊಂದುಹಾಕಿದರೆಂದು ಜರ್ಮನರೇ ಇಟ್ಟ ಲೆಕ್ಕದಿಂದಲೆ ಗೊತ್ತಾಗುತ್ತದೆ. ಯೂರೋಪ ಖಂಡದಲ್ಲಿ ಜರ್ಮನರನ್ನು ಸದೆಬಡಿಯುವುದಕ್ಕಾಗಿ ದಕ್ಷಿಣ ಆಫ್ರಿಕದವರು ಸ್ವಾರ್ಥಬಿಟ್ಟು ಈ ಯುದ್ಧದಲ್ಲಿ ಮೊಂದರಿಯಬೇಕು."

ತಾ 28ನೇ ಜುಲಾಯಿ

ಶತ್ರುಗಳಾದ ಜರ್ಮನರು ರುಶ್ಯದಲ್ಲಿನ ವಿಲ್ನಾ ಸ್ಥಳವನ್ನು ಸುತ್ತುಬಳಿಸಿ ಮುಂದರಿಸುವಷ್ಟರಲ್ಲಿ ಅವರನ್ನು ಮೆಲ್ಲಮೆಲ್ಲನೆ ಹಿಂದಕ್ಕೆ ಅಟ್ಟಿಬಿಟ್ಟಿದ್ದಾಯಿತು ನೇರೊ ಹೊಳೆಯನ್ನು ದಾಟಿಹೋದ ಜರ್ಮನರು ರುಶ್ಯರನ್ನು ಮುಂದೊತ್ತಿ ಹೋಗುತ್ತಿದ್ದಾರೆಂದು ಜರ್ಮನಿಯ ಕಡೆಯಿಂದ ವರ್ತಮಾನವಿದೆ ಜರ್ಮನರು ಯಾವ ಕಡೆಯಲ್ಲಿ ಹಾಯ್ದು ಹೋಗುತ್ತಿದ್ದರೂ ಅವರು ಉದ್ದೇಶಿಸಿದ ಸ್ಥಳಗಳನ್ನು ಹಿಡಿಯುವರೆ ಅಸಾಧ್ಯವಾಯಿತು

ಇಟಲಿಯವರು ತಕ್ಕಷ್ಟು ಮುಂದರಿಸುತ್ತಾರೆಂದೂ ಜೀವದಾಶೆಯಿಲ್ಲದೆ ಕಾದಾಡುತ್ತಾರೆಂದೂ ಆಸ್ಟ್ರಿಯದಿಂದ ಬಂದ ಸಮಾಚಾರ ಇದೆ.

ಹೀಗೆಯೇ ಫ್ರಾನ್ಸ್ ರಣರಂಗದಲ್ಲಿಯೂ ಇದೆ ಜಯಲಾಭವು ಒಂದೆರಡು ದಿವಸಗಳ ಮಾತಲ್ಲ ಶತ್ರುಸೈನ್ಯ ಮುಂಭಾಗವನ್ನು ಮೊದಲು ಕುಟ್ಟಿಕುಟ್ಟಿ ಪುಡಿಮಾಡಬೇಕು ತುರುಕರಿಗೆ ರಾತ್ರಿಯಲ್ಲಿ ಕಾದಾಡುವದೆಂದರೆ ಇಷ್ಟ. ಹೀಗಾದ್ದರಿಂದ ಅವರ ಫಿರಂಗಿಗಳನ್ನು ಹಾರಿಸುವುದರಲ್ಲಿ ಅವರಿಗಿರುವ ಬುದ್ಧಿಶೂನ್ಯತೆಯು ಸರಿ ವ್ಯಕ್ತವಾಗುವದಿಲ್ಲ.

ತಾ. 29ನೇ ಜುಲಾಯಿ.

ಜರ್ಮನರೂ ಆಸ್ಟ್ರಿಯನರೂ ರುಶ್ಯದಲ್ಲಿ ವಾರ್ಸೋ ಕಡೆಗೆ ಮುಂದರಿಯುತ್ತಾರೆ. ಆದರೆ ಹೆಜ್ಜೆಹೆಜ್ಜೆಗೂ ಅವರನ್ನು ರುಶ್ಯರು ತಂಡತಂಡವಾಗಿ ಹಿಂದಕ್ಕೆ ಕೆಡವಿಬಿಡುತ್ತಾರೆ. ವಾರ್ಸೋ ಪಟ್ಟಣದಿಂದ [illegible] ಮೈಲು [illegible] ರುಶ್ಯದಲ್ಲಿ ರುಶ್ಯರು ಕೊಂಚ ಹಿಮ್ಮೆಟ್ಟಿ [illegible] ರುಶ್ಯರೇ ಹೇಳುತ್ತಾರೆ.

ಫ್ರಾನ್ಸಿನಲ್ಲಿ ಜರ್ಮನರು ಆರ್ಗೋನಿನ ಮೇಲೆ ಆಕ್ರಮಿಸಿದ್ದನ್ನು ಫ್ರೆಂಚರು ಮುರಿದುಬಿಟ್ಟು ಜರ್ಮನರ ವಶದಲ್ಲಿದ್ದ ಮುನ್ಸಟರ್ ಬಳಿಯ ಎತ್ತರವಾದ ಸ್ಥಳಗಳನ್ನು ಕಿತ್ತುಕೊಂಡರು.

೨೬ನೇ ತಾರೀಕಿನಲ್ಲಿ ಇಟಲಿಯವರು ಪಿನಿಲಿ ಎಂಬುದನ್ನು ಹಿಡಿದುಕೊಂಡು ಮುಂಬರಿದರೂ ಎರಡು ಹೆಜ್ಜೆ ಹಿಂದರಿಯಬೇಕಾಯಿತು ಕಾರ್ಸೋ ಬಳಿಯಲ್ಲಿರುವ ಚಿಕ್ಕ ಚಿಕ್ಕ ಸ್ಥಳಗಳನ್ನು ಇಟಲಿಯವರು ಹಿಡಿದುಕೊಂಡು ಚಂಡವೇಗದಿಂದ ಹೋಗುತ್ತಿದ್ದಾರೆ

ತಾ 30ನೇ ಜುಲಾಯಿ

ಜರ್ಮನರು ರುಶ್ಯದಲ್ಲಿನ ನಾರ್ಯ್ಯ ಹೊಳೆ ದಾಟಿ ರುಶ್ಯರ ಗಣಿಗಳನ್ನು ಹಿಡಿದುಕೊಂಡರೂ ಸಾರ್ಥಕವಾಗಲಿಲ್ಲ ರುಶ್ಯರು ಅವನ್ನೇ ತಿರಿಗಿ ಸೆಳೆದ ಕೊಂಡರು ವಾರ್ಸೋ ಹತ್ತಿರ ಗಲಭೆ ಏನೂ ಇರುವದಿಲ್ಲ ಜರ್ಮನರು ಮಾತ್ರ ತಾವು ಹದಿನೆಂಟು ಮೈಲು ಇತ್ತಲಾಗಿ ಒಂದು ಚಿಕ್ಕ ಸ್ಥಳವನ್ನು ಹಿಡಿದುಕೊಂಡಿದ್ದಾರೆಂತ ಹೇಳುತ್ತಾರೆ ಆರಾರು ಸರ್ತಿ ನುಗ್ಗಿ ಬಂದ ಜರ್ಮನರನ್ನು ರುಶ್ಯರು ಹೊಡೆದೋಡಿಸಿದರು

ಸೌಚೇಜ್ ಎಂಬಲ್ಲಿ ಬೊಂಬುಗಳನ್ನು ಬಲವಾಗಿ ಹಾರಿಸಿ ಹಿಡಿದುಕೊಂಡ ಒಂದೆರಡು ಗಣಿಗಳನ್ನು ಜರ್ಮನರು ಫ್ರೆಂಚ ಸೈನಿಕರ ಎದುರಿಗೆ ತರಹರಿಸಲಾರದೆ ಬಿಟ್ಟು ಓಡಿದರು

ಎಸ್ಕ್ವಿತ್ ಪ್ರಭುಗಳು ಲಂಡನಿನಲ್ಲಿ ಮಾಡಿದ ಭಾಷಣದ ಮುಖ್ಯಾಂಶವೇನೆಂದರೆ — "ಈ ಯುದ್ಧದ ಪ್ರಗತಿಯು ಬೇರೆಯಾಗಿದೆ, ಸಹನಾಗುಣವು ಯಾವ ಜನಾಂಗದಲ್ಲಿ ಅಧಿಕವೆಂಬದನ್ನು ನೋಡುವುದಕ್ಕೆ ಪಂಥಗಟ್ಟಿದ ಯುದ್ಧವಿದು ಶತ್ರುಗಳ ರಭಸದ ಪ್ರವಾಹವನ್ನು ಮುಂದರಿಸ ಬಿಡದೆ ಅದನ್ನು ತಡಿಸಿದ ಅಣೆಕಟ್ಟಿನಂತಿರುವ ರುಶ್ಯ ಸೈನ್ಯದ ವೀರತ್ವವು ಕೊಂಡಾಡತಕ್ಕದಿದೆ ನಮ್ಮ ನೌಕಾಸೇನೆಯು ಯುದ್ಧ ಪ್ರಾರಂಭದಲ್ಲಿ ಇದ್ದದ್ದಕ್ಕಿಂತಲೂ ಈಗ ಬಲವತ್ತರವಾಗಿದೆ ಜರ್ಮನರ ನಾವೆಗಳಿಂದ ಬ್ರಿಟಿಷ ವ್ಯಾಪಾರಕ್ಕೆ ಮರಣಕರವಾದ ಅಥವಾ ಮಹತ್ತರವಾದ ಅಪಾಯವು ಬರಲಿಲ್ಲ ಹಿಟ್ಟಿಗೂ ಬಟ್ಟೆಗೂ ಬೇಕಾದ ಕಚ್ಚಾ ವಸ್ತು ಕಾಲ ಯುದ್ಧವಿಲ್ಲದ ಕಾಲದಲ್ಲಿ ಹ್ಯಾಗೋ ಹಾಗೆಯೇ ಧಾರಾಳವಾಗಿ ನಮ್ಮ ರಾಜ್ಯದಲ್ಲಿ ಹೊಯ್ಯುತ್ತಲಿದೆ ಜನರು ನಾನು ಮುಂದೆ ತಾನು ಮುಂದೆ ಎಂದು ಯುದ್ಧವಸನವನ್ನು ಧರಿಸಿಕೊಳ್ಳುವದಕ್ಕೆ ತವಕಿಸುತ್ತಾರೆ

ತಾ 31ನೇ ಜುಲಾಯಿ

ರುಶ್ಯದಲ್ಲಿ ನಾರ್ಯ್ಯೊ ಹೊಳೆಯ ಬಳಿಯಲ್ಲಿ ಉಭಯ ಪಕ್ಷದವರೂ ತಮ್ಮ ಪ್ರಾಣಗಳನ್ನು ಒತ್ತಟ್ಟಿಗಿಟ್ಟು ಕಾದಾಡುತ್ತಾರೆ ಈಗ ಒಬ್ಬರು ಏಳುತ್ತಾರೆ ಒಬ್ಬರು ಬೀಳುತ್ತಾರೆ ಇನ್ನೊಬ್ಬರು ಏಳುತ್ತಾರೆ ಮತ್ತೊಬ್ಬರು ಬೀಳುತ್ತಾರೆ ವಾರ್ಸೋ ಪಟ್ಟಣದ ತೆಂಕುಕಡೆಯಲ್ಲಿ ನಡೆದ ಕದನವು ಹುಟ್ಟಾಯಿತು ಜರ್ಮನರ ಸಹಾಯಕ್ಕೆ ಬರುತ್ತಿದ್ದ ಆಸ್ಟ್ರಿಯಾನರ ಪ್ರಯತ್ನಗಳನ್ನು ರುಶ್ಯರು ಕಡಿದುಬಿಟ್ಟರೆಂಬದಾಗಿ ಜರ್ಮನರೇ ಹೇಳುತ್ತಾರೆ"

ಆರ್ಗೋನ್ ಹತ್ತಿರ ಬೊಂಬ ಜಗಳಗಳೂ ಟೋರ್ಪೆಡೋ ಕಲಹಗಳೂ ಇದ್ದವೆಂದೂ, ಫ್ರೆಂಚರು ಹಿಡಿದುಕೊಂಡ ಒಂದೆರಡು ಸ್ಥಳಗಳನ್ನು ಎಳಕೊಳ್ಳುವದಕ್ಕೆ ಹೋದ ಜರ್ಮನರನ್ನು ಹಿಂದಕ್ಕೆ ಓಡಿಸಿಬಿಟ್ಟರೆಂದೂ, ಸರ್ ಜೋನ್ ಫ್ರೆಂಚರು ಸಮಾಚಾರವನ್ನು ಕಳುಹಿಸಿದ್ದಾರೆ

ಜುಲ್ಯ ೨೮ರಲ್ಲಿ ಇಟಲಿಯವರ ಬಾಯಿಯಲ್ಲಿ ಇದ್ದ ಒಂದೆರಡು ಸ್ಥಳಗಳನ್ನು ಕಿತ್ತುಬಿಡುವದಕ್ಕೆ ಹೋಗಿ ಆಸ್ಟ್ರಿಯದವರು ತುಂಬಾ ನಷ್ಟಗೊಂಡು ಹಿಂದೆ ಹೋದರು

ತಾ 1ನೇ ಆಗೋಸ್ತು.

ಶತ್ರುಗಳು ರುಶ್ಯರಲ್ಲಿ ವಿಸ್ಟುಲಾ ನದಿಯನ್ನು ಕಳೆದು ವಾರ್ಸೋ ಪಟ್ಟಣವನ್ನು ಸಮೀಪಿಸಿ ಅಲ್ಲಿಯ ರೈಲ್ವೆಯನ್ನು ಕಳಚಿಬಿಟ್ಟರು ಅಂಥಾ ಪ್ರಸಂಗ ಬಂದರೆ ವಾರ್ಸೋ ಪಟ್ಟಣವನ್ನು ತೊರೆದುಬಿಟ್ಟು ರುಶ್ಯರು ಇನ್ನೂ ಪೂರ್ವಕ್ಕೆ ಹೋಗಿ ನಿಂತುಕೊಳ್ಳುವದಕ್ಕೆ ಸಿದ್ಧರಾಗುತ್ತಾರೆ ಎಂದು ಪೆಟ್ರೊಗ್ರಾಡಿನ ಸಮಾಚಾರವಿದೆ ಶತ್ರುಗಳು ರುಶ್ಯದಲ್ಲಿ ಒತ್ತಿ ಒತ್ತಿ ಮುಂದರಿಸಿದರೂ ರುಶ್ಯರು ಅವರಿಗೆ ಹೆಜ್ಜೆಹೆಜ್ಜೆಗೂ ಜಗಳಕೊಡುತ್ತಾ, ಅವಶ್ಯವಿದ್ದರೆ ಹಿಂದೆ ಹಿಂದೆ ಸರಿಯುತ್ತಿದ್ದಾರೆ

ಫ್ರಾನ್ಸಿನಲ್ಲಿ ಜರ್ಮನರು ಅಗ್ನಿ ಅಸ್ತ್ರಗಳನ್ನು (Flame projectors) ಹಾರಿಸಿ ನಮ್ಮ ಸೈನ್ಯದ ಮುಂದಿನ ಸಾಲನ್ನು ಸ್ವಲ್ಪ ಭೇದಿಸಿ ಹಿಡಿದುಕೊಂಡ ಗಣಿಗಳನ್ನು ನಾವು ಹಟಹಿಡಿದು ತಿರಿಗಿ ಕೈಕೊಂಡೆವು. ಒಂದು ವಾಯುನಾವೆಯ ಪಡೆಯು ಜರ್ಮನಿಯ ಫ್ರೀಬೂರ್ಗ ಎಂಬ ಊರಿನ ಮೇಲೆ ೪೦ ಬೊಂಬುಗಳನ್ನೂ ಇನ್ನೊಂದು ಪಡೆಯು ಸ್ಟ್ರಾಸ್‌ಬರ್ಗ ಪ್ರಾಂತದ ಮೇಲೆ ಅನೇಕ ಬೊಂಬುಗಳನ್ನೂ ಇಳಿಯಬಿಟ್ಟು ಹಲವುಬಗೆಯಲ್ಲಿ ನಷ್ಟನಾಶವನ್ನು ಮಾಡಿದರು.

ಪ್ರಸ್ತುತದ ಯುದ್ಧವನ್ನು ಕುರಿತು ರೋಮಿನ ಪ್ರಸ್ತುತ ಪೋಪಗುರುಗಳಿಗೆ ಇರುವ ಅಭಿಪ್ರಾಯವು ಅವರ ಸಂಸ್ಥಾನದಿಂದ ಹೊರಡುವ ಪತ್ರಿಕೆಯಲ್ಲಿ ಪ್ರಕಟವಾಗಿದೆ "ಈ ಯುದ್ಧವು ಪ್ರಾರಂಭವಾಗಿ ಇವತ್ತಿಗೆ ಒಂದು ವರ್ಷವಾಯಿತು. ಈ ಯುದ್ಧದಲ್ಲಿ ಸೇರಿದವರು ಪರಸ್ಪರ ಶತ್ರುನಾಶವನ್ನು ಮಾಡಬೇಕೆಂದಿರುವ ದುರಾಶೆಯನ್ನು ಬಿಸುಟು ಇಂಥಾ ಆಶೆಯನ್ನು ಖಡ್ಗಮೂಲಕವಾಗಿಯೇ ಸಾಧಿಸಬೇಕೆಂಬ ದುರಭಿಪ್ರಾಯವನ್ನು ಬಿಟ್ಟು ಬಿಟ್ಟು, ಯುದ್ಧವನ್ನು ಸಮಾಪ್ತಗೊಳಿಸಬೇಕೆಂಬ ಹೃದಯಪೂರ್ವಕವಾದ ಉದ್ಗಾರವು ಅದರಲ್ಲಿದೆ ಜನಾಂಗಗಳು ಶತ್ರುಬಾಧೆಗೆ ಸಿಕ್ಕು ಬಿದ್ದು ಅವಮಾನಿತರಾಗಿ ಸಾವುಗೊಂಡರೂ ನಿಜವಾಗಿಯೂ ಸಾಯುವುದಿಲ್ಲ ಆದರೆ ತಮ್ಮಲ್ಲಿದ್ದ ದ್ವೇಷವನ್ನೂ ಪ್ರತೀಕಾರದ ಆಶೆಯನ್ನೂ ಕುಲಪರಂಪರೆಯಾಗಿ ಕೊಡುತ್ತಾ ಏಟಿಗೆ ಪ್ರತಿಯಾಗಿ ಏಟನ್ನು ಕೊಡುವುದಕ್ಕೆ ಹವಣಿಸುತ್ತವೆ ಹೀಗಾದ್ದರಿಂದ ಎಲ್ಲರೂ ಸಂತುಷ್ಟರಾಗುವ ರೀತಿಯಲ್ಲಿ ತಮ್ಮ ತಮ್ಮ ಆಶಯಗಳನ್ನು ತಿಳಿಯಪಡಿಸುವಂತೆಯೂ ಅಭಿಪ್ರಾಯಗಳನ್ನು ಗೊತ್ತುಹಚ್ಚುವಂತೆಯೂ ಒಂದು ಮಾರ್ಗವನ್ನು ಪ್ರತ್ಯಕ್ಷವಾಗಿ ಆಗಲಿ ಪರೋಕ್ಷವಾಗಿ ಆಗಲಿ ಯಾಕೆ ತೋರಿಸಿಕೊಡಬಾರದು? ಯುದ್ಧವನ್ನು ಮುಗಿಸಿ ಸಮಾಧಾನವನ್ನು ಮಾಡಬೇಕೆಂದು ಕರೆಯುವ ನಮ್ಮ ಕಂಠಧ್ವನಿಯನ್ನು ಕೇಳುವರೆ! ಆದ್ದರಿಂದ ಶಾಂತತೆಯನ್ನು ಆಶಿಸುವ ನಮ್ಮ ಸ್ನೇಹಿತರೆಲ್ಲರೂ ಈ ಯುದ್ಧವನ್ನು ಕೊನೆಗಾಣಿಸಿ ಧರ್ಮಸಾಮ್ರಾಜ್ಯವನ್ನು ಪುನಃಸ್ಥಾಪಿಸುವುದರಲ್ಲಿಯೂ ನಮಗೆ ಕೈಕೊಡಬೇಕೆಂದು ನಾವು ಕರಿಯುತ್ತೇವೆ ಪರಸ್ಪರ ಹಕ್ಕುಗಳಿದ್ದರೂ ಅವನ್ನು ಖಡ್ಗಧಾರೆಯಿಂದ ತೀರಿಸಿಕೊಳ್ಳುವುದಕ್ಕೆ ಯತ್ನಿಸದೆ, ಧರ್ಮಬಲದಿಂದಲೂ ಸತ್ಯಬಲದಿಂದಲೂ ಸಾಧಿಸಬೇಕೆಂದೂ ನಾವು ಘೋಷಿಸುತ್ತೇವೆ."

ಪೋಪಗುರುಗಳ ಈ ಅಭಿಪ್ರಾಯಕ್ಕೆ ಪರವಾಗಿ ಬ್ರಿಟನಿನಲ್ಲಿ ಈ ವರೆಗೆ ಯಾರ ಸೊಲ್ಲೂ ಹೊರಡಲಿಲ್ಲ ಈ ಯುದ್ಧದಲ್ಲಿ ಕೈಹಾಕಿದವರೆಲ್ಲರೂ ಇದಕ್ಕೆ ಉತ್ತರವಾದಿಗಳೆಂಬ ಅವರ ಸೂಚಿತಾಭಿಪ್ರಾಯವನ್ನು ಬ್ರಿಟನಿನಲ್ಲಿ ಎಲ್ಲರೂ ರೋಷದಿಂದ ಧಿಕ್ಕರಿಸಿದರು ಪ್ರಕೃತವಲ್ಲ ನಡೆದ ದುಷ್ಕೃತ್ಯಗಳು ಮುಂದೆ ಎಂದಾದರೂ ಅಸಾಧ್ಯವಾಗುವಂತೆ ಮಾಡಿದ ಹೊರತು ಒಪ್ಪಂದದ ಮಾತನ್ನು ಆಡುವುದೇ ವ್ಯರ್ಥವೆಂಬುದಾಗಿ ಬ್ರಿಟನಿನಲ್ಲಿ ಸರ್ವರ ಅಭಿಪ್ರಾಯ ವಾಗಿದೆ

ಯುದ್ಧವು ನಮಗೆ ಜಯಕಾರಿಯಾಗುವಂತೆ ಅದನ್ನು ಕೊನೆವರೆಗಾದರೂ ಸಾಧಿಸುವದು ಬ್ರಿಟನಿನ ಧರ್ಮವೆಂದೂ ಮುಂದೆ ಚಿರಸ್ಥಾಯಿಯಾದ ಶಾಂತತೆಯನ್ನು ಪ್ರಪಂಚದಲ್ಲಿ ನಿರ್ಮಿಸುವುದರಲ್ಲಿ ನಾವು ಬದ್ಧಕಂಕಣರಾಗಿದ್ದೇವೆಂದೂ ಬ್ರಿಟಿಷ ಮಂತ್ರಿವರ್ಯರು ಅಮೇರಿಕಕ್ಕೆ ಶ್ರುತಪಡಿಸಿರುತ್ತಾರೆ ನಮ್ಮ ಮಿತ್ರರ ಹಟವಾದರೂ ಇದೇಯಾಗಿದೆ 'ನಮ್ಮ ರಾಜ್ಯದಲ್ಲಿ ಶತ್ರುಸೈನ್ಯದಲ್ಲಿನ ಒಂದೇ ಒಂದು ತಲೆಯಾದರೂ ಇರುವವರೆಗೆ ನಾನು ಒಪ್ಪಂದವನ್ನು ಮಾಡಲೊಲ್ಲೆನೆಂದು ಪ್ರಮಾಣಪುರಸ್ಸರವಾಗಿ ದೃಢಪಡಿಸುತ್ತೇನೆ" ಎಂದು ರುಶ್ಯರ ಮಹಾರಾಜರು ಅಪ್ಪಣೆಕೊಡಿಸಿ ತಮ್ಮ ಸ್ನೇಹಿತರಿಗೆಲ್ಲ ತಂತೀಮೂಲಕ ಇದನ್ನು ತಿಳಿಸಿರುತ್ತಾರೆ 'ನಾವು ಎದೆಗುಂದದೆ ನಮಗೆ ತಗಲುವ ಕಷ್ಟಸಂಕಷ್ಟಗಳಿಗೆ ಮುಖವನ್ನು ತಿರುಗಿಸದೆ ಅವನ್ನು ಎದುರಿಸುವುದೇ ನಮ್ಮ ವಿಜಯಕ್ಕೆ ದಾರಿ ಇದಕ್ಕಿಂತಲೂ ದುಃಖಕರವಾದ ಪ್ರಮಾದಗಳು ರುಶ್ಯದ ಮೇಲೆ ಎಷ್ಟೋ ಸರ್ತಿ ಬಂದು ಬಿದ್ದರೂ, ಅವನ್ನು ಅಪ್ಪಳಿಸಿ ರುಶ್ಯವು ನೂತನ ಬಲವನ್ನೂ ನವೀನ ಶಕ್ತಿಯನ್ನೂ ಪಡೆದು ಬೆಳೆಯುತ್ತಾ ಬಂದದೆ ನಮ್ಮ ಈವರೆಗಿನ ಪ್ರಯತ್ನಗಳು ಕೀರ್ತಿದಾಯಕವಾಗಿದ್ದರೂ ನಮ್ಮ ಶತ್ರುಗಳು ಇನ್ನೂ ಕುಂದಲಿಲ್ಲ" ಹೀಗೆಂದು ಝಾರರು ತಮ್ಮ ಸೈನ್ಯದವರಿಗೆ ರಾಯಸವನ್ನು ಕೊಟ್ಟಿರುತ್ತಾರೆ

ತಾ. 2ನೇ ಆಗೋಸ್ತು.

ಬಾಲ್ಟಿಕ್ ಸಮುದ್ರದಲ್ಲಿ ಬ್ರಿಟಿಷರ ಯುದ್ಧನಾವೆಯು ಸೈನ್ಯಸರಂಜಾಮುಗಳನ್ನು ಕೊಂಡುಹೋಗುತ್ತಿರುವ ಜರ್ಮನ ಹಡಗನ್ನು ಮುಳುಗಿಸಿಬಿಟ್ಟಿತು ಹತ್ತಿಯನ್ನು ಯುದ್ಧ ಸಾಮಗ್ರಿಯೆಂದು ಭಾವಿಸಿ ಸರಕಾರದವರು ನಿರ್ಣಯ ಮಾಡುವಂತೆ ಆಲೋಚನೆ ನಡೆಯುತ್ತಿದೆ ಬ್ರಿಟಿಷರ ಮೂರು ಸ್ಟೀಮರುಗಳನ್ನು ಜರ್ಮನರು ಮುಳುಗಿಸಬಿಟ್ಟರು

ಫ್ರಾನ್ಸಿನಲ್ಲಿ ಫ್ರೆಂಚರು ಅರಸ್ ಎಂಬಲ್ಲಿ ಸ್ವಲ್ಪ ಮುಂದರಿಸಿದರು ಬ್ರಿಟಿಷರು ಅನೇಕ ಜರ್ಮನರ ಖನಿಗಳನ್ನು ವಶಮಾಡಿಕೊಂಡು ೫೦ ಮಂದಿ ಜರ್ಮನರನ್ನು ಸೆರೆಹಿಡಿದರು.

ಇಂಗ್ಲಾಂಡಿನಲ್ಲಿ ಕಲಿಯುತ್ತಿದ್ದ ಭಾರತೀಯರಲ್ಲಿ ಗಲಂಮಂದಿ ಯೌವನಸ್ಥರು ಈ ಯುದ್ಧದಲ್ಲಿ ಕೆಲಸಗಳನ್ನು ಕೈಕೊಂಡಿದ್ದಾರೆ.

ಕೆಲವರು ಡಾಕ್ಟರರಾಗಿಯೂ, ಮತ್ತೆ ಕೆಲವರು ದುಭಾಷಿಗಳಾಗಿಯೂ ಇನ್ನು ಕೆಲವರು ಸೈನಿಕರಾಗಿಯೂ ಸಾಮ್ರಾಜ್ಯ ಸೇವೆಯನ್ನು ಮಾಡುತ್ತಾರೆ.

ಕೀಲ್ ಕಾಲುವೆಯಿಂದ ಪರೀಕ್ಷಾರ್ಥವಾಗಿ ಹೊರಟು ಬಂದ ಒಂದು ಜರ್ಮನ ಹೊಸ ಯುದ್ಧನಾವೆಯು ಮುಳುಗಿಹೋಯಿತು. ಇನ್ನೊಂದು ಹೊಸ ನಾವೆಯನ್ನು ಹೊರಡಿಸಿರುತ್ತಾರೆ. ಇದಕ್ಕೆ ಕೈಸರರು ಹಿಂಡೆನ್‌ಬರ್ಗ್ ಎಂದು ನಾಮಕರಣ ಮಾಡಿರುತ್ತಾರೆ.

ಉತ್ತರ ಹಿಂದೂಸ್ಥಾನ.

“ಯುನಿವರ್ಸಿಟಿಯ ಉಪಾಧ್ಯಾಯರೂ ವಿದ್ಯಾರ್ಥಿಗಳೂ ನೂತನ ವಿಷಯಗಳನ್ನು ಪರಿಶೋಧಿಸಿ ಬರೆದ ಗ್ರಂಥಗಳನ್ನು ಪ್ರಚುರಗೊಳಿಸುವ ಬಗ್ಗೆ ಕಲ್ಕತ್ತಾ ಯೂನಿವರ್ಸಿಟಿಯವರು ಸ್ವಂತವಾಗಿ ಒಂದು ಮುದ್ರಾಕ್ಷರ ಶಾಲೆಯನ್ನು ಸ್ಥಾಪಿಸಬೇಕೆಂತಲೂ, ಚಿಕ್ಕ ಚಿಕ್ಕ ಶಾಸ್ತ್ರೀಯ ಪರಿಶೋಧನ ವಿಷಯಕವಾದ ಲೇಖನಗಳನ್ನು ಆಯಾ ಶಾಖೆಗೆ ಸಂಬಂಧಪಟ್ಟ ನಿಯತಕಾಲಗಳಲ್ಲಿ ಪ್ರಚುರಗೊಳಿಸಲು ಸಾಧ್ಯವಾಗಿರುವುದಾದರೂ ವಿಸ್ತಾರವಾಗಿ ಬರೆದ ವೈಜ್ಞಾನಿಕ ಗ್ರಂಥಗಳನ್ನು ಕರ್ತೃಗಳೇ ತುಂಬಾ ನಷ್ಟಕ್ಕೊಳಗಾಗದೆ ಅಚ್ಚು ಹಾಕಿಸಲು ಅನುಕೂಲವಿರುವದಿಲ್ಲವೆಂದೂ, ತಮ್ಮ ಸ್ವಂತ ಪರಿಶೋಧಕರ ಉದ್ಯಮವನ್ನು ಅದೇ ಕ್ಷೇತ್ರದಲ್ಲಿ ಅಧ್ಯವಸಾಯ ಮಾಡುವ ಇತರ ಸಹೋದ್ಯೋಗಿಗಳ ಗಮನಕ್ಕೆ ತರುವುದರ ಮೂಲವಾಗಿ ಯೂನಿವರ್ಸಿಟಿಯವರು ಅವರಿಗೆ ಸಹಾಯ ಮಾಡತಕ್ಕದು ಅಗತ್ಯವೆಂದೂ, ಹಾಗೆ ಮಾಡದಿದ್ದರೆ ವಿದ್ಯಾರ್ಥಿಗಳಿಗೂ ಉಪಾಧ್ಯಾಯರಿಗೂ ಉತ್ಸಾಹಭಂಗವಾಗುವುದು ಮಾತ್ರವೇ ಅಲ್ಲದೆ, ಈ ಮೊದಲೇ ಯಾರು, ಯಾವ ಕಾರ್ಯವನ್ನು ಮಾಡಿರುವರು ಅಥವಾ ಪ್ರಯತ್ನಿಸಿರುವರೆಂಬುದು ಇತರರಿಗೆ ತಿಳಿಯದೆ ಯುನಿವರ್ಸಿಟಿಯವರ ಮುಖ್ಯೋದ್ದೇಶವಾದ ಜ್ಞಾನೋನ್ನತಿಗೇ ಪ್ರತಿಬಂಧವುಂಟಾಗುವುದೆಂತಲೂ, ತಮ್ಮ ಪೂರ್ಣಾಧಿಕಾರಕೊಳಪಡಿಸಿ ಯುನಿವರ್ಸಿಟಿಯವರು ಒಂದು ಮುದ್ರಾಕ್ಷರ ಶಾಲೆಯನ್ನಿಟ್ಟುಕೊಂಡಿರುವುದು ಅವರ ಕರ್ತವ್ಯಗಳಲ್ಲಿ ಮುಖ್ಯವಾದ ಒಂದಾಗಿರುವುದೆಂದೂ, ಆ ಮುದ್ರಾಕ್ಷರ ಶಾಲೆಯ ಆಡಳಿತವನ್ನು ಸಮರ್ಪಕವಾಗಿ ನಡೆಯಿಸಿದ್ದಾದರೆ ಅದು ಕೂಡ ಯೂನಿವರ್ಸಿಟಿಯವರಿಗೆ ಒಂದು ಆದಾಯ ಮೂಲವಾಗದಿರದೆಂದೂ; ಮೊದಲಾಗಿ ಕಲ್ಕತ್ತೆಯ ಬೇರಿಸ್ಟರು ಮಿ॥ ಬಿ. ಚಕ್ರವರ್ತಿಯವರು ಬಂಗಾಳಾ ಸರಕಾರದ ಅಂಡರ್ ಸೆಕ್ರೆಟರಿಯವರಿಗೆ ಬರೆದುಕೊಂಡಿರುವಂತೆ ತಿಳಿಯ ಬರುತ್ತಿದೆ.

“ದೇಶಭಾಷೆಗಳಲ್ಲಿ ಆಂಗ್ಲೇಯ ವೈದ್ಯಶಾಸ್ತ್ರವನ್ನು ಅಭ್ಯಸಿಸುವುದಕ್ಕಾಗಿ ಕಲ್ಕತ್ತೆಯಲ್ಲಿಯೂ ಡಾಕ್ಕಾವಿನಲ್ಲಿಯೂ ಒಂದೊಂದು ವೈದ್ಯಶಾಲೆಯನ್ನಿಡಬೇಕೆಂದೂ, ದೇಶದ ಅಗತ್ಯತೆಗಳಿಗೆ ಈಗ ಇರುವುದಕ್ಕಿಂತ ನಾಲ್ಕು ಪಾಲು ಹೆಚ್ಚು ವೈದ್ಯರು ಬೇಕಾಗಿರುವರೆಂದೂ, ಇಂಗ್ಲಿಷ್ ಭಾಷಾ ಮೂಲಕವಾಗಿಯೇ ವೈದ್ಯವಿದ್ಯೆಯನ್ನು ಪ್ರಚುರಗೊಳಿಸುವ ಪಕ್ಷದಲ್ಲಿ ಸಾಕಾದಷ್ಟು ಜನರನ್ನು ದೊರೆಯಿಸಿಕೊಳ್ಳುವುದಕ್ಕೆ ಬಹು ದೀರ್ಘಕಾಲ ಹೋಗುವಂತಿದೆಯೆಂದೂ” ಮುಂತಾಗಿ ಅನೇಕ ಕಾರಣಗಳನ್ನು ಕೊಟ್ಟು ಬಂಗಾಳದ ಮೆಡಿಕಲ್ ಕೌನ್ಸಿಲಿನ ಮೆಂಬರುಗಳಿಂದ ಡಾಕ್ಟರ್ ವಾಲ್ಮೀಕರವರು ಅಲ್ಲಿಯ ಸರ್ಜನ್ ಜನರಲ್‌ರವರಿಗೆ ವಿವರವಾಗಿ ಒಂದು ಕಾಗದವನ್ನು ಬರೆದಿರುವರು.

ಬಂಗಾಳಾ ಭಾಷೆಯಲ್ಲಿ ವರ್ತಮಾನ ಪತ್ರಿಕೆಗಳು ಹೊರಟು ಇಂದಿಗೆ ಸರಿಯಾಗಿ ನೂರು ವರ್ಷಗಳಾದುವು. ಸಂಸ್ಕೃತ ಪಂಡಿತರೂ ಸಂಸ್ಕೃತ ವ್ಯಾಕರಣ ಶಾಲೆಯ ಅಧ್ಯಕ್ಷರೂ ಆದ ಗದಾಧರ ಪಂಡಿತರೆಂಬುವರೇ ಮೊದಲನೇ ಬಂಗಾಳಿ ಪತ್ರಿಕೆಯನ್ನು ಹೊರಡಿಸಿದವರು. ಆದುದರಿಂದ ವಂಗೀಯ ವೃತ್ತಪತ್ರಗಳ ಶತವಾರ್ಷಿಕ ಮಹೋತ್ಸವವನ್ನು ನೆರವೇರಿಸಲು ತಕ್ಕ ಏರ್ಪಾಡುಗಳನ್ನು ಮಾಡಬೇಕೆಂದು ಸ್ಕಾಟಿಷ್ ಚರ್ಚಸ್ ಕಾಲೇಜಿನ ಪ್ರೊಫೆಸರ್ ಮನ್ಮಥ ಮೋಹನ ವಸು, ಎಂ. ಎ. ಯವರು ವಂಗೀಯ ಸಾಹಿತ್ಯ ಪರಿಷತ್ತಿನವರಿಗೆ ಸೂಚಿಸಿರುವರು. ಈ ಸೂಚನೆಯು ಮಹಾಜನಗಳ ಮನ್ನಣೆಯನ್ನು ಪಡೆದಿರುವುದೆಂದೂ ಮಹೋತ್ಸವದ ಏರ್ಪಾಡುಗಳು ನಡೆಯುತ್ತಿರುವುವೆಂದೂ ತಿಳಿಯ ಬರುತ್ತಿದೆ.

ದಕ್ಷಿಣ ಹಿಂದೂಸ್ಥಾನ

ಬರುವ ಆಗೋಸ್ತು ೬ನೇ ತಾರೀಕಿನ ದಿನ ಮುಂಬಾಯಿ ಯುನಿವರ್ಸಿಟಿಯ ಸಿನೇಟಿನ ಸಭೆಕೂಡಿದಾಗ, “ಶ್ರೀಯುತ ದಾದಾಭಾಯಿ ನವರೋಜಿಯವರು “ಸಿನೇಟಿನವರ ಅಭಿಪ್ರಾಯದ ಮೇರೆಗೆ ಮಹೋನ್ನತವಾದ ಪದವಿಯನ್ನಲಂಕರಿಸಿದವರೂ ಅಸಾಧಾರಣವಾದ ವೈದುಷ್ಯವನ್ನುಳ್ಳವರೂ ಆದುದರಿಂದ ಅಂಥ ಸನ್ಮಾನವನ್ನು ಹೊಂದಲು ತಕ್ಕವರಾಗಿರುವರು.” ಎಂಬ ನಿರ್ಣಯವನ್ನು ಸಭೆಯ ಮುಂದಿಟ್ಟು ಅವರಿಗೆ ಡಾಕ್ಟರ್ ಅಫ್‌ಲಾ (LL. D) ಪದವಿಯನ್ನು ಕೊಡತಕ್ಕದ್ದೆಂದು ಅಗ್ರಿಕಲ್ಚರಲ್ ಕಾಲೇಜಿನ ಪ್ರಿನ್ಸಿಪಾಲರಾದ ಡಾಕ್ಟರ್ ಮ್ಯಾನ್‌ರವರು ಸೂಚನೆ ಮಾಡುವರೆಂದೂ, ಆಗಲೇ ಅದೇ ಪದವಿಯನ್ನು “ಅವರ ವಿದ್ವತ್ತನ್ನೂ ಕಳೆದ ಐವತ್ತು ವರ್ಷಗಳಲ್ಲಿ ಅವರು, ಸ್ಥಾನಿಕ ಸ್ವರಾಜ್ಯ, ಸಾರ್ವಜನಿಕ ಆರೋಗ್ಯ ಮತ್ತು ವಿದ್ಯಾಭ್ಯಾಸ ವಿಷಯಕವಾಗಿ ಮಾಡಿದ ಉಚ್ಚವಾದ ದೇಶಸೇವೆಯನ್ನೂ ಸ್ಮರಿಸಿ” ಸರ್ ಫಿರೋಜಶಹ ಮೇಥಾರವರಿಗೂ ಕೊಡಬೇಕೆಂದು ಸರ್ ನಾರಾಯಣರಾವ್ ಚಂದಾವರಕಾರ್‌ರವರು ಸೂಚನೆ ಮಾಡುವರೆಂದೂ ತಿಳಿಯ ಬರುತ್ತಿದೆ.

ಪ್ರಸಿದ್ಧ ಪರಿಶೋಧಕರಾದ ಡಾ. ಸರ್. ರಾಮಕೃಷ್ಣ ಗೋಪಾಲ ಭಂಡಾರಕರವರ ಜನ್ಮದಿನವಾದ ಕಳೆದ ಜುಲೈ ೬ನೇ ಮಂಗಳವಾರ ಪೂನಾ ಪಟ್ಟಣದಲ್ಲಿ ಒಂದು ದೊಡ್ಡ ಸಭೆ ನಡೆದು ‘Bhandarkar Oriental research Institute’ ಎಂಬ ಹೆಸರಿನಿಂದ ಒಂದು ಪೌರ್ವಾತ್ಯ ಸಂಶೋಧನಾಲಯವು ಸ್ಥಾಪಿಸಲ್ಪಟ್ಟಿತು. ಕೆಲವು ನಿಬಂಧನೆಗಳಿಗೊಳಪಡಿಸಿ ಅಮೌಲ್ಯವಾದ ತಮ್ಮ ಪುಸ್ತಕಾಲಯವನ್ನು ಈ ಸಂಸ್ಥಾಪನೆಗೆ ಕೊಡಬೇಕೆಂದು ಡಾ॥ ಭಂಡಾರಕರ್‌ಯವರು ನಿಶ್ಚಯಿಸಿರುವರು. ಮುಂಬಾಯಿ ಯುನಿವರ್ಸಿಟಿಯವರು ತಮ್ಮ ‘ಪರಿಶೋಧನೋತ್ತೇಜಕ ನಿಧಿ’ (research fund) ಯಿಂದ ಈ ಸಂಸ್ಥಾಪನೆಗೆ ಸಹಾಯ ಮಾಡುವಂತಿದೆಯೆಂದೂ ಪೂನಾ ಪಟ್ಟಣದ ಡೆಕ್ಕನ್ ಕಾಲೇಜಿನಲ್ಲಿರುವ ಉತ್ಕೃಷ್ಟವಾದ ಹಸ್ತಪ್ರತಿಯ ಪುಸ್ತಕಗಳೂ ತಮ್ಮ ಕೈಗೆ ಸಿಕ್ಕತಕ್ಕದಾಗಿದೆಯೆಂದೂ ಸಾಮಾಜಿಕರೊಬ್ಬರು ಕೋರಿದರು. ಬಳಿಕ ಮುಂಬಾಯಿ ಕೌನ್ಸಿಲ್ ಮೆಂಬರರಾದ ಸರ್. ಪ್ರಭಾಶಂಕರ ಪಟ್ಟಾಣಿಯವರನ್ನು ಅಧ್ಯಕ್ಷರನ್ನಾಗಿಯೂ ಬೇರೆ ಕೆಲಕೆಲವರನ್ನು ಇತರ ಕಾರ್ಯಗಳಿಗೂ ನಿಯೋಜಿಸಿ ಸಭೆಯು ಮುಕ್ತಾಯವಾಯಿತು.

ಮೈಸೂರು ನ್ಯಾಯವಿಧಾಯಕ ಸಭೆಯು ಕಳೆದ ಜುಲೈ ೨೭ನೇ ತಾರೀಕಿನ ದಿನ ಬೆಂಗಳೂರಿನಲ್ಲಿ ಕೂಡಿದ್ದಾಗ ಮ॥ ಕರಣೀಕ ಕೃಷ್ಣಮೂರ್ತಿರಾಯರು ವಿದ್ಯಾಭ್ಯಾಸ ವಿಷಯಕವಾಗಿ ಮಾಡಿದ ಆಕ್ಷೇಪಣೆಗೆ ಸಮಾಧಾನವಾಗಿ ವಿದ್ಯಾಶಾಖೆಯ ಅಧ್ಯಕ್ಷರಾದ ಮ॥ ರಾವ್ ಬಹದ್ದೂರ್ ಎಮ್. ಶ್ಯಾಮರಾಯರವರು ಹೀಗೆಂದು ಅಪ್ಪಣೆ ಕೊಡಿಸಿದರು—ಮದ್ರಾಸ್ ಯುನಿವರ್ಸಿಟಿಯವರು ಈ (ಸ್ಕೂಲ್ ಫೈನಲ್) ಕೆಲಸದಲ್ಲಿ ಪ್ರವೇಶಿಸಿ ಯಾರಿಗೂ ಅಗಮ್ಯವಾದ ಒಂದು ಸೂತ್ರ (formula) ವನ್ನು ಉಂಟುಮಾಡಿರುವರು. ಈ ಸೂತ್ರವನ್ನು ಅನುಸರಿಸಿದ್ದೇ ಆದರೆ ಕೇವಲ ಅಸಮರ್ಪಕವಾದ ಫಲಿತಾಂಶಗಳು ಬರುತ್ತಿವೆ. ಈ ವಿಷಯದಲ್ಲಿ ನಮ್ಮ ಅಭಿಪ್ರಾಯವನ್ನು ಕೇಳಲೇ ಇಲ್ಲವು. ಕಾಲೇಜುಗಳ ಅಧ್ಯಕ್ಷರುಗಳಿಗೆ ಇಷ್ಟಾನುಸಾರ ವರ್ತಿಸಲು ಬಿಟ್ಟು ಅವರು ನಮ್ಮ ಮೇಲೆ ಅಧಿಕಾರ ನಡೆಯಿಸಿಬಿಟ್ಟರು. ಯುನಿವರ್ಸಿಟಿಯವರು ಕಾಲೇಜುಗಳ ಅಧ್ಯಕ್ಷರೊಂದಿಗೆ ನೇರಾಗಿ ವ್ಯವಹಾರಗಳನ್ನು ನಡೆಯಿಸತಕ್ಕದ್ದಲ್ಲ. ವಿದ್ಯಾಶಾಖೆಯ ಅಧ್ಯಕ್ಷರೇ ಸಿನೇಟಿನಲ್ಲಿರತಕ್ಕದ್ದಲ್ಲದೆ ಅವರಿಗೆ ಒಳಪಟ್ಟವರಲ್ಲ.”

ಮದ್ರಾಸಿನ ಆಯುರ್ವೇದ ಪ್ರಚಾರಿಣಿ ಸಭೆಯವರ ಪ್ರಾರ್ಥನೆಯಂತೆ, ಅಖಿಲ ಭಾರತವರ್ಷೀಯ ಆಯುರ್ವೇದ ಮಹಾಮಂಡಲದವರು ತಮ್ಮ ಏಳನೆಯ ಪರಿಷತ್ತನ್ನೂ ಪ್ರದರ್ಶನವನ್ನೂ ಬರುವ ದಶಂಬರು ತಿಂಗಳಲ್ಲಿ ಮದ್ರಾಸಿನಲ್ಲಿ ಕೂಡಿಸಲು ಒಪ್ಪಿಕೊಂಡಿರುವರು. ಇದಕ್ಕಾಗಿ ಕಳೆದ ೨೬ನೇ ತಾರೀಕಿನ ದಿನ ಮದ್ರಾಸಿನಲ್ಲಿ ಒಂದು ಸಾರ್ವಜನಿಕ ಸಭೆ ನೆರೆದು ಪರಿಷತ್ತಿಗೆ ಒಂದು ಸ್ಥಳೀಯ ಸ್ವಾಗತ ಕಮಿಟಿಯನ್ನು ನೇಮಿಸಿದರು. ಡಾಕ್ಟರ್ ಸರ್. ಎಸ್. ಸುಬ್ರಹ್ಮಣ್ಯರವರು ಅಧ್ಯಕ್ಷರಾಗಿಯೂ ಆಯುರ್ವೇದ ವಿದ್ವಾನ್ ಗೋಪಾಲಾಚಾರ್ಯರೇ ಮೊದಲಾದ ನಾಲ್ವರು ಕಾರ್ಯದರ್ಶಿಗಳಾಗಿಯೂ ಏರ್ಪಟ್ಟಿರುವರು. ಸ್ವಾಗತ ಕಮಿಟಿಯ ಸಾಮಾಜಿಕರೊಳಗೆ ಮದ್ರಾಸು ಅಧಿಪತ್ಯದ ಮತ್ತು ಸಮೀಪದ ದೇಶೀಯ ಸಂಸ್ಥಾನಗಳಲ್ಲಿಯ ಪ್ರಮುಖರಲ್ಲದೆ ಆಯುರ್ವೇದದಲ್ಲಿ ಪ್ರವೀಣರಾದ ಕೊಚ್ಚಿಯ ರಾಜಕುಟುಂಬಕ್ಕೆ ಸೇರಿದ ಕುಮಾರರೂ ಇಬ್ಬರೋ ಮೂವರೋ ಇರುವಂತೆ ತಿಳಿಯ ಬರುತ್ತಿದೆ. ದೇಶಾಭಿಮಾನಿಗಳೆಲ್ಲರೂ ಸಹಾಯಕರಾಗಿ ನಿಲ್ಲತಕ್ಕ ಸತ್ಯೋದ್ಯೋಗಗಳಲ್ಲಿ ಇದೂ ಒಂದಾಗಿದೆ.

ಅರಸೀಕೆರೆ ಮಂಗಳೂರು ರೈಲ್ವೆ.

ಕಳೆದ ಜುಲಾಯಿ 27ನೇ ತಾರೀಕಿಗೆ ಕೂಡಿದ ಮೈಸೂರು ನ್ಯಾಯವಿಧಾಯಕ ಸಭೆಯಲ್ಲಿ ಅರಸೀಕೆರೆ ಮಂಗಳೂರು ರೈಲ್ವೆಯನ್ನು ಕಟ್ಟಿಸುವದರ ಕುರಿತು ದಿವಾನರು ಅಪ್ಪಣೆ ಕೊಡಿಸಿದ್ದೇನೆಂದರೆ—ಈ ಕೆಲಸಕ್ಕೆ ಕೈ ಹಾಕಬೇಕೆಂದು ಒಮ್ಮೆ ನಾವು ಸಿದ್ಧವಾಗಿದ್ದೆವು ಖರೆ. ಆದರೆ ತದನಂತರ ವಿಚಾರ ಮಾಡಿದ್ದಲ್ಲಿ ಹಲವು ಆಕ್ಷೇಪಗಳು ಕಂಡು ಬಂದವು. ಮದ್ರಾಸು ಸರಕಾರದವರು ಮಂಗಳೂರು ಬಂದರವನ್ನು ಅಭಿವೃದ್ಧಿಗೆ ತರಲಿಕ್ಕೆ ಹಣ ವೆಚ್ಚ ಮಾಡುವದಿಲ್ಲ, ಈಗ್ಯೆ ಆ ಬಂದರದಲ್ಲಿ ವರ್ಷಕ್ಕೆ ಮೂರು ನಾಲ್ಕು ತಿಂಗಳು ಹಡಗಗಳು ಆಮದುರಫ್ತಾಗುವದಿಲ್ಲ, ಮದ್ರಾಸು ಸರಕಾರದವರು ಸದ್ಯ ಕೊಚ್ಚಿ ಬಂದರಕ್ಕೆ [illegible]ನನ್ನು ಕೊಟ್ಟಿರುವರು. ಹನ್ನೆರಡು ತಿಂಗಳಲ್ಲಿಯೂ

ಅವರುಗಳ ಇಲ್ಲದೆ ಬಂದರಕ್ಕೆ ರೈಲ್ವೆ ಲ್ಯಾನನ್ನು ಮುಟ್ಟಿಸಿ ಪ್ರಯೋಜನವಿಲ್ಲ. ಎಂಬಿತ್ಯಾದಿ ಸಂಗತಿ ಗಳನ್ನು ಸಭೆಯ ಮುಂದಿಟ್ಟರು ಇದರಿಂದ ಅರಸಿಕೆರೆ ಲ್ಯಾನಿನ ಸಂಭವವು ಇಲ್ಲವೆಂದು ತೋರುವದು

ಬಡೋದೆ ಸಂಸ್ಥಾನವು.

ದೇಶೀಯ ಸಂಸ್ಥಾನಗಳಲ್ಲಿ ಬಡೋದೆ ಸಂಸ್ಥಾನವು ಕು ತ್ತರ್ಯದಲ್ಲಿ ಅಭಿವೃದ್ಧಿಮಾಡಿಯದೆಂಬ ಕೀರ್ತಿ ಸಂಪಾದಿಸಿರುವುದು. ಈ ಸಂಸ್ಥಾನದ ಕಳೆದ ವರುಷದ ರಿಪೋರ್ಟಿನಿಂದ ತೋರುವ ಮೇರೆಗೆ ಅಲ್ಲಿ ೩೦೩೮ ಶಾಲೆಗಳೂ, ೨೨೭,೦೦೦ ವಿದ್ಯಾರ್ಥಿಗಳೂ ಇರುತ್ತವೆ ೪೦ ಹುಡುಗಿಯರ್ಗ್ಗ ಶಿಕ್ಷೆಯ ಸಂಭವವಿರುವ ಸ್ಥಳಗಳಲ್ಲಿ ಹುಡುಗಿಯರ ಬಗ್ಗೆ ಶಾಲೆ ಇಡಬೇಕಾಗಿ ಸಂಸ್ಥಾನದ ಕಟ್ಟಾಜ್ಞೆಯುಂಟು. ಸ್ತ್ರೀಯರ ಟ್ರೈನಿಂಗ್ ಕಾಲೇಜಿನಲ್ಲಿ ೧೧೪ ಉಪಾಧ್ಯಾಯಿನಿಗಳು ತರಬೇತಿ ಹೊಂದುತ್ತಾರೆ ೬೦೧ ಸರಕಾರಿ ಪಂಚಮ ಶಾಲೆಗಳುಂಟು. ಇವುಗಳಲ್ಲಿ ೧೧೨೨೪ ಪಂಚಮ ವಿದ್ಯಾರ್ಥಿಗಳು ವಿದ್ಯೆ ಹೊಂದುತ್ತಾರೆ ಇದಲ್ಲದೆ ಮೇಲುಜಾತಿಯವರ ಶಾಲೆಗಳಲ್ಲಿ ಮೇಲುಜಾತಿಯ ವಿದ್ಯಾರ್ಥಿಗಳೊಡನೆ ೩೦೭೦ ಪಂಚಮ ವಿದ್ಯಾರ್ಥಿಗಳು ವಿದ್ಯೆ ಹೊಂದುತ್ತಾರೆ. ಸರ್ವ ದಾನಗಳಲಿ ವಿದ್ಯಾದಾನವು ಶ್ರೇಷ್ಠವಾದುದೆಂತಲೂ, ವಿದ್ಯಾ ಪ್ರಸರಣಯಲ್ಲೇ ನಮ್ಮ ಜನಾಂಗದ ಏಳಿಗೆ ಇರುವುದೆಂತಲೂ, ಈ ಒಗ್ಗೆ ಅಂತ್ಯಜರಾದ ಹೊಲೆಯರ ಉದ್ಧರಣೆ ಅಗತ್ಯವಾದುದೆಂತಲೂ, ಬಡೋದೆ ಮಹಾರಾಜರವರು ಆಗ್ಗಾಗ್ಗೆ ಮಾಡುವ ಭಾಷಣಗಳಲ್ಲಿ ಜನರಿಗೆ ಬೋಧಿಸುವುದು ಆಶ್ಚರ್ಯವಾಗಿ ತೋರುವುದಿಲ್ಲ. ಅಲ್ಲಿಯ ವೈದ್ಯ ಇಲಾಖೆಯ ಪ್ರಧಾನ ಅಧಿಕಾರಿಯಾಗಿದ್ದ ಮೃತ ಡಾಕ್ಟರ್ ಕಾರ್ನಾಡರವರು ರೂ ೬೦೦೦ ಮಂಗಳೂರು ಪಂಚಮರ ಅಭಿವೃದ್ಧಿ ಒಗ್ಗೆ ಉತ್ತರದಾನವಾಗಿ ಬಿಟ್ಟದ್ದು ಮಹಾರಾಜರವರ ಸೂಚನೆಯಿಂದೆಂಬ ವದಂತಿಯು ನಿಜವಾಗಿರಬಹುದೆಂತ ತೋರುತ್ತದೆ.

ಮದ್ರಾಸು ಪಿಲ್ಗ್ರಿಮ್ ಕಮ್ಮಿಟಿ.

ಯಾತ್ರಾ ಸ್ಥಳಗಳಲ್ಲಿ ಕೂಡಿಬರುವ ಜನಸ್ತೋಮಗಳ ಆರೋಗ್ಯದ ಬಗ್ಗೆ ಯಾವ ಸೌಕರ್ಯಗಳನ್ನು ನಿವಿರ್ಧಸಬಹುದೆಂಬದಾಗಿ ನಿರ್ಣಯಿಸಲಿಕ್ಕೆ ಇಂಡಿಯಾ ಗವರ್ನ ಮೆಂಟಿನವರು ಆಯಾ ಸಂಸ್ಥಾನಗಳಲ್ಲಿ ಕಮ್ಮಿಟಿಗಳನ್ನು ಏರ್ಪಡಿಸಿರುವರು. ಮದ್ರಾಸಿನಲ್ಲಿ ಸಹ ಒಂದು ಕಮ್ಮಿಟಿಯು ಏರ್ಪಟ್ಟಿದೆ. ಇವರು ಆಯಾ ತೀರ್ಥಸ್ಥಳಗಳಲ್ಲಿ ಮೊಕ್ಕಾಂ ಮಾಡಿ ಅಲ್ಲಿಯ ಸ್ಥಿತಿಯನ್ನು ಪರೀಕ್ಷಿಸಿ ಜನರ ಆರೋಗ್ಯರಕ್ಷಣೆಗೆ ಯಾವ ಉಪಾಯಗಳನ್ನು ಏರ್ಪಡಿಸಬಹುದೆಂದು ನಿಷ್ಕರ್ಷಿಸುವರು ಇವರ ಕಾಲ ನಿಯಾಮಕ ಪಟ್ಟಿಯು ಕಲ್ಲೆಕ್ಟರ್ ದೊರೆಗಳಿಂದ ನಮಗೆ ತಲ್ಪಿರುವದು. ಇದನ್ನು ಈ ಕೆಳಗೆ ವಾಚಕರ ತಿಳುವಳಿಕೆ ಬಗ್ಗೆ ಪ್ರಕಟಿಸಿರುವೆವು.

ಜನೋಸ್ತು ೩,೩ ವ ೪ನೇ ತಾರೀಕು—ಮಧುರಾ ವ ಟನ್‌ಪಾಸ್ ಪ್ರದೇಶ. ರಾಮೇಶ್ವರ—೫ನೇ ರಾತ್ರಿ ಹೊರಟು ೬ನೇ ಪ್ರಾತಃಕಾಲ ತಲ್ಪುವದು. ೬ನೇ ೭ನೇ ತಾರೀಖುಗಳಲ್ಲಿ ರಾಮೇಶ್ವರ ಧನುಷ್ಕೋಡಿಗಳನ್ನು ಸಂದರ್ಶಿಸಿ ೮ನೇ ಪೂರ್ವಾಹ್ನ ಮಧುರೆಗೆ ಹೊರಡುವದು. ೯ನೇ ತಾರೀಕು ಮಧುರೆಯಲ್ಲಿ ವಸ್ತಿ.

ತಿರುಚೆಂದೂರು—೧೧ನೇ ಪ್ರಾತಃಕಾಲ ಮಧುರೆಯನ್ನು ಬಿಟ್ಟು ತಿರುನೆಲ್ವೇಲಿಗೆ ತಲಪುವದು. ೧೧ನೆ ೧೨ನೇ ತಾರೀಕು ತಿರುನೆಲ್ವೇಲಿಯಿಂದ ತಿರುಚೆಂದೂರಿಗೆ ಹೋಗಿ ವಾಪಾಸು ಒರುವದು ೧೩ನೇಗೆ ತಿರುನೆಲ್ವೇಲಿಯಿಂದ ಮಧುರೆ ೧೪ನೇ ತಾರೀಕಿಗೆ ಮಧುರೆಯಲ್ಲಿ ವಸ್ತಿ

ಪಳನಿ—೧೫ನೇ ತಾರೀಕು ಪ್ರಾತಃಕಾಲ ಮಧುರೆಯಿಂದ ದಿಂಡಿಗಲ್ಲು ಅಲ್ಲಿಂದ ಪಳನಿ ೧೬ನೇ ಅಪರಾಹ್ನ ವ ೧೭ನೇ ಪೂರ್ವಾಹ್ನ ಸಂಧರ್ಶನೆ ೧೭ನೇಗೆ ದಿಂಡಿಗಲ್ಲಿಗೆ ಒಂದು ಅಲ್ಲಿಂದ ತಿರುಚಿನಾಪಳ್ಳಿ ೧೭ಕ್ಕೆ ತಿರುಚಿನಾಪಳ್ಳಿಯಲ್ಲಿ ವಸ್ತಿ ಶ್ರೀರಂಗಂ—೧೮ ವ ೧೯ಕ್ಕೆ ವಸ್ತಿ.

ಕುಂಬಕೋಣ—ತಿರುಚಿನಾಪಳ್ಳಿಯಿಂದ ೨೦ಕ್ಕೆ ಕುಂಭಕೋಣ ಅಲ್ಲಿಂದ ನಗರ ಸಂಚರಣಾ ನಂತರ ಅದೇ ದಿನ ಚಿದಂಬರ ಚಿದಂಬರ ತಿರುವಣ್ಣಾಮಲೆ—೨೧ನೇಗೆ ಚಿದಂಬರದಲ್ಲಿ ವಸ್ತಿ ೨೨ಕ್ಕೆ ಚಿದಂಬರದಿಂದ ತಿರುವಣ್ಣಾಮಲೆ ೨೩ಕ್ಕೆ ತಿರುವಣ್ಣಾಮಲೆಯನ್ನು ಸಂದರ್ಶಿಸಿ ೨೪ಕ್ಕೆ ಮದ್ರಾಸು

ಮದ್ರಾಸು—೨೫ ವ ೨೬ ಚಿದಂಬರ ವ ತಿರುವಣ್ಣಾಮಲೆಯ ಕುರಿತು ರಿಪೋರ್ಟು ಬರಿಯುವ ಒಗ್ಗೆ ವಸ್ತಿ

ನಾಗಪಟ್ಣ—೨೭ಕ್ಕೆ ಮದ್ರಾಸಿನಿಂದ ಹೊರಟು ೨೮ಕ್ಕೆ ನಾಗೂರು ವ ವೇಲಂಗನಿ

ನಾಗಪಟ್ಣ—ವೇಲಂಗನಿ ವ ನಾಗೂರು ಸಂತೆಗಳನ್ನು ೨೯ ವ ೩೦ನೇ ತಾರೀಕುಗಳಲ್ಲಿ ಸಂದರ್ಶಿಸಿ ೧ನೇ ಸಪ್ಟಂಬರಕ್ಕೆ ಮದ್ರಾಸು

ಕಂಚಿ, ತಿರುಪ್ಪೂರ್ ಸಪ್ತದೇವಾಲಯಗಳು ಪೆರಿಯಪಾಳಯಂ ವ ತಿರುವಾರೆಯೂರು—ಇವುಗಳನ್ನು ಮೋಟಾರ್ ಬಂಡಿಗಳಲ್ಲಿ ಸಂದರ್ಶಿಸಲಾಗುವದು ತಾರೀಕು ತಪಸೀಲು ಹಿಂದಣಿಂದ ನಿಶ್ಚಯಿಸೋಣಾಗುವದು ೭ ಹುಣಾ ೧೧ರಿಂದ ೧೮ರ ವರೆಗೆ ಇರುವದು ಉಡುಪಿ ತಿರುಪತಿ, ವ ಕಾಳಹಸ್ತಿ ತಾರೀಕು ಇನ್ನು ಮುಂದೆ ನಿಶ್ಚಯಿಸಲಾಗುವದು ಅಂದಾಜು ಕಾಲ ೧೮ರಿಂದ ೩೦ರ ವರೆಗೆ ಕಮ್ಮಿಟಿಯವರು ವಿಮರ್ಶಿಸುವ ವಿಷಯಗಳನ್ನು ಬರುವ ಸಂಚಿಕೆಯಲ್ಲಿ ಕೊಡುವೆವು

ದಕ್ಷಿಣ ಕನ್ನಡ.

ಫರಂಗಿಪೇಟೆ: — ಮೇರಮಜ್ಜು ಶಾಲೆಯ ಒಂದು ಶಾಖೆಯಾಗಿರುವ ನೀರು ಮಾರ್ಗ ಸೈಂಟ್ ಲಿಗೋರಿ ಶಾಲೆಯ ೧೧ನೇ ವರ್ಷೋತ್ಸವವು ಇದೇ ತಿಂಗಳ ತಾ ೨೦ನೇ ದಿನ ರೆವೆರೆಂಡ್ ಫಾದರ್ ಎಮ್. ಎಸ್ ಫೆರ್ನಾಂಡಿಸರವರ ಅಧ್ಯಕ್ಷತೆಯಲ್ಲಿ ಜರಗಿತು. ಮಕ್ಕಳು ಕಥಾನಟನೆ ಗೀತಗಳು, ಜತೆ ವಗೈರೆ ಆಟಗಳಿಂದ ನೆರೆದ ಸಭಿಕರನ್ನು ಸಂತೋಷಗೊಳಿಸಿದರು ಒಂದು ವರ್ಷದೊಳಗಾಗಿ ಶಾಲೆಯು ಎಲ್ಲಾ ಭಾಗದಲ್ಲಿಯೂ ಅಭಿವೃದ್ಧಿಗೆ ಬಂದದನ್ನು ಕಂಡು ಎಲ್ಲರೂ ಸಂತೋಷಗೊಂಡರು ತರುವಾಯ ಮಕ್ಕಳಿಗೆ ಮಿಠಾಯಿ, ದೊಡ್ಡವರಿಗೆ ಪಾನಸು ಪಾರಿ ಹಂಚಿದ ಒಳಿಕ ಅಧ್ಯಕ್ಷರು ವಿದ್ಯಾಭ್ಯಾಸದ ಪ್ರಯೋಜನಗಳನ್ನೂ ಗ್ರಾಮಸ್ಥರು ಶಾಲೆಯ ಕಡೆ ಹೇಗೆ ಲಕ್ಷ್ಯ ಇಟ್ಟು ಉಪಾಧ್ಯಾಯರೊಂದಿಗೆ ಸಂಪರ್ಕರಾಗಬೇಕೆಂದೂ ಕುರಿತು ಮಾತನಾಡಿದ ಬಳಿಕ ರಾಷ್ಟ್ರಗೀತವನ್ನು ಹಾಡಿ ಉತ್ಸವವು ಕೊನೆಗೊಂಡಿತು.

ಇಲ್ಲಿಗೆ ಸಮೀಪವಾಗಿರುವ ಅಮೆಂಬಳದಲ್ಲಿ ಒಂದು ಕ್ರೈಸ್ತ ಹೆಂಗಸು ತನ್ನ ೭ ತಿಂಗಳ ಮಗುವನ್ನು ಮಗ್ಗುಲಲ್ಲಿ ಇಟ್ಟು ಮಲಗಿದ್ದಳು ಸ್ವಲ್ಪ ಹೊತ್ತಿನಲ್ಲಿ ಮಗು ಅಳಲು ಪ್ರಾರಂಭಿಸಿತು. ತಾಯಿಯು ದೀಪ ಉರಿಸಿ ಮಗುವನ್ನು ಸ್ತನಪಾನಾದಿಯಿಂದ ಸಂತಯಿಸಿದಳು. ಉರಿಸಿಟ್ಟದ್ದ ದೀಪವನ್ನು ನೊಂದಿಸದೆ ಮಗು ನಿದ್ರೆ ಹತ್ತುವವರೆಗೆ ಆಡಲಿ ಎಂದು ಮಲಗಿಬಿಟ್ಟಳು. ಮಗು ಹರಿದಾಡುತ್ತಾ ದೀಪದ ವರೆಗೆ ಹೋಗಿ ಅದನ್ನು ಎಳೆಯಿತು ದೀಪವು ಕೆಡವಿ ಬಿದ್ದು ಎಣ್ಣೆಗೆ ಬೆಂಕಿ ಹತ್ತಿತು ಮಗು ಆ ಬೆಂಕಿಯಲ್ಲಿ ಉರಿಯುತ್ತಿದ್ದಾಗ್ಯೆ ಮಾಡಿದ ರೋಧನವನ್ನು ಕೇಳಿ ಇತರ ಜನರು ಆ ಹೆಂಗಸನ್ನು ಎಚ್ಚರಿಸಿದ್ದಾಗ್ಯೂ ನಿದ್ರಾದೇವಿಯು ಆಕೆಯನ್ನು ಏಳಲು ಬಿಡಲಿಲ್ಲ ಕೊನೆಗೆ ಬಹಳ ಪ್ರಯತ್ನಗಳಿಂದ ಎಚ್ಚರಿಸಿ ಕೋಣೆಯ ಬಾಗಲು ತೆಗೆದು ನೋಡುವಾಗ್ಯೆ ಮಗು ಪರವಶ್ಯವಾಗಿತ್ತು ಇದೇ ರೀತಿ ದೀಪ ಹತ್ತಿರವಿಟ್ಟು ಮಲಗುವ ಈ ದುರಾಭ್ಯಾಸವು ಹಲವು ಕಡೆಯಲ್ಲಿ ನಡೆಯುತ್ತಿರುವುದು ಆದ್ದರಿಂದ ತಾಯಂದಿರು ಈ ವಿಷಯ ಚನ್ನಾಗಿ ಎಚ್ಚರಗೊಳ್ಳಲಿ!

ಕಾಪು: — ಇಲ್ಲಿಯ ನೆರೆ ಗ್ರಾಮದ ಉಳ್ಯಾರು ಅನಂತ ಬೆಟ್ಟ ಎಂಬವರು ಒಂದು ಮನೆ ಅಡಿಯನ್ನು ದುರಸ್ತಿಪಡಿಸುವ ಸಮಯ ಭೂಮಿಯ ಅಡಿಯಲ್ಲಿ ಒಂದು ಕೊಪ್ಪರಿಗೆ ಸಿಕ್ಕಿರುತ್ತದೆಂತ ಗ್ರಾಮ ಪಟೇಲರ ರಿಪೋರ್ಟಿನ ಆಧಾರದ ಮೇಲೆ ಉಪ್ಪಿ ಮೇಜಿಸ್ಟ್ರೇಟರು, ತಹಸೀಲ್ದಾರರು, ಪೋಲೀಸರವರು ಮುಂತಾಗಿ ಒಂದು ತನಿಕೆ ನಡಿಸುತ್ತಿರುತ್ತಾರೆ ಸದರಿ ಬೆಟ್ಟರಿಗೆ ನಿಧಿ ಸಿಕ್ಕಿದ್ದು ನಿಜವೆಂತ ಹಲವರ ಅಭಿಪ್ರಾಯವಾಗಿದೆ ವಿನಹ ಸರಕಾರಿ ಉದ್ಯೋಗಸ್ಥರು ಕುದುಹುಗಳಿಂದ ಜಪ್ತಿ ನಿಷ್ಕರ್ಷೆ ಮಾಡಿದಾಗ್ಯೂ ಆಸಾಮಿಯ ಮನೆಯ ಜನರು ಸಿಕ್ಕಿದ್ದೇ ಇಲ್ಲವೆಂದು ನಿರ್ಧರಿಸಿರುವರು ಅನುಮಾನದ ಮೇಲೆ ಅವನ ಮನೆಯನ್ನು ಒಪ್ಪಿಮಾಡಿದಾಗ್ಯೂ ಏನೂ ಸಿಕ್ಕಲಿಲ್ಲ ಈ ಸಂಬ್ರ ತನಿಕೆಗೋಸ್ಕರ ಕುಂದಾಪುರ ಸಬ್ ಕಲ್ಲೆಕ್ಟರವರು ಬರುವರಾಗಿ ವದಂತಿ ಇದೆ

ಮಂಗಳೂರು.

ಕಳೆದ ಶುಕ್ರವಾರ ರಾತ್ರಿ ಇಲ್ಲಿಯ ಬಾಸೆಲ್‌ಮಿಶನ್ ನೇಯುವ ಕಾರ್ಖಾನೆಯಲ್ಲಿ ಒಂದು ದೊಡ್ಡ ಕಳವು ನಡೆದಿದ್ದಿತು ಮಧ್ಯ ರಾತ್ರಿ ಯಾರೋ ಕಳ್ಳರು ಆಫೀಸಿನ ಒಲು ಎತ್ತರವಾದ ಗೋಡೆಯನ್ನು ಹತ್ತಿ ಗೋಡೆಯ ಮಧ್ಯ ಇರುವ ಒಂದು ಚಿಕ್ಕ ಕಿಟಕಿಯ ಮೂಲಕ ಒಳಗಿರುವ ಇಂಜಿನ್ ಟಯರಿಗೆ ಹಗ್ಗ ಹಾಕಿ ಕೆಳಗಿಳಿದು ಸುಮಾರು ೨೦೦—೩೦೦ ರೂಪಾಯಿ ಕ್ರಯಬಾಳುವ ಬನಿಯನ್‌ಗಳನ್ನು ಹೊರತಂದು ಕೊಂಡುಹೋಗಿದ್ದರು. ತನ್ಮಧ್ಯೆ ಆಫೀಸಿನ ಮೆನೇಜರಿಗೆ ತಿಳಿದುಬಂದದರಿಂದ ಆಫೀಸಿನ ಕೋಣೆಗೆ ಒಂದು ನೋಡಿದ್ದಲ್ಲಿ ಕಳ್ಳರು ಒಂದು ಕೊಡೆ ಮತ್ತು ಲಾಂದರನ್ನು ಬಿಟ್ಟು ಪರಾರಿಯಾಗಿದ್ದರು. ಮರುದಿನ ಬೆಳಿಗ್ಗೆ ಕಳವಾದ ಮ್ಹಾಲು ಆಚೆ ತೋಟದಲ್ಲಿ ಬಿದ್ದಿದ್ದದು ಸಿಕ್ಕಿತು. ಅಂದೇ ದೊರೆಗಳು ತನಿಕೆ ನಡಿಸಿದ್ದಲ್ಲಿ ಆಫೀಸಿನ ೫ ಮಂದಿಯ ಮೇಲೆ ಅನುಮಾನಹುಟ್ಟಿ ವಿಚಾರಿಸಿದ್ದಲ್ಲಿ ಮೂರು ಮಂದಿ ಸತ್ಯವನ್ನು ಅರಿಕೆ ಮಾಡಿದ್ದರಿಂದ ಅವರನ್ನು ಕೆಲಸದಿಂದ ತೆಗೆದುಹಾಕಿದರು. ರಾತ್ರಿ ಎರಡು ಘಂಟೆಗೆ ಕಳ್ಳರು ಬರುವದು ಗೊತ್ತಿದ್ದು ಹೇಳದ ಇಬ್ಬರನ್ನೂ ಅನುಮಾನದ ಮೇಲೆ ಕೆಲಸದಿಂದ ತೆಗೆದಿರುತ್ತಾರೆ.

ಯೂರೋಪ್ ದೇಶದಿಂದ ಮಂಗಳೂರು ಡಿಯೊಸಿಸ್ ರೋಮನ್ ಕೆಥೋಲಿಕ್ ಮಿಶ್ಯನಿಗೆ ಬರುತ್ತಿದ್ದ ವರ್ಷಾವಧಿ ರೂಪಾಯಿ ೬೫,೦೦೦ ಧರ್ಮ ಹಣವು ಯುದ್ಧ

ಸಮ್ಮಂದ ನಿಂತುಹೋದ್ದರಿಂದ ರೋಮನ್ ಕೆಥೋಲಿಕ್ ಕ್ರೈಸ್ತರ ಧರ್ಮ ಸಂಸ್ಥೆಗಳನ್ನು ನಡಿಸಲಿಕ್ಕೆ ಹಣ ಸಾಕಾಗುವದಿಲ್ಲವಾದ್ದರಿಂದ ಜನರು ಹಣಸಹಾಯ ಮಾಡಬೇಕೆಂತ ಬಿಶೋಪ ದೊರೆಗಳಿಂದ ಒಂದ ಪಾಸ್ಟೋರಲ್ ಕಾಗದವು ದಕ್ಷಿಣ ಕನ್ನಡದ ಪ್ರತಿ ಇಗರ್ಜಿಯಲ್ಲಿ ವಿಕಾರ ಗುರುಗಳಿಂದ ಓದಿಹೇಳಲಾಗಿಯುದಲ್ಲದೆ ಧರ್ಮ ಹಣ ವಸೂಲು ಮಾಡಲಿಕ್ಕೆ ಪ್ರಾರಂಭಿಸಿದ್ದಾರೆ ಈ ಧರ್ಮ ಸಂಸ್ಥೆಗಳು ನಡಿಸಲಿಕ್ಕೆ ಇಲ್ಲಿಯ ಮಿಶನ್ ಹಟ್ಟವಳಿಯು ಸಾಕಾಗುವದಿಲ್ಲವೋ? ಜೆಪ್ಪು ಸೆಮಿನರಿಗೆ ಬೂರ ಒಸರ ದ್ರವ್ಯ ಸಹಾಯವು ಅವಶ್ಯ ಉಂಟೋ ಎಂಬ ಸಂಗತಿಗಳು ರೋಮನ್ ಕೆಥೋಲಿಕ್ ಕ್ರೈಸ್ತರಲ್ಲಿ ಅಲ್ಲಲ್ಲಿ ಚರ್ಚೆ ನಡೆಯುತ್ತಿದೆ

ಆಗೋಸ್ತು ತಾರೀಕು ೪ನೇ ದಿವಸ ಯೂರೋಪ್ ದೇಶದಲ್ಲಿ ಇಂಗ್ಲಿಷರಿಗೂ ಜರ್ಮನರಿಗೂ ಯುದ್ಧ ಪ್ರಾರಂಭ ದಿನವಾದ್ದರಿಂದ ಮಂಗಳೂರು ಅಧ್ಯಾಪಕರ ಸಂಘಕ್ಕೆ ಸೇರಿದ ಹಲವು ಎಲಿಮೆಂಟರಿ ಶಾಲೆಗಳಿಗೆ ರಜೆಕೊಟ್ಟಿದ್ದರು ರಜೆ ವಿಲಮಾರಿ ಆದಿನ್ನಲ್ಲಿ ಬ್ರಿಟಿಷ ಸೇನೆಗೆ ಜಯವು ಬೇಗನೇ ಸಿಕ್ಕುವ ಹಾಗೆ ಶಾಲೆಯಲ್ಲಿಯೇ ಭಗವಂತನಿಗೆ ಪ್ರಾರ್ಥನೆಗಳು ಮಾಡೋಣಾದವು

ಡಿಸ್ಟ್ರಿಕ್ಟ್ ಕೋರ್ಟಿನ ಶಿರಸ್ತೇದಾರರಾದ ಮ|| ರಾ|| ಉಳ್ಳಾಲ ನರಸಿಂಗರಾಯರು ಇದೇ ಜುಲೈ ತಾ ೬೦ರಲ್ಲಿ ಉಬ್ಬಸರೋಗದಿಂದ ದೈವಾಧೀನರಾದರೆಂದು ಬಹು ದುಃಖದಿಂದ ತಿಳಿಸುತ್ತೇವೆ ದಕ್ಷಿಣ ಕನ್ನಡದ ಸಾರಸ್ವತ ಬ್ರಾಹ್ಮಣರಲ್ಲಿ ಒಹಳ ಬುದ್ಧಿಶೀಲರೆಂದೂ ಸ್ವತಂತ್ರ ವಿಚಾರಶೀಲರೆಂದೂ ಪ್ರಖ್ಯಾತಗೊಂಡಿದ್ದ ಉಳ್ಳಾಲ ಮನೆತನದಲ್ಲಿ ಜನಿಸಿದ ಇವರು ಇಲ್ಲಿಯ ಗವರ್ನಮೆಂಟ ಕಾಲೇಜಿನಲಿ ವಿದ್ಯಾಭ್ಯಾಸವನ್ನು ಮಾಡಿ ಮದ್ರಾಸಿನಲ್ಲಿ ಬಿ ಎ ಪಾಸಾಗಿ ಹಲವು ವರ್ಷಗಳಿಂದ ಸಿವಿಲ್ ಕೋರ್ಟಿನಲ್ಲಿ ಬೇರೆ ಬೇರೆ ಕೆಲಸಗಳನ್ನೆ ನಡಿಸಿದ್ದರು ಇಂಗ್ಲಿಷಿನಲ್ಲಿ ಇವರ ಉಪಪತ್ತಿಯು ವಿಶೇಷವಾಗಿತ್ತು, ಬಾಲ್ಯದಿಂದಲೇ ಇಂಗ್ಲಿಷ ಸುಧಾರಣೆಯಲ್ಲಿ ತಲ್ಲೀನರಾಗಿದ್ದು, ಇಂಗ್ಲಿಷ ಆಚಾರಗಳಲ್ಲಿಯೂ ವಾಙ್ಮಯಗಳಲ್ಲಿಯೂ ವಿಶೇಷ ಅಭಿಮಾನವುಳ್ಳವರಾಗಿದ್ದರು ಹಿಂದೂ ಸಮಾಜದೊಳಗಿನ ಅನೇಕ ಹಾಳು ಪದ್ಧತಿಗಳು ಜಾತಿಯೊಳಗಣ ಹಲವು ಕುಕಕಗಳು ಅವರ ಮನಸ್ಸಿಗೊಪ್ಪದೆ ಅವರು ಪ್ರತ್ಯೇಕರಾಗಿದ್ದರೂ ಸದ್ಧರ್ಮ ಕಾರ್ಯಗಳಲ್ಲಿ ಪ್ರವೃತ್ತರಾಗಿದ್ದರು ಇಂಗ್ಲಿಷರ ಭಾವನೆಗಳನ್ನೂ, ಕಲ್ಪನೆಗಳನ್ನೂ ಹೊರತು ಅವರು ಇಂಗ್ಲಿಷರ ಉಡಿಗೆ ತೊಡಿಗೆಗಳನ್ನೂ ಮದ್ಯಾಚಾರಗಳನ್ನೂ ಸ್ವೀಕರಿಸಲಿಲ್ಲ ಇವರಿಗೆ ಮರಣ ಕಾಲದಲ್ಲಿ ೫೦ ವರ್ಷ ಇವರು ತಮ್ಮ ಹಿಂದೆ ಬಿಟ್ಟುಹೋದ ಇಬ್ಬರು ಗಂಡುಮಕ್ಕಳಿಗೂ ಒಂದು ಮಗಳಿಗೂ ಇವರ ವಿಧವೆಗೂ ದೇವರು ದುಃಖಶಮನವನ್ನು ಉಂಟುಮಾಡಲೆಂದು ಹಾರೈಸುತ್ತೇವೆ

ಆಕ್ಟಿಂಗ್ ಕಲೆಕ್ಟರ ದೊರೆಗಳವರು ಇದೇ ತಾ. ೯ಲ್ಲು ಸರ್ಕಿಟ್ ಬೆಳಸಿ ತಾ ೧೦, ೧೧ಲ್ಲು ಕಾಸರಗೋಡಿನಲ್ಲಿಯೂ, ತಾ ೧೩ಲ್ಲು ಪಳ್ಳಿಕೆರೆಯಲ್ಲಿಯೂ, ತಾ ೧೫, ೧೬ಲ್ಲು ಹೊಸದುರ್ಗದಲ್ಲಿಯೂ ಮೊಕ್ಕಾಂ ಮಾಡಿ ತಾ ೧೭ಕ್ಕೆ ಮಂಗಳೂರಿಗೆ ಹಿಂತಿರಗುವರು.

ಮಂಗಳೂರು ತಾಲೂಕಿಗೆ ಸಂಬಂಧಿಸಿದ್ದ ಅಬ್ಕಾರಿ ಗುತ್ತೆಗಳು ಈ ವರ್ಷ ಇದೇ ತಿಂಗಳ ತಾ ೩೩ರಲ್ಲು ಡಿಪ್ಯುಟಿ ಕಲೆಕ್ಟರವರಿಂದ ಮಂಗಳೂರು ತಾಲೂಕು ಆಫೀಸಿನಲ್ಲಿ ಏಲಂ ಮಾಡಲ್ಪಟ್ಟವು ಏಲಮಿನ ಐವೇಜು ಕಳೆದ ವರ್ಷಕ್ಕಿಂತ ಈ ವರ್ಷ ಹೆಚ್ಚಾಗಿ ಒಂದಿರುವದೆಂತ ತಿಳಿಯುತ್ತೇವೆ.

ಯುದ್ಧವು ಪ್ರಾರಂಭವಾಗಿ ಇದೇ ಕಳೆದ ೪ನೇ ತಾರೀಕಿಗೆ ಒಂದು ವರುಷ ಕಳೆದುಹೋದ್ದರಿಂದ ಈ ಯುದ್ಧವು ನಮ್ಮವರಿಗೆ ವಿಜಯಕಾರಿಯಾಗಿ ಶೀಘ್ರದಲ್ಲಿಯೇ ಪರಿಸಮಾಪ್ತಿಯಾಗಬೇಕೆಂದು ಆ ದಿನ ದೇವಸ್ಥಾನಗಳಲ್ಲಿಯೂ, ಮಶೀದಿಗಳಲ್ಲಿಯೂ ಇಗರ್ಜಿಗಳಲ್ಲಿಯೂ ಪೂಜೆ ಪ್ರಾರ್ಥನೆಗಳು ಜರಗಿದವು ತಮ್ಮ ತಮ್ಮ ಧರ್ಮಾನುಸಾರವಾಗಿ ಸರ್ವ ಜಾತಿಯವರು ಮಂಗಳೂರಲ್ಲಿ ಪ್ರಾರ್ಥನೆ ಮಾಡಿದರು ಈ ನಮ್ಮ ಮೊರೆಯು ಕರುಣಾಳುವಾದ ದೇವರ ಕಿವಿಯ ಮೇಲ ಬೀಳದೆ ಹೋಗಲಿಕ್ಕಿಲ್ಲ

ಈ ಯುದ್ಧ ಸಂಬಂಧವಾಗಿ ಸಾಯಂಕಾಲ ೫|| ಘಂಟೆಯಲ್ಲಿ ಪ್ರವಾಸಿಗಳ ಸಭೆಯೊಂದು ಕೂಡಿಬಂತು ನಮ್ಮ ಡಿಸ್ಟ್ರಿಕ್ಟ ಜಡ್ಜರಾದ ಮೀ ಸ್ಮಿತ್ ದೊರೆಗಳು ಅಗ್ರಾಸನವನ್ನು ವಹಿಸಿದ್ದರು ಈ ಯುದ್ಧದಲ್ಲಿ ನಾವು ಇನ್ನೂ ಮಾಡಬೇಕಾದ ಮತ್ತು ಮಾಡಬಹುದಾದ ಹಲವು ಬಗೆಯ ಕೆಲಸಗಳಿವೆ ಹಣವನ್ನು ಕೊಡುವದು, ತಿಂಡಿ ಸಾಮಾನು ಕಳುಹಿಸುವದು, ಯುದ್ಧದ ವಿಷಯವಾಗಿ ತಪ್ಪು ಅಭಿಪ್ರಾಯಗಳನ್ನು ಸರಿಗೊಳಿಸುವದು ಇವೇ ಮೊದಲಾಗಿ ನಾನಾ ಪ್ರಕಾರದಿಂದ ಸರಕಾರಕ್ಕೆ ಈ ಕಾಲದಲ್ಲಿ ಸಹಾಯಮಾಡುವದು ನಮ್ಮಲ್ಲಿ ಪ್ರತೀ ಒಬ್ಬರ ಕರ್ತವ್ಯವೆಂದು ಮ ರಾ ರೋಯರವರು ಮ. ರಾ ಅ ಶ್ರೀನಿವಾಸಪೈಗಳೇ ಇತ್ಯಾದಿ ಮಹಾಶಯರು ಮಾತಾಡಿದರು

ಮ ರಾ ರಾ ಪಿ ಡಿ ಎ ಅಂಡರ್ಸನ್ ಮಾಲ್ ಪೈಯವರು ಈ ಜಿಲ್ಲೆಯ ರಿಜಿಸ್ಟ್ರಾರ ಆಫ ಎಶ್ಯೂರೆನ್ಸಸ್ ಆಗಿ ನೇಮಕವಾಗಿದ್ದಾರೆ

ಈಗ ಹರ್ಪನಹಳ್ಳಿ ರೇಂಜಿನಲ್ಲಿ ಸಬ್ ಅಸಿಸ್ಟ್ಯಾಂಟ್ ಕೆಲಸವನ್ನು ನೋಡುತ್ತಿರ ವ ಮ ರಾ ಪಿ ನರಸಿಂಗರಾಯರನ್ನು ಉಪ್ಪಿ ರೇಂಜ್ ಸಬ್ ಅಸಿಸ್ಟಾಂಟರೆಂದು ಕಾಯಂ ನೇಮಕವಾಗಿ, ಪ್ರಕೃತದಲ್ಲಿ ಹರ್ಪನಹಳ್ಳಿಯಲ್ಲಿಯೇ ಅದೇ ಕೆಲಸದ ಮೇಲೆ ಇರುವಂತೆ ಫಾಯಿಸ್ ಆಗಿದೆ

~~~~

ಬಂಟ್ವಾಳ: — ತಾ. ೪—೮—೧೯೧೫ರಲ್ಲಿ ನಮ್ಮ ಚಕ್ರವರ್ತಿಗಳು ಜರ್ಮನರ ಮೇಲೆ ಯುದ್ಧಘೋಷಣೆ ಮಾಡಿ ಇಂದಿಗೆ ಒಂದು ಸಂವತ್ಸರವಾದ ಪ್ರಯುಕ್ತ, ಇಲ್ಲಿಯ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಕಾಲಾ ಮಕ್ಕಳೂ ಇತರ ಗೃಹಸ್ಥರೂ, ನಮ್ಮ ಡ್ಯೂಟಿ ತಹಶೀಲ್ದಾರರ ಸಮೇತವಾಗಿ ನೆರೆದು, ಶ್ರೀದೇವರಿಗೆ,—ಬ್ರಿಟಿಷರಾಜಧ್ವಜಕ್ಕೆ ಕ್ಷಿಪ್ರದಲ್ಲೇ ಅಪೂರ್ವ ಜಯವು ಲಭಿಸುವಂತೆ ಏಕಕಂಠರಾಗಿ ಪ್ರಾರ್ಥಿಸಿ, ರಾಜಗೀತವನ್ನೂ ರಾಷ್ಟ್ರಗೀತವನ್ನೂ ಹಾಡಿದುದಾಯಿತು. ಶಾಲೆಗಳಿಗೆ ಅರೆದಿನದ ರಜಾ ಕೊಡೋಣಾಗಿದ್ದಿತು

ಇಲ್ಲಿ ಕೆಲಸ್ಥಳವು ಬಡವರಿಗೆ ಮನೆಗಳನ್ನು ಕಟ್ಟಿಸುವುದಕ್ಕೆಂದು ಪ್ರತ್ಯೇಕವಾಗಿರಿಸಿದ್ದು, ತುಂಬೆಗುಡ್ಡೆಯ ಒಳಿ ಸರಕಾರದ ಭಾವಿಯೊಂದನ್ನು ತೋಡಿಸುತ್ತಿದ್ದರು ಭಾವಿಗೆ ಒಸರಿಗೆ ಮೊದಲಾಗಿ ಕಲ್ಲುಗಳೇ ಬಂದಿವೆ ಇನ್ನು ಅಲ್ಲಿ ಭಾವಿಯನ್ನು ಅಗಿವ ಕೆಲಸವನ್ನು ಮುಂದರಿಸುವಂತಿಲ್ಲ. ಆದರೆ, ಹೇಗೂ ಅದರ ಪಾರ್ಶ್ವದಲ್ಲಿ "ಮತ್ತೊಂದನ್ನು ಮುಂದಣ ಬಿಡಾರದವರ ಅನುಕೂಲತೆಗಾಗಿ ಕಟ್ಟಿಸುತಲಿದ್ದರೆ ಚೆನ್ನಾಗುವುದು ಅಷ್ಟಲ್ಲದೆ ಸ್ಥಳವನ್ನು ಪಡೆದ ಕೆಲವರಿಗೆ ಕಡಮೆದರದಲ್ಲೂ, ಕೆಲವರಿಗೆ ಹೆಚ್ಚಿನ ದರದಲ್ಲೂ ಬೇರೇಚಾಗಿರುವುದಂತೆ! ಈ ಕುರಿತು ಜಿಲ್ಲಾಧಿಕಾರಿಗಳಿಗೆ ಒಂದು ಅರ್ಜಿಯನ್ನು ಕಳುಹಬೇಕೆಂದಿದ್ದಾರೆ ಬಡವರು ಮನೆಗೆ ದಿಕ್ಕಿಲ್ಲದಿದ್ದುದರಿಂದ ಅವರಿಗೆ ನೆಲವು ಧರ್ಮಕ್ಕೆ ದೊರೆಯದಿದ್ದರೂ, ಅಲ್ಪ ಬೇರೇಜಿಗೆ ದೊರೆಯದೆ, ಜಮೀನುದಾರರಾದ ಕೆಲವರು ಪಡೆದು ಇರುವ ಸ್ಥಳಕ್ಕೆ ಕಡಿಮೆ ಬೇರೇಜಾಗಿರುವುದು ಯಾವುದೋ ಒಂದು ತಪ್ಪು ಲೆಕ್ಕವೆನ್ನಬೇಕಾಗಿದೆ.

ಒಂದು ಪೇಟೆಯಲ್ಲಿ ಅಕ್ಕಿ ವ್ಯಾಪಾರಿಗಳು ಇಷ್ಟು ಹೆಚ್ಚಾಗಿರುತ್ತಾ, ಇಲ್ಲಿಯ ವ್ಯಾಪಾರಿಗಳ ಭಂಡಸಾಲೆಗಳಲ್ಲಿ ಯಾವ ಎರಡೂ ಕಳಸೆಗಳು ಸರಿಯಾಗಿಲ್ಲವಂತೆ! ಒಂದು ಕಳಸೆಯು ಸೇರಿಗೆ ಕಡಮೆಯಾದರೆ, ಮತ್ತೊಂದು ಸೇರಿಗೆ ಹೆಚ್ಚಾಗಿರುವುದರಿಂದ ಅಕ್ಕಿ ವ್ಯಾಪಾರಿಗಳಿಗೆ ತೊಂದರೆಯುಂಟಾಗಿದೆ. ಮರದಕಳಸೆಗಳು ಮಳೆಗೆ ಮತ್ತು ಸೆಕೆಗೆ ಹೆಚ್ಚುಕಡಮೆ ಪರಿಮಾಣ ಹೊಂದುತ್ತಿವೆಯೋ! ತಾಮ್ರ ವ ಹಿತ್ತಾಳೆಯ ಕಳಸೆಗಳನ್ನು ಮಾಡಾಟಕ್ಕೆ ಪಡೆಯಬಹುದಾಗಿದ್ದರೆ ಇಂತಹ ತೊಂದರೆಯುಂಟಾಗುತಿರಲಿಲ್ಲ ಮೊಹರು ಹಾಕುವಾಗ, ಮರದ ಕಳಸೆಯಲ್ಲಿ ನೀರನ್ನು ಎರೆದರೆ, ಕೆಲಮರಗಳು ನೀರನ್ನು ಹೆಚ್ಚಾಗಿ ಹೀರಿಕೊಂಡು ಹೀಗೆ ತಪ್ಪುಕಳಸೆಯುಂಟಾಗಿರಬಹುದಾಗಿ ಭಾವಿಸಿರುವೆವು

~~~~

ಸಹಕಾರ.

ಸರ್ಕಿಲಾರು ನಂಬ್ರು ೧೨.

ಮುಂಚಿನ ಸಾಲ ತೀರಿಸೋಣ

೧. ಸಂಘಗಳ ಕ್ರಮಗಳಲ್ಲಿ ನಮೂದಿಸಲ್ಪಟ್ಟ ಉಪಯೋಗಕರವಾದ ಕಾರ್ಯಗಳಲ್ಲಿ ಮುಂಚಿನ ಸಾಲಗಳನ್ನು ಪರಿಹರಿಸುವುದು ಒಂದಾಗಿದೆ ಸಹಕಾರ ಸಂಘವು ಸ್ಥಾಪಿತವಾದ ನಂತರ ಅದಕ್ಕೆ ಸೇರಿದವರು ತಾವು ಉಳಿಸಿದ ದನ್ನೆಲ್ಲ ಆ ಸಂಘದಲ್ಲಿ ಕಟ್ಟಿಡುವುದಲ್ಲದೆ ತಮಗೆ ಸಂಭವಿಸಬಹುದಾದ ಹಣದ ಅಡಚಣೆಗಳನ್ನೆಲ್ಲಾ ಅದರ ದೆಶೆಯಿಂದಲೇ ಪೂರೈಸಿಕೊಳ್ಳಬೇಕೆಂಬುದು ಸಹಕಾರದ ಒಂದು ಮುಖ್ಯ ತತ್ವವಾಗಿದೆ,

೨ ಮುಂಚಿನ ಸಾಲಗಳನ್ನು ತೀರಿಸುವುದರ ಕುರಿತು ತಾ. ೨೮—೨—೧೯೧೩ರಲ್ಲು ಸಹಕಾರ ಸಂಘಗಳ ರಿಜಿಸ್ಟ್ರಾರರವರು ಒಂದ ಸರ್ಕಿಲಾರನ್ನು ಪ್ರಕಟಿಸಿದ್ದರು ಆದರೆ ಆಗ ಸ್ಥಾಪಿತವಾಗಿದ್ದ ಕೆಲವು ಸಂಘಗಳು ಅದರಂತೆ ನಡಿಯುವುದಿಲ್ಲವೆಂದು ತೋರಿಬಂದುದರಿಂದಲೂ ಇನ್ನು ಕೆಲವು ಸಂಘಗಳು ಅದರ ನಂತರ ಸ್ಥಾಪಿತವಾದುದರಿಂದ ಅದರ ಕುರಿತು ಅರಿಯದವರಾದುದರಿಂದಲೂ ಅದನ್ನು ಈ ಕೆಳಗೆ ಕನ್ನಡಿಸಿಯದೆ.

"ಮುಂಚಿನ ಸಾಲ ಪರಿಹಾರಕ್ಕೋಸ್ಕರ ಸಾಲಗಳನ್ನು ಕೊಟ್ಟ ಅನೇಕ ಸಂಗತಿಗಳಲ್ಲಿ ಸಾಲಗಾರರು ಬಿಡಿಸಿಕೊಂಡ ಮುಂಚಿನ ಕರಾರುಗಳನ್ನು ಹಾಜರುಮಾಡುವುದಿಲ್ಲವೆಂತ ಅನೇಕ ಸಂಘಗಳ ಲೆಖ್ಖ ಪರಿಶೋಧನೆಯಿಂದ ತಿಳಿದು ಬಂದಿದೆ. ಹಾಗೆ ಬಿಡಿಸಿಕೊಂಡ ಕರಾರುಗಳನ್ನು ಹಾಜರುಪಡಿಸದಿದ್ದರೆ ಯಾವ ಸಾಲ ಪರಿಹಾರಕ್ಕೋಸ್ಕರ ಸಂಘದಿಂದ ಸಾಲಪಡೆಕೊಂಡಿತ್ತೋ ಆ ಸಾಲಗಳನ್ನು ತೀರಿಸಲಿಲ್ಲವೆಂದಾಗಲಿ ಅಥವಾ ಆ ಸಾಲಗಳು ಇರಲೇ ಇಲ್ಲವೆಂದಾಗಲಿ ಎರಡರಲ್ಲಿ ಒಂದು ಅರ್ಥ ಗ್ರಹಿಸಲೇಬೇಕಾಗುತ್ತದೆ ಅಂತಹ ಸಂಗತಿಗಳಲ್ಲಿ ಸದರಿ ಮುಂಚಿನ ಕರಾರುಗಳನ್ನು ಹಾಜರುಪಡಿಸುವಂತೆ ವ್ಯವಸ್ಥೆಯಮಾಡಲಿಕ್ಕಾಗಲಿ ಅವುಗಳನ್ನು ಬಿಡಿಸಿಕೊಳ್ಳುವದಕ್ಕೆಂತ ಪಡಕೊಂಡ ಸಾಲಗಳ ವಿನಿಯೋಗದ ಕುರಿತು ಯಾವದೊಂದು ಅಭಿಪ್ರಾಯಪಡಲಿಕ್ಕಾಗಲಿ ಪಂಚಾಯತರಿಗೆ ಅನುಕೂಲವಿರುವುದಿಲ್ಲ. ಆದುದರಿಂದ ಅಂತಹ ಸಾಲಗಳನ್ನು ಸೇಂಕ್ಷನ್ ಮಾಡುವಾಗ ಅವುಗಳನ್ನು ಸಂಘದಿಂದಲೇ ಸೀದಾ ಸಲಾಹಿಸಿ ಪಾವತಿಗಳನ್ನು ಪಡಕೊಳ್ಳುವದೆಂದೂ ಅದಕ್ಕೆ ಸಾಲಗಾರರಿಗೆ ಕಬೂಲಿದ್ದರೆ ಮಾತ್ರ ಸಾಲಗಳನ್ನು ಸೆಂಕ್ಷನ್ ಮಾಡಲಾದೀತೆಂದೂ ಪಂಚಾಯತರು ಸ್ಪಷ್ಟವಾಗಿ ಹೇಳಿಯೇ ಸೆಂಕ್ಷನ್ ಮಾಡತಕ್ಕದ್ದು ಹೀಗೆ ಮಾಡಿದರೆ ಮುಂಚಿನ ಸಾಲಗಳನ್ನು ತೀರಿಸುವುದಕ್ಕೆಂದು ತೆಗೆದುಕೊಳ್ಳುವ ಸಾಲಗಳು ದುರ್ವಿನಿಯೋಗವಾಗಿ ಹೋಗದಂತೆ ತಕ್ಕ ಜಾಗ್ರತೆಯನ್ನು ಇಟ್ಟಂತಾಗುವುದು."

೩ ಈ ಸರ್ಕಿಲಾರಿನ ತಾತ್ಪರ್ಯವನ್ನು ಚೆನ್ನಾಗಿ ಗ್ರಹಿಸಿ ಇದನ್ನು ಅನುಸರಿಸಬೇಕೆಂತ ಈ ಮೂಲಕ ಅಪೇಕ್ಷಿಸೋಣಾಗುತ್ತದೆ.

ದಕ್ಷಿಣಕನ್ನಡಾ ಸೆಂಟ್ರಲ್ ಕೊ-ಆಪರೇಟಿವ್ ಬೇಂಕ್, ಲಿಮಿಟೆಡ್
ಪುತ್ತೂರು ತಾ 1-8-1915.
} ಎಮ್. ಅನಂತರಾವ್
ಕಾರ್ಯದರ್ಶಿ.

ಸ್ವದೇಶಾಭಿಮಾನಿಯ ನೋಟೀಸು.

ಚಂದಾದಾರರು ನಮಗೆ ಬರೆಯುವ ಎಲ್ಲಾ ಪತ್ರ ವ್ಯವಹಾರಗಳಲ್ಲಿ ತಮ್ಮ ತಮ್ಮ ವಿಳಾಸದೊಂದಿಗೆ ಇರುವ ರಿಜಿಸ್ಟರ ನಂಬರನ್ನು ತಪ್ಪದೆ ಬರೆಯತಕ್ಕದ್ದು. ರಿಜಿಸ್ಟರು ನಂಬರು ಇಲ್ಲದ ಪತ್ರಗಳಿಗೆ ನಿಗಾ ಕೊಡಲಾರೆವು.

ಪತ್ರಿಕೆಗೆ ಚಂದಾದಾರರಾಗಿ ಸೇರಬೇಕೆನ್ನುವವರು ವರ್ಷ 1ರ ಚಂದಾ ಹಣ ರೂ. 2—1—0ನ್ನು ಮನಿಯಾರ್ಡರು ಮೂಲಕ ರವಾನಿಸುವದುತ್ತಮ. ವಿ. ಪಿ. ಮೂಲಕ ಕಳುಹಿಸಬೇಕೆಂದು ಬರಿಯುವಂಥವರಿಗೆ ಪತ್ರಿಕೆಯ ಹಿಂದಿನ ಸಂಚಿಕೆಯನ್ನು ವಿ. ಪಿ. ಮಾಡಿ ಕಳುಹಿಸಲಾಗುವದು. ವಿ. ಪಿ.ಯ ಮೊಬಲಗು ನಮಗೆ ತಲ್ಪಿದ ನಂತರವೇ ಪತ್ರಿಕೆಯನ್ನು ಕಳುಹಿಸಲು ಪ್ರಾರಂಭಿಸುವೆವು.

ಪತ್ರಗಳನ್ನು ಬರಿಯುವಾಗ ತಮ್ಮ ಹೆಸರು, ವಿಳಾಸ ಮತ್ತು ಪೋಸ್ಟಾಫೀಸನ್ನು ಸ್ಪಷ್ಟಾಕ್ಷರದಲ್ಲಿ ಬರಿಯತಕ್ಕದ್ದು.

ಮ್ಯಾನೇಜರ್,
ಸ್ವದೇಶಾಭಿಮಾನಿ ಆಫೀಸು,
ಮಂಗಳೂರು, ದ. ಕ.

B. Narasimha Prabhu,
Bantval, (SOUTH CANARA).
AGENT FOR
Malabar and South Canara.

ನರೆಕೂದಲನ್ನಿಟ್ಟುಕೊಂಡು ಮುದುಕರಾಗಿ ಕಾಣುವುದೇಕೆ?

ದರ್ಬಾರ್ ಕೂದಲು ರಂಗು.

ಒಂದು ಸಲ ಹಚ್ಚಿದರೆ 20 ವರುಷ ಪ್ರಾಯದ ಸಮರ್ಥರಂತೆ ಕಾಣುತ್ತೀರಿ. ಈ ರಂಗು ಹಚ್ಚಿಕೊಂಡರೆ ಕೂದಲು ಅಚ್ಚ ಕಪ್ಪಾಗಿ ಹೊಳೆಯುತ್ತದೆ. ಈಗ ಮಾರಿಕೆಗೆ ಬಂದಿರುವ ಅಲ್ಪತರದ ಕೂದಲಿಗೆ ಹಚ್ಚುವ ಬಣ್ಣಗಳೂ ರಂಗುಗಳೂ ತುಂಬ ಕೀಳು ಜಾತಿಯವು. ಹಚ್ಚಿದ ಮೇಲೆ ಕೂದಲು ಕೆಂಚು ತಿರುಗಿ ಅಸಹ್ಯವಾಗಿ ಕಾಣುತ್ತದೆ. ನಮ್ಮ "ದರ್ಬಾರ್ ಕೂದಲು ರಂಗು" ಅಂಥಾದ್ದಲ್ಲ, ಬಹು ಮೇಲಾದದ್ದು. ಒಂದಾವರ್ತಿ ತರಿಸಿ ಪರೀಕ್ಷೆ ಮಾಡಿದರೆ ನೀವೇ ಸಂತೋಷಪಡುವಿರಿ. ಕ್ರಯ ಬ್ರುಸು ಸಮೇತ ಬಾಟ್ಲಿ ಒಂದಕ್ಕೆ ರೂ 1, ಅಂಚೆ ಹಾಸಲು 4 ಆಣೆ.

ಎನ್. ಕೆ. ಲೋಟಸ್ ಎಂಡ್ ಕೊ,
ನಂಬ್ರ 8 ಇರುಳಪ್ಪನ್ ಸ್ಟ್ರೀಟ್,
ಸಾಹುಕಾರಪೇಟೆ, ಮದ್ರಾಸು.

ಒಂದು ತಿಂಗಳ ತನಕ ಮಾತ್ರ

ಕಡಿಮೆ ದರ!

ನಮ್ಮ ಶ್ಲಿಪ್ಪಿ ರೆಗ್ಯುಲೇಟರ್ ವಾಚು ಸರಿಯಾದ ಸಮಯವನ್ನು ತೋರಿಸುವಂಥಾದ್ದಾಗಿಯೂ ಮಹನೀಯರಿಗೆ ತಕ್ಕುದುದಾಗಿಯೂ ಇದೆ. ಈ ವಾಚಿಗೆ 5 ವರುಷಗಳ ಗ್ಯಾರಂಟಿ ಇದೆ. ಕ್ರಯ ರೂ. 12. ಈಗ ಕ್ರಯ ರೂ. 4 ಮಾತ್ರ. ಲೇಡಿಸ್ 9 ಕೆರೆಟ್ ಗೋಲ್ಡ್ ವಾಚು ಕ್ರಯ ರೂ. 48 ಈಗ ರೂ. 16 ಲೇಡಿಸ್ ಸಿಲ್ವರ್ ವಾಚು ಕ್ರಯ ರೂ. 21 ಈಗ ರೂ. 7. ಬಲಿಷ್ಟವಾಗಿಯೂ ಸಂಬಳಿಗೆ ಯೋಗ್ಯವಾಗಿಯೂ ಇದ್ದು 8 ದಿವಸಕ್ಕೊಮ್ಮೆ ಕೀ ಕೊಡುವ ವಾಚು ನಿಕ್ಕಲ್ ಕೇಜ ಕ್ರಯ ರೂ. 24 ಈಗ ರೂ 8 ಬೆಳ್ಳಿ ಕೇಜು ಓಪನ್‌ಫೇಸ್ ರೂ. 33 ಈಗ ರೂ. 11. ಸಿಲ್ವರ್ ಹಂಟಿಂಗ್ ಕೇಜು ರೂ. 42 ಈಗ ರೂ. 14. ಉತ್ತಮವಾದ ರಿಸ್ಟು ವಾಚು ಚರ್ಮದ ಪಟ್ಟಿ ಸಹಿತ ರೂ 15 ಈಗ ರೂ. 5.

ಸೂಚನೆ:—ರಿಸ್ಟು ವಾಚು ವಿನಹ ಇತರ ಪ್ರತಿ ಒಂದು ವಾಚು ಪಡಕೊಳ್ಳುವವರಿಗೆ ಒಂದು ಚೈನು, ಒಂದು ಚೂರಿ, ಒಂದು ಉಂಗುರವೂ 6 ವಾಚುಗಳನ್ನು ಒಂದೇ ಸಲ ತರಿಸಿಕೊಳ್ಳುವವರಿಗೆ ಅದೇ ನಮೂನೆಯ ಒಂದು ವಾಚು ಬಹುಮಾನವಾಗಿ ದೊರಿಯುವದು.

ವಿಳಾಸ:—
ಕಾಂಪಿಟಿಶನ್ ವಾಚ್ ಕೊ.,
20 ಮದನ ಮಿತ್ರ ಲೇನ್,
ಕಲ್ಕತ್ತಾ.

Address.—
Competition Watch Co.,
20 Madan Mitra Lane,
(S.) CALCUTTA.

ಕನ್ನಡ ಅಕ್ಷರದ ಗ್ರಂಥಗಳು.

ಶ್ರೀಮದ್ಭಾಗವತ ದ್ವಾದಶಸ್ಕಂದಗಳಡಗಿರುವ ಅವ್ವಲ್ ಪ್ರತಿ ಕ್ಯಾಲಿಕೊ ಬ್ಯಾಂಡ	3	8	0
ಡಿ. ಸಾದಾ ಬ್ಯಾಂಡ ದಶಮಸ್ಕಂದ	1	8	0
ದಶಪರ್ವ ಭಾರತ	2	0	0
ಅಷ್ಟಪರ್ವ ಡಿ. ಅವ್ವಲ್ ಪ್ರತಿ	1	8	0
ಡಿ. ಸಾದಾ	1	0	0
ಭಾರತ ಕಥಾಸಂಗ್ರಹ	0	6	0
ಜೈಮಿನಿ ಭಾರತ ಅವ್ವಲ್ ಕ್ಯಾಲಿಕೊ ಬ್ಯಾಂಡ	1	8	0
ಡಿ. ಡಿ. ಸಾದಾ ಬ್ಯಾಂಡ	1	4	0
ಡಿ. ದುಯ್ಯಂ ಡಿ.	0	12	0
ಜೈಮಿನಿ ಭಾರತ ಕಥಾಸಂಗ್ರಹ	0	12	0
ಜೈಮಿನಿ ಭಾರತ ಟೀಕಾ ತಾತ್ಪರ್ಯ ಸಮೇತ ಅವ್ವಲ್	4	8	0
ತೊರವೆ ರಾಮಾಯಣ ಅವ್ವಲ್ ಕ್ಯಾಲಿಕೊ ಬ್ಯಾಂಡ	2	0	0
ಡಿ. ಸಾದಾ ಬ್ಯಾಂಡ	1	4	0
ರಾಮಾಯಣ ಕಥಾಸಂಗ್ರಹ	0	12	0
ಸೀತಾ ಚರಿತ್ರ	1	2	0
ರಾಜಶೇಖರ ವಿಲಾಸ	0	8	0
ಗಯೋಪಾಖ್ಯಾನ ಕನ್ನಡಪದ್ಯ ಕಾವ್ಯ	0	8	0
ನಾಗವರ್ಮ ಛಂದಸ್ಸು	0	6	0
ಸಪ್ತಶತಿ ದೇವಿ ಮಹಾತ್ಮೆ	0	6	0
ದೇವೀಮಹಾತ್ಮೆ ಕಥಾ ಸಂಗ್ರಹ	0	6	0
ಅನುಭವಾಮೃತ	0	12	0
ವಿವೇಕಚಿಂತಾಮಣಿ	0	12	0
ಹಟಯೋಗಪ್ರದೀಪಿಕಾ	1	4	0
ಪರಮಾನುಭವಬೋಧೆ	1	0	0
ನಿಜದೀಪಿಕಾತಿರೋರತ್ನ	1	4	0
ಭಗವದ್ಗೀತಾ ಸಂಸ್ಕೃತ ಶ್ಲೋಕ ಮತ್ತು ಅರ್ಥ, ಚಿತ್ರನಾರು ಬ್ಯಾಂಡ	0	10	0
ಡಿ. ರಾಮಕೃಷ್ಣಸೂರಿ, ಪ್ರತಿಪದ ಟೀಕು ತಾತ್ಪರ್ಯ ಸಹ	2	0	0
ಸತ್ಯನಾರಾಯಣವ್ರತಕಥಾ	0	4	0
ವ್ರತವಲ್ಲಿ (40 ವ್ರತಗಳು ಅಡಗಿರುತ್ತೆ)	1	0	0
ಕೈವಲ್ಯ ಪದ್ಧತಿ ಕನ್ನಡ ಟೀಕು	0	12	0
ಭಾಷಾಕುಸುಮ ಮಂಜರಿ	0	8	0
ಮಣಿಮಂಜರಿ ಕನ್ನಡ ಟೀಕು	0	14	0
ಟೀಕಾ ಗುರು ಬಾಲಪ್ರಬೋಧಿಕೆ, ಅವ್ವಲ್ ಕ್ಯಾಲಿಕೊ ಬ್ಯಾಂಡ	3	0	0
ಡಿ. ತ್ರಿಖಾಂಡ ಅಮರಕೋಶ, ಅವ್ವಲ್ ಕ್ಯಾಲಿಕೊ ಬ್ಯಾಂಡ	1	12	0
ಡಿ. ಡಿ. ಸಾದಾಬ್ಯಾಂಡ	0	14	0
ಮೂಲ ತ್ರಿಖಾಂಡ ಅಮರಕೋಶ	0	4	0
ಡಿ. ಪ್ರಥಮ ಖಾಂಡ ಡಿ.	0	1[illegible]	0
ಕರ್ನಾಟಕ ಶಬ್ದಮಂಜರಿ	0	4	0
ಧನಂಜಯನಿಘಂಟು	0	4	0
6 ಭಾಷಾವಕಬ್ಲರಿ	0	4	0

ಇವುಗಳಲ್ಲದೆ ಕನ್ನಡ, ಸಂಸ್ಕೃತ ಮರಾಠಿ ಪುಸ್ತಕಗಳೂ, ಶಾಲಾ ವಿದ್ಯಾರ್ಥಿಗಳ ಉಪಯೋಗದ ಎಕ್ಸರಸೈಜ್ ಪುಸ್ತಕ, ಡ್ರೋಯಿಂಗ್ ಪುಸ್ತಕ, ಗ್ರಾಫ್ ಎಕ್ಸರಸೈಜ್ ಪುಸ್ತಕ, ಮತ್ತು ನಾನಾತರದ ಬರವಣಿಗೆ ಸಾಮಗ್ರಿಗಳೂ ಇತ್ಯಾದಿ ಸುಲಭ ಕ್ರಯಕ್ಕೆ ದೊರೆಯುತ್ತವೆ.

ಕೆ. ಎಮ್. ದಾಸಪ್ರಭು,
ರಥಬೀದಿ,
ಮಂಗಳೂರು.

ಅಪೂರ್ವ ಗ್ರಂಥ! ಅಪೂರ್ವ ಗ್ರಂಥ!!

ಬಳ್ಳಾರಿ ಶ್ರೀ ಮರಿಸ್ವಾಮಿಗಳು

ಸಕ್ಕರಿ ಕರಡೆಪ್ಪ

ನವರ ಜೀವಿತ ಚರಿತ್ರೆ.

ಈ ಮಹಿಮರ ಚರಿತ್ರೆಯನ್ನು ಇಲ್ಲಿಯವರಿಗೂ ಯಾರೊಬ್ಬರು ಪ್ರಕಟನ ಮಾಡಿದ್ದಿಲ್ಲವೆಂಬುದು ತಿಳಿದದ್ದಾಗಿರುವದಷ್ಟೆ. ಇಂತಹ ಅದ್ಭುತ ಮಹಿಮಾಶಾಲಿಗಳ ಚರಿತ್ರೆಗಳು ಅವಶ್ಯಕವಾಗಿಯೂ ಆದರಣೀಯಗಳಾಗಿರ ವವು. ಇವರ ಮಹಿಮೆಯು ಅಸಾಧಾರಣವಾದುದು. ಒಂದೆ ದಿನ ಒಂದೆ ಕಾಲದಲ್ಲಿ ಬಳ್ಳಾರಿ, ಬೆಂಗಳೂರು, ಭೈರವಪುರ ಎಂಬ ಮೂರು ಸ್ಥಳಗಳಲ್ಲಿ ಸಮಾಧಿಯನ್ನು ಹೊಂದಿದರೆಂಬುದೊಂದೆ ಅಪ್ರತಿಮ ಪ್ರಭಾವವನ್ನು ಸೂಚಿಸುತ್ತಿರುವದು. ಇವರು ಅಲ್ಲದೆ ತೋರಿಸಿದ ಮಹಿಮೆಗಳು ಅನಂತವಾಗಿರುವವು. ಇದಲ್ಲದೆ ಇವರ ಶಿಷ್ಯನಾದ ಸಕ್ಕರಿಕರಡಪ್ಪನ ಅಪಾರ ಮಹಿಮೆಯು ವಿಶದವಾಗಿ ವರ್ಣಿಸಲ್ಪಟ್ಟಿರುವದು. ಈ ಸಕ್ಕರಿ ಶರಣನಂತಹ ಶರಣನು ಇಡೀ ಪ್ರಪಂಚದಲ್ಲಿ ವೀರಶೈವ ಮತದೊಳಗೆ ಹುಟ್ಟಿಲ್ಲವೆಂದು [illegible]. ಆ ಗುರುಶಿಷ್ಯರೀರ್ವರ ಚರಿತ್ರೆಗಳು ಒಂದು ಗ್ರಂಥದಲ್ಲಿ ತಯಾರಾಗಿರುವವು. ಈ ಗ್ರಂಥವನ್ನೋದುವವರು ಖಂಡಿತವಾಗಿಯೂ ನೀತಿ, ಭಕ್ತಿ, ಜ್ಞಾನಗಳ ಕಡೆ ವ ನಸ್ಸನ್ನು ಕೊಡದಿರಲಾರರು. ಮತ್ತು ಇದಲ್ಲದೆ ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರರವರು ಶಿಷ್ಯರಾದ ಕಂಬಳಿ ಸ್ವಾಮಿಗಳ ಸಮೇತ ಇರುವ ಮಹಾಸ್ವಾಮಿಗಳ ಭಾವಚಿತ್ರ ಪಟವು ಪ್ರಥಮ ಪುಟದಲ್ಲಿ ಅಂದವಾಗಿರಿಸಲ್ಪಟ್ಟಿರುವದು. ನಿಮ್ಮ ವಿಳಾಸ ಚೆನ್ನಾಗಿರಲಿ. ಇದರ ಬೆಲೆ ವಿ ಪಿ ಸಹ ರೂ 1—2—0

ನಮ್ಮ ವಿಳಾಸ — ಬಸವರಾಜ ಕಂಪೆನಿ, ಬಳ್ಳಾರಿ.

ಶಾಶ್ವತವಾದ ಆರೋಗ್ಯವನ್ನು ಹೊಂದುವದಕ್ಕೆ ಸುಲಭವಾದ ಮಾರ್ಗವು.

ಮದನಮಂಜರೀ ಮಾತ್ರೆಗಳು

ಉಪಯೋಗಿಸುವದರಿಂದ ಆಗಿರುವದು. ಈ ಮಾತ್ರೆಗಳು ಅಜೀರ್ಣವು, ಮಲಬಂಧ, ಮನೋವ್ಯಥೆ, ಜ್ಞಾಪಕಶಕ್ತಿ ಇಲ್ಲದಿರುವದು, ನರಗಳ ಬಲಹೀನತೆ, ಅಶಕ್ತಿ, ಸ್ವಪ್ನಸ್ಖಲಿತ, ಬಹುಮೂತ್ರ, ಮೂತ್ರಕೋಶ ಸಂಬಂಧವಾದ ವ್ಯಾಧಿಗಳ, ನಪುಂಸಕತ್ವ ಮುಂತಾದ ವ್ಯಾಧಿಗಳು ಶೀಘ್ರದಲ್ಲಿಯೇ ಬೇರು ಸಹಿತವು ಕಿತ್ತು ಹಾಕಿ ಪುರುಷರಿಗೆ ಸಂತತ ಪುನಃಸ್ವತ್ವವನ್ನು ಕೊಡುವವು. ಇದು ಸಾಟಿಯಿಲ್ಲದ ಮಾಣಿಕ್ಯ, ಔಷಧಿಯಾಗಿರುತ್ತದೆ. ಕಳೆದ 25 ವರುಷ ಕಾಲದಲ್ಲಿ ಸಾವಿರಾರು ರೋಗಿಗಳನ್ನು ಗುಣಪಡಿಸಿದೆ. ನಿಮ್ಮನ್ನು ಕೂಡ ಸ್ವಸ್ಥ ಮಾಡುವದು. 40 ಮಾತ್ರೆಗಳ ಡಬ್ಬಿ ಕ್ಕೆ ರೂ 1—0—0.

ಉಚಿತ ಕ್ರಯವು ಇಲ್ಲ ಹಾಸಲು ಇಲ್ಲ

144 ಪುಟಗಳುಳ್ಳ ವೈದ್ಯಸಾರಸಂಗ್ರಹವಾದ

ವೈದ್ಯವಿದ್ಯೆ

ಪುಸ್ತಕದಲ್ಲಿ ಶಾಶ್ವತವಾದ ಆರೋಗ್ಯವನ್ನು ಪಡೆವ ಅತ್ಯವಶ್ಯವಾದ ವಿಷಯಗಳು ಬರೆದಿವೆ. ನಿಮ್ಮ ವಿಳಾಸವನ್ನು ತಿಳಿಸಿದರೆ ನಿಮಗೆ ಒಂದು ಪ್ರತಿ ಉಚಿತವಾಗಿ ಕಳುಹಿಸಲ್ಪಡುವದು.

ರಾಜವೈದ್ಯ ನಾರಾಯಣಜಿ ಕೇಶವಜಿ

20 ಚೀನಾ ಬಜಾರ್ ರೋಡ್,

ಮದರಾಸು.

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ. ಸುಬ್ಬರಾಯಿಯವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ವಸಂತ ಕುಸುಮಾಕರ: — ನಮ್ಮ ವಸಂತಕುಸುಮಾಕರವು ಅತಿಮೂತ್ರ, ನರಗಳ ದುರ್ಬಲತೆ, ವಿಶೇಷ ನೀರಡಿಕೆ, ನಾಲಿಗೆ ಒಣಗಿ ರಸವಿಲ್ಲದಿರುವುದು, ಕೈಕಾಲುಗಳು ಉರಿಯೋಣ, ಆಯಾಸ, ಮೂರ್ಛೆ ಬೀಳುವಿಕೆ, ಬಿಳುಪು ನೋಡಲಾದ ದೇಹ ಜಾಡ್ಯಗಳು, ಮೂತ್ರ ವಿಸರ್ಜನೆಯು ಬಹು ಕಷ್ಟದಿಂದಾಗೋಣ, ಇಂದ್ರಿಯ ಸ್ಖಲನ ಮೊದಲಾದ ವ್ಯಾಧಿಗಳನ್ನು ಖಂಡಿತವಾಗಿ ನೀಗುವವೆಂದು ನಾವು ಭರವಸ ಕೊಡುವೆವು. ಒಂದು ವಾರದವರೆಗೆ ಸಾಕಾಗುವಷ್ಟು ಔಷಧ ಕ್ರಯ 5 ರೂಪಾಯಿ. ವಿ ಪಿ ಚಾರ್ಜ 5 ಆಣೆ

ರಕ್ತಶುದ್ಧಿ: ರಕ್ತವೇ ಮನುಷ್ಯನಿಗೆ ಮುಖ್ಯ ಪ್ರಾಣಾಧಾರಭೂತವೆಂದು ಎಲ್ಲರೂ ಬಲ್ಲರು. ರಕ್ತವು ಕೆಟ್ಟು ಹೋದಪಕ್ಷದಲ್ಲಿ ಬಾಯಿಯಲ್ಲಿ ಹುಣ್ಣು, ಪಣ್ಣುಗಳಲ್ಲಿ ಹುಣ್ಣು, ಕಣ್ಣುನೋವು, ಮೂಗಿನಲ್ಲಿ ಕ್ರಿಮಿ ಸೇರುವಿಕೆ, ಹಲ್ಲಿನಲ್ಲಿ ರಕ್ತ, ಕೀವು ಸೋರುವುದು, ತುಟಿಗಳು ಹುಣ್ಣಾಗೋಣ, ಮುಖದ ಮೇಲೆ ಬೊಕ್ಕೆಗಳು, ದೇಹಾದ್ಯಂತವೂ ಗಜ್ಜಿ, ತುರಿ ಮುಂತಾದುವು, ವ್ರಣಗಳು, ಚರ್ಮದ ಛಿದ್ರ ಕೆಡೋಣ, ಕೀಲುಗಳು ಸ್ವಾಧೀನವಿಲ್ಲದಿರೋಣ, ಮೈಲೆಲ್ಲಾ ವಿಕಾರವಾಗಿ ಕಪ್ಪು ಚುಕ್ಕೆಗಳುಂಟಾಗುವಿಕೆ, ಚರ್ಮದ ಕಿವಿಗಳು, ಮೂಗು ಒಡೆದುವಿಕೆ, ಮೈ ಅಶಕ್ತಿಹೊಂದಿ ಬೆಳ್ಳಗಾಗಿರುವಿಕೆ, ಮಹೋದರರೋಗ, ತೊನ್ನು, ಪರೆಯೆದ್ದಿರುವುದು, ಕುಷ್ಠರೋಗ, ಪಡ, ಕಂಕುಳ ಮತ್ತು ಮೈಯೆಲ್ಲಾ ದುರ್ವಾಸನೆಯಾಗಿರುವಿಕೆ, ವೀರ್ಯಗುಂದಿರೋಣ, ಉತ್ಸಾಹವಿಲ್ಲದಿರೋಣ, ಹಗಲು ರಾತ್ರಿ ತರೆದುಕೊಳ್ಳುವಂತೆ ನವೆಯಾಗುತ್ತಿರೋಣ ಇತ್ಯಾದಿ ನಾನಾ ವಿಧ ಬಾಧೆಗಳು ಉಂಟಾಗುತ್ತವೆ. ಇಂಥಾ ಕೆಟ್ಟ ವಿಷವನ್ನು ರಕ್ತದೊಳಗಿನಿಂದ ನಿವಾರಿಸುವುದಕ್ಕೆ ಬಲವತ್ತರವಾದ ಅಮೃತಸಂಜೀವಿಯು ನಮ್ಮ ರಕ್ತಶುದ್ಧಿಯೇ ಸರಿಯೆಂದು ಹೇಳುವುದರಲ್ಲಿ ಯಾವ ಸಂದೇಹವೂ ಇಲ್ಲ. 20 ದಿವಸಗಳ ಉಪಯೋಗಕ್ಕೆ ಸಾಕಾಗುವಂತಹ ಪೆಟ್ಟಿಗೆ 1ಕ್ಕೆ 2 ರೂಪಾಯಿ. 1ರಿಂದ 2 ಪೆಟ್ಟಿಗೆಗಳ ವರೆಗೂ ವಿ. ಪಿ. ಚಾರ್ಜ ೫ ಆಣೆ

ಸಿದ್ಧ ಮಕರಧ್ವಜ:- ಇದು ಹಿಂದು ವೈದ್ಯ ಶಾಸ್ತ್ರದಲ್ಲೆಲ್ಲಾ ಅತಿ ಬಲವತ್ತರವಾದದ್ದು. ನಮ್ಮ ಸಿದ್ಧ ಮಕರಧ್ವಜವು ಎಲ್ಲಾ ವಿಧ ಜ್ವರಗಳನ್ನು, ಅಗ್ನಿಮಾಂದ್ಯದಿಂದುಂಟಾಗತಕ್ಕ ಅಜೀರ್ಣ ಮುಂತಾದ ರೋಗಗಳನ್ನು, ನರಗಳ ದುರ್ಬಲತೆಗೆ ಸಂಬಂಧಪಟ್ಟ ಪರಿಣಾಮಗಳನ್ನು ಗುಣಪಡಿಸುತ್ತದೆ. ಇದಲ್ಲದೆ ಶ್ವಾಸಕೋಶಗಳಲ್ಲುಂಟಾಗತಕ್ಕ ಬಾಧೆಗಳನ್ನು ನಿವರ್ತಿಮಾಡಿ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ವಿಶೇಷ ಹೇಳಿ ಪ್ರಯೋಜನವೇನು? ಮೊತ್ತಕ್ಕೆ ನಮ್ಮ ಮಕರಧ್ವಜವೆಂಬ ವಜ್ರಾಯುಧಕ್ಕೆ ಬಗ್ಗದ ವ್ಯಾಧಿಯು ಪ್ರಪಂಚದಲ್ಲಿಯೇ ಇಲ್ಲ. ನೋಡಿರಿ, ಎಣೆಯಿಲ್ಲದ ಈ ಸಿದ್ಧ ಮಕರಧ್ವಜವನ್ನು ಉಪಯೋಗಿಸಿದುದೇ ಆದರೆ ನಿಮ್ಮ ಶತಮಾನಪೂರ್ತಿ ಶಾಂತಿಸೇಚನ ಮಹೋತ್ಸವದಲ್ಲಿ (ನೂರು ವರ್ಷಕ್ಕೆ ಮಾಡಿಕೊಳ್ಳುವ ಶಾಂತಿಯಲ್ಲಿ) ಕೂಡ ನಿಮ್ಮ ಪುರುಷಶಕ್ತಿಯೂ, ಪ್ರಾಯದ ಉಮ್ಮಳವೂ ಕೆಡುವುದಿಲ್ಲ. ಇದರ ಬೆಲೆ ತೊಲೆ 1ಕ್ಕೆ 80 ರೂಪಾಯಿ. ಒಂದು ವಾರಕ್ಕೆ ಸಾಕಾಗುವ ಔಷಧಕ್ಕೆ 3 ರೂಪಾಯಿ. ವಿ. ಪಿ. ಚಾರ್ಜ ಪ್ರತ್ಯೇಕವು

☞ ಈ ಪ್ರಾಂತ್ಯದಲ್ಲಿ ಕನ್ನಡ, ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವದಿಲ್ಲವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾದರೂ, ತಮಿಳಿನಲ್ಲಾದರೂ ಸ್ಫುಟವಾಗಿ ತಿಳಿಯುವಂತೆ ಬರಿಯಬೇಕು

MY ADDRESS.

P. SUBBA ROY,
Ayurvedic Pharmacy,
Sri Perumalkoil,
SANNATHY, TANJORE.

ನಮ್ಮ ವಿಳಾಸ:—
ಪಿ. ಸುಬ್ಬರಾಯಿ,
ಆಯುರ್ವೇದ ಔಷಧಶಾಲಾ,
ಶ್ರೀ ಪೆರುಮಾಳ್ ಕೋಯಿಲ್ [illegible]
[illegible]

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

ಈ ಮುರಬ್ಬಾವು "ಸಾಲಾಮಿಸ್ರಿ"ಯಲ್ಲಿ ತಯಾರಿಸಲ್ಪಟ್ಟದ್ದು ಅಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ "ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ ! ಸೇವಿಸಿರಿ !!

ಈ ಸಾಲಾಮಿಸ್ರೀ ಎಂಬುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು ಕಾಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು ಶಕ್ತಿಯಲ್ಲಿ ಕಾಬೂಲ್ ಕಾಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು ಅನೇಕರು ಉರುಳುಗಡ್ಡೆ, ಶಾಮಗಡ್ಡೆ ಇವುಗಳನ್ನು ಪಕ್ವ ಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಹೇಳಿ ಮೋಸಪಡಿಸುವರು ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದ್ದಲ್ಲಿ ಇದು ಸಾಲಾಮಿಸ್ರಿಯೇ ಅಥವಾ ಬೇರೆ ತರಹದ್ದೇ ಎಂಬುವುದು ತಿಳಿದು ಬರುತ್ತೆ.

ಈ ಮುರಬ್ಬಾವನ್ನು ಪ್ರತಿಯೊಬ್ಬರು ಸೇವಿಸುವ ಹಾಗೆ ಕೈಯಿಂದ ಮುಟ್ಟದೆ ತಯಾರು ಮಾಡಲ್ಪಟ್ಟಿರುವದು.

ಸಾಲಾಮಿಸ್ರಿ ಮುರಬ್ಬಾವು— ನೀರಿನಂತಿರುವ ಧಾತುವನ್ನು ಗಟ್ಟಿಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು— ಮೂತ್ರದೊಂದಿಗೆ ಧಾತುವು ಹೋಗುವುದನ್ನು ನಿಲ್ಲಿಸುವದು
ಸಾಲಾಮಿಸ್ರಿ ಮುರಬ್ಬಾವು— ಮೂತ್ರದಲ್ಲಿ ಉರಿಯುವದನ್ನು ನಿಲ್ಲಿಸುವುದು
ಸಾಲಾಮಿಸ್ರಿ ಮುರಬ್ಬಾವು— ಕ್ಷಣಕ್ಷಣಕ್ಕೂ ಮೂತ್ರವಾಗುವದನ್ನು ನಿಲ್ಲಿಸುವದು
ಸಾಲಾಮಿಸ್ರಿ ಮುರಬ್ಬಾವು— ನಿದ್ರೆಯಲ್ಲಿ ಧಾತುವು ಹೋಗುವದನ್ನು ನಿಲ್ಲಿಸುವದು
ಸಾಲಾಮಿಸ್ರಿ ಮುರಬ್ಬಾವು— ಮೆದುಳಿಗೆ ಬಲವನ್ನು ಕೊಡುವದು
ಸಾಲಾಮಿಸ್ರಿ ಮುರಬ್ಬಾವು— ರಕ್ತವನ್ನು ವೃದ್ಧಿಪಡಿಸಿ ಧಾತುವನ್ನು ಶೇಖರಿಸುವದು.
ಸಾಲಾಮಿಸ್ರಿ ಮುರಬ್ಬಾವು— ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವದು
ಸಾಲಾಮಿಸ್ರಿ ಮುರಬ್ಬಾವು— ಹಸಿವನ್ನು ಹೆಚ್ಚಿಸಿ ರಕ್ತವನ್ನು ಶೇಖರಿಸುವದು
ಸಾಲಾಮಿಸ್ರಿ ಮುರಬ್ಬಾವು— ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವದು
ಸಾಲಾಮಿಸ್ರಿ ಮುರಬ್ಬಾವು— ಉತ್ಸಾಹವು, ಬುದ್ಧಿ ಕುಶಲತೆಯು, ಶರೀರಕಾಂತಿಯು ಕೊಡುವದು
ಸಾಲಾಮಿಸ್ರಿ ಮುರಬ್ಬಾವು— ತಾಂಬ್ರ ಮತ್ತು ಬಂಗಾರ ಭಸ್ಮಕಿಂತಲು ಉತ್ತಮವಾದದ್ದು
ಸಾಲಾಮಿಸ್ರಿ ಮುರಬ್ಬಾವು— ಸ್ತ್ರೀಸಂಗಕ್ಕೆ ಮೊದಲು ಸ್ಖಲನವಾಗುವುದನ್ನು ನಿಲ್ಲಿಸುವದು.

ಒಂದು ಡಬ್ಬಿ ಮುರಬ್ಬವನ್ನು 15 ದಿನಗಳು ಉಪಯೋಗಿಸುವದರಿಂದ ಪೂರ ಗುಣಕೊಡುತ್ತೆ. 2—3 ಡಬ್ಬಿ ಮುರಬ್ಬವನ್ನು ಉಪಯೋಗಿಸುವದರಿಂದ ಜನ್ಮಾಂತರದ ವರಿವಿಗೂ ಗುಣಕೊಡುತ್ತೆ.

೩೦ ತೊಲೆ ಮುರಬ್ಬಾವಿನ ಡಬ್ಬಿ 1ಕ್ಕೆ ರೂ 2 ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ. ಟಪ್ಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿ ವರೆಗೆ ಆಣೆ 6

ಏಜಂಟರು:— ಡಿ. ಸಯ್ಯದ್ ಉಸ್ಮಾನ್ ಎಂಡ್ ಕೊ. ದೊಡ್ಡಪೇಟೆ, ಬೆಂಗಳೂರು ಸಿಟಿ

ಡಿ. ಮನ್ನಾಲಾಲ್, ಡಿಲ್ಲೀ ವೈದ್ಯರು, 5 ಹಾಜಿಸಾಹೇಬ್ ಮಹದಿ ಅವೆನ್ಯು ರೋಡ್, ಬೆಂಗಳೂರು ಸಿಟಿ.

ಹಬಾರ್ ಸಾಬೂನು.

ಅಪಾಯವಿಲ್ಲದ ರೋಮಸಂಹಾರಿ.

ಈ ಸಾಬೂನನ್ನು ರೋಮವಿರುವ ಸ್ಥಳದಲ್ಲಿ ಹಚ್ಚಿದರೆ ೫ ನಿಮಿಷಗಳೊಳಗಾಗಿ ರೋಮವು ಮಾಯವಾಗುವದು ಉರಿ, ಸೆಕೆ, ಮುಂತಾದ ಬಾಧಗಳಿಲ್ಲವು. ಒಂದು ಸಾರಿ ಉಪಯೋಗಿಸಿದವರಿಗೆ ಗೊತ್ತಾಗುವದು. ಮರೆಯ ಬೇಡಿರಿ.

ಏಜಂಟರುಗಳು ಬೇಕಾಗಿದೆ!

೫. ಇದರಂತೆಯೇ ಇರುವ ಕಿರಾತಾರ್ಜುನೀಯ ೧ನೇ ಸರ್ಗ ೦-೮-೦

೬ ವಿವೇಕಚೂಡಾಮಣಿ (ಶ್ರೀಮಚ್ಛಂಕರಾಚಾರ್ಯ ಕೃತ ವೇದಾಂತ ಗ್ರಂಥ) ಪ್ರತಿಪದ ಟೀಕಾ ತಾತ್ಪರ್ಯ ಸಹಿತ ರೂ. ೨—೪—೦

೭. ಋಗ್ವೇದ ನಿತ್ಯಕರ್ಮ ಪ್ರಾತರ್ಮಾಧ್ಯಾಹ್ನಿಕ ಸಾಯಂಸಂಧ್ಯಾ ದೇವತಾರ್ಚನೆ, ಬ್ರಹ್ಮಯಜ್ಞ, ಮಂತ್ರಪುಷ್ಪ, ದೇವತಾಸ್ತೋತ್ರಗಳು, ತರ್ಪಣವಿಧಿ ಆದಿಯಾಗಿ ೨೪ ವಿಧಗಳೊಂದಿಗೆ ಇರುವ ಪ್ರತಿ. ೦—೪—೦

೮. ಇದರಂತೆ ಇರುವ ಯಜುರ್ವೇದ ನಿತ್ಯಕರ್ಮ ೦—೪—೦.

ವಿದ್ಯಾನಂದ ಮಾಸಪತ್ರಿಕೆ ವಾರ್ಷಿಕ ಚಂದಾಹಣಸಲು ಸೇರಿ ೨—೪—೦ ಮಾದರಿ ಪತ್ರಿಕೆ, ಕ್ಯಾಟಲಾಗ್ (ಪುಸ್ತಕಪಟ್ಟಿ) ಉಚಿತವಾಗಿ ಪಡೆಯಬಹುದು.

ಬಾಣವಾಡಿ ಆದಿನಾರಾಯಣಶಾಸ್ತ್ರಿ,
ವಿದ್ಯಾನಂದ ಆಫೀಸ್,
ಶಂಕರಪುರ, ಬೆಂಗಳೂರು ಸಿಟಿ.

ಹುಳಬಿದ್ದ ಹುಣ್ಣುಗಳು.

ಪಡುಬಿದ್ರೆ ಕಾಡಿಪಟ್ಣ ಮೊಗೇರ ಶೀನ ಹೆಂಗಸು ಬರಿಯುವದು:—ನನಗೆ ಸುಮಾರು ಆರು ವರ್ಷಗಳಿಂದ ಎರಡು ಕಾಲುಗಳಲ್ಲಿ ಬೊಕ್ಕೆಗಳು ಹುಟ್ಟಿ ಅದರಲ್ಲಿ ಕೀವು ಸುರಿಯುತ ಕೆಲವು ಸಣ್ಣ ಛಿದ್ರಗಳುಂಟಾಗಿ ಆ ಛಿದ್ರದಲ್ಲಿ ಹುಳಗಳು ತುಳುಕುತ್ತಿತ್ತಲ್ಲದೆ ಪದರಿ ವ್ರಣಗಳು ಕರಗಿ ಅರ್ಧಾಣೆ ಗಾತ್ರವಾಗಿತ್ತು ಇದರಿಂದ ನಡಿಯಲಾರದೆ ಕಾಲಿಗೆ ವಸ್ತ್ರ ಕಟ್ಟಿ ಮಲಗಿದ್ದಲ್ಲಿಯೇ ಇದ್ದೆನು. ದೈವವಶಾತ್ ತಮ್ಮ ಸಬ್ ಏಜಂಟರ ಭೇಟಿಯಾಗಿ ಪರೀಕ್ಷಾರ್ಥವಾಗಿ ಎರಡು ಸೀಸೆ ತಮ್ಮ ಯೂಕಲಿಪ್ಟಸ್ ತೈಲವನ್ನು ಕೊಂಡುಕೊಂಡು ಹೊಟ್ಟೆಗೂ ತಕ್ಕೊಂಡು ಹುಣ್ಣಿಗೂ ಹಚ್ಚಿದೆ. ಎರಡು ಸೀಸೆ ಮುಗಿಯುವಷ್ಟರಲ್ಲಿ ನನ್ನ ಹುಣ್ಣುಗಳು ಒಣಗಿ ನಡಿಯಲು ಅನುಕೂಲವಾಗಿಯದೆ ಎಂಬದನ್ನು ತಿಳಿಸಲು ಸಂತೋಷಪಡುತ್ತೇನೆ

ಒಂದೇ ಸಲ ಕೊಡುವದರಲ್ಲಿ ಗುಣ!

ರಾ| ವೆಂಕಟಕೃಷ್ಣ ಆಚಾರಿ, ಶಂಕರನಾರಾಯಣ:—ನಿಮ್ಮಲ್ಲಿಂದ ತರಿಸಿದ ಯೂಕಲಿಪ್ಟಸ್ ತೈಲವನ್ನು ಕೆಲವು ಕಾಲದಿಂದ ಕಠಿಣ ಹೊಟ್ಟೆನೋವಿನಿಂದ ನರಳುತ್ತಿದ್ದ ನನ್ನ ತಾಯಿಗೆ ಒಂದು ಸಲ ಕೊಡುವಷ್ಟರಲ್ಲಿ ಗುಣ ಉಂಟಾದಕಾರಣ ಮನಸ್ಸಿಗೆ ಭಾರಿ ಖುಸಿಯಾಗಿದೆ ಅರ್ಧ ಡಜನ್ ಸೀಸೆ ವಿ. ಪಿ. ಮಾಡಿ ಕಳುಹಿಸಿರಿ.

ಇದು ಸಂಜೀವಿನಿಯೇ ಸರಿ!!

ಮ| ರಾ| ತುಕ್ರಪ್ಪ, ಟಿ ಎಮಾರ್ಕಳಕಾರ, ಮುಂಬೈ:—ಕೆಲವು ಸಮಯದಿಂದ ಕೆಮ್ಮು ಉಬ್ಬಸದಿಂದ ಪೇಚಾಡುತ್ತಿದ್ದ ಹುಡುಗಿಯೊಬ್ಬಳಿಗೂ ಹಲವು ಕಾಲದಿಂದ ಹೊಟ್ಟೆನೋವಿನಿಂದ ನರಳುತ್ತಿದ್ದ ಮುದುಕಿಯೊಬ್ಬಳಿಗೂ ನಿಮ್ಮಲ್ಲಿ ದೊರೆಯುತಕ್ಕ ಯೂಕಲಿಪ್ಟಸ್ ತೈಲವನ್ನು ನನ್ನ ಸ್ನೇಹಿತರಾದ ವೈ. ಕೊರಗಪ್ಪನವರಿಂದ ಪಡಕೊಂಡು ಕೊಟ್ಟಲ್ಲಿ ಇಬ್ಬರೂ ಗುಣಹೊಂದಿರುತ್ತಾರೆ ಕೆಮ್ಮು ಉಬ್ಬಸ, ಹೊಟ್ಟೆನೋವು, ಸರ್ವ ತರದ ವಾಯುರೋಗಗಳಿಗೆ ಇದು ಸಂಜೀವಿನಿಯಂತೆ ಇದೆ. ಆದುದರಿಂದ 2 ಡಜನ್ ವಿ ಪಿ ಮಾಡಿ ಕಳುಹಿಸಿರಿ ಔನ್ಸ್ ಸೀಸೆ 1ಕ್ಕೆ 0—5—0. ಡಜನ್ ಸೀಸೆಗಳಿಗೆ ವಿ ಪಿ ಸಹಿತ ರೂ. 3—12—0. ಅನುಪಾನ ಪತ್ರಿಕೆ ಸೀಸೆಯೊಂದಿಗೆ.

ನಮ್ಮಲ್ಲಿ ಹೋಮಿಯೋಪಥಿ ಮತ್ತು ಟಿಸ್ಯೂ ರೆಮಿಡಿಸ್‌ಗಳೆಂಬ ಔಷಧಗಳು ದೊರೆಯುತ್ತವೆ.

ವಿಳಾಸ:— ಇಕ್ವಿಪ್ಸ್ ಏಜನ್ಸಿ, ಮಂಗಳೂರು.

ಏಜಂಟರು:— ಸುಗಂಧವಿಲಾಸ, ರಥಬೀದಿ, ಮಂಗಳೂರು.

ಅನೇಕ ಯೋಗ್ಯತಾಪತ್ರಿಕೆಗಳನ್ನು ಪಡದಿರುವ (ರಿಜಿಸ್ಟರ್ಡ್)

ರಾಜಸುಂದರಿ ರೋಜ.

ಕೂದಲು ಬೆಳೆಯುವ ಪರಿಮಳ ತೈಲವು. 50 ವಿಧವಾದ ಇನಾಂ ಸಾಮಾನುಗಳ ಸಮೇತ ಡಬ್ಬಿ 1ಕ್ಕೆ ರೂ. 1 ಮಾತ್ರ

ಸ್ತ್ರೀಗಳು ತಲೆಕೂದಲು ಸುಂದರವಾಗಿ ಇರಬೇಕೆಂಬ ಉದ್ದೇಶವಾಗಿಯೂ, ಕೂದಲು ಉದುರುವದನ್ನು ತಡೆದು, ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವರು ಬಜಾರಿನಲ್ಲಿ ದೊರೆಯುವ ಕೀಳುತರವಾದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ, ನಿಮ್ಮ ಹಣವನ್ನೂ ತಲೆಯನ್ನೂ ಹಾಳು ಮಾಡುವದಕ್ಕಿಂತ ನಮ್ಮ ಪರಿಮಳ ತೈಲವನ್ನು ಉಪಯೋಗಿಸಿರಿ. ಈ ಲೋಕಪ್ರಖ್ಯಾತವಾದ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಬಾಚಿದರೆ ಅದರ ಸುವಾಸನೆ ಹೇಳುವದಕ್ಕೆ ಬಾಯಿಂದಕ್ಕೆ ಆಗುವದಿಲ್ಲ ಮತ್ತು ಇದರ ಪರಿಮಳ ವಾಸನೆ ಸುತ್ತು ಇರುವ ಮನೆಗಳಿಗೆ ಹೋಗುವದು ಇವಲ್ಲದೆ ದೇಹದಲ್ಲಿ ಇರುವ ಉಷ್ಣವನ್ನು ತೆಗೆದು ಕಣ್ಣಿಗೆ ತಂಪು ಕೊಡುವದು. ತಲೆಯಲ್ಲಿ ಇರುವ ಮದವನ್ನು ಸರಿ ಮಾಡುವದು. ಮುಖಕ್ಕೆ ಕಾಂತಿಯನ್ನೂ, ದೇಹಕ್ಕೆ ಆರೋಗ್ಯವನ್ನೂ, ಮನಸಿಗೆ ಸಂತೋಷವನ್ನೂ, ಕೂದಲಿಗೆ ಆರೋಗ್ಯವನ್ನೂ ಕೊಡುವ ತೈಲ ಇದು ಒಂದೇ ಬೇರಿಲ್ಲ, ಬಾಯಿ ಮಾತಗಳಿಂದ ವರ್ಣಿಸುವದರಲ್ಲಿ ಪ್ರಯೋಜನವಿಲ್ಲ 1ನ್ನು ತರಿಸಿದರೆ ತಿಳಿಯುತ್ತೆ. ಇನಾಂ ಸಾಮಾನುಗಳ ತಪಸೀಲು. ಸ್ತ್ರೀಯರು ಧರಿಸಿಕೊಳ್ಳುವ ಕೊಂಡಗಿಳಿ 6, ವೈಪರಣೆ 1, ಅದ್ದಾ 1, ಕಾಂಬೂಲ ಮಾತ್ರೆ 30, ಪಂಚದ ಬಾಚಣಿಗೆ 1, ಸೊಗಸಾದ ರಾಜರಾಣಿ ಕಾರನೇಷನ್ ಪೆಟ್ಟಿಗೆ 1, ರವಿವರ್ಮಾ ಪೋಸ್ಟುಕಾರ್ಡ್ 6, ಸುವಾಸನೆ ಅತ್ತರು ಬಿಲ್ಲೆ 1, ಗಂಧ ಬಿಲ್ಲೆ 1, ಸ್ತ್ರೀಯರು ಧರಿಸುವ ಬ್ರೂಚ್ 1.

ನಮ್ಮ ವಿಳಾಸ:— ಮ್ಯಾನೇಜರ್ ಧೈರ್ಯ ಲಕ್ಷ್ಮಿ ಅಂಡು ಕಂಪೆನಿ,
ನಂ. 3 ಇರುಲಪ್ಪನ್ ಬೀದಿ, ಮದ್ರಾಸು.

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಖು 13ನೇ ಆಗೋಸ್ತು 1915.

ಎಲಿಮೆಂಟರಿ ವಿದ್ಯಾಭ್ಯಾಸ ಪ್ರಸರಣೆಗೆ ಬೇಕಾದ ಜಿಲ್ಲಾ ಬೋರ್ಡು

ಕಳೆದ ಸಂಚಿಕೆಯಲ್ಲಿ ಪ್ರಕಟಿಸಲ್ಪಟ್ಟ 'ದಾಸುಭಟ್ಟರ' ಲೇಖದಲ್ಲಿ ಹಳ್ಳಿಯಲ್ಲಿ ವರ್ಗದಾರರು ಎಲಿಮೆಂಟರಿ ಶಾಲೆಗಳನ್ನು ಸ್ಥಾಪಿಸುವ ಕುರಿತು ಕೆಲವು ಸೂಚನೆಗಳಿರುವವು. ಸೆಕೆಂಡರಿ ಮತ್ತು ಕೊಲೇಜು ವಿದ್ಯಾಭ್ಯಾಸಗಳನ್ನು ಪಡೆದವರ ಸಂಖ್ಯೆಯು ನಮ್ಮ ಜಿಲ್ಲೆಯಲ್ಲಿ ಇತರ ಹಲವು ಜಿಲ್ಲೆಗಳಿಗಿಂತ ಹೆಚ್ಚಿರುವುದಾದರೂ ಜನ ಸಂಖ್ಯೆಯ ಸರಾಸರಿಯ ಮೇಲೆ ನಮ್ಮ ಜಿಲ್ಲೆಯು ವಿದ್ಯೆಯಲ್ಲಿ ಬಹಳ ಹಿಂದುಳಿದಿರುವುದು. ಅಂದರೆ ಇಲ್ಲಿಯ ಸಾಮಾನ್ಯರು ಬಹುಪಕ್ಷ ನಿರಕ್ಷರ ಕುಕ್ಷಿಗಳಾಗಿರುವರು ಈ ನಮ್ಮ ಕೊರತೆಯನ್ನು ಸ್ವದೇಶಾಭಿಮಾನಿಯು ಹಿಂದಿನ ಕೆಲವು ಸಂಚಿಕೆಗಳಲ್ಲಿ ವಾಚಕರ ಮತ್ತು ಇಲ್ಲಿಯ ಮುಂದಾಳುಗಳ ಲಕ್ಷ್ಯಕ್ಕೆ ಪದೇ ಪದೇ ತಂದಿರುವೆವಾದರೂ ಇದ್ದರ ನಿವಾರಣೆಯು ಕಾಲವು ಇನ್ನೂ ಪ್ರಾಪ್ತವಾಗಲಿಲ್ಲವೆಂಬುದಾಗಿ ತೋರುತ್ತದೆ. ಸರಕಾರದವರು ಅಥವಾ ಇದರ ಅಧಿಕಾರಿಗಳು ಆಗಿಂದಾಗ್ಯೆ ಶಿಕ್ಷಣ ಕ್ರಮ ಇತ್ಯಾದಿಗಳನ್ನು ನವ ಬಗ್ಯೆ ಮಾರ್ಪಡಿಸುವಾಗ್ಯೆ ಮಾತ್ರ ಅದು ಸರಿಯಲ್ಲ, ಇದು ಸರಿಯಲ್ಲವೆಂತ ಹೇಳುವೆವು ವಿನಹ ನಮಗೆ ಯುಕ್ತವಾದ ಶಿಕ್ಷಣವು ಯಾವುದೆಂಬುದನ್ನು ದೃಷ್ಟಾಂತಪೂರ್ವಕ ತೋರಿಸಿಕೊಡುವ ಸಾಧನೆಯು ನಮ್ಮಲ್ಲಿ ಯಾವುದೂ ಇರದು. ಓದುಬರೆಯುವುದನ್ನು ಕಲಿಸುವುದರ ಹೊರತು ಮಕ್ಕಳಿಗೆ ಚಿಕ್ಕಂದಿನಿಂದಲೇ ಅವರವರ ಬುದ್ಧಿಸಾಮರ್ಥ್ಯಕ್ಕೆ ತಕ್ಕಂತೆ ಮುಂದಿನ ಜೀವನಕ್ಕೆ ಬೇಕಾದ ಮಾಹಿತಿಯನ್ನು ಕ್ರಮವಾಗಿ ಕೊಡುವ ಕ್ರಮವು ಶಾಲಾಶಿಕ್ಷಣದಲ್ಲಿ ಸೇರಿರಬೇಕಾಗಿದೆ. ಮುಂದಿನ ಜೀವನ ಹೋರಾಟವು ಸಾಧ್ಯವಾದ ಮಟ್ಟಿಗೆ ಸುಲಭವಾಗುವಂತೆ ಮಾಡುವುದು ಶಿಕ್ಷಣದ ಮುಖ್ಯ ಉದ್ದೇಶವಾಗಿರಬೇಕು. ಆದ್ದರಿಂದ ತನ್ನ ಸ್ವಂತ ಗ್ರಾಮದಲ್ಲಿ ಎಂಥೆಂಥಾ ಬೆಳೆಗಳು ಬೆಳೆಯುವವು ಎಂದು ಗೊತ್ತಿಲ್ಲದ ವಿದ್ಯಾರ್ಥಿಗೆ ಉತ್ತರ ಅಮೇರಿಕದ ಮುಖ್ಯ ಪಟ್ಟಣವು ಯಾವುದೆಂದು ಕಲಿಸುವುದು ನಿರರ್ಥಕ. ವಸ್ತ್ರ[illegible]ಗೆಯು ಹುಟ್ಟು ಕಸಬಾಗಿರುವ ನಿವಾಸಿಗಳು ಹೆಚ್ಚಿರುವ ಗ್ರಾಮದಲ್ಲಿ ಪೇದೆ [illegible]ಸಗಳಿಗೆ ಬೇಕಾದ ಶಿಕ್ಷಣವನ್ನು ಕೊಡುವುದು ಉಚಿತವಲ್ಲ. ಆಯಾ ಗ್ರಾಮಗಳ ತಾಲೂಕಗಳ ವಿದ್ಯಮಾನಗಳನ್ನು ಪರ್ಯಾಲೋಚಿಸಿಕೊಂಡು ವಿದ್ಯಾಭ್ಯಾಸ ಕ್ರಮವನ್ನು ಅಣಿಗೊಳಿಸುವ ಒಂದು ಸಾಧನವು ಪ್ರಕೃತ ಪ್ರತಿ ಜಿಲ್ಲೆಯಲ್ಲಿಯೂ ಬೇಕಾಗಿರುವುದು. ವಿದ್ಯಾ ಇಲಾಖೆಯ ಸರಕಾರದ ನೌಕರರು ಪ್ರಜಾ ಮುಂದಾಳುಗಳೂ ಸೇರಿಕೊಂಡು ಈ ಬಗ್ಯೆ ಒಂದು ಸಂಸ್ಥೆಯನ್ನು ಏರ್ಪಡಿಸುವುದು ವಿದ್ಯಾಭ್ಯಾಸದ ಈಗಿನ ವಿದ್ಯಮಾನಗಳಲ್ಲಿ ಅಗತ್ಯವಾಗಿರುವುದು. ಇಂಥಾದ್ದೊಂದು ಸಂಸ್ಥೆಯನ್ನು ನಮ್ಮ ಜಿಲ್ಲೆಯಲ್ಲಿ ಸ್ಥಾಪಿಸುವುದು ಅಗತ್ಯವೋ ಎಂಬುದನ್ನು ಮುಂದಿನ ಸಂಚಿಕೆಯಲ್ಲಿ ಪ್ರಸ್ತಾಪಿಸುವೆವು.

ಕೊಂಕಣಿ ದಿರ್ವೆಂಯ ತೂಗಡಿಕೆ

ಕಳೆದ ಜುಲಾಯಿ ತಾ. ೧೬ರ ಸ್ವದೇಶಾಭಿಮಾನಿಯಲ್ಲಿ "ಕಂಡದ್ದನ್ನು ಕಂಡ ಹಾಗೆಯೇ ಹೇಳಿದರೇನು?" ಎಂದು ನಾವು ಬರೆದು ಪ್ರಕಟಿಸಿರುವ ಲೇಖದಿಂದ ಕೊಂಕಣಿ ದಿರ್ವೆಂಯು ನಿದ್ದೆಯಿಂದ ಎಚ್ಚತ್ತ ಹಾಗೆ ಕಂಡುಬರುವುದು. ಆದರೆ ಇದರ ಮತಿಗೆ ಹಿಡಿದಿರುವ ನಿದ್ರೆಯ ಅಮಲು ದಿರ್ವೆಂಯನ್ನು ಬಿಟ್ಟು ಹೋಗಿರದೆಂದು ಇದು ಬಾಯಾ ಬಳಸುತ್ತಾ ಮಾತಾಡುವ ಅಸಭ್ಯ ಮತ್ತು ಅಯುಕ್ತವಾದ ಮಾತುಗಳಿಂದ ವ್ಯಕ್ತವಾಗುವುದು. "[illegible] ಶಾಸ್ತ್ರಾಂತ್ ಅಭ್ಯಾಸ್ ನಾಸ್ತಾನಾ ಥೈಂಚ್ ಜಿಮೆತಾಲಿ ಆಮ್ಚಿ [illegible] [illegible] ಕೊಂಕ್ಣಿ ದಿರ್ವ್ಯಾಚೆಂ ನಾಂವ್ ಹಾಂಗಾಚಾ ಹಿಂದು ವರ್ತ[illegible] [illegible] ಸುರು ಕರುನ್ ತ್ ಪೊಳೆಲ್ಲೆಂಚ್ ಪೊಳೆಲ್ಲೆಂ, ಏಕ್ಸಮ್ ಟಾಗಿ [illegible] [illegible]ಶಾಸ್ತ್ರದಲ್ಲಿ ಅಭ್ಯಾಸವಿಲ್ಲದೆ ಅಲ್ಲಿಯೆ ತೂಗಡಿಕೆಯಲ್ಲಿದ್ದ [illegible] ಒಂದು ವರ್ತಮಾನ ಪತ್ರದಲ್ಲಿ ತನ್ನ ಹೆಸರು ಕಂಡ ಕೂಡಲೆ [illegible] ನಮ್ಮ [illegible] ಬರೆಯಲು ಪ್ರಾರಂಭಿ[illegible]ಸಿದೆ. ಸ್ಮೃತಿ ಬಂದದ್ದು ನಿಜ, ಆದರೆ ತಲೆಗೆ ಏರಿದ ನಿದ್ದೆಯ ಅಮಲು ಪೂರ್ಣವಾಗಿ ಬಿಟ್ಟು ಹೋದ ಮೇಲೆ ನಮ್ಮ ಲೇಖವನ್ನು ಓದಿ ತಿಳಕೊಂಡರೆ ಲೇಸಾಗುತ್ತಿತ್ತು ಯಾಕಂದರೆ,—ಹೆಂ ಲೇಖನ್ ಪತ್ರ್ಕರ್ತಾಂಚಿ ಲಿಖಿತಾಂ ಸ್ಥಳಾರ್ ಅಸಾ ಜಾಲ್ಯಾರಿ ತಾಣಿ ಬೊರೈಲ್ಲೆಂ ನ್ಹಂಯ್ ಆಮಿ ಪಾತ್ಯೆನಾಂವ್—ನಮ್ಮ ಲೇಖವು ಪತ್ರದ ಶಿರೋಭಾಗದಲ್ಲಿರುವದಾದರೂ ಸ್ವದೇಶಾಭಿಮಾನಿಯ ಸಂಪಾದಕರು ಇದು ಬರದದ್ದು ಎಂನಾವು ನಂಬುವದಿಲ್ಲವೆಂಬ ಕೊಂಕಣಿ ದಿರ್ವೆಂಯ ಹೇಳಿಕೆಯು ನಿದ್ದೆಯ ಅಮಲಿನಲ್ಲಿಯೇ ಇದರ ಬಾಯಿಯಿಂದ ಹೊರಟಿದ್ದೆಂದು ವಾಚಕರು ತಿಳಿಯದೆ ಇರಲಾರರು. ದಿರ್ವೆಂಯ ಮತಿಗೆ ಪೂರ್ಣ ಸ್ಮೃತಿಯು ಉಂಟಾಗಿದ್ದ ಪಕ್ಷದಲ್ಲಿ ಇಂಥಾ ಅಲ್ಪ ಮಾತುಗಳನ್ನು ದಿರ್ವೆಂಯು ಆಡಲಿಕ್ಕಿಲ್ಲವಿತ್ತೆಂಬುದಾಗಿ ಭಾವಿಸುತ್ತೇವೆ. ಅದಲ್ಲದೆ—ತಸ್ಲೇಲ್ ತರ್ಕ್ ಕರುಂಕ್ ಆಮ್ಕಾಂ ಜಾಗೊ ಚಡ್ ನಾತಲ್ಲ್ಯೆ ಪೊರ್ವಿಂ,—ಈ ವಾದವನ್ನು ವಿವರವಾಗಿ ನಡಿಸಲು ಸ್ಥಳವು ಹೆಚ್ಚಾಗಿಲ್ಲದ್ದರಿಂದ ಸ್ವದೇಶಾಭಿಮಾನಿಯ ಜುಲಾಯಿ ತಾ ೧೬ನೇ ಸಂಚಿಕೆಯ ಲೇಖವನ್ನು ಮಾತ್ರ ಪರೀಕ್ಷೆ ಮಾಡಿ ನೋಡಲು ದಿರ್ವೆಂಯು ಪ್ರಯತ್ನಿಸಿದೆ ಎಂಬುದು ದಿರ್ವೆಂಯ ಎರಡನೆಯ ಹೇಳಿಕೆಯಾಗಿರುವುದು. ಆದ್ದರಿಂದ ದಿರ್ವೆಂಯು ತೂಗಡಿಕೆಯನ್ನು ಹೋಗಗೊಳಿಸಿ ಸ್ವಚ್ಛವಾದ ಬುದ್ಧಿಯಿಂದ ನಮ್ಮ ಲೇಖವನ್ನು ಓದಿ ವಾದಕ್ಕೆ ಬೇಕಾದ ಸ್ಥಳವನ್ನು ತನ್ನ ಮುಂದಿನ ಅಂಕದಲ್ಲಿ ಸಂಗ್ರಹಿಸಿಕೊಂಡು ನಮ್ಮ ಲೇಖದ ಟೀಕೆಯನ್ನು ಪೂರ್ಣವಾಗಿ ಬರೆಯಬೇಕಾಗಿ ವಿಜ್ಞಾಪಿಸಿಕೊಳ್ಳುತ್ತೇವೆ. ನಂತರ ದಿರ್ವೆಂಯಲ್ಲಿಯ 'ಕೊಂಕಣಿ' ಅದರ ಹೆಸರಿನಲ್ಲಿ ಮಾತ್ರ ಇರುವುದೊ ಅಥವಾ ಅದರ ಮಾತುಗಳಲ್ಲಿಯೂ, ಬುದ್ಧಿಯಲ್ಲಿಯೂ ಸಹ ಇರುವುದೋ ಎಂಬುದನ್ನು ಪರೀಕ್ಷಿಸಿ ನೋಡುವೆವು.

ಯಾತ್ರಿಕರ ಅಡಚಣೆಗಳು.

ಮದ್ರಾಸು ಪಿಲ್ಗ್ರಿಮ್ ಕಮ್ಮಿಟಿಯವರು ನಮ್ಮ ಜಿಲ್ಲೆಯಲ್ಲಿ ಮುಖ್ಯ ಯಾತ್ರಸ್ಥಳವಾದ ಉಡ್ಪಿಗೆ ಸಹ ಬರುವರೆಂಬುದು ಕಳೆದ ಸಂಚಿಕೆಯಲ್ಲಿ ಪ್ರಕಟಿಸಿದ ಇವರ ಕಾಲನಿಯಾಮಕ ಪಟ್ಟಿಯಿಂದ ತೋರಿಬರುವುದು. ಕಮ್ಮಿಟಿಯ ಉದ್ದೇಶವು ಯಾತ್ರಾಕಾಲದಲ್ಲಿ ಕೂಡಿ ಬರುವ ಜನಸ್ತೋಮದ ಅನುಕೂಲತೆ ಮತ್ತು ಆರೋಗ್ಯದ ಬಗ್ಯೆ ಎಂಥಾ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕೆಂಬುದನ್ನು ನಿರ್ಣಯಿಸುವಂಥಾದ್ದಾಗಿರುವುದು. ಕಮ್ಮಿಟಿಯವರು ವಿಮರ್ಶಿಸುವ ವಿಷಯಗಳು ಯಾವವಂದರೆ—ಯಾತ್ರಿಕರು ಯಾವ ಪ್ರಾಂತ್ಯಗಳಿಂದ ಬರುವರು, ಉತ್ಸವಗಳ ಎಷ್ಟು ದಿವಸಗಳ ಮೊದಲು ಇವರು ಬಂದು ತಲಪುವರು, ಇವರಿಗೆ ಉಳಕೊಳ್ಳುವ ಬಗ್ಯೆ ಯಾವ ವ್ಯವಸ್ಥೆ ಇರುವುದು, ಯಾತ್ರಾಕಾಲಗಳಲ್ಲಿ ಆಯಾ ಕ್ಷೇತ್ರವಾಸಿಗಳು ತಮ್ಮ ಮನೆಗಳಲ್ಲಿ ಯಾತ್ರಿಕರನ್ನು ಇರಿಸುವರೊ, ಯಾತ್ರಿಕರ ಬಗ್ಯೆ ಪ್ರತ್ಯೇಕ ಹಂಗಾಮಿವಸ್ತಿಗಳನ್ನು ತಯಾರಿಸುವುದು ಅಗತ್ಯವೊ, ಯಾತ್ರಿಕರಿಗೆ ಕುಡಿಯುವ ನೀರಿನ ಸರಬರಾಯಿಯು ಎಲ್ಲಿಂದ, ಅವರು ಸ್ನಾನಮಾಡುವುದೆಲ್ಲಿ, ಮಲವಿಸರ್ಜನೆ ಬಗ್ಯೆ ಪಾಯಿಖಾನೆಗಳ ವ್ಯವಸ್ಥೆ ಏನಿದೆ, ಆಸ್ಪತ್ರೆಗಳ ಅನುಕೂಲತೆಗಳು ಏನಿರುವವು, ಸಾಮಾನ್ಯವಾಗಿ ಯಾತ್ರಾಕಾಲಗಳಲ್ಲಿ ಯಾತ್ರಸ್ಥಳದ ಆರೋಗ್ಯವು ಹೇಗಿರುವುದು, ಸಿಡುಬು ಮೊದಲಾದ ಅಂಟುರೋಗಗಳು ಹಿಂದೆ ಎಂದಾದರೂ ಉಲ್ಬಣವಾಗಿವೆಯೋ, ಯಾತ್ರಿಕರ ಅಡಚಣೆಗಳನ್ನು ಹೋಗಗೊಳಿಸಲು ಬೇರೆನಾದರೂ ಸೂಚನೆಗಳು ಇವೆಯೋ? ಇಂಥಾ ಪ್ರಶ್ನೆಗಳಿಂದ ಯಾತ್ರಿಕರ ಅಡಚಣೆಗಳನ್ನು ಆಯಾ ಸ್ಥಳಗಳಲ್ಲಿ ಗೊತ್ತುಮಾಡುವರು. ಉಡ್ಪಿಯ ಮುಂದಾಳುಗಳು ಈ ವಿಷಯಗಳೆಲ್ಲವನ್ನು ಮುಂಚಿತವಾಗಿಯೇ ಪರ್ಯಾಲೋಚಿಸಿಕೊಂಡು ಕಮ್ಮಿಟಿಯವರು ಬಂದೊಡನೆ ಸಮರ್ಪಕವಾದ ಉತ್ತರಗಳನ್ನೂ, ಮಾಹಿತಿಯನ್ನೂ ಈ ಕಮ್ಮಿಟಿಯವರಿಗೆ ಕೊಡಲು ಸಿದ್ಧರಾಗಿರುವರೆಂಬುದಾಗಿ ಕೋರುತ್ತೇವೆ.

ಲೋಕಕಿಂಕರರು.

ಲೋಕಸೇವಾಬುದ್ಧಿಯೇ ದೇಶದ ಏಳಿಗೆಗೆ ಮೂಲಾಧಾರವು.

ಮನುಷ್ಯನು ದೇಹವಲ್ಲ; ದೇಹದಲ್ಲಿ ವಾಸಿಯಾಗಿರುವ ಅದರ ಅಭಿಮಾನನಾದ ಶಾಶ್ವತನಾದ ಭಗವದಂಶನು. ಭಗವಂತನಲ್ಲಿರುವ ಶಕ್ತಿಗಳೆಲ್ಲವೂ ಇವನಲ್ಲಿ ಬೀಜರೂಪದಲ್ಲಿ ಅಡಗಿರುವವು. ಅವುಗಳೆಲ್ಲವನ್ನೂ ಕ್ರಮ ಕ್ರಮವಾಗಿ ಬೆಳೆಸಿಕೊಂಡು ಭಗವಂತನಂತೆ ಪೂರ್ಣನಾಗಲು ಇಲ್ಲಿಗೆ ಬಂದಿರುವನು. ಭಗವಂತನು ಯಾವಾಗಲೂ ಲೋಕಹಿತಕ್ಕಾಗಿ ಕೆಲಸ ಮಾಡುತ್ತಿರುವನು. ಆದ್ದರಿಂದ ನಾವು ಪೂರ್ಣರಾಗುವುದೂ ಸಹ ಆ ಪರಿಪೂರ್ಣನಾದ ದೇವರಂತೆ ಲೋಕಸೇವೆ ಮಾಡುವುದಕ್ಕಾಗಿಯೇ. ಹಾಗೆ ಪೂರ್ಣವಾದ [illegible]ಲೋಕಸೇವೆಯನ್ನು ಮಾಡಲು ತಕ್ಕವರಾಗಬೇಕಾದರೆ ಈಗಿನಿಂದಲೇ [illegible] [illegible] ಶಕ್ತ್ಯನುಸಾರ ಪ್ರಯತ್ನಪಟ್ಟು [illegible] [illegible]ಸೇವೆಯನ್ನು ಮಾಡುತ್ತಾ [illegible]

ಇಂತಹ ಪರಮೋತ್ಕೃಷ್ಟವಾದ ಅಪೌರುಷೇಯವಾದ ಸನಾತನಧರ್ಮವಾದ ಲೋಕಸೇವಾ ಬುದ್ಧಿಯು ನಮ್ಮವರಲ್ಲಿ ಅಡವೆಯಾಗುತ್ತ ಬಂದುದರಿಂದಲೇ ಅಷ್ಟು ಉತ್ತಮ ಪದವಿಯಲ್ಲಿದ್ದ ನಮ್ಮ ಭಾರತ ಭೂಮಿಯು ಈಗ ಈ ಸ್ಥಿತಿಗೆ ಬಂದಿತು. ನಮ್ಮ ದೇಶವು ಪುನಃ ಉತ್ತಮಸ್ಥಿತಿಗೆ ಬರಬೇಕಾದರೆ ನಮ್ಮ ಪೂರ್ವಿಕರಾದ ಮಹರ್ಷಿಗಳು ಹೇಗೆ ಲೋಕಸೇವೆ, ಪರಹಿತಗಳಿಗಾಗಿ ತಮ್ಮ ದೇಹವನ್ನೇ ಅರ್ಪಿಸಿ ಹಗಲೂ ರಾತ್ರಿ ಕೆಲಸ ಮಾಡುತ್ತಿದ್ದರೋ ಈಗಲೂ ಅಂತಹ ಬುದ್ಧಿಯು ನಮ್ಮವರಲ್ಲಿ ಹುಟ್ಟಿ, ಎಷ್ಟೆಷ್ಟು ಹೆಚ್ಚಾಗಿ ಕಾರ್ಯರೂಪದಲ್ಲಿ ಪರಿಣಮಿಸುತ್ತಾ ಬರುವುದೋ ಅಷ್ಟಷ್ಟು ಜಾಗ್ರತೆಯಲ್ಲಿ ನಮ್ಮ ದೇಶವು ಮೊದಲಿಗಿಂತ ಹೆಚ್ಚು ಉತ್ತಮಸ್ಥಿತಿಗೆ ಬರುವುದು. ಆದ್ದರಿಂದ ನಮ್ಮ ಪೂರ್ವಿಕರಾದ ಮಹಾಪುರುಷರು ಹೇಗೆ ವರ್ತಿಸುತ್ತಿದ್ದರೆಂಬುದನ್ನು ಅವರ ಕಥೆ ಮತ್ತು ಚರಿತ್ರೆಗಳಿಂದ ತಿಳಿದು, ಅವರ ಮೇಲ್ಪಂಕ್ತಿಯನ್ನು ಕೈಲಾದ ಮಟ್ಟಿಗೆ ಅನುಸರಿಸಲು ಯತ್ನಿಸೋಣ.

ಜ್ಞಾನಿಗಳು ಲೋಕಕಿಂಕರರು.

ನಾವು ಪೂರ್ಣರಾಗಿ ಮುಕ್ತರಾದರೆ ನಮ್ಮ ಮಟ್ಟಿಗೆ ನಾವು ಆನಂದವನ್ನು ಅನುಭವಿಸುತ್ತಾ ಇತರರ ದುಃಖ ಲೇಶವನ್ನೂ ಮನಸ್ಸಿಗೆ ಹಚ್ಚಿಕೊಳ್ಳದೆ, ಸೋಮಾರಿಗಳಾಗಿ ನಿರುದ್ಯೋಗಿಗಳಾಗಿ ಕಾಲ ಕಳೆಯುವುದೇ, ಬ್ರಹ್ಮಾನಂದವೆಂದು ಭಾವಿಸತಕ್ಕದ್ದಲ್ಲ. ನಮ್ಮ ಉದರಪೋಷಣೆ ಮೊದಲುಗೊಂಡು ಒಂದೊಂದು ವಿಷಯದಲ್ಲಿಯೂ ಇತರರಿಂದ ಉಪಕಾರ ಹೊಂದುತ್ತಾ ಇದ್ದೇವೆ. ಆ ಉಪಕಾರ ಸ್ಮರಣೆಯೇ ಇಲ್ಲದೆ ಅತಿ ಸಾಮಾನ್ಯರಾದ ಜನರಿಗಿಂತಲೂ ಕಡೆಯಾಗಿ ವರ್ತಿಸುವುದು ಸರಿಯಲ್ಲ. ಮಾಡಿದ ಉಪಕಾರವನ್ನು ಮರೆಯುವುದಕ್ಕಿಂತಲೂ ಲೋಕದಲ್ಲಿ ದೊಡ್ಡ ಪಾತಕವಿಲ್ಲವು. ಎಲ್ಲ ಉಪಕಾರಕ್ಕಿಂತಲೂ ಜ್ಞಾನದಾನವು ಅತ್ಯಂತ ಶ್ರೇಷ್ಠವಾದದ್ದು. ಅಂತಹ ಉತ್ಕೃಷ್ಟವಾದ ಸದಾನಂದ ಯುಕ್ತವಾದ ಜ್ಞಾನವನ್ನು ಪ್ರಯತ್ನಪಟ್ಟು ಕೊಂಚ ಕೊಂಚವಾಗಿ ಸಂಪಾದಿಸುತ್ತಾ, ನಮಗೆ ಉಂಟಾದ ಜ್ಞಾನದಿಂದ ಲೋಕದ ಅಜ್ಞಾನವನ್ನು ಯಥಾಶಕ್ತಿಯಾಗಿ ಹೋಗಲಾಡಿಸುತ್ತಾ ಬರುವುದೇ ಜ್ಞಾನಮಾರ್ಗದ ಸಾರವು. ಜ್ಞಾನಿಯಾದವನು, ತಾನು ಬೇರೆ, ಇತರರು ಬೇರೆ, ತನ್ನ ಮಟ್ಟಿಗೆ ತನಗೆ ಮೋಹ ನಾಶವಾದರೆ ಸರಿ, ಇನ್ನೊಬ್ಬರ ಸುಖದುಃಖ ನನಗೇಕೆ ಎಂದು ಎಂದಿಗೂ ಭಾವಿಸನು. ಏಕೆಂದರೆ ನಿಜವಾದ ಜ್ಞಾನಿಯು ಎಲ್ಲರ ಹೃದಯದಲ್ಲಿಯೂ ಇದ್ದುಕೊಂಡು ಅವರ ಜ್ಞಾನಾಜ್ಞಾನಗಳನ್ನೂ ಸುಖದುಃಖಗಳನ್ನೂ ಅವರವರು ಅನುಭವಿಸುವಂತೆಯೇ ತಿಳಿಯುವನು, ಅಷ್ಟೇ ಅಲ್ಲದೆ ಬ್ರಹ್ಮಾನುಭವ ಹೊಂದಿದವನಾದ್ದರಿಂದ ಬ್ರಹ್ಮನು ತಿಳಿಯುವಂತೆಯೂ ಪೂರ್ಣ ಜ್ಞಾನದಿಂದ ತಿಳಿಯುವನು. ಆತನಂತೆ ಪೂರ್ಣ ಪ್ರೇಮದಿಂದ ಜನರ ದುಃಖ ಅಜ್ಞಾನ ನಿವಾರಣೆಗಾಗಿ ಕೆಲಸ ಮಾಡುವನು. ದೇವರು ಮನುಷ್ಯ ಶರೀರವನ್ನು ಎತ್ತಿ ಈ ಕೆಲಸವನ್ನು ಎಷ್ಟು ಚೆನ್ನಾಗಿ ಮಾಡುವನೋ ತಾನೂ ಅಷ್ಟು ಚೆನ್ನಾಗಿ ಕೆಲಸ ಮಾಡುವನು.

ಶುಕರ ಲೋಕಸೇವೆ.

ಜ್ಞಾನಸ್ವರೂಪರಾದ ಶುಕರ ಸಂಗತಿಯನ್ನು ನೋಡೋಣ. ಇವರು ವ್ಯಾಸ ಮಹರ್ಷಿಗಳ ಮಕ್ಕಳು. ಐದು ವರ್ಷದವರಾಗಿದ್ದಾಗಲೇ ಪೂರ್ಣ ಜ್ಞಾನಿಗಳಾಗಿದ್ದರು. ಇವರಿಗೆ ಇನ್ನೂ ಉಪನಯನವಾಗಿರಲಿಲ್ಲ; ಆಗಲೇ ಕೃತಕೃತ್ಯರಾಗಿದ್ದರು, ಅಂದರೆ ಮುಕ್ತರಾಗಿದ್ದರು. ಇವರು ಮನೆಯಲ್ಲಿ ಮಾಡಬೇಕಾದ ಕರ್ತವ್ಯವೇನೂ ಇಲ್ಲದವರಾದ್ದರಿಂದ ಮನೆಬಿಟ್ಟು ಸೇವೆಗಾಗಿ ಹೊರಗೆ ಹೊರಟುಹೋಗುತ್ತಿದ್ದರು. ತಂದೆಯಾದ ವ್ಯಾಸರು ಮಗನು ಹೊರಟುಹೋಗುವನಲ್ಲಾ ಎಂಬ ಅಭಿಮಾನದಿಂದ ಪುತ್ರಾ! ಪುತ್ರಾ! ಎಂದು ಕೂಗಿದರು. ಜ್ಞಾನನಿಧಿಗಳಾದ ಶುಕರು ಬ್ರಹ್ಮಸ್ವರೂಪಿಗಳಾಗಿ ಸರ್ವತ್ರ ತುಂಬಿದವರಾದ್ದರಿಂದ ಆ ೫ ವರ್ಷದ ಮಗುವಿನ ದೇಹದಲ್ಲಿ ಮಾತ್ರವೇ ಅಲ್ಲದೆ ಗಿಡಗಳೇ ಮೊದಲಾದ ಸರ್ವದರಲ್ಲೂ ಇದ್ದುಕೊಂಡು ಜವಾಬುಕೊಟ್ಟರು. ಅಂತಹ ಸರ್ವಭೂತಗಳ ಹೃದಯದಲ್ಲಿಯೂ ಇರುವ ಶುಕಮಹರ್ಷಿಗಳನ್ನು ವಂದಿಸುತ್ತೇನೆ,- ಎಂಬ ಅರ್ಥವುಳ್ಳ

ಶ್ಲೋಕ. ಯಂ ಪ್ರವ್ರಜಂತ ಮನುಪೇತ ಮುಪೇತಕೃತ್ಯಂ ।
ದ್ವೈಪಾಯನೋ ವಿರಹಕಾತುರ ಆಜುಹಾವ ॥
ಪುತ್ರೇತಿ ತನ್ಮಯ ತಯಾತರವೋ ಭಿನೇದುಃ ।
ತಂ ಸರ್ವಭೂತ ಹೃದಯಂ ಮುನಿಮಾನತೋಸ್ಮಿ ॥

ಎಂಬ ಶ್ಲೋಕದಿಂದ ಭಾಗವತ ಪ್ರಾರಂಭದಲ್ಲಿ ಮಂಗಳಾಚರಣೆ ಮಾಡಿರುವರು. ಆದ್ದರಿಂದ ಜ್ಞಾನಿಗಳು ತಮ್ಮ ಮಟ್ಟಿಗೆ ತಾವು ಕೂಡಿಕೊಳ್ಳುವಷ್ಟು ಸ್ವಾರ್ಥಪರರಲ್ಲವು. ಅವರು ಸರ್ವರ ಹೃದಯದಲ್ಲೂ ತುಂಬಿ ಲೋಕದ ಅಜ್ಞಾನ ನಿವಾರಣೆಗಾಗಿ ಸೇವೆ ಮಾಡುತ್ತಿರುವರೆಂಬುದು ಗೊತ್ತಾಗುವುದು.

ಭಕ್ತರು ಲೋಕಕಿಂಕರರು.

ಭಕ್ತಿಮಾರ್ಗಾಸಕ್ತರಾದವರು ಸಹ ಸೇವೆಯ ಮೂಲಕ ತಮ್ಮ ಭಕ್ತಿಯನ್ನು ತೋರಿಸುವರು. "ತಾವುಂಟೋ ಮೂರು ಲೋಕವುಂಟೋ" ಎಂಬಂತೆ ತಮಗೆ ಸುಖವಾದರೆ ಲೋಕಕ್ಕೇ ಸುಖವೆಂದು ಭಾವಿಸಿ, ತಮ್ಮ ಸುಖವನ್ನು ಮಾತ್ರವೇ ತಾವು ನೋಡಿಕೊಳ್ಳುತ್ತಾ ಕುಳಿತಿರರು. ಮೋಕ್ಷವಾದರೆ ಭಗವಂತನ ಸಮೀಪದಲ್ಲಿ ಕುಳಿತುಕೊಂಡು ತಮ್ಮ ಮಟ್ಟಿಗೆ ತಾವು ಬ್ರಹ್ಮಾನಂದವನ್ನು ಅನುಭವಿಸುವುದು ಮಾತ್ರವೇ, ಎಂದು ಭಾವಿಸರು. ತಂದೆಯಾದ ಭಗವಂತನು ಮಾಡುತ್ತಿರುವ ಲೋಕಸೇವಾ ಕಾರ್ಯದಲ್ಲಿ, ಆತನ ಮಕ್ಕಳಾದ ನಾವು ದೊಡ್ಡವರಾಗಿ ಬೆಳೆದ ಹಾಗೆಲ್ಲಾ ನಮ್ಮ ನಮ್ಮ ಶಕ್ತ್ಯಾನುಸಾರ, ಆತನ ಇಚ್ಛೆಯನ್ನು ತಿಳಿದು ಆತನಿಗೆ ಪ್ರೀತಿಯಾಗುವಂತೆ ಸಹಾಯ ಮಾಡುವುದರ ಮೂಲಕ ಆತನಲ್ಲಿ ತಮಗಿರುವ ಭಕ್ತಿಯನ್ನು ತೋರಿಸಬೇಕು. ಆತನು ಸರ್ವಶಕ್ತನು. ತನ್ನ ಕೈಲಾಗದೆ ನಮ್ಮ ಸಹಾಯವನ್ನು ಅಪೇಕ್ಷಿಸುತ್ತಾನೆಂದು ಅಲ್ಲ. ಆತನು ದಯಾಸ್ವರೂಪನಾದ್ದರಿಂದ ತನ್ನ ಮಕ್ಕಳೂ ಸಹ ತನ್ನಂತೆ ಕೆಲಸ ಮಾಡಿದರೆ ಆತನಿಗೆ ತುಂಬ ಸಂತೋಷವು. ಆತನಿಗೆ ಸಂತೋಷಕರವಾದ ಕೆಲಸವನ್ನು ಮಾಡುವುದೇ ಭಕ್ತನು ಮಾಡಬೇಕಾದ ಕೈಂಕರ್ಯವು. ಈ ಅರ್ಥಕ್ಕೆ ಪರಮಭಕ್ತನಾದ ಪ್ರಹ್ಲಾದನ ಚರಿತ್ರೆಯನ್ನು ದೃಷ್ಟಾಂತ ತೆಗೆದುಕೊಳ್ಳೋಣ.

ಪ್ರಹ್ಲಾದನ ಲೋಕಸೇವೆ.

ಈ ಕಥೆಯು ಸಾಮಾನ್ಯವಾಗಿ ಎಲ್ಲರಿಗೂ ಗೊತ್ತೇ ಇರುವುದಷ್ಟೆ. ಭಕ್ತಶಿರೋಮಣಿಯಾದ ಪ್ರಹ್ಲಾದನು ದುಷ್ಟನಾದ ಹಿರಣ್ಯಕಶಿಪುವೆಂಬ ರಾಕ್ಷಸನ ಮಗನು. ಈತನು ಹರಿಭಕ್ತನು. ತಂದೆಯು ಹರಿಶತ್ರುವು. ಮಗನಿಗೆ ಹರಿಯಲ್ಲಿರುವ ಭಕ್ತಿಯನ್ನು ತಪ್ಪಿಸಬೇಕೆಂದು ನಾನಾವಿಧವ ಪ್ರಯತ್ನಮಾಡಿದನು. ಮಗನು ಕೇಳದೆ ಹೋಗಲು ಅವನನ್ನು ಅನೇಕ ವಿಧದಲ್ಲಿ ಹಿಂಸೆ ಮಾಡಿದನು. ಕೊನೆಗೆ ಹರಿಯು ನರಸಿಂಹಾವತಾರ ಮಾಡಿ ದುಷ್ಟನಾದ ಹಿರಣ್ಯಕಶಿಪುವನ್ನು ಕೊಂದು, ಭಕ್ತನಾದ ಪ್ರಹ್ಲಾದನನ್ನು ಪರಮಾನುಗ್ರಹದಿಂದ "ನಿನಗೇನು ವರಬೇಕಾದರೂ ಕೇಳಿಕೋ" ಎಂದು ಹೇಳಿದನು. ಆಗ ಪ್ರಹ್ಲಾದನು ಎಂತಹ ವರವನ್ನು ಕೇಳಿಕೊಂಡನೆಂಬುವುದನ್ನು ನೋಡಿದರೆ ನಿಜವಾದ ಭಕ್ತನು ಹೇಗೆ ಲೋಕಸೇವಾ ದುರಂಧರನೆಂಬುವುದು ಚೆನ್ನಾಗಿ ಗೊತ್ತಾಗುವುದು.

ಶ್ಲೋಕ. ಪ್ರಾಯೇಣ ದೇವಮುನಯ ಸ್ವವಿಮುಕ್ತಿಕಾಮಾಃ ।
ಮೌನಂ ಚರಂತಿ ವಿಜನೇ ನ ಪರಾರ್ಥನಿಷ್ಠಾಃ ॥
ನೈತಾನ್ ವಿಹಾಯ ಕೃಪಣಾನ್ ವಿಮುಮುಕ್ಷ ಏಕೋ ।
ನಾನ್ಯಂ ತ್ವದನ್ಯಶರಣಂ ಭ್ರಮತೋನುಪಶ್ಯೇ ॥ (ಭಾಗವತ)

"ಸಾಮಾನ್ಯವಾಗಿ ದೇವತೆಗಳೂ ಮುನಿಗಳೂ ಪರಾರ್ಥಕ್ಕಾಗಿ ಕೆಲಸಮಾಡಬೇಕೆಂಬ ಆಸಕ್ತಿ ಇಲ್ಲದವರಾಗಿ, ಸ್ವಾರ್ಥಯುಕ್ತವಾದ ಆಸೆಗಳಿಂದ ಕೂಡಿದವರಾಗಿ ಬೆಟ್ಟಗುಡ್ಡಗಳೇ ಮೊದಲಾದ ನಿರ್ಜನ ಪ್ರದೇಶಗಳಿಗೆ ಹೋಗಿ ಅಲ್ಲಿ ತಪಸ್ಸು ಮಾಡುತ್ತಾರೆ. ನಾನಾದರೋ ಅಜ್ಞಾನಾಂಧಕಾರದಲ್ಲಿ ದುಃಖಿಸುತ್ತಿರುವ ಕೃಪಣರಾದ ಈ ಜನರನ್ನು ಬಿಟ್ಟು ಬಿಟ್ಟು ನನ್ನೊಬ್ಬನ ಮೋಕ್ಷವನ್ನೇ ನಾನು ಅಪೇಕ್ಷಿಸೆನು. ಇಲ್ಲಿಯೇ ಇದ್ದುಕೊಂಡು ಇವರ ಅಜ್ಞಾನವನ್ನು ಹೋಗಲಾಡಿಸುವಂತೆ ವರಕೊಡು. ನಾನು ದೊಡ್ಡವನೆಂಬ ಅಹಂಕಾರದಿಂದ ನಾನು ಹೀಗೆ ಹೇಳುತ್ತಿಲ್ಲ. ಯಾಕೆಂದರೆ ನನಗೂ ಸರ್ವರಿಗೂ ನಿನ್ನನ್ನು ಬಿಟ್ಟು ಬೇರೆ ಶರಣ್ಯರಿಲ್ಲವು" ಎಂದು ಹೇಳಿದನು.

ಇದೇ ನಿಜವಾದ ಭಕ್ತನ ಲಕ್ಷಣವು. ಎಲ್ಲರಲ್ಲಿಯೂ [illegible] ಭಗವಂತನನ್ನು ನೋಡುತ್ತಾ ಸರ್ವತ್ರ ಸಮಬುದ್ಧಿಯಿಂದ ಲೋಕಸೇವೆಯನ್ನು ಮಾಡತಕ್ಕದ್ದೇ ಭಗವದ್ಭಕ್ತಿಯು, ಕೈಂಕರ್ಯವು.

ಯೋಗಿಗಳು ಲೋಕಕಿಂಕರರು.

ಯಜಮಾನನ ಇಷ್ಟದಂತೆ ನಡೆಯದ ಆಳಿನಿಂದ ಫಲವೇನು? ಸ್ವಾಮಿಯಾದ ಜಗದೀಶ್ವರನ ಚಿತ್ತವನ್ನರಿತು ನಡೆಯದ ದಾಸನು ನಿಜವಾದ ದಾಸನಾದಾನೆಯೆ! ಅಂತಹ ದಾಸರಾದ ಕರ್ಮಯೋಗಿಗಳಿಗೂ ಸಹ ಲೋಕಸೇವೆಯೆಂಬುದು ಹೇಗೆ ಸ್ವಭಾವವೆಂಬುವುದು ಮುಂದೆ ಹೇಳುವ ಚರಿತ್ರೆಯಿಂದ ಗೊತ್ತಾಗುವುದು.

ರಂತಿದೇವನ ಲೋಕಸೇವೆ.

ರಂತಿ ದೇವನೆಂಬ ರಾಜನೊಬ್ಬನಿದ್ದನು. ಆತನು ಮಹಾತ್ಯಾಗಿ [illegible] ವೃತ್ತಿಯಿಂದ ಜೀವಿಸುತ್ತಿದ್ದನು, ಅಂದರೆ ಮಧ್ಯಾಹ್ನದಲ್ಲಿ [illegible] ನೆಯೂ, ರಾತ್ರಿ ನಾಳೆಗೆ ಹೇಗೆಂಬ ಯೋಚನೆಯೂ [illegible]

ಅಗ್ನಿ ತೃಪ್ತನಾಗಿದ್ದುಕೊಂಡು ಕೆಲಸ ಮಾಡುವುದು, ಇಂತಹ ಪರಮಶ್ರೇಷ್ಠವಾದ ವೃತ್ತಿಯಿಂದ ಜೀವಿಸುತ್ತಿರುವಾಗ್ಗೆ ಒಂದಾನೊಂದು ವೇಳೆ ಹನ್ನೆರಡು ವರ್ಷದ ದೊಡ್ಡ ಕ್ಷಾಮವೊಂದು ಬಂದಿತು. ತಿನ್ನುವುದಕ್ಕೆ ಅನ್ನವಿಲ್ಲದೆ ಈತನೂ ಈತನ ಮನೆಯವರೂ ಹದಿನೆಂಟು ದಿನ ಉಪವಾಸಮಾಡಬೇಕಾಯಿತು ಹತ್ತೊಂಬತ್ತನೆಯ ದಿನ ಸ್ವಲ್ಪ ಅನ್ನವೂ ನೀರೂ ದೊರೆಯಿತು ಅದನ್ನು ಊಟಮಾಡೋಣವೆಂದು ಇರುವಾಗ್ಗೆ ನನಗೆ ತುಂಬ ಹಸಿವು, ಅನ್ನಬೇಕೆಂದು ಬ್ರಾಹ್ಮಣನೊಬ್ಬನು ಬಂದನು ಅವನಿಗೆ ಕೊಂಚ ಅನ್ನವನ್ನೂ ನೀರನ್ನೂ ಕೊಟ್ಟು ಅವನನ್ನು ತೃಪ್ತಿಪಡಿಸಿ ಕಳುಹಿಸಿದನು ಅಷ್ಟರಲ್ಲಿ ವ್ಯಕ್ಷಲನಾದ ಜಾತಿಕೆಟ್ಟ ಬ್ರಾಹ್ಮಣನೊಬ್ಬನು ನನಗೆ ಬಹಳ ಹಸಿವೆಂದು ಬಂದನು. ಅವನಿಗೂ ಸ್ವಲ್ಪವನ್ನು ಕೊಟ್ಟನು ಬಳಿಕ ಒಬ್ಬ ಶೂದ್ರನು ನಾಲ್ಕು ನಾಯಿಗಳೊಡನೆ ಬಂದು, ಅಯ್ಯಾ, ನನಗೂ ನನ್ನ ನಾಯಿಗಳಿಗೂ ಮೂರು ದಿನಗಳಿಂದ ಹೊಟ್ಟೆಗಿಲ್ಲದೆ ಸಾಯುತ್ತಿದ್ದೇವೆ, ನಮಗೆ ಕೊಂಚ ಆಹಾರ ಕೊಡೆನ್ನಲು, ಮಿಕ್ಕ ಅನ್ನವನ್ನೆಲ್ಲಾ ಅವರಿಗೆ ಇಟ್ಟುಬಿಟ್ಟನು ಹಸಿದು ಬಂದಾಗ್ಗೆ ಇವನು ಬ್ರಾಹ್ಮಣ ಇವನು ಬ್ರಾಹ್ಮಣೇತರನೆಂಬ ಭೇದವೇ ಇಲ್ಲವು ಅಷ್ಟೆನ್ನುವಾಗ್ಗೆ ಅನ್ನವೆಲ್ಲಾ ಮುಗಿದುಹೋಗಿ ಒಬ್ಬನು ಕುಡಿಯುವಷ್ಟು ನೀರು ಮಾತ್ರ ಮಿಕ್ಕಿತ್ತು ಅದನ್ನಾದರೂ ಕುಡಿದು ಕೊಂಚ ಆಪ್ಯಾಯನ ಮಾಡಿಕೊಳ್ಳೋಣವೆನ್ನುವಾಗ್ಗೆ ಚಂಡಾಲನೊಬ್ಬನು ದಾಹ! ದಾಹ! ಎಂದು ಹತ್ತಿರ ಬಂದು ಬಿದ್ದನು ಕೂಡಲೇ ಪರಮಕರುಣೆಯಿಂದ ತನ್ನಲ್ಲಿದ್ದ ನೀರನ್ನು ಆತನಿಗೆ ಕೊಟ್ಟು ತೃಪ್ತಿಪಡಿಸಿದನು ದೇವರು ಇವನ ಪರೋಪಕಾರ ಬುದ್ಧಿಗೆ ಮೆಚ್ಚಿ ಪ್ರತ್ಯಕ್ಷನಾಗಿ ನಿನಗೇನು ಬೇಕೋ ಕೇಳಿಕೋ ಎನ್ನಲು, ರಂತಿದೇವನು ಎಂತಹ ವರವನ್ನು ಕೇಳಿಕೊಂಡನೆಂಬುವುದನ್ನು ನೋಡಿದರೆ ಕರ್ಮಯೋಗಿಗಳೂ ಸಹ ಹೇಗೆ ಲೋಕಸೇವಾ ದುರಂಧರರೆಂಬುವುದು ಚೆನ್ನಾಗಿ ಗೊತ್ತಾಗುವುದು

ಶ್ಲೋ. ನಕಾಮಯೇಹಂ ಗತಿಮೀಶ್ವರಾತ್ಪರಾ ಮಷ್ಟರ್ಧಿಯುಕ್ತಾ ಮಪುನರ್ಭವಂವಾ
ಆರ್ತಿಂ ಪ್ರಪದ್ಯೇಖಿಲ ದೇಹಭಾಜಾ ಮಂತಸ್ಥಿತೋ ಏನಭವಂತ್ಯದುಃಖಾಃ ||
(ಭಾಗವತ)

ಹೇ ಸ್ವಾಮಿ! ಅಷ್ಟಸಿದ್ಧಿಗಳಿಂದ ಕೂಡಿದ ಬ್ರಹ್ಮಲೋಕ ಸುಖವನ್ನಾಗಲೀ, ಹುಟ್ಟು ಸಾವುಗಳಿಲ್ಲದಿರುವ ಜನ್ಮರಾಹಿತ್ಯವನ್ನಾಗಲೀ ನಾನು ನಿನ್ನನ್ನು ಬೇಡುವುದಿಲ್ಲವು **"ಈ ದೇಹಧಾರಿಗಳಾದ ಜನರೆಲ್ಲರ ದುಃಖವನ್ನೂ ನನಗೆ ವರವಾಗಿ ಕೊಡ. ನಾನು ಅವರ ಹೃದಯಗಳಲ್ಲಿದ್ದು ಅವರ ದುಃಖಗಳನ್ನು ಹೋಗಲಾಡಿಸುವಂತಹ ವರವನ್ನು ಕೊಡ."** ಎಂದು ಕೇಳಿಕೊಂಡನು

ಆಚಾರ್ಯರುಗಳು, ದೇವರ್ಷಿಗಳು, ಬ್ರಹ್ಮರ್ಷಿಗಳು, ರಾಜರ್ಷಿಗಳು, ಜ್ಞಾನಿಗಳು, ಭಕ್ತರು, ಯೋಗಿಗಳು ಮೊದಲಾದ ಮಹಾಪುರುಷರು ಸ್ವಯಂಮುಕ್ತರಾದಾಗ್ಯೂ ಅವ್ಯಾಜಕರುಣಾ ಮೂರ್ತಿಗಳಾದ್ದರಿಂದ ದೇಹಧಾರಿಗಳಾಗಿ ಈ ಲೋಕದಲ್ಲಿ ಬಂದು ಪರಹಿತಕ್ಕಾಗಿ ಅವರು ಕೆಲಸಮಾಡದಿದ್ದರೆ ದೇಶವು ಅಂತಹ ಉತ್ತಮ ಪದವಿಗೆ ಹೇಗೆ ಬರುತ್ತಿತ್ತು? ಹಿಂದೂ ಮತಕ್ಕೆ ಇಷ್ಟು ಪ್ರಾಶಸ್ತ್ಯವು ಎಲ್ಲಿ ಬರುತ್ತಿತ್ತು? ಅಂತಹ ಮುಕ್ತರಾದ ಮಹಾನುಭಾವರೇ ಬೋಧಕರಾಗಿಯೂ, ರಾಜರಾಗಿಯೂ, ವರ್ತಕರಾಗಿಯೂ, ಸೇವಕರಾಗಿಯೂ ಹುಟ್ಟಿ, ಹೇಗೆ ಲೋಕಸೇವೆ ಮಾಡಬೇಕೆಂಬುದನ್ನು ತಾವು ಮೇಲ್ಪಂಕ್ತಿಯಾಗಿದ್ದುಕೊಂಡು ಆಚರಿಸಿ ತೋರಿಸಿ ಬೋಧಿಸುತ್ತಿದ್ದರು

ಇಂತಹ ಪರಮಶ್ರೇಷ್ಠವಾದ ಲೋಕಸೇವೆಯೆಂಬ ಪರೋಪಕಾರ ಬುದ್ಧಿಯು ನಮ್ಮ ಪೂರ್ವಿಕರಲ್ಲಿ ಅಷ್ಟು ವಿಶೇಷವಾಗಿ ಇದ್ದುದರಿಂದಲೇ ಹಿಂದೂದೇಶವು ಪ್ರಪಂಚಕ್ಕೆಲ್ಲಾ ಶಿರೋಮಣಿಪ್ರಾಯವಾಗಿದ್ದಿತು ಈಗಲಾದರೋ ಸ್ವಾರ್ಥತೆಯೂ, ಪರ ಅಪಕಾರ ಬುದ್ಧಿಯೂ ಹೆಚ್ಚಿತು. ಹೊರಗಿನ ವಿಷಯಗಳಲ್ಲಿ ಮಾತ್ರವೇ ಅಲ್ಲದೆ ಪರಮಾರ್ಥ ವಿಚಾರದಲ್ಲಿಯೂ ಕೂಡ ಸ್ವಾರ್ಥತೆಯು ಹೆಚ್ಚಿ, ಯಾರೆಲ್ಲಿ ಹೋದರೆ ನನಗೇನು, ನನ್ನ ಮುಕ್ತಿಗೆ ನನಗೆ ಮೋಕ್ಷವಾದರೆ ಸರಿ, ಎಂದು ಆಗುತ್ತ ಬಂದಿದೆ ಆದ್ದರಿಂದಲೇ ಅಂತಹ ಉನ್ನತ ಪದವಿಯಲ್ಲಿದ್ದ ದೇಶವು ಇಂತಹ ಹೀನಸ್ಥಿತಿಗೆ ಬಂದಿತು ಈಗಲೂ ಈ ಲೋಕಸೇವಾ ಬುದ್ಧಿಯ ಉತ್ಕೃಷ್ಟತೆಯೂ ಅವಶ್ಯಕತೆಯೂ ಎಷ್ಟರ ಮಟ್ಟಿಗೆ ಜನರ ಮನಸ್ಸಿನಲ್ಲಿ ನಾಟಿ, ಕಾರ್ಯದಲ್ಲಿ ಪರ್ಯವಸಾನವಾಗುವುದೋ ದೇಶವು ಅಷ್ಟು ಜಾಗ್ರತೆಯಲ್ಲಿ ಉನ್ನತಸ್ಥಿತಿಗೆ ಬರುವುದು

ಮರೆತುಹೋಗಿರುವ ಇಂತಹ ಪರಮೋತ್ಕೃಷ್ಟವಾದ ಹಿಂದೂ ಮತಸಾರವನ್ನು ಬ್ರಹ್ಮವಿದ್ಯೆಯು ನಮಗೆ ಜ್ಞಾಪಿಸಿ, ನಮ್ಮನ್ನು ಎಚ್ಚರಿಸುವುದರ ಮೂಲಕ ನಮಗೂ ನಮ್ಮ ದೇಶಕ್ಕೂ ಲೋಕಕ್ಕೂ ಮಹೋಪಕಾರವನ್ನು ಮಾಡುತ್ತಿರುವುದು.

ಕೆ. ನರಹರಿಶಾಸ್ತ್ರಿ.

ಬೋನಿನಲ್ಲಿ ಸಿಕ್ಕುಬಿದ್ದ ಇಲಿಯ ಬೇಡಿಕೆ.

೧ ಗೋಡೆ ಸಂದಿನ ಬಿಲದಿ ಜೋಡು ಮಕ್ಕಳ ಪಡೆದು
ಕೂಡಿ ಸಂಸಾರವಂ ಕಟ್ಟಿರುವೆನಮ್ಮಾ |
ಕಾಡುತಿಹ ಹಸಿವಿಂದ ಬೇಡುತಿರೆ ಕಿರುಕಂದ,—
ಒಡ್ಡಿರುವ ಚಕ್ಕುಲಿಗೆ ಸೆರೆಯಾದೆನಮ್ಮಾ

೨ ದಮ್ಮಯ್ಯ,—ಅಮ್ಮನೀ ಕರೆಯಬೇಡೌ ನಾಯ,
ನೊಮ್ಮೆಗನ್ನಂ ಪೋಗೊಳಿಸು, ಮುರಳನಮ್ಮಾ
ಸುಮ್ಮನೇತಕೆ ಮುನಿಸು, ನಿಮ್ಮನಾನೊಂದಿನಿಸು
ಅಮ್ಮಮ್ಮ ಕೆಣಕುವವಳಲ್ಲ,—ಕ್ಷಮಿಸಮ್ಮಾ

೩ ಬಿಲದೊಡತಿನಾನಿಂತು ಅಳಿಯೆ, ಬಲುದುಮ್ಮಾನ
ಕುಲಕೆ ಬಹುದನುಮಾನ ಬೇಡ,—ತಿಳಿಯಮ್ಮಾ |
ಒಲಿದೊಮ್ಮೆ ಸೆರೆಬಿಡಿಸು, ನಿಲದೋಡುವೆನು ಕನಸಿ
ನಲಿಯು ನಿಮ್ಮನೆ ಮರೆಯೆ,—ಪುಣ್ಯಗಳಿಸಮ್ಮಾ

೪ 'ಚಕ್ಕುಲಿಯು ದೋಸೆಗಳ ಸಕ್ಕರೆಮಿಠಾಯಿಗಳ,
ತಕ್ಕಂತೆ ಸಂತೆಯಿಂ ಕೊಂಡುಬಾರಮ್ಮಾ'
ಅಕ್ಕರೆಯ ಮುದ್ದಣನು ನಿನಗೊರೆದು ಕಾದಿರನೆ?—
ರೊಕ್ಕವಿಲ್ಲದದೆಂತು ಕಳುವದಿರಲಮ್ಮಾ!!

೫ ಸೀರೆ ಕುಪ್ಪುಸ ಬೇಡ, ಹಾರವೋಲೆಯು ಬೇಡ,
ಚೂರಿ ಭೋಜನ ಬೇಡ —ದೀನರಮ್ಮಾ |
ಚೂರುತೀನಿಗು ಗತಿಯತೋರದಾದೆವು,—ದುಡಿಯ
ಬಾರದೀ ದುಸ್ಥಿತಿಗಿದಾರು ಹೊಣೆಯಮ್ಮಾ?

೬ ಇಲಿಯಾದರೇನು ಹೆಬ್ಬುಲಿಯಾದರೇನೆಮಗ
ಬೆಳಕು ಗಾಳಿಯು ನೀರು ನಿತ್ಯ ಪ್ರಿಯವಮ್ಮಾ
ಬಲವುಳ್ಳರಬಲರನ ಕೊಲುವಂಕಟರವರೇನು
ಅಳಿದರನು ಉಳಿಸಲಾಪರೆ? ಪೇಳಲಮ್ಮಾ

೭ ಕೋಲಿಸಿದರೆ, ಕುಲವೈರಿ ಮಾರ್ಜಾಲನಪಕೀರ್ತಿ
ಸಲದೆ ನಿನ್ನಂಥ ನರಕುಲರಾಣಿಗಮ್ಮಾ?
ಇಲಿಯೆ ನೀ, ಕೊಲುವಾಕೆ ನಾನೆಂದು ಪ್ರತಿಯೆಣಿಸು,—
ಗಳಗಳನೆ ಕಣ್ಣನೀರಿಳಿಯದೇನಮ್ಮಾ?

೮ ಕೊಲುವೆಯಾದರಿದೊಮ್ಮೆ ಕಳುಹಿಕೊಡು, ಮರಳುವೆನು
ಮೊಲೆಯುಣಿಸಿ, ಕಿರುಬಾಲನಾಣೆ! ದಿಟವಮ್ಮಾ |
ಎಳವಕ್ಕಿಯನು ಸಲಹೆ, ಕೊಳುಗುಳವ ನಿಲಿಸಿದಾ
ಕೊಳಲಕರ ಕರುಣಾಳು ಸಲಹುವನು ನಿಮ್ಮಾ

೯ ಸಕಲಗಣಗಳನಾಥ, ನಿಖಿಲವಿಘ್ನತ್ರಾತ,
ಅಕಲಂಕ, ಪ್ರಥಮ ಪೂಜಿತ ಬೆನಕನಮ್ಮಾ |
ಪ್ರಕಟ ಮಮತೆಯೊಳು ಮೂಷಿಕವಾಹನನೆ ತಾನು |
ಮುಕುತಿಗಿದುವೊಂದೆ ಪಥ, ಜೂತದಯೆಯೆಮ್ಮಾ!!

M N K

ಮೈಸೂರು ಸೀಮೆಯಲ್ಲಿ ವಾಙ್ಮಯಾಭಿವೃದ್ಧಿ.

ಈ ವರ್ಷದ ಎರಡನೆಯ ಪಾದದಲ್ಲಿ ಮೈಸೂರು ಸೀಮೆಯೊಳಗೆ ಕನ್ನಡ ೧೫, ಇಂಗ್ಲೀಷು ೪, ಸಂಸ್ಕೃತ ೨, ಅಂತು ೧೮ ಪುಸ್ತಕಗಳು ಅಚ್ಚಾಗಿರುವಂತೆ 'ರಿಪೋರ್ಟ್'ನಿಂದ ತಿಳಿಯಬರುತ್ತಿದೆ.

ಕನ್ನಡದಲ್ಲಿ ಅಚ್ಚಾದುವುಗಳೊಳಗೆ ವಿದ್ವಾನ್ ಸುಬ್ರಮಣ್ಯಯ್ಯರವರ ಸಂಗೀತ ಸಮಯ ಸಾರವು (೧ ರೂ.) ಭಾರತೀಯ ಗಾನಶಾಸ್ತ್ರವನ್ನು ನಿರೂಪಿಸುವ ವೈಜ್ಞಾನಿಕ ಗ್ರಂಥವಾಗಿದೆ. ಮ|| ವೈ. ಕೆ. ರಾಮಚಂದ್ರರಾವ್ ಬಿ. ಎ. ಎಲ್. ಸಿ. ಇ. ಯವರು ಗ್ಲಾಡ್‌ಸ್ಟನ್‌ರವರ ಮಹಿಮೆ (೧ ಆಣೆ) ಎಂಬ ಚಿಕ್ಕ ಜೀವನ ಚರಿತ್ರೆಯನ್ನು ಬರೆದಿರುವರು. ನಾಟಕಗಳೊಳಗೆ ಜಾನಕೀ ಪರಿಣಯ (೧೨ ಆಣೆ) ಎಂಬುದು ಮ|| ವೆಂಕಟ

ರಾಯ ಕವಿಗಳು ಸಂಸ್ಕೃತದಿಂದ ಕನ್ನಡಿಸಿದ ರೂಪಕವಾಗಿರುವುದು. ಮ| ಶಂಕರ ನಾರಾಯಣ ಶಾಸ್ತ್ರಿಗಳ ವಿನೋದ ಸುಂದರಿ (೬ ಆಣೆ) ಎಂಬ ಕಲ್ಪನಾ ಪ್ರಬಂಧವು ಪೂರ್ವ ಸಂಪ್ರದಾಯಾನುಸಾರವಾದ ಅದ್ಭುತ ವಿಷಯಗಳಿಂದ ಕೂಡಿದೆ ಶಾ| ವೆಂಕಟರಾಮೈಯನವರ ಶ್ರೀ ಸುಬ್ರಮಣ್ಯ ಕ್ಷೇತ್ರದ ಪುರಾವೃತ್ತವು (೨ ಆಣೆ) ಬೆಂಗಳೂರು ಡಿಸ್ಟ್ರಿಕ್ಟಿಗೆ ಸೇರಿದ ಘಾಟಿ ಸುಬ್ರಮಣ್ಯ ಕ್ಷೇತ್ರದ ಮಹಾತ್ಮೆಯನ್ನು ನಿರೂಪಿಸುತ್ತಿದೆ ಘು| ಗೋವಿಂದರಾಜುಲು ನಾಯುಡು ಎಂಬವರು ಹಿಂದೂ ಯುನಾನಿ ವೈದ್ಯಯಂತ್ರ ಮಂತ್ರ ಸುಗಂಧ ಬೋಧಕವೆಂಬ (೧॥ ರೂ) ಪುಸ್ತಕವನ್ನೂ ಮ| ಪದ್ಮರಾಜ ಪಂಡಿತರು ನೋಂಪಿಯ ಕಥೆ (೧ನೇ ಭಾಗ) ಎಂಬ ಹೆಸರಿನಿಂದ ಜೈನರಲ್ಲಿ ಆಚರಣೆಯಲ್ಲಿರುವ ನೋಂಪಿಗಳ ವಿವರವನ್ನು ಕೊಡುವ (೧೨ ಆಣೆ) ಪುಸ್ತಕವನ್ನೂ ಬರೆದಿರುವರು ಇನ್ನು ಉಳಿದ ಪುಸ್ತಕಗಳೊಳಗೆ ಮೂರು ಶಾಲಾ ವಿದ್ಯಾರ್ಥಿಗಳಿಗಾಗಿ ಬರೆಯಲ್ಪಟ್ಟಿವೆ. ಬೇರೆ ಎರಡು ಸಾಹಿತ್ಯ ದೃಷ್ಟಿಯಿಂದ ಮುಖ್ಯವಾದುವುಗಳಲ್ಲ

ಮದ್ರಾಸಿನ ರಿಪೋರ್ಟಿನಲ್ಲಿ ಹೇಗೋ ಹಾಗೆಯೇ ಈ ರಿಪೋರ್ಟಿನಲ್ಲಿಯೂ ಮಾಸಪತ್ರಿಕಾ ಮೂಲವಾಗಿ ಅಚ್ಚಾದ ಪುಸ್ತಕಗಳು ಸೇರಿರುವುದಿಲ್ಲ ಕನ್ನಡದಲ್ಲಿ ಬಹು ಸಂಖ್ಯೆಯ ಪುಸ್ತಕಗಳು ಮಾಸಪತ್ರಿಕೆಗಳಲ್ಲಿಯೇ ಪ್ರಾಯಶಃ ಅಚ್ಚಾಗುತ್ತಿರುವುದರಿಂದ ಅವುಗಳನ್ನು ಹೇಳದೆ ಬಿಟ್ಟರೆ ರಿಪೋರ್ಟಿನ ಮೌಲ್ಯವು ತುಂಬ ಕಡಿಮೆಯಾಗುವುದೆಂದು ನಮಗೆ ತೋರುತ್ತಿದೆ ಈ ಕುಂದಕವನ್ನು ಹೋಗಲಾಡಿಸುವ ವಿಷಯದಲ್ಲಿ ಮೈಸೂರು ಸರಕಾರದವರು ತಕ್ಕ ಏರ್ಪಾಡು ಮಾಡಬೇಕೆಂದು ವಿನಯ ಪುರಸ್ಸರವಾಗಿ ಸೂಚಿಸುವೆವು

~~~~~

ಪತ್ರವ್ಯವಹಾರ.

ಅಯ್ಯಾ ಪತ್ರಿಕಾಕರ್ತರೇ,

ನಮ್ಮ ಜಿಲ್ಲೆಯಲ್ಲಿ ಮೇಸ್ತ್ರಿಗಳ ಮತ್ತು ಕೂಲಿ ಆಳುಗಳ ಪ್ರಯೋಜನಾರ್ಥವಾಗಿ ಒಂದು ಉಡುಪಿ ಸಂಘ ಹೊಸತಾಗಿ ಏರ್ಪಾಡಾದ ಸಂಗತಿ ಕೇಳುತ್ತೇನೆ ಈ ಸಂಘದ ಕೆಲಸಗಳನ್ನು ಹಳ್ಳಿಹಳ್ಳಿಗಳಲ್ಲಿ ಸರಿಯಾಗಿ ನಡೆಯುವಂತೆ ಏಜಂಟರುಗಳನ್ನು ಮೊಕ್ರೂರು ಮಾಡಿ ತಿಂಗಳು ೧೦ ರೂ ೩೦ರಿಂದ ೭೫ ರೂಪಾಯಿಗಳ ವರೇಗೆ ಸಂಬಳ ಕೊಡುವದು ಎಂಬದಾಗಿಯೂ ವಾರ್ತೆ ಇದೆ ಈ ನವೀನ ಸಂಘದ ವಿಷಯ ಈ ಕೆಳಗೆ ನಾನು ಕೇಳುವ ಕೆಲವು ಪ್ರಶ್ನೆಗಳಿಗೆ ತಮ್ಮ ಪತ್ರದ ಮೂಲಕ ದಯವಿಟ್ಟು ಉತ್ತರ ಕೊಡುತ್ತಿದ್ದರೆ ಉಪಕಾರ್ಯವೇ ಸೈ

(1) ಈ ಸಂಘದಿಂದ ಕೂಲಿ ಆಳುಗಳಿಗೂ ಮೇಸ್ತ್ರಿಗಳಿಗೂ ಏನು ಪ್ರಯೋಜನ?

(2) ಹೆಚ್ಚಿನ ಸಂಬಳ ಹೊಂದುತ್ತಲಿರುವ ಸಂಘದ ಏಜಂಟರುಗಳ ಕೆಲಸವೇನು?

(3) ಸಂಘದಲ್ಲಿ ಏಜಂಟರಾಗಲು ಮನಸ್ಸುಳ್ಳವರ ಯೋಗ್ಯತೆಗಳು ಏನಾಗಿರಬೇಕು

(4) ಮೇಸ್ತ್ರಿಗಳು ಮತ್ತು ಜನರು ಅಡ್ವಾನ್ಸು ಹಣ ಹೊಂದ ಬೇಕಾದ್ದಲ್ಲಿ ಏಜೆಂಟರ ಮೂಲಕವೇ ಹೋಗಬೇಕೋ? ಯಾ ಈ ಮೊದಲಿನಂತೆಯೇ ತೋಟಗಳ ದೊರೆಗಳಿಂದ ಸೀದಾ ಹೊಂದಬಹುದೋ? ಹಾಗೆ ಹೊಂದುವಲ್ಲಿ ಏಜೆಂಟರುಗಳ ಮೊಕ್ರೂರಿಯಿಂದ ಪ್ರಯೋಜನವೇನ ?

(5) ಈ ಸಂಘದ ಉದ್ದಿಶ್ಯ ಕಾರ್ಯಕಾರಣಗಳ್ಯಾವವು

ಈ ಎಲ್ಲಾ ವಿಷಯಗಳನ್ನು ತಮ್ಮ ಪತ್ರ ಮುಖೇನ ಸಂಘದ ಮೆನೇಜರರು ವ ತಿಳಿದವರು ಸೂಚಿಸಿದ್ದಲ್ಲಿ ಸರ್ವೇ ಜನರಿಗೂ ಪ್ರಯೋಜನವಾದೀತು ಎಂಬ ನನ್ನ ಕೋರಿಕೆಗೆ ಎಡೆಕೊಡುವ ತಮಗೊಂದು ನಮಸ್ಕಾರ

ಇತಿ.

Kaup, 9—9 -15 P V Rao.

~~~~~

ಅಯ್ಯಾ,

ಗ್ರಾಮ ಮುನ್ಸೀಫ ಕೋರ್ಟಿನಲ್ಲಿ ದಾಖಲಾದ ವ್ಯಾಜ್ಯಗಳಲ್ಲಿ ವಾದಿ ಯಾ ಪ್ರತಿವಾದಿರು ಅಗತ್ಯಪಟ್ಟ್ಯಾಗ್ಯೆ ತಮ್ಮ ತಮ್ಮ ಕಡೆಯಿಂದ ವ್ಯವಹರಣೆ ನಡಿಸುವರೆ ವಕೀಲರನ್ನು ನೇಮಿಸಿ ಬರಕೊಡುವ ವಕಾಲತುಗಳಿಗೆ ವ್ಯಾಜ್ಯ ದಾಖಲಾದ ಕೋರ್ಟಿನ ಗ್ರಾಮ ಮುನ್ಸೀಫರು ಸಾಕ್ಷಿ ಹಾಕುವರೆ ನಿರಾಕರಿಸುವದರಿಂದ ಅಂಥಾ ವಕಾಲತುಗಳಿಗೆ ಸಾಕ್ಷಿ ಹಾಕುವ ಬಗ್ಯೆ ದೂರ ಗ್ರಾಮದ ಮುನ್ಸೀಫರನ್ನು ಹುಡುಕಾಡಿ ಹೋಗುವ ಅಗತ್ಯಪಡುತ್ತೇವೆ. ಅಂಥಾ ವಕಾಲತುಗಳಿಗೆ ವ್ಯಾಜ್ಯ ದಾಖಲಾದ ಕೋರ್ಟಿನ ಗ್ರಾಮ ಮುನ್ಸೀಫರು ಸಾಕ್ಷಿ ಹಾಕಬೇಕಾದರೆ ಅವರಿಗೆ ತೆರತಕ್ಕ ಫೀಸು ಎಷ್ಟು? ಯಾ ಸಾಕ್ಷಿ ಹಾಕಬಾರದೆಂಬ ಕಾಯಿದೆಯಿರುವದಾದರೆ ಬೆಂಚ ಮೆಂಬರರನ್ನಾದರೂ ಸಾಕ್ಷಿ ಹಾಕುವ ಅಧಿಕಾರ ಕೊಡುವ ಹಾಗೆ ಮೇಲಾಧಿಕಾರಿಗಳು ತಕ್ಕ ಗಮನ ಕೊಡಬೇಕೆಂದು ಕೋರುತ್ತೇವೆ.

ಪುತ್ತೂರು,
ತಾರೀಕು 3—8—1915. ಕಕ್ಷಿಗಾರ,

———— o ————

ಮೊಗೇರ ವ್ಯವಸ್ಥಾಪಕ ಮಂಡಳಿಯವರಿಂದ ಸ್ಥಾಪಿಸೋಣಾದ ಏಳನೇ ಎಡ್ವಾರ್ಡ್ ಕೊರೊನೇಶನ್ ಫಂಡಿನ ಮೆಂಬರರಿಗೆ ಮತ್ತು ಮೊಗೇರ ಕುಲದ ಸರ್ವ ಜನರಿಗೆ—

ಅಯ್ಯಾ ಪತ್ರಕರ್ತರೇ,

ತಮ್ಮ ಅಮೌಲ್ಯಪತ್ರಿಕೆಯ ಸಂಚಿಕೆಯೊಂದೆಡೆಯಲ್ಲಿ ಕೊಂಚ ಸ್ಥಳ ದಯಪಾಲಿಸುವಿರಾಗಿ ನಿಶ್ಚಲವಾದ ನಂಬಿಕೆಯಿಂದ ಬೇಡಿಕೊಂಡಿದ್ದೇನೆ.

ಮೇಲ್ಕಂಡ ಮಂಡಳಿಯು ಮೊಗೇರಕುಲದ ಹಿತಸಾಧನೆಗಾಗಿ ಸ್ಥಾಪಿಸಲ್ಪಟ್ಟು ಮತ್ತು ಅದು ಚಿರಸ್ಥಾಯಿಯಾಗಿರಬೇಕೆಂಬ ಕುತೂಹಲದಿಂದ ಕಳೆದ ಸಂ ೧೯೦೨ನೇ ಅಗೋಸ್ತು ತಾ ೯ಲ್ಲು ಜರಗಿದ ಮಾಜಿ ರಾಜಾಧಿರಾಜ ಏಳನೇ ಎಡ್ವರ್ಡ್ ಚಕ್ರವರ್ತಿಯವರ ಪಟ್ಟಾಭಿಷೇಕೋತ್ಸಹದ ದಿವಸ ಅವರ ಹೆಸರಲ್ಲೇ ಒಂದು ಫಂಡು ಸ್ಥಾಪಿಸಿ ಅದಕ್ಕೆ ಮೆಂಬರರಾಗಿ ಸೇರಿದವರಿಂದ ವಸೂಲಾದ ವಂತಿಗೆ ಮತ್ತು ಉದಾರ ಜನರಿಂದ ದೊರೆತದಾನ, ಈ ಮೊದಲಾದ ಹಣಗಳನ್ನು ಒಟ್ಟುಮಾಡಿ ಇದರಿಂದ ಕುಲೋದ್ಧರಣೆಯ ಕಾರ್ಯವನ್ನು ಕೈಕೊಳ್ಳಬೇಕೆಂದಿದ್ದ ಮಂಡಳಿಯವರಿಗೆ ಅಧಿಕ ಹಣ ವ್ಯಯದಿಂದ ನೆರವೇರಿಸತಕ್ಕ ಮಹತ್ಕಾರ್ಯಗಳು ಧನಬಲ ಕಮ್ಮಿಯ ತೊಂದರೆಯಿಂದ ಅಸಾಧ್ಯವೆಂತ ಕಂಡು ಬಂದರೂ ಸಹ ತಮ್ಮ ಉದ್ದೇಶಕ್ಕನುಸಾರವಾಗಿ ಕುಲಜಾತರೇಳಿಗೆಯ ಸಾಧನೆಯನ್ನು ಯಾವ ವಿಧದಿಂದಲಾದರೂ ಸಾಧಿಸಿನೋಡಬೇಕೆಂಬ ಇರಾದೆಯಿಂದ ಓದುಬರಹದಲ್ಲಿ ಹಿಂದುಳಿದಿರುವ ಕುಲಜಾತರಲ್ಲಿ ಅಕ್ಷರಾಭ್ಯಾಸದ ಏರ್ಪಾಡನ್ನಾದರೂ ಮಾಡುವ ಕಾರ್ಯವನ್ನು ಕೈಕೊಳ್ಳಬೇಕೆಂಬ ಕುತೂಹಲ ಪೀಡಿತರಾಗಿದ್ದು ಕಳೆದ ಸಂ ೧೯೧೩ನೇ ಫೆಬ್ರವರಿ ತಿಂಗಳಲ್ಲಿ ಒಂದು ರಾತ್ರಿ ಧರ್ಮದ ಶಾಲೆಯನ್ನು ಮಾದರಿಗಾಗಿ ಸ್ಥಾಪಿಸಿ ಇಲ್ಲಿಯ ವಿದ್ಯಮಾನಗಳಿಗನುಸಾರವಾಗಿ ಅದಕ್ಕೆ ಬೇಕಾಗುವ ಮೇಜು, ಬೆಂಚು ಇತ್ಯಾದಿ ಸಾಮಾನುಗಳನ್ನು ಸಾಧಾರಣ ನಾನ್ನೂರೈವತ್ತು ರೂಪಾಯಿಗಿಂತ ಮಿಕ್ಕಿದ ಮನವ್ರಯದಿಂದ ಅಣಿಗೊಳಿಸಿ ತಿಂಗಳಿಗೆ ರೂ. ೧೦ ಮತ್ತು ರೂ ೬ ತಲಬಿನ ಮೇಲೆ ಎರಡು ಜನ ಉಪಾಧ್ಯಾಯರನ್ನು ನೇಮಿಸಿ, ಇದರ ನಿರ್ವಾಹದ ಭಾರವನ್ನು ಮೆಂಬರರಲ್ಲಿಟ್ಟು ಸುಧಾರಿಸಿಕೊಂಡು ಬರುತ್ತಲಿದ್ದಾರೆ. ಈ ಎಳೆ ಪ್ರಾಯದ ಹಸುಕೂಸಿನಂತಿರುವ ರಾತ್ರಿ ಶಾಲೆಯು ತನಗೊದಗಿದ ಗ್ರಹಪೀಡೆಯಂತಿರುವ ಅನೇಕ ತೊಂದರೆಗಳನ್ನು ಸಹಿಸಿಕೊಂಡು ಇದ್ದರೂ ಸಹ ಬರುತ್ತಾ ಬರುತ್ತಾ ರಾಯನ ಕದುರೆ ಕತ್ತೆಯಾಯಿತು ಎಂಬಂತೆ ತನ್ನ ಪೋಷಕರಾದ ಮೆಂಬರರ ಮುಷ್ಕರವೆಂಬ ಅಕಾಲ ಮೃತ್ಯುವಿಗೆ ತುತ್ತಾಗುವಷ್ಟು ಒಡ ಸ್ಥಿತಿಯಲ್ಲಿರುವದು ಬಹು ವಿಷಾದಕರ ಸಂಗತಿ ತಿಂಗಳೊಂದಕ್ಕೆ ನಾಲ್ಕಾಣೆ ವಂತಿಗೆ ಪ್ರಕಾರ ವರ್ಷ ಒಂದರ ಜಮೆಯಾಗತಕ್ಕ ರೂ ೫೪೦ರ ಸಂಖ್ಯೆಯು ಈ ವರ್ಷದ ಲೆಖ್ಖದ ಪ್ರಕಾರ ರೂ. ೬೦ಕ್ಕೆ ತಗ್ಗಿರುವುದನ್ನು ತಿಳಿಯುವಾಗ ನಿಜವಾಗಿಯೂ ಇದು ಮುಂದಕ್ಕೆ ಬದುಕಿಕೊಂಡಿರಬಹುದೆಂದು ಊಹಿಸಲಾಗುವದಿಲ್ಲೆಂದರೆ ಅತಿಶಯೋಕ್ತಿಯಾಗಲಾರದು. ಇದರ ಪೋಷಕರು ಮೆಂಬರರೇ ಆಗಿರುತ್ತಾರೆ, ಮತ್ತು ಬರೇ ಮೆಂಬರರ ಉಪಯೋಗಾರ್ಥವಾಗಿಯೇ ಈ ಫಂಡು ಮತ್ತು ಶಾಲೆ ಸ್ಥಾಪಿಸಲ್ಪಟ್ಟದ್ದಲ್ಲವೆಂಬ ಸಂಗತಿ ಸರ್ವ ಸಮ್ಮತವಾದ ಮಾತಾಗಿರುತ್ತಾ ಇದರ ಲಾಭಾಲಾಭಗಳಲ್ಲಿ ಮೊಗೇರ ಸಮಾಜದ ಪ್ರತಿ ಒಬ್ಬ ವ್ಯಕ್ತಿಯೂ ಸಮಭಾಗಿಗಳಾಗಿ ಸೇರಿರುತ್ತಾ ಇದರ ಪೋಷಕರಾಗಿರುತ್ತಾರೆ. ಹೀಗಿರುತ್ತಾ ಕುಲಜಾತರಲ್ಲಿ ಅಕ್ಷರಾಭ್ಯಾಸದ ಸುಧಾರಣೆಯಿಂದ ಕುಲದೇಳಿಗೆಯ ಸಾಧನೆಯನ್ನು ಕೈಕೊಳ್ಳಬೇಕೆಂಬ ಉದ್ದೇಶದಿಂದ ಹುಟ್ಟಿ ಈಗ ತಾನೆ ಎರಡು ಎರಡೂವರೆ ವರ್ಷದ ಬಾಲಪ್ರಾಯದಲ್ಲಿರುವ ಈ ರಾತ್ರಿ ಧರ್ಮದ ಶಾಲೆಯ ಪರವಾಗಿ ಫಂಡಿನ ಮೆಂಬರರು ಮತ್ತು ಕುಲದ ಸರ್ವ ಜನರು ಜಾಗ್ರತರಾಗಿ ತಕ್ಕ ವ್ಯವಸ್ಥೆಗೊಳಿಸಿ ಇದರ ಅಕಾಲ ಮೃತ್ಯುವಿನಿಂದ ಬರತಕ್ಕ ಅಪವಾದವು ದೂರವಿರುವಂತೆ ಅಮೃತಕರಣೇಷಧದಂತಿರುವ ತಮ್ಮೆಲ್ಲರ ಉದಾರಾಶ್ರಯದಿಂದ ಕುಲಜಾತರು ಅಮೃತಮಯವಾದ ವಿದ್ಯಾರಸವನ್ನು ಪಾನಮಾಡಿಕೊಂಡಿರುವಂತೆ ಏರ್ಪಾಡು ಗೈಯ್ಯುವರಾಗಿಯೂ ತಮ್ಮ ಮುಷ್ಕರದ ನಿಜಸಂಗತಿಗೆ ಸದ್ಯಾ ಕರೆಯಲ್ಪಡಲಿಕ್ಕಿರುವ ವಾರ್ಷಿಕೋತ್ಸಹ (ಸಾಮಾನ್ಯ ಮೀಟಿಂಗು) ದಿವಸ ವ್ಯಕ್ತಪಡಿಸಿ ಮೆಂಬರರ ಹಾಗೂ ಮೊಗೇರ ಕುಲದ ಸರ್ವ ಜನರ ಅಭಿಪ್ರಾಯವನ್ನು ತಿಳಿಯಪಡಿಸುವರಾಗಿಯೂ ಅತ್ಯಾತುರದಿಂದ ಪ್ರಾರ್ಥಿಸಿ ಬೇಡಿಕೊಳ್ಳುವ,

ಮುಂಬಾಯಿ ತಾ. 30—7—1915. ಸ್ವಜಾತಿ ಬಂಧು.

~~~~~
~~~~~

ಯುದ್ಧ ಸಮಾಚಾರ.

—————o—————

ತಾ. ೩ನೇ ಅಗೋಸ್ತು.

ಬ್ಲೈಕ್ ಸಿ ಸಮುದ್ರ ಶಾಖೆಯಲ್ಲಿ ರುಶ್ಯಯನರ ಡಿಸ್ಟ್ರೋಯರ್ ಹಡಗುಗಳು ಕಲ್ಲಿದ್ದಲು ತುಂಬಿದ ತುರ್ಕರ ೨೧೦ ಮಂಜಿಗಳನ್ನು ಮುಳುಗಿಸಿಬಿಟ್ಟವೆ

ಪಶ್ಚಿಮ ರಣರಂಗದಲ್ಲಿರುವ ಬೆಲ್ಜಿಯನ್ನರ ಸೇನಾ ಮುಂಭಾಗವನ್ನು ಫ್ರೆಂಚರ ಪ್ರೆಸಿಡೆಂಟರಾದ ಪೋಯಿಂಕೇರೆಯವರು ಸಂದರ್ಶಿಸಿ ಬೆಲ್ಜಿಯನರ ಅರಸರನ್ನು 'ವೊರ್‌ಕ್ರೋಸ್ ಎಂಬ ಬಹುಮಾನದ ಪದಕದಿಂದ ಅಲಂಕರಿಸಿದರು ಜರ್ಮನರು ಸೆರೆ ಹಿಡಿದು ಬರ್ಲಿನಿನಲ್ಲಿಟ್ಟಿರುವ ಹಿಂದೂಸ್ಥಾನದ ಸೇನಿಕರ ಪಾಲನೆಯು ಯುಕ್ತವಾದ ರೀತಿಯಲ್ಲಿ ನಡೆಯುತ್ತಿರುವುದೆಂತ ಅಮೇರಿಕದ ರಾಯಭಾರಿಯ ಕಡೆಯ ಪ್ರತಿನಿಧಿಗಳ ಮೂಲಕ ತಿಳಿದುಬರುತ್ತದೆ ಬ್ರಿಟಿಷರ ಸ್ವಾಸ್ಥ್ಯಗಳಿಗೆ ಮತ್ತು ಆಶ್ರಿತ ದೇಶಗಳಿಗೆ ಹೊರತು ಮಿಕ್ಕ ಯಾವ ಕಡೆಗಾದರೂ ಬ್ರಿಟಿಷ ದ್ವೀಪಗಳಿಂದ ಕಲ್ಲಿದ್ದಲು ರಫ್ತಾಗಕೂಡದೆಂಬ ಜಾಹೀರು ನಾಮೆಯು ಲಂಡನ್ ಗಜೇಟಿನಲ್ಲಿ ಪ್ರಕಟಿಸಲ್ಪಟ್ಟಿರುವದು. ಯುದ್ಧದ ವರ್ಧಂತಿಯು ಲಂಡನಿನಲ್ಲಿ ಸೆಂಟ್ ಪೋಲ್ ದೇವಮಂದಿರದಲ್ಲಿ ಶ್ರದ್ಧೆ ಭಕ್ತಿ ವಿಶ್ವಾಸಗಳ ಗಂಭೀರ ಭಾವದಿಂದ ಆಚರಿಸಲ್ಪಟ್ಟಿತು ಚಕ್ರವರ್ತಿ ಚಕ್ರವರ್ತಿನಿಯರು ಈ ಬಗ್ಗೆ ಸೆಂಟ್‌ಪೋಲ್ ದೇವಾಲಯಕ್ಕೆ ಚಿತ್ತೈಸಿದರು ಪೂರ್ವ ರಣರಂಗದಲ್ಲಿ ಪೋಲೆಂಡ್ ಪ್ರಾಂತ್ಯಗಳಲ್ಲಿ ತೀಕ್ಷ್ಣವಾದ ಕಾಳಗವು ರುಶ್ಯಯನರಿಗೂ, ಜರ್ಮನರಿಗೂ ನಡೆಯುತ್ತಿರುವುದು ಪೂನೆವಿಯಜಿನ ಪೂರ್ವಧಲ್ಲಿ ರುಶ್ಯನರು ಶತ್ರುಗಳ ಸೇನಾ ಮುಂಭಾಗವನ್ನು ಹಿಂದಕ್ಕೊತ್ತಿ ೫೦೦ ಜನ ಸೇನಿಕರನ್ನೂ ೬ ಮೆಕ್ಸಿಮ್ ತೋಪಿಗಳನ್ನೂ ಸೆರೆಹಿಡಿದಿರುವರು. ಇಷ್ಟರಲ್ಲಿ ಜರ್ಮನರು ಇಡೀ ಸೇನೆಯನ್ನು ಇದಿರಿಗೆ ತಂದದ್ದರಿಂದ ಕಠಿಣ ಕಾಳಗಕ್ಕೆ ಪ್ರಾರಂಭವಾಗಿದೆ. ನೆರ್‍ಯ್ಯ ನದಿಯ ಮುಂಭಾಗದಲ್ಲಿ ಶತ್ರುಗಳು ಅನೇಕ ದಿವಸಗಳ ವರೆಗೆ ಹಟಹಿಡಿದು ಕಾದಾಡಿ ನೆರ್‍ಯ್ಯ ನದಿಯ ಉತ್ತರ ದಡಕ್ಕೆ ಮುಂದರಿಸಿ ಬಂದು ರೋಜನ್ ಜಿಲ್ಲೆಯಲ್ಲಿ ತಮ್ಮ ಸೇನೆಯನ್ನು ಬಹಳವಾಗಿ ಶೇಕರಿಸಿರುವರು ಈ ಪ್ರಾಂತ್ಯದಲ್ಲಿ ಸಹ ಶತ್ರುಗಳೊಡನೆ ಹೋರಾಟವು ಬಹಳ ಭೀಕರವಾದ ರೀತಿಯಲ್ಲಿ ನಡೆಯುತ್ತಿದೆ. ವಿಸ್ಟುಲಾ ನದಿ ಸಮೀಪ ನಡದ ಕಾಳಗಗಳಲ್ಲಿ ಕೆಲವು ಪ್ರಾಂತ್ಯಗಳಲ್ಲಿ ರುಶ್ಯಯನರಿಗೆ ಜಯವು ಸಿಕ್ಕಿದೆ ಮಗ್ನುಚಿಫ್ ಬಳಿ ವಿಸ್ಟುಲಾ ನದಿಯನ್ನು ದಾಟಿದ ಶತ್ರುಗಳ ಸೇನಾಪಾಳಯಗಳನ್ನು ರುಶ್ಯಯನರು ಹಿಂದಕ್ಕೆ ಓಡಿಸಿರುವರು. ವಿಸ್ಟುಲಾ ನದಿಯ ಎಡಭಾಗದಲ್ಲಿ ಇವನ್‌ಗರೋಡ್ ಸಮೀಪ ರುಶ್ಯಯನರು ಜರ್ಮನರೊಡನೆ ಬಿಗಿಯಾದ ಕದನವನ್ನು ನಡಿಸಿದ ನಂತರ ಸೇನೆಯನ್ನು ಬಲವಾದ ಸೇನಾನೆಲೆಗೆ ಒಯ್ದಿರುವರು ವಿಸ್ಟುಲಾ ಮತ್ತು ಬಗ್ ನದಿಗಳ ನಡುವೆ ರುಶ್ಯಯನರು ಶತ್ರುಗಳು ಮೇಲ್ಬಾಯ್ದು ಬರುವದನ್ನು ನಿಲ್ಲಿಸಿಬಿಟ್ಟು ಚೊಲ್ಮ್ ಉತ್ತರ ಪ್ರಾಂತ್ಯದಲ್ಲಿ ಯುದ್ಧಾಭಿಮುಖವಾಗಿ ನಿಲ್ಲುವಂತೆ ಏನೂ ಆತಂಕವಿಲ್ಲದೆ ನೂತನ ಸೇನಾನೆಲೆಯನ್ನು ಸಿದ್ಧಪಡಿಸಿರುತ್ತಾರೆ

ಇಟಲಿಯನರು ಹಿಡಿದಿರುವ ಮೌಂಟ್ ಮೆಡೆಟ್ಟಾ ಮೊದಲಾದ ನೆಲೆಗಳನ್ನು ಕೈವಶಮಾಡಿಕೊಳ್ಳುವ ಒಸ್ಟ್ರಿಯನರ ಪ್ರಯತ್ನಗಳು ನಿಷ್ಫಲವಾಗಿ ಹೋದವು ಕಾರ್ಸೋ ಗಡ್ಡದ ಮೇಲೆ ಇಟಲಿಯನರು ಮುಂದುವರಿಯುತ್ತಿದ್ದಾರೆ ೩೪೫ ಒಸ್ಟ್ರಿಯನರನ್ನು ಸೆರೆ ಹಿಡಿದಿರುತ್ತಾರೆ.

ಲೈರ್ ಪುರಕ್ತ ಮಿಾರ್ ಸಾಹೇಬರವರು ಸೇನೆಗಳ ಉಪಯೋಗದ ಬಗ್ಗೆ ಒಂದು ಏರೋಪ್ಲೆನನ್ನು ಉಚಿತವಾಗಿ ಕೊಟ್ಟಿರುವರು

ತಾ. ೪ನೇ ಅಗೋಸ್ತು

ಪಶ್ಚಿಮ ರಣರಂಗದಲ್ಲಿ ಕದನಗಳು ವಿಶೇಷವಾಗಿರಲಿಲ್ಲ, ಬೆಲ್ಜಿಯಮಿನಲ್ಲಿ ನೇಮಿಸಿದ್ದ ಜರ್ಮನ್ ಗವರ್ನರ್ ಬೆರನ್‌ವನ್ ಬಿಸಿಂಗ್ ಎಂಬುವನಿಗೆ ಜರ್ಮನಿಗೆ ಹಿಂದಕ್ಕೆ ಬರಲು ಅಪ್ಪಣೆಯಾಗಿದೆ ಎಂತ ತಿಳಿದುಬರುತ್ತದೆ.

.... ಯುದ್ಧ ಸಮಾಚಾರಗಳಿಂದ ... ಪ್ರಾಂತ್ಯಗಳಲ್ಲಿಯೂ, ವಾರ್ಸೋವಿನ ಸಮೀಪದಲ್ಲಿಯೂ ಜರ್ಮನರು ಹೊಂದಿದ ಜಯವು ಅಷ್ಟೊಂದು ವಿಶೇಷವಾದದ್ದಲ್ಲ ... ತಿಳಿಯುತ್ತದೆ.

ಒಸ್ಟ್ರೀಯನರ ಪೆಸ್ಲಾರ್ ಎಂಬ ಬಂದರವನ್ನು ಇಟಲಿಯನರ ಯುದ್ಧ ನಾವೆಗಳು ಗುಂಡು ಹಾರಿಸಿ ಹಾಳುಮಾಡಿರುವವು. ರುಶ್ಯದ ನಂತರ ಮಿತ್ರ ಮಂಡಳಿಯಲ್ಲಿ ಸೇನಾ ಸಂಗ್ರಹವು ಇಟಲಿಯಲ್ಲಿದ್ದಷ್ಟು ಮಿಕ್ಕ ಯಾರ ಕೂಡೆಯೂ ಇರದೆಂದು ಒಬ್ಬ ಬಾತ್ಮೀದಾರರು ಬರೆದಿರುವರು.

ತುರ್ಕರ ಮತ್ತು ಜರ್ಮನ ಅಧಿಕಾರಸ್ಥರೊಳಗೆ ಭೇದಬದ್ಧಿಯು ಪ್ರಾಪ್ತವಾಗಿರುವುದೆಂತ ತೋರಿಬರುವುದು. ಇತ್ತಲಾಗೆ ಎನ್ವರ್ ಪಾಷಾರವರು ತುರ್ಕರ ಸರಕಾರದ ಮಂತ್ರಿಯರಿಗೆಲ್ಲಾ ಒಂದು ಔತಣ ಮಾಡಿಸಿದರು ಜರ್ಮನ್ ಅಧಿಕಾರಸ್ಥರಿಗೆ ಇದಕ್ಕೆ ಆಮಂತ್ರಣವು ಇರಲಿಲ್ಲ ಜರ್ಮನಿಗೆ ಪ್ರತಿಕೂಲವಾದ ಹಲವು ನಿರ್ಣಯಗಳು ಈ ಮಂತ್ರಿ ಕೂಟದಲ್ಲಿ ಮಾಡೋಣಾಗಿವೆ. ಜರ್ಮನರ ಜನರಲರಾದ ಲಿಮಾನ್‌ವೊನ್ ಸೆಂಡರ್ಸರ ಕೂಡೆ ಜಗಳಾಡಿದ ಎನ್ವರ್ ಪಾಷಾರವರು ಈ ಜನರಲರನ್ನು ಹಿಂದಕ್ಕೆ ಕಳ್ಳಿಸಿಕೊಡಬೇಕೆಂತ ಹೇಳುತ್ತಿದ್ದಾರೆ ಇಂಥಾ ಜಗಳಗಳ ಕಾರಣದಿಂದ ಜರ್ಮನ ರಾಯಭಾರಿಯು ತುರ್ಕಿಯನ್ನು ಬಿಟ್ಟು ಹೋಗಿರುವರೆಂಬ ದಾಗಿ ಲಂಡನ್ ಟೈಮ್ಸ್ ಪತ್ರಿಕೆಯ ವರ್ತಮಾನ ಸಂಗ್ರಹದಲ್ಲಿದೆ

ತಾ ೫ನೇ ಅಗೋಸ್ತು

ಈ ತಿಂಗಳ ತಾ ೪ಕ್ಕೆ ಅಂತ್ಯವಾಗುವ ವಾರದಲ್ಲಿ ೬ ಬ್ರಿಟಿಷರ ವ್ಯಾಪಾರ ಹಡಗಗಳೂ ೧೦ ಮಿಾನುಸಿಕಾರಿಯ ಹಡಗಗಳೂ ಮುಳುಗಿ ಹೋಗಿರುವವೆಂಬುದಾಗಿ ಬ್ರಿಟಿಷ ನೌಕಾಶಾಖೆಯವರು ಪ್ರಕಟಿಸಿರುವರು

ಪಶ್ಚಿಮ ರಣರಂಗದಲ್ಲಿ ಜರ್ಮನರು ಮೇಲ್ಬಾಯಿದು ಬರುವ ಪ್ರಯತ್ನಗಳು ಸಿತ್ಯದಲ್ಲಿಯೂ ವ್ಯರ್ಥವಾಗಿ ಹೋಗುತ್ತಿವೆ ಫ್ರೆಂಚರು ಇತ್ತಲಾಗೆ ಬೈನ್‌ಡಿಸೆಪ್ಟ್ ಎಂಬಲ್ಲಿ ಜರ್ಮನರನ್ನು ಕೆಡವಿದ ವೃತ್ತಾಂತದಿಂದ ಫ್ರೆಂಚರ ಪಾಯದಳಗಳು ಜರ್ಮನ ಪಾಯದಳಗಿಂತ ಎಷ್ಟು ಉತ್ಕೃಷ್ಟವಾಗಿವೆ ಎಂಬುದು ಸ್ಪಷ್ಟವಾಗುವದು ಒಂದು ಸಲ ಮೇಲ್ಬಾಯ್ದು ಬಂದ ಜರ್ಮನರಲ್ಲಿ ನೂರಾರು ಜನರು ಸತ್ತುಬಿದ್ದರು ಫ್ರೆಂಚರಲ್ಲಿ ನಾಲ್ಕೇ ಜನರು ಮಾತ್ರ ಮಡಿದಿರುವರು ೨೫ ಜನರು ಗಾಯಪಡದಿರುವರು

ಯುದ್ಧ ವರ್ಧಂತಿಯನ್ನು ಯಾವ ರೀತಿಯಲ್ಲಾದರೂ ಬೆಲ್ಜಿಯನರು ಆಚರಿಸದಂತೆ ಜರ್ಮನರು ಇವರನ್ನು ನಿರ್ಬಂಧಿಸಿರುತ್ತಾರೆ ಕೆನಡಾ ಔಸ್ಟ್ರೇಲ್ಯ ಮೊದಲಾದ ಬ್ರಿಟಿಷ ಸ್ವಾಸ್ಥ್ಯಗಳಲ್ಲಿ ಯುದ್ಧ ವರ್ಧಂತಿಯು ಬಹಳ ಉತ್ಸಾಹದಿಂದ ಆಚರಿಸಲ್ಪಟ್ಟ ವೃತ್ತಾಂತಗಳ ವೃತ್ತ ಪತ್ರಿಕೆಗಳಲ್ಲಿ ವಿಸ್ತಾರವಾಗಿ ಪ್ರಕಟಿಸಲ್ಪಟ್ಟಿರುವದು

ಪೂರ್ವ ರಣರಂಗದ ಪೋಲೆಂಡ್ ಪ್ರಾಂತ್ಯಗಳಲ್ಲಿ ರುಶ್ಯಯನರು ತಮ್ಮ ಸೇನೆಗಳನ್ನು ಹೊಸ ಸೇನಾ ನೆಲೆಗಳಿಗೆ ಒಯ್ಯುತ್ತಿರುವರು ನೆರ್‍ಯ್ಯ ಮುಂಭಾಗದಲ್ಲಿ ಕೊಲ್ನೊ ಮತ್ತು ಲೊಮ್ಜಾ ಕಡೆಗಳಲ್ಲಿ ರುಶ್ಯಯನರು ಶತ್ರುಗಳನ್ನು ಹಿಮ್ಮೆಟ್ಟಿದರು ಆದರೆ ಒಸ್ಟ್ರೊಲೆಂಕಾದಲ್ಲಿರುವ ರುಶ್ಯಯನರ ಸೇನೆಯು ನಿರಾತಂಕವಾಗಿ ಹೊಸ ಸೇನಾನೆಲೆಯನ್ನು ಹೋಗಿ ಸೇರಿಕೊಂಡಿದೆ ವೈಪ್ರಿಜ್ ನದಿಯ ಬಲಭಾಗದಲ್ಲಿ ಚೊಲ್ಮ್ ಮತ್ತು ವ್ಲೊಡಾವಾಗಳ ನಡುವೆ ರುಶ್ಯಯನರ ಸೇನೆಯ ಮುಂಭಾಗವನ್ನು ಸೀಳಿ ಮುಂದರಿಸಲು ಜರ್ಮನರು ಭಾರೀ ಪ್ರಯತ್ನವನ್ನು ಮಾಡಿದರು ಆದರೆ ರುಶ್ಯಯನರ ಮೂರು ಸೇನಾಪಾಳಯಗಳು ಶತ್ರುಗಳೊಡನೆ ಕಠಿಣ ಕಾಳಗವನ್ನು ನಡೆಸಿ ಅವರನ್ನು ಹಿಂದಕ್ಕೆ ಓಡಿಸಿದರು ವಾರ್ಸೋದಲ್ಲಿಯ ವರ್ತಮಾನವನ್ನು ಲಂಡನಿನಲ್ಲಿ ವಿಶೇಷ ಆಕಾಂಕ್ಷೆಯಿಂದ ನಿರೀಕ್ಷಿಸುತ್ತಿರುವರೆಂದೂ ಜರ್ಮನರು ನೆರ್‍ಯ್ಯವನ್ನು ಬೇರೊಂದು ಕಡೆಯಲ್ಲಿ ದಾಟಿರುವುದರಿಂದ ವಾರ್ಸೋದಲ್ಲಿಯ ವರ್ತಮಾನವನ್ನು ಕೇಳುವ ನಿರೀಕ್ಷಣೆ ಮತ್ತಷ್ಟು ಹೆಚ್ಚಿದೆಂದೂ ಹಿಂದೂಸ್ಥಾನದ ಪತ್ರವೊಂದಕ್ಕೆ ಲಂಡನಿನಿಂದ ವರ್ತಮಾನ ಬಂದಿದೆ.

ಇಟಲಿಯನರು ಕಾರ್ಸೋ ಗುಡ್ಡದ ಮೇಲೆ ಮುಂದುವರಿಯುತ್ತಿದ್ದಾರೆ

ಚಿಕ್ಕ್ಯಾಸ್ಕದ ಕರಾವಳಿಯನ್ನು ಫ್ರೆಂಚ ಯುದ್ಧ ನಾವೆಗಳು ಮುತ್ತಿಕೊಂಡು ಶತ್ರುಗಳ ರೇವುಗಳನ್ನು ನಾಶಮಾಡುತ್ತಲಿವೆ.

ಮಹಾರಾಣಿ ಹೋಳ್ಕರರವರೂ ಇಂದಿರಾಬಾಯಿ ಹೋಳ್ಕರರವರೂ ಮುಂಬಯಿಯ ಸ್ತ್ರೀಯರ ಯುದ್ಧಸಾಹಾಯಕ ಫಂಡಿಗೆ ರೂ. ೨೦೦೦ ಮತ್ತು ರೂ. ೧೫೦೦ ಪ್ರಕಾರ ಕೊಟ್ಟಿರುತ್ತಾರೆ.

ತಾ. ೬ನೇ ಅಗೋಸ್ತು.

ಜರ್ಮನಿಯ ಯುವರಾಜರು ಫ್ರೆಂಚರನ್ನು ಕೆಡಹಲು ಬಹಳ ಸರ್ತಿ ಸೇನಿಕರೊಡನೆ ಮುಂದರಿಸಿ ಬಂದರೂ ಫ್ರೆಂಚರನ್ನು ಒಂದಿನ್ನಾದರೂ ಹಿಮ್ಮೆಟ್ಟಲು ಆಗಲಿಲ್ಲ ಮೇಲ್ಬಾಯಲು ಬಂದ ಜರ್ಮನರು ಫ್ರೆಂಚರ ದಾಳಿಯನ್ನು ತಾಳಲಾರದೆ ಹಿಂದಕ್ಕೆ ಓಡಿಬರುವಾಗ ಅಲ್ಲಲ್ಲಿಯೇ ಸಿಲುಕಿಬಿದ್ದು ಸಾಯುತ್ತಿದ್ದಾರೆ

ಯುದ್ಧದಲ್ಲಿ ಈ ವರೆಗೆ ಪ್ರವೇಶಿಸದೆ ಇರುವ ದೇಶಗಳ ಮೂಲಕ ಯುದ್ಧವನ್ನು ಶಾಂತಗೊಳಿಸುವ ಸಾಧನೆಯನ್ನು ಪೋಪ ಗುರುಗಳು ಮಾಡುತ್ತಿರುವರಂತೆ

ಜರ್ಮನಿಯಲ್ಲಿ ಸೇನೆಗೆ ಸೇರುವವರ ಪ್ರಾಯದ ಮಿತಿಯನ್ನು ಐಂಶಕ್ಕೆ ಹೆಚ್ಚಿಸುವ ಒಂದು ಕಾನೂನು ಮಸೂದೆಯನ್ನು ಸದ್ಯದಲ್ಲಿ ಜರ್ಮನ್ ಸರಕಾರದವರು ಜಾರಿಗೆ ತರುವ ಸಂಭವವಿರುವದು

ಈ ದಿನ ಪೆಟ್ರೊಗ್ರೇಡಿನಲ್ಲಿ ಪ್ರಕಟವಾದ ಯುದ್ಧ ಸಮಾಚಾರದಲ್ಲಿ ವಾರ್ಸೋ ಶತ್ರುಗಳ ಕೈಯಲ್ಲಿ ಬಿದ್ದ ವೃತ್ತಾಂತವು ಇರದು. ಅಗೋಸ್ತು ತಾ ೪ರಲ್ಲಿ ಬ್ಲೊನಿಯದ ದಕ್ಷಿಣ ಪ್ರಾಂತ್ಯದಲ್ಲಿ ರುಶ್ಯಯನರು ಜರ್ಮನರನ್ನು ಹಿಮ್ಮೆಟ್ಟಿದರು ಇವಾನ್‌ಗೊರೊಡ್ ಜಿಲ್ಲೆಯಲ್ಲಿ ವಿಸ್ಟುಲಾ ನದಿಯನ್ನು ದಾಟಿ ಬಲದಡಕ್ಕೆ ರುಶ್ಯಯನರು ಬಂದಿರುತ್ತಾರೆ ವಿಸ್ಟುಲಾ ನದಿಯ ಮಧ್ಯಭಾಗದಲ್ಲಿ ಕದನಗಳೇನೂ ನಡಿಯಲಿಲ್ಲ ವಾರ್ಸೋವನ್ನು ತೋಪುಗಳಿಂದ ಮುತ್ತಿಗೆ ಹಾಕಿ ನಾಶಮಾಡದಂತೆ ಪಟ್ಟಣವನ್ನು ಜನರು ಬಿಟ್ಟು ಹೋಗಿರುವರು

ತಾ ೭ನೇ ಅಗೋಸ್ತು

ವಾರ್ಸೋ ಪಟ್ಟಣದ ಪಶ್ಚಿಮದಲ್ಲಿ ಕಾದಾಡುತ್ತಿದ್ದ ರುಶ್ಯಯನರ ಸೇನೆಯು ಹಿಂದಕ್ಕೆ ವಿಸ್ಟುಲಾ ನದಿಯ ಬಲದಡಕ್ಕೆ ಬಂದು ಸೇರಿದೆ ವಿಸ್ಟುಲಾ ನದಿಯ ಈ ಪ್ರಾಂತ್ಯಗಳಲ್ಲಿರುವ ಸಂಕಗಳನ್ನು ರುಶ್ಯಯನರು ನಾಶಮಾಡಿರುವರು ವೃಥಾ ಸೇನೆಯನ್ನು ನಷ್ಟಗೊಳಿಸಿ ಕಾದಾಡುವುದಕ್ಕಿಂತ ಪ್ರಕೃತಕ್ಕೆ ಸೇನೆಯನ್ನು ಸುರಕ್ಷಿತವಾಗಿ ಉಳಿಸುವುದು ಲೇಸೆಂತ ರುಶ್ಯಯನರಿಗೆ ಕಂಡುಬಂದದರಿಂದ ವಾರಸೊ ಪಟ್ಟಣವನ್ನು ರುಶ್ಯಯನರು ಬಿಟ್ಟಿರುತ್ತಾರೆ ಆಸ್ಟ್ರೊಲೆಂಕಾ, ಪುಲಟಸ್ಕ, ಸಾರಾಟಸ್ಕ, ನೊವೊಜಾರ್ಜವಿಚ್ಛ, ಬ್ಲೋನಿ, ರ್ಯಾಡಮ್, ಲಾಬ್ಲಿನ್, ಕೋಮ, ಇವಾನ್‌ಗರಾಡ ಈ ಪ್ರಾಂತ್ಯಗಳಲ್ಲಿ ಅಂದರೆ ವಾರ್ಸೋವಿನ ಸುತ್ತಲೂ ಜರ್ಮನರು ಇರುವುದರಿಂದ ರುಶ್ಯಯನರಿಗೆ ವಾರ್ಸೋ ಪಟ್ಟಣಕ್ಕೆ ಒಂದೇ ದಾರಿ ಉಳಿದಿರುವದು ಈ ದಾರಿಯನ್ನು ಸುರಕ್ಷಿತಪಡಿಸಿ ರುಶ್ಯಯನರು ತಮ್ಮ ಸೇನೆಯನ್ನ ಹಿಂದಕ್ಕೆ ತಂದಿರುವರು ಆದ್ದರಿಂದ ಜರ್ಮನರು ವಾರ್ಸೋ ಪಟ್ಟಣವನ್ನು ಗೆದ್ದಿರುವರು ವಾರ್ಸೋ ಪಟ್ಟಣವು ರುಶ್ಯಯನರ ಕೈಬಿಟ್ಟದ್ದರಿಂದ ರುಶ್ಯಯನರೇನೂ ಎದೆಗುಂದಿರರು ರುಶ್ಯದ ಜನರಲ್ಲಿ ಈ ಪರಾಜಯದಿಂದ ಶತ್ರುಗಳನ್ನ ನಿರ್ನಾಮಗೊಳಿಸಬೇಕೆಂಬ ಉತ್ಸಾಹನ್ನೂ, ಶೌರ್ಯ ಪರಾಕ್ರಮನ್ನೂ ಉಂಟಾಗಿರುವುದು. ಅದಲ್ಲದೆ ವಾರ್ಸೋ ಪಟ್ಟಣವು ಬಿದ್ದುಹೋದರೂ ಜರ್ಮನರ ದೊಡ್ಡ ಸೇನೆಯು ಪೋಲಾಂಡಿನಲ್ಲಿಯೇ ಇರಿಸುವಂತೆ ರುಶ್ಯಯನರು ಇವರನ್ನು ಪದೇ ಪದೇ ವಿರೋಧಿಸುತ್ತಿರುವರು. ಇಲ್ಲಿ ಜರ್ಮನರು ದೊಡ್ಡ ಸೇನೆಯನ್ನು ಇರಿಸಬೇಕಾದ್ದರಿಂದ ಇಟೇಲಿಯವರಿಗೂ, ಇಂಗ್ಲಿಷ ಮತ್ತು ಫೆಂಚರಿಗೂ ಬಹಳ ಅನುಕೂಲವಾಗುವದು. ಎಂಥಾ ಪದಾರ್ಥವಾದರೂ ಶತ್ರುಗಳಿಗೆ ಸಿಕ್ಕದಂತೆ ಈ ಪ್ರಾಂತ್ಯಗಳನ್ನು ರುಶ್ಯಯನರು ಬರಿದು ಮಾಡಿದ್ದರಿಂದ ಜರ್ಮನರಿಗೆ ಕಾಡುಗಳಿರುವ ನಿರ್ಜನವಾದ ವಸತಿಯಲ್ಲಿ ಲಕ್ಷಾವಧಿ ಸೇನೆಯನ್ನು ಸಂರಕ್ಷಿಸುವ ವಿಪರೀತ ಅಡಚಣೆಯುಂಟಾಗುವುದು.

ತಾ ೮ನೇ ಅಗೋಸ್ತು

ಜರ್ಮನ್ ಕೈಸರರು ಡೆನ್ಮಾರ್ಕಿನ ಅರಸರ ಮುಖಾಂತರ, ರುಶ್ಯದ ಕೂಡೆ ಸಂಧಾನವನ್ನು ಮಾಡುವ ಪ್ರಯತ್ನ ಮಾಡಿದರೆಂತಲೂ ಸಂಧಾನ ಮಾತಿಗೆ ಎಂದೂ ಆಸ್ಪದವಿರದೆಂಬ ಪ್ರತ್ಯುತ್ತರವು ರುಶ್ಯವು ಕೊಟ್ಟಿತೆಂತಲೂ "ಬೌರ್ಸ್‌ಗಜೇಟ್" ಎಂಬ ವರ್ತಮಾನ ಪತ್ರದಲ್ಲಿ ಪ್ರಕಟವಾಗಿದೆ

ಜಮಖಂಡಿಯ ಸರ್ ಪರಶುರಾಮ ರಾವ್ ರಾವ್‌ಸಾಹೇಬರವರು ನಾಲ್ಕು ಜನ ಸಂಗಾತಿಗಳೊಡನೆ ಯುದ್ಧರಂಗಕ್ಕೆ ತೆರಳಿರುವರು. ಬ್ರಾಹ್ಮಣ ಆಶ್ರಿತರಾಜರುಗಳಲ್ಲಿ ಯುದ್ಧರಂಗಕ್ಕೆ ಹೋಗಲು ಸಿದ್ಧರಾದಂತವರು ಇವರೇ ಮೊದಲನೆಯವರಾಗಿರುವರು.

ಉತ್ತರ ಹಿಂದೂಸ್ಥಾನ.

ಮುಂಬಯಿಯ ಒಬ್ಬ ಗ್ರಹಸ್ತನು ರೂ. ೧೦೦೦ವನ್ನು ಪಂಡರಪುರ ಅನಾಥ ಬಾಲಕಾಶ್ರಮಕ್ಕೆ ತನ್ನ ಹೆಸರು ಕಾಣಿಸದೇ ಗುಪ್ತದಾನವಾಗಿ ಕೊಟ್ಟಿದ್ದಾನೆ.

ಮಂಗಳೂರು ವಿದ್ಯಾರ್ಥಿಗಳಿಗೆ ಎಚ್ಚರಿಕೆ — ವ್ಯಾಮನ್‌ಸಿಂಗ ಸಿಟಿ ಶಾಲೆಯಲ್ಲಿ ಹುಡುಗರು ಫೂಟ್ ಬೋಲ್ ಎಂಬ ಚಂಡಾಟ ಆಡುವಾಗ ಸುಶಿಲಚಂದ್ರರ್ಯೊ ಎಂಬ ಹುಡುಗನಿಗೆ ಹೊಟ್ಟೆಯ ಕೆಳಗೆ ಕಠಿಣ ಪೆಟ್ಟು ತಾಗಿತು. ಹುಡುಗನನ್ನು ಕೂಡಲೇ ಅಸ್ಪತ್ರಿಗೆ ವೈದರು, ಅಲ್ಲಿ ಹುಡುಗನು ಮೃತನಾದನು.

ಭೋರ್ ಎಂಬಲ್ಲಿ ಒಬ್ಬ ಮರಾಟಿ ಸ್ತ್ರೀಯು ಎರಡು ಗಂಡು ಮೂರು ಹೆಣ್ಣು ಒಟ್ಟಿಗೆ ೫ ಕೂಸುಗಳನ್ನು ಹೆತ್ತಿರುವಳೆಂತ ಮುಂಬಯಿಯ ಕ್ರೊನಿಕಲ್ ಪತ್ರಕ್ಕೆ ಒಬ್ಬ ಬಾತ್ಮೀದಾರರು ಬರೆದಿರುತ್ತಾರೆ.

ದಾದಾಭಾಯಿ ನವರೋಜಿ ಮತ್ತು ಸರ್ ಫಿರೋಜಷಾ ಮೇಥಾರವರಿಗೆ ಮುಂಬಯಿ ಯುನಿವರ್ಸಿಟಿಯವರು ಎಲ್. ಎಲ್. ಡಿ. ಎಂಬ ಬಿರುದಾಂಕಿತಗಳನ್ನು ಕೊಡಬೇಕೆಂದು ನಿರ್ಣಯಿಸಿರುವರು.

ಅಲ್ಲಾಹಾಬಾದಿನಲ್ಲಿ ಕೂಡಿದ ಕೊಂಗ್ರೆಸು ಕಮ್ಮಿಟಿಯವರು ಈ ವರುಷದ ರಾಷ್ಟ್ರೀಯ ಸಭೆಗೆ ಎನ್ನಿಬಿಸೆಂಟ ರವರನ್ನು ಅಧ್ಯಕ್ಷರನ್ನಾಗಿ ಆರಿಸಬಹುದೆಂತ ನಿರ್ಣಯಿಸಿರುವರು.

ಕಳೆದ ತಿಂಗಳ ತಾ. ೩೧ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನವಲ್ಲೆಲ್ಲಾ ೪೨೫ ಪ್ಲೇಗುಮರಣಗಳಿದ್ದವು. ಇವುಗಳಲ್ಲಿ ೩೧೫ ಮುಂಬಯಿಯಲ್ಲಿಯೇ ಸಂಭವಿಸಿರುತ್ತವೆ.

ಚೋಟಾನಾಗಪುರದಲ್ಲಿರುವ ಜರ್ಮನ್ ಮಿಶನರಿಗಳನ್ನು ಕೈದಿಯಲ್ಲಿಟ್ಟಂದಿನಿಂದ ಇವರ ೩೦೮ ಶಾಲೆಗಳನ್ನೂ ೫೨ ವಿದ್ಯಾರ್ಥಿ ವಸತಿಗಳನ್ನೂ ಒಂದು ಹ್ಯಾಸ್ಕೂಲನ್ನೂ ೪ ಮಿಡ್ಲಸ್ಕೂಲ್‌ಗಳನ್ನೂ ಚೋಟಾನಾಗಪುರದ ಬಿಶೋಪರಾದ ಫೊಸ್‌ವೆಸ್‌ಕೊಟ್ ಎಂಬವರು ನಡಿಸುತ್ತಿರುವರು. ಪ್ರತಿ ತಿಂಗಳಲ್ಲಿ ಉಪಾಧ್ಯಾಯರ ಸಂಬಳದ ಬಗ್ಯೆ ಕೊಡೋಣಾಗುತ್ತಿರುವ ಗ್ರೇಂಟೂ ಈಗಲೂ ದೊರಕುತ್ತದೆ.

ಪಂಜಾಬು ಕೊಂಗ್ರೆಸು ಕಮಿಟಿಯವರು ಸರ್. ಎಸ್. ಪಿ. ಸಿಂಹರವರನ್ನು ಈ ಸರ್ತಿಯ ರಾಷ್ಟ್ರೀಯ ಸಭೆಯ ಅಧ್ಯಕ್ಷರನ್ನಾಗಿ. ಮಾಡಬೇಕೆಂದು ನಿರ್ಣಯಿಸಿರುತ್ತಾರೆ.

ನರೇಂದ್ರ ವಿಕ್ರಮಷಹಾರವರ ೪೦ ಸಾವಿರ ಬೆಲೆಯ ಮುತ್ತುಗಳನ್ನೂ, ೧೦ ಸಾವಿರ ರೂಪಾಯಿಗಳನ್ನೂ ಕದ್ದಿರುವರೆಂಬ ತಕ್ಷೀರಿಗೆ ಗುರಿಮಾಡಲ್ಪಟ್ಟ ಬಂಕೇಶ್ವರ ರಾಮಭಟ್ಟರು ತಪ್ಪಿತಸ್ಥರೆಂದು ಕಂಡುಬಂದದ್ದರಿಂದ ಇವರಿಗೆ ಅಲ್ಲಹಾಬಾದ್ ಜೊಯಿಂಟ್ ಮೇಜಿಸ್ಟ್ರೇಟರವರು ಎರಡು ವರುಷಗಳ ಕಠಿಣ ಕಾಮಗಿರಿ ಸಜೆಯನ್ನೂ ಮತ್ತು ರೂ. ೫೦೦ರ ಜುರುಮಾನೆಯ ಶಿಕ್ಷೆಯನ್ನೂ ವಿಧಿಸಿರುತ್ತಾರೆ.

ಧರ್ಮಾರ್ಥವಾಗಿ ಶಾಲೆಗಳಲ್ಲಿ ವಿದ್ಯಾಭ್ಯಾಸವನ್ನು ಹೊಂದುವ ಬಡ ವಿದ್ಯಾರ್ಥಿಗಳಿಗೆ ಊಟವನ್ನು ಹಾಕುವ ಬಗ್ಯೆ ಬರೋಡೆಯಲ್ಲಿ ಕೆಲವು ಶ್ರೀಮಂತರು ಕೂಡಿಕೊಂಡು ಒಂದು ಕಮಿಟಿಯನ್ನು ಏರ್ಪಡಿಸಿರುವರು.

ಹಿಂದೂಸ್ಥಾನದ ಬ್ರಹ್ಮಜ್ಞಾನ ಸಂಘದವರ ಕನ್ವೆಷನ್ ಸಭೆಯು ಇದೇ ಬರುವ ದಶಂಬರ ತಿಂಗಳ ಕ್ರಿಸ್ತಮಸ್ ರಜಾಕಾಲದಲ್ಲಿ ಮುಂಬಯಿಯಲ್ಲಿ ಕೂಡುವುದು.

ಅಭ್ಯುದಯವೆಂಬ ಹಿಂದಿ ವರ್ತಮಾನ ಪತ್ರಿಕೆಯಲ್ಲಿ ದಕ್ಷಿಣ ಆಫ್ರಿಕದ "ಇಂಡಿಯನ್ ಒಪೀನಿಯನ್" ಎಂಬ ಪತ್ರದಿಂದ ಎತ್ತಿ ಬರೆದ ಕೆಲವು ಆಕ್ಷೇಪಕರ ಸಂಗತಿಗಳ ಬಗ್ಯೆ ಅಭ್ಯುದಯದ ಮಾಲಿಕರಾದ ಬಹುಮಾನಪಟ್ಟ ಪಂಡಿತ ಮದನ ಮೋಹನ ಮಲವಿಯಾರವರಿಂದ ಪ್ರೆಸ್ಸ್ ಆಕ್ಟು ಮೇರೇಗೆ ಜವಾಬ್ದಾರಿ ಠೇವಣಾತಿಯನ್ನು ಸರಕಾರದವರು ಕೇಳಿರುತ್ತಾರೆ.

ದಕ್ಷಿಣ ಹಿಂದೂಸ್ಥಾನ

ತ್ರಾವಣಕೂರು ಸಂಸ್ಥಾನದ ತಲವಾಡಿ ಎಂಬಲ್ಲಿ ಸರಕಾರಿ ಶಾಲೆಯಲ್ಲಿ ತೀಯ್ಯಾ ಮಕ್ಕಳನ್ನು ಸೇರಿಸಿಕೊಂಡ ಸಂಬಂಧ ಮೇಲ್‌ಜಾತಿಯ ಜನರು ಶಿಟ್ಟಾಗಿ ತಂಟೆ ಮಾಡಲಿಕ್ಕೆ ಪ್ರಾರಂಬಿಸಿದರಿಂದ ಶಾಲೆಗಳ ಇನ್ಸ್‌ಪೆಕ್ಟರ್ ರಾದ ಮೆ| ಕೆ. ಪರಮಪಿಳ್ಳೆಯವರು ಯಾರಿಗೂ ಶಾಲೆ ಬೇಡವೆಂತ ಶಾಲೆಯನ್ನೆ ಮುಚ್ಚಿಸಿದರು. ಒಂದೆ ಹಪ್ತೆಯೊಳಗೆ ತಂಟೆಮಾಡಿದ ಜನರಲ್ಲಿ ವಿವೇಕವುಂಟಾಗಿ ಶಾಲೆ ಪುನಹ ತೆರೆಯಲ್ಪಟ್ಟಿತು. ಸ್ವಾರ್ಥ ಜನರಲ್ಲಿ ವಿವೇಕ ಹುಟ್ಟಿಸಲಿಕ್ಕೆ ಇನ್ಸ್‌ಪೆಕ್ಟರ ಪರಮಪಿಳ್ಳೆಯವರು ಮಾಡಿದ ಈ ಯುಕ್ತಿಯನ್ನು ಸೊಶಿಯಲ್ ರಿಫೋರ್ಮ ಎಡ್ವೊಕೇಟ್ ಎಂಬ ವರ್ತಮಾನ ಪತ್ರದ ಎಡಿಟರರು ಹೊಗಳುತ್ತಾರೆ.

ಬೆಂಗಳೂರಿನ ಓರಿಯಂಟಲ್ ವೇರ ಹೌಸ ಎಂಬ ವ್ಯಾಪಾರ ಸಂಘದ ಮ್ಯಾನೆಜರಾದ ರಾ. ಎ ಜಿ. ಷಾಡ್ವಿಕ ಎಂಬವರು ಮೈಸೂರು ಬೇಂಕಿನ ಮೇಲೆ ಕೊಟ್ಟ ಹುಂಡಿಯನ್ನು ನಿರಾಕರಿಸಿದರೆಂಬದಾಗಿ ಸದರಿ ಬೇಂಕಿನ ಮೇಲ್ ರೂ. ೨೦೦೦ಕ್ಕೆ ತಂದ ವ್ಯಾಜ್ಯವು ಬರುವ ನವಂಬರ ೨೫ನೇ ತಾರೀಕಿಗೆ ಇಡೋಣಾಗಿಯದೆ.

ಕರ್ನಾಲ್ ಜಿಲ್ಲೆಯೊಳಗಿನ ಮೂರು ಹಳ್ಳಿಗಳನ್ನು ಒಳನುಗ್ಗಿ ಹಾವಳಿಯನ್ನು ಉಂಟು ಮಾಡುತ್ತಿದ್ದ ದರೋಡೆಯವರನ್ನು ಆ ಹಳ್ಳಿಯವರು ಹ್ಯಾಗೆ ಹಿಡಿದರೆಂಬದಾಗಿಯೂ, ಹಳ್ಳಿಯವರ ಇಂಥಾ ಸಾಹಸವನ್ನೂ ಸರಕಾರದವರು ಹ್ಯಾಗೆ ಮನ್ನಿಸಬಹುದೆಂಬದಾಗಿಯೂ, ಸಿಮ್ಲದಿಂದ ಸರಕಾರದ ಪತ್ರ ಒಂದು ಘಾಯಿಶ್ ಆಗಿದೆ. ಸಂಯುಕ್ತ ಸಂಸ್ಥಾನಗಳಲ್ಲಿನ ಅನೇಕ ಪ್ರದೇಶಗಳಲ್ಲಿ ದರಾಯಿತಿಗಳನ್ನು ಮಾಡುತ್ತಿದ್ದ ೨೦ ಜನರನ್ನೂ ಈ ಹಳ್ಳಿಯವರು ಒಮ್ಮನಸ್ಸಿನಿಂದ ಹಿಡಿದು ಸರ್ಕಾರಕ್ಕೆ ಒಪ್ಪಿಸಿದ್ದರಿಂದ ಪ್ರತಿ ಒಬ್ಬ ದರೋಡೆಯವನಿಗೂ ೭ ವರ್ಷದ ಸಜಾ ಆಯಿತು.

ಗ್ರಾಮಸ್ಥರ ಸಹಾಯಕ್ಕಾಗಿ ಸರಕಾರದವರು ಸುಮಾರು ಒಂದುವರೆ ಸಾವಿರ ರೂಪಾಯಿಯ ತೀರ್ವೆಯನ್ನು ಒಂದು ವರ್ಷಕ್ಕೆ ಸದರಿ ಹಳ್ಳಿಯವರಿಗೆ ಮಾಫಿ ಮಾಡಿದ್ದಾರೆ.

ಮದ್ರಾಸಿನ ಸಿನೇಟ ಮಂದಿರದಲ್ಲಿ ಕೂಡಿದ್ದ ಈ ತಿಂಗಳ ೪ನೇ ತಾರೀಕಿನ ಸಭೆಯಲ್ಲಿ ಬಹುಮಾನಪಟ್ಟ ಸರ್. ಶಂಕರನ್ನಾಯರರವರು ಮೊದಲನೆಯ ನಿರ್ಣಯವನ್ನು ಸಭೆಯ ಮುಂದೆ ತರತಕ್ಕವರಿದ್ದರು. ಆದರೆ ಶಂಕರನ್ನಾಯರರವರಿಗೆ ಸಭಾಮಂದಿರವನ್ನು ಪ್ರವೇಶಿಸಲು ಬೇಕಾದ ಟಿಕೇಟು ಕಳುಹಿಸಿಕೊಡದೆ ಇದ್ದದ್ದರಿಂದ ಸಭಾಮಂದಿರದ ವರೆಗೆ ನಾಯರರವರು ಬಂದರೂ ಇವರನ್ನು ಒಳಗೆ ಪ್ರವೇಶಿಸಲು ಕಾವಲುನಲ್ಲಿದ್ದ ಜವಾನರು ಬಿಡಲಿಲ್ಲ. ಟಿಕೇಟುಗಳು ಇನ್ನೂ ಹಲವು ಪ್ರತಿಷ್ಟಿತರಿಗೆ ದೊರಕದೆ ಹೋದ್ದರಿಂದ ಸಭೆಗೆ ಬರಲಿಕ್ಕಾಗದೆ ಹಲವರು ನಿರಾಶೆಪಟ್ಟರೆಂತ ತಿಳಿದುಬರುತ್ತದೆ.

ದಕ್ಷಿಣ ಕನ್ನಡ.

ಪುತಷ್ಟುರು: — ನಮ್ಮ ಡಿವಿಜನಿನ ಡಿಪ್ಯುಟಿ ಕಲೆಕ್ಟರವರು ಇದೇ ಆಗೋಸ್ತು ತಾ. ೧೧ರಿಂದ ೧೪ ಹೊಸದುರ್ಗ, ತಾ. ೧೫ರಿಂದ ೨೧ ಕಾಸರಗೋಡ ತಾ. ೨೨ ಕಾಸರಗೋಡ ಮಂಗಳೂರು, ತಾ. ೨೩ ಮಂಗಳೂರು ತಾ. ೨೪ ಮಂಗಳೂರು ಪುತ್ತೂರು ಈ ರೀತಿ ಮೊಕ್ಕಾಂಗಳ ಮೇರೆಗೆ ಸರ್ಕಟು ಬೆಳಸುವರು.

ಇದೇ ತಿಂಗಳ ತಾ ೨೧ರಲ್ಲು ಪುತ್ತೂರು ತಾಲೂಕು ಬೋರ್ಡು ಮಿಟಿಂಗು ಕಾಸರಗೋಡಿನಲ್ಲಿ ಜರಗುವದು.

ವಿಟ್ಲ: — ಇಲ್ಲಿಯ ಮಂಜಪ್ಪಗೌಡ ಮತ್ತು ಲಿಂಗಪ್ಪ ಶೆಟ್ಟಿ ಇವರಿಗೆ ಕೆಲವು ನಾಣ್ಯಗಳು ಸಿಕ್ಕಿರುತ್ತವೆ ಎಂಬದಾಗಿ ಇಲ್ಲಿಯ ಪಟೇಲರಿಗೆ ವರದಿ ಸಿಕ್ಕಿದ್ದರಿಂದ ಸದರಿ ಪಟೇಲರು ಆ ವಿಶಯ ಮೇಲಾಧೀಕಾರರಿಗೆ ರಿಪೋರ್ಟು ಮಾಡಿದ್ದರು. ಆ ವಿಶಯ ರೆವಿನ್ಯೂ ಇನ್ಸ್‌ಪೆಕ್ಟರವರು ತನಕಿ ನಡಿಸಿ ಹೋಗಿರುತ್ತಾರೆ.

ಮಂಜೇಶ್ವರ: — ಇಲ್ಲಿಯ ಬೋರ್ಡು ಸರಸ್ವತೀ ಬಾಲಿಕಾ ಪಾಠಶಾಲೆಯ ವರ್ಷ ವರ್ಧಂತಿಯು ತಪ್ಪದೆ ಆಚರಿಸಬೇಕಾಗಿಯೂ ಬೋರ್ಡಿನವರಿಂದ ಈ ಶಾಲೆಯು ವಹಿಸಿಕೊಂಡದ್ದರಿಂದ ಇನ್ನಷ್ಟು ವಿಜೃಂಭಣೆಯಿಂದ ಈ ೮ನೇ ವರ್ಧಂತಿಯನ್ನು ಆಚರಿಸುವ ದಿನ ನಿರ್ಣಯಿಸುವರೆ ಇಲ್ಲಿಯ ಗೌಡ ಸಾರಸ್ವತ ಯುವಕ ಜನ ಸಮಾಜದವರು ಇದೇ ತಾ. ೧೫ನೇ ಆದಿತ್ಯವಾರ ಸಭೆ ಕೂಡುವದಾಗಿ ನಿರ್ಣಯಿಸಿರುವರು.

ಶಿವಳ್ಳಿ ಮತದ ಕಮಿಟಿ ಮೆಂಬರರಾದ ಮ| ರಾ| ಕಡಂಬಾರು ನಾರ್ಣಪ್ಪಯ್ಯನವರು ಸದರಿ ಗ್ರಾಮದ ಕೆಂಪದವು ಎಂಬಲ್ಲಿ ಸ್ವಂತ ಖರ್ಚನಿಂದ ಯೋಗ್ಯ ಶಾಲಾ ಕಟ್ಟೋಣವನ್ನು ಕಟ್ಟಿಸಿ ಇದೇ ತಾ. [illegible] ತಾಲೂಕು ಬೋರ್ಡಿಗೆ ದಾನ ಮಾಡಿ ಕೊಟ್ಟಿರುವದರಿಂದ ಈ ಗ್ರಾಮದ ವಿದ್ಯಾವರ್ಧನಕ್ಕೆ ಇವರು ಕಾರಣರಾಗಿರುವರು.

ಆದಲ್ಲದೆ ಕಡಂಬಾರು ಗ್ರಾಮದಲ್ಲಿ ಹಾಳು ಬಿದ್ದಿರುತ್ತಿದ್ದ ಶ್ರೀ ವಿಷ್ಣುಮೂರ್ತಿ ದೇವಾಲಯವನ್ನು ಇವರು ಅನೇಕ ಖರ್ಚು ಮುಟ್ಟಿಸಿ ಜೀರ್ಣೋದ್ಧಾರ [illegible] ಕಳೆದ ಮಾರ್ಚ ತಿಂಗಳಲ್ಲಿ ಪುನಹ ಪ್ರತಿಷ್ಠೆ [illegible]

ವರಿಂದ ಗ್ರಾಮಸ್ಥರು ವ ಇತರರು ಸಹ ಇವರ ಉಪಕಾರತ್ವವನ್ನು ಕೊಂಡಾಡುತ್ತಿರುವರು.

ಕಾರ್ಕಳ:— ಇದೇ ತಿಂಗಳ ತಾ. ೧೮ರಲ್ಲಿ ಆದಿತ್ಯವಾರ ದಿವಸ ಮಧ್ಯಾಹ್ನ ಇಲ್ಲಿಯ ಹಿಂದೂ ಬಾಲಿಕಾ ಪಾಠಶಾಲೆಯಲ್ಲಿ ಆ ಶಾಲೆಯ ಉಪಾಧ್ಯಾಯಿನಿಯರ ಮತ್ತು ಮೇಲಿನ ೩ ತರಗತಿಗಳಲ್ಲಿರುವ ವಿದ್ಯಾರ್ಥಿಗಳ ಚಿಕ್ಕದೊಂದು ಸಭೆಯು ನೆರದಿತ್ತು. ಈ ಸಭೆಯಲ್ಲಿ ಕೆಳಗೆ ಕಾಣಿಸಿದ ವಿಷಯಗಳು ಎಲ್ಲರ ಅನುಮತಿ ಮೇರೆಗೆ ಮಂಜೂರು ಮಾಡಲ್ಪಟ್ಟವು.

೧. ಈ ಸಭೆಯು ಹಿಂದೂಬಾಲಿಕಾ ಸದ್ವರ್ತನಾ ಸಭಾ ಎಂತ ಅನ್ನಿಸಿಕೊಳ್ಳಬೇಕು. ೨. ಸಭೆಯ ಅಧ್ಯಕ್ಷ ಸ್ಥಾನವನ್ನು ಅದೇ ಶಾಲೆಯ ಮುಖ್ಯ ಉಪಾಧ್ಯಾಯಿನಿ ಆನಂದಿಬಾಯಿ ಅಮ್ಮನವರೂ ಕಾರ್ಯದರ್ಶಿ ಸ್ಥಾನವನ್ನು ನಾಲ್ಕನೆ ದರ್ಜೆಯಲ್ಲಿ ತೇರ್ಗಡೆ ಹೊಂದಿದ ಕೃಷ್ಣಾಬಾಯಿಯೂ ವಹಿಸಿಕೊಳ್ಳಬೇಕು. ೩. ಸಭೆಯು ೧೫ ದಿವಸಕ್ಕೊಮ್ಮೆ ಆ ಶಾಲೆಯ ನೂತನವಾದ ಕಟ್ಟೋಣದಲ್ಲಿ ಕೂಡಬೇಕು. ೪. ಸಭೆಗೆ ವಿದ್ಯಾರ್ಥಿಗಳು ಮತ್ತು ಉಪಾಧ್ಯಾಯಿನಿಯರು ಅಲ್ಲದೆ ಪಟ್ಟಣದ ಇತರ ಮಾನ್ಯ ಗೃಹಿಣಿಯರೂ ಕೂಡಾ ಮೆಂಬರರಾಗಬಹುದು. ೫. ಮೆಂಬರರಲ್ಲಿ ೧ನೇ ತರಗತಿಯವರು ೪ ಆಣೆ, ೨ನೇ ತರಗತಿಯವರು ೨ ಆಣೆ, ಮತ್ತು ೩ನೇ ತರಗತಿಯವರು ೧ ಆಣೆ ತಿಂಗಳಿಗೆ ವಂತಿಗೆ ಕೊಡಬೇಕು. ೬. ಈ ವಂತಿಗೆ ಆದ ಹಣದ ಸಹಾಯದಿಂದ ಸಭೆಯ ಕಡೆಯಿಂದ ಶಾಲೆಗೆ ೧ ಚಿಕ್ಕ ಪುಸ್ತಕ ಭಂಡಾರವನ್ನೂ ಕೆಲವು ಒಳ್ಳೇ ಮಾಸಪತ್ರಿಕೆಗಳನ್ನೂ ಒದಗಿಸಿಕೊಡುವುದು. ೭. ಸಭೆಯಲ್ಲಿ ಧರ್ಮ, ನೀತಿ, ಮತ ವಗೈರೆ ವಿಷಯಗಳ ಕುರಿತು ಚಲೋ ಉಪನ್ಯಾಸಗಳನ್ನು ವಿದ್ಯಾರ್ಥಿಗಳು ಓದಿ ಹೇಳಿ ಅವುಗಳನ್ನು ವಿಮರ್ಶಿಸುವುದಲ್ಲದೆ ಸಭೆಯಲ್ಲಿ ಆ ದಿನ ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡ ಮಾನ್ಯ ಗೃಹಿಣಿಯರಿಂದ ಒಳ್ಳೇ ಬುದ್ಧಿವಾದ ಪಡಕೊಳ್ಳುವದು ಇವೇ ಈ ಸಂಘದ ಉದ್ದಿಷ್ಟಗಳು.

— ಇದೇ ತಿಂಗಳ ತಾ. ೪ಕ್ಕೆ ನಮ್ಮನ್ನು ಆಳುವ ಇಂಗ್ಲಿಷರಿಗೂ ಅವರ ಶತ್ರುಗಳಿಗೂ ವಿಲಾಯತಿ ದೇಶದಲ್ಲಿ ಘೋರ ಕದನ ನೆಡದು ೧ ವರ್ಷವಾಯಿತು ಎಂತ ಎಲ್ಲರಿಗೂ ಗೊತ್ತಿದ್ದ ಸಂಗತಿಯಷ್ಟೇ. ಆದರೂ ಯುದ್ಧವು ಇನ್ನು ಬೇಗನೇ ಮುಗಿಯುವಂತೆ ತೋರುವುದಿಲ್ಲ. ನರಬಲಿಯು ಇನಿಸಾದರೂ ನ್ಯೂನವಕಾಶವಿಲ್ಲದೆ ಯುದ್ಧರಂಗದಲ್ಲಿ ನಡೆಯುತ್ತಲೇ ಇದೆ. ಈಶ್ವರನ ಕೃಪೆಯು ನಮ್ಮ ಮೇಲೆ ಈಗಲಾದರೂ ಬೀಳದಿದ್ದರೆ ನಾವು ನಿರ್ಭಾಗಿಗಳೇ ಸರಿ. ಈ ದಿನ ಸಾಮ್ರಾಜ್ಯದ ಎಲ್ಲಾ ಕಡೆಗಳಲ್ಲಿ ಹಿಂದೂ, ಮುಸಲ್ಮಾನ, ಕ್ರೈಸ್ತ ದೇವಾಲಯಗಳಲ್ಲಿ ಈ ಘೋರ ಯುದ್ಧವು ಬೇಗನೆ ಅಂತ್ಯವಾಗಿ ನಮ್ಮ ಜೋರ್ಜ್ ಸಾರ್ವಭೌಮರಿಗೂ ಅವರ ಜೊತೆಯಲ್ಲಿ ನಿಂತ ಇತರ ಅರಸುಗಳಿಗೂ ಪೂರ್ಣ ಜಯವಾಗಲಿ ಎಂತ ದೇವರ ಕಡೆಗೆ ದೀನಭಾವದಿಂದ ಮೊರೆ ಇಡುವರು. ಕಾರ್ಕಳ ಪಟ್ಟಣಿಗರು ಕೂಡಾ ಈ ದಿನವನ್ನು ಆಚರಿಸುವದ ಮರೆಯಲಿಲ್ಲ. ನಮ್ಮ ಕಡೆಯ ಶಾಲೆಗಳ ಸುಪರ್‌ವೈಜರವರ ಸಾಹಸದಿಂದ ಈ ದಿನ ಸಾಯಂಕಾಲ ಇಲ್ಲಿರುವ ಎಲ್ಲಾ ಶಾಲೆಗಳ ಮಕ್ಕಳ ಒಂದು ಮೆರವಣಿಗೆಯು ಬಹಳ ಸಂಭ್ರಮದಿಂದ ನಡೆಯಿತು. ಮೆರವಣಿಗೆಯು [illegible] ರಾಜಪತಾಕೆಗಳಿಂದಲೂ, ರಾಜ ರಾಣಿಯವರ ಭಾವಚಿತ್ರಗಳಿಂದಲೂ ಅಲಂಕರಿಸಲ್ಪಟ್ಟು ಜಯಜಯ ವಿನಾದದಿಂದಲೂ, ಬೇಂಡ್ ವಾದ್ಯದ ಗಾಯನದಿಂದಲೂ, ರಾಜ ಕೀರ್ತನೆ ಹಾಡಿನಿಂದಲೂ ಎಲ್ಲಾ ಕಡೆಗಳೂ ಪ್ರತಿಧ್ವನಿಸುವಂತೆ ತೋರಿಬಂತು. ಎಲ್ಲಾ ಸರಕಾರ ಹುದ್ದೆದಾರರೂ, ಪಟ್ಟಣದ ಇತರ ಗೃಹಸ್ಥರೂ ಮೆರವಣಿಗೆಯಲ್ಲಿ ತಮ್ಮ ಆಗಮನ ಮಾಡಿದ್ದರು. ಕಡೆಗೆ ಮೆರವಣಿಗೆಯು ಇಲ್ಲಿಯ ಶ್ರೀ ವೆಂಕಟರಮಣ ದೇವಸ್ಥಾನದ ಹತ್ತಿರ ನಿಂತು ಎಲ್ಲರೂ ದೇವಸ್ಥಾನದ ಒಳಹೊಕ್ಕು ಅಲ್ಲಿ ಶ್ರೀ ದೇವರ ಪೂಜೆ ಸಾಂಗ್ಯವಾಗಿ ವಾದ್ಯ ಘೋಷದಿಂದ ನಡದು, ಪ್ರಕೃತ ನಡಿಯುವ ಯುದ್ಧದಲ್ಲಿ ನಮ್ಮ ಅರಸರಿಗೂ, ಅವರ ಸಹಾಯಕರಿಗೂ ಪೂರ್ಣ ಜಯವಾಗಬೇಕೆಂತ ದೇವರನ್ನು ಪ್ರಾರ್ಥಿಸಿದ ನಂತರ ಸಮಸ್ತರಿಗೂ ಪಂಚಕಜ್ಜಾಯ ಹಂಚೋಣವಾಗಿ ಎಲ್ಲರೂ ತಮ್ಮ ತಮ್ಮ ಮನೆಗಳಿಗೆ ತೆರಳಿದರು. ಶ್ರೀಭಗವಂತನು ನಮ್ಮ ಸಾರ್ವಭೌಮರಿಗೆ ಬೇಗನೆ ದಿಗ್ವಿಜಯ ದಯಪಾಲಿಸಲಿ ಎಂತ ನಮೆಲ್ಲರ ಪ್ರಾರ್ಥನೆ.

ಕಾಪು:— ಈ ಊರಲ್ಲಿ ಪಂಚಮ ಜಾತಿಯವರ ಸಂಖೆಯು ಹೆಚ್ಚಿದೆ ಎಂಬದು ಇಲ್ಲಿ ಚಲೋದಾಗಿ ನಡಿಯುತ್ತಲಿರುವ ಪಂಚಮ ಬೋರ್ಡು ಶಾಲೆಯ ಮಕ್ಕಳ ಸಂಖೆಯಿಂದಲೇ ತಿಳಿದುಕೊಳ್ಳಬಹುದು. ಈ ಊರ ಅನೇಕ ಪಂಚಮ ಜಾತಿಯವರು ಸ್ವಂತ ಕಟ್ಟೋಣ ಕಟ್ಟಿಸಿಕೂಡುಕೊಳ್ಳುವ ಉದ್ದಿಶ್ಯ ಈ ಗ್ರಾಮದಲ್ಲಿರತಕ್ಕ ಸರಕಾರಿ ಸ್ಥಳವನ್ನು ದರಕಾಸ್ತಿಗೆ ಕೇಳಿ ಇಲಾಖಾ ಮೇಲಾಪೀಸರರಿಗೆ ಅರ್ಜಿ ಬರಕೊಂಡಿರುವರು. ಈ ವಿಷಯ ತಾಲೂಕು ಅಧಿಕಾರಿಗಳು ವ ಗ್ರಾಮ ಉದ್ಯೋಗಸ್ಥರು ತಕ್ಕ ತನಿಕೆಯಿಂದ ಅರ್ಧ ಎಕ್ರೆ ಪ್ರಕಾರ ಸ್ಥಳವನ್ನು ಕೇಳುವ ಬಡ ಪಂಚಮರ ಕೋರಿಕೆಗೆ ಸಹಾಯಕಾರಿಯಾದ್ದಲ್ಲಿ ತುಂಬಾ ಸಂತೋಷಾಸ್ಪದವಾಗುವದು.

ಉಳಿಯಾರುಗೋಳಿ ಗ್ರಾಮಸ್ಥರು ತಮ್ಮ ಊರಲ್ಲಿ ಒಂದು ಶಾಲೆಯನ್ನು ಕಟ್ಟಿಸುತ್ತೇವೆಂದು ರೆವಿನ್ಯೂ ಇಲಾಖೆಯವರಿಂದ ಬೀರೇಜಿಗೆ ಸ್ಥಳವನ್ನು ತಕ್ಕೊಂಡು ಎರಡು ವರ್ಷಗಳಿಂದ ಊರ ಜನರ ಉಪಯೋಗವಾದ ಕಾಡಿನ ಸೊಪ್ಪಿನ ಏಲಂ ಮಾಡಿ ಬಂದ ಹಣದಿಂದ ಬಂಡೆಕಲ್ಲಿನ ಪಂಚಾಂಗ ಕುಂದಗಳು ಮಾಡಿಸಿದರು. ತನ್ಮಧ್ಯ ಊರ ಜನರಲ್ಲೇ ಇಕ್ಕಟ್ಟಾಗಿ ಕಟ್ಟೋಣ ಮುಂದುವರಿಯದಂತೆ ಆಗುವದಾಯಿತು. ಈ ಸಂದರ್ಭ ಬೋರ್ಡು ಕನ್ನಡ ಶಾಲೆಯಲ್ಲಿ ಕಲಿಯುತ್ತಿದ್ದ ಅನೇಕ ಮಕ್ಕಳು ತ್ರಿಶಂಕು ಮಹಾರಾಯನಂತೆ ನಲಿದಾಡುವದೆ ಕಾರಣವಾಯಿತು. ಈಗ ಗ್ರಾಮಸ್ಥರಿಂದ ಕಟ್ಟೋಣ ಪೂರೈಸಲು ಆಗುವದಿಲ್ಲವೆಂತಾದ್ದರಿಂದ ಸ್ಥಳವನ್ನೇ ಸರಕಾರಕ್ಕೆ ತಿರಿಗಿ ಬಿಟ್ಟುಕೊಡುವ ಹಾಗಾಗಿದೆ. ದೇವರು ಕೊಟ್ಟರೂ ಪೂಜಾರಿ ಬಿಡ ಎಂಬ ಗಾದೆಯಂತೆ, ಸರಕಾರದವರಿಂದ ಸ್ಥಳ ದೊರಕಿದಾಗ್ಯೂ ಊರ ಜನರಿಂದ ಕಟ್ಟೋಣ ಕಟ್ಟಿಸುವದ ಸಾಧ್ಯವಾಗದೆ ಇದ್ದದ್ದು ಕೇಳಿ ತುಂಬಾ ವಿಷಾದಪಡಬೇಕಾಗಿದೆ ಮಾತ್ರವಲ್ಲ ಜನರ ಬುದ್ಧಿವಂತಿಕೆಯನ್ನು ಎಷ್ಟೆಂದು ವರ್ಣಿಸಲೂ ಸ್ಥಳಸಾಕಾಗಲಾರದು.

ಉಡುಪಿ:— "ಸ್ವಸ್ತಿ ಪ್ರಜಾಭ್ಯಃ ಪರಿಪಾಲಯಂತಾಂ ನ್ಯಾಯ್ಯೇನ ಮಾರ್ಗೇಣ ಮಹೀಂ ಮಹೀಶಾಃ । ಗೋಬ್ರಾಹ್ಮಣೇಭ್ಯಃ ಶುಭಮಸ್ತು ನಿತ್ಯಂ ಲೋಕಾಃ ಸಮಸ್ತಾಃ ಸುಖಿನೋ ಭವಂತು" ॥ ಎಂಬದಾಗಿ ಬ್ರಾಹ್ಮಣರು ಶ್ರೀ ಪರಮಾತ್ಮನನ್ನು ಪ್ರತಿನಿತ್ಯ ಪ್ರಾರ್ಥಿಸುತ್ತಿರುವರಾದರೂ ಈ ತಾ. ೪ನೆಯ ರಾತ್ರೆ ನಮ್ಮ ಮಾನ್ಯ ಮುನ್ಸೀಫರ ಸೂಚನೆ ಪ್ರಕಾರ ಪರ್ಯಾಯ ಶ್ರೀ ಸೀರೂರು ಶ್ರೀ ಪಾದಂಗಳವರೇ ಮೊದಲಾಗಿ ಇಲ್ಲಿರತಕ್ಕ ಶ್ರೀ ಪಾದಂಗಳವರೆಲ್ಲರೂ ಇತರ ಲೌಕಿಕ ವೈದಿಕ ಗೃಹಸ್ಥರೂ ಶ್ರೀ ಕೃಷ್ಣಪರಮಾತ್ಮನಿಗೆ ವಿಶೇಷವಾಗಿ ಪೂಜಾದಿಗಳನ್ನು ನಡಿಸಿ ಈಗ ನಡಿಯುತ್ತಿರುವ ಇಂದಿಗೆ ಒಂದು ವರ್ಷವಾದ ಘೋರಯುದ್ಧವು ಬೇಗನೆ ಮುಕ್ತಾಯವಾಗಿ ನಮ್ಮ ಚಕ್ರವರ್ತಿಗಳಿಗೆ ಜಯವಾಗಲೆಂತ ಪ್ರಾರ್ಥಿಸುವವರಾದರು. ಈ ವಿಷಯವನ್ನು ವ್ಯಾಸರಾಯರಿಗೆ ತಂತಿವಾರ್ತೆಯಿಂದ ತಿಳಿಸಿದಲ್ಲಿ ಪರ್ಯಾಯ ಶ್ರೀಗಳವರಿಗೆ ಅಭಿನಂದನ ಉತ್ತರವು ತಲಪಿರುವುದು.

ಶ್ರೀ ಸೀರೂರು, ಪುತ್ತಿಗೆ, ಕೃಷ್ಣಾಪುರ, ಸೋದೆ, ಕಾಣೂರು ಶ್ರೀ ಪಾದಂಗಳವರು ಈ ವರ್ಷ ಉಡುಪಿಯಲ್ಲಿಯೂ, ಶ್ರೀ ಅದಮಾರು ಮತ್ತು ಫಲಿಮಾರು ಶ್ರೀ ಪಾದಂಗಳವರು ಅದಮಾರಲ್ಲಿಯೂ ಚಾತುರ್ಮಾಸ ಸಂಕಲ್ಪವನ್ನು ಮಾಡಿರುತ್ತಾರೆ. ಶ್ರೀ ಪೇಜಾವರ ಶ್ರೀ ಪಾದಂಗಳವರು ಹರಿದ್ವಾರ ದಾಟಿ ಹೃಷೀಕೇಶ ಎಂಬಲ್ಲಿ ಸಂಕಲ್ಪ ಮಾಡಿ, ಶ್ರೀ ನಗರ ಎಂಬಲ್ಲಿಗೆ ತಲಪಿದ ವಾರ್ತೆ ಒಂದಿರುವದು. ಈ ತಾ. ೧೦ಕ್ಕೆ ಬದರಿನಾರಾಯಣ ಕ್ಷೇತ್ರಕ್ಕೆ ತಲಪಲಿಕ್ಕೆ ಸಾಕೆಂತ ತೋರುತ್ತದೆ.

ಸುಮಾರು ೫೦ ಸಾವಿರ ರೂಪಾಯಿ ವೆಚ್ಚ ತಗಲಬಹುದಾದ ಒಂದು ಚಿನ್ನದ ಪಾಲಕಿಯನ್ನು ಶ್ರೀ ಕೃಷ್ಣಮಠದ ಬಗ್ಗೆ ತಯಾರಿಸುವ ಉದ್ದೇಶದಿಂದ ಶ್ರೀ ಕೃಷ್ಣಾಪುರ ಸ್ವಾಮಿಗಳವರು ಸ್ಥಳಸವರಿಂದಲೂ, ಪರಸ್ಥಳದವರಿಂದಲೂ, ಯಾತ್ರಿಕರಿಂದಲೂ, ತಮ್ಮ ವಕ್ಕಲುಗಳಿಂದಲೂ ಈ ಉದ್ದಿಶ್ಯ ಪ್ರತ್ಯೇಕ ಸಂಚಾರಮಾಡಿಯೂ ಪವನುಗಳನ್ನೂ ಹಣವನ್ನೂ ಸಂಗ್ರಹಿಸುತ್ತಿರುವರು. ಪಾಲಕಿಯ ಕೆಲಸವು ನಡಿಯುತ್ತಿರುವದು. ಆದರೂ ಅನೇಕರು ಇನ್ನೂ ಸಹಾಯ ಮಾಡಲಿಲ್ಲವಾಗಿ ತೋರುತ್ತೆ. ಈ ಸತ್ಕಾರ್ಯಕ್ಕೆ ಸರ್ವರೂ ಕೈಲಾದ ದ್ರವ್ಯಸಹಾಯ ಮಾಡುವದು ಅಗತ್ಯ.

ಮಂಗಳೂರು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನ ಮಾಜಿ ಶಿರಸ್ತೆದಾರ ಮ॥ ನರ್ಸಿಂಗರಾಯರ ಉತ್ತರಕ್ರಿಯೆ ವೇಳ್ಯಾ ಅವರ ಮಗಂದಿರು ಬಡಬಗ್ಗರಿಗೆ ಊಟವನ್ನೂ ಅಕ್ಕಿಯನ್ನೂ ಕೊಟ್ಟದ್ದಲ್ಲದೆ ಸಾರಸ್ವತ ಬಡವಿದ್ಯಾರ್ಥಿಗಳ ಫಂಡ್, ಮಂಗಳೂರ ನಿರಾಶ್ರಿತ ಜನಸಹಾಯಕ ಸಂಘ, (ಹೊಲೆಯರ ಉದ್ಧರಣೆ ಸಂಘ) ಪಂಡರಪುರ ಅನಾಥಾಶ್ರಮ, ಪೂಣೆ ವಿಧವಾಗೃಹ, ಮಂಗಳೂರ ಬ್ರಹ್ಮಸಮಾಜದ ಅನಾಥ ಜನಸಹಾಯಕ ಫಂಡ್, ಬಾಸೆಲ್ ಮಿಶನ್ ಅನಾಥಾಶ್ರಮ, ಕೆಂಕನಾಡಿ ಆಸ್ಪತ್ರೆ, ಮಂಗಳೂರು ಅಂಜುಮಾನಿ ಮುನಿರುಲ್ ಇಸ್ಲಾಮ್, ಪಾಲಂಕೋಟಾ ಮೂಳರ, ಕಿವುಡರ ಮತ್ತು ಕುರುಡರ ಶಾಲೆಗೆ ದಾನಮಾಡಿರುವರು.

ಆಕ್ಟಿಂಗ್ ಕಲೆಕ್ಟರ ದೊರೆಗಳ ಸರ್ಕೀಟು ಕ್ರಮದ ಪಟ್ಟಿಯು ಸಿದ್ಧ ಪಡಿಹೊಂದಿದೆ. ಈ ತಿಂಗಳ ತಾ. ೧೭ಕ್ಕೆ ಹೊಸದುರ್ಗದಿಂದ ಚೆರ್ವತ್ತೂರು; ತಾ. ೧೮ಕ್ಕೆ ಚೆರ್ವತ್ತೂರು; ತಾ. ೧೯ಕ್ಕೆ ಮಂಗಳೂರು ಈ ರೀತಿಯಾಗಿರುವದು.

ಈ ತಿಂಗಳ ತಾರೀಕು ೨೦ರಲ್ಲಿ ಪೆನ್ಶನು ಹೊಂದುವ ಒಂದನೇ ಗ್ರೇಡ್ ರೆವಿನ್ಯು ಇನ್ಸಪೆಕ್ಟರ್ ರಾ| ಎಮ್. ಕಾಮರಾಯರ ಕೆಲಸಕ್ಕೆ ಎರಡನೇ ಗ್ರೇಡಿನ ರೆವಿನ್ಯು ಇನ್ಸಪೆಕ್ಟರರಾದ ರಾ| ಜಿ. ಶ್ರೀನಿವಾಸ ಶ್ಯಾನುಭಾಗರು ನೇಮಿಸಲ್ಪಟ್ಟಿರುವರು. ಇವರು ಕಾಸರಗೋಡು ಫಿರ್ಕದಲ್ಲಿ ಕೆಲಸ ನೋಡುವರು.

ಬಂಟವಾಳ ಫಿರ್ಕಿನ ರೆವಿನ್ಯು ಇನ್ಸಪೆಕ್ಟರರಾದ ರಾ| ಪಿ. ಶಂಬಯರವರಿಗೆ ಕುಂದಾಪುರ ಫಿರ್ಕಿಗೆ ವರ್ಗವಾಗಿದೆ. ಉಪ್ಪಿನಂಗಡಿ ತಾಲೂಕು ಆಫೀಸಿನ ೭ನೇ ಕ್ಲಾರ್ಕರಾದ ರಾ. ಪಿ. ನಾರಾಯಣರಾವ್‌ರವರು ಆಕ್ಟಿಂಗ್ ಎರಡನೇ ಗ್ರೇಡ್ ರೆವಿನ್ಯು ಇನ್ಸಪೆಕ್ಟರರಾಗಿ ನೇಮಕ ಹೊಂದಿರುವರು. ಇವರು ಬಂಟವಾಳ ಫಿರ್ಕದಲ್ಲಿ ಕೆಲಸ ನೋಡಬೇಕಾಗಿದೆ. ರಾ| ಟಿ. ನರಸಿಂಗರಾಯರವರು ದತ್ತಾತ್ರಯರಾವ್‌ರವರ ಬದಲಿಗೆ ಒಂದನೇ ಗ್ರೇಡ್ ಲೇಂಡ್ ರಿಕೋರ್ಡ್ ಇನ್ಸಪೆಕ್ಟರರಾಗಿ ನೇಮಕ ಹೊಂದಿರುತ್ತಾರೆ. ಉಪ್ಪಿನಂಗಡಿ ತಾಲೂಕಿನಲ್ಲಿಯೇ ಇವರು ಈ ಕೆಲಸದ ಮೇಲಿರುವರು. ಆಕ್ಟಿಂಗ್ ಎರಡನೇ ಗ್ರೇಡ್ ರೆವಿನ್ಯು ಇನ್ಸಪೆಕ್ಟರರಾದ ರಾ| ಕೆ. ರಾಮನ್ನಾಯಕರು ಎರಡನೇ ಗ್ರೇಡ್ ಲೇಂಡ್ ರಿಕೋರ್ಡ್ ಇನ್ಸಪೆಕ್ಟರರಾಗಿ ಕಾರ್ಕಳ ತಾಲೂಕಿನಲ್ಲಿ ಕೆಲಸ ನೋಡುವರು.

ಅಮ್ಮೆಂಬಳ ಸುಬ್ರಾಯಪೈ ಸ್ಮಾರಕ ಫಂಡಿನಿಂದ ೧೯೧೫-೧೬ ವರುಷಕ್ಕೆ ಈ ಕೆಳಗಿನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಗಳು ಕೊಡೋಣಾಗಿವೆ:—ರಾ. ವಿ. ದಯಾನಂದ ಕಾಮತ್ ರೂ. ೧೫ರ ಪ್ರಕಾರ, ರಾ. ಲಕ್ಷ್ಮೀನಾರಾಯಣಾಚಾರ್ಯ ರೂ. ೧೫; ರಾ. ರೆಂಜಾಳ ಹರಿಶೆಣಯಿ ರೂ. ೧೦; ರಾ. ತಲಚೇರಿ ಲಕ್ಷ್ಮಣ ಶೆಣಯಿ ರೂ. ೧೦; ರಾ. ತೊನ್ಸೆ ಗೋವಿಂದಪೈ ರೂ. ೭-೮-೦; ರಾ. ಬಿ. ಬಾಲಕೃಷ್ಣ ಪುರಾಣಿಕ ರೂ. ೭-೮-೦; ರಾ. ಮಂಜೇಶ್ವರ ಗೋವಿಂದಪ್ರಭು ರೂ. ೭-೮-೦; ರಾ. ಉಡುಪಿ ಪುಂಡಳಿಕ ಶೆಣಯಿ ರೂ. ೭-೮-೦.

ಮಂಗಳೂರು ಪ್ರಾಥಮಿಕ ಶಾಲೆಗಳ ಅಧ್ಯಾಪಕ ಸಂಘದ ಸೆಕ್ರೆಟರಿಗಳಾದ ಕದ್ರಿ ಮಾರ್ಸೆಲ್ ಎ. ಎಮ್. ಡಿ. ಸೋಜರವರಿಗೆ ವ್ಯಾಸರಾಯ ಪ್ರಭುಗಳ ಪ್ರೈವೇಟ್ ಸೆಕ್ರೆಟರಿಗಳಿಂದ ಈ ರೀತಿ ತಂತಿ ಬಂದಿದೆ. ರಾಜಭಕ್ತಿ ಪುರಸ್ಸರವಾದ ತಮ್ಮ ಸಂದೇಹದ ಬಗ್ಗೆಯೂ ಇಂಡಿಯನ್ ರಿಲೀಫ್ ಫಂಡಿಗೆ ಕಳುಹಿಸಿದ ವಂತಿಗೆಯ ಬಗ್ಗೆಯೂ ಸಂಘದ ಎಲ್ಲಾ ಮೆಂಬರರನ್ನೂ, ನಿಮ್ಮನ್ನೂ ವಂದಿಸಿರುವೆವು.

ಮಂಗಳೂರಲ್ಲಿ ವಿಷಮಜ್ವರ ಮತ್ತು ಆಮಾತಿಸಾರ ಬಾಧೆಯು ವಿಶೇಷವಾಗಿರುವದು. ಕಳೆದ ವಾರದಲ್ಲಿ ಮಳೆಯು ಕಡಮೆಯಾಗಿದೆ.

ಕಳೆದ ವಾರ ಮಂಗಳೂರು ಮುನ್ಸಿಪಾಲಿಟಿಯಲ್ಲಿ ಎರಡು ಪ್ಲೇಗು ಮರಣಗಳಿದ್ದವು.

~~~~~

ವಿವಿಧ ವಿಷಯಗಳು.

~~~~~

ಮೊರಿಸಿಯಸ್ ದ್ವೀಪದ ತೋಟದ ಕೊಳದಲ್ಲಿ ೧೭೬೬ನೆ ಇಸವಿಯಲ್ಲಿ ಹಿಡಿದ ಒಂದು ಆಮೆಯು ಇಂದುವರೆಗೂ ಜೀವಂತವಾಗಿ ಉಂಟು. ಭೂಲೋಕದಲ್ಲಿರುವ ಪ್ರಾಣಿಗಳಲ್ಲಿ ಅತ್ಯಂತ ಮುದಿಪ್ರಾಣಿ ಇದೇ ಅನ್ನಿಸಿಕೊಳ್ಳುತ್ತದೆ.

~~~~~

೧೯೧೧ನೆ ಇಸವಿಯ ಖಾನೇಷುಮಾರಿ ಪ್ರಕಾರ ಬಂಗಾಳದಲ್ಲಿ ಪ್ರತಿ ೧೦೦೦ ಗಂಡಸರಿಗೆ ೯೪೫ ಹೆಂಗಸರು ಇರುತ್ತಾರೆ. ಬಿಹಾರ, ಮದ್ರಾಸ್ ಮತ್ತು ಇಂಡ್ಯದಲ್ಲಿ ಸರಾಸರಿ ಮೇಲೆ ಗಂಡಸರಿಗಿಂತಲೂ ಹೆಂಗಸರ ಸಂಖ್ಯೆ ಹೆಚ್ಚುಂಟು.

ಇಡೀ ಇಂಡ್ಯದಲ್ಲಿ ೫ ವರುಷ ವಯಸ್ಸಿನೊಳಗಿನ ೧೭,೭೦೦ ವಿಧವೆಯರಿದ್ದಾರೆ. ಒಂದು ವರುಷದ ಒಳಗಿನ ಪ್ರಾಯದ ವಿವಾಹವಾದ ಹೆಣ್ಣುಮಕ್ಕಳು ೧೩,೩೧೨. ಒಂದು ವರುಷದ ಒಳಗಿನ ಪ್ರಾಯದ ವಿಧವೆಯರು ೧೧೧೪. ಐದು ವರುಷದ ಒಳಗಿನ ಪ್ರಾಯದ ವಿಧವೆಯರು ೧೭,೭೦೩. ಮದ್ರಾಸು ಸಂಸ್ಥಾನದಲ್ಲಿ ೫ ವರುಷದೊಳಗಿನ ಪ್ರಾಯದ ವಿಧವೆಯರು ೭೩೮. ಇಡೀ ಇಂಡ್ಯದಲ್ಲಿ ೧೦ ವರುಷಗಳ ಮೇಲೆ ೧೫ ವರುಷಗಳೊಳಗಿನ ಪ್ರಾಯದ ವಿಧವೆಯರು ೩,೨೩೦೦೦.

ನ್ಯೂಜೀಲೆಂಡಿನಲ್ಲಿ ಸರಾಸರಿ ಮರಣದ ಪ್ರಾಯವು ೬೦. ಇಂಡಿಯಾದಲ್ಲಿ ೨೩. ಇಂಡಿಯಾದಲ್ಲಿ ಮರಣದ ಸರಾಸರಿ ಪ್ರಾಯವು ಇಷ್ಟು ಕಡಿಮೆಯಾಗಲಿಕ್ಕೆ ಕಾರಣವು ಬಾಲ್ಯದಲ್ಲಿ ಮರಣಗಳು ಅತಿ ಹೆಚ್ಚಾಗಿರುವದರಿಂದಲೇ. ವಿಧವೆಗಳ ಶಾಖೆ ಇಂಡಿಯಾದಲ್ಲಿ ಅತಿ ಹೆಚ್ಚಾಗಿರುವುದಕ್ಕೆ ಬಾಲ್ಯವಿವಾಹವೇ ಕಾರಣವೆಂತ ಪ್ರತಿಸರ್ತಿಯ ಖಾನೇಷುಮಾರಿಯಲ್ಲಿ ಸರಕಾರಿ ಆಫೀಸರರ ಅಭಿಪ್ರಾಯವಾಗಿರುತ್ತದೆ. ಬಾಲವಿವಾಹ ಪದ್ಧತಿಗೆ ಕಾರಣ ಬ್ರಾಹ್ಮಣರಾದಾಗ್ಯೂ ಬಾಲವಿವಾಹಗಳು ಬ್ರಾಹ್ಮಣರಿಗಿಂತಲೂ ಶೂದ್ರರಲ್ಲಿ ಹೆಚ್ಚಾಗುತ್ತದೆ. ಆದುದರಿಂದ ಇಂಡಿಯಾದಲ್ಲಿ ಬಾಲವಿಧವೆಗಳ ಸಂಖ್ಯೆ ಏರುವುದಕ್ಕೆ ಹೆಚ್ಚಾಗಿ ಶೂದ್ರ ಜಾತಿಗಳ ಆಚರಣೆ ಕಾರಣವೆಂತ ಎನ್ಸಿ ವಿಸೆಂಟರವರು ಅಭಿಪ್ರಾಯ ಪಡುತ್ತಾರೆ.

~~~~~

ಸಹಕಾರ.

ಸರ್ಕುಲಾರು ನಂಬ್ರು ೧೩.

ಮರುಪಾವತಿಯಲ್ಲಿ ಕಂತುಗಳ ಪದ್ಧತಿ.

ಸಹಕಾರ ಸಂಘಗಳ ಲೇವಾದೇವಿಗಳಿಗೂ ಇತರ ಲೇವಾದೇವಿಗಳಿಗೂ ಇರುವ ಭೇದಾಭೇದಗಳಲ್ಲಿ ಸಂಘಗಳು ಸಾಲಗಾರರಿಗೆ ಒದಗಿಸಿಕೊಡುವ ಮರುಪಾವತಿಯ ಅನುಕೂಲತೆಯು ಮುಖ್ಯವಾಗಿದೆ. ಜನರು ತಂತಮ್ಮೊಳಗೆ ನಡೆಸುವ ವ್ಯವಹಾರಗಳಲ್ಲಿ ಒಟ್ಟನು ಒಂದಾವರ್ತಿ ಸಾಲವಾಗಿ ಪಡಕೊಂಡದ್ದನ್ನು ಮರುಪಾವತಿ ಮಾಡಬೇಕಾದರೆ, ಹೆಚ್ಚಾಗಿ ಪುನಹಾ ಸಾಲಪಡಕೊಂಡೇ ಕೊಡಬೇಕಾಗುವುದಲ್ಲದೆ ಅನ್ಯಥಾ ಆಗುವುದು ಅಪರೂಪವಾಗಿರುತ್ತದೆ. ಸಹಕಾರ ಸಂಘಗಳಲ್ಲಿ ಉಪಯೋಗಕರವಾದ ಕಾರ್ಯಗಳಿಗೆ ಮಾತ್ರ ಸಾಲ ಕೊಡಲ್ಪಡುವುದರಿಂದ, ಪಡಕೊಂಡ ಹಣವನ್ನು ಆ ಕಾರ್ಯಗಳಿಗೇನೇ ವಿನಿಯೋಗಿಸಿ, ಅವುಗಳಿಂದ ಹುಟ್ಟಿಬರುವ ಆದಾಯದಿಂದಲೇ ತೆಗೆದುಕೊಂಡ ಸಾಲವನ್ನು ಸಂದಾಯ ಮಾಡಬೇಕಲ್ಲದೆ, ಆ ಸಾಲವನ್ನು ತೀರಿಸುವುದಕ್ಕೆ ಪುನ ಸಾಲಮಾಡಬಾರದೆಂಬದು ಒಂದು ಮುಖ್ಯವಾದ ಸೂತ್ರವಾಗಿರುವುದು. ಆದುದರಿಂದ ಸಾಲಗಳನ್ನು ಸೇಂಕ್ಷನ್ ಮಾಡುವಾಗ, ಆ ಹಣದಿಂದ ಹುಟ್ಟಿಬರುವ ಲಾಭದಿಂದ ತಮ್ಮ ಸಹಜವಾದ ಖರ್ಚುಗಳನ್ನು ಕಳೆದು ಉಳಿದುದನ್ನೇ ಸಾಲದ ಸಂದಾಯವಾಗಿ ಕೊಡಲು ಸಾಲಗಾರರಿಗೆ ಅನುಕೂಲವಾಗುವಂತೆಯೇ ಶರ್ತಗಳನ್ನು ನಿರ್ಣಯಿಸಬೇಕು.

೩. ವ್ಯಾಪಾರಸ್ಥರಿಗಾಗಲಿ ತಿಂಗಳುಗಟ್ಲೆಯ ಸಂಪಾದನೆ ಇರುವವರಿಗಾಗಲಿ ತಿಂಗಳುಗಟ್ಲೆಯ ಕಂತುಗಳಿಂದಲೇ ಮರುಪಾವತಿ ಮಾಡಲು ಬಹಳ ಅನುಕೂಲವಾಗುತ್ತದೆ. ಆದುದರಿಂದ ಅಂಥವರಿಗೆ ಸಾಲಗಳನ್ನು ಸೇಂಕ್ಷನ್ ಮಾಡುವಾಗ ಅವರವರ ಸ್ಥಿತಿಗತಿಗಳಿಗನುಸಾರವಾಗಿ ತಿಂಗಳುಗಟ್ಲೆಯ ಕಂತುಗಳ ಮೇಲೆಯೇ ಸೇಂಕ್ಷನ್ ಮಾಡಬೇಕು.

೪. ಒಂದೊಂದು ಸಂಘದಲ್ಲಿ ಈ ಪದ್ಧತಿಯ ತಾತ್ಪರ್ಯವನ್ನು ಚೆನ್ನಾಗಿ ಗ್ರಹಿಸದೆ ಯಾರಿಗೆ ಯಾವ ಬಗ್ಗೆ ಸಾಲಕೊಡುವುದಾದರೂ ತಿಂಗಳುಗಟ್ಲೆಯ ಕಂತುಗಳಿಂದಲೇ ಮರುಪಾವತಿ ಮಾಡುವ ಶರ್ತಗಳನ್ನು ನಿರ್ಣಯಿಸುತ್ತಾರೆ. ಹೀಗೆ ಮಾಡುವುದು ಅನೇಕರಿಗೆ ತೊಂದರೆಯಾಗುತ್ತದೆ. ಬೇಸಾಯಗಾರರಿಗೆ ತಿಂಗಳುಗಟ್ಲೆಯ ಕಂತುಗಳಿಂದ ಕೊಡಲಿಕ್ಕೆ ಕೇವಲ ಅಸಾಧ್ಯವಾಗಿರುತ್ತದೆ. ಅಂಥವರಿಗೆ ಅವರು ಬೆಳೆಸುವ ಬೆಳೆಗಳನ್ನು ಕಟಾವುಮಾಡಿದ ಸಮಯದಲ್ಲಿ ಆದರಿಂದ ಮರುಪಾವತಿ ಮಾಡುವುದಕ್ಕೆ ತುಂಬಾ ಅನುಕೂಲವಾಗುತ್ತದೆ. ಆದುದರಿಂದ ಬೇಸಾಯಗಾರರಿಗೆ ವರುಷಾವಧಿಯ ಬೆಳೆಗಳ ಪ್ರಕಾರ ಒಂದೆರಡು ಕಂತುಗಳನ್ನು ಮಾತ್ರ ನಿರ್ಣಯಿಸಬೇಕು.

೫. ಒಟ್ಟಿನಲ್ಲಿ ಯಾವ ಸಾಲಗಳನ್ನು ಸೇಂಕ್ಷನ್ ಮಾಡಬೇಕಾದರೂ ಸಾಲಗಾರರ ಸ್ಥಿತಿ, ಗತಿ, ವೃತ್ತಿ, ಮೊದಲಾದ ಎಲ್ಲಾ ಸಂಗತಿಗಳನ್ನು ಚೆನ್ನಾಗಿ ಆಲೋಚಿಸಿ ಅವುಗಳಿಗನುಸಾರವಾಗಿ ಯೋಗ್ಯ ಮರುಪಾವತಿಯ ಅಂಶ, ವಾಯಿದೆ ಮುಂತಾದ ಶರ್ತಗಳನ್ನು ನಿರ್ಣಯಿಸಬೇಕಾಗಿರುತ್ತದೆ.

ದಕ್ಷಿಣ ಕನ್ನಡ ಸೆಂಟ್ರಲ್ ಕೋ-ಆಪರೇಟಿವ್ ಬೇಂಕ್, ಲಿಮಿಟೆಡ್, ಪುತ್ತೂರು. ತಾ. 8 – 8 – 15.

ಎಮ್. ಅನಂತರಾವ್
ಕಾರ್ಯದರ್ಶಿ.

~~~~~

ಜೀನಸು ಧಾರಣೆ. (ರಖಂ)

ಮುಸ್ಸಿ ಅಕ್ಕಿ .	5— 4—0	5—12—0
ಗಾಡಿ ರಾತಿ ,, .	4—14—0	4—15—6
ಗುಡ್ಡು ,, .	5— 0—0	5— 6—0
ಅವ್ವಲ್ ಬೆಳ್ತಿಗೆ ,, .	6— 0—0	6— 7—0
ಗುಡ್ಡು ಬೆಳ್ತಿಗೆ ,, .	5— 4—0	5— 6—0
ರಂಗೂನು ಬೆಳ್ತಿಗೆ ಗೋಣಿ ೧ರ	9— 8—0	9— 4—0
ಗೋಧಿ ಗೋಣಿ ೧ರ ...	11— 8—0	12— 0—0
ಹುರುಳಿ ಗೋಣಿ ೧ರ ...	6— 8—0	7—12—0
ಕಡಲೆ ಗೋಣಿ ೧ರ. ,, .	8— 8—0	9— 8—0
ತೊಗರಿ ಗೋಣಿ ೧ರ ...	10— 0—0	11— 8—0
ತೊಗರಿ ಬೇಳೆ ಗೋಣಿ ೧ರ .	12— 8—0	13— 0—0
ಉದ್ದು ಗೋಣಿ ೧ರ		10— 0—0
ಊರುಬೆಲ್ಲ ಖಂಡಿ ೧ರ		75— 0—0
ಉಪ್ಪು ಗೋಣಿ ೧ರ . .	3—12—0	3—14—0
ಕೊಬ್ರಿ ಖಂಡಿ ೧ರ . .	70— 0—0	75— 0—0
ಕೊಬ್ರಿ ಹಿಂಡಿ ಖಂಡಿ ೧ರ . . .		14— 0—0
ಎಳ್ಳಿಂಡಿ ಖಂಡಿ ೧ರ . .	22— 8—0	31—12—0
ಕೊಬ್ರಿ ಎಣ್ಣೆ ಮಣ ೧ರ. .	5—12—0	6— 0—0
ಎಳ್ಳೆಣ್ಣೆ ಮಣ ೧ರ (ಕುರಾಸನ)	3—12—0	3—10—0
ಚಿಮಣಿ ಎಣ್ಣೆ ಪೆಟ್ಟಿಗೆ ೧ರ .	4— 8—0	5— 0—6
ಮೋರಿಸ್ ಸಕ್ಕರೆ ಮಣ ೧ರ. . . .		4— 9—0
ಕಾಫಿ ಖಂಡಿ ೧ರ .	240— 0—0	252— 0—0
ಹೊಸಅಡಿಕೆಗೋಟು ಖಂಡಿ೧ರ.	94— 0—0	98— 0—0
ಹೊಸ ಗೇರುಬೀಜ ಮುಡಿ ೧ರ . . .		2— 4—0
ಕಬ್ಬಿಣ ಖಂಡಿ ೧ರ		50— 0—0
ಕಾಂಟ್ರ ತಗಡು ಮಣ ೧ರ. .		30— 0—0
ಕಾಂಟ್ರ ಪಾತ್ರೆಗಳು ಮಣ ೧ರ.		[illegible]— 0—0
ಚೀನಿ ಬೆಳ್ಳಿ ತೀರು ೧ರ.		
~~~~~

ಅಮೃತಾಂಜನ.

ಜಗತ್ಪ್ರಸಿದ್ಧವಾದ ಬೇನೆಹಾರಿ ಮುಲಾಮು

ರ ಉಪಯೋಗದಿಂದ —ವಾತ, ಶಿತ, ತಲೆನೋವು, ಶಿರೋಭಾರ, ಂಗ ವಾಯು, ಉಳುಕು, ಎದೆ), ಸೊಂಟದ ನೋವು, ಶೀತ, ದಂತಶೂಲೆ, ಮೂಲವ್ಯಾಧಿ, ಕಡಿತ, ಆನೆಗಾಲು, ಸುಟ್ಟ), ಮೊದಲಾದ ಎಲ್ಲಾ ತರದ ಗಳ ಮೇಲೆ ದಿವ್ಯ ಔಷಧವಾಗಿ ರುತ್ತದೆ ಸಾವಿರಾರು ಡಾಕ್ಟರರೂ, ಇದಕ್ಕೆ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ಪ್ರತಿ ತಿಂಗಳಲ್ಲೂ 25,000 ಬಾಟ್ಲಿಗಳು ಮಾರಲ್ಪಡುತ್ತವೆ ಬಾಟ್ಲಿ ಒಂದರ ಕಿಮ್ಮತು ಆಣೆ 8 ಡಜನ್ 1ಕ್ಕೆ ರೂ. 5—4—0 ವಿ ಪಿ ಖರ್ಚು ಪ್ರತ್ಯೇಕ

ಎಚ್ಚರಿಕೆ:—ಅಮೃತಾಂಜನವನ್ನು ಪಡಕೊಳ್ಳುವಾಗ ಸುಂದರವಾದ ಮತ್ತು ಹಲವು ಛಾಪೆಗಳುಳ್ಳ ಕರಡಿಗೆ ಸಮೇತ ಪಡಕೊಳ್ಳಿರಿ

ಗಜಕರ್ಣದ ಮುಲಾಮು.

ಮೂರು ಸರ್ತಿ ಹಚ್ಚುವದರೊಳಗೆ ಗಜಕರ್ಣ ನಾಶವಾಗಿ ಹೋಗುವದು ಇದರಿಂದ ಉರಿಯು ಬರುವದಿಲ್ಲ. ಚರ್ಮವು ಕಪ್ಪಾಗುವದಿಲ್ಲ. ಇದುವರೆಗೆ ಒಂದು ಮಿಲಿಯ ಡಬ್ಬಿಗಳು ಮಾರಲ್ಪಟ್ಟವು. ರಾಜಾರಾಣಿ ಟ್ರೇಡ್ ಮಾರ್ಕ 0—6—0. 12 ಡಬ್ಬಿಗಳಿಗೆ 3—8—0. ವಿ ಪಿ. ಪ್ರತ್ಯೇಕ

ದಂತಮಂಜನ.

ರಾಜಾರಾಣಿ ಟ್ರೇಡ್ ಮಾರ್ಕ

ಈ ಮಂಜನದಿಂದ ಹಲ್ಲುಗಳನ್ನು ದಿನಾಗಲೂ ತಿಕ್ಕುವದರಿಂದ ಹಲ್ಲುನೋವು, ಹಲ್ಲುಗಳಿಂದ ಬರುವ ರಕ್ತ, ಹಲ್ಲುಗಳ ವಾಸನೆ, ಮುಂತಾದವುಗಳೆಲ್ಲಾ ನಿಲ್ಲುತ್ತವೆ: ಇದರಲ್ಲಿ ಹಲವು ನಮೂನೆಯ ಔಷಧಗಳಿವೆ ಬರೀ ಚೋಕಿನ ಹುಡಿ ಅಲ್ಲ. ಡಬ್ಬಿ 1ಕ್ಕೆ 0—2—0. ವಿ. ಪಿ. ಪ್ರತ್ಯೇಕ.

ಮೋಹಿನಿ ತೈಲ.

ಬಾಲ್ಟಿಕ್ ಸಮುದ್ರದಲ್ಲಿ ರುಶ್ಶಿಯನರು ಜರ್ಮನರ ನೌಕಾಸೇನೆಯನ್ನು ಪೂರ್ಣವಾಗಿ ಸೋಲಿಸಿಬಿಟ್ಟ ವೃತ್ತಾಂತವು ಪೆಟ್ರೋಗ್ರೇಡ್ ಯುದ್ಧಸಮಾಚಾರದಲ್ಲಿ ಪ್ರಕಟಿಸಲ್ಪಟ್ಟಿರುತ್ತದೆ. ೯ ಯುದ್ಧನಾವೆಗಳು, ೧೨ ಕ್ರೂಜರ್ ಹಡಗಗಳು, ಹಲವು ಡಿಸ್ಟ್ರೋಯರ್ ನಾವೆಗಳಿಂದ ಕೂಡಿಬಂದ ಜರ್ಮನ ನೌಕಾಸೇನೆಯು ರೀಗಾಕೊಲ್ಲಿಯನ್ನು ಮುತ್ತಿಗೆ ಹಾಕಲುಪಕ್ರಮಿಸಿತು. ರೀಗಾಕೊಲ್ಲಿಯ ಪಶ್ಚಿಮ ತೀರದಲ್ಲಿ ಇಳಿಯುವ ಜರ್ಮನರ ಸೇನೆಗೆ ಸಹಾಯಾರ್ಥವಾಗಿ [illegible] ಯಾವುದಾದರೂ ಒಂದು ಬಂದರವನ್ನು ಕೈವಶಮಾಡಿಕೊಳ್ಳುವುದು ಜರ್ಮನ್ ನೌಕಾಸೇನೆಯ ಮುಖ್ಯ ಉದ್ದೇಶವಾಗಿತ್ತು. ಆದರೆ ರಿಗಾಕೊಲ್ಲಿಯ ಸಮುದ್ರದಲ್ಲಿ ರುಶ್ಶಿಯನರು ಸಿಡಿಮದ್ದಿನ ಗಣಿಗಳನ್ನು ಹಾಕಿಟ್ಟಿದ್ದರಿಂದಲೂ ಸಿಪ್ಲೇನ ಗಳೆಂಬ ಸಮುದ್ರ ವಿಮಾನಗಳ ಮೂಲಕ ಜರ್ಮನ ನಾವೆಗಳಿಗೆ ಗುರಿಹಿಡಿದು ರುಶ್ಶಿಯನ್ ನೌಕಾವಳಿಯು ಹೊಡೆದದ್ದರಿಂದಲೂ ಶತ್ರುಗಳ ಕೆಲವು ಹಡಗಗಳು ಮುಳುಗಿಹೋದವು. ರುಶ್ಶನರ ಒಂದೇ ಒಂದು ನಾವೆಯಾದರೂ ಹಾಳಾಗಲಿಲ್ಲವೆಂಬದಾಗಿ ತಿಳಿದು ಬರುತ್ತಿದೆ.

ಬೆಲ್ಜಿಯಮಿನಲ್ಲಿದ್ದ ಜರ್ಮನ ಗವರ್ನರರು ತನಗೆ ಈ ಪದವಿಯು ವಿಶೇಷ ಅಪಾಯಕರವಾಗಿ ಕಂಡು ಬಂದದ್ದರಿಂದ ಈ ಕೆಲಸಕ್ಕೆ ರಾಜೀನಾಮೆ ಕೊಟ್ಟು ಬರ್ಲಿನಿಗೆ ಬಂದಿರುತ್ತಾರೆ. ಜರ್ಮನರ ಸೇನೆಯ ಅಂದಾಜು ಎಷ್ಟಾಗಿರುವುದೆಂಬುದರ ವಿಷಯ ಕೆಲವು ತಂತೀ ವರ್ತಮಾನಗಳು ಇತ್ತಲಾಗೆ ಬಂದಿವೆ. ಪೂರ್ವ ಮತ್ತು ಪಶ್ಚಿಮ ರಣರಂಗಗಳಲ್ಲಿ ಒಟ್ಟಿಗೆ ಜರ್ಮನರ ಫೌಜು ೮ ಮಿಲಿಯವಾಗಿರುವುದು. ಈ ವರೆಗೆ ನಷ್ಟವಾಗಿ ಹೋದ ಜರ್ಮನ ಸೇನಿಕರ ಸಂಖ್ಯೆಯು ೩ ಮಿಲಿಯವಾಗಿರಬಹುದು. ೩ ಮಿಲಿಯ ಸೇನಿಕರ ಫೌಜು ತಯ್ಯಾರಿಯಲ್ಲಿದೆ. ಆದರೆ ಇದು ಅಷ್ಟು ಉತ್ಕೃಷ್ಟವಾದದ್ದಲ್ಲ.

ಅಮೇರಿಕದಲ್ಲಿರುವ ಇಟೆಲಿಯವರು ಇಟೆಲಿಗೆ ಬಂದು ಯುದ್ಧದಲ್ಲಿ ಸೇನಿಕರಾಗಿ ಸೇರದಂತೆ ಬೇಕಾದ ದುರ್ಬೋಧನೆಯನ್ನು ಕೊಡುವರೆ ಕೆಲವು ಜರ್ಮನರ ಮಿತ್ರರು ಫಿಲಿಡೆಲ್ಫಿಯದಲ್ಲಿ ಒಂದು ಸಭೆ ಸೇರಿಸಿದ್ದರು. ಅಲ್ಲಿರುವ ಇಟೆಲಿಯನರಲ್ಲಿ ಹಲವರು ಸೇರಿಕೊಂಡು ಈ ಸಭೆಯಲ್ಲಿ ಕೂಡಿದವರೆಲ್ಲರನ್ನು ಓಡಿಸಿಬಿಟ್ಟರು.

ಡ್ವಿಂಕ್ಸ್, ಸ್ಕ್ರಿಯಾನ್ ಬರ್ಗ ಮಿಟ್ಸ್ಕಿಮಿರ್ ಜಿಲ್ಲೆಗಳಲ್ಲಿ ರುಶ್ಶಿಯನರು ಜರ್ಮನರನ್ನು ಕಾದಾಡಿ ಹಿಂದಕ್ಕೆ ಓಡಿಸಿರುತ್ತಾರೆ. ನೆರೆವ್ ಬೊಮ್ಜಾ ಮೊದಲಾದ ರಣರಂಗಗಳಲ್ಲಿ ಕಠಿಣ ಕಾಳಗಗಳು ನಡಿಯುತ್ತಲಿವೆ.

ದಕ್ಷಿಣ ರಣರಂಗದಲ್ಲಿ ಇಟೆಲಿಯ ಸೇನಾನಾಯಕರಾದ ಜನರಲ್ ಕೆಡೋರ್ನಾರವರು ಬಹಳ ಜತನದಿಂದ ಯುದ್ಧವನ್ನು ನಡೆಸುತ್ತಿರುವರು. ಈ ತನಕ ಕೈವಶಮಾಡಿಕೊಂಡಿರುವ ಶತ್ರುಗಳ ಪ್ರದೇಶವನ್ನು ಭದ್ರಗೊಳಿಸಿದ ಮೇಲೆ ಯುದ್ಧದಲ್ಲಿ ಮುಂದರಿಸುತ್ತಿದ್ದಾರೆ. ಕಾರ್ಸೋದಲ್ಲಿ ಒಸ್ಟ್ರಿಯನರು ನೀರಿಲ್ಲದೆ ಬಹಳ ಕಂಗೆಟ್ಟಿರುವರು.

ಡಾರ್ಡನೆಲ್ಸ್ ಕರಾವಳಿಯಲ್ಲಿ ಬ್ರಿಟಿಷರ ಇನ್ನೊಂದು ಸೇನಾಪಾಳಯವು ಬಂದಿಳಿದಿರುತ್ತದೆ. ಸಂಬೈರ್ ಪರ್ವತದ ಕೆಲವು ಪ್ರಾಂತ್ಯಗಳನ್ನೂ ಅದರ ಶಿಖರವನ್ನೂ ಬ್ರಿಟಿಷರು ಕೈವಶಮಾಡಿಕೊಂಡಿರುವರು. ೬೩೦ ಜನ ತುರ್ಕ ಸೇನಿಕರನ್ನು ಸೆರೆಹಿಡಿದಿರುತ್ತಾರೆ.

ರಾಧನಪುರದ ನವಾಬರವರು ತನ್ನ ಪ್ರಜೆಗಳಿಂದ ಕೂಡಿಸಿದ ರೂ ೨೦೦೦ ಮತ್ತು ತಮ್ಮ ಭಂಡಾರದಿಂದ ರೂ. ೨೦೦೦ವನ್ನು ಮುಂಬಯಿ ಗವರ್ನರರ ಪತ್ನಿಯರಿಂದ ಸ್ಥಾಪಿಸಲ್ಪಟ್ಟ ಯುದ್ಧನಿವಾರಣ ಫಂಡಿಗೆ ಕಳುಹಿಸಿಕೊಟ್ಟಿರುವರು. ಉದಯಪುರದ ಮಹಾರಾಜರವರು ಒಂದು ಲಕ್ಷ ರೂಪಾಯಿಗಳನ್ನು ವ್ಯಾಸರಾಯ ಪ್ರಭುಗಳ ಯುದ್ಧ ಫಂಡಿಗೆ ಕೊಟ್ಟಿರುತ್ತಾರೆ.

ತಾ. ೧೨ನೇ ಆಗೋಸ್ತು.

"ಎಡ್ರಿಯಟಿಕ್" ಸಮುದ್ರ ಶಾಖೆಯಲ್ಲಿ ಒಸ್ಟ್ರಿಯನರ ಸಬ್‌ಮೆರೀನ ಒಂದನ್ನು ಇಟೆಲಿಯನರ ಸಬ್ ಮೆರೀನ್ ಒಂದನ್ನು ನಾಶಪಡಿಸಿರುವುದು.

ಜರ್ಮನರ ಜಲಂತರ್ಗಾಮಿ ನಾವೆಯು ಒಂದೆರಡು ಬ್ರಿಟಿಷರ ವ್ಯಾಪಾರದ ಹಡಗಗಳನ್ನೂ ನೊರ್ವೆ ದೇಶದವರ ಎರಡು ಹಡಗಗಳನ್ನೂ ಮುಳುಗಿಸಿರುವುದೆಂದು ಲಂಡನಿನಲ್ಲಿ ಪ್ರಕಟಿತವಾದ ವಾರ್ತೆಯಿಂದ ತಿಳಿದುಬರುವುದು.

~~ಜರ್ಮನ ಯುವರಾಜರ ಸೇನೆಯು ಆರ್ಗೋನ್ನೆ ಪ್ರಾಂತ್ಯ~~ಗಳಲ್ಲಿ ಮೆರಿಫೆರೆನ್ಸ್ ಮೊದಲಾದ ಇನ್ನು ಎರಡು ಕಡೆಗಳಲ್ಲಿ ಬ್ರಿಟಿಷ ದಳದ ಮೇಲ್ಬಾಯಿದು ಬರಲು ಪ್ರಯತ್ನಿಸಿತು. ಆದರೆ ಪ್ರತಿ ಒಂದು ಕಡೆಯಲ್ಲಿಯೂ ಶತ್ರುಗಳು ಪರಾಜಯವನ್ನು ಹೊಂದಿರುವರು.

ಜರ್ಮನಿ ಮತ್ತು ಒಸ್ಟ್ರಿಯ ರಾಜ್ಯಗಳು ಸಂಧಾನದ ಪ್ರಯತ್ನಗಳನ್ನು ಪೋಪ ಗುರುಗಳ ಮುಖೇನ ಮಾಡುತ್ತಿರುವರೆಂತ ಮಿಲಾನ್ ಎಂಬಲ್ಲಿಂದ ಟ್ಯಾಮ್ಸ ಪತ್ರಿಕೆಗೆ ಬಂದ ಒಂದು ತಂತೀ ವಾರ್ತೆಯಲ್ಲಿ ಪ್ರಕಟಿಸಲ್ಪಟ್ಟಿರುವುದು. ಸ್ವಿಟ್ಜರ್‌ಲೇಂಡಿನಲ್ಲಿ ಸಂಧಾನದ ಬಂದು ಸಭಾಪ್ರಾರಂಭವನ್ನು ಮಾಡುವುದರಲ್ಲಿ ಮೂರು ಜನ ಅಮೇರಿಕನ್ ಕಾರ್ಡಿನಲ್ಸ್‌ಗಳು ಪೋಪ ಗುರುಗಳ ಅಪ್ಪಣೆಯನ್ನು ಪಡೆಕೊಂಡಿರುತ್ತಾರೆಂತ ರೋಮ ಪಟ್ಟಣದ ವೃತ್ತಾಂತದಲ್ಲಿದೆ.

ಮದ್ದು, ಕೋಟಿ ಇತ್ಯಾದಿಗಳ ಸಂಗ್ರಹಗಳು ಬ್ರಿಟಿಷ ಸೇನೆಯ ಬಗ್ಗೆ ಯಾವ ರೀತಿ ಆಗುತ್ತವೆಂದು ಒಬ್ಬ ಪತ್ರ ಪ್ರತಿನಿಧಿಗಳು ಲೋಯಿಡ್ ಜೋರ್ಜರವರಿಂದ ತಿಳಕೊಂಡಿರುತ್ತಾರೆ. ಕಳೆದ ಸಪ್ಟಂಬರ ತಿಂಗಳಲ್ಲಿ ಆದ ಸಂಗ್ರಹದ ೫೦ ಪಾಲಷ್ಟು ಸಂಗ್ರಹವು ಇದೇ ಕಳೆದ ಜುಲಾಯಿ ತಿಂಗಳಲ್ಲಿ ಸಿದ್ಧವಾಗಿರುವುದು. ಬರುವ ಸಪ್ಟಂಬರ ತಿಂಗಳಲ್ಲಿ ಇದರ ನೂರು ಪಾಲಷ್ಟು ತಯ್ಯಾರಾಗುವುದು. ಯುದ್ಧ ರಂಗದಲ್ಲಿ ಸೇರಿದ ಈ ಕೆಲಸ ಜಾಣರಲ್ಲಿ ೧೨ ಸಾವಿರ ಜನರನ್ನು ಈ ಬಗ್ಗೆ ಹಿಂದಕ್ಕೆ ಕರೆದಿರುವರು.

ಪೂರ್ವರಣರಂಗದಲ್ಲಿ ಕೊವ್ನೊ ಪಟ್ಟಣವನ್ನು ನಿವಾಸಿಗಳು ಬಿಟ್ಟು ತೆರಳುತ್ತಿರುವರು. ಶತ್ರುಗಳು ಈ ಪಟ್ಟಣದ ಆರು ಮೈಲುಗಳ ದೂರದಲ್ಲಿ ಬಂದಿರುತ್ತಾರೆ. ಜರ್ಮನ್ ವಾಯುನಾವೆಗಳು ರಿಗಾಪಟ್ಟಣದ ಮೇಲೆ ಪ್ರತಿನಿತ್ಯದಲ್ಲಿಯೂ ಸಂಚರಿಸುತ್ತಿವೆ. ಕಳೆದ ಸೋಮವಾರ ರಾತ್ರಿ ಮತ್ತು ಮಂಗಳವಾರ ಜರ್ಮನರು ಕೊವ್ನೊ ಪಟ್ಟಣದ ಪಶ್ಚಿಮ ದಿಕ್ಕಿನ ಕೋಟಿ ಕೊತ್ತಲುಗಳ ಮೇಲೆ ದಾಳಿಡಲು ಮುಂದೊತ್ತಿ ಬಂದರು. ರುಶ್ಶಿಯನರು ಇವರನ್ನು ಎದುರಾಡಿ ಜರ್ಮನರ ೩ ಸೇನಾಪಾಳಯಗಳನ್ನು ನಾಶಮಾಡಿದ್ದಲ್ಲದೆ ೧೦೦೦ ಜನ ಜರ್ಮನ್ ಸೇನಿಕರನ್ನೂ ಕೆಲವು ದೊಡ್ಡ ತೋಪಿಗಳನ್ನೂ ಹಿಡಿದಿರುತ್ತಾರೆ. ಬಗ್ ನದಿಯ ಮುಂದಿನ ರಣಾಂಗಣದಲ್ಲಿ ಬಹಳ ಕಠಿಣ ಕಾಳಗಗಳು ನಡಿಯುತ್ತವೆ. ರುಶ್ಶಿಯನರ ಬೆಂಬಲಕ್ಕೆ ಇಲ್ಲಿ ಹೊಸ ಸೇನೆಗಳು ಬಂದು ಕೂಡಿವೆ. ಒಸ್ಟ್ರೊಲೆಂಕಾ, ರೋಜಾನ್, ಮತ್ತು ಪುತುಸ್ಕ ಪ್ರಾಂತ್ಯಗಳಲ್ಲಿ ಜರ್ಮನರ ಸೇನೆಯು ರುಶ್ಶಿಯನರನ್ನು ಯುದ್ಧಕ್ಕೆ ಕೆಣಕಿಸುತ್ತಿರುವದು.

ಕೌಕಾಸ್ಸ ಪ್ರಾಂತ್ಯಗಳಲ್ಲಿ ಮೆರ್ಗಮಿರ್ ಕಣಿವೆಯನ್ನು ಅಧೀನ ಮಾಡಿಕೊಳ್ಳುವದೆ ರುಶ್ಶಿಯನರಿಗೂ ತುರ್ಕರಿಗೂ ಬಹಳ ಕಡಿದಾಟ ನಡೆಯಿತು. ಈ ಕಣಿವೆಯಿಂದ ತುರ್ಕರು ರುಶ್ಶಿಯನರ ಕೂಡೆ ಕಾದಾಡಲು ಅಶಕ್ತರಾಗಿ ಚೆಲ್ಲಾಪಿಲ್ಲಿಯಾಗಿ ಓಡಿಹೋದರು.

ವಾರ್ಸೋದಲ್ಲಿ ಜರ್ಮನರ ಪ್ರಿನ್ಸ್ ಲಿಯೊಪೋಲ್ಡ್‌ರು ಶತ್ರು ಸೇನೆಯ ಕೂಡೆ ಕಾದಾಡುವೆವಲ್ಲದೆ ನಿವಾಸಿಕರ ಮೇಲೆ ತಾವು ಯುದ್ಧ ನಡಿಸುವದಿಲ್ಲವೆಂತ ಸಾರಿರುತ್ತಾರೆ. ವಾರ್ಸೋದ ನಿವಾಸಿಕರು ರುಶ್ಶಿಯನರಿಗೆ ಯಾವರೀತಿಯಲ್ಲಾದರೂ ಸಹಾಯಮಾಡದಂತೆ ಕೆಲವು ವಾರ್ಸೋದ ಪ್ರಮುಖ ನಿವಾಸಿಕರನ್ನು ಒತ್ತೆಯಾಗಿ ತಮ್ಮ ವಶ ಇಟ್ಟುಕೊಂಡಿರುವರು.

ಸರ್ವಿಯಾ ಮತ್ತು ರುಮೇನಿಯಾ ಸರಹದ್ದುಗಳ ಸಮೀಪ ಜರ್ಮನರ ಒಂದು ಲಕ್ಷ ಸೇನೆಯು ಸಿದ್ಧವಾಗಿ ನಿಂತಿದೆ. ಸರ್ವಿಯಾದ ಮೇಲೆ ಬೇಗನೆ ದಾಳಿಹಿಡಿದು ಬರುವರೆಂಬ ವರ್ತಮಾನವಿದೆ.

ಕನ್ಸಟಿಂಟಿನೋಪಲ್ ಮತ್ತು ಡಾರ್ಡನೆಲ್ಸ ಇವುಗಳ ಮಧ್ಯ ಟರ್ಕಿಗೆ ಸಮುದ್ರ ವ್ಯಾಪಾರವು ಬ್ರಿಟಿಷ ಸಬ್‌ಮರೀನ್‌ಗಳಿಂದ ಪೂರ್ಣ ಅಸಾಧ್ಯವಾಗಿ ಹೋಗಿದೆಂತಲೂ ಕೊಳ್ಳುವೆಂಬ ರೈಲ್ವೆ ಸ್ಟೇಶನಿಗೆ ಸಾಗಿಸಿ ಎಲ್ಲಾ ಸಾಮಾಗ್ರಿಗಳನ್ನು ಅಲ್ಲಿಂದ ಭೂಮಾರ್ಗವಾಗಿ ಒಯ್ಯಬೇಕಾಗಿದೆ ಎಂತಲೂ ಪಾಯೊನಿಯರ್ ಪತ್ರಕ್ಕೆ ಲಂಡನಿನಿಂದ ವಾರ್ತೆ ಬಂದಿರುವುದು.

ತಾ. ೧೩ನೇ ಆಗೋಸ್ತು.

ನೋರ್ತಸಿ ಉಪಸಾಗರದಲ್ಲಿ ಪಹರೆಯನ್ನು ಮಾಡುತ್ತಿದ್ದ ಇಂಡಿಯಾ ಎಂಬ ಯುದ್ಧನಾವೆಯು ಟೋರ್ಪೆಡೋ ಬಡಿತದಿಂದ ಮುಳುಗಿಹೋಗಿದೆ. ೨೨ ಜನ ಆಫೀಸರರೂ ೧೧೯ ಜನ ಇತರ ಜನರೂ ಈ ನಾವೆಯಿಂದ ರಕ್ಷಿಸಲ್ಪಟ್ಟಿರುತ್ತಾರೆ.

'ಬ್ಲೇಕ್'ಸಿ ಸಮುದ್ರ ಶಾಖೆಯಲ್ಲಿ ರುಶ್ಶಿಯನರು ಕಲ್ಲಿದ್ದಲು ತುಂಬಿದ್ದ ೩ ಹಡಗಗಳನ್ನು ಜರ್ಮನರ ಇನ್ನೊಂದು ಹಡಗವನ್ನು ಮುಳುಗಿಸಿಬಿಟ್ಟಿರುವರು. ಒಸ್ಟ್ರಿಯದ ಜಲಾಂತರ್ಗಾಮಿ ನಾವೆಯು ಎಡ್ರಿಯಟಿಕ್ ಸಮುದ್ರದಲ್ಲಿ ಇಟೆಲಿಯನರಿಂದ ನಾಶಮಾಡಲ್ಪಟ್ಟಿತು.

ಅಮೇರಿಕದ ಒಂದು ಸಾವಿರ ಆಕಾಶನಾವೆಗಳು ಫ್ರೆಂಚರಿಗೆ ಉಚಿತವಾಗಿ ಅಮೇರಿಕದವರಿಂದ ಕೊಡೋಣಾಗುವದೆಂತ "ನ್ಯೂಯೋರ್ಕ ವರ್ಲಡ್" ಎಂಬ ಪತ್ರದಲ್ಲಿ ಪ್ರಕಟಿಸಲ್ಪಟ್ಟಿರುವುದು.

ಪೂರ್ವ ರಣರಂಗದಲ್ಲಿ ಡ್ವಿನ್ಸ್ಕ ಪಟ್ಟಣವನ್ನು ನಿವಾಸಿಗಳು ಬಿಟ್ಟು ಹೋಗುತ್ತಿರುವರು. [illegible]

ಸೇನಾಪಾಳಯಗಳು ಪರಾಜಯ ಹೊಂದುತ್ತಲಿವೆ. ಪೂರ್ವ ರಣರಂಗದ ಇತರ ಪ್ರಾಂತ್ಯಗಳಲ್ಲಿ ಸಹ ಕಾಳಗಗಳ ತೀಕ್ಷ್ಣತೆಯು ಒಂದಿಷ್ಟಾದರೂ ಕಡಮೆಯಾಗಿರದು. ಪೆಟ್ರೋಗ್ರೇಡಿಗೆ ಅಪಾಯವೇನೂ ಇರದೆಂಬುದನ್ನು ಸೂಚಿಸಿ ರುಶ್ಯಯನರ ಸರಕಾರದ ಒಂದು ಪತ್ರವು ಪ್ರಕಟಿಸಲ್ಪಟ್ಟಿರುವುದು. ಡ್ಯೂಮಾಸಭೆಯ ಸೂಚನೆಗನುಗುಣವಾಗಿ ರುಶ್ಯಯನರ ಸೇನೆಗೆ ಮದ್ದಿನ ಸರಬರಾಯಿಯು ತಕ್ಕ ರೀತಿಯಲ್ಲಿದೆಯೋ ಎಂಬ ಸಂಗತಿಯನ್ನು ತಿಳಕೊಳ್ಳಲಿಕ್ಕೆ ಒಂದು ಕಮಿಟಿಯು ಏರ್ಪಡಿಸಲ್ಪಟ್ಟಿರುವುದು.

ತುರ್ಕರ ಮತ್ತು ಜರ್ಮನರೊಳಗಣ ಅಸಮಾಧಾನವು ದಿನೆ ದಿನೆ ಹೆಚ್ಚುತ್ತಿರುವುದೆಂತಲೂ ತುರ್ಕರಿಗೆ ಯುದ್ಧದಲ್ಲಿ ಬೇಸರ ಉಂಟಾಗಿದೆಂದೂ ತಿಳಿದ ಬರುತ್ತದೆ.

ತಾ. ೧೪, ೧೫ನೇ ಆಗೋಸ್ತು.

ಬೊಳ್ಟಿಕ್ ಸಮುದ್ರದ ಒಸ್ಲೆಲ್ ಎಂಬಲ್ಲಿ ರುಶ್ಯಯನರ ನೌಕಾವಳಿಯು ಒಂದು ದೊಡ್ಡ ಜರ್ಮನ್ ಕ್ರೂಜರನ್ನೂ ಇನ್ನು ಕೆಲವು ಯುದ್ಧನಾವೆಗಳನ್ನೂ ನಾಶಮಾಡಿತು. ಫ್ರೆಂಚರ ಸಬ್‌ಮೆರೀನ್ ನಾವೆಯು ಏಡ್ರಿಯಟಿಕ್ ಸಮುದ್ರವನ್ನು ಪ್ರವೇಶಿಸಿ ಹಲವು ಮದ್ದಿನ ಸುರಂಗಗಳನ್ನು ಹಾಳುಮಾಡಿರುವುದು.

ಪಶ್ಚಿಮ ರಣರಂಗದಲ್ಲಿ ವಿಶೇಷವೇನೂ ಸಂಭವಿಸಿದ್ದಿಲ್ಲ. ೧೯ ವಾಯುವಿಮಾನಗಳು ಸ್ಕೂಡಾ ಮೈದಾನಿನಲ್ಲಿ ಜರ್ಮನರ ರಾಣ್ಯಗಳ ಮೇಲೆ ಹೋಗಿ ಸಿಡಿಮದ್ದಿನ ಕೋಟೆಗಳನ್ನು ಹಾಕಿದವು.

ಫ್ರಾನ್ಸಿನಲ್ಲಿ ಗೋಧಿ ಮೊದಲಾದವುಗಳ ಬೆಳೆಗಳು ತೃಪ್ತಿಕರವಾದ ರೀತಿಯಲ್ಲಿವೆ ಎಂತ ತಿಳಿದು ಬರುತ್ತದೆ.

ಪೂರ್ವ ರಣರಂಗದಲ್ಲಿ ರುಶ್ಯಯನರು ಶತ್ರುಗಳ ಮೇಲ್ಮೆಯು ಬರುವದನ್ನು ಆಟೋಪಿಸಿಕೊಂಡು ತಮ್ಮ ಸೇನೆಯ ಹೊಸ ನೆಲೆಯ ವ್ಯವಸ್ಥೆಯನ್ನು ಪೂರ್ಣಗೊಳಿಸುತ್ತಿದ್ದಾರೆ. ರೀಗಾದ ಸುತ್ತಲೂ ವಿಶೇಷವಾಗಿ ಕಾಳಗಗಳು ನಡಿಯುತ್ತಿವೆ.

ಕೌಕಾಸ್ಯ ಪ್ರಾಂತ್ಯಗಳಲ್ಲಿ ಜರ್ಮನರ ತುರ್ಕರನ್ನು ಸೋಲಿಸಿಬಿಟ್ಟಿರುವರು. ಯುಫ್ರೆಟಿಸ್ ಪ್ರದೇಶಗಳಲ್ಲಿ ಜರ್ಮನರ ಒಂದು ಸೇನಾಪಾಳಯವು ತುರ್ಕರನ್ನು ಓಡಿಸಿಕೊಂಡು ಹೋಗಿ ೧೧೭೩ ಜನ ಸೇನಿಕರನ್ನೂ ೧೯ ಜನ ಆಫೀಸರರನ್ನೂ ಸೆರೆಹಿಡಿದಿರುವುದು. ಅನೇಕ ಫಿರಂಗಿಗಳಲ್ಲಿ ತುಂಬಿದ್ದ ಇವರ ಯುದ್ಧಸಾಮಾಗ್ರಿಗಳು ರುಶ್ಯಯನರಿಗೆ ದೊರಕಿರುತ್ತವೆ.

೪೬ ಮಿಲಿಯ ಪವನುಗಳ ಮೌಲ್ಯದ ಯುದ್ಧಸಾಮಾಗ್ರಿಗಳನ್ನು ತಯಾರಿಸಲು ಕೆನಡಾ ದೇಶಕ್ಕೆ ಬ್ರಿಟಿಷರ ಆಜ್ಞೆಯಾಗಿದೆ.

ಜರ್ಮನ ಕೈಸರರ ಖಜಾನಾ ಮಂತ್ರಿಗಳಾದ ಡಾಕ್ಟರ್ ಹೋಲ್‌ವೆಗ್‌ರವರು ತಮ್ಮ ಕೆಲಸಕ್ಕೆ ರಾಜೀನಾಮೆ ಕೊಡುವರೆಂತಲೂ ಇವರ ಬದಲಿಗೆ ಬೆಲ್ಜಿಯಮಿನಲ್ಲಿ ಗವರ್ನರರಾಗಿದ್ದ ವೊನ್ ಬಿಸಿಂಗ್‌ರವರು ಖಜಾನಾ ಮಂತ್ರಿಗಳಾಗಿ ನೇಮಿಸಲ್ಪಡುವರೆಂತಲೂ ವಾರ್ತೆ ಇದೆ.

ಡಾರ್ಡನಲ್ಸ್ ಬಳಿಯ ಕಾಳಗಗಳ ಸಮಾಚಾರದಲ್ಲಿ ಚಿಪ್ಪು ಹಟ್ಟಿದ ಜರ್ಮನರ ಕಾರ್ಖಾನೆಯನ್ನು ಗುಂಡುಹೊಡೆದು ನಾಶಮಾಡಿತೆಂಬ ವೃತ್ತಾಂತ ಇರುವುದು.

ಉತ್ತರ ಹಿಂದೂಸ್ಥಾನ.

ಚೊಕ್ವಾಲ್ ಎಂಬಲ್ಲಿ ವಕೀಲರ ವಾಚನ ಗ್ರಹದಲ್ಲಿ ಸಂಗ್ರಹಿಸಿಟ್ಟ ಹಾಲನ್ನು ವಕೀಲರು ಕೂಡಿದೊಡನೆ ಕುಡಿದವರೆಲ್ಲರಿಗೂ ಕೂಡಲೆ ವಿಶೇಷ ಬೇನೆಯುಂಟಾಗಿ ಸಕಾಲದಲ್ಲಿಯೇ ಒಳ್ಳೇ ಚಿಕಿತ್ಸೆ ಮಾಡಿದ್ದರಿಂದ ಎಲ್ಲರೂ ಗುಣಹೊಂದಿದರೆಂಬದಾಗಿ ತಿಳಿದುಬರುತ್ತದೆ.

ಪಂಜಾಬಿನಲ್ಲಿ ದರೋಡೆ ಕಳವಿನ ಹಲವು ಮೊಕದ್ದಮೆಗಳಲ್ಲಿ ತಪ್ಪಿಗೆ ಗುರಿಮಾಡಲ್ಪಟ್ಟ ೪೧೮೫ ಜನರಲ್ಲಿ ೭೮೫ ಜನರು ಮಾತ್ರ ಶಿಕ್ಷೆ ಹೊಂದಿರುವರು. ೩೩೦೭ ಜನರನ್ನು ತಪ್ಪಿತಸ್ಥರಲ್ಲ ಅಥವಾ ತಕ್ಕ ರುಜುವಾತ್ತಿಲ್ಲ ಎಂಬ ಸಬಬಿನ ಮೇಲೆ ಬಿಟ್ಟಿರುತ್ತಾರೆ. ಇನ್ನು ೯೩ ಜನರ ಮೇಲಣ ಮೊಕದ್ದಮೆಗಳು ವಿಚಾರಣೆ ಬಗ್ಗೆ ಬಾಕಿ ಇವೆ.

ಕೆಲವು ವಾರಗಳ ಹಿಂದಿನಿಂದ ಹಿಂದೂಸ್ಥಾನದಲ್ಲಿ ಪ್ಲೇಗು ಬಾಧೆಯಿಂದ ಉಂಟಾಗುತ್ತಿದ್ದ ಮರಣಗಳು ಕಡಿಮೆಯಾಗುತ್ತ ಬರುತ್ತಿದ್ದವಾದರೂ ಇತ್ತಲಾಗೆ ಇವುಗಳ ಸಂಖ್ಯೆ ಅಧಿಕವಾಗುತ್ತ ಬರುತ್ತಲಿದೆ. ಈ ತಿಂಗಳ ತಾ. ೭ಕ್ಕೆ ಅಂತ್ಯವಾಗುವ ವಾರದಲ್ಲಿ ಒಟ್ಟಿಗೆ ೫೫೫ ಮರಣಗಳಿದ್ದವು.

ಮುಂಬಯಿ ಯೂನಿವರ್ಸಿಟಿ ಪರೀಕ್ಷೆಗಳಲ್ಲಿ ಪಾಸಾದ ಸ್ತ್ರೀಯರ ಸನ್ಮಾನಾರ್ಥವಾಗಿ ಮುಂಬಯಿಯಲ್ಲಿ ಒಂದು ಸಭೆಯು ಕೂಡಿತ್ತು. ಸರ್ ನಾರಾಯಣ ಚಂದಾವರಕಾರರವರು ಈ ಸಭೆಯ ಅಧ್ಯಕ್ಷರಾಗಿದ್ದರು. ಸ್ತ್ರೀ ಶಿಕ್ಷಣದ ಬೆಳವಣಿಗೆಯ ವೃತ್ತಾಂತವನ್ನು ಚಂದಾವರಕಾರರವರು ಸಭಿಕರಿಗೆ ವಿವರವಾಗಿ ಹೇಳಿದರು. ಮುಂಬಯಿ ಯೂನಿವರ್ಸಿಟಿಯ ಪರೀಕ್ಷೆಗಳಲ್ಲಿ ಪಾಸಾದ ಸ್ತ್ರೀಯರಲ್ಲಿ ಒಬ್ಬರು ಎಮ್ ಎ ಆರು ಜನರು ಬಿ ಎ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ೩೬ ಜನರು ಪ್ರಕೃತ ಇರುವದಾಗಿ ತಿಳಿಯುತ್ತೇವೆ.

ಕೊಂಗ್ರೆಸು ಸಭೆಯ ೯ ಸಂಸ್ಥಾನಿಕ ಕಮಿಟಿಗಳಲ್ಲಿ ೫ ಕಮಿಟಿಗಳು ಸರ್ ಎಸ್. ಪಿ. ಸಿಂಹರವರನ್ನು ಈ ವರುಷದ ಕೊಂಗ್ರೆಸು ಸಭೆಯ ಅಧ್ಯಕ್ಷರನ್ನಾಗಿ ಚುನಾಯಿಸಬೇಕೆಂತ ಸೂಚಿಸಿರುವವು.

ಹಿಂದೂ ವಿಧವೆಯರ ಬಗ್ಗೆ ಒಂದು ಶಾಲೆಯನ್ನೂ ಒಂದು ಅನಾಥ ಗೃಹವನ್ನೂ ಸ್ಥಾಪಿಸಿ ನಡಿಸಲು ಮಥುರಾ ಜಿಲ್ಲೆಯ ಕಿಶೋರ್‌ಲಾಲ್ ಖಾತ್ರಿ ಎಂಬವರು ಒಂದು ಲಕ್ಷ್ಯ ನಾಲ್ವತ್ತು ಸಾವಿರ ರೂಪಾಯಿಗಳನ್ನು ದಾನವಾಗಿ ಕೊಟ್ಟಿರುತ್ತಾರೆ.

ದಕ್ಷಿಣ ಹಿಂದೂಸ್ಥಾನ.

ಇದೇ ತಿಂಗಳ ೧೫ನೆ ತಾರೀಕಿಗೆ ಮದ್ರಾಸಿನಲ್ಲಿ ಹಿಂದು ಸುಧಾರಕ ಸಂಘದ ಸಭೆ ಕೂಡಿತು. ಸುಧಾರಣೆಯ ಪ್ರಾಮುಖ್ಯ ಕಾರ್ಯವೇನೆಂಬದರ ಕುರಿತು ಮಿ. ಗೋವಿಂದ ಮಾರರ್‌ರವರು ಭಾಷಣ ಮಾಡುವಾಗ ಹಿಂದುಗಳು ಒಂದು ಜನಾಂಗವೆನ್ನಿಸಿಕೊಳ್ಳಬೇಕಾದರೆ ಅಂತ್ಯಜರ ಉದ್ಧರಣೆ ಅತ್ಯಾಗತ್ಯ ಕಾರ್ಯವೆಂತ ಹೇಳಿದರು. ವಿದ್ಯಾದಾನವೇ ಅಂತ್ಯಜರ ಉದ್ಧರಣೆಯ ಉಪಾಯವೆಂತಲೂ, ಇಂತಹ ಉದ್ಧರಣೆ ಕಾರ್ಯ ಗವರ್ನಮೆಂಟಿನವರು ಅಗತ್ಯವಾಗಿ ಮಾಡಬೇಕಾದುದೆಂತಲೂ ಪ್ರೊಫೆಸರ ಲಕ್ಷ್ಮೀನರಸುಗಳು ಹೇಳಿದರು. ಜಾತಿಭೇದವೇ ಹಿಂದುಗಳ ದುರ್ಗತಿಗೆ ಕಾರಣವಾಯಿತೆಂತ ಪಿ. ಸೋಮಸುಂದರ ಪಿಳ್ಳೆಯವರು ಹೇಳಿದರು. ಸುಧಾರಣೆ ಬುದ್ಧಿ ದೇಶವಾತ್ಸಲ್ಯದಿಂದ ಉಂಟಾಗುವಂಥಾದ್ದೆಂತಲೂ, ಜಾತಿಭೇದವೆಂಬ ಪದ್ಧತಿ ಹಿಂದುಗಳ ದುರ್ಗತಿಗೆ ಕಾರಣವಾಯಿತೆಂತಲೂ, ಅಂತ್ಯಜರ ಉದ್ಧರಣೆಯು ಇಂಡಿಯದ ಏಳಿಗೆಗೆ ಅತ್ಯಾಗತ್ಯವೆಂತಲೂ, ಅಂತ್ಯಜರ ಉದ್ಧರಣೆ ಹೇಗೆ ಆಗುವುದೋ ಹಾಗೆ ಸಹಜವಾಗಿಯೇ ಜಾತಿಭೇದದ ಬಾಧೆಯು ತಗ್ಗುತ್ತಲೇ ಬರುವುದೆಂತಲೂ ಪರಂತು ಅಂತ್ಯಜರ ಉದ್ಧರಣೆ ಮಾಡುವುದಕ್ಕೆ ಹಿಂದುಗಳ ಮಧ್ಯ ದೇಶವಾತ್ಸಲ್ಯವಿರುವ ಜನರು ಇಲ್ಲದಿರುವುದು ಪಶ್ಚಾತ್ತಾಪಕರವೆಂತಲೂ ಅಧ್ಯಕ್ಷರಾದ ಮಿ. ಯಸ್. ಶ್ರೀನಿವಾಸ ಐಯಂಗಾರರು ಹೇಳಿದರು.

ಶ್ರಾವಣಕೂರಿನಲ್ಲಿ ಜನರು ಹೊಲೆಯರ ಗುಡಿಸಲುಗಳನ್ನು ಸುಟ್ಟು ಹಾಕಿ ದೊಂಬಿ ತಕ್ಸೀರು ಮಾಡಿದ ಕಾರಣ ಡಿಸ್ಟ್ರಿಕ್ಟ ಮೇಜಿಸ್ಟ್ರೇಟ ಕೋರ್ಟಿನಲ್ಲಿ ೨ ಮೊಕದ್ದಮೆಗಳಾದವು. ಈ ಎರಡು ಮೊಕದ್ದಮೆಗಳನ್ನು ಡಿಸ್ಟ್ರಿಕ್ಟ ಮತ್ತು ಸೆಶನ್ಸ್ ಜಡ್ಜ ಮಿ. ರಾಮನ್ ತಂಪಿರವರು ತನಿಖೆ ಮಾಡಿ ಪೋಲಿಸ್ ಆಫೀಸರರ ನಡತೆಯು ಬಹಳ ಆಕ್ಷೇಪಕರದ್ದಾಗಿದೆಂತಲೂ, ನಯಂಟಿಕುಂದ ಮೇಜಿಸ್ಟ್ರೇಟರು ದೊಂಬಿಗಳು ನಡದ ಸ್ಥಳಕ್ಕೆ ಹೋದಾಗ ಕೆಲವು ಮಂದಿ ಹೊಲೆಯರನ್ನೇ ಪೋಲಿಸಿನವರು ಕೈದುಮಾಡಿದ್ದನ್ನು ಆ ಮೇಜಿಸ್ಟ್ರೇಟರು ಸ್ವತಃ ನೋಡಿರುತ್ತಾ ಹೊಲೆಯರ ಫಿರ್ಯಾದು ಸುಳ್ಳೆಂತ ಪೋಲಿಸ್ ಆಫೀಸರರು ರಿಪೋರ್ಟು ಮಾಡಿದರೆಂತಲೂ, ಪೋಲಿಸ್ ಆಫೀಸರರನ್ನು ದೂಷಿಸಿ ಜಜ್‌ಮೆಂಟು ಕೊಟ್ಟಿದ್ದಾರಾಗಿ ಇದೇ ತಿಂಗಳ ೧೩ನೆ ತಾರೀಕಿನ ನ್ಯೂ ಇಂಡಿಯಾ ವರ್ತಮಾನ ಪತ್ರದಿಂದ ತೋರುತ್ತದೆ.

ದಕ್ಷಿಣ ಕನ್ನಡ.

ಉಡುಪಿ: — ಮಳೆ ಇಲ್ಲ, ಮಳೆಯೇ ಇಲ್ಲ. ಈ ತಾರೀಕು ೫ರಿಂದ ಸುತರಾಂ ಮಳೆ ಇಲ್ಲ. ಯಾರ ಕೂಡೆ ಹೇಳುವದು? ಏನು ಮಾಡುವದು? ಒಡೆದು ಭಾಗ ಭಾಗವಾಗಿರುವ ಗದ್ದೆ ಅಂಚಿನಲ್ಲಿ ಕೂತುಕೊಂಡು ಕಣ್ಣೀರು ಸುರಿಸುತ್ತಿರುವ ಕಾರ್ಷಕರ ಗೋಳಿಗೆ ಪಾರವೇ ಇಲ್ಲ. ಆಯಾ ದೇವಾಲಯಗಳಲ್ಲಿ ಅಭಿಷೇಕಗಳು, ಜಲಜಪ ವರುಣ ಜಪಗಳು ಬ್ರಾಹ್ಮಣರಿಂದ ಯಾತಕ್ಕೆ ನಡಿಸಲ್ಪಡುವದಿಲ್ಲ? ಆ ಮಂತ್ರಗಳ ಸಿದ್ಧಿ ಇಲ್ಲ, ಶ್ರದ್ಧೆ ಇಲ್ಲ. ಆಚಾರವಿಲ್ಲ, ಫಲವಿಲ್ಲ.

ಶ್ರೀ ಪೇಜಾವರ ಶ್ರೀಪಾದಂಗಳವರು ಶ್ರೀಬದರೀ ನಾರಾಯಣ ಕ್ಷೇತ್ರಕ್ಕೆ ಪರಿವಾರ ಸಹಿತವಾಗಿ ಈ ತಾ. ೧೩ಕ್ಕೆ ತಲಪಿದರಾಗಿ ತಂತೀ ವಾರ್ತೆ ಬಂದಿರುವದು.

ಕಟಪಾಡಿ: — ಇದೇ ತಿಂಗಳ ತಾ. ೧೦ನೇ ಬೃಹಸ್ಪತಿವಾರ ದಿವಸ ನಮ್ಮೂರಲ್ಲಿ ಶ್ರೀ ವೆಂಕಟರಮಣ ಟೆಂಪಲ್ ಸ್ಕೂಲು (Sri Venkataramana temple School) ಎಂಬ ನಾಮಧೇಯದಿಂದ ಪುನರ್ಜನ್ಮವೆತ್ತಿದ ಶಾಲೆಗೋಸ್ಕರ ಒಂದು ಹೊಸ ಕಟ್ಟೋಣದ ಮುಹೂರ್ತವು ಆದದ್ದು ನಮ್ಮೂರ ಮಕ್ಕಳ ವಿದ್ಯಾಭಿವೃದ್ಧಿಯ ಏಳಿಗೆಗೆ ಕಾರಣವಾಗಿದೆ. ಕ್ವಾ ರ್ಟೆಂಜಿನ ಶಾಲಾ ಸ. ಅ. ಇನ್ಸ್‌ಪೆಕ್ಟರವರಾದ ಮ. ರಾ. ಉ. ಮಂಗೇಶರಾಯರ ಸುಬೋಧನೆಯಿಂದಲೂ, ಹ್ಯಾಕೋರ್ಟು ವಕೀಲ ಮ. ರಾ. ಪಿ. ಪಾಂಡುರಂಗನ್ನಾಕರವರ ದಿವ್ಯಾಲೋಚನೆಯಿಂದಲೂ ಪ್ರಾರಂಭಿಸೋಣಾದ ಈ ಕಾರ್ಯವನ್ನು ಮ. ರಾ. ಪಿ. ವೈಕುಂಠನ್ನಾಕರವರ ಮತ್ತು ರಾ. ಶ್ರೀನಿವಾಸನ್ನಾಕರವರ ಉದಾರ ಚಿತ್ತದ ಮಹತ್ವದಿಂದ ಸಾಗುತ್ತಿರುವ ಈ ಸತ್ಕಾರ್ಯಕ್ಕೆ ಊರವರೆಲ್ಲರೂ ಸಹಾಯ ಮಾಡುವದು ಸಂತೋಷಕರವಾದ ಕೆಲಸವಲ್ಲವೇ?

ಮಟ್ಟುಶಾಲೆಯಲ್ಲಿ ಇದೇ ಕಳದ ವರುಷಾವಧಿ ಪರೀಕ್ಷೆಯಲ್ಲಿ ಪರೀಕ್ಷಾಕರ್ತರು ಶಾಲಾ ಮಕ್ಕಳ ಸಂಖ್ಯೆಯು ಶಾಲೆಯಲ್ಲಿರುವ ಉಪಾಧ್ಯಾಯರ ಸಂಖ್ಯೆಗೆ ಹೇಳಾಗುವಲ್ಲದ್ದರಿಂದ ಆ ಮಕ್ಕಳ ಅಭಿವೃದ್ಧಿಯು ತೀರಾ ಹೀನಸ್ಥಿತಿಯಲ್ಲಿರುವದರಿಂದ ಸರಕಾರದಿಂದ ಸಿಕ್ಕುವ ಸಹಾಯ ದ್ರವ್ಯವು ಬಹಳ ಕಡಿಮೆ ದರದಲ್ಲಿ ಸಿಕ್ಕುವಂತೆ ಸಿಫಾರಸು ಮಾಡಲ್ಪಡುವದು ಎಂಬ ರಿಪೋರ್ಟು

ಹಾಗೂ ಉಪಾಧ್ಯಾಯರು ಶಾಲಾ ಕೆಲಸದಲ್ಲಿ ನಿರಾತುರರಾದದ್ದು ಬಹು ಶೋಚನೀಯವೇ ಸರಿ.

ಈ ಊರಲ್ಲಿ ಇತ್ತಕಡೆ ಬಿಸಿಲಿನ ತಾಪ ಅತಿ ಹೆಚ್ಚಾಗಿ ಮಳೆಯೇನೂ ತೋರದೆಯೂ, ಬಾರದೆಯೂ ಹೋದದ್ದರಿಂದ ಅಕ್ಕಿಯ ದರವು ಏರುತ್ತಿದೆ ಈ ಸಂವತ್ಸರದ ಫಲವು ಅನೇಕ ರೀತಿಯಲ್ಲಿ ಜನರ ಮನವನ್ನು ಕರಗಿಸುವುದು.

~~~~~~

ಕಾಪು:—ಉಳಿಯಾರು ಗೋಳಿ ಗ್ರಾಮಸ್ಥರ ಹೊಸ ಶಾಲಾ ಕಟ್ಟೋಣದ ಒಳನಾದಿಯ ಶಾಲ ನಮ್ಮೂರ ಬೋರ್ಡು ಕನ್ನಡ ಶಾಲೆಯು ಮಕ್ಕಳಿಗೆಲ್ಲಾ ತ್ರಿಶಂಕು ಮಹಾರಾಜನ ದೆಶೆ ಒಂದ ಕಾಲ ಊರ ಜನರ ಇಂಗಿತಗಳನ್ನೆಲ್ಲಾ ಅರಿತುಕೊಂಡು, ಊರ ಮುಖಂಡರಿಗೆಲ್ಲಾ ಸುಬೋಧನೆಯನ್ನಿತ್ತು ನಮ್ಮೂರ ಶಾಲೆಯನ್ನು ಉತ್ತಮ ಸ್ಥಿತಿಗೆ ತರಲು ಬಹು ಸಾಹಸಪಟ್ಟು, ತಾವು ಯೋಚಿಸಿದ ಕಾರ್ಯವು ಫಲಕಾರಿಯಾಗುವಂತೆ ನೋಡಲೆಣಿಸಿದ ಶಾಲೆಗಳ ಸಬ್ ಅಸಿಸ್ಟೆಂಟ ಇನ್ಸಪೆಕ್ಟರವರಾದ ಮ. ರಾ. ರಾ. ಉಳ್ಳಾಲ ಮಂಗೇಶರಾಯರವರಿಗೆ ಈ ರೇಂಜಿನಲ್ಲಿ ಕಾಯಂ ಆಗದೆ ಇದ್ದ ವಾರ್ತೆ ಕೇಳಿದ ಶಾಲ ಮಕ್ಕಳ ಕೋಲಹಲದಿಂದ ಊರ ಜನರ ವಿಷಾದವನ್ನು ಈ ಮೂಲಕ ಅರ್ಪಿಸುತ್ತೇವೆ. ಅಲ್ಲದೆ ಶಾಲೆಯಲ್ಲಿ ಹುಡುಗರ ಸಂಖೆ ಏರುತ್ತಾ ಒಂದುದರಿಂದ ಸ್ಥಳ ಸಂಕೋಚವನ್ನು ಇನ್ಸಪೆಕ್ಟರವರೇ ಅರಿತು ಊರ ಜನರಿಗೆಲ್ಲಾ ತಮ್ಮಿಂದ ಕೂಡುವಷ್ಟು ಮಟ್ಟಿನ ಉತ್ತಾಹಕೊಟ್ಟು ಊರ ಜನರಿಂದಲೇ ಹಂಗಾಮಿ ಕಟ್ಟೋಣ ಕಟ್ಟಿಸುವಂತೆ ಪ್ರಯತ್ನಪಟ್ಟ ನಮ್ಮೂರ ಶಾಲೆಗಳ ಇನ್ಸಪೆಕ್ಟರವರನ್ನೇ ದೀರ್ಘ ಕಾಲ ಈ ರೇಂಜಿನಲ್ಲಿಯೇ ಇರಗೊಡಿಸುವಂತೆ ಮೇಲಾಧಿಕಾರಿಗಳಿಗೆ ತಕ್ಕ ಬುದ್ಧಿಯನ್ನೀಯಲಿ ಎಂದು ಭಗವಂತನನ್ನು ಪ್ರಾರ್ಥಿಸುತ್ತಾ ಇರುವೆವು.

ಬೋರ್ಡು ಶಾಲಾ ಹೆಡ್ ಮಾಸ್ತರರು ಶಾಲಾ ಸಂಬಂಧವಾಗಿ ಏಲಂ ಮಾಡಿ ಒಂದ ಯಾವ ವಸ್ತುವಿನ ಮೊಬಲಗನ್ನೇ ಆಗಲಿ ಗ್ರಾಮ ಪಟೇಲರಲ್ಲಿ ತಂದುಕೊಟ್ಟಲ್ಲಿ ತೆಗೆದುಕೊಳ್ಳದೆ ವಾಪಾಸುಮಾಡಬಾರದೆಂತಲೂ ಹೆಡ್ ಮಾಸ್ತರರು ಶಾಲಾ ಫೀಸನ್ನು ಗ್ರಾಮ ಪಟೇಲರಿದ್ದಲ್ಲಿಗೆ ಕಳುಹಿಸಿದ್ದಲ್ಲಿ ಹೆಡ್ ಮಾಸ್ತರರ ಹೆಸರಲ್ಲೇ ರಶೀದಿ ಕೊಡಬೇಕೆಂತಲೂ ತಾಲೂಕು ಅಧಿಕಾರಿಗಳಿಂದ ಇಲ್ಲಿಯ ಕಸಬಾ ಪಟೇಲರಿಗೆ ಹುಕುಂ ಬಂದಿದೆಯಾಗಿ ಕೇಳುತ್ತೇವೆ. ಈ ಸಂಗತಿ ಬೋರ್ಡು ಶಾಲಾ ಇರತಕ್ಕ ಗ್ರಾಮದ ಪಟೇಲರು ಲಕ್ಷ್ಯಕ್ಕೆ ತಂದುಕೊಳ್ಳಬೇಕಾದ್ದೇ

~~~~~~

ತ್ರಾಸಿ. ಕುಂದಾಪುರ ತಾಲೋಕು ತ್ರಾಸಿಗ್ರಾಮದ ದೇವಳಿಯಲ್ಲಿದ್ದ ಬೋರ್ಡು ಶಾಲೆಯ ಕಟ್ಟಡವನ್ನು, ಇದೇ ಇಸವಿ ಮೇ ತಿಂಗಳಿನ ಒಳಗೆ ದುರುಸ್ತು ಪಡಿಸಿ ಬೋರ್ಡಿಗೆ ಒಪ್ಪಿಸುತ್ತೇವೆಂತ ಕಳೆದ ವರ್ಷ ಶಾಲಾ ಪರೀಕ್ಷೆಗೆ ಚಿತ್ತೈಸಿದ ಇನ್ಸ್‌ಪೆಕ್ಟರರ ಮುಂದೆ ಗ್ರಾಮದ ಮಹನೀಯರು ಪ್ರತಿಜ್ಞೆ ಮಾಡಿಕೊಂಡದ್ದಕ್ಕೆ ಇನ್ಸ್‌ಪೆಕ್ಟರರು ಅತ್ಯಾನಂದಪಟ್ಟು ಹುಡುಗರ ಫೀಸು ಪೂರ್ಣ ಮಾಪು ಮಾಡುವದಾಗಿ ಅಪ್ಪಣೆ ದಯಪಾಲಿಸಿದರು. ಗ್ರಾಮ ಮುಖ್ಯಸ್ಥರು ತಾನೆಷ್ಟು ಮಾರಿ ಚಂದ್ರಗಳ ಮೇರೆಗೆ ಒಂದು ಗುಡಿಸಲಿನಲ್ಲಿ ಕೂತವರನ್ನು ಸಹ ಬಿಡದೆ, ವಂತಿಗೆ ವಸೂಲು ಮಾಡಿ ಬೇಕಾದ ಪ್ರಯತ್ನಪಟ್ಟು ಕಟ್ಟೋಣದ ಕೆಲಸ ಮುಕ್ತಾಯ ಮಾಡಿರುವರು. ಗೋಡೆಗಳು ಪುರಾತನದ ಕೋಟೆಗಳಂತೆಯೂ, ಛಾವಣಿಗಳು ಪಾಲಕಿಯಂತೆಯೂ, ಮಾಡು ಭಾನುಪುತ್ರನ ಪಾದಗಳಂತೆಯೂ, ಮಳೆ ನೀರು ಒಳಗಿನ ಉಪಯೋಗಕ್ಕೆ ನಲ್ಲಿಯೋಪಾದಿ ಗೋಡೆಗಳ ಮೇಲೆ ದೊರೆಯುವದರಿಂದ ಶಾಲಾ ಕಟ್ಟೋಣವು ಅಶ್ವಮಂದಿರದಂತೆ ರಮಣೀಯವಾಗಿರುವುದು ಈ ಶೋಭಾಯಮಾನಗಳಿಗೆ ವಸೂಲು ಆದ ಹಣ ಖರ್ಚಾಗಿ ಪುನಹ ವಂತಿಗೆ ವಸೂಲು ಮಾಡುವ ಏರ್ಪಾಡು ನಡೆದಿರುವದಂತೆ. ಈ ಸಮಯ ಒಡವರಿಗೆ ಊಟಕ್ಕೆ ಇಲ್ಲದ ಕಷ್ಟ, ಪುನಹ ವಂತಿಗೆ ಕೊಡುವುದೆಂದರೆ ಅತಿಕಷ್ಟ, ನಿರಾಕರಿಸಿದರೆ ಸಂಕಷ್ಟ. ಫೀಸು ಮಾಪು ಆಗುವುದು ಯಾವ ಕಾಲಕ್ಕೋ! ಶಾಲೆಯ ಹತ್ತರ ಇರುವ ಮರ್ಲು ಚಿಕ್ಕು ಎಂಬ ದೈವವೇ ಬಲ್ಲಳು!!

~~~~~~

ಪುತ್ತೂರು:—ರಮಜಾನ್ ಅಂತ್ಯದಲ್ಲಿ ಇಲ್ಲಿಯ ಸಾವಕಾರ ಮ. ರಾ. ರಾ. ಮೊಯಿದುಂ ಇಸ್ಮಾಲಿ ಸಾಹೇಬರು ಮಹಮ್ಮದಿ ಮತಸ್ಥರ ಬಡ ಜನರಿಗೆ ಅನ್ನದಾನ ಮತ್ತು ಮರುದಿನ ಐದು ಮೊಳದ ಕೋರ ತುಂಡು, ಸುಮಾರು ಒಂದು ಸಾವಿರಕ್ಕೆ ಮೇಲ್ಪಟ್ಟ ಜನರಿಗೆ ರೊಕ್ಕವು ಹಂಚಲ್ಪಟ್ಟಿರುವದು. ಇದೇ ತಾ. ೧೩ರಲ್ಲು ಪೆರನಾಳ ದಿನ ೫೦೦ ಜನ ಬಡಬಗ್ಗರಿಗೆ ಅರ್ಧ ಸೇರು ಮತ್ತು ಪಾವು ಪ್ರಕಾರ ಅಕ್ಕಿ ದಾನ ಮಾಡಿದ್ದಲ್ಲದೆ ಇಲ್ಲಿಯ ಪಂಚಮರ ವಿದ್ಯಾಶಾಲೆಗಳಲ್ಲಿ ಹಾಜರು ಇದ್ದ ೬೦ ವಿದ್ಯಾರ್ಥಿಗಳಿಗೆ ೪ ಆಣೆ ಕ್ರಯ ಬಾಳುವ ಬೈರಾಸುಗಳನ್ನೂ ಅರ್ಧ ಸೇರು ಪ್ರಕಾರ ಅಕ್ಕಿಯನ್ನೂ ಧರ್ಮ ಮಾಡಿರುವರು

ಇದೇ ತಾ. ೧೭ರಲ್ಲು ಪಂಚಮರ ವಿದ್ಯಾರ್ಥಿಗಳು ಸಾಹೇಬರಲ್ಲಿ ಸಿಕ್ಕಿದ ವಸ್ತ್ರಗಳನ್ನು ಉಟ್ಟು ಪೇಟೆಯಲ್ಲಿ ಮೆರವಣಿಗೆಯಿಂದ ಶಾಲೆಗೆ ಸೇರಿಕೊಂಡರು

ಇತ್ತಕಡೆ ಎಂಟು ದಿವಸಗಳ ಲಾಗಾಯ್ತು ಮಳೆಯಿಲ್ಲದೆ ನೆಟ್ಟ ವ ಬಿತ್ತಿದ ಬೆಳೆಯು ಒಣಗುತ್ತದೆ ಒಕ್ಕಲಿಗರೆಲ್ಲಾ ಬೆಟ್ಟುಮಜಲು ಎಂತೂ ಒಣಗಿದೆ, ಬೈಲುಗದ್ದೆ ಸಹ ಒಣಗಿ ಬಂದದೆನ್ನುತ್ತಾರೆ

ರಸ್ತೆ ಕಿನಾರೆ ಗಾಡಿಗಳು ಬಿಡಕೂಡದೆಂಬ ನಿಯಮವು ಇರುತ್ತದೆಯಷ್ಟೆ. ಗಾಡಿಗಳು ರಸ್ತೆ ಕಿನಾರೆ ಹೊರಳಾಡಿಕೊಂಡು ಇದ್ದಾಗ್ಯೂ ಪೋಲೀಸಿನವರು ಸಿಗಾ ಕೊಡದೆ ಇರಲಿಕ್ಕೆ ಕಾರಣವೇನೋ! ತಿಳಿಯದು.

ಇಲ್ಲಿಯ ತಾಲೂಕು ಶಿರಸ್ತೆದಾರ ರಾ। ಯು. ವೆಂಕಟಪ್ಪನವರಿಂದ ಶಿರಸ್ತೆ ಚಾರ್ಜನ್ನು ಡಿವಿಜನಲ್ ಆಫೀಸಿನ ಹೆಡ್ ಕ್ಲಾರ್ಕ ರಾ। ಯು ಅನಂತಯ್ಯನವರು ಇದೇ ತಾ ೬ರಲ್ಲು ವಹಿಸಿಕೊಂಡರು

ಇಲ್ಲಿಯ ಡಿವಿಜನ್ ಆಫೀಸಿನ ಹೆಡ್ ಕ್ಲಾರ್ಕರ ಚಾರ್ಜು ರಾ। ಪಿ ಆನಂದರಾಯರು ವಹಿಸಿಕೊಂಡರು.

~~~~~~

ಬೆಳ್ಳೆ:—ಈ ಗ್ರಾಮದ ಪಡುಬೆಳ್ಳೆಯಲ್ಲಿ ಬೆಳ್ಳೆ ನರಸಿಂಹ ಶ್ಯಾನಭಾಗರೆಂಬವರು ಸ್ವಂತ ಖರ್ಚಿನಿಂದ ಒಂದು ಯೋಗ್ಯ ಶಾಲಾಕಟ್ಟೋಣವನ್ನು ಕಟ್ಟಿಸಿ ತಾಲೂಕುಬೋರ್ಡಿಗೆ ಒಪ್ಪಿಸಿಕೊಟ್ಟಿರುತ್ತಾರಾಗಿಯೂ, ಆ ಪ್ರಕಾರ ಪಡುಬೆಳ್ಳೆ ದೇವಸ್ಥಾನ ಪ್ರಾಥಮಿಕ ಶಾಲೆಯನ್ನು ಬೋರ್ಡುಶಾಲೆಯನ್ನಾಗಿ, ತೆರೆಯಬೇಕೆಂಬದಾಗಿ ಹುಕುಂ ಶಿಕ್ಕಿಯದಾಗಿಯೂ ಕೇಳುತ್ತೇನೆ.

~~~~~~

ಕಾಂಞಾಂಗಾಡು:—ಶಾಲಾ ಅಸಿಸ್ಟಾಂಟ್ ಇನ್ಸ್‌ಪೆಕ್ಟರವರ ಸವಾರಿಯು ಇಲ್ಲಿಯ ಎಲಿಮೆಂಟರಿ ಶಾಲೆಯನ್ನು ಸಂದರ್ಶಿಸಿ ಶಾಲೆಯ ಅಭಿವೃದ್ಧಿ ಬಗ್ಗೆ ಸಂತೋಷಪಟ್ಟರೆಂತಲೂ ವಿಶೇಷವಾಗಿ ಕೋಲಾಟ ಎಂಬ ಆಟವನ್ನು ನೋಡಿ ಹರುಷಪಟ್ಟರೆಂತಲೂ ತಿಳಿಯುತ್ತೇವೆ.

~~~~~~

ಹೊಸದುರ್ಗ:—ಪೋಲಿಸ್ ಸುಪರಿಂಟೆಂಡೆಂಟರು ಬಂದು ಸ್ಟೇಶನ್ ಪರಿಶೋಧಿಸಿ ಚರ್ವತ್ತೂರು ಅತ್ತಕಡೆಗೆ ತೆರಳಿ ಅಲ್ಲಿಯ ಸ್ಟೇಶನ್ ಸಂದರ್ಶಿಸಿ ವಾಪಸು ಮಂಗಳೂರಿಗೆ ತೆರಳಿದರು.

ಪುತ್ತೂರು ಡಿಪ್ಯುಟಿ ಕಲೆಕ್ಟರವರು ಇಲ್ಲಿ ತಲಪಿ ಕಾಲಂಪ್ರತಿ ಪ್ರಕಾರ ಅಬಕಾರಿ ಗುತ್ತಿಗೆಗಳನ್ನು ಏಲಂ ಮಾಡಿ ನಿನ್ನೆ ವಾಪಾಸು ಕಾಸರಗೋಡಿಗೆ ಹಿಂತೆರಳಿರುತ್ತಾರೆ ಅಬಕಾರಿ ಏಲಂನಲ್ಲಿ ಕಳೆದ ವರುಷಕ್ಕಿಂತಲೂ ಈ ವರುಷ ತಿಂಗಳಿಗೆ ಸುಮಾರು ೧೫೦೦ ರೂಪಾಯಿ ಪ್ರಕಾರ ಮೊಬಲಗು ಏರಿಯದೆ.

ಅರ್ಧ ಕೆಲಸ ಮಾಡಿಸಿ ಬಾಕಿ ಇಟ್ಟ ಪಣತ್ತಡಿ ರಸ್ತೆಯನ್ನು ಮುಂದರಿಸಿ ತೆಗೆದುಕೊಂಡು ಹೋಗಲಿಕ್ಕೆ ಆಲೋಚನೆ ಒಗ್ಗೆ ಅಸಿಸ್ಟಾಂಟ್ ಇಂಜಿನಿಯರ್ ಮತ್ತು ಬೇಕಲ್ ಸರ್ಕಾರ ರೆವಿನ್ಯು ಇನ್ಸ್‌ಪೆಕ್ಟರರು ಸಹಾ ಇಲ್ಲಿ ತಲಪಿ ಏನೋ ಒಂದು ಅಸ್ಪಷ್ಟದ ಸಂಬಂಧ ಪಯಣವನ್ನು ಮುಂದರಿಸಿರುತ್ತಾರೆ ಬೇಗನೇ ಸದರಿ ರಸ್ತೆ ಕಾಮಗಾರಿಯು ತೊಡಗುವದು ಎಂಬದು ನಿಶ್ಚಯವು

ಜಿಲ್ಲಾ ಕಲೆಕ್ಟರ ದೊರೆಗಳ ಸವಾರಿಯು ನಿನ್ನೆ ಇಲ್ಲಿ ತಲಪಿಯದೆ. ತಾರೀಕು ೧೯ರ ವರೇಗೆ ಮೊಕ್ಕಾಂ ಬೆಳಸಿ ತಾ ೨೦ಕ್ಕೆ ಚರ್ವತ್ತೂರಿಗೆ ತೆರಳುತ್ತಾರಾಗಿ ತಿಳಿಯ ಬರುತ್ತದೆ.

ಇಲ್ಲಿಯ ಲೋಕಲ್ ಫಂಡ್ ಆಸ್ಪತ್ರೆಯನ್ನು ಪುತ್ತೂರು ಡಿವಿಜನಲ್ ಆಫೀಸರರಿಂದ ಸಂದರ್ಶಣೆ ಮಾಡಲಾಯಿತು. ಇಲ್ಲಿಗೆ ಒಬ್ಬ ಕಂಪೌಂಡರನು ಅಗತ್ಯವಿದ್ದಾನೆಯೆಂತ ಸದರಿಯವರು ಅಭಿಪ್ರಾಯಪಟ್ಟಿದ್ದಾರಾಗಿ ತಿಳಿಯುತ್ತೇವೆ ಆ ಆಸ್ಪತ್ರೆಗೆ ಒಬ್ಬ ಕಂಪೌಂಡರ್ ಅತೀ ಅಗತ್ಯವೆಂತ ನಾವು ಸಹಾ ಮೊದಲೇ ಅಭಿಪ್ರಾಯಪಟ್ಟಿದ್ದೇವೆ. ಆದ್ದರಿಂದ ದಯಾಳು ಸರಕಾರದವರು ಈ ವಿಷಯದಲ್ಲಿ ಸಿಗಾ ಕೊಡುವರಾಗಿ ಹಾರೈಸುತ್ತೇವೆ

ಇಲ್ಲಿಯ ಡಿಪ್ಯುಟಿ ತಹಸೀಲದಾರ ಕಚೇರಿ ಕ್ಲಾರ್ಕ ರಾ। ಎ. ಸಂಜೀವರಾಯರನ್ನು ಕಾಸರಗೋಡು ತಾಲೂಕು ಆಫೀಸಿನ ಲನೇ ಕ್ಲಾರ್ಕರಾಗಿ ನೇಮಿಸಿರುವದರಿಂದ ಇವರ ಬದಲಿಗೆ ಕಾಸರಗೋಡು ತಾಲೂಕಿನ ಆಕ್ಟಿಂಗ್ ಕ್ಲಾರ್ಕ ರಾ। ಕೆ. ಗೋಪಾಲ ನ್ಯಾಕರನ್ನು ಇಲ್ಲಿ ಮೊಕರೂರು ಮಾಡಿರುತ್ತಾರೆ

~~~~~~

ಕಾಸರಗೋಡು:—ಇಲ್ಲಿಯ ಅಬಕಾರಿ ಗುತ್ತೆಗಳನ್ನು ಪುತ್ತೂರು ಡಿಪ್ಯುಟಿ ಕಲೆಕ್ಟರವರಿಂದ ಏಲಂ ಮಾಡಲಾಯಿತು ಕಳೆದ ವರುಷಕ್ಕಿಂತಲೂ ಈ ವರುಷ ತಿಂಗಳಿಗೆ ಸರಾಸರಿ ಸುಮಾರು ೭೭೦ ರೂಪಾಯಿ ಪ್ರಕಾರ ಹೆಚ್ಚು ಹಣ ಏರಿಯದೆ. ಪ್ರತಿವರ್ಷದಲ್ಲಿಯೂ ಹಿಂದಿನ ವರ್ಷಕ್ಕಿಂತ ಹೆಚ್ಚಲ್ಲದೆ ಕಡಿಮೆ ಅಬಕಾರಿ ಹಣ ಸಿಕ್ಕುವದಿಲ್ಲ.

~~~~~~

ಬಂಗ್ರಮಂಜೇಶ್ವರ:—ಇಲ್ಲಿಯ ಮಿಶ್ಯನ್ ಶಾಲಾ ವಿದ್ಯಾರ್ಥಿಯಾಗಿರುವ ರಾಮಬಲ್ಲಕುರಾಯ ಯಾನೆ ಬಿ. ರಾಮರಾಯ ಎಂಬವಗೆ ಶಾಲೆಗೆ ಬರುತ್ತಾ ದಾರಿಯಲ್ಲಿ ಒಂದು ಪವನು ಸಿಕ್ಕಿದ್ದನ್ನು ಕೂಡಲೇ ಅದನ್ನು ಉಪಾಧ್ಯಾ

ಯರ ವಶಕೊಟ್ಟು ಅಲ್ಲಿ ಅಮಾನತಿನಲ್ಲಿದೆ ಎಂಬದಾಗಿ ತಿಳಿಯುತ್ತೇವೆ. ಇದು ಪರರ ಒಡೆವೆಯನ್ನು ನಾವು ಅತಿ ಸಬಾರದೆಂಬ ಗ್ರಹಿಕೆಯು ಎಷ್ಟರಮಟ್ಟಿಗೆ ಈ ವಿದ್ಯಾರ್ಥಿಯಲ್ಲಿರುತ್ತದೆಂಬದನ್ನು ಸೂಚಿಸುತ್ತದೆ

ಮಂಗಳೂರು

ಈ ಸಂಚಿಕೆಯೊ ದಿಗೆ ಶಿವಾನಂದ ಬುಕ್‌ಡಿಪೊ ಹರಪನಹಳ್ಳಿ (ಜಿಲ್ಲಾ ಬಳ್ಳಾರಿ) ಇವರ ಜ್ಯಾಹೀರಾತುಗಳನ್ನು ಇಟ್ಟಿರುತ್ತೇವೆ

ಕಳೆದ ವಾರ ಮುನ್ಸಿಪಾಲಿಟಿಯಲ್ಲಿ ೫ ಪ್ಲೇಗು ಮರಣಗಳಿಸ್ಟವು.

ಇತ್ತಲಾಗೆ ೧೨ ದಿವಸಗಳಿಂದ ಮಳೆಬಾರದೆ ಬೇಸಿಗೆಯ ಕಷ್ಟವನ್ನು ಸರ್ವರೂ ಅನುಭವಿಸುತ್ತಿರುವರು. ವರ್ಷದ ಈ ಕಾಲದಲ್ಲಿ ಹವಾಗುಣವು ಈ ವಿಪರೀತ ಸ್ಥಿತಿಯಲ್ಲಿದ್ದದ್ದರಿಂದ ಪಟ್ಟಣದ ಆರೋಗ್ಯವು ಬಹಳ ಕೆಟ್ಟಿರುವದು. ಪ್ಲೇಗಿನ ಇಲಿಗಳು ಅಲ್ಲಲ್ಲಿ ಬೀಳುವದಲ್ಲದೆ ರೋಗವೂ ಸಹ ಉಲ್ಬಣವಾಗಿದೆ

ಇಲ್ಲಿಯ ಗೌಡ ಸಾರಸ್ವತರ ಶ್ರೀ ವೆಂಕಟರಮಣ ದೇವಸ್ಥಾನದ ಮೊಕ್ತೇಸರರಾಗಿ ರಾ। ವಿ. ಜಿ. ರಾಮಕೃಷ್ಣ ಪೈಗಳು ರಾ। ಮಳಲಿ ವೆಂಕಟರಾಯ ನ್ಯಾಕರು ರಾ। ಸ ಜೋರ ನರಸಿಂಗ ನ್ಯಾಕರು ನೇಮಿಸಲ್ಪಟ್ಟಿರುವರೆಂತ ಕೇಳುತ್ತೇವೆ ಈ ಮೂವರ ಹೊಸ ನೇಮಕದಿಂದ ಪ್ರಕೃತ ಈ ದೇವಸ್ಥಾನದ ಮೊಕ್ತೇಸರರ ಸಂಖ್ಯೆಯು ಒಕ್ಕ ಭರ್ತಿಯಾಗಿರುವುದು ಈ ದೇವಸ್ಥಾನದ ಭಂಡಾರವು ಬಹಳ ವೃದ್ಧಿಸ್ಥಿತಿಯಲ್ಲಿರುವದಾದರೂ ಇದರ ಭಜಕರ ಸ್ಥಿತಿಯು ಬಹಳ ಹೀನವಾಗುತ್ತಾ ಬರುತ್ತಿರುವುದು ದೇವಸ್ಥಾನದ ತುಂಬಿದ ಭಂಡಾರದಿಂದ ಇಂಥಾ ಹೀನ ಸ್ಥಿತಿಯನ್ನು ನಿವಾರಿಸಲು ಇನ್ನಾದರೂ ಈ ಏಳು ಜನ ಮೊಕ್ತೇಸರರು ಪ್ರಯತ್ನಿಸುವರಾಗಿ ಕೋರುತ್ತೇವೆ ಶೀಘ್ರದಲ್ಲಿ ಈ ಪ್ರಯತ್ನವು ನಡೆಯದೆ ಹೋದರೆ ಕಾಲಕ್ರಮವಾಗಿ ಯಾವ ಪ್ರಯೋಜನಕ್ಕೂ ಬೀಳದ ಈ ತುಂಬಿದ ಭಂಡಾರವು ಅನೇಕ ಅನರ್ಥಗಳಿಗೆ ಎಡೆಕೊಟ್ಟು ಜಾತಿಯ ವೃದ್ಧಿಯನ್ನು ಸಾಧಿಸುವ ಬದಲಿಗೆ ಜಾತಿಗೆ ಮತ್ತಷ್ಟು ಹಾನಿಯನ್ನು ತರಬಹುದು

ಕುಂದಾಪುರ ರೆವಿನ್ಯು ಡಿವಿಜನಲ್ ಆಫೀಸರರವರು ಈ ತಿಂಗಳ ತಾ ೨೫ಕ್ಕೆ ಪಡುಬಿದ್ರಿ, ೨೬ ಪಡ ಬಿದ್ರಿಯಿಂದ ಉಡ್ಪಿ, ೨೭ರಿಂದ ಸಪ್ಟಂಬರ ತಾ. ೨೨ ವರೆಗೆ ಉಡ್ಪಿ ಸಪ್ಟಂಬರ ತಾ ೩ಕ್ಕೆ ಉಡ್ಪಿ ಕುಂದಾಪುರ ಈ ರೀತಿ ಸರ್ಕೀಟು ಬೆಳಸುವರು.

ಕೊಡಿಯಾಲ ಬೈಲ್ ವಾರ್ಡಿನ ಮುನ್ಸಿಪಲ್ ಕೌನ್ಸಿಲರರಾಗಿ ಮು। ರಾ ರಾ। ಪೇಜಾವರ ಭೋಜರಾಯರ ನೇಮಕವು ಸರಕಾರದವರ ಮಂಜೂರಾತಿಯನ್ನು ಹೊಂದಿರವುದು

ಈ ಜಿಲ್ಲೆಯಲ್ಲಿ ನಡೆಯುವ ವಿದ್ಯಾ ಪ್ರಯತ್ನಗಳನ್ನು ವ್ಯವಸ್ಥೆಗೊಳಿಸಿ ಅವೆಲ್ಲವುಗಳಿಂದ ಇಲ್ಲಿಯ ಶಿಕ್ಷಣಪ್ರಸರಣವು ಸರಿಯಾಗಿ ಸಾಗುವಂತೆ ಯಾವ ಪ್ರಯತ್ನಗಳನ್ನು ಇಲ್ಲಿ ಮಾಡಬಹುದೆಂಬುದನ್ನು ಆಲೋಚಿಸುವರೆ ಕೊಸ್ಮೊಪೊಲಿಟನ್ ಕ್ಲಬ್ಬಿನಲ್ಲಿ ರಾ। ಯ. ರಾಘವೇಂದ್ರ ರಾವ್, ರಾ ವರ್ಕಾಡಿ ರಾಮರಾವ್, ರಾ। ಅ ಶ್ರೀನಿವಾಸ ಪೈ ರಾ। ಪ ರಾಮಚಂದ್ರಯ್ಯ, ಮಿ। ಮಾರ್ಸೆಲ್ ಎ ಎಮ್ ಡಿ. ಸೋಜ, ರಾ। ಕಾರ್ನಾಡ ಸದಾಶಿವರಾವ್, ರಾ। ಕೆ ರಂಗರಾವ್ ರಾ। ಎಮ್ ಮಾಧವರಾವ್ ರಾ। ವಿ ಶ್ರೀನಿವಾಸ ಕಾಮತ್ ಇವರೆಲ್ಲರು ಕೂಡಿದ್ದರು ಈ ವಿಷಯ ಬೇಕಾದ ಅಭಿಪ್ರಾಯಗಳನ್ನು ಜಿಲ್ಲೆಯ ಆಯಾ ಭಾಗಗಳಿಂದ ತರಿಸಿಕೊಳ್ಳಬೇಕೆಂದ ನಿರ್ಣಯಿಸಿರುತ್ತಾರೆ

ಮರ್ಮಗೋವೆಯಲ್ಲಿ ಹಿಡಿದು ಹಾಕಿದ ಒಸ್ಟ್ರಿಯನರ ಪೊರ್ಟಸ್ಟ್ರೀ ಎಂಬ ಹಡಗದಲ್ಲಿ ಸಿಕ್ಕಿದ ೨೦೦೦ ಗೋಣಿ ಸಕ್ಕರೆಯು ಈ ತಿಂಗಳ ತಾ. ೨೩ಕ್ಕೆ ಹರಾಜು ಹಾಕಲ್ಪಡುವುದು

ಒಕ್ಕಲುಗಳು ತಾವು ಗೇಣಿಗೆ ವಹಿಸಿಕೊಂಡ ಆಸ್ತಿಯು ತಮ್ಮ ಸ್ವಾಧೀನದಲ್ಲಿರುವಾಗ ಇಂಥಾ ಆಸ್ತಿಗೆ ಸಮ್ಮಂಧಪಟ್ಟ ಮತ್ತು ತನ್ನಷ್ಟಕ್ಕೇ ಬೆಳೆದ ಮರಮಟ್ಟನ್ನು ಕಡಿದು ತಮ್ಮ ಸ್ವಂತ ಉಪಯೋಗದ ಬಗ್ಗೆ ಉಪಯೋಗಿಸುವರೆ ಈ ಜಿಲ್ಲೆಯಲ್ಲಿ ಪೂರ್ಣ ಹಕ್ಕುಳ್ಳವರಾಗಿರುತ್ತಾರೆಂತ ಮದ್ರಾಸು ಹ್ಯಾಕೋರ್ಟಿನಲ್ಲಿ ಒಂದು ತೀರ್ಮಾನವಾಗಿದೆ

ಮಂಗಳೂರಿನಿಂದ ಗುರ್ಪುರಕ್ಕೆ ಒಂದು ಟ್ರಾನ್ಸಿಟ ಲ್ಯಾನನ್ನು ಹೊಸತಾಗಿ ತೆರೆದಿರುತ್ತಾರೆ. ಟ್ರಾನ್ಸಿಟ ಗಾಡಿಯು ಮಂಗಳೂರಿಂದ ೧೧ ಘಂಟೆಗೂ ಗುರ್ಪುರದಿಂದ ೪ ಘಂಟೆಗೂ ಬಿಡೋಣಾಗುವದು.

ಕಳೆದ ಬುಧವಾರ ಸಮುದ್ರಕ್ಕೆ ಹೋದ ಒಂದು ಮೀನಿನ ದೋಣಿಯು ಬದಿಗೆ ಬರುವಾಗ ತೆರೆಗಳ ಬಡಿತಕ್ಕೆ ಸಿಕ್ಕಿ ಕವಚಿಬಿತ್ತು. ಈ ದೋಣಿಯು ಭೀಕರ ತೆರೆಗಳಿಂದ ನೆಲಕ್ಕೆ ಅಪ್ಪಳಿಸಲ್ಪಡುವಾಗ ದೋಣಿಯಲ್ಲಿದ್ದವರ ಪೈಕಿ ತಂಕೋಜಿ ಮಂದಣ್ಣಾಯ ಎಂಬವನ ತಲೆಗೆ ಕಠಿಣವಾದ ಪೆಟ್ಟು ಆಗಿ ತಕ್ಷಣವೇ ಮೃತಪಟ್ಟನು. ದೋಣಿಯಲ್ಲಿದ್ದ ಇತರೆ ಜನರಿಗೂ ಸ್ವಲ್ಪ ಸ್ವಲ್ಪ ಪೆಟ್ಟುಗಳಾಗಿವೆ. ಮೃತ ತಂಕೋಜಿ ಮಂದಣ್ಣಾಯನು ವಿನಯ ಸಂಪನ್ನನೂ ವಿ ತಶೀಲನೂ, ಪರೋಪಕಾರಿಯೂ ಆಗಿದ್ದನಲ್ಲದೆ ಶ್ರೀ ಜ್ಞಾನೋದಯ ಸಮಾಜದ ಕಾರ್ಯಸಾಧಕರಲ್ಲೊಬ್ಬನಾಗಿದ್ದನು. ಸ್ವಜಾತಿ ಪರಜಾತಿಯವರೆಲ್ಲರೂ ಈತನ ಅಕಸ್ಮಿಕ ಮರಣಕ್ಕಾಗಿ ಬಹಳ ದುಃಖ ಪಡುತ್ತಿರುತ್ತಾರೆ M

ವಿವಿಧ ವಿಷಯಗಳು.

೧೯೧೧ನೇ ಇಸವಿಯಲ್ಲಿ ಆದ ಖಾನೇಸುಮಾರಿ ಪ್ರಕಾರ ಇಂಡಿಯಾಕ್ಕಿಂತಲೂ ೭ ಮಾರ್ಗ ದೇಶದಲ್ಲಿ ವಿದ್ಯೆ ಹೆಚ್ಚೆಂತೆಂತ ತೋರುತ್ತದೆ. ಬರ್ಮದಲ್ಲಿ ಪ್ರತಿ ಸಾವಿರ ಜನರಲ್ಲಿ ೨೨೨ ಜನರು ಓದುಬರಹ ತಿಳಿದವರು. ಬಂಗಾಳದಲ್ಲಿ ೭೭ ಮತ್ತು ಮದ್ರಾಸ್ ಸಂಸ್ಥಾನದಲ್ಲಿ ೭೫ ಆಗಿರುತ್ತಾರೆ ಅಂದರೆ ಮದ್ರಾಸ ಸಂಸ್ಥಾನದಲ್ಲಿ ಪ್ರತಿ ನೂರು ಜನರಲ್ಲಿ ೭ ಜನರು ಓದುಬರಹ ತಿಳಿದವರಾಗಿರುತ್ತಾರೆ

ಕೆಲವು ಲೋಕಾಚಾರಗಳಲ್ಲಿ ರುಸ್ಯದೇಶವು ಇಂಡ್ಯದಂತೆ ತೋರುತ್ತದೆ. ರುಸ್ಯದ ಹಳ್ಳಿಗಳು ಇಂಡಿಯದ ಹಳ್ಳಿಗಳಂತೆ ತೋರುತ್ತವೆ. ಕೆಲವು ವರುಷಗಳ ಹಿಂದಿನ ವರೇಗೆ ಹೆಂಗಸರು ಗೋಷಾ ಆಗಿದ್ದರು. ಮೃತರನ್ನು ಹುಗಿಯುವ ಬದಲಿಗೆ ದಹನ ಮಾಡುತ್ತಿದ್ದರು. ೧೭೦೦ನೆ ಇಸವಿಯ ವರೆಗೆ ಜನರ ದುಸ್ತು ಇಂಡಿಯದ ಜನರಂತೆ ಇತ್ತು. ಗಂಡನ ಶವದೊಡನೆ ಹೆಂಡತಿಯನ್ನು ದಹನ ಮಾಡುವ ಪದ್ಧತಿ ಇತ್ತು. ಬಾಲ್ಯವಿವಾಹ ಪದ್ಧತಿಯಾಗಿತ್ತು. ಕೆತರಿನ್ ರಾಣಿಯ ಕಾಲಕ್ಕೆ ೧೩ ವರುಷದ ಒಳಗಿನ ಹುಡುಗಿಯರಿಗೆ ವಿವಾಹವಾಗಕೂಡದೆಂಬ ನಿಬಂಧನೆಯುಂಟಾಯಿತು. ನಿಕೊಲಸ್ ಚಕ್ರವರ್ತಿಯು ವಿವಾಹವಾಗತಕ್ಕ ಪ್ರಾಯ ೧೬ ವರುಷವೆಂತ ಮಾಡಿದನು. ಈಗಲೂ ಬಹು ಕಡೆಯಲ್ಲಿ ಹೆತ್ತವರೇ ನೆಂಟಸ್ಥಿಕೆ ನಿರ್ಣಯಿಸುವುದು. ೧೭೦೦ನೇ ಇಸವಿ ವರೆಗ ವಿವಾಹಮುಂಚಿತವಾಗಿ ವಧೂವರರು ಒಬ್ಬರಿಗೊಬ್ಬರು ನೋಡಕೂಡದಿತ್ತು. ಇಗರ್ಜಿಗಳಲ್ಲಿ ಜನರು ಹಣೆಯನ್ನು ನೆಲಕ್ಕೆ ತಾಗಿಸಿ ದೇವರನ್ನು ನಮಸ್ಕರಿಸುತ್ತಾರೆ. ಹೆಂಗಸರನ್ನು ತುಚ್ಛೀಕಾರದಿಂದ ನಡಿಸುತ್ತಾರೆ. ಕೆಳಗ ಕಾಣಿಸಿದ ರುಶ್ಯದ ಗಾದೆಗಳಿಂದ ಗಂಡಸರು ಹೆಂಗಸರನ್ನು ಹೇಗೆ ನಡಿಸುತ್ತಾರೆಂಬದು ವ್ಯಕ್ತವಾಗುವದು

ಗಾದೆಗಳು —1 ಹೆಂಗಸರಿಗೆ ಕೂದಲು ಹೆಚ್ಚು ಬುದ್ಧಿ ಕಡಿಮೆ 2 ನಾಯಿಯು ದನಿಯನ್ನು ಗದರಿಸಿ ಬೊಗಳುವದಿಲ್ಲ, ಹೆಂಗಸರಿಗಿಂತಲೂ ನಾಯಿ ಉತ್ತಮವು 3 ಕೋಳಿ ಪಕ್ಷಿಯಲ್ಲ, ಹೆಂಗಸು ಗಂಡು ಅಲ್ಲ 4 ಹೆಂಗಸಿನ ಹೃದಯವು ಕಬ್ಬಿಣದ ಕಿಲುಬಿಗೆ ಸಮ 5 ಹೆಂಗಸರ ಮಾತುಗಳಿಗೆ ಹಲ್ಲಿಲ್ಲ, ಆದರೆ ಎಲ್ಬುಬುಗಳ ಸಮೇತ ಮಾಂಸವನ್ನು ತಿಂದುಬಿಡುತ್ತವೆ

೧೯೦೯ನೇ ಇಸವಿಯಲ್ಲಿ ಬೆಸ್ಟೋರಿನಲ್ಲಿ ಬಾಚಣಿಗೆ ಮತ್ತು ಅಂಗಿ ಗುಬ್ಬಿಗಳು ಮಾಡುವ ಕಾರಖಾನೆ ಇಟ್ಟರು. ಕಾರ್ಯ ನಿರ್ವಹಿಸಲಿಕ್ಕೆ ಹಣ ಸಹಾಯವಿಲ್ಲದರಿಂದ ಕಾರಖಾನೆಯು ಅಡಚಣೆಯಲ್ಲಿ ಬಿದ್ದದೆ.

೧೯೦೮ನೇ ಇಸವಿಯಲ್ಲಿ ಮಿ। ಗುಪ್ತರವರು ಪೂರ್ವ ಬಂಗಾಳದಲ್ಲಿ ಕಾಗದ ಮಾಡುವ ಕಾರ್ಖಾನೆ ಇಟ್ಟಿದ್ದರು. ಅದು ಬಹುಶ್ಯ ಅಂತ್ಯವಾಯಿತು. ಹುಗಳಿಯಲ್ಲಿ ಕಾಗದ ಮಾಡುವ ಕಾಗಜಿ ಮಹಮ್ಮದಿಯರು ತಮ್ಮ ವೃತ್ತಿಯನ್ನು ಬಿಟ್ಟರು

ತಲ್ಲಿಗಂಜ ರಸ್ಯಾ ರಸ್ತೆಯಲ್ಲಿ ಇಟ್ಟ ಬೆಂಕಿ ಪೆಟ್ಟಿಗೆ ಮಾಡುವ ಕಾರಖಾನೆಯನ್ನು ಮುಚ್ಚಿದರು. ಕೂನ್ನಾಗರಿನಲ್ಲಿ ಹೊಸತಾಗಿ ಇಟ್ಟ ಬೆಂಕಿಪೆಟ್ಟಿಗೆ ಕಾರಖಾನೆಯು ಚಲೋ ಬೆಂಕಿಕಡ್ಡಿಗಳನ್ನು ಮಾಡುತ್ತವೆ. ಇವರ ಬೆಂಕಿಕಡ್ಡಿಗಳು ಜಪಾನಿಯರ ಬೆಂಕಿಕಡ್ಡಿಗಳಷ್ಟೇ ಯೋಗ್ಯತೆದ್ದೆಂತ ಕೀರ್ತಿಯುಂಟು? ಹಣದ ಸಹಾಯವಿಲ್ಲದ್ದರಿಂದ ಕೆಲಸವು ವಿಸ್ತಾರವಾಗಿ ಆಗುವುದಿಲ್ಲ.

ಬ್ರೀತನಿನಲ್ಲಿ (ಇಂಗ್ಲಾಂಡು, ಸ್ಕೋತಲೆಂಡು ಮತ್ತು ಐರಲಂಡು) ಪ್ರತಿ ದಿನ ೧ಕ್ಕೆ ಮಾಡುವ ಬೆಂಕಿಕಡ್ಡಿಗಳು ಒಂದಕ್ಕೆ ಒಂದು ತಾಗಿಸಿ ಇಟ್ಟರೆ ೧೫,೦೦೦ ಮೈಲು ಉದ್ದಕ್ಕೆ ಹೋಗುವವು ದಿನ ೧ಕ್ಕೆ ೯೩ ಟನ್ ಮರ ಕಡ್ಡಿ ಮಾಡುವುದಕ್ಕೆ ಖರ್ಚಾಗುತ್ತದೆ. ಮತ್ತು ೫೦೦,೦೦೦,೦೦೦ ಕಡ್ಡಿಗಳನ್ನು ಮಾಡುತ್ತಾರೆ. ವರುಷ ೧ಕ್ಕೆ ಸ್ವೀಡನ್ ದೇಶದಿಂದ ೨೫,೦೦೦ ಟನ್ ಮರಕಡ್ಡಿಗಳನ್ನು ಮಾಡುವುದಕ್ಕೆ ಕ್ರಯಕ್ಕೆ ಪಡಕೊಳ್ಳುತ್ತಾರೆ.

ಒಂದು ಇತಲಿಯ ಹಡಗವು ಲೆಗ್ಗಹೋರ್ನ ಸಮೀಪ ತಿಮಿಂಗಿಲವೆಂಬ ಒಂದು ದೊಡ್ಡ ಮೀನನ್ನು ಕಂಡು ಅದು ಜಲಾಂತರ್ಗಾಮಿ ನಾವೆ ಎಂತ ಭಾವಿಸಿ ಪತಾಕೆಗಳ ಸಂಜ್ಞೆ ಭಾಷೆಯಿಂದ ಮಾತಾಡಿದಲ್ಲಿ ಉತ್ತರ ಸಿಕ್ಕದ ಕಾರಣ ಅದು ಶತ್ರುಗಳ ಜಲಾಂತರ್ಗಾಮಿಯಾಗಿರಬಹುದೆಂತ ನಂಬಿ ಅಗ್ನಿ ಅಸ್ತ್ರ ಬಿಟ್ಟು ಮೀನನ್ನು ನಾಶಮಾಡಿದರು.

ಜೀನಸು ಧಾರಣೆ. (ರಖಂ)

ಮಸ್ಕತಿ ಅಕ್ಕಿ	5—4—0	5—12—6
ಗಾಡಿ ರಾತಿ ,,	4—13—6	4—14—6
ಗುಡ್ಡು ,,	5—0—0	5—6—0
ಅವ್ವಲ್ ಬೆಳ್ತಿಗೆ ,,	6—0—0	6—7—0
ಗುಡ್ಡು ಬೆಳ್ತಿಗೆ ,,	5—4—0	5—6—0
ರಂಗೂನು ಬೆಳ್ತಿಗೆ ಗೋಣಿ ೧ರ	9—8—0	9—4—0
ಗೋದಿ ಗೋಣಿ ೧ರ	11—8—0	12—0—0
ಹುರುಳಿ ಗೋಣಿ ೧ರ	6—8—0	7—12—0
ಕಡಲೆ ಗೋಣಿ ೧ರ. ,,	8—8—0	9—8—0
ತೊಗರಿ ಗೋಣಿ ೧ರ	10—0—0	11—8—0
ತೊಗರಿ ಬೇಳೆ ಗೋಣಿ ೧ರ	12—8—0	15—0—0
ಉದ್ದು ಗೋಣಿ ೧ರ		10—0—0
ಊರುಬೆಲ್ಲ ಖಂಡಿ ೧ರ	... ...	75—0—0
ಉಪ್ಪು ಗೋಣಿ ೧ರ	3—12—0	3—14—0
ಕೊಬ್ರಿ ಖಂಡಿ ೧ರ	70—0—0	75—0—0
ಕೊಬ್ರಿ ಹಿಂಡಿ ಖಂಡಿ ೧ರ		14—0—0
ಎಳ್ಳಿಂಡಿ ಖಂಡಿ ೧ರ	22—8—0	31—12—0
ಕೊಬ್ರಿ ಎಣ್ಣೆ ಮುಡಿ ೧ರ.	5—14—0	6—0—0
ಎಳ್ಳೆಣ್ಣೆ ಮುಡಿ ೧ರ(ಕುರಾಸನ)	4—0—0	4—2—0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ರ	4—8—0	5—0—6
ಮೋರಿಸ್ ಸಕ್ಕರೆ ಮುಡಿ ೧ರ		4—9—0
ಕಾಫಿ ಖಂಡಿ ೧ರ.	240—0—0	252—0—0
ಹೊಸಬೀಳಿಗೋಟು ಖಂಡಿ೧ರ.	94—0—0	98—0—0
ಹೊಸ ಗೇರುಬೀಜ ಮುಡಿ ೧ರ		2—6—0
ಕಬ್ಬಿಣ ಖಂಡಿ ೧ರ		50—0—0
ಕಾಂಚು ತಗಡು ಮುಡಿ ೧ರ.		20—0—0
ಕಾಂಚು ಪಾತ್ರಗಳು ಮುಡಿ ೧ರ.		22—0—0
ಜೀನಿ ಬೆಳ್ಳಿ ಸೇರು ೧ರ.		18—12—0

ಸಂಪೂರ್ಣ ಓದಿ ನೋಡಿರಿ !!

ಅತ್ಯಂತ ಮನೋಹರ, ರತಿ ಮನ್ಮಥರ ವಿಲಾಸ. ಮತ್ತು ಮನ್ಮಥನ

ಅಪೂರ್ವ ! ಮಹಿಮೆಯುಳ್ಳ ಜಗದೇಕಸುಂದರಿ ಪರಿಣಯವುಳ್ಳ **ಅದ್ಭುತ !!**

ಮನ್ಮಥಕಳಾಶಾಸ್ತ್ರವು.

ಈ ಗ್ರಂಥದೊಳು ಮನ್ಮಥನ ಜನನ ಶ್ರೀಕೃಷ್ಣನ ಆನಂದೋತ್ಸವದ ವರ್ಣನೆಯು ಮನ್ಮಥನ ಅಂಗಗಳ ವರ್ಣನೆ ಮನ್ಮಥನ ಬಾಲಲೀಲಾದಿ ವರ್ಣನೆಯು ಮನ್ಮಥನ ವಿದ್ಯಾಮಂದಿರದ ವರ್ಣನೆ, ಮನ್ಮಥನ ವಿದ್ಯಾಭ್ಯಾಸದ ವರ್ಣನೆಯು, ಮನ್ಮಥನು ವಿದ್ಯಾಮಂದಿರವಂದಿಟ್ಟು ಪಟ್ಟಣ ಪ್ರವೇಶವಾಡುವ ವೈಭವದ ವರ್ಣನೆಯು ಮನ್ಮಥನು ರಾಜಬೀದಿಯೋಳ್ ಬರುವ ಸಮಯದಲ್ಲಿ ಪಟ್ಟಣದ ಸ್ತ್ರೀಯರು ಮನ್ಮಥನ ದರ್ಶನವಾಡಿಕೊಳ್ಳುವ ವರ್ಣನೆಯು ಆ ಸ್ತ್ರೀಯರು ಮನ್ಮಥನನ್ನು ವರ್ಣನೆ ಮಾಡುವಿಕೆ, ಶ್ರೀ ಕೃಷ್ಣನು ರುಕ್ಮಿಣಿಯು ಮನ್ಮಥನನ್ನು ನೋಡಿ ಆನಂದಪಡುವ ವರ್ಣನೆಯು, ಮನ್ಮಥನು ಬ್ಯಾಂಟೆಯಾಡುವ ವರ್ಣನೆ, ಪುನಃ ಮನ್ಮಥನು ಪಟ್ಟಣದ ವೇಶ್ಯಾಸ್ತ್ರೀಯರ ಬೀದಿಯೊಳು ಬರುವ ಕಾಲದಲ್ಲಿ ಮೋಹನೆ ಎಂಬ ವೇಶ್ಯಾಸ್ತ್ರೀಯಳು ಮನ್ಮಥನನ್ನು ನೋಡಿ ಮೂರ್ಛಳಾಗುವಿಕೆ, ಮನ್ಮಥನು ಮೋಹನೆಯ ಸೌಂದರ್ಯವನ್ನು ವರ್ಣನೆಮಾಡುವಿಕೆ ಆಕೆಯ ರೂಪವನ್ನು ನೋಡಿ ಮೋಹಪರವಶನಾಗುವಿಕೆ, ಮನ್ಮಥನ ರಥದ ವರ್ಣನೆಯು, ಮನ್ಮಥನು ಮೋಹನೆಯ ಉದ್ಯಾನವನಕ್ಕೆ ಬರುವ ವರ್ಣನೆಯು, ಆಕೆಯ ಉದ್ಯಾನದ ವರ್ಣನೆಯು ಉದ್ಯಾನವನದೊಳು ಮೂರ್ಛಾಕ್ರಾಂತಳಾದ ಮೋಹನೆಯನ್ನು ದಾದಿಯರು ಉಪಚರಿಸುವ ವರ್ಣನೆಯು ಮೋಹನೆ ಇರುವ ಕದಳೀವನದ ಸೊಬಗಿನ ವರ್ಣನೆಯು ಆಕೆಯು ಶಯನಿಸಿರುವ ಹಿಮಗೃಹದ ವರ್ಣನೆಯು ಅಲ್ಲಿ ಮನ್ಮಥ ಮೋಹನೆ ಈರ್ವರಿಗೂ ಜರಿಗಿದ ಸಂಭಾಷಣೆಯ ವಿವರವು, ಈರ್ವರು ಪರಸ್ಪರ ಅತ್ಯಾನಂದ ಹೊಂದುವ ವರ್ಣನೆಯು ಶ್ರೀಕೃಷ್ಣನು ಪ್ರಾಪ್ತವಯಸ್ಕನಾದ ಮನ್ಮಥನಿಗೆ ವಿವಾಹವಂ ಮಾಡಲು ಪ್ರಯತ್ನಪಡುವಿಕೆ, ರತಿದೇವಿಯ ಜನನ ಕಮಲಾವತಿ ಪಟ್ಟಣದ ವರ್ಣನೆಯು, ರತಿದೇವಿಯ ಬಾಲಲೀಲಾದಿ ವಿದ್ಯಾಭ್ಯಾಸದ ವರ್ಣನೆಯು ಕಮಲರಾಜನು ರತಿದೇವಿಯ ವಿವಾಹಪ್ರಯತ್ನ ಮಾಡುವಿಕೆ, ರತಿಮನ್ಮಥರೀರ್ವರಿಗೂ ಉಂಟಾದ ಕಲ್ಯಾಣಮಹೋತ್ಸವದ ವರ್ಣನೆಯು ಮೋಹನೆಯು ಮನ್ಮಥನಿಗೆ ರತಿದೇವಿಯ ವಿಷಯದಲ್ಲಿ ಮಾಡಿದ ದುರ್ಬೋಧನೆಯ ವಿಷಯಗಳು ಮೋಹನೆಯ ದುರ್ಬೋಧನೆಗೆ ವಶಪಟ್ಟು ಮನ್ಮಥನು ರತಿದೇವಿಯನ್ನು ತ್ಯಜಿಸುವ ವರ್ಣನೆಯು, ರತಿದೇವಿಯು ಮನ್ಮಥನ ಅಗಲುವಿಕೆಯಿಂದ ಚಿಂತಾಕ್ರಾಂತಳಾದ ವರ್ಣನೆಯು. ಕಡೆಗೆ ಮೋಹನೆಯ ಮೋಸಕೃತ್ಯವನ್ನು ಮನ್ಮಥನು ತಿಳಿದು ಪುನಃ ರತಿಯಲ್ಲಿ ಅನುರಾಗವುಂಟಾಗಿ ಈರ್ವರಿಗೂ ಪರಸ್ಪರ ವುಂಟಾದ ಸಂತೋಷದ ವರ್ಣನೆಯು, ಮನ್ಮಥನು ರತಿದೇವಿಗೆ ಮನ್ಮಥಕಳಾಶಾಸ್ತ್ರವನ್ನು ಬೋಧಿಸುವಿಕೆ ಪೂರ್ವಜರು ಸ್ತ್ರೀಯರ ವಿಷಯದಲ್ಲಿ ಏರ್ಪಡಿಸಿದ ಕ್ರಮಗಳು ಸ್ತ್ರೀಯರಲ್ಲಿ ಪದ್ಮಿನಿ ಮೊದಲಾದ ನಾಲ್ಕುಜಾತಿ ಸ್ತ್ರೀಲಕ್ಷಣಗಳು ನಾಲ್ಕುಜಾತಿ ಪುರುಷಲಕ್ಷಣಗಳು ಸ್ತ್ರೀಪುರುಷರ ಕಲಾಸ್ಥಾನಗಳು ಸ್ತ್ರೀಪುರುಷರಿಗೆ ಇಂಥಾದಿವಸ ಇಂಥಾ ಅಂಗಗಳಲ್ಲಿ ಕಾಮಕಳೆಯು ಇರುತ್ತದೆಂಬುವ ವಿಷಯ ಸ್ತ್ರೀಪುರುಷರು ಕ್ರೀಡಿಸುವ ಕಾಲಗಳು ಮತ್ತು ಸ್ಥಳಗಳು, ಭೋಗಕಾಲಕ್ರಮದಿಂದ ಜನಿಸುವ ಶಿಶುಗಳ ಆಕಾರ ಗುಣ ಲಕ್ಷಣಗಳು, ಶಯ್ಯಾಗೃಹಲಕ್ಷಣವು, ಶಯ್ಯಾಗೃಹದಲ್ಲಿ ಇರಿಸಬೇಕಾದ ಶೃಂಗಾರ ಸಾಮಗ್ರಿಗಳ ವಿವರವು, ಭೋಗಿಸುವ ದಿನಕ್ರಮಗಳು ಭೋಗಿಸುವ ನಿಷೇಧ ದಿನಗಳು ಕ್ರೀಡಿಸಿದನಂತರ ಮಾಡಬೇಕಾದ ಕ್ರಮಗಳು ಆಯಾಸಪರಿಹಾರವಾಗುವುದಕ್ಕೆ ತೆಗೆದುಕೊಳ್ಳಬೇಕಾದ ಔಷಧಕ್ರಮವು ಪತಿವ್ರತಾ ಸ್ತ್ರೀಯರ ಸ್ವಭಾವಲಕ್ಷಣಗಳು, ವೇಶ್ಯಾಸ್ತ್ರೀಯರ ಗುಣಲಕ್ಷಣಗಳು, ವ್ಯಭಿಚಾರಸ್ತ್ರೀಯರ ಗುಣಲಕ್ಷಣಗಳು ಅದರಿಂದುಂಟಾಗುವ ಅನರ್ಥಗಳು ಸ್ತ್ರೀಯರು ಕೆಡುವುದಕ್ಕೆ ಕಾರಣಗಳು ಸಂಸಾರಸ್ತ್ರೀಯರು ತಮ್ಮ ಪುರುಷರಲ್ಲಿ ಪ್ರೀತಿಯಿಲ್ಲದೆ ಪರಪುರುಷರಲ್ಲಿ ಅಪೇಕ್ಷೆ ಹುಟ್ಟುವದಕ್ಕೆ ಕಾರಣಗಳು ಅದರ ನಿವಾರಣೋಪಾಯ ಕ್ರಮಗಳು ಸ್ತ್ರೀಯರನ್ನು ಯೋಗ್ಯರೀತಿಯಿಂದ ಇಟ್ಟುಕೊಂಡು ಕಾಪಾಡತಕ್ಕ ಕ್ರಮಗಳು ಸ್ತ್ರೀಯರಿಗೆ ಹೇಳತಕ್ಕ ಸ್ತ್ರೀಧರ್ಮನೀತಿಗಳು ಸ್ತ್ರೀಯರಿಗೆ ಪರಪುರುಷದರ್ಶನ ಸಂಭಾಷಣಾದಿಗಳಿಂದುಂಟಾಗುವ ಕೆಡಕುಗಳು, ಪತಿವ್ರತಾಸ್ತ್ರೀಯರು ಮಾಡಬೇಕಾದ ಕಾರ್ಯಕ್ರಮಗಳು, ವಿಧವಾಸ್ತ್ರೀಯರು ಮಾಡತಕ್ಕ ಕ್ರಮಗಳು, ವೀರ್ಯ ಹುಟ್ಟುವ ಕ್ರಮ, ಧಾತು ನಷ್ಟವುಂಟಾಗುವದರಿಂದ ಕೆಡುಕುಗಳು ಸಂತಾನನಷ್ಟ ಪುರುಷತ್ವನಷ್ಟವುಂಟಾಗುವುದಕ್ಕೆ ಕಾರಣಗಳು, ಇವುಗಳ ನಿವಾರಣೆಕ್ರಮಗಳು, ಮಿತಿಮೀರಿ ಸಂಭೋಗವಾಡುವುದರಿಂದುಂಟಾಗುವ ಅನರ್ಥಗಳು, ಸ್ತ್ರೀಯರು ಪ್ರತಿತಿಂಗಳಲ್ಲಿ ಮುಟ್ಟಾದಕಾಲದೊಳು ಬಿಡಬೇಕಾದ ಕಾರ್ಯಗಳು, ಋತುಸ್ನಾನಮಾಡಿಕೊಂಡ ಸ್ತ್ರೀಯರು ಶಯ್ಯಾಗೃಹಕ್ಕೆ ಹೋಗಿ ತನ್ನ ಪುರುಷನನ್ನು ಸಂತೋಷಪಡಿಸುವ ಕ್ರಮಗಳು ಗರ್ಭಿಣೀಸ್ತ್ರೀಯರು ಬಿಡಬೇಕಾದ ಕಾರ್ಯಗಳನ್ನು ವಿಶದವಾಗಿ ಬರೆದಿರುತ್ತೆ. ಮನ್ಮಥಮಹಿಮೆಯುಳ್ಳ ಜಗದೇಕಸುಂದರಿ ಪರಿಣಯ ಇದರೊಳು ಮನ್ಮಥನು ರತಿದೇವಿಗೆ ಮನ್ಮಥ ಮಹಿಮೆಯನ್ನು ಪ್ರತ್ಯಕ್ಷವಾಗಿ ತೋರಿಸುವುದಕ್ಕಾಗಿ ಕಮಲಾವತಿ ಪಟ್ಟಣದ ಯುವರಾಜನಾದ ವಸಂತತಿಲಕನಿಗೂ ಭಾಗ್ಯನಗರಾಧಿಪತಿಯಾದ ಜಯಸೀಲಮಹಾರಾಜನ ಪುತ್ರಿ ಜಗದೇಕಸುಂದರಿಗೂ ಪರಿಣಯಿಂದ ಕಾಡುವಿಕೆ, ಕಮಲಾವತಿಪಟ್ಟಣದ ವರ್ಣನೆಯು, ಉದ್ಯಾನವನಗಳ ವರ್ಣನೆಯು, ರಾಜಮಂತ್ರಿಯರೀರ್ವರಿಗೂ ವಸಂತತಿಲಕ ಜ್ಞಾನಮಣಿ ಎಂಬ ಪುತ್ರರು ಜನಿಸುವಿಕೆ, ವಸಂತತಿಲಕನಿಗೆ ಯುವರಾಜ ಪಟ್ಟಾಭಿಷೇಕವಾಗುವ ವರ್ಣನೆಯು, ರಾಜಮಂತ್ರೀಪುತ್ರರೀರ್ವರು ಅರಣ್ಯಕ್ಕೆ ಬ್ಯಾಂಟೆಯಾಡುವುದಕ್ಕೆ ಹೊರಡುವಿಕೆ, ಅರಣ್ಯದಲ್ಲಿ ವಸಂತತಿಲ

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ ಟೌನ್, ಮದ್ರಾಸು.

109 ಫ್ರೇಯರ್ ರೋಡ್ಡ,
ಮುಂಬಯಿ,

II

ಕನು ತನ್ನ ಸರ್ವಸೇನಾಬಲವನ್ನು ಬಿಟ್ಟು ರಾಜಪುತ್ರನು ದುಃಖಿಸುವ ವರ್ಣನೆಯು, ರಾಜಪುತ್ರನು ಅರಣ್ಯದೊಳು ಒಂದು ಸರೋವರದ ಬಳಿಗೆ ಬರುವಿಕೆ, ಆ ಸರೋವರದ ವರ್ಣನೆಯು, ಆ ಸರೋವರದಬಳಿಯಿರುವ ಪೂದೋಟದ ವರ್ಣನೆಯು, ರಾಜಮಂತ್ರಿಪುತ್ರರೀರ್ವರು ಆ ಸರೋವರದ ವರ್ಣನೆ ಮಾಡುವಿಕೆ, ಆ ಸರೋವರದ ಸಮೀಪದಲ್ಲಿರುವ ಭಾಗ್ಯನಗರಾಧಿಪತಿಯಾದ ಜಯಶೀಲಮಹಾರಾಜನ ಪುತ್ರಿ ಜಗದೇಕಸುಂದರಿಯು ತನ್ನ ಸಖಿಯರೊಡನೆ ಆ ಸರೋವರದೊಳು ಜಲಕ್ರೀಡೆಯಾಡುವ ವರ್ಣನೆಯು, ರಾಜಪುತ್ರ ಮಂತ್ರಿಪುತ್ರರೀರ್ವರೂ ಆ ಪುದ್ಯಾನವನದೊಳು ಪ್ರವೇಶಮಾಡುವ ವರ್ಣನೆಯು, ವಸಂತತಿಲಕನಿಗೂ ಜಗದೇಕಸುಂದರಿಗೂ ಪರಸ್ಪರ ಸಂದರ್ಶನವಾಗುವಿಕೆ, ಆಸಮಯದೊಳು ಮನ್ಮಥನು ಈರ್ವರಮೇಲೆ ಬಾಣಪ್ರಯೋಗವನ್ನು ಮಾಡಿ ಪರವಶರನ್ನಾಗಿ ಮಾಡುವಿಕೆ, ಇಲ್ಲಿ ಅತ್ಯಂತ ಶೃಂಗಾರರಸವು ತುಂಬಿ ತುಳುಕುತ್ತಿದೆ ರಾಜಪುತ್ರಿಯು ಸಖಿಗೂ ವಸಂತತಿಲಕನಿಗೂ ನಡೆದ ಸಂಭಾಷಣೆಯು, ಇದು ಬಹು ಮನೋಹರವಾಗಿರುತ್ತೆ. ರಾಜಪುತ್ರಿಯು ತನ್ನ ಸಖಿಯರೊಡನೆ ವನವಿಹಾರವನ್ನು ಮಾಡುವ ಕಾಲದೊಳು ಪೂಗಿಡಗಳ ವನವನ್ನೂ, ವಸಂತತಿಲಕನ ಸೌಂದರ್ಯವನ್ನೂ ವರ್ಣನೆಮಾಡುವಿಕೆ, ಪುನಹ ಕಾದುಕೊಂಡಿದ್ದ ಮನ್ಮಥನು ತನ್ನ ಬಾಣಪ್ರಯೋಗವನ್ನು ಮಾಡಿ ಎಚ್ಚರದಪ್ಪಿಸುವ ವರ್ಣನೆಯು ರಾಜಪುತ್ರಿಗೂ ಸಖಿಗೂ ನಡೆದ ಸಂಭಾಷಣೆಯು, ರಾಜಪುತ್ರಿಯು ಮಂತ್ರಿಕುಮಾರನ ಸಂಗಡ ಮಾಡಿದ ಸಂಭಾಷಣೆಯ ವರ್ಣನೆಯು, ಮಂತ್ರಿಪುತ್ರನು ರಾಜಪುತ್ರಿಗೆ ಸ್ತ್ರೀಧರ್ಮನೀತಿಯನ್ನು ಅನೇಕವಿಧವಾಗಿ ಬೋಧಿಸುವಿಕೆ, ಮಂತ್ರಿಕುಮಾರನು ರಾಜಪುತ್ರಿಗೆ ವಸಂತತಿಲಕನ ಚರಿತ್ರೆಯನ್ನು ಹೇಳುವಿಕೆ, ರಾಜಪುತ್ರಿಯಾದ ಜಗದೇಕಸುಂದರಿಗೂ ವಸಂತತಿಲಕನಿಗೂ ನಡೆದ ಸಂಭಾಷಣೆಯ ವರ್ಣನೆಯು, ಇದು ಬಹು ಸ್ವಾರಸ್ಯವಾಗಿರುತ್ತೆ ರಾಜಪುತ್ರಿಯು ಸಖಿಯರೊಡನೆ ಅಂತಃಪುರಕ್ಕೆ ತೆರಳುವ ವರ್ಣನೆಯು, ಮಂತ್ರಿಕುಮಾರನು ಮೋಹಪರವಶನಾದ ವಸಂತತಿಲಕನಿಗೆ ಧರ್ಮೋಪದೇಶವನ್ನು ರಾಜನೀತಿಗಳನ್ನು ಬೋಧಿಸುವಿಕೆ, ರಾಜಪುತ್ರಿಯು ಅಂತಃಪುರಕ್ಕೆ ತೆರಳಿದಬಳಿಕ ವಿರಹವ್ಯಥೆಯಿಂದ ಸಂತಾಪಪಡುವ ವರ್ಣನೆಯು, ವಸಂತತಿಲಕನು ವಿರಹವ್ಯಥೆಯಿಂದ ಒಂದು ಪತ್ರವನ್ನು ಬರೆದು ರಾಜಪುತ್ರಿಗೆ ಕಳುಹಿಸುವಿಕೆ, ರಾಜಪುತ್ರಿಯು ಆ ಪತ್ರವನ್ನು ಓದುವಿಕೆ ಇದು ಬಹು ಮನೋಹರವಾಗಿರುವದು. ಮಂತ್ರಿಕುಮಾರನು ವಸಂತತಿಲಕನ ದುರವಸ್ಥೆಯನ್ನು ತಿಳಿಸುವದಕ್ಕಾಗಿ ರಾಜಪುತ್ರಿಯ ಬಳಿಗೆ ಬರುವಿಕೆ, ಮಂತ್ರಿಕುಮಾರನು ಜಗದೇಕಸುಂದರಿಗೆ ಪತಿವ್ರತಾಧರ್ಮವನ್ನು ಬೋಧನೆ ಮಾಡುವಿಕೆ ಇದರೊಳು ಸೀತಾ ಲೋಪಾಮುದ್ರಾ, ದಮಯಂತಿ ಸಾವಿತ್ರಿ, ಅನುಸೂಯೆ ಮೊದಲಾದ ಮಹಾಪತಿವ್ರತಾಸ್ತ್ರೀಯರ ಸಚ್ಚರಿತ್ರೆಯನ್ನು ಸಂಕ್ಷೇಪವಾಗಿ ವಿವರಿಸಿರುತ್ತೆ. ಮಂತ್ರಿಕುಮಾರನು ಮನ್ಮಥನ ಮಹಿಮೆಯನ್ನು ಅನೇಕವಿಧವಾಗಿ ಹೊಗಳುವಿಕೆ, ಮಂತ್ರಿಕುಮಾರನು ವಸಂತತಿಲಕನಿಗೆ ಪೂರ್ವದೊಳು ಅನೇಕರು ಕಾಮಪೀಡಿತರಾಗಿ ಶ್ರಮಪಟ್ಟರೆಂದು ಪರಿಪರಿಯಿಂದ ಬುದ್ಧಿಹೇಳುವ ವರ್ಣನೆಯು, ರಾಜಪುತ್ರಿಯು ಮನ್ಮಥವ್ಯಥೆಯಿಂದ ಮೂರ್ಛಾಕ್ರಾಂತಳಾಗಿ ಪುನಃ ಚೇತರಿಸಿಕೊಂಡು ಸಮರಾತ್ರಿಯೊಳು ಅಂತಃಪುರವನ್ನು ಬಿಟ್ಟು ವಸಂತತಿಲಕನಿರುವ ಸರೋವರದಬಳಿಗೆ ಬರುವ ವರ್ಣನೆಯು.. ವಸಂತತಿಲಕನು ವಿರಹವ್ಯಥೆಯಿಂದ ಮೃತನಾಗುವಿಕೆ ಮಂತ್ರಿಕುಮಾರನು ಆತನ ಗುಣಾತಿಶಯಗಳನ್ನು ವರ್ಣಿಸುತ್ತಾ ಅನೇಕವಿಧವಾಗಿ ದುಃಖಿಸುವಿಕೆ, ಈ ದುಃಖದ ವಿಷಯವನ್ನು ಓದಿದಕೂಡಲೆ ಎಂಥಾವರಿಗಾದರೂ ಕಣ್ಣಿನಲ್ಲಿ ನೀರುಬಾರದೆ ಇರಲಾರದು ಜಗದೇಕಸುಂದರಿಯು ಮೃತನಾದ ವಸಂತತಿಲಕನ ದೇಹದಮೇಲೆ ಬಿದ್ದು ಅನೇಕವಿಧವಾಗಿ ಪರಿಪರಿಯಿಂದ ಗೋಳಾಡುವ ವರ್ಣನೆಯು, ಬಳಿಕ ರಾಜಪುತ್ರಿಯು ಅಗ್ನಿಕುಂಡದೊಳು ಬಿದ್ದು ದೇಹತ್ಯಾಗ ಮಾಡಿಕೊಳ್ಳುವ ವರ್ಣನೆಯು, ಆಸಮಯದೊಳು ಮನ್ಮಥನು ಪ್ರತ್ಯಕ್ಷನಾಗಿ ಆಕೆಯ ಪತಿವ್ರತಾಮಹಿಮೆಗೆ ಮೆಚ್ಚಿ ವಸಂತತಿಲಕನಿಗೆ ಪ್ರಾಣದಾನವನ್ನು ಕೊಟ್ಟು ಕಾಪಾಡುವ ವರ್ಣನೆಯು, ಬಳಿಕ ಈರ್ವರಿಗೂ ನಡೆದ ಸಂಭಾಷಣೆಯು, ರಾಜಪುತ್ರಿಯು ತನ್ನ ತಂದೆ ಜಯಶೀಲಮಹಾರಾಜನಿಗೆ ಪತ್ರಿಕೆಯನ್ನು ಬರೆದು ಬರಮಾಡಿಕೊಳ್ಳುವ ವರ್ಣನೆಯು, ವಸಂತತಿಲಕನಿಗೂ ಜಗದೇಕಸುಂದರಿಗೂ ಕಲ್ಯಾಣಕಾರ್ಯ ನೆರವೇರಿಸುವ ವರ್ಣನೆಯು, ಬಳಿಕ ವಸಂತತಿಲಕನು ಪತ್ನಿ ಮಂತ್ರಿಸಮೇತನಾಗಿ ತನ್ನ ಪಟ್ಟಣಕ್ಕೆ ಬರುವಿಕೆ, ಮಂತ್ರಿಕುಮಾರನ ವಿವಾಹ ನೆರುಗುವ ವರ್ಣನೆಯು, ರಾಜನು ವಸಂತತಿಲಕನಿಗೆ ರಾಜ್ಯಭಾರವನ್ನು ಒಪ್ಪಿಸಿ ವಾನಪ್ರಸ್ಥಾಶ್ರಮಕ್ಕೆ ತೆರಳುವಿಕೆ, ವಸಂತತಿಲಕನು ಮಂತ್ರಿಕುಮಾರನಿಗೆ ಸಂಸಾರವಿಷಯದೊಳು ಜ್ಞಾನೋಪದೇಶವನ್ನು ಮಾಡುವಿಕೆ, ಈ ಗ್ರಂಥದ ಅಂತ್ಯದವರಿಗೂ ಶೃಂಗಾರರಸವು ಆನಂದರಸವು, ಶೋಕರಸವು, ತುಂಬಿ ತುಳುಕುತ್ತಿದೆ ಈ ಗ್ರಂಥವನ್ನು ಓದುವದಕ್ಕೆ ಪ್ರಾರಂಭಮಾಡಿದಮೇಲೆ ಪೂರೈಸುವವರಿಗೂ ಬಿಡುವದಿಲ್ಲ ಮತ್ತು ಈ ಗ್ರಂಥದೊಳು ಧಾತುಪುಷ್ಟಿಯಾಗುವದಕ್ಕೂ, ಸಂಭೋಗಸುಖಪ್ರಾಪ್ತಿಯಾಗುವದಕ್ಕೂ ತೆಗೆದುಕೊಳ್ಳಬೇಕಾದ ಲೇಹ್ಯಗಳನ್ನು ಮಾಡುವ ಕ್ರಮಗಳು, ಬಾದಾಮೀಹಲ್ವಾ, ಕಾಮೋದ್ದೀಪಿಕಾಲೇಹ್ಯಗಳು, ಮೇಹರೋಗನಿವಾರಣ ಮೇಹವ್ರಣ ಭಗಂದರ, ಧಾತುನಷ್ಟ ಸ್ವಪ್ನಾವಸ್ಥೆ, ನಪುಂಸಕತ್ವ ಮೊದಲಾದವುಗಳು ಪರಿಹಾರವಾಗುವದಕ್ಕೆ ಮಾಡತಕ್ಕ ಔಷಧಕ್ರಮಗಳನ್ನು ವಿಶದವಾಗಿ ಬರೆದಿರುತ್ತೆ. ಗ್ರಂಥಾಪೇಕ್ಷೆಪುಳ್ಳವರು ಬೇಗನೆ ಬರೆದು ತರಿಸಿಕೊಳ್ಳಿರಿ. ಪ್ರತಿಗಳು ಬಹಳ ಕಡಮೆ ಉಳಿದಿರುತ್ತವೆ ; ಆಲಸ್ಯಮಾಡಿದರೆ ಶಿಕ್ಕುವದಿಲ್ಲ.

ಗ್ರಂಥದ ಕ್ರಯ ಪ್ರತಿ ೧ಕ್ಕೆ ರೂ ೧—೪—೦

ವಿಳಾಸ — ಮೇನೇಜರ್, ಶಿವಾನಂದ ಬುಕ್ ಡಿಪೋ,

ಹರಪನಹಳ್ಳಿ (ಜಿಲ್ಲಾ ಬಳ್ಳಾರಿ.)

[illegible] ಪ್ರೆಸ್, [illegible]

ಈಗ ತೆರೆದಿರುತ್ತಾರೆ. ಟ್ರಾನ್ಸಿಟ ಗಾಡಿಯು ಮಂಗಳೂರಿಂದ [illegible]ಗೂ. ಗುರ್ಜರದಿಂದ ೩॥ ಘಂಟೆಗೂ ಬಿಡೋಣಾಗುವದು. | ಕಾರಖಾನೆಯು ಅಡಚಣೆಯಲ್ಲಿ ಬಿದ್ದದೆ.

ಅಮೃತಾಂಜನ.

ಜಗತ್ಪ್ರಸಿದ್ಧವಾದ ಬೇನೆಹಾರಿ ಮುಲಾಮು

ಇದರ ಉಪಯೋಗದಿಂದ — ವಾತ ಸಂಧಿವಾತ, ಕಾಲುನೋವು, ಶಿರೋಭಾರ, ಅರ್ಧಾಂಗ ವಾಯು, ಉಳುಕು, ಎದೆ ನೋವು, ಸೊಂಟ ನೋವು, ಶೀತ, ಕೆಮ್ಮು, ಗಂತಶೂಲ, ಮೂಲವ್ಯಾಧಿ ಚೇಳು ಕಡಿತ, ಆನೆಗಾಲು, ಸುಟ್ಟ ಗಾಯ, ಮೊದಲಾದ ಎಲ್ಲಾ ತರದ ನೋವುಗಳ ಮೇಲೆ ದಿವ್ಯ ಔಷಧವಾಗಿರುತ್ತದೆ ಸಾವಿರಾರು ಡಾಕ್ಟರರೂ, ಇದಕ್ಕೆ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ ಪ್ರತಿ ತಿಂಗಳಲ್ಲೂ 25,000 ಬಾಟ್ಲಿಗಳು ಮಾರಲ್ಪಡುತ್ತವೆ ಬಾಟ್ಲಿ ಒಂದರ ಕಿಮ್ಮತು ಆಣೆ 8 ಡಜನ್ 1ಕ್ಕೆ ರೂ 5—4—0 ವಿ ಪಿ ಖರ್ಚು ಪ್ರತ್ಯೇಕ.

ಎಚ್ಚರಿಕೆ:—ಅಮೃತಾಂಜನವನ್ನು ಪಡಕೊಳ್ಳುವಾಗ ಸುಂದರವಾದ ಮತ್ತು ಹಲವು ಛಾಪೆಗಳುಳ್ಳ ಕರಡಿಗೆ ಸಮೇತ ಪಡಕೊಳ್ಳಿರಿ

ಗಜಕರ್ಣದ ಮುಲಾಮು.

ಮೂರು ಸರ್ತಿ ಹಚ್ಚಿದ್ದಾಗಿರುವವರೊಳಗೆ ಗಜಕರ್ಣ ನಾಶವಾಗಿ ಹೋಗುವದು ಇದರಿಂದ ಉರಿಯು ಬರುವದಿಲ್ಲ ಚರ್ಮವು ಕಪ್ಪಾಗುವದಿಲ್ಲ ಇದುವರೆಗೆ ಒಂದು ಮಿಲಿಯ ಡಬ್ಬಿಗಳು ಮಾರಲ್ಪಟ್ಟವು. ರಾಜಾರಾಣಿ ಟ್ರೇಡ್ ಮಾರ್ಕ್ 0—6—0 12 ಡಬ್ಬಿಗಳಿಗೆ 3—8—0 ವಿ ಪಿ ಪ್ರತ್ಯೇಕ

ದಂತಮಂಜನ.

ರಾಜಾರಾಣಿ ಟ್ರೇಡ್ ಮಾರ್ಕ್

ಈ ಮಂಜನದಿಂದ ಹಲ್ಲುಗಳನ್ನು ದಿನಾಗಲೂ ತಿಕ್ಕುವದರಿಂದ ಹಲ್ಲುನೋವು, ಹಲ್ಲುಗಳಿಂದ ಬರುವ ರಕ್ತ, ಹಲ್ಲುಗಳ ವಾಸನೆ, ಮುಂತಾದವುಗಳೆಲ್ಲಾ ನಿಲ್ಲುತ್ತವೆ. ಇದರಲ್ಲಿ ಹಲವು ನಮೂನೆಯ ಔಷದಗಳಿವೆ ಬರೀ ಚೋಕಿನ ಹುಡಿ ಅಲ್ಲ. ಡಬ್ಬಿ 1ಕ್ಕೆ 0—2—0 ವಿ ಪಿ ಪ್ರತ್ಯೇಕ.

ಮೋಹಿನಿ ತೈಲ.

ಈಗ ಹಲವು ನಮೂನೆಯ ತೈಲಗಳು ಉಪಯೋಗಿಸಿದವರು ಈ ನಮ್ಮ ಸುಗಂಧಮಯವಾದ ಮೋಹಿನಿ ತೈಲವನ್ನು ಒಂದು ಸಾರಿ ಉಪಯೋಗಿಸಿ ನೋಡಿರಿ. ಇದರಲ್ಲಿ ಹ್ವೈಟ್ ಒಯಿಲ್ ಇಲ್ಲಾ: ಇದು ಗಿಡಮೂಲಿಕೆಗಳಿಂದಲೂ ಬದಾಮಿನ ಎಣ್ಣೆಯಿಂದಲೂ ತಯಾರಿಸಲ್ಪಟ್ಟಿದೆ ಇದರಿಂದ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ ಬೆಳೆಯುವವು.

ಬಾಟ್ಲಿ ಒಂದರ ಕಿಮ್ಮತು ಆಣೆ 0—12—0

ಸುಂದರಿ ಮುಲಾಮು.

ಮುದ್ದಣಗಳನ್ನು ನಾಶಪಡಿಸಿ ಮುಖವನ್ನು ಸುಂದರಗೊಳಿಸುವದು. ಡಬ್ಬಿ 1ಕ್ಕೆ ರೂ 0—8—0

ವಜ್ರಗುಟಿಕ.

ಧಾತುಪುಷ್ಟಿ, ಧಾತುವೃದ್ಧಿ, ಶಕ್ತಿವರ್ಧಕ 20 ಗುಳಿಗೆಗಳ ಡಬ್ಬಿ ಒಂದರ ರೂ 1—0—0

ಕೆ. ನಟರಾಜನ್ ಎಡಿಟರ್, ಇಂಡಿಯನ್ ಸೋಸಿಯಲ್ ರಿಫ್ರೋರ್ಮರ್:—ಅಮೃತಾಂಜನ ಎಲ್ಲಾ ಔಷಧಗಳಿಗಿಂತಲೂ ಬಹಳ ಉತ್ತಮವಾದ ಔಷಧ

ಡಬ್ಲ್ಯು ಮೆಕ್ಸ್‌ವೆಲ್, ಮೈಸೂರು:—ಅಮೃತಾಂಜನದಿಂದ ಎಂಥಾ ಕಠಿಣವಾದ ವಾತ ನೋವಾದರೂ ನಿಲ್ಲುತ್ತದೆ

ಆರ್. ಆರ್. ಗಂಗೋಲಿ:—ಅಮೃತಾಂಜನ ವಾತ, ತಲೆನೋವುಗಳ ಮೇಲೆ ದಿವ್ಯ ಔಷಧ.

ಡಾಕ್ಟರ್ ಡಾಂಡೆಕರ್, ಎಲ್. ಎಮ್. ಎಂಡ್ ಎಸ್:—ಅಮೃತಾಂಜನ ಎಲ್ಲಾ ನೋವುಗಳ ಮೇಲೆ ದಿವ್ಯ ಔಷಧ

ನಮ್ಮ ಔಷಧಗಳನ್ನು ಪಡಕೊಳ್ಳುವಾಗ ಅಮೃತಾಂಜನ ಡಿಪ್ರೊ, ಮುಂಬಯಿ ಎಂಬ ಹೆಸರನ್ನು ಓದಿನೋಡಿ ಪಡಕೊಳ್ಳಿರಿ.

ಅಮೃತಾಂಜನ ರಖಮಾಗಿಯೂ, ಚಿಲ್ಲರೆಯಾಗಿಯೂ ಬೇಕಾಧವರು ನಮ್ಮ ಮುಂಬಯಿ ಆಫೀಸಿಗೆನೇ ಬರಿಯಬೇಕು. ಮದ್ರಾಸು ಆಫೀಸಿನವರು ರಖಮಾಗಿ ಅಮೃತಾಂಜನ ರವಾನಿಸಿ ಕೊಡುವ ಏರ್ಪಾಡು ಮಾಡಲಿಲ್ಲ.

ಮಂಗಳೂರಲ್ಲಿ—ಎಲ್ಲಾ ಔಷಧಗಳು ಈ ಕೆಳಗಿನ ಕಂಪೆನಿಗಳಲ್ಲಿ ಸಿಕ್ಕುವವು.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್, ಪರ್ಲ್ ಎಂಡ್ ಸನ್ಸ್, ದಿ ಊಲನ್ ಮಾರ್ಟ್, ಕೊಚ್ಚಿಕಾರ ಬ್ರದರ್ಸ್ ಉಡುಪಿ.

ಅಮೃತಾಂಜನ ಡಿಪ್ರೊ,

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ್,
ಮುಂಬಯಿ,

ಕರ್ನಾಟಕ ವೃತ್ತ ಮತ್ತು ಧನಂಜಯ.

ಕಳೆದ 25 ವರ್ಷಗಳಿಂದ ಭಾಷಾ ಸೇವೆಯನ್ನೂ ದೇಶ ಸೇವೆಯನ್ನೂ ಮಾಡುತ್ತಿರುವ ಈ ವಾರಪತ್ರಿಕೆಯು ಧಾರವಾಡದಲ್ಲಿ ಪ್ರತಿ ಮಂಗಳವಾರವೂ ಪ್ರಕಟಿಸಲ್ಪಡುವದು ಲೋಕವ್ಯವಹಾರದ ಉಪಯುಕ್ತ ವಿಷಯಗಳ ಸದಭಿಪ್ರಾಯವನ್ನು ಜನರಲ್ಲಿ ಉಂಟುಮಾಡುವಂಥ ಚಲೋ ಸ್ಫುಟ ಲೇಖಗಳುಳ್ಳ ಮುಂಬಯಿ ಕರ್ನಾಟಕದ ಉತ್ತಮ ತರಗತಿಯ ಈ ಪತ್ರವನ್ನು ದಕ್ಷಿಣಕನ್ನಡದವರೂ ಓದುವದು ಅಗತ್ಯ.

ದೊಡ್ಡ ರೊಯಲ್ ಸ್ಯಾಜಿನ ಈ ಪತ್ರಿಕೆಗೆ ವಾರ್ಷಿಕ ಚಂದಾ ಮೊಬಲಗು ಟಪ್ಪಾಲು ಹಾಸಲು ಸೇರಿ ರೂ. ೨—೪—೦ ಆಗಿರುತ್ತದೆ; ಚಂದಾದಾರರಾಗಿ ಸೇರಬಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಮ್ಯಾನೇಜರ್, ಕರ್ನಾಟಕ ವೃತ್ತ ಮತ್ತು ಧನಂಜಯ,
ಮಂಗಳವಾರಪೇಟೆ, ಧಾರವಾಡ.

ಶ್ರೀ ರಾಮನಾಮಸ್ತುತಿ.

ಇದು ಸುಂದರವಾದ ಸಣ್ಣ ಪುಸ್ತಕ! ಭಜನೆಗೂ ಪಾರಾಯಣಕ್ಕೂ ಯೋಗ್ಯವಾಗಿದೆ. ವ್ಯಾಪಾರಿಗಳು ವಿ. ಪಿ. ಮೂಲಕ ತರಿಸಿ ಮಾರುವದರಿಂದ ವಿಶೇಷ ಲಾಭ ಕಲ! ಬೆಲೆ 100 ಪುಸ್ತಕಗಳಿಗೆ 0—7—0. 300ಕ್ಕೆ 1—2—0. 500ಕ್ಕೆ 1—12—0. 1000ಕ್ಕೆ ರೂ. 3—0—0.

ನಮ್ಮ ವಿಳಾಸ:
ವಿ. ಪಿ ಡಿಪ್ಪೋ,
ಕೋಲಾರ್.

ಗಮನ ಕೊಡಿರಿ! ತ್ವರೆ ಮಾಡಿರಿ!!

ಶ್ರೀ ಮಾಂಗಿರೀಶ ಬಾಮ್

ತಲೆನೋವು, ಬಕ್ಕೆನ್ನೆ ನೋವು, ಹಲ್ಲು ನೋವು, ಸೊಂಟನೋವು, ಎಲ್ಲಾ ಪುಪ್ಫುಸ ರೋಗಗಳು, ಉಳುಕು, ವಾಯುವಿನಿಂದ ಹೊಟ್ಟೆ ಉಬ್ಬರಿಸುವದು, ಇವುಗಳನ್ನು ಶೀಘ್ರವಾಗಿ ಗುಣಪಡಿಸುವದು. ಸ್ಕ್ರೂ ಬಾಯಿಯ ಲೋಹದ ಮುದುರುವ ನಳಿಗೆಗಳಲ್ಲಿರುವದರಿಂದ ಬಾಟ್ಲಿಗಳಲ್ಲಿರುವ ಬಾಮುಗಳೋಪಾದಿ ಸೂರ್ಯನ ಬೆಳಕಿಗೂ, ಗಾಳಿಗೂ, ತಾಗದೆ ಎಷ್ಟು ಕಾಲಕ್ಕೂ ಹಾಳಾಗುವದಿಲ್ಲ. ನಳಿಗೆಯ ಅಡಿಯನ್ನು ಮಾತ್ರ ಒತ್ತಿದಲ್ಲಿ ಬೇಕಾದಷ್ಟು ಮಾತ್ರ ಬಾಮ್ ಹೊರಗೆ ಬರುವದು. ಇದಲ್ಲದೆ ಪ್ರತಿ ನಳಿಗೆಯಲ್ಲಿ ಬಾಟ್ಲಿಗಳಲ್ಲಿರುವದರ 1½ ಪಾಲು ಬಾಮು ಇರುವದು. ನಳಿಗೆ ಕ್ರಯ ರೂ. 0—8—0.

ವಿಸ್ಫೋಟಿಕ ಮುಟ್ಟಂ, ಸಿಡುಬು, ಕೋರ, ಕೊಪ್ಪೆ ಮಕ್ಕಳಚೇಷ್ಟೆ ಮುಂತಾದ ಜಾಡ್ಯಗಳಿಗೆ ಅತ್ಯುತ್ತಮವಾದ್ದು. ಸಿಡುಬು ಮುಂತಾದ ಅಂಟುರೋಗಗಳಲ್ಲಿ ಜ್ವರ ಕಾಣಿಸಿಕೊಳ್ಳುವಾಗ ಒಂದು, ಯಾ ಎರಡು ಮಾತ್ರೆಯನ್ನು ಬಿಸಿ ನೀರಿನಲ್ಲಿ ತೇದು ಕೊಟ್ಟರೆ ಕೂಡಲೇ ಜ್ವರ ಗುಣವಾಗುವದು. ಮಕ್ಕಳ ಚೇಷ್ಟೆಗೆ ಒಂದು ಮಾತ್ರೆಯಂತೆ ಪ್ರತಿದಿನವೂ ಮೊಲೆಹಾಲಿನಲ್ಲಿ ತೇದು ದಿನಕ್ಕೆ 2 ಸಾರಿ ಕೊಟ್ಟರೆ ಪೀಡೆಯು ಪರಿಹಾರವಾಗಿ ಪುಷ್ಟಕಾಯವಾಗಿ ಬೆಳೆಯುವರು. ಎಲ್ಲಾ ತರದ ಜ್ವರಗಳಿಗೂ ಉತ್ತಮವಾದ್ದು. 12 ಮಾತ್ರೆಗಳ ಪೊಟ್ಟಣ 1ಕ್ಕೆ 0—6—0.

ಸ್ವರಸುಖಿ. ಕೆಮ್ಮು, ಗಂಟಲುನೋವು, ಧ್ವನಿ ಬದಲಾಗುವದು, ಅಗ್ರ ಮುಂತಾದವುಗಳಿಗೆ ಅತ್ಯುತ್ತಮ. ಎಲೆ ಅಡಿಕೆಯ ಸಂಗಡ ತಿನ್ನುವುದರಿಂದ ಹಲ್ಲುಗಳಿಗೂ, ಜೀರ್ಣಕ್ಕೂ ಸಹಕಾರಿ. ದೊಡ್ಡ ಪೊಟ್ಟಣ 1ಕ್ಕೆ 0—1—6. ಸ್ಯಾಂಪಲ್ ಪೊಟ್ಟಣ 0—0—6.

ಕಾರ್ಬೋಲಿಕ್ ಟೂತ್ ಪೌಡರ್. ಈ ದಂತಮಂಜನದ ಹುಡಿಯಿಂದ ಹಲ್ಲುಗಳನ್ನು ಪ್ರತಿದಿನವೂ ತಿಕ್ಕುವುದರಿಂದ, ಹಲ್ಲುಹುಳುಕ, ಹಲ್ಲುನೋವು, ವಸಡುಹುಣ್ಣು, ಮುಂತಾದವುಗಳು ಗುಣವಾಗಿ ಹಲ್ಲುಗಳು ಬಲವಾಗುವವು. ದೊಡ್ಡ ಡಬ್ಬಿ 1ರ ಕ್ರಯ 0—2—0. ಪ್ರಶಂಸೆಯು ಯೋಗ್ಯವಲ್ಲ. ಒಮ್ಮೆ ತರಿಸಿ ಪರೀಕ್ಷಿಸಿದರೆ ತಿಳಿದೀತು.

ಇವುಗಳ ವಿನಹಾ ಆಯುರ್ವೇದವನ್ನು ಅನುಸರಿಸಿ ತಯ್ಯಾರಿಸಿದ ಅನೇಕ ಔಷಧಗಳು ನಮ್ಮಲ್ಲಿ ತಯ್ಯಾರಿರುತ್ತವೆ. ರೋಗ ಪ್ರಕೃತಿಯನ್ನು ಈ ಕೆಳಗಿನ ವಿಳಾಸಕ್ಕೆ ಅರ್ಧ ಆಣೆ ಟಪ್ಪಾಲ್‌ಟಿಕೇಟು ಸಮೇತ ಬರಕೊಂಡಲ್ಲಿ ತಕ್ಕ ಔಷಧದ ದರವನ್ನು ತಿಳಿಸಲಾದೀತು. 1 ಡಜನ್ ಬಾಮ್ ತರಿಸಿಕೊಳ್ಳುವವರಿಗೆ ಒಂದು ಟ್ಯೂಬ್ ಹೆಚ್ಚಿಗೆ ಕೊಡಲಾದೀತು. ಟಪ್ಪಾಲ್ ಹಾಸಲು ಮಾಫಿ. ಏಜಂಟರಾಗುವವರಿಗೆ ಭರಪೂರ ಕಮ್ಮಿಶನ್ ಕೊಡಲಾದೀತು.

M. D. R. & SONS
Srimangireesh Aushadhalaya
UDIPI. S. C.

ಒಂದು ಸಾರಿ ಕೊಂಡು ನೋಡಿರಿ.

ಒಟ್ಟೊ ದಿಲ್-ಚಮಾನ್

(ರಿಜಿಸ್ಟರ್ಡ.)

ಸುರಭಿಗಳಲ್ಲಿ ಮಕುಟವರ್ಧನ!

ಬಹಳ ಸುವಾಸನೆಯುಳ್ಳ ಲೋಕಪ್ರಖ್ಯಾತವಾದ ಮತ್ತು ಈಗಿನ ಕಾಲಕ್ಕನುಸಾರವಾದ ಸದಾ ಸುವಾಸನೆಯುಳ್ಳ ಸುಗಂಧವು. ಒಂದೆರಡು ತಟಕು ಕೈವಸ್ತ್ರದಲ್ಲಿ ತಾಗಿಸಿದ್ದೇ ಆದರೆ 8 ದಿವಸಗಳ ವರೆಗೂ ಪರಿಮಳವಿರುವದು.

	ರೂ.	ಆ.	ಪೈ.
ಕ್ರಯ ½ ಡ್ರಾಮ್ ಟ್ಯೂಬ್	0	8	0
1 ,,	0	12	0
½ ಔನ್ಸ ಟ್ಯೂಬ್	2	0	0
ಒಟ್ಟೊ ದಿಲ್-ಚಮಾನ್ ಪರಿಮಳದ ಕಾರ್ಡುಗಳು ಡಜನಿಗೆ	0	12	0

ವಿ. ಪಿ. ಚಾರ್ಜು 0—4—0 ಬೇರೆ.

ಪ್ರಾಮುಖ್ಯ ಏಜಂಟರು—:

ಎಚ್. ಆರ್. ಮೋಡಿ ಎಂಡ್ ಕೋ.,
10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬೇ.

H. R. MODY & Co.,
10 Princes Street, BOMBAY.

ವೈಶೇಷ್ಯವು.

ನಾವು ಲೋಕ ಪ್ರಖ್ಯಾತ ಪೇಟೆಂಟ್ ಔಷಧಿಗಳಿಗೂ ಅತ್ತರು ಮೊದಲಾದ ಪರಿಮಳ ದ್ರವ್ಯಗಳಿಗೂ ಪ್ರಾಮುಖ್ಯ ಏಜಂಟರಾಗಿರುತ್ತೇವೆ.

ಎಕ್ಸೆಲ್ಸಿಯರ್ ಸಾರ್ಸಪರಿಲ್ಲಾ.

(ಐಯೋಡೈಸ್ಡ್)

ಎಂಬ

ರಕ್ತಶುದ್ಧಿಯ ದೀಪಕ.

ಕ್ರಯ ಬಾಟ್ಲಿಗೆ ರೂ. 1—4—0 ಮತ್ತು ರೂ. 2—0—0.

ಪಿಯರ್ಸ್ ನರ್ವೈನ್ ಟೊನಿಕ್ ಪರ್ಲ್ಸ

(ಆದರ್ಶದೀಪಕ.)

ಆರೋಗ್ಯವನ್ನು ಉಂಟುಮಾಡುವದು, ಅಶಕ್ತಿಯನ್ನು ಹೋಗಗೊಳಿಸುವದು, ಅಶಕ್ತರಾದ ಬಾಲಕರಿಗೂ ಬಾಲಕಿಯರಿಗೂ ಬಹಳ ಪ್ರಯೋಜನಕಾರಿ!

ಕ್ರಯ ೩೦ ಮಾತ್ರೆಗಳ ಶೀಸೆ ೧ಕ್ಕೆ ರೂ. ೧—೮—೦.

ರಾಮಬಾಣ ಗಜಕರ್ಣ ಮುಲಾಂ.

ಗಜಕರ್ಣಕ್ಕೆ ಅತ್ಯುತ್ಕೃಷ್ಟವಾದ ಮುಲಾಂ. ಡಬ್ಬಿ 1ಕ್ಕೆ 4 ಆಣೆ.

ಮೋಡಿಯವರ

ಕಲೆಶಿಡಿತ ಬಿಲ್ಲೆಗಳು.

ಒಂದೇ ನಿಮಿಷದಲ್ಲಿ ಗುಣ.

ಒಂದು ಬಿಲ್ಲೆಯನ್ನು ನೀರಿನಲ್ಲಿ ಹಾಕಿ ಸೇವಿಸಬೇಕು. 25 ಬಿಲ್ಲೆಗಳ ಶೀಸೆ 1ಕ್ಕೆ 0—12—0. ಇತರ ವಿಶೇಷ ಔಷಧಗಳ ಪಟ್ಟಿಗೆ ಬರಕೊಳ್ಳಿರಿ.

H. R. Mody & Co., ಎಚ್. ಆರ್. ಮೋಡಿ ಎಂಡ್ ಕೋ.,
Chemist, ಕೆಮಿಸ್ಟ್,
10 PRINCES ST., BOMBAY. 10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬೇ.

ಜಯವಿಜಯ

ಅಥವಾ

ತೂಗಾಡುವ ಅಸ್ಥಿಪಂಜರ.

ಇದರಲ್ಲಿ "ದಿಲೀಪಸಿಂಹ ಲುಹಾರ" ಎಂಬವನು ತನ್ನ ಹಗೆ ತೀರಿಸುವುದಕ್ಕೋಸ್ಕರ ಎಂಥೆಂಥಾ ಅದ್ಭುತ ಕಾರ್ಯಗಳನ್ನೆಸಗಿ ಕಡೆಗೆ ಹೇಗೆ ಜಯ ಹೊಂದಿ ಸುಖವನ್ನನುಭವಿಸಿದನು?

ಚಪ್ಪಿ ಸ್ತ್ರೀಯು ತನ್ನ ಪತಿವ್ರತಾ ಧರ್ಮಕ್ಕೋಸ್ಕರ ವಿವಿಧ ಕಠಿಣ ಕಾರ್ಯಗಳನ್ನು ಕಣ್ಣಾರೆ ಕಂಡರೂ ಎದೆಗುಂದದೆ ಇರಲು ಕಡೆಗೆ ತನ್ನ ಮೂರು ವರ್ಷದ ಪುತ್ರನನ್ನು ತನ್ನ ಸಮಕ್ಷಮದಲ್ಲೇ ತಲೆ ಕೆಳಗಾಗಿ ತೂಗಾಡಿ ಕಟ್ಟಿ, ಕಠಾರಿಯಿಂದ ತಿವಿದು ಅದರ ರಕ್ತದಿಂದ ಅವಳಿಗೆ ಸ್ನಾನಮಾಡಿಸಿ, ಆ ತೂಗಾಡಿಸಿಟ್ಟ ಮಗುವಿನ ಹೆಣವನ್ನು ನಿರಂತರ ಅಲ್ಲಿಯೇ ಇರಗೊಳಿಸಿ, ಅದರ ರಕ್ತವನ್ನು ಪಕ್ಕದಲ್ಲಿ ಪಾತ್ರೆಯಲ್ಲಿ ತುಂಬಿಸಿ ಬಂದಿಖಾನೆಯಲ್ಲಿ ಅವಳ ಪಕ್ಕದಲ್ಲೇ ಇಟ್ಟು, ಅವುಗಳನ್ನು ನೋಡಿಯಾದರೂ ಮನ ಕರಗಿ ವಶಳಾಗುವಂತೆ ಶತಪ್ರಯತ್ನಗೈದರೂ ಪರವಶಳಾಗದೆ ಆ ಸತಿಯು ತನ್ನ ಪತಿವ್ರತಾ ಧರ್ಮದಲ್ಲೇ ದೃಢವಾಗಿದ್ದು ತನ್ನ ಶೀಲವನ್ನು ಹೇಗೆ ಕಾಪಾಡಿಕೊಂಡಳು?

ದಾಸನಾಗಿದ್ದ ನೀಚ ಸೇವಕನೊಬ್ಬನು ತನ್ನ ಅರಸನನ್ನು ಕೊಲ್ಲಿಸಿ ರಾಜ್ಯಭಾರವನ್ನು ತಾನೇ ವಹಿಸಿಕೊಂಡು ನಾನಾಬಗೆಯ ದುಷ್ಕಾರ್ಯಗಳನ್ನು ನಡಿಸಿ, ಕಡೆಗೆ ತಾನು ಗೈದ ದುಷ್ಕರ್ಮಗಳಿಗೆ ಹೇಗೆ ತಕ್ಕ ಫಲವನ್ನನುಭವಿಸಿದನು? ಎಂಬ ಎಲ್ಲಾ ವಿವರವನ್ನು ವ್ಯಕ್ತಪಡಿಸುತ್ತದೆ. ಅದ್ಭುತವಾಗಿಯೂ, ರಸಭರಿತವಾಗಿಯೂ ಇರುವ ಈ ಗ್ರಂಥವನ್ನು ಓದುವದರಿಂದ ಪುರುಷರಲ್ಲಿ ಪೌರುಷವೂ ಸ್ತ್ರೀಯರಲ್ಲಿ ಪತಿವ್ರತಾ ಧರ್ಮವೂ ನೆಲೆಗೊಳ್ಳುವದು!

ಕ್ರಯ: 0–12–0 ಪೋಸ್ಟು ಖರ್ಚು ಪ್ರತ್ಯೇಕ. ಹನ್ನೆರಡು ಪುಸ್ತಕಗಳನ್ನು ಒಂದೇಸಲ ಪಡಕೊಳ್ಳುವವರಿಗೆ ಒಂದು ಪುಸ್ತಕ ಉಚಿತವಾಗಿ ದೊರಕುವುದು.

ತಾಜ ಕಲಂ:— ಈ ನನ್ನ ಕಾರ್ಯಕ್ಕೆ ಸ್ವಜಾತಿ ಗೃಹಸ್ಥರು ಜಾತಿಯಾಭಿಮಾನದಿಂದಲೂ ವಿಜಾತಿ ಮಹನೀಯರು ಮಿತ್ರಾಭಿಮಾನದಿಂದಲೂ ಪ್ರೋತ್ಸಾಹಕೊಟ್ಟು ಸರ್ವರೂ ಓದಿ ಪ್ರಯೋಜನ ಹೊಂದುವಂತೆ ಕೋರುತ್ತೇನೆ

ವಿಳಾಸ:— **V. O. Amin,**
C/o E. A. Goll Esq.
Sirdar Palace, Apollo Street,
BOMBAY.

ವಿನಾಮೂಲ್ಯ! ವಿನಾಮೂಲ್ಯ!! ವಿನಾಮೂಲ್ಯ!!!

ಆರ್ಯಚಿಕಿತ್ಸಾರಹಸ್ಯ.

ಆರ್ಯವೈದ್ಯದ ರಹಸ್ಯವೇನೆಂಬದನ್ನು ತಿಳಕೊಳ್ಳಲಿಕ್ಕೆ ಇಚ್ಛೆಯುಳ್ಳವರಿಗೆ ಆರ್ಯಚಿಕಿತ್ಸಾ ರಹಸ್ಯವು ಪರಮ ಸಾಧನವಾಗಿದೆ. ನಮ್ಮ ದೇಶೀಯ ವೈದ್ಯವಿದ್ಯೆಯಲ್ಲಿ ಪೂರ್ಣ ಗೌರವ ಮತ್ತು ಅಭಿಮಾನವನ್ನು ಇಟ್ಟು ಆರ್ಯಚಿಕಿತ್ಸೆಯನ್ನು ನಮ್ಮ ಜನರೊಳಗೆ ರೂಢಿಗೆ ಹ್ಯಾಗೆ ತರಬೇಕೆಂಬುವದು ಈ ಪುಸ್ತಕವನ್ನು ಮನಸ್ಸಿಟ್ಟು ಓದಿದರೆ ಸಮ ವ್ಯಕ್ತವಾಗುವದು ಕನ್ನಡನುಡಿಯ ಒಡನಾಟ ಇರುವವರಿಗೆ ಎಲ್ಲರಿಗೂ ತಿಳಿಯುವಂತೆ ಈ ಗ್ರಂಥವು ಕನ್ನಡದಲ್ಲಿ ಬರಿಯಲ್ಪಟ್ಟಿದೆ. ವಾಚಕ ಮಹಾಶಯರೇ! ದೇಶಾಭಿಮಾನದಿಂದ ತಮ್ಮ ಆಯುಃಪ್ರಮಾಣದಲ್ಲಿ ಕಾಲುಘಂಟೆ ಸಮಯವನ್ನು ಈ ಪುಸ್ತಕಕ್ಕೋಸ್ಕರ ಕಳೆಯಿರಿ. ಈ ಪುಸ್ತಕ ಬೇಕೆಂದಿರುವವರು ತಮ್ಮ ಎಡ್ರೆಸನ್ನೂ ಅರ್ಧಾಣೆ ಸ್ಟಾಂಪನ್ನೂ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿಕೊಟ್ಟರೆ ಪುಸ್ತಕವು ದೊರೆಯುವದು

ಎಂ. ವಿ ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು.

ವಿನೋದ! ಮಾಸಪತ್ರಿಕೆ!!

"ಚಾತುರ್ಯ."

ಈ ಮಾಸಪತ್ರಿಕೆಯಲ್ಲಿ ಪತ್ತೆದಾರಿ ಕಥೆಗಳು, ಹಾಸ್ಯಲಹರಿಯು, ಹಾಸ್ಯ, ವಿನೋದ, ನೀತಿಸಂಬಂಧ ಲೇಖನಗಳೂ, ಕಥೆಗಳೂ, ಕಾದಂಬರಿಗಳೂ ಪ್ರಕಟಿಸಲ್ಪಡುತ್ತವೆ. ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ೧ ರೂಪಾಯಿ. ಮಾದರಿ ಸಂಚಿಕೆಗೆ ೧ ಆಣೆ ಸ್ಟಾಂಪು ಕಳುಹಿಸಿರಿ.

ವಿಳಾಸ:— ಮ್ಯಾನೇಜರ್, "ಚಾತುರ್ಯ"
ಬೆಂಗಳೂರು ಸಿಟಿ.

ಮಾರಾಟಕ್ಕೆ ಸಿದ್ಧವಿದೆ! ಪುರಾತನ ಸಂಗ್ರಹ! ನೂತನಗ್ರಂಥ!

ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ

ಮತ್ತು

ಭೂತಾಳಪಾಂಡ್ಯರಾಯನ ಅಳಿಯ ಕಟ್ಟು

ಈ ನವೀನ ಗ್ರಂಥದಲ್ಲಿ ಪರಶುರಾಮದೇವರ ಸೃಷ್ಟಿ, ಆಗಾಯಿತು ಬ್ರಿಟಿಷ್ ಮಹಾರಾಜರ ಆಳಿಕೆ ವರೆಗಿನ ಕನ್ನಡಜಿಲ್ಲೆಯ ಪೂರ್ವದ ಎಲ್ಲಾ ರಾಜರ ಚರಿತ್ರೆಗಳೂ, ಹೆಸರುಗಳೂ ಧರ್ಮರಾಯನ ನಂತರ ಕಲಿಯುಗದಲ್ಲಿ ರಾಜ್ಯವಾಳಿದ ಕ್ಷತ್ರಿರಾಜರ ಹೆಸರುಗಳೂ, ಕಾಲಗಳೂ ಸಹ ಯಾಗಿರುವದಲ್ಲದೆ, ಮಯೂರವರ್ಮನೇ ಮೊದಲಾದ ಮಹಾ ಪುರುಷರ ಚರಿತ್ರೆಗಳೂ, ಅಹಿಕ್ಷೇತ್ರದಿಂದ ಬ್ರಾಹ್ಮಣರನ್ನು ಕರೆಸಿ ಅವರಿಗೆ ನೇಮಿಸಿದ 326 ಬಹುಮಾನದ ಹೆಸರುಗಳೂ, ಅವರ ಸ್ಥಾನಮಾನಗಳೂ, ಅಳಿಯಸಂತಾನದ ಸಂಪೂರ್ಣ ಅಭಿಪ್ರಾಯಗಳಿರುವ ಭೂತಾಳಪಾಂಡ್ಯನ ಪೂರ್ಣ ಚರಿತ್ರೆಯೂ, ಕಟ್ಟು, ಕಟ್ಟಳೆ, ಮಾನ, ಮರ್ಯಾದೆ, ಜಾತಿ ನೀತಿ ವಿಚಾರಗಳೂ ಅನೇಕ ಕಡೆಗಳಲ್ಲಿದ್ದ ಪೂರ್ವ ಶಿಲಾಶಾಸನಗಳ ಯಥಾ ನಕಲುಗಳೂ ತಾಮ್ರಶಾಸನಗಳ ತರ್ಜುಮೆಗಳೂ ಕೂಡಾ ಭರಿತವಾಗಿ ಸಹ್ಯಾದ್ರಿ ಗ್ರಾಮಪದ್ಧತಿ, ರಾಜವಂಶಾವಳಿ ಮೊದಲಾದ ಅಪೂರ್ವ ಗ್ರಂಥಗಳ ಸಹಾಯದಿಂದ ಕೆಲವು ವರ್ಷಗಳಿಂದ ಸಂಗ್ರಹಿಸಿದ ನೂತನ ಸಂಗ್ರಹವು ಹೋಬಳಿ, ಮಾಗಣೆ, ಮನೆತನ, ಅರಸು, ಬಳ್ಳಾಲರು, ಗ್ರಾಮಗುರಿಕಾರರು, ಪಂಚಾಯಿತಿದಾರರು, ನ್ಯಾಯಶಾಲೆಗಳು, ಉಪಾಧ್ಯಾಯರೂ ವಿದ್ಯಾರ್ಥಿಗಳೂ ಗ್ರಾಮಾಧಿಕಾರಿಗಳೂ ವಗೈರೆ ಓದುಬರಹ ಬಲ್ಲ ಮಹನೀಯರಿಗೆ ತಿಳಿಯಲನುಕೂಲವಾದ 296 ಪುಟಗಳು ಭರಿತವಾಗಿ ಸದಾ ಕೈಯಲ್ಲಿರುವದಕ್ಕೆ ಯೋಗ್ಯವಾದ ಈ ಪುಸ್ತಕವು ಈಗಲೇ ತಯಾರಾಗಿರುತ್ತದೆ ಅನೇಕ ಮಹನೀಯರ ಉತ್ತಮ ಅಭಿಪ್ರಾಯಗಳೂ ಬಂದಿರುತ್ತವೆ

ಪುಸ್ತಕದ ಬೆಲೆಯು ಈಗ ತರಿಸುವವರಿಗೆ 1–4–0 ಟಪ್ಪಾಲ್ ಖರ್ಚು ಬೇರೆ.

ಸಮಯಾನುಸಾರ ಕ್ರಯವು 0–4–0 ಏರಿಸಲಾದೀತು

ಹೆಚ್ಚಿಗೆ ಪ್ರತಿಗಳನ್ನ ಕೊಂಡುಕೊಳ್ಳುವವರಿಗೂ ವ್ಯಾಪಾರಸ್ಥರಿಗೂ ಒಳ್ಳೇ ಕಮಿಷನ್ ಕೊಡಲಾಗುವದು

ಕುಶಲಮಂದಿರ,
ಶ್ರೀರಾಜರಾಜೇಶ್ವರಿ ದೇವಸ್ಥಾನ,
ಪೊಳಲಿ

ಎನ್. ಎ ಶೀನಪ್ಪ ಹೆಗ್ಗಡೆ,
ಅಮ್ಮುಣಂಜೆಗುತ್ತು,
ಗುರುಪುರ ಪೋಸ್ಟು, ದ ಕ.

ಅಪೂರ್ವ ಗ್ರಂಥ! ಅಪೂರ್ವ ಗ್ರಂಥ!!

ಬಳ್ಳಾರಿ ಶ್ರೀ ಮರಿಸ್ವಾಮಿಗಳು

ಸಕ್ಕರಿ ಕರಡೆಪ್ಪ

ಇವರ ಜೀವಿತ ಚರಿತ್ರೆ.

ಈ ಮಹಿಮರ ಚರಿತ್ರೆಯನ್ನು ಇಲ್ಲಿಯವರಿಗೂ ಯಾರೊಬ್ಬರು ಪ್ರಕಟನ ಮಾಡಿದ್ದಿಲ್ಲವೆಂಬುದು ತಿಳಿದದ್ದಾಗಿರುವದಷ್ಟೆ. ಇಂತಹ ಅದ್ಭುತ ಮಹಿಮಾಶಾಲಿಗಳ ಚರಿತ್ರೆಗಳು ಅವಶ್ಯಕವಾಗಿಯೂ ಆದರಣೀಯಗಳಾಗಿರುವವು. ಇವರ ಮಹಿಮೆಯು ಅಸಾಧಾರಣವಾದುದು. ಒಂದೆ ದಿನ ಒಂದೆ ಕಾಲದಲ್ಲಿ ಬಳ್ಳಾರಿ, ಬೆಂಗಳೂರು, ಭೈರವಪುರ ಎಂಬ ಮೂರು ಸ್ಥಳಗಳಲ್ಲಿ ಸಮಾಧಿಯನ್ನು ಹೊಂದಿದರೆಂಬುದೊಂದೆ ಅಪ್ರತಿಮ ಪ್ರಭಾವವನ್ನು ಸೂಚಿಸುತ್ತಿರುವದು. ಇವರು ಅಲ್ಲಲ್ಲಿ ತೋರಿದ ಮಹಿಮೆಗಳು ಅನಂತವಾಗಿರುವವು; ಇದಲ್ಲದೆ ಇವರ ಶಿಷ್ಯನಾದ ಸಕ್ಕರಿಕರಡೆಪ್ಪನ ಅಪಾರ ಮಹಿಮೆಯು ವಿಶದವಾಗಿ ವರ್ಣಿಸಲ್ಪಟ್ಟಿರುವದು. ಈ ಸಕ್ಕರಿ ಶರಣನಂತಹ ಶರಣನು ಇಡೀ ಪ್ರಪಂಚದಲ್ಲಿ ವೀರಶೈವ ಮತದೊಳಗೆ ಹುಟ್ಟುವದು ಅಪರೂಪ. ಆ ಗುರುಶಿಷ್ಯರೀರ್ವರ ಚರಿತ್ರೆಗಳು ಒಂದು ಗ್ರಂಥದಲ್ಲಿ ತಯಾರುಮಾಡಿರುವೆವು. ಈ ಗ್ರಂಥವನ್ನೋದುವವರು ಖಂಡಿತವಾಗಿಯೂ ನೀತಿ, ಭಕ್ತಿ, ಜ್ಞಾನಗಳ ಕಡೆ ಮನಸ್ಸನ್ನು ಕೊಡದಿರಲಾರರು. ಮತ್ತು ಇದಲ್ಲದೆ ಮೈಸೂರು ಶ್ರೀಮನ್ಮಹಾರಾಜ, ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರರವರು ಶಿಷ್ಯರಾದ ಕಂಬಳಿ ಸ್ವಾಮಿಗಳ ಸಮೇತ ಇರುವ ಮಹಾಸ್ವಾಮಿಗಳ ಭಾವಚಿತ್ರ ಪಟವು ಪ್ರಥಮ ಪುಟದಲ್ಲಿ ಅಂದವಾಗಿರಿಸಲ್ಪಟ್ಟಿರುವದು. ನಿಮ್ಮ ವಿಳಾಸ ಚೆನ್ನಾಗಿರಲಿ. ಇದರ ಬೆಲೆ ವಿ. ಪಿ. ಸಹಿತ ರೂ. 1—2—0.

ನಮ್ಮ ವಿಳಾಸ:— ಬಸವರಾಜ ಕಂಪೆನಿ, ಬಳ್ಳಾರಿ.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,
ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ.

೧. ಕುಟುಂಬಜೀವನಿ—ಎಲ್ಲಾ ರೋಗಗಳನ್ನು ತ್ವರೆಯಾಗಿ ಗುಣಪಡಿಸುವದು 16 ಔಷಧಗಳ ಸಂಗ್ರಹದ ಪೆಟ್ಟಿಗೆ 1ಕ್ಕೆ 8—0—0

೨. ಶತಮೂಲಿಕಾ ಅಮರಸಂಜೀವನಿ—ಈ ಟೋನಿಕ್ ದ್ರಾವಕವು ಸಿತ್ರಾಯರಿಗೆ ಚೈತನ್ಯ ಉಂಟುಮಾಡಿ ಅಮರತ್ವವನ್ನು ಕೊಡುತ್ತದೆ. ಬಾಟ್ಲು 1ಕ್ಕೆ 1—0—0

೩. ಬಾಲಸಂಜೀವನಿ—ಮಧುರ ಟೋನಿಕ್ ಅಶಕ್ತ ಬಾಲಕರಿಗೆ ಸಶಕ್ತರಾಗಿ ಮಾಡಿ ವರ್ಧಮಾನ ಚಂದ್ರನಂತೆ ಬೆಳಗಿಸುತ್ತದೆ. ಬಾಟ್ಲು 1ಕ್ಕೆ 0—12—0.

೪. ವಸಂತ ಕುಸುಮಾಕರ—ಈ ಸುವಾಸಿಕ ತೈಲವು ಕೇಶ ವೃದ್ಧಿಮಾಡಿ ಶಿರೋರೋಗ ನೇತ್ರರೋಗಗಳನ್ನು ಶಮನಮಾಡಿ ಮೆದುಳನ್ನು ತಂಪು ಮಾಡಿ ಜ್ಞಾನಶಕ್ತಿ ಹೆಚ್ಚಿಸಿ, ಬುದ್ಧಿ ಭ್ರಮಣವನ್ನು ಗುಣಮಾಡುತ್ತದೆ. ಬಾಟ್ಲು 1ಕ್ಕೆ 1—0—0

೫. ಸುದರ್ಶನಮಾಲಿನಿ—ಈ ಸಿದ್ಧೌಷಧವು ಮೇಹದ್ರ್ಯ ಇತ್ಯಾದಿ ಎಲ್ಲಾ ದುಸಾಧ್ಯ ವ್ರಣಗಳನ್ನು 7-8 ದಿವಸಗಳಲ್ಲಿ ಪೂರ್ಣ ಗುಣಪಡಿಸುವದು ಕ್ರಯ 4—0—0.

೬. ಗರುಡಧ್ವಜ—ಇದು ಸರ್ಪ ಹುಚ್ಚುನಾಯಿ, ಚೇಳು, ಇಲಿ ಇತ್ಯಾದಿ ಸರ್ವ ಕಠಿಣ ವಿಷಗಳಿಗೆ ಸಂಜೀವನವಾಗಿರುತ್ತದೆ ಅನುಭವಸಿದ್ಧ 2—0—0

೭. ಆನಂದವನವಿಲಾಸ—ಇದು ಡ್ಯಾಬಟೀಸ ಎಂಬ ಬಹುಮೂತ್ರ ರೋಗವನ್ನು 48 ದಿವಸಗಳಲ್ಲಿ ಪೂರ್ಣ ಗುಣಪಡಿಸುತ್ತದೆ. ಪೂರ್ಣ ಔಷಧಕ್ಕೆ 5—0—0

ನಮ್ಮ ಡಿಸ್ಪೆನ್ಸರಿಯಲ್ಲಿ ಸಿದ್ಧ ಕಲ್ಪ ಧೈರ್ಯಾಗಿ ಪ್ರಯೋಗಗಳಿಂದ ತಯಾರಿಸಿದ ಔಷಧ ಮಾತ್ರೆಗಳು, ಲೇಹ ಚೂರ್ಣಗಳು, ತೈಲ ಘೃತಗಳು, ಆಸವಾರಿಷ್ಟಗಳೂ ತುಂಬಾ ಇರುತ್ತವೆ ಕ್ರಯವಿಲ್ಲದ ನಮ್ಮ ಕೆಟಲಾಗನ್ನು ತರಿಸಿಕೊಳ್ಳಿರಿ ಏಜಂಟರು ಬೇಕು ಹೆಚ್ಚು ಡಿಸ್‌ಕೌಂಟ್ ಸಿಕ್ಕುವದು.

ಎಮ್ ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

ಸೆನ್ ಸೆನ್. SEN SEN.)

ಕಂಠದಲ್ಲಿ ಉಂಟಾಗುವ ದೋಷಗಳನ್ನು ನಿವಾರಿಸಿ ಸುಖವನ್ನೀಯುವುದು.
ಶ್ವಾಸದಲ್ಲಿ ಸುವಾಸನೆಯನ್ನುಂಟುಮಾಡುವುದು.

ಸೆನ್ ಸೆನ್ ಇದರ ಗುಣವು ಇಷ್ಟೇ ಅಲ್ಲ ಆರೋಗ್ಯವನ್ನು ಸಾಧಿಸುತ್ತದೆ, ಬಹಳ ಮನೋಹರವಾದ ರುಚಿಯುಳ್ಳದ್ದಾಗಿದೆ ಸ್ವರವನ್ನು ಸ್ಪಷ್ಟಗೊಳಿಸಿ ಬಲಪಡಿಸುವದು, ಸಂಗೀತಗಾರರಿಗೆ, ಪ್ರಸಂಗಗಳನ್ನು ಮಾಡುವ ಉಪದೇಶಕರಿಗೆ, ಬಹುಜನಗಳನ್ನು ದೊಡ್ಡ ದೊಡ್ಡ ಸಭೆಗಳಲ್ಲಿ ಮಾಡುವವರಿಗೆ ಇದ ಬಹಳ ಉಪಯೋಗಕರವಾಗಿರುವುದ

ಸೆನ್ ಸೆನ್—ಇದರ ಕೆಲವು ಕಾಳುಗಳನ್ನು ವೀಳ್ಯದೊಂದಿಗೆ ಸೇವಿಸಿದರೆ ವೀಳ್ಯದ ರುಚಿಯು ಬಹಳ ಸೊಗಸಾಗುವುದ

ಸೆನ್ ಸೆನ್—ಅಜೀರ್ಣ ಮೊದಲಾದ ಜೀರ್ಣಕೋಶದ ದೋಷಗಳಿಗೆಲ್ಲಾ ದಿವ್ಯ ಔಷಧಿಯಾಗಿರುವುದು ಕಂಠದಲ್ಲಿ ಬಹಳ ಸೀತಳವಾದ ಮತ್ತು ಸುಖಕರವಾದ ಭಾವನೆಯು ಇದರ ಸೇವನೆಯಿಂದ ಉಂಟಾಗುತ್ತದೆ ಬೀಡಿ, ಚುಟ್ಟಾ ವಗೈರೆಗಳನ್ನು ಸೇದಿದ ನಂತರ ಸೆನ್‌ಸೆನ್‌ನ್ನು ಉಪಯೋಗಿಸಿದರೆ ಬಾಯಿಯ ಕೆಟ್ಟ ವಾಸನೆಯನ್ನು ಹೋಗಗೊಳಿಸಿ ಸುವಾಸನೆಯನ್ನುಂಟುಮಾಡುವುದು 3 ಆಣೆ ಕ್ರಯದ ಒಂದು 'ಪೆಕೆಟನ್ನು' ಬಹಳ ಕಾಲ ಉಪಯೋಗಿಸಬಹುದು.

ಅರ್ಧಾಣೆಯ ಸ್ಟಾಂಪನ್ನು ಕಳುಹಿಸಿಕೊಟ್ಟರೆ ಮಾದರಿ ಪೆಕೆಟನ್ನು ಉಚಿತವಾಗಿ ಕಳುಹಿಸಿಕೊಡುವೆವು

Address. —	ನಮ್ಮ ವಿಳಾಸ —
Muller & Phipps,	ಮುಲ್ಲರ್ ಎಂಡ್ ಫಿಪ್ಸ್,
21 Sankurama Chetty Street,	21 ಸಂಕುರಾಮಚೆಟ್ಟಿ ರಸ್ತೆ,
MADRAS.	ಮದರಾಸು.

ನ್ಯಾಯದರ್ಪಣ.

ಹೊಸ ಪುಸ್ತಕ

ಇಂಡಿಯಾ ದೇಶದ ಸಮಸ್ತ ಹಿಂದೂ ಜನರ ಸಾಮಾನ್ಯ ಧರ್ಮಗಳು, ಅವುಗಳನ್ನು ಅತಿಕ್ರಮಿಸಿ ನಡೆಯುವವರಿಗೆ ಉಂಟಾಗತಕ್ಕ ಫಲಗಳು, ಇವುಗಳನ್ನು ಕುರಿತು, ಗವರ್ನಮೆಂಟಿನವರಿಂದ ಅನೇಕ ಆಕ್ಟುಗಳು, ರೆಗ್ಯುಲೇಷನ್‌ಗಳು, ಶಾಸನಗಳು ವಗ್ಗೈರೆ ವಿಧಾಯಕವಾಗಿ ಇರುತ್ತೆ. ಇವುಗಳಲ್ಲಾ ಇಂಗ್ಲೀಷ್ ಭಾಷೆಯಲ್ಲಿಯೇ ಅಪಾರವಾಗಿ ಇರುತ್ತವೆ. ಇವುಗಳಲ್ಲಿ, "ಕಂಟ್ರಾಕ್ಟ್" ಅಂದರೆ ಕರಾರುಗಳು, "ಬ್ರೀಚ್ ಆಫ್ ಕಂಟ್ರಾಕ್ಟ್" ಅಂದರೆ ಒಪ್ಪಂದಕ್ಕೆ ತಪ್ಪಿ ನಡೆಯೋಣ, ದ್ರೋಹ, ಲಿಮಿಟೇಷನ್, ಖಾಸಾ ಕಾಗದ, ರಿಜಿಸ್ಟ್ರೇಷನ್, ಸಿವಿಲ್ ಪ್ರೊಸಿಡ್ಯೂರ್, ಕ್ರಿಮಿನಲ್ ಪ್ರೊಸಿಡ್ಯೂರ್, ಪೀನಲ್ ಕೋಡ್, ಹಿಂದೂ ಲಾ, ಮುಂತಾದ ಧರ್ಮಶಾಸ್ತ್ರಗಳಿಂದ, ಮನುಷ್ಯರ ನಿತ್ಯಾಚರಣೆಗೆ ಅವಶ್ಯಕವಾದ ಲೌಕಿಕ ವ್ಯವಹಾರ ಧರ್ಮಗಳ ಮುಖ್ಯ ಸಂಗತಿಗಳನ್ನೆಲ್ಲಾ ಆರಿಸಿ ಈ ಚಿಕ್ಕ ಪುಸ್ತಕವನ್ನು ರಚಿಸಿರುತ್ತೆ ಮತ್ತು ವಾಡಿಕೆಯಲ್ಲಿ ಇರತಕ್ಕ ನಾನಾ ವಿಧಗಳಾದ ದಸ್ತೈವಜುಗಳ ಅನೇಕ ನಮೂನೆಗಳು ಮತ್ತು ಕ್ರಿಮಿನಲ್ ರಿವಿನ್ಯು ಗ್ರಾಮ ಮುನಸೀಫ್ ಕೋರ್ಟುಗಳ ಮುಂದಿನ ದಾವಾ ವಗ್ಗೈರೆ ಅರ್ಜಿಗಳ ಮಾದರಿಗಳು ಅಡಕವಾಗಿ ಇರುತ್ತೆ. ಬೆಲೆ 1—8—0. ವಿ. ಪಿ. 1—12—0.

ಲಾಯರ್ ಯಂ ಯಸ್. ನಂಜಪ್ಪನವರು,
ಲ್ಯಾನ್ಸ್‌ಡೌನ್ ಬಜಾರ್, ಮೈಸೂರು

11ಪುಸ್ತಕಗಳನ್ನು ಒಟ್ಟಾಗಿ ತರಿಸಿಕೊಂಡರೆ ಪೋಸ್ಟೇಜು ಸೇರಿ 15—0—0 ಆ?

ಚುರುಕಾದ ಏಜಂಟರು ಬೇಕಾಗಿರುವರು! ಧಾರಾಳವಾದ ಕಮಿಶನ್!!!
ಮುಂದಿನ ಅಭಿವೃದ್ಧಿಗೆ ತುಂಬಾ ಅವಕಾಶವುಳ್ಳ ವೃತ್ತಿ!!!

ಮುಂಬಾಯಿ ಲ್ಯಾಫ್ ಎಸ್ಯುರೆನ್ಸ್ ಕಂಪೆನಿ,

(ಲಿಮಿಟೆಡ್).
(1908ರಲ್ಲಿ ಸ್ಥಾಪಿಸಲ್ಪಟ್ಟಿತು).
ಪ್ರಧಾನ ಆಫೀಸು ಮುಂಬಯಿ.

ಅಧ್ಯಕ್ಷರು:—ಒಹುಮಾನಪಟ್ಟ ಮೆ| ಲಲ್ಲುಬಾಯಿ ಸಾಮಲ್ ದಾಸರವರು,
ಸಿ. ಐ. ಇ. ಜೆ. ಪಿ.

ಎಕ್ಚುವೆರಿ:—ಮೆ| ಜೋರ್ಜ್ ಕಿಂಗ್ ಎಫ್. ಎಫ್. ಎ. ಎಫ್. ಐ. ಎ.

ಮೆಡಿಕಲ್ ರಿಫರಿಗಳು.—ಡಾಕ್ಟರ್ ಆರ್. ರಾವ್, ಎಮ್. ಡಿ.
ಡಿ. ಎಸ್ ಸಿ (ಲಂಡನ್)

ಗೌರವಾರ್ಧಕ ಮ್ಯಾನೇಜರ್:—ರಾ| ಕೆ. ಸುಬ್ರಮಣ್ಯಯ್ಯರ್, ಬಿ. ಎ.
ಜೆ. ಪಿ. ಎಫ್ ಎಸ್ ಎ. ಎ. (ಲಂಡನ್)

ವಿಮೆದಾರರ ವಿಮೆ ಪತ್ರಗಳ ಶರ್ತಗಳ ಪ್ರಕಾರ ಸಿಕ್ಕುವ ಹಣವು ಈ ಕಂಪೆನಿಯಲ್ಲಿ ಬಹಳ ಭದ್ರವಾಗಿರುವದೆಂತ ಲೆಕ್ಕ ವ್ಯವಸ್ಥಾಪಕರು ಅಭಿಪ್ರಾಯಪಟ್ಟಿರುವರು.

ತರುಣಾವಸ್ಥೆಯಲ್ಲಿರುವ ಈ ಕಂಪೆನಿಯು ಮುಂದಕ್ಕೆ ಇನ್ನೂ ಬಹಳ ಅಭಿವೃದ್ಧಿಯನ್ನು ಹೊಂದುವ ವಿಶೇಷ ಸಂಭವಗಳಿಂತ ಕೂಡಿರುವುದೆಂದು "ಕೊಮರ್ಸ್" ಎಂಬ ಪತ್ರಿಕೆಯ ಅಭಿಪ್ರಾಯವಾಗಿರುವುದು.

ಇಂಡಿಯಾ ಸರಕಾರದ ಭದ್ರತೆಯಲ್ಲಿ ರೂ. 1,55,000ವನ್ನು ಠೇವಣಾತಿಯಾಗಿಟ್ಟಿರುವದು.

ಹಣ ಕಳುಹಿಸಿಕೊಡುವ ಏಜನ್ಸಿ ಬಗ್ಗೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ:—

ಕೊಚ್ಚಿಕಾರ್ ಬ್ರದರ್ಸ್, ಉಡುಪಿ,
ಕನ್ನಡಾ, ಮಲೆಬಾರ, ತಿರುವಾಂಕ್ಕೋಡು, ಮತ್ತು
ಕೊಚ್ಚಿ ಪ್ರಾಂತ್ಯಗಳ ಪ್ರಾಮುಖ್ಯ ಏಜಂಟರು.

ಸೂಚನೆ:—ಮಂಗಳೂರಲ್ಲಿರುವ ಈ ಕಂಪೆನಿಯ ವಿಮೇದಾರರು ತಮ್ಮ ವಿಮೆ ಮೊಬಲಗುಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಟ್ಟು ಆ ಬಗ್ಗೆ ರಸೀದಿಯನ್ನು ಕೊಚ್ಚಿಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು

ಉಡ್ಪಿ, 3—7—1914.

ಮಹಾಶಯರೆ,

ಮುಂಬಾಯಿ ಲ್ಯಾಫ್ ಎಸ್ಯುರೆನ್ಸ್ ಕಂಪೆನಿ ಎಂಬುವ ಜೀವವಿಮೇ ಉತ್ತರಾಯಿಸುವ ಸಂಘದ ಬಗ್ಗೆ ತಾವು ಏನೊಂದೂ ವಿಳಂಬವಿಲ್ಲದೆ, ರೂ. 986—10—0ನ್ನು ನನಗೆ ಪಾವತಿಮಾಡಿದುದಕ್ಕಾಗಿ ಅತೀ ಉಪಕಾರವಾಯಿತು. ಸದರಿ ಪೊಲಿಸಿಯನ್ನು ಕುರಿತಾದ ಅಗತ್ಯವಾದ ಪತ್ರಗಳನ್ನು ಅವರಿಗೆ ಮುಟ್ಟಿಸಿದ ಮೂರೇ ದಿನಗಳೊಳಗಾಗಿ ನನಗೆ ಸಲ್ಲತಕ್ಕ ವಿಮೆಯ ಐವಜನ್ನು ತಮ್ಮ ಕಂಪೆನಿಯ ಡೈರೆಕ್ಟರರುಗಳು ನನಗೆ ಪಾವತಿಮಾಡಿಸಿದುದಕ್ಕೋಸ್ಕರ ನನ್ನ ಧನ್ಯವಾದಗಳನ್ನು ಅವರಿಗೆ ದಯಿಯಿಟ್ಟು ತಿಳಿಸಿ. ಈ ತೆರದಲ್ಲಿ ಪೊಲಿಸಿದಾರರೊಡನೆ ಯಥಾರ್ಥವಾದ ರೀತಿಯಲ್ಲೂ ನಂಬುಗೆಯುಂಟಾಗುವಂತೆಯೂ ವರ್ತಿಸುವ ತಮ್ಮ ವಿಮೇ ಕಂಪೆನಿಯಿಂದ ಪ್ರತಿಯೊಬ್ಬನೂ ಒಂದೊಂದು ಪೊಲಿಸಿಯನ್ನಾದರೂ ಪಡಕೊಳ್ಳುವುದು ಉಚಿತವೆಂದು ನನ್ನ ಅಪೇಕ್ಷೆ.

(ದಸ್ಕತು) ಹಾರಾಡಿ ಆನಂದರಾಯ ಘಡಿಯಾರನ ರುಜು.

(೪೩೦ನೇ ಪೊಲಿಸಿಯ ವಿಮಾ ಹಣವನ್ನು ಪಡೆಯಲು ಅಧಿಕಾರವುಳ್ಳವನು).

ಉಡ್ಪಿ, ತಾ. 20—8—1914

ನನ್ನ ಎಳೇ ಪ್ರಾಯದಲ್ಲಿ ಮೃತರಾದ ನನ್ನ ಗಂಡ ಕೆ. ಎಲ್. ಪ್ರಭುಗಳ ವಿಮೇ ಪತ್ರಗಳನ್ನು ನಾನು ಕಳುಹಿಸಿಕೊಟ್ಟ ಕೆಲವೇ ದಿನಗಳೊಳಗಾಗಿ ಮುಂಬಾಯಿ ಲ್ಯಾಫ್ ಎಸ್ಯುರೆನ್ಸ್ ಕಂಪೆನಿಯವರು ನನಗೆ ತತ್ಸಂಬಂಧವಾದ ಹಣವನ್ನು ಪಾವತಿಮಾಡಿಸಿದುದಕ್ಕೆ ನಾನು ಕೃತಜ್ಞಳಾಗಿರುವೆನು. ನನ್ನ ಒಬ್ಬನೇ ಬಾಲಕನಿಗೆ ಇದೊಂದೇ ಮಾತ್ರ ಪಿತ್ರಾರ್ಜಿತವಾದ ಧನವಾಗಿದೆ. ಅಂತಹ ಬಡ ಹುಡುಗನಿಗೆ ಇದೊಂದು ಅಪೂರ್ವವಾದ ಮಹಾದಾನವನ್ನು ಮಾಡಿಕೊಟ್ಟುದಕ್ಕೆ ಪ್ರತಿಯಾಗಿ ತಮ್ಮ ಕಂಪೆನಿಯು ಚಿರಕಾಲವೂ ಸೌಭಾಗ್ಯದಲ್ಲಿರಲಿ!

ಭವಾನೀಬಾಯಿ, Pol. No. 1788

ಸಾಕ್ಷಿ—ಭವಾನೀಬಾಯಿಯ ಸೋದರ ರಾ| ಕೆ. ರಂಗಪ್ಪ ನಾಗಪ್ಪ.

ಮಂಗಳೂರು, ತಾ. 30—10—1914.

ಸಾಧ್ಯವಾದಷ್ಟು ಕಡಿಮೆ ಸಮಯದೊಳಗಾಗಿ ನನಗೆ ಪಾವತಿಯಾಗತಕ್ಕ ಹಣವನ್ನು ಸಲ್ಲಿಸಿದುದಕ್ಕೋಸ್ಕರ ಬೊಂಬೇ ಲ್ಯಾಫ್ ಎಸ್ಯುರೆನ್ಸ್ ಕಂಪೆನಿಯವರಿಗೆ ನನ್ನ ಧನ್ಯವಾದಗಳನ್ನು ಪ್ರೀತಿಪೂರ್ವಕವಾಗಿ ಮುಟ್ಟಿಸಿರಿ! 'ಕ್ಲೈಮು' ಪ್ರಕಾರ ಎಲ್ಲಿ ಹಣವನ್ನು [illegible] ಹಾಗೆ ಕಂಪೆನಿಯ ಏಜಂಟರೇ ತಮ್ಮಿಂದಾಗುವಷ್ಟರ ಸಹಾಯವನ್ನು ಮಾಡುತ್ತಿರುವದರಿಂದ ನನಗೆ [illegible] ತೊಂದರೆಗಳೂ ಉಂಟಾಗಲಿಲ್ಲ ಹಣವನ್ನು ನಾವಿದ್ದ ಸ್ಥಳಕ್ಕೆ ಬಂದು ಕೊಟ್ಟರು.—ಇದೊಂದು ತಮ್ಮ ಕಂಪೆನಿಯ ವಿಶೇಷ ಗುಣ. ನಿಮ್ಮ ಸಂಘಕ್ಕೆ ಸದಾ ವಿಜಯವು ಆಗಲಿ.

ಆರ್ಕಳ ರಾಮಚಂದ್ರ ಶ್ಯಾನಭಾಗನ ರುಜು.

(Pol. No. 231ನೆಯ

ಸ್ವದೇಶಾಭಿಮಾನಿಯ ನೋಟೀಸು.

ಚಂದಾದಾರರು ನಮಗೆ ಬರೆಯುವ ಎಲ್ಲಾ ಪತ್ರ ವ್ಯವಹಾರಗಳಲ್ಲಿ ತಮ್ಮ ತಮ್ಮ ವಿಳಾಸದೊಂದಿಗೆ ಇರುವ ರಿಜಿಸ್ಟರ ನಂಬರನ್ನು ತಪ್ಪದೆ ಬರಿಯತಕ್ಕದ್ದು. ರಿಜಿಸ್ಟರು ನಂಬರು ಇಲ್ಲದ ಪತ್ರಗಳಿಗೆ ಸಿಗಾ ಕೊಡಲಾರೆವು.

ಪತ್ರಿಕೆಗೆ ಚಂದಾದಾರರಾಗಿ ಸೇರಲಪೇಕ್ಷೆಯುಳ್ಳವರು ವರ್ಷ 1ರ ಚಂದಾ ಹಣ ರೂ. 2—1—0ನ್ನು ಮನಿಯಾರ್ಡರು ಮೂಲಕ ರವಾನಿಸುವದುತ್ತಮ. ವಿ. ಪಿ. ಮೂಲಕ ಕಳುಹಿಸಬೇಕೆಂದು ಬರಿಯುವಂಥವರಿಗೆ ಪತ್ರಿಕೆಯ ಹಿಂದಿನ ಸಂಚಿಕೆಯನ್ನು ವಿ. ಪಿ. ಮಾಡಿ ಕಳುಹಿಸಲಾಗುವದು. ವಿ. ಪಿ.ಯ ಮೊಬಲಗು ನಮಗೆ ತಲ್ಪಿದ ನಂತರವೇ ಪತ್ರಿಕೆಯನ್ನು ಕಳುಹಿಸಲು ಪ್ರಾರಂಭಿಸುವೆವು.

ಪತ್ರಗಳನ್ನು ಬರಿಯುವಾಗ ತಮ್ಮ ಹೆಸರು, ವಿಳಾಸ ಮತ್ತು ಪೋಸ್ಟಾಫೀಸನ್ನು ಸ್ವಷ್ಟಾಕ್ಷರದಲ್ಲಿ ಬರಿಯತಕ್ಕದ್ದು.

ಮ್ಯಾನೇಜರ್,
ಸ್ವದೇಶಾಭಿಮಾನಿ ಆಫೀಸು,
ಮಂಗಳೂರು, ದ. ಕ.

Narasimha Prabhu,
ಮುಖ್ಯವಾಗಿ ಕನ್ನಡಿಗರು ಬಹುಸಂಖ್ಯೆಯಲ್ಲಿ ಈ ಪರಿಷತ್ತನ್ನು ಸೇರಿ ಅದರ ಉದ್ದೇಶಗಳನ್ನು ಸಾರ್ಥಕಗೊಳಿಸಬೇಕಾದುದು ಅವರ ಪ್ರಥಮ ಕರ್ತವ್ಯವೆಂದು ಪ್ರತ್ಯೇಕವಾಗಿ ಹೇಳಬೇಕಾದ್ದಿಲ್ಲ. ನಮ್ಮ "ಕನ್ನಡ" ಜಿಲ್ಲೆಯ ದೊಡ್ಡ ಮನುಷ್ಯರು ಈ ಕಾರ್ಯದಲ್ಲಿ ತಮ್ಮ ಜಿಲ್ಲೆಯ ಮಾನವನ್ನು ಚೆನ್ನಾಗಿ ಕಾಪಾಡದಿರರೆಂದು ನಂಬುಗೆಯಿದೆ.

ಇದಲ್ಲದೆ, ಮೊದಲಲ್ಲಿ ಮಾರ್ಗೋಪಾಯಗಳನ್ನು ಗೊತ್ತುಪಡಿಸಿಕೊಳ್ಳುವುದು ಅತ್ಯಗತ್ಯವು. ನಾಮಮಾತ್ರಕ್ಕೆ ಹದಿಮೂರು ಮಂದಿ ಸದಸ್ಯರನ್ನು ಉಪಸಭೆಯಾಗಿ ನಿಯಮಿಸಿರುವರಾದರೂ, ಭಾಷಾಭಿಮಾನಿಗಳಾದ ಸಮಸ್ತರೂ ತಾವು ಕೂಡ ಆ ಉಪಸಭೆಗೆ ಸೇರಿದಂತೆ ಭಾವಿಸಿಕೊಂಡು ತಮ್ಮ ತಮ್ಮ ಅಭಿಪ್ರಾಯಗಳನ್ನು ಸ್ವದೇಶಾಭಿಮಾನಿಯ ಮೂಲವಾಗಿಯೋ ಕಾರ್ಯದರ್ಶಿಗಳಿಗೆ ನೇರವಾಗಿಯೋ ತಿಳಿಸಿಯೋ ಸಹಾಯ ಮಾಡಬೇಕೆಂದು ಪ್ರಾರ್ಥನೆ.

ವಾಙ್ಮಯ ಕಲಾಶಾಸ್ತ್ರಗಳ ಸಮಾಚಾರ.
(Progress of Literature, Science and Art.)

———o———

ವಾರಾಣಸಿಯಲ್ಲಿ ಬಹು ಪ್ರಾಚೀನವೂ ಎಲ್ಲಕ್ಕಿಂತ ದೊಡ್ಡದೂ ಆದ "ನಗರ ಸಂಘ ವೇದ ವಿದ್ಯಾಲಯ"ವೆಂಬ ಧರ್ಮಾರ್ಥ ಸಂಸ್ಕೃತ ಪಾಠಶಾಲೆಯಲ್ಲಿ, ಬ್ರಾಹ್ಮಣ ಮಹಾಸಭೆಯವರ ಸೂಚನಾನುಸಾರವಾಗಿ, ಸಂಸ್ಕೃತದಲ್ಲಿಯೇ ಅರ್ವಾಚೀನ ಚರಿತ್ರೆಯನ್ನೂ ಭೂಗೋಳ ವಿದ್ಯೆಯನ್ನೂ ಕಲಿಸಬೇಕೆಂದು ಅದರ ವ್ಯವಸ್ಥಾಪಕ ಮಂಡಲದವರು ನಿರ್ಣಯಿಸಿರುವರು.

* * *

ಬರುವ ಮಲೆಯಾಳ (ಕೊಲ್ಲಮ್) ವರ್ಷದ ಪ್ರಾರಂಭದಿಂದ ಕುಯಿಲನ್ ಎಂಬಲ್ಲಿ ಮಲೆಯಾಳ ಕವಿತಾಭಿವೃದ್ಧಿಯ ಉದ್ದೇಶವಾಗಿ "ಕವಿತಾ ಪೋಷಿಣೀ" ಎಂಬ ಮಾಸ ಪತ್ರಿಕೆಯನ್ನು ಹೊರಡಿಸಲು ಏರ್ಪಾಡುಗಳಾಗಿವೆ.

* * *

ಮುಂದಿನ ಹತ್ತು ವರ್ಷಗಳಲ್ಲಿ ಆಗತಕ್ಕ ವಿದ್ಯಾಭಿವೃದ್ಧಿ ಕಾರ್ಯಗಳ ಒಂದು ಏರ್ಪಾಡನ್ನು ಮೈಸೂರು ಸರಕಾರದವರು ಪ್ರಚುರಗೊಳಿಸಿರುವರು. ಹೊಸ ಶಾಲೆಗಳನ್ನು ಪ್ರಾರಂಭಿಸುವುದಕ್ಕೂ, ಇರುವ ಶಾಲೆಗಳನ್ನು ಸಂಸ್ಕರಿಸುವುದಕ್ಕೂ ಪ್ರತಿ ವರ್ಷವೂ ಎರಡು ಲಕ್ಷ ರೂಪಾಯಿ ಕೊಡತಕ್ಕದೆಂದೂ, ಅನ್ಯಥಾ ವಿದ್ಯಾಭಿವೃದ್ಧಿಗಾಗಿ ಪ್ರತಿವರ್ಷವೂ ಎಪ್ಪತ್ತೈದು ಸಾವಿರ ರೂಪಾಯಿ ಹೆಚ್ಚಾಗಿ ವೆಚ್ಚಮಾಡಬಹುದೆಂದೂ, ಈಗ ಇರುವ ಮತ್ತು ಹೊಸತಾಗಿ ತೆರೆಯುವ ಶಾಲೆಗಳ ಬಗ್ಗೆ ಬೇಕಾದ ಸಾಮಾನುಗಳಿಗಾಗಿ ಹದಿನೇಳು ಸಾವಿರ ರೂಪಾಯಿಯನ್ನು ಈ ವರ್ಷ ಕೊಡತಕ್ಕದೆಂದೂ, ಹಿರಿಯೂರಿನಲ್ಲಿ ಒಂದು ಮಾದರಿಯ ಹೊಲವನ್ನು ಪ್ರಯೋಗದ ಬಗ್ಗಾಗಿ ಹೊರಡಿಸತಕ್ಕದೆಂದೂ ನಿರ್ಣಯವಾಗಿದೆ.

* * *

ಪಂಚಮರ ಉನ್ನತಿಗಾಗಿ ತಿರುವಾಂಕೋಡಿನಲ್ಲಿ ಅಸಾಧಾರಣವಾದ ಪ್ರಯತ್ನಗಳು ನಡೆಯುತ್ತಿವೆ. "ಸುಭಾಷಿಣೀ" ಪತ್ರಿಕೆಯ ಸಂಪಾದಕರಾದ ಮ॥ ಪಿ. ಕೆ. ಗೋವಿಂದ ಪಿಳ್ಳೆಯವರು ಆ ಬಗ್ಗಾಗಿಯೇ "ಪುಲೆಯ" ಎಂಬ ಮಾಸ ಪತ್ರಿಕೆಯನ್ನು ಹೊರಡಿಸಲುದ್ಯುಕ್ತರಾಗಿರುವರು. ಈ ಪತ್ರಿಕೆಯು ತಿರುವಾಂಕೋಡಿನ ಹೊಲೆಯರ "ಸಾಧುಜನ ಪರಿಪಾಲನ ಸಂಘ"ದ ಮುಖವಾಗಿ ವರ್ತಿಸುವುದೆಂದೂ ಅದನ್ನು ಮ॥ ಪಿಳ್ಳೆಯವರು ತಮ್ಮ ಮುದ್ರಾಶಾಲೆಯಲ್ಲಿ ಧರ್ಮಾರ್ಥವಾಗಿ ಅಚ್ಚು ಹಾಕಿಸಿ ಕೊಡುವರೆಂದೂ ತಿರುವಾಂಕೋಡಿನ ಹೊಲೆಯರಲ್ಲಿ ಸುಮಾರು ಎರಡು ಸಾವಿರ ಮಂದಿಗೆ ಅಕ್ಷರಜ್ಞಾನವಿರುವುದೆಂದೂ ತಿಳಿಯಬರುತ್ತಿದೆ.

ಪುರಾತನ ವಸ್ತು ಪರಿಶೋಧನ ಇಲಾಖೆಯ ಪೂರ್ವ ಭಾಗದ ಸುಪರಿಂಟೆಂಡೆಂಟರಾದ ಮಿ॥ ಡಬ್ಲ್ಯು. ಬಿ. ಸ್ಪೂನರ್ ಎಂಬವರು ಪಂಜಾಬಿನ "ಇತಿಹಾಸ ಸಂಘ"ದವರ ಮುಂದೆ ಬರುವ ಸಪ್ಟಂಬರು ೭ಕ್ಕೆ "ಪಾರ್ಸೀ ಪುತ್ರರ ಬಿಸಸ" ಎಂಬುದಾಗಿ ಒಂದು ಉಪನ್ಯಾಸವನ್ನು ಓದತಕ್ಕವರಾಗಿರುವರು. ಬುದ್ಧ ಧರ್ಮದ ಮೇಲೆ ಜೋರಾಸ್ಟರ್ (ಸೂರ್ಯೋಪಾಸಕ) ಧರ್ಮದ ಪರಿಣಾಮವು ಬಹು ವಿಶೇಷವಾಗಿ ಇರುವುದೆಂದೂ ಗೌತಮ ಬುದ್ಧನು ಪಾರಸೀಕ ಜನಾಂಗದವನೆಂದೂ, ಪಾಟಲಿ ಪುತ್ರದಲ್ಲಿ ಅಗೆದು ಕಂಡುಹಿಡಿದ ಕಟ್ಟಡಗಳ ಪದ್ಧತಿಯು ಪಾರಸೀಕವೆಂದೂ ಇತ್ತಲಾಗೆ ಅಭಿಪ್ರಾಯ ಕೊಟ್ಟಿದ್ದುದರಿಂದ ತಜ್ಞರು ಅವರ ಉಪನ್ಯಾಸದ ದಿನವನ್ನು ಆತುರದೊಡನೆ ನಿರೀಕ್ಷಿಸುತ್ತಿರುವರು.

* * *

ಕಲ್ಕತ್ತೆಯ ಸ್ಟೇಟ್ಸ್‌ಮೆನ್ ಪತ್ರಿಕೆಯು ಈ ಕೆಳಗಿನಂತೆ ಬರೆಯುತ್ತಿದೆ:— "ನಿಜಾಮರ ರಾಷ್ಟ್ರದಲ್ಲಿ ಕಳೆದ ಒಂದು ವರ್ಷದೊಳಗೆ ಪ್ರಚುರವಾದ ಗ್ರಂಥಗಳ ಮತ್ತು ನಿಯತ ಕಾಲಿಕಗಳ ಸಂಖ್ಯೆಯನ್ನು ಪರಿಶೀಲಿಸಲಾಗಿ ಆ ಪ್ರಭುವಿನ ದೇಶದಲ್ಲಿ ಪ್ರಜಾಜನರು ಗ್ರಂಥಲೇಖನ ವ್ಯವಸಾಯದಲ್ಲಿ ಅಷ್ಟೊಂದು ಮಗ್ನರಾಗಿರುವಂತೆ ತೋರಿಬರುವುದಿಲ್ಲ. "ಪರಿಶೀಲನೆಯ ವರ್ಷದಲ್ಲಿ ಪ್ರಚುರವಾದ ಉತ್ತಮವಾದ ಗ್ರಂಥಗಳ ಸಂಖ್ಯೆಯನ್ನೆಣಿಸಿ ನೋಡಿದರೆ ಸಾಮಾನ್ಯನಾಗಿ ಹೇಳತಕ್ಕಷ್ಟು ಅಭಿವೃದ್ಧಿಯುಂಟಾಗಿರುವಂತೆ ಕಾಣಲಿಲ್ಲ"ವೆಂದು ರಿಪೋರ್ಟು ಹೇಳುತ್ತಿದೆ. ಹಿಂದಿನ ವರ್ಷ ೧೫೫ ಪುಸ್ತಕಗಳು ಪ್ರಚುರವಾಗಿದ್ದುವು; ಈ ವರ್ಷ ಅವುಗಳ ಸಂಖ್ಯೆಯು ೨೨೬ಕ್ಕೆ ಏರಿದೆ, ಪರಂತು ಅವುಗಳಲ್ಲಿ ಬಹುಭಾಗವೆಲ್ಲ ವಿಶೇಷ ಯೋಗ್ಯವಲ್ಲದ ಪುನರ್ಮುದ್ರಣಗಳೂ ಪರಿವರ್ತನಗಳೂ ಆಗಿವೆ." ಮಿಸೆಸ್ ಬಿಲ್ಗ್ರಾಮಿ (Mrs. Bilgrami) ಎಂಬಾಕೆ ಭಾಷಾಂತರಗೊಳಿಸಿದ 'ಪರ್ಷ್ಯದ ಕೊರಳು ಹಿಸುಕಿದುದು' (Strangling of Persia) ಎಂಬುದೊಂದು 'ಉತ್ಕೃಷ್ಟವಾದ ಭಾಷಾಂತರ'ವೆಂದು ರಿಪೋರ್ಟಿನಲ್ಲಿ ಸ್ತೋತ್ರಮಾಡಲಾಗಿದೆ. ಅಮೇರಿಕದಿಂದ ಟ್ರಿಜರರ್ ಜನರಲ್ ಎಂಬ ಉದ್ಯೋಗವನ್ನು ವಹಿಸಿ ತೆಹರಾನಿಗೆ ಹೋದ ಮಿ॥ ಮಾರ್ಗನ್ ಷೂಸ್ಟರ್ ಎಂಬವರು ಇದರ ಮೂಲಕರ್ತೃಗಳು. ಭಾಷಾಂತರವು ಎಷ್ಟು ಚೆನ್ನಾಗಿದ್ದರೂ ಸರಿಯೇ ಪ್ರಾಚ್ಯ ದೇಶಗಳ ಅನುಭವವಿಲ್ಲದ ಶೀಘ್ರಕೋಪಿಗಳಿಂದ ಮಿ॥ ಷೂಸ್ಟರವರು ಬರೆದ ಈ ಗ್ರಂಥವನ್ನು ನಿಜಾಮರ ಪ್ರಜಾಜನರಾದ ವಾಚಕರು 'ವೇದವಾಕ್ಯ'ದಂತೆ ನಂಬಲಾರರೆಂದು ಕೋರುವೆವು. ಅಚ್ಚಾದ ೨೨೬ ಪುಸ್ತಕಗಳೊಳಗೆ ೭೨ ಧರ್ಮವಿಷಯಕವೂ, ೪೮ ಕಾವ್ಯನಾಟಕಗಳೂ ಆಗಿವೆ. ಇನ್ನು ಗ್ರಂಥಗಳ ಭಾಷೆಯನ್ನು ಕುರಿತು ಹೇಳುವುದಾದರೆ ೧೬೩ ಪುಸ್ತಕಗಳು ಉರ್ದು, ೨೪ ತೆಲುಗು, ೧೯ ಮರಾಠಿ, ೧೩ ಅರಬೀ ಮತ್ತು ೯ ಇಂಗ್ಲಿಷ್ ಭಾಷೆಯಲ್ಲಿ ಬರೆಯಲ್ಪಟ್ಟಿದ್ದುವು."

ಹೈದರಾಬಾದು ಸೀಮೆಯಲ್ಲಿ ಸ್ವಲ್ಪ ಭಾಗದಲ್ಲಿ ಕರ್ನಾಟಕ ಭಾಷೆಯೂ ಪ್ರಚಾರದಲ್ಲಿರುವುದಾಗಿ ಹೇಳುವರಾದರೂ ಕನ್ನಡದಲ್ಲಿ ಯಾವ ಪುಸ್ತಕವೂ ಅಚ್ಚಾದಂತೆ ಕಂಡುಬರುವುದಿಲ್ಲ.

* * *

ಸ್ವಿಟ್ಸರ್ಲಂಡ್ ದೇಶದ ಶಿಕ್ಷಣ ಪದ್ಧತಿ.

"ಮಾಡರ್ನ್ ರಿವ್ಯೂ" ಎಂಬ ಪತ್ರಿಕೆಯಲ್ಲಿ ರಾಯ ಸಾಹೇಬ್ ಪಂಡಿತ ಚಂದ್ರಿಕಾ ಪ್ರಸಾದ ಎಂಬವರು ಈ ವಿಷಯವಾಗಿ ಒಂದು ಲೇಖನವನ್ನು ಬರೆದಿದ್ದಾರೆ. ಅದರ ಮುಖ್ಯಾಂಶವನ್ನು ಇದರಡಿ ವಿವರಿಸಿದೆ.

ಯುರೋಪ್ ಖಂಡದಲ್ಲಿ ಸ್ವಿಟ್ಸರ್ಲಂಡ್ ಎಂಬದೊಂದು ಸ್ವತಂತ್ರವಾದ ಸಣ್ಣ ದೇಶವಿದೆಯಷ್ಟೆ? ಆ ದೇಶವು ಉನ್ನತವಾದ ಪರ್ವತಾವಳಿಯಿಂದಲೂ, ಮನೋಹರವಾದ ಸರೋವರಗಳಿಂದಲೂ, ನಿಬಿಡವಾದ ವನಗಳಿಂದಲೂ, ಶೋಭಿಸುತ್ತಿರುವುದು. ಆ ದೇಶದಲ್ಲಿ ೩೭,೪೧,೯೭೧ ಜನಗಳು ವಾಸವಾಗಿದ್ದಾರೆ. ಅವರಲ್ಲಿ "ಪ್ರೊಟೆಸ್ಟಂಟ್" ಎಂಬ ಕ್ರೈಸ್ತಧರ್ಮದ ಒಂದು ಪಂಗಡಕ್ಕೆ ಸೇರಿದವರೇ ಹೆಚ್ಚು. ಜರ್ಮನ್, ಫ್ರೆಂಚ್, ಇಟಾಲಿಯನ್ ಮತ್ತು ರೋಮನಿಷ್ ಭಾಷೆಗಳೇ ಆ ದೇಶದಲ್ಲಿ ಹೆಚ್ಚಾಗಿ ವಾಡಿಕೆಯಲ್ಲಿವೆ. ಅವುಗಳಲ್ಲಿಯೂ ಜರ್ಮನ್ ಭಾಷೆಯನ್ನಾಡುವವರು ಅಧಿಕ. ಆ ದೇಶವು ೨೨ ಜಿಲ್ಲೆಗಳಾಗಿ ವಿಭಾಗಿಸಲ್ಪಟ್ಟಿದೆ. ಅಲ್ಲಿನ ಲೋಹಮಾರ್ಗವು ಬಹು ವಿಸ್ತಾರವಾಗಿಯೂ, ಉತ್ತಮವಾಗಿಯೂ ಇದೆ.

ಅಲ್ಲಿನ ಜನರು ಕೈಗಾರಿಕೆಯಲ್ಲಿ ಬಹು ಪ್ರವೀಣರು. ಆ ದೇಶದ ಗಡಿಯಾರ, ಗಟ್ಟಿಮಾಡಿದ ಹಾಲು ಪ್ರಪಂಚದಲ್ಲೆಲ್ಲಾ ಪ್ರಸಿದ್ಧವಾಗಿವೆ. ತಮ್ಮ ದೇಶಕ್ಕೆ ಬೇಕಾಗುವ ಎಲ್ಲಾ ಪದಾರ್ಥಗಳನ್ನು ತಮ್ಮಲ್ಲಿಯೇ ಮಾಡಿಕೊಂಡು ಅನ್ಯ ದೇಶಗಳಿಗೆ ಕೂಡಾ ಕಳುಹಿಸುತ್ತಿರುವರು. ಈ ಸ್ವಿಸ್ ಜನಗಳು ದೀರ್ಘೋದ್ಯೋಗಿಗಳೂ, ಸ್ವಾವಲಂಬಿಗಳೂ, ನಾಗರೀಕರೂ, ಧನಿಕರೂ ಮತ್ತು ಸುಖಿಗಳೂ ಇರುತ್ತಾರೆ. ಈ ಚಿಕ್ಕ ರಾಜ್ಯವು ಕೇವಲ ಪ್ರಜಾಪ್ರಭುತ್ವದಿಂದ ನಡೆಯುತ್ತಿರುವುದು. ಆ ಜನರಲ್ಲಿ ಭಾಷಾಭೇದ, ಜಾತಿಭೇದಗಳಿದ್ದರೂ, ಪ್ರಭುತ್ವವನ್ನು ಐಕ್ಯಮತ್ಯದಿಂದ [illegible]ವಾಗಿ ನಡೆಸುತ್ತಿರುವರು. ಈ ಜನಗಳಿಂದ ಹಿಂದುಸ್ಥಾನದವರು ಕಲಿಯಬೇಕಾಗಿರುವ ಅನೇಕ ವಿಷಯಗಳನ್ನು ಪಂಡಿತ ಚಂದ್ರಿಕಾ ಪ್ರಸಾದರವರು ತಮ್ಮ ಲೇಖನದಲ್ಲಿ ವ್ಯಕ್ತಪಡಿಸಿ ಅಲ್ಲಿನ ಶಿಕ್ಷಣ ಪದ್ಧತಿಯ ಸಂಬಂಧವಾಗಿ ಬರೆದಿರುವುದೇನೆಂದರೆ:

ಸ್ವಿಟ್ಸರ್ಲಂಡ್ ದೇಶದ ಶಿಕ್ಷಣಪದ್ಧತಿಯು ಪರಿಪೂರ್ಣವಾಗಿಯೂ, ಪ್ರಾಪಂಚಿಕ ರೀತಿಯಿಂದ ಬಹು ಪ್ರಯೋಜನವಾಗಿಯೂ ಇದೆ. ಮಕ್ಕಳು ನಾಲ್ಕನೆಯ ವರ್ಷದವರಾದೊಡನೆ "ಕಿಂಡರ್‌ಗಾರ್ಟನ್" ಎಂಬ ಪಾಠಶಾಲೆಗೆ ಹೋಗುತ್ತಾರೆ. ಅಲ್ಲಿ ಮೂರು ವರ್ಷ ವಿದ್ಯಾಭ್ಯಾಸಮಾಡುವರು. ಸುಶಿಕ್ಷಿತರಾದ ಸ್ತ್ರೀಯರೇ ಆ ಮಕ್ಕಳ ಉಪಾಧ್ಯಾಯಿನಿಯರು. ಪ್ರಾತಃಕಾಲ ೯ ಗಂಟೆಯಿಂದ ೧೧ರ ವರೆಗೂ, ಅನಂತರ ಮಧ್ಯಾಹ್ನ ೨ ಗಂಟೆಯಿಂದ ೪ರ ವರೆಗೂ ಈ ಮಕ್ಕಳಿಗೆ ಕಲಿಸುತ್ತಾರೆ. ತಾಯಿತಂದೆಯರು ತಮ್ಮ ಮಕ್ಕಳನ್ನು ಈ ಶಾಲೆಗಳಿಗೆ ಕಳುಹಿಸಬೇಕೆಂಬ ನಿರ್ಬಂಧವಿಲ್ಲದಿದ್ದರೂ ಎಲ್ಲಾ ಶಾಲೆಗಳಲ್ಲಿಯೂ [illegible] ಮಕ್ಕಳು ವಿಶೇಷವಾಗಿಯೇ ಇರುತ್ತಾರೆ. ವಸ್ತುಗಳ ಮೂಲಕ ಮಕ್ಕಳಿಗೆ ಜ್ಞಾನವುಂಟಾಗುವಂತೆಯೂ, ಸಂಗೀತ, ನರ್ತನ, ಆಟ ಪಾಠಗಳಾದವುಗಳಿಂದ ಅವರಿಗೆ ಮನೋಲ್ಲಾಸ, ವ್ಯಾಯಾಮಗಳು ಆಗುವಂತೆಯೂ ಕಲಿಸುವುದೇ "ಕಿಂಡರ್‌ಗಾರ್ಟನ್" ತರಗತಿಯ ಉದ್ದೇಶ.

ಮಕ್ಕಳಿಗೆ ೭ ವರ್ಷಗಳಾದ ನಂತರ ಅವರು [illegible] ಪಾಠಶಾಲೆಗೆ ಹೋಗುತ್ತಾರೆ. ಪ್ರಾಥಮಿಕ ಶಿಕ್ಷಣವು ಉಚಿತವಾಗಿಯೂ, ಬಲ್ಲಾತ್ಕಾರವಾಗಿಯೂ ಕೊಡಲ್ಪಡುವುದು. ೧೫ನೆಯ ವರ್ಷದ ವರೆಗೆ [illegible] ಪಾಠಶಾಲೆಗೆ ಹೋಗಲೇಬೇಕೆಂದು ನಿರ್ಬಂಧವಿದೆ. ಬಾಲಕಿಯರಿಗೆ ಮಾತ್ರ ಈ ಪ್ರತಿಬಂಧವಿಲ್ಲ. ಅವರು

ಪ್ರಾಥಮಿಕ ಶಿಕ್ಷಣವನ್ನು ಪೂರೈಸಿದ್ದರೆ ೧೬ನೆಯ ವರ್ಷದವರಾಗುವವರೆಗೂ ಪ್ರತಿ ಕೆಲಸಗಳನ್ನು ಕಲಿಸುವ ಪಾಠಶಾಲೆಗಳಿಗೆ ವಾರಕ್ಕೆ ಕೆಲವು ಕಾಲ ಹೋಗಲೇಬೇಕಾಗುವುದು. ಪ್ರಾಥಮಿಕ ಶಾಲೆಯಲ್ಲಿ ೭ ತರಗತಿಗಳಿವೆ. ಜರ್ಮನ್, ಫ್ರೆಂಚ್, ಭಾಷೆಗಳೂ, ಚರಿತ್ರೆ, ಭೂವಿವರಣೆ, ಗಣಿತ, ಸಿದ್ಧಾಂತ, ಸೃಷ್ಟಿಶಾಸ್ತ್ರ, ಚಿತ್ರ, ಸಂಗೀತಾದಿ ವಿದ್ಯೆಗಳು ಆಯಾಯ ತರಗತಿಗಳಲ್ಲಿ ಕಲಿಸಲ್ಪಡುತ್ತವೆ. ಪ್ರಾಥಮಿಕ ಶಾಲೆಯ ಎಲ್ಲಾ ವಿದ್ಯಾರ್ಥಿಗಳಿಗೂ ಪುಸ್ತಕ, ಕಾಗದ ಮೊದಲಾದವುಗಳು ಕೂಡಾ ಉಚಿತವಾಗಿಯೇ ಕೊಡುವರು.

ಪ್ರಾಥಮಿಕ ಶಿಕ್ಷಣವು ಮುಗಿದ ನಂತರ ವಿಶ್ವವಿದ್ಯಾಲಯಗಳಿಗೆ ಹೋಗುವವರು ಹೈಸ್ಕೂಲಿಗೆ ಹೋಗಿ ಅಲ್ಲಿನ ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆಯಾಗ ಬೇಕು. ಹಾಗೆ ಮಾಡಲು [illegible] ವರು ಸೆಕೆಂಡರಿ ಅಥವಾ ಮಧ್ಯಮತರಪದ ಶಾಲೆಗಳಿಗೆ ಹೋಗುತ್ತಾರೆ. ಆ ಮಧ್ಯಮ ಶಾಲೆಗಳಲ್ಲಿ ಬಾಲಿಕೆಯರು ಕೂಡಾ ಕಲಿಯಬಹುದು. ಈ ಶಾಲೆಗಳಲ್ಲಿ ಕಲಿಯುವವರಿಗೆ ಸಹ ವೇತನವಿಲ್ಲ. ಪ್ರವೇಶವೇತನವೆಂದು ೫ ಪ್ರಾಂಕ್ ಎಂದರೆ ಸಾಧಾರಣ ೩ ರೂಪಾಯಿಗಳನ್ನು ಮಾತ್ರ ಕೊಡಬೇಕಾಗುವುದು. ಈ ಮಧ್ಯಮ ತರಹದ ಶಿಕ್ಷಣವು ಮೂರು ವಿಧವಾಗಿ ಒಡೆದಿದೆ. ಆಯಾಯ ವಿಷಯಗಳಲ್ಲಿ ತೇರ್ಗಡೆಯಾದವರಿಗೆ ಪದವಿಗಳೂ ದೊರೆಯುವವು. ಅವರು ತಮ್ಮ ಮುಂದಣ [illegible] ಸುಖವಾಗಿ ಸಾಗಿಸಲು ಸಮರ್ಥರಾಗುತ್ತಾರೆ. ಲೋಹ ಮಾರ್ಗಗಳಲ್ಲಿಯೂ, ತಂತೀ, ಅಂಚೆ ಕಚೇರಿಗಳಲ್ಲಿಯೂ, "ಬ್ಯಾಂಕ್" ವ್ಯಾಪಾರ ಮೊದಲಾದ ಸಂಘಗಳಲ್ಲಿಯೂ ತೃಪ್ತಿಕರವಾದ ಕೆಲಸವನ್ನು ಮಾಡಲು ಇವರು ಯೋಗ್ಯರಾಗುತ್ತಾರೆ.

ಇದಲ್ಲದೆ ಆ ದೇಶದಲ್ಲಿ ೭ ವಿಶ್ವವಿದ್ಯಾಲಯಗಳಿವೆ. ಇವುಗಳಲ್ಲಿ ಧರ್ಮಶಾಸ್ತ್ರ, ನ್ಯಾಯ, ವೈದ್ಯ, ವೇದಾಂತಗಳನ್ನು ಕಲಿಸುತ್ತಾರೆ. ವಿದ್ಯಾರ್ಥಿಯು ಮಾಸವೇತನವನ್ನು ಸ್ವಲ್ಪ ಕೊಡಬೇಕಾಗುತ್ತದೆ. ಈ ವಿಶ್ವವಿದ್ಯಾಲಯದ ಅಭ್ಯಾಸವು ೪ ವರ್ಷಕ್ಕೆ ಪೂರೈಸುವದು. ಆದರೆ ವೈದ್ಯವಿದ್ಯೆಯನ್ನು ಮಾತ್ರ ೫ ವರ್ಷ ಕಲಿಯಬೇಕಾಗುತ್ತದೆ. ಜರ್ಮನಿಯ ಹೆಚ್ಚಿನ ತರಹದ ವಿದ್ಯೆಯು ಉತ್ತಮವಾದುದೆಂದು ಹೇಗೆ ಎಣಿಸಲ್ಪಡುತ್ತಿರುವುದೋ ಹಾಗೆಯೇ ಸ್ವಿಟ್ಜರ್ಲಂಡ್ ದೇಶದ ಪ್ರಾಥಮಿಕ, ಮತ್ತು ಮಧ್ಯಮ ತರಹದ ಶಿಕ್ಷಣಗಳು ಶ್ರೇಷ್ಠವಾದವುಗಳೆಂದು ತಿಳಿಯಲ್ಪಡುವುದು.

ವಿ. ಬಿ. ಪು.

"ನ್ಯಾಟ್ರೇಟ್ ಆಫ ಸೋಡಾ" ಎಂಬ ಕಡ್ಡುಪ್ಪು (ಅಡಿಗೆ) ಗೊಬ್ಬರ.

1. ಇದು ದಕ್ಷಿಣ ಅಮೇರಿಕದ ಚೀಲಿಪ್ರಾಂತ್ಯದ ಎತ್ತರ ಪ್ರದೇಶಗಳಲ್ಲಿನ ಗಣಿಗಳಿಂದ ಅಗೆದು ತೆಗೆಯುವ ಖನಿಜಕ್ಷಾರದಿಂದ ತಯಾರಿಸಲ್ಪಡುವ ಒಂದು ಜಾತಿಯ ಕಡ್ಡುಪ್ಪು. ಈ ಕಡ್ಡುಪ್ಪು ಸಸ್ಯಾಹಾರಕ್ಕೆ ಅಗತ್ಯವಿರುವ "ನ್ಯಾಟ್ರೊಜನ್" ಅಥವಾ ಸಾರಜನಕಭರಿತವಾದುದರಿಂದ ವ್ಯವಸಾಯದಲ್ಲಿ ಇದು ಹೆಚ್ಚಿನ ಗುಣಕಾರಿಯಾದ ಗೊಬ್ಬರವಾಗಿರುವುದು. ನೋಟಕ್ಕೆ ಇದು ಬಿರೇ ಉಪ್ಪಿನ ಹಾಗೆ, ಇದನ್ನು ಬೇಕಾದಲ್ಲಿಗೆ ಸಾಗಿಸಲಿಕ್ಕೂ, ಗದ್ದೆಗಳಿಗೆ ಹಾಕಲಿಕ್ಕೂ ಸುಲಭ.

2. ಸಸ್ಯಾಹಾರಕ್ಕೆ ಅಗತ್ಯವುಳ್ಳ ಪದಾರ್ಥಗಳಲ್ಲಿ ಮೂರು ಮುಖ್ಯವಾದುವುಗಳು:— ನ್ಯಾಟ್ರೊಜನ್ ಅಥವಾ ಸಾರಜನಕ, ಫೊಸ್ಪೊರಿಕ ಎಸಿಡ್ ಅಥವಾ ರಂಜಕ, ಪೊಟ್ಯಾಶ್ ಅಥವಾ ಮರದ ಉಪ್ಪು. ರಂಜಕ ಮತ್ತು ಪೊಟೆಶ್ ಇವೆರಡೂ ಸಾಧಾರಣವಾಗಿ ಮಣ್ಣಿನಲ್ಲಿ ಜಡಸ್ಥಿತಿಯಲ್ಲಿರುತ್ತವೆ, ಆದರೆ ಚಿಲಿಯ ಕಡ್ಡುಪ್ಪಿನಲ್ಲಿ ಬೆರತಿರುವ "ಸೋಡಿಯಮ್" ಎಂಬ ಕ್ಷಾರವು ಇವೆರಡನ್ನೂ ಸಸ್ಯಾದಿಗಳು ಉಣುವ ರೂಪಿಗೆ ತಂದು ಅನುಕೂಲಿಸುತ್ತದೆ. ಒಂದು ವೇಳೆ ರಂಜಕ ಪೊಟೆಶ್ ಮಣ್ಣಿನಲ್ಲಿಯೇ ಶೂನ್ಯವಾಗಿದ್ದರೆ ಇವುಗಳು ಬೆರತಿರುವ ಗೊಬ್ಬರಗಳನ್ನೂ ಹಾಕಬೇಕು.

3. ಸೆಗಣಿ ಮತ್ತು ಹಿಂಡಿ ಗೊಬ್ಬರಗಳಲ್ಲಿ ಬೆರತಿರುವ ಸಾರಜನಕವು ಸಸ್ಯಾದಿಗಳಿಗೆ ಶೀಘ್ರದಲ್ಲಿ ಉಣುವ ಹಾಗಿಲ್ಲ, ಹೇಗೆಂದರೆ, ಅವುಗಳಲ್ಲಿನ ಸಾರಜನಕವು ನ್ಯಾಟ್ರೇಟ್ ಎಂಬ ಕ್ಷಾರಕ ಸ್ಥಿತಿಗೆ ಮೊದಲು ಮಾರ್ಪಡಬೇಕು. ಈ ನ್ಯಾಟ್ರೇಟ್ ಮಾರ್ಪಡುವಿಕೆ ಉಷ್ಣಕಾಲದಲ್ಲಿ ಮತ್ತು ಮಣ್ಣಿನಲ್ಲಿರುವ ಉಪಜೀವಿಗಳ ಮೂಲಕ ಅನುಕೂಲವಾಗಿರುವದು. ಇದು ಹೀಗೆ ಬಹಳ ಮಂದವಾಗಿ ಆಗುವದರಿಂದ ಸಾರಜನಕವು ಮಳೆಯಿಂದ ಮುಂಚಾದಕ್ಕೆ ನಷ್ಟವಾಗಿ ಹೋಗುವ ಅಸ್ಪದವುಂಟು.

ರಂಜಕ ಮತ್ತು ಪೊಟೆಶ್ ಈ ೨ ಪದಾರ್ಥಗಳು ಬೆಳೆಗಳಿಗೆ ಸಾಕಾಗುವಷ್ಟು ಮಣ್ಣಿನಲ್ಲಿಯೇ [illegible] ಸಾರಜನಕವನ್ನು ಒದಗಿಸದಿದ್ದರೆ ಬೆಳೆಗಳು ಕ್ಷೀಣವಾಗುವವು. ಆದರೆ ಕಡ್ಡುಪ್ಪಿನಲ್ಲಿ ಸಾರಜನಕವು ನ್ಯಾಟ್ರೇಟ್ ಸ್ಥಿತಿಯಲ್ಲಿಯೇ ಬೆರತಿರುವದರಿಂದ ಅದನ್ನು ಸಸ್ಯಾದಿಗಳು ಆಯಾಸವಿಲ್ಲದೆ ಶೀಘ್ರದಲ್ಲಿಯೇ ಒದಗಿಸಿಕೊಳ್ಳುತ್ತವೆ. ಹೀಗಾಗಿ ಬೆಳೆಯು ಸಮೃದ್ಧಿಯಾಗುವದು. ಅಲ್ಲದೆ ಕಡ್ಡುಪ್ಪು ನೆಲದೊಳಗೆ ಸುಲಭದಲ್ಲಿ ಕರಗಿ ಹೋಗುವದರಿಂದ ಸಸಿಗಿಡಗಳು ನೀಳಬೇರೂರಿ ಪುಷ್ಟಿಯನ್ನು ಹೊಂದುವವು.

5. ಚೀಲಿಕಡ್ಡುಪ್ಪಿನಲ್ಲಿ ಸಾರಜನಕವು 16% ರಂತೆಯೂ ನಮ್ಮ ಸೆಗಣಿಗೊಬ್ಬರದಲ್ಲಿ 8 ಖಂಡಿಯಲ್ಲಿ 12-15 ರಾತಲು (=½%) ಪರಿಮಾಣದಲ್ಲಿಯೂ ಬೆರತಿರುತ್ತವೆ.

6. ಚಿಲಿಕಡ್ಡುಪ್ಪು ಗೊಬ್ಬರವನ್ನು ಗದ್ದೆಗಳಲ್ಲಿ ಸರಿಯಾಗಿ ಪಸರಾಯಿಸಿ ಹಾಕಿ ಹೂಡಲೂ ಬಹುದು. ಅಥವಾ ನೇಜಿ ನೆಟ್ಟ ಕೆಲವು ದಿವಸಗಳ ನಂತರ ಬೀಜ ಬಿತ್ತುವ ಸಮಯನೆಯಲ್ಲಿ ಪುಡಿಮಣ್ಣಿನೊಂದಿಗೆ ಬೆರಸಿಹಾಕಲೂ ಬಹುದು. ಅಂದಾಜಿನಲ್ಲಿ ಒಂದು ಎಕ್ರೆ ಜಮಿನಿಗೆ ಅದರ ಮಣ್ಣಿನ ಗುಣಕ್ಕನುಸಾರವಾಗಿ 1½—2 ಹಂಡ್ರೆಡ್‌ವೇಟ್ (=168—224 ರಾತ್ಲು) ಕಡ್ಡುಪ್ಪನ್ನು ಸರಿಪಾಲಿನಲ್ಲಿ 2ದಫಾ ಒಂದು ತಿಂಗಳ ಎಡೆಯಲ್ಲಿ ಹಾಕುವದು. ಉತ್ತಮ ತರಕಾರಿ ಮೊದಲಾದವುಗಳಿಗೆ ಅವುಗಳ ಮೊಳಕೆಯೊಡೆದು 4ಯಾ 5 ಎಲೆ ಬಿಟ್ಟನಂತರ ಗಿಡಗಳಿಗೆ ಮುಟ್ಟದ ಹಾಗೆ ಸುತ್ತಲೂ ಚಿಮುಕಿಸಬೇಕು. ತೆಂಗು ಮೊದಲಾದ ಮರಗಳಿಗಾದರೆ ಅವುಗಳ ಸುತ್ತಲೂ ಸ್ವಲ್ಪ ದೂರದಲ್ಲಿ ಹಾಕಬೇಕು. ಈ ಕಡ್ಡುಪ್ಪನ್ನು ಹಾಕುವದರಿಂದ, ಮಣ್ಣಿನ ಕ್ಷೇಮಸ್ಥಿತಿಯನ್ನು ದೀರ್ಘಕಾಲದ ವರೆಗೆ ಇರಗೊಡಿಸುವ ನಮ್ಮ ಸೆಗಣಿ, ಹಿಂಡಿ ಮೊದಲಾದ ಸೇಂದ್ರಿಯ ಗೊಬ್ಬರವನ್ನು ವರ್ಜಿಸುವದು ಯುಕ್ತವಲ್ಲ, ಹಾಗೂ ಇವುಗಳ ಪರಿಮಾಣ ಅರ್ಧಾರ್ಧ ಕಡಮೆಮಾಡಿ ಇವುಗಳ ಪ್ರಮಾಣೆಯಾಗಿ ಫಲಕಾರಿಯಾದ ಕಡ್ಡುಪ್ಪನ್ನು ಉಪಯೋಗಿಸತಕ್ಕದ್ದು. ಈ ಕ್ರಮಕ್ಕನುಸಾರವಾಗಿ ಕಡ್ಡುಪ್ಪನ್ನು ಬೊಂಬಾಯಿ ಮತ್ತು ಮದ್ಯಸಂಸ್ಥಾನಗಳ ಸರಕಾರಿ ವ್ಯವಸಾಯ ಕ್ಷೇತ್ರಗಳಲ್ಲಿ ಪರಿಕ್ಷಾರ್ಥವಾಗಿ ಉಪಯೋಗಿಸಿದ್ದಲ್ಲಿ ಹೆಚ್ಚಿನ ಪ್ರಯೋಜನ ಸಿಕ್ಕಿಯದೆಂದು ಪ್ರಕಟವಾಗಿಯದೆ. ಕಡ್ಡುಪ್ಪನ್ನು ಗಿ[illegible]ಳಿಗೆ ಹಾಕಿದ ಕೂಡಲೇ ನೀರನ್ನು ಹಾಯಿಸತಕ್ಕದ್ದು.

ಲಖನೌನಲ್ಲಿ ನೆರೆದ ಅಯಿದನೆಯ ಹಿಂದೀ ಸಮ್ಮೇಳನವು.

ಈ ಸಮ್ಮೇಳನದ ಅದಿವೇಶನವು ಕಳೆದ ನವಂಬರು ೨೭ ೨೮, ಮತ್ತು ೨೯ನೆಯ ತಾರೀಕುಗಳಲ್ಲಿ ಮೂರು ದಿನ ನಡೆಯಿತು. ಪಂಜಾಬಿನಿಂದ ಮಧ್ಯಪ್ರಾಂತ್ಯಗಳ ವರೆಗಿನ ಯಾವತ್ತು ಹಿಂದೀ ಪ್ರಾಂತ್ಯಗಳಿಂದ ೬೦೦ರ ವರೆಗೂ ಪ್ರತಿನಿದಿಗಳು ಬಂದಿದ್ದರು. ಅವರೊಳಗೆ ಕೆಲ ಕೆಲವು ಬಂಗಾಳಿಗಳೂ ಮರಾಟರೂ ಕೂಡ ಕಂಡು ಬರುತ್ತಿದ್ದರು.

ಅಯೋಧ್ಯಾದೇಶವು ಬಹುಕಾಲ ಮುಸಲ್ಮಾನ ರಾಜರ ಕೈಕೆಳಗಿದ್ದುದರ ದೆಸೆಯಿಂದ ಅಲ್ಲಿಯ ಹಿಂದೂ ಜನರ ನಡೆನುಡಿಗಳಲ್ಲಿಯೂ ವಸ್ತ್ರಾಲಂಕಾರಗಳಲ್ಲಿಯೂ ಓದುಬರಹಗಳಲ್ಲಿಯೂ ಮಹಮ್ಮದೀಯ ಮುದ್ರೆಯೇ ವಿಶೇಷವಾಗಿ ಕಂಡುಬರುವುದು. ಇದುವರೆಗೆಂಬಂತೆ ಯಾವತ್ತು ಪ್ರಾಥಮಿಕ ಶಿಕ್ಷಣವು ಉರ್ದು ಭಾಷೆಯಿಂದಲೇ ಕೊಡಲ್ಪಡುತ್ತಿದ್ದಿತು. ಈಗಲೂ ಬಹು ಜನರಿಗೆ ದೇವನಾಗರೀ ಲಿಪಿಯೂ ಸಂಸ್ಕೃತ ಮಿಶ್ರವಾದ ಹಿಂದೀ ಭಾಷೆಯೂ ಪ್ರಾಯಶಃ ತಿಳಿಯದು. ಹೀಗಾಗಿ ಹಿಂದೀ ಭಾಷೆಯ ಉನ್ನತಿಗೆ ಈ ದೇಶದಲ್ಲಿ ಅಕ್ಷರಮಾಲೆಯಿಂದೆಂಬಂತೆ ಪ್ರಾರಂಭವಾಗಬೇಕಾಗಿರುವುದು. ಇದರ ಮೇಲಿಂದ ಇಲ್ಲಿ ನಡೆದ ಹಿಂದೀ ಸಾಹಿತ್ಯ ಸಮ್ಮೇಳನ ಪ್ರಾಮುಖ್ಯತೆಯನ್ನು ಭಾವಿಸಿಕೊಳ್ಳಬೇಕಾಗಿದೆ.

ಹಿಂದೀ ಸಾಹಿತ್ಯ ಸಮ್ಮೇಳನದವರು ಮುಖ್ಯವಾಗಿ ಎರಡು ಉದ್ದೇಶಗಳನ್ನು ತಮ್ಮ ಕಣ್ಣೆದಿರಿಗೆ ಇಟ್ಟುಕೊಂಡಿರುವರು. ಮಾತೃಭಾಷೆಯೆಂಬ ಕಾರಣದಿಂದ ಆ ಭಾಷೆಯನ್ನು ಉನ್ನತಾವಸ್ಥೆಗೆ ತರುವ ಉದ್ದೇಶವೊಂದು, ಇದಲ್ಲದೆ ಅದರ ಯೋಗ್ಯತೆಯನ್ನು ಅನುಲಕ್ಷಿಸಿ ಅದು ಯಾವತ್ತು ಹಿಂದೂಸ್ಥಾನಕ್ಕೆ ರಾಷ್ಟ್ರ ಭಾಷೆಯಾಗುವಂತೆ ಪ್ರಯತ್ನಿಸುವ ಬಹು ಮಹತ್ವದ ಉದ್ದೇಶವು ಎರಡನೆಯದು. ಈ ಎರಡು ಉದ್ದೇಶಗಳೂ, ಸಮ್ಮೇಳನದವರ ಪ್ರಯತ್ನಗಳ ಮೂಲಕ ಸಾಧ್ಯಾವಸ್ಥೆಗೆ ಬರತೊಡಗಿವೆಯೆಂದು ನೆಂಬುಗೆಯಾಗಿ ಹೇಳಬಹುದಾಗಿದೆ. ಹಿಂದೀ ಸಾಹಿತ್ಯದಲ್ಲಿ ಇತ್ತಿತ್ತಲಾಗಿ ಉತ್ಕೃಷ್ಟವಾದ ಗ್ರಂಥಗಳು ನಿರ್ಮಾಣವಾಗ ತೊಡಗಿವೆ ಮಾತ್ರವೇ ಅಲ್ಲದೆ ಹಿಂದೀ ಭಾಷೆಯು ರಾಷ್ಟ್ರ ಭಾಷೆಯಾಗಲು ಕೇವಲ ತಕ್ಕುದಾಗಿದೆಯೆಂಬ ಭಾವನೆಯು ಕೂಡ ನಿಷ್ಪಕ್ಷಪಾತ ಬುದ್ಧಿಯಿಂದ ನೋಡುವ ಯಾವತ್ತು ಭಾರತೀಯರಲ್ಲಿ ಅಂಕುರಿಸತೊಡಗಿದೆ.

ಸ್ವಾಗತಕಮಿಟಿಯ ಅಧ್ಯಕ್ಷರಾದ ರಾಜಾರಾಮಪಾಲಸಿಂಹ ಬಿ. ಎ. ಇ ಯವರು ಮಾತನಾಡುತ್ತ, ಹಿಂದೀ ಭಾಷೆಯನ್ನಾಡುವ ಹಲವು ಪ್ರಾಂತಗಳೊಳಗೆ ಸಂಯು[illegible]

ಪ್ರಾಂತಗಳಲ್ಲಿಯೇ ೪ ಕೋಟಿ ೩ಲ ಲಕ್ಷ ಹಿಂದೂ ಜನರು ಆ ಭಾಷೆಯನ್ನಾಡುವರೆಂದೂ, ಹೀಗಿದ್ದು ಕೂಡ ಹಿಂದೀಯನ್ನು ಪ್ರಾಥಮಿಕ ಶಿಕ್ಷಣದ ಬಗ್ಗೆ ಸಾಮಾನ್ಯ ಭಾಷೆಯಾಗಿ ಸರಕಾರದವರು ಅಂಗೀಕರಿಸುವುದಿಲ್ಲವೆಂದೂ, ಯಾವತ್ತು ಸರಕಾರಿ ಕೋರ್ಟ ಕಚೇರಿಗಳಲ್ಲಿ ಉರ್ದು ಭಾಷೆಯೇ ವ್ಯವಹಾರದಲ್ಲಿರುವುದೆಂದೂ, ಹಿಂದೀ ಭಾಷೆಯು ಮೃತಭಾಷೆಯೆಂದು ಕೂಡ ಈಗಾಗಲೇ ಒಂದು 'ಕಮಿಟಿ'ಯವರು ನುಡಿದರೆಂದೂ, ಈ ವಿಷಯದಲ್ಲಿ 'ಒಥ' ಪತ್ರಿಕೆಯು ಮಾಡಿದ ಸಹಾಯವು ಚಿರಸ್ಮರಣೀಯವಾದುದೆಂದೂ' ಹೇಳಿ ಹಿಂದೀ ಭಾಷೆಯ ಉನ್ನತ್ಯರ್ಥವಾಗಿ ಹಲವು ಉಪಾಯಗಳನ್ನು ಸೂಚಿಸಿದರು.

ಬಳಿಕ ಪ್ರಸಿದ್ಧ ಹಿಂದೀ ಕವಿಗಳಿಂದ ಶ್ರೀಧರ ಪಾಠಕರೆಂಬುವರು ಅಧ್ಯಕ್ಷಸ್ಥಾನವನ್ನು ವಹಿಸಿ ಹಲವು ಕಾರಣಗಳಿಂದ ಮನನೀಯವಾದ ಒಂದು ಉಪನ್ಯಾಸವನ್ನಿತ್ತರು. ಇವರು ಮಾಡಿದ ಸೂಚನೆಗಳೊಳಗೆ ಎರಡು ಸಮಸ್ತ ಭಾಷಾಭಿಮಾನಿಗಳೂ ಗಮನ್ನಿಸತಕ್ಕವಾಗಿದೆ. ನಮ್ಮ ಪುರಾಣೇತಿಹಾಸಾದಿ ಗ್ರಂಥಗಳೊಳಗಿಂದ ಮನಸ್ಸನ್ನು ತಲ್ಲೀನಗೊಳಿಸತಕ್ಕವಾಗಿಯೂ, ಉಚ್ಚವೃತ್ತಿಗಳನ್ನೂ ಉದ್ದೀಪನಗೊಳಿಸುವವುಗಳಾಗಿಯೂ ಸ್ವಾಭಿಮಾನವನ್ನು ಜಾಗ್ರತಗೊಳಿಸತಕ್ಕವಾಗಿಯೂ ಇರುವ ಉದ್ದಾಮವಾದ ಕಥೆಗಳನ್ನು ಆಯಿದುಕೊಂಡು ಅವನ್ನೂ ಒಂದೊಂದು ಮಹಾಕಾವ್ಯವಾಗಿ ಬರೆಯಬೇಕೆಂಬುದು ಇವರ ಒಂದು ಸೂಚನೆಯಾಗಿದ್ದಿತು. ಹಾಗೆಯೇ, ಸಂಸಾರದೊಳಗಣ ವಿವಿಧವಾದ ವ್ಯವಹಾರಗಳನ್ನು ಅನುಲಕ್ಷಿಸಿ ಚೆಲುವಾಗಿಯೂ ಉಪದೇಶಪೂರ್ಣವಾದ ದೃಷ್ಟಾಂತಗಳಿಂದ ಕೂಡಿದುದಾಗಿಯೂ ಇರುವ ಒಂದು ಪುಸ್ತಕವನ್ನು (youth's noble path,' 'moral tales') ಇತ್ಯಾದಿ ಪುಸ್ತಕಗಳ ರೀತಿಯನ್ನನುಸರಿಸಿ ಬರೆಯಬೇಕೆಂದು ಇನ್ನೊಂದು ಅಭಿಪ್ರಾಯವನ್ನೂ ಅವರು ಸೂಚಿಸಿದರು. ಇನ್ನು, ಜಗತ್ತಿನೊಳಗಣ ಬೇರೆ ಬೇರೆ ಜಾತಿಗಳಲ್ಲಿ ಕಂಡು ಬರುವ ಉದ್ದಾಮ ಗುಣಗಳ ವರ್ಣನದಿಂದ ಕೂಡಿದ ಒಂದು 'ವಿಶ್ವಗುಣಾದರ್ಶ'ವನ್ನು ಬರೆಯಬೇಕೆಂದು ಕೂಡ ಅವರು ಹೇಳಿದರು. ಈ ಯಾವತ್ತು ಸೂಚನೆಗಳು ವಿಚಾರಾರ್ಹವಾದುವುಗಳೆಂದು ನಿರಾತಂಕವಾಗಿ ಹೇಳಬಹುದಾಗಿದೆ.

ಸಶೇಷ.

ಪತ್ರವ್ಯವಹಾರ.

ಅಯ್ಯಾ ಪತ್ರಕರ್ತರೇ,

ಇದೇ ಕಳೆದ ೨೧ನೇ ತಾರೀಕಿನ ದಿನ ಉಡುಪಿಯಲ್ಲಿ ಜರಗಿದ 'ಉಡುಪಿ ಪರಸ್ಪರ ಸಹಾಯ ಸಂಘ'ದ ಮಹಾಸಭೆಯಲ್ಲಿ ನಡೆದ ಕೆಲವು ಸಂಗತಿಗಳನ್ನು ವಾಚಕರ ಮುಂದಿಡಲು ಯತ್ನಿಸುವೆನು. ಮಹಾಸಭೆಯಲ್ಲಿ ಆದ ಮೊದಲನೆಯ ಠರಾವು "ಪಂಚಾಯತರು ಅವ್ಯವಸ್ಥಿತವಾದ ಕೆಲವು ಕೃತ್ಯಗಳನ್ನು ನಡಿಸುತ್ತಾರೆ. ಪಂಚಾಯತರ ಸಭೆಗಳನ್ನು ಏಕಾಂತದಲ್ಲಿ ನಡಿಸಬಹುದೊ ಎಂಬುದಕ್ಕೆ ಬಹುಮಾನಪಟ್ಟ ಕೋಓಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರವರ ಅನುಮತಿಯನ್ನು ಪಡೆದು ಆ ಪ್ರಕಾರ ಏಕಾಂತದಲ್ಲಿ ನಡಿಸುವುದು ಮಹಾಸಭೆಯ ನಿರ್ಣಯಕ್ಕೆ ಒಳಗಾಗದ ಕಾರಣ ಸಿಂಧುವಾಗಲಾರದು. ಹಾಗೆ ಏಕಾಂತದಲ್ಲಿ ಸಭೆಯನ್ನು ನಡಿಸುವುದು ಪರಸ್ಪರ ಸಹಾಯ ಸಂಘದ ಪತ್ರಗಳಲ್ಲಿ (Bulletin) ಸೂಚಿಸಿದ ಟಿಪ್ಪಣಿಗಳಿಗೆ ವಿರೋಧವಾಗುತ್ತದೆ ಎಂದು ಮಾ। ರಾ। ನಯಂಪಳ್ಳಿ ಆನಂದರಾಯರ ಭಾಷಣದಿಂದ ಅಭಿಪ್ರಾಯವಾಗುತ್ತದೆ. ಅವರು ಓದಿ ಹೇಳಿದ ಟಿಪ್ಪಣಿಯಲ್ಲಿ ಪಂಚಾಯತರು ಬಹಿರಂಗವಾದ ರೀತಿಯಲ್ಲಿ ಸಭೆಗಳನ್ನು ನಡಿಸಬೇಕು ಎಂತ ಸೂಚನೆಯಿರುವುದೇನೊ ನಿಜ. ಆದರೆ ಸ್ವಾಭಾವಿಕವಾಗಿ ಲೋಕವಾಡಿಕೆಯಲ್ಲಿ ವಿಚಾರ ಮಾಡುವುದಾದರೆ ಸಾಲ ಪಡಕೊಳ್ಳಲು ಬಂದವನಿಗೆ ಇತರರ ಎದುರಿನಲ್ಲಿ "ನಿಮಗೆ ಸಾಲ ಏತಕ್ಕೆ ಬೇಕಾಗಿದೆ" "ನೀವು ಕೇಳುವ ಹಣಕ್ಕಿಂತ ಕಡಿಮೆ ಮೊಬಲಗು ಸಾಕಾಗದೋ" "ನೀವು ಕೊಡುವ ಜಾಮೀನು ಸಲ್ಲದು" ಮುಂತಾದ ಪ್ರಶ್ನೆಗಳನ್ನು ಬಹಿರಂಗವಾಗಿ ಕೇಳತೊಡಗಿದರೆ ಸಂಘದ ಕೆಲಸಕ್ಕೆ ಹಾನಿ ಬರುವುದೆಂಬುದಕ್ಕೆ ಸಂದೇಹವಿಲ್ಲ. ಅನೇಕಾನೇಕ ಜನರು "ತಮ್ಮ ಮರ್ಯಾದೆ ಕಾಪಾಡಿಕೊಳ್ಳಬೇಕು" ಎಂಬುದರಿಂದಲೇ ಹೆಚ್ಚಿನ ಬಡ್ಡಿಯನ್ನು ತೆತ್ತು ಖಾಸಗಿ ಲೇವಾದೇವಿ ನಡೆಸುವ ಚೆಟ್ಟಿವಾರರಿಗೆ ಬಲಿ ಬೀಳುತ್ತಾರೆ. ಇಂತಹವರನ್ನು ನಿಜವಾಗಿಯೂ, ಸುರಕ್ಷಿತಪಡಿಸಬೇಕಾದರೆ ಅವರ ಮಾನ ಹಾನಿಯಾಗದಂತೆ ಪಂಚಾಯತರು ನೋಡಿಕೊಳ್ಳುವುದು ಅವರ ಕರ್ತವ್ಯ. ಇದಲ್ಲದೆ "ಇಂಥ ಅರ್ಜಿದಾರನಿಗೆ ಸಾಲಕೊಡಬಹುದು" "ಇಂಥವನು ನಂಬಿಕೆಗೆ ಯೋಗ್ಯನಲ್ಲ" ಎಂದು ಬಹಿರಂಗವಾಗಿ ತಮ್ಮ ಅಭಿಪ್ರಾಯವನ್ನು ಹೇಳಿ ನಿರಾಶೆಯಾದ ಮನುಷ್ಯನಿಂದ ಮನಸ್ವೈಷ್ಯಗಳನ್ನು ಕೇಳಿ ಯಾರು ತಾನೇ ಈ ಪಂಚಾಯತರ ಸಭೆಯ ಕೆಲಸವನ್ನು ನೋಡಿಕೊಳ್ಳುವರು? ಹೀಗೆ ಮಾಡುವುದರಿಂದ "ಏಕೀಕರಣಕ್ಕೆ ಹೋಗಿ ಬೇಕೀಕರಣ" ಬಂದಂತೆ ಜನರೊಳಗೆ, ಒಂದೇ ಊರಿನಲ್ಲಿದ್ದು ಆಗಾಗ ಒಬ್ಬರನ್ನೊಬ್ಬರು ಕಾಣಲಿಕ್ಕಿರುವವರೊಳಗೆ ವಿರೋಧ ಬರುವುದೇ ಹೊರತು ಸಹಕಾರಕ್ಕೆ ಬದಲಾಗಿ ವೈಮನಸ್ಸಿನ ಬೀಜ ಬಿತ್ತಿದಂತಾಗುವುದಿಲ್ಲವೇ? ಇಷ್ಟರ ಮಟ್ಟಿಗೆ ಜನರಲ್ಲಿ ಸಹಕಾರದ ಜ್ಞಾನವೂ ಏನೇನೂ ಆಗಿಲ್ಲ, ಈ ಸಹಕಾರ ಸಂಸ್ಥೆಗಳು ಲೇವಾದೇವಿಯ ಬೇಂಕುಗಳು ಎಂಬುದೇ ಹಲವರ ಅಭಿಪ್ರಾಯ. ಕೇಳಿದವರೆಲ್ಲರಿಗೂ ಸಾಲ ಕೊಡಬೇಕೆಂದು ನನ್ನ ಮತವಲ್ಲ. ಅರ್ಜಿಗಳನ್ನು ವಿಮರ್ಶಿಸಿ ತಿರಸ್ಕರಿಸುವುದೂ ಅಥವಾ ಅವರ ಕೋರಿಕೆಯನ್ನು ಪೂರೈಸುವುದೂ ಬಹುಮತದ ಅಭಿಪ್ರಾಯದ ಮೇಲೆ ಆಧರಿಸಿಕೊಂಡಿದ್ದರೂ, ಅರ್ಜಿದಾರನಿಗೆ ಅದು ಏಕಮತವಾಗಿ ಕೊಟ್ಟ ಅಭಿಪ್ರಾಯವೆಂದೇ ಭಾವನೆಯಾಗಬೇಕಲ್ಲದೆ ಪಂಚಾಯತರಲ್ಲಿ ಒಬ್ಬಿಬ್ಬರ ಸೂಚನೆಯಿಂದ ತನ್ನ ಅರ್ಜಿ ನಿರಾಶೆಯಾಯಿತು ಎಂದೂ ಅಂಥ ವಿರೋಧಭಾವವನ್ನು ತೋರ್ಪಡಿಸಿದವರು ಯಾರು ಎಂದೂ ಕೊಂಚಕಾಲದ ಮಟ್ಟಿಗಾದರೂ ಅರ್ಜಿದಾರನಿಗೆ ತಿಳಿಯುವುದು ಸರಿಯಲ್ಲ.

ಅದಲ್ಲದೆ ಈ ಸೂಚನೆಯನ್ನು ಮಹಾಸಭೆಯು ಮುಂದಿಡದೆ ಅದನ್ನು ಜಾರಿಗೆ ತಂದರು ಎಂದು ಪಂಚಾಯತರಿಗೆ ದೂರಿದ್ದು ಸರಿಯಲ್ಲ; ಪಂಚಾಯತರು ಹಣದ ವಹಿವಾಟಿಗೆ ಜವಾಬ್ದಾರರು. ಅವರು ಆ ವರ್ಷದಲ್ಲಿ ನಡಿಸಿದ ವಹಿವಾಟಿನ ಮೇಲೆ ಸಂಘದ ಯಶಸ್ಸೂ ಅಪಯಶಸ್ಸೂ ಹೊಂದಿದೆ. ಆಗ ಬಹಿರಂಗದಲ್ಲಿ ಸಭೆಗಳನ್ನು ಮಾಡಬೇಕು, ಆ ಒಂದು ವರ್ಷದಲ್ಲಿ ಅನೇಕಾನೇಕ ಅರ್ಜಿದಾರರೊಡನೆ ದ್ವೇಷ ಬೆಳಸಬೇಕು ಎಂದು ಹೇಳುವುದಾದರೆ ಸರಕಾರಿ ನೌಕರರಿಂದಲೇ ನಡಿಸಲ್ಪಡದ ಯಾವುದೊಂದು ಇಂತಹ ಸಂಸ್ಥೆಯ ಕೆಲಸವು ನಡೆಯಲಾರದು. ಹೀಗೆ ಏಕಾಂತ ಸಭೆ ಅಥವಾ ಗುಪ್ತ ಸಭೆಗಳನ್ನು ನಡೆಸಲಿಕ್ಕಾಗಲಿ ಅವರು ಮಹಾಸಭೆಯಿಂದ ಅಧಿಕಾರ ಹೊಂದಬೇಕಿತ್ತು ಎಂತ ಹೇಳುವುದು ಸರಿಯಲ್ಲ. ಗುಪ್ತ ಸಭೆಗಳು ಸಹಕಾರಕ್ಕೆ ತೀರಾ ವಿರೋಧವಾಗಿರುವುದಾದರೆ ಬಹುಮಾನಪಟ್ಟ ರಿಜಿಸ್ಟ್ರಾರವರು ಆ ಸೂಚನೆ ಅವರ ಬಳಿಗೆ ಬಂದಾಗಲೇ ಅದನ್ನು ಖಂಡಿಸುತ್ತಿರಲಿಲ್ಲವೆ?

ಸಹಕಾರ ಸಮಾಜಕ್ಕೆ ಸೇರಿ ಈ ಪಂಚಾಯತರ ಸಭೆಯಲ್ಲಿ ಕೈಹಾಕಲಿಕ್ಕೆ ಸಾಧ್ಯವಿಲ್ಲದಿರುವ ಯಾವನೊಬ್ಬ ಗ್ರಹಸ್ಥನು ಈ ಮಹಾ ಸಭೆಯಲ್ಲಿ ನಡೆದ ಚರ್ಚೆಗಳನ್ನು ಕೇಳಿದರೆ ನಿಜವಾದ ಕಾರಣಗಳನ್ನು ಮುಚ್ಚುಮರೆಮಾಡಿ, ಪಂಚಾಯತರ ಮೇಲಿರುವ ತಾತ್ಸಾರವನ್ನು ತೋರ್ಪಡಿಸಲಿಕ್ಕೆ ಈ ಠರಾವು ಒಂದು ಸಾಧನವೆಂದು ತಿಳಿಯುವನಲ್ಲದೆ ಮತ್ತೆ ಬೇರೆಯಿಲ್ಲ.

ಇದಲ್ಲದೆ ಇಂಥ ಚರ್ಚೆಗಳು ಬಂದಾಗ ಯಾರು ಧೀರತ್ವದಿಂದ ಬಹಿರಂಗವಾಗಿ ಪಂಚಾಯತರ ಕೃತ್ಯಗಳನ್ನು ಕುರಿತು ಮಹಾಸಭೆಯಲ್ಲಿ ವಕಾಲತು ನಡೆಸಬೇಕಿತ್ತೊ ಅಂಥಾ ಸೆಕ್ರೆಟರಿಗಳು ಸಭೆಯಲ್ಲಿರಲಿಲ್ಲ, ಅದಕ್ಕೆ ಬದಲಾಗಿ ನೆರೆಯಲ್ಲಿರುವ ಕ್ಲಬ್ಬಿನಲ್ಲಿ ಅವರು ಕಾಲವಿಹಾರವನ್ನು ಮಾಡುತ್ತಿದ್ದರೆಂದು ಜನರು ಹೇಳುತ್ತಾರೆ. ಇದು ನಿಜವಾಗಿದ್ದರೆ ಮಹಾಸಭೆಯಲ್ಲಿ ಗತವರ್ಷದ ವರದಿಯನ್ನು ಒಪ್ಪಿಸಿ ಆಗಿನ ನಿವಾರಣೆಯನ್ನು ಮಾಡಿಸುವುದು ಹೇಗೆ?

ಈ ಎಲ್ಲಾ ಕಾರಣಗಳಿಂದ ಪಂಚಾಯತರೊಳಗಿನ ವೈಮನಸ್ಯವೇ ಇದಕ್ಕೆಲ್ಲ ಕಾರಣವೆಂದು ಹೇಳಬೇಕು. ಯಾವನೊಬ್ಬನು ಹತ್ತು ಜನರಿಗೆ (ಮಹಾ ಜನಕ್ಕೆ) ಸಂಬಂಧಪಟ್ಟ ಒಂದು ಜವಾಬ್ದಾರಿಯನ್ನು ವಹಿಸಿದ ಮೇಲೆ ಅದನ್ನು ಅವರಿಗೆ ಒಪ್ಪಿಸಿಕೊಡುವ ವರೆಗಿನ ವಹಿವಾಟನ್ನು ಅವರಿಗೆ ವಿವರಿಸಿ ಹೇಳಲೇ ಬೇಕು. ಅದರ ವಿಷಯವಾಗಿ ಆಗುವ ಚರ್ಚೆಗಳಲ್ಲಿ ತನ್ನ ವರ್ತನೆಯನ್ನು ಕುರಿತು 'ವಕಾಲತು' ನಡಿಸಲೇಬೇಕಾಗುವುದು. ಒಬ್ಬಿಬ್ಬರು ತನಗೆ ತಾತ್ಸಾರ ಮಾಡಿದರೆಂದು ವ್ಯಥೆಪಟ್ಟು ಅದರ ವಹಿವಾಟಿನ ವರದಿಯನ್ನು ಸಭೆಗೆ ಒಪ್ಪಿಸಲಿಕ್ಕಾಗಲಿ ಅಂಥಾ ಸಭೆಗೆ ಹಾಜರಾಗಲಿಕ್ಕಾಗಲಿ ಹಿಂಜರಿದರೆ ನಿಷ್ಕಾರಣವಾದ ಸಂಶಯವು ಜನರಲ್ಲಿ ಉಂಟಾಗುವುದು. ಒಂದು ಸಲ ಆ ವಹಿವಾಟನ್ನು ಮಹಾಜನಕ್ಕೆ ಒಪ್ಪಿಸಿದ ಮೇಲೆ ಅದನ್ನು ಪುನಃ ವಹಿಸಿಕೊಳ್ಳುವುದಾಗಲಿ ಬಿಟ್ಟುಬಿಡುವುದಾಗಲಿ ಆಯಾಯ ಮನುಷ್ಯನ ಸ್ವೇಚ್ಛೆ. ಅದನ್ನು ಯಾರೂ ಆಕ್ಷೇಪಿಸಲಾರದು.

ಹೇಗೂ ಇರಲಿ, ಪತ್ರವು ಬೆಳೆಯಿತು; ಇನ್ನು ಒಂದೆರಡು ಸಂಗತಿಗಳಿವೆ. ಅವುಗಳನ್ನು ಇನ್ನೊಂದು ಪತ್ರದಲ್ಲಿ ಚರ್ಚಿಸುವೆನು. ಅಂತೂ ಮಹಾಜನರ ಕೆಲಸಗಳಲ್ಲಿ ಕೈಹಾಕುವವರು 'ಅಂಡೆಯ ಬಾಯಿ ಕಟ್ಟಬಹುದು, ದೊಂಡೆಯ ಬಾಯಿ ಕಟ್ಟಲಾಗದು' ಎಂಬ ಸೂತ್ರವನ್ನು ನೆನಪಿಟ್ಟುಕೊಳ್ಳಲಿ. ಮತ್ತು ಕುತ್ಸಿತರು ತೋರಿಸುವ ತಾತ್ಸಾರ ಬುದ್ಧಿಯನ್ನು ಹೃದಯಕ್ಕೆ ಅಂಟಿಸಿಕೊಂಡು ಸಂಕುಚಿತರಾಗದೆ ದೇವರ ಮೇಲೂ, ಮಹಾಜನರ ಶುಭದ ಮೇಲೂ ದೃಷ್ಟಿಯಿಟ್ಟು ತಮ್ಮ ಕರ್ತವ್ಯಗಳನ್ನು ನಿರ್ವಹಿಸಲೆಂದು ಬಡವನ ಪ್ರಾರ್ಥನೆ.

ಒಬ್ಬ ಸಹಕಾರಿ.

ಯುದ್ಧ ಸಮಾಚಾರ

ತಾ. ೧೬ನೇ ಆಗೋಸ್ತು.

ಐರಿಷ್ ಸಮುದ್ರದ ಕರಾವಳಿಯಲ್ಲಿರುವ ಸಾರ್ಟನ್ ಹೇರಿಂಗ್‌ಟನ್, ಮತ್ತು ವ್ಹಾೖಟ್ ಹೆವನ್ ಪಟ್ಟಣಗಳ ಮೇಲೆ ಜರ್ಮನರ ಸಬ್‌ಮೆರ್‍ಯಾನ್ ನಾವೆಯು ಗುಂಡುಗಳನ್ನು ಹಾರಿಸಿತೆಂದೂ, ಇದರಿಂದ ಹಾನಿಯು ವಿಶೇಷವಾಗಿ ಉಂಟಾದದ್ದಿಲ್ಲವೆಂತಲೂ ತಿಳಿದು ಬರುತ್ತದೆ. ಏಜಿಯನ್ ಸಮುದ್ರದಲ್ಲಿ ರೊಯಲ್ ಎಡ್ವರ್ಡ್" ಎಂಬ ಬ್ರಿಟಿಷರ ಹಡಗವನ್ನು ಶತ್ರುಗಳ ಸಬ್‌ಮೆರ್‍ಯಾನ್ ನಾವೆಯು ಮುಳುಗಿಸಿಬಿಟ್ಟಿತೆಂತ ನೌಕಾವಳಿಯವರ ಸಮಾಚಾರದಲ್ಲಿದೆ. ಈ ನಾವೆಯಲ್ಲಿ ೩೨ ಜನ ಆಫೀಸರರೂ, ೧೩೫೦ ಜನ ಸೇನಿಕರೂ ೨೨೦ ಜನ ಕಲಾಸಿಗಳೂ ಇದ್ದರೆಂತ ತಿಳಿದು ಬರುತ್ತದೆ. ಪೂರ್ಣ ವಿವರವು ಈ ತನಕ ಬಂದದ್ದಿಲ್ಲವಾದರೂ ೬೦೧ ಜನರನ್ನು [illegible]ಯಿಂದ ರಕ್ಷಿಸಿರುವರೆಂತ ಗೊತ್ತಾಗಿದೆ.

ಬ್ರಿಟಿಷರು ಡಾರ್ಡನೆಲ್ಸಿನಲ್ಲಿ ದಂಡನ್ನಿಳಿಸಿದ ಪರಾಕ್ರಮದ ವೃತ್ತಾಂತವನ್ನು ಕೊಡಿರುವ ವ್ಯಾಸ್ ಎಡ್ಮಿರಲ್ ಡಿರೊಬೆಕ್‌ರವರಿಂದ ಬರೆದು ಬಂದ ಸಮಾಚಾರವು ಪ್ರಕಟವಾಗಿರುವುದು. ಸೆಡಲ್ ಬಹಾರ್‌ನ್ನು ಮುತ್ತಿಗೆ ಹಾಕಿದ ಸೇನಾಪಾಳಯದ ಶೌರ್ಯವು ಬಹಳವಾಗಿ ಇದರಲ್ಲಿ ಪ್ರಶಂಸಿಸಲ್ಪಟ್ಟಿರುವುದು. ಈ ದಂಡಯಾತ್ರೆಯಲ್ಲಿ ಜೀವದಾಶೆಯನ್ನು ಪೂರ್ಣವಾಗಿ ಬಿಟ್ಟು ಬಿಟ್ಟು ಬೆಂಕಿಯನ್ನು ಕಾರುತ್ತಿರುವ ಶತ್ರುಗಳ ತೋಪುಗಳನ್ನು ಸಹ ಗಣನೆಗೆ ತಾರದೆ ಒಬ್ಬಂಟಿಗರಾಗಿಯೇ ಸೇನಾಪಾಳಯದಿಂದ ಹೊರಟು ಶತ್ರುಗಳನ್ನು ಮುರಿದು ಬಿಡಲು ಸಾಹಸಪಟ್ಟ ಐದು ಜನ ಸೇನಿಕರಿಗೆ ವಿಕ್ಟೋರಿಯಾ ಕ್ರಾಸಿನ ಬಹುಮಾನವು ಕೊಡೋಣಾಗಿರುವುದು.

ಪಶ್ಚಿಮ ರಣರಂಗದಲ್ಲಿ ಮಿತ್ರರ ಸಂಯುಕ್ತ ಸೇನೆಗಳು ಶತ್ರುಗಳ ಸೇನೆಗಳಿಗಿಂತ ತೋಪುಸೇನೆಯಲ್ಲಿ ಬಲಹೊಂದಿವೆ ಎಂತ ಕೇಳುತ್ತೇವೆ. ಮಿತ್ರರ ತೋಪುಗಳಿಂದ ಹಾರಿಸೋಣಾಗುವ ಗುಂಡುಗಳು ಈಗ ಶತ್ರುಗಳ ಗುಂಡುಗಳಿಗಿಂತ ಅಧಿಕವಾದ ಹಾನಿಯನ್ನುಂಟುಮಾಡುವವು.

ಅಲೆಕ್ಸಾಂಡ್ರಾ ಮಹಾರಾಣಿಯವರು ಭಾರತೀಯ ಸೇನಿಕರ ಮೇಲಣ ಪ್ರೀತಿಯಿಂದ ಪಾರ್ಲಿಮೆಂಟ ಸಭೆಯ ಸಮ್ಬಂಧ ಎಡ್ವರ್ಡ್ ಚಕ್ರವರ್ತಿಗಳಿಂದಾದ ಕಡೇ ಸರ್ತಿ ಸಭೆಯ ಸಂಸ್ಕಾರದ ಚಿತ್ರವುಳ್ಳ ಕಾರ್ಡುಗಳ ೨೫ ಪೆಟ್ಟಿಗೆಗಳನ್ನು ಭಾರತೀಯ ಸೇನಿಕರಿಗೆ ಕಳುಹಿಸಿ ಕೊಟ್ಟಿರುವರು.

ಅಮೇರಿಕದ ಸಂಯುಕ್ತ ಸಂಸ್ಥಾನದಲ್ಲಿ ಜರ್ಮನರು ನಡಿಸುತ್ತಿದ್ದ ಒಳಸಂಚು ಹೊರಬಿದ್ದಿರುತ್ತದು. "ನ್ಯೂಯೋರ್ಕ್‌ವರ್ಲ್ಡ್" ಎಂಬ ಅಮೇರಿಕದ ವರ್ತಮಾನ ಪತ್ರವು ಈ ಒಳಸಂಚಿನ ಪೂರ್ಣವಿವರವನ್ನು ಪ್ರಕಟಿಸಿರುತ್ತದೆ. ಅಮೇರಿಕದಲ್ಲಿ ಕೂಲಿಗಾರರ ದಂಗೆಗಳನ್ನೆಬ್ಬಿಸುವುದು, ವರ್ತಮಾನ ಪತ್ರಗಳಿಗೆ ಲಂಚಕೊಟ್ಟು ಇವುಗಳ ಮೂಲಕ ಈ ಒಳಸಂಚಿಗೆ ಬೇಕಾದ ಸಾಧನಗಳನ್ನು ನಡೆಸುವುದು, ಗ್ರಂಥಕಾರರಿಗೂ ಉಪನ್ಯಾಸಕರಿಗೂ ಇದೇ ರೀತಿ ಲಂಚಗಳನ್ನು ಕೊಡುವುದು, ಮತ್ತು ದೇಶದಲ್ಲಿ ಅನಾಯಕತ್ವವನ್ನುಂಟುಮಾಡಿ ಅಮೇರಿಕದ ಸರಕಾರದವರು ಒಳಸಂಚಿನಲ್ಲಿಯೇ ಜರ್ಮನರಿಗೆ ಸಹಾಯಮಾಡುವಂತೆ ಪ್ರಯತ್ನಿಸುವುದು, ಈ ಸಾಧನೆಗಳಿಗೆಲ್ಲಾ ಜರ್ಮನ ಸರಕಾರದವರು ಪ್ರತಿವಾರದಲ್ಲಿ ಅನೇಕ ಮಿಲಿಯ ಡೊಲ್ಲರುಗಳನ್ನು ವ್ಯಯಮಾಡುತ್ತಿದ್ದಾರೆಂತ ಆ ಪತ್ರದಲ್ಲಿದೆ. ಅಮೇರಿಕದವರು ಮಿತ್ರರಿಗೆ ಯುದ್ಧಸಾಹಿತ್ಯಗಳನ್ನು ಕ್ರಯಕ್ಕೆ ಕೊಡಕೂಡದೆಂತ ವಾದ ಎತ್ತಿದ್ದು ಜರ್ಮನಿಯು ಅಮೇರಿಕದಲ್ಲಿ ಯುದ್ಧ ಸಾಮಾಗ್ರಿಗಳನ್ನು ತಯಾರಿಸುವ ಕಾರ್ಖಾನೆಯನ್ನು ಗುಪ್ತವಾಗಿ ಸ್ಥಾಪಿಸಿಕೊಂಡು ಮಿತ್ರರಿಗೆ ಆ ಕಾರ್ಖಾನೆಯಿಂದ ಬೇಕಾದ ಸಂಗ್ರಹವನ್ನು ಕೊಡೋಣಾಗುವದೆಂಬ ಕಪಟವರ್ತನೆಯಿಂದ ಮಿತ್ರರನ್ನು ಮೋಸಗೊಳಿಸಿ ಜರ್ಮನರಿಗೆ ಮದ್ದುಗುಂಡುಗಳನ್ನು ಒದಗಿಸಿಕೊಡುವ ಉಪಾಯಗಳನ್ನು ಮಾಡುತ್ತಿರುವುದೆಂತ ಆ ನ್ಯೂಯೋರ್ಕ ಪತ್ರದಲ್ಲಿ ಪ್ರಕಟಿಸಲ್ಪಟ್ಟಿರುವದು.

ಪೂರ್ವರಣರಂಗದಲ್ಲಿ ಕೊವ್ನೊ ಪಟ್ಟಣಕ್ಕೆ ದಾಳಿ ಇಡುವ ಜರ್ಮನರ ಕಾದಾಟವು ಬಹಳವಾಗಿ ನಡೆಯುತ್ತಿರುವದು. ನೆರ‍್ವ ಮತ್ತು ಬಗ್ ನದಿಗಳ ನಡುವೆ ನಡೆಯುತ್ತಿದ್ದ ಕಾಳಗಗಳಲ್ಲಿ ಜರ್ಮನರನ್ನು ರುಶ್ಯಯವರು ಹಿಮ್ಮೆಟ್ಟಿರುವರು.

ತಮ್ಮ ಆಯುಧದಿಂದ ತಾವೇ ಮಡಿದ ಜರ್ಮನರ ಒಂದು ವೃತ್ತಾಂತವಿರುವುದು. ಒಸ್ಸೊವೀಜ್ ಎಂಬಲ್ಲಿಯ ಕೋಟೆಗಳನ್ನು ಮುತ್ತಲು ೩೦೦೦ ಸೇನಿಕರ ಜರ್ಮನ್ನ ದಳವು ಹೊರಟಿತು. ಇವರು ತೆರಳುವ ಮೊದಲು ಜರ್ಮನರು ಉಸಿರು ಕಟ್ಟುವ ವಿಷಮಯ ವಾಯುವಿನ ಅಸ್ತ್ರವನ್ನು ರುಶ್ಯಯನರ ಮೇಲೆ ಬಿಟ್ಟಿದ್ದರು. ಆದರೆ ಈ ದಿನ ಗಾಳಿಯು ಪ್ರತಿಕೂಲವಾಗಿದ್ದದ್ದರಿಂದ ವಿಷಮಯ ವಾಯುವು ಈ ೩೦೦೦ ಜರ್ಮನ ಸೇನಿಕರ ಇದಿರಾಗಿ ಬಂತು. ಸೇನೆಯು ಹೀಗೆ ತಾವೇ ಸಿಲುಕಿಬಿದ್ದದ್ದನ್ನು ಕಂಡು ಗಲಿಬಿಲಿ ಹೊಂದಿತು. ರುಶ್ಯಯನರು ತೋಟೆಗಳಿಂದ ಇವರ ಮೇಲೆ ಗುಂಡುಗಳನ್ನು ಹಾರಿಸುತಿದ್ದುದರಿಂದ ಈ ಗುಂಡುಗಳಿಗೂ ವಿಷಮಯ ವಾಯುವಿಗೂ ೩೦೦೦ ಜರ್ಮನ್ ಸೇನಿಕರು ತುತ್ತಾಗಿಹೋದರೆಂಬುದಾಗಿ ತಿಳಿದು ಬರುತ್ತದೆ.

ಕೈಸರರು ವಾರ್ಸೊಪಟ್ಟಣ ಪ್ರವೇಶವನ್ನು ಈ ತನಕ ಮಾಡಲಿಲ್ಲ. ಪೋಲೆಂಡಿನಲ್ಲಿ ಯಾರನ್ನು ಅರಸನನ್ನಾಗಿ ಮಾಡಬೇಕೆಂಬ ವಾದವು ಒಸ್ಟ್ರಿಯಾ ಜರ್ಮನಿಯೊಳಗೆ ಉಂಟಾಗಿದೆಂದು ತಿಳಿಯುತ್ತೇವೆ.

ಕಾರ್ಸೊ ಪ್ರದೇಶವನ್ನು ಪೂರ್ಣವಾಗಿ ಸ್ವಾಧೀನಪಡಿಸಿಕೊಂಡು ಗೊರಿಜಿಯಾ ಕೋಟೆಯನ್ನು ನಾಶಮಾಡಿ ಒಸ್ಟ್ರಿಯದ ಟ್ರೀಸ್ಟ್ ಪಟ್ಟಣವನ್ನು ಪ್ರವೇಶಿಸಲು ಬೇಕಾದ ತಯಾರಿಯನ್ನು ಇಟಲಿಯು ಮಾಡಿರುವುದೆಂತ ಲಂಡನಿಗೆ ತಂತೀ ಬಂದಿರುವದು.

ತಾ ೧೭-೧೮ನೇ ಆಗೋಸ್ತು.

ಜರ್ಮನರು ಅಮೇರಿಕದಲ್ಲಿ ನಡೆಸಿದ ಒಳ ಸಂಚಿನ ವೃತ್ತಾಂತಗಳು ಈ ದಿನಗಳ ವೃತ್ತಪತ್ರಿಕೆಗಳಲ್ಲಿ ಸಹ ವಿಸ್ತಾರವಾಗಿ ಪ್ರಕಟವಾಗುತ್ತಿರುವವು. ಅಮೇರಿಕದ ವಾಯುವಿಮಾನಗಳ ಒಂದೆರಡು ಕಾರ್ಖಾನೆಗಳನ್ನು ಸಹ ಕ್ರಯಕ್ಕೆ ಪಡಕೊಳ್ಳುವ ಏರ್ಪಾಡನ್ನು ಜರ್ಮನರು ಮಾಡಿದ್ದರೆಂತ ಈ ವೃತ್ತಾಂತದಿಂದ ತೋರಿಬರುತ್ತದೆ. ಪಶ್ಚಿಮ ರಣರಂಗದಲ್ಲಿ ಫ್ರೆಂಚ ಸೇನೆಯು ಜರ್ಮನರನ್ನು ಸೋಲಿಸಿದ ಚಿಕ್ಕ ವೃತ್ತಾಂತಗಳಿರುವವು. 'ಟ್ರ್ಯಾಫರ್ಡ್' ಎಂಬ ವಿಷಮಜ್ವರವು ಜರ್ಮನ ಸೇನಿಕರಲ್ಲಿ ತಲೆದೋರಿರುವುದರಿಂದ ಜರ್ಮನರು ಮುನ್‌ಸ್ಟರ್ ಬೈಲನ್ನು ಬಿಟ್ಟು ತೆರಳುತ್ತಿರುವರೆಂತ ತಿಳಿಯುತ್ತೇವೆ.

ಪೂರ್ವರಣರಂಗದಲ್ಲಿ ರುಶ್ಯಯನರು ತಾವು ಬಿಟ್ಟು ಹೋಗುವ ಪಟ್ಟಣಗಳಲ್ಲಿ ಯಾವ ಸಾಮಾಗ್ರಿಯಾದರೂ ಶತ್ರುಗಳಿಗೆ ಸಿಕ್ಕದಂತೆ ಅವನ್ನು ಮೊದಲೇ ಬೇರೆ ಕಡೆಗೆ ಒಯ್ಯುತ್ತಿದ್ದಾರೆ. ಕೊವ್ನೊದಲ್ಲಿ ಕಾಳಗಗಳು ಬಹಳ ಭೀಕರವಾಗಿ ನಡೆದವು. ಕಳದ ಸೋಮವಾರ ಕೊವ್ನೊ ಕೋಟೆಗಳಲ್ಲಿ ಹಾಳಾಗಿಹೋದ ಒಂದು ಕೋಟೆಯನ್ನು ಜರ್ಮನರು ಹಿಡಿದಿರುವರು. ಆದರೆ ಇಲ್ಲಿ ಕಾಳಗಗಳು ಇನ್ನೂ ಮುಗಿದಿರವು.

ಇಟೆಲಿಯನರು ಇಸೊಂಜೋ ನದಿಯ ಬಲದಡದಲ್ಲಿ ಶತ್ರುಗಳ ಸುರಂಗಗಳನ್ನು ಸೆರೆಹಿಡಿದು ಅದರಲ್ಲಿರುವ ೫೩೪ ಜನ ಸೇನಿಕರನ್ನು ಸೆರೆಹಿಡಿದಿರುತ್ತಾರೆ.

ಜರ್ಮನ್ ಆಫೀಸರರ ಅಹಂಕಾರವನ್ನು ಗಣನೆಗೆ ತಾರದ ೪೫ ಜನ ತುರ್ಕರ ಆಫೀಸರರನ್ನು ಗೆಲ್ಲಿಪೊಲಿಯಿಂದ ಕೊನ್ಸಟೆಂಟಿನೋಪಲಿಗೆ ಕಳುಹಿಸಿಬಿಟ್ಟಿರುತ್ತಾರೆ. ಜರ್ಮನರು ತುರ್ಕಿಯಲ್ಲಿ ಸೇನಾಧಿಕಾರಿಗಳಲ್ಲದೆ ಇತರ ಅಧಿಕಾರಗಳನ್ನು ಸಹ ಜರ್ಮನಿಯಿಂದ ತರಿಸುವುದರಿಂದ ತುರ್ಕರಲ್ಲಿ ಅಸಮಾಧಾನವು ಹೆಚ್ಚುತ್ತಬಂದಿರುವುದೆಂತ ಎಥೆನ್ಸ್ ಪಟ್ಟಣದ ವಾರ್ತೆಗಳಿಂದ ತಿಳಿದುಬರುತ್ತದೆ. ಇತ್ತಲಾಗಾದ ಶಸ್ತ್ರಚಿಕಿತ್ಸೆಯನಂತರ ಸುಲ್ತಾನರ ಆರೋಗ್ಯವು ಸರಿಯಾಗಿರದು.

ಒಸ್ಟ್ರಿಯನರ ಕೆಲವು ಯುದ್ಧನಾವೆಗಳು ಎಡ್ರಿಯಟಿಕ್ ಸಮುದ್ರದಲ್ಲಿರುವ ಇಟೆಲಿಯನರ ಪೆಲಾಗೊಸಾ ಎಂಬ ದ್ವೀಪಕ್ಕೆ ಮುತ್ತಿಗೆ ಹಾಕಿದರು. ಆದರೆ ಆ ದ್ವೀಪದಲ್ಲಿದ್ದ ಸೇನಿಕರು ಇವರನ್ನು ಸರಿಯಾಗಿ ಎದುರಾಡಿದ್ದರಿಂದ ದ್ವೀಪದಲ್ಲಿ ಒಸ್ಟ್ರಿಯನರಿಗೆ ಇಳಿಯಲಿಕ್ಕಾಗಲಿಲ್ಲ. ಈ ಕಾದಾಟದಲ್ಲಿ ಏಳು ಜನ ಇಟೆಲಿಯನರು ಮಾತ್ರ ಗಾಯ ಪಡೆದಿರುತ್ತಾರೆ.

ಸ್ಪೇನ್, ನೊರ್ವೆ ಮೊದಲಾದ ದೇಶಗಳ ಸಾಮಾಗ್ರಿಗಳನ್ನು ತುಂಬಿದ ಹಡಗಗಳನ್ನು ಜರ್ಮನ ಸಬ್ ಮೆರ್‍ಯಾನ್ ನಾವೆಗಳು ಮುಳುಗಿಸಿಬಿಟ್ಟಿರುವವು.

ಯುದ್ಧದಿಂದ ಪ್ರಾಪ್ತವಾದ ನಷ್ಟದಿಂದ [illegible] ಕಾರ್ಖಾನೆಗಳ ಮಾಲೀಕರಿಗೆ [illegible]ವನ್ನು ಸಾಲವಾಗಿ ಕೊಟ್ಟು [illegible].

ಕೌರ್ಲೆಂಡ್ ಪ್ರಾಂತ್ಯಗಳಲ್ಲಿ ರುಶ್ಯಯನರು ವಾನ್ ಪಟ್ಟಣವನ್ನು ಪುನಹ ಶತ್ರುಗಳಿಂದ ಪಡೆದಿರುವರು.

ತಾ. ೧೯ನೇ ಆಗೋಸ್ತು.

ಬೊಲ್ಟಿಕ್ ಸಮುದ್ರದ ರಿಗಾಕೊಲ್ಲಿಯ ದ್ವಾರವನ್ನು ಕಾಯುತ್ತಲಿದ್ದ ರುಶ್ಯಯನರ ಯುದ್ಧನಾವೆಗಳು ಶತ್ರುಗಳ ನಾವೆಗಳ ಸಂಖ್ಯೆಯು ತಮ್ಮ ಸಂಖ್ಯೆಗಿಂತ ಅಧಿಕವಾಗಿದ್ದದ್ದನ್ನು ನೋಡಿ ಹಿಂದಕ್ಕೆ ಸರಿದವು. ಬೊಲ್ಟಿಕ್ ಸಮುದ್ರವನ್ನು ಸೇರಲು ಹೊರಟಿದ್ದ ಬ್ರಿಟಿಷ ಜಲಾಂತರ್ಗಾಮಿ ಹಡಗವು ಡೇನರ ಒಂದು ದ್ವೀಪದ ಹತ್ತಿರ ಕರೆಗೆ ಬಡೆಯಿತು. ಲಂಡನಿನಿಂದ ನೋರ್ವೆಗೆ ಬರುತ್ತಿದ್ದ ಟಪ್ಪಾಲು ಚೀಲಗಳನ್ನು ಜರ್ಮನರ ಸಬ್‌ಮೆರ್‍ಯಾನ್ ಹಡಗವು ಹಿಡಕೊಂಡದ್ದರಿಂದ ನೊರ್ವೆಯ ಜನರಿಗೆಲ್ಲಾ ಬಹಳ ಮನಸ್ತಾಪಕ್ಕೆ ಕಾರಣವಾಗಿದೆ. ಬ್ರಿಟಿಷರ ವ್ಯಾಪಾರದ ೩ ಯಾ ೪ ಹಡಗಗಳನ್ನು ಜರ್ಮನರ ಸಬ್‌ಮೆರ್‍ಯಾನ್ ನಾವೆಯು ನಾಶಪಡಿಸಿರುವುದು. ೧೫ ಸಾವಿರ ಟನ್ನುಗಳ ಭರಾವಣೆಯ ಅರಬಿಕ್ ಎಂಬ ದೊಡ್ಡ ಹಡಗವನ್ನು ಸಹ ನಾಶಪಡಿಸಿರುವುದು. ಈ ಹಡಗದಲ್ಲಿರುವ ೭ ಯಾ ೮ ಜನ ಪ್ರಯಾಣಿಕರಲ್ಲದೆ ಮಿಕ್ಕೆಲ್ಲವರನ್ನು ರಕ್ಷಿಸಲು ಸಾಧ್ಯವಾಯಿತು.

ಪಶ್ಚಿಮ ರಣರಂಗದಲ್ಲಿ ಆರ್ಟೊಯಿ ಎಂಬಲ್ಲಿ ನಡದ ಸಮರದಲ್ಲಿ ಫ್ರೆಂಚರು ಗೆದ್ದಿರುವರು. ಕಿಚ್ನರ್ ಪ್ರಭುಗಳವರು ಫ್ರೆಂಚರ ಸೇನೆಯನ್ನೂ, ಬ್ರಿಟಿಷರ ಸುರಂಗಗಳನ್ನೂ ಬಂದು ನೋಡಿ ಹೋಗಿರುತ್ತಾರೆ.

ಪೂರ್ವ ರಣರಂಗದಲ್ಲಿ ೧೧ ದಿವಸಗಳ ಯುದ್ಧವನ್ನು ನಡೆಸಿ ಅಸಂಖ್ಯಾತ ಸೇನಿಕರನ್ನು ಬಲಿಕೊಟ್ಟ ನಂತರ ಜರ್ಮನರಿಗೆ ನಿಮೆನ್ ನದಿಯ ಎಡಭಾಗದಲ್ಲಿರುವ ಕೋಟೆಗಳನ್ನು ಸ್ವಾಧೀನ ಮಾಡಿಕೊಳ್ಳಲು ಸಾಧ್ಯವಾಯಿತು. ನಿಮೆನ್ ನದಿಯ ಬಲದಡದಲ್ಲಿ ಕೊವ್ನೊ ಪಟ್ಟಣದ ಕೋಟೆಗಳು ರುಶ್ಯಯನರ ವಶದಲ್ಲಿವೆ. ನಾರ‍್ವ ಮತ್ತು ವಿಸ್ತುಲಾ ನದಿಗಳ ಮಧ್ಯ ಇರುವ ಕೋಟೆಗಳ ಉತ್ತರಭಾಗಗಳ ಮೇಲೆ ದಾಳಿ ಇಡುವ ಪ್ರಯತ್ನಗಳನ್ನು ಜರ್ಮನರು ಪ್ರಕೃತ ನಡಿಸುತ್ತಿರುವರು.

ಗೆಲಿಪೊಲಿದಲ್ಲಿ ನಡದ ಯುದ್ಧದಲ್ಲಿ ತುರ್ಕರಿಗೆ ೨೭೦೦೦ ಸೇನಿಕರ ನಷ್ಟವು ಉಂಟಾಗಿದೆಂಬದಾಗಿ ತಿಳಿದುಬರುತ್ತದೆ. ರುಮೆನಿಯಾ ಮತ್ತು ಬಲ್ಗೇರಿಯಾ ದೇಶಗಳು ತುರ್ಕಿಗೆ ಯುದ್ಧಸಾಮಾಗ್ರಿಗಳನ್ನು ಒಯ್ಯುವ ಹಾದಿಯನ್ನು ಅಡಕಾಯಿಸಿದ್ದರಿಂದ ತುರ್ಕಿಗೆ ಹೆಚ್ಚಿನ ಯೋಚನೆಗೆ ಕಾರಣವಾಗಿದೆ.

ತಾ ೨೦ನೇ ಆಗೋಸ್ತು.

'ಬ್ಲೆಕ್ ಸಿ'ಯಲ್ಲಿ ರುಶ್ಯಯನರ ಜಲಾಂತರ್ಗಾಮಿ ನಾವೆಯು ೮೦೦೦ ಟನ್ನು ಕಲ್ಲಿದ್ದಲು ತುಂಬಿರುವ ತುರ್ಕರ ಒಂದು ನಾವೆಯನ್ನು ನಾಶಪಡಿಸಿರುವುದು. ಬೊಲ್ಟಿಕ್ ಸಮುದ್ರದಲ್ಲಿ ಬ್ರಿಟಿಷರ ಸಬ್ ಮೆರ್‍ಯಾನ್ ಹಡಗವು ಜರ್ಮನರ ಒಂದು ಯುದ್ಧನಾವೆಯನ್ನು ನಾಶಮಾಡಿತು.

ಬೊಲ್ಟಿಕ್ ಸಮುದ್ರದಲ್ಲಿ ರೀಗಾಕೊಲ್ಲಿಯನ್ನು ಜರ್ಮನ್ ಯುದ್ಧನಾವೆಗಳು ಪ್ರವೇಶಿಸಿರುವದಾಗಿ ಪೆಟ್ರೋಗ್ರೇಡ ಯುದ್ಧ ಸಮಾಚಾರದಲ್ಲಿ ಪ್ರಕಟವಾಗಿದೆ. ಈ ಕೊಲ್ಲಿಯಲ್ಲಿ ನೌಕಾಪಡೆಗಳ ಯುದ್ಧವು ನಡೆಯುತ್ತಿರುವುದು. ಜರ್ಮನ್ ನೌಕಾ ಪಡೆಯು ವಿಶೇಷ ನಷ್ಟವನ್ನು ಪಡೆದಿರುವುದೆಂಬ ವಾರ್ತೆಯಿರುವುದು.

ಅರೆಬಿಕ್ ನಾವೆಯನ್ನು ಜರ್ಮನರು ಮುಳುಗಿಸಿದ್ದರಿಂದ ಅಮೇರಿಕದವರಿಗೆ ಪುನಹ ಮನನೊಂದಲು ಕಾರಣವಾಗಿರುವುದು. ಅಮೇರಿಕದ ಪ್ರೆಸಿಡೆಂಟರವರು ಆ ಹಡಗದಿಂದ ರಕ್ಷಿಸಲ್ಪಟ್ಟ ಅಮೇರಿಕದ ಪ್ರಯಾಣಿಕರಿಂದ ಪ್ರಮಾಣ ಮುಚ್ಚಳಿಕೆಗಳನ್ನು ತಕೊಳ್ಳಲು ಆಜ್ಞಾಪಿಸಿರುವರು. ಅರೆಬಿಕ್ ಹಡಗವನ್ನು ಮುಳುಗಿಸಿದಕ್ಕೆ ಉದಾಹರಣೆಯನ್ನು ಜರ್ಮನರಿಂದ ಅಮೇರಿಕದವರು ಕೇಳಿರುವರು.

ಬ್ರಿಟಿಷ ನೌಕಾ ಇಲಾಖೆಯವರ ವೃತ್ತಾಂತದ ಪ್ರಕಾರ ಆ ತಿಂಗಳ ತಾ. ೨೦ಕ್ಕೆ ಅಂತ್ಯವಾಗುವ ವಾರದಲ್ಲಿ ಸಮುದ್ರಕ್ಕೆ ತೆರಳಿ ಹೋದ ೧೪೮೦ ಹಡಗಗಳಲ್ಲಿ ಬ್ರಿಟಿಷರ ೧೩ ಹಡಗಗಳು ಹಾನಿ ಹೊಂದಿವೆ ಎಂತ ತೋರಿಬರುವುದು.

ಇಟಲಿಯು ತುರ್ಕಿಯ ಮೇಲೆ ಯುದ್ಧವನ್ನು ಸಾರಿರುವುದು.

ತಾ. ೨೧ನೇ ಆಗೋಸ್ತು.

ರಿಗಾ ಕೊಲ್ಲಿಯಲ್ಲಿ ರುಶ್ಯಯನರಿಗೂ ಜರ್ಮನರಿಗೂ ನಡದ ಸಮುದ್ರ ಯುದ್ಧದಲ್ಲಿ ಜರ್ಮನರು ಪೂರ್ಣವಾಗಿ ಸೋಲಿಸಲ್ಪಟ್ಟದ್ದರಿಂದ ಜರ್ಮನರ ನೌಕಾಪಡೆಯು ರೀಗಾಕೊಲ್ಲಿಯನ್ನು ಬಿಟ್ಟು

ಹೋಗಿರುವುದು. ಜರ್ಮನರ ಸುಪರ್‌ಡ್ರೆಡ್‌ನೆಟ್ ಎಂಬ ದೊಡ್ಡ ಯುದ್ಧನಾವೆಯೂ ಮೂರು ಇತರ ಯುದ್ಧನಾವೆಗಳೂ ೭ ಟೊರ್ಪೆಡೊ ಬೋಟುಗಳೂ ಮುಳುಗಿಹೋಗಿರುವವು. ಪೆರ್ನೊ ಎಂಬಲ್ಲಿ ನಾಲ್ಕು ದೊಡ್ಡ ಹಡಗಗಳಿಂದ ಜರ್ಮನರು ತಮ್ಮ ಸೇನೆಯನ್ನಿಳಿಸಲು ಬಹಳ ಸಾಹಸ ನಡಿಸಿದರು ಆದರೆ ರುಶ್ಯಯನರ ಸೇನಿಕರು ಶತ್ರುಗಳನ್ನು ನಾಶ್ಪಪಡಿಸಿ ಈ ಹಡಗಗಳನ್ನು ಸೆರೆ ಹಿಡಿದಿರುತ್ತಾರೆ ಈ ಯುದ್ಧದಲ್ಲಿ ಬ್ರಿಟಿಸ ಜಲಂತರ್ಗಾಮಿ ನಾವೆಯು ಬಂದು ಜರ್ಮನರ ಒಂದು ದೊಡ್ಡ ಯುದ್ಧನಾವೆಯನ್ನು ಬೊಲ್ಟಿಕ್ ಸಮುದ್ರದಲ್ಲಿ ನಾಶಮಾಡಿ ಬಹಳ ಸಹಾಯ ವನ್ನು ರುಶ್ಯಯನರಿಗೆ ಮಾಡಿತು

ಫ್ರೆಂಚರ ಎರಡು ಡಿಸ್ಟ್ರೋಯರ್ ನಾವೆಗಳು ಒಂದು ಜರ್ಮನ್ ಡಿಸ್ಟ್ರೊಯರ ನಾವೆಯನ್ನು ಮುಳುಗಿಸಿದವು

ಚಕ್ರವರ್ತಿಗಳವರು ಬ್ರೈಟನ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುವ ಭಾರತೀಯ ಸೇನಿಕರನ್ನು ಬಂದು ಸಂದರ್ಶಿಸಿದರು

ಉತ್ತರ ಹಿಂದೂಸ್ಥಾನ.

ಯುದ್ಧದ ಆರಂಭದಲ್ಲಿ ಸರಕಾರದವರು ಸ್ಟೀಮರು ಕಂಪೆನಿಗಳ ಅನೇಕ ಹಡಗಗಳನ್ನು ತಮ್ಮ ಉಪಯೋಗದ ಬಗ್ಗೆ ವಹಿಸಿಕೊಂಡಿದ್ದರು. ಇಂಥವುಗಳಲ್ಲಿ ಕೆಲವನ್ನು ಸರಕಾರದವರು ಸಂಬಂಧಿಸಿದ ಕಂಪೆನಿಯವರಿಗೇನೇ ಬಿಟ್ಟುಕೊಡ ವರಾಗಿ ತಿಳಿದುಬರುತ್ತದೆ ಹೀಗೆ ಇವುಗಳನ್ನು ಬಿಟ್ಟುಕೊಟ್ಟನಂತರ ವಿಲಾಯತಿಯಿಂದ ರಫ್ತಾಗುತ್ತಿದ್ದ ಸಾಮಾನುಗಳನ್ನು ವಯ್ಯಲಿಕ್ಕೆ ಹಡಗುಗಳು ಸಿಕ್ಕಿ ಸ್ಟೀಮರುಗಳ ವಯ್ಯೋಣದ ಫೀಸಿನ ದರವು ಕಡಮೆಯಾಗಬಹುದ

ಯುದ್ಧ ಪ್ರಾರಂಭಕಾಲದಲ್ಲಿ ಟಪ್ಪಾಲು ಆಫೀಸುಗಳಲ್ಲಿಟ್ಟ ಹಣ ಠೇವಣಾತಿಗಳನ್ನು ಜನರು ಹಿಂತೆಗೆದರೂ ಈ ವರುಷ ಪ್ರಾರಂಭದಿಂದ ಜನರಲ್ಲಿದ್ದ ತಪ್ಪುಗ್ರಹಿಕೆಯು ಹೋಗಿ ಎಂದಿನಂತೆಯೇ ಟಪ್ಪಾಲು ಆಫೀಸುಗಳಲ್ಲಿ ಠೇವಣಾತಿಗಳನ್ನಿಡುವರು. ಪ್ರತಿ ತಿಂಗಳಲ್ಲಿಯೂ ಈಗ ೧೦ ಲಕ್ಷ ರೂಪಾಯಿಗಳ ಠೇವಣಾತಿಯು ಬರುತ್ತದೆ

ದರ್ಭಂಗ ಮಹಾರಾಜರವರು ಹಿಂದೂ ಯುನಿವರ್ಸಿಟಿಗೆ ಮಾಡಿದ ಸಹಾಯ ಧನವು ರೂ ೫ ಲಕ್ಷವಾಗುವುದು

ಮುಂಬಾಯಿಯಲ್ಲಿ ಹತ್ತಿಕಾರ್ಖಾನೆ ಮೊದಲಾದವುಗಳಲ್ಲಿ ಕೆಲಸ ಮಾಡುವ ಕೂಲಿಯವರ ಸಂಖ್ಯೆಯು ಎರಡು ಲಕ್ಷವಿದೆ ಇವರನ್ನು ಸಾಲಗಾರರ ಪೀಡೆಯಿಂದ ರಕ್ಷಿಸುವುದಕ್ಕೂ ಕುಡಿಕತನವು ಇವರಲ್ಲಿ ಹೆಚ್ಚಿ ಇವರು ಹಾಳಾಗದಂತೆಯೂ ಇವರ ಕ್ಷೇಮ ಸಾಧನೆಯನ್ನು ಇನ್ನು ನಾನಾ ವಿಧದಲ್ಲಿ ತಿಳಕೊಳ್ಳುವುದಕ್ಕೂ "ಕಾಮಗಾರ ಹಿತವರ್ಧಕ ಸಭಾ "ಎಂಬ ಸಭೆಯೊಂದಿದೆ. ಯುದ್ಧವು ಪ್ರಾರಂಭವಾದ ಮೇಲೆ ನಾನಾ ಬಗೆಯ ಸುಳ್ಳು ವರ್ತಮಾನಗಳಿಂದ ಇವರು ಮೋಸಹೋಗದಂತೆ ಯುದ್ಧದ ಯಥಾರ್ಥವಾಗಿ ವೃತ್ತಾಂತಗಳನ್ನು ತಿಳಿಸುವ ಕರ್ತವ್ಯವನ್ನು ಈ ಸಭೆಯವರು ನೆರವೇರಿಸುತ್ತಿರುವರು. ಈ ತಿಂಗಳ ತಾ. ೨೮ರಲ್ಲಿ ಮುಂಬಾಯಿಯಲ್ಲಿ ಕಾಮಗಾರರ ಸಭೆಯೊಂದು ಕೂಡಿತ್ತು ಗವರ್ನರ ದೊರೆಗಳವರು ಈ ಸಭಾಧ್ಯಕ್ಷಸ್ಥಾನವನ್ನು ವಹಿಸಿಕೊಂಡಿದ್ದರು ಕಾಮಗಾರರ ಈ ಸದ್ವರ್ತನೆಯನ್ನು ನೋಡಿ ಗವರ್ನರ ದೊರೆಗಳವರು ಇವರಲ್ಲಿ ಹಲವರಿಗೆ ಸರ್ಟಿಫಿಕೇಟುಗಳನ್ನು ಕೊಟ್ಟಿರುತ್ತಾರೆ

ವಿಧವೆಯರ ಶಿಕ್ಷಣ ಮತ್ತು ರಕ್ಷಣಾರ್ಥವಾಗಿ ಒಂದು ವಿಧವಾ ಗ್ರಹವನ್ನು ಸ್ಥಾಪಿಸಲು ಮುಂಬಾಯಿ ಸುಧಾರಕ ಸಂಘದವರು ನಿಶ್ಚಯಿಸಿರುತ್ತಾರೆ.

ಆರ್ಯಸಮಾಜದವರ ವಿಧಿ ಪ್ರಕಾರ ಮಿಸ್ ಸೆಸಿಲಿ ಬ್ಲೇಕ್ ಎಂಬ ಯೂರೋಪಿಯ ಯುವತಿಯೊಡನೆ ಜಯಗೋಪಾಲ ಸೇಟ್ ಎಂಬ ಬ್ಯಾರಿಷ್ಟರರು ವಿವಾಹಮಾಡಿಕೊಂಡರು

ಮುದ್ರಣಾಲಯಗಳ ಶಾಸನಗಳ ಪ್ರಕಾರ ಛಾಪಖಾನೆಯಿಂದ ಅಚ್ಚಾಗಿ ಹೊರಡುವ ಪ್ರತಿಯೊಂದು ಚೀಟಿನ ಮೇಲ ಸಹ ಮುದ್ರಣಾಲಯದ ಹೆಸರಿರಬೇಕೆಂಬ ಅಭಿಪ್ರಾಯವು ಮುಂಬಯಿಯ ಅಧಿಕಾರಗಳಲ್ಲಿ ತಲೆದೋರಿರುವುದು ಇಂಥಾ ಅಭಿಪ್ರಾಯದ ಜಾರಿಯಿಂದ ಛಾಪಖಾನೆಗಳು ವಿಶೇಷ ತೊಂದರೆಗಳಿಗೆ ಗುರಿಮಾಡೋಣಾಗುವುದರಿಂದ ಈ ವಿಷಯದಲ್ಲಿ ಬೇಕಾದ ನಿವೃತ್ತಿಯನ್ನು ಸರಕಾರದವರಿಂದ ಹೊಂದಬೇಕೆಂಬ ವಿಷಯವನ್ನು ಪರ್ಯಾಲೋಚಿಸುವರೆ ಛಾಪಖಾನೆಯ ಮಾಲಿಕರ ಸಭೆಯೊಂದು ಪೂನೆಯಲ್ಲಿ ಕೂಡಿತ್ತು. ಸರಕಾರದವರಿಗೆ ಒಂದು ಮನವಿಯನ್ನು ಮಾಡಬೇಕಾಗಿ ನಿರ್ಣಯಿಸಲ್ಪಟ್ಟಿರುವುದು

ಕೊಂಗ್ರೆಸ್ ಸಭೆಯ ಬಂಗಾಳ ಸಂಸ್ಥಾನದ ಕಮಿಟಿಯವರು ಸರ್ ಎಸ್ ಪಿ ಸಿಂಹರವರನ್ನು ಈ ಸರ್ತಿಯ ರಾಷ್ಟ್ರೀಯ ಸಭೆಯ ಅಧ್ಯಕ್ಷರನ್ನಾಗಿ ಚುನಾಯಿಸಬೇಕೆಂತ ನಿರ್ಣಯಿಸಿರುವರು

ಪ್ರೆಸ್ ಆಕ್ಟಿನ ನಿಬಂಧನೆಗಳಿಗನುಗುಣವಾಗಿ ಕಲ್ಕತ್ತೆಯ 'ನಾಯಕ' ಎಂಬ ಪತ್ರದ ಸಂಪಾದಕರಾದ ಬಾಬು ಪಂಚಕೌರಿ ಬೆನರ್ಜಿಯವರು ತಮ್ಮ ಪತ್ರಕ್ಕೆ ಠೇವಣಾತಿಯ ಜಾಮೀನನ್ನು ಏಕೆ ಕೊಡಕೂಡದೆಂಬುವುದರ ವಿಷಯ ಉದಾಹರಣೆ ಕೊಡಬೇಕಾಗಿ ಇವರಿಗೆ ನೋಟೀಸು ಒಂದಿತ್ತು ಬೇಕಾದ ಉದಾಹರಣೆಯನ್ನು ಕೊಡಲು ಪ್ರೆಸಿಡೆನ್ಸಿ ಮೇಜಿಸ್ಟ್ರೇಟರ ಕೋರ್ಟಿಗೆ ಬೆನರ್ಜಿಯವರು ಹೋದೊಡನೆ ಮೇಜಿಸ್ಟ್ರೇಟರು ಪೊಲೀಸಿನವರು ತೋರಿಸಿ ಕೊಟ್ಟ ವಿಷಯವನ್ನು ತಾನು "ನಾಯಕ" ಪತ್ರದಲ್ಲಿ ಓದಿರುವೆನೆಂತಲೂ ಅದೇನೂ ತನಗೆ ಆಕ್ಷೇಪಕರವಾಗಿ ಕಂಡು ಬರುವುದಿಲ್ಲವೆಂತಲೂ ಬೆನರ್ಜಿಯವರು ಈ ವಿಷಯದಲ್ಲಿ ಉದಾಹರಣೆ ಕೊಡುವ ಅಗತ್ಯವಿಲ್ಲವೆಂದೂ ಬೆನರ್ಜಿಯವರನ್ನು ತಾನು ಸ್ವತಹ ಬಲ್ಲೆನಾದ್ದರಿಂದ "ನಾಯಕ" ಪತ್ರವನ್ನು ಅವರು ನಡೆಸುವ ತನಕ ಜಾಮೀನು ಠೇವಣಾತಿಯನ್ನು ಈ ಪತ್ರದ ಬಗ್ಗೆ ತಕ್ಕೊಳ್ಳುವುದು ಅಗತ್ಯವಿಲ್ಲವೆಂದೂ ಅಪ್ಪಣೆಕೊಟ್ಟರು.

ಗುಜರಾತ ಪ್ರಾಂತ್ಯಗಳ ಮುನ್ಸಿಪಾಲಿಟಿಯವರು ತಮ್ಮ ಊರಿನ ಹೆಸರಿಟ್ಟು ಒಂದು ವಾಯುವಿಮಾನವನ್ನು ಸಾಮ್ರಾಜ್ಯದ ಸೇನೆಗೆ ಕೊಡುವರೆ ಚಂದಾಮೊಬಲಗುಗಳನ್ನು ಕೂಡಿಸುತ್ತಿದ್ದಾರೆ. ಬ್ರೊಚ್ ಮುನ್ಸಿಪಾಲಿಟಿಯು ರೂ ೪೫೦೦೦ವನ್ನು ಈ ಬಗ್ಗೆ ಕೊಟ್ಟಿರುವುದು

ಪ್ರಾಯದಲ್ಲಿ ೫೫ ವರುಷ.... ಎಕ್ಕಿ ತಮ್ಮ ಕೆಲಸದವಧಿಯನ್ನು ಸರಕಾರದವರಿಂದ ಹೆಚ್ಚು ಸಿಕ್ಕೊಂಡು ಪ್ರಕೃತ ಕೆಲಸ ನೋಡುತ್ತಿರುವ ಕೆಲವು ಸಬ್ ರಿಜಿಸ್ಟ್ರಾರರುಗಳ ಪ್ರಾಯದ ವಿಷಯ ಈ ಪ್ರಕಾರವಾಗಿರುವುದು: ಇವರು ಯುನೈಟೆಡ್ ಪ್ರೊವಿನ್ಸಸ್‌ಗಳಲ್ಲಿ ಕೆಲಸಮಾಡುತ್ತಿರುವರು. ಒಬ್ಬನಿಗೆ ೭೪ ವರುಷ, ೧೧ ತಿಂಗಳು ೧೯ ದಿವಸಗಳ ಪ್ರಾಯವಾಗಿದೆ. ಇವರಿಗೆ ೧೧ ಸಲ ಎಕ್ಸ್‌ಟೆನ್‌ಶನ್ ದೊರಕಿರುವುದು. ೬೧ ವರುಷ ಪ್ರಾಯವಾದಾಗ ಇವರು ಸಬ್ ರಿಜಿಸ್ಟ್ರಾರರಾಗಿ ನೇಮಕ ಹೊಂದಿದರು ಇನ್ನುಮತ್ತೊಬ್ಬರಿಗೆ ೭೧ ವರುಷ ಪ್ರಾಯ, ಇವರಿಗೆ ೧೪ ಸಾರಿ ಎಕ್ಸ್‌ಟೆನ್‌ಶನ್ ದೊರಕಿದೆ. ಇವರಿಗೆ [illegible] ವರುಷಗಳ ಪ್ರಾಯವಾದಾಗ ಈ ಹುದ್ದೆಯು ಕೊಡೋಣಾದದ್ದು ಬಾಕಿ ೧೧ ಜನ ಸಬ್ ರಿಜಿಸ್ಟ್ರಾರರವರ ಪ್ರಾಯವು ೫೫ರಿಂದ [illegible] ವರುಷಗಳವರೆಗಿರುವುದು.

ವ್ಯಾಸರಾಯಿ ಪ್ರಭುಗಳ ಕಾರ್ಯನಿರ್ವಾಹಕ ಕಮಿಟಿಯ ಮೆಂಬರರಾದ ಆನರೇಬಲ್ ಸರ್. ಅಲಿ ಇಮಾಮ್‌ರವರ ಕೆಲಸದವಧಿಯು ಇದೇ ಬರುವ ನವಂಬರ ತಿಂಗಳ ತಾ ೩ಕ್ಕೆ ಮುಗಿಯುವುದು.

ದಕ್ಷಿಣ ಹಿಂದೂಸ್ಥಾನ

ಬೆಂಗಳೂರಲ್ಲಿ ಸೇವಾಸದನ ಸಂಘದ ಶಾಖೆಯು ಕಳದ ೧೯೧೩ನೇ ಅಕ್ಟೋಬರ ತಿಂಗಳಲ್ಲಿ ಸ್ಥಾಪಿತವಾಗಿತ್ತೆಂತ ತಿಳಿದುಬರುತ್ತದೆ. ಯುವರಾಜರವರು ಬೆಂಗಳೂರಿನ ಈ ಶಾಖೆಗೆ ಇತ್ತಲಾಗಿ ರೂ. ೧೦೦೦ ಸಹಾಯದ್ರವ್ಯವಾಗಿ ಕೊಟ್ಟಿರುವರು. ಬೆಂಗಳೂರಲ್ಲಿ ಇದಕ್ಕೆ ಬೇಕಾಗಿರುವ ಕಟ್ಟೋಣವನ್ನು ಕಟ್ಟಿಸಲು ಸರಕಾರದವರಿಂದ ಸ್ಥಳವನ್ನು ಕೇಳಿಕೊಳ್ಳಬೇಕಾಗಿ ನಿಶ್ಚಯಿಸಿರುವರು.

ರೆವಿನ್ಯು ಕೋರ್ಟುಗಳಲ್ಲಿ ಪ್ರೊಸೆಸ್ ಸರ್ವರುಗಳಾಗಿ ನೇಮಿಸಲ್ಪಡುವ ಅಮೀನರ ಸಂಬಳವು ರೂ. ೧೫ ಮತ್ತು ಪ್ರೊಸೆಸ್ಸ್ ಸರ್ವರ್‌ರಾಗಿ ಕೆಲಸಮಾಡುವ ಜವಾನರ ಸಂಬಳವು ರೂ ೯ ಆಗಿರಬೇಕೆಂದು ಮದ್ರಾಸು ಹೈಕೋರ್ಟಿನವರು ನಿರ್ಣಯಿಸಿರುತ್ತಾರೆ.

ಬೆಂಗಳೂರಲ್ಲಿ ಪ್ಲೇಂಟರ್ಸ್ ಎಸ್ಸೋಸಿಯೇಶನಿನ ಮಹಾಸಭೆಯು ಈ ತಿಂಗಳ ತಾ. ೧೭ರಲ್ಲಿ ಕೂಡಿತ್ತು. ಅರಸಿಕೆರೆ ಮಂಗಳೂರು ರೈಲ್ವೆ ಮಾರ್ಗವನ್ನು ಹಾಕಿಸುವ ಏರ್ಪಾಡನ್ನು ಮೈಸೂರು ಸರಕಾರದವರು ಬಿಟ್ಟಿರುವುದರಿಂದ ತಮಗೆ ಇದರಿಂದುಂಟಾದ ವಿಷಾದವನ್ನು ಸಭೆಯಲ್ಲಿ ಸೂಚಿಸಬೇಕೆಂತಿದ್ದರು ಆದರೆ ರೆಸಿಡೆಂಟರವರು ಈ ವಿಷಯವನ್ನು ಮೈಸೂರು ದರಬಾರಿನವರು ಆಲೋಚಿಸುವರೆಂತ ತಿಳಿಯ ಹೇಳಿದ್ದರಿಂದ ಸಭಿಕರು ಈ ವಿಷಯ ವಿಷಾದವನ್ನು ಸಭೆಯಲ್ಲಿ ಸೂಚಿಸಲಿಲ್ಲ. ಮಂಗಳೂರು ಬಂದರದಲ್ಲಿ ಮಳೆಗಾಲದಲ್ಲಿ ಹಡಗುಗಳ ಆಮದು ರಫ್ತಿಗೆ ಅನುಕೂಲವಿಲ್ಲದ್ದರಿಂದ ಧಕ್ಕೆಗಳನ್ನು ಬಂದರನ್ನಾಗಿ ಮಾಡಿಕೊಳ್ಳುವ ಆಲೋಚನೆಯನ್ನು ಮುಂಬಯಿ ಸರಕಾರದವರು ಮಾಡುತ್ತಿರುವರೆಂತ ರೆಸಿಡೆಂಟರು ಈ ಸಂದರ್ಭದಲ್ಲಿ ಹೇಳಿದ ಮಾತುಗಳಿಂದ ತೋರುತ್ತದೆ

ಮದ್ರಾಸು ಪ್ರಾಂತಿಕ ಕೊಂಗ್ರೆಸು ಕಮಿಟಿಯವರು ಸಹ ಎಸ್. ಪಿ ಸಿಂಹರವರನ್ನು ಈ ಸರ್ತಿ ಕೂಡುವ ರಾಷ್ಟ್ರೀಯ ಸಭೆಯ ಅಧ್ಯಕ್ಷರನ್ನಾಗಿ ಚುನಾಯಿಸಬೇಕೆಂಬ ಅಭಿಪ್ರಾಯವನ್ನು ಸೂಚಿಸಿರುತ್ತಾರೆ.

ವೆಂಕಟಗಿರಿಯ ಮಹಾರಾಜರವರು ಮದ್ರಾಸು ಯುದ್ಧ ಫಂಡಿಗೆ [illegible] ರೂ. ೭ ಲಕ್ಷ [illegible]

ುವರೆಂಬುದು ವಾಚಕರು ತಿಳಿದಿರಬಹುದು 'ಮದ್ರಾಸು ಹೊಸ್ಪಿಟಲ್' ಹಡಗದ ಪೋಷಣೆ ಬಗ್ಗೆ ತಿಂಗಳ್ಗೊಂದಕ್ಕೆ ರೂ. ೫೦೦ನ್ನು ಕೊಡುತ್ತಿರುವರಲ್ಲದೆ ಗಾಯ ಪಡೆದ ಸೇನಿಕರನ್ನು ಒಯ್ಯಲು ಬೇಕಾದ ಎರಡು ಮೊಟಾರ್ ಬಂಡಿಗಳನ್ನು ತಕೊಳ್ಳಲು ರೂ ೧೫,೦೦೦ವನ್ನು ಕೊಟ್ಟಿರುವರು.

ಸ್ವರ್ಗಸ್ಥ ಗೋಪಾಲಕೃಷ್ಣ ಗೋಖಲೆಯವರ ಸ್ಮಾರಕ ಫಂಡಿನ ವೊಬಲಗು ರೂ. ೬೦,೦೧೭ ಆಗಿದೆ

ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಫೈಲಾದವರಲ್ಲಿ ಸೆಕೆಂಡರಿ ಗ್ರೇಡ್ ಉಪಾಧ್ಯಾಯರ ತರಬೇತಿಯನ್ನು ಹೊಂದಲು ಅಪೇಕ್ಷಿಸುವವರು ಬಹಳ ಜನರಿರಬಹುದು ಒಂದು ಪ್ರತ್ಯೇಕ ಪರೀಕ್ಷೆಯನ್ನು ಏರ್ಪಡಿಸಿ ಇಂಥವರನ್ನು ಟ್ರೈನಿಂಗ್ ಬಗ್ಗೆ ತಕೊಳ್ಳಬಹುದೆಂಬ ಡಿರೆಕ್ಟರರವರ ಸೂಚನೆಯನ್ನು ಸರಕಾರದವರು ಅಂಗೀಕರಿಸಿರುತ್ತಾರೆ

ಮೆಟ್ರಿಕ್ಯುಲೇಷನ್, ಇಂಟರ್‌ಮಿಡಿಯೇಟ್ ಮತ್ತು ಬಿ. ಎ ಪರೀಕ್ಷೆಗಳಲ್ಲಿ ಒಬ್ಬನು ಪಾಸಾಗದೆ ಹೋದವರು ಮೂರು ಸಲಕ್ಕಿಂತ ಹೆಚ್ಚಾಗಿ ಈ ಪರೀಕ್ಷೆಗಳಲ್ಲಿ ತೇರ್ಗಡೆ ಪಡಲು ಪ್ರಯತ್ನಿಸಕೂಡದೆಂಬ ನಿಯಮವಿತ್ತು ಈ ನಿಯಮದಲ್ಲಿ ಸೂಚಿಸಿದ ಬದಲಾವಣೆಯನ್ನು ಸರಕಾರದವರು ಮಂಜೂರು ಮಾಡಿರುವುದರಿಂದ ಈ ನೊದಲು ಈ ಪರೀಕ್ಷೆಗಳಲ್ಲಿ ತೇರ್ಗಡೆ ಪಡದೆ ಇದ್ದವರೂ ಇನ್ನು ಮುಂದೆ ಈ ಪರೀಕ್ಷೆಗಳಲ್ಲಿ ಫೈಲಾಗುವವರೂ ಎಷ್ಟು ಸಲ ಬೇಕಾದರೂ ಈ ಪರೀಕ್ಷೆಗಳನ್ನು ಕೊಡಬಹುದಾಗಿದೆ.

ದಕ್ಷಿಣ ಕನ್ನಡ.

ಕುಂಬಳೆ:— ಕೆನರಾ ಡಿವಿಜನ್ ಶಾಲಾ ಅಸಿಸ್ಟಾಂಟ್ ಇನ್ಸ್‌ಪೆಕ್ಟರವರು ಕೆಲವು ದಿವಸಗಳ ಮುಂಚೆ ಇಲ್ಲಿಗೆ ಚಿತ್ತೈಸಿ ಇಲ್ಲಿಯ ಬಿ. ಎಮ್. ಎಲಿಮೆಂಟರಿ ಶಾಲೆಯ ವ ಆನೆಬಾಸ್ ಕ್ಕೆಳ ಶಾಲೆಗಳ ಇನ್ಸ್‌ಪೆಕ್ಷನ್ ನಡಿಸಿ ತಾ. ೨೧ರಲ್ಲು ಮಂಗಳೂರಿಗೆ ತೆರಳಿದರು.

ಇಲ್ಲಿ ಆಮದೆ ರಸ್ತೆಗುವ ಗಾಡಿಗಳು ತಂಗುವ ಗಾಡಿ ಚೌಕಕ್ಕೆ ಆವರಣ ದರೆ ಇಲ್ಲದ ಕಾರಣ ತಿಳಿಯದ ಕೆಲವರು ರಸ್ತೆ ಕಿನಾರೆಯಲ್ಲಿ ಗಾಡಿಗಳನ್ನು ಬಿಡುವದರಿಂದ ಇದಕ್ಕೆ ಒಂದು ಆವರಣ ಹಾಕಿಸಿ ನೋಟೀಸು ಸಹಾ ಹಚ್ಚುವದು ಅಗತ್ಯವಾಗಿದೆ.

ಇಲ್ಲಿ ಬೋರ್ಡು ಬಾಲಿಕಾ ಪಾಠಶಾಲೆಯು ಆಗುವದೆಂತ ಈ ಮೊದಲೇ ವದಂತಿ ಇದ್ದರೂ ಈಚೆಗೆ ಇದರ ವರ್ತಮಾನವೇನೂ ಕೇಳುವದಿಲ್ಲ; ದಯಾಳುಗಳಾದ ಬೋರ್ಡು ಪ್ರೆಸಿಡೆಂಟರವರು ತ್ವರ್ಯ ಇದರ ವಿಲೆವಾರಿ ಮಾಡುವರಾಗಿ ನಂಬುತ್ತೇನೆ.

ಹಿಂದೂ ಬಾಲಿಕಾ ಸದ್ವರ್ತನಾ ಸಭಾ, ಕಾರ್ಕಳ.

ಈ ಸದ್ವರ್ತನಾ ಪ್ರಥಮ ಸಭೆಯು ಇದೇ ತಿಂಗಳ [illegible]ನೇ ಆದಿತ್ಯವಾರದಲ್ಲು ಮಧ್ಯಾಹ್ನ ಸುಮಾರು [illegible] ಸಮಯಕ್ಕೆ ಇಲ್ಲಿಯ ಹಿಂದೂ ಬಾಲಿಕಾ ಪಾಠಶಾಲೆಯ ನೂತನ ಮಂದಿರದಲ್ಲಿ ಜರಗಿತು. ಈ ಸಭೆಗೆ ಸುಮಾರು ೩೦ ಹಿಂದೂ ಗೃಹಿಣಿಯರು ಆತ್ಮಸಿದರಲದೆ ೫೦ ಮಂದಿ ವಿದ್ಯಾರ್ಥಿಗಳೂ ನೆರೆದಿದ್ದರು. ಶ್ರೀಮತಿ ಸುಮತಿಬಾಯಿಯೆಂಬವರು ಈ ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿದ್ದರು ಮೊದಲು ಇದೇ ಶಾಲೆಯ ಮುಖ್ಯ ಉಪಾಧ್ಯಾಯಿನಿಯರು ಸಭೆಯ ಉದ್ದಿಶ್ಯವನ್ನು ಸವಿಸ್ತಾರವಾಗಿ ಹೇಳಿದ ಮೇಲೆ, "ಸ್ತ್ರೀಯರಿಗೆ ವಿದ್ಯಾಭ್ಯಾಸವು ಅವಶ್ಯಕವೋ ಯಾ ಅಲ್ಲವೋ" ಎಂಬ ವಿಷಯವು ಸಭೆಯಲ್ಲಿ ಚರ್ಚಿಸಲ್ಪಟ್ಟಿತು.

ಜಗದೀಶ್ವರನು ಪ್ರತಿ ಒಂದು ಪ್ರಾಣಿ ವರ್ಗಕ್ಕೆ ತಮತಮಗೆ ಹಿತವನ್ನು ಮಾಡಿಕೊಳ್ಳತಕ್ಕ ಶಕ್ತಿಯನ್ನು ಕೊಟ್ಟದ್ದಲ್ಲಿ ಸ್ತ್ರೀಯರು ಮಾತ್ರ ಅದನ್ನು ಉಪಯೋಗಿಸದೇ ಪಶುಗಳಿಗಿಂತ ಕಡೆಯಾಗಿರುವುದು ನ್ಯಾಯವಲ್ಲವೆಂದೂ, ವಿದ್ಯೆಯೆಂಬುದು ಮನಸ್ಸಿನ ಒಳಗಿನ ಕಣ್ಣನ್ನು ತೆರೆದು ಪ್ರಪಂಚದಲ್ಲಿರುವ ಎಲ್ಲಾ ವಸ್ತುಗಳನ್ನು ತೋರಿಸುವುದೆಂದೂ, ಪರದೇಶಗಳಲ್ಲಿ ವಾಸಮಾಡಿಕೊಂಡಿರುವ ಬಂಧುಬಾಂಧವರ ಯೋಗಕ್ಷೇಮವನ್ನು ನಮಗೂ ನಮ್ಮ ಯೋಗಕ್ಷೇಮವನ್ನು ಅವರಿಗೂ ತಿಳಿಸಬೇಕಾದರೆ ಒರಹ ಗೊತ್ತಿದ್ದ ವಿನಹ ಆ ಕಾರ್ಯವು ನೆರವೇರಲಿಕ್ಕಿಲ್ಲವೆಂದೂ ತಮ್ಮ ತಮ್ಮ ಗೃಹಕೃತ್ಯಕಾರ್ಯಗಳನ್ನು ಯೋಗ್ಯ ರೀತಿಯಲ್ಲಿ ನೆರವೇರಿಸಿಕೊಳ್ಳಲು ಸಮರ್ಥರಾಗುವರೆಂದು ಇನ್ನೂ ಕೆಲವು ಒಳ್ಳೆಯ ದೃಷ್ಟಾಂತಗಳಿಂದ ಈ ಶಾಲೆಯ ವಿದ್ಯಾರ್ಥಿ ಸೌ। ಕೆ: ಸೀತಾಬಾಯಿಯು ಸ್ತ್ರೀಯರಿಗೆ ವಿದ್ಯೆಯು ಅವಶ್ಯಕವೆಂಬುದನ್ನು ದೃಢಪಡಿಸಿದಳು ಇದನ್ನು ಪ್ರತಿಭಟಿಸಿ ಸ್ತ್ರೀಯರಿಗೆ ವಿದ್ಯೆಯು ಏನೂ ಪ್ರಯೋಜನವಿಲ್ಲವೆಂದೂ ವಿದ್ಯೆ ಕಲಿತು ಸ್ತ್ರೀಯರಿಗೆ ಯಾವ ತರದ ಸರಕಾರಿ ನೌಕರಿಯು ಸಿಕ್ಕಬೇಕಾದುದ್ದಿಲ್ಲವೆಂದೂ, ಮನೆಯ ಕೆಲಸ ಮಾಡುವುದು, ಮಕ್ಕಳ ಪೋಷಣೆ ಮಾಡುವುದು, ಇವೇ ಅವರ ಮುಖ್ಯ ಕರ್ತವ್ಯಗಳೆಂದೂ, ಕೆಲವು ಸ್ತ್ರೀಯರು ವಿದ್ಯೆಯನ್ನು ದುರ್ವಿನಿಯೋಗಿಸುತ್ತಾರೆಂದೂ, ಈ ವಿದ್ಯೆಯು ಅಹಂಕಾರ, ಅವಿಧೇಯತೆ, ದುರ್ಬುದ್ಧಿ ಮೊದಲಾದವುಗಳಿಗೆ ಎಡೆಕೊಡುವುದೆಂದೂ ದೃಷ್ಟಾಂತಪೂರ್ವಕವಾಗಿ ಒಂದು ಕಟ್ಟುಕಥೆಯನ್ನು ಹೇಳಿ ಸ್ತ್ರೀಯರಿಗೆ ವಿದ್ಯೆಯು ಎಂದಿಗೂ ಅವಶ್ಯಕವಲ್ಲವು ಎಂಬುದನ್ನು ಇನ್ನೊಬ್ಬ ವಿದ್ಯಾರ್ಥಿ ಮ। ನಾರಾಯಣೀಬಾಯಿಯೆಂಬವಳು ವ್ಯಕ್ತಗೊಳಿಸಿದಳು

ತರುವಾಯ ಹಲವು ಇತರ ಗೃಹಿಣಿಯರು ತಮ್ಮ ತಮ್ಮ ಅಭಿಪ್ರಾಯಗಳನ್ನು ಸೂಚಿಸಿದರು ಅನಂತರ ಹುಡುಗಿಯರು ಜಡೆ ಹೆಣೆದು ಪದಗಳನ್ನು ಹಾಡಿ, ನೆರೆದಿದ್ದ ಸಭಿಕರ ಮನಸ್ಸನ್ನು ಆಹ್ಲಾದಗೊಳಿಸಿದರು ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿದ ಕೆ. ಸುಮತಿಬಾಯಿಯವರು ವಿದ್ಯೆಯು ಸ್ತ್ರೀಯರಿಗೆ ಅತ್ಯಗತ್ಯವೆಂಬುದನ್ನು ಪುರಾಣ, ಇತಿಹಾಸಗಳಿಂದ ಕೆಲವು ಉಪಯುಕ್ತವಾದ ದೃಷ್ಟಾಂತಗಳನಿತ್ತು ದೃಢೀಕರಿಸಿದರು ಮತ್ತು ಬರುವ ತಾ ೨೨ನೇ ಆದಿತ್ಯವಾರ ಮಧ್ಯಾಹ್ನ ಇದೇ ರೀತಿಯಲ್ಲಿ ಸಭೆಕೂಡಿ ಪುರಾಣವನ್ನೋದಿ ಅದರ ಅರ್ಥವನ್ನು ವಿವರಿಸಿ ಹೇಳಬೇಕಾಗಿ ನಿರ್ಣಯಿಸಲ್ಪಟ್ಟಿತು —

ಅನಂತರ ತಾಂಬೂಲಗಳನ್ನು ಹಂಚಿದ ತರುವಾಯ ಹುಡುಗಿಯರು ರಾಜಕೀರ್ತನೆಯನ್ನು ಹಾಡಿ ಅಂದಿನ ಸಭೆಯನ್ನು ಮುಗಿಸಿದರು.

ಕಳೆದ ಸಭೆಯಲ್ಲಿ [illegible] ಮುಂದಿನ ಆದಿತ್ಯವಾರ ಸಭೆಕೂಡಿ "ಭಕ್ತವಿಜಯ"ವೆಂಬ ಮರಾಠಿ ಗ್ರಂಥವನ್ನು ಓದಲಾರಂಭಿಸಿರುವರು

ಇದೇ ಮೇರೆಗೆ ಒಂದು ಆದಿತ್ಯವಾರ ಸಭೆಯೂ ಮತ್ತೊಂದು ಆದಿತ್ಯವಾರ ಪುರಾಣ ವ್ಯಾಸಂಗವೂ ಶ್ರೀದೇವತಾನುಗ್ರಹದಿಂದ ಚಿರಕಾಲ ಸಾಂಗ್ಯವಾಗಿ ನಡೆದು ಈ ಸದ್ವರ್ತನಾ ಸಭೆಯ ಉದ್ದಿಶ್ಯಗಳು ಸಫಲವಾಗಲೆಂದು ನಮ್ಮ ಪ್ರಾರ್ಥನೆ.

ವಿದ್ಯಾರ್ಥಿ.

ಮಂಗಳೂರು

ತುಫಾನು ವಗೈರೆ ಇಲ್ಲದಿದ್ದರೆ ಬೊಂಬೈ ಸ್ಟೀಮ್ ನೆವಿಗೇಶನ್ ಕಂಪೆನಿಯ ಪ್ರಥಮ ಸ್ಟೀಮರು ಮಂಗಳೂರು ಬ್ಯಾನಿಗೆ ಇದೇ ಬರುವ ಸಪ್ಟಂಬರ ತಿಂಗಳ ೨೦ನೇ ತಾರೀಕಿನ ಸೋಮವಾರ ದಿವಸ ಮುಂಬಯಿಯಿಂದ ಬಿಡಲ್ಪಟ್ಟು ಅದೇ ತಿಂಗಳ ೨೩ನೇ ತಾರೀಕು ಗುರುವಾರ ಬೆಳಗ್ಗೆ ಇಲ್ಲಿಗೆ ತಲಪಿ ಅದೇ ದಿವಸ ಸಾಯಂಕಾಲ ಹಿಂತೆರಳುವದೆಂತಲೂ ನಂತರ ವಾರಕ್ಕೊಮ್ಮೆ ಪ್ರತೀ ಗುರುವಾರ ಸ್ಟೀಮರು ಇಲ್ಲಿಂದ ಬಿಡಲ್ಪಡುವದಾಗಿಯೂ ತಿಳಿಯುತ್ತೇವೆ.

ಕಳದ ವಾರ ಮುನಿಸಿಪಾಲಿಟಿಯಲ್ಲಿ ೬ ಪ್ಲೇಗ ಮರಣಗಳಿದ್ದವು

ಜಿಲ್ಲಾ ಕಲೆಕ್ಟರ ದೊರೆಗಳವರು ಸರ್ಕೀಟಿನಿಂದ ಈ ತಿಂಗಳ ತಾ ೨೨ರಲ್ಲಿ ಒಂದಿರುವರು

ರಾ। ಎನ್. ಕೃಷ್ಣಪ್ಪನವರು ಎರಡು ತಿಂಗಳ ಹಕ್ಕಿನ ರಜೆಯನ್ನು ಪಡದಿರುವದರಿಂದ ಇವರ ಬದಲಿಗೆ ರೂ ೬೦ರ ಸಂಬಳದ ಮೇಲೆ ಮೆ। ಆರ್ ಎಲ್ ನಜರೇತರವರು ಆಕ್ಟಿಂಗ್ ರಿಕಾರ್ಡ್ಸ್ ಫಸ್ಟ್ ಕ್ಲಾರ್ಕರಾಗಿ ನೇಮಿಸಲ್ಪಟ್ಟಿರುತ್ತಾರೆ

ಆಕ್ಟಿಂಗ್ ಹೆಡ್ ಒಡಿಟರರಾಗಿರುವ ಎಚ್ ಅನಂತಯ್ಯನವರು ರೂ. ೫೦ರ ಮೇಲೆ ನಜರೆತರವರ ಬದಲಿಗೆ ಸೆಕೆಂಡ್ ಎಕೌಂಟಾಂಟರಾಗಿಯೂ ಅನಂತಯ್ಯನವರ ಕೆಲಸಕ್ಕೆ ರೂ ೫೦ರ ಮೇಲೆ ರಾ। ಎಮ್. ಸುಬ್ಬರಾವ್‌ರವರು ಆಕ್ಟಿಂಗ್ ಹೆಡ್ ಒಡಿಟರರಾಗಿಯೂ, ಸುಬ್ಬರಾವರವರ ಆಕ್ಟಿಂಗ್ ರೂ ೪೫ರ ಕೆಲಸಕ್ಕೆ ರಾ। ಎಸ್. ಡಿ. ಸೋಜರವರೂ, ಎಸ್ ಡಿ. ಸೋಜರವರ ರೂ. ೪೦ರ ಕೆಲಸಕ್ಕೆ ರಾ। ಜಿ ದತ್ತಾತ್ರಿಯರಾವ್‌ರವರೂ, ದತ್ತಾತ್ರಿಯರಾವ್‌ರವರ ರೂ ೪೦ರ ಡಿವಿಜನಲ್ ಆಫೀಸಿನ ಸೆಕೆಂಡ್ ಕ್ಲಾರ್ಕರ ಕೆಲಸಕ್ಕೆ ರಾ। ಡಿ. ನಾರಾಯಣ ರಾವ್‌ರವರೂ ನೇಮಿಸಲ್ಪಟ್ಟಿರುವರು

ದಕ್ಷಿಣಕನ್ನಡಾ ಜಿಲ್ಲೆಯಲ್ಲಿ ನೇತ್ರಾವತಿ, ಚಂದ್ರಗಿರಿ, ಅಡ್ಯಸ್ಥಳ ಮತ್ತು ಚರವತ್ತೂರು ನದಿಗಳಲ್ಲಿ ಮತ್ತು ಇವುಗಳ ಉಪನದಿಗಳಲ್ಲಿ ಮೀನು ಹಿಡಿಯುವ ಬಗ್ಗೆ ಯಾವನೊಬ್ಬ ಮನುಷ್ಯನಾದರೂ ಸ್ಥಾವರ ಯಂತ್ರವನ್ನು ನೆಡಲಿಕ್ಕೂ ಯಾ ಉಪಯೋಗಿಸಲಿಕ್ಕೂ ಅಥವಾ ಗೂಟಗಳ ಬೇಲಿ ಕಟ್ಟಲಿಕ್ಕೂ ಕೂಡದೆಂಬ ಸರಕಾರದವರ ಇಸ್ತಿಹಾರು ಈ ತಿಂಗಳ ಜಿಲ್ಲಾ ಗಜೇಟ್ ಸಪ್ಲಿಮೆಂಟಿನಲ್ಲಿ ಪ್ರಕಟವಾಗಿರುತ್ತದೆ ಈ ಇಸ್ತಿಹಾರಿಗೆ ವಿರೋಧವಾಗಿ ನಡೆಯುವವರು ನೂರು ರೂಪಾಯಿಗಳವರೆಗಿನ ಜುರುಮಾನೆಯನ್ನು ತರಲು ಬದ್ಧರಾಗಿರುವರು. ಒಮ್ಮೆ ಈ ರೀತಿ ತಪ್ಪತಸ್ಥನಾದವನು ಪುನಹ ಈ ತಪ್ಪಿಗೆ ಗುರಿಯಾದರೆ ರೂ. ೨೦೦ರ ವರೆಗಿನ ಜುರುಮಾನೆಯ ಶಿಕ್ಷೆಗೆ ಗುರಿಯಾಗುತ್ತಾನೆ.

ಸಲು ಈ ತಿಂಗಳ ತಾ. ೩೧ರಲ್ಲಿ ಬೊಂಬಾಯಿ ಸಭೆಯು ಕೊಸ್ಮೊಪೊಲಿಟನ್ ಕ್ಲಬ್ಬಿನಲ್ಲಿ ಜರುಗುವುದು.

ಇದೇ ತಿಂಗಳ ತಾ. ೧ರಿಂದ ವ ಪರಿತರುವಾಯ ಕಾಸರಗೋಡು ತಾಲೂಕಿನಲ್ಲಿರುವ ಪೆರ್ಡಾಲ I, ಪೆರ್ಡಾಲ II, ಬೇಳ, ಉಬ್ರಂಗಳ ಮತ್ತು ಅಂಗಡಿಮೊಗರು ಗ್ರಾಮಗಳಲ್ಲಿರುವ ಕೆಲವು ಗ್ರಾಮಕೋರ್ಟುಗಳ ಬಗ್ಯೆ ಪೆರ್ಡಾಲ Iರಲ್ಲಿ ಒಂದೇ ಗ್ರಾಮಕೋರ್ಟನ್ನು ಸ್ಥಾಪಿಸುವ ಏರ್ಪಾಡಿನ ಚಾರಿಯು ಈ ತಿಂಗಳ ಒಂದನೇ ತಾರೀಕಿನಿಂದ ನಡೆಯುವುದಾಗಿ ಸರಕಾರದವರು ಪ್ರಕಟಿಸಿರುತ್ತಾರೆ

ಲೋಕಲ್‌ಫಂಡ್ ರಸ್ತೆಗಳಲ್ಲಿ ಗಾಡಿ ಇತ್ಯಾದಿ ವಾಹನಗಳು ಹಾದುಕೊಂಡು ಹೋಗುವಾಗ ಅಥವಾ ಒಂದಕ್ಕೊಂದು ಹಿಂಬಾಲಿಸಿಕೊಂಡು ಹೋಗುವಾಗ ಅಪಾಯಬಾರದಂತೆಯೂ ಅಥವಾ ಆತಂಕ ಉಂಟಾಗದಂತೆಯೂ ಎಡಬದಿಯಿಂದ ಕೊಂಡುಹೋಗಬೇಕೆಂಬ ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರವರು ಸೂಚಿಸಿರುವ ಕ್ರಮವು ಗವರ್ನರ್ ದೊರೆಗಳವರ ಮಂಜೂರಾತಿಯನ್ನು ಪಡದು ಪ್ರಕಟಿಸಲ್ಪಟ್ಟಿರುವುದು.

ಗವರ್ನಮೆಂಟ್ ಕೊಲೇಜಿನ ಕ್ರಿಕೆಟ್ ಪಂಗಡದವರಿಗೂ ಸೈಂಟ್ ಎಲ್ಲೊಸಿಯಸ್ ಕೊಲೇಜಿನ ಕ್ರಿಕೆಟ್ ಪಂಗಡದವರಿಗೂ ಪಂದ್ಯಾಟವು ಕಳೆದ ಸೋಮವಾರ ನಡದು ಗವರ್ನಮೆಂಟ್ ಕೊಲೇಜಿನವರು ಸಂಪೂರ್ಣವಾಗಿ ಸೋತುಹೋದರು

ಗೌಡಸಾರಸ್ವತರ ಮಂಗಳೂರು ಶ್ರೀ ವೆಂಕಟರಮಣ ದೇವಸ್ಥಾನದ ವ ಇದರ ಸ್ಥಿರಚರ ಸೊತ್ತುಗಳ ಆಡಳಿತೆಯೆಲ್ಲವನ್ನು ಈ ವರೆಗೆ ನಡಿಸುತ್ತಿದ್ದ ಮ॥ ರಾ॥ ರಾ॥ ರಂಗಪೈಗಳವರು ಇತ್ತಲಾಗೆ ಮೊಕ್ತೇಸರರಾಗಿ ನೇಮಕ ಹೊಂದಿದ ಮ॥ ರಾ॥ ರಾ॥ ವಕೀಲ ಸುಬೇರ ನರಸಿಂಗನ್ನಾಯಕ ಮ॥ ರಾ॥ ರಾ॥ ಮಣೇಲ ವೆಂಕಟರಾಯನ್ನಾಯಕ ಮತ್ತು ಮ॥ ರಾ॥ ರಾ॥ ಮಿಜಾರ ರಾಮಕೃಷ್ಣ ಪೈಗಳವರಿಗೆ ವಹಿಸಿಕೊಡುವರಾಗಿ ಕೇಳುತ್ತೇವೆ.

ಈ ಪಟ್ಟಣದ ಆರೋಗ್ಯಪಾಲನೆ ಬಗ್ಯೆ ಹೊಸ ಮಾರ್ಗಗಳನ್ನು ಹಾಕಿಸುವ ಇತ್ಯಾದಿ ಏರ್ಪಾಡುಗಳ ಆಲೋಚನೆಯು ಇಲ್ಲಿಯ ಮುನ್ಸಿಪಲ್ ಕೌನ್ಸಿಲಿನವರಿಂದ ಈ ತಿಂಗಳ ತಾ. ೩೧ರಲ್ಲಿ ವಾದೋಣೆಗಾಗುವದು.

ಇಲ್ಲಿಯ ಗೋಕರ್ಣಮಠದ ಮಾಧವಾಚಾರ್ಯರ ಮಗ ರಾಘವೇಂದ್ರ ಆಚಾರ್ಯರೆಂಬವರು ಮಹಮ್ಮದಿ ಮತವನ್ನು ಅವಲಂಬಿಸಲು ಕಳೆದ ಶುಕ್ರವಾರ ಮಶೀದಿಯನ್ನು ಸೇರಿದರೆಂಬದಾಗಿಯೂ ಮತಾಂತರಗೊಳಿಸುವ ಸಂಸ್ಕಾರವು ಮುಗಿಯುವಷ್ಟರಲ್ಲಿ ಇವರು ಈ ಊರನ್ನು ಬಿಟ್ಟು ಹೋಗಿರುವರೆಂಬುದಾಗಿಯೂ ಕೇಳುತ್ತೇವೆ.

ಇಲ್ಲಿಯ ಡಿಸ್ಟ್ರಿಕ್ಟ್ ಜಡ್ಜರಾದ ಮಿ॥ ಬಿ. ಸಿ. ಸ್ಮಿತ್‌ರವರು ಬರುವ ಅಕ್ಟೋಬರ ತಿಂಗಳ ತಾ ೧೮ರ ಲಾಗಾಯಿತು ಅಥವಾ ಅದರ ನಂತರ ೩ ತಿಂಗಳ ಹಕ್ಕಿನ ರಜೆಯನ್ನು ಪಡಿಯುವದರಿಂದ ಈಗ ಇಲ್ಲಿಯ ಅಕ್ಟಿಂಗ್ ಕಲೆಕ್ಟರರಾದ ಮಿ॥ ಕರ್ಗಿನ್‌ವನ್ ದೊರೆಗಳವರು ತಮ್ಮ ಈ ಅಕ್ಟಿಂಗ್ ಹುದ್ದೆಯ ಅವಧಿಯು ಮುಗಿದ ಮೇಲೆ ಇಲ್ಲಿಯ ಅಕ್ಟಿಂಗ್ ಡಿಸ್ಟ್ರಿಕ್ಟ್ ಮತ್ತು ಸೆಶನ್ಸ್ ಜಡ್ಜರಾಗಿ ನೇಮಿಸಲ್ಪಟ್ಟಿರುತ್ತಾರೆ.

ಡಿಸ್ಟ್ರಿಕ್ಟ ಕೋರ್ಟ ಹೆಡ್ ಕ್ಲಾರ್ಕ ಮ. ರಾ॥ ರಾ॥ ಪಿ. ಎನ್ ಭಂಡಾರಕರರವರು ಡಿಸ್ಟ್ರಿಕ್ಟ್ ಕೋರ್ಟಿನ ಶಿರಸ್ತೇದಾರರಾಗಿಯೂ ಅದೇ ಕೋರ್ಟಿನ ಟ್ರಾನ್ಸ್‌ಲೇಟರರಾಗಿದ್ದ ಮ॥ ರಾ॥ ರಾ॥ ಪಿ. ಶಂಕರನಾರಾಯಣರಾಯರು ಹೆಡ್ ಕ್ಲಾರ್ಕರಾಗಿಯೂ ಕಾಯಂ ಆಗಿ ನೇಮಿಸಲ್ಪಟ್ಟಿರುತ್ತಾರೆ.

ಇಲ್ಲಿಯ ಡಿಸ್ಟ್ರಿಕ್ಟ್ ಮುನಸೀಫರು ಕೆಲವು ದಿವಸಗಳ ರಜೆಯ ಮೇಲೆ ಬೆಂಗಳೂರತ್ತಕಡೆಗೆ ಹೋದವರು ನಿನ್ನೆ ದಿನ ಇಲ್ಲಿಗೆ ಬಂದಿರುತ್ತಾರೆ.

ಇಲ್ಲಿ ಕಳೆದ ಒಂದೆರಡು ತಿಂಗಳುಗಳಿಂದ ನಾಟಕವನ್ನಾಡುತ್ತಿದ್ದ ಶಿರಹಟ್ಟಿ ಕರ್ನಾಟಕ ಸಂಗೀತ ನಾಟಕ ಮಂಡಲಿಯವರು ಕಳೆದ ಆದಿತ್ಯವಾರ ತಮ್ಮ ಕಡೇಯ ನಾಟಕವನ್ನಾಡಿ ಪುತ್ತೂರಿಗೆ ತೆರಳಿರುತ್ತಾರೆ

ಮೈಸೂರು ಸಂಸ್ಥಾನಕ್ಕೆ ಸೇರಿದ ಸಮುದ್ರ ತೀರದ ಪಟ್ಟಣವು ಆ ದೇಶದ ವ್ಯಾಪಾರ ಅಭಿವೃದ್ಧಿಗಾಗಿ ಅಗತ್ಯವೆಂಬ ಅಭಿಪ್ರಾಯವು ಆ ದೇಶದ ದಿವಾನರಾದ ಸರ್. ಎಂ. ವಿಶ್ವೇಶ್ವರಯ್ಯನವರ ಆಲೋಚನೆಗೆ ಬಂದಿರುವದೆಂದೂ ಪಶ್ಚಿಮ ತೀರದ ಯಾವುದಾದರೊಂದು ಸಮೀಪವಾದ ಸ್ಥಾನದ ವರೆಗೆ ಲೋಹಮಾರ್ಗವನ್ನೇರ್ಪಡಿಸಬೇಕೆಂದು ಯೋಚಿಸಿರುವರೆಂದೂ, ಈ ವಿಷಯವನ್ನು ಇವರು ಇತ್ತಲಾಗೆ ಸಿಮ್ಲಾಕ್ಕೆ ಹೋಗಿದ್ದಾಗ ಇಂಡಿಯಾ ಸರಕಾರದವರೊಡನೆ ಪ್ರಸ್ತಾಪಿಸಿರುವರೆಂದೂ ಕೇಳುತ್ತೇವೆಂಬದಾಗಿ ಬೆಂಗಳೂರಿನ ಒಕ್ಕಲಿಗರ ಪತ್ರಿಕೆಯಲ್ಲಿದೆ ಮೈಸೂರು ಸಂಸ್ಥಾನದ ಸರಹದ್ದಿಗೆ ೨೦ ಮೈಲು ದೂರದಲ್ಲಿರುವ ೬೦೦೦ ಪ್ರಜಾಸಂಖ್ಯೆಯುಳ್ಳ ಭಟ್ಕಳವು ಇವರ ದೃಷ್ಟಿಪಥದಲ್ಲಿರುವಂತೆ ತೋರುವುದೆಂದು ಈ ಪತ್ರವೇ ಹೇಳುತ್ತಿರುವುದು ಅರಸಿಕೆರೆ ಮಂಗಳೂರು ರೈಲ್ವೆ ಮಾರ್ಗದ ಸಂಭವ ಹೇಗೆ?

ಕನ್ನಡ ಪತ್ರಗಳು. ಶಿವಮೊಗ್ಗಾದಲ್ಲಿ ಪ್ರತಿ ಬುಧವಾರವೂ ಪ್ರಕಟಿಸಲ್ಪಡುವ ಶಿವಮೊಗ್ಗಾ ವೃತ್ತಾಂತ, ಬಳ್ಳಾರಿಯಲ್ಲಿ ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವ ಭಾರತಿ, ಎಂಬ ಕನ್ನಡ ವಾರ ಪತ್ರಿಕೆಗಳನ್ನೂ ಉಡುಪಿಯಲ್ಲಿ ಕಳೆದ ತಿಂಗಳಿನಿಂದ ಪ್ರಕಟವಾಗುತ್ತಿರುವ ಬೋಧಿನಿ ಎಂಬ ಮಾಸ ಪತ್ರಿಕೆಯನ್ನೂ ಆದರಪೂರ್ವಕ ಸ್ವೀಕರಿಸಿರುತ್ತೇವೆ.

ಕೆನರಾ ಸಾಯಂಟಿಫಿಕ್ ಡಾಯಿಂಗ್ ಎಂಡ್ ಪ್ರಿಂಟಿಂಗ್ ವರ್ಕ್ಸ್ ಮಂಗಳೂರು. ಇವರ ಪ್ರಸಿದ್ಧ ಪತ್ರಿಕೆಯ ಪ್ರತಿಗಳನ್ನು ಈ ಸಂಚಿಕೆಯೊಂದಿಗೆ ವಾಚಕರ ಅವಗಾಹನೆ ಬಗ್ಯೆ ಕಳುಹಿಸಿಕೊಟ್ಟಿರುತ್ತೇವೆ ಪ್ರಿಂಟಿಂಗ್ ವರ್ಕ್ಸ್ ಅಂದ ಕೂಡಲೇ ಅಕ್ಷರ ಛಾಪಖಾನೆಗಳೆಂತ ಸಾಮಾನ್ಯವಾಗಿ ತಿಳಕೊಳ್ಳುವರು. ಆದ್ದರಿಂದ ಕಾಗದದಲ್ಲಿ ಅಚ್ಚುಹಾಕುವ ಕೆಲಸವನ್ನು ಕೈಕೊಳ್ಳುವ ಕಾರ್ಖಾನೆಯು ಇದಲ್ಲವೆಂಬುದನ್ನು ವಾಚಕರು ಈ ಕಂಪೆನಿಯ ಪ್ರಸಿದ್ಧಪತ್ರಿಕೆಯನ್ನು ಓದಿ ತಿಳಕೊಳ್ಳಬೇಕಾಗಿ ಅಪೇಕ್ಷಿಸುತ್ತೇವೆ. ರಂಗಾಯಿಸುವ ವೃತ್ತಿಯನ್ನು ಇವರಂತೆ ಶಾಸ್ತ್ರರೀತಿಯಿಂದ ಮಾಡುವಂಥವರು ಇಷ್ಟರ ತನಕ ಈ ಜಿಲ್ಲೆಯಲ್ಲಿರಲಿಲ್ಲ. ಸರಿಯಾಗಿ ರಂಗಾಯಿಸುವುದಕ್ಕೂ ಅಥವಾ ಇವರ ಪ್ರಸಿದ್ಧ ಪತ್ರಿಕೆಯಲ್ಲಿ ತೋರಿಬರುವಂಥಾ ಈ ವೃತ್ತಿಗೆ ಸಮ್ಮಂಧಪಟ್ಟ ಇತರ ಕೆಲಸವನ್ನು ನಡಿಸಲಿಕ್ಕೂ ವಸ್ತು ಪರಿಜ್ಞಾನ ಮಾಹಿತಿ, ರಸಾಯನಶಾಸ್ತ್ರ ಮಾಹಿತಿಯೂ ಅಗತ್ಯವಾಗಿ ಬೇಕಾಗಿವೆ. ಈ ಮಾಹಿತಿಯೇ ಸಾಲದು. ಇಂಥಾ ಮಾಹಿತಿಯನ್ನು ಸಮಯಾನ್ನುಸಾರ ಪರೀಕ್ಷಿಸಿ ನೋಡಿದ ಅನುಭವವೂ ಅಗತ್ಯವಾಗಿರುವುದು. ಶಾಸ್ತ್ರ ಮಾಹಿತಿಯನ್ನು ಬೇಕಾದಷ್ಟು [illegible]ದು ಹಲವು ವರುಷಗಳ ವರೆಗೆ ಇದರಲ್ಲಿ ಬೇಕಾ[illegible]ಭವವನ್ನು ಹೊಂದಿದಂಥವರು ಮಂಗಳೂರಲ್ಲಿ [illegible]ರ್ಖಾನೆಯನ್ನು ನಡಿಸುತ್ತಿದ್ದಾರೆ. ಈ [illegible] ಅಪೇಕ್ಷಿಸುವ ಈ ಕಂಪೆನಿಯವರಿಗೆ ಉದಾರಾಶ್ರಯವು ಸರ್ವರಿಂದಲೂ ಕೊಡಲ್ಪಡಾಗುವದೆಂಬುದಾಗಿ ನಂಬಿದ್ದೇವೆ.

ವಿವಿಧ ವಿಷಯಗಳು.

ಹಿಂದೂಸ್ಥಾನದ ಸಿಪಾಯಿಗಳ ಬಗ್ಯೆ ಮಿಠಾಯಿ ಮೊದಲಾದ ತಿಂಡಿ ಸಾಮಾಗ್ರಿಗಳನ್ನು ತಯ್ಯಾರಿಸಲು ಫ್ರಾನ್ಸಿನಲ್ಲಿ ಒಂದು ಮಿಠಾಯಿ ಕಾರ್ಖಾನೆಯನ್ನು ಸ್ಥಾಪಿಸುವ ಏರ್ಪಾಡು ನಡಿಯುತ್ತಲಿದೆ.

ನೆಲಗಡಲೆ ಹಿಂಡಿಯು ಕುದುರೆಗೆ ಒಳ್ಳೆಯ ಆಹಾರವೆಂದು ಕಂಡು ಹಿಡಿದಿರುವರು. ಇದರ ಜೊತೆಗೆ ಸ್ವಲ್ಪ ಒಣಹುಲ್ಲನ್ನೂ ಕಡ್ಡಿಗಳನ್ನೂ ಸೇರಿಸಿ ಹತ್ತು ವರುಷಗಳ ಕಾಲ ೨೫ ಕುದುರೆಗಳಿಗೆ ಕೊಟ್ಟು ತಿನ್ನಿಸಿ ಪ್ಯಾರಿಸ ಪಟ್ಟಣದಲ್ಲಿ ಪರೀಕ್ಷಿಸಿ ನೋಡಲು ಕುದುರೆಗಳು ಪುಷ್ಟಿಯಾಗಿರುವವೆಂಬ ವಿಷಯವು ಅರ್ಥಸಾಧಕ ಪತ್ರಿಕೆಯಲಿ ಪ್ರಕಟಿಸಲ್ಪಟ್ಟಿರುವುದು.

ಈಗಿನ ಮಹಾ ಯುದ್ಧದ ವೆಚ್ಚಕ್ಕಾಗಿ ೪॥ ಕೋಟಿ ರೂಪಾಯಿಗಳ ಸಾಲವನ್ನು ನೂರಕ್ಕೆ ೪ರಂತೆ ಬಡ್ಡಿಯಿಂದ ಎತ್ತಬೇಕೆಂದು ಸರಕಾರದವರು ನಿಶ್ಚಯಿಸಿರುವರಷ್ಟೆ. ಈ ಸಾಲವನ್ನು ಕೊಡಲು ನಮ್ಮ ದೇಶದ ಮುಖ್ಯಮುಖ್ಯ ಪಟ್ಟಣಗಳಲ್ಲಿಯ ಶ್ರೀಮಂತರು ಮುಂದಾಗಿ ಬರುತ್ತಿರುವರು ಈ ವರೆಗೆ ೩ ಕೋಟಿ ೬೩ ಲಕ್ಷ ರೂಪಾಯಿಗಳು ಕೂಡಿರುತ್ತವೆ. ಗ್ರಾಮಾಂತರಗಳಿಂದ ಸಹ ಇನ್ನೂ ಹಣವು ಬರುತ್ತಲಿದೆ. ಬೇಡಿದಕ್ಕಿಂತ ಹೆಚ್ಚಿಗೆ ಹಣವು ಕೂಡಿದ್ದು ಬಹಳ ಸಮಾಧಾನಕರವೂ ಸಂತೋಷಕರವೂ ಆಗಿದೆ.

ಜೀನಸು ಧಾರಣೆ. (ರಖಂ)

ಮುಸ್ಕಿ ಅಕ್ಕಿ	5— 6—0	5—13—6
ಗಾಡಿ ರಾಶಿ ,,	4—13—6	4—14—6
ಗುಡ್ಡು ,,	5— 0—0	5— 4—0
ಅಪ್ಪರ್ ಬೆಳ್ತಿಗೆ ,,	6— 4—0	6—12—0
ಗುಡ್ಡು ಬೆಳ್ತಿಗೆ ,,	5— 6—0	5—10—0
ರಂಗೂನು ಬೆಳ್ತಿಗೆ ಗೋಣಿ ೧ರ	9— 4—0	10— 0—0
ಗೋದಿ ಗೋಣಿ ೧ರ	11— 8—0	13— 0—0
ಹುರುಳಿ ಗೋಣಿ ೧ರ	6— 8—0	7—12—0
ಕಡಲೆ ಗೋಣಿ ೧ರ. ,,	8— 8—0	9— 8—0
ತೊಗರಿ ಗೋಣಿ ೧ರ	10— 0—0	11— 8—0
ತೊಗರಿ ಬೇಳೆ ಗೋಣಿ ೧ರ.	12— 8—0	16— 0—0
ಉದ್ದು ಗೋಣಿ ೧ರ		10— 0—0
ಊರುಬೆಲ್ಲ ಖಂಡಿ ೧ರ		75— 0—0
ಉಪ್ಪು ಗೋಣಿ ೧ರ	3—12—0	3—14—0
ಕೊಬ್ರಿ ಖಂಡಿ ೧ರ	70— 0—0	75— 0—0
ಕೊಬ್ರಿ ಹಿಂಡಿ ಖಂಡಿ ೧ರ		12— 0—0
ಎಳ್ಳಿಂಡಿ ಖಂಡಿ ೧ರ	17— 8—0	30— 0—0
ಕೊಬ್ರಿ ಎಣ್ಣೆ ಮುಡಿ ೧ರ.	5—14—0	6— 0—0
ಎಳ್ಳೆಣ್ಣೆ ಮುಡಿ ೧ರ (ಪುರಾಣದ)	4— 0—0	4— 2—0
ಚಿಮಿಣಿ ಎಣ್ಣೆ [illegible] ೧ರ	4— 8—0	5— 0—6
ಮೋರಿಸ್ ಸಕ್ಕರೆ ಮುಡಿ ೧ರ.		4— 2—0
ಕಾಫಿ ಖಂಡಿ ೧ರ.	2[illegible]— 0—0	[illegible]— 0—0
ಹೊಸಬೀಗೋಟ್ಟು ಖಂಡಿ ೧ರ.	94— 0—0	98— 0—0
ಹೊಸ ಗೇರುಬೀಜ ಮುಡಿ ೧ರ		2— 6—0
ಕಲ್ಲಿದ ಖಂಡಿ ೧ರ		50— 0—0
ಹಾಂಟ್ರ ಕಗದು ಮುಡಿ ೧ರ.		20— 0—0
ಹಾಂಟ್ರ ಪಾತ್ರೆಗಳು ಮುಡಿ ೧ರ.		[illegible]
[illegible] ೧ರ.		18—12—[illegible]
[illegible] ಮುಡಿ ೧ರ	5— 8—0	5—10—0

ನೋಟೀಸು

ಮಂಗಳೂರು ತಾಲೂಕು ವಾಮಂಜೂರ ಮಾಗಣೆ ಕೊಂಪದವು ಗ್ರಾಮದಲ್ಲಿ ಇರುವ ಸಾಂತು ಗೌಡನ ಮಗ ಸೊನುಗೌಡನು ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನಂದರೆ:—

ನನ್ನ ಅಣ್ಣ ಮೃತಪಟ್ಟ ಬಾಬ ಗೌಡನ ಮಗ ರಾಮ ಯಾನೆ ಅಪ್ಪು ಗೌಡನು ಸುಮಾರು ವರ್ಷಗಳಿಂದ ಬುದ್ಧಿ ಸ್ವಸ್ಥತೆ ಇಲ್ಲದವನಾಗಿದ್ದು ಆತನು ವ ನಮ್ಮ ಸ್ವಜಾತಿಯ ಕೆಲವರು ಕೂಡಿಕೊಂಡು ಇದೇ ಆಗೋಸ್ಟು ತಿಂಗಳ ತಾ. ೧೦ನೇ ಮಂಗಳ ವಾರ ದಿವಸ ಅಂದರೆ ಆಟಿ ಅಮವಾಸೆ ಸಮ್ಮಂಧ ಸಮುದ್ರ ಸ್ನಾನದ ಬಗ್ಗೆ ಸುರತಕಲ್ಲು ಗ್ರಾಮಕ್ಕೆ ಹೋದ್ದಲ್ಲಿ, ಆತನನ್ನು ನಮ್ಮ ಕೊಂಪದವು ಗ್ರಾಮದ ಮೋನು ಶೆಟ್ಟಿ ಅಳಿಯ ತನಿಯ ಶೆಟ್ಟಿ ಎಂಬವನು ತನ್ನ ಹೆಂಡತಿ ಮನೆಗೆ ಕೊಂಡುಹೋಗಿ ಆತನನ್ನು ಹೆದರಿಸಿ ಮತ್ತಾಯುದ್ದಿಂದಲೂ, ಬಲೋದ್ಬಂದಿಯಿಂದಲೂ ಕಾಗದಕ್ಕೆ ಆತನಿಂದ ಗೆರೆಗಳು ಹಾಕಿಸಿ, ವ ಆತನಿಂದ ಹೆಬ್ಬೆಟ್ಟಿನ ಗುರ್ತ ಸಹಾ ಮಾಡಿಸಿ ಅಲ್ಲಿಯ ಪೋಸ್ಟು ಮಾಸ್ಟರ ನಾರಾಯಣ ಶ್ಯಾನಭಾಗ, ವ ಮಾಜಿ ಪಟೇಲ ವೆಂಕಟಾಚಲಯ್ಯ ವ ಇನ್ನು ಕೆಲವು ಬಂಟರ ಜಾತಿಯವರು ಕೂಡಿಕೊಂಡು ಏನೋ ಒಂದು ತರದ ದಾಸ್ತೆಯನ್ನು ಸೃಷ್ಟನೆ ಮಾಡಿರುತ್ತಾರಾಗಿ ನಾನು ವರ್ತಮಾನ ಕೇಳುವದರಿಂದ ಹಾಗೆ ಸದರಿಯವರೆಲ್ಲರು ಒಟ್ಟಾಗಿ ಅನ್ಯಾಯದಿಂದ ಪ್ರತಿಫಲ ವಗೈರೆ ಕೊಡದೆ ಯಾವ ವಿಧದಿಂದಲೂ ತಯಾರಿಸಿ ಇರುವ ನೋಟು ಆಗಲಿ, ದಸ್ತೈವಜು ಆಗಲಿ, ವ ಅಥವಾ ಕೈ ಕಾಗದವಾಗಲಿ, ಯಾರೊಬ್ಬರಾದರೂ ಅವುಗಳ ಹಕ್ಕನ್ನು ಟ್ರೆನ್ಸ್‌ಫರ್ ಪಡಕೊಳ್ಳಬಾರದೆಂತಲೂ, ಹಾಗೆ ಟ್ರೆನ್ಸ್‌ಫರ್ ಮಾಡಿಕೊಂಡಲ್ಲಿ ಅಂಥವರಿಗೆ ಎಷ್ಟಕ್ಕೂ ಪ್ರಯೋಜನ ಸಿಕ್ಕಲಾರದೆಂತಲೂ, ಈ ಬಗೆಯಲ್ಲು ಸದರಿ ತನಿಯ ಸೆಟ್ಟಿಗೆ ವ ಸದರಿ ನಾರಾಯಣ ಶ್ಯಾನಭಾಗರಿಗೆ ಅಲಾಯ್ದಾ ಟಪ್ಪಾಲು ರಿಜಿಸ್ಟ್ರಿ ನೋಟೀಸು ಮೂಲಕ ತಿಳಿಸಿರುತ್ತೇನೆ. ಅದಲ್ಲದೆ ನಮ್ಮ ಕುಟುಂಬದಲ್ಲಿ ನಾನು ಹಿರಿಯವನಿದ್ದು ಕುಟುಂಬದ ಆಡಳಿತೆ ವಗೈರೆ ನಾನೇ ನಡಿಸಿಕೊಂಡು ಬರುವಂಥವನಾದ್ದರಿಂದಲೂ, ಆತಗೆ ಸಾಲ ಮಾಡುವ ಅಥವಾ ಸಾಲ ಪಡಕೊಳ್ಳುವ ಗರ್ಜು ಏನ್ನನ್ನಾದರೂ ಇಲ್ಲದೆ ಇರುವದರಿಂದ ವ ಆತನು ಈ ವರೇಗೂ ಸಾಲ ಪಡಕೊಂಡವನಲ್ಲವಾದ್ದರಿಂದ ಕೂಡಾ ಜ್ಯಾಹಿರಾತಿ ಒಗ್ಯೆ ನಡದ ಸಂಗತಿಗಳೆಷ್ಟು ಸರ್ವ ಜನರ ತಿಳುವಳಿಕೆ ಒಗ್ಯೆ ಬರಕೊಂಡಿರುತ್ತೇನೆ.

ತಾ. 19—8—1915. ||| ಈ ಮೂರು ಗೆರೆ ಸೊನುಗೌಡನ ರುಜು.

ಬೆಳ್ಳಿಬೆಟ್ಟು ಗುತ್ತಿನ ವಾಂಟಪ ಗೌಡನ ಸಾಕ್ಷಿ.

In the Court of the District Judge of South Canara.

O. P. No $\frac{83}{1915}$.

1. RAMA BAI
2. SHNTARAM
3. BHASKAR
4. RAMADAS

Minor children of Rama Bai, by their next friend mother I petr — *Petitioners.*

The first petitioner Rama Bai, has applied to this Court to grant her a succession certificate to collect the debts of her deceased husband U. Vishwanathaya, who died on 20—5—15 in the town of Mangalore and this application has been posted on the 16—9—15, at 11 A. M. for hearing.

Any body who has objections, must put in their petitions on that date.

Dated 25—8—15.

K. L. Narayana Rao,
Pleader for Petitioner

ನೋಟೀಸು

ದಕ್ಷಿಣಕನ್ನಡ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ.

ಒ. ಪಿ. ನಂ. $\frac{80}{1915}$.

ರಾದಮ್ಮ ಯಾನೆ ಪದ್ಮಾವತಿಅಮ್ಮ — **ಅರ್ಜೀದಾರಳು.**

ಮೃತಪಟ್ಟ ಕುಂಬಳೆ ಗೋಪಾಳ ಪ್ರಭುಗಳ ಸಾಲಗಳನ್ನು ವಸೂಲು ಮಾಡುವರೆ ಸದರಿ ಅರ್ಜಿದಾರಳು ಸದರಿ ಕೋರ್ಟಿನಲ್ಲಿ ಅರ್ಜಿ ಕೊಟ್ಟಿರುವದರಿಂದ ಆಕ್ಷೇಪ ಇದ್ದವರು ಅವರವರ ಆಕ್ಷೇಪಗಳನ್ನು ತಾ. 23—9—15ಕ್ಕೆ ಸದರಿ ಕೋರ್ಟಿನಲ್ಲಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

Mangalore,
24th August 1915

A. Varada Rau,
Vakil for Petitioner

ಡಾಕ್ಟರ್ ನವರತ್ನರ ಪಕ್ವಾಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ. 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ. ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ. ಪ್ರಯೋಗಿಸಲು ಸುಲಭವಾಗಿದೆ. ಪರಿಮಳ, ಕೆದರ ಬಣ್ಣ, ಬಹಳ ಅಗ್ಗ. ಕಪ್ ಮತ್ತು ಬ್ರಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ. 1. ಟಪ್ಪಾಲು ಚಾರ್ಜು 0—4—0.

Dr. Navaratna & Sons,
Kalbadevi Road **BOMBAY.**

ಏಜಂಟರು:— **ಡಿ. ಊಲನ್ ಮಾರ್ಟ್,**
ಮಾಧವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

ಹೊಸ ಪುಸ್ತಕಗಳು.

ಸುಭದ್ರೆ.

ನಮ್ಮ ದೇಶದಲ್ಲಿ ಈಚೀಚೆಗೆ ಪ್ರಬಲವಾಗಿ ಹಬ್ಬುತ್ತಿರುವ "ವರಶುಲ್ಕ"ವೆಂಬ ಪಿಶಾಚದ ಪ್ರಭಾವದಿಂದ ಅನೇಕ ಅನರ್ಥಗಳುಂಟಾಗುತ್ತಿರುವುದು ಸರ್ವರಿಗೂ ವಿದಿತವಾದ ಅಂಶವೇ ಆಗಿರುವುದು. ಇದೇ ವಿಚಾರವನ್ನು ಕುರಿತು ಈ ಹೊಸ ಕಥೆಯು ಬರೆಯಲ್ಪಟ್ಟಿರುವುದು. ಇದರಲ್ಲಿ ಒಬ್ಬ ಬಡ ಬ್ರಾಹ್ಮಣನು ವರದಕ್ಷಿಣೆಯನ್ನು ಕೊಡಲು ಅಸಮರ್ಥನಾದುದರಿಂದ ತನ್ನ ಮಗಳನ್ನು ಒಬ್ಬ ವಕ್ರಾಕಾರವುಳ್ಳ ಮುದುಕನಿಗೆ ಮಾರಲು ಪ್ರಯತ್ನಪಟ್ಟುದೂ, ಈ ವಿವಾಹವನ್ನು ತಪ್ಪಿಸಿ ಒಬ್ಬ ಶ್ರೀಮಂತನ ಮಗನು ಅವಳನ್ನು ಮದುವೆಮಾಡಿಕೊಂಡುದೂ, ಅನಂತರ ಆ ಹುಡುಗಿಗೆ ಹಿಂದೆ ಗೊತ್ತಾಗಿದ್ದ ಮುದುಕನ ದೆಸೆಯಿಂದ ಸಂಭವಿಸಿದ ಕಷ್ಟಗಳೂ ಹೃದಯಂಗಮವಾಗಿ ವರ್ಣಿಸಲ್ಪಟ್ಟಿವೆ. ಪ್ರತಿ ಕುಟುಂಬದಲ್ಲಿಯೂ ಈ ಪುಸ್ತಕದ ಒಂದು ಪ್ರತಿಯಾದರೂ ಇರಲೇಬೇಕಾದುದು. ಬೆಲೆ ೫ ಆಣೆ. ವಿ. ಪಿ. ಮೂಲಕ ೭ ಆಣೆ.

ಜಾನ್ ಪಿಯರ್ಪಾಂಟ್ ಮಾರ್ಗನ್ ಚರಿತ್ರೆ

ಈ ಲೋಕಹಿತೈಷಿಯಾದ ಕೋಟ್ಯಾಧೀಶನ ಮಗನನ್ನು ಈಗ ಕೆಲವು ದಿನಗಳ ಹಿಂದೆ ಒಬ್ಬ ಜರ್ಮನನು ಹೊಡೆದು ಹಾಕಲು ಪ್ರಯತ್ನಪಟ್ಟಿದ್ದುದು. ಇದು ವೃತ್ತಾಂತ ಪತ್ರಿಕೆಗಳಲ್ಲೆಲ್ಲಾ ತಿಳಿಸಲ್ಪಟ್ಟಿದ್ದಿತಷ್ಟೆ. ಈತನು ಯಾವ ರೀತಿಯಲ್ಲಿ ತನ್ನ ಧನವನ್ನು ವಿನಿಯೋಗ ಮಾಡುತ್ತಿದ್ದನೆಂಬುದೂ ಈತನಿಂದ ಲೋಕಕ್ಕೆ ಎಷ್ಟು ಉಪಕಾರವಾಗುತ್ತಿದ್ದಿತೆಂಬುದೂ ಈತನ ಚರಿತ್ರೆಯನ್ನೋದಿದರೆ ತಿಳಿಯಬರುವುದು. ಬೆಲೆ ೨ ಆಣೆ.

ಗ್ಲಾಡ್‌ಸ್ಟನ್‌ರ ಮಹಿಮೆ.

ಈ ಜಗದ್ವಿಖ್ಯಾತರಾದ ಇಂಗ್ಲೆಂಡ್ ದೇಶದ ಮಂತ್ರಿಶ್ರೇಷ್ಠರ ಗುಣವರ್ಣನೆಯು ಸರಳವಾದ ಶೈಲಿಯಲ್ಲಿ ಬರೆಯಲ್ಪಟ್ಟಿರುವುದು ಸರ್ವರಿಂದಲೂ ಆದರಣೆಗೆ ಅರ್ಹವಾದ ಪುಸ್ತಕ. ಬೆಲೆ ೧ ಆಣೆ.

ತೆನುಗು ಸಂಗೀತ ಕೃತಿದರ್ಪಣ ಸ್ವರಸಹಿತ ೧೦೦ ಕೀರ್ತನೆಗಳುಳ್ಳದ್ದು ೩-೬-೦
ಶ್ರೀ ಚಾಮರಾಜೇಂದ್ರ ಒಡೆಯರ ಚರಿತ್ರೆ ೧-೦-೦
ದೇಶಭಕ್ತಿ ೮ ಆಣೆ. ನವೀನ ಭರತಖಂಡ ೫ ಆಣೆ.

ವಿಳಾಸ: ಎಚ್. ಎನ್. ರಾವ್ ಅಂಡ್ ಬ್ರದರ್ಸ್,
ಚಿಕ್ಕಪೇಟೆ, ಬೆಂಗಳೂರು.

ತಿರುಪತಿ ಯಾತ್ರೆ! ತಿರುಪತಿ ಯಾತ್ರೆ!!

ವೇಂಕಟಗಿರಿ ಮಹಾತ್ಮೆ

ಮತ್ತು

ಪದ್ಮಾವತೀ ಕಲ್ಯಾಣವು.

ಚಿತ್ರಮಯ! ವಿಚಿತ್ರಮಯ!!

೯೫೫ ಪದ್ಯಗಳಿರುವ ೧೫ ಅಧ್ಯಾಯಗಳು ದಪ್ಪವಾದ ಕಾಗದ ಶಾರದಾ ಛಾಪಖಾನೆಯು ಲ್ಲಿ ಹೊಸದಾಗಿ ತಯಾರಿಸಿದ ನಾಜೂಕಾದ ಬೈಂಡು ವೆಂಕಟೇಶನು ಗಿರಿಯು ಲ್ಲಿ ನಡಿಸಿದ ಅದ್ಭುತ ಕಾರ್ಯಗಳು ವಾಚಕರಿಗೆ ಮನಃಖಚಿತವಾಗುವಂತೆ ಗ್ಲೇಜ್ಡ ಕಾಗದದಲ್ಲಿ ೧೫ ಹಾಫ್‌ಟೋನ್ ಬ್ಲಾಕುಗಳಿಂದ ಕೂಡಿವೆ

ಸಂಸ್ಕೃತ ಭವಿಷ್ಯತ್ಪುರಾಣದಿಂದ ಸ್ವರ್ಗಸ್ಥರಾದ ಕವಿ ಮುಲ್ಕಿ ರಾಮಕೃಷ್ಣಯ್ಯನವರಿಂದ ಭಾಮಿನಿ ಷಟ್ಪದಿಯಲ್ಲಿ ಕನ್ನಡಿಸಲ್ಪಟ್ಟಿತು. ಶುಲಭಶೈಲಿ ಸರ್ವರಿಗೂ ಅನುನಿತ್ಯದ ಪಠಣ ಪುಸ್ತಕವಾಗಿರಲು ಉಚಿತವಾಗಿರುವುದು. ಸ್ಯಾಜು ಡೆಮಿ ಅಷ್ಟಪತ್ರದ 168 ಪುಟಗಳು. ಕಿತ್ತಾನಾರಿನ ಬೈಂಡ ಪ್ರತಿಯೊಂದಕ್ಕೆ ರೂ. 1—8—0 ಟ. ಹಾಸಲು ಬೇರೆ

ವಿಳಾಸ — ಕವಿ ಎಂಡ್ ಸನ್ಸ್,
ಜನರಲ್ ಮರ್ಚಂಟ್ಸ್,
ಮಂಗಳೂರು, ದ. ಕ.
ಅಥವಾ
ಶಾರದಾ ಮುದ್ರಣಾಲಯ,
ಮಂಗಳೂರು, ದ. ಕ.

ಶಾಶ್ವತವಾದ ಆರೋಗ್ಯವನ್ನು
ಹೊಂದುವದಕ್ಕೆ ಸುಲಭವಾದ ಮಾರ್ಗವು

ಮದನಮಂಜರಿ ಮಾತ್ರೆಗಳು

ಉಪಯೋಗಿಸುವದೇ ಆಗಿರುವದು ' ಈ ಮಾತ್ರೆಗಳು ಅಜೀರ್ಣವು ಮಲಬಂಧ, ಮನೋವ್ಯಥೆ, ಜ್ಞಾಪಕಶಕ್ತಿ ಇಲ್ಲದಿರುವದು, ನರಗಳ ಬಲ ಹೀನತೆ, ಅಶಕ್ತಿ, ಸ್ವಪ್ನಸ್ಖಲಿತ, ಬಹುಮೂತ್ರ, ಮೂತ್ರಕೋಶ ಸಂಬಂಧವಾದ ವ್ಯಾಧಿಗಳು, ನಪುಂಸಕತ್ವ ಮುಂತಾದ ವ್ಯಾಧಿಗಳನ್ನು ಶೀಘ್ರದಲ್ಲಿಯೇ ಬೇರು ಸಹಿತವು ಕಿತ್ತು ಹಾಕಿ ಪುರುಷರಿಗೆ ಸಂತತ ಪುರುಷತ್ವವನ್ನು ಕೊಡುವವು ಇದು ಸಾಟಿಯಿಲ್ಲದ ಟಾನಿಕ್ಕು ಔಷಧಿಯಾಗಿರುತ್ತದೆ ಕಳೆದ 25 ವರುಷ ಕಾಲದಲ್ಲಿ ಸಾವಿರಾರು ರೋಗಿಗಳನ್ನು ಸ್ವಸ್ಥಪಡಿಸಿದೆ ನಿಮ್ಮನ್ನು ಕೂಡ ಸ್ವಸ್ಥ ಮಾಡುವದು 40 ಮಾತ್ರೆಗಳ ಡಬ್ಬಿ ಕ್ರಯ ರೂ. 1—0—0.

ಉಚಿತ ಕ್ರಯವು ಇಲ್ಲ ಹಾಸಲು ಇಲ್ಲ

144 ಪುಟಗಳುಳ್ಳ ವೈದ್ಯಸಾರಸಂಗ್ರಹವಾದ

ವೈದ್ಯವಿದ್ಯ

ಪುಸ್ತಕದಲ್ಲಿ ಶಾಶ್ವತವಾದ ಆರೋಗ್ಯವನ್ನು ಪಡೆಯಲು ಅತ್ಯವಶ್ಯವಾದ ವಿಷಯಗಳು ಭರಿತವಾಗಿವೆ. ನಿಮ್ಮ ವಿಳಾಸವನ್ನು ತಿಳಿಸಿದರೆ ನಿಮಗೆ ಒಂದು ಪ್ರತಿ ಉಚಿತವಾಗಿ ಕಳುಹಿಸಲ್ಪಡುವದು.

ರಾಜವೈದ್ಯ ನಾರಾಯಣಜಿ ಕೇಶವಜಿ
20 ಚೀನಾ ಬಜಾರ್ ರೋಡ್,
ಮದ್ರಾಸು.

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ

ಪಿ. ಸುಬ್ಬರಾಯರವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ಅತ್ಯುತ್ತಮವಾದ ಗೋರೋಚನ ತೊಲೆ 1ಕ್ಕೆ ರೂ. 6.
ಅತ್ಯುತ್ತಮವಾದ ಕುಂಕುಮಕೇಸರಿ ತೊಲೆ 1ಕ್ಕೆ ರೂ.
ಅತ್ಯುತ್ತಮವಾದ ಪಚ್ಚೆಕರ್ಪೂರ ತೊಲೆ 1ಕ್ಕೆ ರೂ. 2.

ಅಪೂರ್ವ ಸುವಾಸನಾ ದ್ರವ್ಯಗಳು:—ಅಮೂಲ್ಯವಾದ ಗುಲಾಬಿ ಅತ್ತರು, ಮಲ್ಲಿಗೆ, ಕಸಕಸ, ತಾಳಿಹೂವು, ದವನ, ಜಾಜಿ, ಸಂಭಾಗ್, ಹೀನಾ, ಇವೆಲ್ಲಾ ತೊಲೆ 1ಕ್ಕೆ ರೂ. 1—8—0 ಪ್ರಕಾರ ದೊರಕುತ್ತವೆ. ವಿ. ಪಿ. ಚಾರ್ಜು ಪ್ರತ್ಯೇಕ

ತಾಂಬೂಲವಿಹಾರವು:—ತಾಂಬೂಲವು ಉಪಯೋಗಿಸುವವರಿಗೆ ಅದು ಮುಖ್ಯವಾಗಿ ಮನಸ್ಸಿಗೆ ಸಂತೋಷವನ್ನುಂಟುಮಾಡುವ ಸುವಾಸನೆಯುಳ್ಳ ಅಡಿಕೆ ಹುಡಿ ಡಬ್ಬಾ 1ಕ್ಕೆ ೪ ಆಣೆ ವಿ. ಪಿ. 1ರಿಂದ 12 ಡಬ್ಬಿಗಳವರಿಗು 5 ಆಣೆಗಳು ಪ್ರತ್ಯೇಕವು.

ಸೋಡಾವಾಟರ್ ಪೌಡರು:—ಈ ಚೂರ್ಣದಲ್ಲಿ ಸ್ವಲ್ಪ ತೆಗೆದು ತಣ್ಣೀರಿನಲ್ಲಿ ಮಿಶ್ರಯ ಮಾಡಿದರೆ ಅದು ಸ್ವಯವಾದ ಸೋಡಾವಾಟರ್ ಆಗುತ್ತದೆ. ಒಂದು ಸೀಸೆ ಚೂರ್ಣವು 8 ಸೀಸೆ ಸೋಡಾವಾಟರ್ ಮಾಡಬಹುದು ಕ್ರಯ ಸೀಸೆ 1ಕ್ಕೆ 6 ಆಣೆಗಳು ವಿ. ಪಿ. 1ರಿಂದ 4 ಸೀಸೆಗಳವರಿಗೂ 5 ಆಣೆಗಳು ಪ್ರತ್ಯೇಕವು.

ಲಿಮೊನೆಡ್ ಪೌಡರ್:—ಈ ಚೂರ್ಣದಲ್ಲಿ ಸ್ವಲ್ಪ ತೆಗೆದು ತಣ್ಣೀರಿನಲ್ಲಿ ಮಿಶ್ರಯಮಾಡಿದರೆ ಅದು ರುಚಿಕರವಾದ ಲೆಮನೆಡ್ ಆಗುತ್ತದೆ ಒಂದು ಸೀಸೆಯಲ್ಲಿರುವ ಚೂರ್ಣವು ಸುಮಾರು 8 ದೊಡ್ಡ ಸೀಸೆಗಳ ಲಿಮೊನೆಡ್ ಮಾಡಬಹುದು. ಕ್ರಯ ಸೀಸೆ 1ಕ್ಕೆ 6 ಆಣೆಗಳು ವಿ. ಪಿ. 1ರಿಂದ 4 ಸೀಸೆಗಳವರಿಗು 5 ಆಣೆಗಳು ಪ್ರತ್ಯೇಕವು.

ಪನ್ನೀರು ಗುಲಾಬಿ:—ಅದು ಅರ್ಧ ಔನ್ಸು ಚಿಕ್ಕ ಸೀಸೆಯಲ್ಲಿ ಇದೆ. ಅದರಲ್ಲಿರುವ (ಗುಲಾಬಿ) ಪನ್ನೀರನ್ನು 3 ದೊಡ್ಡ ಸೀಸೆ ನೀರಿನಲ್ಲಿ ಸೇರಿಸಿದರೇ ಅವ್ವಲ್‌ರಖಂ ಗುಲಾಬಿ ಆಗುತ್ತದೆ ಸೀಸೆ 1ಕ್ಕೆ 8 ಆಣೆ ವಿ. ಪಿ. 1 ಸೀಸೆಯಿಂದ 3 ಸೀಸೆವರಿಗೂ 5 ಆಣೆಗಳು.

ಕಸ್ತೂರಿ ಮಿಶ್ರವಾದ ಲವಂಡರ್ ವಾಟರ್.

ಇದು ನಮ್ಮ ಔಷದ ಶಾಲೆಯಲ್ಲಿ ತಯಾರಿಸುವ ಅತಿ ಸುವಾಸನೆಯಾದ ವಸ್ತುವು. ವಿಲಾಯತಿಯಿಂದ ತರಸಿ ಮಾರುವದಲ್ಲ. ವಸ್ತ್ರಗಳಿಗೆ ಇದನ್ನು ಉಪಯೋಗಿಸಿದರೆ ಅತಿ ಸುಖವನ್ನು ಕೊಡುವದು ಇದನ್ನು 4 ತೊಟ್ಟುಗಳು ವಸ್ತ್ರಗಳಿಗೆ ಹಾಕಿದರೆ ಅಂಗಡಿಗಳಲ್ಲಿ ಮಾರುವ ಲವಂಡರ್ ವಾಟರನ್ನು 20 ತೊಟ್ಟು ಬಿಟ್ಟರೆ ಎಷ್ಟು ಸುವಾಸನೆಯಾಗುವುದೊ ಅದಕ್ಕಿಂತಲು ಹೆಚ್ಚು ಸುವಾಸನೆಯನ್ನು ನಮ್ಮ ಕಸ್ತೂರಿ ಲವಂಡರ್ ವಾಟರ್ ಮನೋರಮ್ಯವಾದ ವಾಸನೆಯನ್ನು ಕೊಡುವದು. ಉಪಯೋಗಿಸಿದವರು ಸುತ್ತಲು ಬಹಳಾವತ್ತುರವ್ಯವಾದ ವಾಸನೆಯನ್ನು ಬೀಸುವಂತೆ ಮಾಡುವದು ಅರ್ಧ ಔನ್ಸನ್ನು ಬುಡ್ಡಿಗಳಲ್ಲಿ ಮಾರಲ್ಪಡುವದು. ಕ್ರಯ ಬುಡ್ಡಿ 1ಕ್ಕೆ 8 ಆಣೆ 1ರಿಂದ 6 ಬುಡ್ಡಿಗಳಿಗೆ ವಿ. ಪಿ. ಖರ್ಚು ೫ ಆಣೆ ಬೀಳುವದು.

☞ ಈ ಪ್ರಾಂತ್ಯದಲ್ಲಿ ಕನ್ನಡ, ತೆಲುಗು, ಮಲಿಯಾಳ ಈ ಭಾಷೆಗಳು ತಿಳಿಯುವದಿಲ್ಲವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಿಳುನಲ್ಲಾಗಲೀ ಸ್ಪುಟವಾಗಿ ತಿಳಿಯುವಂತೆ ಬರಿಯಬೇಕು.

MY ADDRESS.
P. SUBBA ROY,
Ayurvedic Pharmacy,
Sri Perumalkoil,
SANNATHY, TANJORE.

ನಮ್ಮ ವಿಳಾಸ:—
ಪಿ. ಸುಬ್ಬರಾಯ
ಆಯುರ್ವೇದ ಔಷಧಶಾಲೆ
ಶ್ರೀ ಪೆರುಮಾಳ್ ಕೋಯಿಲ್ ಸನ್ನಿಧಿ
[illegible]

ಅಮೃತಾಂಜನ.

ಜಗತ್ಪ್ರಸಿದ್ಧವಾದ ಬೇನೆಹಾರಿ ಮುಲಾಮು

ಇದರ ಉಪಯೋಗದಿಂದ:—ವಾತ, ಸಂಧಿವಾತ, ತಲೆನೋವು, ಶಿರೋಧಾರ, ಅರ್ಧಾಂಗ ವಾಯು, ಉಳುಕು, ಎದೆ ನೋವು, ಸೊಂಟದ ನೋವು, ಶೀತ, ಕೆಮ್ಮು, ದಂತಶೂಲೆ, ಮೂಲವ್ಯಾಧಿ, ಚೇಳು ಕಡಿತ, ಆನೆಗಾಲು, ಸುಟ್ಟ ಗಾಯ, ಮೊದಲಾದ ಎಲ್ಲಾ ತರದ ನೋವುಗಳ ಮೇಲೆ ದಿವ್ಯ ಔಷಧವಾಗಿರುತ್ತದೆ. ಸಾವಿರಾರು ಡಾಕ್ಟರರೂ, ಇದಕ್ಕೆ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ಪ್ರತಿ ತಿಂಗಳಲ್ಲೂ 25,000 ಬಾಟ್ಲಿಗಳು ಮಾರಲ್ಪಡುತ್ತವೆ. ಬಾಟ್ಲಿ ಒಂದರ ಕಿಮ್ಮತು ಆಣೆ 8 ಡಜನ್ 1ಕ್ಕೆ ರೂ. 5—4—0. ವಿ. ಪಿ. ಖರ್ಚು ಪ್ರತ್ಯೇಕ.

ಎಚ್ಚರಿಕೆ:—ಅಮೃತಾಂಜನವನ್ನು ಪಡಕೊಳ್ಳುವಾಗ ಸುಂದರವಾದ ಮತ್ತು ಹಲವು ಛಾವಣಿಗಳುಳ್ಳ ಕರಡಿಗೆ ಸಮೇತ ಪಡಕೊಳ್ಳಿರಿ.

ಗಜಕರ್ಣದ ಮುಲಾಮು.

ಮೂರು ಸರ್ತಿ ಹಾಗಿಸುವದರೊಳಗೆ ಗಜಕರ್ಣ ನಾಶವಾಗಿ ಹೋಗುವದು ಇದರಿಂದ ಉರಿಯುಂಟಾಗುವದಿಲ್ಲ. ಚರ್ಮವು ಕಪ್ಪಾಗುವದಿಲ್ಲ. ಇದುವರೆಗೆ ಒಂದು ಮಿಲಿಯ ಡಬ್ಬಿಗಳು ಮಾರಲ್ಪಟ್ಟವು. ರಾಜಾರಾಣಿ ಟ್ರೇಡ್ ಮಾರ್ಕ್ 0—6—0. 12 ಡಬ್ಬಿಗಳಿಗೆ 3—8—0. ವಿ. ಪಿ. ಪ್ರತ್ಯೇಕ.

ದಂತಮಂಜನ.

ರಾಜಾರಾಣಿ ಟ್ರೇಡ್ ಮಾರ್ಕ್

ಈ ಮಂಜನದಿಂದ ಹಲ್ಲುಗಳನ್ನು ದಿನಾಗಲೂ ತಿಕ್ಕುವದರಿಂದ ಹಲ್ಲುನೋವು, ಹಲ್ಲುಗಳಿಂದ ಬರುವ ರಕ್ತ, ಹಲ್ಲುಗಳ ವಾಸನೆ, ಮುಂತಾದವುಗಳೆಲ್ಲಾ ನಿಲ್ಲುತ್ತವೆ. ಇದರಲ್ಲಿ ಹಲವು ನಮೂನೆಯ ಔಷಧಗಳಿವೆ. ಬರೀ ಚೋಕಿನ ಹುಡಿ ಅಲ್ಲ. ಡಬ್ಬಿ 1ಕ್ಕೆ 0—2—0. ವಿ. ಪಿ. ಪ್ರತ್ಯೇಕ.

ಮೋಹಿನಿ ತೈಲ.

ಈಗ ಹಲವು ನಮೂನೆಯ ತೈಲಗಳು ಉಪಯೋಗಿಸಿದವರು ಈ ನಮ್ಮ ಸುಗಂಧಮಯವಾದ ಮೋಹಿನಿ ತೈಲವನ್ನು ಒಂದು ಸಾರಿ ಉಪಯೋಗಿಸಿ ನೋಡಿರಿ. ಇದರಲ್ಲಿ ಹ್ವೈಟ್ ಒಯಿಲ್ ಇಲ್ಲಾ: ಇದು ಗಿಡಮೂಲಿಕೆಗಳಿಂದಲೂ ಬದಾಮಿನ ಎಣ್ಣೆಯಿಂದಲೂ ತಯಾರಿಸಲ್ಪಟ್ಟಿದೆ. ಇದರಿಂದ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ ಬೆಳೆಯುವವು.

ಬಾಟ್ಲಿ ಒಂದರ ಕಿಮ್ಮತು ಆಣೆ 0—12—0.

ಸುಂದರಿ ಮುಲಾಮು.

ಮುದ್ದಣಗಳನ್ನು ನಾಶಪಡಿಸಿ ಮುಖವನ್ನು ಸುಂದರಗೊಳಿಸುವದು. ಡಬ್ಬಿ 1ಕ್ಕೆ ರೂ 0—8—0.

ವಜ್ರಗುಟಿಕ.

ಧಾತುಪುಷ್ಟಿ, ಧಾತುವೃದ್ಧಿ, ಶಕ್ತಿವರ್ಧಕ. 20 ಗುಳಿಗೆಗಳ ಡಬ್ಬಿ ಒಂದರ ರೂ. 1—0—0.

ಕೆ. ನಟರಾಜನ್ ಎಡಿಟರ್, ಇಂಡಿಯನ್ ಸೋಸಿಯಲ್ ರಿಫೋರ್ಮರ್:—ಅಮೃತಾಂಜನ ಎಲ್ಲಾ ಔಷಧಗಳಿಗಿಂತಲೂ ಬಹಳ ಉತ್ತಮವಾದ ಔಷಧ.

ಡಬ್ಲ್ಯು ಮೆಕ್ಸವೆಲ್, ಮೈಸೂರು:—ಅಮೃತಾಂಜನದಿಂದ ಎಂಥಾ ಕಠಿಣವಾದ ವಾತ ನೋವಾದರೂ ನಿಲ್ಲುತ್ತದೆ.

ಆರ್. ಆರ್. ಗಂಗೋಲಿ:—ಅಮೃತಾಂಜನ ವಾತ, ತಲೆನೋವುಗಳ ಮೇಲೆ ದಿವ್ಯ ಔಷಧ.

ಡಾಕ್ಟರ್ ಡಾಂಡೇಕರ್, ಎಲ್. ಎಮ್. ಎಂಡ್ ಎಸ್:—ಅಮೃತಾಂಜನ ಎಲ್ಲಾ ನೋವುಗಳ ಮೇಲೆ ದಿವ್ಯ ಔಷಧ.

ನಮ್ಮ ಔಷಧಗಳನ್ನು ಪಡಕೊಳ್ಳುವಾಗ ಅಮೃತಾಂಜನ ಡಿಪೋ, ಮುಂಬಯಿ ಎಂಬ ಹೆಸರನ್ನು ಓದಿನೋಡಿ ಪಡಕೊಳ್ಳಿರಿ.

ಅಮೃತಾಂಜನ ರಖಮಾಗಿಯೂ, ಚಿಲ್ಲರೆಯಾಗಿಯೂ ಬೇಕಾದವರು ನಮ್ಮ ಮುಂಬಯಿ ಆಫೀಸಿಗೆನೇ ಬರಿಯಬೇಕು. ಮದ್ರಾಸು ಆಫೀಸಿನವರು ರಖಮಾಗಿ ಅಮೃತಾಂಜನ ರವಾನಿಸಿ ಕೊಡುವ ಏರ್ಪಾಡು ಮಾಡಲಿಲ್ಲ.

ಮಂಗಳೂರಲ್ಲಿ—ಎಲ್ಲಾ ಔಷಧಗಳು ಈ ಕೆಳಗಿನ ಕಂಪೆನಿಗಳಲ್ಲಿ ಸಿಕ್ಕುವವು.

ಮಂಗಳೂರು ಟ್ರೇಡಿಂಗ್ ಎಸ್ಸೋಶಿಯೇಶನ್, ಪರ್ಸ್ ಎಂಡ್ ಸನ್ಸ್, ದಿ ಊಲನ್ ಮಾರ್ಟ್, ಕೊಚ್ಚಿಕಾರ ಬ್ರದರ್ಸ್ ಉಡ್ಪಿ.

ಅಮೃತಾಂಜನ ಡಿಪೋ.

6, 7, ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ ಟೌನ್, ಮದ್ರಾಸು.

109 ಫ್ರೇಯರ್ ರೋಡ, ಮುಂಬಯಿ.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ.

೧ ಕುಟುಂಬಜೀವನಿ—ಎಲ್ಲಾ ರೋಗಗಳನ್ನು ತ್ವರೆಯಾಗಿ ಗುಣಪಡಿಸುವದು 16 ಔಷಧಗಳ ಸಂಗ್ರಹದ ಪೆಟ್ಟಿಗೆ 1ಕ್ಕೆ 8—0—0

೨ ಶತಮೂಲಿಕಾ ಅಮರಸಂಜೀವನಿ—ಈ ಟೋನಿಕ್ ಸ್ತ್ರೀಪುರುಷರಿಬ್ಬರಿಗೂ ಪುಷ್ಟಿಯನ್ನು ಉಂಟುಮಾಡಿ ಆಮರತ್ವವನ್ನು ಕೊಡುತ್ತದೆ ಬಾಟ್ಲಿ 1ಕ್ಕೆ 1—0—0

೩ ಬಾಲಸಂಜೀವನಿ—ಮಧುರ ಟೋನಿಕ್ ಅಶಕ್ತ ಬಾಲಕರಿಗೆ ಸಶಕ್ತರಾಗಿ ಮಾಡಿ ವರ್ಧಮಾನ ಚಂದ್ರನಂತೆ ಬೆಳಗಿಸುತ್ತದೆ ಬಾಟ್ಲಿ 1ಕ್ಕೆ 0—12—0

೪ ವಸಂತ ಕುಸುಮಾಕರ—ಈ ಸುವಾಸಿತ ತೈಲವು ಕೇಶ ವೃದ್ಧಿಮಾಡಿ ಶಿರೋರೋಗ ನೇತ್ರರೋಗಗಳನ್ನು ಶಮನಮಾಡಿ ಮೆದುಳನ್ನು ತಂಪು ಮಾಡಿ ಜ್ಞಾನಶಕ್ತಿ ಹೆಚ್ಚಿಸಿ, ಬುದ್ಧಿಭ್ರಮಣವನ್ನು ಗುಣಮಾಡುತ್ತದೆ ಬಾಟ್ಲಿ 1ಕ್ಕೆ 1—0—0

೫ ಸುದರ್ಶನಮಾಲಿನಿ—ಈ ಸಿದ್ಧೌಷಧವು ಮೇಹವ್ರಣ ಇತ್ಯಾದಿ ಎಲ್ಲಾ ದುಸಾಧ್ಯ ವ್ರಣಗಳನ್ನು 7 8 ದಿವಸಗಳಲ್ಲಿ ಪೂರ್ಣ ಗುಣಪಡಿಸುವದು ಕ್ರಯ 4—0—0

೬ ಗರುಡಧ್ವಜ—ಇದು ಸರ್ಪ ಹುಚ್ಚುನಾಯಿ, ಚೇಳು ಇಲಿ ಇತ್ಯಾದಿ ಸರ್ವ ಕಠಿಣ ವಿಷಗಳಿಗೆ ಸಂಜೀವನವಾಗಿರುತ್ತದೆ ಅನುಭವಸಿದ್ಧ 2—0—0

೭ ಆನಂದವನವಿಲಾಸ—ಇದು ಸ್ತ್ರೀಪುರುಷರ ಎಲ್ಲಾ ಬಹುಮೂತ್ರ ರೋಗವನ್ನು 48 ದಿವಸಗಳಲ್ಲಿ ಪೂರ್ಣ ಗುಣಪಡಿಸುತ್ತದೆ ಪೂರ್ಣ ಔಷಧಕ್ಕೆ 5—0—0

ನಮ್ಮ ಡಿಸ್ಪೆನ್ಸರಿಯಲ್ಲಿ ಸಿದ್ಧಕಲ್ಪ ರೀತಿಯಾಗಿ ಪ್ರಯೋಗಗಳಿಂದ ತಯಾರಿಸಿದ ಪೌಡರ ಮಾತ್ರೆಗಳು, ಲೋಹ ಚೂರ್ಣಗಳು ತೈಲ ಘೃತಗಳು ಆಸವಾರಿಷ್ಟಗಳೂ ತುಂಬಾ ಇರುತ್ತವೆ ಕ್ರಯವಿಲ್ಲದ ನಮ್ಮ ಕೆಟಲಗನ್ನು ತರಿಸಿಕೊಳ್ಳಿರಿ ಏಜಂಟರು ಬೇಕು ಹೆಚ್ಚು ಡಿಸ್‌ಕೌಂಟು ಕೊಡುವದು.

ಎಮ್ ಎ. ಶಂಕರ್, ಉಗ್ರಾಣಕಾರ್, ಮೆನೇಜರ್.

ಸೆನ್ ಸೆನ್. SEN SEN.)

ಕಂಠದಲ್ಲಿ ಉಂಟಾಗುವ ದೋಷಗಳನ್ನು ನಿವಾರಿಸಿ ಸುಖವನ್ನೀಯುವುದು

ಶ್ವಾಸದಲ್ಲಿ ಸುವಾಸನೆಯನ್ನುಂಟುಮಾಡುವುದು.

ಸೆನ್ ಸೆನ್ ಇದರ ಗುಣವು ಇಷ್ಟೇ ಅಲ್ಲ ಆರೋಗ್ಯವನ್ನು ಸಾಧಿಸುತ್ತದೆ ಬಹಳ ಮನೋಹರವಾದ ರುಚಿಯುಳ್ಳದ್ದಾಗಿದೆ ಸ್ವರವನ್ನು ಸ್ಪಷ್ಟಗೊಳಿಸಿ ಬಲಪಡಿಸುವದು. ಸಂಗೀತಗಾರರಿಗೆ, ಪ್ರಸಂಗಗಳನ್ನು ಮಾಡುವ ಉಪದೇಶಕರಿಗೆ ಭಾಷಣಗಳನ್ನು ದೊಡ್ಡ ದೊಡ್ಡ ಸಭೆಗಳಲ್ಲಿ ಮಾಡುವವರಿಗೆ ಇದು ಬಹಳ ಉಪಯೋಗಕರವಾಗಿರುವುದು

ಸೆನ್ ಸೆನ್—ಇದರ ಕೆಲವು ಹರಳುಗಳನ್ನು ವೀಳ್ಯದೊಂದಿಗೆ ಸೇವಿಸಿದರೆ ವೀಳ್ಯದ ರುಚಿಯು ಬಹಳ ಸೊಗಸಾಗುವುದು

ಸೆನ್ ಸೆನ್ ಅಜೀರ್ಣ ಮೊದಲಾದ ಜೀರ್ಣಕೋಶದ ದೋಷಗಳಿಗೆಲ್ಲಾ ದಿವ್ಯ ಔಷಧಿಯಾಗಿರುವುದು ಕಂಠದಲ್ಲಿ ಬಹಳ ಶೀತಳವಾದ ಮತ್ತು ಸುಖಕರವಾದ ಭಾವನೆಯು ಇದರ ಸೇವನೆಯಿಂದ ಉಂಟಾಗುತ್ತದೆ ಬೀಡಿ, ಚುಟ್ಟಾ ವಗೈರೆಗಳನ್ನು ಸೇದಿದ ನಂತರ ಸೆನ್‌ಸೆನ್‌ನ್ನು ಉಪಯೋಗಿಸಿದರೆ ಬಾಯಿಯ ಕೆಟ್ಟ ವಾಸನೆಯನ್ನು ಹೋಗಗೊಳಿಸಿ ಸುವಾಸನೆಯನ್ನುಂಟುಮಾಡುವುದು 3 ಆಣೆ ಕ್ರಯದ ಒಂದು 'ಪೆಕೆಟನ್ನು' ಬಹಳ ಕಾಲ ಉಪಯೋಗಿಸಬಹುದು

ಅರ್ಜಿಯು ಸ್ಟಾಂಪನ್ನು ಕಳುಹಿಸಿಕೊಟ್ಟರೆ ನಮೂನೆ ಪೆಕೆಟನ್ನು ಉಚಿತವಾಗಿ ಕಳುಹಿಸಿಕೊಡುವೆವು

Address — ನಮ್ಮ ವಿಳಾಸ —

Muller & Phipps ಮುಲ್ಲರ್ ಎಂಡ್ ಫಿಪ್ಸ್,

21 Sankurama Chetty Street 21 ಸಂಕುರಾಮಚೆಟ್ಟಿ ರಸ್ತೆ,

MADRAS. ಮದರಾಸು

ನ್ಯಾಯದರ್ಪಣ.

ಹೊಸ ಪುಸ್ತಕ

ಇಂಡಿಯಾ ದೇಶದ ಸಮಸ್ತ ಹಿಂದೂ ಜನರ ಸಾಮಾನ್ಯ ಧರ್ಮಗಳು, ಅವುಗಳನ್ನು ಅತಿಕ್ರಮಿಸಿ ನಡೆಯುವವರಿಗೆ ಉಂಟಾಗತಕ್ಕ ಫಲಗಳು, ಇವುಗಳನ್ನು ಕುರಿತು, ಗವರ್ನಮೆಂಟಿನವರಿಂದ ಅನೇಕ ಆಕ್ಟುಗಳು, ರೆಗ್ಯುಲೇಷನ್‌ಗಳು, ಶಾಸನಗಳು ವಗೈರೆ ವಿಧಾಯಕವಾಗಿ ಇರುತ್ತೆ ಇವುಗಳೆಲ್ಲಾ ಇಂಗ್ಲೀಷ್ ಭಾಷೆಯಲ್ಲಿಯೇ ಅಪಾರವಾಗಿ ಇರುತ್ತವೆ ಇವುಗಳಲ್ಲಿ, "ಕಂಟ್ರಾಕ್ಟ್" ಅಂದರೆ ಕರಾರುಗಳು, "ಬ್ರೀಚ್ ಆಫ್ ಕಂಟ್ರಾಕ್ಟ್" ಅಂದರೆ ಒಪ್ಪಂದಕ್ಕೆ ತಪ್ಪಿ ನಡೆಯೋಣ, ದ್ರೋಹ, ಲಿಮಿಟೇಷನ್, ಖಾಸಾ ಕಾಗದ, ರಿಜಿಸ್ಟ್ರೇಷನ್, ಸಿವಿಲ್ ಪ್ರೊಸಿಡ್ಯೂರ್, ಕ್ರಿಮಿನಲ್ ಪ್ರೊಸಿಡ್ಯೂರ್, ಪೀನಲ್ ಕೋಡ್, ಹಿಂದೂ ಲಾ, ಮುಂತಾದ ಧರ್ಮಶಾಸ್ತ್ರಗಳಿಂದ, ಮನುಷ್ಯರ ನಿತ್ಯಾಚರಣೆಗೆ ಅವಶ್ಯಕವಾದ ಲೌಕಿಕ ವ್ಯವಹಾರ ಧರ್ಮಗಳ ಮುಖ್ಯ ಸಂಗತಿಗಳನ್ನೆಲ್ಲಾ ಆರಿಸಿ ಈ ಸಣ್ಣ ಪುಸ್ತಕವನ್ನು ರಚಿಸಿರುತ್ತೆ ಮತ್ತು ವಾಡಿಕೆಯಲ್ಲಿ ಇರತಕ್ಕ ನಾನಾ ವಿಧಗಳಾದ ದಸ್ತೈವಜುಗಳ ಅನೇಕ ನಮೂನೆಗಳು ಮತ್ತು ಕ್ರಿಮಿನಲ್ ರೆವಿನ್ಯೂ ಗ್ರಾಮ ಮುನಸೀಫ್ ಕೋರ್ಟುಗಳ ಮುಂದಿನ ದಾವಾ ವಗೈರೆ ಅರ್ಜಿಗಳ ಮಾದರಿಗಳು ಅಡಕವಾಗಿ ಇರುತ್ತೆ. ಬೆಲೆ 1—8—0. ವಿ. ಪಿ. 1—12—0.

ಲಾಯರ್ ಯಂ ಯಸ್. ನಂಜಪ್ಪನವರು,

ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

11 ಪುಸ್ತಕಗಳನ್ನು ಒಟ್ಟಾಗಿ ತರಿಸಿಕೊಂಡರೆ ಪೋಸ್ಟೇಜು ಸೇರಿ 15—0—0 ಆಗುತ್ತೆ

ಚುರುಕಾದ ಏಜಂಟರು ಬೇಕಾಗಿರುವರು! ಧಾರಾಳವಾದ ಕಮಿಶನ್!! ಮುಂದಿನ ಅಭಿವೃದ್ಧಿಗೆ ತುಂಬಾ ಅವಕಾಶವುಳ್ಳ ವೃತ್ತಿ!!!

ಮುಂಬಾಯಿ ಲೈಫ್ ಎಸ್ಯುರೆನ್ಸ್ ಕಂಪೆನಿ,

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು).

ಪ್ರಧಾನ ಆಫೀಸು ಮುಂಬಯಿ.

ಅಧ್ಯಕ್ಷರು:—ಬಹುಮಾನಪಟ್ಟ ಮೆ। ಲಲ್ಲುಬಾಯಿ ಸಾಮಲ್ ದಾಸರವರು, ಸಿ ಐ ಇ ಜೆ ಪಿ

ಎಕ್ಚುವೆರಿ:—ಮೆ। ಜೋರ್ಜ್ ಕಿಂಗ್ ಎಫ್ ಎಫ್ ಎ. ಎಫ್. ಐ. ಎ.

ಮೆಡಿಕಲ್ ರಿಫರಿಗಳು.—ಡಾಕ್ಟರ್ ಆರ್ ರಾವ್, ಎಮ್. ಡಿ. ಡಿ ಎಸ್ ಸಿ (ಲಂಡನ್)

ಗೌರವಾರ್ಥಕ ಮ್ಯಾನೇಜರ್:—ರಾ। ಕೆ ಸುಬ್ರಮಣ್ಯಯ್ಯರ್, ಬಿ. ಎ. ಜಿ. ಪಿ. ಎಫ್ ಎಸ್ ಎ. ಎ (ಲಂಡನ್)

ವಿಮೆದಾರರ ವಿಮೆ ಪತ್ರಗಳ ಶರ್ತಗಳ ಪ್ರಕಾರ ಸಿಕ್ಕುವ ಹಣವು ಈ ಕಂಪೆನಿಯಲ್ಲಿ ಬಹಳ ಭದ್ರವಾಗಿರುವದೆಂತ ಲೆಕ್ಕ ವ್ಯವಸ್ಥಾಪಕರು ಅಭಿಪ್ರಾಯಪಟ್ಟಿರುವರು.

ತರುಣಾವಸ್ಥೆಯಲ್ಲಿರುವ ಈ ಕಂಪೆನಿಯು ಮುಂದಕ್ಕೆ ಇನ್ನೂ ಬಹಳ ಅಭಿವೃದ್ಧಿಯನ್ನು ಹೊಂದುವ ವಿಶೇಷ ಸಂಭವಗಳಿಂದ ಕೂಡಿರುವುದೆಂದು "ಕೊಮರ್ಸ್" ಎಂಬ ಪತ್ರಿಕೆಯು ಅಭಿಪ್ರಾಯವಾಗಿರುವುದು

ಇಂಡಿಯಾ ಸರಕಾರದ ಬದ್ರತೆಯಲ್ಲಿ ರೂ 1,55,000ವನ್ನು ಠೇವಣಾತಿಯಾಗಿಟ್ಟಿರುವದು

ಹಣ ಕಳುಹಿಸಿಕೊಡುವ ಏಜನ್ಸಿ ಬಗ್ಗೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ:—

ಕೊಟ್ಟಿಕಾರ್ ಬ್ರದರ್ಸ್, ಉಡುಪಿ,

ಕನ್ನಡಾ, ಮಲೆಬಾರ, ತಿರುವಾಂಕೋಡು, ಮತ್ತು ಕೊಚ್ಚಿ ಪ್ರಾಂತ್ಯಗಳ ಪ್ರಮುಖ್ಯ ಏಜಂಟರು.

ಸೂಚನೆ — ಮಂಗಳೂರಲ್ಲಿರುವ ಈ ಕಂಪೆನಿಯ ವಿಮೇದಾರರು ತಮ್ಮ ವಿಮೆ ಮೊಬಲಗುಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲ ಕೊಟ್ಟು ಆ ಬಗ್ಗೆ ರಶೀದಿಯನ್ನು ಕೊಟ್ಟಿಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು

ಉಡುಪಿ, 3—7—1914.

ಮಹಾಶಯರೆ!

ಮುಂಬಾಯಿ ಲೈಫ್ ಎಸ್ಯುರೆನ್ಸ್ ಕಂಪೆನಿ ಎಂಬುವ ಜೀವವಿಮೆ ಉತ್ತರಾಯಿಸುವ ಸಂಘದ ಬಗ್ಗೆ ತಾವು ಏನೊಂದೂ ವಿಳಂಬವಿಲ್ಲದೆ, ರೂ 986—10—0ನ್ನು ನನಗೆ ಪಾವತಿಮಾಡಿದುದಕ್ಕಾಗಿ ಅತೀ ಉಪಕಾರವಾಯಿತು ಸದರಿ ಪೊಲಿಸಿಯನ್ನು ಕುರಿತಾದ ಅಗತ್ಯವಾದ ಪತ್ರಗಳನ್ನು ಅವರಿಗೆ ಮುಟ್ಟಿಸಿದ ಮೂರೇ ದಿನಗಳೊಳಗಾಗಿ ನನಗೆ ಸಲ್ಲತಕ್ಕ ವಿಮೆಯ ಐವಜನ್ನು ತಮ್ಮ ಕಂಪೆನಿಯ ಡೈರೆಕ್ಟರುಗಳು ನನಗೆ ಪಾವತಿಮಾಡಿಸಿದುದಕ್ಕೋಸ್ಕರ ನನ್ನ ಧನ್ಯವಾದಗಳನ್ನು ಅವರಿಗೆ ದಯೆಯಿಟ್ಟು ತಿಳಿಸಿ ಈ ತರದಲ್ಲಿ ಪೊಲಿಸಿದಾರರೊಡನೆ ಯಥಾರ್ಥವಾದ ರೀತಿಯಲ್ಲಿ ನಂಬುಗೆಯುಂಟಾಗುವಂತೆಯೂ ವರ್ತಿಸುವ ತಮ್ಮ ವಿಮೆ ಕಂಪೆನಿಯಿಂದ ಪ್ರತಿಯೊಬ್ಬನೂ ಒಂದೊಂದು ಪೊಲಿಸಿಯನ್ನಾದರೂ ಪಡೆಕೊಳ್ಳುವುದು ಉಚಿತವೆಂದು ನನ್ನ ಅಪೇಕ್ಷೆ

(ದಸ್ಕತು) ಹಾರಾಡಿ ಆನಂದರಾಯ ಫಡಿಯಾರನ ರುಜು.

(935ನೇ ಪೊಲಿಸಿಯ ವಿಮಾ ಹಣವನ್ನು ಪಡೆಯಲು ಅಧಿಕಾರವುಳ್ಳವನು).

ತಾ. 20—8—1914.

ನನ್ನ ಎಳೇ ಪ್ರಾಯದಲ್ಲಿ ಮೃತನಾದ ನನ್ನ ಗಂಡ ಕೆ ಎಲ್ ಪ್ರಭುಗಳ ವಿಮೆ ಪತ್ರಗಳನ್ನು ನಾನು ಕಳುಹಿಸಿಕೊಟ್ಟ ಕೆಲವೇ ದಿನಗಳೊಳಗಾಗಿ ಮುಂಬಾಯಿ ಲೈಫ್ ಎಸ್ಯುರೆನ್ಸ್ ಕಂಪೆನಿಯವರು ನನಗೆ ತತ್ಸಂಬಂಧವಾದ ಹಣವನ್ನು ಪಾವತಿಮಾಡಿಸಿದುದಕ್ಕೆ ನಾನು ಕೃತಜ್ಞಳಾಗಿರುವೆನು. ನನ್ನ ಒಬ್ಬನೇ ಬಾಲಕನಿಗೆ ಇದೊಂದೇ ಮಾತ್ರ ಪಿತ್ರಾರ್ಜಿತವಾದ ಧನವಾಗಿದೆ. ಅಂತಹ ಬಡ ಹುಡುಗನಿಗೆ ಇದೊಂದು ಅಪೂರ್ವವಾದ ಮಹಾದಾನವನ್ನು ಮಾಡಿಕೊಟ್ಟುದಕ್ಕೆ ಪ್ರತಿಯಾಗಿ ನಿಮ್ಮ ಕಂಪೆನಿಯು ಚಿರಕಾಲವೂ ಸೌಭಾಗ್ಯದಲ್ಲಿರಲಿ!

ಭವಾನೀಬಾಯಿ, Pol. No. 1738.

ಸಾಕ್ಷಿ—ಭವಾನೀಬಾಯಿಯ ಸ್ಥೋದರ ರಾ। ಕೆ. ರಂಗಪ್ಪ ನಾಗಪ್ಪ.

ಮಂಗಳೂರು, ತಾ. 30—10—1914.

ಸಾಧ್ಯವಾದಷ್ಟು ಕಡಿಮೆ ಸಮಯದೊಳಗಾಗಿ ನನಗೆ ಪಾವತಿಯಾಗತಕ್ಕ ಹಣವನ್ನು ಸಲ್ಲಿಸಿದುದಕ್ಕೋಸ್ಕರ ಬೊಂಬೇ ಲೈಫ್ ಎಸ್ಯುರೆನ್ಸ್ ಕಂಪೆನಿಯವರಿಗೆ ನನ್ನ ಧನ್ಯವಾದಗಳನ್ನು ಪ್ರೀತಿಪೂರ್ವಕವಾಗಿ ಮುಟ್ಟಿಸಿರಿ! ಕ್ಲೈಮು ಪ್ರಕಾರ ಎಲ್ಲಿ ಹಣವನ್ನು ಪಡಕೊಳ್ಳುವ ಹಾಗೆ ಕಂಪೆನಿಯ ಏಜಂಟರೇ ತಮ್ಮಿಂದಾಗುವಷ್ಟರ ಸಹಾಯವನ್ನು ಮಾಡುತ್ತಿರುವುದರಿಂದ ನನಗೆ ಯಾವ ತೊಂದರೆಗಳೂ ಉಂಟಾಗಲಿಲ್ಲ ಹಣವನ್ನು ನಾವಿದ್ದ ಸ್ಥಳಕ್ಕೆ ಬಂದು ಕೊಟ್ಟರು.—ಇದೊಂದು ತಮ್ಮ ಕಂಪೆನಿಯ ವಿಶೇಷ ಗುಣ. ನಿಮ್ಮ ಸಂಸ್ಥೆಗೆ ಸದಾ ಜಯವು ಆಗಲಿ.

ಅರ್ಕಳ ರಾಮಚಂದ್ರ ಶ್ಯಾನಭಾಗನ ರುಜು.

(Pol. No. 2310ನೆಯ ಹಣ ಪಡೆದವನು.)

ಇನಾಂ ಸಾಮಾನು 50 ಇನಾಂ ಸಾಮಾನು 50

ಅನೇಕ ಯೋಗ್ಯತಾಪತ್ರಿಕೆಗಳನ್ನು ಹೊಂದಿರುವ (ರಿಜಿಸ್ಟರ್ಡ್)

ರಾಜಸುಂದರಿ ರೋಜ.

ಕೂದಲು ಬೆಳೆಯುವ ಪರಿಮಳ ತೈಲವು 50 ವಿಧವಾದ ಇನಾಂ ಸಾಮಾನುಗಳ ಸಮೇತ ಡಬ್ಬಿ 1ಕ್ಕೆ ರೂ. 1 ಮಾತ್ರ. ಯಾವ ಸ್ತ್ರೀಗಳಿಗೆ ತಲೆಕೂದಲು ಸುಂದರವಾಗಿರಬೇಕೆಂಬ ಉದ್ದೇಶವಾಗಿಯೂ ಕೂದಲು ಉದುರುವದನ್ನು ತಡದು ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವವರು ಬಜಾರಿನಲ್ಲಿ ದೊರೆಯುವ ಕೀಳು ತರವಾದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳು ಮಾಡಿಕೊಳ್ಳಬೇಡಿರಿ. ಈ ಲೋಕಪ್ರಖ್ಯಾತವಾದ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಬಾಚಿದರೆ ಅದರ ಸುವಾಸನೆ ಸುತ್ತು ಇರುವ ಮನೆಗಳಿಗೆ ಪರಿಮಳ ವಾಸನೆ ಹೋಗುವದು. ಇದರ ಪರಿಮಳ ವಾಸನೆ ಹೇಳುವದಕ್ಕೂ ಬರೆಯುವದಕ್ಕೂ ಆಗುವದಿಲ್ಲ. ಇದಲ್ಲದೆ ದೇಹದಲ್ಲಿ ಇರುವ ಉಷ್ಣವನ್ನು ತೆಗೆದು ಕಣ್ಣಿಗೆ ತಂಪು ಕೊಡುವದು. ಮುಖಕ್ಕೆ ಕಾಂತಿಯನ್ನು ದೇಹಕ್ಕೆ ಆರೋಗ್ಯವನ್ನು ಕೊಡುವ ತೈಲ ಇದು ಒಂದೇ. ಬೇರೊಂದಿಲ್ಲ. ಹೆಚ್ಚು ಮಾತುಗಳಿಂದ ಏನು ಪ್ರಯೋಜನ? ಒಂದನ್ನು ತರಿಸಿ ನೋಡಿದರೆ ನಿಜ ಸ್ಥಿತಿ ತಿಳಿಯುತ್ತೆ. ಇನಾಂ ಸಾಮಾನುಗಳ ತಪಸೀಲು:—ಸ್ತ್ರೀಯರು ಧರಿಸಿಕೊಳ್ಳುವ ಕೊಂಡಗಿಣೆ 6, ವೈಭರಣೆ 1, ಅದ್ದ 1, ತಾಂಬೂಲ ಪಾತ್ರೆ 30, ದಂತದ ಬಾಚಣಿಗೆ 1, ಸುವಾಸನೆಯುಳ್ಳ ಸೆಂಟ್ ಶೀಸೆ 1, ಇಂಗ್ಲೀಷು ಫೋಟೋಗಳು 6, ಸುವಾಸನೆ ಅತ್ತರು ಬಿಲ್ಲೆ 1, ಗಂಧದ ಬಿಲ್ಲೆ 1, ರಾಜಾರಾಣಿ ಕಾರನೇಷನ್ ಪೆಟ್ಟಿಗೆ 1

ಒಂದೇ ಸಾರಿ 3 ತರಿಸಿಕೊಳ್ಳುವವರಿಗೆ ಇನಾಂ ಸಹಿತ 1 ಲಾವಂಡರ್ ಬಾಟ್ಲಿ ಇನಾಮಾಗಿ ಕಳುಹಿಸುತ್ತೇವೆ. ಒಂದೇ ಸಾರಿ 6 ತರಿಸಿಕೊಳ್ಳುವವರಿಗೆ ಇನಾಂ ಇಲ್ಲದಂತೆ 1 ರಾಸ್ ಪಾಕೆಟ್ ವಾಚ್ ಇನಾಮಾಗಿ ಕಳುಹಿಸುತ್ತೇವೆ.

ನಮ್ಮ ವಿಳಾಸ:— ವಿ. ಎ. ಎಸ್. ಪಾಣಿ,
3 ಇರುಳಪ್ಪನ್ ಬೀದಿ, ಮದರಾಸು

ಅಪೂರ್ವ ಗ್ರಂಥ! ಅಪೂರ್ವ ಗ್ರಂಥ!!

ಬಳ್ಳಾರಿ ಶ್ರೀ ಮರಿಸ್ವಾಮಿಗಳು

ಸಕ್ಕರಿ ಕರಡೆಪ್ಪ

ಇವರ ಜೀವಿತ ಚರಿತ್ರೆ.

ಈ ಮಹಿಮರ ಚರಿತ್ರೆಯನ್ನು ಇಲ್ಲಿಯವರಿಗೂ ಯಾರೊಬ್ಬರು ಪ್ರಕಟನ ಮಾಡಿದ್ದಿಲ್ಲವೆಂಬುದು ತಿಳಿದದ್ದಾಗಿರುವದಷ್ಟೆ. ಇಂತಹ ಅದ್ಭುತ ಮಹಿಮಾಶಾಲಿಗಳ ಚರಿತ್ರೆಗಳು ಅವಶ್ಯಕವಾಗಿಯೂ ಆದರಣೀಯಗಳಾಗಿರುವವು. ಇವರ ಮಹಿಮೆಯು ಅಸಾಧಾರಣವಾದುದು. ಒಂದೆ ದಿನ ಒಂದೆ ಕಾಲದಲ್ಲಿ ಬಳ್ಳಾರಿ, ಬೆಂಗಳೂರು, ಭೈರವಪುರ ಎಂಬ ಮೂರು ಸ್ಥಳಗಳಲ್ಲಿ ಸಮಾಧಿಯನ್ನು ಹೊಂದಿದರೆಂಬುದೊಂದೆ ಅಪ್ರತಿಮ ಪ್ರಭಾವವನ್ನು ಸೂಚಿಸುತ್ತಿರುವದು. ಇವರು ಅಲ್ಲಲ್ಲಿ ತೋರಿದ ಮಹಿಮೆಗಳು ಅನಂತವಾಗಿರುವವು; ಇದಲ್ಲದೆ ಇವರ ಶಿಷ್ಯನಾದ ಸಕ್ಕರಿಕರಡೆಪ್ಪನ ಅಪಾರ ಮಹಿಮೆಯು ವಿಶದವಾಗಿ ವರ್ಣಿಸಲ್ಪಟ್ಟಿರುವದು. ಈ ಸಕ್ಕರಿ ಶರಣನಂತಹ ಶರಣನು ಇಡೀ ಪ್ರಪಂಚದಲ್ಲಿ ವೀರಶೈವ ಮತದೊಳಗೆ ಹುಟ್ಟುವದು ಅಪರೂಪ. ಆ ಗುರುಶಿಷ್ಯರೀರ್ವರ ಚರಿತ್ರೆಗಳು ಒಂದು ಗ್ರಂಥದಲ್ಲಿ ತಯಾರುಮಾಡಿರುವೆವು. ಈ ಗ್ರಂಥವನ್ನೋದುವವರು ಖಂಡಿತವಾಗಿಯೂ ನೀತಿ, ಭಕ್ತಿ, ಜ್ಞಾನಗಳ ಕಡೆ ಮನಸ್ಸನ್ನು ಕೊಡದಿರಲಾರರು. ಮತ್ತು ಇದಲ್ಲದೆ ಮೈಸೂರು ಶ್ರೀಮನ್ಮಹಾರಾಜ, ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರರವರು ಶಿಷ್ಯರಾದ ಕಂಬಳಿ ಸ್ವಾಮಿಗಳ ಸಮೇತ ಇರುವೆ ಮಹಾಸ್ವಾಮಿಗಳ ಛಾಯಾಚಿತ್ರ ಪಟವು ಪ್ರಥಮ ಪುಟದಲ್ಲಿ ಅಂದವಾಗಿರಿಸಲ್ಪಟ್ಟಿರುವದು. ನಿಮ್ಮ ವಿಳಾಸ ಚನ್ನಾಗಿರಲಿ. ಇದರ ಬೆಲೆ ವಿ. ಪಿ. ಸಹಿತ ರೂ. 1—3—0.

ನಮ್ಮ ವಿಳಾಸ:— ಬಸವರಾಜ ಕಂಪೆನಿ, ಬಳ್ಳಾರಿ.

100 ರೂಪಾಯಿಗಳ ಬಹುಮಾನ!

ಲೋಕಪ್ರಸಿದ್ಧವಾದ

"ಪಂಜಾಬಿ ಸಕಲರೋಗ ಸಂಜೀವಿ"

ಇದನ್ನು ಸೇವಿಸಿ ಜೀವವಿಮೆಯನ್ನೂ ಮಾಡಿಕೊಳ್ಳಿರಿ. ದುರಭ್ಯಾಸಗಳಿಂದ ಧಾತುವನ್ನೂ ನಷ್ಟಪಡಿಸಿಕೊಂಡು ದುಃಖಿಸುವದನ್ನೂ ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರಿಸಲ್ಪಟ್ಟ "ಪಂಜಾಬಿ ಸಕಲರೋಗ ಸಂಜೀವಿ"ಯನ್ನು ಸೇವಿಸಿರಿ. ಇದನ್ನು ಪಂಜಾಬು, ಕಾಬೂಲ್ ದೇಶದ ಜನಗಳು ಬಹಳವಾಗಿ ಸೇವಿಸುವರು. ತಾವು ಪಂಜಾಬಿ ದೇಶದ ಜನಗಳನ್ನು ನೋಡಿ ಇರುವಿರಿ. ಅವರು ದಿನದಿನವೂ ಪಂಜಾಬಿ ಸಕಲರೋಗ ಸಂಜೀವಿ ಸೇವಿಸಿ ಬಹಳ ಬಲವೂ ದೃಢವಾಗಿಯೂ ಇರುವರು. ತಾವು ಯಾಕೆ ಹಾಗೆ ಇರಬಾರದು. ಪಂಜಾಬಿ ಸಕಲರೋಗ ಸಂಜೀವಿಯನ್ನು ಸೇವಿಸಿ ದೇಹವನ್ನು ಕಾಪಾಡಿಕೊಳ್ಳಿರಿ. ಇದು ಸಮಸ್ತ ಜನಗಳಿಗೂ ವರಪ್ರಸಾದವೆಂದು ಸಕಲರು ಒಪ್ಪಿದ್ದಾರೆ. ಇದು ರಕ್ತವನ್ನೂ ವೃದ್ಧಿಪಡಿಸಿ ಮೆದುಳಿಗೆ ಬಲವನ್ನೂ ಕೊಡುವದು. ಕೈ ಕಾಲು ಸೊಂಟದ ನೋವುಗಳನ್ನೂ ಹೋಗಲಾಡಿಸುವುದು. ಇದರಲ್ಲಿ ಅಪರಂಜಿ ಬೆಳ್ಳಿ, ಅಲುವಂಗಭಸ್ಮ, ಸಪೇದ್ ಮಿಸ್ರಿ, ಕಾಲಮಿಸ್ರಿ, ಮೊದಲಾದವನ್ನೂ ಮೂಳಿಕೆ 15ನ್ನೂ, ಬಜಾರ್ ಸರಕ 100 ಸೇರಿಸಿ ಬಹಳ ಶುದ್ಧವಾಗಿ ಕೈಯಿಂದ ಮುಟ್ಟದೇ ತಯಾರು ಮಾಡಲ್ಪಟ್ಟಿರುವದು. ಇದು ಶಾಸ್ತ್ರಪ್ರಕಾರ ತಯಾರಿಸಲ್ಪಟ್ಟವಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿಯ ಬಹುಮಾನ.

20 ತೊಲೆ ಡಬ್ಬಿ 1ಕ್ಕೆ ರೂ 3—0—0 ಒಂದೇ ಸಾರಿ 3 ಡಬ್ಬಿ ತರಿಸಿಕೊಳ್ಳುವವರಿಗೆ ರೂ 8—0—0 ಅನುಪಾನಪತ್ರಿಕೆ ಔಷಧ ಸಂಗಡ ಇರುತ್ತೆ.

ಮದರಾಸ್ ಏಜನ್ಸಿ— ಧೈರ್ಯಲಕ್ಷ್ಮಿ ಅಂಡು ಕಂಪೆನಿ,
3 ಇರುಳಪ್ಪನ ಬೀದಿ, ಮದರಾಸ್.

ವಿನಾಮೂಲ್ಯ! ವಿನಾಮೂಲ್ಯ!! ವಿನಾಮೂಲ್ಯ!!!

ಆರ್ಯಚಿಕಿತ್ಸಾರಹಸ್ಯ.

ಆರ್ಯವೈದ್ಯದ ರಹಸ್ಯವೇನೆಂಬದನ್ನು ತಿಳಕೊಳ್ಳಲಿಕ್ಕೆ ಇಚ್ಛೆಯುಳ್ಳವರಿಗೆ ಆರ್ಯಚಿಕಿತ್ಸಾರಹಸ್ಯವು ಪರಮ ಸಾಧನವಾಗಿದೆ. ನಮ್ಮ ದೇಶೀಯ ವೈದ್ಯವಿದ್ಯೆಯಲ್ಲಿ ಪೂರ್ಣ ಗೌರವ ಮತ್ತು ಅಭಿಮಾನವನ್ನು ಇಟ್ಟು ಆರ್ಯಚಿಕಿತ್ಸೆಯನ್ನು ನಮ್ಮ ಜನರೊಳಗೆ ರೂಢಿಗೆ ಹ್ಯಾಗೆ ತರಬೇಕೆಂಬುವದು ಈ ಪುಸ್ತಕವನ್ನು ಮನಸ್ಸಿಟ್ಟು ಓದಿದರೆ ಸಮ ವ್ಯಕ್ತವಾಗುವದು. ಕನ್ನಡನುಡಿಯ ಒಡನಾಟವಿರುವವರಿಗೆ ಎಲ್ಲರಿಗೂ ತಿಳಿಯುವಂತೆ ಈ ಗ್ರಂಥವು ಕನ್ನಡದಲ್ಲಿ ಬರೆಯಲ್ಪಟ್ಟಿದೆ. ವಾಚಕ ಮಹಾಶಯರೇ! ದೇಶಾಭಿಮಾನದಿಂದ ತಮ್ಮ ಆಯುಃಪ್ರಮಾಣದಲ್ಲಿ ಕಾಲುಘಂಟೆ ಸಮಯವನ್ನು ಈ ಪುಸ್ತಕಕ್ಕೋಸ್ಕರ ಕಳೆಯಿರಿ. ಈ ಪುಸ್ತಕ ಬೇಕೆಂದಿರುವವರು ತಮ್ಮ ಎಡ್ರೆಸನ್ನೂ ಅರ್ಧಾಣೆ ಸ್ಟಾಂಪನ್ನೂ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿಕೊಟ್ಟರೆ ಪುಸ್ತಕವು ದೊರೆಯುವದು.

ಎಂ. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು.

ಕನ್ನಡ ಮಾಸಪತ್ರಿಕೆ.

ವಿಕಟ ವಿನೋದಿನಿ.



ಹಾಸ್ಯರಸ ಪ್ರಧಾನವಾದ ಮತ್ತು ನೀತಿಪರವಾದ ಹಾಸ್ಯೋಲ್ಲೇಖನಗಳಿಂದ ಕೂಡಿರುವ ಸಚಿತ್ರವೂ ವಿಚಿತ್ರವೂ ಆದ ಮಾಸಪತ್ರಿಕೆಗೆ ಒಂದು ವರುಷದ ಚಂದಾ ಅಂಚೆ ಹಾಸಲು ಸೇರಿ ರೂ. 1 ಮಾತ್ರ.

ನಮ್ಮ ವಿಳಾಸ:— "ವಿಕಟ ವಿನೋದಿನಿ" ಆಫೀಸು,
ಅರಳೆಪೇಟೆ, ಬೆಂಗಳೂರು ಸಿಟಿ

ಜಯಪಿಜಯ
ಅಥವಾ
ತೂಗಾಡುವ ಅಸ್ಥಿಪಂಜರ.

ಇದರಲ್ಲಿ "ದಿಲೀಪಸಿಂಹ ಲುರಾರ" ಎಂಬವನು ತನ್ನ ಹಗೆ ತೀರಿಸುವುದಕ್ಕೋಸ್ಕರ ಎಂಥೆಂಥಾ ಅದ್ಭುತ ಕಾರ್ಯಗಳನ್ನೆಸಗಿ ಕಡೆಗೆ ಹೇಗೆ ಜಯ ಹೊಂದಿ ಸುಖವನ್ನನುಭವಿಸಿದನು?

ಒಬ್ಬ ಸ್ತ್ರೀಯು ತನ್ನ ಪತಿವ್ರತಾ ಧರ್ಮಕ್ಕೋಸ್ಕರ ವಿವಿಧ ಕಠಿಣ ಕಾರ್ಯಗಳನ್ನು ಕಣ್ಣಾರೆ ಕಂಡರೂ ಎದೆಗುಂದದೆ ಇರಲು ಕಡೆಗೆ ತನ್ನ ಮೂರು ವರ್ಷದ ಪುತ್ರನನ್ನು ತನ್ನ ಸಮಕ್ಷಮದಲ್ಲೇ ತಲೆ ಕೆಳಗಾಗಿ ತೂಗಾಡಿ ಕಟ್ಟಿ ಕಠಾರಿಯಿಂದ ತಿವಿದು ಅದರ ರಕ್ತದಿಂದ ಅವಳಿಗೆ ಸ್ನಾನಮಾಡಿಸಿ, ಆ ತೂಗಾಡಿಸಿಟ್ಟ ಮಗುವಿನ ಹೆಣವನ್ನು ನಿರಂತರ ಅಲ್ಲಿಯೇ ಇರಗೊಳಿಸಿ, ಅದರ ರಕ್ತವನ್ನು ಸಹ ಒಂದು ಪಾತ್ರೆಯಲ್ಲಿ ತುಂಬಿಸಿ ಬಂದಿಖಾನೆಯಲ್ಲಿ ಅವಳ ಪಕ್ಕದಲ್ಲೇ ಇಟ್ಟು ಅವುಗಳನ್ನು ನೋಡಿಯಾದರೂ ಮನ ಕರಗಿ ವಶಳಾಗುವಂತೆ ಶತಪ್ರಯತ್ನಗೈದರೂ ಪರವಶಳಾ ? ಆ ಸತಿಯು ತನ್ನ ಪತಿವ್ರತಾ ಧರ್ಮದಲ್ಲೇ ದೃಢವಾಗಿದ್ದು ತನ್ನ ಸತಿಧರ್ಮವನ್ನು ಹೇಗೆ ಕಾಪಾಡಿಕೊಂಡಳು?

ದಾಸನಾಗಿದ್ದ ನೀಚ ಸೇವಕನೊಬ್ಬನು ತನ್ನ ಅರಸನನ್ನು ಕೊಲ್ಲಿಸಿ ರಾಜ್ಯಭಾರವನ್ನು ತಾನೇ ವಹಿಸಿಕೊಂಡ ನಾನಾ ... ಕಾರ್ಯಗಳನ್ನು ನಡಿಸಿ, ಕಡೆಗೆ ತಾನು ಗೈದ ದುಷ್ಕರ್ಮಗಳಿಗೆ ಹೇಗೆ ತಕ್ಕ ಫಲವನ್ನನುಭವಿಸಿದನು? ಎಂಬ ಎಲ್ಲಾ ವಿವರವನ್ನು ವ್ಯಕ್ತಪಡಿಸುತ್ತದೆ. ಅದ್ಭುತವಾಗಿಯೂ, ರಸಭರಿತವಾಗಿಯೂ ಇರುವ ಈ ಗ್ರಂಥವನ್ನು ಓದುವದರಿಂದ ಪುರುಷರಲ್ಲಿ ಪೌರುಷವೂ ಸ್ತ್ರೀಯರಲ್ಲಿ ಪತಿವ್ರತಾ ಧರ್ಮವೂ ನೆಲೆಗೊಳ್ಳುವದು!

ಕ್ರಯ 0 12 0 ಪೋಸ್ಟು ಖರ್ಚ ಪ್ರತ್ಯೇಕ ಹನ್ನೆರಡು ಪುಸ್ತಕಗಳನ್ನು ಒಂದೇಸಲ ಪಡಕೊಳ್ಳುವವರಿಗೆ ಒಂದು ಪುಸ್ತಕ ಉಚಿತವಾಗಿ ದೊರಕುವುದು

ತಾಜ ಕಲಂ — ಈ ನನ್ನ ಕಾರ್ಯಕ್ಕೆ ಸ್ವಜಾತಿ ಗೃಹಸ್ಥರು ಜಾತ್ಯಾಭಿಮಾನದಿಂದಲೂ ವಿಜಾತಿ ಮಹನೀಯರು ಮಿತ್ರಾಭಿಮಾನದಿಂದಲೂ ಪ್ರೋತ್ಸಾಹಕೊಟ್ಟು ಸರ್ವರೂ ಓದಿ ಪ್ರಯೋಜನ ಹೊಂದುವಂತೆ ಕೋರುತ್ತೇನೆ

ವಿಳಾಸ — **V C Amin,**
C/o E A Goll Esq
Sudu Palace, Apollo Street, BOMBAY

ಗಮನ ಕೊಡಿರಿ! ತ್ವರೆ ಮಾಡಿರಿ!!

ಶ್ರೀ ಮಾಂಗಿರೀಷ ಬಾಮ್

ತಲೆನೋವು ಒರ್ಕ್ನನ್ನೆ ನೋವು, ಹಲ್ಲು ನೋವು, ಸೊಂಟನೋವು, ಎಲ್ಲಾ ಪುಪ್ಪುಸ ರೋಗಗಳು, ಉಳುಕು, ವಾಯುವಿನಿಂದ ಹೊಟ್ಟೆ ಉಬ್ಬರಿಸುವದು, ಇವುಗಳನ್ನು ಶೀಘ್ರವಾಗಿ ಗುಣಪಡಿಸುವದು. ಸ್ಕ್ರೂಬಾಯಿಯ ಲೋಹದ ಮುದುರುವ ನಳಿಗೆಗಳಲ್ಲಿರುವದರಿಂದ ಬಾಟ್ಲಿಗಳಲ್ಲಿರುವ ಬಾಮುಗಳೋಪಾದಿ ಸೂರ್ಯನ ಬೆಳಕಿಗೂ ಗಾಳಿಗೂ, ಕಾಣದೆ ಎಷ್ಟು ಕಾಲಕ್ಕೂ ಹಾಳಾಗುವದಿಲ್ಲ ನಳಿಗೆಯ ಅಡಿಯನ್ನು ಮಾತ್ರ ಒತ್ತಿದಲ್ಲಿ ಬೇಕಾದಷ್ಟು ಮಾತ್ರ ಬಾಮ್ ಹೊರಗೆ ಬರುವದು ಇದಲ್ಲದೆ ಪ್ರತಿ ನಳಿಗೆಯಲ್ಲಿ ಬಾಟ್ಲಿಗಳಲ್ಲಿರುವದರ $1\frac{1}{2}$ ಪಾಲು ಬಾಮು ಇರುವದು ನಳಿಗೆ ಕ್ರಯ ರೂ. 0 8-0

ವಿಸ್ಫೋಟಕ ಮುಟ್ರಂ, ಸಿಡುಬು, ಕೋರ, ಕೊಪ್ಪೆ ಮಕ್ಕಳಚೇಷ್ಟೆ, ಮುಂತಾದ ಜಾಡ್ಯಗಳಿಗೆ ಅತ್ಯುತ್ತಮವಾದ್ದು ಸಿಡುಬು ಮುಂತಾದ ಅಂಟುರೋಗಗಳಲ್ಲಿ ಜ್ವರ ಕಾಣಿಸಿಕೊಳ್ಳುವಾಗ ಒಂದು, ಯಾ ಎರಡು ಮಾತ್ರೆಯನ್ನು ಜಿಸಿ ನೀರಿನಲ್ಲಿ ತೇದು ಕೊಟರೆ ಕೂಡಲೇ ಜ್ವರ ಗುಣವಾಗುವದು ಮಕ್ಕಳ ಚೇಷ್ಟೆಗೆ ಒಂದು ಮಾತ್ರೆಯಂತೆ ಪ್ರತಿದಿನವೂ ಮೊಲೆಹಾಲಿನಲ್ಲಿ ತೇದು ದಿನಕ್ಕೆ 2 ಸಾರಿ ಕೊಟ್ಟರೆ ಪೀಡೆಯು ಪರಿಹಾರವಾಗಿ ದೃಢಕಾಯವಾಗಿ ಬೆಳೆಯುವರು ಎಲ್ಲಾ ತರದ ಜ್ವರಗಳಿಗೂ ಉತ್ತಮವಾದ್ದು 12 ಮಾತ್ರೆಗಳ ಪೊಟ್ಣ 1ಕ್ಕೆ 0—6—0

ಸ್ವರಸುಧಿ. ಕೆಮ್ಮು, ಗಂಟಲುನೋವು, ಧ್ವನಿ ಬದಲಾಗುವದು, ಅಗ್ರ ಮುಂತಾದವುಗಳಿಗೆ ಅತ್ಯುತ್ತಮ. ಎಲೆ ಅಡಿಕೆಯ ಸಂಗಡ ತಿನ್ನುವುದರಿಂದ ಹಲ್ಲುಗಳಿಗೂ, ಜೀರ್ಣಕ್ಕೂ ಸಹಕಾರಿ ದೊಡ್ಡಪೊಟ್ಣ 1ಕ್ಕೆ 0-1 6 ಸ್ಯಾಂಪಲ್ ಪೊಟ್ಣ ಪೈ 6

ಕಾರ್ಬೊಲಿಕ್ ಟೂತ್ ಪೌಡರ್ ಈ ದಂತಮಂಜನದ ಹುಡಿಯಿಂದ ಹಲ್ಲುಗಳನ್ನು ಪ್ರತಿದಿನವೂ ತಿಕ್ಕುವುದರಿಂದ, ಹಲ್ಲುಹುಳುಕು, ಹಲ್ಲುನೋವು, ವಸಡುಹುಣ್ಣು, ಮುಂತಾದವುಗಳು ಗುಣವಾಗಿ ಹಲ್ಲುಗಳು ಬಲವಾಗುವವು ದೊಡ್ಡ ಡಬ್ಬಿ 1ರ ಕ್ರಯ 0—2—0 ಸ್ವಶ್ಲಾಘನೆಯು ಯೋಗ್ಯವಲ್ಲ ಒಮ್ಮೆ ತರಿಸಿ ಪರೀಕ್ಷಿಸಿದರೆ ತಿಳಿದೀತು

ಇವುಗಳ ವಿನಹಾ ಆಯುರ್ವೇದವನ್ನು ಅನುಸರಿಸಿ ತಯ್ಯಾರಿಸಿದ ಅನೇಕ ಔಷಧಗಳು ನಮ್ಮಲ್ಲಿ ತಯ್ಯಾರಿರುತ್ತವೆ ರೋಗ ಪ್ರಕೃತಿಯನ್ನು ಈ ಕೆಳಗಿನ ವಿಳಾಸಕ್ಕೆ ಅರ್ಧ ಆಣೆ ಟಪ್ಪಾಲ್‌ಚೀಟು ಸಮೇತ ಬರಕೊಂಡಲ್ಲಿ ತಕ್ಕ ಔಷಧದ ದರವನ್ನು ತಿಳಿಸಲಾದೀತು 1 ಡಜನ್ ಬಾಮ್ ತರಿಸಿಕೊಳ್ಳುವವರಿಗೆ ಒಂದು ಟ್ಯೂಬ್ ಬಕ್ಷೀಸಾಗಿ ಕೊಡಲಾದೀತು ಟಪ್ಪಾಲ್ ಹಾಸಲು ಮಾಫಿ ಏಜಂಟರಾಗುವವರಿಗೆ ಹೆಚ್ಚು ಕಮ್ಮಿಶನ್ ಕೊಡಲಾದೀತು.

M D, R & SONS
Srimangireesh Aushadhalaya, UDIPI S. C.

ಒಂದು ಸಾರಿ ಕೊಂಡು ನೋಡಿರಿ!!!

ಒಟ್ಟೊ ದಿಲ್-ಚಮಾನ್

(ರಿಜಿಸ್ಟರ್ಡ್.)

ಸುರಭಿಗಳಲ್ಲಿ ಮುಕುಟವರ್ಧನ!

ಬಹಳ ಸುವಾಸನೆಯುಳ್ಳ ಲೋಕಪ್ರಖ್ಯಾತವಾದ ಮತ್ತು ಈಗಿನ ಕಾಲಕ್ಕನುಸಾರವಾದ ಸದಾ ಸುವಾಸನೆಯುಳ್ಳ ಸುಗಂಧವು. ಒಂದೆರಡು ತಟಕು ಕೈವಸ್ತ್ರದಲ್ಲಿ ತಾಗಿಸಿದ್ದೇ ಆದರೆ 8 ದಿವಸಗಳ ವರೆಗೂ ಪರಿಮಳವಿರುವದು

	ರೂ.	ಆ.	ಪೈ.
ಕ್ರಯ ½ ಡ್ರಾಮ್ ಟ್ಯೂಬ್	0	8	0
1 ,,	0	12	0
¼ ಔನ್ಸ್ ಟ್ಯೂಬ್	2	0	0
ಒಟ್ಟೊ ದಿಲ್ ಚಮಾನ್ ಪರಿಮಳದ ಕಾರ್ಡಗಳು ಡಜನಿಗೆ	0	12	0

ವಿ. ಪಿ ಚಾರ್ಜು 0 — 4 — 0 ಬೇರೆ.

ಮುಖ್ಯ ಏಜಂಟರು—;
ಎಚ್. ಆರ್. ಮೋಡಿ ಎಂಡ್ ಕೋ,
10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬೇ.
H R MODY & Co.,
10 Princes Street, **BOMBAY.**

ವೈಶೇಷ್ಯವು.

ನಾವು ಲೋಕ ಪ್ರಖ್ಯಾತ ಪೇಟೆಂಟ್ ಔಷಧಿಗಳಿಗೂ ಅತ್ತರು ಮೊದಲಾದ ಪರಿಮಳ ದ್ರವ್ಯಗಳಿಗೂ ಪ್ರಾಮುಖ್ಯ ಏಜಂಟರಾಗಿರುತ್ತೇವೆ.

ಎಕ್ಸೆಲ್ಸಿಯರ್ ಸಾರ್ಸಪರಿಲ್ಲಾ

(ಐಯೋಡೈಸ್ಡ್)
ಎಂಬ
ರಕ್ತಶುದ್ಧಿಯ ದೀಪಕ.

ಕ್ರಯ ಬಾಟ್ಲಿಗೆ ರೂ 1—4—0 ಮತ್ತು ರೂ. 2—0—0.

ಪಿಯರ್ಸ್ ನರ್ವೈನ್ ಟೋನಿಕ್ ಪಿಲ್ಸ್

(ಆದರ್ಶ ದೀಪಕ.)

ಆರೋಗ್ಯವನ್ನು ಉಂಟುಮಾಡುವದು, ಅಶಕ್ತಿಯನ್ನು ಹೋಗಗೊಳಿಸುವದು, ಅಶಕ್ತರಾದ ಬಾಲಕರಿಗೂ ಬಾಲಕಿಯರಿಗೂ ಬಹಳ ಪ್ರಯೋಜನಕಾರಿ!

ಕ್ರಯ ೩೦ ಮಾತ್ರೆಗಳ ಶೀಸೆ ೧ಕ್ಕೆ ರೂ ೧ — 8 — 0.

ರಾಮಬಾಣ ಗಜಕರ್ಣ ಮುಲಾಂ

ಗಜಕರ್ಣಕ್ಕೆ ಅತ್ಯುತ್ಕೃಷ್ಟವಾದ ಮುಲಾಂ. ಡಬ್ಬಿ 1ಕ್ಕೆ 4 ಆಣೆ.

ಮೋಡಿಯವರ
ತಲೆಶಿಡಿತ ಬಿಲ್ಲೆಗಳು:

ಒಂದೇ ನಿಮಿಷದಲ್ಲಿ ಗುಣ

ಒಂದು ಬಿಲ್ಲೆಯನ್ನು ನೀರಿನಲ್ಲಿ ಹಾಕಿ ಸೇವಿಸಬೇಕು. [illegible] 1ಕ್ಕೆ 0—12—0. ಇತರ ವಿಶೇಷ ಔಷಧಗಳ ಪಟ್ಟಿಗೆ ಬರಕೊಳ್ಳಿರಿ

H. R. Mody & Co., ಎಚ್. ಆರ್. ಮೋಡಿ ಎಂಡ್ ಕೋ.,
Chemist, ಕೆಮಿಸ್ಟ್,
10 PRINCES ST., BOMBAY. 10 [illegible]

ಇನಾಂ ಸಾಮಾನು 60. ಇನಾಂ ಸಾಮಾನು 60.

ವನಮಾಲಿಕ ಪುಷ್ಪ ಕೂದಲು ಬೆಳೆಯುವ

ಪರಿಮಳ ತೈಲವು.

ಇದರ ಬೆಲೆ 60 ಸಾಮಾನುಗಳ ಸಹಿತ ಟನ್ ಒಂದಕ್ಕೆ 14 ಆಣೆ.

ಅಯ್ಯಾ,—ಯಾವ ಸ್ತ್ರೀಗಳಿಗೆ ತಲೆಯ ಕೂದಲ ಬೇಕೆಂಬ ಉದ್ದೇಶವಾಗಿರುವವರು ಬಜಾರಿನಲ್ಲಿ ದೊರೆಯುತಕ್ಕ ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ, ನಿಮ್ಮ ಹಣವನ್ನೂ ತಲೆಯನ್ನೂ ಹಾಳು ಮಾಡಿಕೊಳ್ಳಬೇಡಿರಿ ಈ ಎಣ್ಣೆಯನ್ನು ಪ್ರತಿದಿನವೂ ಕೂದಲಿಗೆ ಹಚ್ಚಿಕೊಂಡು ಬಾಚಿಕೊಳ್ಳುತ್ತ ಬಂದರೆ, ಬೆಳೆಯದೆ ಇರುವ ಕೂದಲು ಕೂಡಾ ಬೆಳೆಯುವದು. ಇದರ ಸುವಾಸನೆಯನ್ನು ಹೇಳುವದಕ್ಕೆ ಸಾಧ್ಯವಿಲ್ಲ. ಈ ಎಣ್ಣೆಯನ್ನು ಬಹಳ ದಿವಸ ಪ್ರಯತ್ನಮಾಡಿ ಸಕಲ ಜನರಿಗೆ ಬಹಳ ಕಮ್ಮಿ ಧಾರಣೆಗೆ ಕಳುಹಿಸುತ್ತೇವೆ ಇತರ ಕಂಪೆನಿಯಲ್ಲಿ ಇಷ್ಟು ಕಮ್ಮಿ ಧಾರಣೆಗೆ ದೊರೆಯಲಾರದು. ಸಾವಿರ ಗಟ್ಲೆ ಖರ್ಚು ಆಗುತ್ತಿವೆ ನೀವು ಎಷ್ಟೋ ಕಂಪೆನಿಗಳಲ್ಲಿ ಪರಿಮಳ ತೈಲವನ್ನು ಕೊಂಡುಕೊಂಡಿರಬಹುದು ಆದರೆ ಒಂದು ಸಲ ನಮ್ಮ ಹತ್ತಿರ ತರಿಸಿ ನೋಡಿದರೆ ಅದಕ್ಕೂ ನಮ್ಮ ವಸ್ತುವಿಗೂ ಇರುವ ವ್ಯತ್ಯಾಸವನ್ನು ನೀವೇ ತಿಳಿದುಕೊಳ್ಳಬಹುದು ಬರೀ ಮಾತುಗಳಿಂದೇನು? ದೇಹದಲ್ಲಿ ಇರುವ ಉಷ್ಣವನ್ನು ತೆಗೆದು ಕಣ್ಣುಗಳಿಗೆ ತಂಪುಕೊಡುವುದು

ಇನಾಂ ಸಾಮಾನುಗಳ ವಿವರ.

ಕೊಡೆಗಿಣಿಗಳು 6, ತಾಂಬೂಲ ಪಾತ್ರೆಗಳು 40, ಸಂದನಬಿಲ್ಲೆ 1, ಕಾರೊನೇಷನ್ ಪೆಟ್ಟಿಗೆ 1, ದಂತದ ಬಾಚಣಿಗೆ 1, ಕುಂಕುಮ ಭರಣಿ 1, ಕಾಟಿಗೆ ಭರಣಿ 1, ಕನ್ನಡಿ 1, ರವಿವರ್ಮ ಫೋಸ್ಟು ಕಾರ್ಡುಗಳು 6, ಅತ್ತರು ಬಿಲ್ಲೆ 1, ಬ್ರೂಚ್ 1

ನಮ್ಮ ವಿಳಾಸ:—

ಕಮಲಾರಾಮು ಎಂಡ್ ಕೊ, **Kamalaram & Co,**

ನಂ 28 ಇರುಳಪ್ಪನ ಬೀದಿ, *No 28 Erulappan Street,*

ಮದ್ರಾಸು. MADRAS.

ಈಗಲೇ ತಯಾರಾಗಿವೆ!

ಗ್ರಾಮ ಮುನ್ಸಿಫ ಕೋರ್ಟುಗಳಿಗೆ ಸಂಬಂಧಿಸಿದ ಫೋರ್ಮುಗಳು 100ಕ್ಕೆ ಆಣೆ 6 ಮಾತ್ರ.

ಫಿರ್ಯಾದಿನ ರಶೀದಿ	100ರ	ಪುಸ್ತಕ	1ಕ್ಕೆ	0—8—0
,,	,,	50ರ	,,	,,	0—4—0
ಇಂಗ್ಲೀಷು	,,	50ರ	,,	,,	0—8—0
,,	,,	25ರ	,,	,,	0—4—0
ಗೇಣಿ	,,	50ರ	,,	,,	0—6—0
,,	,,	25ರ	,,	,,	0—3—0
ಶಾಲಿ	,,	50ರ	,,	,,	0—4—0
,,	,,	25ರ	,,	,,	0—2—0
ಡೆಲಿವರಿ ಪುಸ್ತಕ 1ರ					0—8—0
ವಕಾಲತ್ ನಾಮೆ ಪ್ರಕಾರ		100ಕ್ಕೆ			0-10—0.
ನೋಟೀಸು ಫೋರ್ಮು			,,		0-12—0.
ರಶೀದಿಟು ಫೋರ್ಮು					0-12—0.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್

ರಥಬೀದಿ ಮಂಗಳೂರು.

ಮಾರಾಟಕ್ಕೆ ಸಿದ್ಧವಿದೆ! ಪುರಾತನ ಸಂಗ್ರಹ! ನೂತನಗ್ರಂಥ!

ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ

ಮತ್ತು

ಭೂತಾಳಪಾಂಡ್ಯರಾಯನ ಅಳಿಯ ಕಟ್ಟು

ಈ ನವೀನ ಗ್ರಂಥದಲ್ಲಿ ಪರಶುರಾಮದೇವರ ಸೃಷ್ಟಿ ಲಾಗಾಯಿತು ಬ್ರಿಟಿಷ್ ಮಹಾರಾಜರ ಆಳಿಕೆ ವರೇಗಿನ ಕನ್ನಡಜಿಲ್ಲೆಯ ಪೂರ್ವದ ಎಲ್ಲಾ ರಾಜರ ಚರಿತ್ರೆಗಳೂ, ಹೆಸರುಗಳೂ ಧರ್ಮರಾಯನ ನಂತರ ಕಲಿಯುಗದಲ್ಲಿ ರಾಜ್ಯವಾಳಿದ ಕ್ಷತ್ರಿರಾಜರ ಹೆಸರುಗಳೂ, ಕಾಲಗಳೂ ಸರಿಯಾಗಿರುವದಲ್ಲದೆ, ಮಯೂರವರ್ಮನೇ ಮೊದಲಾದ ಮಹಾ ಪುರುಷರ ಚರಿತ್ರೆಗಳೂ, ಅಹಿಕ್ಷೇತ್ರದಿಂದ ಬ್ರಾಹ್ಮಣರನ್ನು ಕರಿಸಿ ಅವರಿಗೆ ನೇಮಿಸಿದ 326 ಬಹುಮಾನದ ಹೆಸರುಗಳೂ, ಅವರ ಸ್ಥಾನಮಾನಗಳೂ, ಅಳಿಯಸಂತಾನದ ಸಂಪೂರ್ಣ ಅಭಿಪ್ರಾಯಗಳಿರುವ ಭೂತಾಳಪಾಂಡ್ಯನ ಪೂರ್ಣ ಚರಿತ್ರೆಯೂ, ಕಟ್ಟು, ಕಟ್ಟಳೆ, ದಾನ, ಮರ್ಯಾದೆ, ಜಾತಿ ನೀತಿ ವಿಚಾರಗಳೂ ಅನೇಕ ಕಡೆಗಳಲ್ಲಿದ್ದ ಪೂರ್ವ ಶಿಲಾಶಾಸನಗಳ ಯಥಾ ನಕಲುಗಳೂ ತಾಮ್ರಶಾಸನಗಳ ತದ್ಪ್ರತಿಗಳೂ ಕೂಡಾ ಭರಿತವಾಗಿ ಸಹ್ಯಾದ್ರಿ ಗ್ರಾಮಪದ್ಧತಿ, ರಾಜವಂಶಾವಳಿ ಮೊದಲಾದ ಅಪೂರ್ವ ಗ್ರಂಥಗಳ ಸಹಾಯದಿಂದ ಕೆಲವು ವರ್ಷಗಳಿಂದ ಸಂಗ್ರಹಿಸಿದ ನೂತನ ಸಂಗ್ರಹವು ಹೋಬಳಿ, ಮಾಗಣೆ, ಮನೆತನ, ಅರಸು, ಬಳ್ಳಾಲರು, ಗ್ರಾಮಗುರಿಕಾರರು, ಪಂಚಾಯಿತಿದಾರರು, ನ್ಯಾಯಶಾಲೆಗಳು, ಉಪಾಧ್ಯಾಯರೂ ವಿದ್ಯಾರ್ಥಿಗಳೂ ಗ್ರಾಮಾಧಿಕಾರಿಗಳೂ ವಕ್ಕರೆ ಓದುಬರಹ ಬಲ್ಲ ಮಹನೀಯರಿಗೆ ತಿಳಿಯಲನುಕೂಲವಾದ 296 ಪುಟಗಳು ಭರಿತವಾಗಿ ಸದಾ ಕೈಯಲ್ಲಿರುವದಕ್ಕೆ ಯೋಗ್ಯವಾದ ಈ ಪುಸ್ತಕವು ಈಗಲೇ ತಯಾರಾಗಿ ಸಿದ್ಧವಿದೆ ಅನೇಕ ಮಹನೀಯರ ಉತ್ತಮ ಅಭಿಪ್ರಾಯಗಳೂ ಬಂದಿರುತ್ತವೆ

ಪುಸ್ತಕದ ಬೆಲೆಯು ಈಗ ತರಿಸುವವರಿಗೆ 1 — 4 — 0 ಟಪ್ಪಾಲ್ ಖರ್ಚು ಬೇರೆ

ಸಮಯಾನುಸಾರ ಕ್ರಯವು 0 — 4 — 0 ಏರಿಸಲಾದೀತು

ಹೆಚ್ಚಿಗೆ ಪ್ರತಿಗಳನ್ನು ಕೊಂಡುಕೊಳ್ಳುವವರಿಗೂ ವ್ಯಾಪಾರಸ್ಥರಿಗೂ ಒಳ್ಳೇ ಕಮಿಷನ್ ಕೊಡಲಾಗುವದು

ಕುಶಲಮಂದಿರ,
ಶ್ರೀರಾಜರಾಜೇಶ್ವರಿ ದೇವಸ್ಥಾನ,
ಪೊಳಲಿ

ಎನ್. ಎ ಶೀನಪ್ಪ ಹೆಗ್ಗಡೆ,
ಅಮುಣಂಜೆಗುತ್ತು,
ಗುರುಪುರ ಪೋಸ್ಟು, ದ

ಈ ಗ್ರಂಥವು ಈ ಕೆಳಗಿನ ವಿಳಾಸದವರಲ್ಲಿಯೂ ದೊರಕುವದು.

1. ಶಾರದಾ ಪ್ರೆಸ್, ಮಂಗಳೂರು
2. ಬಂಟರ ವಿದ್ಯಾರ್ಥಿಭವನ, ಮಂಗಳೂರು.
3. ಯೂನಿಯನ್ ಮಾರ್ಟ್, ಮಂಗಳೂರು.
4. ಕಾದಂಬರಿ ಸಂಗ್ರಹ ಆಫೀಸು, ಚಾಮರಾಜನಗರ ಮೈಸೂರು.
5. ಪ್ರಭಾಕರ ಮುದ್ರಣಯಂತ್ರ, ಉಡುಪಿ
6. ಹಿರಿಯಡ್ಕ ಕೃಷ್ಣ ರಘುನಾಥ ಕಾಮತ್, ಮರ್ಚಂಟ್ ಕಾರ್ಕಳ.

ಕರ್ನಾಟಕ ವೃತ್ತ ಮತ್ತು ಧನಂಜಯ.

ಕಳೆದ 25 ವರ್ಷಗಳಿಂದ ಭಾಷಾ ಸೇವೆಯನ್ನೂ ದೇಶ ಸೇವೆಯನ್ನೂ ಮಾಡುತ್ತಿರುವ ಈ ವಾರಪತ್ರಿಕೆಯು ಧಾರವಾಡದಲ್ಲಿ ಪ್ರತಿ ಮಂಗಳವಾರವೂ ಪ್ರಕಟಿಸಲ್ಪಡುವದು ಲೋಕವ್ಯವಹಾರದ ಉಪಯುಕ್ತ ವಿಷಯಗಳ ಸದಭಿಪ್ರಾಯವನ್ನು ಜನರಲ್ಲಿ ಉಂಟುಮಾಡುವಂಥ ಚಲೋ ಸ್ಫುಟ ಲೇಖಗಳುಳ್ಳ ಮುಂಬಯಿ ಕರ್ನಾಟಕದ ಉತ್ತಮ ತರಗತಿಯ ಈ ಪತ್ರವನ್ನು ದಕ್ಷಿಣಕನ್ನಡದವರೂ ಓದುವದು ಅಗತ್ಯ.

ಡೊಡ್ಡ ರೊಯಲ್ ಸ್ಯಾಚಿನ ಈ ಪತ್ರಿಕೆಗೆ ವಾರ್ಷಿಕ ಚಂದಾ ಮೊಬಲಗು ಟಪ್ಪಾಲು ಹಾಸಲು ಸೇರಿ ರೂ ೨—೮—೦ ಆಗಿರುತ್ತದೆ; ಚಂದಾದಾರರಾಗಿ ಸೇರಲಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವದು.

ಮ್ಯಾನೇಜರ್, ಕರ್ನಾಟಕ ವೃತ್ತ ಮತ್ತು ಧನಂಜಯ,
ಮಂಗಳವಾರಪೇಟೆ, ಧಾರವಾಡ.

ನೀವು ಹೊಗೆಸೊಪ್ಪನ್ನು ಅಗಿಯುತ್ತೀರೋ?

ಹೊಗೆಸೊಪ್ಪನ್ನು ಅಗಿಯುವ ಅಭ್ಯಾಸವು ಬಹಳ ಹಾನಿಕರವಾಗಿದೆ

ಮಲಬಾರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಹೊಗೆಸೊಪ್ಪನ್ನು ಸೇವಿಸುತ್ತಿರುವವರು ಬಹಳ ಜನರಿರುವರು. ಹೊಗೆಸೊಪ್ಪಿನಲ್ಲಿ "ನಿಕೋಟಿನ್" ಎಂತ ಕರೆಯಲ್ಪಡುವ ವಿಷಪದಾರ್ಥವಿದೆ. ಇತರ ಮಾದಕ ಪದಾರ್ಥಗಳು ನಮ್ಮ ನರಗಳನ್ನು ಪ್ರಚೋದನ ಪಡಿಸುವಂತೆ "ನಿಕೋಟಿನ್" ಸಹ ನರಗಳಲ್ಲಿ ತತ್ಕಾಲದ ಮಟ್ಟಿಗೆ ಉದ್ದೀಪನೆಯನ್ನುಂಟುಮಾಡುವುದು. ನರಗಳು ಹೀಗೆ ನಿರರ್ಥಕವಾಗಿ ಆಯಾಸಗೊಳ್ಳುವುದರಿಂದ ನರ ಸಂಸ್ಥಾನವು ಹಾಳಾಗಿ ದೇಹಪ್ರಕೃತಿಯು ಕೆಡುವುದು. ಇಷ್ಟೇ ಅಲ್ಲ, ಭಯಂಕರವಾದ "ಕೆನ್ಸರ್" ಎಂಬ ವ್ರಣಗಳು ನಾಲಿಗೆಯಲ್ಲಿಯೂ ತುಟಿಗಳಲ್ಲಿಯೂ ಹೊಗೆಸೊಪ್ಪಿನ ಸೇವನೆಯಿಂದ ಉಂಟಾಗುವವು. ಇದರ ಚರ್ವಣದಿಂದ ಬಾಯಿಯು ಹೊಲಸಾಗುವದಲ್ಲದೆ ಈ ಅಭ್ಯಾಸ ಹಿಡಿದವರಿಂದ ಹಲ್ಲುಗಳನ್ನು ಸ್ವಚ್ಛವಾಗಿಡುವುದು ತುಂಬಾ ಅಸಾಧ್ಯವಾಗುವದು. ಅಲ್ಲಾಡುತ್ತಿರುವ ಹಲ್ಲುಗಳು ಗಟ್ಟಿಯಾಗುತ್ತವೆ, ರಕ್ತವನ್ನು ಸುರಿಸುತ್ತಿರುವ ದಂತ ಮೂಲಗಳು ಸರಿಯಾಗುತ್ತವೆ, ಹಲ್ಲುನೋವು ವಾಸಿಯಾಗುತ್ತದೆ ಎಂಬೀ ಭ್ರಾಂತಿಯಿಂದ ಕೆಲವರು ಹೊಗೆಸೊಪ್ಪನ್ನು ಉಪಯೋಗಿಸುವರು. ಆದರೆ ಇದರ ಉಪಯೋಗದಿಂದ ಈ ಪ್ರಯೋಜನಗಳಲ್ಲಿ ಒಂದಾದರೂ ಎಂದೂ ಲಭಿಸುವದಿಲ್ಲ.

ಪ್ರತಿನಿತ್ಯದಲ್ಲಿಯೂ ನೀವು ನಾವು ತಯ್ಯಾರಿಸುವ
ಪೊರೆನಾಶಕರ ಮತ್ತು ಚೊಗರು ಚೆನ್ನಾಗುಳ್ಳ

"ದಂತಮಂಜನ"

ವನ್ನು ಉಪಯೋಗಿಸಿದರೆ ಹೊಗೆಸೊಪ್ಪನ್ನು ಜಗಿಯುವ ಅಭ್ಯಾಸವನ್ನು ಮಾಡಿಕೊಳ್ಳಬೇಕೆಂಬುದೇ ಇಲ್ಲ. ಅಂಥಾ ಅಭ್ಯಾಸವಿದ್ದರೂ ಅದನ್ನು ಇದರ ಉಪಯೋಗದಿಂದ ಬಿಡಲು ಸಾಧ್ಯವಾಗುವುದು.

ಈ ದಂತಮಂಜನವು ಡಾಂಭಿಕ ವೈದ್ಯರ ಅಂತರಂಗದ ಕುಂಬು ಔಷಧವಲ್ಲ. ಕಳೆದ ೧೫ ವರುಷಗಳಿಂದ ಸರ್ವಸಾಮಾನ್ಯವಾಗಿ ಇದು ಎಲ್ಲರಿಂದಲೂ ಉಪಯೋಗಿಸಲ್ಪಟ್ಟಿರುತ್ತದೆ. ದಂತದ ಮೂಲಗಳಲ್ಲಿಯೂ ಹಲ್ಲುಗಳಲ್ಲಿಯೂ ಉಂಟಾಗುವ ಅನಾರೋಗ್ಯಕರ ಕ್ರಿಮಿಗಳನ್ನು ನಾಶಪಡಿಸುವ ವನಸ್ಪತಿಗಳಿಂದ ಇದು ಕೂಡಿರುವುದು. ಇದರ ಉಪಯೋಗದಿಂದ, ದಂತಮೂಲಗಳು ಗಟ್ಟಿಯಾಗುವವು; ದಂತಮೂಲಗಳಲ್ಲಿ ಆಗಿಂದಾಗ್ಗೆ ತಲೆದೋರುವ ಹುಣ್ಣುಗಳು, ಹಲ್ಲುನೋವು ಗುಣಹೊಂದುವವು, ಬಾಯಿಯಿಂದ ಹೊರಡುವ ದುರ್ವಾಸನೆಯು ಹೋಗಿ ಸುವಾಸನೆಯು ಉಂಟಾಗುವದು. ಹೊಲಸಾದ ಹಲ್ಲುಗಳಲ್ಲಿ ಉಂಟಾಗುವ ಕ್ರಿಮಿಗಳು ಅನ್ನಕೋಶದೊಳಗೆ ಸೇರಿಕೊಂಡು ಡಿಸ್ಪೆಪ್ಸಿಯಾ ಎಂಬ ಅಮ್ಲಾಜೀರ್ಣ ರೋಗವನ್ನುಂಟುಮಾಡುವವು ಎಂತ ವೈದ್ಯರ ಅನುಭವಕ್ಕೆ ಬಂದಿರುವುದು. ಆದ್ದರಿಂದ ಹಲ್ಲುಗಳನ್ನು ಸ್ವಚ್ಛವಾಗಿಡುವುದು ಅಗತ್ಯವಾಗಿರುವುದು. ಸಭ್ಯತೆಗೆ ಶುಚಿರ್ಭೂತರಾಗಿರುವುದು ಅಗತ್ಯ. ಹೊಲಸಾದ ಹಲ್ಲುಗಳುಳ್ಳವರು ಶುಚಿರ್ಭೂತರಾಗಿರುವದು ಸಾಧ್ಯವಲ್ಲ. ಸುಸ್ವರದಿಂದ ಮಾತುಗಳನ್ನಾಡಲಿಕ್ಕೂ, ಅಂದಚಂದಕ್ಕೂ, ಆರೋಗ್ಯಕ್ಕೂ, ಸ್ವಚ್ಛವಾದ ಹಲ್ಲುಗಳು ಬೇಕಾಗಿವೆ. ನಮ್ಮ ಆಹಾರವನ್ನು ಚನ್ನಾಗಿ ಜಗಿಯಲು ಗಟ್ಟಿಯಾದ ಹಲ್ಲುಗಳು ಇರಬೇಕು. ಆಹಾರವನ್ನು ಹಲ್ಲುಗಳಿಂದ ಚನ್ನಾಗಿ ಜಗಿಯದಿದ್ದರೆ, ಅವುಗಳು ಸರಿಯಾಗಿ ಜೀರ್ಣವಾಗದೆ ಶರೀರಕ್ಕೆ ಬೇಕಾದ ಪುಷ್ಟಿಯು ದೊರಕದು. ಆದ್ದರಿಂದ ನಮ್ಮ ದಂತಮಂಜನವನ್ನು ಉಪಯೋಗಿಸಿಕೊಂಡು ಹೊಗೆಸೊಪ್ಪನ್ನು ಸೇವಿಸುವುದನ್ನು ಬಿಟ್ಟುಬಿಡಿ. ಈ ದಂತಮಂಜನವನ್ನು ಉಪಯೋಗಿಸಿಕೊಳ್ಳುವ ಸಾವಿರಾರು ಜನರು ಇದರ ಪ್ರಯೋಜನವನ್ನು ನೋಡಿಕೊಂಡು ಒಂದು ದಿನವಾದರೂ ಇದರ ಉಪಯೋಗವನ್ನು ಬಿಡದೆ ಮಾಡುತ್ತಿದ್ದಾರೆ.

ಕ್ರಯ ಡಬ್ಬಿ ೧ಕ್ಕೆ ಆಣೆ ೬. ೧ ಡಜನು ಡಬ್ಬಿಗಳಿಗೆ ರೂ. ೪.

ಒಮ್ಮೆ ಹಲ್ಲುಗಳನ್ನುಜ್ಜಲು ಈ ಹುಡಿಯು ಸ್ವಲ್ಪಮಾತ್ರವೇ ಇದ್ದರೆ ಸಾಕಾಗುವದರಿಂದ ಒಂದು ತಿಂಗಳಿಗೆ ಒಬ್ಬನಿಗೆ ಒಂದು ಡಬ್ಬಿಯಕ್ಕಿಂತ ಹೆಚ್ಚಿಗೆ ಬೇಡ. ಈ ಕಾರಣದಿಂದ ಇದು ಅಗ್ಗವಾಗಿದೆ. ಬ್ರಶ್ಶಿನಿಂದ ಇದನ್ನು ಉಪಯೋಗಿಸಿದ್ದರೆ ಮತ್ತಷ್ಟು ದೀರ್ಘಕಾಲಕ್ಕೆ ಒಂದು ಡಬ್ಬಿ ದಂತಮಂಜನವು ಸಾಕಾಗುತ್ತ.

ಅತ್ಯುತ್ಕೃಷ್ಟವಾದ ಬ್ರುಶ್ ಒಂದಕ್ಕೆ ಆಣೆ ೧೦

ಮೇಲಿನ ಕ್ರಯದಲ್ಲಿ ಟಪ್ಪಾಲು ಮೂಲಕ ಕಳುಹಿಸಿಕೊಡುವ ಖರ್ಚು ಕೂಡಿರದು. ಆದ್ದರಿಂದ ಟಪ್ಪಾಲು ಹಾಸಲು ಪ್ರತ್ಯೇಕವಾಗಿರುವುದು.

ವಿಳಾಸ:— ಶ್ರೀ ಕೃಷ್ಣನ್ ಬ್ರದರ್ಸ್, ಔಷಧಿವ್ಯಾಪಾರಸ್ಥರು, ಪೋಸ್ಟ್ ಬೋಕ್ಸ್ ನಂಬ್ರ 166, ಮದ್ರಾಸು.

Sri Krishnan Brothers,

CHEMISTS & OPTICIANS, POST BOX NO. 166, MADRAS

ನಮ್ಮಲ್ಲಿಯ ಸಾಮಾನುಗಳು ಈ ಕೆಳಗಿನ ವಿಳಾಸದವರಲ್ಲಿಯೂ ದೊರಿಯುತ್ತವೆ.

ಕುಬೇರ ಸುಬ್ಬರಾವ್,
ಜನರಲ್ ಮರ್ಚೆಂಟ್,
ರಥಬೀದಿ, ಮಂಗಳೂರು.

ಅನುಭವಸಿದ್ಧವಾದ ಔಷಧಗಳು

ಚಂದನಾದಿ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨ ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಚಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨-೮-೦.

೩. ಪಂಚತೀರಳ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಕ್ಕೇಕ ಅತ್ಯುತ್ತಮವು. ಪೌಷ್ಟಿಕವಾಗಿದೆ ರಾತಲಿಗೆ ೨ ರೂ

೫. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ಹಾರುಬಾವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ಸದೌಷಧಗಳಿಂದ ತಯಾರಿಸಿಯದೆ ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

ತಿಳ್ಳು ವಿಳಾಸ;—ಬಿ ಎಮ್. ನಾಥ್ ಮತ್ತು ಕಂಪೆನಿ,

ವೆಪರಿ ಪೋಸ್ಟು ಮದರಾಸು.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ಪರಿಸೆಯ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುರ್ಖುಶ್ವಾಸ, ಕಫ, ಕ್ಷಯಗಳ ಮೋಕ್ಷರಾಮಬಾಣವು. ರಾತಲಿಗೆ ೨ ರೂ.

೧೦ ಕಾಮ್ಯಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧ ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ ೬ ಆಣೆ.

೧೨ ಗಜಕರ್ಣ, ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೩ ನವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಬ್ರಾಹ್ಮೀ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುವಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಪತ್ರಕ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

B. M. Nath & Co., *Ayurvedic Chemists*,

Vepery Post, MADRAS.

ಬನ್ನಿರಿ! ನೋಡಿರಿ!! ತಿಳಿಯಿರಿ!!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.

ಬಲ್ಹಾತ ಮಿಶ್ಶನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ; ಮಿಶ್ಶನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಬೆಲ್ಜ ಎಂಬ ಹುರುಸು ಕಲ್ಲು ಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ನಗದಿ.

ಜೆ. ಎಸ್. ಸೋಜ ಎಂಡ್ ಕಂಪೆನಿ,

ಹಂಪನ್‌ಕಟ್ಟ. ಮಂಗಳೂರು

ಡೋಂಗರೆ

ಇವರ

ಬಾಲಾಮೃತ.

ಮಕ್ಕಳಿಗೆ

ಅತ್ಯುತ್ತಮವಾದ ಟಾನಿಕ್!

ಈ ಬಾಲಾಮೃತವನ್ನು ಉಪಯೋಗಿಸುವುದರಿಂದ ಮಕ್ಕಳು ಶಕ್ತಿವಂತರಾಗಿ ಆರೋಗ್ಯವಂತರಾಗುವರು. ಇದು ಸವಿ ಇರುವುದರಿಂದ ಮಕ್ಕಳು ಬಹಳ ಸಂತೋಷದಿಂದ ತಕೊಳ್ಳುತ್ತಾರೆ.

ಸೂಚನೆ:—ಬಾಲಾಮೃತವನ್ನು ಪಡಕೊಳ್ಳುವಾಗ ಡೋಂಗರೆಯವರ ಹೆಸರು ಇದ್ದದ್ದನ್ನೇ ನೋಡಿ ಪಡಕೊಳ್ಳಿರಿ ಇತರ ಕೀಳು ತರಗತಿಯದ್ದನ್ನು ಪಡಕೊಂಡು ಮೋಸಹೋಗಬೇಡಿರಿ.

ಬಾಟ್ಲಿ ಒಂದರ ಕ್ರಯ 0—12—0. ಟಪ್ಪಾಲು ಖರ್ಚು 0—4—0.

K. T. Dongare & Co., ಕೆ. ಟಿ. ಡೋಂಗರೆ ಎಂಡ್ ಕೊ.,

Girgaum, Bombay. ಗಿರಗಾಂ ಬೊಂಬಾಯಿ.

ಆತಂಕನಿಗ್ರಹ ಗುಳಿಗೆಗಳು,

ದೇಹದಲ್ಲಿ ಎಂಥಾ ರೋಗವು ಇರುವಲ್ಲಿ ಅದನ್ನು ಶೀಘ್ರದಲ್ಲಿ ಹೋಗಲಾಡಿಸುವ ಪ್ರಯತ್ನ ಮಾಡಿ ತಕ್ಕಂಥಾ ಔಷಧವು ಸೇವಿಸಿ ಅದನ್ನು ಗುಣಹೊಂದಿಸದಿದ್ದರೆ ರತ್ನವಾದ ದೇಹವು ಕ್ಷೀಣಿಸುವದು. ಆದಕಾರಣ ಹಾಗೂ ತಮಗೆ ಏನಾದರೂ ದೇಹಾಸೌಖ್ಯ ಕಂಡ ಬರುವಲ್ಲಿ ತಕ್ಷಣವೇ ಆತಂಕನಿಗ್ರಹ ಗುಳಿಗೆಗಳನ್ನು ಸೇವಿಸಿ ನಂತರ ದೇಹಬಲವನ್ನು ಸಾಧಿಸಿ ಅತಿ ಉತ್ತಮಕರವಾದ ರತ್ನವೆಂಬ ಔಷಧವು

ಕ್ರಯ 32 ಗುಳಿಗೆಗಳಿಗೆ 1 ರೂಪಾಯಿ.

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,

157, 159 ಆತಂಕನಿಗ್ರಹ ಔಷಧಾಲಯ, ಬ್ರಾಡ್ವೇ, ಮದ್ರಾಸ

ತಮ್ಮ ಏಜಂಟರು — 1 ಮೆಸ್ಸರ್ಸ್. ರಫಯೆಲ್ ಎಂಡ್ ಕೊ., ದ್ವಿಟೋಬಿಲ್ಡಿಂಗ

2 ಜುಬಿಲಿ ಕೇಕ್ ಬಜಾರ್, ಬೆಂಗಳೂರು. ಮಂಗಳೂರು

THE GREATEST TREASURE OF TRUE VEDIC PRINCIPLES.

ಸತ್ಯಾರ್ಥ ಪ್ರಕಾಶ.

ಮೊದಲನೇ ೧೦ ಅಧ್ಯಾಯಗಳ ಕನ್ನಡ ಭಾಷಾಂತರ.

ಇದರಲ್ಲಿ ಪ್ರಾಣಿಗಳಿಗೆ ಪರಸ್ಪರ ಸಂಬಂಧವು ಹ್ಯಾಗೆ ಉಂಟಾಯಿತೆಂಬುವದೂ, ಜೀವದ ಮತ್ತು ಪರಮೇಶ್ವರನ ಸಂಬಂಧವೂ, ಪರಮೇಶ್ವರನ ಓಂಕಾರಾದಿ ಹೆಸರುಗಳ ವ್ಯಾಖ್ಯೆಯೂ, ಮಕ್ಕಳ ಶಿಕ್ಷಣ ಪದ್ಧತಿಯೂ, ಬ್ರಹ್ಮಚರ್ಯಾದಿ ವ್ಯವಸ್ಥೆಗಳ ವರ್ಣನವೂ, ಬ್ರಾಹ್ಮಣ, ಕ್ಷತ್ರಿಯ ವೈಶ್ಯ ಶೂದ್ರರಿಗೆ ಮತ್ತು ಅಂತ್ಯಜರಿಗೆ ಹಾಗೂ ಸ್ತ್ರೀಯರಿಗೆ ವೇದಾಧ್ಯಯನದ ಅಧಿಕಾರವು ಇದ್ದ ಬಗ್ಗೆ ಸಪ್ರಮಾಣ ವಿವೇಚನವೂ, ಜಗತ್ತಿನ ಉತ್ಪತ್ತಿ ಸ್ಥಿತಿ ಮತ್ತು ಪ್ರಳಯಗಳ ವಿಚಾರವೂ, ಬಂಧ ಮೋಕ್ಷಗಳ ವಿಷಯವೂ, ಭಕ್ಷ್ಯಾಭಕ್ಷ್ಯಗಳ ವಿವೇಚನವೂ, ವೇದಾದಿ ಸಚ್ಛಾಸ್ತ್ರಗಳ ಆಧಾರದಿಂದ ಶ್ರೀ ಸ್ವಾಮಿ ದಯಾನಂದ ಸರಸ್ವತಿಗಳವರು ಚನ್ನಾಗಿ ಮಾಡಿದ್ದಾರೆ. ಶ್ರೀ ಸ್ವಾಮಿ ದಯಾನಂದ ಸರಸ್ವತಿಯವರ ಚರಿತ್ರವೂ, ಅವರು ಮಿಶನರಿ ಮತ್ತು ಮೌಲ್ವಿಗಳೊಡನೆ ಮಾಡಿದ ತರ್ಕಗಳೂ ಪ ಸನಾತನ ವೈದಿಕಧರ್ಮದ ಸತ್ಯಾರ್ಥವನ್ನು ಬೋಧಿಸುವ ಗಹನ ವಿಷಯಗಳೂ ಇದರಲ್ಲಿ ಕೊಟ್ಟಿವೆ. ಕಿಮ್ಮತ್ತು ರೂ ೧—೮—೦ ವಿದ್ಯಾರ್ಥಿಯರಿಗೆ ರೂ ೧—೪—೦ ಟಪ್ಪಾಲು ಖರ್ಚು ಬೇರೆ ಪುಟ 560

ಸತ್ಯಾರ್ಥ ಪ್ರಕಾಶ.

(೧೧ನೇ ಅಧ್ಯಾಯದ ಕನ್ನಡ ಭಾಷಾಂತರ)

ಇದರಲ್ಲಿ ಆರ್ಯಾವರ್ತ ದೇಶದಿಂದಲೇ ಇತರ ದೇಶಗಳು ವಿದ್ಯೆಯನ್ನು ಪ್ರಾಚೀನ ಕಾಲದಲ್ಲಿ ಕಲಿಯುತ್ತಿದ್ದರೆಂತಲೂ ಆರ್ಯಾವರ್ತ ದೇಶದ ಅವನತಿಯ ಕಾರಣಗಳೂ ಅದ್ವೈತಮತ, ಮೂರ್ತಿಪೂಜೆ, ತಪ್ತಮುದ್ರಾಧಾರಣೆ, ಗಯಾಶ್ರಾದ್ಧ, ಪುರಾಣ ಫಲ, ಜ್ಯೋತಿಷ, ಬ್ರಾಹ್ಮಸಮಾಜ ಪ್ರಾರ್ಥನಾಸಮಾಜ ಮುಂತಾದ ಬಹಳೇ ಪಂಥಗಳ ಪರೀಕ್ಷಣವು ಮಾಡಿಯದೆ. ಕಿಮ್ಮತ್ತು ಆಣೆ 8 ವಿದ್ಯಾರ್ಥಿಯರಿಗೆ ಆಣೆ ೬. ಡಾನು ಡೆಮ್ಮಿ ಅಷ್ಟಪತ್ರದ ಪುಟ ೧೫೦ ಟಪ್ಪಾಲು ಖರ್ಚು ಬೇರೆ

ಈ ಗ್ರಂಥವನ್ನು ಹಿಂದೀ ಭಾಷೆಯೊಳಗಿನಿಂದ ಕನ್ನಡದಲ್ಲಿ ಸುಬ್ರಾವ್ ಶೇಷಗಿರಿ ಹಾಳಕರ, ಬಿ. ಎ. ಎಲ್ ಎಲ್ ಬಿ, ಹ್ಯಾಕೋರ್ಟು ವಕೀಲ್, ರಂಗೂನ್, ಇವರು ಮಾಡಿರುತ್ತಾರೆ. ಹಿಂದು (ಆರ್ಯ) ಧರ್ಮಾಭಿಮಾನಿಯಾದ ಪ್ರತಿಯೊಬ್ಬನು ಸಂಗ್ರಹಿಸಲಿಕ್ಕೆ ದುರ್ಲಭವಾದ ಅತ್ಯಾವಶ್ಯಕ ಗ್ರಂಥವು. ಇದರ ಬೆಲೆಯಾದರೂ ಸರ್ವರೂ ಕೊಂಡುಕೊಳ್ಳುವಂತೆ ತೀರ ಕಮ್ಮಿ ಬೆಲೆಯನ್ನು ಇಟ್ಟಿರುತ್ತದೆ

ಸಿಗುವ ವಿಳಾಸ — ಎಸ್ ಎಲ್. ಕಾಮತ್ ಧಾಕಪ್ಪನವರ

ಪೋಸ್ಟು ಶಿರ್ಸಿ, ಜಿಲ್ಲಾ ಉತ್ತರ ಕನ್ನಡ.

S. U. N. & CO,

BENARES CITY, U P.

ಇಪ್ಪತ್ತೈದು ಸಾವಿರ ರೂಪಾಯಿನ ಮಾಲುಗಳನ್ನು

ಅಸಲ್ ಕ್ರಯಕ್ಕೆ ಕೊಡುತ್ತೇವೆ.

ಈ ತಿಂಗಳು ಮಾತ್ರ

ಈ ವರುಷ ಲಗ್ನಕಾರ್ಯಗಳಿಗೆ ತಯಾರಿಸಿದ ಬನಾರಸ್ ಜರಿ ಸಾದಾ ಸೀರೆ ಬೂಟಾ ಸೀರೆ, ಪೇಟ ಮಗುಟ, ದುಪಟ್ಟ, ಕಣಗಳ, ಕೋಟು ಸಿಲ್ಕುಥಾನುಗಳು ಪಟುರಿ ಚದರ್, ಕಾಶ್ಮೀರ್ ಸಾದಾ ಜರಿ ಶಾಲುಗಳು, ಕೊನಾರ ಡ. ಸೀರೆ, ರುದ್ರಾಕ್ಷಿ ಮೊದಲಾದ ಎಲ್ಲಾ ತರದ ಸುಮಾರು 25,000 ರೂಪಾಯಿನ ಮಾಲುಗಳು ಉಳಿದಿರುವುದರಿಂದ ನಾವು ಅದನ್ನು ಅಸಲ್ ಕ್ರಯಕ್ಕೆ ಕೊಡುತ್ತೇವೆ ಬೇಕಾದವರು ಬೇಗನೆ ಬರೆದು ತರಿಸಿಕೊಳ್ಳಬಹುದು

ಈ ತಿಂಗಳು ಕಳೆದ ಮೇಲೆ ಇಂಥಾ ಸಮಯ ಸಿಕ್ಕುವುದಿಲ್ಲ ಬೇಗ ಬರೆದು ತರಿಸಿಕೊಳ್ಳಿ

ತಮ್ಮ ವಿಳಾಸ — ಯಸ್.ಯು.ಯನ್. ಮತ್ತು ಕಂಪೆನಿ, ಕಾಶಿ

Estd 1888 ಸ್ಥಾಪನೆ 1888

K. B. RELE & Cos.,—BOMBAY

ಕೆ. ಬಿ. ರೇಳೆ ಕಂಪನಿಕೃತ

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮುಲಮು.

ಎಷ್ಟೋ ಹಳತ, ಕರೆ ಮತ್ತು ಹಟಮಾರಿ ಗಜಕರ್ಣವು ಈ ಮುಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦–೨೫ ವರ್ಷಗಳ ಹಳತ, ಮೈಮನೆ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯುವೇ. ಬೆಲೆ ಬಾಟ್ಲಿ ೧ಕ್ಕೆ ೪ ಆಣೆ ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ಸಾಳ್ಕೇ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲೆಯು

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳೆಲ್ಲಾ ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಟ್ಟೆಗಳೂ, ಜಖುಮುಗಳೂ, ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಜಡಿಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ತಲೆ ಕೈಕಾಲುಗಳುರಿಯೋಣ, ಕೈ ಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ [illegible]ವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ೧ಕ್ಕೆ ರೂ [illegible] ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತೆಗೆದುಕೊಳ್ಳುವವರಿಗೆ ಭರಪೂರ ಕಮಿಷನ್

ಕೆ. ಬಿ. ರೇಳೆ ಸನ್ಸ ಕಂಪೆನಿ, ಗಿರಗಾಂವ ನಂ. ೪ ಮುಂಬಯಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷದಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ ಪ್ರತಿ ವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ, ಒರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಆಸ್ಟ್ರಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ

ಮಹಾಭಾಗ ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾಕುಮಾತಿಗೂ ವೈದ್ಯರ ಸಮಯ ವನ್ನು ಕಾದು ಕೊರೆಯಿಡುವುದು ನಿಜವಾಗಿಯೂ ತಪ್ಪುವುದ

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೆಟೀನೆ, ಬಲಹೀನತೆ ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧೌಷಧ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ ಮಾತ್ರ

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—~—0
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—12—0
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ ~—0—0

ಯೋಗ್ಯತಾ ಪತ್ರಗಳು.

ಮ॥ ರಾ॥ ಡಾಕ್ಟರ್ ಪ್ರಭಾಕರ್ ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರಾಜುಯೇಟ್ ಎನ್. ವೈ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ, ಐ ಎಸ್ ಆಫ್ ದಿ ಸ್ಯಾನಿಟೆರಿ ಇನ್‌ಸ್ಟಿಟ್ಯೂಟ್, ಲಂಡನ್ ಕನ್‌ಸಲ್ಟಿಂಗ್ ಕೆಮಿಸ್ಟ್, ಎಗಿಯರಿವೇನ್ ನಂ 2 ಬೊಂಬೈ ಇವರು ಬರೆದಿರುವುದು. ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯ ನೋವು, ಹೊಟ್ಟೇನೋವು, ವಿಷಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ, ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ

ಮ॥ ರಾ॥ ಪಿ ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್, ಮತ್ತು ಸ್ಯಾನಿಟೆರಿ ಕಮಿಷನರ್, ಮೈಸೂರು ಗವರ್ನ್‌ಮೆಂಟ್ ಇವರು ಬರೆದಿರುವುದು ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧ ಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ವೈದ್ಯಶಾಲೆಯಲ್ಲಿ ಅನೇಕ ತರದ ಉಪಯುಕ್ತವಾದ ಕರ್ಣಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯ್ಯಾರು ಮಾಡುತ್ತಿರುತ್ತಾರೆ

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಅಶಕ್ತರಾದ ಸ್ತ್ರೀಯರಿರಾ!!!

..ರ್ಭಾವಸ್ಥೆಯಲ್ಲಿಯು, ವ ಅನಂತರ ತೋರಿಬರುವ ಸರ್ವ ಬಗೆಯ ವಿಕಾರಗಳಿಗೆ ನಿಮಗೆ ಒಂದು ಉಪಾಯವು ಅಗತ್ಯವಿರುವುದು ಆ ಉಪಾಯವಾದರೋ

"ಗುಡೆರಿನ್"

ಎಂಬ ಹೆಸರಿನ ಈ ಔಷಧವನ್ನು ಸೇವಿಸುವುದೇ! ಸೂರ್ಯನಕಿರಣಗಳಿಂ ಇಬ್ಬನಿಯು ಮೇಲೆ ಎರಚುತ್ತಲೇ ಇಬ್ಬನಿಯೆಲ್ಲವೂ ಹೇಗೆ ಆರಿಹೋಗುವುದೋ, ಅದೇ ಮರ್ಯಾದೆಯಲ್ಲಿ ಅಶಕ್ತರಾದ ಸ್ತ್ರೀಯರು ಈ "ಗುಡೆರಿನ್" ಎಂಬ ಔಷಧವನ್ನು ಸೇವಿಸುತ್ತಲೇ, ಅವರ ಶಾರೀರಕ ದುಃಖಗಳೆಲ್ಲವೂ ಉತ್ತರಕ್ಷಣದಲ್ಲಿಯೇ ಹುಟ್ಟಡಗಿ ಹೋಗುವವು. ಅನಿಯಮಿತವಾದ ಋತುಸ್ರಾವ, ಅಶಕ್ತತೆ, ಇವೆಲ್ಲ ರೋಗಗಳಿಗೆ ಇದು ರಾಮಬಾಣವೇ ಸರಿ.

ಹದಿನಾರು ಸಾವಿರ (16,000)

ಕ್ಕಿಂತ ಹೆಚ್ಚು ಡಾಕ್ತರರು ಬಹಳ ಜಾಗ್ರತೆಯಿಂದ ಈ "ಗುಡೆರಿನನ್ನು" ಶೋಧಿಸಿ, ಮೇಲೆ ಹೇಳಿದ ರೋಗಗಳಿಗೆ ಇದೇ ಸಿದ್ಧೌಷಧವೆಂದು ನಿರ್ಧಾರಗೈದಿರುವದರಿಂದ, ಈ ಔಷಧವು ಅಸಂಖ್ಯವಾದ ಔಷಧಾಲಯಗಳಲ್ಲಿ ಉಪಯೋಗಿಸಲ್ಪಡುತ್ತದೆ ಇದು "ಹಿಸ್ಟೀರಿಯಾ" ಮೊದಲಾದ ಸ್ತ್ರೀಯರ ಋತುಸ್ರಾವ ಸಂಬಂಧವಾದ ಸರ್ವರೋಗಗಳಿಗೂ ಮಹೋಪಕಾರಿಯು. ಪ್ರಕೃತ ಪ್ರಸೂತವಾದೊಡನೆ ಅನ್ಯೌಷಧಿಗಳನ್ನು ಉಪಯೋಗಿಸುವ ಬದಲಿಗೆ, ಇದನ್ನು ಉಪಯೋಗಿಸಿ ನೋಡಿದ್ದಲ್ಲಿ ಇದರ ಗುಣ [illegible] ಸೀಸೆ ೧ರ ಕ್ರಯ ರೂಪಾಯಿ 3—4—0. ಟ. ಖ. ಸೀಸೆ ಗೆ 0—7—0.

ಡಿ. ಗೂಲನ್ ಮಾರ್ಟ್. ಮಂಗಳೂರು,

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲ್ಲಿ ನಡದಿರುವ ಎಗ್ಸಿಬಿಶನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರತಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ.

ಊದಬತ್ತಿಗಳು 4 ರೂ. ತೂಕದ ಶೇರು 1ಕ್ಕೆ ರೂ, 12—0—0, 5—0—0, 3—0—0, 2—8—0, 1—4—0, 1—0—0.

ಅರಗಜ ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2—0—0, 1—0—0 0—12—0, 0—6—0

ಸುಗಂಧಿ ಕಾರ್ಡು 1ಕ್ಕೆ 0—1—0. **ಬಾಲಗ್ರಹ** ಧೂಪ ಟಿನ್ 1ಕ್ಕೆ 0—8—0 **ಸುವಾಸನೇ ಸುಣ್ಣ** ಶೀಸೆ 1ಕ್ಕೆ 0—2—0, ಇದಲ್ಲದೆ ಇನ್ನು **ಅನೇಕ ತರಹ ಸೆಂಟ್ಸು**ಗಳು, ಯಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಬಣ್ಣದ ಸಾಮಾನುಗಳು ಸಹ ಇರುತ್ತವೆ ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್

ಸುಗಂಧಕಾರಿ, ಮೈಸೂರು.

ಬಹು ಮನೋಹರ! ಅದ್ಭುತ!

ವಸಂತ ಕೋಕಿಲೆ

ಎಂಬ

ನೂತನವಾದ ಹೊಸ ಕಾದಂಬರೀ ಕಥೆ.

ರಸಿಕ ಶಿರೋಮಣಿಗಳೇ,

"ವಸಂತ ಕೋಕಿಲೆ" ಎಂಬ ಇಂದ್ರಜಾಲ ಮಹೇಂದ್ರಜಾಲಗಳನ್ನು ಸ್ಪಷ್ಟವಾಗಿ ತೋರಿಸುವ ಅತ್ಯದ್ಭುತ ಚಮತ್ಕಾರವಾದ ಹೊಸ ಕಾದಂಬರೀ ಕಥೆಯು ಅಚ್ಚಾಗಿ ಈಗ ತಾನೇ ಬೆಳಕಿಗೆ ಸಿದ್ಧವಾಗಿದೆ. ಈ ಗ್ರಂಥದಲ್ಲಿ ಶೃಂಗಾರಾದಿ ನವರಸಗಳು ತುಂಬಿ ತುಳುಕುತ್ತಿವೆ. ಈವರೆಗೆ ಪ್ರಚುರವಾಗಿರುವ ಎಲ್ಲಾ ಕಥೆಗಳಿಗಿಂತಲೂ ಮಿಗಿಲಾದ ರಹಸ್ಯವುಳ್ಳದ್ದಾಗಿದೆ. ವರ್ಣನಾಭಾಗಗಳು ಎಲ್ಲರಿಗೂ ತಿಳಿಯುವ ಹಾಗೆಯೂ ಸ್ವಾಭಾವವಾಗಿಯೂ ಇವೆ. ಭಾಷಾಶೈಲಿಯು ಅತ್ಯುತ್ತಮವಾಗಿದೆ. ಓದುವದಕ್ಕಾರಂಭಿಸಿದ ವಾಚಕರ ಮನಸ್ಸನ್ನು ಸಂಪೂರ್ಣವಾಗಿ ಆಕರ್ಷಿಸಿ ಮುಗಿಯುವವರಿಗೂ ಆವೇಶವನ್ನುಂಟುಮಾಡಿ ಉಲ್ಲಾಸಗೊಳಿಸುವ ಹಾಗಿದೆ ತಮ್ಮ ಜ್ಞಾನ, ಭಕ್ತಿ, ವೈರಾಗ್ಯ ಮೊದಲಾದ ವೇದಾಂತ ವಿಷಯಗಳನ್ನೂ ಚೆನ್ನಾಗಿ ತಿಳಿಸುತ್ತದೆ ಕಥಾ ಸಂವಿಧಾನವು ಹೊಸ ಮಾದರಿಯಾಗಿ ಆಶ್ಚರ್ಯಕರವಾಗಿದೆ. ಪ್ರಕಟವಾಗಿ ಶೃಂಗಾರ ರಸವನ್ನು ವರ್ಣಿಸದೆ ಇರುವುದರಿಂದ ಎಲ್ಲಾ ಸ್ತ್ರೀಜನರಿಗೆ ಓದುವುದಕ್ಕೆ ಅರ್ಹವಾಗಿದೆ. ಇದರಲ್ಲಿ ೯ ಪ್ರಕರಣಗಳೂ ೨೨೬ ಪುಟಗಳೂ ಇವೆ. ಉತ್ತಮವಾದ ಕಾಗದ, ಸುಂದರವಾದ ಅಕ್ಷರ, ತಪ್ಪಿಲ್ಲದ್ದೆ ಸುಂದರವಾಗಿ ಮುದ್ರಿಸಿದೆ. ಬೇಕಾದವರೆಲ್ಲರೂ ಕೆಳಗಣ ವಿಳಾಸಕ್ಕೆ ಬರದು ತರಿಸಿಕೊಳ್ಳಬಹುದು. ಕ್ರಯ ರೂ. ೧—೦—೦ ಮಾತ್ರ.

ವಿಳಾಸ:— ಟಿ. ಎ. ಮಾಣಿಕ್ಯಂ ಶೆಟ್ಟಿ ಮಾಣಿಕ್ಯಮಂದಿರ ಬುಕ್ ಡಿಪೋ.

ಪ್ರೊಫೆಸರ್ ಜೇಮ್ಸ್‌ರವರ ಎಲೆಕ್ಟ್ರೊ ಟಾನಿಕ್ ಪರ್ಲ್ಸ್ ಎಂಬುವ

ವಿದ್ಯುತ್ಶಕ್ತಿಯ ವಾಜೀಕರಣ ಮಾತ್ರೆಗಳು

ಇದು ಮುಖ್ಯವಾಗಿ, ಹೆಚ್ಚಾಗಿ ವ್ಯಾಯಾಮವನ್ನು ತೆಗೆದುಕೊಳ್ಳಲಾರದ ಮನುಷ್ಯರಿಗೂ, ಮನೆಯೊಳಗೆ ಕುಳಿತೇ ಕೆಲಸ ಮಾಡುವಂತಹ ವಿದ್ಯಾವಂತರಿಗೂ, ಬೋಧಕರಿಗೂ, ಗುಮಾಸ್ತೆಯರಿಗೂ, ವಿದ್ಯಾರ್ಥಿಗಳಿಗೂ ಮತ್ತು ವ್ಯಾಪಾರಿಗಳಿಗೂ ಅತ್ಯುತ್ತಮವಾದ ಮುತ್ತಿನೋಪಾದಿಯ ಔಷಧ

ಈ ಮಾತ್ರೆಗಳು ಕೆಳಗಿನ ವ್ಯಾಧಿಗಳನ್ನು ನಿರ್ಮೂಲ ಮಾಡುತ್ತದೆಂಬುದು ಎಲ್ಲವರ ಅನುಭವಸಿದ್ಧವಾಗಿದೆ. ಕ್ಷಯರೋಗ, ಅಳವು (ಹಿಸ್ಟೀರಿಯಾ) ವೀರ್ಯದೌರ್ಬಲ್ಯವು, ಮಂದಾಗ್ನಿ, ಕೆಟ್ಟರಕ್ತ, ತಲೆತಿರುಗುವಿಕೆ, ಶಕ್ತಿಹೀನತೆ, ಧಾತುಕ್ಷೀಣತೆ, ಧಾತು ಸಂಬಂಧವಾದ ವಿಕಾರಗಳು, ಸ್ತ್ರೀಗರ್ಭ ವಿಕಾರಗಳು, ಅಕಾಲದ ಮುಟ್ಟು, ಸೊಂಟದಲ್ಲಿಯೂ ನೋವು, ಪಿತ್ತಕೋಶದ ಪೀಡೆ, ಮಂದವಾದ ದೃಷ್ಟಿ, ಕೀಲುಗಳ ನೋವು, ಈ ಮೇಲೆ ಹೇಳಿರುವ ಎಲ್ಲಾ ವ್ಯಾಧಿಗಳಲ್ಲಿ ನಿಮಗೆ ಯಾವುದಾದರೂ ಉಂಟಾದರೆ, ಆ ವ್ಯಾಧಿಯು ಆರಂಭಿಸುತ್ತಲೇ, ಬೇರೆ ಚಿಕಿತ್ಸೆಗಳನ್ನು ಮಾಡಿ, ಉಪಯೋಗವಿಲ್ಲದ ಕಷ್ಟಗಳನ್ನು ತಂದುಕೊಳ್ಳದೆ ತಕ್ಷಣವೇ ಮೇಲೆ ಹೇಳಿರುವ ಪ್ರೊಫೆಸರ್ ಜೇಮ್ಸ್‌ರವರ ವಿದ್ಯುತ್ಶಕ್ತಿಯ ವಾಜೀಕರಣ ಮಾತ್ರೆಗಳನ್ನು ತರಿಸಿ ಉಪಯೋಗಿಸಿಕೊಳ್ಳಿರಿ ಈ ಮಾತ್ರೆಗಳನ್ನು ಉಪಯೋಗಿಸುವುದರಿಂದ ಮೇಲೆ ಹೇಳಿರುವ ವ್ಯಾಧಿಗಳೆಲ್ಲವೂ ನಿರ್ಮೂಲವಾಗಿ ವಾಸಿಯಾಗುವುದು ಅಲ್ಲದೆ, ನಿಮ್ಮ ಶರೀರಗಳನ್ನು ದೃಢವಾಗಿಯೂ, ಅಂದವಾಗಿಯೂ, ಕಷ್ಟಪಟ್ಟು ಕೆಲಸಗಳನ್ನು ಮಾಡಲು ಸರಿಗೈದೂ ಈ ಮಾತ್ರೆಗಳು ನಿಮಗೆ ಮನೋಲ್ಲಾಸವನ್ನು ಕೊಡುತ್ತವೆ ನೀವು ಈ ಮಾತ್ರೆಗಳನ್ನು ಇದುವರೆಗೂ ಉಪಯೋಗಿಸದಿದ್ದರೆ, ಈಗಲಾದರೂ ಒಂದು ಬುಡ್ಡಿ ತರಿಸಿಕೊಂಡು ಉಪಯೋಗಿಸಿ ನೋಡಿದರೆ, ನಿಮಗೇನೇ ನಂಬಿಕೆಯುಂಟಾಗುವುದು

20 ಮಾತ್ರೆಗಳುಳ್ಳ ಸೀಸೆ 1ಕ್ಕೆ ರೂ 1—4—0 40 ಮಾತ್ರೆಗಳುಳ್ಳ ಸೀಸೆ 1ಕ್ಕೆ ರೂ. 2—0—0 ಟಪ್ಪಾಲು ಖರ್ಚು ಅಲಾಯಿದ

ಅಂದವಾಗಿ ಥಳಥಳಿಸುವ ಕೂದಲನ್ನು ಕೊಡುವ

ಕಾಮಿನಿಯಾ ಆಯಿಲ್ (ರಿಜಿಸ್ಟರ್ಡ್)



ಈ ಎಣ್ಣೆಯು ಸುಪ್ರಸಿದ್ಧವಾದ ವನಸ್ಪತಿಗಳ ಮತ್ತು ಸುಗಂಧ ದ್ರವ್ಯಗಳ ಮಿಶ್ರಣದಿಂದ ತಯಾರು ಮಾಡಲ್ಪಟ್ಟಿರುವುದು ಈ ಎಣ್ಣೆಯನ್ನು ಪ್ರತಿದಿನವೂ ಉಪಯೋಗಿಸುವುದರಿಂದ ಇದು ಮೆದುಳನ್ನು ತಣ್ಣಗೆ ಮಾಡಿ ಜ್ಞಾಪಕಶಕ್ತಿಯನ್ನು ಅಭಿವೃದ್ಧಿ ಮಾಡುತ್ತದೆ ಇದರ ಘನತೆಯಿಂದ ಅನೇಕ ದೊಡ್ಡವರು ಸ್ತ್ರೀಯರೂ ಹೆಂಗಸರೂ, ಯೌವನಸ್ಥರೂ ಯಾವಾಗಲೂ ಉಪಯೋಗಿಸುತ್ತಿರುತ್ತಾರೆ ಕಾಮಿನಿಯಾ ಎಣ್ಣೆಯನ್ನು ಉಪಯೋಗಿಸುವುದರಿಂದ ತಲೆಕೂದಲು ನುಣುಪಾಗಿಯೂ ಒಲವುಳ್ಳದ್ದಾಗಿಯೂ, ನೋಡಲು ರೇಷ್ಮೆಯಂತೆ ಹೊಳಪುಳ್ಳದ್ದಾಗಿಯೂ ಆಗುವುದರಿಂದ ಈಗ ಅಂಗಡಿಗಳಲ್ಲಿ ದೊರಕುವ ಅನೇಕ ಕೀಳು ತರದ ಎಣ್ಣೆಗಳನ್ನು ಕಮ್ಮಿ ಬೆಲೆಗೆ ತೆಗೆದುಕೊಂಡು ಅನ್ಯಾಯವಾಗಿ ತಲೆಯ ಕೂದಲನ್ನು ಹಾಳುಮಾಡಿಕೊಳ್ಳಬೇಡಿರಿ

ಕ್ರಯ ಸೀಸೆ 1ಕ್ಕೆ ರೂ 1—0—0

,, , 3ಕ್ಕೆ ,, 2-10—0

ವಿ ಪಿ ಚಾರ್ಜು ಅಲಾಯಿದ

N B —ಕಾಮಿನಿಯಾ ಎಣ್ಣೆಯನ್ನು ತೆಗೆದುಕೊಳ್ಳುವಾಗ ಕಾಮಿನಿಯಾ (ರಿಜಿಸ್ಟರ್ಡ್) ಎನ್ನುವದನ್ನೇ ತೆಗೆದುಕೊಳ್ಳಿರಿ

ವಸಂತ, ಗ್ರೀಷ್ಮ, ವರ್ಷ, ಶರತ್ ಈ ನಾಲ್ಕು ಋತುಗಳಲ್ಲಿ ಯಾವಾಗಲೂ ನಿಮ್ಮ ಅಂತಃಕರಣಕ್ಕೆ ಆನಂದವನ್ನು ಕೊಟ್ಟು ಸುಪ್ರಸಿದ್ಧವಾದ ಸುವಾಸನೆಯಿಂದೊಡಗೂಡಿದ ಅನೇಕ ಪುಷ್ಪಗಳಿರುವ ತೋಟದಿಂದ ಈಗಲೇ ಹೊಸದಾಗಿ ತಂದ ಪುಷ್ಪಗಳ ಆನಂದವನ್ನು ಕೊಡುವ

ಆಟೋ ದಿಲ್ಬಹಾರ್

ಇದು ಲೋಕದಲ್ಲಿ ಅದ್ವಿತೀಯವಾದ ಸುಗಂಧಗಳಲ್ಲಿ ಮೇಲಾದ ಸ್ಥಾನವನ್ನು ಹೊಂದಿರುತ್ತದೆ ಎಂದು ಎಲ್ಲರೂ ಉಪಯೋಗಿಸಿ ನೋಡಿ ಶ್ಲಾಘನೆ ಮಾಡಿರುತ್ತಾರೆ ಇದನ್ನು ಉಡುಪುಗಳ ಮೇಲೆ ಚಿಮುಕಿಸಿಕೊಂಡರೆ ಯಾವ ವಿಧವಾದ ಚುಕ್ಕೆಯು ಕಾಣದೆ, ಸದಾ ಇರತಕ್ಕ ಪರಿಮಳ ಸುಗಂಧವನ್ನು ಕೊಡುತ್ತದೆ ಒಂದು ಸಾರಿ ಉಪಯೋಗಿಸುವುದರಿಂದ ಇದರಲ್ಲಿ ನಂಬಿಕೆ ಹುಟ್ಟುತ್ತದೆ ಇದನ್ನು ಕೊಂಡುಕೊಳ್ಳುವಾಗ ರಿಜಿಸ್ಟರಾಗಿರುವ "ಆಟೋ ದಿಲ್ಬಹಾರ್" ಡಬ್ಬಿಯನ್ನು ಪೇಕಿಂಗ್ ಒಡೆಯದಿರುವುದನ್ನೇ ನೋಡಿ ತೆಗೆದುಕೊಳ್ಳಿರಿ

ಕ್ರಯ ಸಣ್ಣ ಸೀಸೆ 1ಕ್ಕೆ 0—8—0.

,, ಮಿಡಿಯಂ ,, ,, 0-12—0.

,, ½ ಔನ್ಸಿನ , ,, 2—0—0.

ಆಟೋ ದಿಲ್ಬಹಾರ್ ಕಾರ್ಡು 1ರ ಬೆಲೆ 0—1—0.

ಪೋಸ್ಟೇಜು ಅಲಾಯಿದ.

ಯಾವಾಗಲೂ ಕುಟುಂಬದಲ್ಲಿ ಅವಶ್ಯವಾಗಿರತಕ್ಕ ಔಷಧವು.

ಆಡ್ಮನ್ಸ್ ಸ್ಪೈಸ್ ಸಾಲ್ವ್.

ವಾಯುವಿನಿಂದ ಶರೀರದ ಯಾವ ಭಾಗಕ್ಕೆ ಉಂಟಾಗುವ ನೋವು, ನಾವು ಶ್ವಾಸ ಬಿಡುವಾಗಲೂ ಮತ್ತು ತೆಗೆದುಕೊಳ್ಳುವಾಗಲೂ ಉಂಟಾಗುವ ಎದೆನೋವು, ವಾಯುವಿನಿಂದ ಕೀಲುಗಳಲ್ಲಿ ಉಂಟಾಗುವ ನಡುವಿನ ನೋವು, ತಲೆಶೂಲ ಮತ್ತು ಕೈಕಾಲು ನೋವು, ಇವುಗಳೆಲ್ಲವೂ ಈ ಮುಲಾಮನ್ನು ಹಚ್ಚುವುದರಿಂದ ಶುದ್ಧಾಂಗವಾಗಿ ನಿವೃತ್ತಿಯಾಗುತ್ತದೆ ಒಂದು ಸಲ ಉಪಯೋಗಿಸಿ ನೋಡಿರಿ ಇತರ ಮುಲಾಮುಗಳನ್ನು ಉಪಯೋಗಿಸದೆ ಇದನ್ನೆ ಉಪಯೋಗಿಸುವುದರಿಂದ ನಿಮಗೆ ಹೆಚ್ಚಾದ ಲಾಭ ಉಂಟು. ಕ್ರಯ ಬಾಟ್ಲಿ ಒಂದರ ರೂ 1—0—0 ಟಪ್ಪಾಲು ಖರ್ಚು 4 ಆಣೆ

ಆಡ್ಮನ್ಸ್ ಮಲೇರಿಯಸ್ ಪಿಲ್ಸ್

ಶೀತಜ್ವರ, ಚಳಿಜ್ವರ, ಮೊರೆಜ್ವರ ಮತ್ತು ಸಾಧಾರಣ ಜ್ವರ ಇವುಗಳಿಗೆ ಆಡ್ಮನ್ಸ್ ಮಲೇರಿಯಸ್ ಮಾತ್ರೆಗಳು ಬಹು ಆಶ್ಚರ್ಯಕರವಾದ ಗುಣಗಳನ್ನು ಕೊಡುತ್ತವೆ 30 ಮಾತ್ರೆಗಳ ಡಬ್ಬಿ 1ರ ಬೆಲೆ ರೂ. 1—0—0. ಟ. ಖ. ಅಲಾಯಿದ

THE ANGLO INDIAN DRUG & CHEMICAL COMPANY, 16 MARKET BOMBAY 2.

ಪ್ರಧಾನ ಏಜಂಟರು: **ದಿ ಊಲನ್ ಮಾರ್ಟ್, ಮಂಗಳೂರು ದ. ಕನಡಾ**

Printed & Published by V. S Kamath at the Mangalore Trading Association's Sharada Press, Mangalore